TEXT PROBLEM WITHIN THE BOOK ONLY

UNIVERSAL
LIBRARY
OU_198303
UNIVERSAL
LIBRARY

OUP—391—29-4-72—10,000.

OSMANIA UNIVERSITY LIBRARY

Call No. K920/A42K Accession No. K271

Author

Title

This book should be returned on or before the date last marked below.

ಅಬಲಾ ಸಚ್ಚರಿತ್ರ ರತ್ನಮಾಲೆ



ಈ ಗ್ರಂಥವು

ರಿಟೈರ್ಡ್ ಡಿಪ್ಯುಟೇಕವಿಾಷನರ್

ಮು॥ ಮಾ. ಚಂಗಯ್ಯಶೆಟ್ಟಿ, ಬಿ. ಎ., ಯವರ ಪುತ್ರಿಯೂ

ಮು॥ ಏ. ಕೋಟೇಶ್ವರ ಗುಪ್ತ, ಬಿ. ಎ., ಬಿ. ಎಲ್.

ಹೈಕೋರ್ಟ್ ವಕೀಲರವರ

ಧರ್ಮ ಪತ್ನಿಯೂ ಆದ

ಸೌಭಾಗ್ಯವತಿ

ಕಮಲಾಂಬಾಯವರಿಂದ

ವಿರಚಿಸಲ್ಪಟ್ಟುದು.

೧೯೧೮.

ಪ್ರಥಮ ಮುದ್ರಣ

All Rights Reserved

ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

ಪೀಠಿಕೆ.

ಅಧುನಾತನ ಕಾಲದಲ್ಲಿ, ಹೃದಯಂಗಮವಾದಶೈಲಿಯಿಂದ ಬರೆದಿರುವ ಅನೇಕ ಕರ್ಣಾಟಕ ಗ್ರಂಥಗಳನ್ನು ಪಠಿಸುತಲಿರುವ ಪಾಠಕರಿಗೆ, ಸಾಮಾನ್ಯವಾಗಿರುವ ಈ ಗ್ರಂಥವು ವಿಶೇಷವಾಗಿ ಅಭಿರುಚಿಸಲಾರದು. ಆದರೆ ಈ ಗ್ರಂಥದಲ್ಲಿ ಅತ್ಯಂತಶೌರ್ಯ ಧೈರ್ಯಯುತರು, ಅನಾಮಾನ್ಯ ವಿದ್ಯಾವಿಭೂಷಿತರು, ಸಾಧ್ವೀಮಣಿಯರು, ಜ್ಞಾನವತಿಯರು, ರಾಜಕಾರ್ಯಧುರಂಧರರು, ಸ್ವದೇಶಾಭಿಮಾನಿನಿಯರೂ ಆದ ಮಾನಿನಿಯರ ಚರಿತ್ರೆಗಳನ್ನು ಉಲ್ಲೇಖಿಸಿ ಇರುವುದರಿಂದಲೂ, ಭಾವಿಕಾಲದಲ್ಲಿ ದೇಶೋನ್ನತಿಗೆ ಸಹಾಯಕರಾಗಬೇಕಾದ ಈಗಿನ ಬಾಲಕಿಯರ ಮಾನಸೌನ್ನತ್ಯಕ್ಕೆ ಇಂತಹ ಚರಿತ್ರೆಗಳು, ಉತ್ತಮಸಾಧಕಗಳಾಗುವುದರಿಂದಲೂ, ಪಾಠಕಲೋಕವು ಇದನ್ನು ಸಮಾದರದೊಡನೆ ಪಠಿಸುವರು ಎಂದು ನಂಬಿದೇನೆ.

ಆಂಧ್ರಸ್ತ್ರೀಯರ ಜ್ಞಾನಾಭಿವೃದ್ಧಿಯನ್ನು ಮಾಡುವುದರಲ್ಲಿಯೇ ತನ್ನ ಜೀವಿತವನ್ನು ಕಳೆದ ಸಾಧ್ವೀಮಣಿಯೆನಿಸಿ ಕೀರ್ತಿಶೇಷರಾದ ಸೌ॥ ಭಂಡಾರು ಅಚ್ಚಮಾಂಬನವರಿಂದ ರಚಿತವಾದ 'ಅಬಲಾ ಸಚ್ಚರಿತ್ರ ರತ್ನಮಾಲ' ಎಂಬ ಗ್ರಂಥವನ್ನೂ 'ವಿದುಷೀಮಣಿಲು' ಎಂಬ ಗ್ರಂಥದಿಂದ ಕೆಲವು ಚರಿತ್ರೆಗಳನ್ನೂ ಭಾಷಾಂತರಮಾಡಿ ಈ ಗ್ರಂಥವನ್ನು ಪ್ರಚುರಪಡಿಸಿದ್ದೇನೆ. ಈ ಗ್ರಂಥದಲ್ಲಿ ಇರುವ ದೋಷಗಳು ಪರಿವರ್ತಿಸುವ ಕಾಲದಲ್ಲಿ ಉಂಟಾದವೇ ಹೊರತು, ಮೂಲ ಗ್ರಂಥಗಳಲ್ಲಿ ಇಲ್ಲ.

ಪ್ರಾಜ್ಞರು ಈ ಗ್ರಂಥದಲ್ಲಿ ಇರುವ ಸ್ಖಾಲಿತ್ಯಗಳನ್ನು ದಯೆಮಾಡಿ ತಿಳಿಸಬೇಕೆಂದು ಪ್ರಾರ್ಥಿಸುತಲಿರುವ

ಇತಿ

ಕಮಲಾಂಬಾ.



ಶಿ. ಕಮಲಾಂಬಾ.

ಶ್ರೀ

ಗ್ರಂಥೋಪಹಾರ.

ಪತಿಪರಿಚರ್ಯಾ ಪವಿತ್ರ ಚರಿತ್ರೆಯರೆಸಿಸಿ

ಮುಶ್ಶಿಯತಮು ಜನಸಿಯಾಗರುಪ

ಸೌ॥ ಕುಂ॥ ಸ್ವರ್ಣಮಾಂಬಯವರ

ಮತ್ತು

ಪುತ್ರನಿರ್ವಿಶೇಷವಾದ ಪ್ರೀತಿಯಿಂದ ಸಲಹಿ

ವಿದ್ಯಾ ಬುದ್ಧಿಗಳನ್ನು ಕಲಿಸುತ್ತಿರುವ

ನನ್ನ ಪ್ರಿಯತಮ ಜನಕರಾದ

ಶ್ರೀ. ಮಾ. ಚಂಗಯ್ಯಶ್ರೇಷ್ಠಿಯವರ

ಪಾದಪದ್ಮಂಗಳಲ್ಲಿ

ಈ ಗ್ರಂಥವನ್ನು

ಶ್ರದ್ಧಾಭಕ್ತಿಯಿಂದ ಸಮರ್ಪಿಸಿದೇನೆ.

ಗ್ರಂಥಕರ್ತ್ರಿ.

Foreword.

IT is with great pleasure that I write these words in commendation of the book 'Abala Sacharitra Ratna Malê' written by Srimati Kamalamba, the talented daughter of Mr. M. Chengiah Chetty, Retired Deputy Commissioner. The authoress, an accomplished Vaisya lady, has shown herself a very capable authoress in Kannada. Her work gives the life-stories of a very large number of Indian women, Pouranic and Historical, who earned renown in various fields of work.

The Indian social system, it need scarcely be said, has not been as favourable to the development in Indian women of other virtues, as it has been to that of domestic virtues, and yet in this work, are portrayed the lives of great women like Maharani Lakshmammanni of Mysore and Ahalyabai of Indore, who showed exceptional statesmanship in troublous times; of great warriors like Veeramati, Rani Durgavati and Lakshmi Bai of Jhansi; of literary women like Toru Dutt; of great devotees like Mira Bai; and of Pouranic women given to learned contemplation like Gargi.

The book is written in simple and readable style and deserves encouragement at the hands of the Kannada-reading public.

M. Shama Rao,
Retired Inspector General of Education in Mysore.

ಉಪೋದ್ಘಾತ.

'ಅಬಲಾ ಸಚ್ಚರಿತ್ರರತ್ನಮಾಲೆ' ಎಂಬ ಈ ಗ್ರಂಥವು ರಿಟೈರ್ಡ್ ಡಿಪ್ಟಿ ಕಮಿಷನರ್ ಮು॥ ರಾ॥ ಮಾ ಚಂಗಯ್ಯಶೆಟ್ಟರವರ ಆತ್ಮಜೆಯರಾದ ಶ್ರೀಮತೀ ಕಮಲಾಂಬ ಎಂಬುವರಿಂದ ರಚಿಸಲ್ಪಟ್ಟದ್ದಾಗಿದೆ. ಇವರು ವೈಶ್ಯಪಂಗಡದ ಸ್ತ್ರೀ ಶಿರೋಮಣಿಗಳು ಮತ್ತು ಕನ್ನಡಗ್ರಂಥ ಪ್ರಣೇತ್ರಗಳಲ್ಲಿ ಬಹಳ ಕುಶಲತೆಯುಳ್ಳವರಾಗಿದ್ದಾರೆ. ಈ ಗ್ರಂಥದಲ್ಲಿ ನಮ್ಮ ಭರತಖಂಡದಲ್ಲಿ ಪುರಾಣಗಳಲ್ಲಿಯೂ, ಚರಿತ್ರೆಯಲ್ಲಿಯೂ ಬಹು ಮಾರ್ಗಗಳಿಂದ ಪ್ರಸಿದ್ಧಿಯನ್ನು ಪಡೆದ ಅನೇಕ ಸ್ತ್ರೀಯರ ಜೀವನಚರಿತ್ರೆಗಳು ಬರೆಯಲ್ಪಟ್ಟಿವೆ. ಈ ದೇಶದಲ್ಲಿ ಪ್ರಚಾರದಲ್ಲಿರುವ ಸಾಮಾಜಿಕ ವಿಧಿಗಳಿಂದ ನಮ್ಮ ಸ್ತ್ರೀಯರಿಗೆ ಗೃಹಕೃತ್ಯಕ್ಕೆ ಸಂಬಂಧಪಟ್ಟ ಗುಣಗಳು ಪ್ರಕಾಶಕ್ಕೆ ಬರುವಂತೆ ಇತರ ಗುಣಗಳು ಆಮಟ್ಟಿಗೆ ಪ್ರಕಾಶಕ್ಕೆ ಬರಲು ಅನುಕೂಲವಿಲ್ಲವೆಂಬುದು ವಿದಿತ ವಿಷಯವಾಗಿದೆ. ಆದರೂ ಈ ಗ್ರಂಥದಲ್ಲಿ ವರ್ಣಿಸಿರುವ ಸ್ತ್ರೀಯರ ಚರಿತ್ರೆಗಳನ್ನು ನೋಡಲಾಗಿ, ಅವಕಾಶ ದೊರೆತರೆ ಭಾರತ ಮಹಿಳೆಯರು ಎಲ್ಲಾ ಭಾಗಗಳಲ್ಲಿಯೂ ಪ್ರಕಾಶಕ್ಕೆ ಬರಲು ತಕ್ಕ ಶಕ್ತಿಯುಳ್ಳವರೆಂದು ವ್ಯಕ್ತವಾಗುತ್ತಿದೆ. ಇದಕ್ಕೆ ದೃಷ್ಟಾಂತ—ಅವ್ಯವಸ್ಥೆಯ ಕಾಲದಲ್ಲಿ ರಾಜ್ಯಕುಶಲತೆಯನ್ನು ತೋರಿಸಿದ ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಮತ್ತು ಇಂದೂರು ಅಹಲ್ಯಾಬಾಯಿಯವರು, ವೀರಾಗ್ರಣಿಗಳೆನಿಸಿಕೊಂಡ ವೀರಮತಿ, ರಾಣಿದುರ್ಗಾವತಿ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿಯವರು, ಭಗವದ್ಭಕ್ತರೆನಿಸಿಕೊಂಡ ಮೀರಾಬಾಯಿಯವರು, ತತ್ವವಿಚಾರಪರರಾದ ಗಾರ್ಗಿಯವರು.

ಗ್ರಂಥಶೈಲಿಯು ಸುಲಭವಾಗಿಯೂ, ಆಹ್ಲಾದಕರವಾಗಿಯೂ ಇದೆ. ಕನ್ನಡ ದೇಶದಜನರು ಈ ಸದ್ಗ್ರಂಥಕ್ಕೆ ಆಶ್ರಯವನ್ನು ಕೊಟ್ಟು ಗ್ರಂಥಕರ್ತ್ರುಗಳಿಗೆ ಪ್ರೋತ್ಸಾಹವನ್ನುಂಟುಮಾಡುವರೆಂದು ನಂಬಿರುತ್ತೇನೆ.

ಎಂ. ಶ್ಯಾಮರಾವ್,

ಮೈಸೂರು ವಿದ್ಯಾಭ್ಯಾಸದ ಇಲಾಖೆಯ

ಮಾಜಿ ಇನ್‌ಸ್ಪೆಕ್ಟರ್ ಜನರಲ್.

ವಿಷಯ ಸೂಚಿಕೆ.

		ಪುಟ.
೧.	ಭಂಡಾರು ಅಚ್ಚಮಾಂಬ	೧.
೨.	ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿ	೪.
೩.	ರಾಣೀಭವಾನಿ	೧೩.
೪.	ಅಹಲ್ಯಾಬಾಯಿ ಹೋಳಕರ್	೨೫.
೫.	ರಾಣೀಗೌರೀಲಕ್ಷ್ಮೀಬಾಯಿ	೪೧.
೬.	ತಿಕಂವರ್ ಬೇಗಮ್	೫೨.
೭.	ಮೈನಾಬಾಯಿ ಫೋವಾರೀಣ್	೫೮.
೮.	ವೀರಮತಿ	೬೨.
೯.	ರಾಣಿರಾಮಾಬಾಯಿ	೮೦.
೧೦.	ಕುಮಾರೀಪ್ರೇಮದೇವಿ	೯೦.
೧೧.	ರಾಣೀದುರ್ಗಾವತಿ	೯೫.
೧೨.	ರಖುಮಾಬಾಯಿ ಕೇಳೋಕರ್	೧೦೦.
೧೩.	ಕರ್ಮದೇವಿ	೧೧೮.
೧೪.	ತೋರೂದತ್ತು	೧೨೪.
೧೫.	ತಾರಾಬಾಯಿ	೧೩೧.
೧೬.	ವಿದ್ಯಾಸಾಗರಜನನಿ ಭಗವತೀದೇವಿ	೧೩೫.
೧೭.	ಅಸಾಮಾನ್ಯೆ	೧೪೨.
೧೮.	ಖನಾ	೧೫೨.
೧೯.	ಮಿಾರಾಬಾಯಿ	೧೫೭.
೨೦.	ರಾಣೀಸಂಯುಕ್ತೆ	೧೬೩.
೨೧.	ಉಮಾಬಾಯಿದಾಭಾಡೇ	೧೭೧.
೨೨.	ಅರ್ಗಳಸಂಸ್ಥಾನಾಧೀಶ್ವರಿ	೧೭೩.
೨೩.	ಜಗನ್ಮೋಹಿನಿ	೧೭೬
೨೪.	ಕೊಮರ್ರಾಜುಜೋಗಮಾಂಬ	೧೭೭.
೨೫.	ಪದ್ಮಿನಿ	೧೭೯.
೨೬.	ಮೊಲ್ಲ	೧೮೫.
೨೭.	ಕೃಪಾಬಾಯಿ	೧೮೬

		ಪುಟ.
೨೮.	ಪೃಥಿವೀರಾಜಸಭಾಸ್ಥಿಂಯು	೧೯೦.
೨೯.	ಪನ್ನಾ	೧೯೧.
೩೦.	ಖಡ್ಗತಿಕ್ತನನಪತ್ನಿ	೧೯೫.
೩೧.	ತರಿಗೊಂಡವೆಂಗಮಾಂಬ	೧೯೬.
೩೨.	ವಿರಾಬಾಯಿ	೧೯೯.
೩೩.	ಆವಡಾಬಾಯಿ	೨೦೩.
೩೪.	ರುದ್ರಮದೇವಿ	೨೦೯.
೩೫.	ಡಾಕ್ಟರು ಆನಂದೀಬಾಯಿಜೋಶಿ	೨೧೨.
೩೬.	ಮಹಾರಾಣೀ ಝಾನೀಲಕ್ಷ್ಮೀಬಾಯಿ	೨೨೯.
೩೭.	ವಿಮಲದೇವಿ	೨೪೬.
೩೮.	ಸತ್ಯವತಿ	೨೪೮.
೩೯.	ಮಹಾರಾಣಿ ತ್ರಿಪುರಸುಂದರಿ	೨೫೨.
೪೦.	ಲೀಲಾವತಿ	೨೫೪.
೪೧.	ಸಾವಿತ್ರೀಬಾಯಿ ರಾಣೇಕರಿಣ್	೨೫೬.
೪೨.	ವಾಕ್ಸುಷ್ಟಾ	೨೫೯.
೪೩.	ರಾಣೇಔಸ್ಸುವರು	೨೬೧.
೪೪.	ರಾಣೇಸಾಹೇಬ್‌ಕುವರು	೨೬೫.
೪೫.	ಕಮಲಾದೇವಿ	೨೬೮.
೪೬.	ತಾರಾಬಾಯಿ	೨೭೧.
೪೭.	ಗನೋರುಸಂನ್ಯಾನದರಾಣಿ	೨೭೫.
೪೮.	ಜಸರೇಶ್ವರಿ	೨೭೮.
೪೯.	ಜೋಧಪುರದರಾಣಿ	೨೮೩.
೫೦.	ವಿಮಲೆ	೨೮೭.
೫೧.	ಪದ್ಮಾವತಿ	೨೯೧.
೫೨.	ಕೃಷ್ಣಾಕುಮಾರಿ	೨೯೭.
೫೩.	ರಖುಮಾಬಾಯಿಕಿಬೇ	೩೦೧.
೫೪.	ಮೈನಲದೇವಿ	೩೦೪.
೫೫.	ನಾಚೆ	೩೦೭.
೫೬.	ಸರಸವಾಣಿ	೩೦೮.
೫೭.	ಚಾಂದಬೀಬಿ	೩೧೩.
೫೮.	ಧನಲಕ್ಷ್ಮಿ	೩೧೪.

ಪುಟ.

೫೯. ವಿದ್ಯುತ್ಕುಟುಂಬ ... ... ೩೨೨.

೬೦. ಮಹಾರಾಣಿ ಸ್ವರ್ಣಮಯಿ ... ... ೩೨೫.

೬೧. ವನಲತಾದೇವಿ ... ... ೩೨೯.

೬೨. ಗಣಸಾಂಬ ... ... ೩೩೨.

ಚರಿತ್ರೆಗಳು ಸರಿಯಾಗಿ ತಿಳಿಯದ ಕೆಲಸ್ತ್ರೀಯರ ವೃತ್ತಾಂತಗಳು.

೬೩. ಭಾಮತಿ ... ... ೩೩೩.

೬೪. ಆಕಾ ... ... ,,

೬೫. ಕಾನೂಪಾತ್ರಾ ... ... ,,

೬೬. ಜನಾಬಾಯಿ ... ... ೩೩೪.

೬೭. ಪ್ರೇಮಾಬಾಯಿ ... ... ,,

೬೮. ಬಾಯಿಜಾಬಾಯಿಸಿಂಧೆ ... ... ,,

೬೯. ಮೈನಾವತಿ ... ... ೩೩೫.

೭೦. ಮೋಹನಾಂಗಿ ... ... ,,

೭೧. ವೇಣೂಬಾಯಿ ... ... ,,

೭೨. ಪುಬ್ಬರಾಜು ವೆಂಕಟರಾಮಮ್ಮ ... ... ,,

೭೩. ಲಕ್ಷ್ಮಮ್ಮ ... ... ೩೩೬.

೭೪. ಲೀಲಾವತಿ ... ... ,,

೭೫. ವಿದ್ಯಾಧರಿ ... ... ೩೩೭.

೭೬. ಜೀಜಾಬಾಯಿ ... ... ,,

೭೭. ನಿಜಾಮ್ ಷಹನತಾಯಿ ... ... ೩೩೮.

೭೮. ಕುಂತಲಾದೇವಿ ... ... ,,

೭೯. ಪಂಡಿತಸುಲೇಬಾ ... ... ,,

೮೦. ಪಾರ್ವತಿ ... ... ೩೩೯.

೮೧. ಕವಿಸೀತೆ ... ... ,,

೮೨. ರೂಪಮಂಜರಿ ... ... ೩೪೦.

೮೩. ಶರತ್‌ಸುಂದರಿ ... ... ೩೪೧.

೮೪. ಹೇಮಂತಕುಮಾರಿ ... ... ,,

೮೫. ಕಲಾವತಿ ... ... ೩೪೨.

೮೬. ಕರ್ಮದೇವಿ ... ... ,,

೮೭. ಇಂದುಲೇಖಿ ... ... ೩೪೩.

		ಪುಟ.
೮೮.	ಮಾರುಲ	೩೪೩.
೮೯.	ವಿಜ್ಜಿಕ	೩೪೪.
೯೦.	ಸುಭದ್ರ	,,
೯೧.	ಶೀಲಾಭಟ್ಟಾರಿಕ	,,
೯೨.	ಸತೀಮ	,,
೯೩.	ಸಂಗಮಿತ್ರ	೩೪೫.
೯೪.	ಅಕ್ಕಮಹಾದೇವಿ	೩೪೬.
೯೫.	ತ್ರಿಪುರಾಧೀಶ್ವರನಪತ್ನಿ	,,
೯೬.	ಕೈಲಾಸಕಾಮಿನಿ	೩೪೭.
೯೭.	ಹಠೀವಿದ್ಯಾಲಂಕಾರ್	,,
೯೮.	ಮೃಗನಯನೆ	೩೪೮.
೯೯.	ಕೃಷ್ಣಾರಾವಿನಸೊಸೆ	,,
೧೦೦.	ಜಸಮಾ	೩೪೯.
೧೦೧.	ಕರ್ಣಾಟ	,,
೧೦೨.	ರಾಣೇರಾಜೇಂದ್ರಲಕ್ಷ್ಮಿ	೩೫೦.
೧೦೩.	ಮುಕ್ತಾಬಾಯಿ	೩೫೧.
೧೦೪.	ಅನುಲ	,,
೧೦೫.	ಮದಿನಸುಭದ್ರಮ್ಮ	,,
೧೦೬.	ಐವತ್ತೆಂಟು ಮಹಾರಾಣಿಯರು	,,
೧೦೭.	ಕರಮೇತೀಬಾಯಿ	೩೫೨.
೧೦೮.	ಲಕ್ಷ್ಮೀದೇವಿ	೩೫೪.
೧೦೯.	ಪ್ರವೀಣಾಬಾಯಿ	೩೫೫.
೧೧೦.	ಮಧುರವಾಣಿ	೩೫೬.
೧೧೧.	ಗುಲ್‌ಬದಸ್‌ಬೇಗಮ್	೩೫೮.
೧೧೨.	ರಾಮಮಣಿ	೩೫೯.
೧೧೩.	ಮಾಧವೀದೇವಿ	,,
೧೧೪.	ಆನಂದಮಯೀದೇವಿ	೩೬೦.
೧೧೫.	ವೈಜಯಂತಿ	೩೬೨.
೧೧೬.	ಮಾನಿನೀದೇವಿ	೩೬೫.
೧೧೭.	ಪ್ರಿಯಂವದಾದೇವಿ	೩೬೬.
೧೧೮.	ಜೇಬುಉನ್ನೀಸಾ	೩೬೯.

ವೇದಕಾಲದ ಮಹಿಳೆಯರು.

		ಪುಟ.
೧೧೯.	ವಿಶ್ವವರ	೩೭೫.
೧೨೦.	ಇಂದ್ರಮಾತೃಗಣವು	೩೭೬.
೧೨೧.	ಅಪಾಲಾ	,,
೧೨೨.	ಲೋಪಾಮುದ್ರೆ	೩೭೭.
೧೨೩.	ಅದಿತಿ	೩೭೯.
೧೨೪.	ಯಮಿ	೩೮೦.
೧೨೫.	ಬೃಹ್ಪತೀ	೩೮೧.
೧೨೬.	ಊರ್ವಶಿ	೩೮೨.
೧೨೭.	ಘೋಷಾ	೩೮೪.
೧೨೮.	ಸೂರ್ಯ	೩೮೬.
೧೨೯.	ಮೈತ್ರೇಯಿ	೩೮೮.
೧೩೦.	ವಾಗ್ದೇವಿ	೩೯೩.
೧೩೧.	ಗಾರ್ಗಿ	೩೯೫.
೧೩೨.	ಇಡ	೪೦೨.
೧೩೩.	ವಿಶ್ಪಲ	,,
೧೩೪.	ದೇವಪೂತಿ	೪೦೩.
೧೩೫.	ಮದಾಲಸೆ	೪೦೪.
೧೩೬.	ಆತ್ರೇಯಿ	೪೦೯.

ಭಂಡಾರು ಅಚ್ಚಮಾಂಬ.

ಅಬಲಾ ಸಚ್ಚರಿತ್ರ ರತ್ನಮಾಲೆ.

ಭಂಡಾರು ಅಚ್ಚಮಾಂಬ.

ಈ ಕಾಂತಾಮಣಿಯು ೧೮೭೪ ನೆಯ ಇಸವಿಯಲ್ಲಿ ಕೃಷ್ಣಾಮಂಡಲಕ್ಕೆ ಸೇರಿದ ಮುನಗಾಲ ಸಂಸ್ಥಾನಕ್ಕೆ ದಿವಾನರಾಗಿದ್ದ ಕೊಮರ್ರಾಜು ವೆಂಕಟಪ್ಪ ಯ್ಯನ ಧರ್ಮಪತ್ನಿಯಾದ ಗಂಗಮಾಂಬನಲ್ಲಿ ನಂದಿಗ್ರಾಮವೆಂಬ ಗ್ರಾಮದಲ್ಲಿ ಜನ್ಮಿಸಿದಳು. ಆರು ವರ್ಷಗಳು ತುಂಬುವುದರೊಳಗೆ ೧೮೮೦ ನೆಯ ಇಸವಿಯಲ್ಲಿ ಈಕೆಗೆ ಪಿತೃವಿಯೋಗದುಃಖವು ಸಂಭವಿಸಿತು. ಅನಂತರ ಇವರ ತಾಯಿಯಾದ ಗಂಗಮಾಂಬನು ಅಚ್ಚಮಾಂಬನನ್ನೂ, ತಮ್ಮನಾದ ಲಕ್ಷ್ಮಣರಾಯನನ್ನೂ ಕರೆದುಕೊಂಡು ಮಧ್ಯಪ್ರಾಂತ್ಯಗಳಲ್ಲಿ ಇದ್ದ ತಮ್ಮ ಬಲ ಅಣ್ಣನ ಮನೆಗೆ ಹೋದರು. ಅಚ್ಚಮಾಂಬನ ಬಲಸೋದರಮಾವನಾದ ಭಂಡಾರು ಮಾಧವರಾಯನಿಗೆ ಪ್ರಥಮ ಕಳತ್ರವಿಯೋಗವುಂಟಾಗಲು, ಈಕೆಯ ತಾಯಿಯು ಈಕೆಯನ್ನು ಆತನಿಗೆ ಕೊಟ್ಟು ವಿವಾಹವನ್ನು ಮಾಡಿದಳು. ವಿವಾಹಕಾಲಕ್ಕೆ ಈಕೆಗೆ ಹತ್ತುವರುಷ ವಯಸ್ಸಾಗಿತ್ತು. ಆಗ್ಗೆ ಈಕೆಗೆ ಅಕ್ಷರಜ್ಞಾನವೇ ಇರಲಿಲ್ಲ. ಅನಂತರವೂ ಈಕೆಯು ಪಾಠಶಾಲೆಗೆ ಹೋದವಳಲ್ಲ. ತಮ್ಮನು ಮನೆಯಲ್ಲಿ ಆಂಧ್ರಭಾಷೆಯನ್ನೂ, ಹಿಂದೀ ಭಾಷೆಯನ್ನೂ ಅಭ್ಯಸಿಸುತಿರಲು, ಈಕೆಯು ಸ್ವಾಭಾವಿಕವಾದ ವಿದ್ಯಾಭಿಲಾಷೆಯಿಂದ ತಮ್ಮನೊಡನೆ ವಿದ್ಯಾಭ್ಯಾಸವನ್ನು ಮಾಡಲು ಪ್ರಾರಂಭಿಸಿದಳು. ಈಕೆಯ ಪತಿಯು ಪೂರ್ವಾಚಾರ ಪರಾಯಣನಲ್ಲದಕಾರಣ ಪತ್ನಿಯ ವಿದ್ಯಾಭ್ಯಾಸಕ್ಕೆ ಪ್ರತಿಬಂಧವನ್ನು ಕಲ್ಪಿಸದೆ ಪ್ರೋತ್ಸಾಹವನ್ನುಂಟುಮಾಡುತಲಿದ್ದನು. ಈಕೆಯು ತಮ್ಮನೊಡನೆ ವಿದ್ಯಾಭ್ಯಾಸವನ್ನು ಮಾಡುತ್ತ ಸ್ವಭಾಷೆಯಾದ ಆಂಧ್ರದಲ್ಲಿಯೂ, ತಾನು ನಿವಸಿಸುತ್ತಿದ್ದ ಪ್ರದೇಶದ ಭಾಷೆಯಾದ ಮಹಾರಾಷ್ಟ್ರದಲ್ಲಿಯೂ ಸ್ವಲ್ಪ ಜ್ಞಾನವನ್ನು ಪಡೆದಳು. ಹೀಗಿರಲು ಈಕೆಯ ತಮ್ಮನಾದ ಲಕ್ಷ್ಮಣರಾಯನು ಇಂಗ್ಲೀಷು ವಿದ್ಯಾಭ್ಯಾಸ ನಿಮಿತ್ತವಾಗಿ ತನ್ನ ಅಕ್ಕನನ್ನು ಬಿಟ್ಟು ನಾಗಪುರಕ್ಕೆ ಹೊರಟುಹೋದನು. ಅವರಿಂದ ಈಕೆಯು

ಸ್ವಯಂಕೃಷಿಯಿಂದಲೇ ವಿದ್ಯಾಭಿವೃದ್ಧಿಯನ್ನು ಮಾಡಿಕೊಳ್ಳಬೇಕಾಯಿತು. ಆದರೂ ಲಕ್ಷ್ಮಣರಾಯನು ತನ್ನ ವಿರಾಮ ಕಾಲದಲ್ಲಿ ಸೋದರಿಯ ಸಮೀಪದಲ್ಲಿದ್ದು ಆಕೆಯ ವಿದ್ಯಾಭ್ಯಾಸಕ್ಕೆ ಸಹಾಯಕನಾಗುತಲಿದ್ದನು. ಈತನು ಸರ್ವಕಲಾಶಾಲಾ ಶಾಸ್ತ್ರೋಪಾಧ್ಯಾಯ (M. A.) ಪರೀಕ್ಷೆಯಲ್ಲಿ ಕೃತಾರ್ಥನಾಗಿ ಮುನಗಾಲ ಸಂಸ್ಥಾನಕ್ಕೆ ದಿವಾನರಾಗಿದ್ದಾರೆ. ಅನಂತರವೂ ಈತನ ಸಹಾಯದಿಂದಲೂ, ಸ್ವಯಂಕೃಷಿಯಿಂದಲೂ ಅಚ್ಚಮಾಂಬನು ಹಿಂದೀ, ಘೂರ್ಜರ, ಮಹಾರಾಷ್ಟ್ರ, ಬಂಗಾಳೀ, ಸಂಸ್ಕೃತ ಭಾಷೆಗಳಲ್ಲಿ ತಕ್ಕಮಟ್ಟಿಗೆ ಪಾಂಡಿತ್ಯವನ್ನು ಪಡೆದಳು. ಗ್ರಂಥರಚನೆಯಲ್ಲಿ ಈಕೆಗೆ ಈ ಭಾಷೆಗಳು ಬಹು ಸಹಾಯಕರಗಳಾದುವು. ಈಕೆಯು ಆಂಧ್ರ, ಕರ್ಣಾಟಕ, ಮಹಾರಾಷ್ಟ್ರ ದೇಶಗಳ ಉಪಹಾರಗಳನ್ನು ಮಾಡುವುದರಲ್ಲಿಯೂ, ರಂಗವಲ್ಲಿಯನ್ನಿಡುವುದರಲ್ಲಿಯೂ, ಹೊಲಿಗೆಯ ಕೆಲಸ ಮತ್ತು ಕಸೂತಿಯ ಕೆಲಸ ಇವುಗಳನ್ನು ಮಾಡುವುದರಲ್ಲೂ ಅತ್ಯಂತ ನಿಪುಣೆಯಾಗಿದ್ದಳು. ಕಸೂತಿಯ ಕೆಲಸವನ್ನೂ ಹೊಲಿಗೆಯ ಕೆಲಸವನ್ನೂ ಕುರಿತು ಆಂಧ್ರಭಾಷೆಯಲ್ಲಿ ಪುಸ್ತಕಗಳನ್ನು ಬರೆಯಲು ಪ್ರಾರಂಭಿಸಿದಳು. ಆದರೆ ಅದು ಪೂರ್ತಿಯಾಗುವುದಕ್ಕೆ ಪೂರ್ವವೇ ಈಕೆಯು ಲೋಕಾಂತರವನ್ನೈದಿದಳು!

ತಾನು ರಚಿಸಲು ಸಂಕಲ್ಪಿಸಿದ 'ಅಬಲಾಸಚ್ಚರಿತ್ರ ರತ್ನಮಾಲೆ' ಯೆಂಬ ಗ್ರಂಥವನ್ನು ಮೂರುಭಾಗಗಳಾಗಿ ವಿಂಗಡಿಸಿ ಒಂದನೆಯ ಭಾಗದಲ್ಲಿ ಐತಿಹಾಸಿಕ ಸ್ತ್ರೀಯರ ಚರಿತ್ರೆಗಳನ್ನೂ, ಎರಡನೆಯ ಭಾಗದಲ್ಲಿ ವೈದಿಕ ಪೌರಾಣಿಕ ಸ್ತ್ರೀಯರ ಚರಿತ್ರೆಗಳನ್ನೂ, ಮೂರನೆಯ ಭಾಗದಲ್ಲಿ ಇಂಗ್ಲೆಂಡು ಮೊದಲಾದ ಅನ್ಯದೇಶದ ಸ್ತ್ರೀಯರ ಚರಿತ್ರೆಗಳನ್ನೂ ಬರೆಯಲು ನಿಶ್ಚೈಸಿದಳು. ಆದರೆ ಆಂಧ್ರಸ್ತ್ರೀಯರ ದುರದೃಷ್ಟದಿಂದ ಎರಡನೆಯ ಭಾಗವನ್ನು ಬರೆಯುತಲಿರುವ ಕಾಲದಲ್ಲೇ ಈಕೆ ಮೃತ್ಯುವಿಗೆ ಗ್ರಾಸವಾಗಬೇಕಾಯಿತು!

ಈಕೆಗಿರುವ ಆಂಧ್ರಭಾಷಾ ಪಾಂಡಿತ್ಯವೂ, ಗ್ರಂಥರಚನಾ ಸಾಮರ್ಥ್ಯವೂ ಸ್ತ್ರೀಯರಲ್ಲಿ ಅಪೂರ್ವವಾಗಿರುವುದಾದರೂ, ಪಾಂಡಿತ್ಯಕ್ಕೆಂತಲೂ ಗುಣಸಂಪತ್ತಿನಿಂದ ಈಕೆಯು ಶ್ಲಾಘನೀಯಳು ಎಂದು ನುಡಿಯಬೇಕು. ಈಕೆಯು ಜಾತಿ ಮತದ್ವೇಷಗಳಿಲ್ಲದವಳಾಗಿ ಸರ್ವಜನರಲ್ಲಿಯೂ ಸಮಾನಪ್ರೇಮವುಳ್ಳವಳಾಗಿದ್ದಳು. ೧೮೯೯ ನೆಯ ಇಸವಿಯಲ್ಲಿ ಸಂಭವಿಸಿದ ಕ್ಷಾಮ ಸಮಯದಲ್ಲಿ ರಕ್ಷಕರಿಲ್ಲದ ಎರಡು ತಿಂಗಳ ಗಂಡುಮಗುವು ಕ್ಷಾಮನಿವಾರಕ ಸಂಘದವರ ಗೃಹಕ್ಕೆ ತರಲ್ಪಟ್ಟಿತು. ಆಗ ಆ ಶಿಶುವು ಕುರೂಪಿಯಾಗಿ ಕಾಣಬರುತಲಿದ್ದುದರಿಂದ ಮುಟ್ಟುವುದಕ್ಕೆ ಸಹ ಯಾರೂ ಇಷ್ಟಪಡಲಿಲ್ಲ. ಅದು ಸಂರಕ್ಷಣೆಯಿಲ್ಲದೆ ಪ್ರಾಣವನ್ನು ಬಿಡಬೇಕಾದಂತಹ ದುರ್ದಶೆಯಲ್ಲಿ ಇರುವ ಆ ಶಿಶುವಿನ ವರ್ತಮಾನವನ್ನು ಕೇಳಿ ಅಚ್ಚಮಾಂಬನು ಕನಿಕರದೊಡನೆ ಅದನ್ನು ತಂದು ತನ್ನ ಮನೆಯಲ್ಲಿ ಇಟ್ಟು

ಕೊಂಡು ಹೆತ್ತತಾಯಿಯಂತೆ ಬೆಳೆಸುತ್ತಿದ್ದಳು. ಬಳಿಕ ಆ ಶಿಶುವು ಒಳ್ಳೆಯ ಬಾಲಕನಾಗಿ ಅವರ ಮನೆಯಲ್ಲಿಯೇ ಬೆಳೆದನು.

ಯಾಚನಾವೃತ್ತಿಯು ಅತ್ಯಂತ ಹೀನವಾದುದು ಎಂತಲೂ, ಕಷ್ಟಪಟ್ಟು ಜೀವಿಸುವುದು ಎಲ್ಲರಿಗೂ ಕರ್ತವ್ಯವೆಂತಲೂ ಆಕೆಯು ಎಣಿಸಿದ್ದಳು. ಹತ್ತು ವರ್ಷದ ಬ್ರಾಹ್ಮಣ ಬಾಲಕನು ಒಬ್ಬನು ತನ್ನ ತಾಯೊಡನೆಯೂ, ತಂಗಿಯೊಡನೆಯೂ ಹೊರಟು ಮನೆಮನೆಯಲ್ಲೂ ಭಿಕ್ಷಬೇಡುತಲಿದ್ದನು. ಆಗ ಅಚ್ಚಮಾಂಬನು ಆ ಹುಡುಗನು ತಿಳಿವಳಿಕೆಯುಳ್ಳವನೆಂದು ಅರಿತು ಆ ಕುಟುಂಬವನು ತಮ್ಮ ಮನೆಯಲ್ಲಿ ಇಟ್ಟುಕೊಂಡು ಆ ಬಾಲಕನಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತ, ಆ ಬಾಲಕಿಗೆ ತಕ್ಕ ವರನನ್ನು ವಿಚಾರಿಸಿ ವಿವಾಹ ಮಾಡಿದಳು. ಒಂದು ಹಸುವನ್ನು ಕೊಂಡು ಅವರ ತಾಯಿಗೆ ಕೊಟ್ಟು, ಅದರ ಹಾಲನ್ನು ಮಾರಿ ಅದರಿಂದ ಜೀವಿಸುವಂತೆ ನಿಯಮಿಸಿದಳು. ಈಕೆಯು ಮಾಡಿದ ಇಂತಹ ಸತ್ಕೃತ್ಯಗಳು ಅನೇಕವಾಗಿವೆ. ಈಕೆಯು ಸಂಘಸಂಸ್ಕರಣ ವಿಷಯದಲ್ಲಿ ಅಕ್ಕರೆಯವಳಾಗಿದ್ದಳು. ಈಕೆಯ ಮೈದುನ (ಪತಿಸೋದರ)ನಾದ ದಂಡಪಾಣಿ ಎಂಬಾತನಿಗೆ ಪತ್ನೀವಿಯೋಗವುಂಟಾಗಲು, ಈಕೆಯೂ, ಈಕೆಯ ಪತಿಯೂ ಆತನನ್ನು ಪ್ರೋತ್ಸಾಹಿಸಿ ವಿತಂತುವನ್ನು ವಿವಾಹಮಾಡಿಸಿದರು. ಆಂಧ್ರದೇಶದಲ್ಲಿ ಪ್ರಥಮದಲ್ಲಿ ಈಕೆಯೇ ಸ್ತ್ರೀ ಸಮಾಜಗಳನ್ನು ಸ್ಥಾಪಿಸಿದವಳು. ಈಕೆಯು ಮಾಡಿದ ಸತ್ಕೃತ್ಯಗಳನ್ನೆಲ್ಲ ವರ್ಣಿಸಲು ನಾನು ಅಸಮರ್ಥಳು. ಈಕೆಯ ಮರಣಕ್ಕೆ ಒಂದು ಎರಡು ದಿವಸಗಳ ಪೂರ್ವದಲ್ಲಿ ಜ್ವರತಾಪವು ಹೆಚ್ಚಿ ಒಂದೊಂದು ಸಲ ಎಚ್ಚರಿಕೆಯು ಸಹ ತಪ್ಪುತಲಿತ್ತು. ಅಂತಹ ಸಮಯದಲ್ಲಿ ಕಾಲಿಗೆ ಕಾಲುಚೀಲಗಳನ್ನು ಹಾಕಿರಬೇಕು ಎಂದು ವೈದ್ಯನು ನುಡಿಯಲು, ಅದರಂತೆ ಸಮೀಪದಲ್ಲಿ ಇದ್ದವರು ಕಾಲಿಗೆ ಚೀಲಗಳನ್ನು ತೊಡಿಸ ಹೋದರು. ಅಚ್ಚಮಾಂಬನು ಆ ಚೀಲಗಳನ್ನು ಕೈಗೆ ತೆಗೆದುಕೊಂಡು ನೋಡಿ ಇವನ್ನು ನಾನು ಧರಿಸುವುದು ಇಲ್ಲವೆಂದು ಬಿಸುಟುಬಿಟ್ಟಳು! ಅಂತಹ ಸಂಕಟ ಸಮಯದಲ್ಲಿಯೂ ತಮ್ಮ ಪ್ರತಿಜ್ಞೆಯನ್ನು ಮರೆಯದೆ ದೇಶಾಭಿಮಾನವನ್ನು ತೋರಿದ ಈ ರಮಣೀರತ್ನವನ್ನು ವರ್ಣಿಸಲು ಆರಿಂದ ಸಾಧ್ಯವು? ಸುಗುಣ ಪೂರ್ಣೆಯಾದ ಅಚ್ಚಮಾಂಬನು ತಮ್ಮ ೩೧ನೆಯ ವಯಸ್ಸಿನಲ್ಲಿ (೧೮--೧--೧೯೦೫) ಅಕಾಲಮರಣಕ್ಕೆ ಗುರಿಯಾದಳು!!!

ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿ.

ನಮ್ಮ ದೇಶದ ಚರಿತ್ರೆಯಲ್ಲಿ ಈ ಮಹಾರಾಣಿಯು ಸುಪ್ರಸಿದ್ಧೆಯು. ೧೮೯೪ ನೆಯ ಡಿಶಂಬರಿನಲ್ಲಿ ಪರಲೋಕಯಾತ್ರೆಯನ್ನು ಮಾಡಿದ ಶ್ರೀ ಚಾಮರಾಜೇಂದ್ರ ಪ್ರಭುವಿಗೆ ಈಕೆಯು ಪಿತಾಮಹನ ತಾಯಿಯಾಗಬೇಕು. ಹೈದರನೂ, ಅವನ ಮಗನಾದ ಟೀಪುವೂ ಮೈಸೂರು ಸಂಸ್ಥಾನವನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡ ಕಾಲದಲ್ಲಿ ಧೈರ್ಯವತಿಯಾದ ಈ ಲಲನೆಯು ತನ್ನ ಧೈರ್ಯಚಾತುರ್ಯಗಳ ಸಹಾಯದಿಂದ ರಾಜ್ಯವನ್ನು ಪುನಃ ಪಡೆದುಕೊಂಡಳು. ಈಕೆಯು ಕತ್ತಿಗೋಪಾಲ ಅರಸನ ಮಗಳು. ಈತನು ತಿರಿಚಿನಾಪಳ್ಳಿಯ ಯುದ್ಧದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಶೂರನು. ಈತನು ಮೈಸೂರು ಮಹಾರಾಜರಾದ ನಂಜರಾಜ ಒಡೆಯರ ಹತ್ತಿರ ಸೇನಾನಾಯಕನಾಗಿದ್ದನು. ತಿರಿಚಿನಾಪಳ್ಳಿಯ ಮೇಲೆ ಮಹಮ್ಮದಲ್ಲಿಯೊಡನೆ ದಂಡೆತ್ತಿ ಹೋಗಿದ್ದನು. ಲಕ್ಷ್ಮಮ್ಮಣ್ಣಿಯವರ ಜನ್ಮಕಾಲವು ತಿಳಿಯಬರುವುದಿಲ್ಲ. ಆದರೆ ಈಕೆಯನ್ನು ೧೭೫೬ ನೆಯ ಇಸವಿಯಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಕೊಟ್ಟು ಮದುವೆಯನ್ನು ಮಾಡಿದರೆಂದು ಮಾತ್ರ ತಿಳಿಯಬರುತ್ತದೆ. ಆಗ ಈಕೆಯು ರಾಜನಿಗೆ ಮೂರನೆಯ ರಾಣಿಯಾಗಿದ್ದಳು.

ಈ ರಾಜನ ಪಾಲಕಜನಕನಾದ ನಂಜರಾಜ ಒಡೆಯನು ಪೂರ್ವದ ಮೈಸೂರು ರಾಜನಿಗೆ ಮಾವನಾಗಬೇಕು. ಅಳಿಯನಲ್ಲಿ ರಾಜ್ಯಭಾರವನ್ನು ವಹಿಸುವ ಶಕ್ತಿಯಿಲ್ಲದುದರಿಂದ ನಂಜರಾಜನು ತಾನೇ ರಾಜ್ಯವನ್ನು ಆಳುತಲಿದ್ದನು. ನಂಜರಾಜನ ಆಜ್ಞಾನುವರ್ತಿಯಾದ ಹೈದರನು ರಾಜ್ಯಾಧಿಪತ್ಯವನ್ನು ತಾನೇ ವಹಿಸಬೇಕೆಂಬ ಆಶೆಯಿಂದ ನಂಜರಾಜನನ್ನು ಒಂದು ಮೂಲೆಯಲ್ಲಿ ಇರಿಸಿ ತಾನು ರಾಜ್ಯಾರೂಢನಾಗಲು ಯತ್ನಿಸುತಲಿದ್ದನು.

ಅನಂತರ ನಂಜರಾಜನಿಗೆ ಮರಣ ಸಮಯವು ಸನ್ನಿಹಿತವಾಗಲು ಹೈದರನಿಗೆ ಯಾವ ವಿಧವಾದ ಅಧಿಕಾರವನ್ನೂ ಕೊಡಕೂಡದೆಂದು ಹೇಳಿ ಹೋದನು. ಆದರೆ ಅದರಿಂದ ಫಲವೇನೂ ಉಂಟಾಗಲಿಲ್ಲ. ನಂಜರಾಜನ ಪತ್ನಿಯಾದ ಜಮ್ಮಣ್ಣೀದೇವಿಯು ಹೈದರನು ಸರ್ವಾಧಿಕಾರಿಯಾಗಿರುವುದಕ್ಕೆ ಇಷ್ಟಪಡದೆ, ಅದಕ್ಕೆ ವಿಘ್ನಮಾಡಲು ಎಣಿಸಿ ಹೈದರನ ಬಳಿಯಿರುವ ಖಂಡೇರಾಯನೆಂಬ ಸರದಾರನೊಡನೆ ಗುಪ್ತವಾಗಿ ಆಲೋಚನೆಯನ್ನು ಮಾಡಲು ಆರಂಭಿಸಿದಳು. ಈಕೆಯು ಇಮ್ಮಡಿ ಕೃಷ್ಣರಾಜ ಪ್ರಭುವನ್ನು ದತ್ತುತೆಗೆದುಕೊಂಡಳು. ಈ

ಕೃಷ್ಣರಾಜನ ಪತ್ನಿಯೇ ನಮ್ಮ ಚರಿತ್ರನಾಯಿಕೆ. ಈತನು ಸಿಂಹಾಸನಕ್ಕೆ ಮುಖ್ಯ ಸರದಾರನಾದುದರಿಂದ ಜಮ್ಮಣ್ಣೀದೇವಿಯು ಈತನ ಹೆಸರಿನಲ್ಲಿ ತಾನು ರಾಜ್ಯ ಭಾರವನ್ನು ಮಾಡಲು ಯತ್ನಿಸಿದಳು. ಆದರೆ ಮಹಾಯೋಧನಾದ ಹೈದರನು, ಈ ವಿಷಯವನ್ನೆಲ್ಲ ಅರಿತು ಇದಕ್ಕೆ ಕಾರಣಭೂತನಾದ ಖಂಡೇರಾಯನನ್ನು ಬಂಧಿಸಿ ಪಂಜರದಲ್ಲಿ ಇಡಿಸಿದನು. ದಿನದಿನಕ್ಕೆ ಹೈದರನ ಅಧಿಕಾರವು ಅಧಿಕವಾಗಲು ೧೭೬೧ ನೆಯ ಇಸವಿಯಲ್ಲಿ ಸರ್ವಾಧಿಕಾರವನ್ನೂ ತಾನೇ ವಹಿಸಿ ಕೃಷ್ಣರಾಜಭೂಪನನ್ನು ಚತುರಂಗದೊಳಗಿನ ರಾಜನಂತೆ ನೋಡುತಲಿದ್ದನು. ಇಮ್ಮಡಿಕೃಷ್ಣರಾಜ ಭೂಪನು ೧೭೬೬ ನೆಯ ವರ್ಷದಲ್ಲಿ ಗತಿಸಿದನು. ಆತನಿಗೆ ಮೃತ್ಯುಸಮಯದಲ್ಲಿ ನಂಜರಾಜ, ಚಾಮರಾಜ ಎಂಬ ಇಬ್ಬರು ಪುತ್ರರು ಇದ್ದರು. ಅವರು ರಾಜ್ಯಪದವಿಗೆ ಅರ್ಹರಾದರೂ ಹೈದರನು ಅವರಿಗೆ ಅಧಿಕಾರವನ್ನು ಸ್ವಲ್ಪವೂ ಕೊಡದೆ ತಾನೇ ರಾಜ್ಯಭಾರವನ್ನು ನಡೆಯಿಸುತಿದ್ದನು. ನಂಜರಾಜನು ಗುಪ್ತವಾಗಿ ಮರಾಟಾ ಸರದಾರನಾದ ತ್ರಿಯಂಬಕರಾವಿನೊಡನೆ ರಾಜ್ಯದ ವಿಷಯವನ್ನು ಕುರಿತು ಆಲೋಚಿಸುತಲಿರುವನು ಎಂದು ಕೇಳಿ ಹೈದರನು ಆತನನ್ನು ಶೂಲಕ್ಕೆ ಏರಿಸಿ ವಧೆಮಾಡಿದನು. ಚಾಮರಾಜನೂ ಹೈದರಿನ ಬಾಧೆಯಿಂದಲೇ ೧೭೭೬ ನೆಯ ಇಸವಿಯಲ್ಲಿ ಮೃತನಾದನು. ಸಿಂಹಾಸನಾರೂಢರಾಗಲು ಅರ್ಹರಾದ ಬಾಲಕರು ಇಬ್ಬರೂ ಮೃತ್ಯುಮುಖದಲ್ಲಿ ಬಿದ್ದುದರಿಂದ ತನ್ನನ್ನು ಎದುರಿಸುವರು ಯಾರೂ ಇಲ್ಲವೆಂದು ಹೈದರನು ಪರಮಾನಂದಭರಿತನಾದನು. ಅಷ್ಟರವರೆಗೂ ಅಂತಃಪುರದಲ್ಲಿ ಬಂಧಿಯಾಗಿದ್ದ ಮಹಾರಾಣಿ ಲಕ್ಷ್ಮಮ್ಮಣ್ಣಿಯು ಒಂದೇಸಲ ವಿಪತ್ಸಾಗರ ಮಧ್ಯದಲ್ಲಿ ಮುಳುಗಿದಂತಾಯಿತು. ಪ್ರಿಯತಮನಾದ ಪತಿಯೂ, ಪ್ರಾಣಾಧಿಕರಾದ ಪುತ್ರರೂ ಹೈದರನ ಬಾಧೆಯಿಂದ ಮೃತರಾದರೆಂತಲೂ, ತಾನು ದುಷ್ಟನಾದ ಹೈದರನ ಕೈಯಲ್ಲಿ ಇರುವೆನೆಂತಲೂ ಆಕೆಯು ವ್ಯಸನದಿಂದ ಕೃಶಿಸುತಲಿದ್ದಳು. ಹೀಗೆ ಅಧಿಕದುಃಖದಿಂದ ಪೀಡಿತಳಾಗಿ ಕೆಲವು ತಿಂಗಳವರೆಗೂ ಏನೂ ತೋರದೆ ಸುಮ್ಮನಿದ್ದಳು. ಹೀಗಿರಲು ಒಂದು ದಿವಸ, ಪ್ರಾಚೀನವಾದ ಹಿಂದೂರಾಜ್ಯವು ನಿರ್ನಾಮವಾಗಿ ಹೋಗುವುದು ಎಂತಲೂ, ನಾವು ಸುಮ್ಮನಿದ್ದರೆ ತುರುಕರು ರಾಜ್ಯವನ್ನೆಲ್ಲ ಆಕ್ರಮಿಸಿಕೊಳ್ಳುವರು ಎಂತಲೂ ಒಂದು ಘನವಾದ ವಿಚಾರವು ಮನಸ್ಸಿಗೆ ತೋರಿತು. ಮೈಸೂರಿನಲ್ಲಿ ಹಿಂದೂ ಸಿಂಹಾಸನವು ನಷ್ಟವಾಗಿ ಯವನ ಸಿಂಹಾಸನವು ಸ್ಥಾಪಿತವಾಗುವುದು ಎಂಬ ವಿಷಯವು ಆಕೆಯಮನಸ್ಸಿಗೆ ತೋರಿದ ಕೂಡಲೆ ಆಕೆಯಲ್ಲಿ ಅಷ್ಟರವರೆಗೂ ಅಡಗಿದ್ದ ಸ್ವಾಭಿಮಾನವೆಂಬ ತೇಜವು ಪ್ರಕಾಶಗೊಂಡಿತು. ಅನಂತರ ಆಕೆಯು ತನ್ನ ದುಃಖವನ್ನು ಧೈರ್ಯದಿಂದ ತಡೆದುಕೊಂಡು, ಹಿಂದೂರಾಜ್ಯ ರಕ್ಷಣೋಪಾಯವನ್ನು ಹುಡುಕಲಾರಂಭಿಸಿದಳು. ಆಕೆಯು ಇದಕ್ಕೆ ಪೂರ್ವ ರಾಜ್ಯವಿಷಯದಲ್ಲಿ ಪ್ರವೇಶಿಸಿದವಳಲ್ಲ. ಆದುದರಿಂದ ಸಮಯಾನುಕೂಲವಾದ ರಾಜಕಾರ್ಯಗಳ

ಆವವೂ ಆಕೆಗೆ ತೋರಲಿಲ್ಲ. ಆದರೆ ಸಂಕಟವು ಪ್ರಾಪ್ತವಾದೊಡನೆ ಧೀರರ ಮನಸ್ಸು ಹೇಗೆ ಪ್ರಜ್ವಲಿಸುವುದು ಎಂಬುದನ್ನು ಈಕೆಯ ಚರಿತ್ರೆಯಿಂದ ತಿಳಿಯ ಬಹುದು. ಲಕ್ಷ್ಮಮ್ಮಣ್ಣಿಯು ತಮ್ಮ ಸೋದರಿಯ ಪುತ್ರನಾದ ಮಾಡೂರು ನರಸರಾಜನನ್ನಾಗಲಿ, ತಮ್ಮ ಮೊಮ್ಮಗನಾದ ಸಿದ್ಧರಾಜನನ್ನಾಗಲಿ ತಾವು ದತ್ತಪುತ್ರನನ್ನಾಗಿ ಸ್ವೀಕರಿಸಬೇಕೆಂದು ನಿಶ್ಚಯಿಸಿ ಆ ವಿಷಯವನ್ನು ಹೈದರನಿಗೆ ತಿಳಿಸಿದಳು. ಮಹಾರಾಣಿ ಲಕ್ಷ್ಮಮ್ಮಣ್ಣಿಯು ಗುಣವತಿಯೂ, ಚಾತುರ್ಯ ವತಿಯೂ, ತೇಜಸ್ವಿನಿಯೂ ಆದ ರಮಣಿಯೆಂದು ಹೈದರನೇ ಆದಿಯಾಗಿ ಎಲ್ಲರೂ ಅರಿತು ಇದ್ದರು. ಆದಕಾರಣ, ಹೈದರನು ಸರ್ವಾಧೀಶನಾದರೂ, ಆಕೆಯೊಡನೆ ಸ್ಪಷ್ಟವಾಗಿ ಹೋರಾಡುವುದಕ್ಕೆ ಹೆದರುತಲಿದ್ದನು. ಆದುದರಿಂದ 'ನೀವು ದತ್ತವಿಧಾನವನ್ನು ಮಾಡಿಕೊಳ್ಳುವುದು ಅನವಶ್ಯಕ' ಎಂದು ನುಡಿಯಲು ಹಿಂಜರಿದನು. ಆದಕಾರಣ ಹೈದರನು ಬಹಳ ಯೋಚಿಸಿ, "ನಿಮಗೆ ದತ್ತ ಪುತ್ರನು ಬೇಕಾದ ಪಕ್ಷದಲ್ಲಿ ನೀವೇ ಸ್ವತಂತ್ರಿಸಿ ಹುಡುಕತಕ್ಕ ಆವಶ್ಯಕವಿಲ್ಲ. ರಾಜ್ಯಪಾಲನಾ ಸಾಮಾರ್ಥ್ಯವುಳ್ಳ ಬಾಲಕನನ್ನು ನಾನು ನಿಮಗೆ ತೋರಿಸುವೆನು" ಎಂದು ಆಕೆಗೆ ಹೇಳಿಕಳುಹಿಸಿದನು. ಹೀಗೆ ವರ್ತಮಾನವನ್ನು ಕಳುಹಿಸಿ, ಆತನು ಅನೇಕಬಾಲಕರನ್ನು ಕರೆಯಿಸಿ ಅವರೆಲ್ಲರನ್ನೂ ಒಂದು ಕೊಠಡಿಯಲ್ಲಿರಿಸಿ, ಅವರ ಸಮಿಾಪದಲ್ಲಿ ವಿವಿಧಾಯುಧಗಳನ್ನೂ, ಆಟದ ವಸ್ತುಗಳನ್ನೂ, ವಿವಿಧವಾದ ಭೋಜ್ಯಪದಾರ್ಥಗಳನ್ನೂ ಇಡಿಸಿ, ನಿಮಗಿಷ್ಟವಾದ ವಸ್ತುಗಳನ್ನು ನೀವು ತೆಗೆದು ಕೊಳ್ಳಿರೆಂದು ಆ ಬಾಲಕರೊಡನೆ ಹೇಳಿದನು. ಆಮೇಲೆ ಅವರೊಳಗೆಲ್ಲ ಅರಿ ಕೋಟೆಯ ಅಧಿಪತಿಯಾದ ದೇವರಾಜನ ಪುತ್ರನಾದ ಚಾಮರಾಜನೆಂಬ ಒಬ್ಬ ಬಾಲಕನು ಒಂದು ಖಡ್ಗವನ್ನೂ, ಒಂದು ದರ್ಪಣವನ್ನೂ ತೆಗೆದುಕೊಂಡನಾದ್ದ ರಿಂದ ಆ ಬಾಲಕನೇ ರಾಜ್ಯಕ್ಕೆ ಅರ್ಹನೆಂದು ಹೈದರನು ನಿಶ್ಚಯಿಸಿದನು. ಮೂರು ವರ್ಷ ಪ್ರಾಯವುಳ್ಳ ಆ ಬಾಲಕನನ್ನು ನಾಮಮಾತ್ರಕ್ಕೆ ದೊರೆಯಾಗಿ ಮಾಡಿ, ಹೈದರನು ರಾಜ್ಯಲಾಭವೆಲ್ಲವನ್ನೂ ತಾನೇ ಹೊಂದುತಲಿದ್ದನು. ಮಹಾರಾಣಿ ಲಕ್ಷ್ಮಮ್ಮಣ್ಣಿ ಈ ಕಪಟವೆಲ್ಲವೂ ತಿಳಿದಿದ್ದರೂ ಹೈದರನೊಡನೆ ಹೋರಾಡುವುದಕ್ಕೆ ಆಗದೆ ಇತ್ತು. ಆಗ ಅವನ ಪ್ರತಾಪವು ಲಂಕಾಧೀಶನಾದ ರಾವಣನ ಪ್ರತಾಪದಂತೆ ಪ್ರಬಲವಾಗಿತ್ತು. ಆದುದರಿಂದ ಅಲ್ಲಿದ್ದ ಶೂರರು ಆಕೆಗೆ ಸಹಾಯ ಮಾಡಲು ಹಿಂಜರಿಯುತಲಿದ್ದರು. ಅದರಿಂದ ಹೈದರನೊಡನೆ ಬಹಿರಂಗವಾಗಿ ವಿರೋಧ ವನ್ನು ಬೆಳೆಸುವುದು ದುಸ್ತರವು ಎಂದು, ಆ ಚತುರೆಯಾದ ರಾಣಿಯು, ಗುಪ್ತ ವಾಗಿ ಪರರಾಜರೊಡನೆ ಸಂಧಿಯನ್ನು ಮಾಡಿಕೊಂಡು ಹೈದರನನ್ನು ಪದಚ್ಯುತ ನ್ನಾಗಿ ಮಾಡಲೆಣಿಸಿದಳು. ಅದಕ್ಕಾಗಿ ಆಕೆಯು ಆಗ ಮದರಾಸಿನಲ್ಲಿ ಗವರ್ನರ ವರಾಗಿದ್ದ ಪಿಂಗಾಟುದೊರೆಯೊಡನೆ ರಹಸ್ಯವಾಗಿ ಪತ್ರವ್ಯವಹಾರವನ್ನು ನಡೆಸ ಲಾರಂಭಿಸಿದಳು. ಮೈಸೂರು ರಾಜ್ಯವನ್ನು ತುರುಕರ ಕೈಯಿಂದ ತಕ್ಕಿಸಿಕೊಳ್ಳ

ಬೇಕೆಂದು ಇಂಗ್ಲೀಷರ ಸಹಾಯವನ್ನು ಕೋರುವುದಕ್ಕಾಗಿ ಆಕೆಯು ತಿರುಮಲ ರಾಯನೆಂಬ ವಕೀಲನನ್ನು ಮದರಾಸಿಗೆ ಕಳುಹಿಸಿದಳು. ಅಂತಃಪುರನಿವಾಸಿಯಾದ ಒಬ್ಬ ರಾಜಯುವತಿಯು ಹೈದರನ ಅನ್ಯಾಯಕ್ಕೆ ಸೈರಿಸದೆ, ಅವನ ಬಂದೀಖಾನೆಯಲ್ಲಿಯೇ ಇದ್ದರೂ ಅವನಿಗೆ ತಿಳಿಯದಂತೆ ಅವನನ್ನೇ ನಾಶಮಾಡುವದಕ್ಕೆ ಆಂಗ್ಲೇಯರ ಸಹಾಯವನ್ನು ಸಂಪಾದಿಸಿದಳು ಎಂಬ ವಿಷಯವು ಭವಿಷ್ಯತ್ಕಾಲದ ಚರಿತ್ರಕಾರರಿಗೆ ಅತ್ಯಂತಾಶ್ಚರ್ಯವನ್ನು ಉಂಟು ಮಾಡದಿರದು. ಇಂತಹ ಮಹಾಸಂಕಟಸಮಯದಲ್ಲಿ ರಾಣಿಯು ಬರೆದ ಲೇಖನಗಳೇ ಆಕೆಗೆ ಇರುವ ರಾಜಕಾರ್ಯ ಧುರಂಧರತ್ವವನ್ನು ತೋರಿಸುತ್ತಲಿದೆ. ಆಕೆಯು ಮೊದಲನೆಯ ಲೇಖನದಲ್ಲಿ ತಿರುಮಲರಾಯನಿಗೆ, "ನೀನು ಸ್ವಲ್ಪವು ಆಲಸ್ಯಮಾಡದೆ ಕೂಡಲೆ ಮದರಾಸಿಗೆ ಹೊರಟು ಲಾರ್ಡುಪಿಂಗಾಟುದೊರೆಯನ್ನು ದರ್ಶಿಸಿ ಪುನಃ ನಮ್ಮ ರಾಜ್ಯವನ್ನು ಪಡೆದುಕೊಳ್ಳುವದಕ್ಕೆ ಉಚಿತವಾದ ಮಾತುಗಳನ್ನು ಆತನೊಡನೆ ಚರ್ಚಿಸುವುದು. ಅವರ ಸೈನ್ಯದ ಖರ್ಚಿಗೆ ಒಂದು ಕೋಟಿ ರೂಪಾಯಿಗಳನ್ನೂ ಅವರ ದರ್ಬಾರು ಖರ್ಚಿಗಾಗಿ ಮೂರುಲಕ್ಷ ರೂಪಾಯಿಗಳನ್ನೂ, ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಲಾರ್ಡ್‌ಪಿಂಗಾಟ್‌ದೊರೆಯವರಿಗೆ ನಾನು ಸ್ವಂತವಾಗಿ ಬರೆದ ಲೇಖನದಲ್ಲಿ ನೀನು ನಮ್ಮಕಡೆಯ ಸರ್ವಕಾರ್ಯಕ್ಕೂ ಅಧಿಕಾರಿಯೆಂದೂ, ಸಮಯಾನುಸಾರವಾಗಿ ಸಂಧಿಯನ್ನು ನನಗಾಗಿ ಇಂಗ್ಲೀಷರೊಡನೆ ಬೆಳೆಸುವುದಕ್ಕೆ ನಿನಗೆ ಸ್ವಾತಂತ್ರ್ಯವುಂಟೆಂದೂ ಬರೆದು ಇದ್ದೇನೆ. ನೀನು ಯಾವ ಪ್ರಕಾರವಾಗಿಯಾಗಲಿ ಪ್ರಯತ್ನವನ್ನು ಮಾಡಿ ರಾಜ್ಯವನ್ನು ಪುನಃ ಸಂಪಾದಿಸಿದರೆ ನಿನಗೆ ರಾಜ್ಯದ ಆದಾಯದಲ್ಲಿ ನೂರಕ್ಕೆ ಹತ್ತರಂತೆ ಬಹುಮಾನವನ್ನು ಕೊಟ್ಟು ನೀನು ಜೀವಿಸಿರುವವರೆಗೂ ನಿನ್ನನ್ನು ಗೌರವಿಸುವೆನು. ಇದಲ್ಲದೆ ನಿನಗೆ ವಂಶಪರಂಪರೆಯಾಗಿ ದಿವಾಣಗಿರಿಯನ್ನೂ ಕೊಡುವೆನು ಎಂದು ಬರೆದಳು." ಕಂಪೆನಿಯವರಿಗೆ ಪಿಂಗಾಟುದೊರೆಯವರ ಮೇಲೆ ಯಾವುದೋ ಒಂದು ಕಾರಣದಿಂದ ಕೋಪವುಂಟಾದುದರಿಂದ, ತಿರುಮಲರಾಯನು ಮಾಡುವ ಕಾರ್ಯಕ್ಕೆ ವಿಘ್ನವುಂಟಾಗಿ, ಆತನು ತಂಜಾವೂರಿನಲ್ಲಿ ಕೆಲವು ದಿವಸಗಳು ಸುಮ್ಮನಿರಬೇಕಾಯ್ತು.

ಇಷ್ಟರಲ್ಲಿ, ಇಲ್ಲಿ ಹೈದರನು ಲಕ್ಷ್ಮಮ್ಮಣ್ಣಿಯ ಮೇಲೆ ಮತ್ತಷ್ಟು ಕ್ರೂರತ್ವವನ್ನು ತೋರಲಾರಂಭಿಸಿದನು. ಅವನು ತನ್ನ ಶೌರ್ಯಬಲದಿಂದ ಹಿಂದೂಸ್ಥಾನದಲ್ಲಿ ಅನೇಕ ಪ್ರದೇಶಗಳನ್ನು ವಶಮಾಡಿಕೊಂಡು ಮದರಾಸನ್ನು ಮುತ್ತಿಗೆ ಹಾಕಲು ಪ್ರಯತ್ನಿಸುತಲಿದ್ದನು. ಮದರಾಸಿನ ಗವರ್ನರಾದ ಲಾರ್ಡ್ ಮ್ಯಾಕರ್ಟನಿಗೂ ಸಹ ಹೈದರನ ಪರಾಕ್ರಮವನ್ನು ಅಡಗಿಸಿ ಅವನನ್ನು ಹೇಗಾದರೂ ಕೆಡಿಸಬೇಕು ಎಂದು ತೋರಿತು. ಮೈಸೂರು ಮಹಾರಾಣಿಯು ಸ್ವರಾಜ್ಯಾಭಿಲಾಷೆಯುಳ್ಳವಳೆಂದೂ, ಕಾರ್ಯನಿರ್ವಾಹದಲ್ಲಿ ದಕ್ಷಳೆಂದೂ, ಲಾರ್ಡ್ ಮ್ಯಾಕರ್ಟ

ನ್ನನು ಕೇಳಿದ್ದನು. ಹೈದರನಂತಹ ಬಲವಂತನೊಡನೆ ಸ್ವತಂತ್ರವಾಗಿ ಹೋರಾಡಿ ಗೆಲ್ಲುವುದು ಕಷ್ಟವಾದುದರಿಂದ ಲಕ್ಷ್ಮಮ್ಮಣ್ಣಿಯನ್ನು ಸೇರಿಸಿಕೊಂಡು ಗುಪ್ತವಾಗಿ ಹೈದರನನ್ನು ನಾಶಮಾಡಬೇಕೆಂದು ಆತನು ಆಲೋಚಿಸಿದನು. ಲಾರ್ಡ್ ಮ್ಯಾಕರ್ಟನ್ನನು ಹೀಗೆ ನಿಶ್ಚಯಿಸಿಕೊಂಡು ತಂಜಾವೂರು ಸಂಸ್ಥಾನಕ್ಕೆ ರೆಸಿಡೆಂಟನಾಗಿದ್ದ ಸಲಿವನ್ ದೊರೆಯನ್ನು ಆ ಕಾರ್ಯಕ್ಕೆ ನಿಯಮಿಸಿದನು. ಆತನು ರಾಣಿಯ ಪ್ರಧಾನಿಯಾದೆ ತಿರುಮಲರಾಪನೊಡನೆ ಸನ್ ೧೭೮೨ ನೆಯ ಇಸವಿ ಅಕ್ಟೋಬರ್ ೫೮ ನೆಯ ತಾರೀಖಿನಲ್ಲಿ ಕೆಳಗೆ ಬರೆದಿರುವಂತೆ ಕರಾರನ್ನು ಮಾಡಿ ಕೊಂಡನು. ಇಂಗ್ಲೀಷರು ಮೈಸೂರು ರಾಜ್ಯವನ್ನು ಗೆದ್ದು ಮಹಾರಾಣಿಯ ಕೈವಶಮಾಡಿದರೆ, ಲಕ್ಷ್ಮಮ್ಮಣ್ಣಿಯು ಕಂಪೆನಿಯವರಿಗೆ ೭೫ ಲಕ್ಷ ರೂಪಾಯಿ ಗಳನ್ನು ಪ್ರತಿವರ್ಷವೂ ಕಪ್ಪವಾಗಿ ಕೊಡುವಂತೆಯೂ, ೧೫ ಲಕ್ಷ ರೂಪಾಯಿಗಳು ಆದಾಯವುಳ್ಳ ದೇಶವನ್ನು ಬಹುಮಾನವಾಗಿ ಕೊಡುವಂತೆಯೂ, ಕರಾರು ನಡೆಯಿತು. ಕೂಡಲೆ ಇಂಗ್ಲೀಷಿನವರು ಯುದ್ಧಕ್ಕೆ ಬೇಕಾದ ಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಿ ತಂಜಾವೂರು ರಾಜನನ್ನು ಕಾಪಾಡಿದಂತೆಯೇ ಮೈಸೂರು ರಾಣಿಯನ್ನು ರಕ್ಷಿಸಬೇಕೆಂದೆಣಿಸಿದರು. ಇಂಗ್ಲೀಷಿನವರ ಸೈನ್ಯವು ಮುತ್ತಿಗೆ ಹಾಕಲು ಕೋಟೆಯ ಸಮೀಪಕ್ಕೆ ಬಂದೊಡನೆ, ಶ್ರೀರಂಗಪಟ್ಟಣದಲ್ಲಿರುವ ರಾಣಿಯ ಕಡೆಯವರೆಲ್ಲರೂ ಹೈದರನ ಸೈನ್ಯದ ಮೇಲೆ ಬೀಳಬೇಕೆಂದೂ, ಇವರಿಗೆ ಗ್ರಾಮದಲ್ಲಿರುವ ಪೋಲೀಸಿನವರು ಸಹಾಯಕರಾಗಬೇಕೆಂದೂ, ಹೀಗೆ ಒಳಗಿನಿಂದಲೂ ಹೊರಗಿನಿಂದಲೂ ಹೈದರನ ಸೈನ್ಯವನ್ನು ಮುತ್ತಿಕೊಳ್ಳಬೇಕೆಂದೂ, ರಾಣಿಯು ಮೊದಲು ಏರ್ಪಾಟುಮಾಡಿದಳು. ಶಾಮಯ್ಯನೆಂಬ ಶೂರನಾದ ಸರದಾರನು ರಾಣಿಗೆ ಬಹಳ ಅನುಕೂಲನಾಗಿದ್ದನು. ಶ್ರೀರಂಗಪಟ್ಟಣದಲ್ಲಿ ನಡೆಯಬೇಕಾದ ಕಾರ್ಯಗಳೆಗೆಲ್ಲ ರಾಣಿಯು ಈ ಶಾಮಯ್ಯನನ್ನೇ ಅಧಿಪತಿಯನ್ನಾಗಿ ನಿಯಮಿಸಿದಳು. ಸನ್ ೧೭೮೨ ನೆಯ ಇಸವಿಯ ನವಂಬರಿನಲ್ಲಿ ರಾಣಿಯು ಇದರ ವಿಷಯವಾಗಿ ತಿರುಮಲರಾಯನಿಗೆ, "ಶಾಮಯ್ಯನೇ ಆದಿಯಾಗಿ ಕೆಲವು ಸರದಾರರು ನಮಗೆ ಅನುಕೂಲರಾದರು. ಆದುದರಿಂದ ಇಂಗ್ಲೀಷು ಸೈನ್ಯವು ಬಂದೊಡನೆಯೇ ನಾವು ವಿಶೇಷ ಕಷ್ಟನಷ್ಟಗಳಿಗೊಳಗಾಗದೆ ಧನಾಗಾರವನ್ನೂ, ಕೋಟೆಯನ್ನೂ, ವಶಮಾಡಿಕೊಳ್ಳುವೆವು. ಆದಕಾರಣ ನೀವು ಗಜ್ಜಲಹಟ್ಟೀ ಕಾವೇರಿಪುರದ ಮೇಲೆ ಇಂಗ್ಲೀಷು ಸೇನೆಯನ್ನು ಕಳುಹಿಸುವುದು," ಎಂದು ಬರೆದಳು. ಹೀಗೆ ಬರೆದ ಈ ವಿಷಯವನ್ನೆಲ್ಲ ಸ್ವಾಮಿನೀದ್ರೋಹಿಯಾದ ಒಬ್ಬ ಸೇವಕನು ಹೈದರನಿಗೆ ತಿಳಿಸಿದನು. ಹೈದರನು ಈ ವಿಷಯವನ್ನು ಕೇಳಿ ಅತ್ಯಾಗ್ರಹಯುಕ್ತನಾಗಿ ಸನ್ ೧೭೮೩ ನೆಯ ಇಸವಿ ಜೂಲೈ ೨೩ ನೆಯ ತಾರೀಖಿನಲ್ಲಿ ಮಹಾರಾಣಿಗೆ ಅನುಕೂಲರಾದವರನ್ನು ಅನೇಕ ವಿಧವಾಗಿ ಹಿಂಸಿಸಿ ಕಾರಾಗೃಹಬದ್ಧರನ್ನು ಮಾಡಿದನು. ಮುಖ್ಯರಾದ ಕೆಲವರನ್ನು ಯಮಪುರಿಗೆ ಕಳುಹಿದನು. ಇಷ್ಟರಲ್ಲಿ ಹೈದರನು ಕಾಲವಾಗಿ

ಟೆಪ್ಪುಸುಲ್ತಾನನು ಸರ್ವಾಧಿಕಾರಿಯಾದನು. ಹೀಗೆ ತಮ್ಮ ಪ್ರಯತ್ನಗಳಿಗೆ ನಡುವೆ ವಿಘ್ನಗಳುಂಟಾದರೂ ಲಕ್ಷ್ಮಮ್ಮಣ್ಣಿಯು ಪೂರ್ವ ಪ್ರಯತ್ನವನ್ನು ಬಿಡದೆ, ಒಳಗೊಳಗೆಯೇ ಕಂಪೆನಿಯವರೊಡನೆ ಕಾಗದಪತ್ರಗಳನ್ನು ನಡೆಸುತ್ತ ಟೀಪುವಿನ ವಿನಾಶಪ್ರಯತ್ನವನ್ನು ಗುಪ್ತವಾಗಿ ಮಾಡುತ್ತಲೇ ಇದ್ದಳು. ಆಗ ಇಂಗ್ಲೀಷರು ಟೀಪುವು ಮೈಸೂರು ಹುಲಿಯೆಂದೂ, ಇಂತಹ ಶೂರನನ್ನು ಹೇಗೆ ಜಯಿಸುವುದೆಂದೂ ಸಂಶಯಪಡುತ್ತಲಿದ್ದರು. ಆಗಲೂ, ವೃದ್ಧೆಯಾದ ಲಕ್ಷ್ಮಮ್ಮಣ್ಣಿಯು ಟೀಪುವನ್ನು ನಾಶಮಾಡಿ ಮೈಸೂರನ್ನು ಪುನಃ ಸಂಪಾದಿಸುವೆನೆಂಬ ಧೈರ್ಯವನ್ನೂ, ಇಚ್ಛೆಯನ್ನೂ ಬಿಡದೆ ಇದ್ದಳು. ಸನ್ ೧೭೯೦ ನೆಯ ಇಸವಿಯಲ್ಲಿ ರಾಣಿಯು ಜನರಲ್ ಮೆಡೋಸ್ ದೊರೆಗೆ ಬರೆದ ಪತ್ರಿಕೆಗಳು ಅತ್ಯುತ್ಸಾಹ ಪೂರ್ಣಗಳಾಗಿವೆ. ಆದರೆ ಅದಕ್ಕೆ ಆ ಸೇನಾಪತಿಯು ಬರೆದ ಪ್ರತ್ಯುತ್ತರಗಳು ಮಾತ್ರ ಅಷ್ಟು ಉತ್ಸಾಹಪ್ರದಗಳಾಗಿಲ್ಲ. ಮೈಸೂರು ಚರಿತ್ರೆಯನ್ನು ಸಂಪೂರ್ಣವಾಗಿ ತಿಳಿಯಲಪೇಕ್ಷಿಸುವರು ಈ ಉತ್ತರಪ್ರತ್ಯುತ್ತರಗಳನ್ನು ಅವಶ್ಯವಾಗಿ ನೋಡಬೇಕು. ಜನರಲ್ ಮೇಡೋಸ್ ದೊರೆಯು ೧೭೯೦ ನೆಯ ಇಸವಿಯಲ್ಲಿ ರಾಣಿಯವರಿಗೆ ಬರೆದ ಲೇಖನದಲ್ಲಿ, "ಟೀಪುವು ಎಂದಿಗೆ ನಾಶವಾಗುವನೋ, ದೇಶವು ಎಂದಿಗೆ ಶಾಂತಿಯನ್ನು ಪಡೆವುದೋ ಪರಮೇಶ್ವರನಿಗೊಬ್ಬನಿಗೇ ತಿಳಿಯಬೇಕು. (ಅಂದರೆ ಈ ಕಾರ್ಯವು ಈಗ ನೆರವೇರುವಂತೆ ತೋರುವುದಿಲ್ಲ.) ಜಯವುಂಟಾಗುವುದು ಪರಮೇಶ್ವರಾಧೀನವು. ನಮಗೆ ಪರಮೇಶ್ವರನು ಯಶಸ್ಸಾಮರ್ಥ್ಯಗಳನ್ನು ಕೊಟ್ಟರೆ ನಾವು ಅತ್ಯಂತಾನಂದದೊಡನೆ ಮೈಸೂರು ರಾಜ್ಯವನ್ನು ತಮಗೆ ಸಮರ್ಪಿಸಬಲ್ಲೆವು. ರಾಜ್ಯವನ್ನು ಹೇಗೆ ಹಂಚಿಕೊಳ್ಳಬೇಕೆಂಬುದನ್ನು ಕುರಿತು ನಾವೀಗ ಏನೂ ನುಡಿಯಲಾರೆವು. ಮರಾಟೆಯವರೂ ನಿಜಾಮನೂ ನಮಗೆ ಮಿತ್ರರಾದ್ದರಿಂದ ಅವರ ಆಲೋಚನೆಯಂತೆ ನಡೆಯುವುದು. ಸಂಪೂರ್ಣ ಯುದ್ಧವ್ಯಯಗಳನ್ನೂ ಗೆದ್ದಮೇಲೆ ಸೈನಿಕರಿಗೆ ಬಹುಮಾನಗಳನ್ನೂ ಕೊಡುವೆವೆಂದು ನೀವು ಬರೆದಿರುವಿರಿ. ಹಾಗೆ ಮಾಡುವುದು ಉತ್ತಮವಾದ ಕಾರ್ಯವೇ ಸರಿ," ಎಂದು ಬರೆದರು. ಸಂಪೂರ್ಣ ಸಹಾಯವನ್ನು ಮಾಡುವರೆಂಬ ಭರವಸೆಯಿಂದ ಮಿತ್ರರನ್ನಾಗಿ ಮಾಡಿಕೊಂಡ ಇಂಗ್ಲೀಷರಿಂದ, ಇಂತಹ ಅಲ್ಪಸಮಾಧಾನವನ್ನು ಕೊಡುವ ಪ್ರತ್ಯುತ್ತರಗಳನ್ನು ಪಡೆದು ರಾಣಿಯು ಎಷ್ಟು ಮನೋವ್ಯಥೆಗೊಳಗಾಗಿರಬಹುದೆಂಬುದನ್ನು ಪಾಠಕರೇ ಯೋಚಿಸಬಲ್ಲರು. ಮಹಾರಾಣಿ ಲಕ್ಷ್ಮಮ್ಮಣ್ಣಿಯಲ್ಲಿರುವ ಸಂತತ ಪ್ರಯತ್ನೇಚ್ಛೆಯೂ, "ಸತ್ಯಮೇವ ಜಯತೇ" ಎಂಬ ವಾಕ್ಯದಲ್ಲಿ ಆಕೆಗಿರುವ ದೃಢವಿಶ್ವಾಸವೂ, ಇನ್ನೂ ಅನೇಕ ಸದ್ಗುಣಗಳೂ ಆಕೆಯು ಸಂಕಟಸಮಯದಲ್ಲಿ ತಿರುಮಲರಾಯನಿಗೂ, ಲಾರ್ಡ್ ಮಾರ್ನಿಂಗ್‌ಟನ್ ದೊರೆಗೂ ಬರೆದ ಕಾಗದಗಳಿಂದ ಸ್ಪಷ್ಟವಾಗುತ್ತದೆ. ಅವು ಮನವನ್ನು ಕರಗಿಸುವವುಗಳಾಗಿಯೂ, ಕರುಣಾರಸಪೂರಿತಗಳಾಗಿಯೂ ಇರುವುದರಿಂದ ಅವು

ಗಳಲ್ಲಿ ಕೆಲವನ್ನು ಇಲ್ಲಿ ಬರೆವೆನು, "ನಾವು ನಮ್ಮ ದೀನಾವಸ್ಥೆಯನ್ನು ಕುರಿತು ಅನೇಕ ಸಲ ನಿಮಗೆ ತಿಳಿಸಿದ್ದೇವೆ. ನೀವು ಮೈಸೂರನ್ನು ಬಿಟ್ಟು ೨೨ ವರ್ಷಗಳಾ ದುವು. ಪ್ರತಿದಿವಸವೂ ಈ ಯವನರಾಕ್ಷಸನು (ಹೈದರನ ಮಗನಾದ ಟೀಪುವು) ಕೊಡುವ ಅನೇಕ ವಿಧವಾದ ಬಾಧೆಗಳನ್ನು ನಾವು ಅನುಭವಿಸುತ್ತಲಿದ್ದೇವೆ. ಇವನು ನಮ್ಮನ್ನು ಕ್ರಮೇಣ ಹೆಚ್ಚು ಬಾಧೆಗಳಿಗೊಳಪಡಿಸುತ್ತಲಿದಾನೆ. ಟೀಪುವು ಸ್ಫೋಟಕದ ಕಾರಣವನ್ನು ಹೇಳಿ ಚಾಮರಾಜಒಡೆಯರನ್ನು ರಹಸ್ಯವಾಗಿ ಕೊಂದು ಹಾಕಿದನು. ನಮಗೆ ಶರೀರಾಚ್ಛಾದನೆಗೊಂದು ಒಳ್ಳೆಯ ವಸ್ತ್ರವನ್ನಾದರೂ ಕೊಡದೆ ಹಿಂಸಿಸುತಲಿದ್ದಾನೆ. ನಮ್ಮನ್ನು ರಾಜಮಂದಿರದಲ್ಲಿರಗೊಡದೆ ಅಲ್ಲಿಂದ ಹೊರಡಿಸಿದನು. ನಾವು ಅಲ್ಲಿಂದ ಹೊರಟುಬರುವಾಗ ಅಲ್ಲಿದ್ದ ಕಾವಲಿನವರು ನಮ್ಮನ್ನು ಪರೀಕ್ಷಿಸಿ ನೋಡಿ ಅವಮಾನ ಮಾಡಿದರು. ಅವರು ನಮ್ಮ ದೇಹದಲ್ಲಿರುವ ಒಡವೆಗಳೆಲ್ಲವನ್ನೂ ತೆಗೆದುಕೊಂಡು ನಮಗೆ ಧರಿಸಿಕೊಳ್ಳುವುದಕ್ಕೆ ಒರಟಾದ ಬಟ್ಟೆಗಳನ್ನು ಕೊಟ್ಟರು. ಕಾಂತಿರಾಯರ ಹಳೆಯಮನೆಯ ಒಂದು ಭಾಗವನ್ನು ನಮ್ಮ ನಿವಾಸಕ್ಕೆ ಕೊಟ್ಟು, ನಮ್ಮ ಸುತ್ತಲು ಪಹರೆಯನ್ನಿಟ್ಟಿದ್ದಾರೆ. ನಮ್ಮ ದಾಸಿಯರಲ್ಲಿ ಹನ್ನೆರಡು ಮಂದಿಯನ್ನು ಕೊಟ್ಟು ಮಿಕ್ಕವರಲ್ಲಿ ಕೆಲವರನ್ನು ಮಹಮ್ಮದೀಯ ಮತಕ್ಕೆ ಸೇರಿಸಿಕೊಂಡು, ಅವರಿಂದ ಅತಿ ನೀಚವಾದ ಕೆಲಸಗಳನ್ನು ಮಾಡಿಸುತಲಿದ್ದಾರೆ. ಕೆಲವರನ್ನು ಅತಿ ದೂಷ್ಯವಾದ ವೇಶ್ಯಾವೃತ್ತಿಯನ್ನೂ ಅವಲಂಬಿಸುವಂತೆ ಮಾಡಿದ್ದಾರೆ. ಇನ್ನು ಕೆಲವರಿಂದ ಶೌಚಕೂಪಗಳನ್ನು ತೊಳೆಸುತ್ತಿದ್ದಾರೆ. ನಿತ್ಯವೂ ನಮಗೆ ಭಿಕ್ಷುಕರಿಗೆ ಕೊಡುವಂತಹ ಧಾನ್ಯವನ್ನು ಕೊಡುತ್ತಾರೆ. ನಾವು ಮಡಕೆಗಳಲ್ಲಿ ಅಡಿಗೆಮಾಡಿಕೊಂಡು, ಪರ್ಣಪುಟಗಳಲ್ಲಿ ಊಟ ಮಾಡುತಿರುವೆವು. ಟೀಪುವು ನಮ್ಮನ್ನು ತ್ವರೆಯಲ್ಲಿಯೇ ಕೊಲ್ಲುವಂತೆ ಪ್ರತಿಜ್ಞೆಯನ್ನು ಮಾಡಿದನಂತೆ. ಅವನು ಯಾವಾಗ ನಮ್ಮ ಪ್ರಾಣಗಳನ್ನು ತೆಗೆಯುವನೋ ತಿಳಿಯದು. ನಮಗೆ ಒಳ್ಳೆಯದನ್ನು ಮಾಡಲೆಣಿಸಿ ನೀವು ಅನೇಕ ವಿಧವಾದ ಸಂಕಟಗಳನ್ನನುಭವಿಸಿದಿರಿ. ನಮಗಾಗಿ ನೀವು ಇಂಗ್ಲೀಷರೊಡನೆ ಸ್ನೇಹ ಮಾಡಲೆಣಿಸಿ ಜಾನ್‌ಸಲಿವನ್ ದೊರೆಯೊಡನೆಯೂ, ಇತರ ಇಂಗ್ಲೀಷ್ ಸರದಾರರೊಡನೆಯೂ ಮಾತನಾಡಿ, ಅವರು ನಮಗೆ ಸಹಾಯಕರಾಗುವಂತೆ ಮಾಡಿದಿರಿ. ಇದಲ್ಲದೆ ನಮಗೋಸ್ಕರ ನಿಮ್ಮ ಮಿತ್ರರನ್ನೂ ಬಂಧುಗಳನ್ನೂ ಈ ಮಾನವರಾಕ್ಷಸನು ಬಲಿಯಾಗಿ ತೆಗೆದುಕೊಂಡನು. ಹೀಗೆ ನಿಮಗೆ ಉಂಟಾದ ಅನೇಕ ಕಷ್ಟಗಳನ್ನು ನೆನೆದರೆ ನನ್ನ ಹೃದಯವು ಕರಗುವುದು. ಇಷ್ಟು ಕಷ್ಟನಷ್ಟಗಳುಂಟಾದರೂ ನಮ್ಮ ಪ್ರಯತ್ನವು ಕೊನೆಗೊಂಡು ನಮ್ಮ ರಾಜ್ಯಕ್ಕೆ ಸ್ವಾತಂತ್ರ್ಯವುಂಟಾಗದಿರುವುದು ಅಧಿಕ ಸಂತಾಪಕರವಾಗಿದೆ. ಇನ್ನು ಶೀಘ್ರದಲ್ಲಿ ನಮ್ಮ ನಾಶವುಂಟಾಗುವುದಕ್ಕೆ ಸಂದೇಹವಿಲ್ಲ. ಟೀಪುವಿನ ಬಳಿಗೆ ಈಗ ಒಬ್ಬ ಫ್ರೆಂಚ್ ವಕೀಲನು ಬಂದಿದಾನೆ. ಅವನು ನಮ್ಮನ್ನು (ರಾಣಿಯನ್ನು) ಕೊಲ್ಲದಿದ್ದರೆ ಟೀಪುವಿಗೆ ಶೀಘ್ರ

ದಲ್ಲಿಯೇ ನಾಶವುಂಟಾಗುವುದೆಂದು ಬೋಧಿಸಿದನಂತೆ. ಬಳಿಕ ನಮ್ಮನ್ನು ಕ್ಷಿಪ್ರದಲ್ಲಿ ಕೊಲ್ಲುವಂತೆ ನಿಶ್ಚಯಿಸಿದರಂತೆ. ಟೀಪುವಿಗೂ, ಫ್ರೆಂಚರಿಗೂ ನಡೆದ ಕರಾರನ್ನು ಇದರೊಂದಿಗೆ ಕಳುಹಿಸಿದ್ದೇವೆ. ನೀವು ಅದನ್ನು ಇಂಗ್ಲೀಷು ಗವರ್ನರ್ ಜನರಲ್ ದೊರೆಗೆ ತೋರಿಸಬೇಕು. ಫ್ರೆಂಚರು ಇಲ್ಲಿಗೆ ಪ್ರವೇಶಿಸುವುದಕ್ಕೆ ಪೂರ್ವವೇ ಇಂಗ್ಲೀಷರು ತಮ್ಮ ಸೈನ್ಯವನ್ನು ಇಲ್ಲಿಗೆ ಕಳುಹಿಸಿ ಆ ಯವನರಾಕ್ಷಸನನ್ನು ಅಡಗಿಸದಿದ್ದರೆ ಕಂಪೆನಿಯವರ ರಾಜ್ಯವೂ ಸಹ ಅಧಿಕಭಯಕ್ಕಾಸ್ಪದವಾಗುವುದು. ಇಂಗ್ಲೀಷ್ ಗವರ್ನರಿಗೆ ನಮ್ಮ ವಿಜ್ಞಾಪನೆಯನ್ನು ಕುರಿತು, ನಮ್ಮ ಪ್ರಾಣರಕ್ಷಣೆಯನ್ನು ಕುರಿತು ಚಿಂತೆಯಿಲ್ಲದಿದ್ದರೂ ಕಂಪೆನಿಯವರ ರಾಜ್ಯವನ್ನು ಕಾಪಾಡಿಕೊಳ್ಳುವುದಕ್ಕಾದರೂ ಸೈನ್ಯವನ್ನು ಶೀಘ್ರವಾಗಿ ಕಳುಹಿಸಬೇಕೆಂದು ನೀವು ಆತನೊಡನೆ ತಿಳಿಸಬೇಕು. ಅಷ್ಟರ ವರೆಗೆ ಹೇಗಾದರೂ ನಮ್ಮ ಪ್ರಾಣವನ್ನು ರಕ್ಷಿಸಿಕೊಂಡಿರುವೆವು.

ರಾಜ್ಯವು ನಮಗೆ ಲಭಿಸಿದ ಪಕ್ಷಕ್ಕೆ ಹೂಣರಿಗೆ ಒಂದುಕೋಟಿ ರೂಪಾಯಿಗಳನ್ನು ಕೊಡುವೆವು. ಅವರು ಸಲಿರ್ವ ದೊರೆಯೊಡನೆ ಮಾಡಿದ ಕರಾರನ್ನು ನಡೆಸಬೇಕು. ಸಲಿರ್ವ ಮೊದಲಾದ ಸರದಾರರಿಗೆಲ್ಲರಿಗೂ ಅಗ್ರಹಾರಗಳನ್ನು ಕೊಡುವೆವು. ಅತಿಕ್ರೂರನಾದ ಈ ಯವನರಾಕ್ಷಸನಿಂದ ಪ್ರಜೆಗಳು ವಿಶೇಷ ಬಾಧೆಗಳನ್ನನುಭವಿಸುತಲಿದ್ದಾರೆ. ಆದಕಾರಣ ಎಲ್ಲರೂ ಅವನ ನಾಶವನ್ನೇ ಅಪೇಕ್ಷಿಸುವರು. ಇಂತಹ ಸಮಯದಲ್ಲಿ ಆಂಗ್ಲೇಯ ಸೈನ್ಯಕ್ಕೆ ಇಲ್ಲಿಯ ಸೈನಿಕರು ಬೇಕಾದಷ್ಟು ಸಹಾಯವನ್ನು ಮಾಡಬಲ್ಲರು. ಹೂಣರ ಸೈನ್ಯವು ಯಾವ ಕಡೆಯಿಂದ ಬಂದರೂ, ಭೋಜನಪಾನೀಯಾದಿ ಸಾಮಗ್ರಿಗಳು ಪುಷ್ಕಳವಾಗಿ ದೊರೆವುವು. ಆದುದರಿಂದ ನೀವು ನಿಮ್ಮ ಸಾಮರ್ಥ್ಯವೆಲ್ಲವನ್ನೂ ವ್ಯಯಮಾಡಿ ಯುದ್ಧ ಪ್ರಯತ್ನವನ್ನು ಮಾಡಿದರೆ ಶ್ರೀರಂಗನಾಥನು ನಿಮಗೆ ಸಹಾಯವನ್ನು ಮಾಡುವನೆಂದು ನಂಬಿರುವೆನು," ಎಂದು ಮಹಾರಾಣಿಯಿಂದ ಬರೆದ ಲೇಖನವು ತಿರುಮಲರಾಯನಿಗೆ ಪ್ರೇಷಿತವಾಯ್ತು.

ಬಳಿಕ ಪೂನಾ ಪೇಷ್ವೆಯೂ, ಹೈದರಾಬಾದು ನೈಜಾಮನೂ, ಆಂಗ್ಲೇಯರೂ ಸೇರಿ ೧೭೯೯ ನೆಯ ಇಸವಿಯಲ್ಲಿ ಟೀಪುವಿನೊಡನೆ ನಡೆಸಿದ ಯುದ್ಧವು ಇತಿಹಾಸವನ್ನೋದಿದವರಿಗೆಲ್ಲರಿಗೂ ತಿಳಿದ ವಿಷಯವಾದುದರಿಂದ ಅದನ್ನು ಇಲ್ಲಿ ವರ್ಣಿಸಬೇಕಾದುದಿಲ್ಲ. ಶ್ರೀರಂಗಪಟ್ಟಣದಲ್ಲಿ ನಡೆದ ಈ ಘೋರ ಸಂಗ್ರಾಮದಲ್ಲಿ, ಟೀಪುಸುಲ್ತಾನನು ಮೇ ತಿಂಗಳು ೪ ನೆಯ ತಾರೀಖಿನಲ್ಲಿ ಹತನಾದುದರಿಂದ ಮೈಸೂರು ಸಿಂಹಾಸನವು ಬಂಧಮುಕ್ತವಾಯಿತು.

ಆ ಯುದ್ಧದಲ್ಲಿ ಹೂಣರಿಗೆ ಮಹಾರಾಣಿ ಲಕ್ಷ್ಮಮ್ಮಣ್ಣಿಯು ಮಾಡಿದ ವಿಶೇಷ ಸಹಾಯದಿಂದ ಅವರು ಆಕೆಯನ್ನು ಬಹಳ ಗೌರವದಿಂದ ಕಂಡುದಲ್ಲದೆ

ಯುದ್ಧಾನಂತರ ಆಕೆಯನ್ನು ಕೊಂಡಾಡಿ, ಆಕೆಯ ಹೇಳಿಕೆಯಂತೆ ಮೈಸೂರು ರಾಜ್ಯದಲ್ಲಿ ತಕ್ಕ ಏರ್ಪಾಟುಗಳನ್ನು ಮಾಡಿದರು. ರಾಣಿಯು ವಯೋವೃದ್ಧನೂ ವಿಚಾರಜ್ಞನೂ ಆದ ಪೂರ್ಣಯ್ಯನೆಂಬ ಮಂತ್ರಿಪುಂಗವನೊಡನೆ ಆಲೋಚಿಸಿ, ಕಂಪೆನಿಯವರೊಡನೆ ಮಾಡಿಕೊಳ್ಳಬೇಕಾದ ಸಂಧಿಯ ವಿಷಯವೆಲ್ಲವನ್ನೂ ನಿರ್ಣಯಿಸಿದಳು. ರಾಣಿಯ ಆಲೋಚನೆಯಂತೆ ರಾಜ್ಯವು ಕೃಷ್ಣರಾಜ ಪ್ರಭುವಿಗೆ ದೊರೆಯಿತು. ಆಕೆಯ ಅಭೀಷ್ಟಗಳಲ್ಲಿ ತಿರುಮಲರಾಯನನ್ನು ಮಂತ್ರಿಯನ್ನಾಗಿ ನಿಯಮಿಸಬೇಕೆಂಬಪೇಕ್ಷೆಯೊಂದು ಮಾತ್ರ ನೆರವೇರಲಿಲ್ಲ. ರಾಜತಂತ್ರಗಳನ್ನೆಲ್ಲವನ್ನೂ ನಡೆಸುತಲಿದ್ದ ಪುರಾತನ ಮುತ್ಸದ್ದಿಯಾದ ಪೂರ್ಣಯ್ಯನಿಗೆ ದಿವಾನ್ ಗಿರಿಯು ದೊರೆಯಿತು.

ರಾಜ್ಯವ್ಯವಹಾರಗಳೆಲ್ಲವೂ ಯಥಾಪ್ರಕಾರವಾಗಿ ನಡೆಯಲು ಪ್ರಾರಂಭವಾದ ಮೇಲೆ ರಾಣಿಯು ಪರಮಾರ್ಥವಿಚಾರದಲ್ಲಿ ಕಾಲವನ್ನು ಕಳೆಯಲು ನಿಶ್ಚಯಿಸಿದಳು. ಆಕೆಯು ಪರಮೇಶ್ವರನಲ್ಲಿ ಬಹು ಭಕ್ತಿಯುತೆಯಾದುದರಿಂದಲೇ ಮಹತ್ತರವಾದ ಸಂಕಟಗಳನ್ನು ಧೈರ್ಯದಿಂದ ಪರಿಹರಿಸಿ ಸೌಖ್ಯಪರ್ವತದ ಶಿಖರವನ್ನು ಏರಲು ಶಕ್ತೆಯಾದಳು. ಆಕೆಯು ಯಾವಾಗಲೂ ಸಂಪೂರ್ಣ ಭಕ್ತಿರಸದಿಂದ ತನ್ಮಯತ್ವವನ್ನು ಹೊಂದಿ, ದೀನದಯಾಳುವಾದ ಪರಮೇಶ್ವರನನ್ನು ಧ್ಯಾನಿಸುತಲಿದ್ದಳು. ಕೆಲದಿವಸಗಳ ಬಳಿಕ ಈ ಯದ್ವಿತೀಯ ರಮಣಿಯು ೧೮೧೫ ನೆಯ ಇಸವಿಯಲ್ಲಿ ಪರಮಪದವನ್ನೈದಿದಳು.

ಪತಿಯು ಮೃತನಾದನಂತರ ಈಕೆ ೪೫ ವರ್ಷಗಳು ಜೀವಿಸಿದ್ದಳು. ಆಗ ಆಕೆಗೆ ಅನೇಕ ಸ್ಥಿತ್ಯಂತರಗಳುಂಟಾದುವು. ಅವುಗಳೆಲ್ಲವನ್ನೂ ತನ್ನ ಬುದ್ಧಿಬಲದಿಂದ ನಿವಾರಣೆ ಮಾಡಿಕೊಂಡು ಕೊನೆಗೆ ಸ್ವಾತಂತ್ರ್ಯಸುಖವನ್ನನುಭವಿಸಿದಳು.

ಮೈಸೂರು ದೇಶದ ಚರಿತ್ರೆಯನ್ನು ಬರೆದ ಕರ್ನಲ್ ವಿಲ್ಕ್ಸ್‌ಯಂಬಾತನು ೧೮೦೫ ನೆಯ ಇಸವಿಯಲ್ಲಿ ಈ ರಾಣಿಯನ್ನು ಕುರಿತು, "ಈ ವೃದ್ಧರಾಣಿಯು ಲೋಕಪೂಜ್ಯೆಯೂ, ವಿಚಾರಶೀಲೆಯೂ ಆಗಿರುವಳು. ಆಕೆಯ ಅನುಭವವೂ, ಆ ಅನುಭವದಿಂದ ಆಕೆಗೆ ತೋರಿದ ಸದ್ವಿಚಾರಗಳೂ ಅತ್ಯಂತ ಪ್ರಶಂಸನೀಯಗಳಾಗಿರುತ್ತವೆ," ಎಂದು ಬರೆದಿರುವನು. ಮೃತ್ಯುಸಮಯದಲ್ಲಿ ಈಕೆಗೆ ಸುಮಾರು ಎಂಭತ್ತು ವರುಷ ವಯಸ್ಸಾಗಿದ್ದರೂ ಆಕೆಗೆ ಇಂದ್ರಿಯಪಟುತ್ವವು ಕಡಮೆಯಾಗಲಿಲ್ಲವಂತೆ. ಈ ಮಹಾ ಸಾಧ್ವಿಯು ಆಪದ್ದೆಶೆಯಲ್ಲಿ ಧೈರ್ಯವನ್ನವಲಂಬಿಸಿದ್ದಂತೆ ಅಧಿಕಾರವನ್ನು ಪಡೆದ ಕಾಲದಲ್ಲಿ ಶಾಂತಿ, ಭೂತದಯೆಗಳನ್ನು ಅವಲಂಬಿಸಿದಳು. ಸೇವಕರನ್ನು ದಯಾದೃಷ್ಟಿಯಿಂದ ನೋಡುತಿದ್ದಳು. ಬಡಜನರಿಗೆ ಈಕೆಯು ಮಾಡಿದ ಅಪರಿಮಿತ ಸಹಾಯದಿಂದ ಪ್ರಜೆಗಳು ಈಕೆಯನ್ನು ತಾಯಿ

ಯಂತೆ ಭಾವಿಸಿ 'ಮಾತೃ ಶ್ರೀ ಲಕ್ಷ್ಮಮ್ಮಣ್ಣಿಯವ' ರೆಂದು ಈಗಲೂ ಕರೆಯುತ್ತಾರೆ. ಆಹಾ! ಇಂತಹ ಸ್ತ್ರೀರತ್ನಗಳು ಭರತಖಂಡಕ್ಕೆ ಭೂಷಣಗಳಲ್ಲವೆ!

ರಾಣೇಭವಾನಿ.

"ಗುಣಾಃಪೂಜಾಸ್ಥಾನಂಗುಣಿಷುನಚಲಿಂಗಂನಚವಯಃ'—**ಭವಭೂತಿ.**

ಪೂರ್ವಕಾಲದಲ್ಲಿ, ಉತ್ತರಹಿಂದೂಸ್ಥಾನದಲ್ಲಿ ರಾಜಕಾರ್ಯಧುರಂಧರತ್ವವನ್ನು ವಹಿಸಿದ ನಾರೀಮಣಿಗಳಲ್ಲಿ ರಾಣೇಭವಾನಿಯು ಅಗ್ರಗಣ್ಯೆಯೆಂದು ನುಡಿಯಬೇಕು. ಈಕೆಯು ಬಂಗಾಳಾದೇಶದಲ್ಲಿರುವ ರಾಜಶಾಯಿ ಪ್ರಾಂತ್ಯಕ್ಕೆ ಸೇರಿದ ಛಾತೀಮೆಂಬ ಗ್ರಾಮದ ನಿವಾಸಿ ಆತ್ಮಾರಾಂ ಚೌಧುರಿಯ ಮಗಳು. ಈಕೆಯ ವಾರ್ಧಕ್ಯದಲ್ಲಿ ಈಕೆಯನ್ನು ನೋಡಿದವರು ಈಗಲೂ ಬಂಗಾಳೆಯಲ್ಲಿರುವರೆಂದು ಹೇಳುತ್ತಾರೆ. (ಕ್ರಿ. ಶ. ೧೮೯೮.) ಈಕೆಯ ತಂದೆಯು ವಿಶೇಷ ಐಶ್ವರ್ಯವಂತನಲ್ಲದಿದ್ದರೂ ಈಕೆಯ ಅಸಮಾನ ಸೌಂದರ್ಯವನ್ನೂ, ಸದ್ಗುಣಗಳನ್ನೂ ನೋಡಿ, ನಾಟೂರೂ ಸಂಸ್ಥಾನಾಧಿಪತಿಯಾದ ರಾಜಾರಾಮಾಜೀವನ್ಯವರು ಈಕೆಯನ್ನು ತಮ್ಮ ಮಗನಿಗೆ ವಿವಾಹಮಾಡಿಕೊಂಡರು.

ಈಕೆಯು ಬಾಲ್ಯದಲ್ಲಿಯೇ ವಿದ್ಯೆಯನ್ನು ಕಲಿತುಕೊಂಡಳೆಂದು ಕೆಲವರು ಬರೆದಿರುವರು. ದೈವಭಕ್ತಿ, ಧರ್ಮಬುದ್ಧಿ, ಕಾರ್ಯನಿರ್ವಾಹಕತ್ವವೆಂಬ ಈ ಗುಣತ್ರಯವು ಈ ವನಿತೆಯಲ್ಲಿ ಬಾಲ್ಯದಿಂದಲೂ ನೆಲೆಗೊಂಡಿದ್ದುವು. ಪತಿಯು ರಾಜ್ಯಭಾರವನ್ನು ವಹಿಸಿದ್ದಾಗಲೂ, ಪತಿಯ ಮರಣಾನಂತರ ರಾಜ್ಯಪಾಲನೆಯನ್ನು ಮಾಡುತಲಿದ್ದಾಗಲೂ ಈ ಲಲನೆಯು ತನ್ನ ಸುಗುಣಗಳಿಂದ ಪ್ರಜೆಗಳನ್ನು ಸಂತೋಷಗೊಳಿಸಿದಳು. ಆದ್ದರಿಂದಲೇ ಈಕೆಯ ಕೀರ್ತಿಯು ಶಾಶ್ವತವಾಗಿದೆ. ಈಕೆಯು ಆಳುತಲಿದ್ದ ನಾಟೂರು ಸಂಸ್ಥಾನವನ್ನು ಪಡೆಯುವದರಲ್ಲಿ ಈಕೆಯ ದೊಡ್ಡ ಮಾವನಾದ ರಘುನಂದನರಾಯನು ತೋರಿದ ಧೈರ್ಯಚಾತುರ್ಯಗಳು ವರ್ಣನೀಯಗಳು. ರಾಣಿಭವಾನಿಯು ಹೊಂದಿದ ಅತ್ಯಂತ ಕೀರ್ತಿಗೆ ಮೂಲಕಾರಣವಾದ ಈ ಐಶ್ವರ್ಯ ಪ್ರಾಪ್ತಿಯನ್ನು ಕುರಿತು ಇಲ್ಲಿ ಸಂಗ್ರಹವಾಗಿ ಬರೆಯುವೆನು.

ಕಾಮದೇವನೆಂಬ ಬ್ರಾಹ್ಮಣನಿಗೆ ರಘುನಂದನ, ರಾಮಜೀವನ ಎಂಬ ಇಬ್ಬರು ಪುತ್ರರಿದ್ದರು. ಅವರು ದರ್ಪನಾರಾಯಣನೆಂಬ ಒಬ್ಬ ಚಿಕ್ಕ ಜಮೀನುದಾರನ ಹತ್ತಿರ ನೌಕರಿಯನ್ನು ಮಾಡುತಲಿದ್ದರು. ಅವರಿಬ್ಬರಲ್ಲಿ ರಘುನಂದನನು

ಸೂಕ್ಷ್ಮಬುದ್ಧಿಯುಳ್ಳವನಾಗಿದ್ದನು. ಆ ಜಮಿಾನುದಾರನು ರಘುನಂದನನ ಸೂಕ್ಷ್ಮ ಬುದ್ಧಿಗೆ ಮೆಚ್ಚಿ, ಮುರ್ಷಿದಾಬಾದು ನವಾಬನ ದರ್ಬಾರಿನಲ್ಲಿ, ಆತನನ್ನು ತನ್ನ ಕಡೆಯ ವಕೀಲನನ್ನಾಗಿ ನಿಯಮಿಸಿದನು. ಆ ದರ್ಬಾರಿನಲ್ಲಿರುವವರೆಲ್ಲರೂ ಆತನನ್ನು ವಿಶೇಷವಾಗಿ ಸನ್ಮಾನಿಸುತಲಿದ್ದರು. ದಿವಾನನು ಸಹ ಈತನ ಸದ್ಗುಣಗಳಿಂದ ಪ್ರೀತನಾಗಿ ತನ್ನ ಕೈಮುದ್ರೆಯನ್ನೂ ಈತನಿಗೆ ಕೊಡುತಲಿದ್ದನು.

ಈ ಸಮಯದಲ್ಲಿ ಮುರ್ಷಿದಾಬಾದು ನವಾಬನಿಗೆ ವಿಶೇಷ ದ್ರವ್ಯವು ಬೇಕಾದುದರಿಂದ ಆತನು ಭಂಡಾರದಲ್ಲಿರುವ ಹಣವೆಲ್ಲವನ್ನೂ ವ್ಯಯಮಾಡಿದನು. ಆ ಹಣವು ಪುನಹ ಭಂಡಾರವನ್ನು ಸೇರುವ ಮಾರ್ಗವು ಕಾಣಬರಲಿಲ್ಲವಾದುದರಿಂದ, ಡಿಲ್ಲೀಶ್ವರನು ತನ್ನನ್ನು ರಾಜಭ್ರಷ್ಟನನ್ನಾಗಿ ಮಾಡುವನೆಂದು ನವಾಬನು ಭೀತನಾಗಿ ಸುಳ್ಳುಲೆಕ್ಕಗಳನ್ನು ಬರೆದು ಡಿಲ್ಲಿಗೆ ಕಳುಹಿಸಬೇಕೆಂದು ನಿಶ್ಚಯಿಸಿದನು. ಆದರೆ ರಘುನಂದನನು ಇಂತಹ ನೀತಿದೂರವಾದ ಕಾರ್ಯವನ್ನು ಮಾಡಲೊಪ್ಪದೆ, ತಾನು ಡಿಲ್ಲಿಗೆ ಹೋಗಿ ಸುಳ್ಳುಲೆಕ್ಕಗಳಿಲ್ಲದೇ ಡಿಲ್ಲೀಶ್ವರನನ್ನು ಸಮಾಧಾನಗೊಳಿಸಿ ಬರುವೆನೆಂದು ನವಾಬನೊಡನೆ ನುಡಿದನಂತೆ. ಅದರಂತೆಯೇ ನವಾಬನು ರಘುನಂದನನ್ನು ಡಿಲ್ಲಿಗೆ ಕಳುಹಲು, ಆತನು ತನ್ನ ವಾಕ್ಚಾತುರ್ಯದಿಂದ ಬಾದಶಹನನ್ನು ಸಮಾಧಾನಗೊಳಿಸಿ ಮುರ್ಷಿದಾಬಾದಿಗೆ ಬಂದನಂತೆ. ಅಂದಿನಿಂದಲೂ ನವಾಬನು ರಘುನಂದನನಿಗೆ ದೊಡ್ಡದೊಡ್ಡ ಅಧಿಕಾರಗಳನ್ನು ಕೊಟ್ಟು ಕಡೆಗೆ ದಿವಾನ್ ಕೆಲಸವನ್ನು ಮತ್ತು 'ರಾಯ' ಎಂಬ ಬಿರುದನ್ನೂ ಇತ್ತನು. ಹೀಗೆ ಪೂರ್ಣಾಧಿಕಾರವು ದೊರೆತ ಮೇಲೆ ಆತನು ತನ್ನ ತಮ್ಮನಿಗೆ ಎರಡು ಕೋಟಿ ರೂಪಾಯಿಗಳ ಬೆಲೆಬಾಳುವ ಜಮಿಾನನ್ನು ಕೊಡಿಸಿದನು. ಕೆಲವು ದಿವಸಗಳಿಗೆ ನವಾಬನು ರಾಮಜೀವನಿಗೆ 'ರಾಜಾ' ಯೆಂಬ ಬಿರುದನ್ನು ಕೊಟ್ಟನು.

ರಾಜಾ ರಾಮಜೀವನಿಗೆ ಇಬ್ಬರು ಪುತ್ರರು ಜನ್ಮಿಸಿದ್ದರು. ಅವರಲ್ಲೊಬ್ಬನು ಶೈಶವದಲ್ಲಿಯೇ ಲೋಕಾಂತರವನ್ನೈದಿದನು. ಎರಡನೆಯವನಾದ ರಾಮಕಾಂತನು ರಾಜಾಧಿಕಾರವನ್ನೂ 'ರಾಜಾ' ಎಂಬ ಬಿರುದನ್ನೂ ತಂದೆಯು ಕಾಲವಾದನಂತರ ಹೊಂದಿದನು. ಈ ರಾಮಕಾಂತನ ಪತ್ನಿಯೇ ನಮ್ಮ ಚರಿತ್ರನಾಯಿಕೆ ರಾಣೇಭವಾನಿಯು. ವಿವಾಹ ಸಮಯದಲ್ಲಿ ರಾಮಕಾಂತನಿಗೆ ೧೮ ವರುಷ, ಭವಾನಿಗೆ ೧೫ ವರುಷ ವಯಸ್ಸಾಗಿತ್ತು. ಈ ದಂಪತಿಗಳು ಪರಸ್ಪರ ಪ್ರೇಮಾನುರಾಗವುಳ್ಳವರಾಗಿದ್ದರು. ಸ್ವಲ್ಪ ಕಾಲದಲ್ಲಿ ರಾಜಕಾರ್ಯ ವಿಷಯಗಳಿಂದ ಇವರಿಗೆ ಬಹಳ ಕಷ್ಟವು ಪ್ರಾಪ್ತವಾಯಿತು.

ರಾಜಾ ರಾಮಜೀವನ ಕಾಲದಲ್ಲಿ ಆತನ ಹತ್ತಿರ ದಯಾರಾಮನೆಂಬ ಬುದ್ಧಿವಂತನಾದೊಬ್ಬ ಮಂತ್ರಿಯಿದ್ದನು. ರಾಮಜೀವನನು ಇವನನ್ನು ಪುತ್ರನಂತೆ

ಪ್ರೀತಿಸುತಲಿದ್ದನು. ರಾಮಕಾಂತನು ಇವನನ್ನು 'ಅಣ್ಣಾ' ಎಂದು ಸಂಬೋಧಿಸುತಲಿದ್ದನು. ಮೃತ್ಯುಕಾಲದಲ್ಲಿ ರಾಮಜೀವನನು ಪುತ್ರನನ್ನು ಕರೆದು ಪ್ರತಿ ಕಾರ್ಯದಲ್ಲಿಯೂ ದಯಾರಾಮನ ಇಷ್ಟಾನುಸಾರವಾಗಿ ನಡೆಯುವಂತೆ ಬೋಧಿಸಿ ಪ್ರಾಣವನ್ನು ತ್ಯಜಿಸಿದನು. ಬಾಲ್ಯದಲ್ಲಿಯೇ ಸಂಸ್ಥಾನಾಧಿಕಾರವು ದೊರೆತುದದರಿಂದ ರಾಮಕಾಂತನು ಗರ್ವಿಸಿ, ರಾಜ್ಯಕಾರ್ಯಗಳಲ್ಲಿ ಮನಸ್ಸಿಡದೆ ಸ್ವೇಚ್ಛಾನುಸಾರವಾಗಿ ನಡೆಯುತ್ತ ರಾಜ್ಯವನ್ನು ಹಾಳುಮಾಡಲಾರಂಭಿಸಿದನು. ಕೈಗೆ ಸಿಕ್ಕಿದ ಧನವೆಲ್ಲವನ್ನೂ ವಿಷಯ ಸುಖಗಳಿಗೆ ವ್ಯಯಮಾಡಿದನು. ಇದೆಲ್ಲವನ್ನೂ ನೋಡಿ ದಯಾರಾಮನು ಅನೇಕವಿಧವಾಗಿ ಬುದ್ಧಿಯನ್ನು ಹೇಳಿದನು. ಆದರೆ ಆ ಗರ್ವಿಷ್ಟನು ಆತನ ಮಾತುಗಳನ್ನು ಗಣಿಸದೆ ದಯಾರಾಮನನ್ನು ದೇಶ ಭ್ರಷ್ಟನನ್ನಾಗಿ ಮಾಡಿದನು. ನಾಟೂರಿನಿಂದ ಹೊರಡಿಸಲ್ಪಟ್ಟ ದಯಾರಾಮನು, ರಾಮಕಾಂತನ ಮೇಲೆ ದ್ವೇಷವನ್ನು ವಹಿಸಿ ಅಲ್ಲಿಂದ ಮುರ್ಷಿದಾಬಾದಿಗೆ ಹೊರಟನು. ಆಗ ಅಲ್ಲಿ ರಾಜ್ಯವನ್ನಾಳುತ್ತಲಿದ್ದ ನವಾಬನ ಹೆಸರು ಅಲಿವರ್ದಿಖಾ. ಅಲ್ಲಿಗೆ ಹೋದಮೇಲೆ ದಯಾರಾಮನು ಪ್ರತಿದಿನವೂ ದರ್ಬಾರಿಗೆ ಹೋಗುತಲಿದ್ದನು. ಸ್ವಲ್ಪದಿವಸಗಳಲ್ಲಿಯೇ ತನ್ನ ಬುದ್ಧಿಕೌಶಲ್ಯದಿಂದ ಅವನು ನವಾಬನ ಅನುಗ್ರಹಕ್ಕೆ ಪಾತ್ರನಾದನು. ದಯಾರಾಮನು ಒಂದು ದಿನ ನವಾಬನ ಬಳಿಗೆ ಹೋಗಿ, "ಪ್ರಭುಗಳ ಧನವೆನ್ನೆಲ್ಲವನ್ನೂ ರಾಮಕಾಂತನು ಹಾಳುಮಾಡುತಲಿದಾನೆ, ಧನವನ್ನೆಲ್ಲವನ್ನೂ ಅಪಹರಿಸಿ ರಾಜದ್ರೋಹವನ್ನು ಮಾಡಲೆಣಿಸಿದಾನೆ." ಎಂದು ಹೇಳಿದನು. ಆಗಿನ ನವಾಬರು ವಿಚಾರಶೂನ್ಯರು. ಯುಕ್ತಾಯುಕ್ತವಿಚಾರವನ್ನು ಮಾಡಿ ಕಾರ್ಯವನ್ನು ನಡೆಸತಕ್ಕವರಲ್ಲ. ಒಂದುಮಾತಿನಿಂದ ಒಬ್ಬನನ್ನು ಲಕ್ಷಾಧೀಶನನ್ನಾಗಿಯೂ, ಇನ್ನೊಬ್ಬನನ್ನು ಭಿಕ್ಷಾಧೀಶನನ್ನಾಗಿಯೂ ಮಾಡುತಲಿದ್ದರು. ಆದಕಾರಣ ದಯಾರಾಮನ ಮಾತುಗಳನ್ನು ಕೇಳಿದೊಡನೆಯೇ ಈ ಮಾತು ಸತ್ಯವೇ ಅಸತ್ಯವೇ ಎಂಬುದನ್ನು ವಿಚಾರಮಾಡದೆ, ರಾಮಕಾಂತನನ್ನು ಪದಚ್ಯುತನನ್ನಾಗಿ ಮಾಡಿ, ಆತನ ಧನವನ್ನೆಲ್ಲವನ್ನೂ ಕೊಳ್ಳೆಹೊಡೆಯುವುದಕ್ಕೂ ರಾಮಕಾಂತನ ದೊಡ್ಡಪ್ಪನಮಗನಿಗೆ ರಾಜ್ಯವನ್ನು ಕೊಡುವುದಕ್ಕೂ ದಯಾರಾಮನೊಡನೆ ಸೈನ್ಯವನ್ನು ಕಳುಹಿದನು. ನವಾಬನ ಆಜ್ಞೆಯಂತೆ ದಯಾರಾಮನು ಸೈನ್ಯಸಹಿತನಾಗಿ ನಾಟೂರನ್ನು ಪ್ರವೇಶಿಸಿ ಭಂಡಾಗಾರವನ್ನು ಕೊಳ್ಳೆಹೊಡೆಯಲು ಪ್ರಾರಂಭಿಸಿದನು. ಕೋಟೆಯೊಳಕ್ಕೆ ಸೈನ್ಯವು ಪ್ರವೇಶಿಸಿದಾಗ ರಾಮಕಾಂತನು ಅಂತಃಪುರದಲ್ಲಿದ್ದನಂತೆ.

ಅವನು ನವಾಬನ ಸೈನ್ಯವು ದಂಡೆತ್ತಿಬಂದ ಸಮಾಚಾರವನ್ನು ಕೇಳಿ ಅವರೊಡನೆ ಯುದ್ಧಮಾಡಲಸಮರ್ಥನಾದಕಾರಣ, ವಜ್ರಾಹತನಾದವನಂತೆ ನಿಶ್ಚೇಷ್ಟಿತನಾಗಿದ್ದನು. ಆತನು ಹಾಗೆಯೇ ಇನ್ನು ಕೆಲನಿಮಿಷಗಳಿದ್ದ ಪಕ್ಷದಲ್ಲಿ ಶತ್ರುಗಳಾತನನ್ನು ಸೆರೆಹಿಡಿಯುತಲಿದ್ದರು. ಆದರೆ ಸಮಯಸ್ಫೂರ್ತಿಯುಳ್ಳ ಭವಾ

ನಿಯು, ಪತಿದುಃಖವನ್ನು ನಿವಾರಣೆಮಾಡಿ, ತೆಗೆದುಕೊಂಡುಹೋಗಲು ಸಾಧ್ಯವಾದಷ್ಟು ಒಡವೆಗಳನ್ನು ಕೈಯಲ್ಲಿ ತೆಗೆದುಕೊಂಡು ಪತಿಯೂ, ತಾನೂ ಯಾರಿಗೂ ತಿಳಿಯದಂತೆ ಪಟ್ಟಣವನ್ನು ಬಿಟ್ಟು ಹೋದರು. ಬಾಲ್ಯದಿಂದಲೂ ಭವಾನಿಯು ಕಷ್ಟಗಳನ್ನು ಸ್ವಪ್ನದಲ್ಲಿಯೂ ಅರಿತವಳಲ್ಲ. ಪಲ್ಲಕ್ಕಿಯನ್ನು ಬಿಟ್ಟಿಂದಿಗೂ ನಡೆದವಳಲ್ಲ. ಇಂತಹ ಶ್ರೀಮತಿಯಾದ ರಾಣೀಭವಾನಿಯು ಈ ಕಷ್ಟವು ಪ್ರಾಪ್ತವಾದ ಸಮಯದಲ್ಲಿ ಎಂಟುತಿಂಗಳ ಗರ್ಭಿಣಿಯಾಗಿದ್ದಳು. ಇಷ್ಟು ಕಷ್ಟಗಳು ಸಂಭವಿಸಿದರೂ ಪತಿಯ ಪ್ರಾಣವು ಸುರಕ್ಷಿತವಾಗಿರುವದೆಂಬ ಸಂತೋಷದಿಂದ ಆಕೆಯು ಧೈರ್ಯದೊಡನೆ ನಡೆಯಲಾರಂಭಿಸಿದಳು. ಅವರು ಹೀಗೆ ಅತಿ ಪ್ರಯಾಣ ನಡೆದು ಪದ್ಮಾನದೀತೀರವನ್ನು ಸೇರಿದರು. ಅಲ್ಲಿ ಒಬ್ಬ ನಾವಿಕನನ್ನು ಆಶ್ರಯಿಸಿ ನದಿಯನ್ನು ದಾಟಿ ಮುರ್ಷಿದಾಬಾದನ್ನು ಪ್ರವೇಶಿಸಿ, ಬಡವರಂತೆ ಚಿಕ್ಕದಾದ ಗೃಹದಲ್ಲಿ ವಾಸಮಾಡಿಕೊಂಡಿದ್ದರು. ಅಲ್ಲಿಗೆ ಹೋದಮೇಲೆ ರಾಮಕಾಂತನು ತನ್ನ ಪೂರ್ವದ ಕೆಟ್ಟನಡತೆಗೆ ಪಶ್ಚಾತ್ತಾಪಪಟ್ಟು, ಇನ್ನು ಮೇಲೆ ಗುಣವತಿಯಾದ ತನ್ನ ಪತ್ನಿಯ ಇಷ್ಟಾನುಸಾರವಾಗಿ ನಡೆಯುವಂತೆ ಒಪ್ಪಿಕೊಂಡನು. ಭವಾನಿಯು ನವಾಬನ ಭಂಡಾರದಧಿಕಾರಿಯಾದ ಜಗತ್ಸೇಟನೊಡನೆ ತನ್ನನ್ನು ಸಾಕುಮಗಳಂತೆ ಭಾವಿಸಬೇಕೆಂದು ನುಡಿದು, ಆತನಿಗೂ ತನ್ನ ಪತಿಗೂ ಸ್ನೇಹವನ್ನುಂಟುಮಾಡಿದಳು. ತಮಗೆ ಪೂರ್ವದಲ್ಲಿ ಮಂತ್ರಿಯಾಗಿದ್ದು ಕಡೆಗೆ ತಮ್ಮನ್ನು ಈ ಸ್ಥಿತಿಗೆ ತಂದ ದಯಾರಾಮನನ್ನು ಕರೆಯಿಸಿ, ಆತನ ಪಾದಗಳಿಗೆ ತನ್ನ ಪತಿಯಿಂದ ನಮಸ್ಕಾರವನ್ನು ಮಾಡಿಸಿ, ತಮ್ಮ ಅಪರಾಧಗಳನ್ನು ಕ್ಷಮಿಸಬೇಕೆಂದು ಬೇಡಿಕೊಂಡಳು. ಹೀಗೆ ಪ್ರಾರ್ಥಿಸಲಾಗಿ ದಯಾರಾಮನು ಮನಸ್ಸುಕರಗಿದವನಾಗಿ, ರಾಮಕಾಂತನಿಗೆ ಪುನಃ ರಾಜ್ಯವನ್ನು ಕೊಡಿಸುವೆನೆಂದು ಪ್ರತಿಜ್ಞೆಯನ್ನು ಮಾಡಿದನು. ಅನಂತರ ರಾಣಿಯು ತನ್ನ ಆಭರಣಗಳನ್ನು ಮಾರಿ ಬಂದ ಹಣವನ್ನು ದಯಾರಾಮನ ಮೂಲಕ ಅಧಿಕಾರಿಗಳಿಗೆ ಲಂಚವನ್ನು ಕೊಡಿಸಿ, ಅವರನ್ನು ತಮ್ಮ ಪಕ್ಷವನ್ನು ಅವಲಂಬಿಸುವಂತೆ ಮಾಡಿದಳು. ಹೀಗೆ ಇವರ ಪಕ್ಷವನ್ನು ಅವಲಂಬಿಸಿದ ಅಧಿಕಾರಿಗಳೂ, ದಯಾರಾಮನೂ ಮತ್ತು ಜಗತ್ಸೇಟನೂ ಸೇರಿ ಹೇಗೋ ನವಾಬನ ಮನಸ್ಸನ್ನು ತಿರಿಗಿಸಿ, ಪುನಃ ರಾಮಕಾಂತನಿಗೆ ರಾಜ್ಯವನ್ನು ಕೊಡಿಸಿದರು. ಹೀಗೆ ಹೋದ ರಾಜ್ಯವನ್ನು ಮರಳಿ ಸಂಪಾದಿಸುವುದರಲ್ಲಿ ರಾಣೀಭವಾನಿಯು ತೋರಿದ ಅತ್ಯಂತ ಬುದ್ಧಿ ಕೌಶಲವೂ, ಈಕೆಗಿರುವ ಅತಿಶಯವಾದ ಪತಿಭಕ್ತಿಯೂ ಸ್ತೋತ್ರಾರ್ಹಗಳಾಗಿವೆ. ರಾಜ್ಯವು ಪುನಃ ದೊರೆತಮೇಲೆ ೧೯ ವರುಷಗಳಕಾಲ ರಾಮಕಾಂತನು ತನ್ನ ಭಾರ್ಯಾಮಣಿಯ, ಮತ್ತು ಮಂತ್ರಿ ಪುಂಗವನ ಅನುಮತಿಯಂತೆ ಸುಖವಾಗಿ ರಾಜ್ಯವನ್ನು ಪಾಲಿಸುತ್ತಿದ್ದು ಕೆಲದಿನಗಳ ಬಳಿಕ ಮೃತನಾದನು. ಪತಿಯ ಮರಣಕಾಲದಲ್ಲಿ ಭವಾನಿಯು ೩೫ ವರುಷ ವಯಸ್ಸುಳ್ಳವಳಾಗಿದ್ದಳು.

ರಾಮಕಾಂತನ ರಾಜ್ಯವು ಹೋದಾಗ ರಾಣಿಯು ಗರ್ಭವತಿಯಾಗಿದ್ದ ಳೆಂದು ಹಿಂದೆ ಬರೆದಿರುವೆನಲ್ಲವೆ! ಆಕೆಗೆ ಸ್ವಲ್ಪ ಕಾಲದಲ್ಲಿಯೇ ಪುತ್ರನು ಹುಟ್ಟಿ ದನು. ಅನಂತರ ಇನ್ನೊಬ್ಬ ಮಗನು ಜನಿಸಿದನು. ಆದರೆ ಈ ಮಕ್ಕಳು ಬಾಲ್ಯ ದಲ್ಲಿಯೇ ಕಾಲವಾದರು. ಆ ಮೇಲೆ ಈಕೆಗೆ 'ತಾರೆ' ಯೆಂಬ ಪುತ್ರಿಯು ಹುಟ್ಟಿ ದಳು, ತಾರೆಯು ಬಾಲ್ಯದಲ್ಲಿಯೇ ವಿತಂತುವಾದುದರಿಂದ ತಾಯಿಯ ಬಳಿಯಲ್ಲಿ ಇರುತಲಿದ್ದಳು.

ಪತಿಯು ಗತಿಸಿದನಂತರ ಭವಾನಿಯು ಸಿಂಹಾಸನವನ್ನು ಏರಿದಳು—ಆ ಕಾಲದಲ್ಲಿ ಬಂಗಾಳಾದೇಶಕ್ಕೆ ಸುರಾಜದ್ದೌಲನೆಂಬ ಯವನನು ನವಾಬನಾಗಿದ್ದನು. ಹಿಂದೂದೇಶದ ಚರಿತ್ರೆಯನ್ನೋದಿದವರಿಗೆ ಸುರಾಜದ್ದೌಲನ ದುಷ್ಟೇಷ್ಟೆಗಳು ಚನ್ನಾಗಿ ತಿಳಿದಿರುವುವು. ಈತನು ವ್ಯಭಿಚಾರಾದಿ ದುಷ್ಕರ್ಮಗಳಿಗೆ ಧನವನ್ನು ವ್ಯಯ ಮಾಡಿ, ತನ್ನ ಕೈಕೆಳಗಿನ ಮಂಡಲಾಧಿಪತಿಗಳಿಂದ ಧನವನ್ನು ಬಲಾತ್ಕಾರವಾಗಿ ಸೆಳೆಯುತಲಿದ್ದನು. ದ್ರವ್ಯವನ್ನು ಕೊಡಲಾರದವರನ್ನು ಬಹು ಕ್ರೂರವಾಗಿ ಹಿಂಸಿಸುತ್ತಿದ್ದನು. ಈ ದುಷ್ಟನು ಸ್ವಲ್ಪವೂ ಹಿಂತೆಗೆಯದೆ ಪರಸ್ತ್ರೀಯರನ್ನು ಸೆರೆ ಹಿಡಿಯುತ್ತಿದ್ದನು. ನ್ಯಾಯವೆನ್ನುವುದು ಈತನ ರಾಜ್ಯದಲ್ಲಿ ಔಷಧಕ್ಕಾದರೂ ಕಾಣಬರುತ್ತಿರಲಿಲ್ಲ.

ತನ್ನ ರಾಜ್ಯಕ್ಕಿಂತಹ ದುಷ್ಟನಿಂದೆಂದಿಗಾದರೂ ಕೆಡುಕುಂಟಾಗಬಹುದೆಂದು ಎಣಿಸಿ, ರಾಣೀಭವಾನಿಯು ತನ್ನ ಸೈನ್ಯವನ್ನು ಸರಿಮಾಡಲಾರಂಭಿಸಿದಳು. ಸೈನ್ಯದ ಭಟರನ್ನು ಹೆಚ್ಚಿಸಿ, ಯುದ್ಧಮಾಡಲಸಮರ್ಥರಾದ ಭಟರನ್ನು ತೆಗೆದು ಹಾಕಿ ಸಮರ್ಥರಾದವರನ್ನು ಸೇರಿಸಿ, ಅವರಿಂದ ವಿನೋದ ಯುದ್ಧವಂ ಮಾಡಿ ಸುತ್ತ ಸೈನ್ಯವನ್ನು ವೃದ್ಧಿಮಾಡಿದಳು.

ರಾಣಿಯ ಪುತ್ರಿಯಾದ ತಾರೆಯು ಬಂಗಾಳಾ ದೇಶದಲ್ಲಿ ವಿಖ್ಯಾತೆಯಾದ ಸುಂದರಿಯಾಗಿದ್ದಳು. ಈಕೆಯ ಸೌಂದರ್ಯವನ್ನು ಕೇಳಿ ನವಾಬನಿಗೆ ಈಕೆ ಯನ್ನು ಸೆರೆಹಿಡಿಯಬೇಕೆಂಬ ದುರ್ಬುದ್ಧಿಯುಂಟಾಯಿತು. ತಾರೆಯನ್ನು ತನಗೆ ಕೊಡಬೇಕೆಂದು ನವಾಬನು ರಾಣಿಗೆ ವರ್ತಮಾನವನ್ನು ಕಳುಹಿದನು. ರಾಣಿಯು ಅತ್ಯಂತ ಕ್ರೋಧಯುಕ್ತೆಯಾಗಿ ಆ ವರ್ತಮಾನವನ್ನು ತಂದ ದೂತನನ್ನು ಬಹಳ ಅವಮಾನಪಡಿಸಿ ಕಳುಹಿದಳು. ಇದರಿಂದ ನವಾಬನು ಕ್ರೋಧಾವೇಶ ಪರವಶ ನಾಗಿ ನಾಟೂರು ರಾಜ್ಯವನ್ನು ಹಾಳುಮಾಡಿ, ತಾರಾ ಭವಾನಿಯರನ್ನು ಸೆರೆಹಿಡಿದು ತರುವಂತೆ ತನ್ನ ಸೈನ್ಯವನ್ನು ಕಳುಹಿದನು. ಹೀಗೆ ನಡೆಯುವದೆಂದು ಪೂರ್ವವೇ ರಾಣಿಗೆ ತಿಳಿದಿತ್ತಾದ ಕಾರಣ, ಆಕೆಯು ನಗರದ ದ್ವಾರಗಳನ್ನು ಮುಚ್ಚಿಸಿ, ಸೈನ್ಯಾಧಿಪತ್ಯವನ್ನು ತಾನೇ ವಹಿಸಿ ಸೈನ್ಯವನ್ನು ತೆಗೆದುಕೊಂಡು ಹೊರಬಾಗಿಲ ಬಳಿಯಲ್ಲಿ ನವಾಬನ ಸೈನ್ಯವನ್ನು ಎದುರಿಸಿದಳು. ಇಲ್ಲಿ ಘೋರಯುದ್ಧವು

ನಡೆದು ಯವನರು ಸಂಪೂರ್ಣವಾಗಿ ಸೋತು ಓಡಿಹೋದರು. ಈ ವಿಷಯವು ಇತರ ರಾಜರಿಗೆ ತಿಳಿದೊಡನೆಯೇ ಅವರು ನವಾಬನ ಸೈನ್ಯಗಳನ್ನು ವಿಶೇಷವಾಗಿ ಬಾಧಿಸಲಾರಂಭಿಸಿದರು.

ಹೀಗೆ ಮಂಡಲಾಧಿಪತಿಗಳಿಗೆ ನವಾಬನು ದುಷ್ಟನೆಂದು ತೋರಿದುದರಿಂದ ಆತನನ್ನು ರಾಜ್ಯಚ್ಯುತನನ್ನಾಗಿ ಮಾಡಬೇಕೆಂದು ನಿಶ್ಚಯಿಸುವದಕ್ಕಾಗಿ, ಎಲ್ಲರೂ ಜಗತ್ಶೇಟನ ಮನೆಯಲ್ಲಿ ಸಭೆಯನ್ನು ಮಾಡಿದರು. ಕೃಷ್ಣಾಸಫರ್ ಸಂಸ್ಥಾನಾದಿಪತಿಗಳಾದ ರಾಜಕೃಷ್ಣ ಚಂದ್ರರಾಯರೂ, ಢಕ್ಕಾಸಂಸ್ಥಾನಾಧಿಪತಿಗಳಾದ ರಾಜರಾಜ ಬಲ್ಲವರೂ, ಪಾಟ್ನಾ ಸಂಸ್ಥಾನಾಧಿಪತಿಗಳಾದ ರಾಜಾರಾಯ ದುರ್ಲವರೂ, ನಾಟೂರು ರಾಜ್ಯಾಧಿಕಾರಿಣಿಯಾದ ರಾಣೀಭವಾನಿಯವರೂ ಸಭೆಯಲ್ಲಿ ಪ್ರಮುಖರಾಗಿದ್ದರು. ಅಲ್ಲಿ ಈ ಕೆಳಗೆ ಬರೆದಿರುವಂತೆ ಸಂಭಾಷಣೆ ನಡೆಯಿತೆಂದು ಒಬ್ಬ ಚರಿತ್ರಕಾರನು ಬರೆದಿರುತ್ತಾನೆ:—

ಜಗತ್ಶೇಟು:—ಸುರಾಜದೌಲನನ್ನು ಪದಚ್ಯುತನನ್ನಾಗಿಯೂ ಮಿಾರ್ಜಾಫರನನ್ನು ನವಾಬನನ್ನಾಗಿಯೂ ಮಾಡುವುದು ಅತ್ಯುತ್ತಮವಾದುದು. ಹೀಗೆ ಮಾಡಿದರೆ ಹಿಂದೂ ರಾಜರ ಅಭಿಮತದಂತೆ ನಡೆದುಕೊಳ್ಳುವೆನೆಂತಲೂ, ಪ್ರಜೆಗಳಿಗೆ ಹಿತವಾಗುವಂತೆ ರಾಜ್ಯವನ್ನು ಪರಿಪಾಲಿಸುವೆನೆಂತಲೂ ಮಿಾರ್ಜಾಫರನು ಪ್ರತಿಜ್ಞೆಯನ್ನು ಮಾಡಿರುತ್ತಾನೆ. ಮತ್ತು ಆತನು ಸುರಾಜದೌಲನ ಸೈನ್ಯಾಧಿಪತಿಯಾದುದರಿಂದ ಸೈನ್ಯವು ಆತನು ಹೇಳಿದಂತೆ ಕೇಳುವುದು. ಆದಕಾರಣ ಮಿಾರ್ಜಾಫರನನ್ನು ರಕ್ತಪಾತವಿಲ್ಲದೆ ನವಾಬನನ್ನಾಗಿ ಮಾಡಬಹುದು.

ರಾಣೀಭವಾನಿ:—ತುರುಷ್ಕನನ್ನು ವಂಗ ದೇಶಾಧಿಪನನ್ನಾಗಿ ಮಾಡುವುದಕ್ಕಿಂತ ಹೈಂದವನನ್ನು ಏಕೆ ಮಾಡಬಾರದು. ನಷ್ಟವಾದ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸಿಕೊಳ್ಳುವುದಕ್ಕೆ ಇದೇ ಸಮಯವೆಂದು ನನ್ನ ತಾತ್ಪರ್ಯವು.

ರಾಜಾಕೃಷ್ಣಚಂದ್ರನು:—ರಾಣಿಯವರೆ!! ತಾವು ಹೇಳಿದ ಸಲಹೆಯು ಬಹು ಯೋಗ್ಯವಾದುದು. ಸ್ವಾತಂತ್ರ್ಯವು ಎಲ್ಲರಿಗೂ ಪ್ರಿಯವಾದುದೇ ಹೌದು. ಆದರೆ ನಾವು ಅನೇಕ ವರ್ಷಗಳಿಂದ ಪರತಂತ್ರರಾಗಿದೇವೆ. ನಮ್ಮ ಕೀರ್ತಿಯು ನಷ್ಟವಾಗಿದೆ. ಪರರಾಷ್ಟ್ರಗಳನ್ನು ಧಿಕ್ಕರಿಸಿ, ಸ್ವಸಂರಕ್ಷಣೆಯನ್ನು ಮಾಡಿಕೊಳ್ಳಲು ನಾವು ಅಸಮರ್ಥರು. ನಮ್ಮಲ್ಲಿ ಐಕಮತ್ಯವಿಲ್ಲ. ಪರಸ್ಪರ ದ್ವೇಷಗಳು ಹೆಚ್ಚಾಗಿವೆ. ಆದುದರಿಂದ ಹಿಂದುವು ಬಂಗಾಳಿಗೆ ರಾಜನಾದರೆ ನಮ್ಮಲ್ಲಿ ನಾವು ಕಲಹಿಸಿ, ಒಬ್ಬರನ್ನೊಬ್ಬರು ಸಂಹರಿಸಿಕೊಳ್ಳುವಂತಾಗುವುದು. ಇದನ್ನು ನೋಡಿ ಮರಾಟೆಯವರು ನಮ್ಮ ಮೇಲೆ ದಂಡೆತ್ತಿಬಂದು ಮರಳಿ ನಮ್ಮನ್ನು ಪರತಂತ್ರರ

ನ್ನಾಗಿ ಮಾಡುವರು. ಮರಾಟೆಯವರ ಸ್ವಭಾವವನ್ನು ನಾವು ಅರಿಯೆವು. ಅವರು ಬಹು ಕ್ರೂರರೆಂದು ಕೇಳಿದೇವೆ. ನಾವು ತುರುಕರಲ್ಲಿ ಐಕಮತ್ಯವುಳ್ಳವರಾಗಿದೇವೆ. ಅವರ ಸ್ವಭಾವವು ನಮಗೆ ಗೊತ್ತಿದೆ. ಆದಕಾರಣ ಅವರೇ ನಮಗೆ ಪ್ರಭುಗಳಾಗಿದ್ದರೆ ಒಳ್ಳೆಯದು.

ರಾಣೀಭವಾನಿ:—ನಿಮ್ಮ ಮಾತು ಗ್ರಾಹ್ಯವಾದುದು ಆದರೂ ಮಿಾರ್ಜಾಫರನು ರಾಜ್ಯಾರೂಢನಾದ ಮೇಲೆ ಸುರಾಜದೌಲನಂತೆಯೇ ಕ್ರೂರತ್ವವನ್ನು ವಲಂಭಿಸಿದರೆ ನಾವೇನು ಮಾಡಬಲ್ಲೆವು?

ರಾಜಾರಾಜ ಬಲ್ಲವರು:—ಅದನ್ನು ಕುರಿತು ನಾವು ಪೂರ್ವವೇ ಆಲೋಚಿಸಿರುವೆವು. ಮಿಾರ್ಜಾಫರನನ್ನು ನಮ್ಮ ಧೀನದಲ್ಲಿಟ್ಟುಕೊಳ್ಳುವುದಕ್ಕಾಗಿ ಆಂಗ್ಲೇಯರ ಸಹಾಯವನ್ನು ಕೇಳಲೆಣಿಸಿರುವೆವು. ಅವರು ಬಲವಂತರಾದರೂ ಕೇವಲ ವರ್ತಕರು. ರಾಜ್ಯವನ್ನಾಳಬೇಕೆಂಬ ಕೋರಿಕೆಯು ಅವರಿಗೆ ಹುಟ್ಟಲಾರದು. ವ್ಯಾಪಾರದಲ್ಲಿ ವಿಶೇಷ ಲಾಭವುಂಟಾಗುವಂತೆ ಕೆಲವು ಷರತ್ತುಗಳನ್ನು ಬರೆದು ಕೊಟ್ಟರೆ, ಅವರು ನಮಗೆ ಆನಂದದಿಂದ ಸತತವೂ ಸಹಾಯವನ್ನು ಮಾಡುವರು. ಅವರ ಸಹಾಯದಿಂದ ಯಾವಾಗಲೂ ನವಾಬನನ್ನು ನಮಗೊಳಪಟ್ಟಿರುವಂತೆ ಮಾಡಿಕೊಳ್ಳಬಹುದು.

ರಾಜಾರಾಯ ದುರ್ಲವರು:—ಆಂಗ್ಲೇಯರು ದಕ್ಷಿಣದಲ್ಲಿರುವ ನವಾಬನನ್ನು ಸೋಲಿಸಿದರು. ಆದುದರಿಂದ ಅವರೊಡನೆ ವೈರವನ್ನು ಬೆಳಸದೆ ಸ್ನೇಹವನ್ನು ಮಾಡುವುದು ಉತ್ತಮ.

ರಾಣೀಭವಾನಿ:—ನಾನು ಸ್ತ್ರೀಯಾದುದರಿಂದ ತಮಗೆ ಇಂತಹ ರಾಜಕೀಯ ಕಾರ್ಯಗಳಲ್ಲಿ ಆಲೋಚನೆಯನ್ನು ಹೇಳಲು ಸಮರ್ಥೆಯಲ್ಲ. ಆದರೂ ನನ್ನ ಅಲ್ಪ ಬುದ್ಧಿಗೆ ತೋರಿದುದನ್ನು ಹೇಳುವೆನು, ಕೇಳಿರಿ. ಇಂಗ್ಲೀಷರು ಈಗ ವರ್ತಕರಾಗಿದ್ದರೂ ನಾವು ಅವರ ಸಹಾಯವನ್ನು ಅಪೇಕ್ಷಿಸಿದಾಗ ಅವರು ಬಂದು ಈ ಮಹಾರಾಜ್ಯವನ್ನು ನೋಡಿದರೆ ಅವರಿಗೆ ಅದರಲ್ಲಿ ಅಭಿಲಾಷೆಯುಂಟಾಗದಿರಲಾರದು. ಆಗ ನಮ್ಮ ಗತಿಯೇನು? ಮರಾಟೆಯವರ ಗುಣ ಧರ್ಮಗಳನ್ನು ನಾವು ಸ್ವಲ್ಪವಾದರೂ ತಿಳಿದಿರುವೆವು. ಆದರೆ ಇವರ ಸ್ವಭಾವವನ್ನು ಸ್ವಲ್ಪವೂ ಅರಿಯೆವು. ಆದಕಾರಣ ಯವನನ್ನು ರಾಜ್ಯಾರೂಢನನ್ನಾಗಿ ಮಾಡುವುದಕ್ಕೂ, ಪರದೇಶಸ್ಥರಾದ ಹೂಣರ ಸಹಾಯವನ್ನು ದೀನರಂತೆ ಬೇಡುವುದಕ್ಕೂ ನಾನು ಸಮ್ಮತಿಸಲಾರೆನು.

ಹೀಗೆ ಬಹಳ ಕಾಲ ಚರ್ಚೆ ನಡೆದು ಕೊನೆಗೆ ಇತರ ರಾಜರ ನಿರ್ಬಂಧದಿಂದ ರಾಣೀಭವಾನಿಯು ಇಂಗ್ಲೀಷರ ಸಹಾಯವನ್ನು ಪಡೆದು ಮಿಾರ್ಜಾಫರನನ್ನು

ನವಾಬನನ್ನಾಗಿ ಮಾಡುವುದಕ್ಕೆ ಒಪ್ಪಿ, "ನೀವೆಲ್ಲರೂ ಸಮ್ಮತಿಸಿದ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ನನಗೆ ಅನುಚಿತವಾದ್ದರಿಂದ ನಿಮ್ಮ ಅಭಿಪ್ರಾಯಕ್ಕೆ ನಾನು ಒಪ್ಪಿಕೊಂಡೆನು. ಈ ಮಾರ್ಪಾಟಿನಿಂದ ತರುಷ್ಕರಿಗಿರುವ ಸರ್ವಾಧಿಕಾರವನ್ನು ಇಂಗ್ಲೀಷರಿಗೆ ಕೊಡುತಲಿದ್ದೇನೆ. ತುರುಕನನ್ನು ರಾಜ್ಯದಿಂದ ತೆಗೆದು ಹಿಂದೂದೇಶದಲ್ಲಿ ಹಿಂದೂರಾಜನನ್ನು ಸ್ಥಾಪಿಸುವಷ್ಟು ಶಕ್ತಿಯೂ, ದೇಶಾಭಿಮಾನವೂ ಐಕಮತ್ಯವೂ ನಮ್ಮಲ್ಲಿಲ್ಲದಿರುವಾಗ, ನಮ್ಮ ದೇಶಸ್ಥರಾದ ಮರಾಟೆಯವರನ್ನು ನಾವು ನಂಬಲಾರದಿರುವಾಗ, ನಮ್ಮ ರಾಷ್ಟ್ರವನ್ನು ಹೂಣರಿಗೆ ಒಪ್ಪಿಸುವುದೇ ಶ್ರೇಷ್ಠವಾಗಿದೆ. ಇವರೇ ನಮ್ಮ ಮಂಗಳಾ ಕಾಂಕ್ಷಿಗಳಾಗಲಿ," ಎಂದಳು. ಹೀಗೆ ಅವರು ನಿಶ್ಚಯಿಸಿ ತಮತಮ್ಮ ರಾಜ್ಯಗಳಿಗೆ ಹೊರಟುಹೋದರು. ಅನಂತರ ೧೭೫೭ ನೆಯ ಇಸವಿಯಲ್ಲಿ ನಡೆದ ಪ್ಲಾಸೀ ಕದನದಲ್ಲಿ ಕಂಪೆನಿಯವರೂ, ವಿಾರ್ಜಾಫರನೂ ಸುರಾಜದ್ದೌಲನನ್ನು ಸೋಲಿಸಿದರು.

ಈ ಕಾಲವು ಹಿಂದೂದೇಶದ ಚರಿತ್ರೆಯಲ್ಲಿ ಮುಖ್ಯವಾದುವುಗಳಲ್ಲೊಂದಾಗಿದೆ. ಯವನರ ರಾಜಕ್ಷಯಕ್ಕೂ, ಆಂಗ್ಲಪ್ರಭುಗಳ ಅಭ್ಯುದಯಕ್ಕೂ ಇದು ಸಂಧಿಕಾಲವೆಂದು ಹೇಳಬಹುದು. ಪ್ರಭುತ್ವಗಳು ಹೀಗೆ ಬದಲಾಯಿಸುವ ಕಾಲದಲ್ಲಿ ರಾಣೀಭವಾನಿಯ ಹೊರತು ಮಿಕ್ಕವರಾರೂ ಹಿಂದೂರಾಜ್ಯ ಸ್ಥಾಪನೆಗೆ ಸುಸಮಯವೆಂದು ಗ್ರಹಿಸಿಕೊಳ್ಳಲಿಲ್ಲವೆಂಬುದನ್ನು ಪಾಠಕರು ಗ್ರಹಿಸಿರಬಹುದು. ರಾಣಿಯ ಸಂಭಾಷಣೆಯಿಂದ ಆಕೆಗಿರುವ ಸ್ವದೇಶಾಭಿಮಾನವು ಉಪಮಾನರಹಿತವಾದುದೆಂದು ತಿಳಿಯಬರುತ್ತದೆ. ರಾಣಿಯು ತಿಳಿಸಿದ ರಾಜಕೀಯ ಭವಿಷ್ಯತ್ತುಗಳೆಲ್ಲವೂ ತಪ್ಪದೆ ನಿಜವಾದುದನ್ನು ನೋಡಿ, ಆಕೆಯ ರಾಜನೀತಿನಿಪುಣತ್ವಕ್ಕೂ, ವ್ಯವಹಾರಗಳಲ್ಲಿರುವ ದೀರ್ಘದೃಷ್ಟಿಗೂ, ಮಾನವಸ್ವಭಾವದ ಯಥಾರ್ಥಜ್ಞಾನಕ್ಕೂ ನಾವು ಬಹಳ ಸಂತೋಷಿಸಬೇಕು. ರಾಜಕಾರ್ಯಗಳ ನಿಜಸ್ವರೂಪವನ್ನರಿತ ಈ ಲಲನಾರತ್ನವು ನಮ್ಮ ದೇಶದಲ್ಲಿ ಕಾರ್ಯಧುರೀಣರೆಂತಲೂ, ದೀರ್ಘದೃಷ್ಟಿಯುಳ್ಳವರೆಂತಲೂ, ಕೀರ್ತಿಯನ್ನು ಪಡೆದಿರುವ ತೋಡರಮಲ್ಲ, ನಾನಾಪರ್ನವೀಸ, ಅಕ್ಬನ್ನ, ಮಾದನ್ನ ಮೊದಲಾದವರಿಗೂ, ಐರೋಪಾ ಖಂಡದಲ್ಲಿ ವ್ಯವಹಾರದಕ್ಷರೆಂದು ಖ್ಯಾತಿಯನ್ನು ಹೊಂದಿದ ಪಿಟ್, ಫಾಕ್ಸ್, ಬರ್ಕ್, ಬಿಸ್ಮಾರ್ಕ್, ಗ್ಲಾಡ್‌ಸ್ಟನ್ ಮುಂತಾದ ಪುರುಷಪುಂಗವರಿಗೂ ಬುದ್ಧಿಯಲ್ಲಿ ಸಮಾನಳೆಂದು ಸಂದೇಹವಿಲ್ಲದೆ ನುಡಿಯಬಹುದು.

ಪತಿಯು ಜೀವಿಸಿರುವ ಕಾಲದಲ್ಲಿ ಭವಾನಿಯು ದೇವಾಲಯಗಳನ್ನು ಕಟ್ಟಿಸುವುದು, ಕೆರೆಗಳನ್ನೂ ಭಾವಿಗಳನ್ನೂ ತೋಡಿಸುವುದು, ಅನ್ನ ಸತ್ರಗಳನ್ನು ಸ್ಥಾಪಿಸುವುದು, ಬಡವರಿಗೂ ಬ್ರಾಹ್ಮಣರಿಗೂ, ಇತರರಿಗೂ ವಿವಾಹಾದಿಗಳನ್ನು ಮಾಡಿಸುವುದು, ಇವೇ ಮೊದಲಾದ ಧರ್ಮಕಾರ್ಯಗಳನ್ನು ಮಾಡುತಲಿದ್ದಳು.

ಈಕೆಗೆ ದೈವಭಕ್ತಿ ವಿಶೇಷವಾಗಿತ್ತು. ಯಾವಪದಾರ್ಥವನ್ನಾದರೂ ಈಶ್ವರನಿಗೆ ಸಮರ್ಪಿಸದೆ ಈಕೆಯು ಅನುಭವಿಸುತ ಇರಲಿಲ್ಲ. ಒಂದು ದಿವಸ ಈಕೆಯ ಪತಿಯು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಎರಡು ಚಂದ್ರಹಾರಗಳನ್ನು ಕೊಂಡು, ಅವುಗಳಲ್ಲೊಂದನ್ನು ಕಾಳಿಕಾದೇವಿಗೆ ಸಮರ್ಪಿಸಿ, ಮತ್ತೊಂದನ್ನು ತನ್ನ ಪತ್ನಿಗೆ ಕೊಡಬೇಕೆಂದು ನಿಶ್ಚಯಿಸಿಕೊಂಡನು. ಅವುಗಳಲ್ಲಿ ರಮಣೀಯವಾದುದನ್ನು ಪತ್ನಿಗೂ ಸಾಮಾನ್ಯವಾದುದನ್ನು ದೇವಿಗೂ ಕೊಡಲೆಣಿಸಿ, ಅವೆರಡನ್ನೂ ರಾಣಿಗೆ ತೋರಿಸಿದನು. ರಾಣಿಯು ಉತ್ತಮವಾದುದನ್ನು ದೇವಿಗೆ ಸಮರ್ಪಿಸುವೆನೆಂದು ನುಡಿಯಲು, ಆಕೆಯೊಡನೆ ರಾಜನು ತನ್ನ ಅಭಿಪ್ರಾಯವನ್ನು ತಿಳಿಸಿದನು. "ನಿಮಗಿಷ್ಟವಾದುದನ್ನು ನೀವು ಕೊಡಬಹುದು. ನನಗಿಷ್ಟವಾದುದನ್ನು ನಾನು ಕೊಡುವೆನು," ಎಂದು ಭವಾನಿಯು ತಿಳಿಸಿದಳು. ಅದರಂತೆಯೆ ಎರಡು ಹಾರಗಳೂ ದೇವಿಗೆ ಸಮರ್ಪಿಸಲ್ಪಟ್ಟುವು. ಹೀಗೆ ಆಕೆಯ ನಿಷ್ಕಲ್ಮಷ ಭಕ್ತಿಯನ್ನು ತೋರಿಸುವ ದೃಷ್ಟಾಂತಗಳು ಹೇರಳವಾಗಿವೆ. ಆದರೆ ಅವನ್ನು ಗ್ರಂಥವಿಸ್ತರಭೀತಿಯಿಂದ ಬರೆಯಲಿಲ್ಲ.

ತನಗೆ ಪುತ್ರರಿಲ್ಲದಿದ್ದರೂ ತನ್ನ ಪುತ್ರಿಯಾದತಾರೆಗೆ ಮಗನು ಹುಟ್ಟಿದರೆ, ಅವನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ಗಂಗಾತೀರದಲ್ಲಿ ವಾಸಮಾಡಿಕೊಂಡು ದಾನಧರ್ಮಗಳನ್ನು ಮಾಡುತ್ತ, ಈಶ್ವರಭಜನೆಯಲ್ಲಿ ಕಾಲವನ್ನು ಕಳೆಯಬೇಕೆಂದೆಣಿಸಿ, ಭವಾನಿಯು ತಾರೆಗೆ ಒಬ್ಬ ಒಳ್ಳೆಯ ವರನನ್ನು ತಂದು ವಿವಾಹಮಾಡಿದಳು. ಆದರೆ 'ತಾನೊಂದೆಣಿಸಿದರೆ ದೈವವೊಂದೆಣಿಸುವುದು' ಎಂಬ ಗಾದೆಯಂತೆ ಆಕೆಯ ಜಾಮಾತೃವು ಅಲ್ಪಕಾಲದಲ್ಲಿಯೇ ಮೃತನಾದನು. ಅಳಿಯನ ಮರಣದಿಂದ ರಾಣಿಗೆ ಅತ್ಯಂತ ದುಃಖವೂ ಅಪರಮಿತವಾದ ನಿರುತ್ಸಾಹವೂ ಆಯಿತು. ಕೆಲವು ದಿವಸದವರೆಗೂ ವಿತಂತುವಾದ ಪುತ್ರಿಯನ್ನು ನೋಡಿದಾಗ ಆಕೆಗೆ ವಿಶೇಷ ದುಃಖವುಂಟಾಗಿ ಚಿತ್ತಭ್ರಮೆಯುಂಟಾಗುತಲಿತ್ತಂತೆ. ನವಾಬನಾದ ಸುರಾಜದ್ದೌಲನು ರಾಣಿಯ ಪುತ್ರಿಯನ್ನು ಸೆರೆ ಹಿಡಿಯಲೆಣಿಸಿ, ಸೈನ್ಯವನ್ನು ಕಳುಹಿದಂತೆಯೂ, ಆ ಸೈನ್ಯವನ್ನು ರಾಣಿಯು ಸೋಲಿಸಿದಂತೆಯೂ ಹಿಂದೆ ಬರೆದಿದೆ. ಆ ಯುದ್ಧವು ಈ ತಾರೆಗಾಗಿ ನಡೆಯಿತೆಂದು ಪಾಠಕರು ಗ್ರಹಿಸಿರಬಹುದು. ಈ ಯುದ್ಧವು ನಡೆದಂದಿನಿಂದ ರಾಣಿಯು ತಾರೆಯನ್ನು ತನ್ನ ಸಮೀಪದಲ್ಲಿ ಇಟ್ಟುಕೊಂಡು ಬಹುಜಾಗರೂಕತೆಯಿಂದ ಕಾಪಾಡುತಲಿದ್ದಳು. ಜಾಮಾತೃವಿನ ಮರಣದಿಂದ ಭವಾನಿಯ ಆಶೆಗಳೆಲ್ಲವೂ ನಿರಾಸೆಗಳಾದುವು. ರಾಜ್ಯಕ್ಕೆ ಸರಿಯಾದ ಹಕ್ಕುದಾರರಾರೂ ಇಲ್ಲದುದರಿಂದ ತನ್ನ ಸಂಪತ್ತೆಲ್ಲವನ್ನೂ ಲೋಕಹಿತಾರ್ಥವಾಗಿ ವ್ಯಯಮಾಡಲು ನಿಶ್ಚಯಿಸಿದಳು. ಬಳಿಕ ಆಕೆಯು ಮಾಡಿದ ದಾನಧರ್ಮಗಳು ದೊಡ್ಡದೊಡ್ಡ ಚಕ್ರವರ್ತಿಗಳ ದಾನಧರ್ಮಗಳಿಗೆ ಸರಿಬರುತಿದ್ದುವು.

ಪ್ರತಿ ವರ್ಷದಲ್ಲಿಯೂ ಭವಾನಿಯು ೨೫ ಸಾವಿರ ರೂಪಾಯಿಗಳನ್ನು ಸಾಮಾನ್ಯ ದಾನಗಳಿಗಾಗಿ ವಿನಿಯೋಗಿಸುತಲಿದ್ದಳು. ಗಂಗಾತೀರದಲ್ಲಿ ವೇದಾಧ್ಯಯನವನ್ನು ಮಾಡುವ ಬ್ರಾಹ್ಮಣೋತ್ತಮರಿಗೂ, ಯೋಗಾಭ್ಯಾಸವನ್ನು ಮಾಡುವ ಯೋಗಿಗಳಿಗೂ, ಅತಿಥಿಗಳಿಗೂ ಅಭ್ಯಾಗತರಿಗೂ ಭೋಜನಕ್ಕಾಗಿ ಅನೇಕ ಸತ್ರಗಳನ್ನು ಗಂಗಾತೀರದಲ್ಲಿ ಸ್ಥಾಪಿಸಿದಳು. ಸಂಸ್ಕೃತವನ್ನೂ, ವೇದಶಾಸ್ತ್ರಗಳನ್ನೂ ಕಲಿವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದಕ್ಕೆ ಇಪ್ಪತ್ತೈದುಸಾವಿರ ರೂಪಾಯಿಗಳು ಪ್ರತಿವರ್ಷವೂ ವೆಚ್ಚವಾಗುವಂತೆ ಏರ್ಪಾಟು ಮಾಡಿದಳು. ಆ ವೇತನಗಳು ಈಗಲೂ ಕೊಡಲ್ಪಡುತಲಿವೆಯಂತೆ. ಅನೇಕ ಗೀರ್ವಾಣ ಪಾಠಶಾಲೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ದೊಡ್ಡ ವಿದ್ವಾಂಸರನ್ನು ಗುರುಗಳನ್ನಾಗಿ ನಿಯಮಿಸಿ, ವಿದ್ಯಾರ್ಥಿಗಳಿಗೆ ಪಾಠಶಾಲೆಯಲ್ಲಿ ಅನ್ನವನ್ನಿಡುವಂತೆ ಏರ್ಪಾಟು ಮಾಡಿದಳು. ಶಾಸ್ತ್ರಗಳಲ್ಲಿ ಪ್ರವೀಣರಾದ ವಿದ್ಯಾರ್ಥಿಗಳಿಗೆ ಅವರವರ ಪ್ರವೀಣತೆಗೆ ತಕ್ಕ ಪಾರಿತೋಷಕಗಳನ್ನು ಕೊಡುವಂತೆ ನಿಯಮಿಸಿದಳು. ತಾನು ಮಾಡಿದ ಸತ್ಕಾರ್ಯಗಳೆಲ್ಲ ತನ್ನ ಮರಣಾನಂತರವೂ ನಿರ್ವಿಘ್ನವಾಗಿ ನಡೆಯಬೇಕೆಂದು, ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಅದರ ಬಡ್ಡಿಯಿಂದ ಮೇಲೆ ಹೇಳಿದ ಧರ್ಮಕೃತ್ಯಗಳು ಶಾಶ್ವತವಾಗಿ ನಡೆಯುವಂತೆ ಮಾಡಿದಳು. ಈಗಲೂ ಬಂಗಾಳಾ ದೇಶದಲ್ಲಿ ಅನೇಕ ವಿದ್ಯಾರ್ಥಿಗಳು ರಾಣಿಯವರನ್ನು ಸ್ಮರಿಸುತ್ತ ಸಂಸ್ಕೃತ ವಿದ್ಯಾಮೃತವನ್ನು ಪಾನಮಾಡುತಲಿದಾರೆ. ಈಕೆಯು ಅನೇಕರಿಗೆ ಭೂದಾನಗಳನ್ನು ಮಾಡಿದಳು. ಬಡವರಿಗೆ ಕಂದಾಯವನ್ನು ಬಿಟ್ಟುಕೊಟ್ಟಳು. ಇದರಿಂದ ಈಕೆಯ ರಾಜ್ಯದಲ್ಲಿ ಬಡವರೂ ಸುಖವಾಗಿದ್ದರು.

ಈಕೆಯು ಕಾಶೀ, ಗಯೆ, ರಾಜಶಾಹಿ, ಮೊದಲಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ದೇವಾಲಯಗಳನ್ನು ನಿರ್ಮಿಸಿದಳು. ಇವುಗಳಲ್ಲಿ ಕಾಶಿಯಲ್ಲಿರುವ ವಿಶ್ವೇಶ್ವರದೇವಾಲಯವು ಶ್ರೇಷ್ಠವಾದ ಕರೀಕಲ್ಲಿನಿಂದ ಕಟ್ಟಲ್ಪಟ್ಟು ಬಹು ರಮ್ಯವಾಗಿದೆ. ಇದರಲ್ಲಿರುವ ವಿಶ್ವೇಶ್ವರ, ದಂಡಪಾಣಿ, ದುರ್ಗೆ, ತಾರೆ, ರಾಧಾಕೃಷ್ಣ ಇವರ ವಿಗ್ರಹಗಳೂ, ಶಿವಲಿಂಗಗಳೂ, ಅತ್ಯಂತ ಸುಂದರವಾಗಿವೆ. ಕಾಶೀಕ್ಷೇತ್ರದಲ್ಲಿ ಅನೇಕ ಘಟ್ಟಗಳನ್ನೂ, ಧರ್ಮಶಾಲೆಗಳನ್ನೂ ಸ್ಥಾಪಿಸಿದುದಲ್ಲದೆ, ಏಳುನೂರು ಮನೆಗಳನ್ನು ಕಟ್ಟಿಸಿ, ಇಹಸೌಖ್ಯವನ್ನು ತ್ಯಜಿಸಿ ಕಾಶೀವಾಸಮಾಡಲು ಬಂದ ಅನಾಥರಿಗೆ ಅವುಗಳನ್ನಿತ್ತು, ಅಲ್ಲೇ ಅವರಿಗೆ ಭೋಜನವಾಗುವಂತೆ ಮಾಡಿಸಿದಳು. ಮತ್ತು ಅವರ ಮರಣಾನಂತರ ಉತ್ತರಕ್ರಿಯೆಗಳನ್ನು ಯಥಾವಿಧಿಯಾಗಿ ನಡೆಸುತಲಿದ್ದಳು. ಪಂಚಕ್ರೋಶದ ಸುತ್ತಲೂ ಈಕೆಯು ಕಟ್ಟಿಸಿರುವ ಧರ್ಮಗೃಹಗಳೂ, ಬಾವಿಗಳೂ, ಹೇರಳವಾಗಿವೆ. ಈಕೆಯ ಸಹಾಯದಿಂದ ಕಾಶಿಯಲ್ಲಿ ನಾಲ್ಕು ಸಾವಿರ ಪ್ರಜೆಗಳು ಸುಖವಾಗಿ ಜೀವಿಸುತಲಿದ್ದರು.

ರಾಣೀಭವಾನಿಯು ಮನುಷ್ಯಮಾತ್ರರಲ್ಲಲ್ಲದೆ ಪಶುಪಕ್ಷಿಕ್ರಿಮಿಕೀಟಕಾದಿ ಸಮಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳವಳಾಗಿದ್ದಳು. ಈಕೆಯು ತನ್ನ ರಾಜ್ಯದಲ್ಲಿ ಗೋಮಹಿಷಾದಿಗಳ ವಧೆಯಾಗಬಾರದೆಂದು ನಿಬಂಧನೆಯನ್ನು ಮಾಡಿದಳು. ಈ ನಿಬಂಧನೆಯನ್ನು ಉಲ್ಲಂಘಿಸಿದವರಿಗೆ ಘೋರಶಿಕ್ಷೆಯುಂಟಾಗುತಿತ್ತು. ಬೈಲಿನಲ್ಲಿ ಬಹು ಧಾನ್ಯವನ್ನು ಚಲ್ಲಿಸಿ, ಆ ಕಾಳುಗಳನ್ನು ತಿನ್ನುವುದಕ್ಕಾಗಿ ಬರುವಸುಂದರವಾದ ಪಕ್ಷಿಸಮೂಹವನ್ನು ದೂರದಿಂದ ನೋಡಿ, ಅದನ್ನು ಸೃಷ್ಟಿಮಾಡಿದ ಸರ್ವೇಶ್ವರನ ಅದ್ಭುತಶಕ್ತಿಪ್ರೇಮಾದಿಗಳಿಗೆ ಆನಂದಿಸುತಲಿದ್ದಳು. ಇರುವೆಗಳಿಗೆ ಸಕ್ಕರೆಯನ್ನು, ಮತ್ಸ್ಯಗಳಿಗೆ ರೊಟ್ಟಿಯ ಚೂರುಗಳನ್ನು, ಮಾರ್ಜಾಲಗಳಿಗೆ ಕ್ಷೀರಾನ್ನವನ್ನು ಇಡಿಸಿ ಮನಸ್ಸಿನಲ್ಲಿ ಬಹಳ ಸಂತೋಷಿಸುತಲಿದ್ದಳು. ಹೀಗೆ ಈಕೆಯ ಕಾರುಣ್ಯಾಮೃತ ಪ್ರವಾಹವು ಸಕಲ ಪ್ರಾಣಿಗಳಲ್ಲಿಯೂ ಸಮಾನವಾಗಿ ಪ್ರವಹಿಸುತಲಿತ್ತು.

ರಾಣಿಭವಾನಿಯು ಕಾಶಿಯಾತ್ರೆಗೆ ಹೊರಟಾಗ ಈಕೆಯ ಹಿಂದೆ ೧೫೦೦ ಹಡಗುಗಳು ಹೊರಟವಂತೆ. ಭಕ್ಷ್ಯಪದಾರ್ಥಗಳನ್ನು ೧೦೦೦ ಹಡಗುಗಳ ಮೇಲೆ ತುಂಬಿದ್ದರಂತೆ! ಹೀಗೆ ಅಪರಿಮಿತವಾದ ಅನ್ನದಾನವನ್ನು ಮಾಡಿದುದರಿಂದ ಪ್ರಜೆಗಳು ಈಕೆಯನ್ನು ಅನ್ನಪೂರ್ಣೆಯ ಅವತಾರವೆಂದು ಎಣಿಸುತಲಿದ್ದರು.

ಈಕೆಯು ತನ್ನ ರಾಜ್ಯದಲ್ಲಿ ಅನಾಥರಾದ ರೋಗಿಗಳ ಔಷಧಕ್ಕೆ ಅನೇಕ ಔಷಧಾಲಯಗಳನ್ನು ಕಟ್ಟಿಸಿದಳು. ಈಗಿನಂತೆ ಆಗ ಡಾಕ್ಟರು ಮತ್ತು ಆಸ್ಪತ್ರೆಗಳು ಇಲ್ಲದಿದ್ದರೂ, ಹಿಂದೂ ವೈದ್ಯಶಾಸ್ತ್ರದಲ್ಲಿ ಪ್ರವೀಣರಾದ ಭಿಷಗ್ವರ್ಯರನೇಕರು ರಾಣಿಯಿಂದ ಉಚಿತವಾದ ಮಾಸಾಶನಗಳನ್ನು ಪಡೆಯುತ್ತ ವೈದ್ಯಶಾಲೆಗಳಲ್ಲಿ ಬಡವರಿಗೆ ಔಷಧಗಳನ್ನು ಕೊಡುತಲಿದ್ದರು. ವೈದ್ಯಶಾಲೆಗೆ ಬಂದ ರೋಗಿ, ಆರೋಗ್ಯವನ್ನು ಹೊಂದುವ ವರೆಗೆ ಪಥ್ಯಪಾನಗಳನ್ನೂ, ಔಷಧೋಪಚಾರಗಳನ್ನೂ ನಡೆಸುವುದಕ್ಕೆ ರಾಣಿಯು ಅನೇಕ ಸೇವಕರನ್ನು ನಿಯಮಿಸಿದ್ದಳು. ಆಹಾ! ಈಕೆಯ ಭೂತಕಾರುಣ್ಯವನ್ನು ಎಷ್ಟೆಂದು ಕೊಂಡಾಡಲಿ! ಇಂತಹ ವಿಶ್ವಕುಟುಂಬಿನಿಯನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ!

ರಾಣಿಯು ಹಿಂದುಗಳಿಗೆ ಪೂಜನೀಯೆಯಾಗಿದ್ದಂತೆ ತುರುಷ್ಕರಿಗೂ ಪೂಜನೀಯೆಯಾಗಿದ್ದಳು. ಒಂದಾನೊಂದು ಸಮಯದಲ್ಲಿ ಆಕೆ ಗಯೆಗೆ ಹೋದಾಗ ಅಲ್ಲಿಯ ನವಾಬನು ತನಗೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಲ್ಲದೆ ಅಲ್ಲಿ ಪಿಂಡದಾನವನ್ನು ಮಾಡಿಸಲಾರೆನೆಂದನು. ಕೂಡಲೆ ಭವಾನಿಯು ಈ ವಿಷಯವನ್ನು ಮುರ್ಷಿದಾಬಾದು ನವಾಬನಿಗೆ ತಿಳಿಸಲಾಗಿ, ಆತನು ಗಯಾಧೀಶ್ವರನನ್ನು ಪದಚ್ಯುತನನ್ನಾಗಿ ಮಾಡುವುದಕ್ಕೆ ಸೈನ್ಯವನ್ನು ಕಳುಹಿಸಿದನು. ಈ ಸಮಾಚಾರ

ವನ್ನು ಕೇಳಿ ಆ ನವಾಬನು ಭಯಭ್ರಾಂತನಾಗಿ ರಾಣಿಗೆ ಶರಣಾಗತನಾದನು. ಶರಣಾಗತನನ್ನು ರಕ್ಷಿಸಬೇಕೆಂದು ರಾಣಿಯು ಪುನಃ ಮುರ್ಷಿದಾಬಾದು ನವಾಬನಿಗೆ ಸಮಾಧಾನವನ್ನು ಹೇಳಿ ಆತನನ್ನು ರಕ್ಷಿಸಿದಳು. ಸ್ವಲ್ಪದಿವಸದ ಮೇಲೆ ಈ ಗಯಾಧೀಶ್ವರನು ಮುರ್ಷಿದಾಬಾದು ನವಾಬನಿಗೆ ಕಪ್ಪವನ್ನು ಕೊಡದೆ ಹೋಗಲು ನವಾಬನು ಅವನನ್ನು ಕಾರಾಗೃಹದಲ್ಲಿ ಇಡಿಸಿದನು. ಆಗಲೂ ರಾಣಿಯು ನವಾಬನಿಗೆ ಹೇಳಿ ಆತನಿಗೆ ಬಿಡುಗಡೆಯನ್ನುಂಟುಮಾಡಿದಳು. ಕಾರಾಗೃಹ ವಿಮುಕ್ತನಾದ ನವಾಬನು ರಾಣಿಯ ಬಳಿಗೆ ಹೋಗಿ, ಕೃತಜ್ಞತೆಯಿಂದ ಶಿರೋವೇಷ್ಟನವನ್ನು ತೆಗೆದಿರಿಸಿ ಆಕೆಯ ಪಾದಗಳಿಗೆ ಬಿದ್ದು, "ಅಪಕಾರವನ್ನು ಮಾಡಿದ ನನಗೆ ಪ್ರಾಣದಾನವನ್ನು ಮಾಡಿದಿರಿ. ನಿಮ್ಮಂತಹ ಪರೋಪಕಾರಿಣಿಗಳನ್ನು ನಾನೆಲ್ಲಿಯೂ ನೋಡಿಲ್ಲ," ಎಂದು ಬಿನ್ನವಿಸಿ, ಆಕೆಯಿಂದನುಜ್ಞೆಯನ್ನು ಪಡೆದು ತನ್ನ ರಾಜ್ಯಕ್ಕೆ ಹೋದನು. ಅನಂತರ ಯಾವಾಗಲೂ ಆತನು ರಾಣಿಯ ಆಜ್ಞೆಯಂತೆ ನಡೆಯುತಲಿದ್ದನು.

ರಾಣಿಯು ತನ್ನ ರಾಜಧಾನಿಯಾದ ನಾಟೂರಿನಲ್ಲಿ ಗಂಗೆಯಿಲ್ಲದುದರಿಂದ ಮುರ್ಷಿದಾಬಾದಿನ ಸಮೀಪದಲ್ಲಿ ಗಂಗಾತೀರದಲ್ಲಿರುವ ಬಡಾನಗರವೆಂಬ ಗ್ರಾಮವನ್ನು ರಾಜಧಾನಿಯಾಗಿ ಮಾಡಿಕೊಂಡಳು. ರಾಜಧಾನಿಯಾಗುವುದಕ್ಕೆ ಪೂರ್ವದಲ್ಲಿ ಬಡಾನಗರವು ಚಿಕ್ಕ ಗ್ರಾಮವಾಗಿತ್ತು. ರಾಣಿಯು ಆ ಗ್ರಾಮಕ್ಕೆ ಬಂದ ಮೇಲೆ ಬಡಾನಗರ (ಅಂದರೆ ದೊಡ್ಡನಗರ) ವೆಂಬ ಹೆಸರು ಸಾರ್ಥಕವಾಯಿತು.

ಈಕೆಯ ದಿನಚರ್ಯೆಯು ರಮ್ಯವಾಗಿಯೂ, ಅನುಕರಣೀಯವಾಗಿಯೂ ಇದೆ. ಪ್ರಾತಃಕಾಲದಲ್ಲಿ ನಾಲ್ಕು ಘಂಟೆಗೆ ಎದ್ದು ಈಶ್ವರನನ್ನು ಸ್ತುತಿಸುತ್ತ ದೀವಟಿಗೆಗಳನ್ನು ತೆಗಸಿಕೊಂಡು ಹೋಗಿ ಗಂಗಾನದಿಯಲ್ಲಿ ಸ್ನಾನಮಾಡಿ, ತಾನು ಕೊಯ್ದ ಪುಷ್ಪಗಳಿಂದ ಗೃಹದೇವತೆಯನ್ನು ಪೂಜಿಸುವಳು. ಸೂರ್ಯೋದಯವಾದೊಡನೆ ಗಂಗಾತೀರಕ್ಕೆ ಹೋಗಿ ದೇವತೆಗಳನ್ನು ಪೂಜಿಸಿ ಪ್ರಯಾಣೀಕರಿಗೆ ದಾನಧರ್ಮಗಳನ್ನು ಮಾಡಿ, ಪುರಾಣಶ್ರವಣವನ್ನು ಮಾಡುವಳು. ಮಧ್ಯಾಹ್ನ ಭೋಜನಾನಂತರ ರಾಜವೇಷವನ್ನು ಧರಿಸಿ ರಾಜಸಭೆಗೆ ಹೋಗಿ ಅಲ್ಲಿನ ಅಧಿಕಾರಿಗಳನ್ನು ಅವರು ಮಾಡಬೇಕಾದ ಕೆಲಸಗಳಲ್ಲಿ ನಿಯಮಿಸಿ, ಅವರು ಮಾಡಿದ ಕೆಲಸಗಳನ್ನು ನೋಡಿ, ತಾನು ಸ್ವಂತವಾಗಿ ಮಾಡಬೇಕಾದ ಕಾರ್ಯಗಳನ್ನು ನಿರ್ವಹಿಸಿ, ಪುನಃ ಪುರಾಣಶ್ರವಣಕ್ಕೆ ಹೋಗುತಲಿದ್ದಳು. ಸಾಯಂಕಾಲದಲ್ಲಿ ದೇವತಾದರ್ಶನ ಮಾಡಿದ ಮೇಲೆ ಮುಖ್ಯ ಮಂತ್ರಿಸಭೆಯಲ್ಲಿ, ಪ್ರಜೆಗಳ ಬಿನ್ನಹಗಳನ್ನೂ, ವ್ಯಾಜ್ಯಗಳನ್ನೂ ವಿಚಾರಿಸಿ, ಅವುಗಳಿಗೆ ತೀರ್ಪುಗಳನ್ನು ಹೇಳಿ ಮನೆಗೆ ಬಂದು ದೇವರನ್ನು ಪ್ರಾರ್ಥಿಸಿ ನಿದ್ರಿಸುತಲಿದ್ದಳು. ಭವಾನಿಯು ಒಂದೇ ಹೊತ್ತು ಭೋಜನವನ್ನು ಮಾಡುತಲಿದ್ದಳು.

ಅಹಲ್ಯಾಬಾಯಿ ಹೋಳಕರ್.

ಉತ್ತಮೋತ್ತಮ ಸುಗುಣಸಂಪತ್ತಿಗೆ ಖನಿಯಾದ ರಾಣೀಭವಾನಿಯು ತನ್ನ ಎಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಮೃತೆಯಾದಳು. ಈಕೆಯ ಮರಣಕ್ಕೆ ಲಕ್ಷಾಂತರ ಪ್ರಜೆಗಳು ದುಃಖಿಸಿದರು.

ಭವಾನಿಯು ಉನ್ನತ ಶರೀರವುಳ್ಳವಳಾಗಿ, ಬಹಳ ಸುಂದರವಾಗಿದ್ದಳು. ಮರಣಕಾಲದ ವರೆಗೂ ಈಕೆಯು ದೃಢಗಾತ್ರೆಯಾಗಿದ್ದಳು. ಈಕೆ ತಾನೇ ಅಡಿಗೆಯನ್ನು ಮಾಡಿಕೊಂಡು ಊಟಮಾಡುತಲಿದ್ದಳಂತೆ.

ಈಕೆಯು ರಾಮಕೃಷ್ಣನೆಂಬೊಬ್ಬ ಬ್ರಾಹ್ಮಣಬಾಲಕನನ್ನು ಶೈಶವದಿಂದ ಕಾಪಾಡುತಲಿದ್ದಳು. ರಾಮಕೃಷ್ಣನು ಸಾಧುವೃತ್ತಿಯುಳ್ಳವನಾದಕಾರಣ ಕೊನೆಗೆ ಅವನಿಗೆ ರಾಜ್ಯಾಧಿಪತ್ಯವನ್ನು ವಹಿಸಿ ಭವಾನಿಯು ಸ್ವರ್ಗಸ್ಥೆಯಾದಳು. ಪ್ರಸ್ತುತದಲ್ಲಿ ಈ ರಾಜ್ಯವು ಚಿಕ್ಕ ಜಮಾನುದಾರಿಯಾಗಿದೆ.

ಅಹಲ್ಯಾಬಾಯಿ ಹೋಳಕರ್.

"ಉದಾರಚರಿತಾನಾಂತು ವಸುಧೈವಕುಟುಂಬಕಂ."

ಈ ಅದ್ವಿತೀಯೆಯಾದ ಸಾಧ್ವೀಮಣಿಯ ಚರಿತ್ರೆಯು ಮನೋರಂಜಕವಾದರೂ ಹೃದಯದ್ರಾವಕವಾಗಿಯೂ, ಅನುಕಂಪನೀಯವಾದರೂ, ಅನುಸರಣೀಯವಾಗಿಯೂ, ವೀರರಸವಿರಹಿತವಾಗಿದ್ದರೂ, ಶಾಂತಿರಸಪರಿಪ್ಲುತವಾಗಿಯೂ ಇರುವ ಮೂರಂಕಗಳ ನಾಟಕವೆಂದು ನುಡಿಯಬಹುದು! ಇದರ ಬಹು ಭಾಗವು ದುಃಖರೂಪವಾದ ಅಂಧಕಾರದಿಂದ ವ್ಯಾಪ್ತವಾಗಿದ್ದರೂ, ಅಹಲ್ಯಾಬಾಯಿಯವರ ಸದ್ಗುಣಗಳೆಂಬ ಚಂದ್ರಿಕೆಯ ದೆಸೆಯಿಂದ ಪ್ರಕಾಶಿತವಾಗಿರುವುದರಿಂದ ರಮ್ಯವಾಗಿಯೇ ಇರಬಹುದು. (೧) ಅಹಲ್ಯಾಬಾಯಿಯವರ ಜನ್ಮ ಮತ್ತು ಬಾಲ್ಯ, (೨) ಆಕೆಯ ಸಂಸಾರ ಸುಖ, (೩) ಆಕೆಯ ವೈಧವ್ಯ ಮತ್ತು ರಾಜ್ಯಪಾಲನ, ಎಂಬ ಈ ಮೂರಂಕಗಳ ವಿಷಯಗಳನ್ನು ಮುಂದೆ ಕ್ರಮವಾಗಿ ಉಲ್ಲೇಖಿಸಿರುವೆನು.

(೧) **ಜನ್ಮ ಮತ್ತು ಬಾಲ್ಯ.**—ಬೊಂಬಾಯಿ ಪ್ರಾಂತ್ಯದಲ್ಲಿರುವ ಅಹಮ್ಮದ್‌ನಗರ ತಾಲ್ಲೂಕಿನಲ್ಲಿ ವಾಥರಡೀ ಎಂಬೊಂದು ಚಿಕ್ಕ ಗ್ರಾಮವಿತ್ತು. ಈ ಗ್ರಾಮದಲ್ಲಿ ಪೂರ್ವದಲ್ಲಿ ಆನಂದಸಿಂಧೇ ಎಂಬೊಬ್ಬ ಮರಾಟಾ ಗೃಹಸ್ಥನು ವಾಸ

ಮಾಡುತಲಿದ್ದನು. ಗ್ರಾಮದಲ್ಲಿ ದೊಡ್ಡಮನುಷ್ಯನೆಂದು ಹೆಸರು ಪಡೆದಿದ್ದ ಈತನು ಧನವಂತನಲ್ಲದುದರಿಂದ ಕೃಷಿಯಿಂದ ಜೀವಿಸುತಲಿದ್ದನು. ಈತನ ಪತ್ನಿಯೂ ಸ್ವಭಾವದಲ್ಲಿ ಈತನನ್ನೇ ಹೋಲುತಲಿದ್ದಳು. ಈ ಸತ್ವಗುಣಪ್ರಧಾನರಾದ ದಂಪತಿಗಳಿಗೆ ೧೭೩೩ ನೆಯ ಇಸವಿಯಲ್ಲಿ ಒಂದು ಕನ್ಯಾರತ್ನವು ಜನಿಸಿತು. ಈ ಕನ್ಯೆಗೆ ಅವರು 'ಅಹಲ್ಯೆ' ಎಂದು ನಾಮಕರಣವನ್ನು ಮಾಡಿದರು. ಈಕೆಯೇ ನಮ್ಮ ಚರಿತ್ರನಾಯಿಕೆ. ಈಕೆಯಲ್ಲಿ ತೋರಿಬಂದ ಗುಣವಿಶೇಷಗಳಿಂದ, ಮಹರಾಷ್ಟ್ರ ಗ್ರಂಥಕರ್ತರನೇಕರು, ಈಕೆಯನ್ನು ದೇವಾಂಶಸಂಭೂತೆಯೆಂದು ಭಾವಿಸಿ, ದೇವೀ ಅಹಲ್ಯಾಬಾಯಿಯೆಂದು ಸಂಬೋಧಿಸಿರುವರು. ಜನರು ಈಕೆಯು ಜಗದಂಬೆಯ ಅವತಾರವೆಂದು ಒಂದು ಕಥೆಯನ್ನು ಹೇಳುತ್ತಾರೆ. "ಬಹು ದಿವಸಗಳವರೆಗೂ ಆನಂದರಾವಿಗೆ ಸಂತಾನವು ಇಲ್ಲದೇ ಇದ್ದುದರಿಂದ, ಆತನ ಪತ್ನಿಯು ಚಿಂತಾಕ್ರಾಂತೆಯಾಗಿದ್ದಳು. ಒಂದು ದಿವಸ ಒಬ್ಬ ಬೈರಾಗಿಯು ಅವರ ಮನೆಗೆ ಬಂದು, ಆಕೆಯ ವ್ಯಸನಕಾರಣವನ್ನು ವಿಚಾರಿಸಿ, 'ನೀವು ಕೊಲ್ಹಾಪುರಕ್ಕೆ ಹೋಗಿ ಅಲ್ಲಿರುವ ಜಗದಂಬೆಯನ್ನು ಸೇವಿಸಿದರೆ ನಿಮಗೆ ಸಂತಾನಪ್ರಾಪ್ತಿಯಾಗುವುದು,' ಎಂದು ಹೊರಟುಹೋದನು. ಆಂಧ್ರದೇಶದಲ್ಲಿ ಬೆಜವಾಡೆಯ ಕನಕದುರ್ಗೆಯೂ, ಮೈಸೂರು ದೇಶದಲ್ಲಿ ಶೃಂಗಗಿರಿಯ ಶಾರದಾಂಬೆಯೂ ಹೇಗೆ ಪ್ರಖ್ಯಾತಿಯನ್ನು ಹೊಂದಿದಾರೆಯೋ ಹಾಗೆಯೇ ಮಹರಾಷ್ಟ್ರದೇಶದಲ್ಲಿ ಕೊಲ್ಹಾಪುರದ ಜಗದಂಬೆಯು ಪ್ರಖ್ಯಾತೆಯಾಗಿದಾಳೆ. ಬೈರಾಗಿಯು ನುಡಿದಂತೆ ಆನಂದರಾಯನು ಭಾರ್ಯಾಸಮೇತನಾಗಿ ಕೊಲ್ಹಾಪುರಕ್ಕೆ ಹೋಗಿ, ಅಲ್ಲಿ ಒಂದು ವರ್ಷದ ವರೆಗೂ ದೇವಿಯನ್ನು ಸೇವಿಸುತಲಿದ್ದನು. ಒಂದು ವರ್ಷವು ಕಳೆದ ಅನಂತರ ಜಗದಂಬೆಯು ಆನಂದರಾಯನ ಸ್ವಪ್ನದಲ್ಲಿ ಕಾಣಿಸಿಕೊಂಡು, 'ನೀನು ದೃಢಭಕ್ತಿಯೊಡನೆ ಮಾಡಿದ ಪೂಜೆಗೆ ಸಂತುಷ್ಟೆಯಾದೆನು. ಇನ್ನು ನೀನು ಸ್ವಗೃಹಕ್ಕೆ ತೆರಳಬಹುದು. ನಿನ್ನ ಇಷ್ಟವನ್ನು ನೆರವೇರಿಸುವುದಕ್ಕಾಗಿ ನಾನೇ ನಿನ್ನುದರದಲ್ಲಿ ಜನ್ಮಿಸುವೆನು,' ಎಂದು ಹೇಳಿದಳಂತೆ. ಅನಂತರ ಕೆಲವು ದಿವಸಗಳಲ್ಲಿ ಅವರಿಗೆ ಜಗದಂಬೆಯ ಅಂಶದಿಂದ ಅಹಲ್ಯಾಬಾಯಿಯು ಹುಟ್ಟಿದಳು," ಎಂಬುದು ಅದರ ಸಾರಾಂಶವು. ಆಕೆಯು ದೇವಾಂಶ ಸಂಭೂತೆಯೆಂಬುದನ್ನು ಸ್ಥಾಪಿಸುವುದಕ್ಕೆ ಇಂತಹ ಅನೇಕ ಕಥೆಗಳನ್ನು ಹೇಳುತ್ತಾರೆ.

ಅಹಲ್ಯೆಯು ಬಾಲ್ಯದಲ್ಲಿ ತನ್ನೊಡನಾಡಿಗಳನ್ನು ಪ್ರೀತಿಯಿಂದ ಕಾಣುತ್ತಲಿದ್ದಳು. ತನಗೆ ಯಾರಾದರೂ ತಿಂಡಿಯನ್ನು ಕೊಟ್ಟರೆ ಅದನ್ನು ತನ್ನ ಸ್ನೇಹಿತೆಯರೆಲ್ಲರಿಗೂ ಕೊಟ್ಟು ತಾನು ತಿನ್ನುತಲಿದ್ದಳು. ಈಕೆಯು ಸತ್ಯಪ್ರಿಯೆಯಾದುದರಿಂದ ತನ್ನೊಡನಾಡಿಗಳಲ್ಲಿ ಯಾರಾದರೂ ಅಸತ್ಯವನ್ನಾಡಿದರೆ ಅವರೊಡನೆ ಮಾತನಾಡುವುದನ್ನು ಬಿಟ್ಟುಬಿಡುವಳು

ಆ ಗ್ರಾಮದಲ್ಲಿ ಒಂದು ಪಾಠಶಾಲೆಯು ಇತ್ತು. ಈ ಪಾಠಶಾಲೆಗೆ ಪಾಪ ಭೀರುವೂ, ಸ್ವಕರ್ಮನಿಷ್ಠನೂ, ಈಶ್ವರಭಕ್ತನೂ ಆದ ಒಬ್ಬ ಬ್ರಾಹ್ಮಣನು ಉಪಾಧ್ಯಾಯನಾದನು. ಪೇಷ್ವಾಸಂಸ್ಥಾನದಿಂದ ತಿಂಗಳಿಗೆ೫ ರೂಪಾಯಿಗಳೂ, ಶಿಷ್ಯರು ಅಮಾವಾಸ್ಯೆಗೂ, ಪೌರ್ಣಿಮಿಗೂ ಕೊಡುವ ಕೆಲವು ಹಣಕಾಸುಗಳೂ ಈತನ ಜೀವನ ನಿರ್ವಾಹಕ್ಕೆ ಆಧಾರವಾಗಿದ್ದುವು. ಈತನೂ ಆನಂದರಾಯನೂ ಸ್ನೇಹಿತರಾಗಿದ್ದರು. ಈ ಬ್ರಾಹ್ಮಣನಿಗೆ ಸಂತಾನವಿಲ್ಲದ ಕಾರಣ ತನ್ನ ಮಿತ್ರನ ಪುತ್ರಿಯಾದ ಅಹಲ್ಯೆಯನ್ನು ತನ್ನ ಮಗಳಂತೆಯೇ ಭಾವಿಸಿದ್ದನು. ಅಹಲ್ಯೆಯು ಈ ಉಪಾಧ್ಯಾಯನ ಬಳಿಯಲ್ಲಿ ಬೆಳೆಯುತಲಿದ್ದಳು. ಆತನು ಈಕೆಗೆ ತನ್ನ ಶಿಷ್ಯರೊಡನೆ ಓದುಬರಹವನ್ನೂ ಅನೇಕ ಗ್ರಂಥಗಳಲ್ಲಿರುವ ಸದ್ಬೋಧೆಗಳನ್ನೂ ಹೇಳುತಲಿದ್ದನು. ಈತನು ಭಾರತ ಭಾಗವತಾದಿ ಗ್ರಂಥಗಳನ್ನು ಪಠಿಸುವ ಕಾಲದಲ್ಲಿ, ಸೀತೆಯ ವನವಾಸ, ದ್ರೌಪದಿಯ ಅಜ್ಞಾತವಾಸ, ದಮಯಂತಿಯ ಕಷ್ಟಗಳು, ಸಾವಿತ್ರಿಯ ವಿಪತ್ತು ಅವರು ಪಾತಿವ್ರತ್ಯವನ್ನು ರಕ್ಷಿಸಿಕೊಂಡದ್ದು ಮೊದಲಾದ ಚರಿತ್ರೆಗಳನ್ನು ಅಹಲ್ಯೆಯು ಪ್ರೇಮದಿಂದ ಕೇಳುತಿದ್ದಳು. ಅಹಲ್ಯೆಯು ಬಾಲ್ಯದಲ್ಲಿ ಇಂತಹ ಸಾದ್ವೀಮಣಿಗಳ ಕಷ್ಟಸಹಿಷ್ಣುತೆಯನ್ನು ಕೇಳಿ ತಿಳಿದು ಕೊಂಡಿದ್ದಳಾದ್ದರಿಂದ ತನ್ನ ಜೀವಿತದಲ್ಲಿ ಸಂಭವಿಸಿದ ಕಷ್ಟಪರಂಪರೆಗಳನ್ನು ಧೈರ್ಯದಿಂದ ಸಹಿಸಿಕೊಂಡು ತನ್ನ ಕರ್ತವ್ಯವನ್ನು ನೆರವೇರಿಸಲು ಸಮರ್ಥೆಯಾದಳು.

ಅಹಲ್ಯೆಗೆ ಒಂಭತ್ತು ವರ್ಷಗಳ ವಯಸ್ಸಾಗಲು ವರನನ್ನು ಹುಡುಕುವುದಕ್ಕೆ ಪ್ರಯತ್ನವು ನಡೆಯುತಲಿತ್ತು. ಆನಂದರಾಯನು ಬಡವನಾದಕಾರಣ ಅಹಲ್ಯೆಗೆ ಒಳ್ಳೆಯ ವರನು ಬೇಗನೆ ಸಿಕ್ಕಲಿಲ್ಲ. ಈ ಸಮಯದಲ್ಲಿ ಬಾಲಾಜೀಬಾಜೀರಾಯನು ಪೂನೆಯಲ್ಲಿ ಪೇಷ್ವೆಯಾಗಿದ್ದನು. ಈತನ ತಮ್ಮನಾದ ರಘುನಾಥರಾಯನು ಮಲ್ಹಾರರಾವ್ ಹೋಳಕರನೆಂಬ ಸರದಾರನನ್ನೂ ಆತನ ಮಗನಾದ ಖಂಡೇರಾಯನನ್ನೂ ಸಂಗಡ ಕರೆದು ಕೊಂಡು ಉತ್ತರ ಹಿಂದೂಸ್ಥಾನಕ್ಕೆ ಯುದ್ಧ ನಿಮಿತ್ತವಾಗಿ ಹೋಗಿ ಪುನಃ ಪೂನಾ ಪಟ್ಟಣಕ್ಕೆ ಹೋಗುವಾಗ ವಾಧರಡೀ ಗ್ರಾಮದಲ್ಲಿ ಇಳಿದನು. ಆನಂದರಾಯನ ಮನೆಯ ಎದುರಾಗಿ ಒಂದು ದೊಡ್ಡ ಹನುಮಂತನ ದೇವಾಲಯ. ಪೇಷ್ವೆಗಳು ಆ ಗ್ರಾಮಕ್ಕೆ ಬಂದಾಗ ಆ ದೇವಾಲಯದಲ್ಲಿ ಇಳಿದುಕೊಳ್ಳುತಿದ್ದರು. ರಘುನಾಥರಾಯನೂ ಅಲ್ಲೇ ಇಳಿದುಕೊಂಡನು. ಆ ದಿವಸ ಉಪಾಧ್ಯಾಯನು ಶಿಷ್ಯರಿಗೆ ವಿರಾಮವನ್ನು ಕೊಟ್ಟು ತಾನು ರಘುನಾಥರಾಯನ ಬಳಿಗೆ ಹೋಗಿ ಮಾತನಾಡುತಿದ್ದನು. ಗುರುವನ್ನು ಒಂದು ನಿಮಿಷವಾದರೂ ಅಗಲಿರಲಾರದ ಅಹಲ್ಯೆಯು ಗುರುವಿನ ಸಮೀಪಕ್ಕೆ ಬಂದು ಕುಳಿತುಕೊಂಡಳು. ಅಹಲ್ಯೆಯು ವಿಶೇಷ ಸೌಂದರ್ಯವತಿಯಲ್ಲ. ಆದರೆ ಆಕೆಯ ಮುಖದಲ್ಲಿ ಸ್ವಾಭಾವಿಕವಾದ ರಾಜಕಳೆಯು ಪ್ರಕಾಶಿಸುತಲಿತ್ತು. ರಘುನಾಥರಾಯನು ಈಕೆಯನ್ನು ನೋಡಿ

ಈ ಬಾಲೆಯು ಯಾರೆಂದು ಉಪಾಧ್ಯಾಯನನ್ನು ಕೇಳಿದನು. ಆ ಬ್ರಾಹ್ಮಣನು ಈಕೆಯ ವೃತ್ತಾಂತವನ್ನೂ ಈಕೆಯ ಸುಗುಣಗಣಗಳನ್ನೂ ವರ್ಣಿಸಿದನು. ಆಗ ರಘುನಾಥರಾಯನೂ, ಮಲ್ಹಾರರಾವ್ ಹೋಳಕರನೂ, ಈ ಕನ್ಯೆಯು ಖಂಡೇರಾಯನಿಗೆ ತಕ್ಕ ಪತ್ನಿಯೆಂದು ಭಾವಿಸಿ ಆನಂದರಾಯನನ್ನು ಕರೆಯಿಸಿ ಆತನ ಸಮ್ಮತಿಯನ್ನು ಪಡೆದು ವಿವಾಹ ಮುಹೂರ್ತವನ್ನು ನಿಶ್ಚಯಿಸಿದರು. ಆ ಸುಮೂಹೂರ್ತದಲ್ಲಿ ಖಂಡೇರಾಯನಿಗೂ ಅಹಲ್ಯೆಗೂ ವಿವಾಹವು ಬಳೆಯಿತು. ಬಡವನ ಮಗಳಾದ ಅಹಲ್ಯೆಯು ಮಂಡಲಾಧೀಶ್ವರನ ಮಹಿಷಿಯಾದಳು. ಇನ್ನುಮೇಲೆ ಆಕೆಯನ್ನು ಅಹಲ್ಯೆಯೆಂಬ ಸಾಮಾನ್ಯನಾಮದಿಂದ ಕರೆಯದೆ ಅಹಲ್ಯಾಬಾಯಿಯೆಂಬ ಗೌರವನಾಮದಿಂದ ಕರೆಯೋಣ. ಅಹಲ್ಯಾಬಾಯಿಯ ಚರಿತ್ರ ರೂಪಕವಾದ ನಾಟಕದ ಪ್ರಥಮಾಂಕವು ಇಲ್ಲಿಗೆ ಸಮಾಪ್ತವಾಯಿತು.

ದ್ವಿತೀಯಾಂಕವನ್ನು ಪ್ರವೇಶಿಸುವುದಕ್ಕೆ ಪೂರ್ವದಲ್ಲಿ ಅಹಲ್ಯಾಬಾಯಿಯ ಪತಿಯಾದ ಖಂಡೇರಾಯನ ಚರಿತ್ರೆಯನ್ನು ಕುರಿತು ಸ್ವಲ್ಪ ಮಾತನಾಡುವುದು ಯುಕ್ತವು.

ಪೂನಾಪಟ್ಟಣದ ಸಮೀಪದಲ್ಲಿ ಹೋಳ್ ಎಂಬ ಚಿಕ್ಕ ಹಳ್ಳಿಯು ಇತ್ತು. ಅಲ್ಲಿ ಖಂಡೂಜಿ ಎಂಬ ಒಬ್ಬ ಕುರುಬನಿದ್ದನು. ಆತನಿಗೆ ಮಲ್ಹಾರಿ ಎಂಬ ಮಗನು ಹುಟ್ಟಿದನು. ಆ ಬಾಲಕನು ಅಲ್ಪವಯಸ್ಕನಾಗಿರುವಾಗಲೇ ಖಂಡೂಜಿಯು ಮೃತನಾದನು. ಮಲ್ಹಾರಿಯು ಸೋದರಮಾವನ ಮನೆಯಲ್ಲಿ ಪಶುಗಳನ್ನು ಕಾಯುತಲಿದ್ದನು. ಈತನ ಸೋದರಮಾವನು ಈ ಬಾಲಕನ ಸಾಹಸ, ಶೌರ್ಯ ಆಜ್ಞಾಧಾರಕತ್ವ ಮುಂತಾದ ಸುಗುಣಗಳನ್ನು ನೋಡಿ, ದನಗಳನ್ನು ಕಾಯಬೇಡ ಎಂದು ಹೇಳಿ, ಸೇನಾಪತಿಯಾದ ದಾಭಾಡೆಯ ಬಳಿಯಲ್ಲಿ ಅವನಿಗೆ ಸೈನಿಕನ ಕೆಲಸವನ್ನು ಮಾಡಿಸಿಕೊಟ್ಟನು. ಮಲ್ಹಾರಿಯು ಸೈನ್ಯಕ್ಕೆ ಸೇರಿದ ಸಮಯದಲ್ಲಿ, ಪೇಷ್ವೆಗೂ ಬಾದಷಹನಿಗೂ ಯುದ್ಧವು ನಡೆಯುತಲಿತ್ತು. ಆ ಯುದ್ಧದಲ್ಲಿ ಈತನು ತೋರಿಸಿದ ಶೌರ್ಯದಿಂದ ಈತನಿಗೆ ಶಿಲೇದಾರ್ ಕೆಲಸವು ದೊರೆಯಿತು. ಅನಂತರ ಕೆಲವು ದಿವಸಗಳಿಗೆ ಐನೂರು ಕುದುರೆಗಳಮೇಲಿನ ಅಧಿಕಾರವು ಪ್ರಾಪ್ತವಾಯಿತು. ಆಮೇಲೆ ಮಾಳವ ಪ್ರಾಂತದಲ್ಲಿ ನಡೆದ ಕದನದಲ್ಲಿ ಈತನು ಡಿಲ್ಲೀಶ್ವರನ ಸೇನಾಧಿಪತಿಯಾದ ರಾಯ ಬಹಾದರನನ್ನು ಗೆದ್ದನು. ಇದರಿಂದ ಬಾಜೀರಾವ್ ಪೇಷ್ವೆಯು ಈತನಿಗೆ ಮಾಳವಪ್ರಾಂತದ ಸುಬೇದಾರಿಯನ್ನೂ, ಮಲ್ಹಾರಿರಾವ್ ಹೋಳ್‌ಕರ್ ಎಂಬ ಬಿರುದನ್ನೂ ಕೊಟ್ಟನು. ಈ ವಿಧವಾಗಿ ಹೋಳೆಂಬ ಹಳ್ಳಿಯಲ್ಲಿ ಹುಟ್ಟಿದ ಮಲ್ಹಾರಿಯು ತನ್ನ ಶೌರ್ಯ ಸಾಹಸಗಳಿಂದ ಇಂದೂರು ಸಂಸ್ಥಾನಕ್ಕೆ ಧೊರೆಯಾದುದಲ್ಲದೆ, ತನ್ನ ಜನ್ಮಭೂಮಿಗೆ ಶಾಶ್ವತವಾದ ಕೀರ್ತಿಯನ್ನುಂಟುಮಾಡಿದನು. ಈತನ ಪತ್ನಿಯ ಹೆಸರು ಗೌತಮಾಬಾಯಿ. ಈ ದಂಪತಿಗಳಿಗೆ ಖಂಡೇರಾಯನೆಂಬ ಪುತ್ರನು ಜನಿಸಿದನು. ಈತನೇ ಅಹಲ್ಯಾ

ಬಾಯಿಯ ಪತಿಯು. ಈತನೂ ಸಹ ತಂದೆಯಂತೆಯೇ ಶೌರ್ಯಧೈರ್ಯ ಗಳುಳ್ಳವನಾಗಿ ಖ್ಯಾತಿಯನ್ನು ಪಡೆದನು.

(೨) **ಅಹಲ್ಯಾಬಾಯಿಯ ಸಂಸಾರಸುಖವು.**—ದುಃಖ ಪರಂಪರೆ ಗಳಿಂದಕೂಡಿದ ಈ ಚರಿತ್ರಾತ್ಮಕವಾದ ನಾಟಕದಲ್ಲಿ ಸಂಸಾರ ಸುಖವೆಂಬ ಈ ಎರಡನೆಯ ಅಂಕವು ಮರಳುಮಯವಾಗಿಯೂ ಪ್ರಚಂಡ ಪ್ರತಾಪ ಮಾರ್ತಾಂಡ ಕಿರಣಗಳಿಂದ ತಪ್ತವಾಗಿಯೂ ಭಯಂಕರವಾಗಿಯೂ ಇರುವ ನಿರ್ಜನ ಪ್ರದೇಶ ದಲ್ಲಿ, ನೆಲದಮೇಲೆ ಕಾಲಿಟ್ಟರೆ ಅಂಗಾಲು ಬೊಬ್ಬೆಯಾಗುವಂತೆ ಸುಡುವ ಮಧ್ಯಾಹ್ನ ಸಮಯದಲ್ಲಿ ಪ್ರವಾಸವನ್ನು ಮಾಡುವ ಪಥಿಕನಿಗೆ ಮಾರ್ಗದಲ್ಲಿ ವಿಸ್ತೀರ್ಣ ಮಾದ ಆಮ್ರವೃಕ್ಷ ಸಮೂಹದ ದಟ್ಟವಾದ ನೆಳಲೂ, ಶೀತಳವಾದ ಜಲಾಶ ಯವೂ ಕಾಣಿಸಿದರೆ ಎಷ್ಟು ಆನಂದವನ್ನು ಉಂಟುಮಾಡುವುದೊ ಅಷ್ಟು ಆನಂದವ ನ್ನುಂಟು ಮಾಡುತ್ತದೆ. ಅಹಲ್ಯಾಬಾಯಿಯ ಜೀವಿತಕಾಲದಲ್ಲಿ ಆಕೆಯ ವಿವಾಹ ವಾದಂದಿನಿಂದ ಹತ್ತುವರುಷಗಳವರೆಗೂ ನಡೆದ ಕಾಲವು ಸುಖಕರವಾದ ಕಾಲ ವೆಂದು ಹೇಳಬಹುದು. ಆಕೆಯು ವಿವಾಹವಾದದ್ದು ಮೊದಲ್ಗೊಂಡು ವಿಶೇಷ ವಾಗಿ ಅತ್ತೆಯಮನೆಯಲ್ಲಿಯೇ ಇರುತಲಿದ್ದಳು. ಆಕೆಯು ಬಾಲ್ಯದಿಂದಲೂ ಬಡವರಮನೆಯಲ್ಲಿಯೇ ಬೆಳೆದವಳಾದರೂ, ವಿದ್ಯಾವತಿಯೂ ಚತುರಳೂ ಆದುದ ರಿಂದ ಶ್ವಶುರಗೃಹವನ್ನು ಪ್ರವೇಶಿಸಿದೊಡನೆಯೇ ರಾಜಯುವತಿಯರಿಗೆ ಶೋಭಿ ಸುವ ಸದ್ಗುಣಗಳನ್ನೆಲ್ಲ ಕಲಿತುಕೊಂಡಳು.

ಮಲ್ಹಾರಿರಾಯನು ಸೊಸೆಯಾದ ಅಹಲ್ಯಾಬಾಯಿಯನ್ನು ಬಹಳ ಪ್ರೀತಿ ಸುತಲಿದ್ದನು. ಈಕೆಯು ಅತನ ಸೇವೆಯನ್ನು ಭಕ್ತಿಯೊಡನೆ ನೆರವೇರಿಸುತ, ಅತನ ಆಜ್ಞೆಯನ್ನು ಮೀರದೆ ನಡೆದುಕೊಳ್ಳುತಲಿದ್ದಳು. ಈಕೆಯು ಗೃಹಪ್ರವೇಶ ವನ್ನು ಮಾಡಿದ್ದು ಮೊದಲ್ಗೊಂಡು ಮಲ್ಹಾರಿರಾಯನಿಗೆ ಅನೇಕ ಯುದ್ಧಗಳಲ್ಲಿ ಜಯವು ಪ್ರಾಪ್ತವಾದುದರಿಂದ ಅತನು ತನ್ನ ಸೊಸೆಯು ಜಯಲಕ್ಷ್ಮಿಯ ಅವತಾರ ವೆಂದೆಣಿಸಿ, ಯುದ್ಧಕ್ಕೆ ಹೊರಡುವುದಕ್ಕೆ ಪೂರ್ವದಲ್ಲಿ ಅಹಲ್ಯಾಬಾಯಿಯ ಸಮ್ಮತಿ ಯನ್ನು ಪಡೆದು ಹೊರಡುತಲಿದ್ದನು. ಈ ಪ್ರಕಾರವಾಗಿ ಅಹಲ್ಯಾಬಾಯಿಯು ಮಾವಂದಿರ ಪೂರ್ಣ ಕೃಪೆಯನ್ನು ಪಡೆದಳು.

ಈಕೆಯ ಅತ್ತೆಯಾದ ಗೌತಮಾಬಾಯಿಯು ಗೃಹಕಾರ್ಯದಲ್ಲಿ ಬಹು ದಕ್ಷಳಾದರೂ ಕೋಪಸ್ವಭಾವವುಳ್ಳವಳಾಗಿದ್ದಳು. ವಿವಾಹವಾದ ಒಡನೆಯೇ ಸೂಕ್ಷ್ಮ ಬುದ್ಧಿಯುಳ್ಳ ಅಹಲ್ಯಾಬಾಯಿಯು ಅತ್ತೆಯ ಸ್ವಭಾವವನ್ನು ಅರಿತು ಆಕೆಗೆ ಆಗ್ರಹವುಂಟಾಗದಂತೆ ನಡೆದುಕೊಳ್ಳುತಲಿದ್ದಳು. ಅತ್ತೆಯ ಸದ್ಗುಣ ಗಳನ್ನು ಗ್ರಹಿಸುತ್ತ ಆಕೆಯ ಅಭೀಷ್ಟದಂತೆ ನಡೆಯುತ್ತ, ಆಕೆಯಿಂದ ಸದಾ ಆಶೀ ರ್ವಚನಗಳನ್ನು ಪಡೆಯುತಲಿದ್ದಳು.

ಖಂಡೇರಾಯನಿಗೆ ಹರಕುಬಾಯಿ, ಉದಾಬಾಯಿಗಳೆಂಬ ಇಬ್ಬರು ಜ್ಯೇಷ್ಠ ಸೋದರಿಯರಿದ್ದರು. ಅಹಲ್ಯಾಬಾಯಿಯ ವಿವಾಹಕ್ಕೆ ಪೂರ್ವವೇ ಇವರಿಬ್ಬರೂ ವಿವಾಹಿತೆಯರಾಗಿ ಅತ್ತೆಯ ಮನೆಯಲ್ಲಿ ಇದ್ದರು. ಅಹಲ್ಯಾಬಾಯಿಯು ಇವರನ್ನು ಆಗಾಗ ಕರೆಯಿಸಿಕೊಂಡು ತನಗೆ ಬರುವ ವಿದ್ಯೆಯನ್ನೂ, ತನಗೆ ತಿಳಿದಿರುವ ಸಾಧ್ವೀಮಣಿಯರ ಚರಿತ್ರೆಗಳನ್ನೂ ಅವರಿಗೆ ತಿಳಿಸುತ್ತಿದ್ದಳು. ಇವರು ಮೂವರೂ ನಿಷ್ಕಪಟವಾದ ಪ್ರೇಮದಿಂದ ಸೋದರಿಯರಂತೆ ನಡೆದುಕೊಳ್ಳುತಲಿದ್ದರು.

ಅಹಲ್ಯಾಬಾಯಿಯು ತನ್ನ ಸೇವೆಗಾಗಿ ನಿಯಮಿಸಲ್ಪಟ್ಟಿರುವ ದಾಸದಾಸಿಯರನ್ನು ಐಶ್ವರ್ಯ ಗರ್ವದಿಂದ ಬಾಧಿಸದೆ, ತನಗೆ ಅತ್ತೆಮಾವಂದಿರು ಕೊಟ್ಟ ಹಣದಿಂದ ಅವರ ಕಷ್ಟವನ್ನು ನಿವಾರಿಸುತಿದ್ದಳು.

ಬಾಲೆಯಾದರೂ ಭಗವದ್ಭಕ್ತೆಯಾದ ಅಹಲ್ಯಾಬಾಯಿಯು ಅತ್ತೆಮಾವಂದಿರಿಗಿಂತ ಅಧಿಕವಾಗಿ ದೇವತಾಪೂಜೆಯನ್ನೂ, ಜಪವನ್ನೂ ಮಾಡುತಿದ್ದಳು. ಈಕೆಯಲ್ಲಿರುವ ಆ ಭಕ್ತಿವಿಶೇಷವನ್ನು ನೋಡಿ ಮನೆಯಲ್ಲಿರುವವರೆಲ್ಲರೂ ಈಕೆಯನ್ನು ಪರಿಹಾಸ ಮಾಡುತ್ತಿದ್ದರಂತೆ.

ಅಹಲ್ಯಾಬಾಯಿಯು ಪ್ರಾಪ್ತವಯಸ್ಕಳಾದ ಮೇಲೆ, ಬಾಲ್ಯದಲ್ಲಿ ಗುರುಮುಖದಿಂದ ಕೇಳಿದ ಸೀತೆ, ದ್ರೌಪದಿ, ದಮಯಂತಿ ಮೊದಲಾದ ಸಾಧ್ವೀಮಣಿಗಳ ಚರಿತ್ರೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಅವರಂತೆ ಪತಿಶುಶ್ರೂಷೆಯಲ್ಲಿ ತತ್ಪರೆಯಾಗಿದ್ದಳು. ಆಕೆಯು ಪತಿಯು ನಿದ್ರಿಸಿದನಂತರ ಮಲಗಿ, ಪತಿಯು ಎಚ್ಚರಗೊಳ್ಳುವುದಕ್ಕೆ ಪೂರ್ವದಲ್ಲೇ ಎದ್ದು ಪ್ರಾತಃಕೃತ್ಯಗಳನ್ನು ನಿರ್ವಹಿಸುತಲಿದ್ದಳು. ಖಂಡೇರಾಯನು ಪ್ರತಿದಿನವೂ ಪ್ರಾತಃಕಾಲದಲ್ಲಿ ಬೇಟೆಗೆ ಹೋಗಿ ಮಧ್ಯಾಹ್ನ ಕಾಲಕ್ಕೆ ಗೃಹಕ್ಕೆ ಬರುತಲಿದ್ದನು. ಅಷ್ಟರವರೆಗೂ ಅಹಲ್ಯಾಬಾಯಿಯು ಯಾರು ಹೇಳಿದರೂ ಭೋಜನವನ್ನು ಮಾಡುತಲಿರಲಿಲ್ಲ. ಪತಿಯು ಪ್ರವಾಸದಲ್ಲಿರುವಾಗ ಪತ್ನಿಯು ಆಚರಿಸಬೇಕಾದ ನಿಯಮಗಳನ್ನು ಅಹಲ್ಯೆಯು ಖಂಡೇರಾಯನು ಗ್ರಾಮಾಂತರಕ್ಕೆ ಹೋದಾಗ ಅನುಸರಿಸುತಿದ್ದಳು. ಇಂತಹ ಅಕೃತ್ರಿಮ ಪ್ರಿಯ ಭಾರ್ಯೆಯನ್ನು ಖಂಡೇರಾಯನು ಹಾಗೆಯೇ ಅತ್ಯಂತ ಪ್ರೇಮದಿಂದ ಆದರಿಸುತಲಿದ್ದನು.

ಸುಶೀಲರಾದ ಈ ದಂಪತಿಗಳಿಗೆ ಮಾಲೀರಾವೆಂಬ ಪುತ್ರನೂ, ಮಂಚಾಬಾಯಿಯೆಂಬ ಪುತ್ರಿಯೂ ಜನಿಸಿದರು. ಮಂಚಾಬಾಯಿಯು ತಾಯಿಯಂತೆಯೇ ಸಾಧಾರಣ ರೂಪವತಿಯೂ, ವಿಶೇಷ ಗುಣವತಿಯೂ ಆದಳು.

ಅತ್ತೆಮಾವಂದಿರ ಸಂಪೂರ್ಣ ಕಟಾಕ್ಷ, ಪತಿಯ ಅಮಿತಾನುರಾಗ, ಅತ್ತಿಗೆಯರ ಪ್ರೇಮ, ಸೇವಕರ ಭಕ್ತಿ, ಕನ್ಯಾಪುತ್ರರ ಬಾಲಲೀಲೆಗಳು, ಅಪರಿಮಿತೈಶ್ವರ್ಯ

ಮೊದಲಾದ ಸುಖಸಾಧನಗಳು ಏಕೀಭವಿಸಿ, ಅಹಲ್ಯಾಬಾಯಿಯನ್ನು ಆಶ್ರಯಿಸಿರುವವರೆಗೂ ಆಕೆಯು ಸೌಖ್ಯಸಾಗರದಲ್ಲಿ ಮುಳುಗಿದ್ದಳು.

(೩) **ಅಹಲ್ಯಾಬಾಯಿಯ ವೈಧವ್ಯ ಮತ್ತು ರಾಜ್ಯಪಾಲನೆ.**—ಈ ಮೂರನೇ ಅಂಕದಲ್ಲಿ ಅಹಲ್ಯಾಬಾಯಿಯ ಕಷ್ಟಗಳು ವರ್ಣಿಸಲ್ಪಟ್ಟಿದ್ದರೂ, ಯಾವ ಸತ್ಕೃತ್ಯಗಳಿಂದ ಆಕೆಯ ಕೀರ್ತಿಯು ಆಚಂದ್ರಾರ್ಕವಾಗಿ ನಿಂತಿದೆಯೋ ಅವೂ ವರ್ಣಿಸಲ್ಪಡುವುದರಿಂದ, ಈ ಅಂಕದಲ್ಲಿ ಶುಭಾಶುಭ ವರ್ಣನೆಗಳೆರಡೂ ಕೂಡಿರುವುವು.

ಅಹಲ್ಯಾಬಾಯಿಯು ಮೇಲೆ ಹೇಳಿದಂತೆ ಸೌಖ್ಯಸಾಗರದಲ್ಲಿ ಮುಳುಗಿದ್ದರೆ ಆಕೆಯ ಕೀರ್ತಿಚಂದ್ರಿಕೆಯು ಲೋಕದಲ್ಲಿ ಪ್ರಸರಿಸಲಾರದೆಂದು ಜಗದೀಶ್ವರನು ಆಕೆಗೆ ಕಷ್ಟವನ್ನುಂಟುಮಾಡಿದನು. ಮಲ್ಹಾರಿರಾಯನಿಗೂ ಯವನರಿಗೂ ಯುದ್ಧವು ಸಂಭವಿಸಿತು. ಸಮರಪ್ರಿಯನಾದ ಖಂಡೇರಾಯನು ಅತ್ಯುತ್ಸಾಹದಿಂದ ತಂದೆಯೊಡನೆ ಆ ಯುದ್ಧಕ್ಕೆ ಹೊರಟನು. ರಣರಂಗದಲ್ಲಿ ಶತ್ರುಗಳನ್ನು ಹಿಡಿಯಲು ಪ್ರಯತ್ನಿಸುವಷ್ಟರಲ್ಲಿ, ಶತ್ರುಸೈನ್ಯದಿಂದ ಹಾರಿಸಿದ ಒಂದು ಅಗ್ನಿಗೋಳವು ಆಕಸ್ಮಿಕವಾಗಿ ಆತನ ಮಸ್ತಕದ ಮೇಲೆ ಬಿದ್ದು ಆತನು ಮೃತನಾದನು. ಆ ವೃತ್ತಾಂತವು ಕಿವಿಗೆ ಬಿದ್ದೊಡನೆ, ಪತಿವ್ರತಾ ಶಿರೋಮಣಿಯಾದ ಅಹಲ್ಯಾಬಾಯಿಯು ಪ್ರಾಣ ಸಮಾನನಾದ ಪತಿಯನ್ನು ಅಗಲಿ, ಸೌಭಾಗ್ಯಹೀನೆಯಾಗಿ ಜೀವಿಸಿರಲಾರದೆ ಸಹಗಮನಕ್ಕೆ ಸಿದ್ಧಳಾದಳು. ಮೊದಲೇ ಪುತ್ರಮರಣದಿಂದ ಸಂತಪ್ತಹೃದಯನಾದ ಮಲ್ಹಾರಿರಾಯನು, ಅಹಲ್ಯಾಬಾಯಿಯು ಸಹಗಮನಕ್ಕೆ ಸಿದ್ದಳಾದಳೆಂಬ ಮಾತನ್ನು ಕೇಳಿ, ಅತ್ಯಂತ ದುಃಖಿತನಾಗಿ, ಆಕೆಯ ಬಳಿಗೆ ಬಂದು, "ಅಮ್ಮಾ! ನನ್ನಲ್ಲಿ ನಿರ್ದಯನಾಗಿ ಖಂಡೂ ನನ್ನನ್ನು ಬಿಟ್ಟು ಹೋದನು. ಈ ಮುದುಕನ ಮೇಲೆ ಕರುಣೆಯಿಲ್ಲದೆ ನೀನೂ ಹೊರಡಲೆಣಿಸಿದೆಯಾ? ಗತಿಸಿ ಹೋದುದು ಅಹಲ್ಯೆಯೆಂತಲೂ, ನೀನೇ ನನ್ನ ಮಗನಾದ ಖಂಡೂ ಎಂತಲೂ ಭಾವಿಸಿಕೊಳ್ಳುವೆನು. ಇಷ್ಟು ಕಠಿನಚಿತ್ತೆಯಾಗಿ ನನ್ನನ್ನೂ, ಮಕ್ಕಳನ್ನೂ ಬಿಟ್ಟು ಹೋಗಬೇಡ! ತಾಯಿ!" ಎಂದು ನಾನಾ ವಿಧವಾಗಿ ಬೇಡಿಕೊಂಡು ಆಕೆಯ ಸಹಗಮನ ಪ್ರಯತ್ನವನ್ನು ನಿಲ್ಲಿಸಿದನು. ಭಾರತಾಂಗನೆಯರಿಗೆ, ವೈಧವ್ಯದಂತಹ ಕ್ಲೇಶಪೂರಿತವೃತ್ತಿಯು ಬೇರೊಂದಿಲ್ಲವೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಅಹಲ್ಯಾಬಾಯಿಯು ಇಂತಹ ಕ್ಲೇಶಪರಿಪೂರ್ಣ ವೈಧವ್ಯವನ್ನು ಸಹಿಸಿಕೊಂಡು, ಪರಮೇಶ್ವರನ ಪೂಜೆಯನ್ನು ಮಾಡುತ್ತ, ಪರೋಪಕಾರ ನಿರತಳಾಗಿ ಉಳಿದ ತನ್ನಾಯುಃ ಪರಿಮಿತಿಯನ್ನು ಕಳೆಯಬೇಕೆಂದು ಧೈರ್ಯದೊಡನೆ ನಿಶ್ಚಯಿಸಿಕೊಂಡಳು.

ಪತಿ ವಿರಹದುಃಖವನ್ನು ಸ್ವಲ್ಪ ಮರೆಯುವಷ್ಟರಲ್ಲಿ ತನ್ನನ್ನು ಪುತ್ರಭಾವದಿಂದ ನೋಡಿಕೊಳ್ಳುತ್ತಲಿದ್ದ ಮಾವನು ಗತಿಸಿದನು. ಇದಾದ ಆರು ತಿಂಗಳಿಗೆ

ಪುತ್ರನಾದ ಮಾಲೀರಾಯನು ಪರಲೋಕವನ್ನೈದಿದನು. ಈ ವಿಷಯಗಳು 1756 ನೆಯ ಇಸವಿಯಲ್ಲಿ ನಡೆದುವು. ಈ ದುಃಖಪರಂಪರೆಗಳು ಸಂಭವಿಸಿದ ಸಮಯದಲ್ಲಿ ಅಹಲ್ಯಾಬಾಯಿಯು ಇಪ್ಪತ್ತಮೂರುವರುಷ ವಯಸ್ಸುಳ್ಳವಳಾಗಿದ್ದಳು! ಅಹಲ್ಯಾಬಾಯಿಯ ಪುತ್ರನಾದ ಮಾಲೀರಾಯನು ಬಹು ದುರ್ಮಾರ್ಗನಾಗಿದ್ದುದರಿಂದ ಪ್ರಜೆಗಳು ಈತನಿಗೆ ರಾಜ್ಯವನ್ನು ಕೊಡಲು ಸಮ್ಮತಿಸಲಿಲ್ಲ. ಆದರೆ ಪೇಷ್ವೆಯ ಆಜ್ಞೆಯಿಂದ ಈತನಿಗೆ ರಾಜ್ಯಾಭಿಷೇಕವು ಆಯಿತು. ಈ ಕ್ರೂರನು ಅಹಲ್ಯಾಬಾಯಿಯು ಪೂಜಿಸುತ್ತಿದ್ದ ಬ್ರಾಹ್ಮಣರನ್ನು ವಿಶೇಷ ಹಿಂಸಿಸುತ್ತಲಿದ್ದನು. ತಾಯಿಯು ಬ್ರಾಹ್ಮಣರಿಗೆ ವಸ್ತ್ರದಾನವನ್ನು ಮಾಡೆಂದು ಹೇಳಿದರೆ, ಈತನು ವಸ್ತ್ರಗಳಲ್ಲಿ ಚೇಳುಗಳನ್ನಿಡಿಸಿ ಅವರಿಗೆ ಕೊಡುತಲಿದ್ದನು. ಸ್ವರ್ಣದಾನವನ್ನು ಮಾಡುವೆನೆಂದು ಹೇಳಿ ತಂಬಿಗೆಗಳಲ್ಲಿ ನಾಣ್ಯಗಳನ್ನೂ ಕಣಜ, ಸಾವಿರ ಕಾಲು ಹುಳ ಮುಂತಾದ ಕೆಟ್ಟ ಹುಳಗಳನ್ನೂ ಇಟ್ಟು ಬ್ರಾಹ್ಮಣರಿಗೆ ಕೊಡುತ್ತಲಿದ್ದನು. ಹೀಗೆ ಮಾಡುತ್ತಲಿದ್ದುದರಿಂದ ಸರ್ವ ಭೂತಗಳಲ್ಲಿಯೂ ಅತ್ಯಂತ ದಯೆಯುಳ್ಳ ಅಹಲ್ಯಾಬಾಯಿಗೆ ಮಾಲೀರಾಯನಿಂದ ಹೆಚ್ಚಾದ ದುಃಖವುಂಟಾಗುತಲಿತ್ತು. ಇಂತಹ ದುಷ್ಟನು ಈ ಲೋಕದಲ್ಲಿದ್ದರೆ ತನ್ನ ಭಕ್ತಳಾದ ಅಹಲ್ಯೆಗೆ ಅತ್ಯಂತ ದುಃಖವುಂಟಾಗುವುದೆಂದು ಭಗವಂತನು ಮಾಲೀರಾಯನನ್ನು ಕರೆದುಕೊಂಡನು. ಅಹಲ್ಯಾಬಾಯಿಯೇ ತನ್ನ ಮಗನನ್ನು ಆನೆಯ ಕಾಲಿನಿಂದ ತುಳಿಸಿ ಕೊಲ್ಲಿಸಿದಳೆಂದು ವದಂತಿಯುಂಟು. ಆದರೆ ಈ ವದಂತಿಯು ಸತ್ಯವಾದುದೆಂದು ನಂಬುವುದಕ್ಕೆ ಯಾವ ಆಧಾರವೂ ಇಲ್ಲ. ಈ ವಿಷಯವನ್ನು ಕುರಿತು ಮಾಲ್ಕಂ ದೊರೆಯು, "ಮಾಲೀರಾವಿನ ಮರಣಸಂಬಂಧವಾದ ವದಂತಿಯನ್ನು ಕೆಲಜನ ಆಂಗ್ಲೇಯರು ನಂಬಿದರು. ಆದರೆ ಬಹು ಸೂಕ್ಷ್ಮರೀತಿಯಲ್ಲಿ ಆ ವಿಷಯವನ್ನು ವಿಚಾರಿಸಲು ಆಕೆಯಲ್ಲಿ ದೋಷವು ಅಣುಮಾತ್ರವೂ ಇಲ್ಲವೆಂದು ಸ್ಪಷ್ಟವಾಗಿ ತಿಳಿಯಬಂದಿತು," ಎಂದು ಬರೆದಿದ್ದಾನೆ. ಹೀಗೆ ಅನ್ಯದೇಶೀಯನಾದ ಗ್ರಂಥಕಾರನು ಬರೆದಿರುವಾಗ, ಅಹಲ್ಯಾಬಾಯಿಯು ನಿರ್ದೋಷಿಯೆಂದು ಮತ್ತೊಮ್ಮೆ ಹೇಳಬೇಕೆ! ಅಹಲ್ಯಾಬಾಯಿಯು ಪ್ರಜೆಗಳ ಹಿತಕ್ಕಾಗಿ ಸ್ವಪುತ್ರನನ್ನೂ ಶಿಕ್ಷಿಸುವಷ್ಟು ನ್ಯಾಯೈಕಚಿತ್ತಳಾಗಿದ್ದಳೆಂಬುದನ್ನು ಸ್ಥಾಪಿಸುವದಕ್ಕೆ ಈ ಕಥೆಯನ್ನು ಯಾರೋ ಕಲ್ಪಿಸಿರಬಹುದು.

ಜನಕಂಟಕನಾದ ಮಾಲೀರಾಯನು ಗತಿಸಿದುದರಿಂದ ದೇಶಕ್ಕೆ ಬಹು ಮೇಲಾಯಿತು. ಈತನ ಮರಣಾನಂತರ, "ರಾಜ್ಯಪಾಲನೆಯು ಯಾರ ಹೆಸರಿನಲ್ಲಿ ನಡೆಯಬೇಕು," ಎಂದು ವಿವಾದವು ಪ್ರಾರಂಭವಾಯಿತು. ಪೂನೆಯಲ್ಲಿರುವ ಪೇಷ್ವೆಗಳು ಇವರಿಗೆ ಪ್ರಭುಗಳಾದುದರಿಂದ ಈ ವಿಷಯವನ್ನು ಅವರಿಗೆ ತಿಳಿಯಪಡಿಸಿದರು. ಆಗ ಮಾಧವರಾಯನು ಪೇಷ್ವೆಯಾಗಿದ್ದನು. ರಘುನಾಥರಾಯನು

ಸರ್ವಾಧಿಕಾರಿಯಾಗಿದ್ದನು. ಮಾಧವರಾಯನು ನ್ಯಾಯಪ್ರವರ್ತಕನು. ರಘು ನಾಥರಾಯನು ಒಳ್ಳೆಯವನಾದರೂ ಒಂದೊಂದು ಸಲ ಹುಚ್ಚನಂತೆ ಮೂರ್ಖ ಕೃತ್ಯಗಳನ್ನು ಮಾಡುತಲಿದ್ದನು. ಮಾಲೇರಾಯನು ಕಾಲವಾದಾಗ ಗಂಗಾಧರ ಯಶವಂತನು ಮಂತ್ರಿಯಾಗಿದ್ದನು. ಆತನು ಅಹಲ್ಯಾಬಾಯಿಗೆ, "ನಿಮ್ಮ ಸಗೋ ತ್ರನಾದ ಒಬ್ಬ ಹುಡುಗನನ್ನು ದತ್ತು ತೆಗೆದುಕೊಂಡು, ಅವನಿಗೆ ರಾಜ್ಯವನ್ನು ಒಪ್ಪಿಸಬೇಕು. ಆ ಬಾಲಕನು ಯುಕ್ತವಯಸ್ಕನಾಗುವವರೆಗೂ, ಅವನ ಹೆಸರಿ ನಲ್ಲಿ ನಾನು ರಾಜ್ಯಭಾರವನ್ನು ಮಾಡುವೆನು. ನೀವು ಕೆಲಗ್ರಾಮಗಳನ್ನು ತೆಗೆದು ಕೊಂಡು ಬೇರೆಯಾಗಿರಬೇಕು. ನೀವು ರಾಜ್ಯಪಾಲನೆಯನ್ನು ಮಾಡಲಸಮ ರ್ಥರು," ಎಂದು ಉಪದೇಶವನ್ನು ಮಾಡಿದನು. ಈ ಮಾತಿಗೆ ಅಹಲ್ಯಾ ಬಾಯಿಯು ಸಮ್ಮತಿಸದೆ ತಾನೇ ರಾಜ್ಯಭಾರವನ್ನು ವಹಿಸುವೆನೆಂದು ನುಡಿದಳು. ಸ್ತ್ರೀಯಾದರೂ ರಾಜ್ಯಭಾರವನ್ನು ವಹಿಸುವೆನೆಂದು ಧೈರ್ಯದೊಡನೆ ಹೇಳಿದು ದಕ್ಕೆ ಗಂಗಾಧರನು ಆಗ್ರಹಯುಕ್ತನಾಗಿ, ಯಾವುದಾದರೂ ಒಂದು ಉಪಾಯ ದಿಂದ ಆಕೆಯನ್ನು ಅವಮಾನಪಡಿಸಬೇಕು ಎಂದು ಆಲೋಚಿಸಿ, "ಹೋಳಕರ್ ರಾಜ್ಯಕ್ಕೆ ಪ್ರಸ್ತುತದಲ್ಲಿ ವಾರಸದಾರರು ಯಾರೂ ಇಲ್ಲ. ಆದಕಾರಣ ಈ ರಾಜ್ಯವನ್ನು ನೀವು ಅನಾಯಾಸವಾಗಿ ಸ್ವೀಕರಿಸಬಹುದು," ಎಂದು ರಘುನಾಥ ರಾಯನಿಗೆ ಬರೆದನು. ಸ್ವತಂತ್ರರಾಜ್ಯವು ಬೇಕೆಂದಪೇಕ್ಷಿಸುತಲಿದ್ದ ರಘುನಾಥ ರಾಯನು ಗಂಗಾಧರನ ಪತ್ರವನ್ನು ನೋಡಿದ ಕೂಡಲೆ, ಮಾಳವದೇಶದ ಮೇಲೆ ದಂಡೆತ್ತುವುದಕ್ಕೆ ಸೈನ್ಯವನ್ನು ಸಜ್ಜುಗೊಳಿಸಿದನು. ಈ ವಿಷಯ ಗಳನ್ನೆಲ್ಲ ದುಃಖಮಗ್ನೆಯಾದ ಅಹಲ್ಯಾಬಾಯಿಯು ಕೇಳಿ, ಭೋಸಲಾ, ಗಾಯಕ ವಾಡೆ, ದಾಭಾಡೆ, ಮೊದಲಾದ ಸಾಮಂತನರಪತಿಗಳಿಗೆ ರಹಸ್ಯವಾಗಿ, "ಕೈಲಾಸ ವಾಸರಾದ ಮಲ್ಹಾರರಾವ್ ಸುಬೇದಾರರು ಶ್ರೀಮಂತರಿ (ಪೇಷ್ವೆಗಳಿಗೆ ಶ್ರೀಮಂತ ರೆಂದು ಬಿರುದು) ಗಾಗಿ ಅನೇಕ ಕಷ್ಟಗಳನ್ನನುಭವಿಸಿ, ಅವರ ರಾಜ್ಯವನ್ನು ಸ್ಥಿರ ಪಡಿಸಿದರು. ಅಂತಹ ಸೇವಕನ ಮರಣಾನಂತರ ಆತನ ವಂಶಸ್ಥರಾದ ನಮ್ಮಿಂದ ಉಚಿತಸೇವೆಯನ್ನು ಕೈಗೊಳ್ಳುತ್ತ, ನಮ್ಮನ್ನು ರಕ್ಷಿಸುವುದು ಶ್ರೀಮಂತರಿಗೆ ಧರ್ಮವು. ಅವರು ಹಾಗೆ ಮಾಡದೆ ನಮ್ಮಲ್ಲಿರುವ ಅಲ್ಪ ಧನಕ್ಕೆ ಆಶೆಪಟ್ಟು, ನಮ್ಮ ರಾಜ್ಯವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಲಿದಾರೆ. ಈ ದಿವಸ ನಮ್ಮ ರಾಜ್ಯದ ಮೇಲೆ ದಂಡೆತ್ತಿಬಂದಂತೆ ನಾಳೆ ನಿಮ್ಮ ರಾಜ್ಯದ ಮೇಲೆಯೂ ದಂಡೆತ್ತಿ ಬರಬಹುದು. ಆದುದರಿಂದ ನನ್ನ ಸಹಾಯಾರ್ಥವಾಗಿ ನೀವು ನಿಮ್ಮ ಸೈನ್ಯ ಗಳನ್ನು ಕಳುಹಿಸಬೇಕು," ಎಂದು ಬರೆದ ಲೇಖನವನ್ನು ನೋಡಿದಕೂಡಲೆ ಅವ ರೆಲ್ಲರೂ ತಮ್ಮ ಸೈನ್ಯಗಳನ್ನು ಕಳುಹಿಸಿ, ತಾವು ಸಹ ಸಹಾಯಕ್ಕೆ ಬರುವೆವೆಂದು ವಾಗ್ದಾನವನ್ನು ಮಾಡಿದರು. ಅಹಲ್ಯಾಬಾಯಿಯು ಮಾಧವರಾಯರ ಬಳಿಗೆ ಒಬ್ಬ ಚಾರನನ್ನು ರಘುನಾಥರಾಯನ ದುರದ್ದೇಶವನ್ನು ತಿಳಿಸಲು ಕಳುಹಿಸಿದಳು.

ಅದರ ಮೇಲೆ ಆತನು, "ನಿನ್ನ ರಾಜ್ಯದ ವಿಷಯದಲ್ಲಿ ಯಾರಾದರೂ ಪಾಪಬುದ್ಧಿಯನ್ನೆಣಿಸಿದರೆ ಅವರನ್ನು ಅಗತ್ಯವಾಗಿ ದಂಡಿಸು," ಎಂದು ಹೇಳಿಕಳುಹಿದನು. ಆಮೇಲೆ ಅಹಲ್ಯಾಬಾಯಿಯು ಶತ್ರುಗಳಿಗೆ ಭಯವನ್ನುಂಟುಮಾಡಲೆಣಿಸಿ, ಒಂದು ದೊಡ್ಡ ರಾಜಸಭೆಯನ್ನು ಮಾಡಿ, ಆ ಸಭೆಯಲ್ಲಿ, "ನಾನು ಅಬಲೆ ಎಂದು ಎಣಿಸಬೇಡಿ. ನಾನು ಭುಜದ ಮೇಲೆ ಒಂದು ಬಿದಿರುಕೋಲನ್ನು ಇಟ್ಟುಕೊಂಡು ಯುದ್ಧಕ್ಕೆ ಹೊರಟರೂ ಶ್ರೀಮಂತರ ರಾಜ್ಯಲಕ್ಷ್ಮಿಗೆ ಹಾನಿಯುಂಟಾಗುವುದು ನಿಶ್ಚಯ. ನಮ್ಮ ಪೂರ್ವಿಕರು ಈ ರಾಜ್ಯವನ್ನು ಅಖಂಡಪ್ರತಾಪದಿಂದ ಸಂಪಾದಿಸಿದರೇ ಹೊರತು ಆಟಪಾಟಗಳಿಂದ ಪಡೆಯಲಿಲ್ಲ. ಆದುದರಿಂದ ಪ್ರಭುಗಳು ನಮ್ಮಿಂದ ಯೋಗ್ಯವಾದ ಸೇವೆಯನ್ನು ಮಾಡಿಸಿಕೊಳ್ಳಬೇಕು. ಆಶಾತುರರಾದ (ಬ್ರಾಹ್ಮಣರು) ಪೇಷ್ವೆಗಳು ಧನಾಶೆಯಿಂದ ನಮ್ಮ ರಾಜ್ಯವನ್ನು ತೆಗೆದುಕೊಳ್ಳಬೇಕೆಂದು ಎಣಿಸಿದರೆ, ಹಾಗೆ ಆಗಲಾರದು ಎಂದು ಅವರು ದೃಢವಾಗಿ ತಿಳಿಯಬೇಕು," ಎಂದು ಸಂಭಾಷಿಸಿದಳು. ಆಹಾ! ಅದೆಂತಹ ಕ್ಷಾತ್ರತೇಜಪೂರಿತಗಳಾದ ಮಾತುಗಳು! ಈ ವಾಕ್ಯಗಳು ಸ್ವಲ್ಪಕಾಲದಲ್ಲಿ ದೇಶದಲ್ಲೆಲ್ಲಾ ಹರಡಿಕೊಂಡು, ರಘೋಬಾಯವರಿಗೂ ಶ್ರುತವಾಯಿತು. ಆದರೆ ಗಂಗಾಧರನ ಪ್ರೋತ್ಸಾಹದಿಂದ ರಘುನಾಥರಾಯನು ಈ ಮಾತನ್ನು ಗಣನೆಗೆ ತಾರದೆ ಐವತ್ತುಸಾವಿರ ಸೈನ್ಯದೊಡನೆ ಇಂದೂರು ರಾಜ್ಯವನ್ನು ಸಮೀಪಿಸಿದನು. ಅಹಲ್ಯಾಬಾಯಿಯು ಆತನ ಬರುವಿಕೆಯನ್ನು ಕೇಳಿ, "ಸ್ತ್ರೀಯೊಡನೆ ಯುದ್ಧಮಾಡುವುದು ಧರ್ಮವಲ್ಲ. ನಾನು ಸಹ ನಿಮ್ಮೊಡನೆ ಯುದ್ಧಮಾಡುವುದಕ್ಕೆ ದೊಡ್ಡ ಸೇನೆಯನ್ನು ಅಣಿಮಾಡಿಟ್ಟಿರುವೆನು. ಈ ಯುದ್ಧದಲ್ಲಿ ನೀವು ಸೋತುಹೋದರೆ ನಿಮಗೆ ಬಹಳ ಅವಮಾನವುಂಟಾಗುವುದು. ಒಂದುವೇಳೆ ನೀವು ಜಯಿಸಿದರೂ ಸ್ತ್ರೀಯನ್ನು ಸೋಲಿಸಿದನು ಎಂದು ಅಪಖ್ಯಾತಿಯು ಉಂಟಾಗುವುದೇ ಹೊರತು ಇನ್ನೇನೂ ಲಾಭವಿಲ್ಲ," ಎಂದು ವರ್ತಮಾನವನ್ನು ಕಳುಹಿಸಿದಳು. ಅದನ್ನು ಕೇಳಿ ರಘುನಾಥರಾಯನು ನಾಚಿಕೆಪಟ್ಟು, ಒಂದುವೇಳೆ ತನಗೆ ಅಪಜಯವು ಉಂಟಾಗಬಹುದು ಎಂದು ನೆನೆಸಿ "ಪುತ್ರಮರಣ ದುಃಖಿತೆಯಾದ ಅಹಲ್ಯಾಬಾಯಿಗೆ ದುಃಖೋಪಶಮನವನ್ನು ಮಾಡಲು ಬರುತ್ತಿರುವೆನೇ ಹೊರತು, ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಬರಲಿಲ್ಲ," ಎಂದು ಪ್ರತ್ಯುತ್ತರವನ್ನು ಕಳುಹಿಸಿ, ಸೇನೆಯನ್ನೆಲ್ಲ ಹಿಂದೆಯೇ ನಿಲ್ಲಿಸಿ, ಪರಿಮಿತಜನರೊಡನೆ ಇಂದೂರನ್ನು ಪ್ರವೇಶಿಸಿ, ಅಹಲ್ಯಾಬಾಯಿಯನ್ನು ಆದರಿಸಿ, ಮರಳಿ ಪುನಹೆಗೆ ಹೊರಟುಹೋದನು. ಹೀಗೆ ಅಹಲ್ಯಾಬಾಯಿಯು ಪತಿಯನ್ನೂ ಮಾವಂದಿರನ್ನೂ ಪುತ್ರನನ್ನೂ ಕಳೆದುಕೊಂಡು ಶೋಕಸಾಗರದಲ್ಲಿ ಮುಳುಗಿದ್ದರೂ, ಸಮಯೋಚಿತವಾದ ಧೈರ್ಯವನ್ನು ಅವಲಂಬಿಸಿ, ರಘೋಬನಂತಹ ಶೂರನಿಂದ ಯಾವ ಅಪಾಯವೂ ಉಂಟಾಗದಂತೆ ಉಪಾಯವಾಗಿ ತಪ್ಪಿಸಿಕೊಂಡಳು.

ಸ ೧೭೬೫ ನೆಯ ಇಸವಿಯಲ್ಲಿ ಅಹಲ್ಯಾಬಾಯಿಗೆ ರಾಜ್ಯದ ಸಂಪೂರ್ಣಾಧಿಕಾರವು ಪ್ರಾಪ್ತವಾಯಿತು. ಆಕೆಯು ತನಗೆ ದೂರದ ನೆಂಟನಾದ ತುಕೋಜಿರಾಯನನ್ನು ಮಂತ್ರಿಯಾಗಿ ನಿಯಮಿಸಿಕೊಂಡಳು. ದಂಡೆತ್ತಿ ಹೋಗುವುದು, ಸೈನ್ಯವನ್ನು ಸೇರಿಸುವುದು, ರಾಜ್ಯವನ್ನು ಚೋರಭಯದಿಂದ ಕಾಪಾಡುವುದು, ಇವೇ ಮೊದಲಾದ ಯುದ್ಧಸಂಬಂದವಾದ ಕಾರ್ಯಗಳನ್ನು ಈತನು ನೋಡುತಲಿದ್ದನು. ರಾಜ್ಯದ ಇತರ ವಿಷಯಗಳನ್ನು ಅಹಲ್ಯಾಬಾಯಿಯು ನೋಡುತಲಿದ್ದಳು. ತುಕೋಜಿಯು ಅಹಲ್ಯಾಬಾಯಿಯನ್ನು ಮಾತೆಯಂತೆ ಭಾವಿಸುತಲಿದ್ದನು.

ಅಹಲ್ಯಾಬಾಯಿಯ ದಿನಚರ್ಯೆ.—ಈಕೆಯು ಪ್ರತಿನಿತ್ಯವೂ ಉಷಃಕಾಲಕ್ಕೆ ನಿದ್ರೆಯಿಂದೆದ್ದು ಪ್ರಾತಃಕೃತ್ಯಗಳನ್ನು ನೆರವೇರಿಸಿ, ಸ್ವಂತವಾಗಿದೇವತಾರ್ಚನೆಯನ್ನು ಮಾಡುತಲಿದ್ದಳು. ಅನಂತರ ಪುರಾಣಶ್ರವಣ; ಬಳಿಕ ಬಡವರಿಗೆ ದಾನಧರ್ಮ; ಆಮೇಲೆ ಭೋಜನ; ಭೋಜನಾನಂತರ ಸ್ವಲ್ಪ ವಿಶ್ರಾಂತಿ; ತರುವಾಯ ರಾಜಸಭೆಗೆ ಹೋಗಿ, ಅಲ್ಲಿ ವಸೂಲು ಮೊದಲಾದ ಲೆಕ್ಕಗಳನ್ನು ನೋಡಿ, ಪ್ರಜೆಗಳ ಕಲಹಗಳನ್ನು ವಿಚಾರಿಸಿ ಸೂರ್ಯಾಸ್ತಮಯ ಸಮಯಕ್ಕೆ ಸರಿಯಾಗಿ ಗೃಹಕ್ಕೆ ಬರುವಳು. ಸಾಯಂಕಾಲದ ದೇವತಾರ್ಚನೆಯನ್ನು ಮಾಡಿದಮೇಲೆ ರಾಜ್ಯ ಸಂಬಂಧವಾದ ಮಿಕ್ಕ ಕಾರ್ಯಗಳನ್ನು ಕ್ರಮಪಡಿಸಿ, ರಾತ್ರಿ ಹನ್ನೊಂದು ಘಂಟೆಗೆ ನಿದ್ರಿಸುತಲಿದ್ದಳು. ಈ ಕ್ರಮವು ಆಕೆಯ ಮರಣ ಪರ್ಯಂತವೂ ನಡೆಯಿತು. ಹಬ್ಬ, ಉಪವಾಸ ವ್ರತಗಳು ಮೊದಲಾದ ವಿಶೇಷದಿವಸಗಳಲ್ಲಿ ಮಾತ್ರ ಅಹಲ್ಯಾಬಾಯಿಯು ದಿನವೆಲ್ಲವನ್ನೂ ವ್ರತದಲ್ಲಿಯೇ ಕಳೆಯುತಲಿದ್ದಳು. ಇವರ ಜಾತಿಯಲ್ಲಿ ಮಾಂಸವನ್ನು ಭುಜಿಸಲು ನಿಷೇಧವಿಲ್ಲದಿದ್ದರೂ ಈಕೆಯು ಅದನ್ನು ಮುಟ್ಟದವಳಲ್ಲ. ಸಕಲ ನಿಯಮಗಳನ್ನೂ ಬ್ರಾಹ್ಮಣ ಸ್ತ್ರೀಯಂತೆ ನಡೆಸುತಲಿದ್ದಳು. ಈಕೆಯು ತನ್ನ ವೈಧವ್ಯದಲ್ಲಿ ಆಭರಣಾದಿಗಳನ್ನು ಧರಿಸದೆ ಶ್ವೇತವಸ್ತ್ರವನ್ನು ಮಾತ್ರ ಉಡುತಲಿದ್ದಳು. ತನ್ನ ಕಾರ್ಯಗಳನ್ನು ಕಾಲಕ್ರಮವಾಗಿ ಮಾಡುತಲಿದ್ದುದರಿಂದ ಈಕೆಯು ನೆನೆದ ಕೆಲಸಗಳೆಲ್ಲವು ಕೈಗೂಡುತಲಿದ್ದುವು.

ದಾನಧರ್ಮಗಳು.—ಭರತಖಂಡವು ಕ್ಷೇತ್ರತೀರ್ಥಗಳ ತೌರುಮನೆ. ಮುವ್ವತ್ತುಮೂರು ಕೋಟಿ ದೇವತೆಗಳನ್ನು ಪೂಜಿಸುವ ನಮಗೆ (ಹಿಂದುಗಳಿಗೆ) ಅಸಂಖ್ಯಕ್ಷೇತ್ರಗಳಿರುವುದು ವಿಚಿತ್ರವಲ್ಲ. ಈ ಕ್ಷೇತ್ರಗಳಲ್ಲಿ ಅಹಲ್ಯಾಬಾಯಿಯು ಶಾಶ್ವತದಾನವನ್ನು ಮಾಡಿದಾಳೆ. ನೂತನ ದೇವಾಲಯಗಳನ್ನು ಕಟ್ಟಿಸುವುದು, ಜೀರ್ಣವಾದ ದೇವಾಲಯಗಳನ್ನು ಉದ್ಧಾರಮಾಡುವುದು, ದೇವತೆಗಳಿಗೆ ಶಾಶ್ವತ ಗಂಗಾಭಿಷೇಕವು ನಡೆಯುವಂತೆ ಏರ್ಪಾಟುಮಾಡುವುದು, ಇವೇ ಮೊದಲಾದ ತಾನು ನಂಬಿದ ಧರ್ಮಗಳನ್ನು ಹೇರಳವಾಗಿ ಮಾಡಿರುವಳು. ಕ್ಷೇತ್ರಗಳಲ್ಲಿ

ಬ್ರಾಹ್ಮಣರಿಗೆ ದಾನವನ್ನು ಮಾಡುವುದು ಮಾತ್ರವಲ್ಲದೆ, ಶೂದ್ರರಿಗೂ, ಚಂಡಾಲರಿಗೂ, ಪಶುಪಕ್ಷಿಗಳಿಗೂ, ಈಕೆಯು ಸರ್ವದಾ ಹಿತಪ್ರದೆಯಾಗಿದ್ದಳು. ಮೃತರಾದ ಪುತ್ರಾದಿಗಳ ನೆನಪು ಬಂದು ವ್ಯಸನವುಂಟಾದಾಗ "ಸತ್ತುಹೋದ ಪುತ್ರನೊಬ್ಬನಲ್ಲದೆ ನಿನ್ನ ದುಃಖಕ್ಕೂ, ಉದ್ವೇಗಕ್ಕೂ, ಪ್ರೇಮಕ್ಕೂ ಪಾತ್ರವಾದ ಸುತ ಸಂಘವು ಈ ವಿಶ್ವದಲ್ಲಿ ಅಸಂಖ್ಯವಾಗಿದೆ. ಈ ಜಗತ್ತಿನಲ್ಲಿ ಎಷ್ಟು ಜನರ ದುಃಖವನ್ನು ನಿವಾರಿಸುವೆಯೋ, ಎಷ್ಟು ಜನರನ್ನು ಸುಖಿಗಳನ್ನಾಗಿ ಮಾಡುವೆಯೋ, ಎಷ್ಟು ಜನರನ್ನು ಲಾಲಿಸುವೆಯೋ, ಎಷ್ಟು ಜನರನ್ನು ಪಾಲಿಸುವೆಯೋ, ಅವರೆಲ್ಲರೂ ನಿನಗೆ ಮಕ್ಕಳೇ! ಆದ್ದರಿಂದ ನೀನು ವಕ್ತೃವಿಷಯಿಕ ದುಃಖವನ್ನು ಬಿಡು. ಹೀಗೆ ಮಾಡಿದರೆ ದುಃಖಿತರ ದುಃಖವನ್ನು ಹಂಚಿಕೊಳ್ಳುವುದಕ್ಕೂ, ಸುಖಿಗಳ ಸೌಖ್ಯವನ್ನು ವೃದ್ಧಿ ಪಡಿಸುವುದಕ್ಕೂ ನಿನಗೆ ಅವಕಾಶ ದೊರೆವುದು," ಎಂದು ತನಗೆ ತಾನೇ ಹೇಳಿಕೊಂಡು ಇತರರ ದುಃಖವನ್ನು ಪರಿಹರಿಸುವುದರ ಮೂಲಕ ತನ್ನ ದುಃಖವನ್ನು ಮರೆಯುತಲಿದ್ದಳು. ಅನೇಕ ಅನ್ನಸತ್ರಗಳನ್ನು ಸ್ಥಾಪಿಸಿದುದು ಮಾತ್ರವಲ್ಲದೆ ಪ್ರತಿದಿನವೂ ದೀನರಾದ ಸಕಲ ಜಾತೀಯರಿಗೂ ಅನ್ನದಾನವನ್ನು ಮಾಡುತಲಿದ್ದಳು. ಒಕ್ಕಲಿಗರು ತಮ್ಮ ಹೊಲಗಳ ಮೇಲೆ ಹಕ್ಕಿಗಳು ಬಾರದಂತೆ ಕವಣೆ ಕಲ್ಲುಗಳನ್ನು ಬೀಸುವರೆಂದು ತಿಳಿದು, ಪಕ್ಷಿಗಳ ಮೇಲೆ ಕರುಣಿಸಿ ಧಾನ್ಯವು ಚನ್ನಾಗಿ ಬಲಿತಿರುವ ಹೊಲಗಳನ್ನು ಸ್ವಂತವಾಗಿ ಕೊಂಡು ಕೊಂಡು ಅವುಗಳಿಗೆ ಬಿಟ್ಟು ಕೊಡುತಲಿದ್ದಳು. ಒಕ್ಕಲಿಗರು ಉಳುವಾಗ ತಮ್ಮ ಎತ್ತುಗಳನ್ನು ಬಹಳ ಬಾಧಿಸುವರೆಂದು ಅವುಗಳ ಮೇಲೆ ಕನಿಕರವುಳ್ಳವಳಾಗಿ ಉಳುವ ನೇಗಿಲುಗಳನ್ನು ನಿಲ್ಲಿಸಿ ಎತ್ತುಗಳಿಗೆ ಹುಲ್ಲು ನೀರನ್ನು ಕೊಡುವಂತೆ ಸೇವಕರನ್ನು ನಿಯಮಿಸಿದಳು. ಮಾಲೀರಾಯನು ಗತಿಸುವಾಗ ನಾಲ್ಕು ಕೋಟಿ ರೂಪಾಯಿಗಳು ಭಂಡಾರದಲ್ಲಿತ್ತು. ಇದಲ್ಲದೆ ಅಹಲ್ಯಾಬಾಯಿಯ ಸ್ವಂತಖರ್ಚಿಗೆ ನಾಲ್ಕು ಲಕ್ಷ ರೂಪಾಯಿಗಳ ಆದಾಯವುಳ್ಳ ಅಗ್ರಹಾರವು ಬೇರೆ ಇತ್ತು. ಈ ದ್ರವ್ಯವನ್ನೆಲ್ಲ ಅಹಲ್ಯಾಬಾಯಿಯು ಧರ್ಮಕಾರ್ಯಗಳಿಗೆ ವೆಚ್ಚಮಾಡುತಲಿದ್ದಳು. 'ಆತ್ಮ' ಶಬ್ದವನ್ನು ತ್ಯಜಿಸಿ, 'ವಿಶ್ವ' ಶಬ್ದವನ್ನು ಧರಿಸಿ, ಸ್ವಕುಟುಂಬವನ್ನು ಮರೆತು, ವಿಶ್ವವನ್ನೇ ಕುಟುಂಬವಾಗೆಣಿಸಿ, ಸ್ವಬಾಲಕರಲ್ಲಿರುವ ಮಮತೆಯನ್ನು ಕಡಮೆ ಮಾಡಿ, ವಿಶ್ವದಲ್ಲಿರುವ ಸಮಸ್ತ ಪ್ರಾಣಿಕೋಟಿಗಳನ್ನು ತನ್ನ ಬಾಲಕರೆಂದೆಣಿಸಿ, ಆತ್ಮವಿಷಯಕ ದುಃಖಕ್ಕೆ ಅಳದೆ ವಿಶ್ವವಿಷಯ ದುಃಖಕ್ಕೆ ಅಶ್ರುಬಿಂದುಗಳನ್ನು ಸುರಿಸಿ, ಜಗತ್ತಿನಿಂದ ತನಗೆ ಉಂಟಾಗುವ ಮಾನಾವಮಾನಗಳನ್ನು ಗಣನೆಗೆ ತಾರದೆ, ಅದರ ಹಿತಾರ್ಥವಾಗಿ ಜನ್ಮವನ್ನು ವ್ಯಯಮಾಡುವ ವಿಶ್ವಕುಟುಂಬಿಗಳಾದ ಮಹಾತ್ಮರಲ್ಲಿ ಒಬ್ಬಳಾದ ಅಹಲ್ಯಾಬಾಯಿಯ ನಾಮವನ್ನು ಸ್ಮರಿಸಿದ ಮಾತ್ರದಿಂದ ಸರ್ವಪಾಪಗಳೂ ನಾಶವಾಗುವುದೆಂದು ಮಹಾರಾಷ್ಟ್ರರು ಎಣಿಸುತ್ತಾರೆ.

ಆಕೆಯ ಉಗ್ರಶಾಸನವು.—ಅಹಲ್ಯಾಬಾಯಿಯು ಧರ್ಮಾತ್ಮಳೂ ಭೂತದಯೆಯುಳ್ಳವಳೂ ಆದರೂ, ಆಕೆಯ ಶಾಸನಗಳು ಉಗ್ರವಾಗಿದ್ದುವು. ಸೇವಕರಲ್ಲಿ ಯಾರಾದರೂ ತಪ್ಪನ್ನು ಮಾಡಿದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತಲಿದ್ದಳು. ಆಕೆಯ ರಾಜ್ಯದಲ್ಲಿ ನರ್ಮದಾತೀರ ಪ್ರದೇಶದಲಿರುವ ಗೊಂಡರು, ಪ್ರಜೆಗಳಿಗೆ ವಿಶೇಷ ಬಾಧೆಯನ್ನುಂಟುಮಾಡುತಲಿದ್ದರು. ಅಹಲ್ಯಾ ಬಾಯಿಯು ಮೊದಲು ಅವರಿಗೆ ನಯಭಯಗಳಿಂದ ಬುದ್ಧಿಯನ್ನು ಹೇಳಿ ಅವರು ತನ್ನಮಾತನ್ನು ಲಕ್ಷ್ಯಮಾಡದಿರಲು, ಅವರಿಗೆ ಪ್ರಾಣಾಂತ ಶಿಕ್ಷೆಯನ್ನು ವಿಧಿಸಿದಳು. ಹೊಟ್ಟೆಗಿಲ್ಲದೆ ಕಳ್ಳತನವನ್ನು ಮಾಡುವವರಿಗೆ ಬಂಜರು ಭೂಮಿಯನ್ನು ಉಚಿತವಾಗಿ ಕೊಟ್ಟು ಕೃಷಿಯಿಂದ ಜೀವನ ಮಾಡುವಂತೆ ಹೇಳುತಲಿದ್ದಳು. ಇನ್ನೆಂದಿಗೂ ಕಳ್ಳತನವನ್ನು ಮಾಡುವುದಿಲ್ಲವೆಂದು ಭಾಷೆಯನ್ನು ಕೊಟ್ಟು ಅದಕ್ಕೆ ತಪ್ಪಿ ನಡೆದವರಿಗೆ ಕ್ರೂರಶಿಕ್ಷೆಯನ್ನು ವಿಧಿಸುತಲಿದ್ದಳು. ಇಂದೂರು ಪಟ್ಟಣದಲ್ಲಿರುವ ದೇವೀಚಂದನ್ ಎಂಬ ಒಬ್ಬ ಸಾಹುಕಾರನು ಸಂತಾನಹೀನನಾಗಿ ಮೃತನಾದನು. ಹಕ್ಕುದಾರರು ಯಾರೂ ಇಲ್ಲದ ಆತನ ಆಸ್ತಿಯನ್ನು ತುಕೋಜಿರಾಯನು ಜಪ್ತಿಮಾಡಿಸಿದನು. ಈ ವಿಷಯವನ್ನು ಅಹಲ್ಯಾಬಾಯಿಯು ಕೇಳಿ ದೇವೀಚಂದನ ಪತ್ನಿಯನ್ನು ಕರೆಯಿಸಿ, ಆಕೆಯ ಪತಿಯ ಆಸ್ತಿಯನ್ನು ಕೊಡಿಸಿ, ಒಬ್ಬ ಬಾಲಕನನ್ನು ದತ್ತು ತೆಗೆದುಕೊಂಡು ಅದನ್ನು ಅನುಭವಿಸುವಂತೆ ಆಕೆಗೆ ಹೇಳಿದಳು. ತುಕೋಜಿಯು ಈ ವಿಧವಾಗಿ ವ್ಯವಹರಿಸಿದುದನ್ನು ನೋಡಿ ಆತನ ಮೇಲೆ ಆಗ್ರಹಗೊಂಡು, "ರಾಜಧಾನಿಯಲ್ಲಿ ನೀವು ಸೈನ್ಯದೊಡನೆ ಇದ್ದ ಪಕ್ಷದಲ್ಲಿ ಪ್ರಜೆಗಳಿಗೆ ಬಹು ಬಾಧೆಯುಂಟಾಗುವುದು. ಆದಕಾರಣ ನೀವು ಸೈನ್ಯಸಹಿತವಾಗಿ ಇಂದೂರನ್ನು ಬಿಟ್ಟುಹೋಗಿ," ಎಂದು ಆಜ್ಞಾಪಿಸಿದಳು. ಆತನು ತನ್ನ ತಪ್ಪನ್ನೊಪ್ಪಿಕೊಂಡು ಆಕೆಯ ಆಜ್ಞೆಯನ್ನು ಶಿರಸಾವಹಿಸಿ, ಕ್ಷಮಾಪಣೆಯನ್ನು ಬೇಡಿಕೊಂಡನು. ಆಕೆಯ ರಾಜ್ಯದಲ್ಲಿದ್ದ ಅನೇಕ ಮಾಂಡಲಿಕ ರಾಜರು ಅಹಲ್ಯಾಬಾಯಿಯನ್ನು ಸ್ತ್ರೀಯೆಂದು ಧಿಕ್ಕರಿಸದೆ ಆಕೆಯಿಂದ ಯಾವ ಉಗ್ರಶಾಸನವಾದೀತೋ ಏನುಮಾಡುವಳೋ ಎಂದು ಹೆದರಿ ಆಕೆಗೆ ಕಪ್ಪವನ್ನು ಕ್ರಮವಾಗಿ ಸಲ್ಲಿಸುತಲಿದ್ದರು. ಒಂದುಸಲ ಉದಯಪುರದ ರಾಣಾರಾಮಪುರ ಎಂಬ ಗ್ರಾಮವನ್ನು ತೆಗೆದುಕೊಳ್ಳಲು ಸಿದ್ಧನಾದನು. ಆ ಸಮಯದಲ್ಲಿ ತುಕೋಜಿಯು ದಕ್ಷಿಣದಲ್ಲಿ ಯುದ್ಧಮಾಡುತಲಿದ್ದನು. ಆದುದರಿಂದ ಅಹಲ್ಯಾಬಾಯಿಯ ಬಳಿಯಲ್ಲಿ ಸೇನೆಯು ಸ್ವಲ್ಪವಾಗಿತ್ತು. ಆದರೂ ಆಕೆಯು ಹೆದರದೆ ಆ ಅಲ್ಪಸೇನೆಗೆ ಶರೀಫ ಬಾಯಿ ಎಂಬಾತನನ್ನು ಸೇನಾಧಿಪತಿಯನ್ನಾಗಿ ನಿಯಮಿಸಿ ರಾಣಾವಿನೊಡನೆ ಸಮರವನ್ನು ಮಾಡಲು ಕಳುಹಿದಳು. ರಾಣಾ ಪರಾಭವವನ್ನು ಹೊಂದಿ ಅಹಲ್ಯಾಬಾಯಿಗೆ ಶರಣಾಗತನಾದನು. ಈಕೆಯ ರಾಜ್ಯದಲ್ಲಿ ಭೀಮದಾಸ ಎಂಬ ಒಬ್ಬ ಸಾಹುಕಾರನು ಬೇವಾರಸಾಗಿ ಸತ್ತುಹೋದನು. ಕಮಾವೀಸ್ದಾರ್ ಎಂಬ

ಅಧಿಕಾರಿಯು ಸ್ವಲ್ಪ ದ್ರವ್ಯವನ್ನು ಲಂಚವಾಗಿ ಕೊಡಬೇಕೆಂದು ಆತನ ಪತ್ನಿಯನ್ನು ಕೇಳಿದನು. ಆಕೆಯು ಲಂಚವನ್ನು ಕೊಡದೆ ಹೋದುದರಿಂದ ಆ ಅಧಿಕಾರಿಯು ಆಸ್ತಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವೆನು ಎಂದು ಹೆದರಿಸಿದನು. ಆದುದರಿಂದ ಅಹಲ್ಯಾಬಾಯಿಯು ಆತನನ್ನು ಅಧಿಕಾರದಿಂದ ತೆಗೆದು ಹಾಕಿದಳು. ಭೀಮದಾಸನ ಪತ್ನಿಗೆ ದತ್ತು ತೆಗೆದುಕೊಳ್ಳುವಂತೆ ಹೇಳಿದಳು. ರಾಜ್ಯ ಪಾಲಕರಿಗೆ ಅವಶ್ಯಕಗಳಾದ ಉಗ್ರಶಾಸನ ನ್ಯಾಯಬುದ್ಧಿ ಭೂತದಯೆ ಮೊದಲಾದ ಗುಣಗಳೆಲ್ಲವೂ ಈಕೆಯಲ್ಲಿ ನೆಲಸಿದ್ದುವು.

ಆಕೆಯ ಸ್ವಭಾವ.—ಮೇಲೆ ಹೇಳಿದ ವರ್ಣನೆಯಿಂದ ಅಹಲ್ಯಾಬಾಯಿಯ ಸ್ವಭಾವವು ಎಂತಹುದೆಂಬುದು ಸಹಜವಾಗಿ ತಿಳಿಯುವುದು. ಆದರೂ ಅಲ್ಲಿ ತಿಳಿಸದ ಒಂದೆರಡು ಸುಗುಣಗಳನ್ನು ಈಗ ತಿಳಿಸುವೆನು. ಲೋಕದಲ್ಲಿ ಸರ್ವ ಜನರೂ ಸಾಮಾನ್ಯವಾಗಿ ಅವರಲ್ಲಿ ಸ್ತ್ರೀಯರು ವಿಶೇಷವಾಗಿ ಸ್ತೋತ್ರಪ್ರಿಯರೆನ್ನ ಬಹುದು. ಆದರೆ ಅಹಲ್ಯಾಬಾಯಿಯಲ್ಲಿ ಈ ದುರ್ಗುಣ ಲೇಶವೂ ಇರಲಿಲ್ಲ. ಒಂದಾನೊಂದು ಸಲ ಒಬ್ಬ ಕವಿಯು ಅಹಲ್ಯಾಬಾಯಿಯ ಮೇಲೆ ಒಂದು ಕಾವ್ಯವನ್ನು ರಚಿಸಿ, ಬಹುಮಾನವನ್ನು ಪಡೆಯುವ ಸಲುವಾಗಿ ಅದನ್ನು ಆಕೆಗೆ ತಂದು ತೋರಿದನು. ಅಹಲ್ಯಾಬಾಯಿಯು ಆ ಕಾವ್ಯವನ್ನು ನದಿಯಲ್ಲಿ ಬಿಸುಟು, "ಎಲೈ ಕವಿಶ್ರೇಷ್ಠನೆ! ಅಲ್ಪಜ್ಞೆಯಾದ ನನ್ನನ್ನು ಸ್ತುತಿಸುವುದು ನಿಷ್ಪ್ರಯೋಜನ. ಸರ್ವಜ್ಞನಾದ ಭಗವಂತನನ್ನು ಸ್ತುತಿಸು," ಎಂದು ಆತನಿಗೆ ಹೇಳಿಕಳುಹಿಸಿಬಿಟ್ಟಳು. ಈಕೆಗೆ ಪರದ್ರವ್ಯದಲ್ಲಿ ಆಶೆಯು ಇರಲಿಲ್ಲವೆಂಬುದಕ್ಕೆ ಮೇಲೆ ಎರಡು ನಿದರ್ಶನಗಳನ್ನು ತಿಳಿಸಿದೇನೆ. ಇನ್ನೊಂದು ನಿದರ್ಶನವನ್ನು ಆಲೈಸಿರಿ. ತಾಪೀದಾಸ್, ಬನಾರಸ್‌ದಾಸ್ ಎಂಬಿಬ್ಬರು ಸೋದರರು ಪುತ್ರರಿಲ್ಲದೆ ಗತಿಸಿದರು. ತಾಪೀದಾಸನ ಪತ್ನಿಯಾದ ಮಹೇಶ್ವರಿಯು, ಅಹಲ್ಯಾಬಾಯಿಯ ಸಮೀಪಕ್ಕೆ ಬಂದು ತಾಯೇ! ತಮ್ಮ ಧರ್ಮರಾಜ್ಯದಲ್ಲಿದ್ದು ತಮ್ಮ ಅನುಗ್ರಹದಿಂದ ನನ್ನ ಪತಿಯೂ, ಮೈದುನನೂ ಗಳಿಸಿದ ಸಂಪತ್ತೆಲ್ಲವೂ ತಮ್ಮದೇ ಆಗಿದೆ. ಆದುದರಿಂದ ಈ ದ್ರವ್ಯವನ್ನು ತಾವು ಸ್ವೀಕರಿಸಬೇಕೆಂದು ಕೇಳಿಕೊಂಡಳು. ಆಗ ಆಕೆಯು ಮಹೇಶ್ವರಿಯನ್ನು ಕುರಿತು ನಿನ್ನ ಪತಿಯ, ಮೈದುನನ ಹಣವು ನಿನ್ನದು, ನನ್ನದಲ್ಲ. ಅದು ನಿನಗೆ ಬೇಡವಾದರೆ, ಅದರಿಂದ ನಿನ್ನ ಪತಿಯ ಹೆಸರು ಶಾಶ್ವತನಾಗಿರುವಂತೆ ಯಾವುದಾದರೂ ಒಂದು ಘನಕಾರ್ಯವನ್ನು ಮಾಡು ಎಂದು ಹೇಳಿಕಳುಹಿದಳು. ಅದರಂತೆ ಮಹೇಶ್ವರಿಯು ತನ್ನ ಗಂಡನ ಹೆಸರಿನಲ್ಲಿ ಒಂದು ದೊಡ್ಡ ದೇವಾಲಯವನ್ನೂ, ನದೀತೀರದಲ್ಲಿ ಒಂದು ಸ್ನಾನಘಟ್ಟವನ್ನೂ ಕಟ್ಟಿಸಿದಳು. ಮನೆಗೆಬರುವ ದ್ರವ್ಯವನ್ನು ನಿರಪೇಕ್ಷೆಯಿಂದ ಬಿಟ್ಟ ಧನ್ಯಾತ್ಮಳನ್ನು ಎಷ್ಟು ಕೊಂಡಾಡಿದರೂ ಅಲ್ಪವೇ! ಗರ್ವ, ಅಸತ್ಯ ಭಾಷಣ, ಕಪಟ, ವ್ಯರ್ಥ ಕಾಲಕ್ಷೇಪ, ಇವು ಮೊದ

ಲಾದ ದುರ್ಗುಣಗಳು ಈಕೆಯನ್ನು ಕನಸಿನಲ್ಲಿಯೂ ಸೇರುತ್ತಿರಲಿಲ್ಲ. ನೋಡಿ ದೊಡನೆಯೇ ಈಕೆಯು ಶಾಂತೆಯೆಂತಲೂ, ಸೌಮ್ಯೆಯೆಂತಲೂ, ಜೋಧೆಯಾಗುತ ಲಿತ್ತು. ಸರ್ವಸದ್ಗುಣಸಂಪನ್ನೆಯಾದ ಅಹಲ್ಯಾಬಾಯಿಯಲ್ಲಿದ್ದ ಯಾವ ಗುಣದ ಆಧಿಕ್ಯತೆಯನ್ನು ವರ್ಣಿಸಬೇಕೋ ಯಾವುದನ್ನು ಬಿಡಬೇಕೋ ನಾನರಿಯೆನು.

ಈ ವರ್ಣನೆಯೆಲ್ಲವೂ ಅತಿಶಯೋಕ್ತಿಯೆಂದು ಕೆಲವರು ತಿಳಿಯಬಹುದು. ನಮ್ಮ ದೇಶದ ಕವಿಗಳು ತಮ್ಮ ಕಾವ್ಯವನ್ನು ಅತಿಶಯೋಕ್ತಿಗಳಿಂದ ತುಂಬುವುದು ಸ್ವಭಾವವಾದುದರಿಂದ ಅವರು ಹಾಗೆಣಿಸುವುದು ಆಶ್ಚರ್ಯವಲ್ಲ. ಆದರೆ ನಾನು ಬರೆದಿರುವುದೆಲ್ಲವೂ ಸತ್ಯವಾದುದು ಎಂಬುದಕ್ಕೆ ಮಾಲ್ಕಂ ದೊರೆಯವರ ಗ್ರಂಥ ದಲ್ಲಿ, "ಅಹಲ್ಯಾಬಾಯಿಯೊಡನೆ ವೈರವನ್ನು ಬೆಳಿಸುವುದೂ, ಸಮಯ ದೊರೆತಾಗ ಆಕೆಗೆ ಸಹಾಯವನ್ನು ಮಾಡದಿರುವುದೂ ಗೋಹತ್ಯೆಗೆ ಸಮಾನವಾದ ಪಾಪ ಗಳೆಂದು ಮಹಾರಾಷ್ಟ್ರರಾಜರೆಲ್ಲರೂ ಎಣಿಸುತಲಿದ್ದರು. ಸಕಲ ಜನರೂ ಆಕೆ ಯನ್ನು ಸಮಾನವಾದ ಪೂಜ್ಯಭಾವದಿಂದ ನೋಡುತಲಿದ್ದರು. ಪೇಷ್ವೆಯವರು ಆಕೆಯನ್ನು ಹೇಗೆ ಸನ್ಮಾನಿಸುತಲಿದ್ದರೋ, ಹಾಗೇ ಹೈದರಾಬಾದು ನಿಜಾಮನೂ, ಮೈಸೂರು ಟೀಪ್ಪುಸುಲ್ತಾನನೂ ಸನ್ಮಾನಿಸುತಲಿದ್ದರು. ಭಾರತೀಯರಂತೆ, ಯವ ನರೂ ಆಕೆಯು ಚಿರಜೀವಿನಿಯಾಗಿರ ಬೇಕೆಂತಲೂ, ಆಕೆಯ ರಾಜ್ಯವು ಅಭಿವೃದ್ಧಿ ಯನ್ನು ಹೊಂದಬೇಕೆಂತಲೂ ಈಶ್ವರನನ್ನು ಪ್ರಾರ್ಥಿಸುತಲಿದ್ದರು. ಸ್ತ್ರೀಯಾ ದರೂ ಈಕೆಯಲ್ಲಿ ದುರಭಿಮಾನವಿರಲಿಲ್ಲ. ಸ್ವಧರ್ಮದಲ್ಲಿ ವಿಶೇಷ ಭಕ್ತಿಯಿ ದ್ದರೂ, ಪರಧರ್ಮಾವಲಂಬಿಗಳನ್ನು ಈಕೆಯು ಹಿಂಸಿಸುತ್ತಿರಲಿಲ್ಲ. ಧರ್ಮದ ಲ್ಲಿಯೂ ಪರಮಾರ್ಥವಿಚಾರದಲ್ಲಿಯೂ ಈಕೆಯು ಸದಾಮುಗ್ಧೆಯಾಗಿದ್ದರೂ ಪ್ರಜಾ ಕಲ್ಯಾಣವಿಷಯವನ್ನು ಎಂದೂ ಅಲಕ್ಷ್ಯಮಾಡಿದವಳಲ್ಲ. ಅತ್ಯಂತ ದಕ್ಷತೆಯಿಂದಲೂ, ಕರ್ತೃತ್ವಶಕ್ತಿಯಿಂದಲೂ ಅಹಲ್ಯಾಬಾಯಿಯು ರಾಜ್ಯವನ್ನು ಪಾಲಿಸಿದಳು.

ನಿಷ್ಪಾಪಟ್ಯವೂ, ಸದಸದ್ವಿಚಾರವೂ, ಮನುಷ್ಯನಿಗೆ ಇರಬೇಕಾದ ನೀತಿಯೂ ಈಕೆಯಲ್ಲಿ ನೆಲಸಿದ್ದುವು. ತನ್ನಲ್ಲಿ ದೋಷವಿಲ್ಲದಿದ್ದರೂ, ಇತರರಲ್ಲಿರುವ ಸ್ವಾಭಾ ವಿಕ ದೋಷವನ್ನು ಈಕೆಯು ಕ್ಷಮಿಸುತಲಿದ್ದಳು. ಈಕೆಯ ವಿಷಯದಲ್ಲಿ ಜನರು ಹೇಳುವುದು ಅತಿಶಯೋಕ್ತಿಯಾಗಿರಬಹುದೆಂದು ಎಣಿಸಿ, ದೋಷೈಕದೃಷ್ಟಿಯಿಂದ ನಾನು ವಿಚಾರಿಸಲು, ಆಕೆಯಲ್ಲಿ ಪ್ರಜೆಗಳಿಗಿರುವ ಪೂಜ್ಯಭಾವವು ಸುಳ್ಳೆಂಬುದಕ್ಕೆ ನನಗೆ ಆಧಾರವೇ ಸಿಕ್ಕಲಿಲ್ಲ. ಜನರು ಈಕೆಯನ್ನು ದೇವತೆಯೆಂದು ಭಾವಿಸಿ, ಈಕೆಯ ನಾಮಕ್ಕೆ ಸಾಧುಗಳಿಗೆ ಮಾಡುವ ಸನ್ಮಾನವನ್ನು ಮಾಡುತ್ತಾರೆ. ಪರಮ ಪವಿತ್ರರಾದ, ವಿಚಾರಪರರಾದ ಪ್ರಭುಶ್ರೇಷ್ಠರಲ್ಲಿ ಅಹಲ್ಯಾಬಾಯಿಯು ಒಬ್ಬಳು," ಎಂದು ಬರೆದಿರುವುದನ್ನು ಉದಾಹರಿಸಿರುವೆನು.

ಕನ್ಯಾವಿರಹ.—ಅಹಲ್ಯಾಬಾಯಿಗೆ ಮುಂಚಾಬಾಯಿ ಎಂಬ ಪುತ್ರಿಯಿದ್ದ ಳೆಂದು ವಾಚಕರಿಗೆ ಗೊತ್ತಿರಬಹುದು. ಈಕೆಯನ್ನು ಮುಕ್ತಾಬಾಯಿ ಎಂತಲೂ ಕರೆಯುತಲಿದ್ದರು. ಅಹಲ್ಯಾಬಾಯಿಯು, ಈಕೆಗೆ ವಿವಾಹವನ್ನು ಮಾಡಿ ಅಳಿ ಯನನ್ನು ಮನೆಯಲ್ಲಿಯೇ ಇರಿಸಿಕೊಂಡಿದ್ದಳು. ಈತನು ಬಹುದಿವಸಗಳು ಜೀವಿ ಸಿದ್ದು, ಅಹಲ್ಯಾಬಾಯಿಯ ಮರಣಕ್ಕೆ ಸ್ವಲ್ಪ ದಿವಸಗಳಿಗೆ ಪೂರ್ವದಲ್ಲಿ ಕಾಲವಾ ದನು. ಪತಿಯು ಮೃತನಾದೊಡನೆಯೇ ಮುಕ್ತಾಬಾಯಿಯು ಅನುಗಮನಕ್ಕೆ ಸಿದ್ಧಿಯಾದಳು. ಅಹಲ್ಯಾಬಾಯಿಯು ಮಗಳನ್ನು ಸಹಗಮನ ಮಾಡಬೇಡ ವೆಂದು ಬಹುವಿಧವಾಗಿ ಕೇಳಿಕೊಂಡಳು. ಆದರೆ ಮುಕ್ತಾಬಾಯಿಯು ತಾಯ ಮಾತನ್ನು ಕೇಳದೆ ಅನುಗಮನವನ್ನು ಮಾಡಿಬಿಟ್ಟಳು. ಮಗಳೂ, ಅಳಿಯನೂ ಮೃತರಾದ ಕೂಡಲೆ ಅಹಲ್ಯಾಬಾಯಿಗೆ ಮನೋವ್ಯಾಧಿಯು ಸಂಭವಿಸಿತು. ವಾರ್ಧಿಕ್ಯ, ರಾಜ್ಯಭಾರಶ್ರಮ ಉಪವಾಸ, ವ್ರತಗಳು, ಕನ್ಯಾವಿರಹದುಃಖ ಮೊದ ಲಾದುವು ಏಕೀಭವಿಸಿ ಈಕೆಯನ್ನು ಕ್ರಮೇಣ ಕ್ಷೀಣದೆಸೆಗೆ ತರಲಾರಂಭಿಸಿದವು. ಕೊನೆಗೆ ಆಕೆಗೆ ಒಂದು ವ್ಯಾಧಿಯು ಸಂಭವಿಸಿ, ಪುಣ್ಯಶ್ಲೋಕಳಾದ ಅಹಲ್ಯಾ ಬಾಯಿಯು ೧೭೯೫ ನೆಯ ಇಸವಿಯಲ್ಲಿ ಜಗದೀಶ್ವರನ ಪಾದಾರವಿಂದವನ್ನು ಸೇರಿಕೊಂಡಳು. ಕುರುಬರ ಕುಲದಲ್ಲಿ ಹುಟ್ಟಿದ್ದರೂ, ಇಷ್ಟು ಸದಾಚಾರ ಸಂಪ ತ್ತನ್ನೂ, ಅಧಿಕಾರವನ್ನೂ ಶ್ರೇಷ್ಠತ್ವವನ್ನೂ ಪಡೆದ ಅಹಲ್ಯೆಯು ನಾರೀರತ್ನವೆಂದು ನುಡಿಯಬೇಕಲ್ಲವೆ!

ನ್ಯಾಯ ಪರಿಪಾಲನೆಯನ್ನು ಮಾಡಿದ್ದರಿಂದ ಕೀರ್ತಿದೇಹರೆಂದು ಖ್ಯಾತಿ ಯನ್ನು ಪಡೆದ ಭೋಜರಾಯ, ಅಶೋಕ, ಅಕ್ಬರುಬಾದಷಹ, ಪೀಟರುದಿಗ್ರೇಟ್ ಮೊದಲಾದ ರಾಜಪುಂಗವರೊಡನೆಯೂ, ಸಾವಿತ್ರಿ, ಸೀತೆ, ವಿಕ್ಟೋರಿಯಾ, ಮೊದಲಾದ ಸ್ತ್ರೀರತ್ನಗಳೊಡನೆಯೂ, ಅಹಲ್ಯಾಬಾಯಿಯು ಸನಾನಳಾದವ ಳೆಂದು ನಿಸ್ಸಂದೇಹವಾಗಿ ಹೇಳಬಹುದು.

ರಾಣೀಗೌರೀ ಲಕ್ಷ್ಮೀಬಾಯಿ.

"ಅಹಹ ಮಹತಾಂ ನಿಸ್ಸೀಮಾನಶ್ಚರಿತ್ರ ವಿಭೂತಯಃ"

ಕುಟುಂಬದಲ್ಲಿರುವ ಹತ್ತು ಜನರ ಸ್ವಭಾವವೂ ಒಂದೇ ರೀತಿಯಾಗಿರುವುದಿಲ್ಲ. ಅವರೆಲ್ಲರ ಕೋರಿಕೆಗಳನ್ನು ನೆರವೇರಿಸಿ, ಅವರೆಲ್ಲರನ್ನೂ ತನ್ನ ಆಜ್ಞೆಯಲ್ಲಿಟ್ಟಿರಬೇಕು. ಕುಟುಂಬದ ಯಜಮಾನನು ಚತುರನೂ, ಧೈರ್ಯವಂತನೂ ಆಗಿದ್ದ ಪಕ್ಷದಲ್ಲಿ, ಆತನೂ ಆತನ ಸಂರಕ್ಷಣೆಯಲ್ಲಿರುವವರೂ ಸುಖವಾಗಿರುವರು. ಇಲ್ಲದಿದ್ದರೆ ಯಜಮಾನನೂ ಗೃಹದಲ್ಲಿರುವವರೂ ದುಃಖಕ್ಕೀಡಾಗಬೇಕಾಗುವುದು. ಆದುದರಿಂದ ಲೋಕದಲ್ಲಿ ಕುಟುಂಬ ರಕ್ಷಣೆಯು ಕಷ್ಟವೆಂದು ಭಾವಿಸುತ್ತಾನೆ. ಹೀಗಿರುವಲ್ಲಿ ಇಂತಹ ಅನೇಕ ಕುಟುಂಬಗಳನ್ನೊಳಗೊಂಡಿರುವ ರಾಜ್ಯದ ರಕ್ಷಣೆಯು ಅಬಲೆಯರಿಗೆ ಸಂಪ್ರಾಪ್ತವಾದರೆ ಅದು ಎಷ್ಟು ಶ್ರಮಸಾಧ್ಯವು ಎಂಬುದನ್ನು ಹೇಳಲವಶ್ಯಕವಿಲ್ಲ. ಆದರೆ ಸ್ತ್ರೀಯರಿಗೆ ರಾಜ್ಯಾಧಿಕಾರವು ದೊರೆತಾಗ, ಅವರು ಪುರುಷರಿಗಿಂತಲೂ ಅತ್ಯಂತ ವಿಚಕ್ಷಣೆಯಿಂದ ರಾಜ್ಯವನ್ನಾಳಿದರೆಂದು ತಿಳಿದು ಬಂದಿದೆ.

ಮಲಬಾರು ದೇಶದಲ್ಲಿ ತಿರುವಾಂಕೂರೆಂದೂ, ಕೊಚ್ಚಿಯೆಂದೂ ಎರಡು ಸಂಸ್ಥಾನಗಳಿರುವುವು. ಅವುಗಳಲ್ಲಿ ತಿರುವಾಂಕೂರು ರಾಜ್ಯವು ಅತಿ ಪ್ರಾಚೀನ ಕಾಲದಿಂದಲೂ ದಾನಧರ್ಮಗಳ ವಿಷಯದಲ್ಲಿ ವಿಖ್ಯಾತಿಯನ್ನು ಹೊಂದಿದೆ. ತಿರುವಾಂಕೂರು ಪ್ರಜೆಗಳ ಆಚಾರ ವ್ಯವಹಾರಗಳೇ ಒಂದುವಿಧ. ನಮ್ಮ ಆಚಾರಗಳೇ ಬೇರೊಂದು ವಿಧ.

ಆ ದೇಶದಲ್ಲಿ ನಮ್ಮ ದೇಶದಂತೆ ತಂದೆಯ ಆಸ್ತಿಯು ಮಗನಿಗೆ ಸೇರದೆ ಸೋದರಳಿಯನಿಗೆ ಸೇರುವುದು. ಸೋದರಳಿಯನಿಲ್ಲದಿದ್ದರೆ ಸೋದರ ಸೊಸೆಗೂ ಆಕೆಯ ಸಂತತಿಗೂ ಬರುವುದು. ಹೀಗೆ ಅಲ್ಲಿ ರಾಜ್ಯದ ಹಕ್ಕು ಕನ್ಯಾವಂಶದವರಿಗೇ ಹೊರತು ಪುತ್ರಸಂತತಿಗೆ ದೊರೆವುದಿಲ್ಲ. ರಾಜಪುತ್ರಿಯು ಒಂಭತ್ತು ವರ್ಷದವಳಾದ ಒಡನೆ ಆಕೆಗೆ ತಾಳಿಕಟ್ಟುವುದೆಂಬ ಒಂದು ವಿವಾಹವಿಧಿಯನ್ನು ನಡೆಸುವರು. ಅದರಲ್ಲಿ ವರನು ಇರುವುದಿಲ್ಲ. ಪುರೋಹಿತನೇ ಹುಡುಗಿಗೆ ಮಂಗಳಸೂತ್ರವನ್ನು ಕಟ್ಟುವನು. ರಾಜಕನ್ಯೆಗೆ ಯೌವನ ದೆಶೆಯು ಪ್ರಾಪ್ತವಾದ ಬಳಿಕ ಒಬ್ಬ ನಂಬೂರಿ ಬ್ರಾಹ್ಮಣನನ್ನು ಕರೆತಂದು ಈಕೆಗೆ ವಿವಾಹವನ್ನು

ಮಾಡುವರು. ಈತನನ್ನು 'ಕೋವಿಲತಂಬೂರ್ಣಾ' ಎಂದರೆ ರಾಜಭವನದ ಮಹಾರಾಜನೆಂದು ಕರೆಯುವರು. ಈ ದಂಪತಿಗಳ ಮಕ್ಕಳಿಗೆ ರಾಜ್ಯವು ದೊರೆಯುವುದು. ಪ್ರಭುತ್ವವನ್ನು ಮಾಡುವ ರಾಜನ ಪತ್ನಿಯು ರಾಣಿಯಲ್ಲ. ಆ ರಾಜನ ಪುತ್ರನು ಯುವರಾಜನಾಗುವುದಿಲ್ಲ. ಆ ರಾಜಪುತ್ರನಿಗೆ ಅವನ ಸೋದರಮಾವನ ಆಸ್ತಿಯು ಲಭಿಸುವುದೇ ಹೊರತು ರಾಜ್ಯವು ಲಭಿಸುವುದಿಲ್ಲ. ಇಷ್ಟು ಸಂಗತಿಯು ಜ್ಞಾಪಕದಲ್ಲಿದ್ದರೆ ಈ ಚರಿತ್ರೆಯನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ವಂಚಿಪಾಲಬಲರಾಮ ಶರ್ಮನು ತಿರುವಾಂಕೂರು ರಾಜ್ಯವನ್ನು ಪಾಲಿಸುತಲಿದ್ದನು. ಪರಿಪಾಲನ ಸಾಮರ್ಥ್ಯವಿಲ್ಲದವನಾದುದರಿಂದ, ಈತನ ರಾಜ್ಯದಲ್ಲಿ ಬಡವರಿಗೆ ಬಹು ಅನ್ಯಾಯವುಂಟಾಗುತಲಿತ್ತು. ದೊಡ್ಡ ಅಧಿಕಾರಿಗಳಿಗೆ ತಮ್ಮತಮ್ಮ ಕೆಲಸಗಳಲ್ಲಿ ಅಲಕ್ಷ್ಯ. ಚಿಕ್ಕ ಅಧಿಕಾರಿಗಳ ಲೆಕ್ಕ ಮುಂತಾದುವುಗಳನ್ನು ವಿಚಾರಿಸುವವರಿಲ್ಲ. ಆದುದರಿಂದ ರಾಜನಿಗೆ ಕಂದಾಯಗಳು ಸರಿಯಾಗಿ ಬಾರದೆ ರಾಜ್ಯವು ದಿನದಿನಕ್ಕೆ ಕ್ಷೀಣದೆಶೆಗೆ ಬರುತಲಿತ್ತು. ಈಸ್ಟಿಂಡಿಯಾ ಕಂಪೆನಿಯವರು ರಾಜ್ಯದ ದುಸ್ಥಿತಿಯನ್ನು ನೋಡಿ, "ನೀವು ರಾಜ್ಯದ ಬಂದೋಬಸ್ತನ್ನು ಆರು ತಿಂಗಳಲ್ಲಿ ಕ್ರಮಪಡಿಸದಿದ್ದರೆ ರಾಜ್ಯವ್ಯವಹಾರಗಳನ್ನು ನಾವು ನೋಡಿಕೊಳ್ಳುವೆವು," ಎಂದು ಬಲರಾಮಶರ್ಮನಿಗೆ ತಿಳಿಯಪಡಿಸಿದರು. ಇದರಿಂದ ದೊರೆಯು ಚಿಂತಾಕ್ರಾಂತನಾಗಿ ಕೆಲವು ದಿವಸಗಳಲ್ಲಿ ಪರಲೋಕಗತನಾದನು. ದೊರೆಯ ತಾಯಿಯೂ ಅಕ್ಕನಾದ ಗೌರೀಬಾಯಿಯೂ ತತ್ಪೂರ್ವವೇ ಮೃತರಾಗಿದ್ದರು. ಗೌರೀಬಾಯಿಗೆ ಪುತ್ರ ಸಂತಾನ ವಿರಲಿಲ್ಲ. ಆಕೆಗೆ ಇಬ್ಬರು ಪುತ್ರಿಯರು ಇದ್ದರು. ಅವರು ಇನ್ನೂ ವಿವಾಹಿತೆಯರಾಗಿರಲಿಲ್ಲ. ಆದಕಾರಣ ಗೌರಿಬಾಯಿಯ ಪ್ರಥಮ ಪುತ್ರಿಯಾದ ಲಕ್ಷ್ಮೀಬಾಯಿಯು ರಾಜ್ಯವನ್ನು ಪಾಲಿಸಬೇಕೆಂತಲೂ, ಆಕೆಗೆ ಪುತ್ರನು ಹುಟ್ಟಿದರೆ ಆ ಬಾಲಕನು ರಾಜ್ಯಕ್ಕೆ ಹಕ್ಕುದಾರನಾಗುವನೆಂತಲೂ ಕಂಪೆನಿಯವರು ಏರ್ಪಾಟುಮಾಡಿದರು. ಲಕ್ಷ್ಮೀಬಾಯಿಯೂ, ಆಕೆಯ ತಂಗಿಯಾದ ಪಾರ್ವತೀಬಾಯಿಯೂ ದೇಶಭಾಷೆಯನ್ನೂ ಸಂಸ್ಕೃತವನ್ನೂ ತಿಳಿದು ಸುಶೀಲೆಯರೆನಿಸಿದ್ದರು. ಲಕ್ಷ್ಮೀಬಾಯಿಯು ಇಪ್ಪತ್ತು ವಯಸ್ಸಿನ ಯುವತಿಯಾದರೂ ಯುಕ್ತಾಯುಕ್ತ ವಿಚಕ್ಷಣೆಯುಳ್ಳವಳಾಗಿಯೂ, ದೀರ್ಘಾಲೋಚನ ಪರಳಾಗಿಯೂ ಇದ್ದುದರಿಂದ, ಕರ್ನಲ್ ಮೆಕಾಲೆದೆರೆಯು, "ಚಿಕ್ಕವಳಾದರೂ, ತಿರುವಾಂಕೂರುರಾಜ್ಯದ ದುಃಸ್ಥಿತಿಯನ್ನು ತೊಲಗಿಸಿ, ರಾಜ್ಯವನ್ನು ಉನ್ನತಸ್ಥಿತಿಗೆ ತರಲು ಯೋಗ್ಯವಾದ ಸದ್ಗುಣಗಳು ಈಕೆಯಲ್ಲಿವೆ," ಎಂದು ಕಂಪೆನಿಯವರಿಗೆ ತಿಳಿಸಿದನು. ಕಂಪೆನಿಯವರು ಅದಕ್ಕೆ ಸಮ್ಮತಿಸಿ, ಲಕ್ಷ್ಮೀಬಾಯಿಯ ಸಿಂಹಾಸನಾರೋಹಣಮಹೋತ್ಸವವೆನ್ನು ಯಥಾವಿಧಿಯಾಗಿ ನಡೆಸುವುದಕ್ಕೆ ಆತನನ್ನೇ ನಿಯಮಿಸಿದರು. ಇಷ್ಟರಲ್ಲಿ ಲಕ್ಷ್ಮೀಬಾಯಿಯ ಜ್ಞಾತಿಗಳು, ತಮಗೆ ಸಿಂಹಾಸ

ನದ ಮೇಲೆ ಪೂರ್ಣಾಧಿಕಾರವುಂಟೆಂತಲೂ, ಹಕ್ಕುದಾರರು ಇರುವಾಗ ಹೆಂಗಸಿಗೆ ರಾಜ್ಯಾಧಿಕಾರವನ್ನು ಕೊಡಕೂಡದೆಂತಲೂ, ಯುದ್ಧಕ್ಕೆ ಸಿದ್ಧರಾದರು. ಆಮೇಲೆ ರೆಸಿಡೆಂಟು ಕರ್ನಲ್ ಮೆಕಾಲೆಯು ಅವರನ್ನೂ, ಅವರಿಗೆ ಸಹಾಯಕರಾಗಿದ್ದವರನ್ನೂ ಹಿಡಿದು ರಾಜದ್ರೋಹಿಗಳೆಂದು ತಲಚೇರಿಯಲ್ಲಿರುವ ಕಾರಾಗಾರದಲ್ಲಿ ಇಡಿಸಿದನು. ಅವರು ಕೆಲವು ದಿನಗಳನಂತರ ಜೈಂಗಲ್ಪಟ್ಟಿಗೆ ಕಳುಹಿಸಲ್ಪಟ್ಟು ಅಲ್ಲಿಯೇ ಮೃತರಾದರು.

ಶತ್ರುಗಳನ್ನು ಶಿಕ್ಷಿಸಿದನಂತರ ಲಕ್ಷ್ಮೀಬಾಯಿಯ ಪಟ್ಟಾಭಿಷೇಕ ಮಹೋತ್ಸವಕ್ಕೆ ಪ್ರಾರಂಭವಾಯಿತು. ಕರ್ನಲ್ ಮೆಕಾಲೆ ದೊರೆಯು ದೊಡ್ಡ ರಾಜಸಭೆಯನ್ನು ಮಾಡಿದನು. ಸಭೆ ಸೇರಿದ ದಿವಸ, ಆಸ್ಥಾನ ಮಂಟಪವು ಅನೇಕ ಸುಂದರವಾದ ಪದಾರ್ಥಗಳಿಂದ ಅಲಂಕರಿಸಲ್ಪಟ್ಟು ಮನೋಹರವಾಗಿ ಒಪ್ಪುತಲಿತ್ತು. ಆ ಮಹೋತ್ಸವವನ್ನು ನೋಡುವುದಕ್ಕೆ ರಾಜ್ಯದ ಭಿನ್ನಭಿನ್ನ ಪ್ರದೇಶಗಳಿಂದ ಅಸಂಖ್ಯಜನರು ಬಂದಿದ್ದರು. ಮುಖ್ಯರಾದ ಸಾಮಂತರು, ಸರದಾರರು ಸಭಾಸ್ಥಾನವನ್ನು ಸೇರಿ, ಅವರವರನಿಯಮಿತ ಆಸನಗಳಲ್ಲಿ ಆಸೀನರಾದ ಬಳಿಕ, ರಾಜಕನ್ಯೆಯರಾದ ಲಕ್ಷ್ಮೀಪಾರ್ವತಿಯರು ತಮ್ಮ ದೇಶಾಚಾರವನ್ನನುಸರಿಸಿ, ಉತ್ತಮ ವಸ್ತ್ರಾಲಂಕಾರಗಳನ್ನು ಧರಿಸಿ, ಸಭೆಯನ್ನು ಪ್ರವೇಶಿಸಿ, ತಮಗಾಗಿ ನಿಯಮಿಸಲ್ಪಟ್ಟ ಉನ್ನತಾಸನಗಳ ಮೇಲೆ ಕುಳಿತುಕೊಂಡರು. ಬಳಿಕ ಕಂಪೆನಿಯವರ ಪ್ರತಿನಿಧಿಯಾದ ರೆಸಿಡೆಂಟ್ ಕರ್ನಲ್ ಮೆಕಾಲೆ ದೊರೆಯು ನಿಂತುಕೊಂಡು, ಸಭೆಯವರೆಲ್ಲರು ಆಲೈಸುವಂತೆ, "ಕಂಪೆನೀ ಸರ್ಕಾರದವರ ಅನುಮತಿಯಂತೆ, ರಾಣೇಲಕ್ಷ್ಮೀಬಾಯಿಯನ್ನು ತಿರುವಾಂಕೂರು ಸಿಂಹಾಸನದ ಮೇಲೆ ಕುಳ್ಳಿರಿಸುವೆನು," ಎಂದು ಮೃದುಮಧುರ ಗಂಭೀರ ಸ್ವರದೊಡನೆ ಹೇಳಿ, ಸನ್ಮಾನ ಪೂರ್ವಕವಾಗಿ ಲಕ್ಷ್ಮೀಬಾಯಿಯನ್ನು ಉಚ್ಚಸ್ಥಾನದಲ್ಲಿದ್ದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಆ ಸಮಯದಲ್ಲೇ ಸರ್ವಜನರ ಸಮ್ಮತಿಯನ್ನು ಪಡೆದು, ರಾಣಿಗೆ 'ಧರ್ಮವರ್ಧಿನಿ,' ರಾಜರಾಜೇಶ್ವರಿ ಎಂಬ ಬಿರುದುಗಳನ್ನು ಸಹ ಸಂರಂಭದೊಡನೆ ಕೊಟ್ಟನು. ರಾಣಿಗೆ 'ಧರ್ಮವರ್ಧಿನಿ' ಎಂಬ ಬಿರುದು ಏಕೆ ಕೊಡಲ್ಪಟ್ಟಿತು ಎಂಬುದನ್ನು ಇಲ್ಲಿ ಸ್ವಲ್ಪವಿವರಿಸುವೆನು. ತಿರುವಾಂಕೂರು ರಾಜ್ಯಕ್ಕೆ ಅನಂತಶಯನ (ತ್ರಿವೇಂಡ್ರ)ವು ರಾಜಧಾನಿಯು. ಈ ನಗರವು ಮುಖ್ಯವಾದ ಕ್ಷೇತ್ರಗಳಲ್ಲೊಂದಾಗಿದೆ. ಇಲ್ಲಿ ಪದ್ಮನಾಭಸ್ವಾಮಿಯು ಶೇಷಶಯನನಾಗಿರುವನು. ಈ ಪದ್ಮನಾಭಸ್ವಾಮಿಯು ತಿರುವಾಂಕೂರು ರಾಜರ ಕುಲದೇವರು. ರಾಣಿಯವರ ಪೂರ್ವಿಕನಾದ ಮಾರ್ತಾಂಡವರ್ಮನು ಒಂದು ದಿವಸ ತನ್ನ ರಾಜ್ಯವನ್ನೆಲ್ಲ ಈ ದೇವರಿಗೆ ಸಮರ್ಪಿಸಿದನಂತೆ! ಆಗಿನಿಂದಲೂ ಈ ರಾಜರು 'ಪದ್ಮನಾಭಸೇವಕ' ರೆಂತಲೂ, 'ಧರ್ಮವರ್ಧಕ' ರೆಂತಲೂ ತಮಗೆ ಬಿರುದುಗಳನ್ನು ಉಂಟುಮಾಡಿಕೊಂಡರು. ಇವರ ರಾಜ ಮುದ್ರೆಯಲ್ಲಿ 'ಧರ್ಮೋಸ್ಮತ್ಕುಲದೈವತಂ' ಎಂಬ

ವಾಕ್ಯವು ಇರುವುದು. ಆದುದರಿಂದ ರಾಣಿಯವರಿಗೂ ಸಹ 'ಧರ್ಮವರ್ಧಿನಿ' ಎಂಬ ಬಿರುದು ಸಿಂಹಾಸನಾರೋಹಣ ಸಮಯದಲ್ಲಿ ದೊರೆಯಿತು. ಮಹಾ ರಾಣಿಯವರ ಸಂಪೂರ್ಣ ನಾಮವನ್ನು ಮಳೆಯಾಳದಲ್ಲಿ "ಶ್ರೀ ಪದ್ಮನಾಭ ಸೇವಿ ನೀವಂಚಿ ಧರ್ಮವರ್ಧಿನೀ ರಾಜರಾಜೇಶ್ವರೀ ರಾಣೀಗೌರೀ ಲಕ್ಷ್ಮೀಬಾಯಿ," ಎಂದು ಬರೆಯುತ್ತಾರೆ.

ರಾಜ್ಯಾಭಿಷೇಕ ಮುಹೂರ್ತವಾದಬಳಿಕ ರಾಣೀ ಲಕ್ಷ್ಮೀಬಾಯಿಯು ಸಿಂಹಾಸನವನ್ನಿಳಿದು, ಪ್ರಫುಲ್ಲಮುಖದೊಡನೆ ಮೆಕಾಲೆ ದೊರೆಯನ್ನೂ, ಸಕಲ ಸಭ್ಯರನ್ನೂ ಸಂಬೋಧಿಸಿ :—

"ಅನಾದಿಕಾಲದಿಂದಲೂ ನಮ್ಮ ಪೂರ್ವಿಕರಿಂದ ಪಾಲಿಸಲ್ಪಟ್ಟು ಅನಂತರ ಇಂದಿನವರೆಗೂ ಈಸ್ಟಿಂಡಿಯಾ ಕಂಪೆನಿಯವರಿಂದ ರಕ್ಷಿಸಲ್ಪಟ್ಟ ಈ ತಿರುವಾಂಕೂರು ಸಿಂಹಾಸನವು ನನಗೆ ಲಭಿಸುವುದೆಂದು ನಾನು ಸ್ವಪ್ನದಲ್ಲಿಯೂ ಎಣಿಸಿ ಇರಲಿಲ್ಲ. ಪರಲೋಕಗತರಾದ ನಮ್ಮ ಮಾವನವರೆನಿಸಿದ್ದ ಬಲರಾಮಶರ್ಮ ಮಹಾರಾಜರು ಕೇವಲ ಇಪ್ಪತ್ತೊಂಬತ್ತು ವರುಷ ವಯಸ್ಸುಳ್ಳವರು. ಆತನ ಮಾವನು ಪಾಲಿಸಿದಂತೆ ಈತನೂ ಸಹ ದೀರ್ಘಕಾಲ ರಾಜ್ಯಭಾರವನ್ನು ವಹಿಸುವುದಕ್ಕೆ ಪದ್ಮನಾಭಸ್ವಾಮಿಯ ಆಜ್ಞೆಯು ಇಲ್ಲದೆ ಹೋಯಿತು. ಆ ಪದ್ಮನಾಭ ಸ್ವಾಮಿಯ ಆಜ್ಞೆಗೆ ಅನುಸಾರವಾಗಿಯೇ ನನಗೆ ರಾಜ್ಯಪ್ರಾಪ್ತಿಯುಂಟಾದುದರಿಂದ ಆತನ ಆಜ್ಞೆಯು ನನಗೆ ಶಿರಸಾವಾನ್ಯವು. ನಾನು ಕಿರಿಯಳಾದುದರಿಂದ ನನಗೆ ಇಂತಹ ದೊಡ್ಡ ರಾಜ್ಯಕಾರ್ಯಗಳಲ್ಲಿ ಅನುಭವವು ಇಲ್ಲ. ನಮ್ಮೊಡನೆ ಸ್ನೇಹಧರ್ಮವನ್ನು ಬೆಳೆಸಿದಂದಿನಿಂದಲೂ ಈ ತಿರುವಾಂಕೂರು ರಾಜ್ಯವನ್ನು ಹೆತ್ತ ಮಗುವಿನೋಪಾದಿಯಲ್ಲಿ ಕಾಪಾಡುತಲಿರುವ ಆನರಬಿಲ್ ಈಸ್ಟಿಂಡಿಯಾ ಕಂಪೆನಿಯವರು ವಿನಾ ನನಗೆ ಇಂತಹ ಸ್ಥಿತಿಯಲ್ಲಿ ಇನ್ನಾರೂ ಸಹಾಯಕರಿಲ್ಲ. ಆದುದರಿಂದ ಕರ್ನಲ್‌ಯವರೇ! ಈ ದಿನದಿಂದ ನಾನು ನಿಮ್ಮನ್ನು ಸಾಕ್ಷಾತ್ ಸಹೋದರನಂತೆ ಭಾವಿಸಿ, ರಾಜ್ಯದ ಪ್ರತಿಯೊಂದು ಕಾರ್ಯವೂ ನಿಮ್ಮಿಂದಲೇ ನೆರವೇರಿಸಲ್ಪಡುವದೆಂಬ ಭರವಸೆಯುಳ್ಳವಳಾಗಿರುವೆನು. ನಿಮಗೆ ಇದಕ್ಕಿಂತಲೂ ಹೆಚ್ಚಾಗಿ ಹೇಳಬೇಕಾದುದು ಏನೂ ಇಲ್ಲ," ಎಂದು ಮಲಬಾರೀ ಭಾಷೆಯಲ್ಲಿ ಅಸ್ಖಲಿತವಾಗಿ ಸಂಭಾಷಿಸಿದಳು. ಈಕೆಯ ಗಂಭೀರ ಸಂಭಾಷಣೆಯನ್ನೂ ಕೇಳಿ ಸಭಿಕರೆಲ್ಲರು ಆಶ್ಚರ್ಯಾನ್ವಿತರಾದರಂತೆ!

ಲಕ್ಷ್ಮೀಬಾಯಿಯು ಕಿರಿಯಳಾದುದರಿಂದ, ಪ್ರಾಪ್ತವಾದ ಈ ಅಧಿಕಾರವನ್ನು ಹೇಗೆ ನಿರ್ವಹಿಸುವಳೋ ಎಂದು ಪ್ರಜೆಗಳು ಚಿಂತಿಸುತಲಿದ್ದರು. ಆದರೆ ಆಕೆಯ ಸಂಭಾಷಣೆಯನ್ನು ಕೇಳಿದ ಅನಂತರ, ಅಸಮಾನ ಪ್ರಜ್ಞೆಯುಳ್ಳ ಈಕೆಯಿಂದ ನಮಗೆ ಸಂಪೂರ್ಣ ಸುಖವು ದೊರೆವುದೆಂದು ನಿಶ್ಚಯಿಸಿಕೊಂಡರು.

ರಾಜ್ಯಾಭಿಷೇಕಮಹೋತ್ಸವವು ನಡೆದನಂತರ ಲಕ್ಷ್ಮೀಬಾಯಿಯು ದೀನ ದೆಶೆಗೆ ಬಂದಿರುವ ತನ್ನ ರಾಜ್ಯವು ಯಾವ ಸಂಸ್ಕರಣೆಗಳಿಂದ ಉನ್ನತ ಸ್ಥಿತಿಗೆ ಬರಬಹುದು ಎಂದು ಯೋಚಿಸಲಾರಂಭಿಸಿದಳು. ಬಲರಾಮಶರ್ಮನ ಕಾಲ ದಲ್ಲಿ ರಾಜ್ಯವು ಹೀನಸ್ಥಿತಿಗೆ ಬರಲು ಕಾರಣವೇನೆಂದು ವಿಚಾರಿಸಲು, ಉಮನಿ ತಾಂಬೀ ಎಂಬ ಮಂತ್ರಿಯ ದುಶ್ಚೇಷ್ಟೆಗಳಿಂದ ರಾಜ್ಯಕ್ಕೆ ಈದೆಶೆಯುಂಟಾಯಿ ತೆಂದು ರಾಣಿಗೆ ತಿಳಿಯಬಂದಿತು. ಕೂಡಲೆ ಆ ಮಂತ್ರಿಯನ್ನು ಕೆಲಸದಿಂದ ತೆಗೆದುಹಾಕಿದಳು. ಆ ಮೇಲೆ 'ಯೋಗ್ಯನಾದ ಮಂತ್ರಿಯು ದೊರಯುವವರೆಗೂ ಮಂತ್ರಿಯ ಕೆಲಸವನ್ನು ನೀನೇ ನೋಡುತ್ತಿರಬೇಕು' ಎಂದು ಮೆಕಾಲೆಯನ್ನು ಕೇಳಿದಳು. ಅದಕ್ಕೆ ಆತನು ಸಮ್ಮತಿಸಿ ರೆಸಿಡೆಂಟ್‌ಕೆಲಸದ ಜತೆಯಲ್ಲಿ ದಿವಾ ಕೆಲಸವನ್ನೂ ನೋಡುತಲಿದ್ದನು.

ಮೆಕಾಲೆದೊರೆಯು ದಿವಾಗಿರಿಯನ್ನು ಕೈಕೊಂಡೊಡನೆಯೇ, ಆತನು ಮಾಡಬೇಕಾದ ಕೆಲಸವನ್ನು ಕುರಿತು: (೧) ನಮ್ಮ ರಾಜ್ಯದಲ್ಲಿ ಅಧಿಕಾರಿಗಳು ಎಲ್ಲರೂ ತಮ್ಮತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತಲಿದಾರೆಯೇ? ಕೆಳಗಿನ ಅಧಿಕಾರಿಗಳು ಮೇಲಿನ ಅಧಿಕಾರಿಗಳ ಆಜ್ಞೆಯಂತೆ ನಡೆದುಕೊಳ್ಳುವರೇ? ಎಂಬುದನ್ನು ಮೊದಲು ವಿಚಾರಿಸಬೇಕು; (೨) ನ್ಯಾಯಸ್ಥಾನಗಳಲ್ಲಿಯೂ, ಇತರ ಕಚೇರಿಗಳಲ್ಲಿಯೂ ಅವರು ನಿಯಮಿತ ಪ್ರಕಾರವಾಗಿ ಕೆಲಸಗಳನ್ನು ನಡೆ ಸುತಲಿರುವರೋ ಇಲ್ಲವೋ ಎಂಬುದನ್ನು ವಿಚಾರಿಸಿ, ತಕ್ಕುದನ್ನು ಮಾಡಬೇಕು; (೩) ಸಂಸ್ಥಾನದ ಅಧಿಕಾರಿಗಳಲ್ಲಿ ಯಾರಾದರೂ ತಮ್ಮ ಕಾರ್ಯದಲ್ಲಿ ಅಶ್ರದ್ಧೆ ಯುಳ್ಳವರಾಗಿದ್ದರೆ, ಅವರನ್ನು ಜುಲ್ಮಾನೆ ಮೊದಲಾದ ಸ್ವಲ್ಪ ಶಿಕ್ಷೆಗಳಿಂದ ಮಾರ್ಗಕ್ಕೆ ತರಬೇಕೇ ಹೊರತು, ಒಂದೇ ಸಲ ಕೆಲಸದಿಂದ ತೆಗೆದುಹಾಕಿ ಅವ ರಿಗೆ ಅನ್ನಕ್ಕಿಲ್ಲದಂತೆ ಮಾಡಲಾರದು; (೪) ವಸೂಲು ಲೆಕ್ಕಗಳನ್ನು ಸರಿಯಾಗಿ ನೋಡಿ ಹಿಂದಿನ ಬಾಕಿಗಳೆಲ್ಲವನ್ನೂ ವಸೂಲು ಮಾಡಬೇಕು, ಎಂಬ ಈ ವಿಷಯಗಳನ್ನು ಧೀಮತಿಯಾದ ರಾಣಿಯು ಸ್ವಂತವಾಗಿಯೋಚಿಸಿ ಬರೆದಳು. ಈಕೆಯು ರೆಸಿಡೆಂಟ್ ಮೆಕಾಲೆಯನ್ನು ತನ್ನ ಸೋದರನಂತೆ ನಂಬಿ ಆತನಿಂದ ಬಹು ಕಾರ್ಯಗಳನ್ನು ಮಾಡಿಸಿಕೊಂಡುದು ಸತ್ಯವಾದರೂ, ಯಾವ ಕಾರ್ಯ ವನ್ನಾಗಲಿ ತಾನು ಸ್ವಂತವಾಗಿ ಯೋಚಿಸದೆ, ಇತರರು ಹೇಳಿದಂತೆಯೇ ನಡೆಸುತ ಲಿರಲಿಲ್ಲ. ಹೊಸ ಶಾಸನಗಳನ್ನು ಮಾಡುವುದರಲ್ಲಿಯೂ, ಹಳೆಯ ಶಾಸನಗಳನ್ನು ಸಂಸ್ಕರಿಸುವುದರಲ್ಲಿಯೂ, ದೇಶದ ನಾಗರಿಕತೆಯನ್ನು ವೃದ್ಧಿಪಡಿಸುವುದರಲ್ಲಿಯೂ ರಾಣಿಯು ಅನೇಕ ಹೊಸ ಕಲ್ಪನೆಗಳನ್ನು ಮೆಕಾಲೆಗೆ ತಿಳಿಯಪಡಿಸಿದಳು.

ರಾಣಿಯ ಆಜ್ಞೆಯಂತೆ ಮೆಕಾಲೆದೊರೆಯು ಗ್ರಾಮಗ್ರಾಮದ ಅಧಿಕಾರಿ ಗಳಿಗೂ ತಮ್ಮತಮ್ಮ ಕೆಲಸಗಳನ್ನು ಶಾಸನಕ್ಕನುಸಾರವಾಗಿ ನಡೆಯಿಸಬೇಕೆಂದು

ಆಜ್ಞಾಪತ್ರಿಕೆಗಳನ್ನು ಕಳುಹಿಸಿದನು. ಅನಂತರ ಅವರು ತನ್ನ ಆಜ್ಞೆಯಂತೆ ನಡೆಯುತಲಿರುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು, ತಾನೇ ಸ್ವಂತವಾಗಿ ಪ್ರತಿಯೊಂದು ಗ್ರಾಮಕ್ಕೂ ಹೋಗುತಲಿದ್ದನು. ಪ್ರಥಮದಲ್ಲಿ ಆತನಿಗೆ ಅನೇಕ ಸಂಕಟಗಳು ಪ್ರಾಪ್ತವಾದುವು. ಆದರೆ ಆತನು ಅವೆಲ್ಲವನ್ನೂ ಸಹಿಸಿ ಬಹು ಪ್ರಯಾಸದೊಡನೆ ಎಲ್ಲ ವಿಷಯಗಳನ್ನೂ ರಾಣಿಯ ಇಚ್ಛೆಯಂತೆಯೇ ನೆರವೇರಿಸಿದನು. ಬಹು ದಿವಸಗಳಿಂದ ನೌಕರರೆಲ್ಲರೂ ಸೋಮಾರಿಗಳಾಗಿದ್ದುದರಿಂದ, ಅವರು ಮೆಕಾಲೆದೊರೆಯು ಎಂತಹ ಕಠಿನವಾದ ಆಜ್ಞೆಯನ್ನು ಕೊಟ್ಟರೂ ಲಕ್ಷ್ಯ ಮಾಡದೆ ಇದ್ದರು. ಹೀಗೆ ನಿರ್ಭಯರಾಗಿ ನಿದ್ರೆಮಾಡುತಲಿದ್ದವರೆಲ್ಲರನ್ನೂ ರೆಸಿಡೆಂಟನು ಎಚ್ಚರಗೊಳಿಸುತಲಿದ್ದನು. ಕೈಯಲ್ಲಾದಮಟ್ಟಿಗೂ ಅವರನ್ನು ಕೆಲಸದಿಂದ ತೆಗೆದುಹಾಕದೆ, ಚಿಕ್ಕಮಕ್ಕಳಿಗೆ ಬುದ್ಧಿಯನ್ನು ಕಲಿಸುವಂತೆ, ಜುಲ್ಮಾನೆ ಮೊದಲಾದ ಅಲ್ಪಶಿಕ್ಷೆಗಳಿಂದ ಅವರನ್ನು ಮಾರ್ಗಕ್ಕೆ ತರುತಲಿದ್ದನು. ಮೂರ್ಖರಾದ ಕೆಲವರನ್ನು ಮಾತ್ರ ಕೆಲಸದಿಂದ ತೆಗೆದುಹಾಕಬೇಕಾಯಿತು. ಈ ಪ್ರಕಾರವಾಗಿ ಕರ್ನಲ್ ಮೆಕಾಲೆದೊರೆಯ ಮೆಲ್ವಿಚಾರಣೆಯಿಂದ ರಾಜ್ಯಕಾರ್ಯಗಳು ಕ್ರಮವಾಗಿ ನಡೆಯಲಾರಂಭಿಸಿದವು.

ಪೂರ್ವದ ಮಂತ್ರಿಯಾದ ಉಮನಿತಾಂಬೀಯನ್ನು ಕೆಲಸದಿಂದ ತೆಗೆದು ರಾಣಿಯು ರೆಸಿಡೆಂಟನನ್ನು ಆ ಕೆಲಸಕ್ಕೆ ನಿಯಮಿಸಿದುದರಿಂದ ಅವನು ಮೆಕಾಲೆಯನ್ನು ಬಹಳವಾಗಿ ದ್ವೇಷಿಸುತಲಿದ್ದನು. ಒಂದು ಸಮಯದಲ್ಲಿ ಆತನು ಕರ್ನಲ್ ದೊರೆಯನ್ನು ವಿಷಪ್ರಯೋಗದಿಂದ ಕೊಲ್ಲಲು ಯತ್ನಿಸಿದನು. ಈ ವಿಷಯವನ್ನು ರಾಣಿಯು ತಿಳಿದು ಕ್ರಮವಾಗಿ ವಿಚಾರಣೆಯನ್ನು ಮಾಡಿ, ಸಾಕ್ಷಿಗಳಿಂದಲೂ ಆತನು ಅಪರಾಧಿಯೆಂದು ಸ್ಥಿರವಾದ ಬಳಿಕ ಅವನನ್ನು ಚಿಂಗಲಪೇಟೆಯಲ್ಲಿರುವ ಕಾರಾಗೃಹದಲ್ಲಿ ಇಡಿಸಿದಳು. ಆತನು ಅಲ್ಲಿಯೇ ಮೃತನಾದನು.

ಅನಂತರ ರಾಣಿಯು ಫಸೂಲು ಲೆಕ್ಕಗಳನ್ನು ವಿಚಾರಿಸಲು ಆದಾಯ ವೆಷ್ಟೋ ವ್ಯಯವೆಷ್ಟೋ ತಿಳಿದುಕೊಳ್ಳುವುದು ಕಷ್ಟವಾಗಿ ತೋರಿತು. ಈ ಕಷ್ಟತರವಾದ ಲೆಕ್ಕಗಳನ್ನು ತಿರಿಗಿಸಿ ತಿರಿಗಿಸಿ ನೋಡಲಾಗಿ ಈಸ್ಟಿಂಡಿಯಾ ಕಂಪೆನಿಯವರಿಗೂ, ಟಿನವೆಲ್ಲಿ, ಕೋಟಾರ, ಕೊಚ್ಚಿ, ಬೊಂಬಾಯಿ, ಮೊದಲಾದ ಸ್ಥಳಗಳಲ್ಲಿರುವ ಸಾಹುಕಾರರಿಗೂ ಕೊಡಬೇಕಾದ ಸಾಲವು, ಸಂಸ್ಥಾನದ ವರ್ಷಾದಾಯಕ್ಕೆ ಸಮವಾಗಿರುವುದೆಂದು ತಿಳಿಯಬಂತು. ರಾಣಿಯು ಇಂತಹ ದೊಡ್ಡ ಸಾಲವು ತೀರುವ ಬಗೆ ಹೇಗೆ ಎಂದು ಚಿಂತಿಸುತಿರಲು, ಪೂರ್ವದ ಮಂತ್ರಿಯು 'ದೇವಸ್ಥಾನಗಳಲ್ಲಿ ಬಹು ದ್ರವ್ಯವಿದ್ದರೂ ದೇವರಿಗೆ ಪೂಜೆ, ಅರ್ಚನೆ ಮೊದಲಾದುವು ಸರಿಯಾಗಿ ನಡೆಯುವುದಿಲ್ಲವೆಂತಲೂ, ಆ ದ್ರವ್ಯವನ್ನು ಸಂಸ್ಥಾನದ ಕಡೆಗೆ ತೆಗೆದುಕೊಂಡು ದೇವಸ್ಥಾನಗಳ ಉತ್ಸವಗಳನ್ನು ಕ್ರಮವಾಗಿ ನಡೆಸಬೇಕೆಂತಲೂ

ಸೂಚಿಸಿದ ವಿಷಯವು ಸ್ಮೃತಿಗೆ ಬಂದು, ಅದನ್ನು ಸ್ವಾರ್ಥ ಪರಾರ್ಥಗಳಿಗೆ ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಹೇಗೆಂದರೆ ದೇವಸ್ಥಾನಗಳ ದ್ರವ್ಯದಿಂದ ಸಾಲವನ್ನು ತೆಗೆದುಕೊಂಡು ಸಂಸ್ಥಾನವನ್ನು ಋಣ ವಿಮುಕ್ತವಾಗಿ ಮಾಡುವುದು ಸ್ವಾರ್ಥವು. ಸುಮ್ಮನೆ ಪೆಟ್ಟಿಗೆಯಲ್ಲಿದ್ದ ದೇವಸ್ಥಾನಗಳ ದ್ರವ್ಯಕ್ಕೆ ಋಡ್ಡಿಯು ದೊರೆಯುವಂತೆ ಮಾಡುವುದು ಪರಾರ್ಥವು. ತನ್ನ ಅಭೀಷ್ಟವನ್ನು ರೆಸಿಡೆಂಟನಿಗೆ ತಿಳಿಯಪಡಿಸಲು ಆತನು ಸಮ್ಮತಿಸಿ ರಾಣಿಯ ಆಲೋಚನಾಶಕ್ತಿಯನ್ನು ಕೊಂಡಾಡಿದನು. ಕ್ಷಿಪ್ರದಲ್ಲಿಯೇ ರಾಣಿಯು ದೇವಸ್ಥಾನಾಧಿಕಾರಿಗಳಿಲ್ಲರನ್ನೂ ಕರೆಯಿಸಿ ಒಂದು ಸಭೆಯನ್ನು ಮಾಡಿ, ಅವರಿಗೆ ತನ್ನ ಉದ್ದೇಶವನ್ನು ತಿಳಿಸಿ, ಇದರಿಂದ ತನಗೂ ದೇವಸ್ಥಾನಗಳಿಗೂ ಉಂಟಾಗುವ ಲಾಭವನ್ನು ವಿಶದಪಡಿಸಿದಳು. ವಿಷಯವೆಲ್ಲವನ್ನೂ ಕೇಳಿ ಆ ಯಧಿಕಾರಿಗಳು ರಾಣಿಯು ಹೇಳಿದಂತೆ ನಡೆದುಕೊಳ್ಳಲು ಒಪ್ಪಿಕೊಂಡರು. ಅನಂತರ ರಾಣಿಯು ದೇವಸ್ಥಾನಗಳನ್ನು ನೋಡಿಕೊಳ್ಳುವುದಕ್ಕೆ ರೇಡೀರಾವ್ ಅಥವಾ ವೆಂಕಟರಾವ್ ಎಂಬಾತನನ್ನು ನಿಯಮಿಸಿದಳು. ಆತನು ಆ ಕೆಲಸವನ್ನು ಶ್ರದ್ಧೆಯಿಂದ ನೆರವೇರಿಸಿದುದರಿಂದ ಸಂಸ್ಥಾನವು ಅಲ್ಪಕಾಲದಲ್ಲಿಯೇ ಋಣ ಮುಕ್ತವಾಯಿತು.

ಸಾಲವು ತೀರಿದನಂತರ ರಾಣಿಯು ನ್ಯಾಯಸಭೆಗಳನ್ನು ಸಂಸ್ಕರಿಸಲು ಪ್ರಯತ್ನಮಾಡಿದಳು. ಆಕೆಯು ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವಳೂ, ಪೂರ್ವಾಚಾರಪರಾಯಣಳೂ ಆಗಿದ್ದುದರಿಂದ ಮನುಸ್ಮೃತಿ, ಪರಾಶರಸ್ಮೃತಿ, ವಿಜ್ಞಾನೇಶ್ವರ ಮೊದಲಾದ ಪೂರ್ವಧರ್ಮ್ಮಗ್ರಂಥಗಳ, ಮತ್ತು ಇಂಡಿಯಾ ಗವರ್ನರ್‌ಮೆಂಟಿನವರ ಶಾಸನಗಳ ಆಧಾರದಿಂದ ಪ್ರಜೆಗಳಿಗೆ ಹಿತಕರವೆಂದು ತನಗೆ ತೋರಿದ ಕೆಲವು ಶಾಸನಗಳನ್ನು ಬರೆದು ಒಂದು ಶಾಸನಗ್ರಂಥವನ್ನು ರಚಿಸಬೇಕೆಂದು ನಿಶ್ಚಯಿಸಿದಳು. ಆದರೆ ಇಂತಹ ಗ್ರಂಥವನ್ನು ರಚಿಸುವುದಕ್ಕೆ ನ್ಯಾಯಶಾಸ್ತ್ರದಲ್ಲಿ ಪ್ರವೀಣನಾದ ವಿದ್ವಾಂಸನ ಸಹಾಯವು ಅತ್ಯವಶ್ಯಕವೆಂದು ತೋರಿತು. ಇಷ್ಟರಲ್ಲಿ ರಾಣಿ ಲಕ್ಷ್ಮೀಬಾಯಿಗೆ ವಿವಾಹ ಕಾಲವು ಪ್ರಾಪ್ತವಾಯಿತು. ಪೂರ್ವದ ರಾಣಿಯ ಪತಿಗೆ ನೆಂಟನೂ, ಕುಲೀನನೂ, ಬ್ರಾಹ್ಮಣನೂ ಆದ ರಾಜರಾಜವರ್ಮನೆಂಬ ವಿದ್ವಾಂಸನನ್ನು ಈಕೆಯು ವರಿಸಿದಳು. ಈತನು ಚೆಂಗನಾಸೆರಿಯೆಂಬ ಗ್ರಾಮದ ನಿವಾಸಿಯು ಸಿದ್ಧಾಂತಮುಕ್ತಾವಲಿಯೇ ಮೊದಲಾವ ಗ್ರಂಥಗಳನ್ನು ಓದಿ ನ್ಯಾಯಶಾಸ್ತ್ರವಿಶಾರದನೆನಿಸಿದ್ದನು. ಈತನಿಗೂ ರಾಣಿಗೂ ವಿವಾಹವು ನಡೆದು ಆ ಬ್ರಾಹ್ಮಣನಿಗೆ 'ಕೋಯಿಲತಂಬೂರ್ರಾ' ಎಂಬ ಪದವಿಯು ಉಂಟಾಯಿತು. ಪಾಠಕರೇ! ಯುವತೀ ವಿವಾಹವು ಮಲಬಾರುದೇಶದಲ್ಲಿ ಪ್ರಚಾರದಲ್ಲಿರುವುದರಿಂದ ಲಕ್ಷ್ಮೀಬಾಯಿಗೆ ಗುಣವಯೋರೂಪವಿದ್ಯೆಗಳಲ್ಲಿ ಸಮಾನನಾದ ಪತಿಯು ದೊರೆತನಲ್ಲವೆ! ನಮ್ಮ ದೇಶದಲ್ಲಿಯೂ ಪ್ರೌಢಾವಿವಾಹಗಳು ನಡೆದರೆ, ಈಗ

ಬಾಲ್ಯವಿವಾಹಗಳ ದೆಸೆಯಿಂದ ನಮ್ಮ ದೇಶಕ್ಕೆ ಉಂಟಾಗಿರುವ ನಷ್ಟಗಳು ಬಹುಮಟ್ಟಿಗೆ ಕಡಮೆಯಾಗುವುವಲ್ಲವೆ!

ಧೀಮತಿಯಾದ ರಾಣಿಯು ಕೋಯಿಲತಂಬೂರಾನನ ಸಹಾಯದಿಂದ, ತನ್ನ ಗ್ರಂಥವನ್ನು ಉತ್ಸಾಹದೊಡನೆ ಶೀಘ್ರವಾಗಿ ಬರೆಯುತ್ತ, ಮಧ್ಯೆಮಧ್ಯೆ ಅದನ್ನು ಮೆಕಾಲೆದೊರೆಗೆ ತೋರಿಸಿ ಆತನ ಸಮ್ಮತಿಯನ್ನು ಪಡೆಯುತ್ತ, ಆ ಗ್ರಂಥವನ್ನು ಸಂಪೂರ್ಣಮಾಡಿ ಅದಕ್ಕೆ 'ಸತ್ತಾವರ್ಧಕ' ಎಂದು ಹೆಸರನ್ನು ಇಟ್ಟಳು. ೧೮೧೨ ನೆಯ ಇಸವಿಯ ಮೊದಲ್ಗೊಂಡು ರಾಜ್ಯದ ಸರ್ವ ವ್ಯಾಪಾರಗಳೂ ಈ ಸತ್ತಾವರ್ಧಕವನ್ನು ಅನುಸರಿಸಿ ನಡೆಯುತಲಿತ್ತು. ರಾಜ್ಯದಲ್ಲಿ ಅನೇಕ ನ್ಯಾಯಸ್ಥಾನಗಳು ಸ್ಥಾಪಿಸಲ್ಪಟ್ಟವು. ಅವುಗಳಲ್ಲಿ ಸಂಸ್ಕೃತ, ಮಳೆಯಾಳ, ಇಂಗ್ಲೀಷು ಭಾಷೆಗಳಲ್ಲಿ ಪ್ರವೀಣರಾದವರನ್ನು ನ್ಯಾಯಾಧಿಕಾರಿಗಳನ್ನಾಗಿ ನಿಯಮಿಸಿದಳು. ಕೋಚೀ' ನಿವಾಸಸ್ಥನಾಗಿ, ಪಂಡಿತೋತ್ತಮನೆನಿಸಿದ ರಾಮ್ಮಮಾನ್ಮ ಎಂಬಾತನನ್ನು ಮುಖ್ಯನ್ಯಾಯ ಸಭೆಯಲ್ಲಿ ನ್ಯಾಯಾಧೀಶನನ್ನಾಗಿ ನಿಯಮಿಸಿದಳು. ಅನಂತರ ಆಕೆಯು ಒಂದು ಶಾಸನವನ್ನು ನಿರ್ಮಿಸಿ ಗುಲಾಮರ ವ್ಯಾಪಾರವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಳು. ಪ್ರಜೆಗಳಿಗೆ ಕಷ್ಟವಾದ ಕಂದಾಯವನ್ನು ಕಡಮೆ ಮಾಡಿ, ಉಪ್ಪಿನ ವ್ಯಾಪಾರವನ್ನು ವೃದ್ಧಿಮಾಡಿದಳು. ಹೀಗೆ ರಾಜ್ಯವು ದಿನೆದಿನೆ ಅಭಿವೃದ್ಧಿಯನ್ನು ಪಡೆಯುತಲಿತ್ತು.

ರಾಣೀ ಲಕ್ಷ್ಮೀಬಾಯಿಯು ಪದ್ಮನಾಭಸ್ವಾಮಿಯಲ್ಲಿ ವಿಶೇಷ ಭಕ್ತಿಯುಳ್ಳವಳಾಗಿದ್ದಳು. ವಂಶಪರಂಪರೆಯಾಗಿ ನಡೆದುಬರುತಲಿದ್ದವುಗಳಿಗಿಂತಲೂ ಹೆಚ್ಚಾದ ದಾನಧರ್ಮಗಳನ್ನು ಮಾಡಬೇಕೆಂದು ಪ್ರಯತ್ನಮಾಡುತಲಿದ್ದಳು. ಆದರೆ ದಿವಾನನಾಗಿರುವ ಮೆಕಾಲೆಯು ಆಂಗ್ಲೇಯನಾದುದರಿಂದ ದಾನಧರ್ಮಗಳ, ಅನ್ನಸತ್ರಗಳ ವೆಚ್ಚವೆಲ್ಲವೂ ವ್ಯರ್ಥವೆಂದು ಎಣಿಸುತಲಿದ್ದನು. ಆದಕಾರಣ ಧರ್ಮಸಂಬಂಧವಾದ ಕಾರ್ಯಗಳಲ್ಲಿ ಮೆಕಾಲೆಯು ಉದಾಸೀನನಾಗಿದ್ದನು. ಇದರಿಂದ ರಾಜ್ಯದ ಧರ್ಮಾದಾಯ ವಿಷಯದಲ್ಲಿ ಬಹು ಅವ್ಯವಸ್ಥೆಯು ನಡೆಯುತಲಿತ್ತು. ಪ್ರಜೆಗಳಿಗೂ ಯಾತ್ರಿಕರಿಗೂ ಕಷ್ಟವು ಉಂಟಾಗುತಲಿತ್ತು. ಒಂದು ದಿನ ರಾಮೇಶ್ವರಕ್ಕೆ ಹೋಗುವ ಕೆಲ ಯಾತ್ರಿಕರು ರಾಣಿಯ ಸಮೀಪಕ್ಕೆ ಬಂದು ತಮಗೆ ಅನ್ನಪಾನಗಳು ಸಿಕ್ಕುವುದಿಲ್ಲವೆಂತಲೂ, ಇದನ್ನು ಕುರಿತು ದಿವಾನರು ಉದಾಸೀನರಾಗಿರುವರೆಂತಲೂ ಹೇಳಿಕೊಂಡರು. ರಾಣಿಯು ಅವರಿಗೆ ಸ್ವಲ್ಪ ದ್ರವ್ಯವನ್ನು ಕೊಟ್ಟು ಕಳುಹಿಸಿ:

"ದಿವಿ ೧೯ ಎಡವಂ ಮಲಬಾರೀವರ್ಷಗಳು ೧೪೬."

"ನನಗೆ ಜೇಷ್ಠ ಸೋದರ ಸಮಾನರಾದ ಕರ್ನಲು ದೊರೆಯವರಿಗೆ,—ನೀವು ಸಕಲಕಾರ್ಯಗಳನ್ನು ವಿಚಕ್ಷಣೆಯಿಂದ ನೆರವೇರಿಸುತಲಿರುವುದರಿಂದಲೂ,

ನಿಮಗೆ ದೇಶದ ಮರ್ಯಾದೆಯೂ ಸ್ಥಿತಿಯೂ ಆಚಾರವೂ ರೂಢಿಯೂ ಸಂಪೂರ್ಣವಾಗಿ ತಿಳಿದಿರುವುದರಿಂದಲೂ, ಅವುಗಳನ್ನು ಕುರಿತು ನಾನು ನಿಮಗೆ ಬರೆಯುತಕ್ಕ ಅವಶ್ಯಕತೆಯು ಇಲ್ಲ. ನಮ್ಮ ಪೂರ್ವಿಕರು ನಿಯಮಿಸಿರುವ ಪದ್ಧತಿಗಳೂ, ದಾನಧರ್ಮಗಳೂ, ಆಚಾರವ್ಯವಹಾರಗಳೂ, ಅವರ ದಯಾಗುಣವನ್ನು ತೋರಿಸತಕ್ಕವುಗಳಾಗಿಯೂ, ಪ್ರಜೆಗಳಿಗೆ ಹಿತಕರಗಳಾಗಿಯೂ ಇರುವುದರಿಂದ ಅವುಗಳನ್ನು ನೀವು ತಪ್ಪದೆ ನಡೆಸಬೇಕೆಂಬುದು ನನ್ನ ಬಿನ್ನಹ. ರಾಮೇಶ್ವರಕ್ಕೆ ಹೋಗುವ ಯಾತ್ರೀಕರಿಗೆ ಅನ್ನಪಾನಗಳೂ ದಕ್ಷಿಣೆಯೂ ಸಿಕ್ಕುವುದಿಲ್ಲವೆಂಬ ಮೊರೆಯು ನನಗೆ ಶ್ರುತವಾಯಿತು. ಈ ವಿಷಯದಲ್ಲಿ ನೀವು ತಕ್ಕ ಏರ್ಪಾಟುಗಳನ್ನು ಮಾಡುವಿರೆಂದು ನಂಬುತ್ತೇನೆ. ಮಹಾಸಿಂಗು ಕೆಲ್ಲಾದಾರನಿಗೆ ಸಹ ಈ ವಿಷಯವನ್ನು ಸರಿಮಾಡುವಂತೆ ಆಜ್ಞೆಯನ್ನು ಕಳುಹಿಸಿದೇನೆ. ಉತ್ತರ ಪ್ರತ್ಯುತ್ತರಗಳಿಂದ ಕಾರ್ಯಗಳು ಕ್ಷಿಪ್ರದಲ್ಲಿ ನೆರವೇರುತ್ತವೆ. ನಾನು ಸ್ತ್ರೀಯಾದುದರಿಂದ ನಿಮ್ಮನ್ನು ಭ್ರಾತೃವೆಂದು ನಂಬಿ ರಾಜ್ಯದ ಸರ್ವಕಾರ್ಯಗಳನ್ನೂ ವಿಶ್ವಾಸದೊಡನೆ ನಿಮಗೆ ಸಮರ್ಪಿಸಿದೆನು. ಆದುದರಿಂದ ರಾಜ್ಯದಲ್ಲಿ ನಡೆಯಬೇಕಾದ ದಾನಧರ್ಮಗಳ ವಿಷಯದಲ್ಲಿಯೂ ನನ್ನ ಮಾತನ್ನು ಸನ್ಯಾಸಿಸಿ, ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡುವಿರಿ ಎಂತಲೂ ನಂಬುತ್ತೇನೆ.—(ರುಜು) ಲಕ್ಷ್ಮೀಬಾಯಿ," ಎಂದು ಮೆಕಾಲೆಗೆ ಬರೆದು ಕಳುಹಿಸಿದಳು.

ರಾಣಿಯು ತಾನು ನಂಬಿದ್ದ ಧರ್ಮವನ್ನು ಪಾಲಿಸುವುದರಲ್ಲಿ ಎಷ್ಟು ತತ್ಪರಳಾಗಿದ್ದಳೋ, ಪ್ರಸಂಗೋಚಿತವಾಗಿ ಆಂಗ್ಲೇಯರಲ್ಲಿ ಸಹಸ್ಪತೇಜೋ ಬಲವನ್ನು ನಿರ್ಭಯವಾಗಿ ಹೇಗೆ ಪ್ರಕಟಿಸುತಲಿದ್ದಳೋ ಆ ಸಂಗತಿಯನ್ನು ಈ ಲೇಖನದಿಂದ ತಿಳಿಯಬಹುದು.

ಶುಕ್ಲಪಕ್ಷದ ಚಂದ್ರನಂತೆ ತಿರುವಾಂಕೂರು ರಾಜ್ಯವು ದಿನೆದಿನೆ ಅಭಿವೃದ್ಧಿಯನ್ನು ಹೊಂದುತಿರಲು ೧೮೧೩ ನೆ ಇಸವಿಯಲ್ಲಿ ಲಕ್ಷ್ಮೀಬಾಯಿಗೆ ಪುತ್ರನು ಜನ್ಮಿಸಿದನು. ಸಿಂಹಾಸನಕ್ಕೆ ಅಧಿಪತಿಯು ಜನ್ಮಿಸಿದುದರಿಂದ ರಾಜ್ಯದಲ್ಲೆಲ್ಲ ದೊಡ್ಡ ಉತ್ಸವವು ನಡೆಯಿತು. ಪ್ರತಿಗೃಹದಲ್ಲಿಯೂ ಹಬ್ಬವನ್ನು ಮಾಡಿಕೊಂಡರು. ಹನ್ನೆರಡನೆಯ ದಿವಸ ನಾಮಕರಣ ಮಹೋತ್ಸವವನ್ನು ಬೆಳಸಿ, 'ರಾಮವರ್ಮ ಮಹಾರಾಜ' ನೆಂದು ಹೆಸರಿಟ್ಟರು. ಹಿಂದೂ ಧರ್ಮಶಾಸ್ತ್ರ ಪ್ರಕಾರವಾಗಿ ಇನ್ನು ಮೇಲೆ ಈ ಶಿಶುನೇ ರಾಜ್ಯಕ್ಕೆ ಒಡೆಯನೆಂದು ಪ್ರಸಿದ್ಧಪಡಿಸಿದರು. ಅನಂತರ ೧೮೧೪ ನೆಯ ಇಸವಿಯಲ್ಲಿ ಒಂದು ಶುಭಮುಹೂರ್ತದಲ್ಲಿ ರಾಜ್ಯಾಭಿಷೇಕ ಮಹೋತ್ಸವವನ್ನು ಮಾಡಿದರು. ದೇಶಾಚಾರವನ್ನನುಸರಿಸಿ ಆ ದಿವಸ ರಾಜಗೃಹದಲ್ಲಿ ಒಂದು ದೊಡ್ಡ ದರ್ಬಾರು ನಡೆಯಿತು. ರಾಣಿಯು ಶಿಶುವನ್ನು ಉತ್ತಮ ವಸ್ತ್ರಭೂಷಣಗಳಿಂದ ಅಲಂಕರಿಸಿ, ತಾನೂ ಸಹ ಅಲಂಕೃತಳಾಗಿ ಬಾಲರಾಜನನ್ನು

ಎತ್ತಿಕೊಂಡು ಸಭಾಮಂಟಪಕ್ಕೆ ಪ್ರವೇಶಿಸಿದಳು. ಸಭಾಜನರೆಲ್ಲರೂ ತಮ್ಮ ತಮ್ಮ ನಿಯಮಿತ ಸ್ಥಳಗಳನ್ನಲಂಕರಿಸಿದ ಮೇಲೆ ರಾಣಿಯು ಪುತ್ರನನ್ನು ಎತ್ತಿಕೊಂಡು ಸಿಂಹಾಸನವನ್ನಿಳಿದು ಪ್ರಸನ್ನವದನೆಯಾಗಿ ಗಂಭೀರಧ್ವನಿಯಿಂದ: "ಆನರಬಿಲ್ ಈಸ್ಟ್‌ಇಂಡಿಯಾ ಕಂಪೆನಿಯವರು ಸರ್ವದಾ ನ್ಯಾಯಮಾರ್ಗದಲ್ಲಿ ಪ್ರವರ್ತಿಸುವವರಾದಕಾರಣ ಅವರ ಇಚ್ಛಾನುಸಾರವಾಗಿಯೇ ಸರ್ವಕಾರ್ಯಗಳನ್ನೂ ಪದ್ಮನಾಭಸ್ವಾಮಿಯು ನೆರವೇರಿಸುವನು. ನನ್ನ ಕುಲದೇವರಾದ ಶ್ರೀ ಪದ್ಮನಾಭಸ್ವಾಮಿಯ ಕೃಪೆಯಿಂದ ನನಗೆ ಉಂಟಾದ ಈ ಪುತ್ರನನ್ನು ಕಂಪೆನಿಯವರ ಹಸ್ತದಲ್ಲಿ ಇಡುತಲಿದೀನೆ. ಈ ಶಿಶುವನ್ನು ದೊಡ್ಡವನನ್ನಾಗಿ ಮಾಡಿ, ವಿದ್ಯಾಬುದ್ಧಿಗಳನ್ನು ಕಲಿಸಿ, ರಾಜ್ಯಪಾಲನ ಸಮರ್ಥನನ್ನಾಗಿ ಮಾಡುವುದು ಕಂಪೆನಿಯವರ ಭಾರವಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಹೇಳತಕ್ಕದ್ದೇನಿದೆ?" ಎಂದು ಬಾಲಕನನ್ನು ಮೆಕಾಲೆಯ ಕೈಯಲ್ಲಿ ಕೊಟ್ಟಳು. ಆತನು ಮಗುವನ್ನು ಸಿಂಹಾಸನದ ಮೇಲಿರಿಸಿ: "ಈ ರಾಮವರ್ಮನು ಇಂದಿನಿಂದ ರಾಜ್ಯಕ್ಕೆ ಒಡೆಯನಾದನು. ಈತನು ಯುಕ್ತವಯಸ್ಕನಾಗುವವರೆಗೂ ಲಕ್ಷ್ಮೀಬಾಯಿಯು ಈತನ ಪಾಲನಕರ್ತ್ರಿಯಾಗಿ ರಾಜ್ಯವನ್ನು ಪಾಲಿಸುವಳು," ಎಂದು ಸಕಲರಿಗೂ ತಿಳಿಯಪಡಿಸಿದನು.

ಈ ಸಮಯದಲ್ಲಿಯೇ ಮೆಕಾಲೆಯು ದಿವಾಣಗಿರಿಯನ್ನು ಬಿಟ್ಟನು. ದೇವ್ ಪದ್ಮನಾಭ್ ಎಂಬಾತನು ದಿವಾಣಗಿರಿಯನ್ನು ವಹಿಸಿದನು. ಆದರೆ ಈ ಹೊಸ ದಿವಾನನು ಆ ಅಧಿಕಾರವನ್ನು ಕೆಲವು ದಿವಸಗಳುಮಾತ್ರ ಅನುಭವಿಸಿ ಸ್ಫೋಟಕ ವ್ಯಾಧಿಯಿಂದ ಮೃತವಾದನು.

ಅನಂತರ ಸುಮಾರು ಒಂದುವರ್ಷಕ್ಕೆ ರಾಣಿಗೆ ಇನೊಬ್ಬ ಪುತ್ರನು ಹುಟ್ಟಿದನು. ಆದರೆ ಆ ಆನಂದವು ವಿಶೇಷ ದಿನಗಳಿರಲಿಲ್ಲ. ರಾಣಿಗೆ ಸೂತಿಕಾ ಜಾಡ್ಯವು ಉಂಟಾಗಿ ಎರಡು ತಿಂಗಳಿಗೆಲ್ಲ ವ್ಯಾಧಿಯು ಅಸಾಧ್ಯವೆಂದು ತೋರಿತು. ಭಿಷಗ್ವರ್ಯರನೇಕರು ಔಷದೋಪಚಾರಗಳನ್ನು ಮಾಡಿದರೂ ಗುಣವು ಉಂಟಾಗದೆ ವ್ಯಾಧಿಯು ಹೆಚ್ಚುತಲಿತ್ತು. ಜೀವಿಸುವಳೆಂಬ ಆಶೆಯು ನಿರ್ಮೂಲವಾದನಂತರ, ಒಂದು ದಿವಸ ಲಕ್ಷ್ಮೀಬಾಯಿಯು ತನ್ನ ಪ್ರಿಯ ಪತಿಯನ್ನು ಕರೆದು, ತನ್ನ ತಂಗಿಯಾದ ಪಾರ್ವತೀಬಾಯಿಯನ್ನೂ, ಮಕ್ಕಳನ್ನೂ, ಆತನಿಗೆ ಒಪ್ಪಿಸಿ, "ಇದುವರೆಗೂ ನನ್ನಿಂದ ರಕ್ಷಿಸಲ್ಪಟ್ಟ ಮಕ್ಕಳನ್ನು ನಿಮ್ಮಹಸ್ತದಲ್ಲಿಡುತಲಿದೀನೆ. ಇನ್ನು ನೀವು ಇವರೆಲ್ಲರನ್ನೂ ರಕ್ಷಿಸಬೇಕು. ಈ ರಾಮವರ್ಮರಾಜನು ಯುಕ್ತವಯಸ್ಕನಾಗುವವರೆಗೂ ಪಾರ್ವತೀಬಾಯಿಯು ಪಾಲನಕರ್ತ್ರಿಯಾಗಿ ರಾಜ್ಯವನ್ನು ಪಾಲಿಸುವಂತೆಮಾಡಿ, ನನಗೆ ಸಹಾಯಮಾಡಿದಂತೆ, ಈಕೆಗೆ ಸಕಲ ರಾಜಕಾರ್ಯಗಳಲ್ಲಿಯೂ ಸಹಾಯ ಮಾಡುವೆನೆಂದು ನೀವು ನನಗೆ ವಚನವನ್ನು

ಕೊಟ್ಟರೆ, ನಾನು ಸುಖವಾಗಿ ಪ್ರಾಣವನ್ನು ಬಿಡುವೆನು," ಎಂದು ನುಡಿದಳು. ತನ್ನ ಪ್ರಿಯ ಸತಿಯ ಬಾಯಿಯಿಂದ ಹೊರಟ ಈ ನಿರಾಶಾವಚನಗಳನ್ನು ಕೇಳಿ, ರಾಜರಾಜವರ್ಮನು ಅತ್ಯಂತ ದುಃಖಿತನಾಗಿ, ನೇತ್ರಗಳಿಂದ ಸುರಿಯುವ ವಾರಿಧಾರೆಯಿಂದ ಸ್ವಲ್ಪಹೊತ್ತು ಮಾತನಾಡಲಾರದೆ ಸುಮ್ಮನಿದ್ದು ಅನಂತರ, "ನಾನು ನಿನ್ನ ಅಭೀಷ್ಟವನ್ನು ನೆರವೇರಿಸುವೆನು" ಎಂದನು. ಆಮೇಲೆ ರಾಣಿಯು ತಂಗಿಯಾದ ಪಾರ್ವತೀಬಾಯಿಯನ್ನೀಕ್ಷಿಸಿ, "ತಂಗೀ ಪಾರ್ವತೀ! ನೀನು ಬಲು ಎಚ್ಚರದಿಂದ ರಾಜ್ಯವನ್ನು ಪಾಲಿಸಬೇಕು. ಈ ಮುಕ್ಕಳನ್ನು ಚೆನ್ನಾಗಿ ಸಂರಕ್ಷಿಸು. ರಾಮವರ್ಮರಾಜನು ಯುಕ್ತವಯಸ್ಕನಾದೊಡನೆಯೇ ಆತನ ರಾಜ್ಯವನ್ನು ಆತನಿಗೆ ಕೊಟ್ಟು ಕೃತಾರ್ಥಳಾಗು. ನಾನಾದರೋ ಹೊರಟು ಹೋಗುವೆನು. ನನಗಾಗಿ ದುಃಖಿಸಬೇಡ," ಎಂದಳು. ಈ ಪ್ರಕಾರವಾಗಿ ಅಕ್ಕನಾದ ಲಕ್ಷ್ಮೀಬಾಯಿಯು ಅಂತ್ಯಕಾಲದಲ್ಲಿ ಉಪದೇಶವನ್ನುಮಾಡಲು, ಆ ಕೋಮಲಾಂತಃಕರಣೆಯಾದ, ಹದಿನೇಳು ವರುಷದ ಅಬಲೆಯು ಶೋಕಾತಿಶಯದಿಂದ, ಗದ್ಗದಕಂಠೆಯಾಗಿ, "ಅಕ್ಕಾ, ನೀನು ಹೇಳಿದಂತೆಯೇ ನಾನು ಮಾಡುವೆನು, ನಿನ್ನಾಜ್ಞೆಯಂತೆಯೇ ನಡೆದುಕೊಳ್ಳುವೆನು. ನೀನು ಮಾತ್ರ ನನ್ನನ್ನು ಬಿಟ್ಟುಹೋಗುವೇಯಾ!" ಎಂದು ರೋದಿಸಿದಳು. ಆಗ ಅಲ್ಲಿದ್ದವರೆಲ್ಲರೂ ದುಃಖಿಸಿದರು.

ಈ ಪ್ರಸಂಗವು ನಡೆದ ಎರಡು ದಿವಸಗಳ ಅನಂತರ ಲಕ್ಷ್ಮೀಬಾಯಿಯು ನಶ್ವರ ಸುಖವನ್ನು ಬಿಟ್ಟು ಶಾಶ್ವತವಾದ ಸುಖವನ್ನು ಅನುಭವಿಸಲು ಹೊರಟು ಹೋದಳು. ಮಲಬಾರುದೇಶವೆಲ್ಲ ದುಃಖ.ಸಮುದ್ರದಲ್ಲಿ ಮುಳುಗಿತು. ಪ್ರತಿ ಗೃಹದಲ್ಲಿಯೂ ತಾಯಿಗಾಗಿರೋದಿಸುವಂತೆ ರೋದಿಸುತಲಿದ್ದರು.

ರಾಣೀ ಲಕ್ಷ್ಮೀಬಾಯಿಯು ನಾಲ್ಕು ವರ್ಷಗಳು ಮಾತ್ರವೇ ರಾಜ್ಯವನ್ನು ಪಾಲಿಸಿದರೂ, ಈಕೆಯ ಕಾಲದಲ್ಲಿ ಪ್ರಜೆಗಳು ಅನುಭವಿಸಿದ ಸೌಖ್ಯವನ್ನು ಹಿಂದೆ ಯಾವ ರಾಜನ ಅಥವಾ ರಾಣಿಯ ಕಾಲದಲ್ಲಿಯೂ ಅನುಭವಿಸಲಿಲ್ಲ. ಈಕೆಯು ಪ್ರಜೆಗಳನ್ನು ತನ್ನ ದೇಹಕ್ಕಿಂತಲೂ ಹೆಚ್ಚಾಗಿ ಕಾಪಾಡಿದಳು.

ಶಿಕಂದರ್ ಬೇಗಮ್.

" ಸುಚಿಂತ್ಯಚೋಕ್ತಂ ಸುವಿಚಾರ್ಯಯತ್ಕೃತಂ
ಸುದೀರ್ಘಕಾಲೇಪಿ ನಯಾತಿ ವಿಕ್ರಿಯಾಂ. "

ಮಧ್ಯಹಿಂದೂಸ್ಥಾನದಲ್ಲಿ ಭೂಪಾಲ್ ಎಂಬ ಸಂಸ್ಥಾನವು ಇದೆ. ಈ ಸಂಸ್ಥಾನವು ಸುಮಾರು ಏಳು ಸಾವಿರ ಚದರ ಮೈಲಿಗಳ ವಿಸ್ತೀರ್ಣವುಳ್ಳದ್ದಾಗಿಯೂ, ೪೦ ಲಕ್ಷ ರೂಪಾಯಿಗಳ ವರ್ಷಾದಾಯವುಳ್ಳದ್ದಾಗಿಯೂ ಇದೆ. ಈ ರಾಜ್ಯಕ್ಕೆ ರಾಣಿಯಾಗಿದ್ದ ಶಿಕಂದರ್ ಬೇಗಮಿನ ಚರಿತ್ರೆಯನ್ನು ಇಲ್ಲಿ ಬರೆದಿದೆ.

ಹದಿನೇಳನೆಯ ಶತಾಬ್ದದ ಅಂತ್ಯಭಾಗದಲ್ಲಿ, ದೆಹಲೀ ಸಾಮ್ರಾಜ್ಯವನ್ನು ಔರಂಗಜೇಬ್ ಬಾದಷಹನು ಪಾಲಿಸುತಲಿದ್ದನು. ಆ ಕಾಲದಲ್ಲಿ ದೋಸ್ತಮಹಮ್ಮದ್ ಎಂಬ ಒಬ್ಬ ಆಫ್ಘಾನ್ ಸರದಾರನು ತನ್ನ ಶೌರ್ಯ ಸಾಹಸಗಳಿಂದ ಬಾದಷಹನ ಅನುಗ್ರಹವನ್ನು ಪಡೆದು, ಸೈನ್ಯದಲ್ಲಿ ಒಂದು ಅಧಿಕಾರವನ್ನು ಹೊಂದಿದನು. ಒಂದುಸಲ ಈತನನ್ನು ಬಾದಷಹನು ಮಾಳವಪ್ರಾಂತಕ್ಕೆ ಯಾವುದೋ ಒಂದು ರಾಜಕಾರ್ಯದ ನಿಮಿತ್ತವಾಗಿ ಕಳುಹಿಸಿದನು. ಮಾಳವದ ಸುಬೇದಾರನು ದೋಸ್ತಮಹಮ್ಮದನ ಧೈರ್ಯಾದಿಗುಣಗಳಿಂದ ಸಂತುಷ್ಟನಾಗಿ, ಬಾದಷಹನೊಡನೆ ಹೇಳಿ, ಇವನಿಗೆ ಭೈರಸೀಪ್ರಾಂತದ ಸುಬೇದಾರಿಯನ್ನು ಕೊಡಿಸಿದನು. ಇವನು ಚಾತುರ್ಯದಿಂದ ಸುಬೇದಾರಿಯನ್ನೆಲ್ಲ ವಶಪಡಿಸಿಕೊಂಡು, ಔರಂಗಜೇಬನ ಮರಣಾನಂತರ ಸ್ವತಂತ್ರ ರಾಜನಾಗಿ, ಭೂಪಾಲ್ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನೇ ಬೇಗಮಳ ವಂಶಕ್ಕೆ ಮೂಲಪುರುಷನು ಎಂದು ಹೇಳಬಹುದು.

೧೭೨೩ ನೆಯ ಇಸವಿಯಲ್ಲಿ ದೋಸ್ತಮಹಮ್ಮದನು ಕಾಲವಾದನು. ಅನಂತರ ಈ ರಾಜ್ಯದಲ್ಲಿ ಅನೇಕ ಕಲಹಗಳು ನಡೆದು, ಕೊನೆಗೆ ಸುಲ್ತಾನಮಹಮ್ಮದ್, ಯಾರಮಹಮ್ಮದ್, ಯಾಷೀನಮಹಮ್ಮದ್, ಹಯಾತ್ ಮಹಮ್ಮದ್ ಎಂಬವರು ಕ್ರಮವಾಗಿ ರಾಜ್ಯಾರೂಢರಾದರು. ಕಡೆಯವನಾದ ಹಯಾತ್ ಮಹಮ್ಮದನ ಕಾಲದಲ್ಲಿ ಮರಾಟೆಯವರೊಡನೆ ಅನೇಕ ಕಲಹಗಳು ನಡೆದವು. ಈತನು ೨೯ ವರುಷಗಳು ರಾಜ್ಯವನ್ನು ಆಳಿ ಮೃತನಾದನು. ಅನಂತರ ಈತನ ಮಗನಾದ ಗೋಸುಮಹಮ್ಮದನು ನವಾಬನಾದನು. ಈತನು ರಾಜ್ಯವ್ಯವಹಾರ

ಗಳನ್ನು ಅರಿಯದವನಾಗಿದ್ದುದರಿಂದ, ಈತನನ್ನು ಹೆಸರಿಗೆ ಮಾತ್ರ ನವಾಬನೆಂದು ಸಿಂಹಾಸನದ ಮೇಲೆ ಕುಳ್ಳಿರಿಸಿ, ಈತನ ಚಿಕ್ಕಪ್ಪನ ಮಗನಾದ ವಜೀರ ಮಹಮ್ಮದನೇ ರಾಜ್ಯಾಡಳಿತವನ್ನೆಲ್ಲ ನೋಡಿಕೊಳ್ಳುತಲಿದ್ದನು. ಆಗ ಭೂಪಾಲ್‌ದೇಶಕ್ಕೆ ಉಂಟಾದ ಅನೇಕ ಸಂಕಟಗಳು ಈ ವಜೀರ ಮಹಮ್ಮದನಿಂದಲೇ ಪರಿಹಾರವಾದವು. ಈತನು ೧೮೧೬ನೆಯ ಇಸವಿಯಲ್ಲಿ ಮೃತನಾಗಲು, ಈತನ ಮಗನಾದ ನಜರ ಮಹಮ್ಮದನು ಪಟ್ಟಾಭಿಷಿಕ್ತನಾದನು. ಈತನು ತಂದೆಯಂತೆಯೇ ಗುಣಸಂಪನ್ನನಾಗಿ, ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡಿದನು. ಈತನ ಪುತ್ರಿಯಾದ ಶಿಕಂದರ್ ಬೇಗಮಳೇ ಹಿಂದೂದೇಶ ಚರಿತ್ರೆಯಲ್ಲಿ ಭೂಪಾಲ್ ಬೇಗಮ್ ಎಂದು ಪ್ರಸಿದ್ಧಿಯನ್ನು ಪಡೆದಿರುವವಳು. ಒಂದುದಿನ ನಜರ ಮಹಮ್ಮದನು ತನ್ನ ಮಗಳೊಡನೆ ಮುದ್ದಾಡುತ್ತಿದ್ದನು. ಆ ಸಮಯದಲ್ಲಿ, ಆತನ ಭಾವವೈದುನನಾದ ಫೌಜುದಾರ್ಖಾ ಎಂಬ ಎಂಟು ವರುಷದ ಬಾಲಕನು ಅಲ್ಲಿಯೇ ಒಂದು ಚಿಕ್ಕ ಪಿಸ್ತೂಲನ್ನು ಇಟ್ಟುಕೊಂಡು ಆಡುತ್ತಿರಲಾಗಿ, ಅದರೊಳಗಿರುವ ಗುಂಡು ಅಕಸ್ಮಾತ್ತಾಗಿ ಹಾರಿ ನವಾಬನಿಗೆ ತಗಲಿತು. ಕೂಡಲೆ ನವಾಬನು ಮೃತನಾದನು.

ನಜರಮಹಮ್ಮದನಿಗೆ ಶಿಕಂದರ್ ಬೇಗಮಳು ಒಬ್ಬಳೇ ಮಗಳು. ಪುತ್ರಸಂತಾನವೂ ಇರಲಿಲ್ಲ. ಈಕೆಯು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದರಿಂದ, ಅಲ್ಲಿನ ಅಧಿಕಾರಿಗಳೆಲ್ಲರೂ ಕಂಪೆನಿಯವರ ಸಮ್ಮತಿಯನ್ನು ಪಡೆದು, ನಜರ ಮಹಮ್ಮದನ ಅಣ್ಣನ ಮಗನಾದ ಮುನೀರ ಮಹಮ್ಮದಖಾನನಿಗೆ ಈಕೆಯನ್ನು ಕೊಟ್ಟು ವಿವಾಹವನ್ನು ಮಾಡಿ, ಆತನಿಗೆ ರಾಜ್ಯವನ್ನು ಕೊಡಬೇಕೆಂತಲೂ, ವಿವಾಹವು ನಡೆಯುವವರೆಗೂ ನಜರ ಮಹಮ್ಮದನ ಪತ್ನಿಯಾದ ಕುದುಷಿಯಾಬೇಗಮ್ ರಾಜ್ಯವನ್ನು ಆಳಬೇಕೆಂತಲೂ ನಿರ್ಣಯಿಸಿದರು. ಅದರಂತೆಯೇ ಶಿಕಂದರ್ ಬೇಗಮಿನ ತಾಯಿಯು ರಾಜ್ಯಾಧಿಕಾರಿಣಿಯಾಗಿ, ರಾಜ್ಯವನ್ನು ಚೆನ್ನಾಗಿ ಪಾಲಿಸುತಲಿದ್ದಳು. ಈಕೆಯು ರಾಜ್ಯ ಸುಖವನ್ನು ಬಹುದಿವಸಗಳು ಅನುಭವಿಸಬೇಕೆಂಬ ಇಚ್ಛೆಯುಳ್ಳವಳಾಗಿ ಮಗಳಿಗೆ ವಿವಾಹವನ್ನು ಮಾಡಲಿಲ್ಲ. ಶೀಘ್ರದಲ್ಲಿ ವಿವಾಹವು ನಡೆದರೆ ರಾಜ್ಯವನ್ನು ಪಡೆಯಬಹುದೆಂಬ ಅಭಿಲಾಷೆಯಿಂದ, ಮುನೀರ ಮಹಮ್ಮದನು ತನ್ನ ವಿವಾಹವನ್ನು ಜಾಗ್ರತೆಯಾಗಿ ನೆರವೇರಿಸಬೇಕೆಂದು, ಕುದುಷಿಯಾಬೇಗಮನ್ನು ಕೇಳುತಲಿದ್ದನು. ಇದರಿಂದ ಇಬ್ಬರಿಗೂ ವೈರವು ಉಂಟಾಯಿತು. ರಾಜ್ಯದಲ್ಲಿರುವ ಸಾಮಂತರೂ, ಅಧಿಕಾರಿಗಳೂ ಬೇಗಮಿನ ಕಡೆಯವರಾದುದರಿಂದ, ಪೂರ್ವದ ನಿಬಂಧನೆಯನ್ನು ತೆಗೆದುಹಾಕಿ, ಮುನೀರಖಾನನಿಗೆ ೪,೦೦೦ ರೂಪಾಯಿಗಳನ್ನು ಕೊಟ್ಟು ಅವರ ಜಗಳವನ್ನು ಸಮಾಧಾನ ಪಡಿಸಿದರು. ಅನಂತರ ಶಿಕಂದರ್ ಬೇಗಮಳನ್ನು, ಆಕೆಯ ಇನ್ನೊಬ್ಬ ದೊಡ್ಡಪ್ಪನ ಮಗನಾದ ಜಹಾಂಗೀರನಿಗೆ ಕೊಟ್ಟು, ಮದುವೆಯನ್ನು ಮಾಡಬೇಕೆಂದು ನಿಶ್ಚಯವಾಯಿತು.

ಇಲ್ಲಿ ಹಿಂದೂಪಾಠಕರು, ಮಹಮ್ಮದೀಯರ ಒಂದು ಪದ್ಧತಿಯನ್ನು ತಿಳಿಯುವುದು ಆವಶ್ಯಕ. ನಮ್ಮಲ್ಲಿ ಸೋದರಮಾವನ ಮಗಳನ್ನು ವಿವಾಹ ಮಾಡಿಕೊಳ್ಳುವುದು ಹೇಗೆ ಶಾಸ್ತ್ರೀಯವಾದುದೋ, ಹಾಗೆಯೇ ಅವರಲ್ಲಿ ಚಿಕ್ಕಪ್ಪ, ದೊಡ್ಡಪ್ಪಂದಿರ ಹೆಣ್ಣುಮಕ್ಕಳನ್ನು ಮದುವೆಮಾಡಿಕೊಳ್ಳುವುದು ಶಾಸ್ತ್ರೀಯವಾದುದು. ಈ ಪದ್ಧತಿಯು ನಮಗೆ ಆಶ್ಚರ್ಯವಾಗಿ ತೋರಬಹುದು. ಆದರೆ ಇದು ಅವರಲ್ಲಿ ಸಾಮಾನ್ಯವಾದ ರೂಢಿಯಾಗಿದೆ.

ರಾಜ್ಯಲೋಭಗ್ರಸ್ತಳಾದ ಕುದುಷಿಯಾಬೇಗಮಳು ಮಗಳಿಗೆ ವಿವಾಹವನ್ನು ಮಾಡುವೆನೆಂದು ಹೇಳುತ್ತಾ ಕಾಲಹರಣೆಯನ್ನು ಮಾಡುತಲಿದ್ದಳು. ಆದರೆ ಶಿಕಂದರು ಬೇಗಮಳು ವಿವಾಹಯೋಗ್ಯಳಾದುದರಿಂದ, ೧೮೩೫ ನೆಯ ಇಸವಿಯಲ್ಲಿ ಕುದುಷಿಯಾ ಬೇಗಮಳು ಮಗಳನ್ನು ಜಹಾಂಗೀರನಿಗೆ ಕೊಟ್ಟು ವಿವಾಹವನ್ನು ಅತಿ ವಿಭವದೊಡನೆ ಬೆಳೆಸಿದಳು. ಮದುವೆಯಾದ ಮೇಲೆ ಜಹಾಂಗೀರನು ರಾಜ್ಯವನ್ನು ಆಳಲು ಯತ್ನಿಸಿದನು. ಆದರೆ ಕುದುಷಿಯಾಬೇಗಮಳು ಅಳಿಯನಿಗೆ ರಾಜ್ಯವನ್ನು ಕೊಡಲು ಒಪ್ಪಿಕೊಳ್ಳಲಿಲ್ಲ. ಜಹಂಗೀರನು ಅತ್ತೆಯನ್ನು ಸೆರೆಯಲ್ಲಿಡಲು ಪ್ರಯತ್ನಿಸಿದನು. ಈತನ ಪ್ರಯತ್ನವನ್ನು ತಿಳಿದು ಬೇಗಮಳು ಕ್ರೋಧಾನ್ವಿತಳಾಗಿ ಯುದ್ಧಕ್ಕೆ ಸಿದ್ಧಳಾದಳು. ಇಬ್ಬರಿಗೂ ಘೋರ ಯುದ್ಧವು ನಡೆದು ಜಹಾಂಗೀರನು ಪರಾಜಿತನಾದನು. ಬೇಗಮಳು ಅಳಿಯನನ್ನು ಮೂರು ತಿಂಗಳು ಕಾರಾಗೃಹದಲ್ಲಿ ಇಡಿಸಿದಳು. ಇಷ್ಟರಲ್ಲಿ ಕಂಪೆನಿಯವರೂ, ಇನ್ನು ಕೆಲವರೂ ಮಧ್ಯಸ್ಥರಾಗಿ ಜಹಾಂಗೀರನನ್ನು ಕಾರಾಗೃಹದಿಂದ ಕರೆತಂದು, ೧೮೩೭ ನೆಯ ಇಸವಿಯಲ್ಲಿ ಆತನಿಗೆ ಪಟ್ಟಾಭಿಷೇಕವನ್ನು ಮಾಡಿದರು. ೬೦,೦೦೦ ರೂಪಾಯಿಗಳ ವರ್ಷಾದಾಯವುಳ್ಳ ಸ್ವತಂತ್ರ ಜಮೀರ್ದಾರಿಯನ್ನು ಕುದುಷಿಯಾ ಬೇಗಮಿಗೆ ಕೊಟ್ಟು, "ಆಕೆಯು ರಾಜ್ಯವಿಷಯಗಳಲ್ಲಿ ಪ್ರವೇಶಿಸಕೂಡದು," ಎಂದು ನಿಬಂಧನೆಯನ್ನು ಮಾಡಿದರು.

ಜಹಾಂಗೀರನು ರಾಜ್ಯಕಾರ್ಯಗಳಲ್ಲಿ ಅಶ್ರದ್ಧೆಯುಳ್ಳವನಾಗಿದ್ದುದರಿಂದ, ಪ್ರಜೆಗಳು ಆತನನ್ನು ದ್ವೇಷಿಸುತಲಿದ್ದರು. ಈತನು ದುಷ್ಟಸ್ವಭಾವವುಳ್ಳವನೂ ಸರ್ವದಾ ದುರ್ವ್ಯಸನಾಸಕ್ತನೂ ಆಗಿದ್ದುದರಿಂದ, ಭಾರ್ಯಾಭರ್ತರಿಗೆ ಐಕಮತ್ಯವಿಲ್ಲದೆ ಕಲಹಗಳು ನಡೆಯುತಲಿದ್ದವು. ಗುಣವತಿಯಾದ ಶಿಕಂದರು ಬೇಗಮಳು ರಾಜ್ಯಕಾರ್ಯಗಳನ್ನು ಶ್ರದ್ಧೆಯಿಂದ ನೋಡುತ್ತ, ಪ್ರಜೆಗಳಿಗೆ ಸುಖವನ್ನುಂಟು ಮಾಡಬೇಕೆಂತಲೂ, ದುಷ್ಟರ ಸಹವಾಸವನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯಬೇಕೆಂತಲೂ, ತನ್ನ ಪತಿಯನ್ನು ಬಹುವಿಧವಾಗಿ ಕೇಳಿಕೊಂಡಳು. ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಕೊನೆಗೆ ಶಿಕಂದರ್ ಬೇಗಮಳು ತನ್ನ ಪತಿ

ಯನ್ನು ಗುಣವಂತನನ್ನಾಗಿ ಮಾಡುವುದು ದುಸ್ತರವೆಂದು ಎಣಿಸಿ, ಕಲಹವನ್ನು ನಿಲ್ಲಿಸುವುದಕ್ಕೋಸ್ಕರ ತಾನು ತಾಯಿಯ ಬಳಿಯಲ್ಲಿ ಇರುತಿದ್ದಳು.

ಜಹಂಗೀರನು ಒಂಭತ್ತು ವರ್ಷಗಳು ಮಾತ್ರವೇ ರಾಜ್ಯವನ್ನು ಆಳಿ ಬಳಿಕ ನೆಯ ಇಸವಿಯಲ್ಲಿ ಕಾಲವಾದನು. ಜಹಂಗೀರನಿಗೆ ಶಿಕಂದರ್ ಬೇಗಮಳಲ್ಲಿ ಜನಿಸಿದ ಷಹಜಹಾನ್ ಎಂಬ ಒಂದು ಹೆಣ್ಣು ಮಗುವೂ, ದಸ್ತಗೀರ್ ಎಂಬ ಒಬ್ಬ ದಾಸೀಪುತ್ರನೂ ಇದ್ದರು. "ದಾಸೀಪುತ್ರನಿಗೆ ರಾಜ್ಯವನ್ನು ಕೊಡಬೇಕು" ಎಂದು ಜಹಂಗೀರನು ಮರಣಶಾಸನದಲ್ಲಿ ಬರೆದಿದ್ದನು. ಆದರೆ ಆ ಮರಣಶಾಸನವನ್ನು ಯಾರೂ ಒಪ್ಪಿಕೊಳ್ಳಲಿಲ್ಲ. ಷಹಜಹಾನಳೇ ರಾಜ್ಯಕ್ಕೆ ಒಡತಿಎಂತಲೂ ಆಕೆಯು ದೊಡ್ಡವಳಾಗುವವರೆಗೂ ಶಿಕಂದರ್ ಬೇಗಮ್ ರಾಜ್ಯವನ್ನು ಪಾಲಿಸ ಬೇಕೆಂತಲೂ ಕಂಪೆನಿಯವರು ನಿರ್ಣಯಿಸಿದರು.

ಶಿಕಂದರ್ ಬೇಗಮಳು ಬುದ್ಧಿಕೌಶಲ್ಯವುಳ್ಳವಳೆಂದು ಖ್ಯಾತಿಯನ್ನು ಪಡೆ ದಿದ್ದಳು. ಆದ್ದರಿಂದ ಈಕೆಯು ರಾಜ್ಯಭಾರವನ್ನು ವಹಿಸುವಳೆಂದು ಕೇಳಿ ಪ್ರಜೆ ಗಳು ಆನಂದವುಳ್ಳವರಾದರು. ಈಕೆಯು ಸಿಂಹಾಸನಾರೂಢಳಾದ ಕೂಡಲೆ ರಾಜ್ಯದಲ್ಲೆಲ್ಲ ಅನೇಕ ಮಹೋತ್ಸವಗಳು ನಡೆದವು.

ಈಕೆಯು ರಾಜ್ಯಭಾರವನ್ನು ವಹಿಸಿದ ಆರು ವರುಷಗಳೊಳಗೆ ಸಂಸ್ಥಾನದ ಸಾಲವನ್ನೆಲ್ಲ ತೀರಿಸಿದಳು. ಗ್ರಾಮಗಳು, ತಹಸೀಲುಗಳು, ಮೊದಲಾದವುಗಳನ್ನು ಗುತ್ತಿಗೆಗೆ ಕೊಡುವ ಪದ್ಧತಿಯನ್ನು ತ್ಯಜಿಸಿ, ಸ್ವಂತವಾಗಿ ಗ್ರಾಮಾಧಿಕಾರಿಗಳಿಂದ ಕಂದಾಯಗಳನ್ನು ವಸೂಲು ಮಾಡುತಲಿದ್ದಳು. ಕೆಲವು ಪದಾರ್ಥಗಳನ್ನು ವರ್ತಕರಲ್ಲಿ ಕೆಲವರು ಮಾತ್ರವೇ ಮಾರಬೇಕು ಎಂಬ ನಿರ್ಬಂಧವಿತ್ತು. ಇಂತಹ ನಿರ್ಬಂಧವು ಇದ್ದರೆ, ವ್ಯಾಪಾರದ ಅಭಿವೃದ್ಧಿಗೆ ಆಟಂಕ ಉಂಟಾಗುವುದು ಎಂದು ತಿಳಿದು ವ್ಯಾಪಾರಗಾರರೆಲ್ಲರು ಸಕಲ ಪದಾರ್ಥಗಳನ್ನೂ ಮಾರಬಹುದು ಎಂದು ಅಪ್ಪಣೆಯನ್ನು ಕೊಟ್ಟಳು. ಟಂಕ ಶಾಲೆಯನ್ನು ತಾನೇ ಸ್ವಂತವಾಗಿ ನೋಡಿ ಕೊಳ್ಳುತಲಿದ್ದಳು. ರಾಜ್ಯವನ್ನು ದುಷ್ಟರಿಂದ ಕಾಪಾಡುವುದಕ್ಕಾಗಿ ರಕ್ಷಕಭಟ ರನ್ನು ನಿಯಮಿಸಿದಳು. ಆಕೆಯು ಧೈರ್ಯದಿಂದಲೂ, ನಿರಂತರ ಪ್ರಯತ್ನ ದಿಂದಲೂ ರಾಜ್ಯವು ಒಳ್ಳೆಯ ಸ್ಥಿತಿಯನ್ನು ಹೊಂದುವುದಕ್ಕೆ ಬೇಕಾದ ಅನೇಕ ಸಂಸ್ಕರಣೆಗಳನ್ನು ಮಾಡಿದಳು.

ರಾಜನ್ ದುಧುಕ್ಷಸಿಯದಿಕ್ಷಿತಿಧೇನುಮೇ ನಾಂ
ತೇನಾದ್ಯವತ್ಸಮಿವ ಲೋಕಮಮುಂಪುಷಾಣ ।
ಯಸ್ಮಿಂಶ್ಚ ಸಮ್ಯೆಗನಿಶಂ ಪರಿಪುಷ್ಯಮಾಣೇ
ನಾನಾಫಲಂ ಫಲತಿಕಲ್ಪಲತೇವಭೂಮಿಃ ॥

ಎಂದು ಭರ್ತೃಹರಿಯು ಹೇಳಿರುವ ಶ್ಲೋಕದಲ್ಲಿರುವಂತೆ, ಈಕೆಯು ಪ್ರಜೆಗಳನ್ನು ವಾತ್ಸಲ್ಯದೊಡನೆ ನೋಡುತಲಿದ್ದುದರಿಂದ ರಾಜ್ಯವು ಸುಭಿಕ್ಷವಾಗಿದ್ದಿತು. ಸಕಲ ಪ್ರಜೆಗಳೂ ಸಂತೋಷದಿಂದ 'ನಮ್ಮ ಪುರಾಕೃತ ಪುಣ್ಯದಿಂದ ಶಿಕಂದರು ಬೇಗಮಳು ನಮಗೆ ರಾಣಿಯಾದಳು,' ಎಂದು ನುಡಿಯುತಲಿದ್ದರು.

ಬೇಗಮಳು ಮಹಮ್ಮದೀಯಳಾದರೂ ಹಿಂದುಗಳಲ್ಲಿ ದಯಾಮಯಳಾಗಿದ್ದಳು. ತನ್ನ ಜನರಿಂದ ಹಿಂದುಗಳಿಗ ಯಾವ ಅಪಾಯವೂ ಉಂಟಾಗದಂತೆ ಕಾಪಾಡುತಲಿದ್ದಳು. ಹಿಂದುಗಳನ್ನು ಕಂಡರೆ ನಿಷ್ಕರುಣೆಯಿಂದ ಅವರನ್ನು ಹಿಂಸಿಸುವ ಮಹಮ್ಮದೀಯ ಕುಲದಲ್ಲಿ ಜನ್ಮಿಸಿದವಳಾದರೂ ಬೇಗಮಳಲ್ಲಿ ಈ ಸಮತ್ವ ಗುಣವು ಇದ್ದುದು ಪ್ರಶಂಸನೀಯವಾದುದು. ಅಕ್ಬರಬಾದಷಹನ ಅನಂತರ ರಾಜ್ಯವನ್ನು ಪಾಲಿಸಿದ ಮಹಮ್ಮದೀಯರಲ್ಲಿ ಈಕೆಯು ಉತ್ತಮ ಪ್ರಭ್ವಿ ಎಂದು ಹೇಳಬಹುದು. ಅಕ್ಬರನಲ್ಲಿದ್ದ ಅನೇಕ ಸದ್ಗುಣಗಳು ಈಕೆಯಲ್ಲಿ ವಾಸಮಾಡುತಲಿದ್ದವು. ಕಂಪೆನಿಯವರ ಪ್ರಭುತ್ವದಲ್ಲಿರುವ ಅನೇಕ ದೊಡ್ಡ ಅಧಿಕಾರಿಗಳು, ಈಕೆಯ ರಾಜ್ಯವ್ಯವಸ್ಥೆಯನ್ನು ನೋಡಿ ಆಶ್ಚರ್ಯಪಡುತಲಿದ್ದರು.

ಈಕೆಯ ಮಗಳಾದ ಷಹಜಹಾನ್ ಬೇಗಮಳಿಗೆ ಹದಿನೈದು ವರುಷಗಳು ತುಂಬಿದ ಮೇಲೆ, ಆಕೆಯನ್ನು ಬಕ್ಷೀಬಾಕರ ಮಹಮ್ಮದ್ ಖಾನ್ ಎಂಬಾತನಿಗೆ ಕೊಟ್ಟು ಮದುವೆಯನ್ನು ಮಾಡಿದಳು. ಆಗ್ಗೆ ಶಿಕಂದರು ಬೇಗಮಳು ಮಗಳಿಗೆ ರಾಜ್ಯವನ್ನು ಕೊಡಲು ಇನ್ನು ಮೂರು ವರ್ಷಗಳು ಉಳಿದಿದ್ದವು. ಬೇಗಮಳ ಮನಸ್ಸಿನಲ್ಲಿ ಮಾತ್ರ ಅಂತ್ಯಕಾಲದವರೆಗೂ ರಾಜ್ಯವನ್ನುಳಬೇಕು ಎಂಬ ಕೋರಿಕೆಯು ಇತ್ತು.

ಉತ್ತರಹಿಂದೂದೇಶದಲ್ಲಿ ೧೮೫೭ ನೆಯ ಇಸವಿಯಲ್ಲಿ ನಡೆದ ಸಿಪಾಯಿ ಕಲಹದಲ್ಲಿ ಇಂಗ್ಲೀಷರಿಗೆ ದೊಡ್ಡ ವಿಪತ್ತು ಸಂಭವಿಸಿತು ಎಂಬುದನ್ನು ಹಿಂದೂ ದೇಶದ ಚರಿತ್ರೆಯನ್ನು ಓದಿದವರಿಗೆಲ್ಲರಿಗೂ ತಿಳಿದಿದೆ. ಇಂತಹ ಸಂಕಟ ಸಮಯದಲ್ಲಿ ಉತ್ತರಹಿಂದೂಸ್ಥಾನದಲ್ಲಿ ಸಿಂಧ್ಯೆ, ಹೋಳಕರರೂ, ಮಧ್ಯಹಿಂದೂಸ್ಥಾನದಲ್ಲಿ ಭೂಪಾಲ್ ಬೇಗಮಳೂ, ದಕ್ಷಿಣದಲ್ಲಿ ನೈಜಾಮನೂ ಸಹಾಯಮಾಡಿದುದರಿಂದಲೇ ಇಂಗ್ಲೀಷರು ನಮ್ಮ ದೇಶದಲ್ಲಿ ನಿಲ್ಲುವಂತಾಯಿತೆಂದು ಹೇಳಬಹುದು. ನಾವು ಈಗ ಆಂಗ್ಲೇಯರ ಪರಿಪಾಲನೆಯಲ್ಲಿ ಅನುಭವಿಸುತಲಿರುವ ಸಕಲ ಸುಖಗಳಿಗೂ ಶಿಕಂದರು ಬೇಗಮಳು ಅಂಶತಃಕಾರಣ ಭೂತಳೆಂದು ಹೇಳಬೇಕು. ಭೂಪಾಲ್ ರಾಜ್ಯದಲ್ಲಿ ಅನೇಕ ಜನರೂ, ಶಿಕಂದರ್ ಬೇಗಮಿನ ತಾಯಿಯೂ, ಆಂಗ್ಲೇಯರೊಡನೆ ಕಲಹಕ್ಕೆ ಸಿದ್ಧರಾದರು. ಆಗ ಬೇಗಮಳು ಆಂಗ್ಲೇಯರನ್ನು ಮೃತ್ಯುಮುಖದಲ್ಲಿ ಬೀಳದಂತೆ ಅತಿ ಪ್ರಯಾಸದಿಂದ ಹುಷಂಗಾಬಾದ್

ಪಟ್ಟಣವನ್ನು ಸೇರಿಸಿದಳು. ಆ ಸಮಯದಲ್ಲಿ ಈಕೆಯು ತೋರಿದ ಧೈರ್ಯವು ಸ್ತುತ್ಯವಾದುದು. ಎಲ್ಲ ಕಡೆಯಲ್ಲಿಯೂ ಶಾಂತಿಯು ನೆಲಗೊಳ್ಳುವವರೆಗೂ ಈಕೆಯು ಇಂಗ್ಲೀಷರಿಗೆ ಬಹು ವಿಧವಾದ ಸಹಾಯವನ್ನು ಮಾಡಿದಳು.

ಇಂಗ್ಲೀಷರು ಬೇಗಮಳು ಮಾಡಿದ ಉಪಕಾರದಿಂದ ಕೃತಜ್ಞರಾಗಿ, ತತ್ಪೂರ್ವದಲ್ಲಿ ಆಕೆಯಿಂದ ತೆಗೆದುಕೊಂಡಿದ್ದ ಫೈರಸೀಪ್ರಾಂತವನ್ನು ಪುನಹ ಆಕೆಗೆ ಕೊಟ್ಟರು. ಮತ್ತು ೧೮೫೯ ನೆಯ ಇಸವಿಯಲ್ಲಿ ಶಿಕಂದರುಬೇಗಮಳೇ ಭೂಪಾಲ ಸಂಸ್ಥಾನಕ್ಕೆ ಸ್ವಾಮಿನಿಯೆಂತಲೂ, ಮರಣ ಪರ್ಯಂತರವೂ ಈಕೆಯೇ ರಾಜ್ಯವನ್ನೂ ಪಾಲಿಸಬೇಕೆಂತಲೂ, ಅನಂತರ ಷಹಜಹಾನಳಿಗೆ ರಾಜ್ಯವನ್ನು ಕೊಡುವೆವೆಂತಲೂ ತಿಳಿಯಪಡಿಸಿದರು. ಇದರಿಂದ ಶಿಕಂದರ್ ಬೇಗಮಳ ಅಭೀಷ್ಟವು ನೆರವೇರಿತು. ಇಂಗ್ಲೀಷರು ಬೇಗಮಳಿಗೆ ನಾಲ್ಕು ತೋಪುಗಳನ್ನು ಬಹುಮಾನವಾಗಿ ಕೊಟ್ಟು ಸನ್ಮಾನವನ್ನು ಮಾಡಿದರು.

ಶಿಕಂದರು ಬೇಗಮಳು ಐಹಿಕ ಸುಖಗಳನ್ನು ಅನಂತವಾಗಿ ಅನುಭವಿಸುತಲಿದ್ದರೂ, ದೇವರನ್ನು ಮರೆಯದೆ ತಮ್ಮ ಶಾಸ್ತ್ರ ಪ್ರಕಾರವಾಗಿ ಪ್ರತಿನಿತ್ಯವೂ ಮೂರು ಕಾಲಗಳಲ್ಲಿ ಈಶ್ವರ ಪ್ರಾರ್ಥನೆಯನ್ನು ಮಾಡುತಲಿದ್ದಳು. ಈಕೆಯು ಬಡವರಲ್ಲಿ ವಿಶೇಷ ಕರುಣೆಯುಳ್ಳವಳಾಗಿ ಅವರ ಕಷ್ಟನಿವಾರಣೆಗಾಗಿ ಬಹಳ ದ್ರವ್ಯವನ್ನು ಸಹಾಯಮಾಡುತಲಿದ್ದಳು. ೧೮೬೩ ನೆಯ ಇಸವಿಯಲ್ಲಿ ರಾಜ್ಯವನ್ನು ತನ್ನ ಮಗಳಿಗೆ ಒಪ್ಪಿಸಿ, 'ರಾಜ್ಯವನ್ನು ಕಾಪಾಡಬೇಕು;' ಎಂದು ಆಂಗ್ಲೇಯ ಪ್ರಭುಗಳಿಗೆ ಬಿನ್ನವಿಸಿ, ತಾನು ಮಕ್ಕಾಯಾತ್ರೆಗೆ ಹೊರಟಳು. ಈಕೆಯು ಹೋದ ಸ್ಥಳಗಳಲ್ಲೆಲ್ಲ ಬಡವರಿಗೆ ಅನೇಕ ದಾನಧರ್ಮಗಳನ್ನು ಮಾಡಿ ದಾನಶೂರಳೆಂದು ಖ್ಯಾತಿಯನ್ನು ಪಡೆದಳು. ಈಕೆಯು ಪುನಹ ತನ್ನ ರಾಜ್ಯಕ್ಕೆ ಬಂದು ಪರಮಾರ್ಥವಿಚಾರದಲ್ಲಿ ಸುಖವಾಗಿ ಕಾಲವನ್ನು ಕಳೆದು ೧೮೬೮ ನೆಯ ಇಸವಿ, ಅಕ್ಟೋಬರ್ ತಿಂಗಳು, ೨೦ ನೆಯ ತಾರೀಖಿನಲ್ಲಿ ಪರಲೋಕಕ್ಕೆ ಹೋದಳು.

ಈಕೆಯ ಪುತ್ರಿಯಾದ ಷಹಜಹಾನ್ ಬೇಗಮಳು ತಾಯಿಯಂತೆಯೇ ಇಂಗ್ಲೀಷರಲ್ಲಿ ರಾಜನಿಷ್ಠೆಯುಳ್ಳವಳಾಗಿ ರಾಜ್ಯವನ್ನು ನ್ಯಾಯದಿಂದ ಪಾಲಿಸುತಲಿರುವಳು. ಇಂಗ್ಲೀಷರು ಈಕೆಯ ಸದ್ಗುಣಗಳಿಂದ ಸಂತುಷ್ಟರಾಗಿ, ಈಕೆಗೆ ಜಿ. ಸಿ. ಎಸ್. ಐ. ಎಂಬ ಬಿರುದನ್ನು ದಯಪಾಲಿಸಿರುವರು

ಲಾರ್ಡ್ ಲ್ಯಾಂಡ್ಸ್‌ಡೌನ್‌ಯವರು ನಮ್ಮ ದೇಶಕ್ಕೆ ರಾಜಪ್ರತಿನಿಧಿಗಳಾಗಿದ್ದ ಕಾಲದಲ್ಲಿ, ಭೂಪಾಲ ಸಂಸ್ಥಾನಕ್ಕೆ ಹೋಗಿ, ಅಲ್ಲಿನ ಆಡಳಿತದ ಸ್ಥಿತಿಯನ್ನು ನೋಡಿ ಸಂತೃಪ್ತರಾಗಿ, ಆ ಸಂಸ್ಥಾನವನ್ನು ಕುರಿತು, "ಭೂಪಾಲ ಸಂಸ್ಥಾನಾಧೀಶ್ವರರು ರಾಜಭಕ್ತಿಯಲ್ಲಿಯೂ, ಔದಾರ್ಯದಲ್ಲಿಯೂ ಪ್ರಖ್ಯಾತಿಯನ್ನು

ಹೊಂದಿದಾರೆ. ಈಗಿನ ಸಂಸ್ಥಾನಾಧೀಶ್ವರಿಯಾದ ಶಿಕಂದರ್ ಬೇಗಮಳು, ೧೮೫೭ ನೆಯ ಇಸವಿಯಲ್ಲಿ ಬ್ರಿಟಿಷರಿಗೆ ಮಾಡಿದ ಉಪಕಾರವು ಮರೆಯತಕ್ಕದ್ದಲ್ಲ. ಈಗಿನ ಬೇಗಮಳು ತಾಯಿಯಿಂದ ರಾಜ್ಯವನ್ನು ಗ್ರಹಿಸಿದಂತೆ ಆಕೆಯ ಸದ್ಗುಣಗಳನ್ನೂ ಸಹ ಗ್ರಹಿಸಿದಾಳೆ. ಈಕೆಯು ತನ್ನ ರಾಜ್ಯದಲ್ಲಿ ರೈಲ್ ಹಾಕುವುದಕ್ಕೆ ಸಹಾಯ ಮಾಡಿದಾಳೆ. ಭೂಪಾಲಿನ ಪ್ರಜೆಗಳ ಉಪಯೋಗಕ್ಕಾಗಿ ಒಳ್ಳೆಯ ನೀರನ್ನು ತರಿಸಿದಾಳೆ. ಲೋಕೋಪಕರವಾದ ಕಾರ್ಯಗಳಿಗಾಗಿ ಈಕೆಯು ಅತ್ಯಂತ ಧನವನ್ನು ವ್ಯಯಮಾಡುತಲಿದಾಳೆ. ತಾನು ಕೆಲವು ದಿನಗಳ ಕೆಳಗೆ ಕೊಡುವೆನೆಂದು ಹೇಳಿದ್ದ ಸೈನ್ಯವನ್ನು ಬ್ರಿಟಿಷರು ತೆಗೆದುಕೊಳ್ಳಬಹುದು ಎಂತಲೂ ಆ ಸೈನ್ಯವನ್ನು ಹಿಂದೂದೇಶದ ರಕ್ಷಣಾರ್ಥವಾಗಿ ಉಪಯೋಗಿಸಬೇಕೆಂತಲೂ ಈಕೆಯು ನಮಗೆ ಈದಿನ ತಿಳಿಯಪಡಿಸಿದಳು," ಎಂದು ಬರೆದಿದಾರೆ.

ಈ ವಂಶಸ್ಥರು ಹೀಗೆಯೇ ಸತ್ಕೀರ್ತಿಯನ್ನು ಪಡೆಯುತ್ತಿರಲಿ ಎಂದು ಈಶ್ವರನನ್ನು ಪ್ರಾರ್ಥಿಸಿ, ಈ ಚರಿತ್ರೆಯನ್ನು ಇಲ್ಲಿಗೆ ಮುಗಿಸುತಲಿದೇನೆ.

ಮೈನಾಬಾಯಿ ಪೋವಾರೀಣ್.

"ಸಂಪತ್ಸುಮಹತಾಂ ಚಿತ್ತಂ ಭವೇದುತ್ಪಲ ಕೋಮಲಂ
ಆಪತ್ಸುಚ ಮಹಾ ಶೈಲಶಿಲಾಸಂ ಘಾತಕರ್ಕಶಮ್."

ಈಕೆಯು ಧಾರಾನಗರ ಸಂಸ್ಥಾನಕ್ಕೆ ಒಡೆಯನಾದ ಆನಂದರಾವ್ ಪೋವಾರನ ಧರ್ಮಪತ್ನಿ. ಮಹಾರಾಷ್ಟ್ರರಲ್ಲಿ ಸ್ತ್ರೀನಾಮವನ್ನು ಉಚ್ಚರಿಸುವಾಗ ಮನೆಯ ಹೆಸರನ್ನು ವಿಕಲ್ಪವಾಗಿ ಪ್ರಯೋಗಿಸುವರು. ಆದುದರಿಂದ ಮೈನಾಬಾಯಿ ಪೋವಾರು ಎಂದು ಬರೆಯುವುದಕ್ಕೆ ಬದಲಾಗಿ 'ಪೋವಾರೀಣ್' ಎಂದು ಬರೆದಿದೇನೆ. ಹಾಗೆಯೇ ಅಹಲ್ಯಾಬಾಯಿ ಹೋಳಕರೀಣ್ ಎಂದು ಸಹ ಬರೆಯಬಹದು.

ಮೈನಾಬಾಯಿಯ ಮಾವನಾದ ಖಂಡೇರಾಯನು, ಬಡೋದಾ ಸಂಸ್ಥಾನಾಧೀಶ್ವರನಾದ ಗೋವಿಂದರಾವ್ ಗಾಯಕವಾಡನ ಮಗಳನ್ನು ಮದುವೆಯಾದನು. ಆಕೆಯು ಗರ್ಭಿಣಿಯಾಗಿರುವ ಕಾಲದಲ್ಲಿಯೇ ಖಂಡೇರಾಯನು

ಮೃತನಾದನು. ಆಗ ಆತನ ಪತ್ನಿಯು ರಾಜ್ಯಭಾರವನ್ನೆಲ್ಲ ಮಂತ್ರಿಗೆ ಒಪ್ಪಿಸಿ, ತೌರುಮನೆಗೆ ಹೋಗಿ, ಅಲ್ಲಿ ಪುತ್ರನನ್ನು ಪಡೆದು ಕಾಲವಾದಳು. ಈ ಬಾಲಕನ ಹೆಸರು ಆನಂದರಾವ್. ಈ ಹುಡುಗನು ತನಗೆ ಇಪ್ಪತ್ತು ವರ್ಷಗಳಾದ ಬಳಿಕ ತನ್ನ ರಾಜ್ಯಕ್ಕೆ ಹೋಗಲು, ಅಲ್ಲಿನ ಮಂತ್ರಿಯೇ ಮೊದಲಾದವರು ರಾಜ್ಯಲೋಭ ದಿಂದ ಆತನನ್ನು ಹೊರಡಿಸಲು ಯತ್ನಿಸಿದರು. ಆದರೆ ಮಂತ್ರ್ಯಾದಿಗಳು ವಿನಹ ರಾಜ್ಯದಲ್ಲಿರುವ ಪ್ರಜೆಗಳೆಲ್ಲರೂ ರಾಜಪಕ್ಷದವರೇ ಆಗಿದ್ದುದರಿಂದ ಆತನು ಮಂತ್ರಿ ಯನ್ನೂ, ಮಂತ್ರಿಪಕ್ಷದವರನ್ನೂ ಗೆದ್ದು ತನ್ನ ರಾಜ್ಯವನ್ನು ಮರಳಿ ಪಡೆದನು. ಈತನು ರಾಜ್ಯವನ್ನು ಪಾಲಿಸುತಲಿದ್ದ ಕಾಲದಲ್ಲಿ, ರಾಜ್ಯಕ್ಕೆ ಬಹು ಜನರಿಂದ ಅನೇಕ ಸಂಕಟಗಳು ಸಂಭವಿಸಿದವು. ಈ ಕಾರಣದಿಂದ ರಾಜ್ಯವನ್ನು ಕಾಪಾಡಿಕೊಳ್ಳು ವುದು ಬಹು ಕಷ್ಟವಾಗಿತ್ತು. ಈ ಸಂಸ್ಥಾನವನ್ನು ಪೀಡಿಸುವವರಲ್ಲಿ ಶಿಂದೆ, ಹೋಳಕರರು ಪ್ರಮುಖರಾಗಿದ್ದರು. ರಾಜ್ಯವು ಈ ವಿಧವಾಗಿ ಸಂಕಟಗಳಿಗೆ ಒಳಗಾಗಿರುವ ಸಮಯದಲ್ಲಿ, ಆನಂದರಾಯನು ಯಾವುದೋ ಒಂದು ವ್ಯಾಧಿಯ ದೆಸೆಯಿಂದ ಆಕಸ್ಮಿಕವಾಗಿ ಮೃತನಾದನು. ಆಗ ರಾಜ್ಯಭಾರವನ್ನು ಗರ್ಭವತಿ ಯಾದ ಮೈನಾಬಾಯಿಯು ವಹಿಸಬೇಕಾಯಿತು. ಇವರ ವಂಶಸ್ಥನಾದ ಮುರಾ ರಿರಾವ್ ಎಂಬೊಬ್ಬನು, ಈಕೆಯನ್ನು ಧಿಕ್ಕರಿಸಿ, ಅಧಿಕಾರಿಗಳನ್ನು ಲಂಚದಿಂದ ತನ್ನ ವಶಮಾಡಿಕೊಂಡು, ರಾಜ್ಯವನ್ನು ಆಕ್ರಮಿಸಿಕೊಂಡನು. ದೀರ್ಘಾಲೋ ಚನೆಯುಳ್ಳ ಮೈನಾಬಾಯಿಯು ಪ್ರಸವಸಮಯದಲ್ಲಿ ಧಾರಾನಗರದಲ್ಲಿ ಇರುವುದು ಅನುಚಿತವಾದುದು ಎಂದು ಅರಿತು, ಇಂದೂರು ಪಟ್ಟಣಕ್ಕೆ ಹೋಗಿ, ಅಲ್ಲಿ ಪುರುಷ ಶಿಶುವನ್ನು ಪ್ರಸವಿಸಿದಳು. ಆ ಶಿಶುವಿನ ಹೆಸರು ರಾಮಚಂದ್ರರಾವ್. ಪುತ್ರನು ಹುಟ್ಟಿದುದರಿಂದ ಮೈನಾಬಾಯಿಯು ಧೈರ್ಯವನ್ನು ವಹಿಸಿ ಮುರಾರಿರಾಯ ನೊಡನೆ ಯುದ್ಧವನ್ನು ನಡೆಸಲು ಸಿದ್ಧಳಾದಳು. ಈ ವರ್ತಮಾನವನ್ನೆಲ್ಲ ಕೇಳಿ ಧಾರಾನಗರದ ಖಿಲ್ಲೇದಾರನು ಸಹ ಮೈನಾಬಾಯಿಯ ಪಕ್ಷವನ್ನು ಅವಲಂಬಿಸಿ, ನೂತನವಾಗಿ ಜನಿಸಿದ ರಾಜಕುಮಾರನ ಹೆಸರಿನಲ್ಲಿ ಕೋಟೆಯನ್ನು ರಕ್ಷಿಸುತಲಿ ದ್ದನು. ಇದನ್ನೆಲ್ಲ ನೋಡಿ ಮುರಾರಿರಾಯನು ಭಯಪಟ್ಟು ಕೆಲಮಧ್ಯಸ್ಥರನ್ನು ನಿಯಮಿಸಿ ಅವರ ಮೂಲಕ, "ನಾನು ನಿಮ್ಮ ಆಜ್ಞೆಯಂತೆಯೇ ನಡೆದುಕೊಳ್ಳು ವೆನು. ನೀವು ಧಾರಾನಗರಕ್ಕೆ ಬರಬೇಕು," ಎಂದು ಮೈನಾಬಾಯಿಗೆ ಹೇಳಿ ಕಳುಹಿದನು. ಕಪಟರಹಿತಳಾದ ಮೈನಾಬಾಯಿಯು ಆ ಮಾತುಗಳು ಸತ್ಯ ವಾದವುಗಳು ಎಂದು ನಂಬಿ, ಇಂದೂರಿನಿಂದ ಧಾರಾನಗರಕ್ಕೆ ಹೊರಟಳು. ಮಾರ್ಗ ಮಧ್ಯದಲ್ಲಿ ಮುರಾರಿರಾಯನ ಜನರು ಆಕೆಯನ್ನು ಎದುರ್ಗೊಂಡು, ಆಕೆಗೆ ಪುತ್ರನು ಜನಿಸಿದುದಕ್ಕಾಗಿ ಅಭಿನಂದಿಸಿ, ಹಿತರಂತೆಯೇ ಮಾತನ್ನಾಡುತ್ತ ಆಕೆಯನ್ನು ಹಿಂಬಾಲಿಸಿ ಧಾರಾನಗರಕ್ಕೆ ಬಂದರು. ಅಲ್ಲಿ ಆಕೆಯನ್ನು ಒಂದು ಮನೆಯಲ್ಲಿಟ್ಟು, ಮನೆಯ ಸುತ್ತಲೂ ತಮ್ಮ ಭಟರನ್ನು ಕಾವಲಿರುವಂತೆ

ನಿಯಮಿಸಿದರು. ಅನಂತರ ಆ ಗೃಹಕ್ಕೆ ಬೆಂಕಿಯನ್ನು ಹಚ್ಚಬೇಕೆಂದು ಆಲೋಚಿಸಿದರು. ರಾಜ್ಯಲೋಭದಿಂದ ಮನುಷ್ಯನು ಎಂತಹ ದುಷ್ಕೃತ್ಯವನ್ನಾದರೂ ಹಿಂತೆಗೆಯದೆ ಮಾಡುವನಲ್ಲವೆ?

ಈ ವಿಷಯವನ್ನು ಮೈನಾಬಾಯಿಯ ಸೇವಕರು ತಿಳಿದು, ಅಳುತ್ತ ತಮ್ಮ ಒಡತಿಯ ಬಳಿಗೆ ಹೋಗಿ, ಆಕೆಗೆ ಮುರಾರಿರಾಯನ ಮೋಸವನ್ನು ತಿಳಿಸಿದರು. ಅನಂತರ ಆ ಭಟರು "ನೀವು ಪುರುಷವೇಷವನ್ನು ಧರಿಸಿ ಬೇರೇಸ್ಥಳಕ್ಕೆ ಹೋಗಿ ಪ್ರಾಣವನ್ನು ರಕ್ಷಿಸಿಕೊಳ್ಳಿರಿ," ಎಂದು ಮೈನಾಬಾಯಿಯನ್ನು ಬೇಡಿಕೊಂಡರು. ಆದರೆ ಆ ಶೂರನಾರಿಯು ಅವರೊಡನೆ "ನೀವು ನನ್ನ ಹಿತವನ್ನು ಅಪೇಕ್ಷಿಸಿ ಹೀಗೆ ತಿಳಿಸಿದಿರಿ. ಹಾಗೆ ಮಾಡುವದು ಅಯುಕ್ತವಾದುದು ಎಂದು ನನಗೆ ತೋರುವುದು. ಹಗೆಗೆ ಬೆನ್ನುತೋರಿಸದಂತಹ ಶೂರವಂಶದಲ್ಲಿ ಜನ್ಮಿಸಿ, ಅಂತಹ ವಂಶವನ್ನೇ ಸೇರಿದ ನಾನು ಈ ವಿಧವಾದ ಕೃತ್ಯವನ್ನು ಹೇಗೆ ಮಾಡಲಿ? ನಾನು ಹೋಗಲು ಅನರ್ಹವಾದ ಸ್ಥಳಕ್ಕೆ ಹೋಗಲಾರೆನು. ಧರ್ಮವನ್ನು ತಪ್ಪದೆ ನಾನು ಇರಬೇಕಾದ ಸ್ಥಳದಲ್ಲಿಯೇ ಇದ್ದು ಮೃತಳಾದರೆ ಸಹಗಮನವನ್ನು ಮಾಡಿದವರ ಪದವಿಗೆ ಹೋಗುವೆನು," ಎಂದು ನುಡಿದಳು.

ಮೈನಾಬಾಯಿಯು ಧೈರ್ಯವಾಗಿ ಅಲ್ಲಿಯೇ ಇರಲು ನಿಶ್ಚಯಿಸಿಕೊಂಡಳು. ಅನಂತರ ಆಕೆಯ ದಾಸಿಯರಲ್ಲಿ ಒಬ್ಬಳು ತನ್ನ ಪುತ್ರನನ್ನು ಮೈನಾಬಾಯಿಗೆ ಕೊಟ್ಟು ರಾಜ್ಯಾಧಿಪತಿಯಾದ ಆ ಬಾಲಕನನ್ನು ತಾನು ಎತ್ತಿಕೊಂಡು, ರಕ್ಷಕ ಭಟರಿಗೆ ತಿಳಿಯದಂತೆ ಗುಪ್ತವಾಗಿ ಹೊರಟು, ಮೈನಾಬಾಯಿಯ ಪಕ್ಷದವರು ರಕ್ಷಿಸುತಲಿದ್ದ ಕೋಟೆಯನ್ನು ಸೇರಿದಳು. ಪ್ರಭುವಿನ ಪ್ರಾಣವನ್ನು ಕಾಪಾಡುವುದಕ್ಕಾಗಿ ತನ್ನ ಪುತ್ರನನ್ನು ಸಮರ್ಪಿಸಿದ ಆ ದಾಸಿಯ ಸ್ವಾಮಿಭಕ್ತಿಯನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ!

ಮೈನಾಬಾಯಿಯು ತನ್ನ ಪುತ್ರನು ಸುರಕ್ಷಿತಸ್ಥಳವನ್ನು ಸೇರಿದುದರಿಂದ ಸಂತುಷ್ಟಳಾಗಿ, ತನಗೆ ಸಂಭವಿಸುವ ಕಷ್ಟಗಳನ್ನೆಲ್ಲ ಅನುಭವಿಸಲು ಸ್ಥಿರಚಿತ್ತದೊಡನೆ ಸಿದ್ಧಳಾದಳು. ತನ್ನ ಸಮೀಪದಲ್ಲಿರುವ ಅಲ್ಪ ಸೈನಿಕರನ್ನು ಕರೆದು ಅವರಿಗೆ ಶತ್ರುಗಳು ನಮ್ಮಮೇಲೆ ದಂಡೆತ್ತಿಬಂದರೆ ಧೈರ್ಯವಾಗಿ ಅವರೊಡನೆ ಯುದ್ಧಮಾಡಬೇಕೆಂತಲೂ, ನಾವು ಸ್ವಲ್ಪಜನರೇ ಆದರೂ, ಸತ್ಯವೂ, ಧರ್ಮವೂ, ನಮ್ಮ ಕಡೆಯಲ್ಲಿರುವುದರಿಂದ ನಮಗೇ ಜಯವು ದೊರೆಯುವುದೆಂತಲೂ ತಿಳಿಸಿದಳು. ಆ ಸೈನಿಕರು ಸಹ ತಮ್ಮ ಸ್ವಾಮಿನಿಗೆ ಯಾವ ಅಪಾಯವೂ ಉಂಟಾಗದಂತೆ ಕಾಪಾಡುತಲಿದ್ದರು.

ಮೈನಾಬಾಯಿಯು ತನಗೆ ಸಂಭವಿಸಿದ ವಿಪತ್ತನ್ನು ಸಿಂಧೆ ಸರ್ಕಾರದವರಿಗೂ ಇಂಗ್ಲೀಷರಿಗೂ ರಹಸ್ಯವಾಗಿ ತಿಳಿಯಪಡಿಸಿ, ಅವರ ಸಹಾಯವನ್ನು

ಅಪೇಕ್ಷಿಸಿದಳು. ಆದರೆ ಈ ಕಾರ್ಯವು ವಿಶೇಷ ಲಾಭಕರವಾದುದಲ್ಲವಾದ ಕಾರಣ ಅವರಲ್ಲಿ ಒಬ್ಬರೂ ಈಕೆಗೆ ಸಹಾಯವನ್ನು ಮಾಡಲು ಒಪ್ಪಲಿಲ್ಲ. ಆ ಮೇಲೆ ಈ ವಿಷಯಗಳನ್ನೆಲ್ಲ ಮುರಾರಿರಾಯನು ಕೇಳಿ ಆಗ್ರಹ ಪರವಶನಾಗಿ ಮೈನಾಬಾಯಿಯನ್ನು ಸಂಹರಿಸಲು ನಿಶ್ಚಯಿಸಿದನು. ಆಗ ಮೈನಾಬಾಯಿಯು: "ನೀನು ಎಷ್ಟು ದುಷ್ಕೃತ್ಯಗಳನ್ನು ನಡೆಸಿದರೂ ಚಿಂತೆಯಿಲ್ಲ. ನನ್ನ ಪುತ್ರನು ಮಾತ್ರ ನಿನ್ನಕೈಗೆ ಸಿಕ್ಕಲಾರನು. ನೀನು ನನ್ನನ್ನು ಏನುಬೇಕಾದರೂ ಮಾಡ ಬಹುದು. ಆದರೆ ನಾನು ಪೇರಪತ್ನಿ ಎಂಬುದನ್ನು ಮಾತ್ರ ಮರೆಯ ಬೇಡ," ಎಂದು ಮುರಾರಿರಾಯನಿಗೆ ವರ್ತಮಾನವನ್ನು ಕಳುಹಿಸಿದಳು.

ಬರೋಡಾ ಸಂಸ್ಥಾನದ ಮಂತ್ರಿಯ ತಮ್ಮನಾದ ಚಿಮಣಾಜಿಯು ಧಾರಾ ನಗರದ ಸ್ಥಿತಿಯನ್ನು ಕೇಳಿ, ರಾಣಿಗೆ ಸಹಾಯಮಾಡಲು, ದೊಡ್ಡ ಸೈನದೊಡನೆ ಗುಜರಾತಿನಿಂದ ಹೊರಟನು. ಮುರಾರಿರಾಯನು ಚಿಮಣಾಜಿಯ ಬರುವಿಕೆ ಯನ್ನು ಕೇಳಿ ನಗರವನ್ನು ಬಿಟ್ಟು ಪಲಾಯನವಾದನು.

ಆಗ ಮೈನಾಬಾಯಿಯು ಬಂಧಮುಕ್ತಳಾಗಿ ಮಗನ ಹೆಸರಿನಲ್ಲಿ ರಾಜ್ಯ ತಂತ್ರಗಳನ್ನು ನೋಡಿಕೊಳ್ಳಲು ಪ್ರಾರಂಭಿಸಿದಳು. ತನಗೂ ತಮ್ಮ ಒಡೆಯನಾದ ಬರೋಡಾ ಮಹಾರಾಜನಿಗೂ ಏನಾದರೂ ಲಾಭವು ಉಂಟಾಗಬಹುದು ಎಂಬ ಅಭಿಪ್ರಾಯದಿಂದ ಬಂದನಾದಕಾರಣ ಚಿಮಣಾಜಿಗೆ ರಾಣಿಯು ರಾಜ್ಯಭಾರವನ್ನು ವಹಿಸಿದುದು ಸರಿಯಾಗಿ ತೋರಲಿಲ್ಲ. ಆದರೆ ಧೀಮತಿಯಾದ ರಾಣಿಯು ಸಖಾ ರಾಂಚಿಮಣಾಜಿಗೆ ತಕ್ಕ ಸಮಾಧಾನವನ್ನು ಹೇಳಿ, ತನ್ನ ಬಳಿಯಲ್ಲಿ ಮಂತ್ರಿಯಾಗಿ ಇರುವಂತೆ ಹೇಳಿದಳು. ರಾಣಿಯ ಮಾತುಗಳಿಂದ ಸಂತುಷ್ಟನಾಗಿ ಧಾರಾ ನಗರ ಸಂಸ್ಥಾನಕ್ಕೆ ಮಂತ್ರಿಯಾಗಿ ಇರಲು ಒಪ್ಪಿಕೊಂಡನು. ಮೇಲೆಹೇಳಿದ ಸಂಕಟಗಳಿಂದ ಸಂಸ್ಥಾನಕ್ಕೆ ಬಹಳ ಸಾಲವು ಉಂಟಾಯಿತು. ಈ ಸಾಲವನ್ನು ತೀರಿಸಲು ಮಂತ್ರಿಯ ಸಹಾಯದಿಂದ ಮೈನಾಬಾಯಿಯು ಅನೇಕ ಉಪಾಯ ಗಳನ್ನು ಆಲೋಚಿಸಿದಳು. ಆದರೆ ಚಿಮಣಾಜಿಯು ಅಲ್ಪಕಾಲದಲ್ಲಿಯೇ ಮೃತ ನಾದನು. ಅನಂತರ ಬಾಪೂರಘುನಾಥರಾಯನು ದಿವಾನನಾದನು. ಈತನ ಚಾತುರ್ಯದಿಂದಲೂ ಪರಿಶ್ರಮದಿಂದಲೂ ಮೈನಾಬಾಯಿಯ ಧೈರ್ಯಸಾಹಸ ಗಳಿಂದಲೂ ಧಾರಾನಗರವು ಅನೇಕ ವಿಪತ್ತುಗಳಿಂದ ರಕ್ಷಿತವಾಯಿತು. ಮೈನಾ ಬಾಯಿಯು ಪರದೇಶಗಳ ಮೇಲೆ ದಂಡೆತ್ತಿಹೋಗಿ, ಧನವನ್ನು ಸಂಪಾದಿಸಿ ಸಂಸ್ಥಾ ನದ ಸಾಲವನ್ನು ತೀರಿಸಿದಳು. ಈಕೆಯ ಅನಂತರ ಆ ಸಂಸ್ಥಾನವು ಬಹು ಕಷ್ಟ ಗಳನ್ನು ಅನುಭವಿಸಿ ಕೊನೆಗೆ ಹೂಣರಿಂದ ಸುರಕ್ಷಿತವಾಯಿತು. ಆದರೆ ಆ ಕಥಾ ಭಾಗದಿಂದ ನಮಗೆ ಪ್ರಯೋಜನವು ಇಲ್ಲ. ಮೈನಾಬಾಯಿಯು ಧೈರ್ಯದಿಂ ದಲೂ, ನ್ಯಾಯದಿಂದಲೂ ರಾಜ್ಯವನ್ನು ಪರಿಪಾಲಿಸಿದುದರಿಂದ ಆ ದೇಶಸ್ಥರು

ಈಕೆಯನ್ನು ಈಗಲೂ ಹೊಗಳುತ್ತಾರೆ. ಧಾರಾಸಂಸ್ಥಾನದ ಚರಿತ್ರೆಯಲ್ಲಿ, ಚರಿತ್ರಕಾರನು ಈಕೆಯನ್ನು ಬಹಳವಾಗಿ ಕೊಂಡಾಡಿದಾನೆ. ಇಂದೂರು ಸಂಸ್ಥಾನಕ್ಕೆ ಅಹಲ್ಯಾಬಾಯಿಯೂ, ಧಾರಾಸಂಸ್ಥಾನಕ್ಕೆ ವೈನಾಬಾಯಿಯೂ, ಭೂಷಣ ಪ್ರದರಾದರಮಣಿಯರು ಎಂದು ಹೇಳಬಹುದು

ವೀರಮತಿ.

ಸ್ತ್ರೀಯಸ್ತಥಾ ಪಾಠನೀಯಾ ಯಥಾತಾಃ ಕಾರ್ಯವಸ್ತುನಿ
ಪುಂವತ್ ಪ್ರವೃತ್ತಿಮಾಧಾಯ ಸಾಧಯೇಯುರನಾಕುಲಾಃ

ಸಂಸಾರ ರೂಪವಾದ ರಥಕ್ಕೆ ಸ್ತ್ರೀಪುರುಷರು ಎರಡು ಚಕ್ರಗಳು ಎಂಬುದನ್ನು ಎಲ್ಲರೂ ತಿಳಿದಿದಾರೆ. ಸಂಸಾರರಥವು ಸರಿಯಾಗಿ ನಡೆಯುವುದಕ್ಕೆ ಈ ಎರಡು ಚಕ್ರಗಳೂ ಸಮಾನವಾದುದಾಗಿ ಇರಬೇಕು. ಎರಡು ಚಕ್ರಗಳಲ್ಲಿಯೂ ಎಷ್ಟು ಬೇಧವಿರುವುದೋ, ಅಷ್ಟು ಕಷ್ಟವಾಗಿ ರಥವು ನಡೆಯುವುದು. ಪುರುಷನು ಜ್ಞಾನವಂತನಾಗಿಯೂ ಸ್ತ್ರೀಯು ಅಜ್ಞಾನಾಂಧಕಾರಮಗ್ನಳಾಗಿಯೂ ಇದ್ದರೆ, ಸಂಸಾರದಲ್ಲಿ ಸೌಖ್ಯಲೇಶವೂ ಇರಲಾರದು ಎಂಬುದನ್ನು ನಮ್ಮ ದೇಶದ ಅನೇಕ ಸಂಸಾರಗಳಲ್ಲಿ ನೋಡಬಹುದು. ಭಾರ್ಯಾಭರ್ತೃರೂಪವಾದ ಎರಡು ಚಕ್ರಗಳೂ ವಿದ್ಯಾಬುದ್ಧಿಗಳಲ್ಲಿ ಸಮನಾಗಿ ಇದ್ದ ಪಕ್ಷದಲ್ಲಿ ಸಂಸಾರ ಶಕಟವು ಸುಲಭವಾಗಿ ನಡೆಯುವುದು ಎಂಬುವುದನ್ನೂ, ಮಧ್ಯದಲ್ಲಿ ಎಷ್ಟು ಸಂಕಟಗಳು ಸಂಭವಿಸಿದರೂ ನಿಲ್ಲದೆ ಚಕ್ರದ್ವಯ ಸಹಾಯದಿಂದ ಸುಲಭವಾಗಿ ನಡೆಯುತ್ತ ಕೊನೆಗೆ ಆನಂದವಾಗಿ ಈ ಪ್ಸಿತಸ್ಥಳವನ್ನು ಸೇರುವುದು ಎಂಬುದನ್ನೂ ತಿಳಿದು ಕೊಳ್ಳಲು, ಈ ವೀರಮತಿಯ ಚರಿತ್ರೆಯು ಬಹು ಉಪಯೋಗವಾದುದು. ಆದ ಕಾರಣ ಪಾಠಕರು ಇದನ್ನು ಶ್ರದ್ಧೆಯಿಂದ ಪಠಿಸಬೇಕೆಂದು ಅಪೇಕ್ಷಿಸುತ್ತೇನೆ.

ಶಾಲಿವಾಹನಶಕದ ಎರಡನೆಯ ಶತಾಬ್ದದಲ್ಲಿಯೋ ಅಥವಾ ಮೂರನೆಯ ಶತಾಬ್ದದಲ್ಲಿಯೋ ಗುಜರಾತು ದೇಶವನ್ನು ಚಾವಡಾ ವಂಶಸ್ಥನಾದ ಬಿರಜ ಎಂಬ ರಾಜನು ಪಾಲಿಸುತಲಿದ್ದನು. ಆಗ ಗುಜರಾತು ದೇಶಕ್ಕೆ ಟುಕಟೋಡಾ ಗ್ರಾಮವು ರಾಜಧಾನಿಯಾಗಿ ಇತ್ತು. ಈತನ ತಂದೆಯು

ಅತಿವೃದ್ಧನಾಗಿ ಇದ್ದುದರಿಂದ ತಂದೆಯು ಜೀವಿಸಿದ್ದರೂ, ಬಿರಜನೇರಾಜ್ಯವನ್ನು ಆಳುತಲಿದ್ದನು. ವೃದ್ಧರಾಜನಿಗೆ ಬಿರಜನಲ್ಲದೆ ಇನೂ ಕೆಲಜನ ಮಕ್ಕಳಿದ್ದರು. ಅವರೆಲ್ಲರಲ್ಲಿ ವೀರಮತಿಯು ಚಿಕ್ಕವಳು. ಈಕೆಯು ಎಲ್ಲರಿಗಿಂತಲೂ ಕಿರಿಯವಳಾದಕಾರಣ ಬಹುಮುದ್ದಿನಿಂದ ಬೆಳೆಯುತಲಿದ್ದಳು. ಈಕೆಯು ಬಾಲ್ಯದಿಂದಲೂ ರಾಜಪುತ್ರರೊಡನೆಯೇ ಆಡಿಕೊಳ್ಳುತಲಿದ್ದುದರಿಂದ, ಅವರು ಕಲಿಯುತಲಿದ್ದ ಧನುರ್ವಿದ್ಯಾದಿಗಳು ಈಕೆಗೂ ಚೆನ್ನಾಗಿ ಅಭ್ಯಾಸವಾಯಿತು. ಮತ್ತು ಓದು ಬರಹಗಳಲ್ಲಿಯೂ, ಗಣಿತದಲ್ಲಿಯೂ ಪ್ರವೀಣಳಾದಳು. ವೀರಮತಿಯು ವಿಶೇಷ ಸೌಂದರ್ಯವತಿಯಾಗಿಯೂ, ವಿನಯಗಾಂಭೀರ್ಯ ಮೊದಲಾದ ಸುಗುಣಗಳುಳ್ಳವಳಾಗಿಯೂ ಇದ್ದಳು.

ವೀರಮತಿಗೆ ಹದಿನಾರು ವರುಷಗಳು ತುಂಬಿದಮೇಲೆ ಆಕೆಯು ವಿವಾಹಯೋಗ್ಯಳಾದಳು ಎಂದು ಎಣಿಸಿ, ಸ್ವಯಂವರ ಪದ್ಧತಿಯನ್ನನುಸರಿಸಿ ಆಕೆಯ ವಿವಾಹವನ್ನು ಬೆಳೆಸಲು ಬಿರಜನು ನಿಶ್ಚಯಿಸಿಕೊಂಡನು. ಅನಂತರ ಆತನು ಕೆಲವಿಪ್ರರನ್ನು ಕರೆಯಿಸಿ, ಅವರೊಡನೆ, "ನೀವು ದೇಶದೇಶಗಳಿಗೆ ಹೋಗಿ ಅಲ್ಲಿನ ರಾಜಪುತ್ರರ ಲಕ್ಷಣಗಳನ್ನೂ, ಗುಣಗಳನ್ನೂ ತಿಳಿದು, ಅವರ ಚಿತ್ರಪಟಗಳನ್ನು ತೆಗೆದುಕೊಂಡು ಬನ್ನಿರಿ," ಎಂದು ಹೇಳಿದನು. ಆ ಭೂಸುರರು ರಾಜನ ಹೇಳಿಕೆಯಂತೆ ಅನೇಕ ದೇಶಗಳನ್ನು ಸಂಚರಿಸಿ ಅಲ್ಲಿನ ರಾಜಪುತ್ರರ ಚಿತ್ರಪಟಗಳನ್ನು ತೆಗೆದುಕೊಂಡುಬಂದು ವೀರಮತಿಗೆ ತೋರಿಸಿ, ಆಯಾ ರಾಜಪುತ್ರರ ಸ್ವಭಾವಗಳನ್ನು, ಬಾಯಿಯಿಂದ ವರ್ಣಿಸಿದರು. ಅವರಲ್ಲಿ ಧಾರಾನಗರಾಧಿಪತಿಯಾದ ಉದಯಾದಿತ್ಯ ಮಹಾರಾಯನ ಪುತ್ರನ ಸದ್ಗುಣಗಳನ್ನು ಕೇಳಿಯೂ, ಆತನ ಸುಂದರರೂಪವನ್ನು ನೋಡಿಯೂ ವೀರಮತಿಯು ಆತನನ್ನು ವರಿಸಿದಳು. ಆ ರಾಜಪುತ್ರನ ಹೆಸರು ಜಗದೇವ. ಬಿರಜನು ತಂಗಿಯ ಅಭಿಪ್ರಾಯವನ್ನು ತಿಳಿದು, "ನನ್ನತಂಗಿಯಾದ ವೀರಮತಿಯನ್ನು ನಿಮ್ಮ ಪುತ್ರನಾದ ಜಗದೇವನಿಗೆ ಕೊಟ್ಟು ವಿವಾಹವನು ಬೆಳೆಸಲು ನಿಶ್ಚಯಿಸಿ ಇರುವೆನು," ಎಂದು ಶುಭಲೇಖನವನ್ನು ಬರೆದು ಉದಯಾದಿತ್ಯ ಮಹಾರಾಯನಿಗೆ ಕಳುಹಿಸಿದನು.

ಈ ಉದಯಾದಿತ್ಯನು ಸೂರ್ಯವಂಶದ ಧೊರೆಯು. ಈತನು ವಿಕ್ರಮಾದಿತ್ಯನ ವಂಶದಲ್ಲಿ ೪೮ ನೆಯ ಪುರುಷನು. ಈರಾಜನು ಮಾಳವದೇಶದ ಧಾರಾನಗರವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವನ್ನು ಪಾಲಿಸುತಲಿದ್ದುದಲ್ಲದೆ, ಶೌರ್ಯವಂತನೆಂದು ಪ್ರಖ್ಯಾತಿಯನ್ನು ಪಡೆದಿದ್ದನು. ಮತ್ತು ಅನೇಕ ಸಾಮಂತ ರಾಜರನ್ನುಳ್ಳವನಾಗಿ ಚಕ್ರವರ್ತಿ ಎನಿಸಿಕೊಂಡಿದ್ದನು. ಈತನಿಗೆ ಇಬ್ಬರು ಪತ್ನಿಯರು. ಇವರ ಹೆಸರುಗಳು ತಿಳಿಯದಿದ್ದರೂ, ಪಟ್ಟ ಮಹಿಷಿಯು ವಾಘೇಲಿ ವಂಶದವಳು ಎಂತಲೂ, ದ್ವಿತೀಯಪತ್ನಿಯು ಸೋಳಂಕಿ

ವಂಶದವಳು ಎಂತಲೂ ತಿಳಿಯಬಂದಿದೆ. ವಾಘೇಲಿರಾಣಿಗೆ ರಣಧವಲ ಎಂಬ ಒಬ್ಬ ಪುತ್ರನೂ, ಸೋಳಂಕಿರಾಣಿಗೆ ಜಗದೇವ ಎಂಬ ಒಬ್ಬ ಪುತ್ರನೂ ಜನಿಸಿದರು.

ವಾಘೇಲಿ, ಸೋಳಂಕಿ ರಾಣಿಯರು ಸಪತ್ನಿಗಳಾದುದರಿಂದ ಒಬ್ಬರಲ್ಲಿ ಇನ್ನೊಬ್ಬರು ಅತ್ಯಂತ ಮತ್ಸರದಿಂದ ಪ್ರವರ್ತಿಸುತಲಿದ್ದರು. ಬಹು ಪತ್ನೀತ್ವ ದೋಷವು ನಮ್ಮ ಹಿಂದೂದೇಶದಲ್ಲಿ ಬಹುಕಾಲದಿಂದಲೂ, ಶಿಷ್ಟಾಚಾರವಾಗಿ ನಡೆಯುತಲಿರುವುದರಿಂದ, ಅನೇಕ ಕುಟುಂಬಗಳ ಸೌಖ್ಯವು ನಾಶವಾಗುತ ಲಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಪುರುಷನು ಒಬ್ಬ ಸ್ತ್ರೀಯನ್ನು ವಿವಾಹ ಮಾಡಿಕೊಂಡು ಆಕೆಯು ತನ್ನ ಸಹಧರ್ಮಚಾರಿಣಿ ಎಂಬುವುದನ್ನೂ, ಅರ್ಧಾಂಗಿ ಎಂಬುವುದನ್ನೂ 'ನಾತಿಚರಾಮಿ' ಎಂದು ವಿವಾಹ ಸಮಯದಲ್ಲಿ ಆಕೆಗೆ ವಚನ ವನ್ನು ಕೊಟ್ಟಿದೇನೆ ಎಂಬುವುದನ್ನೂ ಮರೆತು, ಎರಡನೆಯ ವಿವಾಹವನ್ನು ಮಾಡಿಕೊಂಡು, ಮೊದಲನೆಯ ಹೆಂಡತಿಯಲ್ಲಿದ್ದ ಪ್ರೇಮವನ್ನು ವಿಭಜಿಸುವುದು ದೊಡ್ಡ ಅನ್ಯಾಯವು ಎಂದು ಹೇಳಬೇಕೆ? ಏಕ ಪತಿವ್ರತವೂ, ಏಕಪತ್ನಿವ್ರತವೂ ಉತ್ತಮ ನಾಗರಿಕ ಲಕ್ಷಣವು ಎಂದು ಅರಿತವರು ಹೇಳುತ್ತಾರೆ. ನಮ್ಮ ಸಮಾಜ ದಲ್ಲಿ ಸ್ತ್ರೀಯರಿಗೆ ನಡೆಯುವ ಅನ್ಯಾಯಗಳಲ್ಲಿ ಬಹು ಪತ್ನೀಕತ್ವವು ಒಂದು.

ಉದಯಾದಿತ್ಯನು ವಾಘೇಲಿರಾಣಿಯಲ್ಲಿ ಬದ್ಧಾನುರಾಗವುಳ್ಳವನಾಗಿ ಸೋಳಂಕಿ ರಾಣಿಯನ್ನು ದಾಸಿಯಂತೆ ನೋಡುತಲಿದ್ದನು. ಹೀಗಿರಲು ಕೆಲವು ಕಾಲಕ್ಕೆ, ಸವತಿ ಮತ್ಸರವು ಅಧಿಕವಾಗಿ ವಾಘೇಲಿರಾಣಿಯು ಸೋಳಂಕಿರಾಣಿ ಯನ್ನು ಮನೆಯಿಂದ ಹೊರಡಿಸಿದಳು. ಆದರೆ ಮಂತ್ರಿಯು ಚಕ್ರವರ್ತಿ ಯೊಡನೆ ಹೇಳಿ ಸೋಳಂಕಿ ರಾಣಿಗೂ, ಆಕೆಯ ಪುತ್ರನಿಗೂ ಉದರ ಪೋಷ ಣಾರ್ಥವಾಗಿ ಎರಡು ಗ್ರಾಮಗಳನ್ನೂ, ವಾಸಮಾಡುವುದಕ್ಕೆ ನಗರದ ಹೊರಗೆ ಇದ್ದ ಒಂದು ಮನೆಯನ್ನೂ ಕೊಡಿಸಿದನು. ಸೋಳಂಕಿ ರಾಣಿಯು ವಿಚಾರ ಶೀಲಳಾದುದರಿಂದ, ಸಂಪ್ರಾಪ್ತವಾದ ದುಸ್ಥಿತಿಯಲ್ಲಿಯೂ ತನ್ನ ಮಗನ ವಿದ್ಯಾ ಬುದ್ಧಿಳಗನ್ನು ಮರೆಯದೆ, ಇತರ ವ್ಯಯಗಳನ್ನು ಕಡಮೆಮಾಡಿ ಮಿಕ್ಕ ದ್ರವ್ಯ ದಿಂದ ಪುತ್ರನಿಗೆ ರಾಜಯೋಗ್ಯವಾದ ವಿದ್ಯೆಗಳನ್ನು ಹೇಳಿಸಿದಳು. ಜಗದೇವನು ಅಲ್ಪಕಾಲದಲ್ಲಿಯೇ ರಣಧವಲನಿಗಿಂತ ಶೂರನು ಎಂತಲೂ, ವಿದ್ಯಾವಂತನು ಎಂತಲೂ ಪ್ರಸಿದ್ಧಿಯನ್ನು ಪಡೆದನು. ಪ್ರಜೆಗಳೆಲ್ಲರೂ ಜಗದೇವನನ್ನೇ ಪ್ರೀತಿ ಸುತಲಿದ್ದರು. ಚಕ್ರವರ್ತಿಯು ಸಹ ಪುತ್ರನ ಶೌರ್ಯಸಾಹಸಗಳನ್ನು ಕೇಳಿ ಸಂತೋಷಿಸುತಲಿದ್ದನು. ಆದರೆ ವಾಘೇಲಿರಾಣಿಗೆ ಕೋಪ ಉಂಟಾಗುವುದು ಎಂಬ ಭಯದಿಂದ ಅತನು ಜಗದೇವನಲ್ಲಿ ಇರುವ ಪ್ರೇಮವನ್ನು ಸ್ಪಷ್ಟಪಡಿಸಲು ಹೆದರುತಲಿದ್ದನು. ಈ ವಿಧವಾಗಿ ಕೆಲವುಕಾಲ ಕಳೆದ ಅನಂತರ ಮೇಲೆ

ಹೇಳಿದಂತೆ ಬಿರಜರಾಜನು ಕಳುಹಿಸಿದ ಶುಭಲೇಖನವನ್ನು ತೆಗೆದುಕೊಂಡು ಕೆಲಬ್ರಾಹ್ಮಣರು ಉಧಯಾದಿತ್ಯನ ಸಭೆಗೆ ಬಂದರು. ಆ ಲೇಖನವನ್ನು ನೋಡಿ ಉದಯಾದಿತ್ಯನು ಆನಂದಭರಿತನಾದನು. ಆಗ್ಯೆ ರಣಧವಳನಿಗೆ ವಿವಾಹವಾಗಿರಲಿಲ್ಲ. ಆದಕಾರಣ ವಾಘೇಲಿರಾಣಿಯು ಜಗದೇವನ ವಿವಾಹಕ್ಕೆ ಅನುಮತಿಯನ್ನು ಕೊಡುವಳೋ ಇಲ್ಲವೋ ಎಂದು ಚಕ್ರವರ್ತಿಯು ಸಂಶಯಿಸಿದನು. ಜಗದೇವನ ಅದೃಷ್ಟವು ಒಳ್ಳೆಯದಾಗಿದ್ದುದರಿಂದ ಹೇಗೋ ವಾಘೇಲಿರಾಣಿಯು ಆತನ ವಿವಾಹಕ್ಕೆ ಸಮ್ಮತಿಸದಳು.

ಅನಂತರ ಉಧಯಾದಿತ್ಯನು ಸಪರಿವಾರನಾಗಿ ಟುಕಟೀಡಾ ಗ್ರಾಮಕ್ಕೆ ಹೋಗಿ ಪುತ್ರನ ವಿವಾಹವನ್ನು ವೈಭವದೊಡನೆ ನೆರವೇರಿಸಿಕೊಂಡು, ಸೊಸೆಯಾದ ವೀರಮತಿಯನ್ನು ಕರೆದುಕೊಂಡು ಧಾರಾನಗರಕ್ಕೆ ಬಂದನು. ಜಗದೇವನ ನುದುವೆಯು ನಡೆದಮೇಲೆ ಸೋಳಂಕಿರಾಣಿಯೂ, ಜಗದೇವರಾಜನೂ ಗೃಹದಲ್ಲಿಯೇ ಇದ್ದರು. ವೀರಮತಿಯು ಅತ್ತೆಯ ಮನೆಯಲ್ಲಿ ಕೆಲವು ದಿವಸಗಳಿದ್ದು ಆಮೇಲೆ ತೌರುಮನೆಗೆ ಹೋದಳು.

ಜಗದೇವನು ಪ್ರತಿದಿವಸವೂ ರಾಜಸಭೆಗೆ ಹೋಗಿ ಅನೇಕ ರಾಜಕಾರ್ಯಗಳನ್ನು ನಿರ್ವಹಿಸುತಲಿದ್ದುದರಿಂದ, ಆತನ ಕೀರ್ತಿಯು ದಿನದಿನಾಭಿವೃದ್ಧಿಯನ್ನು ಪಡೆಯುತ್ತಿತ್ತು. ರಣಧವಳನು ಬಾಲ್ಯದಿಂದಲೂ ಹುಚ್ಚಿನಂತೆ ಇರುತಲಿದ್ದುದರಿಂದ ಆತನ ಕೆಲಸಗಳು ಯಾರಿಗೂ ತೃಪ್ತಿಯನ್ನು ಉಂಟುಮಾಡುತ್ತಿರಲಿಲ್ಲ. ಈ ವಿಧವಾಗಿಯೇ ಕೆಲವು ದಿವಸಗಳು ಕಳೆದರೆ, ಪ್ರಜೆಗಳ ಪ್ರೇಮಕ್ಕೆ ಪಾತ್ರನಾಗಿರುವ ಜಗದೇವನು ತನ್ನ ಪುತ್ರನನ್ನು ಹೊರಡಿಸಿ ತಾನೇ ಸಿಂಹಾಸನವನ್ನು ಆಕ್ರಮಿಸಬಹುದು ಎಂದು ವಾಘೇಲಿರಾಣಿಯು ಎಣಿಸಿದಳು. ಮತ್ತು ಯಾವವಿಧವಾಗಿಯಾದರೂ ಜಗದೇವನಿಗೆ ಅನಿಷ್ಟವನ್ನು ಉಂಟುಮಾಡಬೇಕು ಎಂದು ಸಹ ನಿಶ್ಚಯಿಸಿಕೊಂಡಳು.

ಜಗದೇವನು, ತನ್ನ ಬಲತಾಯಿಯು ತನ್ನ ಮೇಲೆ ಪುತ್ರವಾತ್ಸಲ್ಯವನ್ನು ಇಟ್ಟಿರಬೇಕು ಎಂಬ ಅಪೇಕ್ಷೆಯಿಂದ, ಆಗಾಗ್ಗೆ ವಾಘೇಲಿರಾಣಿಯ ಅಂತಃಪುರಕ್ಕೆ ಹೋಗುತಲಿದ್ದನು. ವಾಘೇಲಿರಾಣಿಯು ತನ್ನ ಅಂತಃಪುರಕ್ಕೆ ಶುದ್ಧಾಂತಃಕರಣದೊಡನೆ ಬರುತಲಿದ್ದ ಜಗದೇವನ ಮೇಲೆ ದೊಡ್ಡ ನಿಂದೆಯನ್ನು ಹೊರಿಸಿ, ರಾಜನಿಗೆ ನಂಬಿಕೆಯು ಹುಟ್ಟುವಂತೆ ಮಾಡಿದಳು. ಇದರಿಂದ ಜಗದೇವನು ರಾಜಭ್ರಷ್ಟನಾದನು. ಆಗ ಜಗದೇವನು ಕೆಲವು ಆಯುಧಗಳನ್ನು ತೆಗೆದುಕೊಂಡು ಕುದುರೆಯನ್ನು ಹತ್ತಿ ಪಟ್ಟಣ ಎಂಬ ಸ್ವತಂತ್ರಸಂಸ್ಥಾನಕ್ಕೆ ಹೊರಟನು. ಅನಂತರ ತನ್ನ ಪತ್ನಿಯನ್ನು ನೋಡಿ ಆಕೆಯ ಸಮ್ಮತಿಯನ್ನು ಪಡೆದು ಹೋಗೋಣ

ಎಂದು ಎಣಿಸಿ, ಕುದುರೆಯನ್ನು ಟುಕಟೀಡಾ ಗ್ರಾಮದ ಕಡೆಗೆ ತಿರಿಗಿಸಿದನು. ಜಗದೇವನು ಕೆಲವು ದಿವಸಗಳಿಗೆ ಟುಕಟೀಡಾ ಗ್ರಾಮಸಮೀಪದಲ್ಲಿ ಇದ್ದ ಒಂದು ಉದ್ಯಾನವನವನ್ನು ಸೇರಿದನು. ಆಗ್ಗೆ ಸಾಯಂಕಾಲವಾಗಿ ಇದ್ದುದರಿಂದಲೂ, ಕುದುರೆಯು ಆಯಾಸವನ್ನು ಹೊಂದಿದ್ದುದರಿಂದಲೂ, ಅಲ್ಲಿ ಸ್ವಲ್ಪಹೊತ್ತು ಶ್ರಮವನ್ನು ಪರಿಹರಿಸಿಕೊಂಡು, ರಾತ್ರಿಯ ಬೆಳದಿಂಗಳಿನಲ್ಲಿ ಗ್ರಾಮವನ್ನು ಸೇರಬಹುದು ಎಂದು ಕುದುರೆಯನ್ನು ಮೇಯುವುದಕ್ಕೆ ಬಿಟ್ಟು, ತಾನು ಫಲಾಹಾರವನ್ನು ಮಾಡಿ, ಅಲ್ಲಿಯೇ ನಿದ್ರಿಸಿದನು.

ಜಗದೇವನನ್ನು ರಾಜ್ಯದಿಂದ ಹೊರಡಿಸಿದ ಮೇಲೆ, ವಾಘೇಲಿರಾಣಿಯು ಕೆಲವು ಜನ ದುರ್ಮಾರ್ಗರಿಗೆ ಧನಾಶೆಯನ್ನು ತೋರಿಸಿ, ಜಗದೇವನನ್ನು ಮಾರ್ಗ ಮಧ್ಯದಲ್ಲಿ ಕೊಂದುಹಾಕುವಂತೆ ಹೇಳಿಕಳುಹಿಸಿದಳು. ಜಗದೇವನು ಅಡ್ಡಹಾದಿಯಲ್ಲಿ ಹೋಗುತಲಿದ್ದುದರಿಂದ ಆ ದುರ್ಮಾರ್ಗರಿಗೆ ಈತನು ಮಾರ್ಗದಲ್ಲಿ ದೊರೆಯಲಿಲ್ಲ. ಈತನು ಉದ್ಯಾನವನದಲ್ಲಿ ನಿದ್ರೆಮಾಡುತಲಿದ್ದ ಸಮಯದಲ್ಲಿ, ಆ ದುರ್ಮಾರ್ಗರಲ್ಲಿ ನಾಲ್ಕು ಜನರು ಅಲ್ಲಿಗೆ ಪ್ರವೇಶಿಸಿ, ಮಲಗಿದ್ದ ರಾಜಪುತ್ರನನ್ನು ಬಂಧಿಸಿ ಅರಣ್ಯಕ್ಕೆ ತೆಗೆದುಕೊಂಡು ಹೋದರು. ಈ ಸಮಯದಲ್ಲಿಯೇ ವೀರಮತಿಯೂ, ಆಕೆಯ ಸಖಿಯೂ ಪುರುಷವೇಷಗಳನ್ನು ಧರಿಸಿ, ಬೇಟೆಯಾಡಿ ಆ ವನಕ್ಕೆ ಬಂದರು. ಆಗ ಅಲ್ಲಿದ್ದ ಸೇವಕರು ಯಾರೋ ಒಬ್ಬ ರಾಜಕುಮಾರನು ಆ ವನಕ್ಕೆ ಬಂದಿದ್ದನೆಂತಲೂ ಆತನನ್ನು ನಾಲ್ಕು ಜನ ಕಳ್ಳರು ಹಿಡಿದುಕೊಂಡು ಹೋದರೆಂತಲೂ ಆಕೆಯೊಡನೆ ತಿಳಿಸಿದರು. ಈ ಮಾತುಗಳನ್ನು ಕೇಳಿ ದೊಡನೆಯೇ, ಆ ರಾಜಪುತ್ರನನ್ನು ಬಿಡಿಸಲು ಎಣಿಸಿ, ವೀರಮತಿಯೂ ಆಕೆಯ ಸಖಿಯೂ ಕಳ್ಳರು ಹೋದ ಮಾರ್ಗದಲ್ಲಿ ತಮ್ಮ ಕುದುರೆಗಳನ್ನು ಓಡಿಸಿದರು. ಅವರು ಸ್ವಲ್ಪದೂರ ಹೋದಮೇಲೆ ಅರಣ್ಯದಲ್ಲಿ ಬಂಧಿತನಾಗಿರುವ ಜಗದೇವನನ್ನು ಮಧ್ಯದಲ್ಲಿ ಇಟ್ಟುಕೊಂಡು ಕೊಲ್ಲೋಣವೋ ಬೇಡವೋ ಎಂದು ತಮ್ಮೊಳಗೆ ತಾವು ತರ್ಕಿಸುತಲಿದ್ದ ಚೋರಚತುಷ್ಟಯವನ್ನು ನೋಡಿದರು. ಪುರುಷವೇಷಧಾರಿಗಳಾದ ಇವರನ್ನು ನೋಡಿ ಆ ಚೋರರು ಇವರಲ್ಲಿರುವ ಧನವನ್ನು ಸುಲಿದುಕೊಳ್ಳುವುದಕ್ಕಾಗಿ ಇವರ ಸಮೀಪಕ್ಕೆ ಬಂದರು. ಆಗ ವೀರಮತಿಯೂ, ಆಕೆಯ ಸಹಚರಿಯೂ ತಮ್ಮ ಕಂಕಪತ್ರಗಳನ್ನೂ, ಭಲ್ಲೆಯಗಳನ್ನೂ ಅವರ ಮೇಲೆ ಪ್ರಯೋಗಿಸಿದರು. ಆಗ ಉಭಯಪಕ್ಷದವರಿಗೂ ಸ್ವಲ್ಪ ಕದನವು ನಡೆದು ವೀರಮತಿಯ ಭಲ್ಲೆಯದ ಇರಿತದಿಂದ ಒಬ್ಬ ಕಳ್ಳನು ಮೃತನಾದನು. ಇನ್ನೊಬ್ಬನು ಆಕೆಯ ಸಖಿಯಿಂದ ಆಹತನಾಗಿ ಕೆಳಗೆ ಬಿದ್ದನು. ಇವರ ಸ್ಥಿತಿಯನ್ನು ನೋಡಿ ಮಿಕ್ಕವರು ಓಡಿಹೋದರು. ಅನಂತರ ವೀರಮತಿಯು ಜಗದೇವನ ಬಂಧಗಳನ್ನು ಬಿಚ್ಚಿ, ಆತನು ತನ್ನ ಪತಿ ಎಂಬುದನ್ನು ತಿಳಿದುಕೊಂಡು, ತಾನು ಯಾರು ಎಂಬುವುದನ್ನು ಆತನಿಗೆ ತಿಳಿಸದೆ ಗ್ರಾಮಕ್ಕೆ ತನ್ನೊಡನೆ ಬರಬೇಕು ಎಂದು ಬಲವಂತ

ಮಾಡಿ ಕರೆದುಕೊಂಡು ಹೋದಳು. ಅಲ್ಲಿಗೆ ಹೋದಮೇಲೆ ವೀರಮತಿಯು ತನ್ನ ನಿಜರೂಪವನ್ನು ತೋರಿಸಲು, ತನ್ನ ಪ್ರಾಣವನ್ನು ಕಾಪಾಡಿದವಳು ತನ್ನ ಪತ್ನಿಯೇ ಎಂದು ತಿಳಿದು ಜಗದೇವನು ಅತ್ಯಂತ ಆನಂದಭರಿತನಾದನು. ಆಗ ವೀರಮತಿಯು, "ನಮಗೆ ತಿಳಿಸದೆ ಈ ಪ್ರಕಾರವಾಗಿ ಒಬ್ಬರೇ ಬರಲು ಕಾರಣವು ಏನು?" ಎಂದು ಪತ್ನಿಯನ್ನು ಕೇಳಿದಳು. ಅದರ ಮೇಲೆ ಜಗದೇವನು ನಡೆದ ವೃತ್ತಾಂತವನ್ನೆಲ್ಲ ಪತ್ನಿಗೆ ತಿಳಿಸಿ, "ನನ್ನನ್ನು ತೆಗೆದುಕೊಂಡು ಹೋದ ದುಷ್ಟ ರನ್ನು ನನ್ನ ಬಲತಾಯಿಯು ಕಳುಹಿಸಿದಳು. ನಾನು ಇನ್ನುಮೇಲೆ ಇಲ್ಲಿ ಇದ್ದರೆ ನಿಮ್ಮ ಅಣ್ಣನು ನನ್ನ ತಂದೆಗೆ ಸಾಮಂತನಾದ ಕಾರಣ ಆತನಿಗೆ ಕೇಡುಂಟಾಗು ವುದು. ಆದುದರಿಂದ ನಾನು ಪಟ್ಟಣಸಂಸ್ಥಾನಕ್ಕೆ ಹೋಗಿ ಯಾವುದಾದರೂ ಒಂದು ಉದ್ಯೋಗವನ್ನು ಸಂಪಾದಿಸಿಕೊಂಡು ನಿನ್ನನ್ನು ಕರೆಯಿಸಿಕೊಳ್ಳುವೆನು. ನನಗೆ ಅನುಜ್ಞೆಯನ್ನು ಕೊಡು," ಎಂದು ಕೇಳಿದನು. ಅದಕ್ಕೆ ವೀರಮತಿಯು ತನ್ನನ್ನು ಸಹ ಸಂಗಡ ಕರೆದುಕೊಂಡು ಹೋಗಬೇಕೆಂದು ಬೇಡಿಕೊಂಡಳು. ಆ ಮೇಲೆ ಜಗದೇವನು ಬಿರಜನ ಸಮ್ಮತಿಯನ್ನು ಪಡೆದು ಪತ್ನಿಯೊಡನೆ ಹೊರಡಲು ಸಿದ್ಧನಾದನು. ಬಿರಜನು ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಹೋಗಬೇಕೆಂದು ಜಗದೇವನನ್ನು ಕೇಳಿಕೊಂಡನು. ಆದರೆ ಜಗದೇವನು ಸೈನ್ಯವು ಅನಾವಶ್ಯಕವು ಎಂದು ನುಡಿದು, ಪತ್ನಿಯನ್ನು ಒಂದು ಕುದುರೆಯ ಮೇಲೆ ಕುಳ್ಳಿರಿಸಿ, ತಾನು ಒಂದು ಕುದುರೆಯ ಮೇಲೆ ಕುಳಿತುಕೊಂಡು ಯುದ್ಧಮಾಡುವುದಕ್ಕೆ ಉಪ ಯೋಗಿಸುವ ಶಸ್ತ್ರಗಳನ್ನು ಮಾತ್ರ ತೆಗೆದುಕೊಂಡು ಹೊರಟನು.

ಇವರು ಪ್ರಯಾಣಮಾಡುತ್ತ ಒಂದುದಿವಸ ಮಧ್ಯಾಹ್ನ ಒಂದು ಹಳ್ಳಿಯ ಲ್ಲಿನಿಂತು, ಭೋಜನವನ್ನು ಮಾಡಿ, ವಿಶ್ರಾಂತಿಯನ್ನು ಪಡೆದು, ಅಲ್ಲಿನ ಜನರನ್ನು ಪಟ್ಟಣಕೆ ಯಾವ ಮಾರ್ಗವಾಗಿ ಹೋಗಬೇಕು ಎಂದು ಕೇಳಿದರು. ಅದಕ್ಕೆ ಆ ಹಳ್ಳಿಯ ಜನರು ಪಟ್ಟಣಕ್ಕೆ ಎರಡು ಮಾರ್ಗಗಳು ಇವೆ ಎಂತಲೂ ಅವುಗಳಲ್ಲಿ ಒಂದು ಮಾರ್ಗದಲ್ಲಿ ಮನುಷ್ಯರನ್ನು ತಿನ್ನುವ ಎರಡು ದೊಡ್ಡ ಹುಲಿಗಳು ಇವೆ ಎಂತಲೂ ಹೇಳಿದರು. ಆಗ ವೀರಮತಿಯು ಹುಲಿಗಳು ಇರುವ ಮಾರ್ಗದಲ್ಲಿಯೇ ಹೋಗಿ, ಅವುಗಳನ್ನು ಬೇಟೆಯಾಡಿಕೊಂಡು ಪ್ರಜೆಗಳ ಬಾಧೆಯನ್ನು ಹೋಗಲಾಡಿ ಸೋಣ," ಎಂದು ಹೇಳಿದಳು. ಪತ್ನಿಯ ಶೌರ್ಯೋತ್ಸಾಹಪೂರಿತಗಳಾದ ಮಾತು ಗಳನ್ನು ಕೇಳಿ ಜಗದೇವನು ಸಂತೋಷಚಿತ್ತದಿಂದ ಆ ಮಾರ್ಗದಲ್ಲಿಯೇ ಹೋಗಲು ಅಂಗೀಕರಿಸಿದನು. ಇವರು ಸುಮಾರು ಹತ್ತುಮೈಲಿಗಳ ಮಾರ್ಗವನ್ನು ಅತಿ ಕ್ರಮಿಸಿದ ಮೇಲೆ, "ಈ ಕ್ರೂರಮೃಗವನ್ನು ಕೊಂದು ನಮ್ಮ ಪ್ರಾಣವನ್ನು ರಕ್ಷಿಸಿರಿ," ಎಂಬ ಮಾತುಗಳನ್ನು ಕೇಳಿದರು. ಆಗ ಈ ದಂಪತಿಗಳು ಇನ್ನ ಸ್ವಲ್ಪ ಮುಂದಕ್ಕೆ ಹೋಗಿ ನೋಡಲು, ಅಲ್ಲಿ ಒಂದು ದೊಡ್ಡ ಮರದಮೇಲೆ ಇಬ್ಬರು ಮನು ಷ್ಯರು ಕುಳಿತುಕೊಂಡು ನಡುಗುತಲಿರುವುದೂ, ಮರದ ಕೆಳಗೆ ಒಂದು ದೊಡ್ಡ

ಹುಲಿಯು ಘರ್ಜಿಸುತ್ತಲೂ, ಹಾರುತ್ತಲೂ, ಭಯಂಕರವಾದ ರೂಪವನ್ನು ಧರಿಸಿ, ಮೇಲಿರುವ ಮನುಷ್ಯರನ್ನು ಕೆಳಕ್ಕೆ ಬೀಳಿಸಲು ಪ್ರಯತ್ನಮಾಡುತಲಿರುವುದೂ ಅವರಿಗೆ ಕಂಡು ಬಂದಿತು. ಆಮೇಲೆ ಇವರು ಆ ಹುಲಿಯನ್ನು ಸಮಿಾಪಿಸಿ, ಒಂದು ಪೊದರಿನ ಪಾರ್ಶ್ವದಲ್ಲಿ ನಿಂತು, ಅದರ ಬೆನ್ನಿಗೆ ತಾಕುವಂತೆ ಬಾಣ ಗಳನ್ನು ಹಾಕಿದರು. ಆಗ ಆ ಹುಲಿಯು ಮರದಮೇಲಿದ್ದ ಮನುಷ್ಯರನ್ನು ಬಿಟ್ಟು ತನ್ನನ್ನು ನೋಯಿಸಿದ ದಂಪತಿಗಳ ಮೇಲಕ್ಕೆ ಹಾರಿತು. ಅಷ್ಟರಲ್ಲಿ ಜಗದೇವನು ಮತ್ತೊಂದು ಬಾಣವನ್ನು ಬಿಟ್ಟನು. ಆದರೆ ಅದು ಗುರಿತಪ್ಪಿಹೋದುದರಿಂದ ಆ ಹುಲಿಯು ಜಗದೇವನನ್ನು ಮತ್ತಷ್ಟು ಸಮಿಾಪಿಸಿತು. ಆಗ ವೀರಮತಿಯು ತನ್ನ ಕೈಯಲ್ಲಿದ್ದ ಭಲ್ಲೆಯವನ್ನು ಅದರ ಹೊಟ್ಟೆಯೊಳಕ್ಕೆ ಚುಚ್ಚಲು, ಆ ಹುಲಿಯು ಕೆಳಗೆ ಬಿದ್ದೂ ಪ್ರಾಣವನ್ನು ಬಿಡುತ್ತಾ ಘಟ್ಟಿಯಾಗಿ ಘರ್ಜಿಸಿತು. ಆ ಘರ್ಜನೆ ಯನ್ನು ಕೇಳಿ ಹೊದರಿನೊಳಗೆ ಇದ್ದ ಹೆಣ್ಣುಹುಲಿಯು ಅದಕ್ಕಿಂತಲೂ ಘಟ್ಟಿ ಯಾಗಿ ಘರ್ಜಿಸುತ್ತ, ತನ್ನ ಪ್ರಾಣಕಾಂತನ ಸಹಾಯಕ್ಕೆ ಬಂದಿತು. ಆ ಶೂರ ದಂಪತಿಗಳು ಆ ಹುಲಿಯನ್ನು ಸಹ ಕೊಂದುರು. ಆದರೆ ಅದರ ಉಗುರುಗಳಿಂದ ಘಾಯವನ್ನು ಹೊಂದಿ ಜಗದೇವನ ಕುದುರೆಯು ಸತ್ತುಹೋಯಿತು. ಅದಕ್ಕೆ ಜಗದೇವನು ಬಹಳ ಚಿಂತಿಸಿ ಅದರ ಮೇಲೆ ತನ್ನ ಅಂಗವಸ್ತ್ರವನ್ನು ಹೊದಿಸಿದನು. ಎರಡು ಹುಲಿಗಳೂ ಮೃತವಾದುದನ್ನು ನೋಡಿ ಮರದಮೇಲಿದ್ದ ಮನುಷ್ಯರು ಇಳಿದು ಬಂದು ಜಗದೇವ ವೀರಮತಿಯರಿಗೆ ನಮಸ್ಕರಿಸಿದರು. ಜಗದೇವನು ಅವರ ಪರಿಚಯವನ್ನು ಕೇಳಲು, ಅವರು "ಉದಯಾದಿತ್ಯ ಮಹಾರಾಜನ ಎರಡ ನೆಯ ಮಗನಾದ ಜಗದೇವನು ಇಪ್ಪತ್ತು ದಿವಸಗಳ ಕೆಳಗೆ ಯಾರಿಗೂ ಹೇಳದೆ ಮನೆಯಿಂದ ಹೊರಟು ಎಲ್ಲಿಗೋ ಹೋದನು. ಆತನ ತಾಯಿಯಾದ ಸೋಳಂಕಿ ರಾಣಿಯು ಆತನನ್ನು ಹುಡುಕುವುದಕ್ಕಾಗಿ ಮಂತ್ರಿಯಾದ ಧೀರಸಿಂಹನನ್ನು ಕಳು ಹಿಸಿದಳು. ನಾವು ಧಾರಾನಗರ ಸಮಿಾಪದಲ್ಲಿರುವ ಒಂದು ಹಳ್ಳಿಯವರು. ಮುಂದಿನ ಮಜಲಿನಲ್ಲಿ ಭೋಜನಾದಿಗಳನ್ನು ಸಿದ್ಧಪಡಿಸುವುದಕ್ಕಾಗಿ, ನಾವು ಎಲ್ಲರಿ ಗಿಂತಲೂ ಮುಂದೆಹೊರಟು ಬರುತ್ತಿರಲು, ದಾರಿತಪ್ಪಿ ಈ ಅರಣ್ಯಕ್ಕೆ ಬಂದು ಹುಲಿಗಳಿಂದ ಪೀಡಿತರಾದೆವು," ಎಂದು ತಿಳಿಸಿದರು. ಜಗದೇವನು ತನ್ನ ತಾಯಿಯ ಕ್ಷೇಮವನ್ನು ತಿಳಿದು, ಆಕೆಯು ತನಗೋಸ್ಕರ ಧೀರಸಿಂಹನನ್ನು ಕಳು ಹಿಸಿದಳು ಎಂದು ಕೇಳಿ, ಆತನಿರುವಸ್ಥಳಕ್ಕೆ ಮಾರ್ಗವನ್ನು ತೋರಿಸುವಂತೆ ಆ ಮನುಷ್ಯರಿಗೆ ಆಜ್ಞಾಪಿಸಿದನು. ಅವರಲ್ಲಿ ಒಬ್ಬನು ಮುಂದುಗಡೆ ದಾರಿತೋರಿ ಸುತ್ತ ಹೊರಟನು. ಅವರು ಎಲ್ಲರೂ ಸ್ವಲ್ಪದೂರ ಹೋದಮೇಲೆ, ಎಂಟು ಹತ್ತು ಜನ ಕುದುರೆ ಸವಾರರು ಅವರ ಹಿಂದೆ ಬರುತಲಿರುವಂತೆ ತೋರಿತು. ಅವರು ಧೀರಸಿಂಹನ ಕಡೆಯವರಾಗಿರಬಹುದು ಎಂದು ಎಣಿಸಿ, ಜಗದೇವನೇ ಮೊದಲಾ ದವರು ಅವರನ್ನು ನಿರೀಕ್ಷಿಸುತ್ತ ಅಲ್ಲಿಯೇ ನಿಂತುಕೊಂಡರು. ಆದರೆ ಸ್ವಲ್ಪ

ಹೊತ್ತಿಗೆ ಬರುತಲಿರುವವರು ಶತ್ರುಗಳು ಎಂದು ತೋರಿತು. ಕೂಡಲೆ ಜಗದೇವ ವೀರಮತಿಯರು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಯುದ್ಧಸನ್ನದ್ಧರಾದರು. ಅವರ ಬಳಿಯಲ್ಲಿದ್ದ ಸೇವಕರು ಕೆಲವು ಕಲ್ಲುಗಳನ್ನು ಆರಿಸಿಕೊಂಡು ಒಂದು ಮರದ ಮೇಲೆ ಹತ್ತಿ ಶತ್ರುಗಳ ಮೇಲೆ ಕಲ್ಲುಗಳನ್ನು ಹಾಕುತಲಿದ್ದರು.

ಆ ಕುದುರೆಸವಾರರು ಆ ದಂಪತಿಗಳನ್ನು ಸುತ್ತಿಕೊಂಡರು. ಅವರು ಎಂಟು ಜನರಾದುದರಿಂದ, ಅವರೊಡನೆ ಹೋರಾಡಿ ಗೆಲ್ಲುವುದು ಕಷ್ಟವು ಎಂದು ಎಣಿಸಿ, ಅವರು ತಮ್ಮನ್ನು ಸಮೀಪಿಸದಂತೆ ಖಡ್ಗವನ್ನು ಸುತ್ತಲೂ ತಿರಿಗಿಸಿಕೊಳ್ಳುವುದರಿಂದ ಪ್ರಾಣವನ್ನು ಕಾಪಾಡಿಕೊಳ್ಳಬಹುದು ಎಂದು ಹಾಗೆ ಮಾಡುವಂತೆ ಪತ್ನಿಗೆ ತಿಳಿಸಿ ತಾನು ಸಹ ಹಾಗೆಯೇ ಮಾಡುತಲಿದ್ದನು. ಆ ಶತ್ರುಗಳಲ್ಲಿ ಹಿಂದೆ ಜಗದೇವನನ್ನು ಹಿಡಿದುಕೊಂಡು ಹೋದ ಜನಗಳಲ್ಲಿ ಒಬ್ಬನು ಇದ್ದುದರಿಂದ ತಮ್ಮನ್ನು ಕೊಲ್ಲುವುದಕ್ಕಾಗಿ ಇವರನ್ನು ವಾಘೇಲಿರಾಣಿಯು ಕಳುಹಿಸಿದಳೆಂದು ಜಗದೇವ ವೀರಮತಿಯರು ತಿಳಿದುಕೊಂಡರು. ಆ ಶತ್ರುಗಳು ಇವರಮೇಲೆ ಅನೇಕ ಬಾಣಗಳನ್ನು ಬಿಟ್ಟರು. ಆದರೆ ಇವರು ತಿರುಗಿಸುತಲಿದ್ದ ಖಡ್ಗಕ್ಕೆ ತಗಲಿ ಆ ಬಾಣಗಳು ವ್ಯರ್ಥವಾದವು. ಆ ಸಮಯದಲ್ಲಿ ಅವರ ಶರೀರಗಳನ್ನು ಸ್ಪರ್ಶಿಸುವುದಕ್ಕೆ ವಾಯುದೇವನಿಗೂ ಅಶಕ್ಯವು ಎಂದು ತೋರಿತು. ಬಹಳ ಹೊತ್ತಿನವರೆಗೂ ಕತ್ತಿಯನ್ನು ತಿರಿಗಿಸಿ ವೀರಮತಿಯು ಆಯಾಸವನ್ನು ಹೊಂದಿದಳು. ಮುಂದೆ ಹಾಗೆ ಖಡ್ಗವನ್ನು ತಿರುಗಿಸುವುದು ಅಶಕ್ಯವು ಎಂದು ಎಣಿಸಿ ಆಕೆಯು ಆ ಯಾಪ್ತಿಕರ ಆವರಣವನ್ನು ಒಡೆದುಕೊಂಡು ಹೊರಗೆಹೋಗುವುದು ಒಳ್ಳೆಯದು ಎಂದು, ಹಾಗೆ ಮಾಡುವಂತೆ ಪತಿಗೆ ಸೂಚಿಸಿದಳು. ಆಮೇಲೆ ವೀರಮತಿಯು ಶತ್ರುಗಳ ಅಧಿಪತಿಯಮೇಲೆ ಒಂದು ಬಾಣವನ್ನು ಬಿಡಲು ಅದು ಗುರಿತಪ್ಪಿ ಆತನ ಕುದುರೆಗೆ ತಗುಲಿದುದರಿಂದ ಕುದುರೆಯು ಸತ್ತುಹೋಯಿತು. ಕುದುರೆಯು ಕೆಳಗೆ ಬಿದ್ದುದರಿಂದ ಅದರ ಮೇಲೆ ಇದ್ದ ಸವಾರನು ಕೆಳಗೆ ಬಿದ್ದು ಮೂರ್ಛಿತನಾದನು. ತಮ್ಮನಾಯಕನ ಸ್ಥಿತಿಯನ್ನು ನೋಡಿ ಮಿಕ್ಕವರು ಕ್ರೋಧಾವೇಶದೊಡನೆ ವೀರಮತಿಯನ್ನು ಸುತ್ತಿಕೊಂಡರು. ಆಕೆಯೂ ಧೈರ್ಯದಿಂದ ಅವರೊಡನೆ ಯುದ್ಧಮಾಡುತಲಿದ್ದಳು. ಆದರೆ ಬಹಳಹೊತ್ತಿನಿಂದ ಯುದ್ಧಮಾಡಿ ಬಳಲಿದ್ದಳಾದುದರಿಂದ ಈ ಘೋರ ಕಲಹದಲ್ಲಿ ಆಕೆಯ ಖಡ್ಗವು ಕೈಜಾರಿ ಕೆಳಗೆ ಬಿತ್ತು. ಆಕೆಯು ಅದನ್ನು ತೆಗೆದುಕೊಳ್ಳಲು ಪ್ರಯತ್ನಿಸುವಷ್ಟರಲ್ಲಿ, ಆಕೆಯ ಕೈಗೆ ಒಂದು ಬಾಣವೂ, ಕಾಲಿಗೆ ಒಂದು ಬಾಣವೂ ತಗಲಿತು. ಅವನ್ನು ತೆಗೆಯುವುದರೊಳಗೆ ಒಬ್ಬನು ಹಿಂದಿನಿಂದ ಬಂದು ಆಕೆಯ ಕತ್ತನ್ನು ಹಿಡಿದುಕೊಂಡನು. ಇದರಿಂದ ವೀರಮತಿಯು ಮೂರ್ಛಿತೆಯಾದಳು. ಕೂಡಲೆ ಜಗದೇವನು ಆ ದುಷ್ಟನ ಕೈಯನ್ನು ಕತ್ತರಿಸಿ ತನ್ನ ಪ್ರಿಯಸತಿಯನ್ನು ಬಿಡಿಸಿಕೊಂಡನು. ಆಗ ಜಗದೇವನಿಗೆ ಪತ್ನಿಯನ್ನು ರಕ್ಷಿಸಿಕೊಳ್ಳುತ್ತ ಯುದ್ಧಮಾಡಬೇಕಾಯಿತು. ಶೂರವರನಾದ ಜಗದೇವನು

ಹೀಗೆ ಯುದ್ಧಮಾಡುತ್ತಿರುವಾಗ ದೈವವಶದಿಂದ ಧೀರಸಿಂಹನು ಇಪ್ಪತ್ತು ಜನ ಅನುಚರರೊಡನೆ ಆ ಮಾರ್ಗವಾಗಿಯೇ ಬಂದನು. ಆತನು ಜಗದೇವನನ್ನು ಗುರುತಿಸಿ, ಆ ಕಳ್ಳರನ್ನೆಲ್ಲ ಹಿಡಿದು ಬಂಧಿಸಿದನು. ಮೂರ್ಛಿತಳಾಗಿರುವುದು ವೀರಮತಿ ಎಂದು ತಿಳಿದು ಆಕೆಗೆ ಶೈತ್ಯೋಪಚಾರಗಳನ್ನು ಮಾಡಿಸಿ ಆಕೆಯ ಗಾಯಗಳಿಗೆ ಔಷಧವನ್ನು ಹಾಕಿಸಿದನು. ಆಮೇಲೆ ವೀರಮತಿಯು ಮೂರ್ಛೆಯಿಂದ ಎಚ್ಚತ್ತು ಧೀರಸಿಂಹನನ್ನು ನೋಡಿ ಆತನಿಗೆ ಪ್ರಣಾಮವನ್ನು ಮಾಡಿದಳು. ಅನಂತರ ಧೀರಸಿಂಹನು ಕಳ್ಳರ ವೃತ್ತಾಂತವನ್ನೆಲ್ಲ ಜಗದೇವನಿಂದ ತಿಳಿದುಕೊಂಡನು. ಅವರೆಲ್ಲರೂ ಆದಿವಸ ಭೋಜನಾದಿಗಳನ್ನು ಅಲ್ಲಿಯೇ ನೆರವೇರಿಸಿದರು. ಆಮೇಲೆ ಧೀರಸಿಂಹನು, "ಈ ಕೃತ್ಯಗಳನ್ನೆಲ್ಲ ಮಾಡಿಸಿದವಳು ವಾಘೇಲಿ ರಾಣಿಯು. ಆದಕಾರಣ ನೀನು ಧಾರಾನಗರಕ್ಕೆ ಬಂದು ಈ ವಿಷಯಗಳನ್ನು ನಿಮ್ಮ ತಂದೆಗೆ ತಿಳಿಸಿ, ನಿನ್ನಲ್ಲಿ ದೋಷವು ಇಲ್ಲ ಎಂದು ಸ್ಥಾಪಿಸಿಕೊಳ್ಳಬೇಕು. ನಿಮ್ಮ ತಂದೆಯ ಬಳಿಯಲ್ಲಿ ನಾನು ನಿನ್ನ ಪರವಾಗಿ ಸಾಕ್ಷ್ಯವನ್ನು ಕೊಡುವೆನು," ಎಂದು ಜಗದೇವನೊಡನೆ ಹೇಳಿದನು. ಅದಕ್ಕೆ ಜಗದೇವನು, "ನಾನು ಈ ವಿಧವಾಗಿ ಮಾಡುವುದರಿಂದ ನನ್ನ ಮಲತಾಯಿಗೆ ಅವಮಾನವಾಗುವುದು. ಮತ್ತು ನಾನು ನನ್ನ ಬಾಹುಬಲದಿಂದ ಕೀರ್ತಿಯನ್ನೂ, ಶ್ರೀಯನ್ನೂ ಪಡೆದಹೊರತು ತಂದೆಗೆ ಮುಖವನ್ನು ತೋರಿಸುವುದಿಲ್ಲ ಎಂದು ಮನೆಯಿಂದ ಹೊರಟಾಗ ಪ್ರತಿಜ್ಞೆಯನ್ನು ಮಾಡಿದೆನು. ಆದಕಾರಣ ನಾನು ಪಟ್ಟಣಕ್ಕೆ ಹೋಗಿ ಬಾಹುವಿಕ್ರಮದಿಂದ ಕೀರ್ತಿಯನ್ನೂ, ಶ್ರೀಯನ್ನೂ ಸಂಪಾದಿಸಿ ತಾಯಿತಂದೆಗಳನ್ನು ನೋಡುವುದಕ್ಕೆ ಬರುವೆನು. ನೀನು ಊರಿಗೆ ಹೋಗಿ ತಾಯಿಗೆ ನನ್ನ ಕ್ಷೇಮಸಮಾಚಾರವನ್ನು ತಿಳಿಸಿ, ಆಕೆಗೆ ಆಯಾಸ ಉಂಟಾಗದಂತೆ ನೋಡಿಕೊಳ್ಳುತ್ತಿರು," ಎಂದು ಹೇಳಿದನು. ಅದಕ್ಕೆ ಧೀರಸಿಂಹನು ಸಮ್ಮತಿಸಿ, ತನ್ನ ಕುದುರೆಗಳಲ್ಲಿ ಒಂದನ್ನು ಜಗದೇವನಿಗೆ ಕೊಟ್ಟು ಆತನ ಆಜ್ಞೆಯನ್ನು ಪಡೆದು ಧಾರಾನಗರಕ್ಕೆ ಹೊರಟನು.

ಅನಂತರ ಜಗದೇವ ವೀರಮತಿಯರು ಮಾರ್ಗದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತ ಕೆಲವು ದಿವಸಗಳಿಗೆ ಪಟ್ಟಣ ಎಂಬ ಅಪರನಾಮವುಳ್ಳ ಅಣಹಿತ ಪುರದ ಸಮೀಪಕ್ಕೆ ಬಂದರು. ಆ ನಗರ ಸಮೀಪದಲ್ಲಿ ಸಹಸ್ರಲಿಂಗತಟಾಕ ಎಂಬ ದೊಡ್ಡ ಕೆರೆಯು ಇತ್ತು. ಈ ದಂಪತಿಗಳು ಆ ಕೆರೆಯ ತೀರದಲ್ಲಿ ಇಳಿದರು. ಜಗದೇವನು ವೀರಮತಿಯನ್ನೂ, ಕುದುರೆಗಳನ್ನೂ ಅಲ್ಲಿಯೇ ಬಿಟ್ಟು, ತಾನು ವಾಸಕ್ಕೆ ಅನುಕೂಲವಾದ ಸ್ಥಳವನ್ನು ನೋಡಿಕೊಂಡು ಬರಲು ಪಟ್ಟಣದೊಳಕ್ಕೆ ಹೋದನು.

ಜಗದೇವನು ಗ್ರಾಮವನ್ನು ಪ್ರವೇಶಿಸಿದ ಸ್ವಲ್ಪ ಕಾಲಕ್ಕೆ ನೀರಿಗಾಗಿ ಒಬ್ಬ ಹೆಂಗಸು ಕೆರೆಗೆ ಬಂದಳು. ಆಕೆಯು ವೀರಮತಿಯನ್ನು ನೋಡಿ ಜಾಣತನದಿಂದ

ಈಕೆಯ ಹೆಸರನ್ನೂ, ಈಕೆಯ ಗಂಡನ ಹೆಸರನ್ನೂ, ಮಾವನ ಹೆಸರನ್ನೂ ಕೇಳಿ ತಿಳಿದುಕೊಂಡಳು. ಅನಂತರ ಮನೆಗೆ ಹೋಗಿ ವೀರಮತಿಯ ವಿಷಯವನ್ನು ತನ್ನ ಯಜಮಾನಿಗೆ ತಿಳಿಸಿದಳು. ಆ ಕಾಲದಲ್ಲಿ ಆ ಪಟ್ಟಣವು ಹನ್ನೆರಡು ಕ್ರೋಶ ಗಳ ವೈಶಾಲ್ಯ ಉಳ್ಳದುದಾಗಿಯೂ, ಬಹು ರಮ್ಯವಾಗಿಯೂ ಇತ್ತಂತೆ. ಆ ಪಟ್ಟಣವನ್ನು ಜಯಸಿಂಗ್ ಸಿದ್ಧರಾಜ ಎಂಬ ಅರಸನು ಪಾಲಿಸುತಲಿದ್ದನು. ಆತನು ಧರ್ಮಾತ್ಮನೂ, ದಯಾಮಯನೂ ಆದ ರಾಜನಾದರೂ ತನ್ನ ರಾಜ್ಯ ದಲ್ಲಿರುವ ಅಧಿಕಾರಿಗಳನ್ನು ಪರೀಕ್ಷಿಸದೆ ಅವರಲ್ಲಿ ನಂಬಿಕೆಯುಳ್ಳವನಾಗಿ ಇದ್ದುದ ರಿಂದ, ಆ ಪಟ್ಟಣದಲ್ಲಿ ಅನೇಕ ಅನ್ಯಾಯಗಳು ನಡೆಯುತಲಿದ್ದವು. ಆ ನಗರದ ಕೊತ್ವಾಲನಾದ ಡುಂಗರಸಿಯು ತಾನು ಕಳ್ಳತನವನ್ನು ಮಾಡುತ್ತ, ಇತರ ಕಳ್ಳ ರನ್ನು ಪ್ರೋತ್ಸಾಹಿಸಿ ಅವರು ತಂದ ಹಣದಲ್ಲಿ ಭಾಗವನ್ನು ತೆಗೆದುಕೊಳ್ಳುತ ಲಿದ್ದನು. ಮತ್ತು ಅವನು ವೇಶ್ಯಾಂಗನಾಸಕ್ತನಾಗಿ ಗ್ರಾಮದಲ್ಲಿ ಅನೇಕ ವೇಶ್ಯೆ ಯರಿಗೆ ವಾಸಮಾಡುವುದಕ್ಕೆ ಗೃಹಗಳನ್ನು ಕೊಟ್ಟು ಆದರಿಸುತಲಿದ್ದನು. ಅವ ರಲ್ಲಿ ಜಾಮೋತಿ ಎಂಬ ವೇಶ್ಯೆಯು ಅತಿ ಸುಂದರಳಾಗಿದ್ದುದರಿಂದ ಅಸಂಖ್ಯ ಧನ ರಾಶಿಗಳನ್ನು ಆರ್ಜಿಸಿದಳು. ಅವಳ ಮನೆಯು ರಾಜಭವನದಂತೆಯೂ, ಅವಳ ತೋಟವು ರಾಜೋದ್ಯಾನವನದಂತೆಯೂ ಕಾಣುತಲಿತ್ತು. ಅವಳು ತನ್ನ ದೇಹ ವನ್ನು ವಿಕ್ರಯಿಸುತಲಿದ್ದುದಲ್ಲದೆ, ಪಟ್ಟಣವಾಸಿಗಳಾದ ಅನೇಕ ಸಾಧ್ವಿಯರನ್ನು ಮೋಸದಿಂದ ತನ್ನ ಮನೆಗೆ ಕರೆತಂದು, ಅವರನ್ನು ಬಲವಂತವಾಗಿ ಕಾಮುಕರಿಗೆ ಅರ್ಪಿಸಿ ಅವರ ಪಾತಿವ್ರತ್ಯವನ್ನು ಹಾಳುಮಾಡುತ್ತಿದ್ದಳು. ಕೊತ್ವಾಲನ ಮಗ ನಾದ ಲಾಲುದಾಸನು ಜಾರಶಿರೋಮಣಿ ಎಂಬ ಕೀರ್ತಿಯನ್ನು ಪಡೆದು ಜಾಮೋ ತಿಗೆ ದಾಸನಾಗಿದ್ದನು.

ಮೇಲೆ ನೀರಿಗಾಗಿ ಕೆರೆಗೆ ಬಂದು ವೀರಮತಿಯ ಪರಿಚಯವನ್ನು ತಿಳಿದು ಕೊಂಡುಹೋದ ಹೆಂಗಸು ಈ ಜಾಮೋತಿಯ ಸೇವಕಳು. ದಾಸಿಯ ಮಾತು ಗಳನ್ನು ಕೇಳಿದ ಕೂಡಲೆ ಜಾಮೋತಿಯು ರಾಜಸ್ತ್ರೀಗೆ ಯೋಗ್ಯವಾದ ವೇಷವನ್ನು ಧರಿಸಿ ಮೇನೆಯಲ್ಲಿ ಕುಳಿತು, ಕೆಲವು ಜನ ಭಟರನ್ನು ಕರೆದುಕೊಂಡು ವೀರ ಮತಿಯ ಬಳಿಗೆ ಹೊರಟಳು. ಅಲ್ಲಿ ಆಕೆಯನ್ನು ನೋಡಿದ ಕೂಡಲೆ ಆಕೆಯ ಸಮೀಪಕ್ಕೆ ಹೋಗಿ, " ಇತರ ಜನರಂತೆ ನೀವು ಇಳಿಯುವುದಕ್ಕೆ ಬೇರೇ ಸ್ಥಳವನ್ನು ಹುಡಿಕಿಕೊಳ್ಳುವುದು ನ್ಯಾಯವೇ? ನೀವು ಬರುವ ವಿಷಯವನ್ನು ನಮಗೆ ಮೊದಲೇ ತಿಳಿಸಿದ್ದ ಪಕ್ಷದಲ್ಲಿ ನಾವು ನಿಮಗೆ ಎದುರಾಗಿ ಬರುತಲಿದ್ದೆವು. ನಾನು ಉದ ಯಾದಿತ್ಯನ ಚಿಕ್ಕಮ್ಮನ ಮಗಳು. ಜಗದೇವನು ನನಗೆ ಸೋದರಳಿಯನಾಗ ಬೇಕು. ವಾಸಕ್ಕೆ ಅನುಕೂಲವಾದ ಸ್ಥಳವನ್ನು ಹುಡುಕುತಲಿದ್ದ ಜಗದೇವನನ್ನು ಅರಸನು ಗುರುತಿಸಿ ರಾಜಮಂದಿರಕ್ಕೆ ಕರೆದುಕೊಂಡು ಹೋದನು. ನೀನು ಇಲ್ಲಿ

ಇರುವುದನ್ನು ಆತನಿಂದ ತಿಳಿದು, ನಿನ್ನನ್ನು ರಾಜಭವನಕ್ಕೆ ಕರೆದುಕೊಂಡು ಹೋಗುವುದಕ್ಕೆ ಬಂದೆನು. ಕುದುರೆಗಳನ್ನೂ, ಇತರ ಪದಾರ್ಥಗಳನ್ನೂ ಭಟರು ತೆಗೆದುಕೊಂಡು ಬರುತ್ತಾರೆ. ನೀನು ಈ ಮೇನೆಯೊಳಗೆ ಕುಳಿತುಕೋ, ಮನೆಗೆ ಹೋಗೋಣ," ಎಂದಳು. ನಿಷ್ಕಪಟಹೃದಯಳಾದ ವೀರಮತಿಯು ಅವಳ ಮಾತುಗಳು ನಿಜವಾದುವುಗಳು ಎಂದು ನಂಬಿ ಆ ವೇಶ್ಯೆಯೊಡನೆ ಪಲ್ಲಕಿಯಲ್ಲಿ ಕುಳಿತು ರಾಜಗೃಹಕ್ಕೆ ಸಮಾನವಾದ ಅವಳ ಮನೆಯನ್ನು ಪ್ರವೇಶಿಸಿದಳು. ಅನಂತರ ಜಾಮೋತಿಯು ವೀರಮತಿಗೆ ಅಭ್ಯಂಗನ ಸ್ನಾನವನ್ನು ಮಾಡಿಸಿ, ಒಂದೆರಡುಗಳಿಗೆಯಾದ ಅನಂತರ ಆಕೆಯನ್ನು ಭೋಜನಕ್ಕೆ ಕರೆದಳು. ಆಗ ವೀರಮತಿಯು, "ನಿಮ್ಮ ಸೋದರಳಿಯನು ಊಟಮಾಡಿದ ಹೊರತು ನಾನು ಊಟಮಾಡುವುದಿಲ್ಲ," ಎಂದು ಹೇಳಿದಳು. ಆಮೇಲೆ ಜಾಮೋತಿಯು ಒಬ್ಬ ದಾಸಿಯನ್ನು ಕರೆದು, "ನಿಮ್ಮ ಸೋದರತ್ತೆಯು ನಿಮಗಾಗಿ ಕಾದುಕೊಂಡಿರುವರು ಎಂದು ಹೇಳಿ ಜಗದೇವನನ್ನು ಕರೆದುಕೊಂಡು ಬಾ," ಎಂದು ಹೇಳಿದಳು. ಆ ಸೇವಕಳು ಹೋದಂತೆಯೇ ನಟಿಸಿ, ಸ್ವಲ್ಪಹೊತ್ತಿಗೆ ಬಂದು, "ಅಮ್ಮಾ! ಜಗದೇವನು ಮಹಾರಾಜರೊಡನೆ ಊಟವನ್ನು ಮಾಡಿದನು. ನಿಮ್ಮನ್ನೂ, ವೀರಮತಿಯವರನ್ನೂ ಭೋಜನ ಮಾಡುವಂತೆ ಹೇಳಿದನು," ಎಂದು ನುಡಿದಳು. ಅನಂತರ ವೀರಮತಿಯು ಊಟಮಾಡಿದಳು. ಆಮೇಲೆ ಆ ವಾರಯುವತಿಯು ವೀರಮತಿಯನ್ನು ಒಂದು ಸುಂದರವಾದ ಕೊಠಡಿಗೆ ಕರೆದುಕೊಂಡು ಹೋಗಿ, ಅಲ್ಲಿ ವಿಶ್ರಮಿಸುವಂತೆ ಹೇಳಿ ಹೊರಟು ಹೋದಳು. ಈ ವಿಷಯಗಳನ್ನೆಲ್ಲ ನೋಡಿ ವೀರಮತಿಗೆ ಸ್ವಲ್ಪ ಸಂಶಯ ಉಂಟಾಯಿತು. ಆದರೆ ಸಾಯಂಕಾಲಕ್ಕೆ ಪತಿಯು ಅಂತಃಪುರಕ್ಕೆ ಬರುವನೋ ಏನೋ ಎಂಬ ಆಶೆಯಿಂದ ಆ ಕೊಠಡಿಯಲ್ಲಿ ಮಲಗಿಕೊಂಡಳು. ಸಾಯಂಕಾಲವು ಆದಮೇಲೆ ಜಾಮೋತಿಯು ಬಂದು ವೀರಮತಿಯನ್ನು ಊಟಕ್ಕೆ ಕರೆದಳು. ಆದರೆ ವೀರಮತಿಯು ತನ್ನ ಪತಿಯು ಬಂದು ಊಟಮಾಡಿದ ಹೊರತು ತಾನು ಊಟ ಮಾಡುವುದಿಲ್ಲ ಎಂದು ದೃಢವಾಗಿ ಹೇಳಿದಳು. ಆಗ ಅವಳು ಏನೂ ಮಾಡಲಾರದೆ ಕೆಲವು ಉಪಾಹಾರಗಳನ್ನು ವೀರಮತಿಯ ಬಳಿಯಲ್ಲಿ ಇಟ್ಟು ತಿನ್ನುವಂತೆ ಹೇಳಿ ಹೊರಟುಹೋದಳು. ಹೋಗುವಾಗ ಕೊಠಡಿಯ ಹೊರಗಿನ ಚಿಲಕನ್ನು ಹಾಕಿಕೊಂಡು ಹೋದಳು. ಇದನ್ನೆಲ್ಲ ನೋಡಿ ಇದು ಒಂದು ಇಂದ್ರಜಾಲವಾಗಿ ಇದೆ ಎಂದು ಭಾವಿಸಿ ಭೀತಚಿತ್ತಳಾಗಿ, ಆ ಕೊಠಡಿಯಲ್ಲಿ ಕುಳಿತುಕೊಂಡು ಪತಿಯ ಆಗಮನವನ್ನು ನಿರೀಕ್ಷಿಸುತ್ತಿದ್ದಳು.

ಆ ಪಟ್ಟಣದ ಕೊತ್ವಾಲನ ಮಗನಾದ ಲಾಲುದಾಸನಿಗೆ ಪ್ರತಿದಿವಸವೂ ಒಬ್ಬ ಹೊಸಯುವತಿಯನ್ನು ಸಮರ್ಪಿಸುವದು ಜಾಮೋತಿಯ ನಿತ್ಯವ್ರತವಾಗಿ

ಇದ್ದಿತು. ಈದಿವಸ ಸೌಂದರ್ಯರಾಶಿಯಾದ ವೀರಮತಿಯು ದೊರೆತು ದರಿಂದ ಜಾಮೋತಿಯು ಬಹಳ ಸಂತೋಷಿಸಿ, ಈದಿವಸ ತನಗೆ ವಿಶೇಷ ಬಹುಮಾನವು ದೊರೆಯುವುದು ಎಂದು ನಿಶ್ಚಯಿಸಿಕೊಂಡು ಇದ್ದಳು. ಸಾಯಂ ಕಾಲವೇ ಜಾಮೋತಿಯು ಲಾಲುದಾಸನಿಗೆ ವೀರಮತಿಯ ವೃತ್ತಾಂತವನ್ನು ತಿಳಿಸಿ, ಆಕೆಯ ಗಂಡನ ಹೆಸರನ್ನು ಹೇಳಿ ಆತನನ್ನು ಕಾರಾಗೃಹದಲ್ಲಿ ಹಾಕಿಸಿ, ರಾತ್ರಿಯಾದಮೇಲೆ ತನ್ನ ಮನೆಗೆ ಬರುವಂತೆ ಹೇಳಿದಳು. ಅದರಂತೆಯೇ ಅವನು ರಾತ್ರಿ ನಿಯಮಿತಕಾಲಕ್ಕೆ ವೇಷವನ್ನು ಧರಿಸಿ, ಸುರಾಪಾನವನ್ನು ಮಾಡಿ ಜಾಮೋತಿಯ ಮನೆಗೆ ಬರಲು, ಆ ಚಂಡಾಲಳು ತನಗೆ ಬರಬೇಕಾದ ಧನ ವನ್ನು ಮೊದಲೇ ತೆಗೆದುಕೊಂಡು, ಅವನಿಗೆ ವೀರಮತಿಯು ಇದ್ದ ಮಹಡಿ ಯನ್ನು ತೋರಿಸಿ, ತನ್ನ ನಿವಾಸಸ್ಥಳಕ್ಕೆ ಹೊರಟುಹೋದಳು. ಆ ನರಾಧ ಮನು ಮಹಡಿಯನ್ನು ಹತ್ತುವಾಗ ಉಂಟಾದ ಶಬ್ದವನ್ನು ಕೇಳಿ, ಭರ್ತೃಧ್ಯಾನ ಪರಾಯಣಳಾದ ಚರಿತ್ರನಾಯಕಿಯು ತನ್ನ ಪತಿಯು ಬರುತ್ತಿರುವನು ಎಂದು ಸಂತೋಷಿಸಿದಳು. ಆದರೆ ಈ ಕೀಚಕನು ಒಳಗೆ ಪ್ರವೇಶಿಸಿದಮೇಲೆ, ಅವನ ಭಯಂಕರ ರೂಪವನ್ನು ನೋಡಿ, ಪರಪುರುಷನು ಎಂದು ಗಡಗಡನೆ ನಡುಗಲು ಆರಂಭಿಸಿದಳು. ಉತ್ತರಕ್ಷಣದಲ್ಲಿಯೇ ಪತಿವ್ರತಿಯರಿಗೆ ಸ್ವಾಭಾವಿಕವಾದ ಧೈರ್ಯವನ್ನು ಅವಲಂಬಿಸಿ, ಬಹುವಿಧವಾದ ನೀತಿವಚನಗಳನ್ನು ಬೋಧಿಸಿ, ಆ ದುಷ್ಟನನ್ನು ದುರ್ಮಾರ್ಗತ್ವದಿಂದ ತೊಲಗಿಸಲು ಪ್ರಯತ್ನಿಸಿದಳು. ಆ ಮಾತುಗಳನ್ನು ಕೇಳದೆ ಆ ನರಪಶುವು ಮದೋನ್ಮತ್ತನಾಗಿ, ವಿವೇಕ ಶೂನ್ಯ ನಾಗಿ ವೀರಮತಿಯ ಪವಿತ್ರ ದೇಹವನ್ನು ತನ್ನ ಪಾಪಹಸ್ತಗಳಿಂದ ಮುಟ್ಟುವು ದಕ್ಕೆ ಹೋಗಲು, ಇನ್ನು ಸುಮ್ಮನೆ ಇರುವುದು ಅಯುಕ್ತವು ಎಂದು ಎಣಿಸಿ, ತನ್ನ ಸೊಂಟದಲ್ಲಿ ಇದ್ದ ಗುಪ್ತ ಖಡ್ಗವನ್ನು ಸರ್ರನೆ ಎಳೆದು ಆ ಮಾನವಾಧಮ ನನ್ನು ಎರಡು ತುಂಡಾಗಿ ಕತ್ತರಿಸಿದಳು. ಈ ಖಡ್ಗವು ಎಲ್ಲಿ ಇದ್ದಿತು? ಎಂದು ಪಾಠಕರಿಗೆ ಸಂಶಯವು ತೋರಬಹುದು. ಆಕಾಲದಲ್ಲಿ ಪ್ರತಿಯೊಬ್ಬ ರಾಜಪುತ್ರರಮಣಿಯೂ ಬಂಗಾರದ ಡಾಬಿನಂತೆ ಇರುವವರೆಯಲ್ಲಿ ಬಗ್ಗಿಸಿ ದರೂ, ಮುರಿಯದೆ ಇರುವ ಉಕ್ಕಿನಿಂದ ಮಾಡಿದ ಖಡ್ಗವನ್ನು ಇಟ್ಟು ಧರಿಸಿಕೊಳ್ಳುತಲಿದ್ದರು. ಅದು ನೋಡುವುದಕ್ಕೆ ಡಾಬಿನಂತೆಯೇ ಕಾಣುತ್ತಿತ್ತು. ಮಾನವನ್ನು ಕಾಪಾಡಿಕೊಳ್ಳಬೇಕಾದ ಸಮಯದಲ್ಲಿ, ರಾಜಪುತ್ರಸ್ತ್ರೀಯರು ಈ ಖಡ್ಗವನ್ನು ಉಪಯೋಗಿಸುತ್ತ ಇದ್ದರು. ಈ ಖಡ್ಗದಿಂದಲೇ ವೀರಮತಿಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡಳು. ಈ ಸಾಧ್ವೀತಿಲಕವನ್ನು ಯಾರು ತಾನೇ ಸ್ತುತಿಸದೇ ಇರಬಲ್ಲರು! ಸ್ತ್ರೀಪುರುಷರಿಗೆಲ್ಲರಿಗೂ ವಂದನಾರ್ಹಳಾದ ಈ ನಾರೀರತ್ನವು ಮುನಿತಿಲಕನಾದ ಮನುವು ಬರೆದ:

ಅರಕ್ಷಿತಾಗೃಹೇ ರುದ್ಧಾಃ ಪುರುಷೈ ರಾಪ್ತಕಾರಿಭಿಃ
ಆತ್ಮಾನ ಮಾತ್ಮನಾಯಾಸ್ತು ರಕ್ಷೇಯುಸ್ತಾಸ್ಸುರಕ್ಷಿತಾಃ*

ಎಂಬ ವಚನವು ಸತ್ಯವಾದುದುಎಂದು ಸ್ಥಾಪಿಸಿ, ಸ್ತ್ರೀಯರಿಗೆ ಮಹೋಪ ಕಾರವನ್ನು ಮಾಡಿದಳು. ಸೋದರಿಯರೇ! ಪಾತಿವ್ರತ್ಯಕ್ಕಿಂತಲೂ ಉತ್ತಮ ವಾದ ಧರ್ಮವು ಸ್ತ್ರೀಯರಿಗೆ ಯಾವುದೂ ಇಲ್ಲ. ಪತಿವ್ರತೆಯರಾದ ಹೆಂಗಸರನ್ನು ಕಾಪಾಡುವುದಕ್ಕಾಗಿ ಸರ್ವೇಶ್ವರನು ಸರ್ವಕಾಲಗಳಲ್ಲಿಯೂ ಸಂಸಿದ್ಧನಾಗಿರು ವನು. ಪತಿವ್ರತೆಯರಾದ ವನಿತೆಯರು ಎಷ್ಟು ದುರ್ಬಲರಾದರೂ, ಎಷ್ಟು ಸಂಕಟ ಗಳಲ್ಲಿ ಮುಳುಗಿದ್ದರೂ ತಮ್ಮ ಸ್ವಸದ್ಗುಣಗಳನ್ನು ಕಾಪಾಡಿಕೊಳ್ಳುವುದಕ್ಕೆ ತಕ್ಕ ಸಾಮರ್ಥ್ಯವನ್ನು ಅವರಿಗೆ ದೇವರು ಕೊಡುತ್ತಾನೆ.

ಪತಿವ್ರತೆಯರನ್ನು ದುಷ್ಟರಿಂದ ಕಾಪಾಡುವುದಕ್ಕಾಗಿ ದೇವದೂತರು ಅದೃಶ್ಯ ರಾಗಿ ಅವರನ್ನು ಹಿಂಬಾಲಿಸುತ್ತ ಇರುವರು ಎಂದು ಒಬ್ಬ ಪಾಶ್ಚಿಮಾತ್ಯ ಕವಿಯು ಬರೆದಿದಾನೆ. ಕೀಚಕನ ಮನೆಗೆ ಹೋಗುವಾಗ ದ್ರೌಪದಿಯು ತನ್ನ ಪಾತಿವ್ರತ್ಯ ವನ್ನು ಕಾಪಾಡಬೇಕು ಎಂದು ಸೂರ್ಯನಿಗೆ ವಿಜ್ಞಾಪಿಸಲು, ಆಗ ಸೂರ್ಯನು ದುಃಖಿತೆಯಾದ ಆ ತರುಣಿಯನ್ನು ಕಾಪಾಡಲು ಒಬ್ಬ ಶೂರನಾದ ರಾಕ್ಷಸನನ್ನು ಕಳುಹಿಸಿದನು ಎಂದು ಮಹಾಭಾರತದಲ್ಲಿ ಇದೆಯಲ್ಲವೇ? ದಮಯಂತಿಯ ಶಾಪ ದಿಂದ ಕೆರಾತನು ಸುಟ್ಟುಹೋದನು ಎಂತಲೂ ಓದಿದೇವೆಯಲ್ಲವೇ? ಈ ದೇವ ದೂತರು ಪತಿವ್ರತೆಯರ ಸತ್ಪ್ರವರ್ತನೆ ಎಂತಲೂ, ರಾಕ್ಷಸರು ಅವರ ವೃಷ್ಣನಿಶ್ಚಯ ಎಂತಲೂ, ಶಾಪಸಾಮರ್ಥ್ಯವು ಅವರ ಶೌರ್ಯಸಾಹಸಗಳು ಎಂತಲೂ ಹೇಳ ಬಹುದು. ಸ್ತ್ರೀಯರು ಪ್ರಾಣವನ್ನಾದರೂ ತ್ಯಜಿಸಿ ಪತಿವ್ರತ್ಯವನ್ನು ಕಾಪಾಡಿ ಕೊಳ್ಳಬೇಕು. ಸದ್ವಿದ್ಯೆಯನ್ನು ಕಲಿತು, ಪತಿವ್ರತೆಯರ ಚರಿತ್ರೆಗಳನ್ನು ಓದಿ ಅವ ರಂತೆಯೇ ನಡೆಯುವುದಕ್ಕೆ ಯತ್ನಿಸಬೇಕು. ವೀರಮತಿಗೆ ವಿಪತ್ಕಾಲದಲ್ಲಿ ಶಸ್ತ್ರವು ಉಪಯೋಗವಾದಂತೆ, ಈಗಿನ ಸ್ತ್ರೀಯರಿಗೆ ವಿದ್ಯೆಯು ಸಂಕಟ ಸಮಯದಲ್ಲಿ ಉಪಯೋಗವಾಗುವದು.

ಮೇಲೆ ಹೇಳಿದಂತೆ ವೀರಮತಿಯು ಲಾಲುದಾಸನನ್ನು ಯಮಸದನಕ್ಕೆ ಕಳು ಹಿಸಿ, ಅವನ ಶರೀರವನ್ನು ಬಟ್ಟೆಯಲ್ಲಿ ಗಂಟುಕಟ್ಟಿ, ಆ ಗಂಟನ್ನು ಗವಾಕ್ಷದಿಂದ ಬೀದಿಯಲ್ಲಿ ಬಿಸಾಟಳು. ಆಮೇಲೆ ಒಳಕ್ಕೆ ಯಾರೂ ಬರದಂತೆ, ಮಹಡಿಯ ಮಾರ್ಗವನ್ನು ಒಳಗೆ ಬಂಧಿಸಿ, ಇನ್ನು ಯಾವ ವಿಚಿತ್ರಗಳು ನಡೆಯುವವೋ

* ಆಪ್ತರಾದ ಪುರುಷರಿಂದ ಗೃಹದಲ್ಲಿ ನಿರ್ಬಂಧಿತರಾಗಿರುವ ಸ್ತ್ರೀಯರು ರಕ್ಷಿತ ರಾಗಲಾರರು. ಯಾವ ಸ್ತ್ರೀಯರು ತಮ್ಮ ಆತ್ಮವನ್ನು ತಾವೇ ರಕ್ಷಿಸಿಕೊಳ್ಳುವರೋ ಅವರೇ ಸುರಕ್ಷಿತರು.

ನೋಡೋಣ ಎಂದು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಗವಾಕ್ಷದ ಹತ್ತಿರ ನಿಂತುಕೊಂಡಳು. ಅನಂತರ ರಾತ್ರಿಯ ಕಾಲದಲ್ಲಿ ಗಸ್ತಿಗೆ ಬರುವ ಕೆಲ ರಕ್ಷಕ ಭಟರು, ಆ ಗಂಟನ್ನು ನೋಡಿ, ಬಿಚ್ಚಿ ಅದು ದಂಡನಾಯಕನ ಮಗನ ಶವವು ಎಂದು ತಿಳಿದು, ಒಡನೆಯೇ ಈ ಸಮಾಚಾರವನ್ನು ದಂಡನಾಯಕನಿಗೆ ತಿಳಿಯ ಪಡಿಸಿದರು. ಅವನು ಪುತ್ರನ ಶವವನ್ನು ನೋಡಿ ಶೋಕಾಕುಲಚಿತ್ತನಾಗಿ, "ಈ ಶವವು ಎಲ್ಲಿ ದೊರೆಯಿತು?" ಎಂದು ಆ ಭಟರನ್ನು ಕೇಳಿದನು. ಅವರು "ಈ ಶವವು ಜಾಮೋತಿಯ ಗುಪ್ತಗೃಹ ಸಮೀಪದಲ್ಲಿ ದೊರೆಯಿತು," ಎಂದು ಹೇಳಿ ದರು. ಆಮೇಲೆ ಅವನು ಜಾಮೋತಿಯ ಮನೆಗೆ ಹೋಗಿ, "ಲಾಲುದಾಸನು ಎಲ್ಲಿ," ಎಂದು ಕೇಳಿದನು. ಜಾಮೋತಿಯು ನಗುತ್ತ, "ಆತನು ಇಂದು ಹೊಸ ರಂಭೆಯೊಡನೆ ಆಮೋದದಿಂದ ಇದಾನೆ; ಹೆದರಬೇಡಿ; ಕರೆದುಕೊಂಡು ಬರು ವೆನು," ಎಂದು ಹೇಳಿ ಮಹಡಿಯ ಬಳಿಗೆ ಹೋದಳು. ಆದರೆ ಮೇಲಕ್ಕೆ ಹೋ ಗುವ ದಾರಿಯೇ ಮುಚ್ಚಿದ್ದುದರಿಂದ ಗಟ್ಟಿಯಾಗಿ ಕೂಗಿದಳು. ಯಾರೂ ಪ್ರತ್ಯು ತ್ತರವನ್ನು ಕೊಡಲಿಲ್ಲ. ಆಗ ಅವಳು ಹಿಂತಿರುಗಿ ಬಂದು ಕೊತ್ವಾಲನೊಡನೆ ಈ ವಿಷಯವನ್ನು ಹೇಳಿದಳು. ಅವನು ಭಟರನ್ನು ಕರೆದು ಆ ಕದವನ್ನು ಒಡೆಯು ವಂತೆ ಹೇಳಿದನು. ಜಾಮೋತಿಯ ಮನೆಯಲ್ಲಿ ನಡೆಯುತಲಿದ್ದ ಘೋರಕೃತ್ಯ ಗಳು ಎಲ್ಲವೂ ಆ ಮಹಡಿಯಲ್ಲಿಯೇ ನಡೆಯುತ್ತ ಇದ್ದುದರಿಂದ ಆ ವೇಶ್ಯೆಯು ಒಡೆಯಲು ಅಸಾಧ್ಯವಾದ ಘನತರವಾದ ಕದಗಳನ್ನು ಇಡಿಸಿದ್ದಳು. ಆದ್ದರಿಂದ ಕೊತ್ವಾಲನು ಎಷ್ಟು ಪ್ರಯತ್ನಿಸಿದರೂ ಕದವನ್ನು ಒಡೆಯುವುದಕ್ಕೆ ಆಗಲಿಲ್ಲ. ಆಗ ಬೀದಿಯ ಗೋಡೆಗೆ ಏಣಿಯನ್ನು ಹಾಕಿ ಮೇಲಕ್ಕೆ ಹತ್ತಿ ಗವಾಕ್ಷದ ಮೂಲಕ ಒಳಕ್ಕೆ ಹೋಗುವಂತೆ ಕೊತ್ವಾಲನು ಒಬ್ಬ ಭಟನಿಗೆ ಹೇಳಿದನು. ಅವನು ಮೇಲೆ ಹತ್ತಿ ಗವಾಕ್ಷದೊಳಗೆ ತಲೆಯನ್ನು ಇಟ್ಟು ಕೂಡಲೆ ಅಲ್ಲಿ ನಿಂತಿದ್ದ ವೀರಮತಿಯು ತನ್ನ ಖಡ್ಗದಿಂದ ಅವನ ತಲೆಯನ್ನು ಕತ್ತರಿಸಿದಳು. ಅವನ ತಲೆಯು ಮನೆ ಯೊಳಗೂ, ಅವನ ಶರೀರವು ಬೀದಿಯಲ್ಲಿಯೂ ಬಿತ್ತು! ಅದಕ್ಕೆ ಹೆದರದೆ ಮತ್ತೊ ಬ್ಬನು ಹತ್ತಿದನು. ಅವನೂ ನೀರಮತಿಯ ಖಡ್ಗದಿಂದ ಹತನಾದನು! ಈ ವಿಧ ವಾಗಿ ಆ ಅಬಲೆಯ ಕೈಯಿಂದ ಹನ್ನೊಂದು ಜನ ಪುರುಷರು ಪರಲೋಕವನ್ನು ಸೇರಿದರು!! ಆಮೇಲೆ ಯಾವ ಶೂರನೂ ಮೇಲಕ್ಕೆ ಹತ್ತಲಾರದೆ ಹೋದನು. ಇಷ್ಟರಲ್ಲಿ ಪ್ರಾತಃಕಾಲವು ಆದುದರಿಂದ ಈ ವೃತ್ತಾಂತವು ಗ್ರಾಮದಲ್ಲೆಲ್ಲ ಹರಡಿ ಕೊಂಡಿತು. ಜಾಮೋತಿಯ ಮನೆಗೆ ಜನರು ಗುಂಪುಗುಂಪಾಗಿ ಬರಲಾರಂಭಿಸಿ ದರು. "ಒಬ್ಬ ಹೆಂಗಸು ಹನ್ನೆರಡು ಜನ ಭಟರನ್ನು ಕೊಂದಳು," ಎಂದು ಪ್ರಜೆ ಗಳು ಹೇಳಿಕೊಳ್ಳುತ್ತ ಇದ್ದುದನ್ನು ಆ ಪಟ್ಟಣದ ದೊರೆಯು ಕೇಳಿ, ಇಂತಹ ವಿಚಿತ್ರವನ್ನು ನೋಡುವುದಕ್ಕೆ ತಾನೇ ಆಸ್ಥಳಕ್ಕೆ ಹೋದನು. ಅಲ್ಲಿ ಆಕೆಯು ಕೊಂದವರ ಶರೀರಗಳನ್ನು ನೋಡಿ, ರಾಜನು ಏಣಿಯನ್ನು ಹತ್ತಿ ಗವಾಕ್ಷದ

ಸಮೀಪದಲ್ಲಿ ನಿಂತು, "ಎಲೌ ಅಸಮಾನ ಶೌರ್ಯಯುತಳಾದ ರಮಣಿಯೇ! ನೀನು ಯಾರು? ನೀನು ನನ್ನ ಪ್ರಜೆಗಳನ್ನು ಕೊಲ್ಲಲು ಕಾರಣವು ಏನು? ನಾನು ಈ ಪಟ್ಟಣದ ಅರಸನು. ಯಾರಾದರೂ ನಿನಗೆ ಅನ್ಯಾಯವನ್ನು ಮಾಡಿದ್ದರೆ ಹೇಳು. ನಾನು ಅವರನ್ನು ದಂಡಿಸುವೆನು," ಎಂದು ಹೇಳಿದನು. ಅದಕ್ಕೆ ವೀರ ಮತಿಯು, "ಮಹಾರಾಜನೇ! ನಾನು ಚಾವಡಾಕುಲೋತ್ಪನ್ನನಾದ ಬಿರಜ ಮಹಾರಾಜನ ತಂಗಿಯು; ಧಾರಾನಗರಕ್ಕೆ ಅಧಿಪತಿಯಾದ ಉದಯಾದಿತ್ಯ ಮಹಾರಾಜನ ಸೊಸೆಯು; ನನ್ನ ಹೆಸರು ವೀರಮತಿ," ಎಂದು ಹೇಳಿ, ತನ್ನ ವೃತ್ತಾಂತವನ್ನೂ, ತನ್ನನ್ನು ವೇಶ್ಯಾಂಗನೆಯು ಅಲ್ಲಿಗೆ ಕರೆತಂದ ವಿಧವನ್ನೂ, ಲಾಲುದಾಸನ ಅನುಚಿತ ಕೃತ್ಯಗಳನ್ನೂ ತಿಳಿಸಿ, "ನನ್ನ ಪಾತಿವ್ರತ್ಯವನ್ನು ಕಾಪಾಡಿ ಕೊಳ್ಳುವುದಕ್ಕಾಗಿ ಅವನನ್ನು ಕೊಂದೆನು. ಅದಕ್ಕಾಗಿಯೇ ಈ ಹನ್ನೊಂದು ಜನ ರನ್ನೂ ಕೊಂದೆನು. ನಾನು ಕ್ಷತ್ರಿಯ ಕನ್ಯೆಯು. ನನ್ನ ದೇಹದಲ್ಲಿ ಪ್ರಾಣವು ಇರುವವರೆಗೂ ಅನ್ಯಪುರುಷನು ನನ್ನನ್ನು ಸ್ಪರ್ಶಮಾಡಲಾರನು," ಎಂದಳು. ಆ ಮಾತುಗಳನ್ನು ಕೇಳಿ ಧೊರೆಯು ಸಂತೋಷಿಸಿ, "ರಾಜಪುತ್ರ ಸ್ತ್ರೀಯರಿಗೆ ಉಚಿತ ವಾದ ಕೆಲಸವನ್ನು ಮಾಡಿದೆ; ಹೊರಗೆ ಬಾ; ನಾನು ನಿನ್ನನ್ನು ಪುತ್ರಿಯಂತೆ ಪೋಷಿಸುವೆನು; ನಿನ್ನ ಪತಿಯನ್ನೂ ಹುಡುಕಿಸುವೆನು," ಎಂದನು. ಆದರೆ ವೀರ ಮತಿಯು, "ನನ್ನ ಪತಿಯು ಬಂದ ಹೊರತು ಈ ಮಹಡಿಯ ಕದವನ್ನು ತೆಗೆಯು ವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿರುವೆನು. ಆದುದರಿಂದ ಮೊದಲು ನನ್ನ ಪತಿಯನ್ನು ಕರೆತಂದರೆ ತಮ್ಮ ಆಜ್ಞೆಯನ್ನು ಶಿರಸಾವಹಿಸುವೆನು. ಇಲ್ಲದಿದ್ದರೆ ಇಲ್ಲಿಯೇ ನನ್ನ ಪ್ರಾಣವನ್ನು ಬಿಡುವೆನು," ಎಂದು ಉತ್ತರವನ್ನು ಕೊಟ್ಟಳು.

ಆಗ ಅರಸನು ಜಗದೇವನನ್ನು ಹುಡುಕುವುದಕ್ಕೆ ಭಟರನ್ನು ಕಳುಹಿಸಿದನು. ಅವರು ಹುಡುಕಿ ಕಾರಾಗೃಹದಲ್ಲಿದ್ದ ಜಗದೇವನನ್ನು ಕರೆದುಕೊಂಡು ಬಂದರು. ವೀರಮತಿಯು ಪತಿಯನ್ನು ನೋಡಿ ಆನಂದದೊಡನೆ ಮಹಡಿಯ ಬಾಗಿಲನ್ನು ತೆರೆ ದಳು. ರಾಜನು ಜಾಮೋತಿಯ ಮನೆಯನ್ನು ಜಪ್ತಿಮಾಡಿಸಿ, ಅವಳನ್ನು ಸೆರೆ ಯಲ್ಲಿ ಇಟ್ಟನು. ಆಮೇಲೆ ಜಗದೇವ ವೀರಮತಿಯರನ್ನು ತನ್ನ ರಥದ ಮೇಲೆ ಕುಳ್ಳಿರಿಸಿಕೊಂಡು ಅರಮನೆಗೆ ಹೊರಟನು. ಮಾರ್ಗದಲ್ಲಿ ಅನೇಕ ಜನ ಸ್ತ್ರೀಯರು ವೀರಮತಿಗೆ ವಂದಿಸಿ, "ಕುಲಾಂಗನೆಯರ ಪಾಲಿಗೆ ರಾಕ್ಷಸರಾದ ಲಾಲುದಾಸ, ಜಾಮೋತಿಯರನ್ನು ಶಿಕ್ಷಿಸಿ ಪಟ್ಟಣದ ಪಾತಿವ್ರತ್ಯವನ್ನು ಕಾಪಾಡಿದ ಮಹಾಪತಿ ವ್ರತೆಯು ಈಕೆಯೇ," ಎಂದು ಹೊಗಳಿದರು.

ರಾಜನು ದಂಡನಾಯಕನ ದುಶ್ಚೇಷ್ಟೆಗಳನ್ನೆಲ್ಲ ವಿಚಾರಿಸಿ ಅವನನ್ನು ಕೆಲಸ ದಿಂದ ತೆಗೆದುಹಾಕಿದನು. ಜಗದೇವನು ಧೀಮಂತನು ಎಂದು ತಿಳಿದುಕೊಂಡು ಆತನಿಗೆ ದಂಡನಾಯಕನ ಕೆಲಸವನ್ನು ಕೊಟ್ಟನು. ಆಮೇಲೆ ಜಗದೇವನು

ರಾಜ್ಯದಲ್ಲಿ ಇರುವ ಅವ್ಯವಸ್ಥೆಯನ್ನೆಲ್ಲ ಕ್ರಮಪಡಿಸಿದನು. ತನ್ನ ಶೌರ್ಯ ಸಾಹಸಗಳಿಂದಲೂ, ಸತ್ಪ್ರವರ್ತನೆಯಿಂದಲೂ ಜಗದೇವನು ರಾಜನಿಗೆ ವಿಶೇಷ ಪ್ರೀತಿಪಾತ್ರನಾದನು. ಆಮೇಲೆ ಕೆಲವು ದಿವಸಗಳಿಗೆ ವೀರಮತಿಯು ಒಬ್ಬ ಪುತ್ರನನ್ನು ಪಡೆದಳು. ಆಗ ಜಗದೇವನು ದೊಡ್ಡ ಉತ್ಸವವನ್ನು ಮಾಡಿ ಶಿಶುವಿಗೆ 'ಜಗದ್ಧವಳ' ಎಂದು ಹೆಸರನ್ನು ಇಟ್ಟನು.

ಜಗದೇವನಿಗೆ ಅಧಿಕಾರವು ದೊರೆತಂದಿನಿಂದಲೂ ದುಷ್ಟರಿಗೆ ಬಹು ಭಾಧೆಯುಂಟಾಗುತಲಿತ್ತು. ಆದಕಾರಣ ಅವರು ಜಗದೇವನನ್ನು ಕೊಲ್ಲುವುದಕ್ಕೆ ಅನೇಕ ಪ್ರಯತ್ನಗಳನ್ನು ವಿಫಲಮನೋರಥರಾದರು. ಕೆಲವು ಕಾಲದವರೆಗೂ ಜಗದೇವನು ಸುಖವಾಗಿದ್ದನು. ಹೀಗಿರಲು ಒಂದು ವರ್ಷ ಆ ಪಟ್ಟಣದಲ್ಲಿ ಮಾರೀಜಾಡ್ಯವು ತಲೆದೋರಿ ಅದರಿಂದ ಅನೇಕ ಪ್ರಜೆಗಳು ಸಾಯುತಲಿದ್ದರು. ಯಾವ ಉಪಾಯದಿಂದಲೂ ವ್ಯಾಧಿಯು ನಿಲ್ಲಲಿಲ್ಲ. ಅರಸನು ಸರ್ಪಪ್ರಜಾ ಸಂಹಾರವು ಆಗುವುದೋ ಏನೋ ಎಂದು ಭಯಪಟ್ಟು, ಆ ಜಾಡ್ಯವು ಕಡಮೆಯಾಗುವುದಕ್ಕಾಗಿ ಊರಿನ ಆಚೆ ಇದ್ದ ಕಾಳಿಕಾಲಯಕ್ಕೆ ಪ್ರತಿದಿನವೂ ಹೋಗಿ ಆಕೆಯನ್ನು ಪೂಜಿಸುತಲಿದ್ದನು. ಇಂತಹ ಸಂಕಟ ಸಮಯದಲ್ಲಿ ಯಾರು ಏನು ಹೇಳಿದರೂ, ಎಂತಹ ಅಸಂಭವವಾದ ದೈವಿಕ ಚಮತ್ಕಾರಗಳನ್ನು ಹೇಳಿದರೂ, ರಾಜನು ನಂಬುವನು ಎಂದು ಎಣಿಸಿ ಆ ದುಷ್ಟರು ಒಂದು ಯುಕ್ತಿಯನ್ನು ಕಲ್ಪಿಸಿದರು. ರಾಜನು ಆಲಯಕ್ಕೆ ಬರುವುದರೊಳಗೆ, ಒಬ್ಬನು ದೇವಿಯ ಹಿಂದೆ ನಿಂತುಕೊಂಡು ರಾಜನು ಏಕಾಂತ ಪೂಜೆಯನ್ನು ಮಾಡುವಾಗ, ದೇವಿಯು ಹೇಳಿದಂತೆ, "ಓ ಮಹಾರಾಜನೇ! ನಿನ್ನ ನಿಷ್ಕಲ್ಮಷವಾದ ಭಕ್ತಿಗೆ ಮೆಚ್ಚಿದೆನು. ಸಕಲ ಸದ್ಗುಣ ಸಂಪನ್ನನಾದ ಒಬ್ಬ ರಾಜಕುಮಾರನನ್ನು ನನಗೆ ಬಲಿಕೊಟ್ಟರೆ ಈರೋಗವು ಹೋಗಿ ನಿನ್ನ ಪ್ರಜೆಗಳು ಸೌಖ್ಯವನ್ನು ಹೊಂದುತ್ತಾರೆ," ಎಂದು ಹೇಳಿದನು. ಅದಕ್ಕೆ ರಾಜನು, "ಓತಾಯಿಯೇ! ನನ್ನ ರಾಜ್ಯದಲ್ಲಿ ಸಕಲಸದ್ಗುಣಸಂಪನ್ನನಾದ ರಾಜಕುಮಾರನು ಯಾವನು ಇರುವನೋ ನೀನೇ ತಿಳಿಸು," ಎಂದು ಕೇಳಿದನು. ಅದಕ್ಕೆ ದೇವಿಯು, "ವತ್ಸಾ! ನಿನ್ನರಾಜ್ಯದಲ್ಲಿ ಗುಣವಂತನಾದ ರಾಜಕುಮಾರನು ಇಲ್ಲ ಎಂದು ಚಿಂತಿಸಬೇಡ. ನಿನ್ನ ಕೊತ್ವಾಲನಾದ ಜಗದೇವನು ಸಕಲಗುಣ ಸಂಪನ್ನನು. ಆತನನ್ನು ನನಗೆ ಬಲಿಯಾಗಿ ಸಮರ್ಪಿಸಿದರೆ ನೀನೂ ನಿನ್ನ ಪ್ರಜೆಗಳೂ ಸುಖಿಸುವಿರಿ," ಎಂದನು. ಈ ಮಾತುಗಳನ್ನು ಕೇಳಿ ದೊರೆಯು ಖಿನ್ನವದನನಾಗಿ ಮನೆಗೆ ಹೋದನು. ಜಗದೇವನು ಅರಸನು ಚಿಂತಾಕ್ರಾಂತನಾಗಿರಲು ಕಾರಣವು ಏನು ಎಂದು ವಿಚಾರಿಸಿ, ಆ ವಿಷಯವನ್ನು ತಿಳಿದುಕೊಂಡು, "ಪ್ರಜೆಗಳಿಗೋಸ್ಕರವೂ ರಾಜನಿಗೋಸ್ಕರವೂ ತಾನು ದೇವಿಗೆ ಬಲಿಯಾಗುವೆನು," ಎಂದು ರಾಜನಿಗೆ ತಿಳಿಸಿದನು. ರಾಜನು, "ಹಾಗೆ ಮಾಡಬೇಡ," ಎಂದು ಬಹು ವಿಧವಾಗಿ ಹೇಳಿದರೂ ಕೇಳದೆ ಜಗದೇವನು ಮನೆಗೆಹೋಗಿ ವೀರಮತಿಗೆ ತಿಳಿಸಲು,

ಆಕೆಯು ತಾನೂ, ತನ್ನ ಪುತ್ರನೂ ಸಹ ದೇವಿಗೆ ಬಲಿಯಾಗುವೆವು ಎಂದು ಹೇಳಿದಳು. ಹೀಗೆ ಲೋಕಹಿತಕ್ಕಾಗಿ ಆತ್ಮದೇಹಗಳನ್ನು ಸಮರ್ಪಿಸಲು ನಿಶ್ಚಯಿಸಿಕೊಂಡು ಜಗದೇವ ವೀರಮತಿಯರು ತಮ್ಮ ಸಂಪತ್ತನ್ನೆಲ್ಲ ಬಡವರಿಗೆ ದಾನ ಮಾಡಿ, ಪ್ರಾತಃಕಾಲವಾದ ಕೂಡಲೆ ಅಭ್ಯಂಗನಸ್ನಾನವನ್ನು ಮಾಡಿ ಮಂಗಳ ವಾದ್ಯಗಳೊಡನೆ ದೇವಿಯ ಆಲಯವನ್ನು ಪ್ರವೇಶಿಸಿದರು. ಪ್ರಥಮದಲ್ಲಿ ಮಗುವನ್ನೂ, ಆಮೇಲೆ ವೀರಮತಿಯನ್ನೂ, ಅನಂತರ ಜಗದೇವನನ್ನೂ ಬಲಿಕೊಡುವಂತೆ ನಿಶ್ಚಯವಾಯಿತು. ಈ ವಿಷಯವನ್ನು ರಾಜನು ಕೇಳಿ ಆಲಯಕ್ಕೆ ಬಂದು, "ಜಗದೇವನೇ! ನೀವು ದೇವಿಗೆ ಬಲಿಯಾಗುವುದ- ನನಗೆ ಸ್ವಲ್ಪವೂ ಇಷ್ಟವಿಲ್ಲ. ನೀವು ಹಿಂತಿರುಗಿ ಮನೆಗೆ ಹೋಗಿ," ಎಂದನು. ಆಗ ಆ ದುಷ್ಟರಲ್ಲಿ ಒಬ್ಬನು ಪುನಃ ದೇವಿಯ ಹಿಂದುಗಡೆಯಲ್ಲಿ ನಿಂತು, "ರಾಜನೇ! ಜಗದೇವನನ್ನು ನಿವಾರಿಸಬೇಡ. ಈ ಬಲಿಯಿಂದ ನಿನಗೆ ಬಹಳ ಲಾಭವು ಉಂಟಾಗುವುದು," ಎಂದನು. ಈ ಮಾತುಗಳನ್ನು ಕೇಳಿ ರಾಜನಿಗೆ ಸಂಶಯವು ತೋರಿ, ಆತನು ದೇವಿಯ ಹಿಂದೆ ಹುಡುಕಲು ಆ ದುಷ್ಟರ ಕೃತ್ರಿಮವು ತಿಳಿಯಬಂದಿತು.

ಇದೇ ಕಥೆಯನ್ನು ಕೆಲವರು, "ಈ ದಂಪತಿಗಳು ಪುತ್ರನೊಡನೆ ಕಾಳಿಯ ಬಳಿಗೆ ಹೋಗಿ ತಮ್ಮ ದೇಹಗಳನ್ನು ಸ್ವಹಸ್ತಗಳಿಂದ ದೇವಿಗೆ ಬಲಿಕೊಟ್ಟರು. ಆಮೇಲೆ ಅರಸನು ಅಲ್ಲಿಗೆ ಬಂದು ಅವರನ್ನು ನೋಡಿ ದುಃಖಿಸಿ ತನ್ನ ದೇಹವನ್ನು ದೇವಿಗೆ ಸಮರ್ಪಿಸುವುದಕ್ಕೆ ಪ್ರಯತ್ನಿಸಲು, ದೇವಿಯು ಪ್ರತ್ಯಕ್ಷಳಾಗಿ ಆತನ ಪ್ರಯತ್ನವನ್ನು ತಡೆದು, ಜಗದೇವಾದಿಗಳನ್ನು ಬದುಕಿಸಿದಳು," ಎಂದು ಹೇಳುತ್ತಾರೆ. ಈ ಎರಡು ಚರಿತ್ರೆಗಳಲ್ಲಿ ಯಾವುದು ನಿಜವಾದುದು ಎಂಬುದನ್ನು ಪಾಠಕರೇ ಊಹಿಸಬಹುದು.

ಅನಂತರ ದೊರೆಯು ಆ ದುರ್ಮಾರ್ಗರನ್ನು ಶಿಕ್ಷಿಸಿ, ತಮಗೋಸ್ಕರ ಜಗದೇವನು ತೋರಿಸಿದ ತ್ಯಾಗಕ್ಕಾಗಿ ಆತನಿಗೆ ಯಾವ ಬಹುಮಾನವನ್ನು ಕೊಟ್ಟರೂ ಆತನ ಋಣದಿಂದ ಮುಕ್ತರಾಗಲಾರೆವು ಎಂದು ಆಲೋಚಿಸಿ, ತನ್ನ ಪುತ್ರಿಯಾದ ಪ್ರಭಾವತಿಯನ್ನು ಆತನಿಗೆ ಕೊಟ್ಟು ವಿವಾಹಮಾಡಿದನು. ಅನೇಕ ಗ್ರಾಮಗಳನ್ನು ವರದಕ್ಷಿಣೆಯಾಗಿ ಕೊಟ್ಟನು. ದುರ್ಮಾರ್ಗರು ಜಗದೇವನಿಗೆ ಕೇಡು ಮಾಡಲು ಎಣಿಸಿದರೂ, ದೇವರು ಆತನಿಗೆ ಒಳ್ಳೆಯದನ್ನೇ ಮಾಡಿದನು.

ಧಾರಾನಗರದಲ್ಲಿ ಉದಯಾದಿತ್ಯಮಹಾರಾಯನು ದುಷ್ಟಳಾದ ವಾಘೇಲಿ ರಾಣಿಯು ಹೇಳಿದಂತೆ ಕೇಳುತ್ತ, ಆಕೆಯ ಇಷ್ಟಾನುಸಾರವಾಗಿ ರಾಜಕಾರ್ಯಗಳನ್ನು ನಡೆಸುತಲಿದ್ದುದರಿಂದ, ರಾಜ್ಯದಲ್ಲಿ ಅನೇಕ ಅನ್ಯಾಯಗಳು ನಡೆಯುತಲಿದ್ದುವು. ಪ್ರಜೆಗಳು ಅಸಂತುಷ್ಟರಾಗಿ ಇದ್ದರು. ರಾಜ್ಯದ ದುಸ್ಥಿತಿಯನ್ನು

ನೋಡಿ ನೆರೆಹೊರೆಯ ರಾಜನು ಒಬ್ಬನು ಧಾರಾನಗರದಮೇಲೆ ದಂಡೆತ್ತಿ ಬಂದು ರಾಜ್ಯವನ್ನು ಜಯಿಸಿ, ಉದಯಾದಿತ್ಯನನ್ನೂ ಆತನ ಬಾಂಧವರನ್ನೂ ಕಾರಾಗೃಹದಲ್ಲಿ ಇಟ್ಟನು. ಈ ವಿಷಯವನ್ನು ಜಗದೇವನು ಕೇಳಿ, ಮಾವನ ಅನುಜ್ಞೆಯನ್ನು ಪಡೆದು ಧಾರಾನಗರಕ್ಕೆ ಹೋಗಿ ಶತ್ರುಗಳನ್ನು ಗೆದ್ದು, ತಂದೆಯನ್ನು ಸಿಂಹಾಸನಾರೂಢನನ್ನಾಗಿ ಮಾಡಿದನು.

ಮಂತ್ರಿಶ್ರೇಷ್ಠನಾದ ಧೀರಸಿಂಹನು ಜಗದೇವನ ವೃತ್ತಾಂತವನ್ನು ಸವಿಸ್ತಾರವಾಗಿ ಉದಯಾದಿತ್ಯನಿಗೆ ತಿಳಿಸಿ, "ಜಗದೇವನಲ್ಲಿ ಅಣುಮಾತ್ರವೂ ತಪ್ಪು ಇಲ್ಲ. ವಾಘೇಲಿರಾಣಿಯ ಕುಯುಕ್ತಿಯಿಂದಲೇ ಜಗದೇವನಿಗೆ ಅನೇಕ ಕಷ್ಟಗಳು ಸಂಭವಿಸಿದವು," ಎಂದು ತಿಳಿಯಪಡಿಸಿದನು. ಆಗ ಉದಯಾದಿತ್ಯನು ಮಗನನ್ನು ಆಲಂಗಿಸಿಕೊಂಡನು. ಕೆಲವುದಿವಸಗಳಲ್ಲಿಯೇ ಜಗದೇವನಿಗೆ ಯೌವರಾಜ್ಯ ಪಟ್ಟಾಭಿಷೇಕವು ನಡೆಯಿತು. ವಾಘೇಲಿರಾಣಿಯ ಕುತಂತ್ರಗಳನ್ನು ಕೇಳಿದಮೇಲೆ ಉದಯಾದಿತ್ಯನು ಆಕೆಯನ್ನು ತ್ಯಜಿಸಿ, ಸೋಳಂಕಿರಾಣಿಯನ್ನು ಪ್ರೀತಿಸುತಲಿದ್ದನು. ಆದರೆ ಪರಮಸಾಧ್ವಿಯಾದ ಸೋಳಂಕಿರಾಣಿಯು ವಾಘೇಲಿಯನ್ನು ಸಹ ಪ್ರೀತಿಯಿಂದ ಕಾಣಬೇಕು ಎಂದು ಪತಿಯೊಡನೆ ಹೇಳುತ್ತ ಇದ್ದಳು. ಉದಯಾದಿತ್ಯನ ಅನಂತರ ಜಗದೇವನು ಸಿಂಹಾಸನನನ್ನೇರಿ ನ್ಯಾಯದಿಂದ ರಾಜ್ಯವನ್ನು ಪರಿಪಾಲಿಸಿದನು.

ಜಗದೇವನಿಗೆ ಮೂವರು ಪತ್ನಿಯರು ಇದ್ದರು. ಅವರಲ್ಲಿ ಮೊದಲಿನಿಂದಲೂ ಪತಿಗೆ ಪ್ರತಿಕಾರ್ಯದಲ್ಲಿಯೂ ಸಹಾಯಕಳಾಗಿ, ಆತನಿಗೆ ಛಾಯೆಯಂತೆ ವರ್ತಿಸಿದ ವೀರಮತಿಯು ಮುಖ್ಯಮಹಿಷಿಯಾಗಿ ಇದ್ದಳು. ಆದರೆ ವೀರಮತಿಯು ಸದ್ಗ್ರಂಥಗಳನ್ನು ಓದಿದವಳು. ಆದಕಾರಣ ಕಣ್ವಮಹಾಮುನಿಯು ಶಕುಂತಳೆಗೆ ಉಪದೇಶಿಸಿದ :—

ಶುಶ್ರೂಷಸ್ವಗುರೂನ್ ಕುರುಪ್ರಿಯ ಸಖೀವೃತ್ತಿಂ ಸಪತ್ನೀಜನೇ
ಭರ್ತುರ್ವಿಪ್ರಕೃತಾ ಪಿರೋಷಣ ತಯಾಮಾಸ್ಮ ಪ್ರತೀಕುಂಗಮಯಃ
ಭೂಯಿಷ್ಠಂ ಭವದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ
ಯಾಂತ್ಯೇವಂ ಗೃಹಿಣೀಪದಂ ಯುವತಯೋವಾಮಾಃ ಕುಲ
[ಸ್ಯಾಧಯಃ

ಎಂಬ ಸದುಪದೇಶವನ್ನು ಅನುಸರಿಸಿ ನಡೆದು, ಗೃಹಿಣೀ ಎಂಬ ಸಾರ್ಥಕವಾದ ಬಿರುದನ್ನುವಹಿಸಿದಳು.

ರಾಣಿ ರಾಮಾಬಾಯಿ.

——:o:——

ವಜ್ರಾದಪಿಕಠೋರಾಣಿಮೃದೂನಿಕುಸುಮಾದಪಿ
ಲೋಕೋತ್ತರಾಣಾಂಚೇತಾಂಸಿಕೋಹಿವಿಜ್ಞಾತುಮರ್ಹತಿ.

ಈ ಶೂರನಾರಿಯು ಚಿತ್ತೂರು ಸಂಸ್ಥಾನಾಧೀಶ್ವರನಾದ ಜಗಮಲ್ ಮಹಾರಾಜನ ಪತ್ನಿಯು. ಡಿಲ್ಲೀ ಚಕ್ರವರ್ತಿಗಳಲ್ಲಿ ಉತ್ತಮೋತ್ತಮನುಎಂದು ಪ್ರಸಿದ್ಧಿಯನ್ನುಪಡೆದ ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ ಈತನು ಚಿತ್ತೂರನ್ನು ಪಾಲಿಸುತಲಿದ್ದನು. ರಾಮಾಬಾಯಿಯು ಸಮಯೋಚಿತವಾದ ಬುದ್ಧಿಯುಳ್ಳವಳಾಗಿ ಇದ್ದುದರಿಂದ, ತನ್ನ ಪತಿಗೆ ಸಂಭವಿಸಿದ ಕಷ್ಟಗಳನ್ನು ತನ್ನ ಬುದ್ಧಿಬಲದಿಂದ ಪರಿಹಾರಮಾಡಿದಳು. ಧೀಮತಿಯಾದ ಪತ್ನಿಯಲ್ಲಿ ಜಗಮಲ್ಲನೂ ವಿಶೇಷ ಗೌರವವುಳ್ಳವನಾಗಿ ಇದ್ದನು.

ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವಸಮಯದಲ್ಲಿ ಅಕ್ಬರ್ ಬಾದಷಹನು ಚಿತ್ತೂರ್ ರಾಜ್ಯದಮೇಲೆ ದಂಡೆತ್ತಿಬಂದು, "ನೀನು ವರ್ಷಂಪ್ರತಿಯಲ್ಲಿಯೂ ಸ್ವಲ್ಪ ಕಪ್ಪವನ್ನು ಸಲ್ಲಿಸುತ್ತ ನನಗೆ ಸಾಮಂತನಾಗಿ ಇರುವುದಕ್ಕೆ ಒಪ್ಪಿಸಿಕೊಳ್ಳಬೇಕು ಇಲ್ಲದಿದ್ದರೆ ನನ್ನೊಡನೆ ಯುದ್ಧವನ್ನು ಮಾಡಬೇಕು," ಎಂದು ಜಗಮಲ್ ಮಹಾರಾಜನಿಗೆ ವರ್ತಮಾನವನ್ನು ಕಳುಹಿಸಿದನು. ಅದಕ್ಕೆ ಜಗಮಲ್ಲನು, "ನಮ್ಮ ಶರೀರಗಳಲ್ಲಿ ಪ್ರಾಣವು ಇರುವವರೆಗೂ ದೀನರಂತೆ ನಿಮಗೆ ಸಾಮಂತರಾಗಿ ಇರಲಾರೆವು. ನಿಮ್ಮೊಡನೆ ಯುದ್ಧವನ್ನುಮಾಡಲು ಸಿದ್ಧರಾಗಿ ಇದೇವೆ," ಎಂದು ಪ್ರತ್ಯುತ್ತರವನ್ನು ಕಳುಹಿಸಿದನು. ಆಮೇಲೆ ಜಗಮಲ್ಮಹಾರಾಜನು ಕೋಟೆಯ ದ್ವಾರಗಳನ್ನು ಮುಚ್ಚಿಸಿ ಸೈನ್ಯಸಮೇತನಾಗಿ ಬುರುಜುಗಳಮೇಲೆ ಹತ್ತಿ ಶತ್ರುಗಳೊಡನೆ ಯುದ್ಧಮಾಡಲು ಪ್ರಾರಂಭಿಸಿದನು. ಆದರೆ ರಾಜಪುತ್ರರ ಸೈನ್ಯಕ್ಕಿಂತಲೂ ಯವನರ ಸೈನ್ಯವು ಬಹಳ ಹೆಚ್ಚಾಗಿ ಇದ್ದುದರಿಂದ, ರಾಜಪುತ್ರರ ಧೈರ್ಯವು ಕ್ರಮಕ್ರಮವಾಗಿ ಕಡಮೆಯಾಗುತಲಿತ್ತು. ಒಂದುದಿವಸ ಜಗಮಲ್ ಮಹಾರಾಜನು ಬುರುಜಿನಮೇಲೆ ನಿಂತು ಶತ್ರುವಿನ ಅಮಿತ ಸೈನ್ಯವನ್ನೂ, ಅವರ ಶೌರ್ಯೋತ್ಸಾಹಗಳನ್ನೂ ನೋಡಿ, ತಾನೂ, ತನ್ನ ಸೈನ್ಯವೂ ಶತ್ರುಗಳಿಂದ ಹತವಾಗಿ, ತಮ್ಮ ಸ್ತ್ರೀಯರು ಅಗ್ನಿಪ್ರವೇಶಮಾಡುವ ಸಮಯವು ಸನ್ನಿಹಿತವಾಯಿತು ಎಂದು ಆಲೋಚಿಸಿ ವಿಶೇಷ ಚಿಂತಾಕ್ರಾಂತನಾದನು. ಸೈನಿಕರಿಗೆ ಉತ್ಸಾಹವನ್ನು ಉಂಟುಮಾಡುತ್ತ, ಆತನ ಸಮಿಾಪದಲ್ಲಿಯೇ ಇದ್ದ ರಾಮಾಬಾಯಿಯು

ಪತಿಯಚಿಂತೆಗೆ ಕಾರಣವನ್ನು ತಿಳಿದು, ಸ್ವಲ್ಪಯೋಚಿಸಿ, ಪತಿಯೊಡನೆ, "ನಾನು ಯಾವುದಾದರೂ ಒಂದು ವೇಷವನ್ನು ಧರಿಸಿಕೊಂಡು ಶತ್ರುಗಳ ಶಿಬಿರವನ್ನು ಪ್ರವೇಶಿಸಿ ಅಕ್ಬರನನ್ನು ಕೊಂದುಬರುವೆನು. ನಮ್ಮ ರಾಜ್ಯವನ್ನು ಕಾಪಾಡಿಕೊಳ್ಳಲು ಇದಕ್ಕಿಂತಲೂ ಒಳ್ಳೆಯ ಉಪಾಯವು ಇಲ್ಲ," ಎಂದು ಹೇಳಿದಳು. ರಾಜನು ಪತ್ನಿಯ ಮಾತುಗಳನ್ನು ಕೇಳಿ ಆಶ್ಚರ್ಯವನ್ನು ಹೊಂದಿ, "ಇಷ್ಟು ದೊಡ್ಡ ಕೆಲಸವನ್ನು ನೀನು ಮಾಡಲಾರೆ," ಎಂದನು. ಅದಕ್ಕೆ ರಾಮಾಬಾಯಿಯು "ಅದನ್ನುಕುರಿತು ನೀವು ಸಂಶಯವನ್ನು ಹೊಂದಬೇಡಿ. ಆ ಭಾರವನ್ನು ಈಶ್ವರನಿಗೂ, ನನಗೂ ವಹಿಸಿ ನೀವು ನನಗೆ ಅನುಜ್ಞೆಯನ್ನು ಕೊಡಬೇಕು," ಎಂದು ಕೇಳಿದಳು. ಪತ್ನಿಯು ಧೈರ್ಯದೊಡನೆ ನುಡಿದ ಮಾತುಗಳನ್ನುಕೇಳಿ ಜಗಮಲ್ ಮಹಾರಾಜನು ಸ್ವಲ್ಪ ಆಲೋಚಿಸಿ, "ನಿನ್ನ ಸುಕುಮಾರ ಹಸ್ತಗಳಿಂದ, ಕಠಿನ ಹೃದಯನಾದ ಶತ್ರುವಿನ ಹೃದಯವನ್ನು ಬೇಧಿಸುವಷ್ಟು ಧೈರ್ಯವು ನಿನಗೆ ಇದ್ದರೆ, ನಿನ್ನ ಇಷ್ಟಪ್ರಕಾರವಾಗಿ ಮಾಡಬಹುದು. ಆದರೆ ನಿನ್ನ ಬಳಿಯಲ್ಲಿ ಒಂದು ಚಿಕ್ಕ ಕತ್ತಿಯನ್ನು ಗುಪ್ತವಾಗಿ ಇಟ್ಟುಕೊಂಡು ಇರು. ಯಾವಾಗಲಾದರೂ ಮಾನಹಾನಿಯು ಸಂಭವಿಸುವಂತೆ ತೋರಿದರೆ, ರಾಜಪುತ್ರಸ್ತ್ರೀಯರಿಗೆ ಯೋಗ್ಯವಾದ ಆತ್ಮಹತ್ಯೆಯನ್ನು ಮಾಡಿಕೊಂಡು ಮಾನವನ್ನು ಕಾಪಾಡಿಕೋ," ಎಂದು ಹೇಳಿದನು. ಪತಿಯ ಅನುಜ್ಞೆಯು ದೊರತಕೂಡಲೆ ರಾಮಾಬಾಯಿಯು ತನ್ನ ವೇಷವನ್ನುಬಿಟ್ಟು, ಕಾವಿಬಟ್ಟೆಗಳನ್ನು ಉಟ್ಟುಕೊಂಡು, ದೊಡ್ಡ ಮಣಿಗಳ ಹಾರವನ್ನು ಧರಿಸಿ, ಮುಕ್ತಕೇಶಿನಿಯಾಗಿ ಫಕೀರಳಂತೆ ಆದಳು. ಆಮೇಲೆ ಒಂದು ಖಡ್ಗವನ್ನು ಬಚ್ಚಿಟ್ಟುಕೊಂಡು, ಕೈಯಲ್ಲಿ ಫಿಟೇಲನ್ನು ಹಿಡಿದು ಯಾರಿಗೂ ತಿಳಿಯದಂತೆ ಹೊರಟು, ಶತ್ರು ಸೈನ್ಯವನ್ನು ಪ್ರವೇಶಿಸಿದಳು. ಅಲ್ಲಿ ಇದ್ದ ರಕ್ಷಕಭಟರೊಡನೆ ರಾಮಾಬಾಯಿಯು, "ನಾನು ಬಾದಷಹನನ್ನು ನೋಡಿ ಆಶೀರ್ವಾದ ಮಾಡುವುದಕ್ಕೆ ಬಂದೆನು. ನನ್ನನ್ನು ಆತನ ಬಳಿಗೆ ಕರೆದುಕೊಂಡು ಹೋಗಿ," ಎಂದು ಹೇಳಿದಳು. ಆಕೆಯ ಮೃದುಮಧುರ ವಚನಗಳಿಂದ, ಆಕೆಯು ದೊಡ್ಡ ಫಕೀರಳು ಎಂದು ಎಣಿಸಿ ಭಟರು ಆಕೆಯನ್ನು ಬಾದಷಹನ ಬಳಿಗೆ ಕರೆದುಕೊಂಡು ಹೋದರು. ರಾಮಾಬಾಯಿಯು ಅಲ್ಲಿಗೆ ಹೋದಮೇಲೆ ಯವನರ ಆಚಾರವನ್ನು ಅನುಸರಿಸಿ ಬಾದಷಹನಿಗೆ ಜೋಹಾರುಗಳನ್ನು ಮಾಡಿ ಆಶೀರ್ವಾದವನ್ನು ಮಾಡಿದಳು. ಅಕ್ಬರನು ಆಕೆಯ ಮುಖಲಕ್ಷಣವನ್ನು ಚೆನ್ನಾಗಿ ನೋಡಿ, "ನೀನು ಯಾವ ಇಚ್ಛೆಯಿಂದ ಇಲ್ಲಿಗೆ ಬಂದೆ," ಎಂದನು. "ಹಿಂದೂದೇಶದ ಚಕ್ರವರ್ತಿಗಳಾದ ನಿಮ್ಮನ್ನು ಆಶೀರ್ವಾದಮಾಡಿ, ಈಶ್ವರ ಭಜನೆಯಿಂದ ನಿಮ್ಮನ್ನು ಮೆಚ್ಚಿಸಿ ಬಹುಮಾನವನ್ನು ಪಡೆಯುವದಕ್ಕಾಗಿ ಬಂದೆನು," ಎಂದು ಆವೇಷಧಾರಿಣಿಯಾದ ಬೈರಾಗಿನಿಯು ಉತ್ತರವನ್ನು ಕೊಟ್ಟು, ಫಿಟೇಲನ್ನು ನುಡಿಸುತ್ತ ಒಂದು ಹಿಂದುಸ್ಥಾನಿ ಕೀರ್ತನೆಯನ್ನು ಹಾಡಲು ಪ್ರಾರಂಭಿಸಿದಳು.

ಆಕೆಯ ಅತಿ ಮಧುರವಾದ ಕಂಠಧ್ವನಿಯನ್ನುಕೇಳಿ ಅಕ್ಬರನು ಪರವಶನಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಹಾಡಿಗೆ ಸರಿಯಾಗಿ ತಾಳವನ್ನು ಹಾಕುತಲಿದ್ದನು. ರಾಮಾಬಾಯಿಯು ಆಗ ಕತ್ತಿಯನ್ನು ತೆಗೆದುಕೊಂಡು ಬಾದಷಹನ ಕತ್ತನ್ನು ಕತ್ತರಿಸಲು ಯತ್ನಿಸಿದಳು. ಗಾನವು ನಿಂತುಹೋದದರಿಂದ ಅಕ್ಬರನು ಕಣ್ಣು ತೆರೆದು ನೋಡಲು ಖಡ್ಗಹಸ್ತಳಾದ ಯೋಗಿನಿಯು ಕಾಣಬಂದಳು. ಆತನು ಆಕೆಯು ಮಾಡಲು ಎಣಿಸಿದ ಕಾರ್ಯವನ್ನು ತಿಳಿದುಕೊಂಡು ಉಪಾಯದಿಂದ ಕತ್ತಿಯನ್ನು ಎಳೆದುಕೊಂಡನು.

ತನ್ನ ಮನೋರಥವು ನಿಷ್ಫಲವಾದುದರಿಂದ ರಾಮಾಬಾಯಿಗೆ ದಿಗ್ಭ್ರಮೆಯು ಉಂಟಾಯಿತು. ಆಗ ಅಕ್ಬರನು, "ನಿನ್ನ ಗಾನಕ್ಕೆ ಮೆಚ್ಚಿದೆನು. ನಿನಗೆ ಬೇಕಾದುದನ್ನು ಕೇಳು ಕೊಡುವೆನು. ನಿನ್ನ ಅಪರಾಧವನ್ನು ಕ್ಷಮಿಸಿದೆನು," ಎಂದನು. ಆತನ ಮಾತುಗಳನ್ನು ಕೇಳಿ ರಾಮಾಬಾಯಿಯು ತನ್ನ ವೃತ್ತಾಂತವನ್ನು ಆತನಿಗೆ ತಿಳಿಸಿ, "ಪ್ರಾಣದ ಮೇಲಿನ ಆಶೆಯನ್ನು ಬಿಟ್ಟು ನಾನು ಇಲ್ಲಿಗೆ ಬಂದೆನು. ನನ್ನ ಉದ್ದೇಶವು ನೆರವೇರಲಿಲ್ಲ. ಆದಕಾರಣ ನಾನು ಪುನಃ ನನ್ನ ಸೈನ್ಯದೊಳಕ್ಕೆ ಪ್ರವೇಶಿಸಲಾರೆನು. ನಿನ್ನ ಭಟರಲ್ಲಿ ಒಬ್ಬನನ್ನು ಕರೆದು ನನ್ನ ಶಿರಸ್ಸನ್ನು ಕತ್ತರಿಸುವಂತೆ ಅಪ್ಪಣೆ ಮಾಡು," ಎಂದು ಹೇಳಿದಳು. ಅಕ್ಬರನು ಆಕೆಯ ಪ್ರಗಲ್ಭ ವಚನಗಳಿಗೆ ಆಶ್ಚರ್ಯಪಟ್ಟು, "ನೀನು ಮಾಡುವುದಕ್ಕೆ ಪ್ರಯತ್ನಿಸಿದ ಕಾರ್ಯವು ಎಂತಹುದು. ಆದರೂ ನನ್ನ ಭಟರು ಒಬ್ಬ ಅಬಲೆಯ ಮೇಲೆ ತಮ್ಮ ಶಸ್ತ್ರ ನೈಪುಣ್ಯವನ್ನು ತೋರಿಸಲಾರರು. ನಾನು ಸ್ತ್ರೀಯರೊಡನೆ ಯುದ್ಧಮಾಡುವುದಕ್ಕೆ ಬರಲಿಲ್ಲ," ಎಂದು ಹೇಳಿ, ಉದಾರಹೃದಯನಾದ ಡಿಲ್ಲೀಶ್ವರನು ತನ್ನ ಮುಖ್ಯ ಭಟರನ್ನು ಕರೆದು, ಅವರ ಸಂಗಡ ರಾಮಾಬಾಯಿಯನ್ನು ಜಗಮಲ್ಲನ ಬಳಿಗೆ ಕಳುಹಿಸಿದನು.

ಅನಂತರ ರಾಮಾಬಾಯಿಯು ಅಧೈರ್ಯಯುತನಾಗಿದ್ದ ಪತಿಯನ್ನು ಕುರಿತು, "ಪ್ರಾಣೇಶ್ವರನೇ! ಚಿಂತಿಸಬೇಡ. ಈ ಮ್ಲೇಚ್ಛರ ಕೈಯ್ಗಳಿಂದ ನಾವುಗಳು ಎಲ್ಲರೂ ಮೃತರಾಗುವ ಸಮಯವು ಸಂಭವಿಸಿ ಇರುವುದು ನಿಜ. ಆದರೆ ನಾವು ನಮ್ಮ ಪ್ರಾಣಗಳು ಹೋಗುವವರೆಗೂ ದೈನ್ಯವನ್ನು ಹೊಂದದೆ ಹೋರಾಡಿ ಸ್ವರ್ಗಸುಖವನ್ನು ಪಡೆಯೋಣ," ಎಂದು ಬಹು ಬಗೆಯಲ್ಲಿ ಪತಿಗೆ ಧೈರ್ಯವನ್ನು ಉಂಟುಮಾಡುತ್ತ ಯುದ್ಧವನ್ನು ನಡೆಸುತಲಿದ್ದಳು.

ಒಂದು ದಿವಸ ಅಕ್ಬರನ ಸೈನಿಕರು ಏಣಿಗಳನ್ನು ಹಾಕಿಕೊಂಡು ಬುರುಜುಗಳ ಮೇಲಕ್ಕೆ ಹತ್ತಲು ಪ್ರಯತ್ನಿಸುತ್ತಿರಲು, ಅವರನ್ನು ತಡೆದು ಕೆಳಕ್ಕೆ ಬೀಳಿಸಿ, ತಮ್ಮ ಸೈನಿಕರಿಗೆ ಪ್ರೋತ್ಸಾಹವನ್ನು ಉಂಟುಮಾಡುತ್ತ ಜಗಮಲ್ಲನೂ, ರಾಮಾ

ಬಾಯಿಯೂ ಬುರುಜುಗಳ ಮೇಲೆ ತಿರುಗಾಡುತಲಿದ್ದರು. ಆ ಸಮಯದಲ್ಲಿ ಶತ್ರುಸೈನ್ಯದಿಂದ ಬಂದ ಒಂದು ಬಾಣವು ಜಗಮಲ್ ಮಹಾರಾಜನಿಗೆ ತಗಲಿದು ದರಿಂದ ಆತನು ಸ್ವರ್ಗಸ್ಥನಾದನು. ಅರಸನು ಮಡಿದ ಸಮಾಚಾರವು ಮ್ಲೇಚ್ಛ ರಿಗೆ ತಿಳಿದ ಕೂಡಲೆ ಅವರು ಸಂತೋಷಿಸಿ, ಇನ್ನು ಕೋಟೆಯನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು ಎಂದು ಯೋಚಿಸಿದರು. ಆದರೆ ಉತ್ತರಕ್ಷಣ ದಲ್ಲಿಯೇ ಕೋಟೆಯ ಪೂರ್ವದ್ವಾರವನ್ನು ತೆರೆದುಕೊಂಡು, ಅನೇಕ ಕ್ಷತ್ರಿಯ ವೀರರು ಹೊರಗೆ ಬಂದು ಯವನರ ಮೇಲೆ ಬಿದ್ದು ಅವರನ್ನು ಪುಡಿಮಾಡಲಾರಂಭಿ ಸಿದರು. ಅವರ ವೀರಾವೇಶವನ್ನು ನೋಡಿದರೆ, ಅವರು ಪುನಃ ಒಳಕ್ಕೆ ಹೋಗು ವೆವು ಎಂಬ ಆಶೆಯನ್ನು ತ್ಯಜಿಸಿ ರಣರಂಗಕ್ಕೆ ಬಂದರು ಎಂದು ತೋರುತಲಿತ್ತು. ಆ ರಾಜಪುತ್ರರು ಕಣ್ಣುಗಳಲ್ಲಿ ಕಿಡಿಕೆಂಡಗಳನ್ನು ಸುರಿಸುತ್ತ ಒಬ್ಬೊಬ್ಬನು ಹತ್ತು ಜನ ಪ್ರತಿ ಭಟರ ಪ್ರಾಣಗಳನ್ನು ತೆಗೆಯುತಲಿದ್ದನು. ಅವರ ಮುಂದುಗಡೆ ಪುರುಷವೇಷದಲ್ಲಿ ರಣಪ್ರಿಯಳಾದ ರಾಮಾಬಾಯಿಯು ಇದ್ದಳು! ತನ್ನ ಪತಿಯ ಪ್ರಾಣಕ್ಕೆ, ಬಾದಷಹನ ಪ್ರಾಣವನ್ನು ಬಲಿಕೊಡದಿದ್ದರೆ ತನ್ನ ಜನ್ಮವು ವ್ಯರ್ಥವಾಗು ವುದು ಎಂದು ಎಣಿಸಿ ಆಕೆಯು ತ್ರಿಪುರಮರ್ದಿನಿಯ ಅವತಾರವನ್ನು ಧರಿಸಿ, ಎದು ರಿಗೆ ಬಂದ ಸೈನಿಕನನ್ನು ತನ್ನ ಖಡ್ಗಕ್ಕೆ ಬಲಿಕೊಡುತ್ತ ಬಾದಷಹನನ್ನು ಸಮಿಾ ಪಿಸಲು ಪ್ರಯತ್ನಿಸಿದಳು. ರಾಮಾಬಾಯಿಯು ಪ್ರತಿ ಭಟರ ರಕ್ತದಿಂದ ಸ್ನಾನ ಮಾಡುತ್ತ, ಅವರು ತನಗೆ ವಿಶೇಷ ಗಾಯಗಳನ್ನು ಉಂಟುಮಾಡಿದ್ದರೂ ತನ್ನ ಪ್ರಯತ್ನವನ್ನು ಬಿಡದೆ ಅಕ್ಬರನ ಶಿಬಿರದ್ವಾರವನ್ನು ಸಮಿಾಪಿಸಿದಳು! ಅಲ್ಲಿಗೆ ಆಕೆಯ ಬಲವು ಕ್ಷೀಣಿಸಿದುದರಿಂದ ಅಲ್ಲಿದ್ದ ಬಾದಷಹನ ಭಟರು ಆಕೆಯನ್ನು ಹಿಡಿದುಕೊಂಡು ಬಾದಷಹನ ಬಳಿಗೆ ಕರೆದುಕೊಂಡು ಹೋದರು. ಅಕ್ಬರನು ಆಕೆಯ ಶೌರ್ಯಸಾಹಸಗಳನ್ನು ನೋಡಿ ಆಶ್ಚರ್ಯಪಟ್ಟು, ಇಂತಹ ಶೂರ ರಮಣಿಯನ್ನು ನೋಡುವುದು ದುರ್ಲಭವು ಎಂದು ಎಣಿಸಿ, ಸಮಿಾಪವರ್ತಿನಿಯ ರಾದ ಪರಿಚಾರಿಕೆಯರನ್ನು ಕರೆದು, ರಾಮಾಬಾಯಿಗೆ ಔಷಧೋಪಚಾರಗಳನ್ನು ಮಾಡುವಂತೆ ಆಜ್ಞಾಪಿಸಿದನು. ಕೆಲವು ದಿನಗಳು ಕಳೆದ ಮೇಲೆ ರಾಮಾ ಬಾಯಿಯ ಗಾಯಗಳು ವಾಸಿಯಾದವು. ಆಕೆಗೆ ಪೂರ್ವಬಲವು ಉಂಟಾದ ಮೇಲೆ ಆಕೆಯು 'ಬಾದಷಹನನ್ನು ನೋಡಬೇಕು' ಎಂದು ಅಪೇಕ್ಷಿಸಲು ದಾಸಿಯರು ಆಕೆಯನ್ನು ಬಾದಷಹನ ಬಳಿಗೆ ಕರೆದುಕೊಂಡು ಹೋದರು. ಆಗ ರಾಮಾ ಬಾಯಿಯು ನಿರ್ಭಯವಾಗಿ ಬಾದಷಹನೊಡನೆ, "ನಾನು ಅನೇಕಸಲ ನಿನ್ನನ್ನು ಕೊಲ್ಲಲು ಯತ್ನಿಸಿದೆನು. ಆದರೆ ಈಶ್ವರನ ಇಚ್ಛೆಯು ಬೇರೆಯಾಗಿ ಇದ್ದುದರಿಂದ ನನ್ನ ಪ್ರಯತ್ನಗಳು ನಿಷ್ಫಲಯೋಜನಗಳಾದವು. ನಾನು ಜೀವಿಸಿ ಇದ್ದ ಪಕ್ಷದಲ್ಲಿ, ನನ್ನ ಪತಿಯನ್ನು ಕೊಂದ ಹಗೆಯನ್ನು ಎಂದಿಗಾದರೂ ತೀರಿಸಿಕೊಳ್ಳದೆ ಬಿಡೆನು. ಆದರೆ ನಾನು ಈಗ ನಿನ್ನ ವಶದಲ್ಲಿ ಇರುವುದರಿಂದ ಈ ಸಲ ನೀನು ನನ್ನನ್ನು

ಕ್ಷಮಿಸುವುದು ಯುಕ್ತವಲ್ಲ. ನಾನು ಮರಣಕ್ಕೆ ಅಂಜುವುದಿಲ್ಲ. ಪ್ರಾಣೇಶ್ವರನ ಸಮೀಪಕ್ಕೆ ಹೋಗಬೇಕು ಎಂಬ ಆಶೆಯು ನನ್ನನ್ನು ತ್ವರೆಗೊಳಿಸುತಲಿದೆ. ಆದು ದರಿಂದ ನಿನ್ನ ಸೇವಕರಲ್ಲಿ ಒಬ್ಬನಿಗೆ, ನನ್ನನ್ನು ಯಮಸದನಕ್ಕೆ ಕಳುಹಿಸುವಂತೆ ಅಪ್ಪಣೆ ಮಾಡು," ಎಂದು ನುಡಿದಳು. ಆಕೆಯ ಧೀರೋದಾತ್ತವಚನಗಳನ್ನು ಕೇಳಿ, ಬಾದಷಹನು ಚಿಂತಾಕ್ರಾಂತನಾಗಿ, "ಎಲೌ ಶೂರನಾರೀ ರತ್ನವೇ! ಶೂರ ಶ್ರೇಷ್ಠಳೂ, ಪತಿಪರಾಯಣೆಯೂ ಆದ ನಿನ್ನ ಮೇಲೆ ನನ್ನ ಶಸ್ತ್ರವನ್ನು ಹೇಗೆ ಉಪ ಯೋಗಿಸಲಿ! ನಾನು ಶೂರ ಪುರುಷರೊಡನೆ ಯುದ್ಧಮಾಡುವೆನೇ ಹೊರತು ಸ್ತ್ರೀಯರಿಗೆ ಒಂದು ಪುಳ್ಳನ್ನು ಕೂಡ ತಗಲಿಸಲಾರೆನು. ನಿನ್ನ ಪತಿಯು ಸ್ವರ್ಗಸ್ಥನಾದುದಕ್ಕೆ ನನಗೂ ಬಹಳ ವ್ಯಸನವಾಗಿದೆ. ನಿಮ್ಮನ್ನು ನನ್ನ ಅಂಕಿತ ರಾಗಿ ಮಾಡುವುದು ನನ್ನ ಕೆಲಸವೇ ವಿನಹ ನಿಮ್ಮನ್ನು ಕೊಲ್ಲಬೇಕು ಎಂಬ ಉದ್ದೇಶವು ನನಗೆ ಇಲ್ಲ. ಆದರೆ ಗತಿಸಿದ ವಿಷಯಕ್ಕೆ ಚಿಂತಿಸಿ ಫಲವಿಲ್ಲ. ಈಗ ಲಾದರೂ ನೀವು ನನ್ನ ಸಾಮಂತರಾಗಿ ಇರಲು ಒಪ್ಪಿಕೊಂಡರೆ, ಯುದ್ಧವನ್ನು ನಿಲ್ಲಿಸಿ, ನಿಮ್ಮ ದೇಶವಾಸಿಗಳಿಗೆ ಅಭಯವನ್ನು ಕೊಡುವೆನು," ಎಂದನು. ಅದಕ್ಕೆ ರಾಮಾಬಾಯಿಯು, "ಈ ಚಿತ್ತೂರು ಸಂಸ್ಥಾನದಲ್ಲಿ ರಾಜಪುತ್ರರು ಇರುವವರೆಗೂ, ಈ ರಾಜ್ಯವು ನಿಮಗೆ ದೊರೆಯಲಾರದು. ರಾಜಪುತ್ರರ ಶರೀರದಲ್ಲಿ ಪ್ರಾಣವು ಇರುವವರೆಗೂ ಅವರು ನಿಮ್ಮೊಡನೆ ಯುದ್ಧಮಾಡುವರೇ ಹೊರತು ದೀನರಂತೆ ನಿಮಗೆ ಶರಣಾಗತರಾಗಲಾರರು. ಅವರೆಲ್ಲರೂ ಹತರಾದ ಮೇಲೆ ನೀವು ನಿಮ್ಮ ಇಷ್ಟದಂತೆ ಮಾಡಬಹುದು," ಎಂದು ಹೇಳಿದಳು. ಆಗ ಅಕ್ಬರನು, "ನೀವು ಮ್ಲೇಚ್ಛರು ದುಷ್ಟರು ಎಂದು ನಮ್ಮನ್ನು ನಿಂದಿಸುವಿರಿ. ಆದರೆ ನಿಮಗೂ ನಮಗೂ ಇರುವ ಭೇದವನ್ನು ಹೇಳುವೆನು ಕೇಳು. ನೀನು ನನ್ನನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಮಾಡಿದೆ. ಈಗಲೂ ನನ್ನನ್ನು ಕೊಲ್ಲಲು ಕೃತನಿಶ್ಚಯಳಾಗಿಯೇ ಇರುವೆ. ನಾನು ನಿಮ್ಮ ಹಿತಕ್ಕಾಗಿ ಹೇಳುವ ಮಾತುಗಳನ್ನು ನೀನು ಕೇಳು ವುದಿಲ್ಲ. ನೀನು ನನ್ನ ಕೈಗೆ ಇಷ್ಟು ಸಲ ಸಿಕ್ಕಿದರೂ, ನಾನು ನಿನ್ನನ್ನು ಶಿಕ್ಷಿಸದೆ ಬಿಟ್ಟಿನು. ಇದರಿಂದಲೇ ನೀವು ಕ್ರೂರರು ಎಂತಲೂ, ನಾವು ಸಾಧುಗಳು ಎಂತಲೂ ತಿಳಿಯಬಹುದು ಅಲ್ಲವೇ?" ಎಂದು ಹೇಳಿ, ತನ್ನ ಸೇವಕರನ್ನು ಕರೆದು, "ರಾಮಾ ಬಾಯಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕೋಟೆಯೊಳಗೆ ಬಿಟ್ಟು ಬನ್ನಿರಿ," ಎಂದು ಆಜ್ಞಾಪಿಸಿದನು. ರಾಮಾಬಾಯಿಯು ತನ್ನ ಪ್ರಯತ್ನವು ನಿರರ್ಥಕವಾದುದಕ್ಕೆ ಚಿಂತಿಸುತ್ತ, ಸ್ವಜಾತಿ ನಿಂದೆಯನ್ನು ಕೇಳಿದುದರಿಂದ ರೋಷಾರುಣಲೋಚನಳಾಗಿ, ಪಂಜರಾಬದ್ಧವಾದ ಸಿಂಹದಂತೆ ಏನೂ ಮಾಡಲಾರದೆ, ತನ್ನ ಮಕ್ಕಳ ಬಳಿಗೆ ಹೋದಳು. ಆ ಮೇಲೆ ಆಕೆಯು ಕೆಲ್ಲೆಯೊಳಗೆ ಇರುವ ರಾಜಪುತ್ರರನ್ನೆಲ್ಲ ಕರೆ ಯಿಸಿ, ಒಂದು ಸಭೆಯನ್ನು ಮಾಡಿ, "ಓ ಕ್ಷತ್ರಿಯ ವೀರರೇ! ಇದುವರೆಗೂ ನೀವು ನಮ್ಮ ಸಂಸ್ಥಾನವನ್ನು ರಕ್ಷಿಸುವುದಕ್ಕಾಗಿ ಬಹು ಶೌರ್ಯದೊಡನೆ ಯುದ್ಧವನ್ನು

ಮಾಡಿದಿರಿ. ನಿಮ್ಮ ಬಂಧುಗಳಲ್ಲಿ ಅನೇಕರು ಈ ಯುದ್ಧದಲ್ಲಿ ಮೃತರಾದರು. ನಾವು ಇಷ್ಟು ಕಷ್ಟನಷ್ಟಗಳನ್ನು ಅನುಭವಿಸಿದರೂ ಕೊನೆಗೆ ಜಯಲಕ್ಷ್ಮಿಯು ಶತ್ರುಗಳನ್ನೇ ಸೇರುವಳು ಎಂಬುದು ನಿಶ್ಚಯ. ಕೆಲವು ದಿವಸಗಳಲ್ಲಿಯೇ ಮ್ಲೇಚ್ಛರು ಕೋಟೆಯ ಒಳಗೆ ಪ್ರವೇಶಿಸುವರು. ಆದಕಾರಣ ನೀವು ಪ್ರಾಣಗಳ ಮೇಲೆ ಆಶೆಯನ್ನು ಬಿಟ್ಟು ರಣರಂಗದಲ್ಲಿ ನಿಮ್ಮ ಶೌರ್ಯವನ್ನೆಲ್ಲ ತೋರಿಸಿ ವೀರಶಯನವನ್ನು ಅಲಂಕರಿಸಿರಿ. ಇದೇ ಕ್ಷಾತ್ರಧರ್ಮವು," ಎಂದು ಅವರೊಡನೆ ಸಂಭಾಷಿಸಿದಳು. ಆಗ ಅವರಲ್ಲಿ ಒಬ್ಬ ಸರದಾರನು, "ತಾಯಿಯೇ! ನಾವು ಈ ವಿಧದಿಂದ ವ್ಯರ್ಥವಾಗಿ ಪ್ರಾಣವನ್ನು ಕಳೆದುಕೊಳ್ಳುವುದಕ್ಕಿಂತಲೂ ಬಾದಷಹನೊಡನೆ ಸಂಧಿಯನ್ನು ಮಾಡಿಕೊಳ್ಳುವುದು ಒಳ್ಳೆಯದಲ್ಲವೇ?" ಎಂದನು. ಆ ಮಾತುಗಳನ್ನು ಕೇಳಿ ರಾಮಾಬಾಯಿಯು ಸಹಿಸಲಾರದ ಆಗ್ರಹದೊಡನೆ, "ನನ್ನ ಪತಿಯನ್ನು ಕೊಂದ ದುರ್ಮಾರ್ಗನೊಡನೆ ಸಂಧಿಯನ್ನು ಮಾಡಿಕೊಳ್ಳುವಂತೆ ಹೇಳಲು ನಿನಗೆ ಬಾಯಿಯು ಹೇಗೆ ಬಂದಿತು? ನಿನ್ನ ಮುಖವನ್ನು ನೋಡಲಾರೆನು. ಈಕ್ಷಣವೇ ನನ್ನ ಸಮುಖದಿಂದ ಎದ್ದುಹೋಗು," ಎಂದಳು. ರಾಮಾಬಾಯಿಯು ಹೀಗೆ ಹೇಳಿದ ಕೂಡಲೆ, ಅಲ್ಲಿ ಇದ್ದವರು ಎಲ್ಲರೂ ಆತನನ್ನು ತಿರಸ್ಕಾರವಾಗಿ ನೋಡಲು, ಆತನು ಅತ್ಯಂತಲಜ್ಜೆಯಿಂದ ತಲೆಯನ್ನು ಬಗ್ಗಿಸಿಕೊಂಡು ಹೊರಟುಹೋದನು.

ಅನಂತರ ರಾಮಾಬಾಯಿಯು ಅವರನ್ನು ನೋಡಿ ಅವರ ಸ್ವಾಮಿಭಕ್ತಿಗೆ ಸಂತೋಷಿಸಿ, "ನೀವುಗಳು ಕ್ಷತ್ರಿಯ ಧರ್ಮವನ್ನು ಬಲ್ಲವರು. ಶತ್ರುವು ಎಷ್ಟು ಒಳ್ಳೆಯವನಾದರೂ, ಅವನು ನಮ್ಮ ಸ್ವಾತಂತ್ರ್ಯವನ್ನು ನಷ್ಟಮಾಡುವುದಕ್ಕೆ ಬಂದು ಇರುವುದರಿಂದ, ನಾವು ಅವನೊಡನೆ ಯುದ್ಧವನ್ನು ಮಾಡಬೇಕೇ ಹೊರತು ಸಂಧಿಯನ್ನು ಮಾಡಕೂಡದು. ಯುದ್ಧದಲ್ಲಿ ಸಾಯುವುದು ಕ್ಷತ್ರಿಯನಿಗೆ ವಿವಾಹಕ್ಕೆ ಸಮಾನವಾದುದು; ಸಂಧಿಯನ್ನು ಮಾಡಿಕೊಂಡು ಜೀವಿಸಿ ಇರುವುದು ಮೃತ್ಯುವಿಗೆ ಸಮಾನವಾದುದು; ಉತ್ತಮ ಕ್ಷತ್ರಿಯರಾದ ನೀವು ಎಂತಹ ಮರಣವನ್ನು ಅಪೇಕ್ಷಿಸುವಿರೋ ಎಂಬುದನ್ನು ನಾನು ಹೇಳತಕ್ಕ ಅವಶ್ಯಕವು ಇಲ್ಲ," ಎಂದು ಹೇಳಿದಳು. ಆಗ ಅವರು ಎಲ್ಲರೂ ಐಕ್ಯಕಂಠದೊಡನೆ, "ನಾವು ಎಲ್ಲರೂ ನಮ್ಮ ರಾಣಿಗೋಸ್ಕರವೂ, ರಾಜ್ಯಕ್ಕೋಸ್ಕರವೂ ಪ್ರಾಣದ ಮೇಲೆ ಇರುವ ಆಶೆಯನ್ನು ತ್ಯಜಿಸಿ, ವೈರಿಗಳೊಡನೆ ಹೋರಾಡಿ ಭೂದೇವಿಗೆ ರಕ್ತದಿಂದ ಸ್ನಾನವನ್ನು ಮಾಡಿಸಿ, ನಮ್ಮ ಶಿರಗಳನ್ನು ಆಕೆಗೆ ಅರ್ಪಿಸುವೆವು," ಎಂದು ಗರ್ಜಿಸಿದರು. ಅನಂತರ ರಾಮಾಬಾಯಿಯು ಅವರಿಗೆ ಅಪ್ಪಣೆಯನ್ನು ಕೊಟ್ಟು ರಣಭೂಮಿಗೆ ಕಳುಹಿಸಿದಳು. ಅವರು ಹೊರಟುಹೋದ ಮೇಲೆ ಆಕೆಯು ತನ್ನ ಪುತ್ರಿಯರಾದ ಚಂದ್ರಾವತಿ, ಲೀಲಾವತಿಯರನ್ನು ಸಮೀಪಕ್ಕೆ ಕರೆದು, ಅವರನ್ನು ತನ್ನೊಡನೆ ಪರಲೋಕಕ್ಕೆ ಬರುವಂತೆ ಹೇಳಲಾರದೆ ಚಿಂತಿಸುತಲಿದ್ದಳು. ಆಗ್ಯೆ ಚಂದ್ರಾವತಿಗೆ ಹದಿನೇಳು ವರುಷಗಳು, ಲೀಲಾವತಿಗೆ ಹದಿನೈದು ವರುಷಗಳು. ಯೌವನಾವಿರ್ಭಾವ

ದಿಂದ ವಿಶೇಷ ಸುಂದರರಾಗಿ ಕಾಣಬರುತಲಿದ್ದ ಪುತ್ರಿಯರನ್ನು ನೋಡಿ ರಾಮಾ ಬಾಯಿಯು ಸ್ವಲ್ಪ ಹೊತ್ತು ದುಃಖಿಸಿ, ಆಮೇಲೆ ಧೈರ್ಯವನ್ನು ತಾಳಿ, "ನಾನು ಎಷ್ಟು ಪ್ರಯತ್ನಪಟ್ಟರೂ ನಮಗೆ ಜಯವು ಉಂಟಾಗದೆ ದೌರ್ಭಾಗ್ಯವಶದಿಂದ ರಾಜ್ಯವು ತುರುಕರ ಪಾಲಾಗಬೇಕಾಯಿತು. ಆದುದರಿಂದ ನಾವು ಎಲ್ಲರೂ ಅಗ್ನಿ ದೇವನನ್ನು ಆಶ್ರಯಿಸಿ ಅಪವಿತ್ರರಾದ ಯವನರ ಕೈಗೆ ಸಿಕ್ಕದೆ ಶಾಶ್ವತ ಸುಖಪ್ರದ ವಾದ ಸ್ವರ್ಗಕ್ಕೆ ಹೋಗಬೇಕು ಎಂದು ನಾನು ನಿಶ್ಚಯಿಸಿದೆನು. ನೀವು ಈ ಲೋಕದಲ್ಲಿಯೇ ಇದ್ದು ಅನೇಕ ದುಃಖಗಳನ್ನು ಅನುಭವಿಸಲು ಅಪೇಕ್ಷಿಸುವಿರೋ ಅಥವಾ ಪತಿವ್ರತೆಯರು ಹೋಗುವ ಪರಮಪದಕ್ಕೆ ಹೋಗಲು ಅಪೇಕ್ಷಿಸುವಿರೋ ಬೇಗ ಹೇಳಿರಿ," ಎಂದು ಪುತ್ರಿಯರನ್ನು ಕೇಳಿದಳು. ಅದಕ್ಕೆ ಚಂದ್ರಾವತಿಯು ಅತ್ಯುತ್ಸಾಹದೊಡನೆ, "ಅಮ್ಮಾ! ನಾವು ರಾಜಕನ್ಯೆಯರಾಗಿ ಜನ್ಮಿಸಿ ಪ್ರಾಣವನ್ನು ಬಚ್ಚಿಟ್ಟುಕೊಳ್ಳುವುದಕ್ಕೆ ಯತ್ನಿಸುವೆವೇ? ಈ ಸ್ಥಿತಿಯಲ್ಲಿ ಜೀವಿಸಿ, ಮೊಗಲರ ಕೈಗೆ ಸಿಕ್ಕಿ ಮಾನಹಾನಿಯನ್ನು ಹೊಂದುವುದಕ್ಕೆ ನಾವು ಹೇಗೆ ತಾನೇ ಅಪೇಕ್ಷಿಸ ಬಲ್ಲೆವು? ನಮ್ಮ ಪೂರ್ವಿಕರು ಇಂತಹ ಸಂಕಟಸಮಯದಲ್ಲಿ ಮಾಡಿದ ಸ್ತುತ್ಯ ಕೃತ್ಯಗಳನ್ನು ಮಾಡುವುದಕ್ಕೆ ನಾವು ಸಿದ್ಧರಾಗಿ ಇದೇವೆ," ಎಂದಳು. ಆ ಬಾಲಿಕೆಯ ಧೀರವಚನಗಳನ್ನು ಕೇಳಿ ರಾಮಾಬಾಯಿಯು ಸಂತೋಷಿಸಿ, ಅವರನ್ನು ಆಲಂಗಿಸಿ ಕೊಂಡು, ಇಂತಹ ಸುಗುಣವತಿಯರಾದ ಈ ಬಾಲಿಕೆಯರು ಇನ್ನು ಕೆಲವು ಕಾಲದ ವರೆಗೂ ಈ ಪ್ರಪಂಚದಲ್ಲಿ ಇದ್ದರೆ ಎಷ್ಟು ಘನಕಾರ್ಯಗಳನ್ನು ನೆರವೇರಿಸುತಲಿ ದ್ದರೋ ಎಂದು ನೆನೆಸಿ, ದುಃಖವನ್ನು ತಡೆಯಲಾರದೆ ರೋದಿಸಿದಳು. ಆ ಬಾಲಿಕೆ ಯರೂ ಆರ್ತನಾದದೊಡನೆ ಶೋಕಿಸಿದರು. ಮನೋದುಃಖವು ಬಾಷ್ಪರೂಪ ವಾಗಿ ಹೊರಗೆ ಬಂದಮೇಲೆ, ರಾಮಾಬಾಯಿಯು ತನ್ನ ದುಃಖವನ್ನು ತಡೆದು, ಪುತ್ರಿಯರಿಗೆ ಧೈರ್ಯವನ್ನು ಹೇಳಿ, ಅವರನ್ನು ಕರೆದುಕೊಂಡು ಯುದ್ಧಸನ್ನದ್ಧ ರಾದ ರಾಜಪುತ್ರರ ಬಳಿಗೆ ಹೋಗಿ, ಅವರೊಡನೆ, "ನೀವು ಎಲ್ಲರೂ ನಾಳೆಯ ಪ್ರಾತಃಕಾಲಕ್ಕೆ ಯುದ್ಧರಂಗವನ್ನು ಸೇರಿ, ಪ್ರಾಣಗಳು ಹೋದವು ಎಂದೇ ಭಾವಿಸಿ ಯುದ್ಧಮಾಡಿ ಮುಕ್ತಿಯನ್ನು ಪಡೆಯಬೇಕು," ಎಂದು ಆಜ್ಞಾಪಿಸಿದಳು. ಆ ಮೇಲೆ ಅವರ ಪತ್ನಿಯರ ಸಮೀಪಕ್ಕೆ ಹೋಗಿ, "ನಿಮ್ಮ ಪುರುಷರು ಯುದ್ಧಕ್ಕೆ ಹೋದ ಕೂಡಲೆ ನಿಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಚಿತೆಯನ್ನು ಸಿದ್ಧ ಪಡಿಸಿಕೊಂಡು, ಅದರಲ್ಲಿ ಕುಳಿತು ಚಿತೆಗೆ ಬೆಂಕಿಯನ್ನು ಹಚ್ಚಿಕೊಳ್ಳಬೇಕು. ಅದ ರಿಂದ ನೀವು ಪತಿವ್ರತೆಯರು ಹೋಗುವ ಪರಮಪದಕ್ಕೆ ಹೋಗುವಿರಿ. ಮತ್ತು ಮೊಗಲರು ಪಟ್ಟಣವನ್ನು ಪ್ರವೇಶಿಸಿದಾಗ ಅಲ್ಲಿ ಉರಿಯೂ, ಹೊಗೆಯೂ, ಭಸ್ಮ ರಾಶಿಗಳೂ ವಿನಹ ಇನ್ನೇನೂ ಅವರಿಗೆ ಕಾಣಬಾರದು," ಎಂದು ಅವರಿಗೆ ಹೇಳಿ, ರಾಮಾಬಾಯಿಯು ಸ್ವಮಂದಿರಕ್ಕೆ ಹೋಗಿ ಆ ರಾತ್ರಿಯನ್ನೆಲ್ಲ ಈಶ್ವರ ಪ್ರಾರ್ಥನೆ ಯಲ್ಲಿ ಕಳೆದಳು. ಪುರಸ್ತ್ರೀಯರು ತಮ್ಮತಮ್ಮ ಯತ್ನದಲ್ಲಿ ಇದ್ದರು.

ಪ್ರಾತಃಕಾಲವಾದ ಕೂಡಲೆ ರಾಜಪುತ್ರರು ಯುದ್ಧಸನ್ನದ್ಧರಾಗಿ, ಒಬ್ಬೊಬ್ಬರಾಗಿ ಹೊರಟು ಕೋಟೆಯ ದ್ವಾರದಬಳಿಯಲ್ಲಿ ಸೇರಿದರು. ಅವರ ಮನೋವಿಕಾರಗಳು ಎಲ್ಲವೂ ಏಕವಾಗಿ ಶತ್ರುಸಂಹಾರೇಚ್ಛೆಯಾಗಿ ಪರಿಣಮಿಸಿ ಇದ್ದುದರಿಂದ, ಆ ಸಮಯದಲ್ಲಿ ಅವರು ಪ್ರತ್ಯಕ್ಷರಾದ ಕಾಲಾಂತಕರಂತೆ ಕಂಡುಬಂದರು. ಅವರ ಪತ್ನಿಯರು ತಮ್ಮ ಪ್ರಿಯ ಪತಿಗಳ ಕಡೆಯ ಸಂದರ್ಶನಕ್ಕಾಗಿ ಅಲ್ಲಿಗೆ ಬಂದು, 'ಈ ಗಳಿಗೆಯು ಕಳೆದರೆ ಪುನಃ ಅವರನ್ನು ನೋಡಲಾರೆವು,' ಎಂದು ಎಣಿಸಿ ತಮ್ಮ ಪ್ರಿಯಪತಿಗಳನ್ನೂ, ಸುತರನ್ನೂ, ಸೋದರರನ್ನೂ ಆಲಂಗಿಸಿಕೊಳ್ಳುತ್ತಲೂ, ನಮಸ್ಕರಿಸುತ್ತಲೂ, ತೃಪ್ತರಾಗದೆ ನೋಡುತ್ತಲೂ ಇದ್ದರು. ಅವರ ನಡುವೆ ಪೂಜ್ಯಳಾದ ರಾಮಾಬಾಯಿಯು ಪುತ್ರಿಯರೊಡನೆ ನಿಂತುಕೊಂಡು, ಆ ನರವೀರರನ್ನೂ, ವೀರಪತ್ನಿಯರನ್ನೂ ಅತ್ಯಂತ ಖೇದದೊಡನೆ ನೋಡುತಲಿದ್ದಳು. ಆ ಸ್ತ್ರೀಪುರುಷರೆಲ್ಲರೂ ಒಂದು ಮುಹೂರ್ತ ಕಾಲದವರೆಗೆ ಗಟ್ಟಿಯಾಗಿ ರೋದಿಸಿದರು. ಆಮೇಲೆ ರಾಮಾಬಾಯಿಯು ಧೈರ್ಯವನ್ನು ತಳೆದು ದೀರ್ಘಸ್ವರದೊಡನೆ, "ರಾಜಪುತ್ರರೇ! ನೀವು ನಿಮ್ಮ ಶರೀರಗಳೊಡನೆ ನಿಮ್ಮ ಸ್ತ್ರೀಯರ ಮಾನಧನವನ್ನು ಸಹ ಮ್ಲೇಚ್ಛರಿಗೆ ಒಪ್ಪಿಸಲು ನಿಶ್ಚಯಿಸಿರುವಿರೇನು?" ಎಂದಳು. ಈ ಮಾತುಗಳು ಅವರ ಕರ್ಣಗಳಿಗೆ ಶೂಲಗಳಂತೆ ತೋರಲು, ಅವರು ಎಲ್ಲರೂ "ಇಲ್ಲ, ಇಲ್ಲ," ಎಂದು ಹೇಳಿದರು. ಆಗ ಆಕೆಯು, "ಹಾಗಾದರೆ ಪುರುಷರು ಯುದ್ಧಕಾರ್ಯಕ್ಕೂ, ಸ್ತ್ರೀಯರು ಅಗ್ನಿಪ್ರವೇಶಕಾರ್ಯಕ್ಕೂ ಹೊರಡಿ. ಸಾವ ಕಾಶ ಮಾಡಬೇಡಿ," ಎಂದು ಆಜ್ಞಾಪಿಸಿದಳು. ಕೂಡಲೆ ಅವರು ತಂತಮ್ಮ ಕಾರ್ಯಗಳಿಗೆ ಹೊರಟುಹೋದರು.

ಆ ದಿವಸ ಮೊಗಲರು ಕೋಟೆಯ ದ್ವಾರವನ್ನು ಹೇಗಾದರೂ ಒಡೆದು ಒಳಕ್ಕೆ ಹೋಗಬೇಕು ಎಂದು ಯತ್ನಿಸುತಲಿದ್ದರು. ಅಷ್ಟರಲ್ಲಿ ಕೋಟೆಯ ಪೂರ್ವದ್ವಾರವನ್ನು ತೆರೆದುಕೊಂಡು, ಅನೇಕಜನ ರಾಜಪುತ್ರರು, "ಹರಹರ ಮಹಾದೇವ," ಎಂಬ ರಣನಾದವನ್ನು ಮಾಡುತ್ತ ಹೊರಟು ಬಂದರು. ಅವರ ಭಯಂಕರವಾದ ಉಗ್ರತೆಯನ್ನು ನೋಡಿ ತುರುಕರು ಸ್ವಲ್ಪ ಹಿಂದಕ್ಕೆ ಸರಿದರು. ಆಮೇಲೆ ಎರಡು ಕಡೆಯವರೂ ಘೋರವಾಗಿ ಯುದ್ಧಮಾಡತೊಡಗಿದರು. ಒಂದು ಕಡೆ ಹತಾಶರಾದರೂ ಶೌರ್ಯದೊಡನೆ ಹೋರಾಡುವ ರಾಜಪುತ್ರರನ್ನೂ, ಇನ್ನೊಂದು ಕಡೆ ಇವರನ್ನು ಗೆದ್ದರೆ ರಾಜ್ಯವು ನಮ್ಮದೇ ಎಂಬ ಉತ್ಸಾಹದೊಡನೆ ಹೋರಾಡುವ ಯವನರನ್ನೂ ಉಂಟಾಗಿ ಇದ್ದ ಆ ಯುದ್ಧವು, ಹದಿನೆಂಟನೆಯ ದಿನದ ಪ್ರಾತಃಕಾಲದ ಭಾರತಯುದ್ಧಕ್ಕೆ ಸಮನಾಗಿ ತೋರಿತು. ರಾಜಪುತ್ರರನ್ನು ಶೀಘ್ರವಾಗಿ ಕೊಂದು, ಕೋಟೆಯನ್ನು ಪ್ರವೇಶಿಸಬೇಕು ಎಂದು ಮೊಗಲರು ತಮ್ಮ ಶೌರ್ಯವನ್ನೆಲ್ಲ ಉಪಯೋಗಿಸಿ ಯುದ್ಧ ಮಾಡುತಲಿದ್ದರು. 'ಆರಿ ಹೋಗುವ ದೀಪಕ್ಕೆ ಕಾಂತಿಯು ಹೆಚ್ಚುವುದು," ಎಂಬ ಗಾದೆಯಂತೆ ರಾಜಪುತ್ರರು ವೀರಾವೇಶ

ದೊಡನೆ ಘೋರವಾಗಿ ಹೋರಾಡುತಲಿದ್ದರು. ಉಭಯರ ಪ್ರತಾಪಕ್ಕೆ ಫಲವಾಗಿ ಹೆಣಗಳು ರಾಶಿಗಳಾಗಿ ಬಿದ್ದವು. ರಾಜಪುತ್ರ ಸೈನ್ಯವು ಕ್ರಮಕ್ರಮವಾಗಿ ಕಡಮೆಯಾಗುತ್ತಿತ್ತು. ರಾಜಪುತ್ರರ ಮುಖ್ಯಸರದಾರನಾದ ಸೊಲಂಬಾರನು ವೀರಶಯನವನ್ನು ಅಲಂಕರಿಸಿದನು. ಇಷ್ಟುವರೆಗೂ ಧೈರ್ಯವಾಗಿ ಯುದ್ಧಮಾಡುತಲಿದ್ದ ರಾಜಪುತ್ರರು ತಮ್ಮ ಸರದಾರನ ಸ್ಥಿತಿಯನ್ನು ನೋಡಿ ಸ್ವಲ್ಪ ಹಿಮ್ಮೆಟ್ಟಿದರು. ಆದರೆ ಅವರನ್ನು ಪುನಃ ಯುದ್ಧಕ್ಕೆ ಪ್ರೇರೇಪಿಸುವಂತಹ ಒಂದು ವಿಚಿತ್ರವು ನಡೆಯಿತು. ಅದು ಯಾವುದು ಎಂದರೆ: ಈ ಯುದ್ಧವು ನಡೆಯುವುದಕ್ಕೆ ಕೆಲವು ದಿವಸಗಳಿಗೆ ಪೂರ್ವವೇ ಹದಿನೆಂಟುವರುಷದ ಒಬ್ಬ ರಾಜಪುತ್ರಯುವಕನು, ಹದಿನೈದು ವರುಷದ ಬಾಲಿಕೆಯನ್ನು ವಿವಾಹಮಾಡಿಕೊಂಡು ಇದ್ದನು. ಆ ಯುವಕನು ಈ ದಿವಸ ಖಡ್ಗವನ್ನು ಧರಿಸಿ ಯುದ್ಧಕ್ಕೆ ಹೊರಟನು. ಆತನ ಹಿಂದೆ ಆ ನವೋಢಾ ಬಾಲಿಕೆಯೂ ಯುದ್ಧ ಸನ್ನದ್ಧಳಾಗಿ ಹೊರಟಳು. 'ಯುದ್ಧರಂಗಕ್ಕೆ ಹೋಗಬೇಡ,' ಎಂದು ಯಾರು ಹೇಳಿದರೂ ಆ ಬಾಲಕಿಯು ಕೇಳದೆ, 'ನನ್ನ ಪತಿಯು ಪ್ರಾಣವನ್ನು ಬಿಟ್ಟಕೂಡಲೆ, ನಾನೂ ಪ್ರಾಣವನ್ನು ಬಿಡುವೆನು,' ಎಂದು ಧೃಡವಾಗಿ ಹೇಳಿದಳು. ಪುತ್ರನ, ಪುತ್ರವಧುವಿನ ನಿಶ್ಚಯವನ್ನು ನೋಡಿ ಆ ಯುವಕನ ತಾಯಿಯು ಸಂತೋಷಿಸಿ, ಅವರ ಕೈಗಳಿಗೆ ಖಡ್ಗಗಳನ್ನು ಕೊಟ್ಟು, ಅವರಿಗೆ ಉತ್ಸಾಹ ವಚನಗಳನ್ನು ಹೇಳುತ್ತ ಸ್ವಲ್ಪ ದೂರದವರೆಗೂ ಕಳುಹಿಸಿ ಹಿಂದಕ್ಕೆ ಬಂದಳು. ಮೇಲೆ ಹೇಳಿದಂತೆ ಕೆಲವು ರಾಜಪುತ್ರರು ರಣರಂಗದಿಂದ ಬರುತಲಿದ್ದ ಸಮೆಯದಲ್ಲಿ ಈ ನೂತನ ದಂಪತಿಯರು ಯುದ್ಧಭೂಮಿಯನ್ನು ಪ್ರವೇಶಿಸಿ ಶತ್ರುಸಂಹಾರವನ್ನು ಮಾಡಲು ಪ್ರಾರಂಭಿಸಿದರು. ಇವರನ್ನು ನೋಡಿ ಹಿಮ್ಮೆಟ್ಟಿದ ರಾಜಪುತ್ರರು ಲಜ್ಜೆಯಿಂದ ಪುನಃ ಯುದ್ಧಕ್ಷೇತ್ರವನ್ನು ಪ್ರವೇಶಿಸಿದರು. ಆ ದಂಪತಿಯರು ಅನೇಕ ಶತ್ರುಗಳನ್ನು ಸಂಹರಿಸಿ, ವೀರಸ್ವರ್ಗವನ್ನು ಸೇರಿದರು. ಮೊಗಲರು ಹತಶೇಷರಾದ ಕ್ಷತ್ರಿಯರನ್ನು ಸಂಹರಿಸಿ ಕೋಟೆಯನ್ನು ಪ್ರವೇಶಿಸಲು ಸಿದ್ಧರಾದರು.

ಕೆಲವು ದಿವಸಗಳಹಿಂದೆ ಸೌಖ್ಯಪ್ರದವಾಗಿದ್ದ ಜಗಮಲ್ ಮಹಾರಾಜನ ಅರಮನೆಯು ಈಗ ದುಃಖಕ್ಕೆ ತೌರುಮನೆಯಾಯಿತು! ರಾಜಮಂದಿರದ ಸಮೀಪದಲ್ಲಿ ಚಿತೆಯ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು, ಪುತ್ರಿಯರೊಡನೆಯೂ, ಇತರ ರಾಜಸ್ತ್ರೀಯರೊಡನೆಯೂ ರಾಮಾಬಾಯಿಯು ಅತ್ಯಂತ ಚಿಂತಾಕ್ರಾಂತಳಾಗಿ ಕುಳಿತಿದ್ದಳು. ಅವರುಎಲ್ಲರೂ, "ರಾಜಪುತ್ರರಿಗೆ ಜಯವು ಉಂಟಾಗಲಿ" ಎಂದು ಈಶ್ವರನನ್ನು ಪ್ರಾರ್ಥಿಸಿ ರಣರಂಗದಿಂದ ಎಂತಹ ಸಮಾಚಾರವು ಬರುವುದೋ ಎಂದು ಕಾದುಕೊಂಡು ಇದ್ದರು. ಆಗ, ಎಣಿಸಲು ಅಶಕ್ಯವಾದ ಗಾಯಗಳ ದೆಸೆಯಿಂದ ಉಂಟಾದ ಬಾಧೆಯನ್ನು ಅನುಭವಿಸುತ್ತ, ಶರೀರವುಎಲ್ಲವೂ ರಕ್ತಮಯವಾಗಿ ಇರುವದರಿಂದ ಭಯಂಕರನಾಗಿ ತೋರುತ್ತ ಇದ್ದ ಒಬ್ಬ

ಪುರುಷನು ಅತಿವೇಗವಾಗಿ ಅಲ್ಲಿಗೆ ಬಂದನು. ಅವನನ್ನು ಗುರುತಿಸಿ, ರಾಮಾ ಬಾಯಿಯು, "ಓ ರಾಮ ಸಿಂಹನೇ! ಜಯವೇ?" ಎಂದು ಕೇಳಿದಳು. ಅದಕ್ಕೆ ಅವನು, "ಅಮ್ಮಾ! ಜಯವೇ? ಆಯುಧವನ್ನು ಧರಿಸುವ ಶಕ್ತಿಯು ನಮ್ಮಲ್ಲಿ ಇರುವವರೆಗೂ ಹೋರಾಡಿ ವೈರಿಗಳನ್ನು ಹತಮಾಡಿದೆವು. ಅವರ ಹೆಣಗಳು ರಾಶಿಗಳಾಗಿ ಬಿದ್ದಿವೆ. ಆದರೆ ದುರದೃಷ್ಟವಶದಿಂದ ನಮ್ಮವರು ಎಲ್ಲರೂ ಮಡಿದರು. ಒಬ್ಬಿಬ್ಬರುಇದಾರೆ; ಅವರು ಕೂಡ ಮೃತರಾದರು ಎಂದೇ ಎಣಿಸಬೇಕು. ಪೂರ್ವದ್ವಾರ ಸಮೀಪದಲ್ಲಿ ಬಿದ್ದಿರುವ ಹೆಣಗಳರಾಶಿಯನ್ನು ತುರುಕರು ಶೀಘ್ರದಲ್ಲಿಯೇ ತೆಗೆದುಹಾಕಿ ಕೋಟೆಯ ಒಳಕ್ಕೆ ಬರುವರು," ಎಂದು ಹೇಳಿ ಇನ್ನು ಮಾತನಾಡಲಾರದೆ ಕೆಳಗೆಬಿದ್ದು ಸ್ವಲ್ಪ ಹೊಡದುಕೊಂಡು ಪ್ರಾಣವನ್ನು ಬಿಟ್ಟನು. ಅವನು ಕರ್ಣಕಠೋರವಾದ ಆ ವಾಕ್ಯಗಳನ್ನು ನುಡಿದು ಮೃತನಾದಕೂಡಲೆ, ರಾಮಾಬಾಯಿಯು, "ಸೋದರಿಯರೆ! ನಿಮ್ಮಪತಿಗಳೂ, ಪುತ್ರರೂ, ಸೋದರರೂ, ಬಂಧುಗಳೂ ವೀರಸ್ವರ್ಗಕ್ಕೆ ಹೋದರು. ಅವರ ಅಂಶವು ನಿಮ್ಮಲ್ಲಿ ಇದೆ. ಇನ್ನು ಆಲಸ್ಯವನ್ನು ಮಾಡಿದರೆ ವೀರಪತ್ನಿಯರೂ, ವೀರಮಾತೆಯರೂ ಆದ ನೀವು ಮ್ಲೇಚ್ಛಿರವಶರಾಗಿ, ದೂಷಿತರಾಗುವಿರಿ; ಆಮೇಲೆ ಅವರಿಗೆ ದಾಸಿಯರಾಗ ಬೇಕಲ್ಲವೇ? ಈ ಮಾತುಗಳು ಕೂಡ ನನಗೆ ಎಷ್ಟೋ ಕರ್ಣಕಠೋರಗಳಾಗಿ ಇವೆ. ಆದುದರಿಂದ ಜಾಗ್ರತೆಯಾಗಿ ಅಗ್ನಿಯಲ್ಲಿ ಪ್ರವೇಶಿಸಿರಿ," ಎಂದಳು. ಈ ಮಾತು ಗಳನ್ನು ಕೇಳಿ ಅವರುಎಲ್ಲರೂ 'ನಾವು ಸಿದ್ಧರಾಗಿಇದೇವೆ," ಎಂದು ತಂತಮ್ಮ ಮಕ್ಕಳನ್ನು ಎತ್ತಿಕೊಂಡು ಅಗ್ನಿಯಲ್ಲಿ ಧುಮುಕಲು ಸಿದ್ಧರಾದರು. ಅಷ್ಟರಲ್ಲಿ ಪೂರ್ವದ್ವಾರದಿಂದ ಪ್ರವೇಶಿಸಿದ ಯವನರ 'ದೀ ದೀ' ಎಂಬ ರಣಘೋಷವು ಕೇಳಿಸಿತು. ಆಗ ಸ್ತ್ರೀಯರು ಎಲ್ಲರೂ ಅವಸರದಿಂದ ಚಿತಿಗಳನ್ನುಹತ್ತಿ, ಆ ಚಿತಿ ಗಳಿಗೆ ಬೆಂಕಿಯನ್ನು ಹಚ್ಚಿದರು. ಒಂದುಕ್ಷಣದೊಳಗೆ ಕೋಟೆಯೆಲ್ಲವು ಅಗ್ನಿಮಯ ವಾಯಿತು. ಕೋಟೆಯನ್ನು ಪ್ರವೇಶಿಸುತಲಿದ್ದ ಮೊಗಲ್‌ಸೈನ್ಯವು ಅಗ್ನಿಯಜ್ವಾಲೆಗೆ ತಡೆಯಲಾರದೆ ಹಿಂದಕ್ಕೆಹೋಯಿತು. ಅಗ್ನಿಯು ಆರಿದಮೇಲೆ ಅಕ್ಬರುಬಾದ ಷಹನು ಕೋಟೆಯನ್ನು ನೋಡುವುದಕ್ಕೆ ಬಂದನು. ಕೋಟೆಯು ಜನಶೂನ್ಯ ವಾಗಿಯೂ, ನಿಶ್ಶಬ್ದವಾಗಿಯೂ ಇದ್ದುದರಿಂದ ಭಯಂಕರವಾಗಿ ತೋರಿತು. ಭಸ್ಮವಾಗಿ ಬಿದ್ದಿದ್ದ ಆ ವೀರಾಂಗನೆಯರನ್ನು ನೋಡಿ, ಬಾದಷಹನು ವಿಶೇಷ ದುಃಖಿತನಾಗಿ, "ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಭಾರತಮಹಿಳೆಯ ರೊಡನೆ ಯಾವಮಹಿಳೆಯರೂ ಸಮಾನರಾಗಲಾರರು. ಇವರೇ ಉತ್ತಮೋತ್ತಮ ಪತಿವ್ರತೆಯರು," ಎಂದು ನುಡಿದನು.

ಈ ಚರಿತ್ರೆಯಲ್ಲಿ ಪತಿಭಕ್ತಿ, ಧೈರ್ಯ ಸಾಹಸಗಳಿಗಾಗಿ ರಾಣಿರಾಮಾಬಾಯಿ ಯನ್ನೂ ದೇಶಾಭಿಮಾನಕ್ಕಾಗಿ ಬಾಲದಂಪತಿಯರನ್ನೂ ಪಾತಿವ್ರತ್ಯರಕ್ಷಣೆಯಲ್ಲಿ

ಇರುವ ತತ್ಪರತ್ವಕ್ಕಾಗಿ ರಾಜಪುತ್ರಸ್ತ್ರೀಯರನ್ನೂ ಔದಾರ್ಯಕ್ಕಾಗಿ ಬಾದಷಹನನ್ನೂ ಕೊಂಡಾಡಬೇಕು.

ಕುಮಾರೀ ಪ್ರೇಮದೇವಿ.

"ಭವೋಹಿಲೋಕಾಭ್ಯುದಯಾಯತಾದೃಶಾಂ."

ಈಕೆಯು ಕ್ರೀ. ಶ. ೧೮೭೦ ನೆಯ ಇಸ್ವಿ ಆಗಸ್ಟ್ ೧೬ ನೆಯ ತಾರೀಖಿನಲ್ಲಿ ಜನ್ಮಿಸಿದಳು. ಈಕೆಯ ತಂದೆಯ ಹೆಸರು ದೇವೀಪ್ರಸಾದ. ಈತನು ಅಸಿಸ್ಟೆಂಟ್ ಇಂಜನಿಯರ್ ಕೆಲಸವನ್ನು ಮಾಡುತ್ತಲಿದ್ದನು. ಈತನು ಡಿಲ್ಲಿಯಲ್ಲಿ ಇದ್ದಾಗ ಪ್ರೇಮದೇವಿಯು ಜನ್ಮಿಸಿದಳು. ಈತನು ಸ್ತ್ರೀವಿದ್ಯಾಭಿಮಾನಿಯಾದುದರಿಂದ, ಹೆಣ್ಣುಮಗುವು ಹುಟ್ಟಿದುದಕ್ಕೆ ಇತರರಂತೆ ಚಿಂತಿಸಲಿಲ್ಲ. ನಮ್ಮ ಭರತಖಂಡದಲ್ಲಿ ಸ್ತ್ರೀಯರ ಅದೃಷ್ಟದೋಷದಿಂದ ಹೆಣ್ಣುಮಗು ಹುಟ್ಟಿತು ಎಂದು ಕೇಳಿದಕೂಡಲೆ, ಯಾವುದೋಒಂದು ಸಂಕಟಬಂದಂತೆ ಚಿಂತಿಸುತ್ತಾರೆ. ನಾಮಕರಣವೇ ಮೊದಲಾದ ಉತ್ಸವಗಳನ್ನು ವಿಶೇಷವಾಗಿ ಮಾಡುವುದಿಲ್ಲ. ಹೆಣ್ಣುಮಕ್ಕಳನ್ನು ಎತ್ತಿ ಮುದ್ದಾಡುವುದಿಲ್ಲ ಎಂದು ದೀಕ್ಷೆಯನ್ನು ವಹಿಸಿದ ದೀಕ್ಷಿತರು ಸಹ ನಮ್ಮದೇಶದಲ್ಲಿ ಇದಾರೆ. ಸ್ತ್ರೀವಿದ್ಯಾಭಾವವೂ, ಸ್ತ್ರೀಸ್ವಾತಂತ್ರ್ಯಾಭಾವವೂ ಹಿಂದೂಸ್ತ್ರೀಯರಿಗೆ ಉಂಟುಮಾಡಿದ ದುರವಸ್ಥೆಯೇ ಹೀಗೆ ಎಣಿಸುವುದಕ್ಕೆ ಕಾರಣವು ಎಂದು ತೋರುತ್ತದೆ. ಸ್ತ್ರೀವಿದ್ಯೆಯು ಶೀಘ್ರಕಾಲದಲ್ಲಿಯೇ ಪೂರ್ಣಾಭಿವೃದ್ಧಿಯನ್ನು ಪಡೆದು, 'ಪುತ್ರೇಣದುಹಿತಾಸಮಾ,' ಎಂಬ ಪುರಾತನವಚನವು ಸತ್ಯವಾದುದು ಎಂದು ನಮ್ಮ ಭಾರತಪುತ್ರರು ಎಣಿಸಲಿ!

ಪ್ರೇಮದೇವಿಗೆ ಐದುವರುಷಗಳು ಆದಕೂಡಲೆ ದೇವೀಪ್ರಸಾದನು ಮಗಳನ್ನು ಕುಮಾರೀ ಪಾಠಶಾಲೆಗೆ ಕಳುಹಿಸಿದನು. ದೇವೀಪ್ರಸಾದನಪತ್ನಿಯು ವಿದ್ಯಾವತಿಯಾದುದರಿಂದ ಪುತ್ರಿಗೆ ಆಕೆಯು ಮನೆಯಲ್ಲಿ ಪಾಠಗಳನ್ನು ಹೇಳಿಕೊಡುತ್ತ ಇದ್ದಳು. ಪ್ರೇಮದೇವಿಗೆ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ ಎರಡು ವರ್ಷಗಳಿಗೆ ನಾಗರೀಭಾಷೆಯು ಸಂಪೂರ್ಣವಾಗಿ ಬಂದಿತು. ಸಂಸ್ಕೃತ ಭಾಷೆಯಲ್ಲಿ ಸಹ ಸ್ವಲ್ಪ ಪ್ರವೇಶವು ಉಂಟಾಯಿತು. ಅನಂತರ ಒಬ್ಬ ಉಪಾಧ್ಯಾಯನನ್ನು ನಿಯಮಿಸಿ ಆಕೆಗೆ ಇಂಗ್ಲೀಷನ್ನು ಕಲಿಸಲು, ಸೂಕ್ಷ್ಮಬುದ್ಧಿಯುಳ್ಳ ಪ್ರೇಮದೇವಿಯು ಇಂಗ್ಲೀಷನ್ನು ಪ್ರಾರಂಭಿಸಿದ ಎರಡುವರುಷಗಳಿಗೆ ಆ ಭಾಷೆಯ ನಾಲ್ಕನೆಯ ಪುಸ್ತಕವನ್ನು ಪೂರ್ತಿಮಾಡಿದಳು. ಕ್ರಮಕ್ರಮವಾಗಿ ಪ್ರೇಮ

ದೇವಿಯು ವಿದ್ಯೆಯಲ್ಲಿ ವಿಶೇಷ ಪ್ರೀತಿಯುಳ್ಳವಳಾಗಿ ಜ್ಞಾನವನ್ನು ಅಭಿವೃದ್ಧಿಪಡಿಸಿ ಕೊಳ್ಳುತಲಿದ್ದಳು.

ಬಾಲ್ಯದಿಂದಲೂ ಈಕೆಯು ಈಶ್ವರನಲ್ಲಿ ಅಧಿಕ ಭಕ್ತಿಯುಳ್ಳವಳಾಗಿ ಇದ್ದಳು. ಈಶ್ವರನು ಸಕಲಮಾನವರ ಪ್ರಾರ್ಥನೆಯನ್ನು ಕೇಳಿ ಅವರ ಮನೋರಥಗಳನ್ನು ಪೂರ್ತಿಮಾಡುವನು ಎಂದು ಈಕೆಯು ನಂಬಿಇದ್ದಳು. ಆದಕಾರಣ ಪ್ರತಿ ದಿನವೂ ಪ್ರಾತಃಸಾಯಂಕಾಲಗಳಲ್ಲಿ ಈಕೆಯು ಈಶ್ವರನನ್ನು ಪ್ರಾರ್ತಿಸುತ್ತಿದ್ದಳು. ಬಾಲ್ಯದಲ್ಲಿಯೇ ಈಕೆಗೆ ಇರುವ ಈಶ್ವರಭಕ್ತಿಯನ್ನು ನೋಡಿ ಈಕೆಯ ತಾಯಿ ತಂದೆಗಳು ಬಹಳ ಸಂತೋಷಪಡುತಲಿದ್ದರು. ಪ್ರೇಮದೇವಿಗೆ ಹನ್ನೆರಡು ವರುಷ ಗಳು ವಯಸ್ಸು ಆಗುವ ಹೊತ್ತಿಗೆ ಆಕೆಯು ಅನೇಕ ಧರ್ಮಗ್ರಂಥಗಳನ್ನು ಪರಿಶೋಧಿಸಿದಳು. ಕೊನೆಗೆ ಜಗತ್ತಿನಲ್ಲಿ ಇರುವ ಸೌಖ್ಯಗಳು ಎಲ್ಲವೂ ತುಚ್ಛ ಗಳು ಎಂತಲೂ, ಈಶ್ವರಭಜನೆಯಿಂದಲೂ, ಪರೋಪಕಾರದಿಂದಲೂ ಉಂಟಾ ಗುವ ಸೌಖ್ಯವೇ ನಿಜವಾದ ಸೌಖ್ಯವು ಎಂತಲೂ ಆಕೆಯು ನಿಶ್ಚಯಿಸಿದಳು. ೧೮೮೨ ನೆಯ ಇಸವಿಯಲ್ಲಿ ಎಸ್. ಎ. ಅಗ್ನಿಹೋತ್ರಿ ಎಂಬ ಧರ್ಮಶೀಲನು ಒಬ್ಬನು 'ದೇವಧರ್ಮ' ಎಂಬ ಒಂದು ನವೀನ ಧರ್ಮವನ್ನು ಸ್ಥಾಪಿಸಿ ಅದನ್ನು ಪ್ರಜೆಗಳಿಗೆ ಉಪದೇಶವನ್ನು ಮಾಡುತಲಿದ್ದನು. ಪ್ರೇಮದೇವಿಯು ಈ ಸಮಾ ಚಾರವನ್ನು ಕೇಳಿ ಆ ಮಹಾತ್ಮನನ್ನು ನೋಡಬೇಕು ಎಂದು ಅಪೇಕ್ಷಿಸಿದಳು. ಕೆಲವು ದಿವಸಗಳಿಗೆ ಅಗ್ನಿಹೋತ್ರಿಯು ವಾಸಮಾಡುತಲಿದ್ದ ಗುಜರಾವಲೀ ಗ್ರಾಮಕ್ಕೆ ದೇವೀಪ್ರಸಾದನನ್ನು ಗವರ್ನಮೆಂಟಿನವರು ವರ್ಗಮಾಡಿದರು. ಅಗ್ನಿ ಹೋತ್ರಿಯ ಉಪದೇಶದಿಂದ ಪ್ರೇಮದೇವಿಯ ಮನಸ್ಸು ಪರಿಶುಭ್ರವಾಯಿತು. ಆದುದರಿಂದ ಆಕೆಯು ತನ್ನ ಜನ್ಮವನ್ನು ಪರೋಪಕಾರದಲ್ಲಿಯೇ ಕಳೆಯಲು ನಿಶ್ಚ ಯಿಸಿದಳು. ಆಗ್ಯೆ ಆಕೆಯ ವಯಸ್ಸು ಹದಿನಾಲ್ಕು ವರುಷಗಳು!

ಆಮೇಲೆ ಕೆಲವು ದಿವಸಗಳಿಗೆ ಬ್ರಹ್ಮಸಮಾಜವಾರ್ಷಿಕೋತ್ಸವವನ್ನು ನೋಡುವುದಕ್ಕಾಗಿ ಆಕೆಯು ತಂದೆಯೊಡನೆ ಲಾಹೋರು ಪಟ್ಟಣಕ್ಕೆ ಹೋದಳು. ಅಲ್ಲಿ ನಡೆದ ಉಪನ್ಯಾಸಗಳನ್ನೂ, ಧರ್ಮಚರ್ಚೆಗಳನ್ನೂ, ಪ್ರಾರ್ಥನೆಗಳನ್ನೂ ಕೇಳಿ ಆಕೆಯ ಹೃದಯವು ದ್ರವೀಭೂತವಾಗಿ, ಅಲ್ಲಿಯೇ ಯೋಗಿನಿಯಾಗಿ ಸತ್ಸಂಗದಲ್ಲಿ ಇರಬೇಕು ಎಂದು ಆಕೆಗೆ ಇಷ್ಟವು ಉಂಟಾಯಿತು. ಆದರೆ ತಂದೆಯ ನಿರ್ಬಂಧ ದಿಂದ ಪ್ರೇಮದೇವಿಯು ಅಮೃತಸರ್ ಪಟ್ಟಣಕ್ಕೆ ಹೋದಳು. ಈಕೆಯು ಅಲ್ಲಿಗೆ ಹೋದ ಕೆಲವು ದಿವಸಗಳಿಗೆ, ಲಾಹೋರಿನಲ್ಲಿ ಸ್ತ್ರೀಯರಿಗೆ ವೈದ್ಯಶಾಸ್ತ್ರವನ್ನು ಕಲಿಸುವುದಕ್ಕಾಗಿ ಒಂದು ಪಾಠಶಾಲೆಯು ಸ್ಥಾಪಿತವಾಯಿತು. ಆಮೇಲೆ ದೇವೀ ಪ್ರಸಾದನು ವೈದ್ಯಶಾಸ್ತ್ರವನ್ನು ಕಲಿಯುವುದಕ್ಕಾಗಿ ಪ್ರೇಮದೇವಿಯನ್ನು ಲಾಹೋ ರಿಗೆ ಕಳುಹಿಸಿದನು. ಅಲ್ಲಿ ಈಕೆಯು ವೈದ್ಯಶಾಸ್ತ್ರವನ್ನು ಅಭ್ಯಸಿಸುತ್ತ, ಸಮ

ಯವು ದೊರೆತಾಗ ಬ್ರಾಹ್ಮತತ್ವಗಳನ್ನು ಓದುತ್ತ ಆನಂದದಿಂದ ಕಾಲವನ್ನು ಕಳೆ ಯುತ್ತ ಇದ್ದಳು. ಇಷ್ಟರಲ್ಲಿ ಬ್ರಾಹ್ಮಸಮಾಜದ ದ್ವಿತೀಯವಾರ್ಷಿಕೋತ್ಸವವು ನಡೆಯಿತು. ಅಲ್ಲಿ ನಡೆದ ಉಪನ್ಯಾಸಗಳನ್ನೆಲ್ಲ ಕೇಳಿದಮೇಲೆ, ಪ್ರೇಮದೇವಿಯು ಎದ್ದುನಿಂತು ಗದ್ಗದ ಕಂಠದೊಡನೆ ಈಶ್ವರನನ್ನು ಪ್ರಾರ್ಥಿಸಿ, ತನ್ನ ಜೀವಿತವನ್ನು ಆತನಿಗೆ ಸಮರ್ಪಿಸಿದೆನು ಎಂತಲೂ, ಆತನ ಮಹಿಮೆಯನ್ನು ಹೊಗಳುವುದ ರಲ್ಲಿಯೇ ತನ್ನ ಜೀವಿತವನ್ನು ಕಳೆಯುವೆನು ಎಂತಲೂ, ಆರ್ಯಮಹಿಳೆಯರ ಉನ್ನತಿಗಾಗಿ ಪ್ರಯತ್ನಿಸುವೆನು ಎಂತಲೂ ಪ್ರತಿಜ್ಞೆಯನ್ನು ಮಾಡಿದಳು! ಆಕೆಯ ಘನಪ್ರತಿಜ್ಞೆಯನ್ನು ಕೇಳಿ ಸಭೆಯಲ್ಲಿ ಇದ್ದವರು ಎಲ್ಲರೂ ಆಶ್ಚರ್ಯಪಟ್ಟರು. ಪ್ರೇಮದೇವಿಯು ಅಂದಿನಿಂದ ಕ್ರೈಸ್ತವಮಿಷನೆರಿ ಸ್ತ್ರೀಯರಂತೆ ಅವಿವಾಹಿತೆಯಾಗಿ ಇದ್ದು ಪರೋಪಕಾರವನ್ನು ಮಾಡಲು ನಿಶ್ಚಯಿಸಿದಳು. ಈ ವಿಷಯವನ್ನು ಕೇಳಿ ಆಕೆಯ ಬಂಧುಗಳು ಬ್ರಹ್ಮಚಾರಿಣಿಯಾಗಿ ಇರುವುದು ಒಳ್ಳೆಯದಲ್ಲವು ಎಂತಲೂ, ವಿವಾಹವನ್ನು ಮಾಡಿಕೊಂಡು ಸಂಸಾರ ಸೌಖ್ಯಗಳನ್ನು ಅನುಭವಿಸುವುದು ಒಳ್ಳೆ ಯದು ಎಂತಲೂ ಆಕೆಗೆ ಉಪದೇಶಿಸಿದರು. ಯಾರು ಏನು ಹೇಳಿದರೂ ಆಕೆಯು ತನ್ನ ನಿಶ್ಚಯವನ್ನು ಬಿಡಲಿಲ್ಲ.

"ಅವಿವಾಹಿತೆಯಾಗಿ ಇದ್ದು ಪರೋಪಕಾರವನ್ನು ಮಾಡುವುದು ಎಂದರೆ ಏನು," ಎಂದು ಸ್ತ್ರೀಪಾಠಕರಲ್ಲಿ ಯಾರಾದರು ಕೇಳಬಹುದು. ಅವರಿಗೆ ತಿಳಿಯು ವುದಕ್ಕಾಗಿ ಇಲ್ಲಿ ಕೆಲವು ಮಾತುಗಳನ್ನು ಬರೆದಿರುವೆನು. ಪಶ್ಚಿಮಖಂಡದಲ್ಲಿ ಕ್ರೈಸ್ತವರಲ್ಲಿ ರೋಮನ್‌ಕ್ಯಾಥೊಲಿಕ್, ಪ್ರಾಟಸ್ಟೆಂಟ್, ಎಂಬ ಎರಡು ಮತಗಳು ಇವೆ. ರೋಮನ್‌ಕ್ಯಾಥೊಲಿಕ್ ಮತದವರಿಗೆ ಪುರುಷರಂತೆಯೇ ಸ್ತ್ರೀಯರು ಸಹ ಸನ್ಯಾಸನವನ್ನು ಅವಲಂಬಿಸ ಬಹುದು. ನಮ್ಮ ದೇಶದಲ್ಲಿ ವಿಧವೆಯರು ಹೇಗೆ ಮರಣಪರ್ಯಂತವು ಬ್ರಹ್ಮಚರ್ಯವನ್ನು ಪಾಲಿಸುತ್ತಾರೆಯೋ, ಹಾಗೆಯೇ ರೋಮನ್‌ಕ್ಯಾಥೊಲಿಕ್ ಜೋಗಿನಿಯರು ಬ್ರಹ್ಮಚರ್ಯವನ್ನು ಪಾಲಿ ಸುತ್ತಾರೆ. ನಮ್ಮಲ್ಲಿ ಪತಿಪರಾಯಣತ್ವವನ್ನು ಹೇಗೆ ಪಾತಿವ್ರತ್ಯವು ಎಂದು ಹೇಳು ತ್ತಾರೆಯೋ ಹಾಗೆಯೇ ಅವರು ಈ ಬ್ರಹ್ಮಚರ್ಯವನ್ನು ಪಾತಿವ್ರತ್ಯವು ಎಂದು ಹೇಳುತ್ತಾರೆ. ತಮ್ಮ ಭಜನಾಲಯಗಳಲ್ಲಿ ಭಜನೆಪ್ರಾರ್ಥನೆಗಳನ್ನು ಮಾಡು ವುದು, ಸಮಯವು ದೊರೆತಾಗ, ಅಜ್ಞಾನಿಗಳಾದ ಸ್ತ್ರೀಯರ ಮನೆಗೆಹೋಗಿ ಅವ ರಿಗೆ ಧರ್ಮೋಪದೇಶವನ್ನು ಮಾಡುವುದು, ಓದು ಬರದ ಸ್ತ್ರೀಯರಿಗೆ ಓದುಬರಹ ಗಳನ್ನು ಕಲಿಸುವುದು, ಕುಟುಂಬಕ್ಕೆ ಉಪಯೋಗಿಸುವ ಹೊಲಿಗೆ ಮೊದಲಾದ ವುಗಳನ್ನು ಕಲಿಸುವುದು, ರೋಗಿಗಳಿಗೆ ಔಷಧಗಳನ್ನು ಕೊಡುವುದು, ಬಂದೀ ಖಾನೆಗೆ ಹೋಗಿ ಅಲ್ಲಿ ಇರುವ ಕೈದಿಗಳಿಗೆ ಈಶ್ವರನಲ್ಲಿ ಭಕ್ತಿಯು ಉಂಟಾಗುವಂತೆ ಬೋಧಿಸುವುದು, ಕಳ್ಳತನದಿಂದ ಉಂಟಾಗುವ ನಷ್ಟಗಳನ್ನು ಅವರಿಗೆ ತಿಳಿಸಿ ಅವರು ದುಷ್ಕೃತ್ಯ ವಿಮುಖರಾಗುವಂತೆ ಮಾಡುವುದು, ಇವೇ ಮೊದಲಾದ ಪರೋಪ

ಕಾರ ಕಾರ್ಯಗಳನ್ನು ಈ ಜೋಗಿನಿಯರು ಮಾಡುತ್ತಾರೆ. ಪ್ರಾಟಸ್ಟೆಂಟ್ ಮತದಲ್ಲಿ ಸ್ತ್ರೀಯರಿಗೆ ಸನ್ಯಾಸವು ಇಲ್ಲದೆ ಇದ್ದರೂ ಅನೇಕಜನ ಸ್ತ್ರಿಯರು ವಿವಾಹವನ್ನು ಮಾಡಿಕೊಳ್ಳದೆ ಪರೋಪಕಾರ ಕಾರ್ಯಗಳನ್ನು ಮಾಡುತ್ತ ತಮ್ಮ ಜನ್ಮವನ್ನು ಕಳೆಯುತ್ತಾರೆ. ಮೇಲೆಹೇಳಿದ ಮಹೋಪಕಾರಗಳನ್ನು ಮಾಡುವುದಕ್ಕಾಗಿ ಪಶ್ಚಿಮದೇಶದಲ್ಲಿ ಪ್ರತಿವರ್ಷವೂ ಅನೇಕ ರಮಣಿಯರು ಕುಟುಂಬ ಸೌಖ್ಯವನ್ನು ಬಿಟ್ಟು ಹೊರಡುತ್ತಾರೆ. ಇವರ ಸಹಾಯದಿಂದ ಅನೇಕ ಜನ ದುಃಖಿತರು ಸೌಖ್ಯವನ್ನು ಹೊಂದಿದರು; ಅಧಾರ್ಮಿಕರು ಧಾರ್ಮಿಕರಾದರು.

ಈ ಕ್ರೈಸ್ತವಸ್ತ್ರೀಯರ ಚರಿತ್ರೆಗಳನ್ನು ಪ್ರೇಮದೇವಿಯು ಓದಿದುದರಿಂದಲೇ, ಅವರಂತೆಯೇ ತಾನು ಸಹ ಅವಿವಾಹಿತೆಯಾಗಿದ್ದು ಲೋಕೋಪಕಾರವನ್ನು ಮಾಡಬೇಕೆಂದು ಅಪೇಕ್ಷಿಸಿದಳು. ಪ್ರೇಮದೇವಿಯು ಲೋಕಸುಖಕ್ಕಾಗಿ ತನ್ನ ಸುಖವನ್ನು ತ್ಯಜಿಸಿದುದಕ್ಕೆ ನಾವು ಆಕೆಯನ್ನು ವಿಶೇಷವಾಗಿ ಕೊಂಡಾಡಬೇಕು. ಆದರೆ ನಮ್ಮ ಹಿಂದೂಸಮಾಜದ ಪ್ರಸ್ತುತಸ್ಥಿತಿಯನ್ನು ವಿಚಾರಿಸಿ ನೋಡಿದರೆ ಬಾಲಕಿಯರು ಅವಿವಾಹಿತೆಯರಾಗಿ ಇರುವುದು ಒಳ್ಳೆಯದಲ್ಲ ಎಂದು ತೋರುತ್ತದೆ. ವೈವಾಹಿಕವಿಧಿಯು ಸಮಾಜೋನ್ನತಿಗೆ ಅತ್ಯಂತಾವಶ್ಯಕವಾದುದು. ವಿದ್ಯಾವತಿಯರಾದ ಕನ್ಯೆಯರು ವಿವಾಹಮಾಡಿಕೊಳ್ಳದೇ ಇದ್ದರೆ, ಸಮಾಜದಲ್ಲಿ ಜ್ಞಾನವತಿಯರಾದ ಭಾರ್ಯೆಯರೂ, ಮಾತೆಯರೂ ಇಲ್ಲದೆ ಸಮಾಜವು ದುಃಖಸ್ಥಿತಿಯನ್ನು ಹೊಂದುವುದು. ಆದಕಾರಣ ಪಶ್ಚಿಮದೇಶೀಯರಿಗೆ ಹಿತಪ್ರದವಾದ ಬ್ರಹ್ಮಚಾರಿಣಿಯರ ಪದ್ಧತಿಯು ನಮಗೆ ಹಿತಪ್ರದವಲ್ಲ.

ಮತ್ತು ಪರೋಪಕಾರವನ್ನು ಮಾಡುವುದಕ್ಕೆ ನಮ್ಮ ಸಾಮಾಜಿಕ ನಿರ್ಬಂಧದಿಂದ ಈ ದೇಶದಲ್ಲಿ ಬ್ರಹ್ಮಚಾರಿಣಿಯರು, ಸನ್ಯಾಸಿನಿಯರು ಅನೇಕ ಲಕ್ಷ ಜನರಿದಾರೆ; ಲೆಕ್ಕವಿಲ್ಲದಷ್ಟು ಬೆಳೆಯುತಲಿದಾರೆ. ಇವರು ಯಾರು ಎಂದು ಸಂಶಯಪಡತಕ್ಕ ಕೆಲಸವಿಲ್ಲ. ಇವರೇ ದೌರ್ಭಾಗ್ಯಭಾಗಿನಿಯರಾದ ಹಿಂದೂವಿತಂತುಗಳು. ಕೇವಲ ದುಃಖಗಳನ್ನು ಅನುಭವಿಸುವುದಕ್ಕಾಗಿಯೇ ಈ ದೇಶದಲ್ಲಿ ಜನ್ಮಿಸಿದ ವಿತಂತುಗಳಿಗೆ ಸದ್ವಿದ್ಯೆಯನ್ನು ಕಲಿಸಿದರೆ ಅವರಿಂದ ದೇಶಕ್ಕೆ ಮಹೋಪಕಾರವು ಉಂಟಾಗುವುದು. ಅವರ ಆಯುಷ್ಯವು ಪರೋಪಕಾರದಲ್ಲಿ ವ್ಯಯವಾಗುವುದರಿಂದ ಅವರ ದುಃಖವು ಸ್ವಲ್ಪ ಕಡಮೆಯಾಗುವುದು. ಹೀಗೆ ಮಾಡುವುದು ಹಿಂದೂಧರ್ಮಕ್ಕಾಗಲಿ, ಶಾಸ್ತ್ರಕ್ಕಾಗಲಿ ವಿರುದ್ಧವಾದುದಲ್ಲ. ಆದುದರಿಂದ ಪೂರ್ವನಾಗರಿಕರು ವಿತಂತುವಿವಾಹವನ್ನು ತಿರಸ್ಕರಿಸಿದಂತೆ, ಈ ಕಾರ್ಯವನ್ನು ತಿರಸ್ಕರಿಸಲಾರರು. "ಪರೋಪಕಾರಃ ಪುಣ್ಯಾಯ," ಎಂದು ವಚನವು ಇರುವುದರಿಂದ ನವನಾಗರೀಕರಂತೆಯೇ ಪೂರ್ವನಾಗರಿಕರು ಸಹ ಇದಕ್ಕೆ ಸಹಾಯವನ್ನು ಮಾಡುವರು. ಬಂಗಾಳೆಯಲ್ಲಿಯೂ, ಮದರಾಸಿನಲ್ಲಿಯೂ, ಬೆಂಗಳೂರಿನಲ್ಲಿಯೂ

ಸ್ಥಾಪಿಸಿ ಇರುವಂತೆ ವಿತಂತುಪಾಠಶಾಲೆಗಳನ್ನು ದೇಶದಲ್ಲಿ ಅಲ್ಲಲ್ಲಿ ಸ್ಥಾಪಿಸಿ, ವಿತಂತುಗಳಿಗೆ ಉಪಯುಕ್ತವಾದ ವಿದ್ಯೆಯನ್ನು ಕಲಿಸಬೇಕು. ಅವರನ್ನು ಸ್ತ್ರೀ ವೈದ್ಯಶಾಲೆಗಳಿಗೆ ಕಳುಹಿಸಿ ಸ್ತ್ರೀಚಿಕಿತ್ಸಾಶಾಸ್ತ್ರವನ್ನು ಕಲಿಸಬಹುದು. ಶುದ್ಧ ಶ್ರೋತ್ರಿಯರಾದ ಬ್ರಾಹ್ಮಣರು ತಮ್ಮ ಗೃಹಗಳಲ್ಲಿ ಇರುವ ವಿತಂತುಗಳಿಗೆ ಸ್ವಲ್ಪ ಸಂಸ್ಕೃತವನ್ನು ಕಲಿಸಿ, ಕಿಂಚಿದನ್ವಯಜ್ಞಾನವು ಉಂಟಾಗುವಂತೆ ಮಾಡಿ, ಅವರಿಂದ ಇತರ ಸ್ತ್ರೀಯರಿಗೆ ಪುರಾಣಾದಿಗಳನ್ನು ಹೇಳಿಸಿ, ಧರ್ಮಪಾತಿವ್ರತ್ಯ ಮಹಾತ್ಮ್ಯ, ಗೃಹನಿರ್ವಾಹಕತ್ವ, ಮೊದಲಾದವುಗಳನ್ನು ಬೋಧಿಸುವಂತೆ ಮಾಡಬಹುದು. ಇದನ್ನು ಕುರಿತು ವಿದ್ವಾಂಸರು ವಿಚಾರಿಸಲಿ ಎಂದು ಮೂಲ ಚರಿತ್ರೆಗೆ ಬರುವೆನು.

ಹಿಂದೆ ಬರೆದಂತೆ ಪ್ರೇಮದೇವಿಯು ಲಾಹೋರು ವೈದ್ಯಕಳಾಶಾಲೆಯಲ್ಲಿ ನಾಲ್ಕು ವರ್ಷಗಳು ಅಧ್ಯಯನವನ್ನು ಮಾಡಿ, ತನ್ನ ಸಹಪಾಠಿಗಳಲ್ಲಿ ಎಲ್ಲರಿಗಿಂತಲೂ ಉತ್ತಮ ತರಗತಿಯಲ್ಲಿ ಕೃತಾರ್ಥಳಾದಳು. ತಾನು ಮಾಡಲು ಎಣಿಸಿದ ಪರೋಪಕಾರಗಳನ್ನು ಮಾಡುತಲಿದ್ದರೂ, ಅದ್ವಿತೀಯ ಬುದ್ಧಿವೈಭವವುಳ್ಳವಳಾದುದರಿಂದ ಕೃತಾರ್ಥರಾದವರಲ್ಲಿ ಈಕೆಯು ಮೊದಲನೆಯವಳಾದಳು. ಆಗ ಪ್ರೇಮದೇವಿಗೆ ಅನೇಕ ಬಹುಮಾನಗಳು ದೊರೆತವು. ಈಕೆಯು ಲಾಹೋರಿನಲ್ಲಿ ಇದ್ದ ಕಾಲದಲ್ಲಿಯೇ ಈಕೆಯ ತಂದೆಗೆ ಅಲ್ಲಿ ಕೆಲಸವಾಯಿತು. ಅಂದಿನಿಂದ ಪ್ರೇಮದೇವಿಯು ತಂದೆಯ ಬಳಿಯಲ್ಲಿಯೇ ಇದ್ದಳು. ಆಗ ದೇವೀಪ್ರಸಾದನು ಮಗಳನ್ನು ವಿವಾಹಮಾಡಿಕೊಳ್ಳುವಂತೆ ನಿರ್ಬಂಧ ಮಾಡಲಾರಂಭಿಸಿದನು. ವಿಶೇಷಧನವಂತನಾದ ಒಬ್ಬ ವರನನ್ನು ನೋಡಿ ಮಗಳನ್ನು ಆತನಿಗೆ ಕೊಟ್ಟು ವಿವಾಹ ಮಾಡಲು ಪ್ರಸಾದನು ನಿಶ್ಚಯಿಸಿದನು. ಆದರೆ ದೃಢನಿಶ್ಚಯವುಳ್ಳ ಪ್ರೇಮದೇವಿಯು ತಂದೆಯೊಡನೆ ತನಗೆ ವಿವಾಹವು ಅನವಶ್ಯಕವು ಎಂದು ಸ್ಪಷ್ಟವಾಗಿ ತಿಳಿಸಿದಳು. ಪ್ರಸಾದನು ಆಕೆಯನ್ನು ನಿರ್ಬಂಧಿಸುವುದರಿಂದ ಲಾಭವಿಲ್ಲ ಎಂದು ತಿಳಿದು ಸುಮ್ಮನಾದನು. ಪ್ರೇಮದೇವಿಯು ತನ್ನ ಮನೆಯಲ್ಲಿ ಒಂದು ಸ್ತ್ರೀ ಸಮಾಜವನ್ನು ಸ್ಥಾಪಿಸಿದಳು. ಅನಂತರ ನಡೆದ ಒಂದು ಬ್ರಾಹ್ಮಸಮಾಜ ವಾರ್ಷಿಕೋತ್ಸವದಲ್ಲಿ ಈಕೆಯನ್ನು "ದೇವಧರ್ಮಪರಿಚಾರಿಕದೀಕ್ಷಿತಳು" ಎಂದು ನಿಯಮಿಸಿದರು. ಪ್ರೇಮದೇವಿಯು ಆ ಗ್ರಾಮದಲ್ಲಿ ಸ್ತ್ರೀಯರಿಗಾಗಿ ಒಂದು ಔಷಧಾಲಯವನ್ನು ಸ್ಥಾಪಿಸಿ, ಅಲ್ಲಿ ಹೆಂಗಸರಿಗೂ, ಮಕ್ಕಳಿಗೂ, ಔಷಧಗಳನ್ನು ಕೊಡುತಲಿದ್ದಳು. ಮತ್ತು ಆಕೆಯು ಪ್ರತಿದಿವಸವೂ ಗೋಷಾಸ್ತ್ರೀಯರ ಮನೆಗಳಿಗೆ ಹೋಗಿ ಅವರಿಗೆ ದೈವಭಕ್ತಿಯನ್ನು ಉಪದೇಶಿಸಿ, ಓದುಬರಹ, ಹೊಲಿಗೆಯ ಕೆಲಸ ಮೊದಲಾದವುಗಳನ್ನು ಕಲಿಸಿ ಉಪಕಾರವನ್ನು ಮಾಡುತ್ತಿದ್ದಳು. ಅನೇಕ ಸ್ಥಳಗಳಲ್ಲಿ ಸ್ತ್ರೀವಿದ್ಯೆ, ಸ್ತ್ರೀಸ್ವಾತಂತ್ರ್ಯಗಳನ್ನು ಕುರಿತು ಉಪನ್ಯಾಸಗಳನ್ನು ಹೇಳುತಲಿದ್ದಳು. ಬಡವರಿಗೆ ತನ್ನ ಕೈಯಲ್ಲಾದಷ್ಟು ಸಹಾಯವನ್ನು ಮಾಡಿ,

ಅವರಿಗೆ ಉತ್ತಮಸ್ಥಿತಿಯನ್ನು ಉಂಟುಮಾಡುವಂತೆ ದೇವರನ್ನು ಪ್ರಾರ್ಥಿಸುತ್ತಿದ್ದಳು. ಈಕೆಯು ಮಾಡುತ್ತಿದ್ದ ಪರಿಶ್ರಮದಿಂದ ಈಕೆಯ ಶರೀರವು ಕ್ರಮ ಕ್ರಮವಾಗಿ ದೌರ್ಬಲ್ಯವನ್ನು ಹೊಂದುತಲಿತ್ತು. ಪ್ರೇಮದೇವಿಯು ತನ್ನ ಶರೀರವು ಅಶಾಶ್ವತವಾದುದು ಎಂಬುದನ್ನು ಅರಿತವಳಾದುದರಿಂದ, ತನ್ನ ವ್ಯಾಧಿಯನ್ನು ಲಕ್ಷ್ಯಮಾಡದೆ ಎಂದಿನಂತೆಯೇ ತನ್ನ ಕಾರ್ಯಗಳನ್ನು ಮಾಡುತ್ತಿದ್ದಳು. ಅನಂತರ ತನ್ನ ಅಂತ್ಯಕಾಲವು ಸಮೀಪಿಸಿತು ಎಂದು ತಿಳಿದು ತನ್ನ ಚರಿತ್ರೆಯನ್ನು ಇಂಗ್ಲೀಷ್‌ಭಾಷೆಯಲ್ಲಿ ಸ್ವಯಮಾಗಿ ಬರೆದಳು. ಸ್ವೀಯಚರಿತ್ರೆಯನ್ನು ಬರೆದ ಕೆಲವು ದಿವಸಗಳಿಗೆ ವ್ಯಾಧಿಯು ಹೆಚ್ಚಿ ಪ್ರೇಮದೇವಿಯು ೧೮೯೫ನೆಯ ವರ್ಷದಲ್ಲಿ ಮೃತಳಾದಳು.



ರಾಣೀ ದುರ್ಗಾವತಿ.

———:o:———

ಯದೃಚ್ಛಯಾಚೋಪಪನ್ನಂ ಸ್ವರ್ಗದ್ವಾರಮಪಾವೃತಮ್
ಸುಖಿನಃಕ್ಷತ್ರಿಯಾಃಪಾರ್ಥ! ಲಭಂತೇಯುದ್ಧಮೀದೃಶಮ್.

ಹದಿನಾರನೇಯ ಶತಾಬ್ದದಲ್ಲಿ ಬುಂದೇಲ್‌ಖಂಡ ಸಂಸ್ಥಾನವನ್ನು ಚಂದವೇಲ ರಾಜನು ಪರಿಪಾಲಿಸುತಲಿದ್ದನು. ಈತನಿಗೆ ಗುಣರೂಪಸಂಪನ್ನೆಯಾದ ದುರ್ಗಾವತಿಎಂಬ ಒಬ್ಬ ಮಗಳಿದ್ದಳು. ಈಕೆಯು ಯೌವನವತಿಯಾದಮೇಲೆ ಈಕೆಯ ಕೀರ್ತಿಯು ಭರತಖಂಡದಲ್ಲಿ ಸರ್ವತ್ರ ವ್ಯಾಪಿಸಿದುದರಿಂದ, ಅನೇಕ ರಾಜಪುತ್ರರು ದುರ್ಗಾವತಿಯನ್ನು ವಿವಾಹಮಾಡಿಕೊಳ್ಳುವುದಕ್ಕಾಗಿ ಚಂದವೇಲ್ ರಾಜನನ್ನು ಆಶ್ರಯಿಸುತಲಿದ್ದರು. ಆದರೆ ಆ ರಾಜಕುಮಾರರು ತನ್ನ ಪುತ್ರಿಗೆ ತಕ್ಕವರರಲ್ಲ ಎಂದು ಚಂದವೇಲ್ ರಾಜನು ಅವರಿಗೆ ಯಾವುದೋ ಒಂದು ಕಾರಣವನ್ನು ತಿಳಿಸಿ ಹಿಂದಕ್ಕೆ ಕಳುಹಿಸುತಲಿದ್ದನು. ಅನಂತರ ಕೆಲವು ದಿವಸಗಳಿಗೆ ಗಢಾಮಂಡಲೇಶ್ವರನಾದ ಗೋಂಡುರಾಜನು ದುರ್ಗಾವತಿಯನ್ನು ತನಗೆ ಕೊಡಬೇಕು ಎಂದು ಚಂದವೇಲ್ ರಾಜನಿಗೆ ವರ್ತಮಾನವನ್ನು ಕಳುಹಿಸಿದನು. ಈ ಗೋಂಡುರಾಜನ ಶೌರ್ಯಸಾಹಸಗಳನ್ನು ಕೇಳಿ ದುರ್ಗಾವತಿಯು ಆತನಲ್ಲಿ ಅನುರಾಗವುಳ್ಳವಳಾಗಿ ಇದ್ದಳು. ಕುಲದಲ್ಲಿಯೂ, ವಿದ್ಯೆಯಲ್ಲಿಯೂ, ನಾಗರಿಕದಲ್ಲಿಯೂ ರಾಜಪುತ್ರರಿಗಿಂತಲೂ ಗೋಂಡರು ಕಡಿಮೆಯಾದವರು: ಗೋಂಡರು

ಅನಾರ್ಯರು. ಆದಕಾರಣ ಚಂದವೇಲ್ ರಾಜನು ನೀಚವಂಶಜನಿಗೆ ತಮ್ಮ ಕನ್ಯೆಯನ್ನು ಕೊಡಲು ಸಂಶಯಿಸಿದನು. ಆದರೆ ಆಗ ಗೋಂಡುರಾಜನು ವಿಶೇಷ ಬಲವಂತನಾಗಿ ಇದ್ದನು. ಆತನು ಪಾಲಿಸುತಲಿದ್ದ ಗಢಾಮಂಡಲವು ಚಿಕ್ಕ ದಾದರೂ, ಆತನು ಪರಾಕ್ರಮಸಂಪನ್ನನಾಗಿ ಇದ್ದುದರಿಂದ ಆತನಿಗೆ ಅನೇಕ ರಾಜರು ಸಹಾಯಕರಾಗಿ ಇದ್ದರು. ಮತ್ತು ಮುಖ್ಯವಾಗಿ ದುರ್ಗಾವತಿಯು ಆ ಗೋಂಡುರಾಜನಲ್ಲಿ ಅನುರಾಗವುಳ್ಳವಳಾಗಿ ಇದ್ದಳು. ಈ ವಿಷಯಗಳನ್ನು ಆಲೋಚಿಸಿ ಚಂದವೇಲ್ ರಾಜನು ತನ್ನ ಮಗಳನ್ನು ಗೋಂಡುರಾಜನಿಗೆ ಕೊಟ್ಟು ಮಹಾವೈಭವದೊಡನೆ ವಿವಾಹವನ್ನು ಬೆಳೆಸಿದನು.

ಅನಂತರ ದುರ್ಗಾವತಿಯು ಅತ್ತೆಯಮನೆಗೆ ಹೊರಡುವಾಗ ತಂದೆಯ ರಾಜ್ಯದಲ್ಲಿ ಇದ್ದ ಅನೇಕ ಬಡವರಿಗೆ ಶಾಶ್ವತ ಜೀವನಗಳನ್ನು ಏರ್ಪಾಟುಮಾಡಿ ದಳು. ಇದರಿಂದ ಅವರೆಲ್ಲರೂ ದುರ್ಗಾವತಿಯು ತಮ್ಮ ಭಾಗದ ದೈವವು ಎಂದು ತಿಳಿದು ಆಕೆಗೆ ಅನೇಕ ಆಶೀರ್ವಾದಗಳನ್ನು ಮಾಡಿದರು. ಈಕೆಯು ಗಂಢಾಮಂಡಲಕ್ಕೆ ಹೋದಮೇಲೆ ಗೋಂಡುರಾಜನು ರಾಜ್ಯಕಾರ್ಯಗಳನ್ನು ವಿಚಾರಿಸದೆ, ಈಕೆಯೊಡನೆ ನರ್ಮದಾನದೀತೀರದಲ್ಲಿಯೂ, ಉದ್ಯಾನವನಗಳಲ್ಲಿಯೂ ಸದಾ ವಿಹರಿಸುತ್ತ ಕಾಲವನ್ನು ಕಳೆಯುತ್ತ ಇದ್ದನು. ದುರ್ಗಾವತಿಯು ಅನೇಕ ಸಲ 'ರಾಜ್ಯಕಾರ್ಯಗಳನ್ನು ನೋಡಬೇಕು' ಎಂದು ಪತಿಗೆ ಸೂಚಿಸಿದಳು. ಆದರೆ ವಿಷಯಾಸಕ್ತನಾದ ಅರಸನು ಪತ್ನಿಯ ಮಾತುಗಳನ್ನು ಲಕ್ಷ್ಯಕ್ಕೆ ತರಲಿಲ್ಲ. ಆಮೇಲೆ ಕೆಲವುಕಾಲಕ್ಕೆ ದುರ್ಗಾವತಿಯು ಒಬ್ಬ ಪುತ್ರನನ್ನು ಪಡೆದಳು. ಆ ಬಾಲಕನು ಹತ್ತುವರುಷದವನಾಗಿ ಇದ್ದಾಗ, ರಾಜನು ಯಾವುದೋ ವ್ಯಾಧಿಯಿಂದ ಪೀಡಿತನಾಗಿ ಪರಲೋಕವನ್ನು ಸೇರಿದನು. ಪುತ್ರನು ಚಿಕ್ಕವನಾದ ಕಾರಣ ರಾಜ್ಯಾಡಳಿತಗಳನ್ನು ದುರ್ಗಾವತಿಯೇ ನೋಡಬೇಕಾಯಿತು. ದುರ್ಗಾವತಿಯು ಪತಿಯಂತೆ ರಾಜ್ಯವಿಷಯಗಳನ್ನು ಅಲಕ್ಷ್ಯಮಾಡದೆ, ಶ್ರದ್ಧೆಯಿಂದಲೂ, ನ್ಯಾಯವಾಗಿಯೂ, ರಾಜ್ಯವನ್ನು ಪಾಲಿಸುತ್ತ ಪ್ರಜೆಗಳನ್ನು ಸಂತೋಷಗೊಳಿಸುತ ಲಿದ್ದಳು.

ಈ ವಿಧವಾಗಿ ರಾಣಿಯು ಐದಾರು ವರ್ಷಗಳು ರಾಜ್ಯವನ್ನು ಆಳಿದಮೇಲೆ, ಈಕೆಯ ಕೀರ್ತಿಯನ್ನು ಅಕ್ಬರುಬಾದಷಹನು ಕೇಳಿ, ಇಂತಹ ಉತ್ತಮಳಾದ ರಾಣಿಯು ನಮಗೆ ಸಾಮಂತಳಾಗಿ ಇರುವಂತೆ ಮಾಡಬೇಕು ಎಂದು ನಿಶ್ಚಯಿಸಿದನು. ಆಮೇಲೆ ಸ್ರ ೧೫೬೪ ನೆಯ ಇಸವಿಯಲ್ಲಿ ಅಕ್ಬರನು ಆಸಫ್ ಖಾ ಎಂಬ ಶೂರಸೇನಾಧಿಪತಿಯನ್ನು ದುರ್ಗಾವತಿಯ ರಾಜ್ಯದಮೇಲೆ ದಂಡೆತ್ತುವಂತೆ ಕಳುಹಿಸಿದನು! ಅಕ್ಬರನು ಸಕಲ ಸದ್ಗುಣಸಂಪನ್ನನು ಎಂದು ಚರಿತ್ರಕಾರರು ಹೇಳುತ್ತಾರೆ. ಆತನಲ್ಲಿ ಅನೇಕ ಸದ್ಗುಣಗಳು ಇದ್ದುದರಿಂದ, ಇತರ ಯವನಪ್ರಭು

ಗಳೊಡನೆ ಆತನನ್ನು ಹೋಲಿಸಿ ನೋಡಿದರೆ ಆತನು ದೇವಸಮಾನನು ಎಂದು ಹೇಳಬಹುದು.' ಆದರೆ ಈ ಮಹಾತ್ಮನನ್ನು ಸಹ ರಾಜ್ಯಕಾಂಕ್ಷೆಯು ಬಿಡಲಿಲ್ಲ. ರಾಣಿ ದುರ್ಗಾವತಿಯು ಅಕ್ಬರನನ್ನಾಗಲಿ, ಆತನ ಪ್ರಜೆಗಳನ್ನಾಗಲಿ ಅಣು ಮಾತ್ರವೂ ಬಾಧಿಸಿದವಳಲ್ಲ; ಅವರ ಗೋಜಿಗೆ ಎಂದೂ ಹೋದವಳಲ್ಲ. ಇಂತಹ ಅಬಲೆಯ ಮೇಲಕ್ಕೆ ಸೈನ್ಯವನ್ನು ಕಳುಹಿಸಿದುದು ಮಹತ್ವಾಕಾಂಕ್ಷೆಯಲ್ಲವೇ? ಆಸಫ್ ಖಾನ್ ಶೂರನು (ಹೌದು. ಅಬಲೆಯೊಡನೆ ಯುದ್ಧಕ್ಕೆ ಸಿದ್ಧನಾದವನು ಶೂರನೇ.) ತನ್ನ ರಾಜ್ಯದಮೇಲೆ ದಂಡೆತ್ತಿಬರುತಲಿದಾನೆ ಎಂದು ಕೇಳಿ ದುರ್ಗಾವತಿಯು ಮಹಾ ಪ್ರಯತ್ನವನ್ನು ಮಾಡಿ ಸ್ವಲ್ಪ ದಿವಸಗಳಲ್ಲಿಯೇ ೫೦೦ ಆನೆಗಳನ್ನೂ, ೫೦೦ ಕುದುರೆಗಳನ್ನೂ, ದೊಡ್ಡ ಕಾಲ್ಬಲವನ್ನೂ ಸಿದ್ಧಪಡಿಸಿದಳು. ತಾನು ಪುರುಷ ವೇಷವನ್ನು ಧರಿಸಿ ಪ್ರತ್ಯಕ್ಷ ದುರ್ಗೆಯಂತೆ ರಣರಂಗಕ್ಕೆ ಹೊರಟೆ, ತಮ್ಮ ರಾಣಿಯನ್ನು ನೋಡಿ ಸೈನಿಕರಿಗೆ ಉತ್ಸಾಹವು ಉಂಟಾಗಿ ಅವರ ಶೌರ್ಯವು ಇಮ್ಮಡಿಯಾಯಿತು. ಅವರು ಶತ್ರುಸೈನ್ಯದಮೇಲೆ ಬಿದ್ದು ಧೂರ್ತರಾದ ಯವನ ಸೈನಿಕರನ್ನು ಹತಮಾಡಿ, ಮಾರನೆಯದಿನ ಸೈನ್ಯಾಧಿಪತಿಯನ್ನು ಕೊಲ್ಲಲು ನಿಶ್ಚಯಿಸಿದರು. ಆದರೆ ಡಿಲ್ಲೀಶ್ವರನಿಂದ ಮಹಾವೀರನು ಎಂದು ಖ್ಯಾತಿಯನ್ನು ಪಡೆದ ಆಸಫ್ ಖಾನನು, ಈಕೆಯನ್ನು ಸ್ವಲ್ಪ ಸೈನ್ಯದಿಂದ ಗೆಲ್ಲುವುದು ದುಸ್ತರವು ಎಂದು ತಿಳಿದುಕೊಂಡು ಮಾರನೆಯ ದಿವಸ ಬಹು ಸೈನ್ಯಸಹಿತನಾಗಿ. ಅಗ್ರಭಾಗದಲ್ಲಿ ಫಿರಂಗಿಗಳನ್ನು ಇಟ್ಟುಕೊಂಡು ಆಕಸ್ಮಿಕವಾಗಿ ಗೋಂಡರ ಮೇಲೆ ಬಿದ್ದನು. ಶತ್ರುಗಳ ಫಿರಂಗಿಗಳ ಮುಂದೆ ಗೋಂಡರು ನಿಲ್ಲಲಾರದೆ ಹೋದರು. ತನ್ನ ಸೈನಿಕರ ದುರವಸ್ಥೆಯನ್ನು ನೋಡಿ ದುರ್ಗಾವತಿಯ ಕುಮಾರನು ಅಲ್ಪವಯಸ್ಕನಾದರೂ ಅಭಿಮನ್ಯುಸಮಾನನಾದುದರಿಂದ, ತನ್ನ ಸೈನಿಕರಿಗೆ ಧೈರ್ಯವನ್ನು ಉಂಟುಮಾಡಿ ತಾನು ಮುಂದೆನಿಂತು ಶತ್ರುಗಳನ್ನು ಎದುರ್ಗೊಂಡನು. ಸ್ವಲ್ಪಹೊತ್ತು ಯುದ್ಧಮಾಡಿ, ಆಬಾಲಶೂರನು ಬಾಣಘಾತದಿಂದ ಮೂರ್ಛಿತನಾದನು. ಆಗ ಸೈನಿಕರು ದುಃಖಿತರಾಗಿ, ಈ ದುಃಖವಾರ್ತೆಯನ್ನು, ಇನ್ನೊಂದುಕಡೆ ಶತ್ರುಗಳನ್ನು ಮರ್ದಿಸುತಲಿದ್ದ ದುರ್ಗಾವತಿಗೆ ತಿಳಿಸಿದರು. ದುರ್ಗಾವತಿಯು ಈ ಮಾತುಗಳನ್ನು ಕೇಳಿ, ದಃಖಿಸುವುದಕ್ಕೆ ಇದು ಸಮಯವು ಅಲ್ಲ ಎಂದು ತಿಳಿದು, ಸ್ವಲ್ಪವೂ ಚಲಿಸದೆ ಪುತ್ರವಾತ್ಸಲ್ಯವನ್ನು ತಡೆದು ಸೇನಾಧಿಪತಿಗೆ, "ಈ ಸಮಯದಲ್ಲಿ ಧೈರ್ಯವನ್ನು ಬಿಟ್ಟು ಚಿಂತಿಸುತ್ತ ಕುಳಿತುಕೊಳ್ಳುವುದು ಅನುಚಿತ. ಶತ್ರುಹನನವು ನಮ್ಮ ಮುಖ್ಯ ಕರ್ತವ್ಯ. ಈಶ್ವರೇಚ್ಛೆಯಿಂದ ನಡೆದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಆದುದರಿಂದ ಕುಮಾರನನ್ನು ಶಿಬಿರಕ್ಕೆ ಕರೆದುಕೊಂಡು ಹೋಗಿ ತಕ್ಕ ಉಪಚಾರಗಳನ್ನು ಮಾಡಿರಿ. ನಾನು ಈಗ ಯುದ್ಧವನ್ನು ಬಿಟ್ಟುಬರುವುದಕ್ಕೆ ಆಗುವದಿಲ್ಲ. ರಣಯಜ್ಞವನು ಪೂರ್ತಿಮಾಡಿ ಪ್ರಾಪ್ತಿ ಇದ್ದರೆ ಪುನಹ ಪುತ್ರ ಮುಖವನ್ನು ನೋಡುವೆನು," ಎಂದು

ಹೇಳಿ ಕಳುಹಿಸಿದಳು. ಆಕೆಯ ಅನುಜ್ಞೆಯಂತೆ ಸೈನಿಕರು ಕಾರ್ಯವನ್ನು ನಡೆಸಿದರು. ಸ್ವಲ್ಪಕಾಲ ಎರಡುಕಡೆಯವರೂ ಸಮಾನವಾಗಿ ಯುದ್ಧಮಾಡುತಲಿದ್ದರು. ಆದರೆ ಅದು ಹಿಂದುಗಳ ಸ್ವಾತಂತ್ರ್ಯನಾಶನಕಾಲವಾಗಿದುದರಿಂದ ಹೋರಾಡಿ ಹೋರಾಡಿ ಗೋಂಡರು ಉತ್ಸಾಹಹೀನರಾದರು. ಯವನರ ಬಲವು ಹೆಚ್ಚಿತು. ಅವರು ಗೋಂಡರ ಸ್ಥಿತಿಯನ್ನು ನೋಡಿ ಅಧಿಕ ಉತ್ಸಾಹದೊಡನೆ 'ದೀನ್ ದೀನ್' ಎಂದು ಉಚ್ಚರಿಸುತ್ತ ಗೋಂಡರನ್ನು ಹತಮಾಡಿದರು. ಕೊನೆಗೆ ಮೂರುನೂರು ಜನ ಸೈನಿಕರೊಡನೆ ದುರ್ಗಾವತಿಯು ಮಾತ್ರ ಜೀವಿಸಿ ವೈರಿಗಳಿಗೆ ಭಯವನ್ನು ಹುಟ್ಟಿಸುತ್ತ ಯುದ್ಧ ಮಾಡುತಲಿದ್ದಳು. ಆಕೆಯನ್ನು ಎದುರಿಸುವುದಕ್ಕೆ ಆಸಫ್ ಖಾನನೇ ಬಂದನು. ಆದರೆ ದುರ್ಗಾವತಿಯ ಭಯಂಕರವಾದ ರೂಪವನ್ನು ನೋಡಿ ಆಕೆಯನ್ನು ಸಮೀಪಿಸಲಾರದೆ ದೂರದಲ್ಲಿಯೇ ನಿಂತು ಆಕೆಯಮೇಲೆ ಬಾಣಗಳನ್ನು ಹಾಕುತಲಿದ್ದನು. ದುರ್ಗಾವತಿಯು ಆ ಬಾಣಗಳನ್ನು ಎಲ್ಲ ತಡೆಯುತ್ತ, ಖಾನನ ಮೇಲೆ ಬಾಣಗಳನ್ನು ಹಾಕುತ್ತ, ಘೋರವಾಗಿ ಯುದ್ಧ ಮಾಡುತ್ತಿರಲು, ಆಸಫ್‌ಖಾನನ ಒಂದು ಬಾಣವು ಆಕೆಯ ಶಿರಸ್ಸಿನಲ್ಲಿ ಚುಚ್ಚಿಕೊಂಡಿತು. ಆಕೆಯು ಆ ಬಾಣವನ್ನು ಕಿತ್ತುಹಾಕಿ ಅತ್ಯಂತ ರೌದ್ರಾವೇಶದೊಡನೆ ಯುದ್ಧವನ್ನು ಮಾಡುತ್ತಿದ್ದಳು. ಸ್ವಲ್ಪಹೊತ್ತಿಗೆ ಆಕೆಯ ಶರೀರವೆಲ್ಲ ರಕ್ತಮಯವಾದುದನ್ನು ನೋಡಿ, ಸ್ವಾಮಿಭಕ್ತಿಯುಳ್ಳ ಒಬ್ಬ ಸೇವಕನು ಆಕೆಯ ಬಳಿಗೆ ಬಂದು, "ಅಮ್ಮಾ! ನೀವು ಇನ್ನು ಯುದ್ಧಮಾಡುವುದು ನಿಷ್ಪ್ರಯೋಜನ. ಸ್ವಲ್ಪಕಾಲದಲ್ಲಿಯೇ ಶತ್ರುಗಳು ನಿಮ್ಮನ್ನು ಸೆರೆಹಿಡಿಯುವರು; ಅವರ ಕೈಗೆ ಸಿಕ್ಕದೆ, ಇಲ್ಲಿಂದ ಶೀಘ್ರವಾಗಿ ಪಲಾಯನಮಾಡುವುದು ಉತ್ತಮ; ನಿಮಗೆ ಶ್ರಮೆಯುಂಟಾಗದಂತೆ ನಾನು ನಿಮ್ಮನ್ನು ಕರೆದುಕೊಂಡು ಹೋಗುವೆನು," ಎಂದನು. ಅವನ ಮಾತುಗಳನ್ನುಕೇಳಿ, ಪವಿತ್ರವಾದ ತನ್ನ ದೇಹವು ಮೊಗಲರಿಂದ ಅಪವಿತ್ರವಾಗುವುದು ಎಂಬ ಮಾತು ನೆನಪಿಗೆಬರಲು ದುರ್ಗಾವತಿಯು ವಿಷಣ್ಣವದನೆಯಾಗಿ, "ಎಲೋ, ನೀನು ಹೇಳಿದಮಾತು ನಿಶ್ಚಯ; ನಾನು ಕ್ಷತ್ರಿಯ ಕನ್ಯೆಯಾಗಿ ಶತ್ರುವಿಗೆ ಬೆನ್ನುತೋರಿಸಿ ರಣರಂಗದಿಂದ ಹಿಂದಿರುಗಿ ಹೋಗಲಾರೆನು. ಈ ಶರೀರವನ್ನು ಶತ್ರುಗಳು ಮುಟ್ಟಕೂಡದು; ಆದುದರಿಂದ ಆಲೋಚಿಸದೆ ಈ ಖಡ್ಗದಿಂದ ನನ್ನ ತಲೆಯನ್ನು ಕತ್ತರಿಸು; ಆಗ ನಾನು ವೀರಸ್ವರ್ಗವನ್ನು ಹೊಂದುವೆನು. ನನ್ನ ಆಜ್ಞೆಯಂತೆ ನನ್ನನ್ನು ಸಂಕಟದಿಂದ ಕಾಪಾಡಿದುದರಿಂದ ನಿನಗೆ ಪುಣ್ಯವು ಉಂಟಾಗುವುದೇ ಹೊರತು ಪಾಪವು ಉಂಟಾಗಲಾರದು," ಎಂದು ಆ ಭೃತ್ಯನೊಡನೆ ಹೇಳಿದಳು. ಆಕೆಯ ವಚನಗಳನ್ನು ಕೇಳಿ ಆ ಭೃತ್ಯನು ನಿಶ್ಚೇಷ್ಟಿತನಾಗಿ ನಿಂತುಕೊಂಡನು. ಒಂದುಗಳಿಗೆಯಾದ ಅನಂತರ ಆ ಸೇವಕನು, "ತಾಯೇ! ನನ್ನ ಬಿನ್ನಹವನ್ನು ಕೇಳಿರಿ. ಇನ್ನು ಸ್ವಲ್ಪವೂ ಸಾವಕಾಶಮಾಡಬಾರದು; ಈ ಆನೆಯ ಮೇಲೆ ಕುಳಿತುಕೊಂಡರೆ, ಅದು ನಿಮ್ಮನ್ನು ಶತ್ರುಗಳಿಗೆ

ಸಿಕ್ಕದಂತೆ ಆಚೆಗೆ ಕರೆದುಕೊಂಡು ಹೋಗುವುದು; ನಾನು ಸ್ತ್ರೀವಧೆಯನ್ನು ಮಾಡ ಲಾರೆನು," ಎಂದು ಆಕೆಯನ್ನು ಬೇಡಿಕೊಂಡನು. ಆಗ ರಾಣಿಯು ಬಹಳ ಚಿಂತಿಸಿ, ಮ್ಲೇಚ್ಛರು ತೀರ ಸಮೀಪಿಸಿದುದನ್ನು ನೋಡಿ, ತನ್ನ ಖಡ್ಗಕ್ಕೆ ನಮಸ್ಕಾರ ಮಾಡಿ, ಆ ಖಡ್ಗವನ್ನು ಹೃದಯದಲ್ಲಿ ಚುಚ್ಚಿಕೊಂಡು ರಣಭೂಮಿಯಲ್ಲಿಯೇ ಪ್ರಾಣವನ್ನು ಬಿಟ್ಟಳು! ಆ ಸೇವಕನು ತನ್ನ ರಾಣಿಯ ಶವವು ಶತ್ರುವಶವಾಗ ದಂತೆ ಭದ್ರಪಡಿಸಿ ತಾನು ಸಹ ಯುದ್ಧಮಾಡಿ ಮೃತನಾದನು. ರಾಣಿಯಪುತ್ರನೂ ಮೃತನಾದನು. ಒಬ್ಬ ಮೊಗಲಬಾದಷಹನ ರಾಜ್ಯಲೋಭದಿಂದ ಗೋಂಡು ಸಂಸ್ಥಾನದ ನಿರಪರಾಧಿಗಳಾದ ಪ್ರಜೆಗಳೆಲ್ಲರೂ ಪರಲೋಕಗತರಾದರು!

ಈ ರಣಶೂರಳಾದ ದುರ್ಗಾವತಿಯ ಸಮಾಧಿಯು ಜಬ್ಬಲ್‌ಪುರದ ಸಮೀಪದಲ್ಲಿ ಇದೆ. ಆ ಸಮಾಧಿಯ ಬಳಿಯಲ್ಲಿಯೇ ಆಕೆಯ ಗುಣವರ್ಣ ನಾತ್ಮಕವಾದ ಶಿಲಾಶಾಸನವು ಇದೆ. ಅಲ್ಲಿಗೆ ಹೋದ ಪಥಿಕರು ಆ ಸಮಾಧಿ ಯನ್ನು ಭಕ್ತಿಯೊಡನೆ ನೋಡಿ, ಈ ಶೂರನಾರಿಯ ಚರಿತ್ರೆಯನ್ನು ಓದಿ ಆಕೆಯಲ್ಲಿ ಪೂಜ್ಯಭಾವವನ್ನು ವಹಿಸುತ್ತಾರೆ. ಒಬ್ಬ ಪಥಿಕನು ಈ ಸಮಾಧಿಯನ್ನು ನೋಡಿ, "ದುರ್ಗಾವತಿಯ ಸಮಾಧಿಯು ಪರ್ವತಪ್ರದೇಶದಲ್ಲಿ ನಿರ್ಮಿತವಾಗಿದೆ. ಅಲ್ಲಿ ಎರಡು ಕಲ್ಲಿನಸ್ತಂಭಗಳು ಇವೆ. ಅವುಗಳನ್ನು ನೋಡಿದೊಡನೆಯೇ ಹಿಂದೆ ನಡೆದ ಯುದ್ಧವು ಪ್ರತ್ಯಕ್ಷವಾಗಿ ತೋರುತ್ತದೆ. ಆ ಗಿರಿಶಿಖರದಮೇಲೆ ಈಗಲೂ ರಾತ್ರಿಯಹೊತ್ತು ರಣಘೋಷವು ಕೇಳಿ ಬರುತ್ತದೆ ಎಂದು ಅಲ್ಲಿನ ಜನರು ನಂಬು ತ್ತಾರೆ. ಈ ಸ್ಥಳವು ನಿರ್ಜನವಾದರೂ ರಮಣೀಯವಾಗಿ ಇದೆ. ಇಲ್ಲಿ ಅನೇಕ ಗಾಜಿನ ಚೂರುಗಳು ಬಿದ್ದುಇವೆ. ಈ ಪ್ರದೇಶಕ್ಕೆ ಬರುವ ಪ್ರಯಾಣೀಕರು ದುರ್ಗಾವತಿಯ ಸಮಾಧಿಯನ್ನು ಪ್ರೇಮಪೂರ್ವಕವಾಗಿ ನೋಡಿ, ಆಕೆಯ ಪರಾ ಕ್ರಮ ಶ್ರವಣದಿಂದ ವಿಸ್ಮಯ ಚಿತ್ತರಾಗಿ, ಪೂಜ್ಯಭಾವದೊಡನೆ ಅಲ್ಲಿ ಬಿದ್ದಿರುವ ಗಾಜಿನ ತುಂಡುಗಳನ್ನೇ ಆ ಸಮಾಧಿಗೆ ಸಮರ್ಪಿಸುತ್ತಾರೆ; ಈ ಪೂರ್ವಾಚಾರ ವನ್ನು ಅನುಸರಿಸಿ, ದುರ್ಗಾವತಿಯ ದಿವ್ಯಗುಣಗಳನ್ನು ಅಭಿನಂದಿಸುವುದಕ್ಕಾಗಿ ನಾನು ಸಹ ಒಂದು ಗಾಜಿನ ತುಂಡನ್ನು ಸಮರ್ಪಿಸಿದೆನು," ಎಂದು ಬರೆದಿದ್ದಾನೆ.

ರಖಮಾಬಾಯಿ ಕೇಳೋಕರ್.

———o———

ಸಂಪತ್ಸರಸ್ವತೀ ಸತ್ಯಂ ಸಂತಾನಂ ಸದನುಗ್ರಹಃ
ಸತ್ತಾ ಸುಕೃತಿ ಸಂಭಾರಃ ಸಕಾರಾಃ ಸಪ್ತದುರ್ಲಭಾಃ

ಈಕೆಯು ೧೮೭೭ ನೆಯ ಇಸವಿಯಲ್ಲಿ ಬೊಂಬಾಯಿ ನಗರದಲ್ಲಿ ಜನ್ಮಿಸಿದಳು. ೧೮೮೮ ನೆಯ ಇಸವಿಯಲ್ಲಿ ಈಕೆಯನ್ನು ಅದೇನಗರದಲ್ಲಿ ವಾಸಮಾಡುತ್ತಿದ್ದ ಡಾಕ್ಟರ್ ಕೃಷ್ಣಾಜೀ ದಾದಾಜಿಗೆ ಕೊಟ್ಟು ಈಕೆಯ ಜನನೀಜನಕರು ವಿವಾಹವನ್ನು ಮಾಡಿದರು. ಇವರು ಮಹಾರಾಷ್ಟ್ರ ವೈಶ್ಯರು. ಈ ಜಾತಿಯವರು ಬೊಂಬಾಯಿ, ಸೋಲಾಪೂರು, ವಿಜಾಪೂರು, ವಸಯಿಾ ಎಂಬ ಗ್ರಾಮಗಳಲ್ಲಿ ಮಾತ್ರ ಸ್ವಲ್ಪ ಜನರು ಇದಾರೆ.

ರಖಮಾಬಾಯಿಯು ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯಲಿಲ್ಲ. ವಿವಾಹವಾದಮೇಲೆಯೇ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದಳು. ಈಕೆಯ ಪತಿಯಾದ ಕೃಷ್ಣಾಜಿಯು ವಸಯಿಾಗ್ರಾಮ ನಿವಾಸಸ್ಥನು. ಈತನು ಬೊಂಬಾಯಿ ಪಟ್ಟಣದಲ್ಲಿ ಇರುವ ಗ್ರಾಂಟ್‌ಮೆಡಿಕಲ್ ಕಾಲೇಜಿನಲ್ಲಿ ವೈದ್ಯಶಾಸ್ತ್ರವನ್ನು ಅಭ್ಯಾಸಮಾಡಿ, ಡಾಕ್ಟರ್ ಪರೀಕ್ಷೆಯಲ್ಲಿ ಪಾರಂಗತನಾದನು. ಈತನು ಬಾಲ್ಯದಿಂದಲೂ ವಿದ್ಯಾವ್ಯಸನವುಳ್ಳವನಾದಕಾರಣ ಮಹಾರಾಷ್ಟ್ರಭಾಷೆ, ವ್ಯಾಕರಣ, ಕವಿತ್ವ, ಮೊದಲಾದವುಗಳಲ್ಲಿ ಸಹ ಕೃಷಿಮಾಡಿ ಪ್ರವೀಣನಾದನು. ದೇಶವು ಉನ್ನತಸ್ಥಿತಿಯನ್ನು ಹೊಂದಬೇಕಾದರೆ ವಿದ್ಯಾವತಿಯರಾದ ಸ್ತ್ರೀಯರ ಸಹಾಯವು ಅತ್ಯವಶ್ಯಕವು; ಆದಕಾರಣ ಅವರಿಗೆ ಕೇವಲ ಅಕ್ಷರ ಜ್ಞಾನವನ್ನುಮಾತ್ರ ಉಂಟುಮಾಡುವುದರಿಂದ ಪ್ರಯೋಜನವಿಲ್ಲ; ಅವರಿಗೆ ಉತ್ತಮ ವಿದ್ಯೆಯನ್ನು ಕಲಿಸಿ ಅವರನ್ನು ಜ್ಞಾನವತಿಯರನ್ನಾಗಿ ಮಾಡಬೇಕು," ಎಂದು ಕೃಷ್ಣಾಜಿಯು ಎಣಿಸಿದ್ದನು. ವಿವಾಹವಾದಮೇಲೆ ಆತನು ತನ್ನ ಪತ್ನಿಯನ್ನು ವಿಶೇಷ ವಿದ್ಯಾವತಿಯನ್ನಾಗಿ ಮಾಡಬೇಕೆಂದು ನಿಶ್ಚಯಿಸಿದನು. ರಖಮಾಬಾಯಿಯು ಆಗ್ಯೆ ವಿದ್ಯಾಗಂಧವನ್ನು ಅರಿಯದವಳಾದರೂ, ಬುದ್ಧಿಕುಶಲವುಳ್ಳವಳಾದ ಕಾರಣ ಶೀಘ್ರಕಾಲದಲ್ಲಿಯೇ ಮಹಾರಾಷ್ಟ್ರ ಭಾಷೆಯನ್ನು ಚೆನ್ನಾಗಿ ಓದುವುದಕ್ಕೂ ಬರೆಯುವುದಕ್ಕೂ ಕಲಿತುಕೊಂಡಳು. ಅದರಿಂದ ಕೃಷ್ಣಾಜಿಗೆ ತನ್ನ ಪತ್ನಿಗೆ ವಿದ್ಯೆಯನ್ನು ಕಲಿಸುವುದು ವಿನೋದವಾಗಿ ಇತ್ತು. ತನ್ನ ಉದ್ಯೋಗಕ್ಕೂ, ರೋಗಿಗಳ ಮನೆಗೆ ಹೋಗುವುದಕ್ಕೂ ಬೇಕಾದ ಕಾಲವನ್ನು ವಿನಹ ಮಿಕ್ಕಕಾಲವನ್ನೆಲ್ಲ ಕೃಷ್ಣಾಜಿಯು ತನ್ನ

ಭಾರ್ಯೆಗೆ ವಿದ್ಯೆಯನ್ನು ಕಲಿಸುವುದರಲ್ಲಿಯೇ ಕಳೆಯುತ್ತ ಇದ್ದನು. ಭಾರ್ಯಾ ಭರ್ತರು ಇಬ್ಬರೂ ಆ ಕಾಲದಲ್ಲಿ ಯೌವನಸಂಪನ್ನರೂ, ಧನಸಂಪನ್ನರೂ ಆಗಿದ್ದರೂ ಇತರರಂತೆ ಸ್ವೇಚ್ಛಾಸುಖದಲ್ಲಿ ಇಷ್ಟವಿಲ್ಲದೆ ಉಭಯರೂ ವಿದ್ಯಾಭಿವೃದ್ಧಿಗೆ ಶ್ರಮಪಡುತ್ತಲಿದ್ದರು! ಆ ಸಮಯದಲ್ಲಿ ಸ್ವಲ್ಪವೂ ಬೇಸರಿಕೆ ಇಲ್ಲದೆ ಪತ್ನಿಯು ಎಷ್ಟು ಬೇಗ ಕಲಿತುಕೊಂಡರೆ ಅಷ್ಟು ಉತ್ಸಾಹದೊಡನೆ ಬೋಧಿಸಿದ ಕೃಷ್ಣಾಜಿಯ ಸದುದ್ದೇಶವನ್ನು ಹೊಗಳಬೇಕು. ಆತನು ರಖಮಾಬಾಯಿಗೆ ಬೋಧಿಸಿದ ರೀತಿಯು ಅನುಕರಣೀಯವಾದುದೂ, ಪ್ರಶಂಸನೀಯವಾದುದೂ ಆಗಿದೆ. ರಖಮಾಬಾಯಿಯು ಓದುವ ಕೊಠಡಿಯಲ್ಲಿ ಇದ್ದ ಪ್ರತಿಯೊಂದು ಪದಾರ್ಥವೂ ಬೋಧಪ್ರದವಾದುದಾಗಿ ಇತ್ತು. ಗೋಡೆಗಳ ಮೇಲೆ ಗೋಳಗಳ, ಗೋಳಾರ್ಧಗಳ, ನಕ್ಷತ್ರಗಳ, ಸೂರ್ಯಮಂಡಲದ, ಗ್ರಹಣಗಳ ಸುಂದರವಾದ ಪಟಗಳು ತಗಲಹಾಕಿದ್ದವು. ಜಗತ್ತಿನಲ್ಲಿರುವ ಅನೇಕ ಪರ್ವತಗಳ, ನದಿಗಳ, ದ್ವೀಪಗಳ, ಪಟಗಳು ಆ ಕೊಠಡಿಯನ್ನು ಅಲಂಕರಿಸಿ ಇದ್ದವು. ಆ ಮಂದಿರದಲ್ಲಿ ಭಿನ್ನಭಿನ್ನ ದೇಶಗಳ ಜನರ ಪ್ರತಿಮೆಗಳು ಇದ್ದವು. ಸೀತೆ, ದ್ರೌಪದಿ, ಮೊದಲಾದ ಪೌರಾಣಿಕ ಸಾಧ್ವೀಮಣಿಯರ, ಅಹಲ್ಯಾಬಾಯಿ, ಎಲಿಜಬೆತ್, ಮೊದಲಾದ ಐತಿಹಾಸಿಕ ಸ್ತ್ರೀಯರ ಚಿತ್ರಪಟಗಳನ್ನೂ, ತುಕಾರಾಮ್, ಮೊರೋಪಂತು, ಮುಕ್ತೇಶ್ವರ, ಮೊದಲಾದ ಮಹಾರಾಷ್ಟ್ರಕವಿಗಳ ಬೋಧವಚನಗಳನ್ನು ದೊಡ್ಡ ಅಕ್ಷರಗಳಲ್ಲಿ ಬರೆದಿರುವ ಕಾಗದಗಳನ್ನೂ, ಗೋಡೆಯಮೇಲೆ ಅಲ್ಲಲ್ಲಿ ತಗಲಿಸಿ ಇದ್ದರು. ಸೂರ್ಯನ ಸುತ್ತಲೂ ಭೂಮಿಯು ಹೇಗೆ ತಿರುಗುತಲಿರುವುದೋ, ಪೃಥಿವಿಯ ಸುತ್ತಲೂ ಚಂದ್ರನು ಹೇಗೆ ತಿರುಗುತಲಿರುವುನೋ ಅದನ್ನು ತೋರಿಸುವ ಯಂತ್ರವೂ, ವಾಯುಭಾರವನ್ನು ಅಳೆಯುವ ಯಂತ್ರವೂ, ಉಷ್ಣವನ್ನು ನೋಡುವ ಯಂತ್ರವೂ, ಹಾಲಿನಲ್ಲಿ ನೀರುಸೇರಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಯಂತ್ರವೂ, ಜಾಗರೂಕತೆಯ ನಿಮಿತ್ತವಾಗಿ ಮಾಡಿದ ಗಡಿಯಾರವೂ ಆ ಕೊಠಡಿಯಲ್ಲಿ ಇದ್ದವು. ಜ್ಞಾನಪ್ರದಗಳಾದ ವಸ್ತುಗಳಿಂದ ಅಲಂಕೃತವಾಗಿ ಇದ್ದ ಆ ಕೊಠಡಿಯನ್ನು ನೋಡಿದರೆ ಸರಸ್ವತಿಯ ವಿಲಾಸಮಂದಿರದಂತೆ ತೋರುತಲಿತ್ತು! ಈ ಸರಸ್ವತಿಯ ಮಂದಿರದಲ್ಲಿ ಅಧ್ಯಯನವನ್ನು ಮಾಡಿದುದರಿಂದಲೇ ರಖಮಾಬಾಯಿಗೆ ಅತಿಶೀಘ್ರವಾಗಿ ಸರಸ್ವತಿಯೊಡನೆ ಸಹವಾಸವು ಉಂಟಾಯಿತು. ಆ ಕೊಠಡಿಯಲ್ಲಿ ಕುಳಿತುಕೊಂಡು ಇರುವಾಗ ಯಾವಪದಾರ್ಥದ ಮೇಲೆ ದೃಷ್ಟಿಯು ಹೋಗುವುದೋ ಆ ಪದಾರ್ಥವನ್ನು ಕುರಿತು ಕೃಷ್ಣಾಜಿಯು ಪತ್ನಿಗೆ ಸವಿಸ್ತರವಾಗಿ ಬೋಧಿಸುತಲಿದ್ದನು. ಅಲ್ಲಿ ಇರುವ ಪ್ರತಿಯೊಂದು ಪದಾರ್ಥದ ವಿಷಯವನ್ನೂ ತಿಳಿದುಕೊಳ್ಳಬೇಕು ಎಂಬ ಕುತೂಹಲವುಳ್ಳ ರಖಮಾಬಾಯಿಯು ತನ್ನ ಪತಿಯನ್ನು ಸವಿನಯವಾಗಿ ಅನೇಕ ಪ್ರಶ್ನೆಗಳನ್ನು ಕೇಳುತ್ತ ಇದ್ದಳು. ಕೃಷ್ಣಾಜಿಯು ಸರ್ವವನ್ನೂ ತಿಳಿದವನು. ಆದಕಾರಣ ಆಕೆಯ ಪ್ರಶ್ನೆಗಳಿಗೆ

ತಕ್ಕ ಸಮಾಧಾನಗಳನ್ನು ಹೇಳಿ ಆಕೆಯ ಜ್ಞಾನವನ್ನು ಅಭಿವೃದ್ಧಿಗೊಳಿಸುತ್ತ ಇದ್ದನು. ಪ್ರಸಂಗಾನುಸಾರವಾಗಿ ಇತಿಹಾಸ, ಪದಾರ್ಥ ವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಜ್ಯೋತಿಷಶಾಸ್ತ್ರ, ಮೊದಲಾದ ವಿಷಯಗಳನ್ನು ಕೃಷ್ಣಾಜಿಯು ಸುಲಭವಾಗಿ ತಿಳಿಯುವಂತೆ ರಖಮಾಬಾಯಿಗೆ ಹೇಳುತ್ತ ಇದ್ದನು. ಕಠಿನ ಶಾಸ್ತ್ರಗಳಾದ ವ್ಯಾಕರಣ, ಗಣಿತಗಳನ್ನು ಸಹ ರಖಮಾಬಾಯಿಗೆ ಕೃಷ್ಣಾಜಿಯು ಸುಲಭವಾಗಿ ಗ್ರಾಹ್ಯವಾಗುವಂತೆ ಬೋಧಿಸಿದನು. ಇಂಗ್ಲೀಷನ್ನು ಕಲಿತು ಮಾತೃಭಾಷೆಯನ್ನು ಮರೆತು ಹೋಗುವವರಂತೆ ಅಲ್ಲದೆ ಕಷ್ಣಾಜಿಯು ಮಹಾರಾಷ್ಟ್ರ ಭಾಷೆಯಲ್ಲಿ ಪ್ರವೀಣತೆಯನ್ನು ಪಡೆದು ಇದ್ದನು. ಆದುದರಿಂದ ಆತನು ರಖಮಾಬಾಯಿಗೆ ಮಹಾರಾಷ್ಟ್ರಭಾಷೆಯಲ್ಲಿ ಸಾಹಿತ್ಯವನ್ನು ಸಹ ಕಲಿಸಿದನು.

ರಖಮಾಬಾಯಿಯು ಮಹಾರಾಷ್ಟ್ರಭಾಷೆಯನ್ನು ಚೆನ್ನಾಗಿ ಅಭ್ಯಸಿಸಿ, ಇಂಗ್ಲೀಷನ್ನು ಕಲಿಯುವುದಕ್ಕೆ ಪ್ರಾರಂಭಿಸಿದಳು. ಕೆಲವು ಕಾಲದಲ್ಲಿಯೇ ಆಕೆಯು ಇಂಗ್ಲೀಷನ್ನೂ ಬಹಳಮಟ್ಟಿಗೆ ಕಲಿತುಕೊಂಡಳು. ರಖಮಾಬಾಯಿಯು ಸ್ವಯವಾಗಿ ಮನೆಯ ಕೆಲಸಗಳನ್ನೆಲ್ಲ ಮಾಡಿಕೊಂಡು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಳು. ಈಕೆಯು ಪಾಠಶಾಲೆಗೆ ಹೋಗದೆ ಮನೆಯಲ್ಲಿ ಅಭ್ಯಾಸಮಾಡಿದರೂ, ಪಾಠಶಾಲೆಯಲ್ಲಿ ಓದಿ ಪ್ರವೀಣರು ಎಂದು ಹೆಸರನ್ನು ಪಡೆದು ಇದ್ದವರಿಗಿಂತಲೂ ಹೆಚ್ಚಾಗಿ ಕಲಿತುಕೊಂಡಳು! ಆದರೆ ಈಕೆಯು ಇಷ್ಟು ವಿದ್ವಾಂಸಳು ಎಂಬುದನ್ನು ಬಂಧುಗಳೂ, ನೆರೆಹೊರೆಯವರೂ ಅರಿಯರು! ಕಸ್ತೂರಿಯನ್ನು ಬಚ್ಚಿಟ್ಟರೂ ಅದರ ಪರಿಮಳವು ಹೊರಗೆ ಬರುವಂತೆ ಈಕೆಯು ತನ್ನ ಪಾಂಡಿತ್ಯವನ್ನು ಎಷ್ಟು ಬಚ್ಚಿಟ್ಟುಕೊಂಡು ಇದ್ದರೂ. ಈಕೆಯ ವಿದ್ಯಾತಿಶಯವು ಬಹು ಚಮತ್ಕಾರವಾಗಿ ಹೊರಗೆ ಬಂದಿತು.

ಡಾಕ್ಟರ್ ಕೃಷ್ಣಾಜಿಯು ತನ್ನ ಕಾರ್ಯವನ್ನು ಬಹು ಶ್ರದ್ಧೆಯಿಂದ ನಿರ್ವಹಿಸುತ್ತ ಇದ್ದನಾದುದರಿಂದ ಮೇಲಿನ ಅಧಿಕಾರಿಗಳು ಆತನನ್ನು ಪ್ರೀತಿಸುತ್ತ ಇದ್ದರು. ಆಗಿನ ಅಧಿಕಾರಿಯ ಹೆಸರು ಡಾಕ್ಟರು ಜಾನ್‌ಸ್ಟ್ಯ. ಒಂದು ದಿವಸ ಡಾಕ್ಟರ್ ಜಾನ್‌ಸ್ಟನ್ನನು ಅಕಸ್ಮಾತ್ತಾಗಿ ಕೃಷ್ಣಾಜಿಯ ವೈದ್ಯಶಾಲೆಗೆ ಬಂದು, "ನೀನು ಜಾಗ್ರತೆಯಾಗಿ ವೈದ್ಯಶಾಲೆಗೆ ಬರಬೇಕು" ಎಂದು ಚೀಟಿಯನ್ನು ಬರೆದು ಕಷ್ಣಾಜಿಯ ಮನೆಗೆ ಕಳುಹಿಸಿದನು. ಆಗ ಕೃಷ್ಣಾಜಿಯು ಒಬ್ಬ ರೋಗಿಯನ್ನು ನೋಡುವುದಕ್ಕೆ ಗ್ರಾಮಾಂತರಕ್ಕೆ ಹೋಗಿ ಇದ್ದುದರಿಂದ ಚೀಟಿಯು ರಖಮಾಬಾಯಿಯ ಕೈಗೆ ಬಂದಿತು. ಆ ಕಾಗದವು ಇಂಗ್ಲೀಷಿನಲ್ಲಿ ಇದ್ದುದರಿಂದ, "ಕೃಷ್ಣಾಜಿದಾದಾಜಿಯವರು ಮನೆಯಲ್ಲಿ ಇಲ್ಲ. ರೋಗಿಯನ್ನು ನೋಡುವುದಕ್ಕಾಗಿ ಸಮೀಪ ಗ್ರಾಮಕ್ಕೆ ಹೋಗಿ ಇದ್ದಾರೆ. ಸಾಯಂಕಾಲಕ್ಕೆ ಮನೆಗೆ ಬರುವರು," ಎಂದು ಇಂಗ್ಲೀಷಿನಲ್ಲಿ ಆ ಚೀಟಿಯ ಮೇಲೆಯೇ ಬರೆದು ರಖಮಾ

ಬಾಯಿಯು ಅದನ್ನು ಹಿಂದಕ್ಕೆ ಕಳುಹಿಸಿದಳು. ಆ ಚೀಟಿಯನ್ನು ಜಾನ್‌ಸ್ಪನ್ನನು ಓದಿಕೊಂಡು ಹಿಂದಕ್ಕೆ ಹೋದನು. ಕಾಗದದಮೇಲೆ ಕೈಬರಹವು ಇಲ್ಲದೇ ಇದ್ದುದರಿಂದ ಜವಾಬನ್ನು ಯಾರುಬರೆದರೋ ಎಂದು ಜಾನ್‌ಸ್ಪನ್ನನಿಗೆ ಸಂಶಯವು ಉಂಟಾಯಿತು.

ಆಮೇಲೆ ಕೃಷ್ಣಾಜಿಯು ಮನೆಗೆ ಬಂದ ಕೂಡಲೆ ಡಾಕ್ಟರ್ ಜಾನ್‌ಸ್ಪನ್ನನ ಮನೆಗೆ ಹೋದನು. ಅವರು ಇಬ್ಬರೂ ಅನೇಕವಿಷಯಗಳನ್ನು ಕುರಿತು ಮಾತ ನಾಡಿದಮೇಲೆ ಆ ಆಂಗ್ಲೇಯನು, "ನನ್ನ ಕಾಗದಕ್ಕೆ ಇಂಗ್ಲೀಷಿನಲ್ಲಿ ಜವಾಬನ್ನು ಬರೆದವರು ಯಾರು?" ಎಂದು ಕೇಳಲು, ಕೃಷ್ಣಾಜಯು, "ಜವಾಬನ್ನು ಬರೆ ದವಳು ನನ್ನ ಪತ್ನಿಯು," ಎಂದು ನುಡಿದನು. ಆಗ ದೊರೆಯು ವಿಸ್ಮಿತನಾಗಿ, "ಆಕೆಯು ಇಷ್ಟು ವಿದ್ಯೆಯನ್ನು ಎಲ್ಲಿ ಕಲಿತಳು? ಎಂದು ಕೇಳಿದನು. ಅದಕ್ಕೆ ಕೃಷ್ಣಾಜಿಯು, "ಇದನ್ನೆಲ್ಲ ನಾನು ಮನೆಯಲ್ಲಿಯೇ ಕಲಿಸಿದೆನು," ಎಂದನು. ಈ ಮಾತುಗಳನ್ನು ಕೇಳಿ ದೊರೆಯು, "ನಿಮ್ಮ ಪತ್ನಿಯನ್ನು ನಾನು ನೋಡುವುದಕ್ಕೆ ಏನಾದರೂ ಅಭ್ಯಂತರವು ಉಂಟೇ?" ಎಂದು ಪ್ರಶ್ನಿಸಿದನು. ಅದಕ್ಕೆ ಕೃಷ್ಣಾ ಜಿಯು ಒಪ್ಪಿಕೊಂಡು ಮನೆಗೆಹೋದನು. ಮೂರನೆಯದಿವಸ ಬೆಳಿಗ್ಗೆ ದೊರೆಯು ಬಂದು ವೈದ್ಯಶಾಲೆಯನ್ನು ಸಂಶೋಧಿಸಿದ ಅನಂತರ ಕೃಷ್ಣಾಜಿಯು ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ದೊರೆಯು ರಖಮಾಬಾಯಿಯನ್ನು ನೋಡಿ ನನ್ನ ಕಾಗದಕ್ಕೆ ಜವಾಬುಬರೆದ ಹೆಂಗಸು ಈಕೆಯೇ ಆಗಿ ಇರಬಹುದೇ ಎಂದು ಸಂಶಯಿಸಿದನು. ಆದರೆ ಆಕೆಯೊಡನೆ ಸ್ವಲ್ಪಹೊತ್ತು ಸಂಭಾಷಿಸಿದ ಅನಂತರ ಆಕೆಯ ವಿದ್ಯಾತಿಶಯಕ್ಕೆ ದೊರೆಯು ಆಶ್ಚರ್ಯಪಟ್ಟು, ರಖಮಾಬಾಯಿ ಯನ್ನೂ, ಕೃಷ್ಣಾಜಿಯನ್ನೂ ಕೊಂಡಾಡಿದನು.

ಈ ದೇಶದಲ್ಲಿ ಅನೇಕ ಪಾಠಶಾಲೆಗಳು ಇದ್ದರೂ, ಆ ಶಾಲೆಗಳಿಗೆ ಚಿಕ್ಕ ಚಿಕ್ಕ ಬಾಲಿಕೆಯರು ಮಾತ್ರ ಹೋಗುತ್ತಾರೆ. ಸ್ವಲ್ಪ ದೊಡ್ಡವರಾದ ಮೇಲೆ ಹೆಣ್ಣುಮಕ್ಕಳು ಪಾಠಶಾಲೆಗೆ ಹೋಗಲು ಸಾಧಾರಣವಾಗಿ ಲಜ್ಜಿಸುತ್ತಾರೆ. ಆದ ಕಾರಣ ಹಿಂದೂ ಸ್ತ್ರೀಯರಿಗೆ ಸಂಪೂರ್ಣವಾದ ವಿದ್ಯೆಯನ್ನು ಕಲಿಯುವುದಕ್ಕೆ ಪಾಠ ಶಾಲೆಗಳು ವಿಶೇಷ ಉಪಯೋಗಕರಗಳಲ್ಲ. ಆದುದರಿಂದ ವಿದ್ಯಾಭಿಮಾನಿಗಳಾದ ಪುರುಷರು ತಮ್ಮ ಪತ್ನಿಯರಿಗೂ, ಸೋದರಿಯರಿಗೂ ಮನೆಯಲ್ಲಿಯೇ ತಮ್ಮ ಕೈಯಲ್ಲಾದ ವಿದ್ಯೆಗಳನ್ನು ಕೃಷ್ಣಾಜಿಯಂತೆ ಕಲಿಸಿದರೆ ಭರತಖಂಡದಲ್ಲಿ ಸ್ತ್ರೀ ವಿದ್ಯೆಯು ಅನತಿಕಾಲದಲ್ಲಿಯೇ ಅಭಿವೃದ್ಧಿಯನ್ನು ಹೊಂದುವುದು.

ಪತ್ನಿಗೆ ಓದುಬರಹವನ್ನು ಕಲಿಸುವ ಸಮಯದಲ್ಲಿ ಕೃಷ್ಣಾಜಿಯಾಗಲಿ, ಕಲಿಯುವ ಸಮಯದಲ್ಲಿ ರಖಮಾಬಾಯಿಯಾಗಲಿ 'ಈ ವಿದ್ಯೆಯಿಂದ ಧನವನ್ನು

ಸಂಪಾದಿಸಬೇಕು' ಎಂಬ ಊಹೆಯನ್ನು ಉಳ್ಳವರಾಗಿ ಇರಲಿಲ್ಲ. ರಖಮಾಬಾಯಿಯ ಮಾನಸೋನ್ನತಿಯನ್ನುಮಾಡಿ, 'ಸ್ತ್ರೀಯು ವಿದ್ಯಾವತಿಯಾದರೆ ದುರ್ಮಾರ್ಗಳಾಗುವಳು' ಎಂದು ಹೇಳುವ ಜನರ ದುರಭಿಪ್ರಾಯವನ್ನು ದೂರ ಮಾಡುವುದೂ, ನಮ್ಮ ದೇಶದ ಸ್ತ್ರೀಯರಿಗೆ ಒಂದು ಉತ್ತಮ ಉದಾಹರಣೆಯನ್ನು ತೋರಿಸಬೇಕು ಎಂಬುವುದೂ ಕೃಷ್ಣಾಜಿಯ ಉದ್ದೇಶವು. ಮತ್ತು ಭಾರ್ಯಾಭರ್ತರು ಇಬ್ಬರೂ ಸಮಾನಜ್ಞಾನಉಳ್ಳವರಾಗಿ ಇದ್ದರೆ ಅವರ ಜೀವಿತವು ವಿಶೇಷ ಸುಖಕರವಾಗಿ ಇರುವುದು ಎಂದು ಆತನ ತಾತ್ಪರ್ಯ. ಈ ಕಾರಣಗಳಿಂದ ಆತನು ಪತ್ನಿಗೆ ವಿದ್ಯೆಯನ್ನು ಕಲಿಸಿದನು. ಆದರೆ ಈ ವಿದ್ಯೆಯಿಂದ ದ್ರವ್ಯಸಂಚಯವು ಉಂಟಾಗಬೇಕು ಎಂದು ಭಗವದಿಚ್ಛೆಯಲ್ಲಿ ಇದ್ದುದರಿಂದ, ಜ್ಞಾನಾರ್ಜನೆಯನ್ನು ಮಾಡುತ್ತ ಸೌಖ್ಯವಾಗಿ ಕಾಲವನ್ನು ಕಳೆಯುತ್ತಇದ್ದ ಈ ದಂಪತಿಗಳಿಗೆ ಒಂದು ಸಂಕಟವು ಸಂಪ್ರಾಪ್ತವಾಯಿತು.

ಡಾಕ್ಟರು ಕೃಷ್ಣಾಜಿಗೆ ಬಾಲ್ಯದಿಂದಲೂ 'ಪೀನಸ' ಎಂಬ ನಾಸಿಕಾರೋಗವು ಇತ್ತು. ಅದರಿಂದ ಆಗಾಗ್ಯೆ ಆತನಿಗೆ ಬಾಧೆಯು ಉಂಟಾಗುತ್ತ ಇತ್ತು. ಆತನು ವೈದ್ಯನಾದಕಾರಣ ಅದಕ್ಕೆ ಯಾವುದೋಒಂದು ಔಷಧವನ್ನು ಉಪಯೋಗಿಸುತ್ತಲೇ ಇದ್ದನು. ಆದರೆ ಔಷಧಗಳಿಂದ ವ್ಯಾಧಿಯು ಕಡಮೆಯಾಗದೆ ಕೆಲವುಕಾಲಕ್ಕೆ ಹೆಚ್ಚಾಗಲಾರಂಭಿಸಿತು. ಪ್ರಜೆಗಳಿಗೆ ಈತನು ಅನೇಕ ಉಪಕಾರಗಳನ್ನು ಮಾಡುತ್ತ ಇದ್ದುದರಿಂದ, ಅವರು ಈತನ ಪರೋಪಕಾರ ಬುದ್ಧಿಗೆ ಮೆಚ್ಚಿ, ಈತನನ್ನು ಪನವೆಲ್ ಮುನಿಸಿಪಾಲಿಟಿಯಲ್ಲಿ ಮೆಂಬರಾಗಿ ಚುನಾಯಿಸಿದರು. ಒಂದು ದಿವಸ ಆ ಮುನಿಸಿಪಾಲಿಟಿಯ ಸಭೆಯಲ್ಲಿ ಯಾವುದೋಒಂದು ವಿಷಯವನ್ನು ಕುರಿತು ಕೃಷ್ಣಾಜಿಯು ಪ್ರಸಂಗಿಸುತ್ತ ಇರಲು ಪೀನಸವು ಹೆಚ್ಚಾಗಿ ಮೂಗಿನಿಂದ ರಕ್ತವು ಸುರಿಯಲು ಪ್ರಾರಂಭಿಸಿತು. ಆಗ ಆತನು ನಿರುಪಾಯನಾಗಿ ಆಪ್ರಸಂಗವನ್ನು ಅಲ್ಲಿಗೆ ನಿಲ್ಲಿಸಿ ಮನೆಗೆ ಹೋದನು. ಅಂದಿನಿಂದ ಆತನ ವ್ಯಾಧಿಯು ವಿಶೇಷ ಬಾಧೆಯನ್ನು ಉಂಟುಮಾಡುತ್ತ ಇದ್ದುದರಿಂದ ಇಂಗ್ಲೀಷ್ ಔಷಧೋಪಚಾರಗಳನ್ನು ಮಾಡಿದನು. ಆ ಔಷಧಗಳಿಂದ ಪ್ರಯೋಜನವು ಉಂಟಾಗಲಿಲ್ಲ. ಆಮೇಲೆ ದಾಜೀಶಾಸ್ತ್ರಿ ಎಂಬ ಹಿಂದೂ ವೈದ್ಯನಹತ್ತಿರ ಆತನು ಔಷಧವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದನು. ಆ ಔಷಧಿಯಿಂದ ಸ್ವಲ್ಪ ಗುಣವು ಉಂಟಾದಂತೆ ತೋರಿತು. ಆದರೆ ಒಟ್ಟಿನಮೆಲೆ ವಿಶೇಷ ಸುಗುಣವು ಕಂಡು ಬರಲಿಲ್ಲ ಎಂದು ಆ ವೈದ್ಯನು ಒಂದು ಉತ್ತಮ ಔಷಧವನ್ನು ಸಿದ್ಧಪಡಿಸಿ ೨೮ ದಿವಸಗಳಿಗೆ ಸರಿಹೋಗುವಂತೆ ಮಾತ್ರೆಗಳನ್ನು ಮಾಡಿಕೊಟ್ಟನು. ಆ ಉತ್ತಮ ಔಷಧದಿಂದ ಗುಣವು ಉಂಟಾಗುವದಕ್ಕೆ ಪ್ರತಿಯಾಗಿ ಮೂಗುಮಾತ್ರವೇ ಅಲ್ಲದೆ ಮುಖವೆಲ್ಲ ಊದಿಕೊಂಡು, ಶ್ವಾಸವು ಆಡುವುದು ಸಹ ದುರ್ಲಭವಾಯಿತು. ಅನ್ನವನ್ನು ನುಂಗುವುದಕ್ಕೆ ಆಗಲಿಲ್ಲ. ಹಾಲುಸಹ ಬಹುಕಷ್ಟದಿಂದ ಗಂಟಲಿನೊಳಕ್ಕೆ

ಹೋಗುತ್ತಿತ್ತು. ಆಗ ಆತನು ಬದುಕುವುದೇ ಕಷ್ಟವು ಎಂದು ವೈದ್ಯರು ನೆನೆಸಿದರು. ರಖಮಾಬಾಯಿಯ ಮಂಗಳಸೂತ್ರದ ಮಹಿಮೆಯಿಂದ ಪ್ರಾಣಾಪಾಯವು ತಪ್ಪಿತು. ಆದರೆ ಶಾಶ್ವತವಾದ ಅಂಗವೈಕಲ್ಯವು ಪ್ರಾಪ್ತವಾಯಿತು. ಆದಕಾರಣ ಕೃಷ್ಣಾಜಿಯು ನಿರಾಶನಾಗಿ ಉದ್ಯೋಗವನ್ನು ಬಿಟ್ಟುಬಿಟ್ಟನು. ಈ ಸಂಕಟ ಸಮಯದಲ್ಲಿ ರಖಮಾಬಾಯಿಯ ಮನಸ್ಸು ಯಾವಸ್ಥಿತಿಯಲ್ಲಿ ಇತ್ತು ಎಂಬುದನ್ನು ಪಾಠಕರೇ ಊಹಿಸಬೇಕು.

ಸುಖಾನಂತರದಲ್ಲಿ ದುಃಖವೂ ದುಃಖಾನಂತರ ಸುಖವೂ ಸಂಭವಿಸುವುದು ಈ ಜಗತ್ತಿನ ಧರ್ಮವು ಎಂದು ಅರಿತವರು ಹೇಳುತ್ತಾರೆ. ಕೃಷ್ಣಾಜಿಯು 'ಪರೋಪಕಾರಿ' ಎಂದು ಕೀರ್ತಿಯನ್ನು ಪಡೆದು ಇದ್ದನು. ರಖಮಾಬಾಯಿಯು ಸಹ ಸತ್ಯ, ಶೀಲ, ಶಾಂತಿ, ದಯೆ, ಮೊದಲಾದ ಸುಗುಣಗಳನ್ನುಳ್ಳವಳಾಗಿ ಪ್ರಶಂಸನೀಯಳಾಗಿ ಇದ್ದಳು. ವಿದ್ಯಾವ್ಯಸನವನ್ನು ವಿನಹ ಬೇರೊಂದು ವ್ಯಸನವನ್ನು ಅರಿಯದ ಈ ಸುಗುಣಶೀಲರಾದ ದಂಪತಿಗಳಿಗೆ ಇಂತಹ ಸಂಕಟವನ್ನು ಉಂಟು ಮಾಡಿದ ದೈವಗತಿಯು ವಿಚಿತ್ರವಾದುದು ಎಂದು ಹೇಳಬೇಕು.

ವ್ಯಾಧಿಯು ಸ್ವಲ್ಪ ವಾಸಿಯಾದರೂ, ಅಂಗವೈಕಲ್ಯವು ಉಂಟಾದುದರಿಂದ ಕೃಷ್ಣಾಜಿಯು ನಾಲ್ಕು ಜನರಲ್ಲಿ ತಿರುಗಾಡುವುದಕ್ಕೂ, ಉದ್ಯೋಗಮಾಡುವುದಕ್ಕೂ ಇಲ್ಲದೇ ಹೋಯಿತು. ಆಗ ಆ ದಂಪತಿಗಳು ಏಕಾಂತವಾಗಿ ಒಂದು ಹಳ್ಳಿಯಲ್ಲಿ ವಾಸಮಾಡಲು ನಿಶ್ಚಯಿಸಿಕೊಂಡು, ಅದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಕೊಂಡು, ಸಮೀಪದಲ್ಲಿ ಇದ್ದ ಒಂದು ಹಳ್ಳಿಗೆ ಹೋಗಿ ಅಲ್ಲಿ ಬಡವರಂತೆ ಒಕ್ಕಲಿದ್ದರು. ಆಗಲೂ ಕೃಷ್ಣಾಜಿಯು ಆಗಾಗ್ಗೆ ವ್ಯಾಧಿಪೀಡಿತನಾಗುತ್ತ ಇದ್ದನು. ಔಷಧಗಳಿಂದ ಪ್ರಯೋಜನವು ಉಂಟಾಗಲಿಲ್ಲ.

ಪತಿಯ ವ್ಯಾಧಿ ಸಮಯದಲ್ಲಿ ರಖಮಾಬಾಯಿಯು ತೋರಿದ ಧೈರ್ಯವೂ ಆಕೆಯು ಮಾಡಿದ ಪತಿ ಸೇವೆಯೂ ಸ್ತುತ್ಯವಾದವು. ಪತಿಗೆ ವಿಶೇಷ ದುಃಖವು ಉಂಟಾಗುವುದು ಎಂದು, ತನ್ನ ದುಃಖವನ್ನು ತಡೆದುಕೊಂಡು ಹಸನ್ಮುಖಿಯಾಗಿ ಪತಿಯ ಶುಶ್ರೂಷೆಯನ್ನು ಮಾಡುತ್ತ ಇದ್ದಳು. ಆಕೆಯು ಪತಿಗೆ ಅನೇಕ ಧೈರ್ಯವಚನಗಳನ್ನು ಹೇಳಿ, ಆತನ ದುಃಖ ಸಮಯದಲ್ಲಿ ಸಂತೋಷವನ್ನು ಉಂಟುಮಾಡುತ್ತ ಇದ್ದಳು. ತಾನು ವ್ಯಾಧಿಯಿಂದ ಪೀಡಿತನಾಗಿ ಇದ್ದ ಕಾಲದಲ್ಲಿ ರಖಮಾಬಾಯಿಯು ಸ್ವಲ್ಪವೂ ಬೇಸರಿಕೆ ಇಲ್ಲದೆ ಮನಃಪೂರ್ವಕವಾಗಿಮಾಡಿದ ಉಪಚಾರಗಳನ್ನು ನೆನೆಸಿಕೊಂಡು ಕೃಷ್ಣಾಜಿಯು ಆನಂದ ಬಾಷ್ಪಗಳನ್ನು ಸುರಿಸುತ್ತ ಇದ್ದನು!

ಈ ದಂಪತಿಗಳಿಗೆ ಹಳ್ಳಿಯಲ್ಲಿ ವಾಸಮಾಡುವುದು ಕಷ್ಟವಾಗಿ ತೋರಿತು. ಬಾಲ್ಯದಿಂದಲೂ ದೊಡ್ಡನಗರದಲ್ಲಿ ವಾಸಮಾಡಿದವರಾದಕಾರಣ ಅವರಿಗೆ

ಹಳ್ಳಿಯು ರಮ್ಯವಾಗಿ ಇರಲಿಲ್ಲ. ಅಲ್ಲಿ ಕಾಲವನ್ನು ಕಳೆಯುವುದು ದುಸ್ತರವಾಯಿತು. ಅವರ ಮಕ್ಕಳಿಗೆ ಬೇಕಾದ ಔಷಧಗಳು ಅಲ್ಲಿ ದೊರೆಯಲಿಲ್ಲ. ಈ ಅವಸ್ಥೆಯಲ್ಲಿ ಅವರ ಮಗಳೊಬ್ಬಳು ಔಷಧಾಭಾವದಿಂದ ಮೃತಳಾದಳು. ಅವರಿಗೆ ಅಲ್ಲಿ ಹೃದಯಶೋಕವು ಪ್ರಾಪ್ತವಾದುದರಿಂದ, ಅವರು ಆ ಹಳ್ಳಿಯಮೇಲೆ ಅಸೂಯೆಯುಳ್ಳವರಾಗಿ ಅಲೀಬಾಗ್ ಎಂಬ ಸಮುದ್ರತೀರ ಪಟ್ಟಣಕ್ಕೆ ಹೋದರು. ಇವರ ಅದೃಷ್ಟವಶದಿಂದ ಆಗ ಜಾರ್ಸ್ಟ್ ದೊರೆಯು ಕೆಲಸದನೆಮೇಲೆ ಆ ಊರಿನಲ್ಲಿಯೇ ಇದ್ದನು. ಆ ದೊರೆಗೆ ಕೃಷ್ಣಾಜಿಯಲ್ಲಿ ವಿಶೇಷ ಪ್ರೇಮವು ಇತ್ತು ಎಂದು ಹಿಂದೆಯೇ ತಿಳಿಸಿದೇನೆ. ದೊರೆಯು ಬೊಂಬಾಯಿನಲ್ಲಿ ಇದ್ದ ಸಮಯದಲ್ಲಿ, ಕೃಷ್ಣಾಜಿಯು ಎಲ್ಲಿಗೋ ಹೊರಟು ಹೋದನು ಎಂಬ ವೃತ್ತಾಂತವನ್ನು ಕೇಳಿ, ಆತನು ಹೋದ ಸ್ಥಳವನ್ನು ತಿಳಿಯಲು ಅನೇಕರನ್ನು ವಿಚಾರಿಸಿದನು. ಅಲೀಬಾಗಿಗೆ ಬಂದಅನಂತರವೂ ದೊರೆಯು ಕೃಷ್ಣಾಜಿಯ ವಿಷಯವಾಗಿ ಪ್ರಜೆಗಳನ್ನು ಕೇಳುತ್ತ ಇದ್ದನು. ಆದರೆ ಕೃಷ್ಣಾಜಿಯು ಇರುವ ಸ್ಥಳವು ಆ ದೊರೆಗೆ ತಿಳಿಯಲಿಲ್ಲ. ಒಂದುದಿವಸ ಕೃಷ್ಣಾಜಿಯು ದಾರಿಯಲ್ಲಿ ಹೋಗುತ್ತಿರಲು ದೊರೆಯ ಸೇವಕನುಒಬ್ಬನು ಆತನನ್ನು ಗುರುತಿಸಿ, ಆತನ ಬಳಿಗೆ ಹೋಗಿ, "ಅಯ್ಯಾ! ದೊರೆಯವರು ನಿಮ್ಮನ್ನು ಹುಡುಕುತ್ತ ಇದಾರೆ," ಎಂದು ಹೇಳಿದನು. ಆಗ ಕೃಷ್ಣಾಜಿಯು ಸಂತೋಷದೊಡನೆ ಹೋಗಿ ದೊರೆಯನ್ನು ನೋಡಿದನು. ದೊರೆಯು ಕೃಷ್ಣಾಜಿಗೆ ಸಂಭವಿಸಿದ ದುರವಸ್ಥೆಗೆ ಬಹಳ ವ್ಯಸನಪಟ್ಟು, ಪೂರ್ವದಲ್ಲಿ ಕೃಷ್ಣಾಜಿಯು ಕೆಲಸವನ್ನು ಬಿಟ್ಟಸಮಯದಲ್ಲಿ, ತಾನು ಮೇಲಿನ ಅಧಿಕಾರಿಗಳಿಗೆ ಕೃಷ್ಣಾಜಿಯ ವಿಷಯವನ್ನು ತಿಳಿಸಿ ತರಿಸಿದ ಬಹುಮಾನದ್ರವ್ಯವನ್ನು ಆತನಿಗೆ ಕೊಟ್ಟನು. ಸದಯಾಂತಃಕರಣನಾದ ಆ ಜಾನ್‌ಸ್ಟ್ ದೊರೆಯು ಈ ವಿಧವಾಗಿ ಧನಸಹಾಯವನ್ನು ಮಾಡಿ, ಮುಂದೆ ಜೀವನವು ನಡೆಯುವುದಕ್ಕಾಗಿ ಕೃಷ್ಣಾಜಿಗೆ ಒಂದು ಉಪಾಯವನ್ನು ಸಹ ಸೂಚಿಸಿದನು. ದೊರೆಯು ಕೃಷ್ಣಾಜಿಯೊಡನೆ, "ನೀನು ಈ ಪ್ರಕಾರ ವಿಕಲಾಂಗನಾಗಿ ಯಾವಕಾರ್ಯವನ್ನು ಮಾಡುವದಕ್ಕೂ ಶಕ್ತಿಇಲ್ಲದವನಾದೆ. ಆದಕಾರಣ ನೀನು ಕುಟುಂಬವನ್ನು ಪೋಷಿಸಿಕೊಳ್ಳುವುದು ಕಷ್ಟ. ನಿನ್ನ ಭಾರ್ಯೆಯು ವಿದ್ಯಾವತಿಯೂ, ಸೂಕ್ಷ್ಮಬುದ್ಧಿಯುಳ್ಳವಳೂ ಆಗಿ ಇರುವಾಗ ನೀವು ಸುಮ್ಮನೆ ಇರುವುದು ನನಗೆ ಸರಿಯಾಗಿ ತೋರುವುದಿಲ್ಲ. ಪ್ರಯತ್ನಿಸಿದರೆ ಆಕೆಗೆ ಎಲ್ಲಿ ಆದರೂ ಒಂದು ಉದ್ಯೋಗವು ದೊರೆಯಬಹುದು. ಈಗ ವಾಟಿಂಗ್ಸ್ ದೊರೆಯು ವಿದ್ಯಾಶಾಖಾಧಿಕಾರಿಯಾಗಿ ಇದಾನೆ. ಆತನನ್ನು ಹೋಗಿ ನೋಡಿದರೆ ಅವಶ್ಯಕವಾಗಿ ಲಾಭವು ಉಂಟಾಗುವುದು," ಎಂದು ಹೇಳಿ, ಆತನು ವಿದ್ಯಾಶಾಖಾಧಿಕಾರಿಗೆ ಒಂದು ಉತ್ತರವನ್ನು ಬರೆದು ಕೊಟ್ಟನು. ಇಂತಹ ಮಹೋಪಕಾರವನ್ನು ಮಾಡಿದುದಕ್ಕೆ ಕೃಷ್ಣಾಜಿಯು ದೊರೆಗೆ ಕೃತಜ್ಞತಾಪೂರ್ವಕವಾಗಿ ಸಲಾಮನ್ನುಮಾಡಿ ಮನೆಗೆ ಹೋದನು.

ಅಲ್ಲಿ ತನ್ನ ಬರುವಿಕೆಯನ್ನು ನಿರೀಕ್ಷಿಸುತ್ತಇದ್ದ . ರಖಮಾಬಾಯಿಗೆ ನಡೆದ ವೃತ್ತಾಂತವನ್ನು ಸವಿಸ್ತರವಾಗಿ ತಿಳಿಸಿ, ಜಾನ್‌ಸ್ಟ್ ದೊರೆಯು ಕೊಟ್ಟ ಪತ್ರವನ್ನು ತೋರಿಸಿದನು. ಈ ವಿಷಯವನ್ನು ಕೇಳಿ ರಖಮಾಬಾಯಿಯು ಮೊದಲು ಸ್ವಲ್ಪ ಸಂತೋಷಿಸಿದಳು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ, "ನಾನು ಸ್ವಲ್ಪ ಓದಿದವಳಾದರೂ ಎಂದೂ ಪರೀಕ್ಷೆಗಳಿಗೆ ಹೋಗಲಿಲ್ಲ. ಯಾರಾದರೂ ಪರೀಕ್ಷೆಮಾಡಿದರೆ ನನಗೆ ತೇರ್ಗಡೆಯಾಗುವುದೋ ಇಲ್ಲವೋ ತಿಳಿಯದು; ಒಂದುವೇಳೆ ಪರೀಕ್ಷೆಯಲ್ಲಿ ತೇರ್ಗಡೆಯಾದರೂ, ಯಾವುದಾದರೂ ಒಂದು ಉದ್ಯೋಗವು ದೊರೆತರೆ ಅದನ್ನು ನಿರ್ವಹಿಸಬಲ್ಲೆನೇ?" ಎಂದು ಆಕೆಗೆ ಚಿಂತೆಯು ಉಂಟಾಯಿತು. "ದೊರೆಯು ಹೇಳಿದಂತೆ ಈಗ ನಡೆಯದೇಇದ್ದರೆ ಬೇರೇವಿಧದಲ್ಲಿ ದ್ರವ್ಯವು ದೊರೆಯಲಾರದು. ಆದಕಾರಣ ಆತನ ಹೇಳಿಕೆಯಂತೆ ನಡೆಯುವುದೇ ಉತ್ತಮ," ಎಂದು ಸಹ ರಖಮಾಬಾಯಿಯು ಆಲೋಚಿಸುತ್ತ ಇದ್ದಳು. ಹೀಗೆಯೇ ಕೃಷ್ಣಾಜಿಯ ಮನಸ್ಸೂ ಆಂದೋಳನವಾಗಿ ಇತ್ತು. ಹೀಗೆ ಕೆಲವುದಿನಗಳು ಕಳೆಯಲು ಯಾವುದೋ ಒಂದು ಕೆಲಸದಮೇಲೇ ಪೂನಾ ಟ್ರೈನಿಂಗ್ ಸ್ಕೂಲು ಅಧ್ಯಾಪಿನಿಯರಿಗೆ ಅಧ್ಯಾಪನವಿಧಿಯನ್ನು ಕಲಿಸುವುದಕ್ಕಾಗಿ ನಿಯಮಿತಳಾದ ಪಾಠಶಾಲಾ ಶಿಕ್ಷಕಳು ಆ ಗ್ರಾಮಕ್ಕೆ ಬಂದಳು. ಆಕೆಯು ರಖಮಾಬಾಯಿಯನ್ನು ನೋಡಿ, ರಖಮಾಬಾಯಿಯ ಮನಸ್ಸಿನಲ್ಲಿಇದ್ದ ಸಂಶಯಗಳನ್ನು ತೊಲಗಿಸಿ ಅವರನ್ನೆಲ್ಲ ಪೂನೆಗೆ ಹೋಗುವಂತೆ ಹೇಳಿದಳು.

ಆಗ ಆ ದಂಪತಿಗಳು ಪೂನೆಗೆಹೋಗಿ, ವಾಟಿಂಗ್ ದೊರೆಯನ್ನು ನೋಡಿ ಜಾನ್‌ಸ್ಟ್ ದೊರೆಯು ಕೊಟ್ಟ ಉತ್ತರವನ್ನು ಆತನಿಗೆ ಕೊಟ್ಟರು. ಆ ಉತ್ತರದಲ್ಲಿ ಕೃಷ್ಣಾಜಿಯ ದುರವಸ್ಥೆಯನ್ನು ಸ್ಪಷ್ಟವಾಗಿ ತಿಳಿಸಿ, ಆತನಿಗೆ ಸಹಾಯವನ್ನು ಮಾಡಬೇಕು ಎಂದು ಬರೆದುಇತ್ತು. ವಾಟಿಂಗ್ ದೊರೆಯು ಸಹ ಕೃಷ್ಣಾಜಿಯ ಅವಸ್ಥೆಯನ್ನು ನೋಡಿ, 'ತನ್ನ ಕೈಯಲ್ಲಾದ ಸಹಾಯವನ್ನು ಮಾಡುವೆನು,' ಎಂದು ಹೇಳಿ ರಖಮಾಬಾಯಿಯನ್ನು ಕೆಲವು ಪ್ರಶ್ನೆಗಳನ್ನು ಕೇಳಿ, ಆಕೆಯು ಕೊಟ್ಟ ಉತ್ತರಗಳಿಂದ ಆಕೆಯು ವಿದ್ಯಾವತಿಎಂದು ತಿಳಿದುಕೊಂಡನು. ಆಮೇಲೆ ಆ ದೊರೆಯು, "ಮನೆಯಲ್ಲಿ ಓದಿಕೊಂಡು ಇಷ್ಟು ವಿದ್ಯಾವತಿಯಾದುದಕ್ಕೆ ಈಕೆಯೇ ಪ್ರಥಮೋದಾಹರಣೆಯು. ಆದರೆ ಈಕೆಯು ಇಲ್ಲಿನ ಫೀಮೆಲ್ ಟ್ರೈನಿಂಗ್ ಕಾಲೇಜಿನ ಲೇಡಿ ಸೂಪರಿಂಡೆಂಟನ್ನು (ಮುಖ್ಯೋಪಾಧ್ಯಾಯಿನಿಯನ್ನು) ನೋಡಿ, ಆಕೆಯಿಂದ ಒಂದು ಶಿಪಾರಸು ಪತ್ರವನ್ನು ಸಂಪಾದಿಸಿದರೆ ಬಹಳ ಉಪಯೋಗವಾಗಿ ಇರುವುದು," ಎಂದು ಹೇಳಿದನು.

ದೊರೆಯ ಅನುಮತಿಯಂತೆ ರಖಮಾಬಾಯಿಯು ಲೇಡಿ ಸೂಪರಿಂಡೆಂಟ್ ಮಿಸ್ ಎಮ್. ಮಿಚಲ್ ದೊರೆಸಾನಿಯನ್ನು ನೋಡಿ ಆಕೆಗೆ ತನ್ನ ಸ್ಥಿತಿಯನ್ನು ತಿಳಿಸಿದಳು. ಆ ದೊರೆಸಾನಿಯು ರಖಮಾಬಾಯಿಯ ಸ್ಥಿತಿಗೆ ಚಿಂತಿಸಿ, ಆಕೆ

ಯನ್ನು ಪರೀಕ್ಷಿಸಿ, ಆಕೆಯ ವಿದ್ಯಾಪ್ರವೀಣತೆಗೆ ಸಂತೋಷಿಸಿ, "ನೀನು ಸಂಪೂರ್ಣ ವಿದ್ಯಾವತಿಯು ಎಂಬುವುದಕ್ಕೆ ಸಂದೇಹವಿಲ್ಲ. ಆದರೆ ಇಲ್ಲಿನ ಕಾಲೇಜಿನ ನಿಯಮಾನುಸಾರವಾಗಿ ನೀನು ಈ ಕಾಲೇಜಿನಲ್ಲಿ ಕೆಲವುದಿವಸಗಳಾದರೂ ಇರದೇ ಇದ್ದರೆ, ಯೋಗ್ಯತಾ ಪತ್ರಿಕೆಯನ್ನು ಕೊಡುವುದಕ್ಕೆ ಆಗುವುದಿಲ್ಲ," ಎಂದು ಹೇಳಿದಳು. ರಖಮಾಬಾಯಿಯು ಆ ಪಾಠಶಾಲೆಯಲ್ಲಿ ಕೆಲವುದಿವಸಗಳು ಇರಲು ಸಮ್ಮತಿಸಿದಳು. ಆದರೆ ಕಾಲೇಜಿನಲ್ಲಿ ಆಕೆಯು ಕಲಿತುಕೊಳ್ಳಬೇಕಾದ ಹೊಸವಿಷಯಗಳಾವವೂ ಇಲ್ಲದುದರಿಂದ, ಆಕೆಯು ಕೆಲವು ದಿವಸಗಳನ್ನು ವ್ಯರ್ಥವಾಗಿ ಕಳೆಯಬೇಕಾಯಿತು.

ಈ ಹೊಸ ಮಾರ್ಪಿನಿಂದ ಆ ದಂಪತಿಗಳ ಮನಸ್ಸುಗಳು ಅಸ್ಥಿರವಾಗಿ ಅವರು ಹೇಗೋ ಕಾಲವನ್ನು ಕಳೆಯುತ್ತ ಇದ್ದರು. ಅವರ ಕುಟುಂಬಕ್ಕೆ ಆ ನೀರು ಸರಿಬೀಳದೆ ಅವರ ಶರೀರಗಳು ಯಾವಾಗಲೂ ಅಸ್ವಸ್ಥಗಳಾಗಿ ಇರುತ್ತ ಇದ್ದವು. ಇಷ್ಟರಲ್ಲಿ ರಖಮಾಬಾಯಿಯು ಪ್ರಸವನಿಮಿತ್ತವಾಗಿ ಇನ್ನೆಲ್ಲಿಗಾದರೂ ಹೋಗಬೇಕು ಎಂದು ಆಲೋಚಿಸುತ್ತ ಇರಲು, ಬೊಂಬಾಯಿಯಿಂದ, "ಜ್ಯೂಮತ ಸ್ಥರ ಪುತ್ರೀ ಪಾಠಶಾಲೆಗೆ ಮುಖ್ಯೋಪಾಧ್ಯಾಯಿನಿಯು ಬೇಕಾಗಿದೆ ಆದುದರಿಂದ ನೀವು ಬರಬೇಕು," ಎಂದು ಆ ಪಾಠಶಾಲೆಯ ಅಧಿಕಾರಿಗಳು ರಖಮಾಬಾಯಿಗೆ ಬರೆದರು. ಮಿಸ್ ಮಿಚಲ್ ದೊರೆಸಾನಿಯು ಸಹ ಆ ಕೆಲಸಕ್ಕೆ ಒಪ್ಪಿಕೊಳ್ಳುವಂತೆ ರಖಮಾಬಾಯಿಯನ್ನು ಪ್ರೋತ್ಸಾಹಿಸಿದಳು. ಪೂನಾ ಪಾಠಶಾಲೆಯಲ್ಲಿ ಪರೀಕ್ಷೆಯು ನಡೆಯಲು ಇನ್ನೂ ಕೆಲವು ತಿಂಗಳು ಅವಕಾಶವು ಇದ್ದುದರಿಂದ, ರಖಮಾಬಾಯಿಯು ಆ ಕೆಲಸಕ್ಕೆ ಸಮ್ಮತಿಸಿ, ಪೂನಾ ಪಾಠಶಾಲೆಯಲ್ಲಿ ಒಂದು ವರ್ಷಕಾಲ ವಿಶ್ರಾಂತಿಯನ್ನು ಪಡೆದು, ಮುಖ್ಯೋಪಾಧ್ಯಾಯಿನಿಯಾಗಿ ಬೊಂಬಾಯಿಗೆ ಹೋದಳು. ರಖಮಾಬಾಯಿಯು ಹೊರಡುವ ಸಮಯದಲ್ಲಿ ಮಿಸ್ ಮಿಚಲ್ ದೊರೆಸಾನಿಯು ಆಕೆಗೆ ಬರೆದುಕೊಟ್ಟ ಯೋಗ್ಯತಾಪತ್ರಿಕೆಯ ಸಾರಾಂಶವನ್ನು ಕೆಳಗೆ ಬರೆದಿದೇನೆ:—

ಪೂನಾ, ೨೭ ನೆಯ ಡಿಸಂಬರ್ ೧೮೮೧.

ಈ ಪತ್ರಿಕಾವಾಹಿನಿಯಾದ ರಖಮಾಬಾಯಿ ಕೇಳೋಕರ್ ಪೂನಾಪಟ್ಟಣದಲ್ಲಿ ಇರುವ ಟ್ರೈನಿಂಗ್‌ಕಾಲೇಜಿನಲ್ಲಿ ಕೆಲವು ದಿವಸಗಳು ಅಧ್ಯಯನವನ್ನು ಮಾಡಿದಳು. ಈ ಸ್ವಲ್ಪಕಾಲದಲ್ಲಿಯೇ ಆಕೆಯು ಕಲಿಯಬೇಕಾದ ವಿಷಯಗಳನ್ನು ಸಂಪೂರ್ಣವಾಗಿ ಕಲಿತುಕೊಂಡಳು ಎಂದು ಹೇಳಬಹುದು. ಪೂನಾ ನಗರದ ವಾಯ್ವುಗುಣವು ಆಕೆಗೆ ಅಹಿತವಾಗಿರುವುದರಿಂದ ವಿದ್ಯಾರ್ಥಿವೇತನವು ಇಲ್ಲದ ಪದ್ಧತಿಯಮೇಲೆ ನಾನು ಆಕೆಗೆ ಒಂದು ವರ್ಷಕಾಲ ವಿಶ್ರಾಂತಿಯನ್ನು ಕೊಟ್ಟೆನು. ಆಕೆಯು ಸುಗುಣಸಂಪನ್ನೆಯೂ, ಶ್ರೇಷ್ಠವಾದ ಆಚಾರಪರಾ

ಯಣೆಯೂ, ಜ್ಞಾನಾರ್ಜನೆಯಲ್ಲಿ ಅತ್ಯಂತಾಸಕ್ತಿಯುಳ್ಳವಳೂ ಆಗಿದಾಳೆ. ಆಕೆಯು ಸರ್ವೋತ್ಕೃಷ್ಟಳಾದ ಉಪಾಧ್ಯಾಯಿನಿಯು ಆಗುವಳು ಎಂದು ನನ್ನ ಅಭಿಪ್ರಾಯವು.

ಎಮ್. ಆರ್. ಮಿಚಲ್,

"ಲೇಡೀ ಸೂಪರಿಂಟಿಂಡೆಂಟ್, ಫೀಮೆಲ್ ಟ್ರೈನಿಂಗ್ ಕಾಲೇಜ್, ಪೂನಾ."

ವಿದ್ಯಾನಿಧಿ ಎಂದು ಹೆಸರುಪಡೆದ ಮಿಚಲ್ ದೊರೆಸಾನಿಯಿಂದ ಇಂತಹ ಸ್ತೋತ್ರಪತ್ರಿಕೆಯನ್ನು ಪಡೆದ ರಖಮಾಬಾಯಿಯ ಪರಿಶ್ರಮವನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ. ಮನೆಯ ಕೆಲಸಗಳನ್ನು ಪತಿಯಿಂದ ಮಾಡಿಸಿಕೊಂಡು ಈಕೆಯು ಓದಿದಳು ಎಂದು ಯಾರಾದರೂ ಎಣಿಸಬಹುದು. ಆದರೆ ರಖಮಾಬಾಯಿಯು ಒಂದು ಕೆಲಸವನ್ನೂ ಪತಿಯಿಂದ ಮಾಡಿಸಿಕೊಂಡವಳಲ್ಲ. ಮನೆಯಕೆಲಸ, ಮಕ್ಕಳ ಕೆಲಸಗಳನ್ನು ಸ್ವಯಮಾಗಿ ಮಾಡಿಕೊಂಡು, ಉಳಿದ ಕಾಲದಲ್ಲಿಯೇ ಅಭ್ಯಾಸವನ್ನು ಮಾಡಿ ಇಷ್ಟು ವಿದ್ಯಾವತಿಯು ಆದಳು. ವಿದ್ಯಾಭ್ಯಾಸವನ್ನು ಮಾಡುತ್ತಿದೇನೆ ಎಂದು ಒಂದು ದಿವಸವಾದರೂ ಗೃಹಕೃತ್ಯಗಳಲ್ಲಿ ಅಶ್ರದ್ಧೆಯನ್ನು ತೋರಿಸುತ್ತಿರಲಿಲ್ಲ. ಇದರಿಂದ ರಖಮಾಬಾಯಿಯು ತನ್ನ ಆಯುಷ್ಯದಲ್ಲಿ ಒಂದು ಗಳಿಗೆಯನ್ನಾದರೂ ವ್ಯರ್ಥಮಾಡದೆ, ಪ್ರತಿನಿಮಿಷವನ್ನು ಸತ್ಕಾರ್ಯದಲ್ಲಿಯೇ ಕಳೆದಳೆಂದು ತಿಳಿಯಬರುತ್ತದೆ.

ಬೊಂಬಾಯಿಯಲ್ಲಿ ಇರುವ 'ಆಂಗ್ಲೋ ಜ್ಯೂಸ್ಸ್ ಅಸೋಸಿಯೇಷನ್' ನಿನ ಬಾಲಿಕಾಪಾಠಶಾಲೆಯು ಅತಿವಿಶಾಲವಾದುದು. ಅದರಲ್ಲಿ ಮುನ್ನೂರು ಮಂದಿಗಿಂತಲು ಅಧಿಕರಾದ ವಿದ್ಯಾರ್ಥಿನಿಯರು ಓದಿಕೊಳ್ಳುತ್ತ ಇದ್ದರು. ಅವರಿಗೆ ಪಾಠಗಳನ್ನು ಹೇಳುವುದಕ್ಕೆ ಮೂವರು ಉಪಾಧ್ಯಾಯಿನಿಯರು ಇದ್ದರು. ಬಾಲಿಕೆಯರಿಗೆ ಓದುಬರಹವನ್ನು ಕಲಿಸುವ ವಿಷಯದಲ್ಲಿ ಇಷ್ಟುವರೆಗು ರಖಮಾಬಾಯಿಗೆ ಅನುಭವವು ಇರಲಿಲ್ಲ. ಆದರೂ ಆಕೆಯು ಆ ಕೆಲಸವನ್ನು ಶ್ರದ್ಧೆಯಿಂದ ನೆರವೇರಿಸಿ ಅಸೋಸಿಯೇಷನ್ನಿನವರಿಂದ ಅತ್ಯತ್ತಮವಾದ ಪ್ರಶಸ್ತಪತ್ರಿಕೆಯನ್ನು ಪಡೆದಳು. ಆಕೆಯು ಅಲ್ಲಿದ್ದ ಸ್ವಲ್ಪಕಾಲದಲ್ಲಿಯೇ ತನ್ನ ಸದ್ಗುಣಗಳಿಂದ ಸಕಲ ಜನರಿಗು ಪೂಜ್ಯಳಾದಳು. ಇದರಿಂದ ಈಕೆಯು ಆ ಪಾಠಶಾಲೆಯನ್ನು ಬಿಡುವಸಮಯದಲ್ಲಿ ಜ್ಯೂಯಿಷ್ ಕಮಿಟಿಯವರು ಆಕೆಯ ವಿಯೋಗಕ್ಕೆ ಬಹಳ ಚಿಂತಿಸಿದರು.

ರಖಮಾಬಾಯಿಯು ಬೊಂಬಾಯಿನಗರದಲ್ಲಿ ಇದ್ದ ಕಾಲದಲ್ಲಿಯೇ ಪ್ರಸವಕಾಲವು ಕಳೆದು, ಬಾಣಂತಿತನವು ಪೂರ್ತಿಯಾಗಿ, ಆಕೆಯು ಪೂನಾ ಟ್ರೈನಿಂಗ್ ಕಾಲೇಜಿನ ಅಂತ್ಯಪರೀಕ್ಷೆಗೆ ಬಂದು, ಅದರಲ್ಲಿ ಉತ್ತಮೋತ್ತಮವಾಗಿ

ಕೃತಾರ್ಥಳಾದಳು. ಈ ಕೆಳಗೆ ಬರೆದಿರುವ ಯೋಗ್ಯತಾಪತ್ರಿಕೆಯಿಂದ ಆಕಯು ವಿದ್ಯಾತಿಶಯವು ವ್ಯಕ್ತವಾಗುವುದು :—

ಫೀಮೇಲ್ ಟ್ರೈನಿಂಗ್ ಕಾಲೇಜ್, ಪೂನಾ, ೧೬ ಮಾರ್ಚ್ಚಿ, ೧೮೮೩.

ಇದರಿಂದ ತಿಳಿಯಪಡಿಸುವುದು ಏನೆಂದರೆ, ಸೌ॥ ರಖಮಾಬಾಯಿ ಕೇಳೋಕರ್, ಪೂನಾ ಫೀಮೇಲ್ ಟ್ರೈನಿಂಗ್ ಕಾಲೇಜಿನ ಉನ್ನತ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಅತ್ಯುತ್ತಮವಾಗಿ ತೇರ್ಗಡೆಯನ್ನು ಪಡೆದಳು. ಮತ್ತು ಈಕೆಯು ಸುಗುಣವತಿಯೂ, ಅಪ್ರತಿಮಸದಾಚರಣಪರಾಯಣೆಯೂ, ಉತ್ತಮ ಉಪಾಧ್ಯಾಯಿನಿಯೂ ಆಗಿದಾಳೆ. ಈಕೆಯು ಈಗ ಕಾಲೇಜನ್ನು ಬಿಟ್ಟು ಹೋಗುತ್ತಿರುವಳಾದಕಾರಣ, ಈ ಕಾಲೇಜಿಗೆ ಸಂಬಂಧಪಟ್ಟವರೆಲ್ಲರು ಆಕೆಯನ್ನು ಅಭಿನಂದಿಸುತ್ತಿದಾರೆ.

ಎಮ್. ಆರ್. ಮಿಚಲ್.

"ಲೇಡಿ ಸೂಪರಿಂಟಿಂಡೆಂಟ್, ಫೀಮೇಲ್ ಟ್ರೈನಿಂಗ್ ಕಾಲೇಜ್, ಪೂನಾ."

ಈ ಯೋಗ್ಯತಾ ಪತ್ರಿಕೆಯಲ್ಲಿಯೂ, ಹಿಂದೆಬರೆದ ಯೋಗ್ಯತಾಪತ್ರಿಕೆಯಲ್ಲಿಯೂ ಮಿಚಲ್ ದೊರೆಸಾನಿಯು ರಖಮಾಬಾಯಿಯ ವಿದ್ಯಾವೈಭವವನ್ನು ಮಾತ್ರ ಹೊಗಳದೆ ಆಕೆಯ ಸುಗುಣಗಳನ್ನು ಸಹ ಹೊಗಳಿದಾಳೆ. ಇದರಿಂದ 'ವಿದ್ಯಾದದಾತಿವಿನಯಂ' ಎಂಬ ವಚನವು ಈಕೆಯಲ್ಲಿ ಸಾರ್ಥಕವಾಯಿತು ಎನ್ನುವುದಕ್ಕೆ ಸಂದೇಹವಿಲ್ಲ.

ಪರೀಕ್ಷೆಯು ಮುಗಿದಮೇಲೆ ಸ್ವಲ್ಪಕಾಲ ವಿಶ್ರಾಂತಿಯನ್ನು ತೆಗೆದು ಕೊಳ್ಳಬೇಕೆಂದು ರಖಮಾಬಾಯಿಯು ಎಣಿಸಿದ್ದಳು. ಆದರೆ ಇಷ್ಟರೊಳಗೆ, ತಮಗೆ ಒಬ್ಬ ಉತ್ತಮೋತ್ತಮೊಪಾಧ್ಯಾಯಿನಿಯು ಬೇಕಾಗಿದೆ ಎಂದು ಕೋಲಾಪೂರು ದರ್ಬಾರಿನವರು ಇಂಗ್ಲೀಷ್ ಸರ್ಕಾರಿನವರನ್ನು ಕೇಳಿದರು. ಅದರಮೇಲೆ ಬೊಂಬಾಯಿ ಗವರ್ನಮೆಂಟಿನವರು ಸೌ॥ ರಖಮಾಬಾಯಿಯನ್ನು ತಮ್ಮಕಡೆಯಿಂದ ಕೋಲಾಪೂರು ಸಂಸ್ಥಾನಕ್ಕೆ ಕಳುಹಿಸಲು ನಿಶ್ಚಯಿಸಿದರು. ಆದರೆ ಪ್ರಥಮದಲ್ಲಿ ಬಹುದೂರದಲ್ಲಿಇರುವ ಕೊಲಾಪುರಕ್ಕೆ ಹೋಗಲು ರಖಮಾಬಾಯಿಯು ಸಂಶಯಿಸಿದಳು. ಆವೇಲೆ ಮಿಚಲ್ ದೊರೆಸಾನಿಯೇ ಮೊದಲಾದವರು ಆಕೆಗೆ ಧೈರ್ಯವನ್ನು ಉಂಟುಮಾಡಿ ಕೋಲಾಪುರವು ಸಂಸ್ಥಾನವಾದಕಾರಣ ಅಚಿರಕಾಲದಲ್ಲಿಯೇ ನಿನಗೆ ವೇತನವು ಅಭಿವೃದ್ಧಿಯಾಗಿ ಲಾಭವು ಉಂಟಾಗಬಹುದೆಂದು ಬೋಧಿಸಿದರು. ಅನಂತರ ರಖಮಾಬಾಯಿಯು ೫೫ ರೂಪಾಯಿಗಳ ವೇತನವುಳ್ಳ ಕೆಲಸದಮೇಲೆ ಕೋಲಾಪುರಕ್ಕೆ ಹೊರಟಳು.

ಕೋಲಾಪುರಕ್ಕೆ ಹೋದಮೇಲೆ ರಖಮಾಬಾಯಿಯನ್ನು ಮಾತೃ ಶ್ರೀ ಆನಂದೀಬಾಯಿರಾಣಿಯವರಿಗೆ ವಿದ್ಯೆಯನ್ನು ಕಲಿಸುವುದಕ್ಕೆ ನಿಯಮಿಸಿದರು. ಆದರೆ ಕೆಲವು ದಿವಸಗಳಲ್ಲಿಯೇ ಮಾತೃ ಶ್ರೀಯವರ ಪತಿಯಾದ ನಾಲ್ಕನೆಯ ಶಿವಾಜಿಮಹಾರಾಜರು ಸ್ವರ್ಗಸ್ಥರಾದುದರಿಂದ, ಆಕೆಗೆ ವಿಶೇಷ ದುಃಖವೂ ಔದಾಸೀನ್ಯವೂ ಉಂಟಾಗಿ ಆಕೆಯು ವಿದ್ಯಾಧ್ಯಯನವನ್ನು ಬಿಟ್ಟಳು. ಆಗ ರಖಮಾಬಾಯಿಯನ್ನು ಫೀಮೆಲ್ ಟ್ರೈನಿಂಗ್ ಪಾಠಶಾಲೆಗೆ ಅಧಿಕಾರಿಣಿಯಾದ ಮಿಸ್ ಲಿಟಿಲ್ ಸೂಪರಿಂಟೆಂಡೆಂಟಿನ ಕೈಕೆಳಗೆ, ಅದೇ ಪಾಠಶಾಲೆಯಲ್ಲಿ ಪ್ರಧಾನೋಪಾಧ್ಯಾಯಿನಿಯಾಗಿ ನಿಯಮಿಸಿದರು ಅಲ್ಲಿ ಈಕೆಯ ಕೈಕೆಳಗೆ ಕೆಲಸಮಾಡುವವರು ಯಾರೂಇಲ್ಲದಿದ್ದರೂ ಈಕೆಯು ಒಬ್ಬಳೇ ಕೆಲಸವನ್ನೆಲ್ಲ ನಿರ್ವಹಿಸುತ್ತಿದ್ದಳು.

೧೮೮೩ ವರ್ಷದಲ್ಲಿ ರಖಮಾಬಾಯಿಯು ಕೋಲಾಪುರಕ್ಕೆ ಬಂದಸಮಯದಲ್ಲಿ ಇವರ ಕುಟುಂಬಕ್ಕೆ ಅನೇಕ ಕಷ್ಟಗಳು ಸಂಭವಿಸಿದುವು. ವಾಸಮಾಡಲನುಕೂಲವಾದ ಮನೆಯು ಸಹ ದೊರೆಯಲಿಲ್ಲ. ಆದರೆ ಆಗ ಪೊಲಿಟಿಕಲ್ ಏಜಂಟನಾಗಿದ್ದ ಕರ್ನಲ್ ರೀವಸ್ ದೊರೆಯು, ಇವರ ಕಷ್ಟಗಳನ್ನು ನೋಡಿ ಕರುಣೆಸಿ ಪಾಠಶಾಲೆಗೆ ಸಮೀಪದಲ್ಲಿದ್ದ ಒಂದು ಸರ್ಕಾರೀ ಬಂಗಲೆಯನ್ನು ರಖಮಾಬಾಯಿಗೆ ಕೊಡಿಸಿದನು. ಆಗ ಅಲ್ಲಿದ್ದ ಬರ್ವೇದಿವಾನರು ಸಹ ಇವರಿಗೆ ವಿಶೇಷ ಸಹಾಯವನ್ನು ಮಾಡಿದರು. ರಖಮಾಬಾಯಿಯ ಸಚ್ಛೀಲವನ್ನುನೋಡಿ ಎಲ್ಲರೂ ಆಕೆಯನ್ನು ಬಹೂಕರಿಸಿ, ಸತ್ಕರಿಸುತ್ತಿದ್ದರು.

ರಖಮಾಬಾಯಿಯ ಪ್ರವರ್ತನೆಯು ಅತ್ಯಂತಸರಳವಾದುದು. ಮಾತಿನಲ್ಲಿಯೂ, ನಡತೆಯಲ್ಲಿಯೂ ಈಕೆಯು ಕಪಟವೆಂಬುದನ್ನು ಅರಿಯಳು. ಈಕೆಯು ಅಧಿಕಪ್ರಸಂಗಕ್ಕೆ ಹೋಗದೆ ಸದಾ ತನ್ನ ಕರ್ತವ್ಯದಲ್ಲಿಯೇ ಚಿತ್ತವುಳ್ಳವಳಾಗಿ ಇರುವಳು. ಈಕೆಯನ್ನು ಪ್ರಥಮದಲ್ಲಿ ನೋಡಿದವರು ಈಕೆಯ ಸರಳತೆಯನ್ನು ನೋಡಿ, ಈಕೆಯು ಯಾರೋ ಸಾಧಾರಣ ಸ್ತ್ರೀ ಎಂದು ಭಾವಿಸುವರೇ ಹೊರತು ಇಷ್ಟು ವಿದ್ಯಾವತಿಯು ಎಂದು ತಿಳಿಯಲಾರರು. ಪ್ರಥಮದಲ್ಲಿ ಲಿಟಿಲ್ ದೊರೆಸಾನಿಗೆ ಸಹ ಈಕೆಯ ಗುಣಗಳು ತಿಳಿಯಲಿಲ್ಲ. ಕ್ರಮಕ್ರಮವಾಗಿ ಆ ಲಿಟಿಲ್ ದೊರೆಸಾನಿಯು ರಖಮಾಬಾಯಿಯ ಸುಗುಣಗಳನ್ನು ತಿಳಿದುಕೊಂಡು ಆಕೆಯಲ್ಲಿ ವಿಶೇಷ ಪ್ರೀತಿಯುಳ್ಳವಳಾಗಿಇದ್ದಳು. ಈ ದೊರೆಸಾನಿಯು ಇಂಗ್ಲೆಂಡಿಗೆ ಹೋಗುವಾಗ ರಖಮಾಬಾಯಿಯು ಅಪೇಕ್ಷಿಸದೇ ಇದ್ದರೂ ಒಂದು ಯೋಗ್ಯತಾ ಪತ್ರಿಕೆಯನ್ನು ಬರೆದು ಕೊಟ್ಟಳು. ಆ ಪತ್ರಿಕೆಯನ್ನು ಈ ಚರಿತ್ರೆಯ ಕಡೆಯ ಭಾಗದಲ್ಲಿ ಬರೆದು ಇದೇನೆ. ಈ ಪತ್ರಿಕೆಯನ್ನು ಓದಿದರೆ ಲಿಟಿಲ್ ದೊರೆಸಾನಿಗೆ ರಖಮಾಬಾಯಿಯಲ್ಲಿ ಇದ್ದ ಗೌರವವು ತಿಳಿಯುತ್ತದೆ.

ಕೆಲವು ದಿವಸಗಳು ಕಳೆದಮೇಲೆ ಮಿಚಲ್ ದೊರೆಸಾನಿಯು ವಿವಾಹ ಮಾಡಿಕೊಳ್ಳುವ ಉದ್ದೇಶದಿಂದ ತಮ್ಮ ದೇಶಕ್ಕೆ ಹೋಗಲು ಎಣಿಸಿ, ತನ್ನ ಉದ್ಯೋಗವನ್ನು ಬಿಟ್ಟುಬಿಟ್ಟಳು. ೧೮೯೫ ನೆ ಇಸವಿ ಆಗಸ್ಟ ತಿಂಗಳನಲ್ಲಿ ಆಕೆಯು ಇಂಗ್ಲೆಂಡಿಗೆ ಹೊರಟುಹೋದಳು. ಕೋಲಾಪುರ ಸಂಸ್ಥಾನದಲ್ಲಿ ಇರುವ ಎಲ್ಲ ಪಾಠಶಾಲೆಗಳಿಗೂ ಲಿಟಲ್ ದೊರೆಸಾನಿಯೇ ಅಧಿಕಾರಿಣಿಯಾಗಿ ಇದ್ದಳು. ಆದಕಾರಣ ಆಕೆಯು ನೋಡುತ್ತಿದ್ದ ಆ ದೊಡ್ಡ ಅಧಿಕಾರವನ್ನು ಯಾರಿಗೆ ಕೊಡಬೇಕು ಎಂದು ಸಂಸ್ಥಾನಾಧೀಶ್ವರನು ಆಲೋಚಿಸುತ್ತ ಇದ್ದನು. ಮಹಾರಾಜನೂ, ಸಂಸ್ಥಾನದಲ್ಲಿ ಇದ್ದ ಅನೇಕ ದೊಡ್ಡ ಮನುಷ್ಯರೂ ಆಂಗ್ಲೇಯ ಸ್ತ್ರೀಯರು ಮಾತ್ರವೇ ಈ ಕೆಲಸವನ್ನು ನಿರ್ವಹಿಸಬಲ್ಲರೇ ಹೊರತು ಇತರರು ಈ ಕೆಲಸವನ್ನು ಮಾಡಲಾರರು ಎಂದು ತಿಳಿದುಇದ್ದರು. ಆದರೆ ಈ ಕೆಲಸವನ್ನೂ, ಇದಕ್ಕಿಂತಲೂ ಘನವಾದ ಕೆಲಸಗಳನ್ನೂ ಮಾಡುವ ಸಾಮರ್ಥ್ಯವು ರಖಮಾಬಾಯಿಯಲ್ಲಿ ಇದೆ ಎಂಬುದನ್ನು ಕೋಲಾಪುರದ ಅನೇಕ ವಿದ್ವಾಂಸರು ತಿಳಿದು ಇದ್ದರು. ಆದಕಾರಣ ಆ ಪಟ್ಟಣದ ವಿದ್ಯಾವಿಲಾಸ, ಜ್ಞಾನಸಾಗರ, ಮೊದಲಾದ ವೃತ್ತಾಂತಪತ್ರಿಕೆಗಳು, "ರಖಮಾಬಾಯಿಗೆ ಹೊರತು ಇನ್ಯಾರಿಗೂ ಸೂಪರಿಂಟೆಂಡೆಂಟ್ ಕೆಲಸವನ್ನು ಕೊಡಕೂಡದು," ಎಂದು ಅಧಿಕಾರಿಗಳಿಗೂ, ಮಹಾರಾಜನಿಗೂ ತಿಳಿಸಿದವು. ಆಗ ಮಹಾರಾಜನೂ, ಮಂತ್ರಿಯೂ, ಸಭಿಕರೂ ಆಮೋದಿಸಿ ಆ ಉದ್ಯೋಗವನ್ನು ರಖಮಾಬಾಯಿಗೆ ಕೊಟ್ಟರು. ಈ ಉದ್ಯೋಗವು ಈ ಪತಿವ್ರತಾತಿಲಕಕ್ಕೆ ಒಂದು ಅಮೂಲ್ಯ ಭೂಷಣವು ಎಂದು ಹೇಳಬಹುದು. ಮಿಸ್ ಲಿಟಲ್ ದೊರೆಸಾನಿಗೆ ನಾಲ್ಕು ನೂರು ರೂಪಾಯಿಗಳ ವೇತನವನ್ನೂ, ದೊಡ್ಡ ಬಂಗಲೆಯನ್ನೂ, ಎರಡು ಕುದುರೆಗಳ ಗಾಡಿಯನ್ನೂ, ಬೇಕಾದ ಚಾಕರರನ್ನೂ ಸಂಸ್ಥಾನದವರು ಕೊಡುತ್ತಿದ್ದರು. ರಖಮಾಬಾಯಿಯು ಭಾರತಮಹಿಳೆಯಾದ ಕಾರಣ ಆಕೆಗೆ ನೂರು ರೂಪಾಯಿಗಳ ವೇತನವನ್ನು ಏರ್ಪಾಟುಮಾಡಿದರು.

ರಖಮಾಬಾಯಿಗೆ ದೊರೆತ ಉದ್ಯೋಗವು ಘನವಾದುದೂ, ಗೌರವಾಸ್ಪದವಾದುದೂ ಆದರೂ ಆಕೆಯು ಈ ಅಧಿಕಾರ ಪ್ರಾಪ್ತಿಯಿಂದ ಗರ್ವಿತಳಾಗಲಿಲ್ಲ. ತಾನು ಶ್ರೇಷ್ಠಳಾದಕಾರಣ ಇತರರು ತನ್ನನ್ನು ಸನ್ಮಾನಿಸಬೇಕು ಎಂಬ ಅಭಿಮಾನವು ಈಕೆಗೆ ಇರಲಿಲ್ಲ. ಇಂಗ್ಲೀಷ್ ವೇಷವನ್ನೂ, ಬೂಟ್ಸ್, ಸಾಕ್ಸ್‌ಗಳನ್ನೂ ಈಕೆಯು ಧರಿಸದೆ, ಯಾವಾಗಲೂ ಭಾರತಗೃಹಿಣಿಗೆ ತಕ್ಕ ಬಟ್ಟೆಗಳನ್ನೇ ಉಡುತ್ತಿದ್ದಳು. ಪಾಠಶಾಲೆಯನ್ನು ನೋಡಲು ಯಾರಾದರೂ ಪುರುಷರು ಬಂದರೆ, ರಖಮಾಬಾಯಿಯು ತನ್ನ ಕುರ್ಚಿಯಿಂದ ಎದ್ದು ನಿಲ್ಲುವಳು. ಸ್ತ್ರೀ ಸ್ವಾಭಾವಿಕವಾದ ಮರ್ಯಾದೆಯನ್ನು ತ್ಯಜಿಸಿ ಈಕೆಯು ಪುರುಷರೊಡನೆ ಮಾತನಾಡುತ್ತ ಇರಲಿಲ್ಲ.

ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸಿದರೆ, ಅವರಿಗೆ ಸ್ವಾಭಾವಿಕಗಳಾದ ವಿನಯಾದಿ ಸದ್ಗುಣಗಳು ನಶಿಸಿ, ಡಂಭ, ಅವಿಧೇಯತೆ ಮೊದಲಾದ ದುರ್ಗುಣಗಳು ಉಂಟಾಗುವವು ಎಂದು ಕೆಲವರು ಹೇಳುತ್ತಾರೆ. ಆದರೆ ಈಮಾತುಗಳು ಅನೃತಗಳು ಎಂದು ರಖಮಾಬಾಯಿಯ ಚರಿತ್ರೆಯಿಂದ ತಿಳಿಯಬಹುದು.

ಗರ್ವವೆಂಬ ದುರ್ಗುಣವು ವಿದ್ಯೆ ಎಂಬ ಸದ್ವಸ್ತುವಿನಲ್ಲಿ ಹೇಗೆ ಹುಟ್ಟುವುದೋ ತಿಳಿಯದು. ಗರ್ವವೆಂಬುದು ಒಂದು ಸ್ವತಂತ್ರವಾದ ದುರ್ಗುಣವು. ಅದು ವಿದ್ಯಾವಂತರಲ್ಲಿಯೂ, ವಿದ್ಯಾಹೀನರಲ್ಲಿಯೂ ಇರುತ್ತದೆ. ವಿದ್ಯಾಧಿಕರಾದ ಪುರುಷರಾಗಲಿ, ಸ್ತ್ರೀಯರಾಗಲಿ ವಿಶೇಷ ಗರ್ವವುಳ್ಳವರಾಗಿದ್ದರೆ, ಅದು ಅವರ ಸ್ವಭಾವದೋಷವೋ, ಸಾಂಗತ್ಯದೋಷವೋ ಆಗಿ ಇರುವುದೇ ಹೊರತು, ಅದು ವಿದ್ಯಾದೋಷವಲ್ಲ. ಹೀಗೆ ಗರ್ವಿಷ್ಠರಾಗಲು ಇನ್ನೊಂದು ಕಾರಣವು ಉಂಟು. ಸ್ವಲ್ಪ ಸೂಕ್ಷ್ಮವಾಗಿ ವಿಚಾರಮಾಡಿದರೆ ಆ ಕಾರಣವು ತಿಳಿಯುವುದು. ತಮಗೆ ಎರಡು ಕೈಗಳೂ, ಎರಡು ಕಾಲುಗಳೂ ಇರುವವು ಎಂದು ಗರ್ವಪಟ್ಟ ಮನುಷ್ಯರನ್ನು ಯಾವಾಗಲಾದರೂ ನಾವು ನೋಡಿದೇವೆಯೇ? ಇಲ್ಲ. ಇದಕ್ಕೆ ಕಾರಣವು ಏನು? ಮನುಷ್ಯರಿಗೆ ಎಲ್ಲರಿಗೂ ಎರಡು ಕೈಗಳೂ, ಎರಡು ಕಾಲುಗಳೂ ಇರುವುದರಿಂದ ಅದನ್ನು ಕುರಿತು ಯಾರೂ ಗರ್ವಪಡುವುದಿಲ್ಲ. ಅಂದರೆ ಇತರರಲ್ಲಿ ಇರುವುದಕ್ಕಿಂತಲೂ, ತಮ್ಮಲ್ಲಿ ಆಧಿಕ್ಯವು ಏನಾದರೂ ಇದ್ದರೆ ಆಗ ಮನುಷ್ಯರು ಗರ್ವಿತರಾಗುತ್ತಾರೆ. ಆದುದರಿಂದ ಪುರುಷರಿಗೆ ಆಗಲಿ, ಸ್ತ್ರೀಯರಿಗೆ ಆಗಲಿ ಒಬ್ಬರಿಗೆ ಮಾತ್ರ ವಿದ್ಯೆಯನ್ನು ಕಲಿಸಿದರೆ ಅವರಿಗೆ ಗರ್ವ ಉಂಟಾಗಬಹುದು. ಮೊದಲು ಇಂಗ್ಲೀಷು ಭಾಷೆಯನ್ನು ಭಾರತೀಯರು ಕಲಿಯಲು ಪ್ರಾರಂಭಿಸಿದಾಗ ಸಾಮಾನ್ಯವಾದ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಧನ್ಯರು ಎಂದು ಎಣಿಸಿಕೊಳ್ಳುತ್ತ ಇದ್ದರು. ಈಗ ಉನ್ನತ ಪರೀಕ್ಷೆಗಳಲ್ಲಿ ಕೃತಾರ್ಥರಾದವರಿಗೆ ಸಹ ಗರ್ವಕ್ಕೆ ಅವಕಾಶವು ಇಲ್ಲ. ಹಾಗೆಯೇ ಸ್ತ್ರೀಯರಲ್ಲಿ ಒಬ್ಬಿಬ್ಬರು ವಿಶೇಷ ವಿದ್ಯಾವತಿಯರಾದರೆ ಅವರಿಗೆ ಗರ್ವಿಸುವುದಕ್ಕೆ ಅವಕಾಶವು ಉಂಟಾಗುವುದು. ಅನೇಕ ಸ್ತ್ರೀಯರು ವಿದುಷಿಯರಾದರೆ ಈ ಗರ್ವಕ್ಕೆ ಅವಕಾಶವು ಇರುವುದಿಲ್ಲ.

ಕೋಲಾಪುರದಲ್ಲಿ ಇರುವ ಪಾಠಶಾಲೆಗಳನ್ನೂ, ಬಾವಡೇ ಗ್ರಾಮದಲ್ಲಿ ಇರುವ ಪಾಠಶಾಲೆಗಳನ್ನೂ ಪರೀಕ್ಷಿಸುವುದಕ್ಕಾಗಿ ರಖಮಾಬಾಯಿಯು ಪ್ರತಿದಿವಸವೂ ಗಾಡಿಯ ಮೇಲೆ ಹೋಗುತ್ತ ಇದ್ದಳು. ಆಕೆಯು ಹೊರಡುವಾಗ ಮಿಠಾಯಿಯನ್ನೂ, ಬೊಂಬೆಗಳನ್ನೂ ತೆಗೆದುಕೊಂಡು ಹೋಗಿ ಆಯಾ ಪಾಠಶಾಲೆಗಳಲ್ಲಿ ಇರುವ ಚಿಕ್ಕ ಹುಡುಗಿಯರಿಗೆ ಬೊಂಬೆಗಳನ್ನೂ, ಮಿಠಾಯಿಯನ್ನೂ ಕೊಟ್ಟು ಅವರಿಗೆ ವಿದ್ಯೆಯಲ್ಲಿ ಅಭಿರುಚಿಯನ್ನು ಉಂಟುಮಾಡುತ್ತ ಇದ್ದಳು.

ರಖಮಾಬಾಯಿಯು ಹೆಣ್ಣುಮಕ್ಕಳ ತಾಯಿಯರೊಡನೆ ಮಾತನಾಡುವ ಸಮಯದಲ್ಲಿ ಅವರ ಹೆಣ್ಣುಮಕ್ಕಳನ್ನು ಪಾಠಶಾಲೆಗೆ ಕಳುಹಿಸುವಂತೆಯೂ ಅವರು ತಮಗೆ ಬಂದ ವಿದ್ಯೆಯನ್ನು ಮರೆಯದೆ, ತಾವಾಗಿಯೇ ವೃದ್ಧಿಮಾಡಿಕೊಳ್ಳುವಂತೆಯೂ ಪ್ರೋತ್ಸಾಹಿಸಿ, ವಿದ್ಯೆಯಲ್ಲಿ ಅಭಿರುಚಿ ಇಲ್ಲದ ಅವರ ಮನಸ್ಸನ್ನು ತಿರುಗಿಸುತ್ತ ಇದ್ದಳು. ಇದೂ ಅಲ್ಲದೆ ಆಗಾಗ್ಗೆ ಭಾನುವಾರಗಳಲ್ಲಿ ಸಭ್ಯಸ್ತ್ರೀಯರನ್ನು ಅರಿಸಿನ ಕುಂಕುಮಕ್ಕಾಗಿ ತನ್ನ ಮನೆಗೆ ಕರೆಯಿಸಿ ಅವರಿಗೆ ಅನೇಕ ಸದ್ವಿಷಯಗಳನ್ನು ಬೋಧಿಸುತ್ತಲೂ ಇದ್ದಳು. ಬಾಲಕಿಯರ ಪಾಠಶಾಲೆಗಳಿಗೆ ಈಕೆಯು ವಿಧಿಸಿದ ನಿಬಂಧನೆಗಳು ಬಹಳ ಚನ್ನಾಗಿವೆ. ಬಾಲಕಿಯರಿಗೆ ದೇಹದಂಡನೆಯನ್ನು ಮಾಡದೆ ಬಹುಮಾನದ ಆಶೆಯನ್ನು ತೋರಿಸಿ ಅವರಿಗೆ ಓದು ಬರಹವನ್ನು ಕಲಿಸಬೇಕು ಎಂದು ಈಕೆಯು ಉಪಾಧ್ಯಾಯಿನಿಯರಿಗೆ ನಿಯಮಿಸಿದಳು. ದುರ್ವೃತ್ತಿಯನ್ನೇ ಜೀವನಾಧಾರಮಾಡಿಕೊಂಡು ಇರುವ ವೇಶ್ಯಾಂಗನೆಯರೂ, ನೀತಿದೂರರಾದ ಕೆಲನೀಚಜಾತಿಯ ಸ್ತ್ರೀಯರೂ ವಿದ್ಯಾರ್ಥಿವೇತನವನ್ನು ಪಡೆಯುವ ಆಶೆಯಿಂದ ಪಾಠಶಾಲೆಗೆ ಬರುತ್ತ ಇದ್ದರು. ಇವರಿಂದ ಇತರ ಬಾಲಿಕೆಯರು ಕೆಟ್ಟುಹೋಗುವರು ಎಂದು ಅವಿವಾಹಿತರಾಗಿ ಇದ್ದರೆ ತಂದೆಗಳಿಂದಲೂ, ವಿವಾಹಿತೆಯರಾಗಿ ಇದ್ದರೆ ಪತಿಯರಿಂದಲೂ ಯೋಗ್ಯತಾ ಪತ್ರಿಕೆಯನ್ನು ತೆಗೆದುಕೊಂಡು ಬಂದ ಹೊರತು ಇವರನ್ನು ಪಾಠಶಾಲೆಗೆ ಸೇರಿಸಕೂಡದು ಎಂದು ರಖಮಾಬಾಯಿಯು ನಿಯಮಿಸಿದಳು. ಬಾಲಕಿಯರಿಗೆ ಪಾಠಹೇಳುವ ಉಪಾಧ್ಯಾಯಿನಿಯರ ಆಚರಣೆಯೂ, ನೀತಿಯೂ ಸ್ತೋತ್ರಾರ್ಹವಾಗಿ ಇರುವಂತೆ ಈಕೆಯು ನೋಡಿಕೊಳ್ಳುತ್ತ ಇದ್ದಳು. ಸಮಯವು ದೊರೆತಾಗ ಟ್ರೈನಿಂಗ್ ಸ್ಕೂಲಿಗೆ ಹೋಗಿ ಅಲ್ಲಿ ಅಧ್ಯಾಪನವಿಧಿಯನ್ನು ಕಲಿಯುತಲಿರುವ ಸ್ತ್ರೀಯರಿಗೆ ಈಕೆಯು ಪಾಠಗಳನ್ನು ಹೇಳುತ್ತಿದ್ದಳು. ಆ ಪಾಠಶಾಲೆಗಳಲ್ಲಿ ಓದಿದ ಅನೇಕ ಬಾಲಕಿಯರೂ, ಅಲ್ಲಿನ ಉಪಾಧ್ಯಾಯಿನಿಯರೂ ರಖಮಾಬಾಯಿಯಂತೆಯೇ ಜ್ಞಾನವತಿಯರಾಗಿ ಸನ್ಮಾರ್ಗದಲ್ಲಿ ನಡೆಯುತ್ತ ಇದಾರೆ.

ರಖಮಾಬಾಯಿಯ ಉದ್ಯೋಗಸಂಬಂಧವಾದ ಕೆಲಸಗಳನ್ನು ಮೇಲೆ ವರ್ಣಿಸಿದೆನು. ಈಗ ಆಕೆಯು ಗೃಹಕೃತ್ಯನಿರ್ವಾಹಕ ಶಕ್ತಿಯನ್ನು ಕುರಿತು ಬರೆಯುವೆನು. ಈಕೆಗೆ ಐದುಜನ ಹೆಣ್ಣು ಮಕ್ಕಳು, ನಾಲ್ಕು ಜನ ಗಂಡುಮಕ್ಕಳು. ಈ ಮಕ್ಕಳನ್ನೆಲ್ಲ ರಖಮಾಬಾಯಿಯೇ ನೋಡಿಕೊಳ್ಳುತ್ತ ಇದ್ದಳು. ಮತ್ತು ಅಡಿಗೆಗೆ ಪರಿಚಾರಿಕರನ್ನು ಇಟ್ಟುಕೊಳ್ಳುವುದಕ್ಕೆ ತಕ್ಕ ದ್ರವ್ಯವನ್ನು ದೇವರು ಈಕೆಗೆ ಕೊಡುತ್ತಿದ್ದರೂ ಅಡಿಗೆಯವರು ಅಡಿಗೆಯನ್ನು ಶುಭ್ರವಾಗಿಯೂ ರುಚಿಯಾಗಿಯೂ ಮಾಡುವುದಿಲ್ಲ ಎಂತಲೂ, ತಾನು ಅಡಿಗೆಯನ್ನು ಪರಿಚಾರಿಕರಿಂದ ಮಾಡಿಸಿಕೊಂಡರೆ, 'ವಿದ್ಯಾವತಿಯರಾದ ಸ್ತ್ರೀಯರು ಮನೆಯ ಕೆಲಸಗಳಲ್ಲಿ ಅಶ್ರದ್ಧೆಯಾಗಿ ಇರುತ್ತಾರೆ,' ಎಂದು ಲೋಕವು ಎಣಿಸುವುದು ಎಂತಲೂ ಈಕೆಯು

ತಾನೇ ಅಡಿಗೆಯನ್ನು ಕೂಡ ಮಾಡಿಕೊಳ್ಳುತ್ತ ಇದ್ದಳು. ಮನೆಯ ಕೆಲಸವು ಆದಕೂಡಲೆ ಉದ್ಯೋಗದಲ್ಲಿಯೂ, ಅದು ಮುಗಿದ ಅನಂತರ ಮನೆಯ ಕೆಲಸದಲ್ಲಿಯೂ ಈಕೆಯು ಮಗ್ನಳಾಗಿ ಇದ್ದಳು.

ಚಿಕ್ಕಚಿಕ್ಕ ಮಕ್ಕಳನ್ನು ಬೆಳೆಸುವುದು ಎಷ್ಟು ಕಷ್ಟವಾದುದು ಎಂಬುದನ್ನು ಮಕ್ಕಳ ತಾಯಿಯರು ಚನ್ನಾಗಿ ತಿಳಿದಿರಬಹುದು. ಈ ಕಷ್ಟಪ್ರದವಾದ ಶಿಶು ಸಂರಕ್ಷಣೆಯನ್ನು ರಖುಮಾಬಾಯಿಯು ಬಹು ಜಾಗರೂಕತೆಯಿಂದ ಮಾಡುತ್ತ ಇದ್ದಳು. ಮಕ್ಕಳಿಗೆ ಚಿಕ್ಕತನದಿಂದಲೂ ಸುಗುಣಗಳನ್ನು ಬೋಧಿಸುತ್ತ ಇದ್ದಳು. ಈಕೆಯು ಮಕ್ಕಳ ಸ್ನಾನಪಾನಗಳನ್ನೂ, ಭೋಜನ ವಿಷಯವನ್ನೂ ಶ್ರದ್ಧೆಯಿಂದ ನೋಡಿಕೊಳ್ಳುತ್ತ ಇದ್ದುದರಿಂದ ಈಕೆಯ ಮಕ್ಕಳು ಆರೋಗ್ಯವಾಗಿ ಇದ್ದರು. 'ರಖುಮಾಬಾಯಿ ಎಂದರೆ ರೋಗಗಳು ಓಡಿಹೋಗುತ್ತವೆ,' ಎಂದು ಜನರು ಹೇಳುತ್ತ ಇದ್ದರು. ಈಕೆಯು ತನ್ನ ಮನೆಯನ್ನೂ, ಮಕ್ಕಳನ್ನೂ ಪರಿಶುಭ್ರವಾಗಿ ಇಟ್ಟಿದ್ದಳು. ಈಕೆಯು ವಿಶ್ರಾಂತಿಗಾಗಿ ಮಧ್ಯಾಹ್ನ ಸಮಯದಲ್ಲಿ ಮನೆಗೆ ಬಂದರೆ ಆಗ ಉಪಾಧ್ಯಾಯಿನಿಯರು, ಸೇವಕರು ರಜಾಕೇಳಿಕೊಳ್ಳುವುದಕ್ಕೂ, ಸಂಬಳವನ್ನು ಹೆಚ್ಚುಮಾಡುವಂತೆ ಕೇಳಿಕೊಳ್ಳುವುದಕ್ಕೂ ಈಕೆಯ ಮನೆಗೆ ಬರುತ್ತ ಇದ್ದರು. ಇದರಿಂದ ಈಕೆಗೆ ವಿಶ್ರಾಂತಿಗೆ ಕಾಲವೇ ಇರುತ್ತ ಇರಲಿಲ್ಲ.

ಇತರ ಬಾಲಕಿಯರ ವಿದ್ಯಾಭಿವೃದ್ಧಿಯ ವಿಷಯದಲ್ಲಿಯೇ ವಿಶೇಷ ಶ್ರದ್ಧೆಯುಳ್ಳವಳಾಗಿ ಇದ್ದ ರಖುಮಾಬಾಯಿಯು ತನ್ನ ಮಕ್ಕಳ ವಿದ್ಯಾಭಿವೃದ್ಧಿಯ ವಿಷಯವನ್ನು ಹೇಗೆ ನೋಡಿಕೊಳ್ಳುತಲಿದ್ದಳು ಎಂಬುದನ್ನು ಬೇರೆಯಾಗಿ ಬರೆಯುವ ಅವಶ್ಯಕವಿಲ್ಲ. ಆ ವಿಷಯವನ್ನು ಆ ಮಕ್ಕಳ ವೈದುಷ್ಯದಿಂದಲೇ ತಿಳಿಯಬಹುದು. ರಖುಮಾಬಾಯಿಯ ಮೊದಲನೆಯ ಮಗಳಾದ ಸೌ॥ ದ್ವಾರಕಾಬಾಯಿಯೂ ಎರಡನೆಯ ಮಗಳಾದ ಸೌ॥ ಕೃಷ್ಣಾಬಾಯಿಯೂ ಬೊಂಬಾಯಿ ವೈದ್ಯಕಲಾಶಾಲೆಯಲ್ಲಿ ಓದಿ ಎಲ್. ಎಮ್. ಅಂಡ್ ಎಸ್. ಪರೀಕ್ಷೆಯಲ್ಲಿ ಕೃತಾರ್ಥರಾದರು. ಪೂನಾ ಪಟ್ಟಣದಲ್ಲಿ ಸ ೧೮೯೫ ನೆಯ ಇಸವಿಯಲ್ಲಿ ನಡೆದ ದೇಶೀಯ ಮಹಾಜನ ಸಭೆಗೆ, ಈ ಅಕ್ಕತಂಗಿಯರು ಕೋಲಾಪುರದಿಂದ ಪ್ರತಿನಿಧಿಗಳಾಗಿ ಬಂದು ಇದ್ದರು.

ರಖುಮಾಬಾಯಿಯು ತನಗೂ, ಪತಿಗೂ, ಮಕ್ಕಳಿಗೂ ಬೇಕಾದ ಉಡುಪುಗಳನ್ನೆಲ್ಲ ಮನೆಯಲ್ಲಿಯೇ ಹೊಲಿಯುತ್ತ ಇದ್ದಳು. ಬೇಸಗೆಯ ವಿರಾಮಕಾಲದಲ್ಲಿ ಮಕ್ಕಳು ಎಲ್ಲರೂ ಮನೆಗೆ ಬಂದಮೇಲೆ ಅವರ ಸಹಾಯದಿಂದ ವರ್ಷಕ್ಕೆ ಸರಿಹೋಗುವಷ್ಟು ಬಟ್ಟೆಗಳನ್ನೆಲ್ಲ ಹೊಲೆದು ಇಡುತ್ತಿದ್ದಳು. ಗೃಹಕಾರ್ಯಗಳೆಲ್ಲವೂ ಮುಗಿದ ಅನಂತರ ಅಲ್ಪಸ್ವಲ್ಪ ಸಮಯವು ಇದ್ದರೆ ಈ ಸಾಧ್ವೀಮಣಿಯು ಆಗ

ವೃತ್ತಾಂತಪತ್ರಿಕೆಗಳನ್ನೂ, ನೂತನ ಗ್ರಂಥಗಳನ್ನೂ ಓದುತ್ತ ಇದ್ದಳು. ಈಕೆಯು ಅಡಿಗೆಯನ್ನೂ, ಇತರ ಕೆಲಸಗಳನ್ನೂ ಮಾಡುವಾಗ ಈಕೆಯ ಪತಿಯಾಗಲಿ, ಮಕ್ಕಳಾಗಲಿ ಯಾವುದಾದರೂ ಒಂದು ಸದ್ಗ್ರಂಥವನ್ನು ಓದಿ ಹೇಳುತ್ತ ಇದ್ದರು. "ಪ್ರತಿದಿನವೂ ಯಾವುದಾದರೂ ಹೊಸಪುಸ್ತಕವನ್ನು ಓದದಿದ್ದರೆ ನನ್ನ ಮನಸ್ಸು ವಿಕಾಸವಾಗಿಯೇ ಇರುವುದಿಲ್ಲ," ಎಂದು ಈಕೆಯು ಹೇಳುತ್ತ ಇದ್ದಳು.

ವಿದ್ಯಾವತಿಯರಾದ ಸ್ತ್ರೀಯರು ಶಿಶುಪೋಷಣೆಯಲ್ಲಿ ಅಶ್ರದ್ಧೆಯುಳ್ಳವರಾಗಿ ಇರುತ್ತಾರೆ ಎಂದು ಕೆಲವರು ಹೇಳುತ್ತಾರೆ. ಈ ವಿಧವಾದ ಅಭಿಪ್ರಾಯ ಉಳ್ಳವರು, ಸಂಸಾರದಲ್ಲಿ ನಡೆಯುವ ವಿಷಯಗಳು ಮಾನವನ ಅಭೀಷ್ಟಪ್ರಕಾರವೇ ನಡೆಯುವುದು ಎಂತಲೂ, ಇದರಲ್ಲಿ ಈಶ್ವರನಿಯಾಮಕವು ಏನೂಇಲ್ಲವೆಂತಲೂ ತಿಳಿದುಕೊಂಡು ಇರಬಹುದು. ಹಾಗಾದರೆ ಸ್ತ್ರೀಯರೆಲ್ಲರೂ ವಿದ್ಯಾವತಿಯರಾದರೆ ಅಂದಿನಿಂದ ಪ್ರಜಾವೃದ್ಧಿಯು ನಿಂತುಹೋಗುವುದೇ? ಇಲ್ಲ. ಏಕೆ ಅಂದರೆ ಸ್ತ್ರೀಯರು ತಮ್ಮ ಮಕ್ಕಳನ್ನು ಪ್ರೇಮಿಸುವುದಕ್ಕೂ, ಬೆಳೆಸುವುದಕ್ಕೂ ಅವರ ಅಜ್ಞಾನವು ಕಾರಣವಲ್ಲದೆ, ಈಶ್ವರನು ಅವರಲ್ಲಿ ಇಟ್ಟ ನೈಸರ್ಗಿಕವಾದ ಪುತ್ರವಾತ್ಸಲ್ಯವೇ ನಿಜವಾದಕಾರಣವು ಆಗಿದೆ. ಈ ವಾತ್ಸಲ್ಯವು ಪಶುಪಕ್ಷಿಗಳಲ್ಲಿಯೂ ಕ್ರಿಮಿಕೀಟಗಳಲ್ಲಿಯೂ, ಸ್ತ್ರೀಪುರುಷರಲ್ಲಿಯೂ ವಿದ್ಯಾವಂತರಲ್ಲಿಯೂ, ವಿದ್ಯಾಹೀನರಲ್ಲಿಯೂ ವ್ಯಾಪಿಸಿ ಇದೆ. ವಿದ್ಯಾವತಿಯರಾದ ಸ್ತ್ರೀಯರು 'ಸ್ತ್ರೀಧರ್ಮ ನೀತಿ,' 'ಹದಿಬದೆಯಧರ್ಮ,' ಸಾವಿತ್ರೀ ಚರಿತ್ರೆ' ಮೊದಲಾದ ಸದ್ಗ್ರಂಥಗಳನ್ನು ಓದಿಕೊಂಡು ತಮ್ಮ ಮನೆಯ ಕೆಲಸವನ್ನು ಶ್ರದ್ಧೆಯಿಂದ ಮಾಡುವರು. ಮತ್ತು ತಮ್ಮ ಆದಾಯವನ್ನು ತಿಳಿದು ಖರ್ಚುಮಾಡುವರು. (೨) ಅವರು ಅಪಾತ್ರದಾನ, ತಿಂಡಿ, ನೋಡುವುದಕ್ಕೆ ಚನ್ನಾಗಿದ್ದು ಒಂದುಕಾಸು ಬೆಲೆಯನ್ನು ಸಹ ಮಾಡದಅಸತ್ಯದ ಒಡವೆಗೆಳನ್ನು ಕೊಳ್ಳುವುದು ಇವೇ ಮೊದಲಾದ ದುರ್ವ್ಯಯಗಳನ್ನು ಮಾಡದಿರುವರು. ವಿದ್ಯಾವತಿಯರು ಸಂಸಾರ ಸುಖವನ್ನು ವೃದ್ಧಿಮಾಡುವರೇ ಹೊರತು ಸುಖಕ್ಕೆ ಕುಂದನ್ನು ಉಂಟುಮಾಡಲಾರರು.

ರಖಮಾಬಾಯಿಯು ವಿದುಷಿಯೂ, ಅಧಿಕಾರಸಂಪನ್ನಳೂ ಆಗಿ ಇದ್ದರೂ ಮುಖ್ಯವಾದ ವ್ರತಗಳನ್ನು ಭಕ್ತಿಯಿಂದ ಮಾಡುತ್ತ ಇದ್ದಳು. ಆದರೆ ಆಕೆಯು ಎಲ್ಲಾ ವ್ರತಗಳಿಗಿಂತಲೂ 'ಪತಿಭಕ್ತಿ' ಎಂಬ ವ್ರತವೇ ಶ್ರೇಷ್ಠವಾದುದು ಎಂದು ಎಣಿಸಿ ಇದ್ದಳು. ಪತಿಯು ಸದಾ ಸಂತುಷ್ಟಾಂತರಂಗನಾಗಿ ಇರುವಂತೆ ರಖಮಾಬಾಯಿಯು ನೋಡಿಕೊಳ್ಳುತ್ತ ಇದ್ದಳು. ಸೌಭಾಗ್ಯ, ಸಂತತಿ, ಸಂಪತ್ತು, ಅಧಿಕಾರ, ರಾಜಸಂಸ್ಥಾನದಲ್ಲಿ ಮಾನ್ಯತೆ ಇವೆಲ್ಲವೂ ಇದ್ದುದರಿಂದ ರಖಮಾಬಾಯಿಯು 'ಬಹುಸುಖಿ' ಎಂದು ಜನರು ತಿಳಿದು ಇದ್ದರು. ಆದರೆ ಅಂಗವೈಕಲ್ಯವನ್ನು ಹೊಂದಿ ಹತಾಶನಾದ ಪತಿಯ ಸ್ಥಿತಿಯಿಂದ, ಈಕೆಯು ಸರ್ವದಾ ಚಿಂತಾ

ಕ್ರಾಂತಳಾಗಿ ಇರುತ್ತ ಇದ್ದಳು. ವಿದ್ವಾಂಸನೂ, ಗುಣವಂತನೂ ಆದ ಪತಿಯು ಮನೆಯಲ್ಲಿ ಕುಳಿತು ಇರುವುದೂ, ತಾನು ಹೋರಗೆ ಹೋಗಿ ಕೆಲಸವನ್ನು ಮಾಡುವುದೂ, ಎಲ್ಲರೂ ತನ್ನ ಹೆಸರನ್ನೇ ಪ್ರಚುರಮಾಡಿ ಹೊಗಳುವುದೂ ಈಕೆಗೆ ವಿಶೇಷ ಖೇದವನ್ನು ಉಂಟುಮಾಡುತ್ತ ಇದ್ದವು. ಈಕೆಯು ಒಂದೊಂದು ಸಲ, " ಪುರುಷರು ಮನೆಯಲ್ಲಿ ಕುಳಿತುಕೊಂಡು, ಸ್ತ್ರೀಯರು ಉದ್ಯೋಗವನ್ನು ಮಾಡುವುದು ಅತಿಖೇದಕರವಾದುದು. ಆದರೂ ಈಶ್ವರನು ಇಂತಹ ಯೋಗವನ್ನು ನಮಗೆ ಉಂಟುಮಾಡಿದುದಕ್ಕೆ ಬಹಳಚಿಂತೆಯಾಗಿದೆ. ಮಕ್ಕಳನ್ನು ಕಾಪಾಡ ಬೇಕು ಎಂದು ಈ ಕೆಲಸವನ್ನು ಮಾಡುತ್ತ ಇರುವೆನೇ ಹೊರತು ಇದರಿಂದ ನನಗೆ ಸಂತೋಷವೇನೂ ಇಲ್ಲ. ನನ್ನ ಕರ್ತವ್ಯವನ್ನು ನಾನು ಮಾಡುತ್ತ ಇದೇನೆ," ಎಂದು ನುಡಿಯುತ್ತ ಇದ್ದಳು. ಈ ವಾಕ್ಯಗಳಿಂದ ಈಕೆಯ ಹೃದಯದಲ್ಲಿ ಇದ್ದ ಚಿಂತೆಯು ವ್ಯಕ್ತವಾಗುತ್ತದೆ.

ಮಿಸ್ ಲಿಟೆಲ್ ದೊರೆಸಾನಿಯು ತನ್ನ ದೇಶಕ್ಕೆ ಹೋಗುವ ಸಮಯದಲ್ಲಿ, ರಖಮಾಬಾಯಿಯೊಡನೆ ' ಹೋಗಿ ಬರುವೆನು' ಎಂದು ಹೇಳಿ, "ಅಮ್ಮಾ, ನಿಮ್ಮ ಫೋಟೊಗ್ರಾಫನ್ನು ತೆಗೆದುಕೊಳ್ಳುವೆನು " ಎಂದು ಕೇಳಿದಳು. ಅದಕ್ಕೆ ರಖಮಾಬಾಯಿಯು, " ನಾನು ದೇಶೋಪಕಾರವಾದ ಯಾವ ಘನಕಾರ್ಯವನ್ನೂ ಮಾಡಲಿಲ್ಲ. ಆದುದರಿಂದ ನನ್ನ ಫೋಟೊಗ್ರಾಫನ್ನು ತೆಗೆಯಿಸಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ," ಎಂದು ವಿನಯದೊಡನೆ ಹೇಳಿದಳು. ಆಗ ಮಿಸ್ ಲಿಟೆಲ್ ದೊರೆಸಾನಿಯು ತನ್ನ ರೂಪಪಟವನ್ನು ರಖಮಾಬಾಯಿಗೆ ಕೊಟ್ಟು ಆಕೆಯು ಕೇಳದೇ ಇದ್ದರೂ ಒಂದು ಯೋಗ್ಯತಾಪತ್ರಿಕೆಯನ್ನು ಬರೆದು ಕಳುಹಿಸಿದಳು.

ಅದರಲ್ಲಿ " ಉಪಾಧ್ಯಾಯಿನಿಯರಿಗೆ ವಿದ್ಯೆಯನ್ನು ಕಲಿಸುವುದಕ್ಕಾಗಿ ಸ್ಥಾಪಿತವಾದ ಪಾಠಶಾಲೆಯಲ್ಲಿ ರಖಮಾಬಾಯಿಯು ಕೆಲವು ದಿವಸಗಳು ಇದ್ದು ವಿದ್ಯೆಯನ್ನು ಕಲಿಸುವುದರಲ್ಲಿ ಪ್ರವೀಣಳಾದಳು. ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವುದರಲ್ಲಿ ಈಕೆಯು ಮಹೋತ್ಸುಕಳಾಗಿ ಇರುತ್ತಾಳೆ. ಈಕೆಯ ಉತ್ತಮ ಉದಾಹರಣೆಯಿಂದ ಸ್ತ್ರೀ ವಿದ್ಯೆಯು ವಿಶೇಷವಾಗಿ ವೃದ್ಧಿಯನ್ನು ಹೊಂದಿತು. ಇಂತಹ ಬುದ್ಧಿವಂತಳೂ, ಸಹಾಯ ಮಾಡುವವಳೂ ಆದ ಅಸಿಸ್ಟಂಟು ದೊರೆತುದುದಕ್ಕೆ ನಾನು ಆಕೆಯಲ್ಲಿ ಕೃತಜ್ಞಳಾಗಿ ಇದೇನೆ. ಈಕೆಯು ವಿಶೇಷ ಸುಗುಣವತಿಯು. ಈಕೆಯು ಪರೋಪಕಾರ ವಿಷಯದಲ್ಲಿ ತತ್ಪರಳಾಗಿ ಇರುತ್ತಾಳೆ. ಈಕೆಯ ಬಳಯಲ್ಲಿ ವಿದ್ಯಾಭ್ಯಾಸಮಾಡಿದ ಉಪಾಧ್ಯಾಯಿನಿಯರು ಕೋಲಾವುರ ಸಂಸ್ಥಾನದಲ್ಲೆಲ್ಲ ತುಂಬಿ ಇದಾರೆ. ಈ ಉಪಾಧ್ಯಾಯಿನಿಯರಲ್ಲಿ ಅನೇಕರು ತಾವು ಹೋದ ಸ್ಥಳಗಳಲ್ಲಿ ರಖಮಾಬಾಯಿಯಂತೆಯೇ ಆಚರಿಸಿ ಎಲ್ಲರನ್ನೂ ಸಂತೋಷಗೊಳಿಸುತ್ತ ಇದಾರೆ. ರಖಮಾಬಾಯಿಯು ಕುಲೀನ ಸ್ತ್ರೀ ಎಂತಲೂ, ಸುಶೀಲಳಾದ

ಪತ್ನಿಯು ಎಂತಲೂ, ಅನುಭವಿಕ ಮಾತೆಯು ಎಂತಲೂ, ಉತ್ತಮ ಉಪಾಧ್ಯಾಯಿನಿಯು ಎಂತಲೂ, ಇಷ್ಟು ಬಗೆಯಿಂದಲೂ ಈಕೆಯಲ್ಲಿ ನನಗೆ ಪೂಜ್ಯ ಭಾವವು ಉಂಟಾಗಿ ಇದೆ. ಈಕೆಯು ಶ್ರೇಯಸ್ಸನ್ನು ಹೊಂದುತ್ತ ಇರುವಳು ಎಂದು ಕೇಳಿ, ನನಗೆ ಯಾವಾಗಲೂ ಸಂತೋಷವು ಉಂಟಾಗುತ್ತ ಇರುವುದು," ಎಂದು ಬರೆದಳು.

ವಿದ್ಯಾವಿನಯ ಸಂಪನ್ನಳಾದ ರಖಮಾಬಾಯಿಯ ಚರಿತ್ರೆಯು ಒಂದು ಉತ್ತಮವಾದ ಉಪದೇಶ ಗ್ರಂಥವು ಎಂದು ಹೇಳಬಹುದು.

ಕರ್ಮ ದೇವಿ.

ತಮ್ಮ ಸತ್ಕಾರ್ಯಗಳಿಂದಲೂ, ಸದ್ಗುಣಗಳಿಂದಲೂ ಭರತಖಂಡಕ್ಕೆ ಸತ್ಕೀರ್ತಿಯನ್ನುಂಟುಮಾಡಿದ ಸಾಧ್ವೀಮಣಿಯರಲ್ಲಿ ಅನೇಕರಿಗೆ ರಾಜಪುತ್ರ ಸ್ಥಾನವು ಜನ್ಮಭೂಮಿಯಾಗಿ ಇದೆ. ರಾಜಪುತ್ರದೇಶದಲ್ಲಿ ಕ್ಷತ್ರಿಯವೀರರು ತಮ್ಮ ಶೌರ್ಯದಿಂದ ಜನ್ಮಭೂಮಿಗೆ ಕೀರ್ತಿಯನ್ನು ತಂದಂತೆ, ಕ್ಷತ್ರಿಯ ಸ್ತ್ರೀಯರು ತಮ್ಮ ನಿಷ್ಕಲ್ಮಷ ಪಾತಿವ್ರತ್ಯದಿಂದ ಮಾತೃಭೂಮಿಗೆ ಯಶಸ್ಸನ್ನು ತಂದರು. ಈಚೆಗೆ ನಾನೂರು ವರ್ಷಗಳಿಂದಲೂ ರಾಜಪುತ್ರದೇಶವು ವೀರಪುತ್ರ ಜನನಿ ಎಂಬ ನಾಮವನ್ನು ಮಾತ್ರ ಉಳ್ಳದ್ದಾಗಿ ಇದೆ. ತತ್ಪೂರ್ವದಲ್ಲಿ, ರಾಜಪುತ್ರರು ಎಂದರೆ ಸಕಲ ದೇಶೀಯರಿಗೂ ಕಾಲಾಂತಕರಂತೆ ತೋರುತ್ತ ಇದ್ದರು. ಮತ್ತು ರಾಜಪುತ್ರಸ್ತ್ರೀಯರು ದೃಢನಿಶ್ಚಯವಿಭೂಷಿತರು ಎಂತಲೂ, ಪರಮ ಪತಿವ್ರತೆಯರು ಎಂತಲೂ ಎಲ್ಲರೂ ನಂಬಿದ್ದರು. ತಮ್ಮ ಅಪೂರ್ವ ಸುಗುಣಗಳಿಂದ ದೇಶಕ್ಕೆ ಅಲಂಕಾರಭೂತರಾದ ರಾಜಪುತ್ರ ರಮಣಿಯರಲ್ಲಿ ಕರ್ಮದೇವಿಯು ಒಬ್ಬಳು. ಈಕೆಯು ಐದನೆಯ ಶತಾಬ್ದದಲ್ಲಿ ಇದ್ದಳು ಎಂದು ತೋರುತ್ತದೆ. ಈಕೆಯ ತಂದೆಯ ಹೆಸರು ಮೊಹಿಲರಾಜ ಮಾಣಿಕ್ಯರಾಜ. ಈತನು ಮಾರ್ವಾಡೆಯಲ್ಲಿ ಇರುವ ಔರಿಂತ್ ಸಂಸ್ಥಾನಾಧಿಪತಿಯು. ಕರ್ಮದೇವಿಯು ಬಾಲ್ಯದಿಂದಲೂ ಸದ್ಗುಣಗಳುಳ್ಳವಳಾದಕಾರಣ, ಆಕೆಯ ಜನನೀಜನಕರು ಆಕೆಯನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತ ಇದ್ದರು. ಈಕೆಯು ಬೆಳೆಯುತ್ತ ಬೆಳೆಯುತ್ತ ಪ್ರಾಚೀನ ಶೂರವರರ ಚರಿತ್ರೆಗಳನ್ನು ಕೇಳು

ವುದರಲ್ಲಿ ವಿಶೇಷ ಆಸಕ್ತಿಯುಳ್ಳವಳಾದಳು. ಇದರಿಂದ ಈಕೆಯ ತಾಯಿತಂದೆ ಗಳು ಈಕೆಗೆ ಅನೇಕ ವೀರರ ಚರಿತ್ರೆಗಳನ್ನು ಹೇಳುತ್ತ ಇದ್ದರು. ಒಂದು ದಿವಸ ಅವರು ಪೂಗಲ್ ಪ್ರಾಂತ್ಯಾಧಿಪತಿಯಾದ ರಾಣಾರಣರಂಗದೇವನ ಪುತ್ರನಾದ ಸಾಧುವಿನ ಪರಾಕ್ರಮವನ್ನು ತಿಳಿಸಿದರು. ಕರ್ಮದೇವಿಯು ಸಾಧುವಿನ ಪರಾ ಕ್ರಮವನ್ನು ಕೇಳಿದಮೇಲೆ ಇತರರ ಚರಿತ್ರೆಯನ್ನು ಕೇಳಲು ಅಪೇಕ್ಷಿಸಲಿಲ್ಲ. ಈ ಸಾಧುವು ಅಭಿಮನ್ಯುತುಲ್ಯನು ಎಂದು ಕೀರ್ತಿಯನ್ನು ಪಡೆದನು. ಈತನು ನಾಗೂರಿನಿಂದ ಸಿಂಧುನದಿಯವರೆಗೂ ದಂಡಯಾತ್ರೆಯನ್ನು ಮಾಡಿ ಅನೇಕ ವೀರರನ್ನು ಗೆದ್ದನು. ಅದರಿಂದ ಆಕಾಲದ ರಾಜರು ಸಾಧುವಿನ ಹೆಸರನ್ನು ಹೇಳಿದರೆ ಹೆದರುತ್ತ ಇದ್ದರು. ಈತನು ದಂಡಯಾತ್ರೆಗೆ ಹೋಗುವಾಗ ಔರಿಂತ ನಗರದಮೇಲೆಯೇ ಹೋಗುತ್ತಿದ್ದನು. ಆದಕಾರಣ ಔರಿಂತನಗರ ನಿವಾಸಿಗಳು ಈತನ ಸುಗುಣಗಳನ್ನೂ, ಶೌರ್ಯವನ್ನೂ, ರೂಪವನ್ನೂ ಅರಿತು ಇದ್ದರು. ಕರ್ಮದೇವಿಯ ತಂದೆಯು ಸಹ ಸಾಧುವನ್ನು ಆಗಾಗ್ಗೆ ತನ್ನ ಮನೆಗೆ ಕರೆತಂದು ಗೌರವಿಸುತಲಿದ್ದನು. ತನ್ನ ತಂದೆಯೊಡನೆ ಸಾಧುವು ಪ್ರಸಂಗಿಸುವ ಸಮಯ ದಲ್ಲಿ ಕರ್ಮದೇವಿಯು ತೆರೆಯ ಒಳಗಿನಿಂದ ಅವರ ಸಂಭಾಷಣೆಯನ್ನು ಆತುರ ದೊಡನೆ ಕೇಳುತ್ತ ಇದ್ದಳು. ಒಂದು ದಿವಸ ಕರ್ಮದೇವಿಯು ತನ್ನ ಮಹಡಿಯ ಮುಂಭಾಗದಲ್ಲಿ ನಿಂತಿರಲು, ಸಾಧುವು ಆ ಮಾರ್ಗವಾಗಿ ಹೋಗುತ್ತ ತನ್ನ ತಲೆಯನ್ನು ಎತ್ತಿ ಮೇಲೆನೋಡಿದನು. ಆ ಸಮಯದಲ್ಲಿ ಕರ್ಮದೇವಿಯು ಆತನನ್ನು ನೋಡಿ, ಆತನೇ ತನ್ನ ಪತಿಯು ಎಂದು ಮನಸ್ಸಿನಲ್ಲಿ ನಿಶ್ಚಯಿಸಿ ಕೊಂಡಳು. ಸಾಧುವು ಮಾತ್ರ ತಾನು ಕರ್ಮದೇವಿಯನ್ನು ನೋಡಿದ ವಿಷಯವು ಯಾರಿಗೂ ತಿಳಿಯದೆ ಇರಲು, ಅಲ್ಲಿಂದ ಬೇಗ ಹೊರಟು ಹೋದನು. ಕರ್ಮ ದೇವಿಯು ಸಾಧುವನ್ನು ವರಿಸಿದ ವಿಷಯವು ಆಕೆಯ ತಾಯಿತಂದೆಗಳಿಗೆ ತಿಳಿ ಯದು. ಆದಕಾರಣ ಅವರು ತಮ್ಮಪುತ್ರಿಯು ಯುಕ್ತವಯಸ್ಕಳಾದಳು ಎಂದು ಆಕೆಗೆ ತಕ್ಕವರನನ್ನು ಹುಡುಕಲು ಪ್ರಾರಂಭಿಸಿದರು. ಹುಡುಕಿ ಹುಡುಕಿ ಮುಂದ ರಾಧಿ ಪತಿಯಾದ ರಾಜಾದಂಡನ ನಾಲ್ಕನೆಯ ಮಗನಾದ ಅರಣ್ಯಕಮಲನು ಕರ್ಮದೇವಿಗೆ ತಕ್ಕ ವರನು ಎಂದು ನಿಶ್ಚಯಿಸಿದರು. ವರನ ಪಕ್ಷದವರು ಸಹ ಸಮ್ಮತಿಸಿದುದರಿಂದ ಲಗ್ನವು ನಿಶ್ಚಯವಾಯಿತು. ಕರ್ಮದೇವಿಯು 'ಸತ್ಪುರುಷ ನಾದ ಸಾಧುವನ್ನು ವಿನಹ ಇನ್ನು ಯಾರನ್ನೂ ವಿವಾಹಮಾಡಿಕೊಳ್ಳೆನು,' ಎಂದು ನಿಶ್ಚಯಿಸಿಕೊಂಡು ಇದ್ದುದರಿಂದ ಈ ವಿವಾಹವಿಷಯವು ಆಕೆಗೆ ಅತ್ಯಂತ ವ್ಯಸನ ವನ್ನು ಉಂಟುಮಾಡಿತು. ಅರಣ್ಯಕಮಲನು ಮಾತ್ರ ಕರ್ಮದೇವಿಯಲ್ಲಿ ವಿಶೇಷ ಅನುರಾಗ ಉಳ್ಳವನಾಗಿ, ತನ್ನಂತೆಯೇ ಕರ್ಮದೇವಿಯು ಸಹ ತನ್ನಲ್ಲಿ ಅನುರಾಗ ಉಳ್ಳವಳಾಗಿ ಇದಾಳೆ ಎಂದು ನೆನಸಿ ವಿವಾಹದಿನವನ್ನು ಇದಿರುನೋಡುತ್ತ ಇದ್ದನು. ಕರ್ಮದೇವಿಯ ತಾಯಿತಂದೆಗಳು ತಮ್ಮ ಪುತ್ರಿಗೆ ಸರಿಯಾದ ವರನು

ದೊರೆತನು ಎಂದು ಬಹು ಸಂತೋಷದೊಡನೆ ವಿವಾಹಕಾರ್ಯಗಳನ್ನು ಮಾಡಿ ಸುತ್ತ ಇದ್ದರು. ವಿವಾಹದಿನವು ಸಮೀಪಕ್ಕೆ ಬಂದಿತು. ಆಗ ಕರ್ಮದೇವಿಯು ತನ್ನ ಮನಸ್ಸಿನಲ್ಲಿ ಇರುವ ವಿಷಯವು ಮಾತಾಪಿತೃಗಳಿಗೆ ಹೇಗಾದರೂ ತಿಳಿಸ ಬೇಕು ಎಂದು ಎಣಿಸಿ, 'ಈ ಸಮಯದಲ್ಲಿ ತನಗೆ ಯಾವ ಸಖಿಯು ಸಹಾಯ ಮಾಡಬಲ್ಲಳು' ಎಂದು ಆಲೋಚಿಸುತ್ತ ಇದ್ದಳು.

ಹೀಗೆಇರಲು ಒಂದುದಿವಸ ರಾತ್ರೆ ಮಂದಮಾರುತದಿಂದ ಕೂಡಿದ ಮನೋಹರವಾದ ಬೆಳದಿಂಗಳು ಕಾಯುತ್ತಿರುವಾಗ, ಕರ್ಮದೇವಿಯು ವಿಶೇಷ ವ್ಯಸನದಿಂದ ಏನೋ ಆಲೋಚಿಸುತ್ತ ತನ್ನ ಕೊಠಡಿಯ ಗವಾಕ್ಷದ ಸಮೀಪ ದಲ್ಲಿ ನಿಂತಿದ್ದಳು. ಆಗ ಆಕೆಯ ಸಖಿಯಾದ ಅಮಲೆಯು ಬಂದುದನ್ನು ಆಕೆಯು ತಿಳಿಯಲಿಲ್ಲ. ಅಮಲೆಯು ಸ್ವಲ್ಪಹೊತ್ತು ನಿಂತುಕೊಂಡು ನೋಡಿ ತನ್ನ ಪ್ರಿಯ ಸಖಿಗೆ ಯಾವುದೋ ಸಹಿಸಲಾರದ ಮನೋವ್ಯಥೆಯು ಪ್ರಾಪ್ತ ವಾಗಿ ಇದೆ ಎಂದು ತಿಳಿದು, "ಅಕ್ಕಾ! ನೀನು ಇಷ್ಟು ಚಿಂತೆಯುಳ್ಳವಳಾಗಿ ಇರುವೆ ಏಕೆ?" ಎಂದು ಪ್ರಶ್ನೆ ಮಾಡಿದಳು. ಆಗ ಕರ್ಮದೇವಿಯು ಲಜ್ಜೆಯಿಂದ ಅಮಲೆಯ ಪ್ರಶ್ನೆಗೆ ಉತ್ತರವನ್ನು ಕೊಡದೆ ಬೇರೇಮಾತನ್ನು ಎತ್ತಿದಳು. ಅಮಲೆಯು ಆ ಮಾತುಗಳನ್ನು ಕೇಳಲಿಲ್ಲ. ಪ್ರತಿದಿವಸದಂತೆ ಕರ್ಮದೇವಿಯು ಪ್ರಸನ್ನ ಮುಖಿಯಾಗಿ ಇರದೆ ಚಿಂತೆಯಿಂದ ಕಳಾಹೀನಳಾಗಿ ಇರಲು ಕಾರಣವು ಏನಾಗಿರಬಹುದು ಎಂದು ಆಕೆಯು ಯೋಚಿಸುತ್ತ ಇದ್ದಳು. ಅಮಲೆಯು ಒಂದು ಗಳಿಗೆಯಹೊತ್ತು ಹಾಗೆ ಚಿಂತಿಸಿ ಕರ್ಮದೇವಿಯ ಕೈಗಳನ್ನು ತನ್ನ ಕೈಗಳಿಂದ ಹಿಡಿದುಕೊಂಡು, "ಪ್ರಾಣಸಖೀ! ನೀನು ಇಷ್ಟು ಖಿನ್ನಳಾಗಿ ಇರಲು ಕಾರಣವು ಏನು? ನಿನಗೆ ಶೀಘ್ರದಲ್ಲಿಯೇ ವಿವಾಹವುನಡೆದು ನಿನ್ನ ಅಖಂಡ ಸೌಖ್ಯಕ್ಕೆ ಪ್ರಾರಂಭವಾಗುವುದು. ಆದಕಾರಣ ನೀನು ಈ ಸಮಯದಲ್ಲಿ ವಿಶೇಷ ಸಂತೋಷದಿಂದ ಇರಬೇಕಲ್ಲವೇ? ಆದರೆ ನೀನು ಹೀಗೆ ದುಃಖಿಸುವುದಕ್ಕೆ ಕಾರಣವು ಯಾವುದು? ಆ ಕಾರಣವನ್ನು ಮರೆಮಾಡದೆ ನನ್ನೊಡನೆ ಹೇಳು, ಎಂದು ಕೇಳಿದಳು. ಪ್ರಿಯಸಖಿಯ ಮಾತುಗಳನ್ನು ಕೇಳಿ ಕರ್ಮದೇವಿಗೆ ದುಃಖವು ಹೆಚ್ಚಾಯಿತು. ಅಮಲೆಯು ತನ್ನ ಸಖಿಯು ವಿವಾಹವಾದ ಮೇಲೆ ತಾಯಿತಂದೆಗಳನ್ನು ಬಿಟ್ಟುಹೋಗಬೇಕು ಎಂದು ದುಃಖಿಸುವಳೋ ಏನೋ ಎಂದು ನೊದಲು ನೆನೆಸಿದಳು. ಆದರೆ ಕರ್ಮದೇವಿಯ ಅಪಾರ ವಾದ ದುಃಖವನ್ನುನೋಡಿ ಏನೂ ತಿಳಿಯಲಾರದೆ ದೀನಮುಖದೊಡನೆ ಕರ್ಮದೇವಿಯನ್ನು ನೋಡುತ್ತ ನಿಂತುಕೊಂಡಳು. ಆಮೇಲೆ ಕರ್ಮದೇವಿಯು ತನ್ನ ದುಃಖವನ್ನು ಅತಿಪ್ರಯಾಸದಿಂದ ಅಡಗಿಸಿಕೊಂಡು, "ಸಖೀ! ನನ್ನ ದುಃಖಕಾರಣವನ್ನು ಕೇಳಿದರೆ ನಿನಗೂ ವ್ಯಸನವು ಉಂಟಾಗುವುದು. ನೀನು ಕೂಡಲೆ ಹೋಗಿ, "ನಾನು ಮೊದಲೇ ವೀರಪುರುಷನಾದ ಸಾಧುವನ್ನು

ಪತಿಯಾಗಿ ವರಿಸಿದೆನು. ಆದುದರಿಂದ ಇತರ ಪುರುಷರ ದರ್ಶನವನ್ನು ಸಹ ಒಲ್ಲೆನು," ಎಂದು ನಾನು ಹೇಳಿದಂತೆ ನನ್ನ ತಾಯಿತಂದೆಗಳೊಡನೆ ಹೇಳು," ಎಂದು ಹೇಳಿದಳು. ಆಕೆಯ ದೃಢ ಪ್ರತಿಜ್ಞೆಯನ್ನು ಕೇಳಿ ಅಮಲೆಯು ಈಗ ಸರ್ವಸಿದ್ಧವಾಗಿ ಇರುವ ವಿವಾಹವು ನಿಲ್ಲುವುದು ಅಸಾಧ್ಯವು ಎಂದು ತಿಳಿದು, ಮೆಲ್ಲನೆ " ಕರ್ಮದೇವೀ! ಅರಣ್ಯಕಮಲನು ಸಾಧುವಿಗಿಂತಲೂ ಕಡಮೆಯಾದವನು ಅಲ್ಲ. ಮತ್ತು ನಿಮ್ಮ ವಿವಾಹವನ್ನು ಕುರಿತು ವಾಙ್ನಿಶ್ಚಯವನ್ನು ಸಹ ಕೊಟ್ಟಿದಾರೆ. ಸಿದ್ಧವಾದವಿವಾಹವನ್ನು ನಿಲ್ಲಿಸಬಾರದು. ಅರಣ್ಯಕಮಲನು ಕುಲಶೀಲಗಳಲ್ಲಿಯೂ, ಸಂಪತ್ತಿನಲ್ಲಿಯೂ ಸಾಧುವಿನೊಡನೆ ಸಮಾನನು ಎಂದು ಹೇಳಬಹುದು. ಆದುದರಿಂದ ನೀನು ಆತನನ್ನೇ ವರಿಸು," ಎಂದು ನುಡಿದಳು. ಆಗ ಕರ್ಮದೇವಿಯು ಗಂಭೀರಸ್ವರದೊಡನೆ, " ಈ ಹೃದಯವು ಸಂಪತ್ತನ್ನೂ, ಕುಲಶೀಲಗಳನ್ನೂ ಅಪೇಕ್ಷಿಸುವುದಿಲ್ಲ. ಧೈರ್ಯಶೌರ್ಯಾದಿಕ್ಷಾತ್ರ ಗುಣಗಳನ್ನು ಕೇಳಿ ಯಾವ ಪುರುಷನನ್ನು ಒಂದುಸಲ ವರಿಸುವುದೋ ಆತನೇ ಈ ಶರೀರಕ್ಕೆ ಅಧಿಪತಿಯು. ಈ ಮನಶ್ಶರೀರಗಳು ಆತನಿಗೆ ವಿನಹ ಮಿಕ್ಕವರಿಗೆ ಈ ಜನ್ಮದಲ್ಲಿ ಲಭಿಸಲಾರವು," ಎಂದು ಅಮಲೆಯೊಡನೆ ಹೇಳಿದಳು. ಕರ್ಮದೇವಿಯು ದೃಢ ನಿಶ್ಚಯದಿಂದ ಹೇಳಿದ ಮಾತುಗಳನ್ನು ಕೇಳಿ, ಅಮಲೆಯು ಅಲ್ಲಿಂದ ಹೊರಟು ಕರ್ಮದೇವಿಯ ತಾಯಿತಂದೆಗಳ ಬಳಿಗೆ ಹೋದಳು. ಅವರು ಅಮಲೆಯಿಂದ ತಮ್ಮ ಮಗಳ ಅಭಿಪ್ರಾಯವನ್ನು ತಿಳಿದು ಈ ವಿವಾಹವನ್ನು ಹೇಗೆ ನಿಲ್ಲಿಸಬೇಕೋ ಎಂದು ಆಲೋಚಿಸುತ್ತ ಇದ್ದರು. ನಿಶ್ಚಯವಾದ ವಿವಾಹವನ್ನು ನಿಲ್ಲಿಸುವುದು ಎಂದರೆ ದೊಡ್ಡ ಸಂಕಟವನ್ನು ತಂದುಕೊಳ್ಳುವುದೇ. ಏಕೆಂದರೆ ಅರಣ್ಯಕಮಲನು ಸಾಮಾನ್ಯನಲ್ಲ. ಆದಕಾರಣ ಇಂತಹ ಅವಮಾನವು ಆತನಿಗೆ ಸಂಭವಿಸಿದರೆ ಆತನೂ, ಆತನ ಬಂಧುಗಳೂ ದಂಡೆತ್ತಿಬಂದು ಮಹಾಅನರ್ಥವನ್ನು ಉಂಟು ಮಾಡುವರು. ಇದರಿಂದ ತಮಗೆ ನಷ್ಟವು ಸಂಭವಿಸುವುದಲ್ಲದೆ, ತಮ್ಮ ಪ್ರಿಯ ಪುತ್ರಿಗೂ, ಅಳಿಯನಿಗೂ ಆಪತ್ತು ಉಂಟಾಗುವುದು ಎಂದು ಆ ದಂಪತಿಗಳು ಚಿಂತಿಸಿ, ಕೊನೆಗೆ ತಮ್ಮ ಪುತ್ರಿಯ ಅಭೀಷ್ಟದಂತೆ ವಿವಾಹನ್ನು ನೆರವೇರಿಸಲು ನಿಶ್ಚಯಿಸಿಕೊಂಡರು. ಆಮೇಲೆ ಅವರು ಸಾಧುವನ್ನು ಕರೆಯಿಸಿ, ಆತನೊಡನೆ ತಮ್ಮ ಮಗಳ ವೃತ್ತಾಂತವನ್ನು ತಿಳಿಸಿ, ಆಕೆಯನ್ನು ವಿವಾಹಮಾಡಿಕೊಳ್ಳಬೇಕು ಎಂದು ಕೇಳಿದರು. ಸಾಧುವು ಮೊದಲೇ ಕರ್ಮದೇವಿಯಲ್ಲಿ ಅನುರಾಗವುಳ್ಳವನಾಗಿ ಇದ್ದುದರಿಂದ ವಿವಾಹಕ್ಕೆ ಸಮ್ಮತಿಸಿದನು. ಕೆಲವುದಿವಸಗಳಲ್ಲಿಯೇ ಕರ್ಮದೇವಿಗೂ ಸಾಧುವಿಗೂ ವಿವಾಹವು ನಡೆಯಿತು. ಕರ್ಮದೇವಿಯ ಹಸನ್ಮುಖವನ್ನು ಕಂಡು ಆಕೆಯ ಜನನೀಜನಕರು ಧನ್ಯರಾದರು. ಈ ವಿವಾಹ ವಿಷಯವು ಅರಣ್ಯಕಮಲನಿಗೆ ತಿಳಿಯಿತು. ತನಗೆ ನಿಶ್ಚಯಿಸಿದ ಕನ್ಯೆಯನ್ನು ಬೇರೊಬ್ಬನು ವಿವಾಹಮಾಡಿಕೊಂಡನು ಎಂದು ಕೇಳಿ ಆತನು

ಕ್ರೋಧಾವೇಶದಿಂದ, "ನನ್ನನ್ನು ಅವಮಾನಗೊಳಿಸಿದ ಸಾಧುವನ್ನು ಸಂಹರಿಸದೇ ಇದ್ದರೆ ನಾನು ಕ್ಷತ್ರಿಯನೇ ಅಲ್ಲ," ಎಂದು ಪ್ರತಿಜ್ಞೆಯನ್ನು ಮಾಡಿದನು. ಆಮೇಲೆ ಅರಣ್ಯಕಮಲನು ತನ್ನ ಸೈನ್ಯವನ್ನು ಯುದ್ಧಕ್ಕೆ ಸಿದ್ಧಪಡಿಸಿದನು. ಈ ವೃತ್ತಾಂತವನ್ನು ಮಾಣಿಕ್ಯರಾಜನು ಕೇಳಿ ತಾವು ಎಣಿಸಿದ ವಿಪತ್ತು ಈಗಲೇ ಸಂಭವಿಸುವಂತೆ ಇದೆಯಲ್ಲ ಎಂದು ಬಹುದುಃಖಿತರಾದನು. ಸಾಧುವು ಕೆಲವು ದಿವಸ ಅತ್ತೆಯ ಮನೆಯಲ್ಲಿ ಇದ್ದು, ಆಮೇಲೆ ತನ್ನರಾಜ್ಯಕ್ಕೆ ಹೊರಡಲು ಸಿದ್ಧನಾದನು. ಆಗ ಕರ್ಮದೇವಿಯು ಅಶ್ರುಪೂರ್ಣವಾದ ನೇತ್ರಗಳೊಡನೆ ಎಲ್ಲರಿಂದಲೂ ಅನುಜ್ಞೆಯನ್ನು ಪಡೆದು ಅತ್ತೆಯ ಮನೆಗೆ ಹೊರಟಳು. ಆ ದಂಪತಿಗಳ ಸಂರಕ್ಷಣಾರ್ಥವಾಗಿ ಒಂದುಸಾವಿರದ ಇನ್ನೂರು ಜನ ವೀರಭಟರು ಶಸ್ತ್ರಪಾಣಿಗಳಾಗಿ ಅವರೊಡನೆ ಹೊರಟರು. ಇವರು ಎಲ್ಲರೂ ಸ್ವಲ್ಪದೂರ ಹೋದಮೇಲೆ, ಅರಣ್ಯಕಮಲನು ಇವರ ಮಾರ್ಗವನ್ನು ಅಡ್ಡಗಿಸಿದನು. ಅಲ್ಲಿ ಉಭಯ ಸೈನಿಕರಿಗೂ ಘೋರಯುದ್ಧವು ಪ್ರಾರಂಭವಾಯಿತು. ಉಭಯಪಕ್ಷದಲ್ಲಿಯೂ ಅನೇಕ ವೀರರು ವೀರಸ್ವರ್ಗಕ್ಕೆ ತೆರಳಿದರು. ಆಗಅರಣ್ಯಕಮಲನು ತನ್ನ ಸೈನ್ಯಕ್ಕೆ ಜಯವು ದೊರೆಯದೇ ಇದ್ದರೆ ಸಾಧುವನ್ನು ಸಂಹರಿಸುವುದು ಅಸಾಧ್ಯವು ಎಂತಲೂ, ಸಾಧುವನ್ನು ಸಂಹರಿಸದೇ ಇದ್ದರೆ ತನ್ನ ಪ್ರತಿಜ್ಞೆಯು ವ್ಯರ್ಥವಾಗುವುದು ಎಂತಲೂ ಆಲೋಚಿಸಿದನು. ಆಗ ಆತನಿಗೆ ಒಂದು ಉಪಾಯವು ತೋರಿತು. ಕೂಡಲೆ ಆತನು ಸಾಧುವಿಗೆ, "ನೀನು ಉತ್ತಮಕ್ಷತ್ರಿಯನಾದರೆ ನನ್ನೊಡನೆ ದ್ವಂದ್ವಯುದ್ಧವನ್ನು ಮಾಡಿ ನನ್ನನ್ನು ಗೆಲ್ಲುವನಾಗು. ಆಗ ನಿನಗೆ ವಿಶೇಷ ಘನತೆಯು ಉಂಟಾಗುವುದು," ಎಂದು ಹೇಳಿ ಕಳುಹಿಸಿದನು.

ಆಗ ಸಾಧುವು ದ್ವಂದ್ವಯುದ್ಧಕ್ಕೆ ಹೋಗುವುದಕ್ಕೆ ಪತ್ನಿಯ ಅನುಮತಿಯನ್ನು ಕೇಳಿದನು. ಅದಕ್ಕೆ ಕರ್ಮದೇವಿಯು ಸಾಮಾನ್ಯ ಸ್ತ್ರೀಯರಂತೆ ಅಧೈರ್ಯವನ್ನು ಹೊಂದದೆ ಧೈರ್ಯದೊಡನೆ, "ಸ್ವಾಮಿ! ಹೋಗಿ ಬನ್ನಿ. ವೀರಧರ್ಮವನ್ನು ಪಾಲಿಸಿ. ಯುದ್ಧದಲ್ಲಿ ನಿಮಗೆ ಜಯವು ಉಂಟಾದರೆ ನಾವು ಇಹದಲ್ಲಿ ಒಬ್ಬರನ್ನು ಒಬ್ಬರು ನೋಡುವೆವು. ಇಲ್ಲದೆ ಯುದ್ಧದಲ್ಲಿ ನಿಮಗೆ ಮರಣವು ಸಂಭವಿಸಿದರೆ, ನಾನು ನಿಮ್ಮನ್ನು ಸ್ವರ್ಗದಲ್ಲಿ ನೋಡುವೆನು," ಎಂದಳು. ಪತ್ನಿಯ ಉತ್ಸಾಹವಚನಗಳಿಂದ ಸಾಧುವು ವಿಶೇಷ ಧೈರ್ಯವನ್ನು ತಳೆದು ಯುದ್ಧಕ್ಕೆ ಸಿದ್ಧನಾದನು. ಅರಣ್ಯಕಮಲನು ತನಗೆ ವಿಶೇಷ ಅವಮಾನವನ್ನು ಉಂಟುಮಾಡಿದ ಶತ್ರುವು ಇದಿರಿಗೆ ಬಂದು ನಿಂತುದನ್ನು ನೋಡಿ ಕ್ರೋಧದಿಂದ ಕಣ್ಣುಗಳಲ್ಲಿ ಕೆಂಡಗಳನ್ನು ಸುರಿಸುತ್ತ ಭುಜಾಸ್ಫಾಲನವನ್ನು ಮಾಡಿದನು. ಅವರು ಇಬ್ಬರಿಗೂ ದ್ವಂದ್ವಯುದ್ಧವು ಪ್ರಾರಂಭವಾಯಿತು. ಅವರು ಭೀಮಶಲ್ಯರಂತೆ ಸಮಾನ ಪರಾಕ್ರಮವನ್ನು ತೋರಿಸುತ್ತ, ಒಬ್ಬರಿಂದ ಒಬ್ಬರು ತಾಡಿತರಾಗಿ ಭೂಮಿಯ ಮೇಲೆ ಬಿದ್ದು ಮೂರ್ಛಿತರಾದರು. ಸಾಧುವಿಗೆ ವಿಶೇಷವಾದ

ಘಾಯಗಳು ತಗಲಿದುದರಿಂದ ಆತನು ಮೂರ್ಛೆಯಿಂದ ಎಚ್ಚರಗೊಳ್ಳದೆ ಹಾಗೆಯೇ ಸ್ವರ್ಗಕ್ಕೆ ಹೋದನು. ದೂರದಲ್ಲಿ ನಿಂತು ಯುದ್ಧವನ್ನು ನೋಡುತ್ತ ಇದ್ದ ಕರ್ಮದೇವಿಯು, ತನ್ನ ಪತಿಯ ಸ್ಥಿತಿಯನ್ನು ತಿಳಿದು ಉಕ್ಕಿಬರುವ ದುಃಖವನ್ನು ತಡೆದು, ತಾನು ಇನ್ನು ಈ ಲೋಕದಲ್ಲಿ ಇರುವುದು ಅಯುಕ್ತವು ಎಂದು ಎಣಿಸಿ ಪರಲೋಕ ಪ್ರಯಾಣಕ್ಕೆ ಸಿದ್ಧಳಾದಳು. ತಾನು ಅಪೇಕ್ಷಿಸಿದ ಪತಿಯನ್ನು ಹೊಂದಿ, ಸ್ವಾಧೀನವಾದ ಸೌಭಾಗ್ಯವನ್ನು ಕೆಲವು ಕಾಲವಾದರೂ ಅನುಭವಿಸು ವುದಕ್ಕೆ ಇಲ್ಲದೆ ಹೋಯಿತಲ್ಲ ಎಂದು ಆಕೆಗೆ ಉಂಟಾದ ದುಃಖವು, ತನ್ನ ಪತಿ ಯನ್ನು ಶೀಘ್ರದಲ್ಲಿಯೇ ಸೇರುವೆನು ಎಂಬ ಆಶೆಯಿಂದ ಸಮಾಧಾನವನ್ನು ಹೊಂದಿತು. ಕೂಡಲೆ ಕರ್ಮದೇವಿಯು ಚಿತೆಯನ್ನು ಸಿದ್ಧಪಡಿಸುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿದಳು. ಆಕೆಯ ಆಜ್ಞೆಯಂತೆ ಚಿತೆಯು ಸಿದ್ಧವಾಯಿತು. ಆಕೆಯು ತನ್ನ ಸಮೀಪದಲ್ಲಿ ನಿಂತಿದ್ದ ಭಟನ ಖಡ್ಗವನ್ನು ತೆಗೆದುಕೊಂಡು, ಸೈನಿಕರು ಆಕೆಯು ಏನುಮಾಡುವಳೋ ಎಂದು ಆಲೋಚಿಸುವಷ್ಟರಲ್ಲಿ, ತನ್ನ ಎಡಗೈಯನ್ನು ಕತ್ತರಿಸಿ ಒಬ್ಬ ಭಟನ ಕೈಯಲ್ಲಿ ಕೊಟ್ಟು ಅವನೊಡನೆ, "ನೀನು ಇದನ್ನು ತೆಗೆದುಕೊಂಡು ಹೋಗಿ ನಮ್ಮ ಮಾವನವರೊಡನೆ ಹೀಗೆ ಬಿನ್ನವಿಸು. ನಿಮ್ಮ ಸೊಸೆಯ ಮುಖವನ್ನು ಈ ಲೋಕದಲ್ಲಿ ನೋಡುವುದಕ್ಕೆ ಆಗುವುದಿಲ್ಲ ವಾದಕಾರಣ ಆಕೆಯು ತನಗೆ ಬದಲಾಗಿ ಈ ಕೈಯನ್ನು ತಮಗೆ ಕಳುಹಿಸಿದಳು. ನಿಮ್ಮ ಮಗನೂ ಸೊಸೆಯೂ ಸ್ವರ್ಗದಲ್ಲಿ ಸುಖವಾಗಿ ಇದಾರೆ, ಎಂದು ಹೇಳು," ಎಂದಳು. ಆಮೇಲೆ ಆಕೆಯು ಇನ್ನೊಬ್ಬ ಭಟನನ್ನು ಕರೆದು, "ನನ್ನ ಬಲಗೈ ಯನ್ನು ಕತ್ತರಿಸು" ಎಂದಳು. ಆ ಭಟನು ಸ್ವಲ್ಪಹೊತ್ತು ಆ ಕಾರ್ಯವನ್ನು ಮಾಡುವುದಕ್ಕೆ ಸಮ್ಮತಿಸಲಿಲ್ಲ. ಆದರೆ ಅವನು ಆಕೆಯ ಕಠಿನವಾದ ಆಜ್ಞೆ ಯನ್ನು ಮೀರಲಾರದೆ ಆಕೆಯ ಕೈಯನ್ನು ಕತ್ತರಿಸಿದನು. ಆಮೇಲೆ ಆಕೆಯು ತನ್ನ ತೌರುಮನೆಯಿಂದ ಬಂದ ಭಟನನ್ನು ಕರೆದು, "ನೀನು ಈ ಕೈಯನ್ನು ತೆಗೆದುಕೊಂಡು ಹೋಗಿ ನಮ್ಮ ತಾಯಿತಂದೆಗಳಿಗೆ ತೋರಿಸಿ ನಿಮ್ಮ ಮಗಳ ಮುಖವನ್ನು ನೋಡುವುದಕ್ಕೆ ಆಗುವುದಿಲ್ಲ, ಆದಕಾರಣ ಆಕೆಯು ಈ ಹಸ್ತ ವನ್ನು ನಿಮಗೆ ಕಳುಹಿಸಿದಳು ಎಂದು ಹೇಳು," ಎಂದು ನುಡಿದಳು. ಅನಂತರ ಆ ವೀರಬಾಲೆಯು ಪತಿಯ ಕಳೇಬರವನ್ನು ಚಿತಿಯಮೇಲೆ ಇಟ್ಟು, ತಾನು ಸಹ ಚಿತಿಯಮೇಲೆ ಕುಳಿತುಕೊಂಡು ಚಿತಿಗೆ ಬೆಂಕಿಯನ್ನು ಹಚ್ಚಿಸಿದಳು. ಅಗ್ನಿ ಹೋತ್ರನು ಆಕೆಯ ಶರೀರವನ್ನು ಭಸ್ಮಮಾಡಿ, ಆಕೆಯ ಕೀರ್ತಿಯನ್ನು ನಾಲ್ಕು ದಿಕ್ಕುಗಳಲ್ಲಿಯೂ ಪ್ರಸರಿಸುವಂತೆ ಮಾಡಿದನು. ಪುತ್ರಶೋಕದಿಂದ ಅತ್ಯಂತ ವ್ಯಾಕುಲವನ್ನು ಹೊಂದಿದ ರಣಾಂಗದೇವನು ಸೊಸೆಯ ಹಸ್ತಕ್ಕೆ ಅಗ್ನಿಸಂಸ್ಕಾರ ವನ್ನು ಮಾಡಿ, ಆ ಸ್ಥಳದಲ್ಲಿ ಒಂದು ಸರೋವರವನ್ನು ನಿರ್ಮಿಸಿದನು. ಆ ಪವಿತ್ರಸರೋವರವನ್ನು ಈಗಲೂ ಕರ್ಮಸರೋವರ ಎಂದು ಕರೆಯುತ್ತಾರೆ. ಈ ಸರೋವರದಿಂದ ಕರ್ಮದೇವಿಯ ಹೆಸರು ಶಾಶ್ವತವಾಗಿ ನಿಂತಿದೆ.

ತೋರೂದತ್ತು.

——:o:——

ಈಕೆಯ ತಂದೆಯ ಹೆಸರು ಗೋವಿಂದ ಚಂದ್ರದತ್ತ. ಈತನ ನಿವಾಸವು ಕಲಕತ್ತೆ. ಈತನು ಕ್ರೈಸ್ತವ ಧರ್ಮವನ್ನು ಅವಲಂಬಿಸಿದ ಭಾರತೀಯನು. ಈತನು ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಅನೇಕ ಕಾರ್ಯಗಳನ್ನು ಮಾಡುತ್ತ ಇದ್ದನು. ಈತನಿಗೆ ೧೮೫೬ ನೆಯ ಇಸವಿಯಲ್ಲಿ ತರುಲತಾದತ್ತು ಜನ್ಮಿಸಿದಳು. ಆತನ ಮಕ್ಕಳಲ್ಲಿ ಈಕೆಯು ಕಡೆಯವಳು. ಈಕೆಯು ಸ್ವಲ್ಪ ದೊಡ್ಡವಳಾದ ಮೇಲೆ, ದತ್ತನು ದೊಡ್ಡಮಗಳಾದ ಆರೂಬಾಯಿಯೊಡನೆ, ಈಕೆಗೂ ಓದುಬರಹವನ್ನು ಕಲಿಸಿದನು. ಅನಂತರ ಮಗನಾದ ಆಬಾಜಿಗೂ, ಈ ಹೆಣ್ಣುಮಕ್ಕಳಿಗೂ ಇಂಗ್ಲೀಷನ್ನು ಕಲಿಸುವುದಕ್ಕೆ ಶಿವಚಂದ್ರಬನರ್ಜಿ ಎಂಬ ವಿದ್ವಾಂಸನನ್ನು ನಿಯಮಿಸಿದನು. ಈ ಬಾಲಕಿಯರ ಬುದ್ಧಿಸೂಕ್ಷ್ಮತ್ವವನ್ನು ನೋಡಿ ಬನರ್ಜಿಯು ಇವರಿಗೆ ವಿಶೇಷ ಶ್ರದ್ಧೆಯಿಂದ ಬೋಧಿಸುತ್ತ ಇದ್ದನು. ಇಂಗ್ಲೀಷನ್ನು ಕಲಿಯಲು ಪ್ರಾರಂಭಿಸಿದ ಸ್ವಲ್ಪಕಾಲದಲ್ಲಿಯೇ ಈ ಅಕ್ಕತಂಗಿಯರಿಗೆ ಇಂಗ್ಲೀಷಿನ ಮಹಾ ಕಾವ್ಯಗಳ ಅರ್ಥವನ್ನು ಗ್ರಹಿಸುವಷ್ಟು ಶಕ್ತಿಯು ಉಂಟಾಯಿತು. "ಘನವನ್ನು ಹೊಂದಿದ ಮಿಲ್ಟನ್ ಕವಿವರನ ಗ್ರಂಥಗಳನ್ನು ಈ ಅಕ್ಕತಂಗಿಯರು ಪಠನ ಗ್ರಂಥ ನಾಗಿ ತೆಗೆದುಕೊಂಡು, ವಯಸ್ಸಿನಲ್ಲಿ ತಮಗೆ ಸಮಾನರಾದ ಆಂಗ್ಲೇಯ ಬಾಲಕಿ ಯರು ಗ್ರಹಿಸುವುದಕ್ಕಿಂತಲೂ ಹೆಚ್ಚಾಗಿ ಅರ್ಥವನ್ನು ಗ್ರಹಿಸಬಲ್ಲವರಾಗಿ, ಆ ಕವಿಯ ಕವಿತಾಪ್ರವಾಹಕ್ಕೆ ಅತ್ಯಾಶ್ಚರ್ಯವನ್ನು ಹೊಂದುತ್ತ ಇದ್ದರು," ಎಂದು ಒಬ್ಬ ಚರಿತ್ರಕಾರನು ಇವರನ್ನು ಕುರಿತು ಬರೆದು ಇದಾನೆ. ಈ ಜರ್ಮಾಮಿಲ್ಟನ್ ಕವಿಯು ಇಂಗ್ಲೀಷು ಕವಿಗಳಲ್ಲಿ ಬಹಳ ಶ್ರೇಷ್ಠನಾದವನಂತೆ. ಈತನ ಗ್ರಂಥ ಗಳನ್ನು ಪ್ರಥಮಶಾಸ್ತ್ರಪರೀಕ್ಷೆಗೂ, ಇನ್ನೂ ದೊಡ್ಡ ಪರೀಕ್ಷೆಗಳಿಗೂ ಪಠನೀಯ ಗ್ರಂಥಗಳಾಗಿ ಇಡುತ್ತಾರೆ ಎಂತಲೂ, ಈ ಗ್ರಂಥಗಳ ಅರ್ಥವನ್ನೂ, ಅಂತರಾರ್ಥ ವನ್ನೂ ಗ್ರಹಿಸಲು ದೊಡ್ಡ ವಿದ್ಯಾರ್ಥಿಗಳಿಗೆ ಸಹ ಕಷ್ಟವು ಎಂತಲೂ ಹೇಳುತ್ತಾರೆ. ಈ ಗ್ರಂಥಗಳು ಸಂಸ್ಕೃತದ ಮಾಘ, ನೈಷಧ ಕಾವ್ಯಗಳಂತೆ ಇವೆ ಎಂತಲೂ ಹೇಳುತ್ತಾರೆ. ಇಂತಹ ಕಠಿನವಾದ ಕಾವ್ಯಗಳ ಅಂತರಾರ್ಥವನ್ನು ಬಾಲ್ಯದಲ್ಲಿಯೇ ಗ್ರಹಿಸಿದ ತರುಲತೆಯ ಬುದ್ಧಿಕುಶಲತೆಯು ದೈವಿಕವು ಎಂದು ಹೇಳಬೇಕು. ಈಕೆಯ ಮುದ್ದಿನ ಹೆಸರು ತೋರೂದತ್ತು.

೧೮೬೯ ನೆಯ ಇಸವಿಯಲ್ಲಿ ಪುತ್ರಮರಣ ದುಃಖಿತನಾದ ಗೋವಿಂದ ಚಂದ್ರನು ಪುತ್ರಿಯರೇ ತನಗೆ ಪುತ್ರರು ಎಂದು ಎಣಿಸಿ, ಅವರನ್ನು ಯೂರೋಪ್

ಖಂಡಕ್ಕೆ ಕರೆದುಕೊಂಡು ಹೋದನು. ಆತನು ಅವರಿಗೆ ಉನ್ನತ ವಿದ್ಯೆಯನ್ನು ಕಲಿಸಲು ಎಣಿಸಿ ಪ್ರಥಮದಲ್ಲಿ ಫ್ರಾನ್ಸುದೇಶಕ್ಕೆ ಹೋಗಿ ನೀಸುನಗರದಲ್ಲಿ ನಿಂತನು. ಅಲ್ಲಿ ಆ ಸೋದರಿಯರು ತಮ್ಮ ಬುದ್ಧಿಬಲದಿಂದ ವಿದ್ಯಾರ್ಥಿವೇತನಗಳನ್ನು ಪಡೆದು, ಅಲ್ಲಿನ ಫ್ರೆಂಚ್ ವಿದ್ವಾಂಸರನ್ನು ಆಶ್ರಯಿಸಿ ಫ್ರೆಂಚ್‌ಭಾಷೆಯನ್ನು ಕಲಿತುಕೊಂಡರು. ಆಮೇಲೆ ಅವರು ಪ್ಯಾರಿಸ್ ನಗರದಲ್ಲಿ ಕೆಲವುದಿವಸ ವಾಸ ಮಾಡಿ, ಅಲ್ಲಿಂದ ಹೊರಟು ಇಟಲೀದೇಶವನ್ನು ನೋಡಿಕೊಂಡು, ಇಂಗ್ಲಾಂಡಿಗೆ ಹೋದರು. ೧೮೭೩ ನೆಯ ವರ್ಷದವರೆಗೂ ಇವರು ಅಲ್ಲಿಯೇ ಇದ್ದರು. ಅವರು ಅಲ್ಲಿ ಇದ್ದಕಾಲದಲ್ಲಿ ಆರೂತೋರುಗಳು ಇಂಗ್ಲಿಷ್, ಫ್ರೆಂಚ್ ಭಾಷೆಗಳಲ್ಲಿ ಅಸಾಧಾರಣ ಪ್ರವೀಣತೆಯನ್ನು ಪಡೆದರು. ಈ ಸೋದರಿಯರು ಕೇಂಬ್ರಿಡ್ಜ್ ಪಟ್ಟಣದಲ್ಲಿ ಇದ್ದು, ಬ್ರೇಗ್ನಿಲ್ ದೊರೆಸಾನಿಯು ಫ್ರೆಂಚ್ ಭಾಷೆಯಲ್ಲಿ ಹೇಳುತ್ತ ಇದ್ದ ಪ್ರತಿಯೊಂದು ಉಪನ್ಯಾಸವನ್ನೂ ಹೋಗಿ ಕೇಳುತ್ತ ಇದ್ದರು. ಅನಂತರ ಅವರು ಇಬ್ಬರು ಸೆಂಟುಲಿಯೋವಾರ್ನ್ಸ್ ಪಟ್ಟಣಕ್ಕೆ ಹೋಗಿ ತಮ್ಮ ಫ್ರೆಂಚ್ ವಿದ್ಯೆಯನ್ನು ವೃದ್ಧಿಮಾಡಿಕೊಂಡರು. ಯೂರಪು ಖಂಡಕ್ಕೆ ಹೋದಮೇಲೆ ತೋರೂದತ್ತು ತನ್ನ ದಿನಚರಿಯನ್ನು ಪುಸ್ತಕದಲ್ಲಿ ಪ್ರತಿದಿನವೂ ಬರೆಯುತ್ತ ಇದ್ದಳು.

ಈ ಚಿಕ್ಕ ಕುಟುಂಬವು ಫ್ರಾನ್ಸ್‌ದೇಶದಲ್ಲಿ ವಾಸಮಾಡಿದ ಕಾಲಕ್ಕಿಂತಲೂ ಹೆಚ್ಚಾದ ಕಾಲವನ್ನು ಇಂಗ್ಲಾಂಡಿನಲ್ಲಿ ಕಳೆದರೂ, ತೋರುದತ್ತಿಗೆ ಫ್ರಾನ್ಸುದೇಶದ ಮೇಲೆಯೇ ವಿಶೇಷ ಗೌರವವು ಉಂಟಾಗಿ ಇತ್ತು. ೧೮೭೧ ನೆಯ ಇಸವಿಯಲ್ಲಿ ಫ್ರಾನ್ಸಿಗೂ, ಜರ್ಮನಿಗೂ ನಡೆದ ಘೋರಯುದ್ಧದಲ್ಲಿ ಫ್ರಾನ್ಸಿಗೆ ಪರಾಭವವು ಸಂಭವಿಸಲು, ಮನಹಿಡಿಯಲಾರದೆ ತೋರೂದತ್ತು ತನ್ನ ದಿನಚರಿಯ ಪುಸ್ತಕದಲ್ಲಿ, "ನಾನು ಹಿಂದೆ ದಿನಚರ್ಯೆಯನ್ನು ಬರೆದು ಎಷ್ಟೋ ದಿವಸಗಳು ಆದವು. ಅಯ್ಯೋ! ಈ ಅವಕಾಶದಲ್ಲಿ ಫ್ರಾನ್ಸ್‌ದೇಶದಲ್ಲಿ ಎಷ್ಟು ಮಾರ್ಪುಂಟಾಯಿತು. ಪ್ಯಾರಿಸ್‌ನಗರದಲ್ಲಿ ನಾವು ಇದ್ದಾಗ ಆ ನಗರವು ಎಷ್ಟೋ ರಮಣೀಯವಾಗಿ ಇತ್ತು. ಅಲ್ಲಿನ ರಾಜಮಾರ್ಗಗಳು ರಮ್ಯವಾಗಿ ಇದ್ದವು. ಅಲ್ಲಿನ ಸೈನ್ಯಗಳನ್ನು ಸುವ್ಯವಸ್ಥೆಯಲ್ಲಿ ಇಟ್ಟಿದ್ದರು. ವೈಭವಸಂಪನ್ನವಾದ ಆ ಪಟ್ಟಣವು ಈ ದಿವಸ ಇಷ್ಟುದೀನ ದೆಶೆಗೆ ಬಂದುದನ್ನು ಕೇಳಿ ನನಗೆ ಬಹಳ ದುಃಖವಾಗಿದೆ. ಪೃಥ್ವಿಯಲ್ಲಿ ಇರುವ ಸಕಲ ನಗರಗಳಲ್ಲಿಯೂ ಸುಂದರವಾದ ನಗರವು ಎಂದು ಪ್ರಸಿದ್ಧಿಯನ್ನು ಪಡೆದ ಪ್ಯಾರಿಸ್ ಪಟ್ಟಣಕ್ಕೆ ಇಂತಹ ದೀನಾವಸ್ಥೆಯು ಉಂಟಾಯಿತು ಎಂದು ಕೇಳಿದರೆ ಯಾರ ಹೃದಯವು ತಾನೇ ದ್ರವೀಭೂತವಾಗದೆ ಇರಬಲ್ಲದು? ಫ್ರಾನ್ಸ್ ದೇಶೀಯರಿಗೂ, ಜರ್ಮನಿ ದೇಶೀಯರಿಗೂ ಯುದ್ಧವು ಪ್ರಾರಂಭವಾದ ದಿನದಿಂದಲೂ ನನ್ನ ಮನಸ್ಸು ಫ್ರಾನ್ಸ್‌ದೇಶದ ಜಯವನ್ನೇ ಅಪೇಕ್ಷಿಸುತ್ತ ಇತ್ತು. ಆದರೆ ಕೊನೆಗೆ ಫ್ರಾನ್ಸ್‌ದೇಶಕ್ಕೇ ಪರಾಜಯವು ಉಂಟಾದುದು ಬಹು ವ್ಯಸನಕರವಾದ

ವಿಷಯವು," ಎಂದು ಬರೆದಳು. ಈ ವಾಕ್ಯಗಳಿಂದ ತೋರೂದತ್ತಿಗೆ ತನ್ನ ಜನ್ಮ ಭೂಮಿಯಾದ ಹಿಂದೂದೇಶದ ಮೇಲೆ ಎಷ್ಟು ಪ್ರೀತಿಯು ಇತ್ತೋ ಅಷ್ಟು ಪ್ರೀತಿಯು ಫ್ರಾನ್ಸ್‌ದೇಶದ ಮೇಲೆ ಇತ್ತು ಎಂದು ತಿಳಿಯಬಹುದು. ಈಕೆಯು ಆ ದೇಶದ ಮೇಲೆ ತನಗೆ ಇರುವ ಗೌರವವನ್ನು ಒಂದು ಪದ್ಯಕಾವ್ಯವನ್ನು ರಚಿಸಿ ಆದರ ಮೂಲಕ ಪ್ರಕಾಶಪಡಿಸಿದಳು.

೧೮೭೩ ನೆಯ ಇಸವಿಯಲ್ಲಿ ಗೋವಿಂದಚಂದ್ರದತ್ತನು ಮಕ್ಕಳನ್ನು ಕರೆದು ಕೊಂಡು ಕಲಕತ್ತೆಯನ್ನು ಪ್ರವೇಶಿಸಿದನು. ಮನೆಗೆ ಬಂದಮೇಲೆ ತೋರೂದತ್ತು ತಂದೆಯ ಹತ್ತಿರ ಸಂಸ್ಕೃತವನ್ನು ಕಲಿಯಲು ಪ್ರಾರಂಭಮಾಡಿದಳು. ಆಮೇಲೆ ದತ್ತನು ಮಗಳಿಗೆ ಕವಿತ್ವಸ್ಫೂರ್ತಿಯು ಉಂಟಾಗುವುದಕ್ಕೆ ಸದಾ ಪ್ರೋತ್ಸಾಹ ಮಾಡುತ್ತಿದ್ದನು. ತಂದೆಯ ಪ್ರೋತ್ಸಾಹದಿಂದಲೇ ತನಗೆ ಕವಿತ್ವಶಕ್ತಿಯು ಉಂಟಾಯಿತು ಎಂದು ತೋರೂದತ್ತು ತಂದೆಯಲ್ಲಿ ಕೃತಜ್ಞಳಾಗಿ ಇದ್ದಳು.

ಆ ಕಾಲದಲ್ಲಿ ಬಂಗಾಳಾಸ್ತ್ರೀಯು ವಿದೇಶ ಭಾಷೆಯಲ್ಲಿ ಉತ್ತಮ ಕವಿತ್ವವನ್ನು ಹೇಳುವಳು ಎಂದು ಯಾರೂ ಸ್ವಪ್ನದಲ್ಲಿಯೂ ನೆನಸಿ ಇರಲಿಲ್ಲ. ಹಾಗೆ ಯಾವ ಹೆಂಗಸಾದರೂ ಕವಿತ್ವವನ್ನು ರಚಿಸಿದಳು ಎಂದು ಹೇಳಿದರೆ, ಕೇಳಿದವರು ಆ ಕವಿತ್ವವನ್ನು ಯಾರೋ ಪುರುಷನು ರಚಿಸಿ ಸ್ತ್ರೀಯಹೆಸರಿನ ಮೇಲೆ ಪ್ರಸಿದ್ಧ ಪಡಿಸಿದನು ಎಂದು ಹೇಳುತ್ತ ಇದ್ದರು. ಆದುದರಿಂದ ತೋರೂದತ್ತು ಪ್ರಥಮದಲ್ಲಿ ರಚಿಸಿ ಅಚ್ಚುಹಾಕಿಸಿದ ಪದ್ಯಗಳನ್ನು ಓದಿದವರು, ಯಾರೋ ಒಬ್ಬ ಆಂಗ್ಲೇಯ ಪುರುಷನೋ ಸ್ತ್ರೀಯೋ ಈ ಪದ್ಯಗಳನ್ನು ರಚಿಸಿ ತಮ್ಮ ಹೆಸರನ್ನು ಬರೆಯದೆ ತೋರೂದತ್ತು ಎಂದು ರುಜುಮಾಡಿ ಇರುವರು ಎಂದು ಎಣಿಸಿದರು. ಈಕೆಯು ಪ್ರಥಮದಲ್ಲಿ ಒಂದುಮಾಸ ಪತ್ರಿಕೆಗೆ ಒಬ್ಬ ಫ್ರೆಂಚ್ ಕವಿಯನ್ನು ಕುರಿತು ವ್ಯಾಸವನ್ನು ಬರೆದು ಪ್ರಕಟಿಸಿದಳು. ಆಮೇಲೆ ಅನೇಕ ಪದ್ಯಗಳನ್ನು ಫ್ರೆಂಚ್‌ಭಾಷೆಯಿಂದ ಇಂಗ್ಲೀಷ್‌ಭಾಷೆಗೆ ಪರಿವರ್ತಿಸಿ, ಆ ಮಾಸಪತ್ರಿಕೆಯಲ್ಲಿಯೇ ಪ್ರಕಟಿಸಿದಳು. ಆ ಕಾಲದಲ್ಲಿ ಈ ಪದ್ಯಗಳನ್ನು ಓದಿದವರು 'ಪದ್ಯಗಳು ಬಹುಚನ್ನಾಗಿವೆ' ಎಂದು ಮೆಚ್ಚಿಕೊಳ್ಳುತ್ತ ಇದ್ದರಂತೆ.

೧೮೭೪ ನೆಯ ಇಸವಿಯಲ್ಲಿ ಈಕೆಯ ಅಕ್ಕನಾದ ಆರೂಬಾಯಿಯು ಕ್ಷಯ ರೋಗದಿಂದ ಮೃತಳಾದಳು. ಆರೂಬಾಯಿಯು ಕವಿತ್ವಕಲ್ಪನೆಯಲ್ಲಿ ತಂಗಿ ಯಷ್ಟು ಸಾಮರ್ಥ್ಯವುಳ್ಳವಳಲ್ಲ. ಆದರೆ ಬಂಗಾಳೀ, ಫ್ರೆಂಚ್, ಇಂಗ್ಲೀಷ್‌ಭಾಷಾ ಪಾಂಡಿತ್ಯದಲ್ಲಿ ತೋರುವಿನೊಡನೆ ಸಮಾನಳಾಗಿ ಇದ್ದಳು. ಆರೂಬಾಯಿಗೆ ತನ್ನ ಹೆಸರನ್ನು ಪ್ರಸಿದ್ಧಪಡಿಸುವುದಕ್ಕೆ ಇಷ್ಟವು ಇರಲಿಲ್ಲ. ಈಕೆಗೆ ಏಕಾಂತವಾಗಿ ಇರುವುದೇ ಸೌಖ್ಯವು ಎಂದು ತೋರುತ್ತ ಇತ್ತು. ಆದರೆ ಈಕೆಯು

ತಂಗಿಯ ಕವಿತ್ವಸ್ಫೂರ್ತಿಗೆ ಬಹಳ ಸಂತೋಷಿಸುತ್ತ ಇದ್ದಳು. ಈಕೆಯು ಪಟ ಗಳನ್ನು ಬರೆಯುವುದರಲ್ಲಿ ಪ್ರವೀಣಳಾಗಿ ಇದ್ದಳು. ಈ ಸೋದರಿಯರು ಇಂಗ್ಲಾಂಡಿ ನಿಂದ ಬಂದಮೇಲೆ ತೋರೂದತ್ತು ಗ್ರಂಥಗಳನ್ನು ರಚಿಸುವಂತೆಯೂ, ಆರೂ ಬಾಯಿಯು ಅವುಗಳಿಗೆ ತಕ್ಕ ಪಟಗಳನ್ನು ಬರೆಯುವಂತೆಯೂ ಏರ್ಪಾಟುಮಾಡಿ ಕೊಂಡರು. ಆದರೆ ಈ ನಿಯಮವು ಆರೂಬಾಯಿಯ ಮರಣದೊಡನೆ ಕೊನೆ ಗಂಡಿತು. ಈ ಅಕ್ಕತಂಗಿಯರು ಗಾಯನದಲ್ಲಿ ವಿಶೇಷಪ್ರಜ್ಞೆಯುಳ್ಳವರಾಗಿ ಅನೇಕ ಗಾನಯಂತ್ರಗಳನ್ನು ಕುಶಲತೆಯಿಂದ ನುಡಿಸುತ್ತ ಇದ್ದರು. ಇವರು ವಿದ್ಯಾಭ್ಯಾಸವನ್ನು ಮಾಡುತ್ತ, ಎಲ್ಲಾ ಸ್ತ್ರೀಯರಂತೆಯೇ ಗೃಹಕೃತ್ಯಗಳನ್ನು ನೆರ ವೇರಿಸುತ್ತ ಇದ್ದರು. 'ಹೆಂಗಸು ಓದಿ ಕೆಟ್ಟಳು' ಎಂಬ ಲೋಕೋಕ್ತಿಯು ಅಸತ್ಯವಾದುದು ಎಂತಲೂ, 'ಪುರುಷನು ಓದದೆ ಕೆಟ್ಟನು' ಎಂಬಂತೆ, 'ಹೆಂಗಸು ಓದದ ಕೆಟ್ಟಳು' ಎಂಬ ಲೋಕೋಕ್ತಿಯೇ ಸತ್ಯವಾದುದು ಎಂತಲೂ ಈ ಸೋದರಿ ಯರು ತಮ್ಮ ಆಚರಣೆಯಿಂದ ಸ್ಥಾಪಿಸಿದರು.

ಪ್ರತಿಯೊಂದು ಕೆಲಸದಲ್ಲಿಯೂ ತೋರೂದತ್ತಿನ ಸೂಕ್ಷ್ಮಬುದ್ಧಿಯು ಪ್ರಕಾಶವಾಗುತ್ತ ಇತ್ತು. ಗೋವಿಂದಚಂದ್ರನು ಪುತ್ರಿಯ ಸೂಕ್ಷ್ಮಬುದ್ಧಿಯನ್ನೂ, ಜ್ಞಾಪಕಶಕ್ತಿಯನ್ನೂ ನೋಡಿ ಆಶ್ಚರ್ಯವನ್ನು ಹೊಂದುತ್ತ ಇದ್ದನು. ಈಕೆಗೆ ತಾನು ರಚಿಸಿದ ಪದ್ಯಗಳು ಎಲ್ಲವೂ ಕಂಠಪಾಠವಾಗಿ ಇತ್ತಂತೆ. ಈಕೆಯು ಯಾವುದಾದರೂ ಒಂದು ಪುಸ್ತಕವನ್ನು ಓದುವಾಗ ಅದರಲ್ಲಿ ತನಗೆ ಅರ್ಥ ವಾಗದ ವಿಷಯವನ್ನು ಪುನಃಪುನಃ ಓದಿ ಅರ್ಥವನ್ನು ತಿಳಿದುಕೊಂಡ ಹೊರತು ಮುಂದಕ್ಕೆ ಓದುತ್ತ ಇರಲಿಲ್ಲ. ಹೀಗೆ ಈಕೆಯು ಆತ್ಮೋನ್ನತಿಯಲ್ಲಿ ತತ್ಪರಳಾಗಿ ಇದ್ದಳು. ಆರೂಬಾಯಿಯು ಪರಲೋಕಕ್ಕೆ ಹೋದಮೇಲೆ, ತೋರೂದತ್ತು ಅಧೈರ್ಯಪಡದೆ 'ಪದ್ಯಸಮುದಾಯ' ಎಂಬ ಗ್ರಂಥವನ್ನು ರಚಿಸಿದಳು. ಈ ಗ್ರಂಥವು ೧೮೭೬ ನೆಯ ಇಸವಿಯಲ್ಲಿ ಪ್ರಚುರವಾಯಿತು. ಅದರಲ್ಲಿ ಫ್ರೆಂಚ್ ಕವೀಶ್ವರರ ಕಾವ್ಯಗಳಿಂದ ಇಂಗ್ಲೀಷ್‌ಭಾಷೆಗೆ ತರ್ಜುಮೆಮಾಡಿದ ಪದ್ಯರೂಪ ವಾದ ಚಿಕ್ಕ ಕಥೆಗಳು ಇದ್ದವು.

ಈ ಗ್ರಂಥದ ಪೀಠಿಕೆಯಲ್ಲಿ ಒಂದು ಪದ್ಯವನ್ನು ಬರೆದು ಗ್ರಂಥವನ್ನು ತನ್ನ ತಾಯಿಗೆ 'ಕೃತಿ' ಕೊಟ್ಟಳು. ಈ ಪುಸ್ತಕವು ಬಂಗಾಳೆಯಲ್ಲಿ ಇರುವ ಭವಾನೀ ಪುರದಲ್ಲಿ ಮುದ್ರಿತವಾಯಿತು. ಆದರೆ ಈ ಗ್ರಂಥದ ಕಾಗದಗಳು ಬಹು ತೆಳು ವಾಗಿಯೂ, ಅಕ್ಷರಗಳು ಸರಿಯಾಗಿ ಕಾಣಿಸದೆಯೂ ಇದ್ದುದರಿಂದ, ಆ ಗ್ರಂಥ ದಲ್ಲಿ ಇರುವ ವಿಷಯವು ಒಳ್ಳೆಯದಾದರೂ, ಆ ಕಾಲದಲ್ಲಿ ಅದನ್ನು ಓದಲು ಯಾರಿಗೂ ಮನಸ್ಸು ಬರಲಿಲ್ಲ. ಈ ಲೋಕದಲ್ಲಿ ಅನೇಕರು ಮೇಲಿನ ಸೌಂದರ್ಯ ವನ್ನು ಅಪೇಕ್ಷಿಸುವುದು ನಿಜವೇ ಆದರೂ, ಗುಣಪರೀಕ್ಷಕರೂ, ಸತ್ಯಶೋಧಕರೂ

ಆದ ಸುಜನರು ಸಹ ಕೆಲವರು ಇರುತ್ತಾರೆ. ತೋರೂದತ್ತಿನ ಭಾಗ್ಯವಶದಿಂದ ಇಂತಹ ಗುಣಗ್ರಹಣಪಾರೀಣನು ಒಬ್ಬನು ಇಂಗ್ಲಾಂಡುದೇಶದಲ್ಲಿ ಇದ್ದನು. ಈತನ ಹೆಸರು ಪ್ರೊಫೆಸರ್ ಎಡ್ಮಂಡ್ ಗ್ಯಾಸ್. ದೈವವಶಾತ್ತಾಗಿ ಈ ಗ್ರಂಥವು ಆತನ ಕೈಯಲ್ಲಿ ಬೀಳುವಂತೆ ಸಂಭವಿಸಿತು. ಆತನು ಈ ಪುಸ್ತುಕವನ್ನು ಓದಿ ಇಂಗ್ಲೀಷುದೇಶದ 'ಎಕ್ಸಾಮಿನರ್' ಎಂಬ ಪತ್ರಿಕೆಯಲ್ಲಿ ಅದನ್ನು ಕುರಿತು ಕೆಳಗೆ ಬರೆದಂತೆ ಪ್ರಶಂಸೆಮಾಡಿದನು.

"ಪ್ರೊ. ಮಿಂಟೋದೊರೆಯು 'ಎಕ್ಸಾಮಿನರ್' ಎಂಬ ಪತ್ರಿಕೆಗೆ ಅಧಿಪತಿಯಾಗಿ ಇದ್ದ ಕಾಲದಲ್ಲಿ ಒಂದು ದಿವಸ ನಾನು ಅವರ ಕಾರ್ಯಸ್ಥಾನಕ್ಕೆ ಹೋದೆನು. ತನ್ನ ಹತ್ತಿರಕ್ಕೆ ವಿಮರ್ಶೆಗಾಗಿ ಬಂದ ಒಂದು ಹಿಂದೂಸ್ಥಾನದ ಪುಸ್ತುಕವನ್ನು ಆತನು ನನ್ನ ಕೈಗೆ ಕೊಟ್ಟನು. ಆ ಪುಸ್ತುಕವನ್ನು ನೋಡಿದರೆ ಅಸಹ್ಯವಾಗಿ ಕಾಣುತ್ತ ಇತ್ತು. ಇದು ಭವಾನೀಪುರದ ಸಪ್ತಾಹಿಕಸಂವಾದ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ ಇತ್ತು. ಈ ಪುಸ್ತುಕದಲ್ಲಿ ಉಪೋದ್ಘಾತವು ಇರಲಿಲ್ಲ. ಇದು ಇನ್ನೂರು ಪುಟಗಳುಳ್ಳದ್ದಾಗಿತ್ತು. ಇದನ್ನು ನೋಡಿದ ಕೂಡಲೆ ಚಿತ್ತುಕಾಗದಗಳ ಬುಟ್ಟಿಯಲ್ಲಿ ಬಿಸಾಡಬೇಕು ಎಂದು ತೋರಿತು. ಪುಸ್ತುಕವನ್ನು ಬಿಚ್ಚಿದರೆ ಅದರಲ್ಲಿ ಅರ್ಧಸರಿಯಾಗಿ ಅಚ್ಚುಬೀಳದ ಅಕ್ಷರಗಳು ಕಂಡುಬಂದುವು. ಇಂತಹ ಪುಸ್ತುಕದಲ್ಲಿ ಉತ್ತಮವಾದ ಕವಿತ್ವವು ಇರುವುದು ಎಂದು ಯಾರೂ ಎಣಿಸಲಾರರು. ನಾನು ಅದರಲ್ಲಿ ಇದ್ದ ಒಂದೆರಡು ಪದ್ಯಗಳನ್ನು ಓದಿದೊಡನೆಯೇ ನನಗೆ ಉಂಟಾದ ಆಶ್ಚರ್ಯವನ್ನು ವರ್ಣಿಸಲಾರೆನು." ತೋರೂದತ್ತು ಪ್ರಥಮದಲ್ಲಿ ರಚಿಸಿದ ಗ್ರಂಥವನ್ನೇ ಪಾಶ್ಚಾತ್ಯಪಂಡಿತರು ಹೊಗಳಿದಾಗ ಆಕೆಯು ಅನಂತರ ರಚಿಸಿದ ಗ್ರಂಥಗಳು ಎಷ್ಟು ರಸವಂತವಾಗಿ ಇರಬಹುದು ಎಂಬುದನ್ನು ಪಾಠಕರು ಊಹಿಸಬಲ್ಲರು.

ಇಂಗ್ಲೀಷ್, ಫ್ರೆಂಚ್ ಭಾಷೆಗಳು ತೋರುದತ್ತಿಗೆ ಪರಭಾಷೆಗಳೇ ಆದರೂ ಆಕೆಯು ಆ ಭಾಷೆಗಳಲ್ಲಿ ಸ್ವಭಾಷೆಯಲ್ಲಿ ಮಾಡುವಂತೆಯೇ ಕವಿತ್ವವನ್ನು ಮಾಡುವುದನ್ನು ನೋಡಿ ಅನೇಕರು ಆಶ್ಚರ್ಯಪಡುತ್ತ ಇದ್ದರು. ಈಕೆಯು ಬರೆದ ಕವಿತ್ವದಲ್ಲಿ ವಿಶೇಷಭಾಗವು ಭಾಷಾಂತರವಾದರೂ, ಅದರಲ್ಲಿ ಕವಿತ್ವಕ್ಕೆ ಬೇಕಾದ ಶಬ್ದಸಾಷ್ಟವ, ಅರ್ಥ ಗಾಂಭೀರ್ಯ, ರಸಪುಷ್ಟಿ, ಮೊದಲಾದ ಲಕ್ಷಣಗಳು ಇದ್ದುದರಿಂದ ಪಾಠಕರಿಗೆ ಆಕೆಯ ಕಾವ್ಯಗಳು ಭಾಷಾಂತರದಂತೆ ತೋರದೆ ಸ್ವತಂತ್ರ ರಚನೆಯಾಗಿಯೇ ತೋರುತ್ತ ಇತ್ತು. ಆಮೇಲೆ ಈಕೆಯು 'ಪ್ರಾಚೀನ ಹಿಂದೂಸ್ಥಾನದ ಹಾಡುಗಳು' ಎಂಬ ಒಂದು ಕಾವ್ಯವನ್ನು ಬರೆದಳು. ಪ್ರೊ. ಗ್ಯಾಸ್‌ದೊರೆಯು ಆ ಕಾವ್ಯಕ್ಕೆ ಪೀಠಿಕೆಯನ್ನು ಬರೆದನು. ಅದರಲ್ಲಿ ಆತನು "ಹತ್ತೊಂಬತ್ತನೆಯ ಶತಾಬ್ದದ ಕವಿಗಳ ಚರಿತ್ರೆಯನ್ನು

ಬರೆಯುವಾಗ ತೋರೂದತ್ತಿನ ಚರಿತ್ರೆಯನ್ನು ಸಹ ಬರೆಯಬೇಕು," ಎಂದು ಬರೆದು ಇದಾನೆ. ಆಂಗ್ಲೇಯ ಪಂಡಿತನ ಸ್ತೋತ್ರಕ್ಕೆ ಪಾತ್ರಳಾದ ಈ ನಾರೀ ಮಣಿಯನ್ನು ನಾನು ಸ್ತುತಿಸ ಬಲ್ಲೆನೇ.

ಪ್ರಥಮ ಗ್ರಂಥವು ಮುದ್ರಿತವಾದ ಕೆಲವು ದಿವಸಗಳಿಗೆ ತೋರೂದತ್ತಿಗೆ ವ್ಯಾಧಿಯು ಉಂಟಾಯಿತು. ಅದರಿಂದ ಈಕೆಯು, ತಂದೆಯ ಬಲವಂತ ದಿಂದ ಸಂಸ್ಕೃತ ಅಧ್ಯಯನವನ್ನು ಬಿಟ್ಟಳು. ಔಷಧೋಪಚಾರಗಳಿಂದ ವ್ಯಾಧಿಯು ಮಧ್ಯೆಮಧ್ಯೆ ಕಡಮೆಯಾದಂತೆ ತೋರಿದರೂ, ದಿನದಿನಕ್ಕೆ ಆಕೆಯ ಬಲವು ಕಡಮೆಯಾಗುತ್ತ ಇತ್ತು. ತಾನು ಈ ಪ್ರಪಂಚದಲ್ಲಿ ಇನ್ನು ಕೆಲವುದಿವಸ ಗಳು ಮಾತ್ರವೇ ಇರುವೆನು ಎಂದು ಆಕೆಗೆ ದೃಢವಾಗಿ ತೋರಿದುದರಿಂದ, ಈ ಅಲ್ಪಕಾಲದಲ್ಲಿಯೇ ಅನೇಕ ಕಾವ್ಯಗಳನ್ನು ರಚಿಸಿ, ಚಿರಕೀರ್ತಿಯನ್ನು ಪಡೆಯ ಬೇಕು ಎಂಬ ಅಭಿಲಾಷೆಯು ಈಕೆಗೆ ಹೆಚ್ಚಾಯಿತು. ಆ ಸಮಯದಲ್ಲಿ 'ಕ್ಲಾರೀಸಾಬದೇಲ್' ಎಂಬ ಒಬ್ಬ ಫ್ರೆಂಚ್‌ಸ್ತ್ರೀಯು ಬರೆದ ಒಂದು ಗ್ರಂಥ ವನ್ನು ಈಕೆಯು ಓದಿದಳು. ಆಗ ಅದನ್ನು ಇಂಗ್ಲೀಷುಭಾಷೆಗೆ ತರ್ಜುಮೆ ಮಾಡಬೇಕು ಎಂಬ ಇಚ್ಛೆಯುಳ್ಳವಳಾಗಿ, 'ಆ ಗ್ರಂಥವನ್ನು ಭಾಷಾಂತರ ಮಾಡುವುದಕ್ಕೆ ಅನುಜ್ಞೆಯನ್ನು ಕೊಡಬೇಕು ಎಂದು ತದ್ಗ್ರಂಥಕರ್ತ್ರಿಗೆ ಬರೆ ದಳು. ಆ ಫ್ರೆಂಚ್‌ಸ್ತ್ರೀಯು ತನ್ನ ಗ್ರಂಥವನ್ನು ಭಾಷಾಂತರಮಾಡುವುದಕ್ಕೆ ಈಕೆಗೆ ಅನುಜ್ಞೆಯನ್ನು ಕೊಟ್ಟಳು. ಅಂದಿನಿಂದ ಅವರು ಇಬ್ಬರಿಗೂ ವಿಶೇಷ ಸ್ನೇಹವು ಉಂಟಾಯಿತು. ಕೃತಜ್ಞತಾಸೂಚಕವಾಗಿ ತನ್ನ ಪಠವನ್ನೂ, ತಾನು ಸಂಸ್ಕೃತದಿಂದ ಫ್ರೆಂಚ್‌ಭಾಷೆಗೆ ಪರಿವರ್ತಿಸಿದ ಕೆಲವು ಸರಸಪದ್ಯಗಳನ್ನೂ ತೋರೂದತ್ತು ಆ ಫ್ರೆಂಚ್‌ನಾರೀಮಣಿಗೆ ಕಳುಹಿಸಿದಳು. ಈ ಪದ್ಯಗಳನ್ನು ಆ ಗ್ರಂಥಕರ್ತ್ರಿಯು ಎಷ್ಟೋ ಮೆಚ್ಚಿಕೊಂಡಳಂತೆ. ಆದರೆ ತೋರೂದತ್ತು ಈ ಗ್ರಂಥವನ್ನು ಭಾಷಾಂತರ ಮಾಡದೆಯೇ ೧೮೭೭ ನೆಯ ವರ್ಷದಲ್ಲಿ ಸ್ವರ್ಗಸ್ಥ ಳಾದಳು. ಈಕೆಯು ಅಂತ್ಯಸಮಯದಲ್ಲಿ ಹೇಳಿದ ವಾಕ್ಯಗಳಿಂದ ಈಕೆಯ ಶುದ್ಧಾಂತಃಕರಣವು ವ್ಯಕ್ತವಾಗುತ್ತದೆ. ಆ ವಿಷಯವನ್ನು ಕುರಿತು ಈಕೆಯ ತಂದೆಯು "ತೋರೂದತ್ತು, ತನ್ನ ಅಂತ್ಯ ದಿವಸಗಳು ಸಮೀಪವಾಗಲು, ತನಗೆ ಔಷಧವನ್ನು ಕೊಡುತ್ತ ಇದ್ದ ಡಾಕ್ಟರಿನೊಡನೆ ಶಾರೀರಕ ಬಾಧೆಯನ್ನು ಸಹಿಸಲಾರದೆ ಇದೇನೆ. ಆದರೆ ನನ್ನ ಆತ್ಮಕ್ಕೆ ಸ್ವಲ್ಪವೂ ಆಯಾಸವು ಇಲ್ಲ. ಪರಮೇಶ್ವರನಲ್ಲಿ ನನಗೆ ದೃಢವಾದ ನಂಬಿಕೆಯು ಇದೆ, ಎಂದು ಹೇಳಿದಳು," ಎಂದು ಬರೆದು ಇದಾನೆ.

ಮೊದಲೇ ಆಬಾಜೀ, ಆರೂಬಾಯಿಯರ ಮರಣದಿಂದ ದುಃಖಪೀಡಿತ ನಾದ ಗೋವಿಂದಚಂದ್ರನು ತರುಲತೆಯ ಮರಣದಿಂದ ಅತ್ಯಂತ ವಿಹ್ವಲ ನಾದನು. ದುಃಖವೇಗವು ಸ್ವಲ್ಪ ಕಡಮೆಯಾದ ಮೇಲೆ ಆತನು ತೋರೂದತ್ತು

ವಿದ್ಯಾಭ್ಯಾಸ ಮಾಡುವ ಕೊಠಡಿಗೆ ಹೋಗಿ ನೋಡಲು ಆಕೆಯು ಬರೆದು ಇಟ್ಟ ಕೆಲವು ಕಾಗದಗಳು ದೊರೆತವು. ಆಮೇಲೆ ಅತನು ತೋರೂದತ್ತು ಮಾಡಿದ ಗ್ರಂಥಗಳನ್ನು ಎಲ್ಲ ಅಚ್ಚು ಹಾಕಿಸಲು ನಿಶ್ಚಯಿಸಿಕೊಂಡನು. ತೋರೂದತ್ತು ಪ್ರಥಮದಲ್ಲಿ ಬರೆದ ಗ್ರಂಥವು, ಎರಡನೆಯಸಲ ನಪ್ಪವಾದ ಕಾಗದಗಳಮೇಲೆ ಸುಂದರವಾದ ಅಕ್ಷರಗಳಿಂದ ಮುದ್ರಿತವಾಯಿತು. ಈ ಸಲ ದತ್ತನು ಅದರೊಡನೆ ಒಂದು ಉಪೋದ್ಘಾತವನ್ನೂ ತೋರುವಿನ ಚರಿತ್ರೆಯನ್ನೂ, ಆರು ತೋರುಗಳ ಪಠಗಳನ್ನೂ ಸೇರಿಸಿದನು. ಗೋವಿಂದಚಂದ್ರನಿಗೆ ದೊರೆತ ಕಾಗದಗಳಲ್ಲಿ ನಮ್ಮ ಪುರಾಣಗಳನ್ನು ಅನುಸರಿಸಿಯೂ, ದಂತಕಥೆಗಳನ್ನು ಅನುಸರಿಸಿಯೂ ಆಂಗ್ಲೇಯ ಭಾಷೆಯಲ್ಲಿ ಬರೆದ ಚಿಕ್ಕಚಿಕ್ಕ ಕಾವ್ಯಗಳು ಇದ್ದವು. ನವ ಕಾವ್ಯರತ್ನಗಳ ಮಾಲೆಯನ್ನು ಪೋಣಿಸಬೇಕು ಎಂದು ತೋರೂದತ್ತು ಸಂಕಲ್ಪ ಮಾಡಿದ್ದಳು. ಆದರೆ ಆಕೆಯು ಏಳು ಕಾವ್ಯಗಳನ್ನು ಮಾತ್ರವೇ ಪೂರ್ತಿಮಾಡಿದ್ದಳು. ಇನ್ನು ಎರಡು ಕಾವ್ಯಗಳನ್ನು ವಿಷ್ಣುಪುರಾಣದಿಂದ ಬರೆಯಬೇಕೆಂದು ಆಕೆಯು ಎಣಿಸಿ ಅವುಗಳನ್ನು ತತ್ಪೂರ್ವವೇ 'ಕಲಕತ್ತಾ ರಿವ್ಯೂ,' 'ಬೆಂಗಾಲ್ ಮ್ಯಾಗಜೀನ್,' ಎಂಬ ಮಾಸಪತ್ರಿಕೆಗಳಲ್ಲಿ ಪ್ರಚುರ ಪಡಿಸಿ ಇದ್ದಳು. ದತ್ತನು ಈ ಒಂಭತ್ತು ಕಾವ್ಯಗಳನ್ನು ಸೇರಿಸಿ ಒಂದು ಪುಸ್ತಕವಾಗಿ ಮುದ್ರಿಸಿದನು.

ತೋರೂದತ್ತು ಸ್ವರ್ಗಸ್ಥಳಾಗುವುದಕ್ಕೆ ಪೂರ್ವದಲ್ಲಿ 'ಕುಮಾರೀಡಾರ್ವೆರ್' ಎಂಬ ಫ್ರೆಂಚ್‌ಸ್ತ್ರೀಯ ಆತ್ಮವೃತ್ತ' ಎಂಬ ಕಥೆಯನ್ನು ಸ್ವಂತವಾಗಿ ಬರೆಯಲು ಪ್ರಾರಂಭಿಸಿದಳು. ಪರದೇಶೀಯರನ್ನು ಕುರಿತು ಇಂತಹ ಕಥೆಗಳನ್ನು ಬರೆಯ ಬೇಕಾದರೆ ಅವರ ಆಚಾರವ್ಯವಹಾರಗಳೂ ಅವರ ದೇಶ ಚರಿತ್ರೆ ಮೊದಲಾದವು ಗಳೂ ಚನ್ನಾಗಿ ತಿಳಿದು ಇರಬೇಕು. ತೋರೂದತ್ತು ಆ ದೇಶದಲ್ಲಿ ಇದ್ದ ಸ್ವಲ್ಪ ಕಾಲದಲ್ಲಿಯೇ ಈ ವಿಷಯಗಳನ್ನು ಎಲ್ಲ ತಿಳಿದುಕೊಂಡು ಇದ್ದಳು. ಈ ಕಲ್ಪಿತ ಕಥೆಯು ಅಷ್ಟು ಶ್ರೇಷ್ಠವಾದುದು ಎಂದು ಹೇಳುವುದಕ್ಕೆ ಆಗುವು ದಿಲ್ಲ. ಆದರೆ ತೋರೂದತ್ತು ಬದುಕಿ ಇದ್ದು ಇದನ್ನು ಪುನಃ ತಿದ್ದಿ ಅಚ್ಚು ಹಾಕಿಸಿದ್ದರೆ ಇದು ಉತ್ತಮವಾದ ಗ್ರಂಥವೇ ಆಗಿರಬಹುದು. ಬಾಡೆರು ಎಂಬ ಒಬ್ಬ ಫ್ರೆಂಚ್‌ಸ್ತ್ರೀಯು ಈ ಗ್ರಂಥವನ್ನು ಸರಿಮಾಡಿ ಪ್ರಚುರಪಡಿಸಿದಳು.

ಕವಯಿತ್ರಿ ಎಂತಲೂ, ಗ್ರಂಥಕರ್ತ್ರಿ ಎಂತಲೂ ಪ್ರಸಿದ್ಧಳಾದ ತರುಲತೆಯು ನಮ್ಮ ಭಾರತಮಹಿಳೆಯರ ದುರದೃಷ್ಟವಶದಿಂದ ಅಲ್ಪಕಾಲದಲ್ಲಿಯೇ ಮೃತಿಹೊಂದಿದಳು. ಆದರೆ ಘನಕಾವ್ಯ ನಿರ್ಮಾಣವು ಎಂಬ ಘನಕಾರ್ಯ ಸಂಚಯದಿಂದ, ತೋರೂದತ್ತಿನ ಜೀವಿತ ಪರಿಮಾಣವು ಅತ್ಯಲ್ಪವಾದುದು ಆದರೂ, ಆಕೆಯು ದೀರ್ಘಾಯುಷ್ಮತಿಯೇ, ಮೃತಜೀವಿಯೇ ಎಂದು ಹೇಳಬೇಕು.

ತಾರಾಬಾಯಿ.

———o———

ಈಕೆಯು ಕ್ಷತ್ರಿಯವಂಶದಲ್ಲಿ ಜನಿಸಿ, ಶೂರಳೆಂತಲೂ ಗುಣವತಿಯೆಂತಲೂ ಬಹು ಪ್ರಸಿದ್ಧಿಯನ್ನು ಪಡೆದಳು. ಈಕೆಯ ಕಾಲವನ್ನು ತಿಳಿಯಲು ಪ್ರಸ್ತುತದಲ್ಲಿ ಯಾವ ಆಧಾರವೂ ದೊರೆಯದ ಕಾರಣ ಆ ಪ್ರಯತ್ನವನ್ನು ಬಿಟ್ಟು ಆಕೆಯ ಚರಿತ್ರೆಯನ್ನು ಮಾತ್ರ ಇಲ್ಲಿ ಬರೆದಿರುವೆನು.

ಮ್ಲೇಚ್ಛರ ಕಾಲದಲ್ಲಿ ನಮ್ಮ ದೇಶದ ಸಂಸ್ಥಾನೀಕರೂ, ರಾಜರೂ ಬಹು ಕಷ್ಟದೆಶೆಯಲ್ಲಿ ಇದ್ದರು. ಪ್ರಜೆಗಳು ತುರುಕರ ಬಾಧೆಯಿಂದ ಬಹು ಹೀನಸ್ಥಿತಿಯಲ್ಲಿ ಇದ್ದರು. ಆ ಸಮಯದಲ್ಲಿ ರಾಜಪುಠಾನಾದೇಶದಲ್ಲಿ ವೇದನಗರವೆಂಬ ಒಂದು ಚಿಕ್ಕ ಸಂಸ್ಥಾನವು ಇತ್ತು. ಸೂರನಾರ್ಥರಾವ್ ಎಂಬಾತನು ಅದನ್ನು ಪಾಲಿಸುತಲಿದ್ದನು. ಈತನು ವಿಶೇಷ ಬಲಪರಾಕ್ರಮಗಳುಳ್ಳವನಾದುದರಿಂದ ತುರುಷ್ಕರಿಂದ ತನ್ನ ರಾಜ್ಯಕ್ಕೆ ಯಾವ ಅಪಾಯವೂ ಉಂಟಾಗದಂತೆ ಕಾಪಾಡಿಕೊಂಡು ಇದ್ದನು. ಆದರೆ ಆತನು ಬಹು ವೃದ್ಧನಾದ ಮೇಲೆ ಒಂದುಸಲ ದಿಲ್ಲಾಯೆಂಬ ಒಬ್ಬ ಯವನನು ವೇದನಗರದ ಮೇಲೆ ದಂಡೆತ್ತಿ ಬಂದನು. ಆ ರಾಜನು ಅವನೊಡನೆ ಯುದ್ಧಮಾಡಲು ತನಗೆ ಶಕ್ತಿಯಿಲ್ಲದುದರಿಂದ, ರಾಜ್ಯವನ್ನು ಆ ತುರಷ್ಕನಿಗೆ ಬಿಟ್ಟು, ತನ್ನ ಮುದ್ದಿನ ಮಗಳಾದ ತಾರಾಬಾಯಿಯನ್ನು ಕರೆದುಕೊಂಡು ತಕ್ಷಶಿಲಾ ಅಥವಾ ತಕಪೂರ್ ಎಂಬ ಸ್ಥಳಕ್ಕೆ ಹೋಗಿ ಅಲ್ಲಿ ವಾಸಮಾಡುತಲಿದ್ದನು. ಆತನಿಗೆ ಈ ಕನ್ಯೆಯು ಹೊರತು ಬೇರೆ ಮಕ್ಕಳಾಗಲಿ, ಬಂಧುಗಳಾಗಲಿ. ಆಪ್ತರಾಗಲಿ ಇರಲಿಲ್ಲ. ಈ ಕನ್ಯೆಗೆ ಬಾಲ್ಯದಲ್ಲಿಯೇ ಮಾತೃವಿಯೋಗವು ಉಂಟಾದುದರಿಂದ ಈಕೆಯನ್ನು ತಂದೆಯು ಬಹು ಪ್ರೀತಿಯಿಂದ ಸಾಕುತಲಿದ್ದನು. ಅಲ್ಲಿ ಸೂರನಾರ್ಥರಾಯನು ಕನ್ಯಾಸಹಿತನಾಗಿ ವಾಸಮಾಡುತಲಿರುವನು ಎಂದು ಕೇಳಿ ದಿಲ್ಲಾಯವನನು ಆತನನ್ನು ಅಲ್ಲಿಯೂ ಇರಗೊಡದೆ ಓಡಿಸಿದನು. ಆದುದರಿಂದ ಆತನು ಪ್ರಿಯವಾದ ಆ ಪಟ್ಟಣವನ್ನು ಬಿಟ್ಟು ಅಬೂಬೆಟ್ಟದಮೇಲೆ ವಾಸಮಾಡುತಲಿದ್ದನು. ಆ ಕಾಲದಲ್ಲಿ ಪ್ರತಿಯೊಬ್ಬ ರಾಜನೂ ತನ್ನ ರಾಜ್ಯವನ್ನು ಕಾಪಾಡಿಕೊಳ್ಳಬೇಕಾದುದು ಅತ್ಯವಶ್ಯಕವಾಗಿದ್ದುದರಿಂದ ಸೂರನಾರ್ಥರಾಯನು ಎಷ್ಟು ಕೇಳಿದರೂ ಆತನಿಗೆ ಯಾವ ರಾಜನೂ ಸಹಾಯಮಾಡಲಿಲ್ಲ.

ಸೂರನಾರ್ಥರಾಯನಿಗೆ ಪುತ್ರರು ಇಲ್ಲದುದರಿಂದ ಈ ಕನ್ಯೆಯಿಂದಲೇ ತನ್ನ ಹಗೆಯನ್ನು ತೀರಿಸಿಕೊಳ್ಳಬೇಕು ಎಂದು ಎಣಿಸಿ, ಆ ಬಾಲಿಕೆಗೆ, ಪುತ್ರನಿಗೆ

ಕಲಿಸುವಂತೆ ಯುದ್ಧವಿದ್ಯೆಯನ್ನು ಕಲಿಸುತಲಿದ್ದನು. ಆ ಬಾಲೆಯು ಸಹ ಆ ಪರ್ವತಪ್ರಾಂತದಲ್ಲಿ ಪಿತನ ಸೇವೆಯನ್ನುಮಾಡುತ್ತ ಆತನು ತಿಳಿಸುವ, ರಣ ವಿದ್ಯೆಯನ್ನು ಶ್ರದ್ಧೆಯಿಂದ ಕಲಿಯುತಲಿದ್ದಳು. ಆಕೆಗೆ ಸ್ವಲ್ಪ ಜ್ಞಾನವು ಬಂದ ಮೇಲೆ, ತಂದೆಯು ತನಗೆ ಧನುರ್ವಿದ್ಯೆಯನ್ನು ಕಲಿಸುವ ಕಾರಣವನ್ನು ಅರಿತು, ಉತ್ಸಾಹದೊಡನೆ ಶಸ್ತ್ರಾಸ್ತ್ರ ವಿದ್ಯೆಗಳನ್ನು ಅಭ್ಯಸಿಸಿ ಪ್ರವೀಣಳಾದಳು. ಬಾಲ್ಯ ದಿಂದ ಯುದ್ಧವಿದ್ಯೆಯನ್ನು ಕಲಿಯುತಲಿದ್ದುದರಿಂದ ಆಕೆಯ ಶರೀರವು ಬಹು ದೃಢವಾದುದೂ, ಚಪಲತೆಯುಳ್ಳದುದೂ ಆಯಿತು. ಅರಣ್ಯವಾಸದಿಂದಲೂ ತಂದೆಯ ಉಪದೇಶವನ್ನು ಕೇಳುತಲಿದ್ದುದರಿಂದಲೂ ಆಕೆಯ ಶರೀರದಂತೆಯೇ ಮನಸ್ಸು ಸಹ ವಜ್ರಸಮನಾಗಿ ಅತಿಕಠಿನವಾಗಿತ್ತು. ಆ ಬಾಲೆಯು ದೊಡ್ಡವ ಳಾದ ಹಾಗೆಲ್ಲ ತಂದೆಗೆ ಉಂಟಾದ ಅವಮಾನಕ್ಕೆ ದುಃಖಿಸುತ್ತ, ಅವಮಾನ ಕಾರಣನಾದ ಆ ಯವನನನ್ನು ಕೊಂದು ಹಗೆ ತೀರಿಸಿಕೊಳ್ಳಲು ಸಮಯವನ್ನು ನಿರೀಕ್ಷಿಸುತ್ತಾ ಇದ್ದಳು. ತಾರಾಬಾಯಿಯು ಅನುಪಮಸೌಂದರ್ಯವತಿ ಯಾದಕಾರಣ ಆಕೆಯು ವಿವಾಹಯೋಗ್ಯಳಾದ ಒಡನೆ, ಆಕೆಯನ್ನು ವರಿಸಲು ಅನೇಕ ರಾಜಪುತ್ರರು ವರ್ತಮಾನವನ್ನು ಕಳುಹಿಸುತಲಿದ್ದರು. ಪ್ರಥಮದಲ್ಲಿ ಮೇವಾಡ ರಾಜಪುತ್ರನಾದ ಜಯಮಲ್ಲನು, "ತಾರಾಬಾಯಿಯನ್ನು ತನಗೆ ಕೊಡಬೇಕು," ಎಂದು ವರ್ತಮಾನವನ್ನು ಕಳುಹಿಸಿದನು. ಆಕೆಯು ತನ್ನ ತಂದೆಯ ಹಗೆಯನ್ನು ಕೊಲ್ಲದೆ, ವಿವಾಹಮಾಡಿಕೊಳ್ಳುವದಿಲ್ಲ ಎಂದು ನಿಶ್ಚಯಿಸಿ ಕೊಂಡಿದ್ದುದರಿಂದ ಆ ರಾಜಪುತ್ರನಿಗೆ, 'ನನ್ನ ತಂದೆಯ ಶತ್ರುವನ್ನು ಯಾವನು ಕೊಲ್ಲುವನೋ ಆತನನ್ನು ನಾನು ವರಿಸುವೆನು,' ಎಂದು ಹೇಳಿ ಕಳುಹಿಸಿದಳು.

ಸೂರನಾರ್ಥರಾಯನು, ಮೇವಾಡದ ಒಡೆಯನಿಗೆ ತಾನು ಮಾಂಡಲಿಕ ನಾದುದರಿಂದ, ಆತನ ಪುತ್ರನು ತನ್ನ ಪುತ್ರಿಯನ್ನು ಕೇಳುವುದು ಸನ್ಮಾನಪ್ರದ ವಾದುದು ಎಂದೆಣಿಸಿ, ಮಗಳ ಪ್ರತಿಜ್ಞೆಯನ್ನು ಆತನು ನೆರವೇರಿಸಿದರೆ ಮಗಳನ್ನು ಆತನಿಗೆ ಕೊಡಬೇಕೆಂದು ನಿಶ್ಚಯಿಸಿಕೊಂಡನು. ಜಯಮಲ್ಲನು ಶೌರ್ಯ ಹೀನನೂ ಗರ್ವಿಷ್ಠನೂ ಆದಕಾರಣ, ವಿವಾಹವಾದ ಅನಂತರ ಆಕೆಯ ಪ್ರತಿಜ್ಞೆ ಯನ್ನು ನೆರವೇರಿಸುವಂತೆ ತಿಳಿಸಿದನು. ಅದಕ್ಕೆ ಆ ತಂದೆಮಕ್ಕಳಿಬ್ಬರೂ ಸಮ್ಮತಿಸ ಲಿಲ್ಲ. ಆಗ ಆ ರಾಜಪುತ್ರನು ಆಶಾರಹಿತನಾಗಿ ಆ ವೀರಬಾಲೆಯನ್ನು ಕುರಿತು, "ನಿನ್ನ ತಂದೆಯಂತೆ ನೀನೂ ದರಿದ್ರಲಕ್ಷಣವುಳ್ಳವಳು. ಆದುದರಿಂದಲೇ ಈ ದಿವಸ ನನ್ನಂತಹ ದೊಡ್ಡ ರಾಜಪುತ್ರನನ್ನು ತಿರಸ್ಕರಿಸಿದೆ. ಆದಕಾರಣ ನಿನ್ನ ಮನೆಯಲ್ಲಿರುವ ಹೀನಸೇವಕನು ಹೊರತು ಮತ್ತಾರೂ ನಿನ್ನನ್ನು ವರಿಸಲಾರರು ಎಂದೆಣಿಸು" ಎಂಬುದಾಗಿ ನಿಂದಿಸಲಾರಂಭಿಸಿದನು. ಸ್ವಾಭಿಮಾನಿಯಾದ ಸೂರನಾರ್ಥರಾಯನು ಈ ನೀಚವಾಕ್ಯಗಳನ್ನು ಕೇಳಿ, ರೋಷದೊಡನೆ ತನ್ನ ಖಡ್ಗವನ್ನು ಹಿರಿದು ಆ ರಾಜಪುತ್ರನನ್ನು ಕೊಂದನು. ಈ ವರ್ತಮಾನವು

ಜಯಮಲ್ಲನ ತಂದೆಯಾದ ರಾಯಮಲ್ಲನಿಗೆ ತಿಳಿಯಲು ಆತನು ಸ್ವಲ್ಪವೂ ಚಿಂತಿಸದೆ, "ನಮ್ಮ ನಿರ್ಮಲವಾದ ವಂಶಕ್ಕೆ ಕಳಂಕವನ್ನುಂಟುಮಾಡಲು ಜನಿಸಿದ್ದ ಈ ದುಷ್ಟನನ್ನು ಶಿಕ್ಷಿಸಿದುದು ಒಳ್ಳೆಯ ಕೆಲಸವು," ಎಂದು ಸೂರನಾರ್ಥರಾಯನನ್ನು ಕೊಂಡಾಡಿದನು.

ರಾಯಮಲ್ಲನಿಗೆ ಪೃಥಿವೀರಾಜ ಎಂಬ ಇನ್ನೊಬ್ಬ ಮಗನು ಇದ್ದನು. ತಂದೆಯು ಆತನನ್ನು ಯಾವ ಕಾರಣದಿಂದಲೋ ದ್ವೇಷಿಸಿ ತ್ಯಜಿಸಿದ್ದನು. ಆದರೆ ಈಪ್ರಕಾರವಾಗಿ ಪ್ರಥಮಪುತ್ರನು ಗತಿಸಿದ ಅನಂತರ ಪೃಥಿವೀರಾಜನನ್ನು ಕರೆಸಿ, ಆತನಿಗೆ ಯುವರಾಜಪದವಿಯನ್ನು ಕೊಟ್ಟನು. ಗುಣವಂತನೂ, ನ್ಯಾಯಪ್ರಿಯನೂ ಆದ ಪೃಥಿವೀರಾಜನ ಬರುವಿಕೆಗೆ ಪ್ರಜೆಗಳೆಲ್ಲರೂ ಆನಂದಿತರಾದರು. ಆತನು ಯುವರಾಜಪದವಿಯನ್ನು ಪಡೆದಮೇಲೆ, ತಾರಾಬಾಯಿಯ ಗುಣರೂಪಗಳನ್ನು ಕೇಳಿ, ತನ್ನ ಶೌರ್ಯವನ್ನು ತೋರಿಸಿ ತಾರಾಬಾಯಿಯ ಪಾಣಿಗ್ರಹಣವನ್ನು ಮಾಡಲು ನಿಶ್ಚಯಿಸಿ, ಹೊಸದಾಗಿ ಏಳೆಂಟುಸಾವಿರ ಸೈನ್ಯವನ್ನು ಸಿದ್ಧಪಡಿಸಿಕೊಂಡು, ಸೂರನಾರ್ಥರಾಯನ ಶತ್ರುವಿನಮೇಲೆ ದಂಡೆತ್ತಲು ಹೊರಟನು. ತಾರಾಬಾಯಿಯು ಸಹ ಪುರುಷವೇಷವನ್ನು ಧರಿಸಿ ಪೃಥಿವೀರಾಜನೊಡನೆ ಹೊರಟಳು.

ಇವರೆಲ್ಲರೂ ಥೋದಾನಗರ (ವೇದನಗರಕ್ಕೆ ತುರುಷ್ಕರು ಇಟ್ಟಿದ್ದ ಹೆಸರು) ವನ್ನು ಸಮೀಪಿಸಿದ ದಿವಸ ಮೊಹರಂ ಹಬ್ಬದಕೊನೆಯ ದಿವಸವಾಗಿದ್ದುದರಿಂದ, ಆ ನಗರವಾಸಿಗಳಾದ ಯವನರೆಲ್ಲರೂ ಅಧಿಕೋತ್ಸಾಹದೊಡನೆ ಪೀರರನ್ನು ಗುಮ್ಮಟಗಳಲ್ಲಿಟ್ಟು, ಮೆರವಣಿಗೆಯನ್ನು ಮಾಡುತ್ತ ಆನಂದಮಹೋತ್ಸವದಲ್ಲಿ ನಿಮಗ್ನರಾಗಿದ್ದರು. ಅಲ್ಲಿನ ಪ್ರಭುವಾದ ದಿಲ್ಲಾ ತನ್ನ ಸೌಧದಮೇಲೆ, ಉತ್ಸವಾವಲೋಕನ ತತ್ಪರನಾಗಿ ದಿವ್ಯ ವಸ್ತ್ರಾಭರಣಗಳನ್ನು ಅಲಂಕರಿಸಿಕೊಳ್ಳುತಲಿದ್ದನು. ಅಂತಹ ಸಮಯದಲ್ಲಿ ಪೃಥಿವೀರಾಜನೂ, ತಾರಾಬಾಯಿಯೂ ತಮ್ಮ ಸೈನ್ಯವೆಲ್ಲವನ್ನೂ ನಗರದ್ವಾರದಲ್ಲಿ ಇರಿಸಿ, ಒಬ್ಬ ಭೃತ್ಯನನ್ನು ಮಾತ್ರ ಕರೆದುಕೊಂಡು ಉತ್ಸವವನ್ನು ನೋಡಲು ಬಂದವರಂತೆ ಆ ಪ್ರಜಾಸಮೂಹದೊಡನೆ ಹೋಗುತಲಿದ್ದರು. ಹೋಗುತ್ತ ಆ ಸೌಧವನ್ನು ಸಮೀಪಿಸಿದರು. ಆಗ ತಾರಾಬಾಯಿಯು ಶತ್ರುವನ್ನು ಗುರುತು ಹಿಡಿದು, ಅವನ ಎದೆಗೆ ಗುರಿಯಿಟ್ಟು ಒಂದು ಬಾಣವನ್ನು ಬಿಟ್ಟಳು. ಆ ಶಸ್ತ್ರಘಾತದಿಂದ ಆ ಮ್ಲೇಚ್ಛನು ಕೂಡಲೆ ಯಮಪುರಿಯನ್ನು ಸೇರಿದನು. ತಕ್ಷಣವೇ ಯವನರು ನಗರದ್ವಾರದಲ್ಲಿ ಬಂದು ಮತ್ತಗಜವನ್ನು ನಿಲ್ಲಿಸಿ, ತಮ್ಮ ಪ್ರಭುವಿನ ಪ್ರಾಣಗಳನ್ನು ಅಪಹರಿಸಿದಯೋಧನನ್ನು ಹುಡುಕಲು ಹೊರಟರು. ತಾರಾಬಾಯಿಯು ತನ್ನ ಹಗೆಯನ್ನು ಕೊಂದ ಅನಂತರ ಆ ಮೂರು ಜನರೂ ತಮ್ಮ ಸೈನ್ಯವನ್ನು ಸೇರುವುದಕ್ಕಾಗಿ, ತ್ವರಿತಗತಿಯಿಂದ ಹೊರಟು ನಗರದ್ವಾರವನ್ನು ಸಮೀಪಿಸಲು, ಅಲ್ಲಿರುವ ಮತ್ತಗಜವು

ಇವರನ್ನು ತಡೆಯಿತು. ಅಲ್ಲಿರುವ ಸೈನಿಕರು ಇವರನ್ನು ಸುತ್ತಿಕೊಂಡರು. ಆದರೆ, ವೀರನಾದ ಪೃಥಿವೀರಾಜನೂ, ತಾರಾಬಾಯಿಯೂ ಧೈರ್ಯಗೆಡದೆ ಅವರೊಡನೆ ಯುದ್ಧಕ್ಕೆ ಸಿದ್ಧರಾದರು. ತಾರಾಬಾಯಿಯು ತನ್ನ ಖಡ್ಗದಿಂದ ಆ ಮತ್ತಗಜದ ಸೊಂಡಿಲನ್ನು ಕತ್ತರಿಸಲು ಆ ಗಜವು ನಗರವೆಲ್ಲವು ಕಂಪಿಸುವಂತೆ ಘೀಂಕರಿಸುತ್ತ ಹೊರಟುಹೋಯಿತು. ಅವರು ಅಲ್ಲಿರುವ ಅಲ್ಪಸೈನ್ಯವನ್ನು ಗೆದ್ದು ಹೊರಗೆ ಬಂದು ತಮ್ಮ ಸೈನ್ಯವನ್ನು ಸೇರಿದರು. ಪೃಥಿವೀರಾಜನು ನಗರಕ್ಕೆ ಮುತ್ತಿಗೆ ಹಾಕುವಂತೆ ತನ್ನ ಸೈನ್ಯಕ್ಕೆ ಅಪ್ಪಣೆ ಮಾಡಿದನು. ರಾಜಾಜ್ಞೆಯಂತೆ ಸೈನಿಕರು ನಗರವನ್ನು ಮುತ್ತಿದರು. ಯವನರಿಗೂ ರಾಜಪುತ್ರರಿಗೂ ಸ್ವಲ್ಪ ಹೊತ್ತು ಯುದ್ಧವುನಡೆದು ಯವನರು ಪರಾಜಿತರಾಗಿ ದಿಕ್ಕುದಿಕ್ಕಿಗೆ ಪಲಾಯನಮಾಡಿದರು. ಆ ಯುದ್ಧದಲ್ಲಿ ಯವನಸೈನ್ಯವು ಮೂರರಲ್ಲಿ ಒಂದು ಭಾಗವು ನಷ್ಟವಾಯಿತು. ಅನಂತರ ಪೃಥಿವೀರಾಜನೂ, ತಾರಾಬಾಯಿಯೂ ಮಹೋತ್ಸವದೊಡನೆ ನಗರವನ್ನು ಪ್ರವೇಶಿಸಿದರು. ಜಯವನ್ನು ಪಡೆದ ಸಂತೋಷದಿಂದ ತನ್ನ ಸೈನಿಕರು ತುರುಷ್ಕರನ್ನು ಹಿಡಿದುಕೊಂಡು ಹಿಂಸಿಸುತ್ತಿರುವುದನ್ನು ನೋಡಿ ತಾರಾಬಾಯಿಯು ಹಾಗೆ ಮಾಡಕೂಡದೆಂದು ಅವರಿಗೆ ಆಜ್ಞಾಪಿಸಿದಳು.

ತಂದೆಗೆ ರಾಜ್ಯವು ಲಭಿಸಿದಮೇಲೆ, ತನ್ನ ಪ್ರತಿಜ್ಞೆಯಂತೆ ತಾರಾಬಾಯಿಯು ಪೃಥಿವೀರಾಜನನ್ನು ವರಿಸಿದಳು. ಸೂರನಾರ್ಥರಾಯನು ಮಗಳ ಮದುವೆಯಾದ ಅನಂತರ ರಾಜ್ಯಭಾರವನ್ನು ಅಳಿಯನಿಗೆ ವಹಿಸಿ, ತಾನು ಭಗವನ್ನಾಮಸ್ಮರಣೆಯನ್ನು ಮಾಡಿಕೊಳ್ಳುತ್ತ ನಿಶ್ಚಿಂತೆಯಿಂದ ಇದ್ದನು. ತಾರಾಬಾಯಿಯೂ, ಪೃಥಿವೀರಾಜನೂ ಪರಸ್ಪರ ಅನುರಾಗವುಳ್ಳವರಾಗಿ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತ ಸುಖವಾಗಿ ಎರಡು ವರ್ಷಗಳನ್ನು ಕಳೆದರು. ಅನಂತರ ಅವರಿಗೆ ಒಂದು ದೊಡ್ಡ ಸಂಕಟವು ಪ್ರಾಪ್ತವಾಯಿತು.

ಪೃಥಿವೀರಾಜನ ಭಾವನೈದುನನಾದ ಪ್ರಭುರಾಯನು ಬಹು ದುಷ್ಟನಾಗಿ ತನ್ನ ಪತ್ನಿಯನ್ನು ಕ್ರೂರವಾಗಿ ಹಿಂಸಿಸುತಲಿದ್ದನು. ಪೃಥಿವೀರಾಜನು ತನ್ನ ಸೋದರಿಗೆ ಉಂಟಾಗುತಲಿರುವ ಬಾಧೆಯನ್ನು ಕೇಳಿ ಸಹಿಸಲಾರದೆ ತನ್ನ ಭಾವನಿಗೆ ಒಳ್ಳೆಯ ಮಾತಿನಲ್ಲಿ ಬುದ್ಧಿಯನ್ನು ಹೇಳಿದನು. ಆದರೆ ಆ ದುಷ್ಟನು ಪೃಥಿವೀರಾಜನ ಮಾತುಗಳನ್ನು ಕೇಳದೆ ಎಂದಿನಂತೆಯೇ ತನ್ನ ಸತಿಯನ್ನು ಬಾಧಿಸುತಲಿದ್ದನು. ಅದನ್ನು ನೋಡಿ ಪೃಥಿವೀರಾಜನು ಭಾವನಿಗೆ ಕಟೂಕ್ತಿಗಳಿಂದ ಒಂದು ಪತ್ರವನ್ನು ಬರೆದು ಕಳುಹಿಸಿದನು. ಆ ಪತ್ರವನ್ನು ಓದಿ ಪ್ರಭುರಾಯನು ತನ್ನ ಭಾವನೈದುನ ಮೇಲೆ ವಿಶೇಷ ಕ್ರೋಧವುಳ್ಳವನಾಗಿ, ವೀರನಾದ ಪೃಥಿವೀರಾಜನನ್ನು ಸಹಜವಾಗಿ ಕೊಲ್ಲುವುದು ಅಸಾಧ್ಯವೆಂದು ಅರಿತು ಕಪಟಮಾರ್ಗದಿಂದ ಆತನನ್ನು ಕೊಲ್ಲಲು ನಿಶ್ಚಯಿಸಿದನು. ಅಂದಿನಿಂದ ತನ್ನ ಭಾವನೈದುನ

ನಲ್ಲಿ ಅತಿ ಮೈತ್ರಿಯನ್ನು ತೋರಿಸುತಲಿದ್ದನು. ಹೀಗೆ ಕೆಲವು ದಿವಸಗಳು ಕಳೆದ ಮೇಲೆ ಕುತ್ಸಿತನಾದ ಆ ಪ್ರಭುರಾಯನು ಭಾವಮೈದುನನಿಗೆ ಔತನವನ್ನು ಮಾಡಿದನು. ಕಪಟವನ್ನು ಅರಿಯದ ಪೃಥಿವೀರಾಜನು ಬಂದು ಅಲ್ಲಿ ಬಡಿಸಿದ ವಿಷಾನ್ನವನ್ನು ಭೋಜನಮಾಡಿ ಪುನಃ ತನ್ನ ಅರಮನೆಗೆ ಬರುತ್ತಿರಲು ಮಾರ್ಗಮಧ್ಯದಲ್ಲಿ ವಿಷವೇರಿ ಮೂರ್ಛಿತನಾದನು. ಈ ವರ್ತಮಾನವು ತಾರಾಬಾಯಿಗೆ ತಿಳಿದು, ಆಕೆಯು ಪತಿಯನ್ನು ಸಮಿಾಪಿಸಿ, ಆತನಿಗೆ ತಕ್ಕ ಚಿಕಿತ್ಸೆಯನ್ನು ಮಾಡಿದಳು. ಅದರಿಂದ ಏನೂ ಪ್ರಯೋಜನವು ಉಂಟಾಗದೆ ಆತನು ಮೃತನಾದನು. ತಾರಾಬಾಯಿಯ ಜೀವನಚರಿತ್ರೆಯು ಅಲ್ಲಿಗೆ ಮುಗಿಯಿತು. ರಾಜಪುತ್ರ ರಮಣಿಯರ ಆಚಾರದಂತೆ ತಾರಾಬಾಯಿಯು ಅನುಗಮನವನ್ನು ಮಾಡಿ ಪತಿಯನ್ನು ಅನುಸರಿಸಿ ಪರಮಪದವನ್ನು ಸೇರಿದಳು.

ವಿದ್ಯಾಸಾಗರಜನನಿ ಭಗವತೀದೇವಿ.

ದೀನಬಂಧುವೂ, ವಂಗಮಾತೆಯ ಸತ್ಪುತ್ರನೂ, ಭರತವರ್ಷವೆಂಬ ಆಕಾಶಕ್ಕೆ ತೇಜೋಮಯನಾದ ನಕ್ಷತ್ರೇಶಸ್ವರೂಪನೂ, ಅನಾಥೆಯರಿಗೆ ಧರ್ಮ ಪಿತನೂ ಆದ ಈಶ್ವರಚಂದ್ರ ವಿದ್ಯಾಸಾಗರನ ಜನನಿಯಾದ ಭಗವತೀದೇವಿಯ ಚರಿತ್ರೆಯು ಸ್ತ್ರೀಪುರುಷರಿಗೆಲ್ಲರಿಗೂ ಅನುಕರಣೀಯವಾದುದು. ಯಾವ ಸದ್ಗುಣಗಳಿಂದ ವಿದ್ಯಾಸಾಗರನು ಪ್ರಾತಃಸ್ಮರಣೀಯನಾದನೋ ಆ ಸದ್ಗುಣಗಳಿಗೆ ಆತನ ತಾಯಿಯೇ ಮೂಲಕಾರಣಳು ಎಂಬುದನ್ನು ಬಹು ಜನರು ಅರಿಯರು. ಎಂತಹ ಬೀಜವೋ ಅಂತಹ ಫಲವೇ ಉಂಟಾಗುವುದು ಎಂಬುದು, ಭಗವತೀದೇವಿ ಮತ್ತು ಈಶ್ವರಚಂದ್ರ ಇವರ ಚರಿತ್ರೆಯಿಂದ ತಿಳಿಯಬಹುದು.

ಈಕೆಯು ೧೭೨೪ ನೆಯ ಬಂಗಾಲೀವರ್ಷದ ಫಾಲ್ಗುಣಮಾಸದಲ್ಲಿ ವಂಗದೇಶದಲ್ಲಿ ಇರುವ ಒಂದು ಚಿಕ್ಕಗ್ರಾಮದಲ್ಲಿ ಬ್ರಾಹ್ಮಣವಂಶದಲ್ಲಿ ಜನಿಸಿದಳು. ಈಕೆಯ ತಂದೆಯಹೆಸರು ರಾಮಕಾಂತ ಚಟ್ಟೋಪಾಧ್ಯಾಯ. ತಾಯಿಯ ಹೆಸರು ಗಂಗಾದೇವಿ. ರಾಮಕಾಂತನು ಬಾಲ್ಯದಿಂದಲು ಐಹಿಕವಿಷಯದಲ್ಲಿ ವಿರಕ್ತನಾಗಿ, ದೈವಭಕ್ತಿಯುಳ್ಳವನಾಗಿದ್ದನು. ಆದಕಾರಣ ಆತನು ಯಾರಬಳಿಯಲ್ಲಿಯೂ ವಿಶೇಷವಾಗಿ ಮಾತನಾಡದೆ ಆಗಾಗ ಅರಣ್ಯಕ್ಕೆ ಹೋಗಿ ಏಕಾಂತದಲ್ಲಿ ಜಪವನ್ನುಮಾಡಿಕೊಳ್ಳುತಲಿದ್ದನು. ಕ್ರಮೇಣ ಈತನು ಪೂರ್ತಿಯಾಗಿ

ವಿರಕ್ತನಾದುದನ್ನು ಕೇಳಿ ಗಂಗಾದೇವಿಯ ಜನಕನಾದ ಪಂಚಾನನ ವಿದ್ಯಾವಾಗೀಶನು ತನ್ನ ಪುತ್ರಿಯನ್ನು ಸಂತಾನಸಹಿತವಾಗಿ ಪಾತೂಲವೆಂಬ ತನ್ನ ಗ್ರಾಮಕ್ಕೆ ಕರೆದುಕೊಂಡು ಹೋದನು. ಆ ದಿವಸದಿಂದಲೂ ಗಂಗಾದೇವಿಯು ತನ್ನ ಇಬ್ಬರು ಪುತ್ರಿಯರೊಡನೆ ತಂದೆಯ ಮನೆಯಲ್ಲಿಯೇ ಇದ್ದಳು. ಪಂಚಾನನ ವಿದ್ಯಾವಾಗೀಶನಿಗೆ ಇಬ್ಬರು ಹೆಣ್ಣುಮಕ್ಕಳೂ, ನಾಲ್ವರು ಗಂಡುಮಕ್ಕಳೂ ಇದ್ದರು. ಅವರಲ್ಲಿ ದೊಡ್ಡಮಗನ ಹೆಸರು ರಾಮಮೋಹನ ವಿದ್ಯಾಭೂಷಣ. ಎರಡನೆಯವನ ಹೆಸರು ರಾಮನಾಥತರ್ಕವಾಗೀಶ. ಮೂರನೆಯವನ ಹೆಸರು ಗುರುಪ್ರಸಾದ ಶಿರೋಮಣಿ. ನಾಲ್ಕನೆಯವನ ಹೆಸರು ವಿಶ್ವೇಶ್ವರತರ್ಕಾಲಂಕಾರ. ಈ ಕುಟುಂಬವು ಭೂತದಯೆ, ಧರ್ಮ, ಅತಿಥಿಸತ್ಕಾರ, ಮೊದಲಾದ ಸದ್ಗುಣಗಳಿಂದ ವಿಶೇಷ ಖ್ಯಾತಿಯನ್ನು ಪಡೆದಿತ್ತು. ವಿದ್ಯಾಸಾಗರನು ತನ್ನ ಜೀವನಚರಿತ್ರೆಯಲ್ಲಿ ಈ ಕುಟುಂಬವನ್ನು ಕುರಿತು ಹೀಗೆ ಬರೆದನು, "ಅತಿಥಿಸೇವೆಯಲ್ಲಿಯೂ, ಅಭ್ಯಾಗತರನ್ನು ಸನ್ಮಾನಿಸುವುದರಲ್ಲಿಯೂ ಈ ಕುಟುಂಬಕ್ಕೆ ಇರುವ ಶ್ರದ್ಧೆಯು ಬಹುಶ್ಲಾಘನೀಯವಾದುದು. ಅಷ್ಟು ಶ್ರದ್ಧೆಯು ಇನ್ನೊಂದು ಕುಟುಂಬದಲ್ಲಿ ಕಂಡುಬರಲಾರದು. ರಾಮಮೋಹನ ವಿದ್ಯಾಭೂಷಣನ ಮನೆಗೆ ಬಂದು ಅನ್ನವನ್ನುಕೇಳಿ, ಸಿಕ್ಕದೆ ಹೊರಟುಹೋದ ಅತಿಥಿಯು ಒಬ್ಬನಾದರೂ ಇರಲಿಲ್ಲ. ಆ ಗೃಹದಲ್ಲಿ ಇರುವ ಆ ಬಾಲವೃದ್ಧರ ಹೃದಯಗಳಲ್ಲಿ ಈ ಸುಗುಣವು ಪೂರ್ಣವಾಗಿ ಇದ್ದಿತು." ಇಂತಹ ಪರಿವಾರದಲ್ಲಿ ಬೆಳೆದುದರಿಂದಲೇ ಭಗವತೀದೇವಿಗೆ ಅಂತಹ ಸುಗುಣಗಳು ಉಂಟಾದುವು. ಆದುದರಿಂದಲೇ ಅಷ್ಟರವರೆಗೂ ದುರದೃಷ್ಟಳೆನಿಸಿಕೊಂಡಿದ್ದ ವಂಗಜನನಿಯು ತೇಜೋಮಯವಾದ ನಕ್ಷತ್ರದಂತಹ ವಿದ್ಯಾಸಾಗರನನ್ನು ಪಡೆಯಲು ಸಮರ್ಥಳಾದಳು. ತಮ್ಮ ಸಂತಾನಕ್ಕೆ ಸದ್ಗುಣಗಳನ್ನು ಕಲಿಸಲು ಕುಟುಂಬವು ಹೇಗಿರಬೇಕೆಂಬುದನ್ನು ತಿಳಿಯುವುದಕ್ಕೆ ಪಾತೂಲ ಗ್ರಾಮದ ವಿದ್ಯಾವಾಗೀಶನ ಕುಟುಂಬವು ಒಳ್ಳೆಯ ಉದಾಹರಣೆಯಾಗಿದೆ. ೧೭೩೭ ನೆಯ ವರ್ಷದಲ್ಲಿ ಬನಿಮಾಲಾಪುರ ನಿವಾಸಿಯಾದ ರಾಮಜಯವಂದ್ಯೋಪಾಧ್ಯಾಯನ ಪುತ್ರನಾದ ಠಾಕುರ್‌ದಾಸನಿಗೆ ಭಗವತೀದೇವಿಯನ್ನು ಕೊಟ್ಟು ವಿವಾಹವನ್ನು ಬೆಳೆಸಿದರು.

ಠಾಕುರ್‌ದಾಸನು ಬಾಲಕನಾಗಿರುವಾಗಲೇ ಆತನ ತಂದೆಯು ಸಂಸಾರದಲ್ಲಿ ವಿರಕ್ತನಾಗಿ ಸ್ವದೇಶವನ್ನು ತ್ಯಜಿಸಿ, ತೀರ್ಥಯಾತ್ರೆಗಳನ್ನು ಮಾಡುತ್ತಲಿದ್ದನು. ಆದಕಾರಣ ಠಾಕುರ್‌ದಾಸನ ಮಾತೆಯಾದ ದುರ್ಗಾದೇವಿಯು ತನ್ನ ತೌರುಮನೆಗೆ ಹೋಗಬೇಕಾಯಿತು. ಅಲ್ಲಿ ಆಕೆಯ ದುಃಖವು ಸ್ವಲ್ಪವೂ ಕಡಮೆಯಾಗಲಿಲ್ಲ. ಅಲ್ಲಿ ಆಕೆಗೆ ಅಣ್ಣಂದಿರ, ಮತ್ತು ಅತ್ತಿಗೆಯರ ಬಾಧೆಯು ವಿಶೇಷವಾಯಿತು. ಆಗ ದುರ್ಗಾದೇವಿಯು ಆ ಗ್ರಾಮದಲ್ಲಿಯೇ ಒಂದು ಕುಟೀರವನ್ನು ನಿರ್ಮಿಸಿಕೊಂಡು, ಅಲ್ಲಿ ವಾಸಮಾಡುತಲಿದ್ದಳು. ಆಕೆಯು

ರಾತ್ರಿಯೆಲ್ಲಾ ನೂಲು ನೂತು ಅದನ್ನು ಮಾರಿ ತಾನೂ, ತನ್ನ ಮಗನೂ ಊಟ ಮಾಡುತ್ತಲಿದ್ದರು. ಬುದ್ಧಿವಂತನಾದ ಠಾಕುರ್‌ದಾಸನು ತಾಯಿಯ ಕಷ್ಟವನ್ನು ನೋಡಲಾರದೆ ಕಲಿಕತ್ತೆಗೆ ಹೋಗಿ ಅತಿಕಷ್ಟದಿಂದ ವಿದ್ಯೆಯನ್ನು ಅಭ್ಯಸಿಸಿದನು. ಆತನು ಅಲ್ಪಕಾಲದಲ್ಲಿಯೇ ಸ್ವಲ್ಪಮಟ್ಟಿಗೆ ಓದುಬರಹವನ್ನು ಕಲಿತು ೮ ರೂಪಾಯಿಗಳ ವೇತನವುಳ್ಳ ಒಂದು ಉದ್ಯೋಗವನ್ನು ಸಂಪಾದಿಸಿದನು. ಆ ದಿವಸಗಳಲ್ಲಿ ಭೋಜನ ಪದಾರ್ಥಗಳು ಸುಲಭಕ್ರಯಕ್ಕೆ ಸಿಕ್ಕುತಲಿದ್ದುದರಿಂದ ಅಲ್ಪವೇತನವುಳ್ಳ ನೌಕರಿಯು ಸಿಕ್ಕಿದರೂ ಪ್ರಜೆಗಳು ಸಂತೋಷಿಸುತಲಿದ್ದರು. ಮಗನಿಗೆ ಉದ್ಯೋಗವು ದೊರೆಯಿತೆಂದು ಕೇಳಿ ದುರ್ಗಾದೇವಿಯು ತನ್ನ ಪರ್ಣಕುಟೀರದಲ್ಲಿ ಆನಂದೋತ್ಸವವನ್ನು ಮಾಡಿಕೊಂಡಳು. ಆ ಸಮಯದಲ್ಲಿ ಅವರ ಹಿತಾಕಾಂಕ್ಷಿಗಳೆಲ್ಲರೂ ಸಂತೋಷಿಸಿದರು. ಅನಂತರ ಕೆಲವು ದಿವಸಕ್ಕೆ ರಾಮಜಯನು (ವಿದ್ಯಾಸಾಗರನ ಅಜ್ಜನು) ಭಾರ್ಯೆಯ ಕಷ್ಟಗಳನ್ನು ಕೇಳಿ ಬಹಳ ಚಿಂತೆಯನ್ನು ಹೊಂದಿ ಮನಗೆಬಂದು ಪುತ್ರನಿಗೆ ವಿವಾಹವನ್ನುಮಾಡಿ ಮರಳಿ, ಯಾತ್ರಾರ್ಥವಾಗಿ ಹೊರಟನು. ಆದರೆ ಆಸಲ ಪೂರ್ವದಂತೆ ಬಹುದಿವಸಗಳು. ತೀರ್ಥಾಟನವನ್ನು ಮಾಡುತ್ತಲಿರದೆ ಶೀಘ್ರದಲ್ಲಿಯೇ ಮನೆಗೆ ಬಂದನು. ಆತನು ಯಾತ್ರೆಯಲ್ಲಿದ್ದಾಗ ಒಂದುದಿವಸ ಕೇದಾರ ಪರ್ವತದಲ್ಲಿ ನಿದ್ರಿಸುತಲಿರಲು ಒಬ್ಬ ಮಹಾಪುರುಷನು ಕನಸಿನಲ್ಲಿ ಕಾಣಿಸಿಕೊಂಡು, "ಓ ರಾಮಜಯನೆ! ನೀನು ಮನೆಯನ್ನು ಬಿಟ್ಟು ದೇಶದೇಶಗಳಲ್ಲಿ ಹೀಗೆ ಏಕೆ ತಿರುಗುತಲಿರುವೆ? ಬೇಗನೆ ನಿನ್ನ ಮನೆಯನ್ನು ಸೇರು. ನಿಮ್ಮ ವಂಶದಲ್ಲಿ ಒಬ್ಬ ಮಹಾಪುರುಷನು ಜನ್ಮಿಸುವನು. ಆತನ ದಯಾ, ದಾನ, ವಿದ್ಯಾದಿ ಗುಣಗಳಿಂದ ನಿಮ್ಮ ವಂಶವು ಕೀರ್ತಿಯನ್ನು ಪಡೆಯುವುದು. ನಿಮ್ಮಮೇಲೆ ಪರಮೇಶ್ವರನಿಗೆ ಅತ್ಯಂತ ಕೃಪೆಯುಂಟಾಗಿದೆ," ಎಂದಂತೆ ತೋರಿತು. ಅನಂತರ ಅದರಂತೆ ರಾಮಜಯನು ವೀರಸಿಂಹಗ್ರಾಮಕ್ಕೆ ಬಂದುನೋಡಲು ಠಾಕುರ್‌ದಾಸನು ಕಲಿಕತ್ತೆಯಲ್ಲಿ ಚಾಕರಿಯನ್ನು ಮಾಡುತಲಿದ್ದನು. ಆತನ ಪತ್ನಿಯಾದ ಭಗವತೀದೇವಿಯು ಮಾತ್ರ ಗರ್ಭವತಿಯಾಗಿ, ಉನ್ಮಾದಗ್ರಸ್ತಳಾಗಿ ಗೃಹದಲ್ಲಿಯೇ ಇದ್ದಳು. ರಾಮಜಯನು ಸೊಸೆಯ ಉನ್ಮಾದವನ್ನು ಹೋಗಲಾಡಿಸಲು ಅನೇಕ ಔಷಧೋಪಚಾರಗಳನ್ನೂ, ಮಂತ್ರ ತಂತ್ರಗಳನ್ನೂ ಮಾಡಿದನು. ಆದರೆ ಅವುಗಳಿಂದ ಪ್ರಯೋಜನವು ಏನೂ ಉಂಟಾಗಲಿಲ್ಲ. ಕೊನೆಗೆ ಒಬ್ಬ ದೈವಜ್ಞನು ಆಕೆಯ ಜಾತಕವನ್ನು ಗುಣಿಸಿ, ಆಕೆಯ ಲಕ್ಷಣಗಳನ್ನು ಪರಿಶೀಲಿಸಿ, "ಈಕೆಯ ಗರ್ಭದಲ್ಲಿ ಒಬ್ಬ ಮಹಾಪುರುಷನು ಇರುವನು. ಆತನ ಪ್ರಭಾವದಿಂದ ಈಕೆಗೆ ಉನ್ಮಾದಾವಸ್ಥೆಯು ಉಂಟಾಗಿದೆ. ಪ್ರಸವವಾದ ಅನಂತರ ಈಕೆಯ ಉನ್ಮಾದವು ಶಾಂತವಾಗುವುದು. ಔಷಧೋಪಚಾರಗಳು ಅನವಸರ," ಎಂದು ನುಡಿದನು. ೧೭೪೨ನೆಯ

ವರ್ಷದ ಆಶ್ವಯುಜಮಾಸದಲ್ಲಿ ದಯಾಸ್ವರೂಪನಾದ ಈಶ್ವರಚಂದ್ರನು ಜನ್ಮಿಸಿದನು. ಪ್ರಸವವಾದ ಅನಂತರ ಭಗವತೀದೇವಿಯು ಉನ್ಮಾದದಿಂದ ಮುಕ್ತಳಾದಳು.

ಭಗವತೀದೇವಿಯು ವಿಶೇಷ ಸೌಂದರ್ಯವತಿಯಲ್ಲ. ಆದರೆ ಆಕೆಯ ಮುಖದತೇಜವು ಮನೋಹರವಾಗಿದ್ದಿತು. ವಂಗದೇಶದಲ್ಲಿ ಆಧುನಿಕ ಪ್ರಖ್ಯಾತ ಕವಿವರನಾದ ರವೀಂದ್ರನಾಥನು ಭಗವತೀದೇವಿಯ ರೂಪವನ್ನು ಕುರಿತು, "ಭಗವತೀದೇವಿಯ ಮುಖವು ಗಾಂಭೀರ್ಯವನ್ನೂ, ಉದಾರಭಾವವನ್ನೂ ಎಷ್ಟು ನೋಡಿದರೂ ತೃಪ್ತಿಯು ಉಂಟಾಗುತಲಿರಲಿಲ್ಲ. ಬುದ್ಧಿವಿಶೇಷವನ್ನು ತೋರುವ ಉನ್ನತ ಲಲಾಟವನ್ನೂ ಸುದೂರದರ್ಶಿಗಳಾಗಿ, ಸ್ನೇಹವರ್ಷವನ್ನು ಸುರಿಯುವ ಆಯತನೇತ್ರಗಳನ್ನೂ, ಸರಲವಾದ ನಾಸಿಕವನ್ನೂ, ದಯಾಪೂರ್ಣವಾದ ಓಷ್ಠ ಪುಟಗಳನ್ನೂ ದೃಢತಾಪೂರ್ಣಗಳಾದ ಚುಬಕಗಳನ್ನೂ ಉಂಟಾಗಿರುವ ಆಕೆಯ ಮಹಿಮಾನ್ವಿತವಾದ ಮುಖಸೌಂದರ್ಯವು, ನೋಡಿದವರ ಹೃದಯದಲ್ಲಿ ಪೂಜ್ಯ ಭಾವವನ್ನುಂಟು ಮಾಡುತಲಿತ್ತು. ಇದರಿಂದ ಎಂದರೆ ಭಗವತೀದೇವಿಯ ಮುಖದಲ್ಲಿ ಭಗವತ್ಕಳೆಯಿದ್ದುದರಿಂದ ವಿದ್ಯಾಸಾಗರನು ಇತರ ಪೌರಾಣಿಕ ದೇವತೆಗಳನ್ನು ಪೂಜಿಸದೆ ತನ್ನ ತಾಯಿಯನ್ನೇ ದೇವತೆ ಎಂದೆಣಿಸಿ ಪೂಜಿಸುತ ಲಿದ್ದನು," ಎಂದು ಬರೆದಿರುವನು.

ಬಡವರ ದುಃಖವನ್ನು ನೋಡಿದರೆ ಭಗವತೀದೇವಿಗೆ ಬಹು ಕನಿಕರ ವುಂಟಾಗಿ ಕಣ್ಣುಗಳಲ್ಲಿ ನೀರು ಬರುತಲಿತ್ತು. ಕ್ಷುಧಾತುರರಿಗೆ ಅನ್ನವನ್ನು ಇಡುವುದು, ಬಾಯಾರಿದವರಿಗೆ ನೀರನ್ನು ಕೊಡುವುದು, ಚಳಿಯಿಂದ ಪೀಡಿತ ರಾದವರಿಗೆ ವಸ್ತ್ರಗಳನ್ನು ಕೊಡುವುದು, ಇವೇ ಮೊದಲಾದ ಕಾರ್ಯಗಳು ಆಕೆಗೆ ನಿತ್ಯವ್ರತಗಳಾಗಿದ್ದುವು. ತನ್ನ ಗ್ರಾಮದಲ್ಲಿ ಯಾರಿಗಾದರೂ ರೋಗ ಬಂದರೆ, ಭಗವತೀದೇವಿಯು ಕೈಯಲ್ಲಿ ಔಷಧವನ್ನು ತೆಗೆದುಕೊಂಡು ಅವರ ಸೇವೆಗೆ ಸಿದ್ಧಳಾಗುತ್ತಿದ್ದಳು. ಯಾರಾದರೂ ಅರ್ಥಾಭಾವದಿಂದ ಬಾಧೆಪಡುತ ಲಿದ್ದರೆ ಆಕೆಯು ತನ್ನಲ್ಲಿ ಇರುವುದನ್ನು ಸೆರಗಿನಲ್ಲಿ ಕಟ್ಟಿಕೊಂಡು ಗುಪ್ತವಾಗಿ ಅವರಿಗೆ ಕೊಡಲು ಹೊರಡುತಲಿದ್ದಳು. ಯಾರಾದರೂ ಚಳಿಯಿಂದ ಪೀಡಿತ ರಾಗುತಲಿದ್ದರೆ ತನ್ನ ಬಟ್ಟೆಯನ್ನು ಅವರಿಗೆ ಕೊಟ್ಟುಬಿಡುವಳು! ಆಕೆಯು ಭೂಸುರಕುಲದಲ್ಲಿ ಜನ್ಮಿಸಿದ್ದರೂ, ನೀಚಕುಲೀನರ ಮಲಮೂತ್ರಗಳನ್ನೂ ತೆಗೆದು, ಅವರಿಗೆ ಉಪಚಾರವನ್ನು ಮಾಡಲು ಸ್ವಲ್ಪವೂ ಅಸಹ್ಯಪಡುತ ಲಿರಲಿಲ್ಲ. ಇದೇ ಸತ್ಯವಾದ ಭೂತದಯೆಯು.

ಒಂದಾನೊಂದು ಸಮಯದಲ್ಲಿ ವಿದ್ಯಾಸಾಗರನು ಮನೆಯವರು ಹೊದ್ದು ಕೊಳ್ಳುವಸಲುವಾಗಿ ಕೆಲವು ತುಬಟದ ಬಟ್ಟೆಗಳನ್ನು ಕಳುಹಿಸಿದನು. ಅವು

ಮನೆಗೆ ಬಂದಮೇಲೆ ಭಗವತೀದೇವಿಯು, ತಮ್ಮ ನೆರೆಮನೆಯವರು ಚಳಿಯಿಂದ ಬಾಧೆಪಡುತಲಿರುವದನ್ನು ನೋಡಿ, ಆ ಬಟ್ಟೆಗಳನ್ನು ಅವರಿಗೆ ಕೊಟ್ಟಳು. ಅನಂತರ ಮಗನಿಗೆ, "ಈಶ್ವರಾ! ನೆರೆಮನೆಯವರು ಚಳಿಯಿಂದ ಬಾಧೆಪಡುತಲಿರುವುದನ್ನು ನೋಡಿ ಬಟ್ಟೆಗಳನ್ನು ಅವರಿಗೆ ಕೊಟ್ಟೆನು. ಆದುದರಿಂದ ಮನೆಗೆ ಬೇರೆ ಬಟ್ಟೆಗಳನ್ನು ಕಳುಹಿಸುವನಾಗು," ಎಂದು ಬರೆದಳು. ತಾಯಿಯ ಪತ್ರವನ್ನು ನೋಡಿ, ಆಕೆಯ ಭೂತದಯೆಗೆ ಸಂತೋಷಿಸಿ, ವಿದ್ಯಾಸಾಗರನು, "ನಮ್ಮ ಮನೆಗೂ, ಬಡವರಿಗೂ ಇನ್ನೆಷ್ಟು ಬಟ್ಟೆಗಳು ಬೇಕೋ ಬರೆದರೆ ಕಳುಹುವೆನು," ಎಂದು ತಾಯಿಗೆ ಪ್ರತ್ಯುತ್ತರವನ್ನು ಬರೆದನು.

ವಿದ್ಯಾಸಾಗರನ ಸಹೋದರನಾದ ದೀನಬಂಧು ನ್ಯಾಯರತ್ನನೂ ಬಹು ಉದಾರನಾಗಿದ್ದನು. ಆತನು ವಸ್ತ್ರಹೀನರನ್ನು ನೋಡಿದರೆ ತನ್ನ ಮೈಮೇಲಿರುವ ವಸ್ತ್ರವನ್ನು ಅವರಿಗೆ ಕೊಟ್ಟುಬಿಡುತಲಿದ್ದನು. ಪರರ ದುಃಖವನ್ನು ನೋಡಿದರೆ ಆತನು ಆ ದುಃಖವು ತನಗೇ ಉಂಟಾದಂತೆ ವಿಚಾರ ಪಡುತಲಿದ್ದನು. ಒಂದು ದಿವಸ ದೀನಬಂಧುವು ಬೀದಿಯಲ್ಲಿ ನಿಂತಿರಲು ಒಬ್ಬ ಬಡಹೆಂಗಸು ಒಂದು ಹರಕುಬಟ್ಟೆಯನ್ನು ಉಟ್ಟುಕೊಂಡು ಆ ಮಾರ್ಗವಾಗಿ ಹೋಗುತಲಿದ್ದಳು. ಅದನ್ನು ನೋಡಿ ದೀನಬಂಧುವು ತನ್ನ ಮೈಮೇಲಿದ್ದ ಚಿಕ್ಕವಸ್ತ್ರವನ್ನು ಉಟ್ಟುಕೊಂಡು, ಉಟ್ಟಿದ್ದ ಧೋತ್ರವನ್ನು ಅವಳಿಗೆ ಕೊಟ್ಟು, ಒಳಗೆ ಬಂದು ತಾಯಿಗೆ ಆ ವೃತ್ತಾಂತವನ್ನು ತಿಳಿಸಿದನು. ಅದಕ್ಕೆ ತಾಯಿಯು ಬಹಳ ಸಂತೋಷಪಟ್ಟು 'ಅಪ್ಪಾ! ನೀನು ಬಹುಒಳ್ಳೆಯ ಕೆಲಸವನ್ನು ಮಾಡಿದೆ. ನಾನು ಒಂದು ರಾತ್ರಿನೂಲು ನೂತರೆ ನಿನಗೆ ಧೋತ್ರವಾಗುತ್ತದೆ," ಎಂದು ನುಡಿದಳು. ಇಂತಹ ಬಡತನದಲ್ಲಿಯೂ ಅವರ ಮನೆಯು ಅತಿಥಿಗಳಿಗೂ, ಅಭ್ಯಾಗತರಿಗೂ, ದುಃಖಿಗಳಿಗೂ ಸುಖಪ್ರದವಾಗಿತ್ತು. ಅನಂತರ ವಿದ್ಯಾಸಾಗರನ ಬುದ್ಧಿಬಲದಿಂದ ಅವರು ಲಕ್ಷಾಧೀಶರಾದಾಗ ಎಷ್ಟು ದ್ರವ್ಯವನ್ನು ಪರೋಪಕಾರಾರ್ಥವಾಗಿ ವಿನಿಯೋಗಿಸಿರಬಹುದು ಎಂಬುದನ್ನು ಪಾಠಕರೇ ಊಹಿಸಬಲ್ಲರು.

ವಿದ್ಯಾಸಾಗರನು ವಿತಂತೂದ್ವಾಹಗಳನ್ನು ಕುರಿತು ಯತ್ನಮಾಡಿದುದೂ ಭಗವತೀದೇವಿಯ ಪ್ರೇರಣೆಯಿಂದಲೇ. ವಿದ್ಯಾಸಾಗರನು ಮಹೋನ್ನತಪದವಿಯಲ್ಲಿದ್ದು ತನ್ನ ಸತ್ಪಾತ್ರದಾನದಿಂದ ವಂಗದೇಶಕ್ಕೆ ಯಾವ ಕಷ್ಟವೂ ಬಾರದಂತೆ ಕಾಪಾಡುತಲಿದ್ದ ಸಮಯದಲ್ಲಿ, ಒಂದುದಿವಸ ಶ್ರೀಭಗವತೀದೇವಿಯನ್ನು ನೋಡುವುದಕ್ಕಾಗಿ ಒಬ್ಬ ಬಾಲವಿತಂತುವು ಬಂದಳು. ಆಕೆಯು ಭಗವತೀದೇವಿಯೊಡನೆ ಮಾತನ್ನಾಡುತ್ತ ಪ್ರಸಂಗವಶದಲ್ಲಿ ತನ್ನ ನಿರ್ಬಂಧ ವೈಧವ್ಯದೆಶೆಯನ್ನು ಕುರಿತು ದುಃಖದೊಡನೆ ಕೆಲವು ಮಾತುಗಳನ್ನು ಹೇಳಿದಳು. ಆರ್ತತ್ರಾಣಪರಾಯಣತ್ವವನ್ನು ವಹಿಸಿದ ಭಗವತೀದೇವಿಯು ಆಕೆಯ ಕಷ್ಟವನ್ನು

ಕೇಳಿದಕೂಡಲೇ ಹಿಡಿಯಲಾರದ ದುಃಖದೊಡನೆ ತನ್ನ ಮಗನ ಬಳಿಗೆ ಓಡಿಬಂದು, "ಕುಮಾರಾ! ನೀನು ಸಮಸ್ತಶಾಸ್ತ್ರಗಳನ್ನೂ ಓದಿರುವೆಯಲ್ಲವೇ? ಆಪನ್ನರಾದ ಬಾಲವಿತಂತುಗಳನ್ನು ಸಂರಕ್ಷಿಸುವ ಶಾಸ್ತ್ರವು ಯಾವುದೂ ಕಾಣಬರಲಿಲ್ಲವೆ?" ಎಂದು ಕೇಳಿದಳು.

ವಿದ್ಯಾಸಾಗರನು ತನ್ನ ತಾಯಿಯಲ್ಲಿ ವಿಶೇಷ ಗೌರವವುಳ್ಳವನಾಗಿದ್ದನು. ಆತನು ತನಗೆ ಉಂಟಾದ ಔನ್ನತ್ಯಕ್ಕೆ ತನ್ನ ತಾಯಿಯು ಚಿಕ್ಕತನದಲ್ಲಿ ಕಲಿಸಿದ ಸುಗುಣಗಳೇ ಕಾರಣವೆಂದು ಅರಿತಿದ್ದನು. ಬಾಷ್ಪಪೂರಿತವಾದ ನೇತ್ರಗಳುಳ್ಳ ತನ್ನ ತಾಯಿಯು ಹೇಳಿದ ಮಾತುಗಳನ್ನು ಕೇಳಿದ ಒಡನೆಯೇ ವಿದ್ಯಾಸಾಗರನು ಮರಳಿ ಶಾಸ್ತ್ರಗಳನ್ನು ಓದಲು ಪ್ರಾರಂಭಿಸಿ ಕೊನೆಗೆ ಪರಾಶರಸ್ಮೃತಿಯಲ್ಲಿ ಪುನರ್ವಿವಾಹವನ್ನು ತಪ್ಪದೆ ನಡೆಸಬೇಕೆಂಬ ಅರ್ಥವನ್ನುಳ್ಳ,

"ನಷ್ಟೇಮೃತೇ ಪ್ರವ್ರಜಿತೇ ಕ್ಲೀಬೇಚ ಪತಿತೇಪತೌ ।
ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥"

ಎಂಬ ವಾಕ್ಯವನ್ನು ಕಂಡನು.

ತನ್ನ ಕುಮಾರನು ವಿಧವಾವಿವಾಹಗಳನ್ನು ಮಾಡಲಾರಂಭಿಸಿದ ಮೇಲೆ, ಆತನಿಗೆ ಬಹುವಿಧವಾಗಿ ಧೈರ್ಯವನ್ನು ಹೇಳುತ್ತ, "ಕುಮಾರಾ! ನೀನು ಅವಲಂಬಿಸಿದ ಮಾರ್ಗವನ್ನು ಬಿಡದೆ ಈ ಮಹಾಕಾರ್ಯವನ್ನು ನಿರ್ವಹಿಸು. ನಿನಗೆ ಎಷ್ಟು ಕಷ್ಟಬಂದರೂ ನಾವು ಯಾವಾಗಲೂ ನಿನಗೆ ಸಹಾಯಕರಾಗಿರುವೆವು. ಒಂದುವೇಳೆ ನಾವು ನಿನ್ನನ್ನು ಬಿಟ್ಟರೂ ನೀನು ನಿರುತ್ಸಾಹಿಯಾಗಬೇಡ," ಎಂದು ಬೋಧಿಸುತ್ತ, ಶ್ರೀಭಗವತೀದೇವಿಯು ಬಾಲವಿತಂತುಗಳ ಭಾಗಕ್ಕೆ ಸತ್ಯವಾದ ರಕ್ಷಕಳಾಗಿ ನಿಂತಳು.

ಪುನರ್ವಿವಾಹವನ್ನು ಮಾಡಿಕೊಂಡ ವಧೂವರರನ್ನು ಆಕಾಲದಲ್ಲಿ ಅವರ ಆಪ್ತರು ತಿರಸ್ಕಾರವಾಗಿ ನೋಡಿ ಬಹುಬಾಧಿಸುತಲಿದ್ದರು. ಆ ಯುವತಿಯರನ್ನು ಭಗವತೀದೇವಿಯು ತನ್ನ ಬಳಿಗೆ ಕರೆದುಕೊಂಡು ಬಂದು ಅವರಿಗೆ ಅನೇಕ ಬುದ್ಧಿವಾದಗಳನ್ನು ಹೇಳಿ, ಅವರನ್ನು ತನ್ನ ಸಹಪಙ್ಕ್ತಿಯಲ್ಲಿ ಕುಳ್ಳಿರಿಸಿಕೊಂಡು ಭೋಜನವನ್ನು ಇಡಿಸಿ ಆಪ್ತರ ತಿರಸ್ಕಾರದಿಂದ ಖಿನ್ನರಾದ ಅವರನ್ನು ಸಂತೋಷಗೊಳಿಸುತಲಿದ್ದಳು. ಮನೆಗೆ ಬಂದ ಅತಿಥಿಗೆ ಭೋಜನವನ್ನು ಇಡಿಸಿದಲ್ಲದೆ ಆಕೆಯು ನಿದ್ರೆಮಾಡುತಲಿರಲಿಲ್ಲ.

ಸಿವಿಲಿಯರ್ಜ್ ಹರಿಸ್ಸದೊರೆಗೆ ಒಂದುದಿವಸ ಇವರ ಮನೆಯಲ್ಲಿ ಔತನವನ್ನು ಮಾಡಿದರು. ಆಗ ಭಗವತೀದೇವಿಯು ತಾನೇ ಸ್ವಂತವಾಗಿ ಅಡಿಗೆಯನ್ನು

ಮಾಡಿ ಬಡಿಸಿದಳು. ಭೋಜನವಾದ ಅನಂತರ ಅವರೆಲ್ಲರೂ ಸಂಭಾಷಿಸುವ ಸಮಯದಲ್ಲಿ ಆ ದೊರೆಯು ಭಗವತೀದೇವಿಯನ್ನು ನೋಡಿ, 'ನೀವು ಬಹು ಭಾಗ್ಯವಂತರಲ್ಲವೆ,' ಎಂದು ಕೇಳಿದನು. ಆಕೆಯು ಕಾರ್ನೇಲಿಯಾಯಂತೆ ತನ್ನ ಪುತ್ರರನ್ನು ತೋರಿಸಿ ಇವರೇ ನನ್ನ ಧನವೆಂದು ಹೇಳಿದಳು. ಆಕೆಯ ಮಾತುಗಳನ್ನು ಕೇಳಿ ದೊರೆಯು ವಿದ್ಯಾಸಾಗರನನ್ನು ನೋಡಿ, 'ಈ ಸಾಧ್ವಿಯಿಂದಲೇ ನೀನು ಇಷ್ಟು ಗುಣವಂತನಾದೆ,' ಎಂದು ನುಡಿದನು. ಆಕೆಯ ಸುಗುಣ ಸಂಪತ್ತನ್ನು ನೋಡಿ ಆಕೆಯಲ್ಲಿ ಪೂಜ್ಯಭಾವವುಳ್ಳನಾಗಿ, ಆ ಆಂಗ್ಲೇಯನು ಆಕೆಗೆ ಹಿಂದುಗಳ ಆಚಾರವನ್ನು ಅನುಸರಿಸಿ ಸಾಷ್ಟಾಂಗನಮಸ್ಕಾರವನ್ನು ಮಾಡಿದನು.

ಸ್ತ್ರೀಯರನ್ನೂ, ಪುರುಷರನ್ನೂ, ಧನಿಕರನ್ನೂ, ದರಿದ್ರರನ್ನೂ, ಕುಲೀನರನ್ನೂ, ಕುಲಹೀನರನ್ನೂ, ವಿದ್ವಾಂಸರನ್ನೂ, ಮೂರ್ಖರನ್ನೂ ಆಕೆಯು ಭೇದವಿಲ್ಲದೆ ಸಮಭಾವದಿಂದ ಆದರಿಸುತಲಿದ್ದಳು. ಈ ಸಮಭಾವವಿದ್ದುದರಿಂದಲೇ ಆಕೆಯನ್ನು ಸಮಸ್ತಜನರೂ ಗೌರವದಿಂದ ಕಾಣುತಲಿದ್ದರು.

ಉದಾರಹೃದಯಳಾದ ಭಗವತೀದೇವಿಯು ಅತಿಥಿಗಳಿಗೂ, ಅಭ್ಯಾಗತರಿಗೂ, ವಿದ್ಯಾರ್ಥಿಗಳಿಗೂ, ರೋಗಿಗಳಿಗೂ ಸಹಾಯವನ್ನು ಮಾಡುತ್ತ ವೀರಸಿಂಹ ಎಂಬ ಹಳ್ಳಿಯಲ್ಲಿಯೇ ವಾಸಮಾಡುತಲಿದ್ದಳು. ಒಂದುಸಲ ವಿದ್ಯಾಸಾಗರನು ಆಕೆಯನ್ನು ಕಲಿಕತ್ತೆಗೆ ಕರೆದುಕೊಂಡು ಬಂದನು ವೀರಸಿಂಹಗ್ರಾಮದಲ್ಲಿ ಪರೋಪಕಾರವನ್ನು ಮಾಡಿದಂತೆ ಅಲ್ಲಿಯೂ ಪರೋಪಕಾರವನ್ನು ಮಾಡಲು ಆಗುವುದಿಲ್ಲವೆಂದು, ಆಕೆಯು ಮಗನೊಡನೆ ಹೇಳಿದ ಮಾತುಗಳನ್ನು ಕೇಳಿದರೆ ಪಾಷಾಣ ಹೃದಯರೂ ದಯಾಮಯರಾಗುವರು. ಆಕೆಯು, "ನಾನು ವೀರಸಿಂಹಕ್ಕೆ ಹೋಗದಿದ್ದರೆ ನಮ್ಮ ಮನೆಯಲ್ಲಿದ್ದುಕೊಂಡು ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗೆ ಯಾರು ಭೋಜನವನ್ನು ಮಾಡಿಸುವರು? ಮಳೆ ಬಿಸಿಲುಗಳಲ್ಲಿ ನಡೆದು ಆಯಾಸದಿಂದ ಬಂದ ಪಥಿಕರಿಗೆ ಆಶ್ರಯವನ್ನು ಕೊಡುವವರಾರು? ನಿರಾಶ್ರಯವಾದ ಕುಟುಂಬಗಳಿಗೆ ಆಶ್ರಯವನ್ನು ಕೊಡುವವರಾರು? ಅನಾಥರು ಈ ಪರಿಯಾಗಿ ಕಷ್ಟಪಡುತಲಿರುವಾಗ, ನಾನು ಇಲ್ಲಿ ಹೇಗೆ ಸುಖವಾಗಿರಬಲ್ಲೆನು? ನನ್ನನ್ನು ತ್ವರೆಯಾಗಿ ವೀರಸಿಂಹಕ್ಕೆ ಕಳುಹಿಸು," ಎಂದು ಮಗನೊಡನೆ ಹೇಳಿದಳು. ಈಶ್ವರಚಂದ್ರನು ಮಾತೆಯ ಅಭಿಪ್ರಾಯವನ್ನು ತಿಳಿದು ದೀನರಕ್ಷಣಾರ್ಥವಾಗಿ ಆಕೆಯನ್ನು ವೀರಸಿಂಹಕ್ಕೆ ಕಳುಹಿದನು. ಇನ್ನೊಂದುಸಲ ಆಕೆಯನ್ನು ವಿದ್ಯಾಸಾಗರನು ಕಲಿಕತ್ತೆಗೆ ಕರೆತರಲು ಪ್ರಯತ್ನಿಸಿದನು. ಆದರೆ ಭಗವತೀದೇವಿಯು ಪರೋಪಕಾರಾರ್ಥವಾಗಿ ಆ ಹಳ್ಳಿಯನ್ನು ಬಿಡಲಿಲ್ಲ.

ಸ್ವರ್ಣಾಲಂಕಾರಗಳನ್ನು ಧರಿಸಲು ಈಕೆಯು ಸ್ವಲ್ಪವೂ ಇಷ್ಟಪಡುತಲಿರಲಿಲ್ಲ. "ಆಭರಣಗಳನ್ನು ಧರಿಸಿಕೊಂಡರೆ ಏನು ಪ್ರಯೋಜನ? ಒಂದುದಿವಸದಲ್ಲಿ

ಕಳ್ಳರು ತೆಗೆದುಕೊಂಡು ಹೋಗುವರು. ಆದರೆ ಆ ದ್ರವ್ಯದಿಂದಲೆ ಸಹಾಯಹೀನವಾದ ಕುಟುಂಬಗಳಿಗೂ, ದರಿದ್ರರಾದ ವಿದ್ಯಾರ್ಥಿಗಳಿಗೂ ಸಹಾಯ ಮಾಡಿದರೆ ಎಷ್ಟೋ ಆನಂದವು ಉಂಟಾಗುವುದು," ಎಂದು ಜನರಿಗೆ ಬೋಧಿಸುತಲಿದ್ದಳು. ಒಂದುಸಲ ವಿದ್ಯಾಸಾಗರನು ತಾಯಿಯನ್ನು ಕುರಿತು, "ಅಮ್ಮಾ, ದೇವೀಪೂಜೆಯನ್ನು ಮಾಡುವುದು ಒಳ್ಳೆಯದೇ? ಅಥವಾ ಆ ಧನದಿಂದ ಪರೋಪಕಾರವನ್ನು ಮಾಡುವುದು ಒಳ್ಳೆಯದೇ?" ಎಂದು ಕೇಳಿದನು. ಅದಕ್ಕೆ ಭಗವತೀದೇವಿಯು, "ಆ ಧನದಿಂದ ದುಃಖಿತರ ದುಃಖವು ನಿವಾರಣೆಯಾಗುವದಾದರೆ ದೇವೀಪೂಜೆಯನ್ನು ಮಾಡುವುದಕ್ಕಿಂತ ದುಃಖಿತರಿಗೆ ಕೊಡುವುದೇ ಒಳ್ಳೆಯದು," ಎಂದು ನುಡಿದಳು. ಈ ಪರೋಪಕಾರ ಪರಾಯಣಳು ತನ್ನ ವಾರ್ಧಕದಲ್ಲಿ ಕಾಶೀವಾಸಮಾಡಿ ಅಲ್ಲಿಯೇ ಸ್ವರ್ಗಸ್ಥಳಾದಳು.

ಅಸಾಮಾನ್ಯ.

---

* "ಉಪಕಾರಿಷುಯಃಸಾಧುಃ ಸಾಧುತ್ವೇತಸ್ಯಕೋಗುಣಃ?।
ಅಪಕಾರಿಷುಯಃಸಾಧುಃ ಸಸಾಧುಃಸದ್ಭಿರುಚ್ಯತೇ." ॥

ಈಕೆಯು ಸುರಾಜದ್ದೌಲನು ರಾಜ್ಯಭಾರವನ್ನು ಮಾಡುವಕಾಲದಲ್ಲಿ ಮುರ್ಷಿದಾಬಾದಿನಲ್ಲಿ ಇದ್ದಳು. ಈ ದುಷ್ಟ ಪ್ರಕೃತಿಯುಳ್ಳ ನವಾಬನ ಗುಣಗಳನ್ನು ಪಾಠಕರು ರಾಣಿಭವಾನಿಯ ಚರಿತ್ರೆಯಲ್ಲಿ ಓದಿರುವುದರಿಂದ ಆತನ ವಿಷಯವನ್ನು ಇಲ್ಲಿ ವಿಶೇಷವಾಗಿ ಬರೆಯುವುದು ಅನವಸರ. ಪೂರ್ವದ ನವಾಬನಾದ ಈತನ ಅಜ್ಜನು ಈತನನ್ನು ಬಹುಮುದ್ದಿನಿಂದ ಸಾಕಿದುದರಿಂದಲೂ, ದುಷ್ಟರಾದ ಸ್ನೇಹಿತರ ಸಹವಾಸದಿಂದಲೂ ಸುರಾಜದ್ದೌಲನು ದುರ್ವರ್ತನದಲ್ಲಿಯೇ ಬೆಳೆದು ರಾಜ್ಯಭಾರವನ್ನು ವಹಿಸುವಕಾಲಕ್ಕೆ ಒಬ್ಬ ಮಾನವ ರಾಕ್ಷಸನಾದನು. ಈತನು ರಾಜ್ಯಾರೂಢನಾದರೆ ಪ್ರಜೆಗಳು ಉಳಿಯವುದು ದುಸ್ತರವು ಎಂದು ಎಲ್ಲರೂ ಹೆದರುತಲಿದ್ದರು. ಅವರು ನೆನೆಸಿದ ಭವಿಷ್ಯತ್ತು ಸತ್ಯವಾಗಿ ಪರಿಣಮಿಸಿತು. ಈತನು ಸಿಂಹಾಸನವನ್ನು ಏರಿದ ಒಡನೆ

---

* ತನಗೊಳ್ಳಿತನನು ಗೊಳಿಸಿದ । ಮನುಜಂ ಗೊಳ್ಳಿತನೆ ಮಾಳ್ಪುದರಿದೆನಿಪುದೆ ಮೇ ॥ ದಿನಿಯೊಳಪಕಾರಿಗೊಳ್ಳಿತ । ನನುಗೊಳಿಪುದೆ ಪೆರ್ಮೆಯೆಂದೆ ನಿಳ್ಕುಂಸುಮತೀ॥

ನಿರಪರಾಧಿಗಳು ಗುಂಪುಗುಂಪಾಗಿ ಕಾರಾಗೃಹವನ್ನು ಸೇರಿದರು. ರಾಜ ಮಂದಿರದ ಸಮೀಪದಲ್ಲಾಗಲೀ ಮತ್ತಾವ ರಾಜಮಾರ್ಗದಲ್ಲಾಗಲೀ ನಡೆಯು ವುದು ದೊಡ್ಡ ಸಂಕಟವನ್ನು ತಂದುಕೊಳ್ಳಲು ಕಾರಣವಾಗಿತ್ತು. ಸುರಾಪಾನ ವನ್ನು ಮಾಡದಿರುವುದು, ವ್ಯಭಿಚಾರವನ್ನು ತಿರಸ್ಕರಿಸುವುದು, ದ್ಯೂತವನ್ನು ಆಡದಿರುವುದು, ದುರ್ಜನರನ್ನು ನಿಂದಿಸುವುದು ಧರ್ಮೋಪದೇಶವನ್ನು ಮಾಡು ವುದು, ಇವು ಪಂಚಮಹಾಪಾತಕಗಳಾಗಿದ್ದವು. ತಂದೆ, ಅಣ್ಣ, ಗಂಡ, ಮೊದ ಲಾದವರ ಕಣ್ಣಮುಂದೆ ಮಗಳು, ತಂಗಿ, ಹೆಂಡತಿ ಮೊದಲಾದವರಿಗೆ ಮಾನ ಹಾನಿಯು ಉಂಟಾಗುತಲಿತ್ತು. ಈ ನವಾಬನ ಆಳ್ವಿಕೆಯಲ್ಲಿ ರಾಜಭಟರು ಯಾವಸಮಯದಲ್ಲಿ ಯಾವಸ್ತ್ರೀಯನ್ನು ಹಿಡಿದುಕೊಂಡು ಹೋಗುವರೋ ಎಂದು ಸ್ತ್ರೀಯರೆಲ್ಲರೂ ತಲೆಬಾಗಲಿಗೂ ಬರಲು ಹೆದರಿ ಕದಗಳನ್ನು ಮುಚ್ಚಿ ಕೊಂಡು ಒಳಗೆ ಇರುತಲಿದ್ದರು. ಇತರ ದೇಶಗಳಿಗಿಂತಲೂ ವಂಗದೇಶದಲ್ಲಿ ಘೋಷಾ ಪದ್ಧತಿಯು ಹೆಚ್ಚಾಗಿರಲು ಇದೇ ಕಾರಣವು. ದುಷ್ಟರಾದ ಮ್ಲೇಚ್ಛ ಪ್ರಭುಗಳ ಭಯದಿಂದ ವಂಗಸ್ತ್ರೀಯರು ಮೂರ. ಶತಾಬ್ದಗಳ ಪರಿಯಂತ ಹಾಗೆಯೇ ಇದ್ದುದರಿಂದ, ಕೆಲವು ಕಾಲದಮೇಲೆ ಹಾಗಿರುವುದೇ ಹೆಂಗಸರಿಗೆ ಮುಖ್ಯವಾದ ಧರ್ಮವೆಂದು ಅವರಿಗೆ ತೋರಿತು. ಆಮೇಲೆ ಘೋಷೆಯಲ್ಲಿ ರುವ ಸ್ತ್ರೀಯರು ಕುಲೀನ ಸ್ತ್ರೀಯರೆಂತಲೂ, ಘೋಷೆಯನ್ನು ಬಿಟ್ಟವರು ನೀತಿದೂರರೆಂತಲೂ ಸಿದ್ಧಾಂತ ಮಾಡಿದರು. ಸ್ವಲ್ಪಕಾಲ ಕಳೆದ ಅನಂತರ ನವಾಬನ ದೃಷ್ಟಿಯು ತನ್ನ ಅಧಿಕಾರಿಗಳ ಅಂತಃಪುರಗಳ ಮೇಲೆ ಬಿದ್ದಿತು. ಯಾವ ಅಧಿಕಾರಿಯ ಬಳಿಯಲ್ಲಾಗಲಿ ಸೌಂದರ್ಯವತಿಯಾದ ಯುವತಿಯು ಇರುವಳು ಎಂದು ತಿಳಿದರೆ, ನವಾಬನು ಆ ಅಧಿಕಾರಿಯನ್ನು ಕರೆದು ತನ್ನಬಳಿಗೆ ಆ ಸ್ತ್ರೀಯನ್ನು ಕರೆದುಕೊಂಡು ಬರುವಂತೆ ಹೇಳುತಲಿದ್ದನು. ಅವನು ಕರೆತರದಿದ್ದರೆ ಅವನನ್ನು ಬಹುವಿಧವಾಗಿ ಹಿಂಸಿಸಿ ಅವನ ಅಂತಃ ಪುರದಿಂದ ಆಯುವತಿಯನ್ನು ಬಲವಂತವಾಗಿ ಕರೆಯಿಸಿಕೊಳ್ಳುತಲಿದ್ದನು.

ಇಂತಹ ಪ್ರಳಯಸಮಯದಲ್ಲಿ ಮುರ್ಷದಾಬಾದಿನಲ್ಲಿ ಜಗತ್‌ಸೇಟ್ ಎಂಬ ಅಡ್ಡಹೆಸರುಳ್ಳ ಮಹಾಧನಸಂಪನ್ನರಾದ ಸಾಹುಕಾರರು ವಾಸಮಾಡುತ ಲಿದ್ದರು. ಇವರಲ್ಲಿರುವ ಅಸಂಖ್ಯಾತ ಧನರಾಶಿಯನ್ನು ನೋಡಿ ಜನರು ಇವ ರನ್ನು ಕುಬೇರರು ಎಂದು ಕರೆಯುತಲಿದ್ದರು. ನಾಗಪೂರ್ ರಾಜನಾದ ಭೋನ್ಸ್ ಲೆಯು ಬಂಗಾಳೆಯಮೇಲೆ ದಂಡೆತ್ತಿಬಂದಾಗ, ಈ ಜಗತ್‌ಸೇಟಿನ ಗೃಹವನ್ನು ಕೊಳ್ಳೆಹೊಡೆದು ಅನೇಕಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋದನು. ಆದರೂ ಜಗತ್ಸೇಟನು, "ಮರಾಟೆಯವರು ನನ್ನ ರೂಪಾಯಿಯಲ್ಲಿ ಮೂರು ಕಾಸುಗಳನ್ನು ತೆಗೆದುಕೊಂಡುಹೋದರು," ಎಂದು ಹೇಳಿದನಂತೆ. ಹೀಗೆ ಆ ವಂಶದವರು ಅಪರಿಮಿತ ಧನಸಂಪನ್ನರಾದುದರಿಂದ ಬಂಗಾಳಾದೇಶದ ಜನ

ರೆಲ್ಲರೂ ಅವರಿಗೆ ಬಹುಮನ್ನಣೆಯನ್ನು ಮಾಡುತಲಿದ್ದರು. ಆ ಸಮಯದಲ್ಲಿ ಮುತಬ್‌ಚಂದ್‌ಎಂಬ ಸಾಹುಕಾರನು ಜಗತ್ಸೇಟನವಂಶದಲ್ಲಿ ಮುಖ್ಯನಾಗಿದ್ದನು. ಈತನು ಬುದ್ಧಿವಂತನೂ ರಾಜಕಾರ್ಯಕುಶಲನೂ ಆಗಿದ್ದುದರಿಂದ ನವಾಬನ ದರ್ಬಾರಿನಲ್ಲಿ ಈತನಿಗೆ ಅತ್ಯಂತ ಮರ್ಯಾದೆಯು ನಡೆಯುತಲಿತ್ತು. ಅಧಿಕಾರಿಗಳೆಲ್ಲರೂ ಈತನಿಗೆ ಹೆದರುತಲಿದ್ದರು. ಈತನಿಂದ ಧನಸಹಾಯವು ನವಾಬನಿಗೆ ಸರ್ವದಾ ಬೇಕಾಗಿದ್ದುದರಿಂದ ಆತನು ಎಲ್ಲರಿಗಿಂತಲು ಹೆಚ್ಚಾಗಿ ಈ ಸಾಹುಕಾರನನ್ನು ಗೌರವಿಸುತಲಿದ್ದನು. ಈ ಮುತಬ್‌ಚಂದ್ ಜಗತ್ಸೇಟನಿಗೆ ಲಾವಣ್ಯವತಿಯಾದ ಒಬ್ಬ ಮಗಳು ಇದ್ದಳು. ಆಕೆಯ ಅಸಮಾನ ರೂಪವನ್ನು ನೋಡಿ ಆಕೆಯ ತಂದೆಯು ಆಕೆಗೆ ಅಸಾಮಾನ್ಯೆ ಎಂದೇ ಹೆಸರನ್ನಿಟ್ಟಿದ್ದನು. ಗುಣವತಿಯೂ, ರೂಪವತಿಯೂ ಆದ ಈ ಅಸಾಮಾನ್ಯೆಯು ಯುಕ್ತ ವಯಸ್ಕಳಾದಅನಂತರ ಮುತಬ್‌ಚಂದನು ಆಕೆಯ ವಿವಾಹಮಹೋತ್ಸವವನ್ನು ಮಹಾವೈಭವದೊಡನೆ ಬೆಳೆಸಿದನು. ವಿವಾಹಿತಳಾದಯುವತಿಯು ಪವಿತ್ರಳೆಂತಲೂ, ಆಕೆಯನ್ನು ಮುಟ್ಟುವುದು ಅತ್ಯಂತ ಪಾಪಕಾರ್ಯವೆಂತಲೂ ಯವನರ ಧರ್ಮಶಾಸ್ತ್ರದಲ್ಲಿ ಹೇಳಿದ್ದರೂ, ಸುರಾಜದ್ದೌಲನು ಅಸಾಮಾನ್ಯೆಯ ಸೌಂದರ್ಯಖ್ಯಾತಿಯನ್ನು ಕೇಳಿ ಮೋಹಾವೇಶದಿಂದ ಹುಚ್ಚನಾದನು. ಆದರೆ ಆಕೆಯು ಜಗತ್ಸೇಟನ ಪುತ್ರಿಯಾದುದರಿಂದ ಆ ವಿಷಯವನ್ನು ಯಾರೊಡನೆಯೂ ಹೇಳುವದಕ್ಕೆ ಆಗಲಿಲ್ಲ. ಏಕೆಂದರೆ ರಾಜ್ಯದಲ್ಲಿರುವ ಪ್ರಜೆಗಳೆಲ್ಲರೂ ಜಗತ್‌ಸೇಟೆಗೆ ಅನುಕೂಲರಾದುದರಿಂದ, ತನ್ನ ದುರ್ನೀತಿಯು ಅವರಿಗೆ ತಿಳಿದರೆ ಅವರೆಲ್ಲರೂ ತನಗೆ ವಿರೋಧಿಗಳಾಗಿ, ತನ್ನನ್ನು ಏನುಮಾಡುವರೋ ಎಂಬ ಭೀತಿಯು ಅವನನ್ನು ಬಾಧಿಸುತಲಿತ್ತು. ಹೀಗೆ ಕೆಲವುದಿವಸಗಳು ಕಳೆಯಲು ಅವನು ತನ್ನ ಮನಸ್ಸನ್ನು ಹಿಡಿಯಲಾರದೆ, ಒಂದುದಿವಸ ರಾತ್ರಿ ಸಾಮಾನ್ಯ ಸ್ತ್ರೀಯಂತೆ ವೇಷವನ್ನು ಧರಿಸಿಕೊಂಡು ಜಗತ್ಸೇಟನ ಗೃಹವನ್ನು ಪ್ರವೇಶಿಸಿ, ಅಸಾಮಾನ್ಯೆಯು ವಾಸಮಾಡುವ ಅಂತಃಪುರವನ್ನು ಹೊಕ್ಕನು. ಅಲ್ಲಿಗೆ ಹೋದಅನಂತರ ಅಸಾಮಾನ್ಯೆಯ ರೂಪರಾಶಿಯನ್ನು ನೋಡಿ, ಆ ದುಷ್ಟನು ಭ್ರಮಿಸಿದನು. ಆದರೆ ತಾನು ಆ ಸಮಯದಲ್ಲಿ ಧರಿಸಿರುವ ವೇಷಕ್ಕೆ ಭಂಗ ಉಂಟಾಗುವುದು ಎಂಬುದನ್ನೂ ಎಣಿಸದೆ ಪರಮಪತಿವ್ರತೆಯಾದ ಅಸಾಮಾನ್ಯೆಯನ್ನು ಮುಟ್ಟುವುದಕ್ಕೆ ಹೋದನು. ಆಗ ಅಸಾಮಾನ್ಯೆಯು ಅತ್ಯಂತ ಭೀತಿಯಿಂದ ಕೂಗಿಕೊಳ್ಳಲು, ನವಾಬನು ಅಲ್ಲಿಂದ ಓಡಿಹೋಗಲು ಯತ್ನಿಸಿದನು. ಅಷ್ಟರಲ್ಲಿ ಆಕೆಯ ಪತಿಯೂ ಮನೆಯಲ್ಲಿರುವ ಇತರಜನರೂ ಬಂದು ಸ್ತ್ರೀವೇಷಧಾರಿಯಾದ ನವಾಬನನ್ನು ಗುರ್ತಿಸಿದರು. ಆಕೆಯ ಪತಿಯು ಅವನಿಗೆ ತನ್ನ ಪಾದರಕ್ಷೆಗಳಿಂದ ಚೆನ್ನಾಗಿ ಬುದ್ಧಿಹೇಳಿ, ನವಾಬನಾದುದರಿಂದ ಕರುಣಿಸಿ ಪ್ರಾಣದೊಡನೆ ಬಿಟ್ಟುಬಿಟ್ಟನು.

ತಾನುಎಣಿಸಿದ ಕಾರ್ಯವು ನೆರವೇರದೆ ಹೋದುದರ ಜತೆಗೆ, ಮೇಲೆ ಹೇಳಿರುವಂತೆ ವಿಶೇಷ ಅವಮಾನವೂ ಸಂಭವಿಸಿದುದಕ್ಕೆ ಬೇಸರಪಟ್ಟು, ತನ್ನನ್ನು ಅವಮಾನಪಡಿಸಿದವನ್ನು ಕೊಂದು ಹಗೆತೀರಿಸಿಕೊಳ್ಳಲು ನವಾಬನು ಸಮಯವನ್ನು ನಿರೀಕ್ಷಿಸುತಲಿದ್ದನು.

ಅನಂತರ ಒಂದುದಿವಸ ಅಸಾಮಾನ್ಯೆಯ ಪತಿಯು ರಾಜಮಂದಿರದ ಸಮೀಪದಲ್ಲಿ ಹೋಗುತಲಿದ್ದುದನ್ನು ನವಾಬನು ನೋಡಿ ಆತನನ್ನು ಹಿಡಿತರಿಸಿ ತಲೆಯನ್ನು ತೆಗೆಯಿಸಿದನು. ಆಮೇಲೆ ಆ ಶಿರವನ್ನು ಒಂದು ತಟ್ಟೆಯಲ್ಲಿ ಇರಿಸಿ ಅಸಾಮಾನ್ಯೆಯ ಬಳಿಗೆ ಕಳುಹಿಸಿದನು. ಪ್ರಾಣಪತಿಯ ಶಿರವನ್ನು ನೋಡಿ ಅಸಾಮಾನ್ಯೆಯ ಹೃದಯವು ಒಡೆದುಹೋಯಿತು. ಆ ದುಃಖಾತಿಶಯದಿಂದ ಆಕೆಗೆ ಅಂದಿನಿಂದ ಮತಿಭ್ರಮೆಯು ಉಂಟಾಯಿತು. ಆ ಹುಚ್ಚಿನಲ್ಲಿ ಆಕೆಯು ಒಂದುಸಲ ನಗುತ್ತ, ಒಂದುಸಲ ಅಳುತ್ತ, ಕಾಲವನ್ನು ಕಳೆಯುತಲಿದ್ದಳು.

ಇಂತಹ ಅಪರಿಮಿತ ಘೋರಕಾರ್ಯಗಳನ್ನು ಸುರಾಜನು ಮಾಡುತಲಿದ್ದುದರಿಂದ ವಂಗದೇಶದಲ್ಲಿರುವ ಸಂಸ್ಥಾನಾಧೀಶರೂ, ಸರದಾರರೂ ನವಾಬನ ಮೇಲೆ ವಿರಕ್ತರಾದರು. ಸ್ವಜಾತೀಯನಾದ ಸೈನ್ಯಾಧಿಪತಿಗೆ ರಾಜ್ಯಾಧಿಕಾರವನ್ನು ಕೊಟ್ಟು ಪೂರ್ವದ ನವಾಬನು ಮಕ್ಕಾಕ್ಕೆ ಹೋದಂದಿನಿಂದಲೂ, ನವಾಬರು ಸರದಾರರ ಕೈಯಲ್ಲಿರುವ ಕೀಲುಬೊಂಬೆಗಳಂತೆ ಇದ್ದರು. ಈ ಸರದಾರರೆಲ್ಲರೂ ಒಂದುಸಲ ಸಭೆಯನ್ನು ಮಾಡಿ ಸುರಾಜನನ್ನು ಇಂಗ್ಲೀಷರ ಸಹಾಯದಿಂದ ಪದಚ್ಯುತನನ್ನಾಗಿ ಮಾಡಲು ನಿಶ್ಚಯಿಸಿದ ವಿಷಯವನ್ನು ರಾಣೀಭವಾನಿಯ ಇತಿಹಾಸದಿಂದ ಪಾಠಕರು ತಿಳಿದಿರುವರು. ಆನಂತರ ೧೭೫೭ ನೆಯ ಇಸವಿಯಲ್ಲಿ ನಡೆದ ಪ್ಲಾಸೀಕದನದಲ್ಲಿ ಆಂಗ್ಲೇಯ ಸೈನ್ಯಾಧಿಪನಾದ ಕ್ಲೈವನು ಸುರಾಜನನ್ನು ಸೋಲಿಸಿದನು. ಆಗ ನವಾಬನು ಯುದ್ಧಭೂಮಿಯನ್ನು ಬಿಟ್ಟು ಒಂದು ಒಂಟೆಯನ್ನು ಏರಿ ಮುರ್ಷಿದಾಬಾದಿನ ಕಡೆಗೆ ಓಡಿಹೋದನು. ಆತನ ಪರಾಭವವು ಅಲ್ಲಿನ ಜನರಿಗೆ ತತ್ಪೂರ್ವವೇ ತಿಳಿದಿದ್ದುದರಿಂದ, ಅಲ್ಲಿನಿಲ್ಲದೆ ಅಲ್ಲಿಂದ ಇನ್ನೊಂದು ಕಡೆಗೆ ಹೋಗಿ ಕೊನೆಗೆ ಬಾಗಾಬಂಗೋಲಾ ಎಂಬ ಗ್ರಾಮದಲ್ಲಿ ಆತನು ಶತ್ರುವಶವಾದನು. ಮಿಾರ್ಜಾಫರನ ಪುತ್ರನಾದ ಮಿರಾನನು ಸುರಾಜನ ಶಿರಶ್ಛೇದವನ್ನು ಮಾಡುವಂತೆ ಆಜ್ಞಾಪಿಸಿದನು. ಅವನ ಆಜ್ಞೆಯಂತೆ ಮಹಮದೀಬೇಗ್ ಎಂಬ ಯವನನು ಸುರಾಜನನ್ನು ಯಮಪುರಿಗೆ ಕಳುಹಿದನು. ಬಂಗಾಳಾದೇಶದ ನವಾಬನಿಗೆ ಇಂತಹ ದುರವಸ್ಥೆಯು ಉಂಟಾದುದು ಆತನ ದುಷ್ಟತನದಿಂದಲೇ ಎಂಬುದನ್ನು ನುಡಿಯುವುದು ಅನಾವಶ್ಯಕ. ಅನೀತಿ, ಕ್ರೂರತ್ವ, ಪರಪೀಡನೆ ಮೊದಲಾದ ದುರ್ಗುಣಗಳನ್ನು ಉಳ್ಳವರು ಎಂದಿಗಾದರೂ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕು. ಆದುದರಿಂದ ಮನುಜರು ಪರರಿಗೆ ಅಪಕಾರವನ್ನು

ಎಂದಿಗೂ ಮಾಡದೆ ಸ್ವಶಕ್ತ್ಯನುಸಾರವಾಗಿ ಉಪಕಾರವನ್ನು ಮಾಡುತಲಿರಬೇಕು. ಈ ವಿಷಯವನ್ನು ಪಾಠಕಮಹಾಶಯ ಸೋದರಿಯರು ಯಾವಾಗಲೂ ಮರೆಯ ಕೂಡದು ಎಂದು ಬೇಡುವೆನು. ನಾವು ಸರ್ವದಾ ಹೀಗೆಯೇ ಆಚರಿಸುವುದ ರಿಂದ ಈ ಲೋಕದಲ್ಲಿ ನಮಗೆ ಶತ್ರುಗಳು ಇಲ್ಲದೆ ಎಲ್ಲರೂ ಮಿತ್ರರಾಗುವರು. ಧನಮದದಿಂದ ಕಣ್ಣುಕಾಣದೆ ಇತರರನ್ನು ತುಚ್ಛವಾಗಿ ನೋಡಿ ಬಾಧಿಸುವವ ರಿಗೆ ವಿಪದ್ದೆಶೆಯು ಬಂದಾಗ ಜಗತ್ತೆಲ್ಲವೂ ಪ್ರತಿಕೂಲವಾಗುವುದು. ಆದುದ ರಿಂದ ಐಶ್ವರ್ಯವಂತರು ಬಡವರನ್ನು ಆದರದಿಂದಕಾಣಬೇಕು ಎಂಬ ಉಪದೇಶ ವನ್ನು ಸುರಾಜನ ಚರಿತ್ರೆಯಿಂದ ನಾವು ಕಲಿಯಬಹುದು.

ಪತಿಯು ಗತಿಸಿದಂದಿನಿಂದಲೂ ಅಸಾಮಾನ್ಯೆಯು ಮೂರುವರ್ಷದವರೆಗೂ ಉನ್ಮಾದಿನಿಯಾಗಿಯೇ ಇದ್ದಳು. ಆಕೆಯ ತಂದೆಯು ಅನೇಕ ವಿಧವಾದ ಉಪಾಯ ಗಳಿಂದ ಆಕೆಯ ಹುಚ್ಚನ್ನು ಹೋಗಲಾಡಿಸಲು ಪ್ರಯತ್ನಿಸಿದನು. ಅವು ಗಳಿಂದ ಗುಣ ಉಂಟಾಗಲಿಲ್ಲ. ಸುರಾಜನ ಶಿರಚ್ಛೇದವಾದ ಅನಂತರ, ಕೆಲವು ಘನವೈದ್ಯರು ಅಸಾಮಾನ್ಯೆಗೆ ಪತಿಯ ಮರಣದಿಂದ ಉನ್ಮಾದವು ಉಂಟಾಯಿ ತಾದಕಾರಣ, ಆಕೆಯ ಪತಿಯನ್ನು ಕೊಂದವನು ಸತ್ತ ಸಮಾಚಾರವನ್ನು ಆಕೆಗೆ ತಿಳಿಸಿ, ಅವನ ತಲೆಯನ್ನೂ ತೋರಿಸಿದರೆ ಉನ್ಮಾದವು ಆಕೆಯನ್ನು ಬಿಟ್ಟುಹೋಗುವುದು ಎಂದು ಹೇಳಿದರು. ಆಮೇಲೆ ಆ ಮಾತನ್ನು ಪರೀಕ್ಷೆ ಮಾಡುವುದಕ್ಕಾಗಿ, ಸುರಾಜನ ಶಿರಸ್ಸನ್ನು ಭಲ್ಲೆಗೆ ಸಿಕ್ಕಿಸಿ ಜನಗಳಿಗೆ ತೋರಿಸುತ್ತಿದ್ದ ಸ್ಥಳಕ್ಕೆ ಸವಿಾಪದಲ್ಲಿ ಇದ್ದ ಒಂದು ಮಹಡಿಯಮೇಲಿನಿಂದ ಆಕೆಗೆ ಅವನ ತಲೆಯನ್ನು ತೋರಿಸಿದರು. ಆಕೆಯು ಆ ಶಿರಸ್ಸನ್ನು ನೋಡಿ ದೊಡನೆಯೇ ಅತ್ಯಂತ ದಯೆಯಿಂದ, "ಪಾಪ! ಆ ದುರದೃಷ್ಟವಂತನು ಆರು," ಎಂದು ಕೇಳಿದಳು. ಅವರು, "ಅಮ್ಮಾ, ನಿಮ್ಮ ಪತಿಯನ್ನು ಅತಿ ಕ್ರೂರಾತ್ಮ ನಾಗಿ ವಧಿಸಿದವನು ಇವನೇ. ಇವನ ಶತ್ರುಗಳು ಇವನಿಗೆ ತಕ್ಕ ಶಿಕ್ಷೆಯನ್ನು ಮಾಡಿದರು," ಎಂದರು. ಅದಕ್ಕೆ ಆಕೆಯು ಕನಿಕರದಿಂದ, "ಅಯ್ಯೋ ಪಾಪ! ಇವನಿಗೆ ಇಂತಹ ದುರವಸ್ಥೆಯು ಪ್ರಾಪ್ತವಾಯಿತೇ? ಎಂದು ನುಡಿದು, "ಇನ್ನು ನನ್ನನ್ನು ಮನೆಗೆ ಕರೆದುಕೊಂಡು ಹೋಗಿ," ಎಂದಳು. ಆಕೆಯು ಮನೆಗೆ ಹೋದ ಅನಂತರ ಹುಚ್ಚುವಾಸಿಯಾಯಿತು. ಆನಂತರ ಆಕೆಯು ಸುರಾಜನ ವಿಷಯವನ್ನು ಸವಿಸ್ತಾರವಾಗಿ ಕೇಳಿ ತಿಳಿದುಕೊಂಡು, ದುರದೃಷ್ಟವಂತಳಾದ ಅವನ ಹೆಂಡತಿಯ ವಿಷಯವನ್ನೂ ತಿಳಿದುಕೊಂಡಳು. ಅಕಸ್ಮಾತ್ತಾಗಿ ಆಕೆಯ ಉನ್ಮಾದವು ಬಿಟ್ಟು ಹೋದುದನ್ನು ನೋಡಿ ಆಕೆಯ ಆಪ್ತರಿಗೆ ಆಶ್ಚರ್ಯವೂ, ಆನಂದವೂ ಉಂಟಾದುವು. ಆಕೆಯು ಹುಚ್ಚುಹೋದ ಅನಂತರ ಆಗಾಗ "ಪರ ಮೇಶ್ವರನು, ನಾನು ಮಾಡಬೇಕಾದ ಕಾರ್ಯವನ್ನು ತಾನೇ ಮಾಡಿದನು. ಆದಕಾರಣ ಆತನು ಮಾಡಬೇಕಾದ ಕಾರ್ಯವನ್ನು ನಾನೇ ಮಾಡಬೇಕು ಎಂದು

ಆತನ ಸಂಕಲ್ಪವಾಗಿ ಇರಬಹುದು," ಎಂದು ನುಡಿಯುತಲಿದ್ದಳು. "ಈ ವಾಕ್ಯ ಗಳಿಗೆ ಅರ್ಥವೇನು" ಎಂದು ಅನೇಕರು ಕೇಳಿದರು. ಆದರೆ ಆ ಮಾತು ಅವರಿಗೆ ತಿಳಿದರೆ ಕಾರ್ಯವನ್ನು ಮಾಡಗೊಳಿಸರೆಂತಲೂ, ನಗುವರೆಂತಲೂ ಎಣಿಸಿ ಆಕೆಯು ಆ ಮಾತನ್ನು ಯಾರಿಗೂ ಹೇಳಲಿಲ್ಲ. ಒಂದು ದಿವಸ ರಾತ್ರಿ ಅಸಾ ಮಾನ್ಯೆಯು ಮನೆಯಲ್ಲಿ ಯಾರಿಗೂ ತಿಳಿಸದೆ ಗೃಹವನ್ನು ಬಿಟ್ಟು ಹೊರಟಳು. ಹೊರಟು ಒಬ್ಬೊಂಟಿಗಳಾದರೂ ಧೈರ್ಯದೊಡನೆ ಬಾಗಾಬಂಗೋಲಾ ಎಂಬ ಗ್ರಾಮಕ್ಕೆ ಪ್ರಯಾಣ ಮಾಡಿದಳು. ಸುರಾಜನ ಶಿರಸ್ಸನ್ನು ನೋಡಿದಂದಿನಿಂದಲೂ ಆಕೆಯ ಹೃದಯವು ದಿವ್ಯವಾದ ಆಲೋಚನೆಗಳಿಂದ ತುಂಬಿತ್ತು. ·'ನನ್ನ ಪತಿ ಯನ್ನು ಕೊಂದವನ ಹಗೆಯನ್ನು ತೀರಿಸಿಕೊಳ್ಳುವುದು ನನ್ನ ಕೆಲಸ. ಅವನನ್ನು ಅವಮಾನಗೊಳಿಸುವುದು, ಪದಭ್ರಷ್ಟನನ್ನಾಗಿ ಮಾಡುವುದು, ಅವನ ಶಿರಶ್ಛೇದ ವನ್ನು ಮಾಡುವುದು ಇವೆಲ್ಲವು ನನ್ನ ಕಾರ್ಯಗಳು; ಆದರೂ ಈಶ್ವರನು ನನ ಗಾಗಿ ಈ ಕೆಲಸಗಳೆಲ್ಲವನ್ನೂ ಮಾಡಿದನು. ದಯಾಮಯನಾದ ಭಗವಂತನು ಸುರಾಜನ ಮೇಲೆ ಅನುಗ್ರಹವುಳ್ಳವನಾಗಿ ಅವನ ಅಪರಾಧಗಳನ್ನು ಕ್ಷಮಿಸಿ ಅವನಿಗೆ ಸೌಖ್ಯವನ್ನು ಉಂಟುಮಾಡಬೇಕಾಗಿತ್ತು. ಆದರೆ ಈ ಕೆಲಸಗಳೆಲ್ಲ ವನ್ನೂ ಈಶ್ವರನು ಮಾಡದಕಾರಣ, ಅವುಗಳನ್ನು ನಾನು ಮಾಡಬೇಕು. ಇದು ಭಗವಂತನ ಉದ್ದೇಶವಾಗಿರಬಹುದು ಎನಲು ಸಂದೇಹವಿಲ್ಲ,' ಎಂದು ಆಕೆಯು ಮನಸ್ಸಿನಲ್ಲಿ ಎಣಿಸಿಕೊಂಡಳು. ಸುರಾಜನು ಗತಿಸಿದುದರಿಂದ ಆತನನ್ನು ಕ್ಷಮಿಸು ವುದೂ, ಸುಖಿಯನ್ನಾಗಿ ಮಾಡುವುದೂ ಅಸಂಭವ. ಆದರೆ ನಿರಪರಾಧಿನಿ ಯಾದ ಅವನ ಪತ್ನಿಯು ನಿಸ್ಸಹಾಯಕಳಾಗಿ ಬಾಗಾಬಂಗೋಲಾ ಗ್ರಾಮದಲ್ಲಿ ಅತ್ಯಂತ ಸಂಕಟದಲ್ಲಿ ಇರುವಳು ಎಂದು ಅಸಾಮಾನ್ಯೆಗೆ ತಿಳಿದಿತ್ತು. ಆಕೆಗೆ ಸಹಾಯಮಾಡಿದರೆ ನೂತನ ನವಾಬನ, ಆತನ ಸ್ನೇಹಿತರಾದ ಆಂಗ್ಲೇಯರ ಕೋಪಕ್ಕೆ ಪಾತ್ರಳಾಗಬೇಕಾಗಿತ್ತು. ಅಸಾಮಾನ್ಯೆಯ ಜನಕನಾದ ಮತಬ್ ಚಂದನೂ, ಇತರರೂ ಸುರಾಜನಿಗೆ ಸಂಬಂಧಪಟ್ಟವರು ಯಾರು ದೊರೆತರೂ ಕೊಲ್ಲಲು ಕೃತನಿಶ್ಚಯರಾಗಿದ್ದರು. ಆದರೆ ಶತ್ರುಗಳನ್ನೂ ಮಿತ್ರರಂತೆಯೆ ಭಾವಿ ಸುವ ಮಹಾತ್ಮಳಾದ ಅಸಾಮಾನ್ಯೆಯು ಸುರಾಜದ್ದೌಲನ ಪತ್ನಿಗೆ ಸಹಾಯ ಮಾಡಲು ಎಣಿಸಿದಳು. ಮೇಲೆಹೇಳಿದ ಕಾರಣದಿಂದ ತಾನು ಮಾಡಲು ಎಣಿ ಸಿದ ಕಾರ್ಯವನ್ನು ಮಾತ್ರ ಯಾರೊಡನೆಯೂ ಹೇಳದೆ, ಮನೆಯಿಂದ ಹೊರಟು ಬಾಗಾಬಂಗೋಲಾ ಗ್ರಾಮವನ್ನು ಸೇರಿದಳು. ಈಕೆಯು ಅಲ್ಲಿಗೆ ಬಂದ ವರ್ತ ಮಾನವು ಸುರಾಜನ ಪತ್ನಿಗೆ ತಿಳಿಯಿತು.

ಸುರಾಜನು ಬಲಹೀನನಾಗಿ, ಪದಚ್ಯುತನಾಗಿ ಮುರ್ಷಿದಾಬಾದಿನಿಂದ ಪ್ರಾಣರಕ್ಷಣಾರ್ಥವಾಗಿ ಓಡಿಹೋಗುವ ಸಮಯದಲ್ಲಿ, ಆತನ ಮುಖ್ಯಸೇವಕರೂ ಆತನಿಗೆ ಸಹಾಯಕರಾಗಲಿಲ್ಲ. ಪ್ರತಿಯೊಂದು ಕೆಟ್ಟ ಕಾರ್ಯದಲ್ಲಿಯೂ ಆತ

ನನ್ನು ಪ್ರೋತ್ಸಾಹಗೊಳಿಸಿ, ನಮ್ಮ ಪ್ರಾಣಗಳನ್ನಾದರೂ ನಿನ್ನ ಕಾರ್ಯಕ್ಕೆ ಕೊಡುವೆವು ಎಂದು ಹೇಳಿದ ಮಿತ್ರರು ಯಾರೂ ಈ ಸಂಕಟ ಸಮಯದಲ್ಲಿ ಸಹಾಯಕರಾಗಲಿಲ್ಲ. ಆತನ ಬಂಧುಗಳೂ ಆತನಿಗೆ ಸಹಾಯಮಾಡಲಿಲ್ಲ. * ಮನುಷ್ಯ ಮಾತ್ರರಿಗೆ ದುಷ್ಕಾಲವು ಸಂಭವಿಸಿದರೆ ಮಿತ್ರರೂ ಶತ್ರುಗಳಾಗುವರಲ್ಲವೆ? ಸುರಾಜನನ್ನು ಎಲ್ಲರೂ ತ್ಯಜಿಸಿದರೂ ಆತನ ಪಟ್ಟಮಹಿಷಿಯಾದ ಮೆಹರ್ನೇಣಾ ಬೇಗಮಳು ಮಾತ್ರ ಆತನನ್ನು ಒಂದುಕ್ಷಣವೂ ಎಡಬಿಡದೆ ಹಿಂಬಾಲಿಸುತಲಿದ್ದಳು. ಸುರಾಜನು ಈಕೆಯನ್ನು 'ಗುಲ್' ಎಂದರೆ ಗುಲಾಬಿಯಪುಷ್ಪ ಎಂದು ಕರೆಯುತಲಿದ್ದನು. ಸುರಾಜನು ಸರ್ವದಾ ಪರಸ್ತ್ರೀಲೋಲನಾಗಿ ಒಂದುದಿವಸವಾದರೂ ಈಕೆಯನ್ನು ಪೂರ್ಣಪ್ರೇಮದಿಂದ ನೋಡಿದವನಲ್ಲ. ತನ್ನನ್ನು ಪತಿಯು ತ್ಯಜಿಸಿದರೂ ಆಪತ್ಕಾಲದಲ್ಲಿ ಆತನನ್ನು ಬಿಡಲಾರದೆ, ಆಸಾಧ್ವಿಯು ತನ್ನ ಪತಿಗೆ ಸಹಾಯಕಳಾಗಿ ಹಿಂಬಾಲಿಸಿದಳು! ಇಂತಹ ಪರಮಸಾಧ್ವಿಯನ್ನು ಧನ್ಯತಮಳು ಎಂದು ಯಾರುತಾನೇ ಹೊಗಳದೇ ಇರಬಲ್ಲರು? "ಚಂಡಾಲೋಸ್ತು ಸತು ದ್ವಿಜೋಸ್ತು ಗುರುರಿತ್ಯೇಷಾ ಮನೀಷಾಮಮ," ಎಂದು ಶ್ರೀಮಚ್ಛಂಕರಾಚಾರ್ಯ ಸ್ವಾಮಿಗಳು ಚಂಡಾಲನ ವಿಷಯದಲ್ಲಿ ಹೇಳಿದಂತೆ ಈ ಪತಿವ್ರತೆಯು ಯವನ ಕುಲದಲ್ಲಿ ಜನ್ಮಿಸಿದರೂ ತನ್ನ ಸದ್ಗುಣಗಳಿಂದ ನಾರೀಲೋಕಕ್ಕೆ ಮಾನ್ಯೆ ಎಂದು ಹೇಳಬೇಕು.

ಸಿರಿವಂತನಾಗೆ ರಮಣಂ। ತರುಣಿಯರಾತಂಗೆ ಪಾಸುವರ್ನ್ನಡೆ ಮಡಿಯಂ॥ ಸಿರಿಯಿಲ್ಲದಿರಲ್ಕಡೆವೆಣ। ನಿರದೆಯ್ತಂದಪ್ಪುದೆಂದು ನಗುವರ್ ಸುಮತೀ॥ ಎಂಬ ಕಂದಪದ್ಯದಲ್ಲಿ ಇರುವಂತೆ ಸ್ತ್ರೀಯರು ಧನಹೀನನಾದ ಪತಿಯನ್ನು ನಿಕೃಷ್ಟಭಾವದಿಂದ ನೋಡುವರು, ಕುಲಸ್ತ್ರೀಯು ದರಿದ್ರನಾದ ಪತಿಯನ್ನು ತ್ಯಜಿಸುವಳು, ಎಂಬಿವೇ ಮುಂತಾದ ಮಾತುಗಳನ್ನು ಅನೇಕ ವಿದ್ವಾಂಸರು ತಮ್ಮ ಕವಿತ್ವದಲ್ಲಿ ಅಲ್ಲಲ್ಲಿ ಉಪಯೋಗಿಸಿರುವದನ್ನು ನಾವು ಓದುತಲಿದೇವೆ. ಅವರು ಈ ಯವನಸಾಧ್ವಿಯ ಚರಿತ್ರೆಯನ್ನು ಓದಿದ್ದರೆ ಅಂತಹಮಾತುಗಳನ್ನು ತಮ್ಮ ಕವಿತ್ವದಲ್ಲಿ ಸೇರಿಸುತಲಿರಲಿಲ್ಲ. ಆಪತ್ಸಮಯದಲ್ಲಿ ಕುಲಸತಿಯು ತನ್ನ ಪತಿಗೆ ಸಹಾಯಕಳಾಗದಿದ್ದರೆ ಕುಲಸತಿಗೂ ವೇಶ್ಯೆಗೂ ತಾರತಮ್ಯವೇನು? ಇತರದೇಶೀಯರ ವಿಷಯವನ್ನು ನಾನು ಅರಿಯನು. ಆದರೆ ನಮ್ಮ ಭರತ ಖಂಡದಲ್ಲಿಮಾತ್ರ 'ದರಿದ್ರನಾದ ಪತಿಯನ್ನು ಕುಲಸತಿಯು ತ್ಯಜಿಸುವಳು ಎಂಬ ಮಾತು ಅಸತ್ಯವಾದುದು ಎನ್ನಲು ಸಂದೇಹವಿಲ್ಲ. ಬಡತನವು ಮಾತ್ರವೇ ಅಲ್ಲದೆ ಪತಿಯಿಂದ ಪ್ರತಿದಿವಸವೂ ಮೈಮುರಿಯುವಂತೆ ಏಟುಗಳನ್ನು ತಿನ್ನುತ್ತಲೂ,

---

* ವನಜಂಜಲಮನಗಲ್ದಿರೆ। ದಿನಪನದಂಬಿಸಿಲಬೇಗೆಯಿಂಬಾಡಿಪವೋಲ್॥ ಸ್ವನಿವಾಸ ಬಲಮನುಳಿದನ। ನಿನಿಯುನಿಪಗೆಯಾಗಿ ಬಾಧಿಪಂಗಡ ಸುಮತೀ॥

ಅತ್ತೆನಾದಿನಿಯರಿಂದ ಅತಿಶಯವಾದ ತೊಂದರೆಯನ್ನು ಅನುಭವಿಸುತ್ತಲೂ ಜೀವನಯಾತ್ರೆಯನ್ನು ಕಳೆಯುತಲಿರುವ ಅನೇಕ ಸ್ತ್ರೀಯರನ್ನು ನಾವು ನೋಡುತ ಲಿದೇವೆ. ಅವರು ಇಷ್ಟು ಬಾಧೆಗಳನ್ನು ಅನುಭವಿಸುತಲಿದ್ದರೂ ತಮ್ಮ ಪತಿಗಳಿಗೆ ಅನೇಕ ಪರಿಚರ್ಯೆಗಳನ್ನುಮಾಡುತ್ತ, ಅವರ ಕ್ಷೇಮಕ್ಕಾಗಿ ಅನೇಕ ವ್ರತಗಳನ್ನು ಮಾಡುತ್ತ, ವಿಾಸಲನ್ನುಕಟ್ಟುತ್ತ, ಎಂತಹ ಸಂಕಟಸಮಯದಲ್ಲಾದರೂ ಅವರಿಗೆ ಸಹಾಯವನ್ನು ಮಾಡಲು ಸಿದ್ಧವಾಗಿರುತ್ತಾರೆ. ಭರತಖಂಡದಲ್ಲಿ ಪುರುಷರು ತಮ್ಮ ಸ್ತ್ರೀಯರನ್ನು ಬಾಧಿಸುತಲಿದ್ದರೂ, ಸ್ತ್ರೀಯರು ಅವೆಲ್ಲವನ್ನೂ ಸಹಿಸಿಕೊಂಡು, ತಮ್ಮ ಪುರುಷರಿಗೆ ಅತಿಭಕ್ತಿಯಿಂದ ಉಪಚಾರವನ್ನು ಮಾಡ ತಕ್ಕವರು ಎಂದು ಬಹುಕಾಲದಿಂದ ಜಗತ್ತಿನಲ್ಲಿ ಪ್ರಖ್ಯಾತಿಯನ್ನು ಪಡೆದಿರುವರು, ಎಂದರೆ ನನ್ನಮೇಲೆ ಅಸತ್ಯಾರೋಪಣೆಯು ಉಂಟಾಗಲವಕಾಶವಿರಲಾರದು. ಭರ್ತನು ಧನಹೀನನು ಎಂದು ಪತ್ನಿಯು ತ್ಯಜಿಸಿದ ಉದಾಹರಣೆಗಳು ಈ ದೇಶದಲ್ಲಿ ಸಾವಿರ ಕುಟುಂಬಗಳಿಗೆ ಒಂದು ಸಿಕ್ಕುವದೋ ಇಲ್ಲವೋ ಸಂಶಯ. ಹಾಗೆ ಸಿಕ್ಕಿದರೂ ಅತ್ಯಂತ ಕನಿಷ್ಠಜಾತಿಯಲ್ಲಿಯೂ, ಮೂರ್ಖತೆಯೇ ಪ್ರಧಾನ ವಾದುದು ಎಂದು ಎಣಿಸಿಕೊಂಡುಇರುವ ಅಜ್ಞೆಯರಲ್ಲಿಯೂ, ಅಂತಹವರು ದೊರೆಯಬಹುದು. ಅಷ್ಟುಮಾತ್ರಕ್ಕೆ 'ಕುಲಸತಿಯು ದ್ರವ್ಯಹೀನನಾದ ಪತಿ ಯನ್ನು ತ್ಯಜಿಸುವಳು' ಎಂದು ಸಿದ್ಧಾಂತ ಮಾಡಲಾಗುವುದೇ? ನಾರಿಯರ ಮೇಲೆ ಆರೋಪಿಸಿದ ಈ ಆರೋಪಣೆಯು ಅಸತ್ಯವಾದುದು ಎಂದು ತೋರಿಸಲು ಸ್ವಲ್ಪ ವಿಷಯಾಂತರವಾಯಿತು.

ಗುಲ್‌ಬೇಗಮಳು ಪತಿಯನ್ನು ಅನುಸರಿಸಿ ಹೋಗುತಲಿದ್ದ ಸಮಯದಲ್ಲಿ ಆಕೆಗೆ ಹದಿನೆಂಟುವರುಷಗಳ ವಯಸ್ಸು. ಆ ಅಲ್ಪವಯಸ್ಸಿನಲ್ಲಿ ಆಕೆಯು ಅಂತ ರ್ವತ್ನಿಯಾಗಿ ಇದ್ದಳು. ನವಮಾಸಗಳು ತುಂಬಿದ್ದುವು. ಆದರೂ ತನ್ನವಿಷಯ ವನ್ನು ಸ್ವಲ್ಪವೂ ಆಲೋಚಿಸದೆ, ಕಲ್ಲಿನಲ್ಲಿಯೂ, ಮುಳ್ಳಿನಲ್ಲಿಯೂ, ಮಳೆಬಿಸಲು ಗಳನ್ನು ಸಹಿಸಿಕೊಂಡು ಓಡುತ್ತ ಕೊನೆಗೆ ಬಾಗಾಬಂಗೋಲಾ ಗ್ರಾಮದಲ್ಲಿ ಹೆಣ್ಣು ಮಗುವನ್ನು ಪ್ರಸವಿಸಿದಳು. ಅನಂತರ ಅವರು ಕೆಲವು ದಿವಸಗಳು ಅಲ್ಲಿಯೇ ಇರಬೇಕಾಯಿತು. ಆಮೇಲೆ ಆಸ್ಥಳದಲ್ಲಿಯೇ ಸುರಾಜನು ಶತ್ರುಗಳಕೈಗೆ ದೊರೆತು ಹತನಾದನು. ಪತಿಯಮರಣಾಂತರ ಆಸಾಧ್ವಿಯು ಅದೃಷ್ಟಹೀನ ಳಾದ ಮಗಳನ್ನು ಸಂರಕ್ಷಿಸುತ್ತ, ಅಲ್ಲಿರುವ ಬಡವರ ಗುಡಿಸಲುಗಳಲ್ಲಿ ಕಾಲ ವನ್ನು ಕಳೆಯುತಲಿದ್ದಳು! ಅಸಾಮಾನ್ಯೆಯು ಈವಿಷಯವೆಲ್ಲವನ್ನೂ ತಿಳಿದು ಕೊಂಡು ಆಬಡವರ ಮನೆಗಳನ್ನು ಹುಡುಕಲಾರಂಭಿಸಿದಳು. ಒಬ್ಬಸ್ತ್ರೀಯು ತನ್ನನ್ನು ಹುಡುಕುತಲಿರುವಳು ಎಂದು ಕೇಳಿ ಗುಲ್‌ಬೇಗಮಳು ಆಕೆಯು ಶತ್ರು ಪಕ್ಷದವಳೇನೋ ಎಂದು ಭಯಪಟ್ಟಳು. ಆಕೆಗೆ ತನ್ನಪ್ರಾಣದವಿಷಯವಾಗಿ ಅಷ್ಟುಭಯವು ಇಲ್ಲದಿದ್ದರೂ ತನ್ನಮಗಳಿಗೆ ಎಂತಹ ಅಪಾಯವು ಸಂಭವಿಸು

ವುದೋ ಎಂದು ಭೀತಚಿತ್ತಳಾಗಿ, ಇಲ್ಲಿನಡೆದ ಅನ್ಯಾಯವನ್ನೆಲ್ಲ ಡಿಲ್ಲಿ ಬಾದ ಷಹನಿಗೆ ತಿಳಿಸಿ, ಗತವೈಭವವೆಲ್ಲವನ್ನೂ ತನ್ನಪುತ್ರಿಗೆ ಕೊಡಿಸಲು ಪ್ರಯತ್ನಿಸುವುದಕ್ಕಾಗಿ, ಆ ಶಿಶುವನ್ನು ಎತ್ತಿಕೊಂಡು ಡಿಲ್ಲೀಮಾರ್ಗದಲ್ಲಿ ಹೊರಟಳು! ಈ ವರ್ತಮಾನವು ಅಸಾಮಾನ್ಯೆಗೆ ತಿಳಿದು ವಿಚಾರಗ್ರಸ್ತಳಾಗಿ, ದೃಢನಿಶ್ಚಯವುಳ್ಳವಳಾದುದರಿಂದ ತನ್ನ ಕೆಲಸವನ್ನು ಅಲ್ಲಿಗೆ ನಿಲ್ಲಿಸದೆ, ಬೇಗಮಳು ನಡೆಯುತಲಿದ್ದ ದಾರಿಯಲ್ಲಿ ಹೊರಟಳು. ತನಗಾಗಿ ಬಾಗಾಬಂಗೋಲಕ್ಕೆ ಬಂದ ಸ್ತ್ರೀಯು ತನ್ನನ್ನು ಹಿಂಬಾಲಿಸುತ್ತಿರುವಳು ಎಂದು ಕೇಳಿ ಬೇಗಮಳು ಅಧಿಕ ವೇಗದಿಂದ ನಡೆಯಲಾರಂಭಿಸಿದಳು. ಅಸಾಮಾನ್ಯೆಯು ಪ್ರಯಾಣದಿಂದ ಆಯಾಸಗೊಂಡಿದ್ದಳಾದುದರಿಂದ ಮೆಲ್ಲನೆ ನಡೆಯುತಲಿದ್ದಳು. ಮತ್ತು ಗುಲ್ ಬೇಗಮಳಿಗೆ 'ತಾನು ಅಪಕಾರಿಣಿಯಲ್ಲವೆಂತಲೂ ಬೇಗಮಳಿಗೆ ಉಪಕಾರವನ್ನು ಮಾಡುವಸಲುವಾಗಿಯೇ ಬರುತಲಿರುವೆನಾದ ಕಾರಣ ನಿರ್ಭಯಳಾಗಿ ಇರಬಹುದು ಎಂತಲೂ ಪ್ರಯಾಣಿಕರೊಡನೆ ಹೇಳಿಕಳುಹಿಸಿದಳು. ಬೇಗಮಳು ಆ ಮಾತುಗಳನ್ನು ನಂಬದೆ ತ್ವರಿತಗತಿಯಿಂದ ನಡೆಯುತಲಿದ್ದಳು. ಒಬ್ಬರು ಭಯದಿಂದಲೂ, ಇನ್ನೊಬ್ಬರು ಉಪಕಾರಬುದ್ಧಿಯಿಂದಲೂ ಈ ಪ್ರಕಾರವಾಗಿ ಒಂದು ಊರಿನಿಂದ ಇನ್ನೊಂದೂರಿಗೆ, ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಪ್ರಯಾಣಮಾಡುತಲಿದ್ದರು. ಒಬ್ಬ ಹೆಂಗಸು ತನಗೆ ಒಳ್ಳೆಯ ಮಾತುಗಳನ್ನು ಹೇಳಿಕಳುಹಿಸುತ್ತ, ತನ್ನನ್ನು ಬಿಡದೆ ಹಿಂಬಾಲಿಸುತಲಿರುವಳು ಎಂದು ಕೇಳಿ ಬೇಗಮಳಿಗೆ ಮತ್ತಷ್ಟು ಸಂಶಯವುಂಟಾಗಿ, ಆಕೆಯು ಡಿಲ್ಲಿಯ ಮಾರ್ಗವನ್ನು ಬಿಟ್ಟು ಬೇರೊಂದು ದಾರಿಯಲ್ಲಿ ಓಡಲಾರಂಭಿಸಿದಳು. ಅಸಾಮಾನ್ಯೆಯು ಆಕೆಯು ಹೋದ ಮಾರ್ಗವನ್ನು ಜನರಿಂದ ಕೇಳಿ ತಿಳಿದುಕೊಂಡು ಆಕೆಯು ಎಲ್ಲಿಹೋದರೂ ಬಿಡದೆ ಹಿಂಬಾಲಿಸುತಲಿದ್ದಳು. ಅವರಿಬ್ಬರೂ ಈ ವಿಧವಾಗಿ ಒಂದು ವರ್ಷಕಾಲ ನಡೆದರು. ಆದರೂ ಒಬ್ಬರ ದರ್ಶನವು ಒಬ್ಬರಿಗೆ ದೊರೆಯಲಿಲ್ಲ. ಒಂದು ವರ್ಷವಾದ ಅನಂತರ ಅಸಾಮಾನ್ಯೆಯು, ಬೇಗಮಳು ಇರುವ ಸ್ಥಳಕ್ಕೆ ಸ್ವಲ್ಪದೂರದಲ್ಲಿ ಬಂದು ಸೇರಿದಳು. ಆ ದಿವಸವು ಅತಿಭಯಂಕರವಾಗಿತ್ತು. ಆಕಾಶವೆಲ್ಲವೂ ಮೇಘಾವೃತವಾಗಿತ್ತು. ಗುಡುಗು ಮಿಂಚುಗಳೊಡನೆ ದೊಡ್ಡ ಮಳೆಯು ಸುರಿಯಲು ಪ್ರಾರಂಭವಾಯಿತು. ಸಿಡಿಲುಗಳೊಡನೆ ಸುರಿಯುತಲಿದ್ದ ಆ ಮಳೆಯಲ್ಲಿಯೂ ಗುಲ್‌ಬೇಗಮಳು ಅಸಾಮಾನ್ಯೆಯ ಭಯದಿಂದ ಮಗುವನ್ನು ಎತ್ತಿಕೊಂಡು ಓಡುತಲಿದ್ದಳು. ಆಕೆಯ ಹಿಂದೆಯೇ ಭಯಪಡಬೇಡ ಎಂದು ಹೇಳುತ್ತ ಅಸಾಮಾನ್ಯೆಯು ಓಡುತಲಿದ್ದಳು. ಆದರೆ ಆ ಚಂಡ ಮಾರುತದಲ್ಲಿ, ಆ ಮಳೆಯಲ್ಲಿ, ಆ ಮಾತುಗಳು ಬೇಗಮಳಿಗೆ ಕೇಳಿಸಲಿಲ್ಲ. ಬೇಗಮಳು ಓಡುತಲಿರುವಾಗ ಮಾರ್ಗಮಧ್ಯದಲ್ಲಿ ಸಮುದ್ರದಂತೆ ಭೋರ್ಗರೆಯುತ್ತ, ಎರಡು ಕೂಲಗಳಲ್ಲಿಯೂ ಅಲೆಗಳಿಂದ ನೊರೆಯನ್ನುಂಟುಮಾಡುತ್ತ,

ಶರವೇಗದಿಂದ ಪ್ರವಹಿಸುತಲಿರುವ ಗಂಗಾನದಿಯು ಬಂದಿತು. ಬೇಗಮಳು ಅಲ್ಲಿದ್ದ ನಾವಿಕರನ್ನು, 'ತನ್ನನ್ನು ಆಚೆಯ ದಡಕ್ಕೆ ಶೀಘ್ರವಾಗಿ ತೆಗೆದುಕೊಂಡು ಹೋಗಿರಿ,' ಎಂದು ಬೇಡಿಕೊಳ್ಳಲಾರಂಭಿಸಿದಳು. ಅಂತಹ ತುಫಾನಿನಸಮಯದಲ್ಲಿ ಗಂಗೆಯಲ್ಲಿ ಹಡಗನ್ನು ನಡೆಸಲು ಆಗುವದಿಲ್ಲ ಎಂದು ನಾವಿಕರು ಹೇಳಿದರು. ಆದರೆ ಭಯಾಕುಲಳಾದ ಬೇಗಮಳು ತನ್ನ ಬೆರಳಿನಲ್ಲಿರುವ ರತ್ನಖಚಿತವಾದ ಉಂಗುರವನ್ನು ಅವರಿಗೆ ತೋರಿಸಿದಳು. ಬಹು ಅಮೂಲ್ಯವುಳ್ಳ ಆ ಉಂಗುರವು ದೊರೆಯುವುದು ಎಂಬ ಆಶೆಯಿಂದ ಒಬ್ಬ ನಾವಿಕನು ಹಡಗನ್ನು ನಡೆಸಲು ಉದ್ಯುಕ್ತನಾದನು. ಅವರು ಸ್ವಲ್ಪದೂರ ಹಡಗಿನಲ್ಲಿ ಹೋದರು. ಆದರೆ ನದಿಯ ಅತಿಶಯವಾದ ವೇಗವನ್ನು ತಡೆಯಲಾರದೆ ಹಡಗು ಮುಳುಗಿತು. ಆ ಸಮಯಕ್ಕೆ ಅಸಾಮಾನ್ಯೆಯು ಗಂಗಾತೀರಕ್ಕೆ ಬಂದು ಹಡಗು ಮುಳುಗಿದುದನ್ನು ನೋಡಿ, ಅವರನ್ನು ರಕ್ಷಿಸಬೇಕೆಂದು, ಆ ಮಹಾನದಿಯೊಳಕ್ಕೆ ಧುಮುಕಿ, ತನ್ನ ಶಕ್ತಿಗೆ ಅನುಸಾರವಾಗಿ ಈಜುತ್ತ, ಪ್ರವಾಹವೇಗದಿಂದ ತಡೆಯಲ್ಪಡುತ್ತ, ಮುಳುಗುತ್ತ ಏಳುತ್ತ, ಹಡಗು ಮುಳುಗಿದ ಸ್ಥಳವನ್ನು ಸೇರಿದಳು. ದೃಢನಿಶ್ಚಯವುಳ್ಳವರು ಧೈರ್ಯದೊಡನೆ ಮಾಡಿದ ಯಾವ ಕಾರ್ಯವು ತಾನೇ ಕೊನೆಗಾಣದಿರುವದು? ಅಸಾಮಾನ್ಯೆಯು ನೀರಿನಲ್ಲಿ ಮುಳುಗಿ ಗುಲ್‌ಬೇಗಮಳ ಜಡೆಯನ್ನು ಹಿಡಿದುಕೊಂಡು ತೀರಕ್ಕೆ ಬರಲಾರಂಭಿಸಿದಳು. ಬೇಗಮಿನೊಡನೆ ಆಕೆಯು ಕಟ್ಟಿಕೊಂಡಿದ್ದ ಮಗುವು ಸಹ ಈಚೆಗೆ ಬಂದಿತು. ಆಗ್ಗೆ ತುಫಾನು ಸ್ವಲ್ಪ ನಿಂತಿತು. ಅಸಾಮಾನ್ಯೆಯು ಬಹು ಪ್ರಯಾಸದೊಡನೆ ಅವರನ್ನು ತೀರಕ್ಕೆ ತಂದು ಸಮೀಪದಲ್ಲಿದ್ದ ಗುಡುಸಲಿಗೆ ಕರೆದುಕೊಂಡು ಹೋಗಿ, ಅಲ್ಲಿನ ಜನರನ್ನು ಕೇಳಿ ಒಣಹುಲ್ಲು, ಬೆಂಕಿ ಮೊದಲಾದುವುಗಳನ್ನು ತಂದು ಅವರಿಗೆ ಉಷ್ಣೋಪಚಾರಗಳನ್ನು ಮಾಡಿದಳು. ಆದರೆ ಗಂಗಾದೇವಿಯು ನಶ್ವರವಾದ, ಈ ದುಃಖಭೂಯಿಷ್ಠಪ್ರಪಂಚದಿಂದ ಬೇಗಮಳನ್ನು ಮುಕ್ತಳನ್ನಾಗಿ ಮಾಡಿದ್ದಳು. ಅದರಿಂದ ಆಕೆಯು ದೀರ್ಘನಿದ್ರೆಯಿಂದ ಪುನಃ ಏಳಲೇ ಇಲ್ಲ. ಶಿಶುವಿಗೆ ಸ್ವಲ್ಪಹೊತ್ತಿಗೆ ಸ್ಮೃತಿಯುಂಟಾಯಿತು. ಅಸಾಮಾನ್ಯೆಯು ಬೇಗಮಳಿಗೆ ದಹನವಿಧಿಗಳನ್ನು ಅಲ್ಲಿಯೇ ನೆರವೇರಿಸಿ, ಆ ಶಿಶುವನ್ನು ತನ್ನ ಗೃಹಕ್ಕೆ ತೆಗೆದುಕೊಂಡು ಹೋಗಿ ಹೆತ್ತ ಮಗುವಿನಂತೆ ಪ್ರೇಮದಿಂದ ಸಲಹಿದಳು. ಬಂಗಾಳೆಯಲ್ಲಿ ಇಂದಿನವರೆಗೂ ಅಸಾಮಾನ್ಯೆಯನ್ನು ದೇವತೆಯಂತೆ ಭಾವಿಸಿ ಮಗುವನ್ನು ಎತ್ತಿಕೊಂಡಿರುವಂತೆ ಆಕೆಯ ವಿಗ್ರಹವನ್ನು ಮಾಡಿ ಪೂಜಿಸುವ ಪದ್ಧತಿಯು ಉಂಟಂತೆ.

ಅಸಾಮಾನ್ಯೆಯು ತನ್ನ ದೃಢನಿಶ್ಚಯದಿಂದಲೂ, ಶತ್ರುಗಳಲ್ಲಿ ಇಟ್ಟಿರುವ ಮಿತ್ರಭಾವದಿಂದಲೂ, ಬೇರೊಬ್ಬರಿಗೆ ಅಸಾಧ್ಯವಾದ ಸತ್ಕೃತ್ಯವನ್ನು ಮಾಡಿ ತನ್ನ ಹೆಸರನ್ನು ಸಾರ್ಥಕಮಾಡಿಕೊಂಡಳು. ಅದರಂತೆಯೇ ಆಕೆಯ ಚರಿತ್ರೆಯನ್ನು

ಓದಿದ ತರುಣಿಯರು ಇತರರಿಗೆ ತಮ್ಮ ಕೈಯಲ್ಲಿ ಅದಷ್ಟು ಉಪಕಾರವನ್ನು ಮಾಡಬೇಕು. ಒಬ್ಬರು ನಿಮ್ಮನೇಲೆ ಅನ್ಯಾಯವಾಗಿ ಆಗ್ರಹಗೊಂಡರೂ ನೀವು ಅವರಲ್ಲಿ ಪ್ರೇಮದಿಂದ ನಡೆದುಕೊಂಡರೆ ನೀವು ಎಲ್ಲರಲ್ಲಿಯೂ ಪೂಜ್ಯರಾಗಿ, ಈಶ್ವರನ ಪ್ರೇಮದಿಂದ ಅಸಾಮಾನ್ಯೆಯರಾಗುವಿರಿ!

ಖನಾ.

ಈಕೆಯು ಜ್ಯೋತಿಶ್ಶಾಸ್ತ್ರದಲ್ಲಿ ಪ್ರವೀಣಳು. ಈಕೆಯ ಕವಿತ್ವವನ್ನು ಆ ಕಾಲದಲ್ಲಿ ಆಬಾಲವೃದ್ಧರೂ ಪ್ರೀತಿಯೊಡನೆ ಪಠಿಸುತಲಿದ್ದರಂತೆ. ನಮ್ಮ ದೇಶದಲ್ಲಿ ಚರಿತ್ರೆಗಳನ್ನು ಬರೆದಿಡುವ ಪದ್ಧತಿಯು ಇಲ್ಲದಕಾರಣ ಜ್ಯೋತಿಶ್ಶಾಸ್ತ್ರ ಪ್ರಖ್ಯಾತಳಾದ ಈ ಪಂಡಿತೆಯ ಚರಿತ್ರೆಯು ಸವಿಸ್ತಾರವಾಗಿ ದೊರೆಯಲಿಲ್ಲ. ಈಕೆಯು ತಾಯಿತಂದೆಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡುದುದರಿಂದ ಒಬ್ಬ ಅನಾರ್ಯನು ಈಕೆಯನ್ನು ಬೆಳೆಸಿ ಜ್ಯೋತಿಶ್ಶಾಸ್ತ್ರವನ್ನು ಕಲಿಸಿದನೆಂದು ಒಂದು ದಂತ ಕಥೆಯನ್ನು ಹೇಳುತ್ತಾರೆ. ಖನೆಯು ಸೂಕ್ಷ್ಮಬುದ್ಧಿಯುಳ್ಳವಳಾದ ಕಾರಣ ಇತರ ಬಾಲೆಯರಂತೆ ಆಟಗಳಲ್ಲಿ ಕಾಲವನ್ನು ಕಳೆಯದೆ ತನ್ನ ಸಾಕಿದ ತಂದೆಯ ಬಳಿಯಲ್ಲಿ ಜ್ಯೋತಿಷವನ್ನು ಕಲಿಯುತಲಿದ್ದಳು. ಆತನು ಬಾಲೆಯ ಗ್ರಹಣಶಕ್ತಿಯನ್ನೂ, ಶ್ರದ್ಧೆಯನ್ನೂ ನೋಡಿ ಪ್ರೀತನಾಗಿ ತನಗೆ ಬಂದ ವಿದ್ಯೆಯೆಲ್ಲವನ್ನೂ ಸಾಂಗೋಪಾಂಗವಾಗಿ ಆ ಬಾಲಿಕೆಗೆ ಕಲಿಸಿದನು. ಪ್ರಾಚೀನಕಾಲದಲ್ಲಿ ಆರ್ಯರಿಗಿಂತಲೂ, ಅನಾರ್ಯರೇ ಜ್ಯೋತಿಷದಲ್ಲಿ ವಿಶೇಷ ಪಾಂಡಿತ್ಯವುಳ್ಳವರಾಗಿದ್ದರು ಎಂದು ಹೇಳುತ್ತಾರೆ.

ಖನೆಯು ವಾಸಮಾಡುತಲಿದ್ದ ಗ್ರಾಮದಲ್ಲಿಯೇ ಮಿಹಿರ ಎಂಬ ಒಬ್ಬ ಬ್ರಾಹ್ಮಣ ಬಾಲಕನನ್ನು ಒಬ್ಬ ಅನಾರ್ಯನು ಸಾಕುತಲಿದ್ದನು. ಆ ಅನಾರ್ಯನು ಮಿಹಿರನನ್ನು ಪುತ್ರವಾತ್ಸಲ್ಯದಿಂದ ಸಲಹಿ ಜ್ಯೋತಿಷ್ಯದಲ್ಲಿ ಪಂಡಿತನನ್ನಾಗಿ ಮಾಡಿದನು. ಅನಂತರ ಖನಾ ಮಿಹಿರರು ಯುಕ್ತವಯಸ್ಕರಾದ ಮೇಲೆ ತಮ್ಮ ಸಾಕಿದ ತಂದೆಗಳ ಅನುಮತಿಯನ್ನು ಪಡೆದು ವಿವಾಹವನ್ನು ಮಾಡಿಕೊಂಡು ಸಂಸಾರಯಾತ್ರೆಯನ್ನು ಮಾಡುತಲಿದ್ದರು.

ಖನೆಯ ಜನನೀಜನಕರ ಪರಿಚಯವು ತಿಳಿಯದಿದ್ದರೂ, ಮಿಹಿರನ ವಂಶವನ್ನು ನಾವು ತಿಳಿಯಬಹುದು. ಲೋಕಪ್ರಸಿದ್ಧನಾದ ವಿಕ್ರಮಾದಿತ್ಯನ ಸಭೆ

ಯಲ್ಲಿರುವ ನವರತ್ನಗಳಲ್ಲಿ ಒಬ್ಬನಾದ ವರಾಹನಿಗೆ ಈ ಮಿಹಿರನು ಪುತ್ರನು. ವರಾಹನು ಜ್ಯೋತಿಷ್ಯದಲ್ಲಿ ಅಸಮಾನಪಾಂಡಿತ್ಯವನ್ನು ಪಡೆದು ಕೆಲವು ಜ್ಯೋತಿಷ್ಯ ಗ್ರಂಥಗಳನ್ನೂ ರಚಿಸಿದನು. ಮಿಹಿರನು ಜನ್ಮಿಸಿದೊಡನೆಯೇ ಆತನು ಜಾತಕವನ್ನು ಪರೀಕ್ಷಿಸಲು, ಅದರಲ್ಲಿ ಸಂಖ್ಯೆಯು ತಪ್ಪಾದುದರಿಂದ, ಜಾತಕದಲ್ಲಿ ನೂರುವರ್ಷಗಳ ಅಯುರ್ದಾಯವಿದ್ದರೂ, ತಂದೆಯ ಲೆಕ್ಕಕ್ಕೆ ಬಾಲಕನು ಹತ್ತು ವರುಷಗಳು ಮಾತ್ರವೇ ಜೀವಿಸುವನು ಎಂದು ತಿಳಿಯಬಂದಿತು. ಆಗ ವರಾಹನು ಬಹಳವಾಗಿ ಚಿಂತಿಸಿ ಹತ್ತುವರ್ಷಗಳು ಸಾಕಿದ ಅನಂತರ ಮಗನು ಗತಿಸಿದರೆ ಬಹುದುಃಖವು ಉಂಟಾಗುವುದಾದಕಾರಣ, ಇವನನ್ನು ಈಗಲೇ ಎಲ್ಲಾದರೂ ಬಿಟ್ಟು ಬರುವುದು ಉತ್ತಮ ಎಂದು ಯೋಚಿಸಿ, ಒಂದು ಮರದ ದೋಣಿಯಲ್ಲಿ ಆ ಶಿಶುವನ್ನು ಇಟ್ಟು, ನದೀಪ್ರವಾಹದಲ್ಲಿ ಬಿಟ್ಟುಬಿಟ್ಟನು. ಅನಂತರ ಆ ಬಾಲಕನು ಒಬ್ಬ ಅನಾರ್ಯನಿಗೆ ದೊರೆತು ಕ್ರಮೇಣ ದೊಡ್ಡವನಾದ ವಿಷಯವನ್ನು ಮೇಲೆಬರೆದಿದೆ.

ವಿವಾಹವಾದ ಅನಂತರ ಖನಾ ಮಿಹಿರರಿಗೆ ಆರ್ಯರಬಳಿಗೆ ಹೋಗಬೇಕು ಎಂದು ಅಪೇಕ್ಷೆಯು ಉಂಟಾಯಿತು. ಅವರು ತಮ್ಮ ಇಷ್ಟವನ್ನು ತಮ್ಮ ಪಾಲನ ಕರ್ತರಿಗೆ ತಿಳಿಸಲು, ಅವರು ಅದಕ್ಕೆ ಸಮ್ಮತಿಸಿ, ಅವರೊಡನೆ ಒಬ್ಬ ದಾಸಿಯನ್ನು ಕಳುಹಿಸಿದರು. ಮತ್ತು ಆದಾಸಿಯ ಕೈಯಲ್ಲಿ ಕೆಲವು ಜ್ಯೋತಿಷ್ಯ ಗ್ರಂಥಗಳನ್ನು ಕೊಟ್ಟು, " ಖನಾ ಮಿಹಿರರು ಆರ್ಯದೇಶಕ್ಕೆ ಹೋಗುವ ಸಮಯದಲ್ಲಿ ಅವರಿಗೆ ಜ್ಯೋತಿಷ್ಯದಲ್ಲಿ ಇರುವ ಪಾಂಡಿತ್ಯವನ್ನು ಪರೀಕ್ಷಿಸಿ, ಅವರು ಪಂಡಿತರು ಎಂದು ತಿಳಿದರೆ ಆ ಗ್ರಂಥಗಳನ್ನು ಪುನಃ ನಮ್ಮಲ್ಲಿಗೆ ತರಬೇಕು, ಇಲ್ಲದಿದ್ದರೆ ಗ್ರಂಥಗಳನ್ನು ಅವರಿಗೆ ಕೊಟ್ಟು ಬರಬೇಕು," ಎಂದು ಆ ಅನಾರ್ಯರು ಗುಪ್ತವಾಗಿ ಹೇಳಿಕಳುಹಿಸಿದರು. ಅದರಂತೆಯೇ ಆ ದಾಸಿಯು ಖನಾ ಮಿಹಿರರು ಅನಾರ್ಯರಿರುವ ಪ್ರದೇಶದ ಮೇರೆಯನ್ನು ದಾಟಿ ಅವರ ದೇಶಕ್ಕೆ ಹೋಗುವ ಸಮಯದಲ್ಲಿ, ಕರುವನ್ನು ಹಾಕಲು ಸಿದ್ಧವಾಗಿದ್ದ ಒಂದು ಹಸುವನ್ನು ತೋರಿಸಿ, 'ಈ ಗೋವಿಗೆ ಕರಿಯ ಬಣ್ಣದ ಕರುವು ಹುಟ್ಟುವುದೇ, ಬಿಳಿಯ ಬಣ್ಣದ ಕರುವು ಹುಟ್ಟುವುದೇ' ಎಂದು ಮಿಹಿರನನ್ನು ಕುರಿತು ಪ್ರಶ್ನೆಮಾಡಿದಳು. ಅದಕ್ಕೆ ಮಿಹಿರನು ಬಿಳಿಯಬಣ್ಣದ ಕರುವು ಜನ್ಮಿಸುವುದು ಎಂದು ಉತ್ತರವನ್ನಿತ್ತನು. ಅನಂತರ ಆ ಹಸುವು ಕೆಂಪುಬಣ್ಣದ ಕರುವನ್ನು ಹಾಕಿತು. ಆಗ ಆ ದಾಸಿಯು ಮಿಹಿರನಿಗೆ ಜ್ಯೋತಿಷ್ಯಜ್ಞಾನವು ಸಂಪೂರ್ಣವಾಗಿಲ್ಲ ಎಂದೆಣಿಸಿ, ತನ್ನಲ್ಲಿರುವ ಗ್ರಂಥಗಳನ್ನು ಮಿಹಿರನಿಗೆ ಕೊಟ್ಟಳು. ಆಗ ಮಿಹಿರನು ತಾನು ಇಷ್ಟು ದಿವಸಗಳಿಂದಲೂ ಶ್ರಮೆಪಟ್ಟು ಅಭ್ಯಾಸಮಾಡಿದರೂ ಬರದೇ ಇರುವ ಈ ವಿದ್ಯೆಯು ಈ ಪುಸ್ತಕಗಳನ್ನು ಓದಿದ ಮಾತ್ರಕ್ಕೆ ಬರುವುದೇ? ಎಂದು ಜುಗುಪ್ಸೆಯೊಡನೆ ಆ ಗ್ರಂಥಗಳನ್ನು ನದಿಯಲ್ಲಿ ಬಿಸುಟನು. ಸಮೀಪದಲ್ಲಿದ್ದ

ಖನೆಯು ಬೇಗನೆ ಓದಿಹೋಗಿ ಆ ಪುಸ್ತಕಗಳಲ್ಲಿ ಎರಡನ್ನು ಮಾತ್ರ ಪ್ರವಾಹದಿಂದ ತೆಗೆದಳು. ಮಿಕ್ಕ ಪುಸ್ತಕಗಳು ಪ್ರವಾಹದಲ್ಲಿ ಕಣ್ಣಿಗೆ ಕಾಣಿಸದೆ ಹೋದುವು. ಆಮೇಲೆ ಆ ದಂಪತಿಗಳು, ವಿಕ್ರಮಾದಿತ್ಯನು ಬೇಟೆಯಾಡಲು ಬಂದಿದ್ದ ಸ್ಥಳಕ್ಕೆ ಸಮೀಪದಲ್ಲಿದ್ದ ಒಂದು ಹಳ್ಳಿಯನ್ನು ಸೇರಿದರು. ಅಲ್ಲಿ ವಿಕ್ರಮಾದಿತ್ಯನು ವಿದ್ವಾಂಸರಿಗೆ ಮನ್ನಣೆಯನ್ನು ಮಾಡುವನು ಎಂದು ಕೇಳಿ, ಮಿಹಿರನು ರಾಜನನ್ನು ದರ್ಶನಮಾಡಿ ತನ್ನ ಪಾಂಡಿತ್ಯವನ್ನು ತೋರಿಸಿದನು. ದೊರೆಯು ಮಿಹಿರನ ಪಾಂಡಿತ್ಯಕ್ಕೆ ಸಂತೋಷಿಸಿ, ಆತನನ್ನು ತನ್ನ ಆಸ್ಥಾನಪಂಡಿತನನ್ನಾಗಿ ನಿಯಮಿಸಿ, ರಾಜಧಾನಿಗೆ ಕರೆದುಕೊಂಡು ಹೋದನು. ಅನಂತರ ವರಾಹನನ್ನು ಕರೆಯಿಸಿ, 'ಈ ದಂಪತಿಗಳನ್ನು ನಿನ್ನ ಮನೆಯಲ್ಲಿ ಇಟ್ಟುಕೊ,' ಎಂದು ಹೇಳಿದನು. ಅದರಂತೆಯೇ ಈ ದಂಪತಿಗಳು ವರಾಹನ ಮನೆಯಲ್ಲಿ ವಾಸವಾಗಿರಲು ಕೆಲವು ದಿವಸಗಳು ಕಳೆದ ಅನಂತರ ಇವರ ಚರಿತ್ರೆಯೆಲ್ಲವನ್ನೂ ವರಾಹನು ಕೇಳಿ, ತಾನು ನದಿಯಲ್ಲಿ ಬಿಸುಟ ಬಾಲಕನು ಈತನೇ ಎಂದು ತಿಳಿದನು. ಪುತ್ರನು ದೊರೆತುದುದರಿಂದ ತಂದೆಯೂ, ಪುನಃ ತಂದೆಯಬಳಿಗೆ ಸೇರಿದುದರಿಂದ ಮಗನೂ ಅತ್ಯಂತ ಸಂತುಷ್ಟರಾದರು. ಮನೆಯಲ್ಲಿ ವರಾಹ ಮಿಹಿರರೂ, ಖನೆಯೂ ಸರ್ವದಾ ಜ್ಯೋತಿಷ್ಯವನ್ನು ಕುರಿತು ಪ್ರಸಂಗಿಸಿಕೊಳ್ಳುತ್ತ ಜ್ಯೋತಿಶ್ಶಾಸ್ತ್ರದಲ್ಲಿ ಅನೇಕ ಹೊಸವಿಷಯಗಳನ್ನು ಕಂಡುಹಿಡಿಯುತಲಿದ್ದರು. ಮಿಹಿರನು ತಂದೆಯಂತೆಯೇ ವಿದ್ವಾಂಸನಾದುದರಿಂದ ವಿಕ್ರಮನ ಸಭೆಯಲ್ಲಿಯೂ, ದೇಶದಲ್ಲೆಲ್ಲಿಯೂ ಆತನನ್ನು ಕೊಂಡಾಡುತಲಿದ್ದರು. ಖನೆಯು ರಾಜಸಭೆಗೆ ಹೋಗದಿದ್ದರೂ ಆಕೆಯ ಸದ್ಗುಣಗಳಿಂದಲೂ, ವಿದ್ಯಾವಿಶೇಷದಿಂದಲೂ ಪ್ರಜೆಗಳು ವರಾಹನ ಸೊಸೆಯು ಖಗೋಳ ವಿದ್ಯೆಯಲ್ಲಿ ಪ್ರವೀಣಳು ಎಂದು ಹೇಳಿಕೊಳ್ಳುತಲಿದ್ದರು.

ಒಂದುದಿವಸ ವಿಕ್ರಮಾದಿತ್ಯನು ವರಾಹನನ್ನು ಕರೆದು, "ಆಕಾಶದಲ್ಲಿರುವ ನಕ್ಷತ್ರಗಳ ಸಂಖ್ಯೆಯನ್ನು ಹೇಳು," ಎಂದು ಕೇಳಿದನಂತೆ. ಆಗ ವರಾಹನು ಅನೇಕ ಗ್ರಂಥಗಳನ್ನು ಶೋಧಿಸಿದರೂ ನಕ್ಷತ್ರಗಳ ಸಂಖ್ಯೆಯನ್ನು ತಿಳಿಯಲಾಗದೇ ಇರಲು, ಆಕಾಶದಲ್ಲಿರುವ ನಕ್ಷತ್ರಗಳನ್ನು ಎಣಿಸುವುದು ಹೇಗೆ ಎಂದು ಚಿಂತಾಕ್ರಾಂತನಾಗಿ ಈ ವಿಷಯವನ್ನು ಪುತ್ರನಾದ ಮಿಹಿರನಿಗೆ ತಿಳಿಸಿದನು. ಮಿಹಿರನೂ ತನ್ನ ಪಾಂಡಿತ್ಯವೆಲ್ಲವನ್ನೂ ವಿನಿಯೋಗಿಸಿ ನೋಡಿದರೂ ನಕ್ಷತ್ರ ಸಂಖ್ಯೆಯು ತಿಳಿಯಲಿಲ್ಲ. ತಂದೆ ಮಕ್ಕಳಿಬ್ಬರೂ ಏನುಮಾಡುವುದಕ್ಕೂ ತೋರದೆ ರಾಜಸಭೆಯಲ್ಲಿ ತಮಗೆ ಅವಮಾನವು ಉಂಟಾಗುವುದು ಎಂದು ಚಿಂತಿಸುತಲಿದ್ದರು. ಖನೆಯು ಅವರು ಚಿಂತಿಸುವ ಕಾರಣವನ್ನು ಕೇಳಿ, "ಇದಕ್ಕಾಗಿ ತಾವು ಇಷ್ಟು ಚಿಂತಿಸಬೇಕೇ," ಎಂದು ಅವರಿಗೆ ಧೈರ್ಯವನ್ನು ಹೇಳಿ ತಾನು ಒಂದು ಗಳಿಗೆಯ ಕಾಲಗಣಿತವನ್ನು ಮಾಡಿ ನಕ್ಷತ್ರ ಸಂಖ್ಯೆಯನ್ನು ಕಂಡುಹಿಡಿದು ಅವರಿಗೆ

ತಿಳಿಸಿದಳು. ಆಮೇಲೆ ಅವರು ಸಂತೋಷದಿಂದ ಭೋಜನವನ್ನು ಮಾಡಿ, ರಾಜಸಭೆಗೆ ಹೋಗಿ ನಕ್ಷತ್ರಗಳ ಸಂಖ್ಯೆಯನ್ನೂ, ಅದನ್ನು ಕಂಡುಹಿಡಿದ ಕ್ರಮವನ್ನೂ ತೋರಿಸಲು ಸಭಿಕರೆಲ್ಲರೂ ಆಶ್ಚರ್ಯಮಗ್ನರಾದರು. ಈ ಮಹಾ ಕಾರ್ಯವು ತನಗೆ ತಿಳಿಯಲಿಲ್ಲವೆಂತಲೂ ವಿದ್ಯಾಧಿಕಳಾದ ತನ್ನ ಸೊಸೆಯು ಈ ಸಂಖ್ಯೆಯನ್ನು ಸುಲಭವಾಗಿ ಕಂಡುಹಿಡಿದಳೆಂತಲೂ ಮಿಹಿರನು ರಾಜನೊಡನೆಯೂ, ಸಭಿಕರೊಡನೆಯೂ ಹೇಳಿದನು. ಆ ಮಾತನ್ನು ಕೇಳಿ ಸಭಿಕರು ಆ ವಿದುಷೀಮಣಿಯನ್ನು ಬಹಳ ಕೊಂಡಾಡಿದರು. ವಿಕ್ರಮಾದಿತ್ಯನೂ ಸಂತೋಷಪಟ್ಟು ವರಾಹನೊಡನೆ, 'ನಾಳೆಯಿಂದ ನನ್ನ ಸಭೆಯಲ್ಲಿರುವ ನವರತ್ನಗಳೊಡನೆ ಆಕೆಯು ದಶಮರತ್ನವಾಗಿರಲಿ. ಆಕೆಯನ್ನು ನಾಳೆಯಿಂದ ಅಗತ್ಯವಾಗಿ ನನ್ನ ಸಭೆಗೆ ಕರೆತರುವವನಾಗು,' ಎಂದು ನುಡಿದನು. ಸ್ತ್ರೀಯರನ್ನು ರಾಜಸಭೆಗೆ ಕರೆದುಕೊಂಡು ಹೋಗುವುದು ಅವಮಾನಕರ ಮತ್ತು ನಿಂದಾಸ್ಪದವಾದ ಕಾರ್ಯವು ಎಂದು ವರಾಹನ ಅಭಿಪ್ರಾಯವಾಗಿದ್ದುದರಿಂದ ರಾಜಾಜ್ಞೆಯನ್ನು ಕೇಳಿದ ವರಾಹನು ಭೀತನಾದನು. ಸೊಸೆಯನ್ನು ಸಭೆಗೆ ಕರೆತರದಿದ್ದರೆ ರಾಜನಿಗೆ ಅತ್ಯಾಗ್ರಹವು ಉಂಟಾಗುವದಾದ ಕಾರಣ ಇದೆಲ್ಲಕ್ಕೂ ಮೂಲಕಾರಣಳಾದ ಖನೆಯನ್ನು ಕೊಂದುಹಾಕಿದರೆ ಚೆನ್ನಾಗಿರುತ್ತದೆ ಎಂದು ನಿಶ್ಚಯಿಸಿದನಂತೆ! ವರಾಹನು ಈ ವಿಷಯವೆಲ್ಲವನ್ನೂ ಮಗನಿಗೆ ತಿಳಿಸಿ, "ನಿನ್ನ ಅರ್ಧಾಂಗಿಯ ನಾಲಿಗೆಯನ್ನು ಕತ್ತರಿಸು," ಎಂದು ಆಜ್ಞಾಪಿಸಿದನಂತೆ! ಆದರೆ ಮಿಹಿರನು ಸುಗುಣಮಣಿಯಾದ ಪತ್ನಿಯನ್ನು ಕೊಲ್ಲಲು ಮನವು ಬರದೆ ವ್ಯಸನಪಡುತಲಿದ್ದನಂತೆ! ಈ ಸಂಗತಿಯಲ್ಲವನ್ನೂ ಖನೆಯು ತಿಳಿದು ಮಾವಂದಿರ ಆಜ್ಞೆಯನ್ನು ಶಿರಸಾವಹಿಸಿ ತನ್ನ ನಾಲಿಗೆಯನ್ನು ಕತ್ತರಿಸಬೇಕು ಎಂದು ಪತಿಯನ್ನು ಬೇಡಿಕೊಂಡಳಂತೆ! ಆ ಮೇಲೆ ಮಿಹಿರನು ಮನಸ್ಸನ್ನು ದೃಢಮಾಡಿಕೊಂಡು ಪ್ರಿಯಭಾರ್ಯೆಯ ನಾಲಿಗೆಯನ್ನು ಕತ್ತರಿಸಲು, ಆಕೆಯು ಮೃತಳಾದಳಂತೆ! ಮತ್ತೆ ಕೆಲವರು ವಿಕ್ರಮಾದಿತ್ಯನ ಆಜ್ಞೆಯಂತೆ ಖನೆಯು ಆತನ ಸಭೆಯಲ್ಲಿ ದಶಮರತ್ನವಾದಳು. ಕೆಲವು ಕಾಲಕಳೆದ ಅನಂತರ ಆಕೆಯು ಸ್ವಾಭಾವಿಕವಾದ ಮರಣವನ್ನು ಹೊಂದಿದಳು. ಯಾರೂ ಕೊಲ್ಲಲಿಲ್ಲ ಎಂದು ಈ ಕಥೆಯನ್ನು ಹೇಳುತ್ತಾರೆ. ಮೊದಲನೆಯ ಕಥೆಗಿಂತಲೂ ಎರಡನೆಯ ಕಥೆಯೇ ಸತ್ಯವಾದುದು ಎಂದು ತೋರುತ್ತದೆ. ವಿಕ್ರಮನ ಕಾಲದಲ್ಲಿ ಹೆಂಗಸರಿಗೆ ಗೋಷಾಪದ್ಧತಿಯು ಇರಲಿಲ್ಲ ಎಂದು ಅನೇಕ ಪ್ರಮಾಣಗಳಿಂದ ತಿಳಿಯಬರುತ್ತದೆ. ಒಂದುವೇಳೆ ಗೋಷಾ ಪದ್ಧತಿಯು ಇದ್ದ ಪಕ್ಷದಲ್ಲಿ, ರಾಜನು ಆಕೆಯನ್ನು ಸಭೆಗೆ ಕರೆತರಬೇಕು ಎಂದು ಹೇಳುತಲಿರಲಿಲ್ಲ. ಅದಲ್ಲದೆ ಮಿಹಿರನು ತನ್ನ ಪತ್ನಿಯನ್ನು ನಿಷ್ಕಾರಣವಾಗಿ ಕೊಂದನು ಎಂದು ಹೇಳುವ ಮಾತೂ ಯುಕ್ತವಾಗಿ

ತೋರುವುದಿಲ್ಲ. ಆದಕಾರಣ ಎರಡನೆಯ ಕಥೆಯೇ ನಂಬುವುದಕ್ಕೆ ಅರ್ಹ ವಾದುದಾಗಿದೆ.

ಈ ಚರಿತ್ರೆಯಲ್ಲಿ ಅಲ್ಲಲ್ಲಿ ಕಾಣಬರುವ ಅಸಂಭವವಾದ ವಿಷಯಗಳನ್ನು ಬಿಟ್ಟುಬಿಟ್ಟರೂ, ಪೂರ್ವಕಾಲದಲ್ಲಿ ಒಬ್ಬ ಸ್ತ್ರೀಯು ಪುರುಷರಿಗೆ ಅಸಾಧ್ಯವಾದ ಜ್ಯೋತಿಶ್ಶಾಸ್ತ್ರದಲ್ಲಿ ಪ್ರವೀಣಳಾಗಿದ್ದಳೆಂತಲೂ, ಆಕೆಗೆ ಜ್ಯೋತಿಷಾಂಗಗಳಾದ ಜಾತಕಸ್ಕಂಧದಲ್ಲಿಯೂ, ಗಣಿತಸ್ಕಂಧದಲ್ಲಿಯೂ ಅತ್ಯಂತ ಪಾಂಡಿತ್ಯವುಂಟಾಗಿ ತ್ತೆಂತಲೂ ನಾವು ತಿಳಿಯಬಹುದು. ಖನೆಯ ಬುದ್ಧಿಯು ಕಠಿನವಾದ ಈ ವಿಷಯದಲ್ಲಿ ಇಷ್ಟು ಸುಲಭವಾಗಿ ಪ್ರವೇಶಿಸಿದುದನ್ನು ನೋಡಿದರೆ ಹೆಂಗಸರ ಬುದ್ಧಿಯು ಗಂಡಸರ ಬುದ್ಧಿಗಿಂತಲೂ ಮುಂದವಾದುದೆಂತಲೂ, ಸ್ತ್ರೀಯ ಮಸ್ತಿಷ್ಕವು, ಪುರುಷ ಮಸ್ತಿಷ್ಕಕ್ಕಿಂತಲೂ ಭಾರದಲ್ಲಿ ಕಡಮೆಯಾಗಿರುವುದರಿಂದ, ಪುರುಷರಿಗೆ ಇರುವಷ್ಟು ಜ್ಞಾನವು ಸ್ತ್ರೀಯರಿಗೆ ಇರಲಾರದೆಂತಲೂ ಹೇಳುವ ಮಾತು ಗಳು ಪಕ್ಷಪಾತ ವಚನಗಳು ಎಂದು ತೋರುತ್ತದೆ. ಹೆಂಗಸರು ಸಹಜವಾಗಿ ಮೂರ್ಖರು ಎಂದು ಹೇಳುವುದಕ್ಕಿಂತಲೂ, ಅವರಿಗೆ ಬಾಲ್ಯದಿಂದ ವಿದ್ಯೆಯನ್ನು ಕಲಿಸದ ಕಾರಣ ಅವರು ಮೂರ್ಖರಾದರು ಎಂದು ಹೇಳುವುದು ಉತ್ತಮ. ಬಾಲ್ಯದಲ್ಲಿ ಬಾಲರೂ ಬಾಲೆಯರೂ ಸಮಾನಬುದ್ಧಿ ಕೌಶಲ್ಯವುಳ್ಳವರಾಗಿ ಇರುತ್ತಾರೆ ಎಂಬುದು ನಮಗೆ ಎಲ್ಲರಿಗೂ ತಿಳಿದ ವಿಷಯವೇ. ಹೆಣ್ಣುಮಕ್ಕಳು ಬುದ್ಧಿವಂತರಾದರೂ ತಾಯಿತಂದೆಗಳು ವಿದ್ಯೆಯನ್ನು ಕಲಿಸದೆ ಇರುವುದರಿಂದ ಮೂರ್ಖರಾಗಿಯೂ ಬುದ್ಧಿಹೀನರಾಗಿಯೂ ಆಗುತ್ತಾರೆ. ಗಂಡುಮಕ್ಕಳು ಮಂದ ಬುದ್ಧಿಗಳಾದರೂ ವಿದ್ಯಾಭ್ಯಾಸದಿಂದಲೂ, ಜ್ಞಾನಪ್ರದವಾದ ಶಾಸ್ತ್ರಪಠನದಿಂದಲೂ ಬುದ್ಧಿವಂತರೂ ಜ್ಞಾನವಂತರೂ ಆಗುತ್ತಾರೆ. ಆದಕಾರಣ ಬಾಲೆಯರಿಗೆ ಸಹ ಬಾಲಕರಂತೆಯೇ ವಿದ್ಯೆಯನ್ನು ಕಲಿಸಿದರೆ ಅವರು ತಮ್ಮ ಬುದ್ಧಿಚಾತುರ್ಯ ದಿಂದ ಪುರುಷರ ಸತ್ಕಾರ್ಯಗಳಿಗೆ ಸಹಾಯಕರಾಗಿರುತ್ತಾರೆ.

ಮೀರಾಬಾಯಿ.

—o—

ಇಷ್ಟುವರೆಗೂ ಈ ಮಾಲೆಯಲ್ಲಿ ಪೋಣಿಸಿರತಕ್ಕ ಚರಿತ್ರ ನಾಯಿಕೆಯರಲ್ಲಿ ಕೆಲವರು ರಾಜ್ಯವನ್ನು ಪರಿಪಾಲಿಸುವುದರಲ್ಲಿಯೂ, ಕೆಲವರು ಪಾತಿವ್ರತ್ಯದಲ್ಲಿಯೂ, ಕೆಲವರು ವಿದ್ಯೆ, ವಿನಯ ಮೊದಲಾದ ಸುಗುಣಗಳಲ್ಲಿಯೂ, ಕೆಲವರು ದಾನಧರ್ಮಗಳಲ್ಲಿಯೂ, ಪ್ರಸಿದ್ಧಿಯನ್ನು ಹೊಂದಿದರು. ಅಂದರೆ ಅವರೆಲ್ಲರೂ ಐಹಿಕಸಂಬಂಧವಾದ ವಿಷಯಗಳಲ್ಲಿ ನಮಗೆ ವಂದನೀಯರಾದರು. ಪ್ರಕೃತ ಚರಿತ್ರನಾಯಿಕೆಯು ತತ್ವಜ್ಞೆ ಭಕ್ತಾಗ್ರೇಸರ ಚಕ್ರವರ್ತಿನಿ ಎಂದು ಪ್ರಸಿದ್ಧಿಯನ್ನು ಪಡೆದಳು.

ಭಗವದ್ಭಕ್ತಿಯಿಂದ ಸತ್ಕೀರ್ತಿಯನ್ನು ಹೊಂದಿದ, ಸಾಧುಗಳ ಮತವು ಎಂತಹುದಾದರೂ ಅವರು ಯಾವದೇಶದಲ್ಲಿ ಜನ್ಮಿಸಿದರೂ ಪಕ್ಷಪಾತರಹಿತರಾದ ಜನರಿಗೆ ಅವರು ಪೂಜ್ಯರೇ ಸರಿ. ಅವರ ಆಚಾರಗಳು ನಮ್ಮ ಆಚಾರಗಳಿಗೆ ಭಿನ್ನವಾದುದಾದರೂ ಅವರಲ್ಲಿರುವ ನಿಷ್ಕಳಂಕ ಭಗವದ್ಭಕ್ತಿಯಿಂದಲೇ ಅವರು ನಮಗೆ ಪೂಜಾರ್ಹರಾಗುತ್ತಾರೆ.* ಆದಕಾರಣ ಪ್ರಸ್ತುತ ಚರಿತ್ರ ನಾಯಿಕೆಯಾದ ಮೀರಾಬಾಯಿಯ ಚರಿತ್ರೆಯು ಸಕಲಮತದವರಿಗೂ ಗ್ರಾಹ್ಯವಾದುದಾಗಿದೆ.

ಉತ್ತರದಲ್ಲಿ ಹಿಮಾಲಯವೂ, ದಕ್ಷಿಣದಲ್ಲಿ ವಿಂಧ್ಯಾದ್ರಿಯೂ, ಪೂರ್ವದಲ್ಲಿ ಗಂಗಾನದಿಯೂ, ಪಶ್ಚಿಮದಲ್ಲಿ ಸಿಂಧುನದವೂ ಮೇರೆಯಾಗಿರುವ ಪ್ರದೇಶದಲ್ಲಿ ಎಲ್ಲಿ ನೋಡಿದರೂ, ದಾರಿಯಲ್ಲಿ ನಡೆಯುವ ಪಥಿಕರೂ, ಮನೆಮನೆಯಲ್ಲಿ ಭಿಕ್ಷಬೇಡುತ್ತಿರುವ ಭಿಕ್ಷುಕರೂ, ಪಶುಗಳನ್ನು ಕಾಯುವ ಕುರುಬರೂ, ರಾಜಸಭೆಗಳಲ್ಲಿ ಸಂಗೀತವನ್ನು ಹೇಳುವ ಗಾನವಿದ್ಯಾನಿಪುಣರೂ, ಮೀರಾನಾಮಾಂಕಿತವಾದ ಹಾಡುಗಳನ್ನು ಹಾಡುತಲಿರುವರು. ಅವರೊಳಗೆ ಯಾರನ್ನಾದರೂ 'ಮೀರಾ' ಯಾರು ಎಂದು ಕೇಳಿದರೆ, ಅವರು ಅತ್ಯಂತ ಪೂಜ್ಯಭಾವದಿಂದ ಮೀರಾ ಒಬ್ಬ ಅಪೂರ್ವವನಿತಾರತ್ನವು ಎಂದು ಹೇಳುವರು.

---

* "ಗುಣಾಃ ಪೂಜಾಸ್ಥಾನಂ, ಗುಣಿಷುನಚಲಿಂಗಂ ನಚವಯಃ," ಎಂದು ಭವಭೂತಿಯು ಅರುಂಧತಿಯಿಂದ ಸೀತೆಗೆ ಹೇಳಿಸಿದಾನೆ.

ಮಾರವಾಡ ದೇಶದಲ್ಲಿ, ಮೇರತ್ ನಿವಾಸಿಗಳಾದ ರಾಠೋರ್ ರಾಜ ಪುತ್ರರ ವಂಶವು ಉತ್ತಮವಾದುದು ಎಂದು ಎಣಿಸುತ್ತಾರೆ. ಆ ವಂಶದವನಾದ ಜಯಮಲ್ಲ ಎಂಬ ಒಬ್ಬ ಸರದಾರನಿಗೆ ವಿಕ್ರಮಾರ್ಕ ಶಕ ೧೪೭೫ನೆಯ ಇಸವಿಯಲ್ಲಿ ಈಕೆಯು ಜನ್ಮಿಸಿದಳು. ಮೀರಾಬಾಯಿಯ ತಂದೆಯಾದ ಜಯಮಲ್ಲನು ಬಡವರಲ್ಲಿ ಬಹು ದಯೆಯಳ್ಳವನಾಗಿ ಅವರನ್ನು ರಕ್ಷಿಸುತ್ತ, ಅವಕಾಶ ದೊರೆತಾಗ ಭಗವತ್ಕೀರ್ತನೆಯನ್ನು ಮಾಡುತಲಿದ್ದನು. ಆತನ ಸಹವಾಸದಿಂದ ಮೀರಾಬಾಯಿಗೆ ಬಾಲ್ಯದಲ್ಲಿಯೇ ಭಗವದ್ಭಕ್ತಿಯು ಮನಸ್ಸಿಗೆ ಹಿಡಿಯಿತು. ತಂದೆಯು ಆಕೆಗೆ ಬಾಲ್ಯದಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿಸಿದುದರಿಂದ ಸ್ವಲ್ಪಜ್ಞಾನವು ಉಂಟಾದಂದಿನಿಂದಲೂ ಆಕೆಯು ಭಕ್ತಿರಸ ಪ್ರಧಾನಗಳಾದ ಭಾಗವತ, ರಾಮಾಯಣ, ವಿಷ್ಣುಪುರಾಣ ಮೊದಲಾದ ಗ್ರಂಥಗಳನ್ನು ಸರ್ವದಾ ಪಠಿಸುತಲಿದ್ದಳು. ಗುಣವತಿಯೂ, ವಿದುಷಿಯೂ ಆದ ಮೀರಾಬಾಯಿಯು ಯುಕ್ತವಯಸ್ಕಳಾದ ಅನಂತರ ಈಕೆಯನ್ನು ಉದಯಪುರಾಧೀಶ್ವರನ ತನಯನಾದ ಕುಂಭರಾಣಾವಿಗೆ ಕೊಟ್ಟು ಮದುವೆಯನ್ನು ಮಾಡಿದರು. ಸಮಾನ ಗುಣ, ರೂಪ, ವಿದ್ಯಾಯುತರಾದ ಈ ಜಾಯಾಪತಿಗಳು ಪರಸ್ಪರಾನುರಾಗ ಉಳ್ಳವರಾಗಿ, ಒಬ್ಬರ ಸಹಾಯದಿಂದ ಒಬ್ಬರು ಕವಿತ್ವವನ್ನು ರಚಿಸುತಲಿದ್ದರು. ಆದರೆ ರಾಣಾಮಾಡುವ ಕವಿತ್ವವು ಇಹ ಸಂಬಂಧವಾದುದಾಗಿಯೂ ಮೀರಾ ಮಾಡುವ ಕವಿತ್ವವು ಪರಸಂಬಂಧವಾದುದಾಗಿಯೂ ಇದ್ದುವು. ತಂದೆಯ ಅನಂತರ ಕುಂಭರಾಣಾ ಧೊರೆಯಾದನು. ಪತಿಯು ರಾಜ್ಯಾಭಿಷಿಕ್ತನಾದ ಮೇಲೆ ಮೀರಾಬಾಯಿಗೆ ಸ್ವಾತಂತ್ರ್ಯವು ಹೆಚ್ಚಾಯಿತು. ಆಕೆಯು ಭರ್ತನ ಅನುಜ್ಞೆಯನ್ನು ಪಡೆದು ಭಗವತ್ಪ್ರಾರ್ಥನೆ, ಸ್ತುತಿ, ಪೂಜೆ ಮೊದಲಾದವುಗಳಲ್ಲಿ ಬಹು ಕಾಲವನ್ನು ಕಳೆಯುತಲಿದ್ದಳು. ಆಕೆಯು ತನ್ನ ಸಖಿಯರೊಡನೆ ಯಾವಾಗಲೂ ಸರ್ವವ್ಯಾಪಿಯಾದ ಭಗವಂತನ ಗುಣಗಳನ್ನೇ ತಿಳಿಸುತ್ತ ಆತನು ಭಕ್ತರಿಗೆ ಮಾಡಿದ ಅನೇಕ ಸಹಾಯಗಳನ್ನು ಹೊಗಳುತ್ತ, ತದ್ವಿಷಯವಾಗಿ ತಾನು ರಚಿಸಿದ ಪದ್ಯಗಳನ್ನು ಹೇಳುತ್ತ ಆನಂದಪಡುತಲಿದ್ದಳು! ಆಹಾ! ರಾಜ್ಯವೈಭವವನ್ನು ಅನುಭವಿಸುತಲಿದ್ದರೂ, ಅದರಲ್ಲಿ ಇಚ್ಛೆಯಿಲ್ಲದೆ, ಪರಮಾರ್ಥ ಚಿಂತೆಯಲ್ಲಿಯೇ ಕಾಲವನ್ನು ಕಳೆಯುತ್ತ ತನ್ನ ಸಖಿಯರನ್ನು ಸಹ ತನ್ನಂತೆಯೇ ಭಕ್ತರನ್ನಾಗಿ ಮಾಡುವವರು ಈ ಲೋಕದಲ್ಲಿ ದುರ್ಲಭರಲ್ಲವೇ?

ಇಂತಹ ಪರಮಭಕ್ತಳಾದ ಮೀರಾಬಾಯಿಯು ಉದಯಪುರದ ಕೋಟೆಯಲ್ಲಿ ಅಂತಃಪುರವೆಂಬ ಕಾರಾಗಾರದಲ್ಲಿ ಹೇಗೆ ಇರಬಲ್ಲಳು? ಆಕೆಯು ಅರಮನೆಗೆ ಸ್ವಲ್ಪದೂರಲ್ಲಿ ಇರುವ ಕೃಷ್ಣಮಂದಿರಕ್ಕೆ ಪ್ರತಿದಿವಸವೂ ಹೋಗುವುದಕ್ಕೆ ಪ್ರಾರಂಭಿಸಿದಳು. ಅಲ್ಲಿ ಆಕೆಯು ತಾನು ಪರಮೇಶ್ವರನು ಎಂದು ಭಾವಿಸಿದ ಕೃಷ್ಣವಿಗ್ರಹವನ್ನು ಭಕ್ತಿಪೂರ್ವಕವಾಗಿ ಪೂಜಿಸಿ, ತನ್ನ ಸುಸ್ವರದೊಡನೆ ಭಕ್ತಿ

ರಸಪೂರಿತಗಳಾದ ಕೀರ್ತನೆಗಳನ್ನು ಪಾಡುತ್ತ, ಆನಂದಾತಿಶಯದಿಂದ ನಾಟ್ಯ ವನ್ನಾಡುತಲಿದ್ದಳು! ಆಕೆಯ ನಿಷ್ಕಳಂಕ ಭಕ್ತಿಯಿಂದ ಆಕೆಯ ಕೀರ್ತಿಯು ನಾಲ್ಕು ದಿಕ್ಕಿನಲ್ಲಿಯೂ ಪ್ರಸರಿಸಲು, ತತ್ವವಿಚಾರಪರರೂ, ಯೋಗಿಗಳೂ, ಸಾಧು ಗಳೂ ಆಕೆಯ ದರ್ಶನಾರ್ಥವಾಗಿ ಪ್ರತಿದಿನವೂ ಗುಂಪುಗುಂಪಾಗಿ ಆ ಕೃಷ್ಣ ಮಂದಿರಕ್ಕೆ ಬರುತಲಿದ್ದರು. ಅವರ ಸಾಂಗತ್ಯದಿಂದ ಆಕೆಗೆ ಸ್ವಾಭಾವಿಕ ವಾಗಿದ್ದ ಭಕ್ತಿಯು ದಿನದಿನಕ್ಕೆ ಹೆಚ್ಚುತಲಿತ್ತು.

ಮೀರಾಬಾಯಿಯ ಖ್ಯಾತಿಯು ಅನೇಕದೇಶಗಳಲ್ಲಿ ವ್ಯಾಪಿಸಿತು. ಆಕೆಯು ರಚಿಸಿದ ಪದ್ಯಗಳನ್ನೂ, ಕೀರ್ತನೆಗಳನ್ನೂ ಪ್ರತಿಗ್ರಾಮದಲ್ಲಿಯೂ ಜನರು ಭಕ್ತಿಯೊಡನೆ ಪಾಡುತಲಿದ್ದರು. ಆ ಸಮಯದಲ್ಲಿ ಡಿಲ್ಲಿಯಲ್ಲಿ ಬಾದಷಹ ನಾಗಿದ್ದ ಅಕ್ಬರನು ಮೀರಾಬಾಯಿಯ ಕೀರ್ತಿಯನ್ನು ಕೇಳಿ ಆ ಪರಮ ಭಕ್ತಳನ್ನು ನೋಡಲು ಕುತೂಹಲವುಳ್ಳವನಾದನು. ಆದರೆ ಉದಯಪುರೇಶನು ತನಗೆ ಅಧೀನನಾಗಿರಲಿಲ್ಲವಾದುದರಿಂದಲೂ, ಸ್ತ್ರೀಯರು ಯವನರ ಕಣ್ಣಿಗೆ ಬೀಳುವುದು ಬಹು ಅವಮಾನಕರವಾದುದು ಎಂದು, ರಜಪೂತರು ಎಣಿಸು ತ್ತಾರೆ ಎಂಬುದನ್ನು ತಿಳಿದವನಾದುದರಿಂದಲೂ, ತತ್ಪೂರ್ವದಲ್ಲಿ ಒಬ್ಬ ಮ್ಲೇಚ್ಛನು ರಾಜಪುತ್ರ ಸ್ತ್ರೀಯನ್ನು ನೋಡಲು ಅಪೇಕ್ಷಿಸಿದ ಮಾತ್ರಕ್ಕೆ ಚಿತ್ತೂರಿನ ರಾಜ ಪುತ್ರರಮಣಿಯರೆಲ್ಲರೂ ಅಗ್ನಿಪ್ರವೇಶವನ್ನು ಮಾಡಿದರು ಎಂಬುದನ್ನು ಕೇಳಿದವ ನಾದುದರಿಂದಲೂ, ಅಕ್ಬರನು ರಾಜವೇಷದಲ್ಲಿ ಮೀರಾಬಾಯಿಯನ್ನು ನೋಡಲು ಆಗುವುದಿಲ್ಲ ಎಂದೆಣಿಸಿದನು. ಆಮೇಲೆ ಆತನು ತನ್ನ ಸಭೆಯಲ್ಲಿ ಗಾನ ವಿಶಾರದನಾದ ತಾನಸೇನನನ್ನು ಕರೆಯಿಸಿ, ಮೀರಾಬಾಯಿಯನ್ನು ನೋಡಲು ಉಪಾಯವನ್ನು ಕೇಳಿದನು. ಆತನ ಆಲೋಚನೆಯಂತೆ ಇಬ್ಬರೂ ಸಾಧಾರಣ ವಾದ ಹಿಂದೂ ಬೈರಾಗಿಗಳಂತೆ ವೇಷವನ್ನು ಧರಿಸಿಕೊಂಡು ಗೂಢವಾಗಿ ಉದಯಪುರವನ್ನು ಸೇರಿ, ಮೀರಾಬಾಯಿಯು ಪೂಜೆಮಾಡುತಲಿದ್ದ ಕೃಷ್ಣ ಮಂದಿರವನ್ನು ಪ್ರವೇಶಿಸಿದರು. ಆಗ ಬಾದಷಹನು ಮೀರಾಬಾಯಿಯ ಭಕ್ತಿ, ಜ್ಞಾನಗಳನ್ನು ನೋಡಿ ಆನಂದಮಗ್ನನಾಗಿ ಆಕೆಯ ಬಳಿಯಲ್ಲಿ ತಾನು ಪರಮಾ ರ್ಥೋಪದೇಶವನ್ನು ಮಾಡಿಸಿಕೊಳ್ಳಬೇಕು ಎಂದೆಣಿಸಿ, ಪವಿತ್ರಳಾದ ಮೀರಾ ಬಾಯಿಯ ಪಾದಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಅದಕ್ಕೆ ಮೀರಾಬಾಯಿಯು, 'ನೀನು ನನಗೆ ಏಕೆ ನಮಸ್ಕಾರವನ್ನು ಮಾಡುವೆ? ಪರಮೇಶ್ವರನಿಗೆ ನಮಸ್ಕಾರವನ್ನು ಮಾಡು, ನನ್ನಿಂದ ನಿನಗೆ ಏನು ಬೇಕೋ ಹೇಳು,' ಎಂದು ಕೇಳಿದಳು. ಆಗ ಬಾದಷಹನು, 'ನನಗೆ ಪರಮಾರ್ಥಸಾಧನ ವನ್ನು ಉಪದೇಶ ಮಾಡು,' ಎಂದನು. ಆಗ ಆಕೆಯು, 'ಸರ್ವದಾ ಪರಮೇಶ್ವರ ನಲ್ಲಿ ಭಕ್ತಿಯಿಂದ ಇರುವುದೇ ಪರಮಾರ್ಥಸಾಧನ,' ಎಂದು ಉಪದೇಶವನ್ನು ಮಾಡಿದಳು. ಅದನ್ನು ಗ್ರಹಿಸಿದ ಬಳಿಕ ಬಾದಷಹನು ತನ್ನಲ್ಲಿ ಬಚ್ಚಿಟ್ಟು

ಕೊಂಡಿದ್ದ ರತ್ನಹಾರವನ್ನು ಗುರು ದಕ್ಷಿಣೆಯಾಗಿ ಆಕೆಗೆ ಕೊಡುವುದಕ್ಕೆ ಹೋಗಲು, ಆ ಹಾರವನ್ನು ನೋಡಿ ಆಕೆಯು, 'ಇಂತಹ ಅಪೂರ್ವವಾದ ರತ್ನ ಹಾರವು ಬೈರಾಗಿಯಾದ ನಿನಗೆ ಎಲ್ಲಿಂದ ಬಂದಿತು?" ಎಂದು ಕೇಳಲು, ಬಾದಷಹನು, 'ನಾನು ಒಬ್ಬ ರಾಜನ ಬಳಿಯಲ್ಲಿ ಒಂದು ಅಪೂರ್ವವಾದ ಕಾರ್ಯವನ್ನು ಮಾಡಲು ಆತನು ಅದಕ್ಕೆ ಮೆಚ್ಚಿ ಈ ಹಾರವನ್ನು ಬಹುಮಾನವಾಗಿತ್ತನು,' ಎಂದು ನುಡಿದನು. ಮಿಾರಾಬಾಯಿಯು ತನಗೆ ಆ ಹಾರವು ಬೇಡ ಎಂದು ಸ್ಪಷ್ಟವಾಗಿ ತಿಳಿಸಿದಳು. ಆದರೆ ವೇಷಧರನಾದ ಆ ಬೈರಾಗಿಯು ರತ್ನಹಾರವನ್ನು ಮಂದಿರೆದಲ್ಲಿರುವ ಸ್ವಾಮಿಯ ಕಂಠದಲ್ಲಿ ಹಾಕಿ ಹೊರಟುಹೋದನು. ಈ ಹಾರದಿಂದಲೇ ಮಿಾರಾಬಾಯಿಯ ಸಂಸಾರಸುಖವು ಹಾಳಾಯಿತು. ಬಾದಷಹನು ಹೊರಟುಹೋದ ಮಾರನೆಯ ದಿನವೇ ಹಾರದ ಸಂಗತಿಯು ಗ್ರಾಮದಲ್ಲೆಲ್ಲ ಹರಡಿತು. ರಾಣಾವಿಗೂ ತಿಳಿಯಿತು. ಕೂಡಲೆ ದೊರೆಯು ಆ ಹಾರವನ್ನು ತರಿಸಿ, ರತ್ನಪರೀಕ್ಷಕರಿಂದ ಅದರ ಬೆಲೆಯು ಹತ್ತುಲಕ್ಷ ರೂಪಾಯಿಗಳು ಬಾಳುವುದು ಎಂದು ತಿಳಿದುಕೊಂಡನು. ಆ ರತ್ನಪರೀಕ್ಷಕರಲ್ಲಿ ಒಬ್ಬನು, 'ನಾನು ಈ ಹಾರವನ್ನು ಡಿಲ್ಲೀ ಬಾದಷಹನಿಗೆ ಮಾರಿದೆನು,' ಎಂದು ನುಡಿದನು. ಆ ಮಾತನ್ನು ಕೇಳಿ ರಾಣಾ, ಹಾರವನ್ನು ಕೊಟ್ಟವರು ಯಾರಾಗಿರಬಹುದು ಎಂದು ಯೋಚಿಸಿ, ವಿಚಾರಿಸಿ, ವಿಚಾರಿಸಿ ಕೊನೆಗೆ ಹಾರವನ್ನು ಕೊಟ್ಟವನು ಡಿಲ್ಲೀ ಪತಿಯಾದ ಅಕ್ಬರನೆಂತಲೂ, ಅವನು ತನ್ನ ಪತ್ನಿಯ ಪಾದಗಳನ್ನು ಮುಟ್ಟಿ, ಆಕೆಯೊಡನೆ ಮಾತನಾಡಿದನೆಂತಲೂ ತಿಳಿದುಕೊಂಡನು. ಅದರಮೇಲೆ ರಾಜನು ಅತ್ಯಾಗ್ರಹವುಳ್ಳವನಾಗಿ ತನ್ನ ಪತ್ನಿಯು ದುಶ್ಶೀಲೆಯು ಎಂದೆಣಿಸಿ, ಅಂತಹ ದುಷ್ಟಳು ಜೀವಿಸಿ ಇರುವುದು ಬಹು ಅವಮಾನಕರವಾದುದು ಎಂದು ಭಾವಿಸಿ, ರಜಪೂತಕುಲಕ್ಕೆ ಕಳಂಕವನ್ನುಂಟು ಮಾಡಿದ ಆಕೆಯನ್ನು ತಕ್ಷಣವೆ ಕೊಲ್ಲುವಂತೆ ಆಜ್ಞಾಪಿಸಿದನು. ಆದರೆ ಮಿರಾಬಾಯಿಯನ್ನು ಕೊಲ್ಲುವಂತಹ ಘೋರಕಾರ್ಯವನ್ನು ಮಾಡಲು ಯಾರೂ ಒಪ್ಪಿಕೊಳ್ಳಲಿಲ್ಲ, ಆದುದರಿಂದ 'ಆತ್ಮಹತ್ಯವನ್ನು ಮಾಡಿಕೊಳ್ಳಬೇಕು,' ಎಂದು ಮಿರಾಬಾಯಿಗೆ ಒಂದು ಕಾಗದ ಬರೆದು, ಅದರ ಮೇಲೆ ರಾಣಾ ತನ್ನ ಕೈಮುದ್ರೆಯನ್ನು ಹಾಕಿ, ಆಕೆಗೆ ಕಳುಹಿಸಿದನು. ಆ ಲೇಖನವನ್ನು ಒಬ್ಬ ಮಂತ್ರಿಯು, ಮಿರಾಬಾಯಿಯು ದೇವಮಂದಿರದಿಂದ ತನ್ನ ಮಂದಿರಕ್ಕೆ ಬರುತಲಿದ್ದ ಸಮಯದಲ್ಲಿ ಆಕೆಗೆ ಕೊಟ್ಟನು. ಆಕೆಯು ಅದನ್ನು ಓದಿ ಭೀತಿಹೊಂದದೆ ಅಮಾತ್ಯನನ್ನು ಕುರಿತು, 'ಒಂದು ಸಲ ನನ್ನ ಪತಿಯ ದರ್ಶನವು ದೊರೆಯುವುದೇ,' ಎಂದು ಕೇಳಿದಳು. ಮಿರಾಬಾಯಿಯ ಮುಖವನ್ನು ನೋಡುವುದಿಲ್ಲ ಎಂದು ರಾಣಾ ಪ್ರತಿಜ್ಞೆಯನ್ನು ಮಾಡಿದುದರಿಂದ, ರಾಜದರ್ಶನವು ದೊರೆಯಲಾರದು ಎಂದು ಅತನು ನುಡಿದನು. ಅದರ ಮೇಲೆ ಆಕೆಯು, 'ನೀನು ಹೋಗಿ ನಿಮ್ಮ ಪತ್ನಿಯು

ನಿಮ್ಮಾಜ್ಞೆಯನ್ನು ಶಿರಸಾವಹಿಸಿದಳು ಎಂದು ತಿಳಿಸು.' ಎಂದಳು. ಈ ವಿಷಯವೆಲ್ಲವನ್ನೂ ಆಕೆಯು ತನ್ನ ಸಖಿಯರಿಗೆ ತಿಳಿಸದೆ ಎಂದಿನಂತೆ ಭಗವಂತನನ್ನು ಸ್ತುತಿಸುತ್ತ ಕಾಲವನ್ನು ಕಳೆದಳು! ರಾತ್ರಿ ಎಲ್ಲರೂ ನಿದ್ರಿಸಿದ ಅನಂತರ, ಮೀರಾಬಾಯಿಯು ರಾಜವೇಷವನ್ನು ಬಿಟ್ಟು, ಬಡಹೆಂಗಸರು ಧರಿಸುವಂತಹ ಬಟ್ಟೆಗಳನ್ನು ಉಟ್ಟುಕೊಂಡು, ಮನೆಯಿಂದ ಹೊರಟು, ಭಗವಂತನನ್ನು ಧ್ಯಾನಿಸುತ್ತ ನದೀತೀರಕ್ಕೆ ಹೋದಳು. ಆಕೆಯು ಅಲ್ಲಿ ನಿಂತು ಪತಿಯ ಆಜ್ಞೆಯನ್ನು ಸ್ಮರಿಸಿ ಪ್ರವಾಹದಲ್ಲಿ ಧುಮುಕಿದಳು. ಸ್ಮೃತಿಯು ತಪ್ಪಿಹೋದರೂ ಆಗಾಗ ತನ್ನ ಪ್ರಾಣವು ಇನ್ನೂ ಹೋಗಿಲ್ಲ ಎಂದು ಮಾತ್ರ ಆಕೆಗೆ ತಿಳಿಯುತಲಿತ್ತು. ಈ ಪ್ರಕಾರ ಅರ್ಧಸ್ಮೃತಿಯು ಇರುವ ಸಮಯದಲ್ಲಿ, ಆಕೆಗೆ ಒಂದು ದಿವ್ಯತೇಜವು ಕಂಡುಬಂದು, "ಎಲೌ ಮೀರಾ! ನೀನು ಪತಿಯ ಆಜ್ಞಾನುಸಾರವಾಗಿ ಆತ್ಮಹತ್ಯೆಯನ್ನು ಮಾಡಿಕೊಂಡು ಕೃತಾರ್ಥಳಾದೆ. ಆದರೆ ನಿನ್ನ ಆಯುಷ್ಯವು ಇನ್ನೂ ಪೂರ್ತಿಯಾಗಲಿಲ್ಲ. ನೀನು ಪ್ರಪಂಚದಲ್ಲಿ ಮಾಡಬೇಕಾದ ಕಾರ್ಯಗಳು ಇನ್ನೂ ಅನೇಕವಾಗಿವೆ. ಆದಕಾರಣ ನಿನ್ನ ಕರ್ತವ್ಯವನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಏಳು." ಎಂದಂತೆ ಕೇಳಿಸಿತು. ಬಳಿಕ ಮೀರಾಬಾಯಿಯು ಕಣ್ಣು ತೆರೆದು ನೋಡಲು ತಾನು ನದೀತೀರದಲ್ಲಿದ್ದಂತೆ ತಿಳಿಯ ಬಂದಿತು. ಆಗತಾನೇ ಸೂರ್ಯೋದಯವಾಗುತಲಿತ್ತು. ಆಕೆಯು ಎದ್ದು ನಾಲ್ಕುಕಡೆಯಲ್ಲಿಯೂ ನೋಡಿದಳು. ಅಲ್ಲಿ ಯಾರೂ ಕಾಣಬರಲಿಲ್ಲ. ಸ್ವಲ್ಪಹೊತ್ತು ಆಕೆಗೆ ಏನೂ ತೋರಲಿಲ್ಲ. ಆಕೆಯು ಅನಂತರ ಸ್ವಲ್ಪ ಚೇತರಿಸಿಕೊಂಡು ಈಶ್ವರನನ್ನು ಭಜಿಸುತ್ತ ಸ್ವಲ್ಪದೂರ ಹೋದಳು. ಅಲ್ಲಿ ಪಶುಗಳನ್ನು ಕಾಯುತಲಿದ್ದ ಕುರಬ ಹುಡುಗರನ್ನು ನೋಡಿ, 'ಹುಡುಗರಿರಾ! ಬೃಂದಾವನಕ್ಕೆ ಹೋಗುವ ದಾರಿಯನ್ನು ತೋರಿಸುವಿರಾ!' ಎಂದು ಕೇಳಿದಳು. ಅವರು ಆಕೆಗೆ ದಾರಿಯನ್ನು ತೋರಿಸಿ, ಆಕೆಯ ಭಕ್ತಿಯಿಂದಲೂ, ವಿನಯವಾಕ್ಯಿನಿಂದಲೂ ಆಕೆಯಲ್ಲಿ ಪೂಜ್ಯಭಾವವುಳ್ಳವರಾಗಿ, 'ಅಮ್ಮಾ, ನಿನಗೆ ಏನು ಬೇಕು?' ಎಂದು ಕೇಳಿದರು. ಅವರು ಆಕೆಯು ಕ್ಷುಧಾತುರಳಾಗಿರುವಳು ಎಂದು ಅರಿತು, ಆಕೆಗೆ ಕುಡಿಯಲು ಸ್ವಲ್ಪಹಾಲನ್ನು ತಂದುಕೊಟ್ಟರು. ಕೆಲಹುಡುಗರು ಆಕೆಗೆ ದಾರಿಯನ್ನು ತೋರಿಸುತ್ತ ಆಕೆಯೊಡನೆ ನಡೆದರು. ಮಾರ್ಗದಲ್ಲಿರುವ ಹಳ್ಳಿಯ ಜನರು ಆಕೆಯ ಭಕ್ತಿಗೆ ಆಶ್ಚರ್ಯಪಡುತ್ತ, ಆಕೆಗೆ ಶಿಷ್ಯರಾಗಿ ಆಕೆಯ ಹಿಂದೆ ಗುಂಪುಗುಂಪಾಗಿ ಹೊರಟರು. ಮೀರಾಬಾಯಿಯು ತನ್ನ ಹಿಂದೆ ಬರುವ ಜನರನ್ನು ಬರಬೇಡಿರೆನ್ನುತ, ಅವರು ಕೊಡುವ ವಸ್ತುಗಳನ್ನು ಸ್ವೀಕರಿಸದೆ, ಹಸಿವಾದಾಗ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳುತ್ತ, ಬೃಂದಾವನವು ಯಾವಾಗ ಬರುವುದೋ ಎಂದು ಚಿಂತೆಯೊಡನೆ ಹಗಲೂ ಇರಳೂ ಬಿಡದೆ ಪ್ರಯಾಣಮಾಡುತಲಿದ್ದಳು. ಆಕೆಯು ಬೇಡವೆಂದರೂ ಕೇಳದೆ ಆಕೆಯ ಹಿಂದೆ ಭಜನೆಮಾಡುತ್ತ ಬರುತಲಿರುವ ಜನರೊಡನೆ ಮೀರಾಬಾಯಿಯು ಬೃಂದಾ

ವನವನ್ನು ಪ್ರವೇಶಿಸಿದಳು. ಅಲ್ಲಿನ ಪ್ರಜೆಗಳು ಈಕೆಯನ್ನು ನೋಡಿ ಪ್ರಮಥ ಗಣ ಸಹಿತಳಾಗಿ ಸಾಕ್ಷಾತ್ ಪಾರ್ವತಿಯೇ ಇಲ್ಲಿಗೆ ಬಂದಳು ಎಂದು ಎಣಿಸಿದರಂತೆ! ಆಕೆಯು ಆ ಊರಿನಲ್ಲಿ ಜೀವಗೋಸಾಯಿ ಎಂಬ ಒಬ್ಬ ಪರಮ ಸಾಧುವು ಇರುವನು ಎಂದು ಕೇಳಿದಳು. ಜ್ಞಾನಿಯೂ, ಪರಮಭಕ್ತನೂ ಆದ ಆ ಗೋಸಾಯಿಯು ತನ್ನ ಶಿಷ್ಯರಿಗೆ, 'ನೀವು ಜ್ಞಾನಿಗಳಾಗಲೆಣಿಸಿದರೆ ಧನವನ್ನೂ, ಸ್ತ್ರೀಯನ್ನೂ ತ್ಯಜಿಸಬೇಕಲ್ಲದೆ, ಅವರನ್ನು ಕಣ್ಣಿನಿಂದಲೂ ನೋಡಬಾರದು,' ಎಂದು ಬೋಧಿಸುತಲಿದ್ದನು. ಆತನುಸಹ ಸ್ತ್ರೀಮುಖವನ್ನು ನೋಡುವುದಿಲ್ಲ ಎಂದು ವ್ರತವನ್ನು ಹಿಡಿದಿದ್ದನು. ಆತನ ವಿಷಯವೆಲ್ಲವನ್ನೂ ಕೇಳಿ ಮೀರಾ ಬಾಯಿಯು, 'ಬೃಂದಾವನದಲ್ಲಿ ಶ್ರೀಕೃಷ್ಣನೊಬ್ಬನೇ ಪುರುಷನೆಂತಲೂ, ಅನನ್ಯ ಭಕ್ತಿಯಿಂದ ಪತಿಯನ್ನು ಸೇವಿಸುವ ಪತ್ನಿಯಂತೆ, ಭಕ್ತರೆಲ್ಲರೂ ಆತನನ್ನು ಸೇವಿಸುವವರಾದುದರಿಂದ ಅಂತಹ ಭಕ್ತರಲ್ಲಿ ಪುರುಷರಾದವರೂ ಸ್ತ್ರೀಯರೇ ಎಂತಲೂ ನಾನು ಹೇಳುತ್ತೇನೆ. ಭಕ್ತರೆಲ್ಲರೂ ಸಮಾನರಾಗಿರುವಾಗ ನಾವು ಪುರುಷರೆಂದು ಗರ್ವಿಸುವುದು ಹಾಸ್ಯಾಸ್ಪದವು. ನಿಮಗೆ ಪುರುಷರು ಎಂಬ ಗರ್ವವು ಇದ್ದರೆ ನೀವು ಭಕ್ತರಾಗಲಾರಿರಿ. ನೀವು ಸತ್ಯವಾದ ಭಕ್ತರಾದ ಪಕ್ಷಕ್ಕೆ ಭಕ್ತರಾದ ಸ್ತ್ರೀಯರನ್ನು ನೋಡಲು ಅಭ್ಯಂತರವೇನು? ಎಂದು ಆ ಸಾಧುವಿಗೆ ಹೇಳಿಕಳುಹಿದಳು. ಉಪದೇಶ ಸದೃಶಗಳಾದ ಈ ಮಾತುಗಳನ್ನು ಕೇಳಿ ಜೀವಗೋಸಾಯಿಯು ಜ್ಞಾನವನ್ನು ತಂದುಕೊಂಡು, ತನ್ನ ವ್ರತವನ್ನು ಬಿಟ್ಟು ಮೀರಾಬಾಯಿಯ ಸಮಕ್ಷಮಕ್ಕೆ ಬಂದು ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಅಂದಿನಿಂದ ಈತನು ತನಗೆ ತಿಳಿಯದ ವಿಷಯಗಳನ್ನು ಮೀರಾಬಾಯಿಯನ್ನು ಕೇಳಿ ತಿಳಿದುಕೊಳ್ಳುತಲಿದ್ದನು. ಆಕೆಯು ತಾನು ಜೀವಗೋಸಾಯಿಯ ಶಿಷ್ಯಳು ಎಂದು ಹೇಳಿಕೊಳ್ಳುತಲಿದ್ದರೂ, ಜನರು ಮಾತ್ರ ಜೀವಗೋಸಾಯಿಯೇ ಮೀರಾ ಬಾಯಿಯ ಶಿಷ್ಯನು ಎನ್ನುತಲಿದ್ದರು. ಮೀರಾಬಾಯಿಯು ಬೃಂದಾವನದಲ್ಲಿ ಶ್ರೀಕೃಷ್ಣಾಲಯದಲ್ಲಿಯೇ ವಾಸಮಾಡುತ್ತ, ದೇವರ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿ ಪಾಡುತಲಿದ್ದಳು. ಭಕ್ತಿರಸ ಪೂರ್ಣವಾದ ಆ ಕೀರ್ತನೆಗಳನ್ನು ಕೇಳುವುದಕ್ಕಾಗಿ ದೇಶದೇಶಗಳಿಂದ ಜನರು ಯಾತ್ರೆಗೆ ಬರುವಂತೆ ಬರುತಲಿದ್ದರು. ಹೀಗೆ ಕೆಲವುಕಾಲ ಕಳೆಯಲು ಆಕೆಯ ಕೀರ್ತಿಯು ಹಿಂದೂಸ್ಥಾನದಲ್ಲೆಲ್ಲ ಹರಡಿಕೊಂಡಿತು. ಎಂದ ಮೇಲೆ ಉದಯಪುರದಲ್ಲಿಯೂ ಆಕೆಯ ಕೀರ್ತಿಯು ವ್ಯಾಪಿಸಿತು ಎಂದು ಬೇರೆಯಾಗಿ ಹೇಳಬೇಕೆ? ಕುಂಭರಾಣಾಸ್ವಗ್ರಾಮದಲ್ಲಿ ಎಲ್ಲಿಗೆ ಹೋದರೂ, ತನ್ನ ಭಾರ್ಯೆಯು ರಚಿಸಿದ ಪದ್ಯಗಳನ್ನೂ, ಕೀರ್ತನೆಗಳನ್ನೂ ಪ್ರತಿಯೊಬ್ಬ ಮನುಜನ ಬಾಯಿಯಿಂದಲೂ ಕೇಳುತಲಿದ್ದನು. ಆ ಬಾಲವೃದ್ಧರೂ ಆಕೆಯನ್ನು ದೇವರು ಎಂದೆಣಿಸಿ ಭಜಿಸುತ್ತಲಿದ್ದರು. ಮತ್ತು ನಿರ್ದೋಷಿಯಾದ ಪತ್ನಿಯನ್ನು ಗೃಹದಿಂದ ಹೊರಡಿಸಿದನು ಎಂದು ರಾಣಾ

ನನ್ನು ಎಲ್ಲರೂ ನಿಂದಿಸುತಲಿದ್ದರು. ಇದೆಲ್ಲವನ್ನೂ ಕೇಳಿದ ರಾಣಾವಿಗೆ ಜಗ ದ್ವಂದ್ಯಳಾದ ಪತ್ನಿಯಲ್ಲಿ ತಾನು ಮಹಾಪರಾಧವನ್ನು ಮಾಡಿದೆನು ಎಂದು ತೋರಿತು. ಆಗ ಆತನು ಸಾಮಾನ್ಯಯಾತ್ರಿಕನಂತೆ ಬೃಂದಾವನಕ್ಕೆ ಹೋಗಿ, ಮೀರಾಬಾಯಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ನನಗೆ ಒಂದು ವರ ವನ್ನು ಕೊಡು ಎಂದು ಕೇಳಿದನು. ಮೀರಾಬಾಯಿಯು ವೇಷಾಂತರದಲ್ಲಿದ್ದ ಪತಿಯನ್ನು ಗುರುತಿಸಲಾರದೆ, 'ನಿನಗೆ ಬೇಕಾದವಸ್ತುಗಳನ್ನು ಧನವಂತರು ಕೊಡಬಲ್ಲರು. ನನ್ನಂತಹ ಬಡವಳನ್ನು ಆಶ್ರಯಿಸಿದರೆ ಫಲವೇನು?' ಎಂದು ಉತ್ತರವನ್ನು ಕೊಟ್ಟಳು. ಅದಕ್ಕೆ ರಾಜನು, 'ಯಾಚಕನು ಸಾಮರ್ಥ್ಯವುಳ್ಳ ಯಜಮಾನನನ್ನು ವಿನಾ ಇತರರನ್ನು ಯಾಚಿಸಲಾರನು' ಎಂದನು. ಅನಂತರ ಮೀರಾಬಾಯಿಯು, 'ನಿನಗೆ ಏನು ಬೇಕು' ಎಂದು ಪ್ರಶ್ನೆಮಾಡಲು, 'ನನ್ನನ್ನು ಕ್ಷಮಿಸು' ಎಂದು ನುಡಿದು, ರಾಣಾ ತನ್ನ ನಿಜಸ್ವರೂಪವನ್ನು ತೋರಿದನು. ಮೀರಾಬಾಯಿಯು ಅತ್ಯಾನಂದದಿಂದ ಮೂರ್ಛಿತಳಾದಳು. ಸ್ವಲ್ಪಹೊತ್ತಿಗೆ ಜ್ಞಾನವು ಉಂಟಾಗಲು ಆಕೆಯು ಪತಿಯ ಪಾದಗಳಿಗೆ ನಮಸ್ಕರಿಸಿ, 'ಸ್ವಾಮಿ! ನಿಮಗೆ ಇಷ್ಟು ದಿವಸಗಳ ಮೇಲಾದರೂ ದಾಸಿಯು ಜ್ಞಾಪಕಕ್ಕೆ ಬಂದಳೇ. ಇದರಿಂದ ಇಂದಿಗೆ ನಾನು ಧನ್ಯಳಾದೆನು.' ಎಂದು ಗದ್ಗದ ಕಂಠದೊಡನೆ ನುಡಿದಳು. ರಾಣಾಮೀರಾಬಾಯಿಯನ್ನು ಸ್ವರಾಜ್ಯಕ್ಕೆ ಕರೆದುಕೊಂಡು ಹೋದನು. ಅಂದಿನಿಂದ ಆ ದಂಪತಿಗಳು ಸೌಖ್ಯವಾಗಿದ್ದರು. ಮೀರಾ ಬಾಯಿಯು ಆರು ತಿಂಗಳು ಬೃಂದಾವನದಲ್ಲಿಯೂ, ಆರು ತಿಂಗಳು ಉದಯ ಪುರದಲ್ಲಿಯೂ ಇರುತಲಿದ್ದಳು. ಪರಮಭಕ್ತಳಾದ ಈ ಮೀರಾಬಾಯಿಯು ಕೆಲವು ದಿವಸಗಳನ್ನು ದೈವಭಕ್ತಿಯಲ್ಲಿಯೂ, ಕೆಲವು ದಿವಸಗಳನ್ನು ಪತಿಭಕ್ತಿ ಯಲ್ಲಿಯೂ ಕಳೆದು, ಕಡೆಗೆ ಪರಮಪದವನ್ನು ಪಡೆದಳು.

ರಾಣಾಸಂಯುಕ್ತೆ.

೧೨ ನೆಯ ಶತಾಬ್ದದಲ್ಲಿ ರಾಠೋಡ್‌ವಂಶೀಕನಾದ ಜಯಚಂದ್ರನು ಕನೌಜ್ (ಕನ್ಯಾಕುಬ್ಜ) ರಾಜ್ಯವನ್ನೂ, ಚವ್ವಾಣ ವಂಶೋದ್ಧಾರಕನಾದ ಪೃಥಿವೀರಾಜನು ಡಿಲ್ಲಿ ರಾಜ್ಯವನ್ನೂ ಪಾಲಿಸುತಲಿದ್ದರು. ಈ ಅಸಮಾನ ಪರಾಕ್ರಮಶಾಲಿಗಳಿಬ್ಬರಲ್ಲಿ ಜಯಚಂದ್ರನು ಚರಿತ್ರನಾಯಿಕೆಯ ತಂದೆಯು; ಪೃಥಿವೀರಾಜನು ಪತಿಯು, ಈಕೆಯಿಂದ ಆ ವಂಶಗಳು ಎರಡೂ ಪವಿತ್ರವಾದುವು.

ಜಯಚಂದ್ರನಿಗೆ ಸಂಯುಕ್ತೆಯು ಒಬ್ಬಳೇ ಮಗಳು. ಅದರಿಂದ ಆತನು ಮಗಳನ್ನು ಬಹು ಮುದ್ದಿನಿಂದ ಸಲಹುತಲಿದ್ದನು. ಸಂಯುಕ್ತೆಯು ಸತ್ಸ್ವಭಾವ ವುಳ್ಳವಳಾದುದರಿಂದ ಬೆಳೆದ ಹಾಗೆಲ್ಲ ಸುಗುಣಗಳನ್ನೂ, ಸದ್ವಿದ್ಯೆಯನ್ನೂ ಕಲಿತು ವಿಖ್ಯಾತಳಾದಳು. ಆಕೆಯ ಗುಣರೂಪಗಳನ್ನು ನೋಡಿದವರು ತಮ್ಮ ಜನ್ಮವು ಸಾರ್ಥಕವಾಯಿತು ಎಂದು ತಿಳಿಯುತಲಿದ್ದರು. ಹೀಗೆ ಕೆಲಕಾಲ ಕಳೆಯಲು ಸಂಯುಕ್ತೆಯು ಯೌವನವನ್ನು ಧರಿಸಿದಳು.

ಜಯಚಂದ್ರನು ವಿವಾಹಯೋಗ್ಯೆಯಾದ ತನ್ನ ತನಯೆಗೆ ತಕ್ಕ ವರನು ಎಲ್ಲಿ ದೊರೆಯವನೋ ಎಂದು ಚಿಂತಿಸುತಲಿದ್ದನು. ಸಂಯುಕ್ತೆಯ ರೂಪ ಲಾವಣ್ಯಗಳು ದೇಶದೇಶದಲ್ಲಿಯೂ ಹರಡಿಕೊಂಡುದುದರಿಂದ ಅನೇಕ ರಾಜಪುತ್ರರು ಆಕೆಯನ್ನು ತಮಗೆ ಕೊಡಬೇಕು ಎಂದು ಹೇಳಿ ಕಳುಹುತಲಿದ್ದರು. ಡಿಲ್ಲೀಶ್ವರ ನಾದ ಪೃಥ್ವೀರಾಜನು ಆಕೆಯನ್ನು ವಿವಾಹಮಾಡಿಕೊಳ್ಳಲೆಣಿಸಿದ್ದನು. ಮತ್ತು ಸಂಯುಕ್ತೆಯೂ ಆತನ ಪರಾಕ್ರಮವನ್ನು ಕೇಳಿದ್ದುದರಿಂದಲೂ, ಆತನನ್ನು ನೋಡಿದ್ದುದರಿಂದಲೂ ಆತನನ್ನು ವಿನಾ ಮುತ್ತೈಯಾರನ್ನೂ ವರಿಸುವುದಿಲ್ಲ ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದಳು. ಜಯಚಂದ್ರನು ಸ್ವಯಂವರವನ್ನು ಮಾಡಿದರೆ ಪುತ್ರಿಗೆ ತಕ್ಕ ವರನು ದೊರೆಯುವನೋ ಇಲ್ಲವೋ ಎಂದು ಎಣಿಸಿದನು. ಆತನು ಪುತ್ರಿಯ ಮದುವೆಗೆ ಪೂರ್ವದಲ್ಲಿ ರಾಜಸೂಯವೆಂಬ ಯಾಗವನ್ನು ಮಾಡಲು ನಿಶ್ಚಯಿಸಿ ಸಕಲದಿಕ್ಕಿನ ರಾಜರಿಗೂ ವರ್ತಮಾನವನ್ನು ಕಳುಹಿಸಿದನು. ಜಯಚಂದ್ರನು ಪರಾಕ್ರಮಶಾಲಿಯಾದುದರಿಂದ ರಾಜರೆಲ್ಲರೂ ಕನೂಜ್ ನಗರಕ್ಕೆ ಬಂದರು. ಪೃಥ್ವೀರಾಜನು ಮಾತ್ರ ಜಯಚಂದ್ರನಲ್ಲಿರುವ ಪೂರ್ವವೈರವನ್ನು ಮನಸ್ಸಿನಲ್ಲಿಟ್ಟು ಯಾಗಕ್ಕೆ ಬರಲಿಲ್ಲ. ಅದರಿಂದ ಜಯಚಂದ್ರನು ಆಗ್ರಹಯುಕ್ತನಾಗಿ, ಪೃಥ್ವೀರಾಜನ ಪ್ರತಿಮೆಯೊಂದನ್ನು ಮಾಡಿಸಿ, ಆ ಪ್ರತಿಮೆಯನ್ನು ದ್ವಾರಪಾಲಕನ ಸ್ಥಳದಲ್ಲಿಟ್ಟು ತನ್ನ ಹಗೆಯನ್ನು ತೀರಿಸಿಕೊಂಡನು. ಯಜ್ಞವು ವಿಧಿಪ್ರಕಾರವಾಗಿ ನಡೆದ ಅನಂತರ ಸ್ವಯಂವರ ಮಹೋತ್ಸವವು ಪ್ರಾರಂಭವಾಯಿತು. ಆಗ ಅನೇಕ ದೇಶಾಧೀಶರಿಂದ ಕೂಡಿದ ಕನ್ಯಾಕುಬ್ಜನಗರವು ಅತಿರಮಣೀಯವಾಗಿ ಕಾಣಬರುತಲಿತ್ತು.

ರಾಜಾಜ್ಞೆಯಂತೆ ಮಂತ್ರಿಗಳು ಮಂಟಪವನ್ನು ಅಲಂಕರಿಸಿ, ರಾಜರೆಲ್ಲರನ್ನೂ ಅವರವರಿಗೆ ತಕ್ಕ ಸ್ಥಾನದಲ್ಲಿ ಕುಳ್ಳಿರಿಸಿದರು. ಅನಂತರ ಸಂಯುಕ್ತೆಯು ಅಲಂಕೃತಳಾಗಿ, ಹಸ್ತದಲ್ಲಿ ಪುಷ್ಪಹಾರವನ್ನು ಧರಿಸಿ, ಸಖೀಸಹಿತಳಾಗಿ ಮಂಟಪವನ್ನು ಪ್ರವೇಶಿಸಿದಳು. ರಾಜಕನ್ಯೆಯು ಸಭೆಯನ್ನು ಪ್ರವೇಶಿಸಿದೊಡನೆಯೆ ರಾಜಲೋಕದ ದೃಷ್ಟಿಯೆಲ್ಲ ಆಕೆಯ ಕಡೆಗೆ ತಿರುಗಿತು. ಪ್ರತಿಯೊಬ್ಬ ಭೂಪತಿಯೂ ಆಕೆಯು ತನ್ನನ್ನೇ ವರಿಸಬೇಕು ಎಂದು ಅಪೇಕ್ಷಿಸುತಲಿದ್ದನು.

ಸಂಯುಕ್ತೆಯು ಗಂಭೀರದೃಷ್ಟಿಯೊಡನೆ ರಾಜಸಮೂಹವಲ್ಲವನ್ನೂ ಚೆನ್ನಾಗಿ ನೋಡಿದಳು. ತನಗೆ ಇಷ್ಟನಾದ ಪೃಥಿವೀರಾಜನು ಅಲ್ಲಿಗೆ ಬರಲಿಲ್ಲವೆಂತಲೂ, ಆತನನ್ನು ಹೀಯಾಳಿಸುವುದಕ್ಕಾಗಿ ಆತನ ಪ್ರತಿಮೆಯನ್ನು ಮಾಡಿ ದ್ವಾರದಲ್ಲಿ ಇಟ್ಟಿರುವರೆಂತಲೂ ಆಕೆಯು ಪೂರ್ವದಲ್ಲೆ ತಿಳಿದಿದ್ದಳು. ಆದುದರಿಂದ ಆ ಬಾಲೆಯು ಕ್ಷಣಕಾಲ ಮಾತ್ರ ಯೋಚಿಸಿ, ದೃಢನಿಶ್ಚಯಳಾಗಿ ಮೆಲ್ಲನೆ ಡಿಲ್ಲೀಶ್ವರನ ಪ್ರತಿಮೆಯನ್ನು ಸಮೀಪಿಸಿ, ಆಮೂರ್ತಿಯ ಕಂಠದಲ್ಲಿ ಹಾರವನ್ನು ಹಾಕಿದಳು. ಅದನ್ನು ನೋಡಿ ಸಭೆಯಲ್ಲಿ ಬಹು ಗಲಭೆಯುಂಟಾಯಿತು. ಜಯಚಂದ್ರನು ಇಂತಹ ಅವಮಾನವನ್ನು ಸಹಿಸಲಾರದೆ, "ದುಷ್ಟಳಾದ ಇವಳನ್ನು ಕಾರಾಗೃಹದಲ್ಲಿಡಿ" ಎಂದು ಆಜ್ಞಾಪಿಸಿದನು. ಆಗ ರಾಜರೆಲ್ಲರೂ ನಿರಾಶರಾಗಿ ತಂತಮ್ಮ ರಾಜ್ಯಗಳಿಗೆ ಹೊರಟುಹೋದರು. ಇದೇ ಈ ದೇಶದಲ್ಲಿ ನಡೆದ ಕಡೆಯ ಸ್ವಯಂವರವು.

ಈ ವೃತ್ತಾಂತವೆಲ್ಲವನ್ನೂ ಕೇಳಿ ಪೃಥಿವೀರಾಜನು ಅತ್ಯಂತ ಸಂತುಷ್ಟನಾದನು. ಜಯಚಂದ್ರನು ತನಗೆ ಮಾಡಿದ ಅವಮಾನವೂ, ಸಂಯುಕ್ತೆಯು ತನ್ನಲ್ಲಿ ತೋರಿದ ಪ್ರೇಮವೂ ಸೇರಿ ತನ್ನನ್ನು ತ್ವರೆಗೊಳಿಸಲು, ಪೃಥಿವೀರಾಜನು ಜಯಚಂದ್ರನ ಮೇಲೆ ದಂಡಯಾತ್ರೆಗೆ ಹೊರಟು, ತನ್ನ ಶೂರರಾದ ಸೈನಿಕರೊಡನೆ ಕನ್ಯಾಕುಬ್ಜನಗರ ಸಮೀಪದಲ್ಲಿ ಶಿಬಿರವನ್ನು ಸ್ಥಾಪಿಸಿದನು. ಅಲ್ಲಿದ್ದ ಕಾಲದಲ್ಲಿಯೇ ಪೃಥಿವೀರಾಜನೂ, ಸಂಯುಕ್ತೆಯೂ ಗಾಂಧರ್ವವಿಧಾನದಿಂದ ವಿವಾಹವನ್ನು ಮಾಡಿಕೊಂಡರು. ಇವರ ವಿವಾಹ ವಿಷಯವು ಒಬ್ಬಿಬ್ಬರು ದಾಸಿಯರಿಗೆ ವಿನಹ ಮತ್ತೆಯಾರಿಗೂ ತಿಳಿಯದು. ಪೃಥಿವೀರಾಜನು ತನ್ನ ನಗರದ ಸಮೀಪದಲ್ಲಿ ಇಳಿದಿರುವನು ಎಂದು ಕೇಳಿ, ಜಯಚಂದ್ರನು ಕಹರಕಂಠೀರವ ಎಂಬ ಸೇನಾನಾಯಕನಿಗೆ ಮೂರುಸಾವಿರ ಸೈನ್ಯವನ್ನು ಕೊಟ್ಟು ಆವನನ್ನು ಶತ್ರುವಿನೊಡನೆ ಯುದ್ಧಮಾಡಲು ಕಳುಹಿಸಿದನು. ಉಭಯ ಸೈನ್ಯಗಳಿಗೂ ಸಂಗ್ರಾಮವು ಪ್ರಾರಂಭವಾಯಿತು. ಪೃಥಿವೀರಾಜನ ಸೈನ್ಯಾಧಿಪತಿಯಾದ ಆತತಾಯಿಗೂ, ಕಹರಕಂಠೀರವನಿಗೂ ದ್ವಂದ್ವಯುದ್ಧವು ಸಂಭವಿಸಿತು ಆ ಶೂರರಿಬ್ಬರೂ ಸಿಂಹನಾದಗಳನ್ನು ಮಾಡುತ್ತ ಒಬ್ಬರನ್ನೊಬ್ಬರು ಹೀಯಾಳಿಸುತ್ತ ಪರಸ್ಪರ ನೋಯಿಸಿಕೊಳ್ಳುತಲಿದ್ದರು. ಸ್ವಲ್ಪ ಹೊತ್ತಿನಲ್ಲಿಯೆ ಭಟರ, ಆನೆಗಳ, ಕುದುರೆಗಳ ಶರೀರಗಳಿಂದ ಸುರಿದ ರಕ್ತವು ಪ್ರವಾಹದಂತೆ ಹರಿಯುತಲಿತ್ತು. ಆ ಸಮಯದಲ್ಲಿ ಕಹರಕಂಠೀರವನಿಗೆ ವೀರಾವೇಶವೇರಲು ಆತನು ತನ್ನ ರಥದಿಂದ ಧುಮುಕಿ ಆತ ತಾಯಿಯ ಕಂಠವನ್ನು ಕತ್ತರಿಸಿ, ಪೃಥಿವೀರಾಜನನ್ನು ಸಂಹರಿಸಲು ಆತನನ್ನು ಸಮೀಪಿಸಿದನು. ಕಹರಕಂಠೀರವನ ಶೌರ್ಯಕ್ಕೆ ನಿಲ್ಲಲಾರದೆ ಪೃಥಿವೀರಾಜನ ಸೈನ್ಯವು ಹಿಮ್ಮೆಟ್ಟಿತು. ಅಂತಹ ಸಮಯದಲ್ಲಿ ಆಕಸ್ಮಿಕವಾಗಿ ಒಬ್ಬ ರಾಜಪುತ್ರನು ಅಲ್ಲಿಗೆ ಬಂದು ಪೃಥಿವೀರಾಜನ ಕಂಠಕ್ಕೆ

ಬೀಳುತಲಿದ್ದ ಕತ್ತಿಯನ್ನು ಎರಡು ತುಂಡುಮಾಡಿದನು. ಈ ಪರಾಕ್ರಮ ಶಾಲಿಯು ಯಾರೋಒಬ್ಬ ರಾಜಪುತ್ರನಾಗಿರಬಹುದು ಎಂದು ಪಾಠಕರು ಊಹಿಸಿರಬಹುದು. ಆ ರಾಜಪುತ್ರನು ಪುರುಷವೇಷಧಾರಿಣಿಯಾದ ಸಂಯುಕ್ತೆಯು! ಆಕೆಯು ತನ್ನ ಪತಿಯ ಬಳಿಗೆ ಹೋಗಬೇಕೆಂದು ಅತಿ ಪ್ರಯಾಸದಿಂದ ಕಾರಾಗೃಹವನ್ನು ಬಿಟ್ಟು ಯುಕ್ತಸಮಯದಲ್ಲಿ ರಣರಂಗವನ್ನು ಪ್ರವೇಶಿಸಿದಳು. ಆಕೆಯು ಯಾವಾಗಲೂ ಯುದ್ಧವನ್ನು ನೋಡಿದವಳಲ್ಲ. ಆದರೂ ಸಮಯೋಚಿತ ಬುದ್ಧಿಯುಳ್ಳವಳಾದುದರಿಂದ, ಧೈರ್ಯವನ್ನು ವಹಿಸಿ ಯುದ್ಧಮಾಡಿ ಪತಿಯ ಪ್ರಾಣವನ್ನು ಕಾಪಾಡಿದಳು.

ಸಂಯುಕ್ತೆಯು ಬಂದಮೇಲೆ ಪೃಥಿವೀರಾಜನ ಸೈನ್ಯವು ಮರಳಿ ಜಯಚಂದ್ರನ ಸೇನೆಯೊಡನೆ ಯುದ್ಧಮಾಡಿ, ಆ ಸೇನೆಯನ್ನು ಸೋಲಿಸಿತು. ಅನಂತರ ಪೃಥಿವೀರಾಜನು ಭಾರ್ಯಾಸಮೇತನಾಗಿ ಜಯಘೋಷದೊಡನೆ ಡಿಲ್ಲಿಯನ್ನು ಸೇರಿ, ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತ, ಪತ್ನಿಯೊಡನೆ ಸುಖವಾಗಿ ಕಾಲವನ್ನು ಕಳೆಯುತಲಿದ್ದನು.

ಪೃಥಿವೀರಾಜನು ತನ್ನ ಸೈನ್ಯವೆಲ್ಲವನ್ನೂ ಸೋಲಿಸಿದುದಲ್ಲದೆ ತನ್ನ ಪುತ್ರಿಯನ್ನು ತೆಗೆದುಕೊಂಡು ಹೋದುದರಿಂದ ಜಯಚಂದ್ರನು ಸಂತಪ್ತಹೃದಯನಾಗಿ ಹಗೆ ತೀರಿಸಿಕೊಳ್ಳಲು ಸಮಯವನ್ನು ನಿರೀಕ್ಷಿಸುತಲಿದ್ದನು. ಹೀಗೆ ಈ ದೇಶದ ಮುಖ್ಯರಾದ ಅರಸರಲ್ಲಿ ಪರಸ್ಪರ ದ್ವೇಷಗಳು ಉಂಟಾಗಿರುವಾಗ, ಷಹಬುದ್ದೀನ್ ಮಹಮ್ಮದ್ ಘೋರಿ ಎಂಬ ಮಹಮ್ಮದೀಯನು ಹಿಂದೂದೇಶದ ಮೇಲೆ ದಂಡೆತ್ತಿ ಬಂದು ದೇಶವೆಲ್ಲವನ್ನೂ ಹಾಳುಮಾಡಲಾರಂಭಿಸಿದನು. ದೇವಸ್ಥಾನಗಳನ್ನು ಹೊಡೆದು ನೆಲಸಮನಾಗಿ ಮಾಡುವುದೂ, ಪ್ರಜೆಗಳನ್ನು ಅನ್ಯಾಯವಾಗಿ ಕೊಲ್ಲುವುದೂ, ಸ್ತ್ರೀಯರ ಪಾತಿವ್ರತ್ಯವನ್ನು ಕೆಡಿಸಿ, ಅವರನ್ನು ತನ್ನ ದಾಸಿಯರನ್ನಾಗಿ ಮಾಡಿಕೊಳ್ಳುವುದೂ ಇವೇ ಮೊದಲಾದ ಕ್ರೂರಕಾರ್ಯಗಳನ್ನು ಈತನು ಮಾಡುತಲಿದ್ದನು. ಅವನು ಕಾಲಿಟ್ಟ ಸ್ಥಳವೆಲ್ಲ ನಾಶವಾಗುತಲಿತ್ತು. ಇಂತಹ ದುಷ್ಟನನ್ನು ಸೋಲಿಸಿ ಪತಿವ್ರತೆಯರ ಪಾತಿವ್ರತ್ಯವನ್ನೂ, ದೇವಮಂದಿರಗಳನ್ನೂ ಕಾಪಾಡಲೆಣಿಸಿ ಪೃಥಿವೀರಾಜನು ಘೋರಿಯೊಡನೆ ಯುದ್ಧಮಾಡಲು ಹೊರಟನು. ಆ ಸಮಯದಲ್ಲಿ ಜಯಚಂದ್ರನು ವಿನಹ ಮಿಕ್ಕರಾಜರೆಲ್ಲರೂ ಪೃಥಿವೀರಾಜನ ಸಹಾಯಾರ್ಥವಾಗಿ ಬಂದರು. ಕ್ರೋಧವೇ ಪ್ರಧಾನವಾದುದು ಎಂದು ಎಣಿಸಿದ ಜಯಚಂದ್ರನು ದೇಶಕ್ಷೇಮವನ್ನು ಬಯಸಿ ಪೃಥಿವೀರಾಜನಿಗೆ ಸಹಾಯಮಾಡದಿದ್ದರೂ, ಆಗ ಇನ್ನೂ ಹಿಂದೂದೇಶವು ಯವನರ ವಶಕ್ಕೆ ಸಿಕ್ಕುವಂತಹ ದುರದೃಷ್ಟವನ್ನು ಪಡೆದಿರಲಿಲ್ಲವಾದ ಕಾರಣ ಅವನು ಘೋರಿಗೆ ಸಹಾಯ ಮಾಡದೆ ತಟಸ್ಥನಾಗಿದ್ದನು.

ಪೃಥಿವೀರಾಜನು ದಿಲಾವಡೀ (ಸ್ಥಾಣೇಶ್ವರ) ಎಂಬ ಮರಳುಕಾಡಿನಲ್ಲಿ ಯವನರೊಡನೆ ಬಹು ಪರಾಕ್ರಮದಿಂದ ಯುದ್ಧಮಾಡಿ ಅವರನ್ನು ಸೋಲಿಸಿದನು. ಘೋರಿಯು ಪೃಥಿವೀರಾಜನ ಪರಾಕ್ರಮಕ್ಕೆ ನಿಲ್ಲಲಾರದೆ ಬಹುಕಷ್ಟದಿಂದ ತನ್ನ ದೇಶಕ್ಕೆ ಪಲಾಯನ ಮಾಡಿದನು. ಪೃಥಿವೀರಾಜನು ಜಯಭೇರಿಯೊಡನೆ ನಿಜರಾಜಧಾನಿಯನ್ನು ಪ್ರವೇಶಿಸಿದನು.

ಪೃಥಿವೀರಾಜನ ಜಯದಿಂದ ಜಯಚಂದ್ರನಿಗೆ ವಿಶೇಷ ವ್ಯಸನವುಂಟಾಯಿತು. ಆತನು ಪ್ರತಿದಿನವೂ ಪೃಥಿವೀರಾಜನ ಮರಣವನ್ನೇ ಅಪೇಕ್ಷಿಸುತಲಿದ್ದನು. ಆದಕಾರಣ ಆತನು ಎಂತಹ ನೀಚಕಾರ್ಯವನ್ನಾದರೂ ಮಾಡಿ ಪೃಥಿವೀರಾಜನಿಗೆ ಹಾನಿಯನ್ನು ಉಂಟುಮಾಡಬೇಕೆಂದು ನಿಶ್ಚಯಿಸಿಕೊಂಡನು. ಅದಕ್ಕಾಗಿ ಆತನು ಓಡಿಹೋಗುತಲಿರುವ ಘೋರಿಯ ಬಳಿಗೆ ತನ್ನ ದೂತನನ್ನು ಕಳುಹಿಸಿ ಆಯವನನನ್ನು ಪುನಃ ನಮ್ಮ ಭರತಖಂಡಕ್ಕೆ ಕರೆತಂದನು. ಅವನು ಬಂದ ನಂತರ, 'ನೀನು ಪುನಃ ಪೃಥಿವೀರಾಜನೊಡನೆ ಸಂಗ್ರಾಮವನ್ನು ಮಾಡು; ನಾನು ನಿನಗೆ ಸಹಾಯಮಾಡುವೆನಲ್ಲದೆ, ನಿನ್ನ ಸಹಾಯಾರ್ಥವಾಗಿ ಇನ್ನೂ ಅನೇಕ ರಾಜರನ್ನು ಕರೆತರುವೆನು.' ಎಂದು ಉತ್ಸಾಹಗೊಳಿಸುವ ವಾಕ್ಯಗಳನ್ನು ಹೇಳಿಕಳುಹಿದನು.

ಜಯಚಂದ್ರನ ಸಹಾಯವನ್ನು ಪಡೆದು, ಘೋರಿಯು ಬಹುಧೈರ್ಯದೊಡನೆ ಡಿಲ್ಲೀನಗರವನ್ನು ಮುತ್ತಿಗೆ ಹಾಕಲು ಹೊರಟನು. ಜಯಚಂದ್ರನು ತನ್ನ ಮಾತಿನಂತೆ ಅನೇಕ ಭೂಪತಿಗಳನ್ನು ತನ್ನೊಡನೆ ಕರೆದುಕೊಂಡು ಬಂದು ಆ ಮ್ಲೇಚ್ಛನಿಗೆ ಸಹಾಯಕನಾದನು. ಮತ್ತು ಪೃಥಿವೀರಾಜನು ಈಸಲ ಸೋಲುವುದು ನಿಶ್ಚಯವೆಂದು ಎಣಿಸಿ ತನ್ನ ಮನಸ್ಸಿನಲ್ಲಿ ಬಹು ಸಂತೋಷಿಸುತಲಿದ್ದನು.

ಜಯಚಂದ್ರನು ಕಾಳಿಂದೀ ನದೀತೀರದಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದನು. ಒಂದುದಿವಸ ಶಿಬಿರದಲ್ಲಿ ಕುಳಿತು ಆನಂದದಿಂದ ಭವಿಷ್ಯತ್ಸ್ಥಿತಿಯನ್ನು ಆಲೋಚಿಸುತಲಿದ್ದನು. ಆ ಸಮಯದಲ್ಲಿ ಒಬ್ಬ ಸೇವಕನು, 'ತಮ್ಮ ಶತ್ರುಗಳ ಸೈನ್ಯದಿಂದ ಒಬ್ಬ ರಾಯಬಾರಿಯು ಬಂದು, ತಮ್ಮೊಡನೆ ಮಾತನಾಡಲು ಅಪೇಕ್ಷಿಸುತಲಿದಾನೆ. ಅಪ್ಪಣೆಯಾದರೆ ಕರೆತರುವೆನು, ಎಂದನು. ಅದಕ್ಕೆ ಜಯಚಂದ್ರನು ಅವನನ್ನು ಒಳಕ್ಕೆ ಕಳುಹಿಸು, ನೀನು ಹೊರಗೇ ಕಾದಿರು,' ಎಂದು ನುಡಿದು ತಾನು ಖಡ್ಗವನ್ನು ಕೈಯಲ್ಲಿ ಹಿಡಿದು ಕುಳಿತುಕೊಂಡನು. ಸ್ವಲ್ಪ ಹೊತ್ತಿಗೆ ಒಬ್ಬ ಯುವಕನು ಬಂದು, ಜಯಚಂದ್ರನ ಪಾದಗಳಿಗೆ ನಮಸ್ಕಾರವನ್ನು ಮಾಡಿದನು. ಆ ಯುವಕನು ಪುರುಷನಲ್ಲ. ಸಂಯುಕ್ತೆಯೇ ಪುರುಷವೇಷದಿಂದ ಬಂದಿದ್ದಳು. ಜಯಚಂದ್ರನು ಮಗಳನ್ನು ಗುರ್ತಿಸಿ, 'ನಿನಗೆ ಏನು

ಬೇಕು.' ಎಂದು ಕೇಳಿದನು. ಅದಕ್ಕೆ ಸಂಯುಕ್ತೆಯು, 'ತಂದೆಯೇ ತಮ್ಮ ಅನುಜ್ಞೆಯನ್ನು ಹೊಂದಿ ನಮ್ಮ ಭರತಖಂಡಕ್ಕೆ ಪರಮಶತ್ರುವಾದ ಘೋರಿಯನ್ನು ಶಿಕ್ಷಿಸುವುದಕ್ಕಾಗಿ ಬಂದೆನು. ಈ ಸಮಯದಲ್ಲಿ ದೊಡ್ಡವರ ಆಶೀರ್ವಾದವನ್ನು ಪಡೆದರೆ ಜಯವು ಉಂಟಾಗುವುದು.' ಎಂದು ಹೇಳಿದಳು. ಜಯಚಂದ್ರನು ಮಗಳ ಮಾತುಗಳಿಗೆ ಸ್ವಲ್ಪಹೊತ್ತು ಸುಮ್ಮನಿದ್ದು, ಆಮೇಲೆ, 'ಎಲೈ ಸ್ವೇಚ್ಛಾಚಾರಿಣೀ! ಮುಂದೆ ನಡೆಯುವ ಪ್ರಜಾಕ್ಷಯಕ್ಕೆ ನೀನೇ ಮೂಲಕಾರಣವಲ್ಲವೇ? ನೀನು ನನ್ನಲ್ಲಿಗೆ ಬಂದು ನನ್ನ ಕೋಪವನ್ನು ಹೆಚ್ಚುಮಾಡಿದೆಯಲ್ಲದೆ ಮತ್ತೇನೂ ಲಾಭವಿಲ್ಲ.' ಎಂದು ಕೋಪದೊಡನೆ ನುಡಿದನು. ಅನಂತರ ಸಂಯುಕ್ತೆಯು ಬಹು ವಿನಯದೊಡನೆ, 'ಎಲೈ ತಂದೆಯೇ! ನೀನು ನಿನ್ನ ದೃಷ್ಟಿಯನ್ನು ಒಂದು ಸಲ ಮಾತೃ ಭೂಮಿಯಕಡೆಗೆ ತಿರಿಗಿಸಿ ನೋಡು; ನಿರಾಶ್ರಿತರಾದ ಮಾನವತಿಯರ ಮಾನವನ್ನು ಕಾಪಾಡುವನಾಗು; ನಾವು ಅತಿಭಕ್ತಿಯಿಂದ ಪೂಜಿಸುವ ದೇವವಿಗ್ರಹಗಳ ನಾಶಕ್ಕೆ ಸಹಾಯಕನಾಗಬೇಡ; ಸ್ವಾತಂತ್ರ್ಯವನ್ನು ಕಳೆದುಕೊಂಡ ಅನಂತರ ನಾವು ಬಹು ದುಃಖಕ್ಕೆ ಒಳಗಾಗಬೇಕಾಗುವುದು,' ಎಂದಳು. ಜಯಚಂದ್ರನು ರೋಷಾರುಣಲೋಚನನಾಗಿ, "ಬಾಯಿಮುಚ್ಚಿಕೊಂಡು ಈ ಸ್ಥಳವನ್ನು ಬಿಟ್ಟು ಹೊರಡು; ನಿನ್ನಂತಹ ದುಷ್ಟಳೊಡನೆ ನಾನು ಮಾತನಾಡಲಾರೆನು." ಎಂದು ತಿರಸ್ಕಾರ ಮಾಡಿದನು. ಆಗ ಸಂಯುಕ್ತೆಯು, 'ಹಾಗಾದರೆ ನನ್ನ ಪ್ರಾರ್ಥನೆಯೆಲ್ಲವೂ ನಿಷ್ಪ್ರಯೋಜನವಾಯಿತೆ?' ಎಂದು ಕೋಪದಿಂದ ತಂದೆಯೊಡನೆ, 'ಪೂರ್ವಿಕರು ಸಂಪಾದಿಸಿದ ಸತ್ಕೀರ್ತಿಯನ್ನು ನಾಶಮಾಡಿ, ನಿನ್ನ ದುಷ್ಕೀರ್ತಿಯನ್ನು ಶಾಶ್ವತಮಾಡುವುದಕ್ಕೆ ಪೂರ್ವವೇ ನೀನು ನನ್ನನ್ನು ಏಕೆ ಕೊಲ್ಲಲಿಲ್ಲ? ನೀನು ತಂದೆ ಎಂದು ನಾನು ಇಷ್ಟು ಬಗೆಯಲ್ಲಿ ಹೇಳಿದೆನು. ಆದರೆ ನಿನ್ನ ಮಾತುಗಳನ್ನು ಕೇಳಿದಮೇಲೆ ಸ್ವದೇಶದ್ರೋಹಿಯ ಮಗಳು ಎಂದು ಎನ್ನಿಸಿಕೊಳ್ಳುವುದಕ್ಕಿಂತಲೂ ಸಾಯುವುದೇ ಮೇಲು ಎಂದು ತೋರುತ್ತದೆ.' ಎಂದಳು. ಈ ಪ್ರಕಾರವಾಗಿ ಹೆಣ್ಣುಸಿಂಹದಂತೆ ಮಾತನಾಡುವ ತನಯೆಗೆ ಪ್ರತ್ಯುತ್ತರವನ್ನೀಯಲಾರದೆ, ಜಯಚಂದ್ರನು ಆ ಸ್ಥಳವನ್ನು ಬಿಟ್ಟು ಹೊರಕ್ಕೆ ಹೋಗಿ ತನ್ನ ಕುದುರೆಯನ್ನು ಹತ್ತಿ, ಮ್ಲೇಚ್ಛಸೈನ್ಯದೊಳಕ್ಕೆ ಹೋದನು. ಇಲ್ಲಿ ಸಂಯುಕ್ತೆಯು ತಂದೆಯು ಬರುವನು ಎಂದು ಸ್ವಲ್ಪಹೊತ್ತು ಕಾದಿದ್ದು, ಅನಂತರ ಆತನು ಈಗಲೆ ಬರಲಾರನು ಎಂದು ನಿರಾಶಳಾಗಿ ಪುನಃ ತನ್ನ ಪತಿಯ ಬಳಿಗೆ ಹೋದಳು. ಈ ತಡವೆ ತಮ್ಮ ಸೈನ್ಯವು ಸ್ವಲ್ಪವಾಗಿಯೂ, ಶತ್ರುಗಳ ಸೈನ್ಯವು ಅಧಿಕವಾಗಿಯೂ ಇರುವುದರಿಂದ ತಮಗೆ ಅಪಜಯವು ಉಂಟಾಗುವುದು ಎಂದು ಎಣಿಸಿ ಪೃಥಿವೀರಾಜನು ಈ ವಿಷಯವನ್ನು ಸಂಯುಕ್ತೆಗೆ ತಿಳಿಸಿದನು. ಆ ದಂಪತಿಗಳು ಆ ಸಮಯದಲ್ಲಿ ಅಧೈರ್ಯವನ್ನು ಪಡೆಯದೆ ಸಮಯಾನುಗುಣವಾದ ನೀತಿಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತ ಉತ್ಸಾಹಯುತರಾಗಿದ್ದರು. ಅವರಿಬ್ಬರೂ

ಸ್ವಲ್ಪಹೊತ್ತು ಯೋಚಿಸಲು, ಸಂಯುಕ್ತೆಯು ಡಿಲ್ಲಿಗೆ ಹೋಗುವುದು ಯುಕ್ತವಾದ ಕಾರ್ಯವೆಂದು ತೋರಿತು. ಸಂಯುಕ್ತೆಯು ಪ್ರಯಾಣಸನ್ನದ್ಧಳಾಗಿ ಹೊರಡುವ ಸಮಯದಲ್ಲಿ ಪತಿಗೆ ನಮಸ್ಕರಿಸಿ, ಪ್ರಾಣೇಶ್ವರಾ! ತಾವು ಕ್ಷತ್ರಿಯರಾದುದರಿಂದ ತಮ್ಮ ಶಸ್ತ್ರಾಸ್ತ್ರಗಳನ್ನು ಕಾಪಾಡಿಕೊಂಡು ಯುದ್ಧಕ್ಕೆ ಸಿದ್ಧರಾಗಬೇಕು. ಕ್ಷತ್ರಿಯರು ತಮ್ಮ ದೇಶದ ಮತ್ತು ವಂಶದ ಕೀರ್ತಿಯನ್ನು ಕಾಪಾಡುವುದಕ್ಕಾಗಿ ಪ್ರಾಣವನ್ನು ತ್ಯಜಿಸಿದರೂ ಅದು ಮೃತಿ ಎನಿಸಲಾರದು. ಮನುಜನು ಜನ್ಮಿಸಿದುದಕ್ಕೆ ಸತ್ಕೃತ್ಯಗಳನ್ನು ಮಾಡಿ, ಸತ್ಕೀರ್ತಿಯನ್ನು ಪಡೆದು ಅಮರನಾಗಬೇಕು. ನಮಗೆ ಜಯವುಂಟಾದರೆ ನಾವು ಇಬ್ಬರೂ ಇಹಸೌಖ್ಯವನ್ನು ಅನುಭವಿಸುವೆವು. ಇಲ್ಲದಿದ್ದರೆ ನಾನು ತವ್ಮೊಡನೆ ಸ್ವರ್ಗ ಸುಖವನ್ನು ಅನುಭವಿಸಲು ಶೀಘ್ರವಾಗಿಯೇ ಬರುವೆನು." ಎಂದು ಧೀರೋಕ್ತಿಗಳನ್ನು ನುಡಿದಳು. ಆಗ ಪೃಥಿವೀರಾಜನು ಪತ್ನಿಯನ್ನಾಲಂಗಿಸಿಕೊಂಡು, "ಸತೀಮಣೀ! ನನ್ನ ಶರೀರದಲ್ಲಿ ಪ್ರಾಣವು ಇರುವವರೆಗೂ ನಾನು ಶತ್ರುವಿಗೆ ಬೆನ್ನುತೋರುವುದಿಲ್ಲವೆಂದು ನಂಬು. ನನ್ನ ಸೈನಿಕರು ಕೀರ್ತಿಯನ್ನು ಅಪೇಕ್ಷಿಸುವವರಾದ್ದರಿಂದ ಅವರು ಪರಾಜಯವನ್ನು ಹೊಂದಿ ತಮ್ಮ ಮುಖವನ್ನು ಅನ್ಯರಿಗೆ ತೋರಿಸಲಾರರೆಂದು ನಾನು ನಂಬಿದೇನೆ." ಎಂದು ಹೇಳಿದನು. ಅನಂತರ ಸಂಯುಕ್ತೆಯು, "ಸ್ವಾಮಿಾ! ಡಿಲ್ಲೀ ನಗರದ ಸ್ತ್ರೀಯರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅಸಮರ್ಥರಾದುದರಿಂದ, ಈಗ ನಾನು ಅಲ್ಲಿಗೆ ಹೋಗಿ ಅವರಿಗೆ ಧೈರ್ಯವನ್ನು ಹೇಳುವೆನು. ನಾನು ಇಲ್ಲಿದ್ದರೆ ಅಧೈರ್ಯದಿಂದ ಅವರೆಲ್ಲರಿಗೂ ದಿಕ್ಕುತೋರದು. ಯಾವವಿಷಯವು ಹೇಗಿದ್ದರೂ ಆ ಯವನನು ನಿಮ್ಮನ್ನು ಗೆದ್ದು ಡಿಲ್ಲಿಗೆ ಬಂದರೆ, ಅವನಿಗೆ ರಾಜಪುತ್ರರಮಣಿಯು ಒಬ್ಬಳಾದರೂ ಜೀವಸಹಿತ ದೊರೆಯುವುದು ದುರ್ಲಭ." ಎಂದು ಡಿಲ್ಲಿಗೆ ಹೋದಳು. ಅಲ್ಲಿ ಆಕೆಯು ಪತಿಗೆ ವಿಜಯವು ಉಂಟಾಗಬೇಕೆಂದು ಬಹು ನಿಯಮದಿಂದ ಈಶ್ವರನನ್ನು ಪ್ರಾರ್ಥಿಸುತಲಿದ್ದಳು. ಆಕೆಯ ಉಪದೇಶವನ್ನು ಕೇಳಿ ಆ ನಗರದ ಸ್ತ್ರೀಯರೆಲ್ಲರೂ ಡಿಲ್ಲೀಶ್ವರನಿಗೆ ಜಯವುಂಟಾಗಬೇಕೆಂದು ಪ್ರಾರ್ಥಿಸುತಲಿದ್ದರು.

ಇಲ್ಲಿ ಉಭಯ ಸೈನ್ಯಗಳಿಗೂ ಯುದ್ಧವು ಪ್ರಾರಂಭವಾಯಿತು. ಎರಡು ಕಡೆಯ ವೀರರೂ ತಮ್ಮ ಶಕ್ತಿಯನ್ನು ಮೀರಿದ ಸಂಗ್ರಾಮಕೌಶಲವನ್ನು ತೋರಿಸುತ್ತ ಹೋರಾಡುತಲಿದ್ದರು. ಯುದ್ಧವು ಪ್ರಾರಂಭವಾದಒಡನೆಯೇ ಧೂಳಿನಿಂದ ಆಕಾಶವು ಮುಚ್ಚಿಹೋಯಿತು. ಸ್ವಲ್ಪ ಯುದ್ಧವು ನಡೆದ ಅನಂತರ ರಕ್ತ ಪ್ರವಾಹದಲ್ಲಿ ಧೂಳು ಅಡಗಿಹೋಯಿತು. ಶವಗಳು ರಾಶಿರಾಶಿಗಳಾಗಿ ಬಿದ್ದವು. ಕೊನೆಗೆ ಪೃಥಿವೀರಾಜನಿಗೆ ಅಪಜಯವುಂಟಾಯಿತು. ಆತನ ಭಟರಲ್ಲಿ ಒಬ್ಬರಾದರೂ ಹಿಮ್ಮೆಟ್ಟಿದಂತೆಯೂ, ಶತ್ರುಗಳಿಗೆ ಶರಣುಹೊಕ್ಕಂತೆಯೂ ಕಾಣಬರಲಿಲ್ಲ. ಕೆಲವರು ಪೃಥಿವೀರಾಜನು ಯುದ್ಧದಲ್ಲಿಯೇ ಮಡಿದನೆಂದು ಹೇಳು

ತ್ತಾರೆ. ಘೋರಿಯು ವಿಜಯವನ್ನು ಹೊಂದಿ, ಪೃಥಿವೀರಾಜನನ್ನು ಸೆರೆಹಿಡಿದು ಕಣ್ಣುಗಳನ್ನು ಕೀಳಿಸಿ, ಭಾರವಾದ ಲೋಹಶೃಂಖಲಗಳನ್ನು ಹಾಕಿ, ಕಾರಾಗೃಹದಲ್ಲಿ ಇಟ್ಟನೆಂತಲೂ ಈ ವಿಷಯವೆಲ್ಲವನ್ನೂ ಪೃಥಿವೀರಾಜನ ಮಂತ್ರಿಯೂ, ಆತನ ಚರಿತ್ರಲೇಖಕನೂ ಆದ ಚಾಂದಭಟ್ಟನೆಂಬವನು ಕೇಳಿ, ಘೋರಿಯ ಆಸ್ಥಾನಕ್ಕೆ ಹೋಗಿ ಅಲ್ಲಿ ಕೆಲವು ದಿವಸಗಳಿದ್ದು, ಆತನ ಕೃಪೆಯನ್ನು ಹೊಂದಿ ಆತನ ಅನುಜ್ಞೆಯಂತೆ ಕಾರಾಗೃಹಕ್ಕೆ ಹೋಗಿ ಪೃಥಿವೀರಾಜನನ್ನು ಮಾತನಾಡಿಸಲು ಕಣ್ಣುಗಳು ಇಲ್ಲದಿದ್ದರೂ ಮಾತನ್ನು ಗುರ್ತಿಸಿ ಪೃಥಿವೀರಾಜನು ಭಟ್ಟನನ್ನು ಆಲಿಂಗಿಸಿಕೊಂಡನೆಂತಲೂ ಬಳಿಕ ಅಲ್ಲಿ ಅವರಿಬ್ಬರೂ ಒಂದು ಯುಕ್ತಿಯನ್ನು ಆಲೋಚಿಸಿ ಅದರಂತೆ ಚಾಂದಭಟ್ಟನು ಘೋರಿಯೊಡನೆ ಮಾತನಾಡುತ್ತ ಪ್ರಸಂಗರೀತ್ಯಾ ಪೃಥಿವೀರಾಜನ ಬಾಣನೈಪುಣ್ಯವನ್ನು ಕುರಿತು ಹೇಳುತ್ತ, ಆತನಿಗೆ ಕಣ್ಣುಗಳು ಇಲ್ಲದಿದ್ದರೂ ಶಬ್ದವನ್ನು ಆಲಿಸಿ, ಶಬ್ದವು ಬಂದ ಸ್ಥಳಕ್ಕೆ ಸರಿಯಾಗಿ ಬಾಣವನ್ನು ಹಾಕಬಲ್ಲನೆಂದು ಹೇಳಿದನೆಂತಲೂ, ಘೋರಿಯು ಆ ವಿಚಿತ್ರವನ್ನು ನೋಡಲಪೇಕ್ಷಿಸಿ ಒಂದು ಸಭೆಯನ್ನು ಮಾಡಿ, ಆ ಸಭೆಗೆ ಪೃಥಿವೀರಾಜನನ್ನು ಕರೆಸಿ ಆತನ ಕೈಗೆ ಬಿಲ್ಲನ್ನೂ, ಅಂಬನ್ನೂ ಕೊಟ್ಟು, 'ಯಾವುದಾದರೂ ಒಂದು ಚಮತ್ಕಾರವನ್ನು ತೋರಿಸು,' ಎಂದು ಆಜ್ಞಾಪಿಸಿದ ಮಾತನ್ನಾಲಿಸಿ, ಪೃಥಿವೀರಾಜನು ಘೋರಿಯ ಮೇಲೆ ಬಾಣವನ್ನು ಹಾಕಲು ಆತನು ಸತ್ತನು ಎಂತಲೂ, ಆಮೇಲೆ ಪೃಥಿವೀರಾಜನೂ, ಚಾಂದಭಟ್ಟನೂ ಒಬ್ಬರನ್ನೊಬ್ಬರು ತಿವಿದುಕೊಂಡು ತುರುಷ್ಕರ ಕೈಗೆ ಸಿಕ್ಕದೆ ಆ ಸಭೆಯಲ್ಲಿಯೇ ಮೃತರಾದರೆಂತಲೂ ಕೆಲವರು ಹೇಳುತ್ತಾರೆ. ಈ ಶರಸಂಧಾನ ಮಹೋತ್ಸವವು ನಮ್ಮ ದೇಶದಲ್ಲಿ ನಡೆಯಿತೆಂದು ಕೆಲವರೂ, ಇನ್ನು ಕೆಲವರು ಮ್ಲೇಚ್ಛದೇಶದಲ್ಲಿ ನಡೆಯಿತೆಂತಲೂ ಹೇಳುತ್ತಾರೆ. ಇವುಗಳಲ್ಲಿ ಯಾವುದು ಸತ್ಯವೋ ಯಾವುದು ಅಸತ್ಯವೋ ತಿಳಿಯದು.

ಘೋರಿಗೆ ಜಯವು ಉಂಟಾಗಿ ಅವನು ಡಿಲ್ಲಿಗೆ ಬರುವನು ಎಂಬ ವರ್ತಮಾನವನ್ನು ಕೇಳಿದ ಕೂಡಲೆ ನಗರದಲ್ಲಿರುವ ಸಕಲ ಸ್ತ್ರೀಯರೊಡನೆ ಸಂಯುಕ್ತೆಯು ಅಗ್ನಿಪ್ರವೇಶಮಾಡಿದಳು. ಡಿಲ್ಲೀ ನಗರವನ್ನು ಪ್ರವೇಶಿಸಿ ನೋಡಲು ನಗರವೆಲ್ಲವೂ ಭಸ್ಮರಾಶಿಗಳಿಂದ ತುಂಬಿರುವುದನ್ನು ಕಂಡು ಆರ್ಯಾಂಗನೆಯರ ಸಾಹಸಕ್ಕೆ ಘೋರಿಯು ಅತ್ಯಂತಾಶ್ಚರ್ಯಾನ್ವಿತನಾದನು.

ಉಮಾಬಾಯಿದಾಭಾಡೇ.

——:o:——

ಈಕೆಯು ಮಹಾರಾಷ್ಟ್ರ ರಾಜ್ಯಸ್ಥಾಪಕನಾದ ಶಿವಾಜಿಮಹಾರಾಜನ ಮೊಮ್ಮಗನಾದ ಸಾಹುಮಹಾರಾಯನ ಕಾಲದಲ್ಲಿ ಇದ್ದಂತೆ ತಿಳಿಯಬರುತ್ತದೆ. ಉಮಾಬಾಯಿಯ ಮಾವನಾದ ಏಸುಪಾಟೀಲ್ ದಾಭಾಡೆಯು ಶಿವಾಜಿಯ ಬಳಯಲ್ಲಿ ಭೃತ್ಯನಾಗಿ ಇದ್ದನು. ಆತನ ಪುತ್ರರು ಇಬ್ಬರೂ, ಶಿವಾಜಿಯ ಎರಡನೆಯ ಮಗನಾದ ರಾಜಾರಾಮನ ಕಾಲದಲ್ಲಿ ಸ್ವಹಿತವನ್ನೆಣಿಸದೆ ಸ್ವಾಮಿಹಿತವನ್ನು ನಿರ್ವಹಿಸಿದುದರಿಂದ, ರಾಜನು ಮೆಚ್ಚಿ ಅಂದಿನಿಂದ ಅವರಿಗೆ ಸೇನಾಧಿಪತ್ಯವನ್ನು ಕೊಟ್ಟನು. ಏಸುಪಾಟೀಲನ ದೊಡ್ಡಮಗನ ಹೆಸರು ಖಂಡೋಜಿ. ಖಂಡೋಜಿಯ ಪತ್ನಿಯೇ ಚರಿತ್ರನಾಯಿಕೆಯು.

ಸಾಹುಮಹಾರಾಯನು ಡಿಲ್ಲಿಯಿಂದ ಪುನಃ ಸ್ವರಾಜ್ಯಕ್ಕೆ ಬಂದಮೇಲೆ, ಮಹಾರಾಷ್ಟ್ರರಾಜ್ಯವು ಸ್ವಲ್ಪ ಉನ್ನತಸ್ಥಿತಿಗೆ ಬರಲಾರಂಭಿಸಿತು. ಅಂತಹ ಕಾಲದಲ್ಲಿ ಖಂಡೋಜಿಯು ತನ್ನ ಶೌರ್ಯದಿಂದ ಅನೇಕ ಯುದ್ಧಗಳಲ್ಲಿ ವಿಜಯವನ್ನು ಹೊಂದಿ ಕೀರ್ತಿವಂತನಾದನು. ಬಾಲಾಜೀವಿಶ್ವನಾಥಪೇಷ್ವೆಯೂ, ಖಂಡೋಜೀದಾಭಾಡೆಯೂ ಪ್ರಾಣಸ್ನೇಹಿತರಾಗಿದ್ದರು. ಆದರೆ ಅವರು ಗತಿಸಿದ ಅನಂತರ, ಅವರ ಉದ್ಯೋಗವನ್ನು ಪಡೆದ, ಅವರ ಪುತ್ರರಾದ ಬಾಜೀರಾವು ಪೇಷ್ವೆಗೂ, ತ್ರಿಯಂಬಕರಾವ್ ಸೇನಾಪತಿಗೂ ತಂದೆಗಳ ಕಾಲದ ಸ್ನೇಹಭಾವವು ಅಳಿಸಿಹೋಗಿ ವೈರವು ಉಂಟಾಯಿತು! ಆಗ ಬಾಜೀರಾಯನು ಉತ್ತರ ಹಿಂದೂಸ್ಥಾನವನ್ನೂ, ತ್ರಿಯಂಬಕರಾಯನು ಘೂರ್ಜರ ದೇಶವನ್ನೂ ಅಪಹರಿಸಲು ಎಣಿಸಿದರು. ಆಗ ಒಬ್ಬರ ಮೇಲೆ ಒಬ್ಬರು ಅನೇಕಕಾರಣಗಳನ್ನು ಆರೋಪಿಸಿ ಯುದ್ಧಸನ್ನದ್ಧರಾದರು. ಆ ಯುದ್ಧದಲ್ಲಿ ದಾಭಾಡೆಯು ತನ್ನ ಅಸಮಾನ ಶೌರ್ಯವನ್ನು ತೋರುತ್ತ ಕಾದಾಡಿದನು. ಪೇಷ್ವೆಯು ಆತನನ್ನು ಗೆಲ್ಲುವುದು ದುಸ್ತರವೆಂದು ತಿಳಿದು ಬಹು ಅನ್ಯಾಯದಿಂದ ಆ ಶೌರ್ಯನಿಧಿಯನ್ನು ರಣರಂಗದಲ್ಲಿ ಕೊಂದನು. ಈ ವಿಷಯವನ್ನು ತ್ರಿಯಂಬಕರಾಯನ ತಮ್ಮನಾದ ಯಶವಂತರಾವ್ ದಾಭಾಡೆಯು ಕೇಳಿ ಬಹು ರೋಷಯುಕ್ತನಾಗಿ ಬಾಜೀರಾಯನನ್ನು ಸಂಹರಿಸಿದ ಹೊರತು ಅಣ್ಣನ ಉತ್ತರಕ್ರಿಯೆಗಳನ್ನು ಮಾಡುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದನು. ಅದಕ್ಕೆ ಉಮಾಬಾಯಿಯೂ ಸಮ್ಮತಿಸಿ ತಾನೂ ಯುದ್ಧಕ್ಕೆ ಬರುವೆನು ಎಂದು ಹೇಳಿದಳು. ಈ ವರ್ತಮಾನವನ್ನು ಕೇಳಿ

ಬಾಜೀರಾಯನು ಬಹು ದೈನ್ಯವನ್ನು ಹೊಂದಿ, ಸಾಹುಮಹಾರಾಯನನ್ನು ಮಧ್ಯಸ್ಥನಾಗಬೇಕು ಎಂದು ಕೇಳಿಕೊಂಡನು. ಆಗ ಆ ಮಹಾರಾಯನು ಆತನನ್ನು ತನ್ನೊಡನೆ ಕರೆದುಕೊಂಡು, ಉಮಾಬಾಯಿಯು ವಾಸವಾಗಿದ್ದ ತಳೇಗಾಮೆಂಬ ಗ್ರಾಮಕ್ಕೆ ಹೋಗಿ ಅಲ್ಲಿ ಆಕೆಯನ್ನು ಕಂಡು, ಬಾಜೀರಾಯನನ್ನು ಆಕೆಯ ಪಾದಗಳ ಮೇಲೆ ಹಾಕಿ, "ಖಂಡೇರಾವ್ ದಾಭಾಡೆಯವರೂ ಬಾಲಾಜೀವಿಶ್ವನಾಥರಾಯರೂ ಅಣ್ಣತಮ್ಮಂದಿರಂತೆ ಇದ್ದರು. ಆದಕಾರಣ ಈ ಬಾಜೀರಾಯನು ನಿನಗೆ ಪುತ್ರಸಮಾನನು. ಈತನ ಅಪರಾಧವನ್ನು ಕ್ಷಮಿಸು." ಎಂದು ಹೇಳಿದನು. ಉಮಾಬಾಯಿಯು ತನ್ನ ಮನಸ್ಸಿನಲ್ಲಿ ಇರುವ ವೈರವನ್ನು ತ್ಯಜಿಸಿ ಶರಣಾಗತನಿಗೆ ಅಭಯವನ್ನು ಕೊಟ್ಟಳು. ಅನಂತರ ಕೆಲವು ದಿನಗಳಿಗೆ ಸಾಹುಮಹಾರಾಯನು ಅಮದಾಬಾದು ಠಾಣೆಯನ್ನು ಗೆಲ್ಲುವಂತೆ ಉಮಾಬಾಯಿಯ ಪುತ್ರರಿಗೆ ಆಜ್ಞಾಪಿಸಿದನು. ಆಗ ಉಮಾಬಾಯಿಯು ತನ್ನ ಪುತ್ರರು ಅಲ್ಪವಯಸ್ಕರಾದುದರಿಂದ ಈ ಕಾರ್ಯವನ್ನು ನಿರ್ವಹಿಸಲಾರರು ಎಂದು ತಿಳಿದು ಅವರೊಡನೆ ತಾನೂ ಪ್ರಯಾಣಸನ್ನದ್ಧಳಾದಳು. ವೀರಪತ್ನಿಯೂ, ವೀರಮಾತೆಯೂ ಆದ ಉಮಾಬಾಯಿಗೆ ಯುದ್ಧವೆಂದರೆ ಮನೆಯ ಕೆಲಸದಂತೆ ಸಾಧಾರಣವಾಗಿತ್ತು. ಅಮದಾಬಾದು ಠಾಣೇದಾರನಾದ ಜೋರಾವರ್ಖಾಬಾಬಿಯು ಪುತ್ರಸಹಿತಳಾಗಿ ಉಮಾಬಾಯಿಯು ತನ್ನೊಡನೆ ಯುದ್ಧಕ್ಕೆ ಬರುವಳೆಂದು ಕೇಳಿ, ಆಕೆಗೆ "ನೀನು ಅನಾಥೆ; ಹೆಂಗಸು; ನಿನ್ನ ಪುತ್ರರು ಅಲ್ಪವಯಸ್ಕರು; ಆದಕಾರಣ ನೀನು ಸೈನ್ಯಸಹಿತಳಾಗಿ ಹಿಂತಿರುಗುವುದು ಉತ್ತಮ. ಇಲ್ಲದಿದ್ದರೆ ನೀವು ನಮ್ಮ ತುರುಷ್ಕರ ಪರಾಕ್ರಮಕ್ಕೆ ಸಿಕ್ಕಿಹತರಾಗುವುದು ನಿಶ್ಚಯ." ಎಂದು ಬರೆದು ಕಳುಹಿದನು. ಆ ಕಾಗದವನ್ನು ಓದಿ ಉಮಾಬಾಯಿಯ ಶೌರ್ಯಾಗ್ನಿಯು ಇನ್ನೂ ಹೆಚ್ಚಾಗಿ ಜ್ವಲಿಸಲಾರಂಭಿಸಿತು. ಆಗ ಆಕೆಯು ಆ ಮ್ಲೇಚ್ಛನ ಗರ್ವವನ್ನು ಭಂಗಮಾಡಿದಲ್ಲದೆ ಭೋಜನವನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿದಳು. ಅನಂತರ ತನ್ನ ಬಳಿಯಲ್ಲಿರುವ ಸರ್ದಾರರೆಲ್ಲರನ್ನೂ ಕರೆಯಿಸಿ ಒಂದು ಸಭೆಯನ್ನು ಮಾಡಿದಳು. ಅವರೆಲ್ಲರೂ ಬರುವುದಕ್ಕೆ ಪೂರ್ವವೇ, ಅರಿಸಿನ, ಕುಂಕುಮ, ಬಳೆಗಳು ಇವುಗಳನ್ನು ತರಿಸಿ, ಸಭಾಮಧ್ಯದಲ್ಲಿ ಇರಿಸಿದಳು. ಸಭಿಕರೆಲ್ಲರೂ ಬಂದನಂತರ ಆಕೆಯು ಜೋರಾವರ್ಖಾಬಾಬಿಯು ಬರೆದ ಕಾಗದವನ್ನು ಎಲ್ಲರಿಗೂ ಓದಿ ಹೇಳಿ, "ಇದರ ಮೇಲೆ ಅಮದಾಬಾದು ಠಾಣೆಯನ್ನು ಜಯಿಸಿ ಅಲ್ಲಿಯೇ ಊಟ ಮಾಡಬೇಕು ಎಂದು ನಿಶ್ಚಯಿಸಿದೆನು. ನೀವೆಲ್ಲರು ಇಂದಿನವರೆಗೂ ನಾನು ಕೊಟ್ಟ ಭೋಜನದಿಂದ ಜೀವಿಸುತಲಿರುವಿರಿ. ಆದಕಾರಣ ನನ್ನ ಪ್ರತಿಜ್ಞೆಯಲ್ಲಿ ಆದರಾಭಿಮಾನವುಳ್ಳವರಾದ ಪಕ್ಷದಲ್ಲಿ ಮರಣಕ್ಕೆ ಹೆದರದೆ ತಕ್ಷಣವೇ ಯುದ್ಧಕ್ಕೆ ಸಿದ್ಧರಾಗಿ ನನ್ನೊಡನೆ ಯುದ್ಧಭೂಮಿಗೆ ಪ್ರಯಾಣಮಾಡಿರಿ. ಪ್ರಾಣಭಯ

ವುಳ್ಳವರಾದರೆ ಇಲ್ಲಿರುವ ಅರಿಸಿನ, ಕುಂಕುಮ, ಬಳೆಗಳನ್ನು ಧರಿಸಿಕೊಂಡು ನಿಮ್ಮನಿಮ್ಮ ಮನೆಗೆ ಹೋಗಿ ಬದುಕಿರಿ." ಎಂದು ನುಡಿದಳು. ಇಂತಹ ವಾಕ್ಯಗಳನ್ನು ಕೇಳಿದ ಮೇಲೆ ಯುದ್ಧಕ್ಕೆ ಹೆದರುವವನು ಆ ಸಭೆಯಲ್ಲಿ ಒಬ್ಬನೂ ಕಾಣಬರಲಿಲ್ಲ. ತಕ್ಷಣವೇ ಅವರೆಲ್ಲರೂ ಯುದ್ಧಸನ್ನದ್ಧರಾಗಿ ಶತ್ರುಗಳ ಮೇಲೆ ದಂಡಯಾತ್ರೆಗೆ ಹೊರಟರು.

ಉಮಾಬಾಯಿಯು ತನ್ನ ಅಂಬಾರಿಯ ಸುತ್ತಲೂ ಸಿಕ್ಕುತೆರೆಗಳನ್ನು ಕಟ್ಟಿಸಿಕೊಂಡು, ಆಯುಧಹಸ್ತಳಾಗಿ ಗಜಾರೋಹಣವನ್ನು ಮಾಡಿದಳು. ಆಕೆಯ ಪುತ್ರರು ಇಬ್ಬರೂ ಆಕೆಯ ಪಾರ್ಶ್ವದಲ್ಲಿ ಕುಳಿತುಕೊಂಡರು. ಆಕೆಯ ಧೈರ್ಯವನ್ನು ನೋಡಿದಿರಾ! ಇದಲ್ಲವೇ ನಿಜವಾದ ಸಾಹಸ.

ಅನಂತರ ಉಮಾಬಾಯಿಯು ಸೈನ್ಯದೊಡನೆ ಜೊರಾವರಖಾನನನ್ನು ಗೆಲ್ಲಲು ಸಿದ್ಧಳಾದಳು. ಖಾಬಾಬಿಯೂ ಹತ್ತುಸಾವಿರ ಸೇನೆಯೊಡನೆ ಆಕೆಯನ್ನು ಎದಿರಿಸಿದನು. ಕೊನೆಗೆ ಉಮಾಬಾಯಿಯ ಸಂಗ್ರಾಮಚಾತುರ್ಯದಿಂದ ಯವನರಿಗೆ ಅಪಜಯವು ಉಂಟಾಯಿತು! ಜೊರಾವರಖಾನನು ನಗರದೊಳಕ್ಕೆ ಓಡಿಹೋಗಿ ನಗರದ ಬಾಗಿಲನ್ನು ಮುಚ್ಚಿಕೊಂಡನು. ಯುದ್ಧವು ಅಮದಾಬಾದಿನ ಮೇರೆಯಲ್ಲಿಯೇ ನಡೆಯುತಲಿದ್ದುದರಿಂದ, ಉಮಾಬಾಯಿಯ ಸೈನಿಕರು ಶವದಮೇಲೆ ಶವವನ್ನು ಇರಿಸಿ ಕೋಟೆಯ ಗೋಡೆಯನ್ನು ಹತ್ತಿ ಒಳಕ್ಕೆ ಹೋದರು. ಇನ್ನು ಕೆಲವರು ನಗರದ್ವಾರವನ್ನು ಒಡೆದು ಪುರವನ್ನು ಪ್ರವೇಶಿಸಿದರು. ಪಟ್ಟಣವು ಉಮಾಬಾಯಿಯ ಸ್ವಾಧೀನವಾಯಿತು. ಸತ್ಯ ಪ್ರತಿಜ್ಞೆಯಾದ ಉಮಾಬಾಯಿಯು ಆ ದಿವಸ ಅಮದಾಬಾದಿನೊಳಗೆ ಭೋಜನವನ್ನು ಮಾಡಿದಳು.

ಅರ್ಗಳ ಸಂಸ್ಥಾನಾಧೀಶ್ವರಿ.

—o—

"ಸಂಕಟ ಸಮಯದಲ್ಲಿ ಸಾಹಸದಿಂದಲೇ ಜಯವುಂಟಾಗುವುದು."

ಈಕೆಯು ಬಿಹಾರ ದೇಶದ ಬಕ್ಸರು ಪಟ್ಟಣಕ್ಕೆ ಸಮೀಪದಲ್ಲಿರುವ ಅರ್ಗಳ ಸಂಸ್ಥಾನಾಧೀಶ್ವರನ ಅರ್ಧಾಂಗಿಯು ಈಕೆಯ ಹೆಸರೇನೋ ತಿಳಿಯದು. ಈ ಕಾಂತಾರತ್ನದ ಪತಿಯ ಹೆಸರು ಗೌತಮರಾಜ. ಆತನು ತನಗೆ ಕಪ್ಪವನ್ನು ಕಟ್ಟಲಿಲ್ಲವೆಂದು ಡಿಲ್ಲೀಶ್ವರನಿಗೆ ಗೌತಮರಾಜನ ಮೇಲೆ ಬಹು ಕೋಪವು

ಉಂಟಾಯಿತು. ಅದರಿಂದ ಬಾದಷಹನು 'ಆತನನ್ನು ಗೆದ್ದು ರಾಜ್ಯವನ್ನು ಸ್ವಾಧೀನಮಾಡಿಕೊಳ್ಳಬೇಕು' ಎಂದು ಅಯೋಧ್ಯಾನವಾಬನಿಗೆ ಆಜ್ಞಾಪಿಸಿದನು. ಅದರಂತೆ ಆ ನವಾಬನು ಗೌತಮರಾಜನ ಮೇಲೆ ಯುದ್ಧಕ್ಕೆ ಹೊರಟನು. ಗೌತಮನು ಚಿಕ್ಕ ಸಂಸ್ಥಾನಾಧಿಪತಿಯಾದರೂ ಶೌರ್ಯವಂತನಾದುದರಿಂದ ಶತ್ರುವನ್ನು ಸೋಲಿಸಿದನು. ರಾಜನು ವಿಜಯವನ್ನು ಹೊಂದಿ ಪುರವನ್ನು ಪ್ರವೇಶಿಸಲು ಪ್ರಜೆಗಳೆಲ್ಲರೂ ಅನೇಕ ಉತ್ಸವಗಳನ್ನು ಮಾಡಿಕೊಳ್ಳುತಲಿದ್ದರು.

ಈ ಸಂತೋಷ ಸಮಯದಲ್ಲಿ ರಾಣಿಗೆ ಗಂಗಾಸ್ನಾನವನ್ನು ಮಾಡಬೇಕೆಂಬ ಅಭಿಲಾಷೆಯು ಉಂಟಾಯಿತು. ಗಂಗಾಪ್ರವಾಹವು ಅರ್ಗಳ ಪಟ್ಟಣದ ಸಮೀಪ ದಲ್ಲಿಯೇ ಇದ್ದರೂ, ಪರಾಜಿತರಾದ ಶತ್ರುಗಳು ಅಲ್ಲಿಯೇ ಠೌತುಕೊಂಡಿದ್ದುದ ರಿಂದ ಅಲ್ಲಿಗೆ ಹೋಗುವುದು ಅಸಾಧ್ಯವಾಗಿತ್ತು. ಆದರೆ ಹೇಗಾದರೂ ಗಂಗಾ ಸ್ನಾನಮಾಡಬೇಕು ಎಂದು ರಾಣಿಯು ನಿಶ್ಚಯಿಸಿ ತಾನು ಸಾಮಾನ್ಯವಾದ ವೇಷವನ್ನು ಧರಿಸಿ ಕೆಲದಾಸಿಯರನ್ನು ಕರೆದುಕೊಂಡು ಯಾರಿಗೂ ತಿಳಿಯ ದಂತೆ ನದೀತೀರವನ್ನು ಸೇರಿ ಬಹು ಗೋಪ್ಯವಾಗಿ ಸ್ನಾನವನ್ನು ಮಾಡುತಲಿದ್ದಳು. ಆದರೆ ಅಸಮಾನ ರೂಪವತಿಯಾದ ರಾಜಯುವತಿಯು ಯಾವ ವೇಷವನ್ನು ಧರಿಸಿದರೂ ಮರೆಯಾಗುವುದು ದುರ್ಲಭವಲ್ಲವೆ? ಸ್ವಲ್ಪಹೊತ್ತಿನಲ್ಲಿಯೇ ಯಾರೋ ಒಬ್ಬ ರಾಜಯುವತಿಯು ಗಂಗೆಯಲ್ಲಿ ಸ್ನಾನಮಾಡುತಲಿರುವಳೆಂದು ಗಂಗಾತೀರದಲ್ಲಿ ಎಲ್ಲರೂ ಮಾತನಾಡಿಕೊಳ್ಳುತಲಿರುವುದನ್ನು ಸಮೀಪದಲ್ಲಿಯೇ ಶಿಬಿರವನ್ನು ಸ್ಥಾಪಿಸಿಕೊಂಡಿದ್ದ ನವಾಬನಿಗೆ, ಆತನ ಅನುಚರರು ತಿಳಿಸಿದರು. ಪರಾಜಯವನ್ನು ಹೊಂದಿ ಓಡಿಹೋಗುವ ಸಮಯದಲ್ಲಿ ಶತ್ರು ಸ್ತ್ರೀಯೊಬ್ಬಳು ತನಗೆ ಅನಾಯಾಸವಾಗಿ ದೊರೆಯುವಳು ಎಂದು ಆ ನವಾಬನು ಬಹು ಸಂತೋಷಪಟ್ಟನು. ಅವನು ಕೂಡಲೆ ತನ್ನ ಭಟರಿಗೆ, ಆ ಸ್ತ್ರೀಯರನ್ನು ಕರೆದು ಕೊಂಡು ಬನ್ನಿರಿ ಎಂದು ಆಜ್ಞಾಪಿಸಿದನು. ಅಲ್ಲಿ ರಾಣಿಯು ಸ್ನಾನವನ್ನು ಮಾಡಿ ತನ್ನ ದಾಸಿಯರೊಡನೆ ಪುರಕ್ಕೆಬರುತಲಿರುವ ಮಾರ್ಗದಲ್ಲಿ ಶತ್ರುಭಟರು ಅಡ್ಡಗಿಸಿದರು. ಯವನ ಸೈನ್ಯವು ತಮ್ಮನ್ನು ಮುತ್ತಿಗೆಹಾಕಲು, ರಾಣಿಯು ಸ್ವಲ್ಪವೂ ಅಧೈರ್ಯಗೊಳ್ಳದೆ, ತಾನೂ ತನ್ನ ದಾಸಿಯರೂ ಗುಪ್ತವಾಗಿ ಇರಿಸಿ ಕೊಂಡಿದ್ದ ಖಡ್ಗಗಳನ್ನು ಹಿಡಿದು ಶತ್ರುಗಳೊಡನೆ ಯುದ್ಧಮಾಡತೊಡಗಿದರು. ಆದರೆ ಯುದ್ಧನಿಪುಣರಾದ ಮ್ಲೇಚ್ಛ ವೀರರೊಡನೆ ಯುದ್ಧಮಾಡಿ ಗೆಲ್ಲುವುದು ಅಸಾಧ್ಯವೆಂದು ತಿಳಿದ ಮೇಲೆಯೂ ರಾಣಿಯುಅತ್ಯಂತ ಶೌರ್ಯದೊಡನೆ ಯುದ್ಧ ಮಾಡುತ್ತ, ಯುದ್ಧವನ್ನು ನೋಡಲು ಗುಂಪುಗುಂಪಾಗಿ ನಿಂತಿದ್ದ ಪ್ರಜೆಗಳ ಕಡೆಗೆ ನೋಡಿ, 'ಇಲ್ಲಿ ನಿಂತಿರುವ ಜನರಲ್ಲಿ ಭಾರತೀಯರಾರೂ ಇಲ್ಲವೆ? ತಮ್ಮ ಧರ್ಮ ದಲ್ಲಿ ಅಭಿಮಾನವುಳ್ಳವರೂ ಹಿಂದೂ ಸೋದರೀಜನಕ್ಕೆ ಸಹಾಯ ಮಾಡಬೇಕೆಂಬ ಇಚ್ಛೆಯುಳ್ಳವರೂ ಯಾರೂ ಇಲ್ಲವೆ? ಅಂತಹವರು ಯಾರಾದರೂ ಇದ್ದ

ಪಕ್ಷಕ್ಕೆ ಸ್ತ್ರೀಯರಿಗೆ ಸಹಾಯವನ್ನು ಮಾಡಿರಿ. ನಮಗೆ ಸಹಾಯ ಮಾಡ ದಿದ್ದರೆ ನಿಮಗೆ ಅವಮಾನವಲ್ಲವೆ? ಆದಕಾರಣ ನಮ್ಮನ್ನು ರಕ್ಷಿಸುವ ಭಾರ ವೆಲ್ಲವು ನಿಮ್ಮನೇಲೆಯೇ ಇದೆ." ಎಂದಳು.

ಮರ್ಮಭೇದಕಗಳಾದ ಈ ಮಾತುಗಳನ್ನು ಕೇಳಿ ಅಭಯಚಂದ್, ನಿರ್ಭಯಚಂದ್ ಎಂಬ ಬಿರುದುಗಳುಳ್ಳ ಇಬ್ಬರು ಅಣ್ಣತಮ್ಮಂದಿರು ಸ್ವಲ್ಪ ಸೇನೆಯೊಡನೆ ಬಂದು, ಶತ್ರುಸೈನ್ಯದ ಮೇಲೆ ಬಾಣಪರಂಪರೆಗಳನ್ನು ಬಿಡ ತೊಡಗಿದರು. ಅವರು 'ಹರಹರ ಮಹಾದೇವ' ಎಂದು ಉಚ್ಚರಿಸುತ್ತ ಶತ್ರು ಗಳ ಶಿರೋನಾರಿಕೇಳಗಳನ್ನು ಮಹದೇವನಿಗೆ ಅರ್ಪಿಸುತಲಿದ್ದರು. ಹೀಗೆ ಅವರು ಯುದ್ಧಮಾಡುತ್ತ ರಾಣಿಯನ್ನು ಸಮೀಪಿಸಿದರು. ತಮ್ಮ ಸಹಾಯಕ್ಕೆ ಸೈನಿಕರು ಬಂದುದನ್ನು ನೋಡಿ ಆ ವನಿತೆಯರು ಬಹು ಉತ್ಸಾಹದೊಡನೆ ಯುದ್ಧ ಮಾಡುತಲಿದ್ದರು. ಸ್ತ್ರೀಪುರುಷಮಿಶ್ರವಾದ ಆ ಚಿಕ್ಕಸೈನ್ಯವು ಮ್ಲೇಚ್ಛಸೈನ್ಯ ದಲ್ಲಿ ಮೆಲ್ಲಮೆಲ್ಲಗೆ ದಾರಿಯನ್ನು ಮಾಡಿಕೊಳ್ಳುತ್ತ ಮುಂದಕ್ಕೆ ನಡೆಯುತಲಿತ್ತು. ಆದರೆ ಪ್ರತಿಯೊಂದು ಹೆಜ್ಜೆಗೂ ಅನೇಕ ಹಿಂದೂವೀರರು ಮಡಿಯುತಲಿದ್ದರು. ಅವರು ಹೀಗೆ ಅತ್ಯಂತ ಶ್ರಮದಿಂದ ಸ್ವಲ್ಪದೂರ ಹೋಗಲು, ಈ ವಿಷಯ ವೆಲ್ಲವನ್ನೂ ಕೇಳಿ ರಾಜನು ಕಳುಹಿಸಿದ ದೊಡ್ಡ ಸೈನ್ಯವು ರಾಣಿಯೇ ಮೊದಲಾದ ವರು ಇರುವ ಸ್ಥಳಕ್ಕೆ ಬಂದಿತು. ಅದರ ಸಹಾಯದಿಂದ ರಾಣಿಯು ನಿರ್ಭಯ ಳಾಗಿ ಅರಮನೆಯನ್ನು ಸೇರಿದಳು. ನಿರ್ಭಯ ಚಂದನು ಯುದ್ಧದಲ್ಲಿ ಮಡಿ ದನು. ಅಭಯ ಚಂದನ ಶೌರ್ಯಸಾಹಸಗಳಿಗೆ ಮೆಚ್ಚಿ ರಾಜನು ಬಹು ಸಂತೋಷದೊಡನೆ ತನ್ನ ಪುತ್ರಿಯನ್ನು ಆತನಿಗೆ ಕೊಟ್ಟು ಮದುವೆಯನ್ನು ಮಾಡಿದನು. ಅಯೋಧ್ಯೆಯ ನವಾಬನು ಪುನಃ ಬಹು ಸೈನ್ಯವು ತನ್ನ ಮೇಲೆ ದಂಡೆತ್ತಿ ಬಂದುದನ್ನು ನೋಡಿ ಭೀತನಾಗಿ, ತಾನು ತೆಗೆದುಕೊಂಡು ಬಂದಿದ್ದ ಯುದ್ಧಸಾಮಗ್ರಿಯನ್ನು ಅಲ್ಲಿಯೇ ಬಿಟ್ಟು ಸೈನ್ಯದೊಡನೆ ಪಲಾಯನ ಮಾಡಿ ದನು. ಸ್ತ್ರೀಯರನ್ನು ಅನ್ಯಾಯವಾಗಿ ಸೆರೆಹಿಡಿಯಲು ಪ್ರಯತ್ನಪಟ್ಟ ಶೂರ ವರನು ಈತನೇ ಎಂದು ಸರ್ವಜನರಿಂದಲೂ ನಿಂದಿಸಿಕೊಳ್ಳುತ್ತಾ ಆ ನವಾಬನು ಬಹು ವೃದ್ಧನಾಗುವವರೆಗೂ ಜೀವಿಸಿದ್ದನು.

ಜಗನ್ಮೋಹಿನಿ.

(ಬಾಬುಕೇಶವಚಂದ್ರಸೇನನ ಪತ್ನಿ.)

ಈಕೆಯ ತಂದೆಯ ಹೆಸರು ಚಂದ್ರಕುಮಾರ್‌ಮಝುಮದಾರ್. ಈತನ ವಾಸಸ್ಥಳ ಕಲಿಕತ್ತೆಗೆ ಸಮೀಪದಲ್ಲಿರುವ ಅಗರ್‌ಪರಡಾ ಎಂಬ ಗ್ರಾಮವು. ಈ ಗ್ರಾಮದಲ್ಲಿಯೇ ಜಗನ್ಮೋಹಿನಿಯು ಕ್ರೀಸ್ತುಶಕ ೧೮೪೭ ನೆಯ ಇಸವಿ ಡಿಶಂಬರ್ ೨೭ ನೆಯ ತಾರೀಖಿನಲ್ಲಿ ಜನ್ಮಿಸಿದಳು. ತವರುಮನೆಯಲ್ಲಿ ಈಕೆಯನ್ನು ಗುಲಾಬ್‌ಸುಂದರಿ ಎಂದು ಕರೆಯುತಲಿದ್ದರು. ಈಕೆಗೆ ಒಂಭತ್ತುವರ್ಷ ವಯಸ್ಸಾದ ಒಡನೆಯೇ ಈಕೆಯನ್ನು ಕೇಶವಚಂದ್ರಸೇನನಿಗೆ ಕೊಟ್ಟು ವಿವಾಹಮಾಡಿದರು. ವಿವಾಹವಾದ ಅನಂತರ ಈತನು ಬ್ರಹ್ಮಮತವನ್ನು ಅವಲಂಬಿಸಿ ಬಹು ಕೀರ್ತಿವಂತನಾದನು. ಜಗನ್ಮೋಹಿನಿಯು ಅತ್ತೆಯ ಮನೆಗೆ ಬಂದಮೇಲೆ ಆಕೆಯ ಪತಿಯು ಬಹು ವೈರಾಗ್ಯಶೀಲನಾಗಿದ್ದನು. ಆತನ ಮನೆಯಲ್ಲಿರುವವರು ಎಲ್ಲರೂ ಆತನು ತಮಗೆ ಇಷ್ಟವಿಲ್ಲದ ಮತವನ್ನು ಸ್ವೀಕರಿಸಲೆಣಿಸಿದುದರಿಂದ ಆತನನ್ನೂ, ಆತನ ಪತ್ನಿಯನ್ನೂ ಬಹುವಿಧವಾಗಿ ಹಿಂಸಿಸುತಲಿದ್ದರು. ಆಕಾಲದಲ್ಲಿ ಜಗನ್ಮೋಹಿನಿಗೆ ತಾನು ನಡೆದುಕೊಳ್ಳಬೇಕಾದ ಧರ್ಮವಿಚಾರವು ತಿಳಿಯದಿದ್ದರೂ, ಪತಿಯಮೇಲೆ ನಿಶ್ಚಲಭಕ್ತಿಯುಳ್ಳವಳಾಗಿ ಇತರರುಮಾಡುವ ನಿಂದೆಯನ್ನು ಆತನಿಗೆ ತಿಳಿಸದೆ, ಆತನನ್ನು ಸದಾ ಸಂತೋಷಗೊಳಿಸಲು ಯತ್ನಿಸುತಲಿದ್ದಳು. ಕೇಶವಚಂದ್ರನು ಬಂಧುಗಳೊಡನೆ ವಾಸಮಾಡುತ್ತ ತನ್ನ ಮತಾನುಸಾರವಾಗಿ ನಡೆಯುವುದು ದುಸ್ತರವೆಂದೆಣಿಸಿ, ೧೮೬೧ ನೆಯ ಇಸವಿಯಲ್ಲಿ ಬ್ರಹ್ಮಸಮಾಜವಾರ್ಷಿಕೋತ್ಸವವು ನಡೆಯುತ್ತಿರಲು, ಸ್ವಗೃಹವನ್ನು ತ್ಯಾಗಮಾಡಿ, ಆ ಸಮಾಜದಲ್ಲಿ ಪೂಜ್ಯನೆಂದು ಎಣಿಸಲ್ಪಡುತಲಿದ್ದ ಮಹರ್ಷಿದೇವೇಂದ್ರನಾಥನ ಮನೆಗೆ ಹೋದನು. ಆಗ ಜಗನ್ಮೋಹಿನಿಯು ೧೩ ವರ್ಷದವಳಾದರೂ ಪತಿಯೊಡನೆ ವಾಸಮಾಡುವುದೇ ಸತಿಗೆ ಉಚಿತವಾದುದು ಎಂದೆಣಿಸಿ, ತಾನುಕೂಡ ಪತಿಯೊಡನೆ ಹೋದಳು. ಇವರು ಇಬ್ಬರೂ ಅಲ್ಲಿರುವ ಸಮಯದಲ್ಲಿಯೇ ಕೇಶವಚಂದ್ರನಿಗೆ ಅಸಾಧ್ಯವಾದ ವ್ಯಾಧಿಯು ಉಂಟಾಯಿತು. ಆ ಸಮಯದಲ್ಲಿಯೇ ಅವರಿಬ್ಬರೂ ಕೇಶವಚಂದ್ರಸೇನನ ಮಿತ್ರರ ಮನೆಗೆ ಹೋದರು. ಅಲ್ಲಿ ಜಗನ್ಮೋಹಿನಿಯು ಪತಿಗೆ ಮಾಡಿದ ಸೇವೆಯೂ, ಆಕೆಯು ತೋರಿದ ಧೈರ್ಯವೂ ಸ್ತೋತ್ರಾರ್ಹವಾದುದು. ಅನಂತರ ಪರಮೇಶ್ವರನ ಕೃಪೆಯಿಂದ ಕೇಶವಚಂದ್ರನ ವ್ಯಾಧಿಯು ನಿವಾರಣೆಯಾಯಿತು. ಪತ್ನಿಯ ಸಹಾಯದಿಂದ ಆತನು ಅನೇಕ

ಸಂಸ್ಕರಣೆಗಳನ್ನು ಮಾಡಿದನು. ಜಗನ್ಮೋಹಿನಿಯು ಅನೇಕದಿವಸಗಳ ವರೆಗೂ ಬ್ರಹ್ಮಮತವನ್ನು ಅವಲಂಬಿಸಲಿಲ್ಲ. ಆ ಮತವನ್ನು ಕುರಿತು ಪತಿಯನ್ನು ಅನೇಕ ಪ್ರಶ್ನೆಗಳನ್ನು ಕೇಳಿ ಅದಕ್ಕೆ ತಕ್ಕ ಸದುತ್ತರಗಳನ್ನು ಆತನಿಂದ ಹೊಂದಿ, ತನಗೆ ಆ ಮತವಿಷಯವೆಲ್ಲವೂ ಸಂಪೂರ್ಣವಾಗಿ ತಿಳಿದ ಅನಂತರವೇ ಆ ಮತವನ್ನು ಸ್ವೀಕರಿಸಿದಳು. ಬಳಿಕ ಈ ದಂಪತಿಗಳಿಗೆ ಪುತ್ರರೂ ಪುತ್ರಿಯರೂ ಉದ್ಭವಿಸಿದರು. ಅವರೆಲ್ಲರೂ ತಾಯಿಯ ಸತ್ಪಾಲನೆಯಿಂದ ಸತ್ಪ್ರವರ್ತಕರಾದರು. ೧೯೧೧ ನೆಯ ಇಸವಿಯಲ್ಲಿ ಕಾಲವಾದ ಕುಚ್‌ಬಿಹಾರಾಧೀಶ್ವರನ ಪತ್ನಿಯು ಈಕೆಯ ಮಗಳು. ಕಲಿಕತ್ತೆಯಲ್ಲಿ ನಡೆಯುವ ಭಾರತಾಶ್ರಮ ಸಭೆಗೆ ಈಕೆಯು ಅಧ್ಯಕ್ಷಳಾಗಿ ಇದ್ದಳು. ಆ ಸಭೆಗೆ ಮಾತ್ರವೇ ಅಲ್ಲದೆ ಆ ಗ್ರಾಮದಲ್ಲಿ ನಡೆಯುವ ಅನೇಕ ಮಹಿಳಾಸಭೆಗಳಿಗೆ ಈಕೆಯನ್ನೇ ಅಧ್ಯಕ್ಷಳನ್ನಾಗಿ ನಿಯಮಿಸುತಲಿದ್ದರು.

ಪತಿಯು ಗತಿಸಿದ ಅನಂತರವೂ ಬ್ರಹ್ಮಸಮಾಜಕ್ಕೆ ಈಕೆಯ ವಿಶೇಷಸಹಾಯವನ್ನು ಮಾಡಿದಳು. ಬ್ರಹ್ಮಸಮಾಜದ ಸಕಲಶಾಖೆಯವರೂ ಈಕೆಯನ್ನು ಭಕ್ತಿಭಾವದಿಂದ ನೋಡುತಲಿದ್ದರು. ಈಕೆಯು ಧರ್ಮಪ್ರಚಾರಕರಲ್ಲಿ ಬಹು ಅಭಿಮಾನವುಳ್ಳವಳಾಗಿ ಇದ್ದಳು. ನವವಿಧಾನ ಪಕ್ಷ ಪ್ರಚಾರಕರು ಈಕೆಯೊಡನೆ ಬಹಳ ಹೊತ್ತು ಸಂಭಾಷಿಸುತಲಿದ್ದರು. ಆ ಸಮಯದಲ್ಲಿ ಈಕೆಗಿರುವ ಧರ್ಮಬುದ್ಧಿಯನ್ನೂ, ಧರ್ಮಪ್ರಚಾರದಲ್ಲಿರುವ ಕುತೂಹಲವನ್ನೂ, ಬ್ರಹ್ಮಸಾಮಾಜಿಕರಲ್ಲಿರುವ ಪ್ರೇಮವನ್ನೂ, ಭಗವಂತನಲ್ಲಿರುವ ಅತ್ಯಧಿಕ ಭಕ್ತಿಯನ್ನೂ ನೋಡಿ ಅವರು ಆಕೆಯಲ್ಲಿ ಪೂಜ್ಯಭಾವವನ್ನು ವಹಿಸುತಲಿದ್ದರು. ಧರ್ಮಪ್ರಚಾರಕರಲ್ಲಿ ಯಾರಿಗಾದರೂ ಸಂಕಟವು ಉಂಟಾದರೆ, ಮಾತೃಸಮಳಾದ ಜಗನ್ಮೋಹಿನಿಯೊಡನೆ ತಮ್ಮ ದುಃಖವನ್ನು ಹೇಳಿಕೊಳ್ಳುತಲಿದ್ದರು. ಆಕೆಯು ಅವರನ್ನು ತನ್ನ ಮೃದುವಚನಗಳಿಂದ ಸಂತೈಸಿ ಅವರ ಸಂಕಟ ನಿವಾರಣೆಯನ್ನು ಮಾಡುತಲಿದ್ದಳು. ಈಕೆಯು ೧೯೧೮ ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ಪರಲೋಕಕ್ಕೆ ಹೋದಳು.

ಕೊಮರ್ರಾಜುಜೋಗಮಾಂಬ.

ಕೃಷ್ಣಾಮಂಡಲದ ನಂದಿಗ್ರಾಮ ತಾಲೂಕಿಗೆ ಸೇರಿದ ಕಂಚಿಲಿ ಎಂಬ ಗ್ರಾಮದಲ್ಲಿ ಭಂಡಾರುವೀರಯ್ಯ ಎಂಬ ಒಬ್ಬ ಬ್ರಾಹ್ಮಣನು ದೈವಭಕ್ತನೂ ಸತ್ಪ್ರವರ್ತಕನೂ ಆಗಿದ್ದನು. ಆತನಿಗೆ ಜೋಗಮಾಂಬ ಎಂಬ ಪುತ್ರಿಯು

ಹುಟ್ಟಿದಳು. ಈ ಬಾಲೆಯನ್ನು ಬಾಲ್ಯದಿಂದಲೂ ಬಹು ಗುಣವತಿ ಎಂದು ಎಲ್ಲರೂ ಹೊಗಳುತಲಿದ್ದರು. ಈಕೆಯು ವಿವಾಹಯೋಗ್ಯಳಾಗಲು, ಆ ಕಾಲೂ ಕಿಗೆ ಸೇರಿದ ಪೆನುಗಂಚಿಪ್ರೋಲು ಎಂಬ ಗ್ರಾಮದಲ್ಲಿ ವಾಸಮಾಡುತಲಿದ್ದ ಕೊಮ ರ್ರಾಜುನಾಗಯ್ಯನ ಪುತ್ರನಾದ ರಾಮಯ್ಯನಿಗೆ ಈಕೆಯನ್ನು ಕೊಟ್ಟು ವಿವಾಹ ಮಾಡಿದರು.

ಈ ಪೆನುಗಂಚಿಪ್ರೋಲು ಎಂಬ ಗ್ರಾಮವು ಪೂರ್ವದಲ್ಲಿ ಒಂದು ದೊಡ್ಡ ಪಟ್ಟಣವಾಗಿತ್ತಂತೆ. ಈಗ ಅದು ಒಂದು ಹಳ್ಳಿಯಾಗಿದೆ. ಆ ಹಳ್ಳಿಯಲ್ಲಿ ಭೂಮಿಯನ್ನು ಅಗೆದರೆ ಕಂಡುಬರುವ ದೊಡ್ಡ ಸ್ತಂಭಗಳೂ, ದೇವಸ್ಥಾನಗಳ, ಗೋಪುರಗಳ ಕಲ್ಲುಗಳೂ ಆ ಹಳ್ಳಿಯ ಪೂರ್ವದ ಔನ್ನತ್ಯವನ್ನು ತೋರುತಲಿವೆ. ಕೊಮರ್ರಾಜುವಂಶದವರಿಗೆ ಪೂರ್ವದಿಂದಲೂ ಈಪಟ್ಟಣವೇ ನಿವಾಸಸ್ಥಳ ವಾಗಿತ್ತು. ಇವರು ರೆಡ್ಡಿಗಳ ಕಾಲದಲ್ಲಿಯೂ, ತುರುಕರ ಕಾಲದಲ್ಲಿಯೂ ದೇಶ ಸಾಂಡ್ಯಾಗಿರಿಯನ್ನು ಮಾಡಿ ಬಹು ಕೀರ್ತಿಯನ್ನುಗಳಿಸಿದರು. ಆಂಗ್ಲೇಯರ ಪರಿಪಾಲನೆಯು ಪ್ರಾರಂಭವಾದಮೇಲೆ ಇವರಿಗೆ ದೇಶಪಾಂಡ್ಯಾಗಿರಿಯು ಹೋಗಲು, ಇವರು ಉದ್ಯೋಗಕ್ಕಾಗಿ ದೇಶಾಂತರಗಳಿಗೆ ಹೋಗಬೇಕಾಯಿತು. ಆದರೆ ಅವರು ಸ್ವಗ್ರಾಮದಮೇಲಿನ ಪ್ರೀತಿಯನ್ನು ಬಿಡಲಾರದೆ ಅಲ್ಲಿ ಮನೆಗಳನ್ನು ಕಟ್ಟಿಕೊಂಡು ವಿರಾಮ ದಿನಗಳನ್ನು ತಮ್ಮ ಗ್ರಾಮಗಳಲ್ಲಿ ಕಳೆಯುತಲಿದ್ದರು.

ಜೋಗಮಾಂಬನ ಪತಿಯು ಸಹ ಈ ಗ್ರಾಮದಲ್ಲಿ ಮನೆಯನ್ನು ಕಟ್ಟಿ ಕೊಂಡು, ನೈಜಾಮು ರಾಜ್ಯದಲ್ಲಿ ಉದ್ಯೋಗವನ್ನು ಮಾಡುತಲಿದ್ದನು. ಜೋಗ ಮಾಂಬನು ಗ್ರಂಥಗಳಲ್ಲಿ ಹೇಳಿರುವಂತೆ ಪತಿವ್ರತಾ ಧರ್ಮಗಳನ್ನು ಆಚರಿಸುತ ಲಿದ್ದಳು. ಆಕೆಯು ಪತಿಯನ್ನು ದೇವರಂತೆ ಭಾವಿಸಿ, ನಿತ್ಯವೂ ಆತನನ್ನು ಪೂಜಿಸಿ, ಆತನ ಆಜ್ಞೆಯಂತೆ ಸಕಲಕಾರ್ಯಗಳನ್ನೂ ಮಾಡುತಲಿದ್ದಳು. ಜೋಗಮಾಂಬನು ಪತಿಯ ಆಜ್ಞೆಯಿಲ್ಲದೆ ಸ್ನಾನಾಹಾರಗಳನ್ನು ಮಾಡುತ ಲಿರಲಿಲ್ಲ. ಆಕೆಯು ಪತಿಯ ಉಚ್ಛಿಷ್ಟವು ಇಲ್ಲದೆ ಭೋಜನ ಮಾಡುವುದಿಲ್ಲ ಎಂದು ವ್ರತವನ್ನು ಹಿಡಿದಿದ್ದಳು. ಈ ವ್ರತದ ದೆಸೆಯಿಂದ ಆಕೆಯು ಅನೇಕಸಲ ಉಪವಾಸ ಮಾಡಬೇಕಾಗುತಲಿತ್ತು. ಒಂದುವೇಳೆ ಈಕೆಯ ಪತಿಯು ಗ್ರಾಮಾಂತರಕ್ಕೆ ಹೋಗಿ ಬಹುದಿವಸಗಳೆವರೆಗೂ ಬರಲಿಲ್ಲ. ಈಕೆಯು ತೆಗೆದಿಟ್ಟುಕೊಂಡಿದ್ದ ಪತಿಯ ಉಚ್ಛಿಷ್ಟವಾದ ಅಡಕೆಗಳು ಸಮಾಪ್ತವಾಗಲು, ಈಕೆಯು ಎಂಟು ದಿವಸಗಳು ಉಪವಾಸಮಾಡಿದಳು. ಆದರೆ ತಾನು ಉಪವಾಸ ಮಾಡಿರುವೆನು ಎಂದು ಆ ಸಾಧ್ವಿಯು ಯಾರಿಗೂ ತಿಳಿಸಲಿಲ್ಲ. ಮನೆಯ ಕೆಲಸಗಳೆಲ್ಲವನ್ನೂ ಕ್ರಮವಾಗಿ ನೆರವೇರಿಸುತಲಿದ್ದಳು. ಒಂಭತ್ತನೆಯ ದಿವಸ ಈಕೆಯು ಅಡಿಗೆಯನ್ನು ಮಾಡುತ್ತ ಇರುವಾಗ, ಹಸಿವಿನಿಂದ ಪೀಡಿತಳಾಗಿ

ಮೂರ್ಛೆಹೊಂದಿ ನೆಲದಮೇಲೆ ಬಿದ್ದಳು. ಈ ಸಮಾಚಾರವನ್ನು ಕೇಳಿ ಈಕೆಯ ಸೋದರಿಯು ಬಂದು ಈಕೆಯನ್ನು ನೋಡಿ ಕಾರಣವನ್ನು ತಿಳಿದವಳಾದುದರಿಂದ, ಈಕೆಯ ಪತಿಯಬಳಿಗೆ ಕರೆದುಕೊಂಡು ಹೋಗಿ ಹದಿನೈದು ದಿವಸಗಳಿಗೆ ಜೋಗಮಾಂಬನಿಗೆ ಭೋಜನವನ್ನು ಮಾಡಿಸಿದಳು!! ಇದರಿಂದ ಸ್ತ್ರೀಯರು ತಮ್ಮ ಪತಿಯ ಪ್ರೇಮಕ್ಕಾಗಿ ಎಷ್ಟು ಶ್ರಮವನ್ನಾದರೂ ಸಂತೋಷದಿಂದ ಸಹಿಸುತ್ತಿದ್ದರೆಂದು ತಿಳಿಯಬರುತ್ತದೆಯಲ್ಲವೆ? ಜೋಗಮಾಂಬನು ಪತಿಯಲ್ಲಿ ಇಷ್ಟು ಪ್ರೇಮವುಳ್ಳವಳಾದರೂ, ರಾಮಯ್ಯನುಮಾತ್ರ ಆಕೆಯನ್ನು ಬಹುಹಿಂಸಿಸುತಲಿದ್ದನು ಎಂದು ಹೇಳುತ್ತಾರೆ. ಆತನು ಪತ್ನಿಯನ್ನು ನಿಷ್ಕಾರಣವಾಗಿ ಬಯ್ಯುವುದು, ಹೊಡೆಯುವುದು ಹೀಗೆಲ್ಲ ಮಾಡುತಲಿದ್ದನು. ಆಕೆಯು ಅದೆಲ್ಲವನ್ನೂ ತಾಳ್ಮೆಯಿಂದ ಸಹಿಸಿಕೊಂಡು, ಆತನಲ್ಲಿ ಅತ್ಯಧಿಕಭಕ್ತಿಯಿಂದ ನಡೆದುಕೊಳ್ಳುತಲಿದ್ದಳು.

ಜೋಗಮಾಂಬನು ಪತಿಭಕ್ತಿಯುಳ್ಳವಳಾಗಿದ್ದುದುಮಾತ್ರವೇ ಅಲ್ಲದೆ, ಭಾವಮೈದಂದಿರ ಮಕ್ಕಳನ್ನು ಪ್ರೀತಿಯಿಂದ ನೋಡುತ್ತ, ವಾರಗಿತ್ತಿಯರೊಡನೆ ಜಗಳವಾಡದೆ ಐಕಮತ್ಯವುಳ್ಳವಳಾಗಿದ್ದಳು. ಈ ಪತಿವ್ರತಾ ಶಿರೋಮಣಿಯು ಸುಮಾರು ೭೦ ವರ್ಷಗಳ ಹಿಂದೆ ಜೀವಿಸಿದ್ದಳು. ಈಕೆಗೆ ಒಬ್ಬ ಮಗನೂ ಒಬ್ಬ ಮಗಳೂ ಹುಟ್ಟಿದರು. ಈಕೆಯು ಪತಿಗಿಂತಲೂ ಪೂರ್ವನೇ ಗತಿಸಿದಳು. ಈಕೆಯ ಮಗನು ಈಗ ತಂದೆಯ ಕೆಲಸವನ್ನು ಮಾಡುತ್ತ ಸುಖವಾಗಿದಾನೆ.

ಪದ್ಮಿನಿ.

ಪತ್ಯನುಕೂಲಾಚತುರಾಪ್ರಿಯಂ ವದಾಯಾಸುರೂಪಸಂಪೂರ್ಣಾ
ಸಹಜಸ್ನೇಹರಸಾಸಾಕುಲವನಿತಾಕೇನತುಲ್ಯಾಸ್ಯಾತ್.

ಈ ಪತಿವ್ರತಾತಿಲಕವು ಹನ್ನೆರಡನೆಯ ಶತಾಬ್ದಾರಂಭದಲ್ಲಿ ಜನ್ಮಿಸಿದಳು. ಈಕೆಯ ತಂದೆಯು ಸಿಂಹಳದ್ವೀಪ ನಿವಾಸಿಯಾದ ಹಮ್ಮಿರಸಿಂಹಚವ್ಹಾಣನು. ಈ ಬಾಲೆಯು ಅಸಮಾನರೂಪವತಿಯಾಗಿ ಇದ್ದುದರಿಂದ ತಾಯಿತಂದೆಗಳು ಆಕೆಗೆ ಪದ್ಮಿನಿಎಂದು ಹೆಸರಿಟ್ಟಿದ್ದರು. ಪದ್ಮಿನಿಯು ವಿವಾಹಯೋಗ್ಯಳಾಗಲು ರಾಜಪುತ್ರಸ್ಥಾನದ, ಮೇವಾಡದೇಶಕ್ಕೆ ಅಧಿಪತಿಯಾದ ರಾಣಾಭೀಮಸಿಂಹನು

ಆಕೆಯ ಪಾಣಿಗ್ರಹಣವನ್ನು ಮಾಡಿದನು. ವಿವಾಹಾನಂತರ ರೂಪದಂತೆಯೇ ಸುಗುಣಗಳನ್ನುಳ್ಳವಳಾದಕಾರಣ ಪದ್ಮಿನಿಯು ಪತಿಗೆ ಪ್ರಾಣಸಮಳಾದಳು. *

ಆ ಕಾಲದಲ್ಲಿ ರಾಜ್ಯವು ರಾಣಾಲಕ್ಷ್ಮಣಸಿಂಹನೆಂಬ ಬಾಲರಾಜನ ಪರಿಪಾಲನೆಯಲ್ಲಿತ್ತು. ಆತನು ಕೇವಲ ಬಾಲ್ಯ ದೆಸೆಯಲ್ಲಿದ್ದುದರಿಂದ ಆತನ ಹೆಸರಿನಲ್ಲಿ ಆತನ ಚಿಕ್ಕಪ್ಪನಾದ ಭೀಮಸಿಂಹನೇ ರಾಜ್ಯಪಾಲನೆಯನ್ನು ಮಾಡುತಲಿದ್ದನು. ಭೀಮಸಿಂಹನು ಚತುರನೂ, ಶೂರವರನೂ ಆಗಿದ್ದುದರಿಂದ ರಾಜ್ಯಕ್ಕೆ ಶತ್ರುಭಯವಿಲ್ಲದೆ ಪ್ರಜೆಗಳು ಸುಖವಾಗಿದ್ದರು. ಆದರೆ ಕೆಲವು ವರ್ಷಗಳ ಅನಂತರ ದೆಹಲೀಬಾದಷಹನಾದ ಅಲ್ಲಾವುದ್ದೀನನು ಮೇವಾಡಿಗೆ ಮುಖ್ಯ ಪಟ್ಟಣವಾದ ಚಿತ್ತೂರಿಗೆ ಮುತ್ತಿಗೆಯನ್ನು ಹಾಕಲು ಹೊರಟನು. ಈ ಬಾದಷಹನು ಪದ್ಮಿನಿಯ ರೂಪವನ್ನುಕೇಳಿ ಆಕೆಯನ್ನು ಹೇಗಾದರೂ ತನ್ನ ಬೇಗಮಳನ್ನಾಗಿ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದನು. ಶೂರರಾದ ರಾಜಪುತ್ರರನ್ನು ಜೈಸಿ ಪದ್ಮಿನಿಯನ್ನು ವಶಪಡಿಸಿಕೊಳ್ಳುವುದು ಅಸಾಧ್ಯವು ಎಂದು ಎಣಿಸಿ, ಅಲ್ಲಾವುದ್ದೀನನು ತನ್ನ ಸೇನೆಯೊಡನೆ ಚಿತ್ತೂರುಸಂಸ್ಥಾನದ ಮೇರೆಯಲ್ಲಿ ಶಿಬಿರವನ್ನು ಸ್ಥಾಪಿಸಿ, ಅನೇಕ ದಾಸಿಯರಿಗೆ ದ್ರವ್ಯಾಶೆಯನ್ನು ತೋರಿಸಿ ಗುಪ್ತವಾಗಿ ಪದ್ಮಿನಿಯ ಬಳಿಗೆ ಕಳುಹಿಸಿದನು. ಅವರು ಪದ್ಮಿನಿಯ ಬಳಿಗೆ ಹೋಗಿ ಅಲ್ಲಾವುದ್ದೀನನ ರೂಪವನ್ನೂ, ಐಶ್ವರ್ಯವನ್ನೂ ತಿಳಿಸಿ ಆಕೆಯ ಮನಸ್ಸನ್ನು ತಿರಿಗಿಸಲು ಯತ್ನಿಸಿದರು. ಆದರೆ ಮಹಾಪತಿವ್ರತೆಯಾದ ಪದ್ಮಿನಿಯ ಬಳಿಯಲ್ಲಿ ಅಲ್ಲಾವುದ್ದೀನನ ಕುಯುಕ್ತಿಗಳಾವವೂ ಫಲಿಸಲಿಲ್ಲ. ಬಾದಷಹನು ಅದಕ್ಕೆ ಚಿಂತಿಸಿ, ಪದ್ಮಿನಿಯಲ್ಲಿ ತನಗಿರುವ ದುರುದ್ದೇಶವನ್ನು ಹಿಂತಿರುಗಿಸಿಕೊಳ್ಳಲಾರದೆ, ರಜಪೂತರನ್ನು ಗೆದ್ದು ಪದ್ಮಿನಿಯನ್ನು ವಶಮಾಡಿಕೊಳ್ಳಬೇಕು ಎಂದು ನಿಶ್ಚಯಿಸಿದನು. ಮತ್ತು ಆ ಬಾದಷಹನು, 'ಪದ್ಮಿನಿಯನ್ನು ವಶಮಾಡಿಕೊಳ್ಳುವೆನು. ಇಲ್ಲದಿದ್ದರೆ ರಣರಂಗದಲ್ಲಿ ಪ್ರಾಣವನ್ನು ತ್ಯಜಿಸುವೆನು.' ಎಂದು ಪ್ರತಿಜ್ಞೆಯನ್ನು ಮಾಡಿದನು. ಅನಂತರ ತನ್ನ ಸೈನ್ಯಕ್ಕೆ ಚಿತ್ತೂರುಕೋಟೆಗೆ ಮುತ್ತಿಗೆ ಹಾಕುವಂತೆ ಅಪ್ಪಣೆ ಮಾಡಿದನು.

ಅಲ್ಲಾವುದ್ದೀನನು ತಮ್ಮ ನಗರಕ್ಕೆ ಮುತ್ತಿಗೆಹಾಕಿದನು ಎಂದು ಕೇಳಿ, ಶೌರ್ಯನಿಧಿಗಳಾದ ರಾಜಪುತ್ರರು ಯುದ್ಧಸನ್ನದ್ಧರಾದರು. ಉಭಯ ಪಕ್ಷದ ಸೈನಿಕರಿಗೂ ಯುದ್ಧವು ಪ್ರಾರಂಭವಾಯಿತು. ಯುದ್ಧವು ಕೆಲವು ತಿಂಗಳುಗಳವರೆಗೂ ನಡೆದರೂ ಜಯಾಪಜಯಗಳು ತಿಳಿಯಲಿಲ್ಲ. ಕೊನೆಗೆ ಯವನರ ಸೈನ್ಯವು ಅಸಂಖ್ಯಾತವಾಗಿರುವುದನ್ನೂ, ತಮ್ಮ ಸೈನ್ಯದಲ್ಲಿ ಅನೇಕ ಶೂರರು ಹತರಾದುದನ್ನೂ

---

* ಅನುಕೂಲಾಂ ವಿಪುಲಾಂಗೀಂ ಕುಲಜಾಂ ಕುಶಲಾಂ ಸುಶೀಲ ಸಂಪನ್ನಾಂ।
ಪಂಚಲಕಾರಾಂ ಭಾರ್ಯಾಂ ಪುರುಷಃ ಪುಣ್ಯೋದಯಾಲ್ಲಭತೆ॥

ನೋಡಿ, ಭೀಮಸಿಂಹನು ಪ್ರಜಾಕ್ಷಯವಾಗುವುದನ್ನು ನೋಡಲಾರದೆ, ಡಿಲ್ಲೀಶ್ವರ ನೊಡನೆ ಸಂಧಿಯನ್ನು ಮಾಡಿಕೊಳ್ಳಲು ಎಣಿಸಿ, ತನ್ನ ಮಂತ್ರಿಗಳನ್ನು ಆತನ ಬಳಿಗೆ ಕಳುಹಿಸಿದನು. ಆದರೆ ಅಲ್ಲಾವುದ್ದೀನನು, ಪದ್ಮಿನಿಯನ್ನು ತನ್ನ ಬಳಿಗೆ ಕಳುಹಿಸಿದರೆ ಯುದ್ಧವು ನಿಲ್ಲುವುದು ಎಂತಲೂ, ಇಲ್ಲದಿದ್ದರೆ ಯುದ್ಧವು ಹೀಗೆಯೆ ನಡೆಯುವುದು ಎಂತಲೂ ಹೇಳಿದನು. ರಾಜಪುತ್ರರು ಈ ಮಾತನ್ನು ಕೇಳಿ ಮಲಗಿದ್ದ ಸರ್ಪವು ತನ್ನನ್ನು ತುಳಿದವನ ಮೇಲೆ ರೇಗಿ ಬೀಳುವಂತೆ ವೀರಾವೇಶಪರರಾಗಿ ತಮ್ಮ ಪ್ರಾಣಗಳಿರುವವರೆಗೂ ಶತ್ರುಗಳ ಮೇಲೆ ಬಿದ್ದು ಯುದ್ಧಮಾಡುವೆವು ಎಂದು ಕೋಲಾಹಲಮಾಡಿದರು. ಈ ವಿಧವಾಗಿ ಯುದ್ಧವು ಹದಿನೆಂಟುತಿಂಗಳು ನಡೆಯಿತು. ಆದರೂ ತುರುಷ್ಕರನ್ನು ರಜಪೂತರು ಪಟ್ಟಣದೊಳಕ್ಕೆ ಬರಗೊಡಲಿಲ್ಲ. ಅಲ್ಲಾವುದ್ದೀನನು ರಾಜಪುತ್ರರ ನಿಶ್ಚಯವನ್ನು ತಿಳಿದವನಾಗಿ, ಶತ್ರುಗಳನ್ನು ಗೆದ್ದು ಪದ್ಮಿನಿಯನ್ನು ವಶಮಾಡಿ ಕೊಳ್ಳುವೆನು ಎಂಬ ಪ್ರತಿಜ್ಞೆಯನ್ನು ತ್ಯಜಿಸಬೇಕಾಯಿತು. ಆತನು ಯುದ್ಧವನ್ನು ಬಿಟ್ಟರೂ ಪದ್ಮಿನಿಯ ಮೇಲಿನ ಆಶೆಯನ್ನು ಮಾತ್ರ ಬಿಡಲಾರದೆ, ತನ್ನ ರಾಯಬಾರಿಯ ಮೂಲಕ, "ಪದ್ಮಿನಿಯು ನನಗೆ ದೊರೆಯುವಳೆಂಬ ಆಶೆಯನ್ನು ತೊರೆದೆನು. ಆದರೆ ನೀವು ಆಕೆಯ ರೂಪವನ್ನೊಂದು ಸಲ ತೋರಿಸಿದರೆ ಸೈನ್ಯದೊಡನೆ ನನ್ನ ಪಟ್ಟಣಕ್ಕೆ ಹೊರಟುಹೋಗುವೆನು." ಎಂದು ಭೀಮಸಿಂಹನಿಗೆ ವರ್ತಮಾನವನ್ನು ಕಳುಹಿಸಿದನು. ಈ ಸಮಾಚಾರವನ್ನು ಕೇಳಿ ರಜಪೂತರಿಗೆ ಸ್ವಲ್ಪ ರೋಷವು ಉಂಟಾಯಿತು. ಆದರೆ ಅವರಿಗೆ ಯುದ್ಧದಿಂದ ಬಹು ಬೇಸರಿಕೆಯು ಉಂಟಾಗಿದ್ದುದರಿಂದ ಅವರೆಲ್ಲರೂ ಈ ಸಂದೇಶಕ್ಕೆ ಸಮ್ಮತಿಸಿದರು. ಅನಂತರ ಭೀಮಸಿಂಹನು ಈ ವಿಷಯವನ್ನು ಪದ್ಮಿನಿಗೆ ತಿಳಿಸಲು ಆಕೆಯು, 'ನಾನು ಪ್ರತ್ಯಕ್ಷವಾಗಿ ಮ್ಲೇಚ್ಛನ ಕಣ್ಣೆದಿರಿಗೆ ನಿಲ್ಲಲಾರೆನು.' ಎಂದು ಸ್ಪಷ್ಟವಾಗಿ ತಿಳಿಸಿದಳು. ಭೀಮಸಿಂಹನು ಆಕೆಯು ಬಾದಷಹನ ದೃಷ್ಟಿಗೋಚರ ಳಾಗದಿದ್ದರೆ ರಜಪೂತರಿಗೆ ಉಂಟಾಗುವ ಬಾಧೆಗಳೆಲ್ಲವನ್ನೂ ತಿಳಿಸಲು, ಆಕೆಯು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ತೋರಲು ಒಪ್ಪಿಕೊಂಡಳು. ಆಗ ಭೀಮಸಿಂಹನು, 'ಪದ್ಮಿನಿಯು ನಿನ್ನ ಎದುರಿಗೆ ಬರಲಾರಳು; ಆಕೆಯ ಪ್ರತಿಬಿಂಬವನ್ನು ನಿನಗೆ ತೋರಿಸುವೆನು' ಎಂದು ಹೇಳಿಕಳುಹಿಸಿದನು.

ಅಲ್ಲಾವುದ್ದೀನನು ಯುದ್ಧವನ್ನು ನಿಲ್ಲಿಸಿ ನಿಯಮಿತವಾದ ದಿವಸದಲ್ಲಿ ಒಬ್ಬಿಬ್ಬರು ಸೇವಕರೊಡನೆ ಚಿತ್ತೂರು ಕೋಟೆಯನ್ನು ಪ್ರವೇಶಿಸಿದನು. ರಾಣಾಭೀಮಸಿಂಹನು ಬಾದಷಹನಿಗೆ ತಕ್ಕ ಮರ್ಯಾದೆಯನ್ನು ಮಾಡಿ, ಆತನಿಗೆ ಪದ್ಮಿನಿಯ ಪ್ರತಿಬಿಂಬವನ್ನು ಕನ್ನಡಿಯಲ್ಲಿ ತೋರಿಸಿದನು. ಆತನು ಕೇಳಿದುದಕ್ಕಿಂತಲೂ ಪದ್ಮಿನಿಯು ವಿಶೇಷರೂಪವತಿಯಾಗಿ ಇದ್ದುದರಿಂದ ಆ ಬಾದಷಹನಿಗೆ ಚಿತ್ತ ಚಾಂಚಲ್ಯವು ಉಂಟಾಯಿತು. ಆದರೆ ಆತನು ತನ್ನ ಭಾವನೆಯನ್ನು ಪ್ರಕಾಶಪಡಿ

ಸದೆ, ಹಿಂತಿರುಗಿ ಬರುವಾಗ, ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟವನಂತೆ, 'ಭೀಮ ಸಿಂಹರೇ! ನಾನು ಮಾಡಿದ ತಪ್ಪನ್ನು ಕ್ಷಮಿಸಬೇಕು. ನಾನು ಈದಿನ ಮೊದ ಲ್ಗೊಂಡು ಚಿತ್ತೂರು ಸಂಸ್ಥಾನಾಧೀಶ್ವರರೊಡನೆ ಸ್ನೇಹಭಾವದಿಂದ ಇರಲು ಎಣಿ ಸಿದೆನು. ಇಷ್ಟು ದಿವಸದವರೆಗೂ ನನಗೆ ನಿಮ್ಮ ಯೋಗ್ಯತೆಯು ತಿಳಿಯದ ಕಾರಣ ನಿಮ್ಮಲ್ಲಿ ಶತ್ರುತ್ವವನ್ನು ತೋರಿದೆನು. ಆದರೆ ಇಂದು ನಿಮ್ಮಯೋಗ್ಯತೆ ಯನ್ನು ಪ್ರತ್ಯಕ್ಷವಾಗಿ ತಿಳಿದಮೇಲೆ ನಿಮ್ಮೊಡನೆ ಮಿತ್ರತ್ವವನ್ನು ಬೆಳೆಸುವುದೇ ನನಗೆ ಶ್ರೇಯಸ್ಕರವು ಎಂದು ನಿಶ್ಚಯಿಸಿದೆನು. ಆದುದರಿಂದ ಈ ಪ್ರಥಮದಿವಸ ದಲ್ಲಿಯೇ, ತಾವು ನನ್ನ ಬಿಡಾರಕ್ಕೆ ದಯಮಾಡಿಸಿ, ನಾನು ಮಾಡುವ ಪೂಜೆ ಯನ್ನು ಸ್ವೀಕರಿಸುವಿರಿ ಎಂದು ನಂಬುತ್ತೇನೆ. ನನ್ನ ಈ ಚಿಕ್ಕ ಬಿನ್ನಹವನ್ನು ತಾವು ನಡೆಸಬೇಕು.' ಎಂದು ವಿನಯ ಪೂರ್ವಕವಾಗಿ ನುಡಿದನು. ನಿಷ್ಕಪಟ ಹೃದಯನಾದ ಭೀಮಸಿಂಹನು ಆತನ ಮಾತುಗಳನ್ನು ನಂಬಿ ಮಿತಪರಿವಾರ ದೊಡನೆ ಅಲ್ಲಾವುದ್ದೀನನ ಶಿಬಿರಕ್ಕೆ ಹೊರಟನು.

ದುರ್ಮಾರ್ಗನಾದ ಆ ಬಾದಷಹನು ಭೀಮಸಿಂಹನನ್ನು ನಂಬಿಸಿ, ತನ್ನೊ ಡನೆ ಕರೆದುಕೊಂಡು ಬಂದು, ತನ್ನ ಶಿಬಿರದ ಸಮೀಪದಲ್ಲಿ ತನ್ನ ಸೈನ್ಯವು ಆತ ನನ್ನು ಹಿಡಿದು ಕೈದಿನಲ್ಲಿಡುವಂತೆ ಮಾಡಿದನು. ಅಲ್ಲಾವುದ್ದೀನನು, ರಾಣಾ ತನ್ನ ಹಸ್ತಗತನಾದುದರಿಂದ ಸಂತೋಷದೊಡನೆ ಚಿತ್ತೂರಿಗೆ, "ಪದ್ಮಿನಿಯು ನನ್ನ ಬಳಿಗೆ ಬರದಿದ್ದರೆ, ಭೀಮಸಿಂಹನನ್ನು ಕೊಂದು ಪುನಃ ಚಿತ್ತೂರಿಗೆ ಮುತ್ತಿಗೆಯನ್ನು ಹಾಕುವೆನು." ಎಂದು ವರ್ತಮಾನವನ್ನು ಕಳುಹಿದನು. ರಾಜಪುತ್ರರು ಈ ವಿಷಯವನ್ನು ಕೇಳಿ, ವಿಚಾರಪರೀತ ಚಿತ್ತರಾಗಿ ಕರ್ತವ್ಯವನ್ನು ಯೋಚಿಸಲಾರ ದವರಾದರು! ರಾಣಾಲಕ್ಷ್ಮಣಸಿಂಹನೂ, ಭೀಮಸಿಂಹನ ಹನ್ನೆರಡು ಜನ ಪುತ್ರರೂ ಅಲ್ಪವಯಸ್ಕರಾದುದರಿಂದ ಇಂತಹ ಆಪತ್ಸಮಯದಲ್ಲಿ ತಕ್ಕ ಆಲೋ ಚನೆಯನ್ನು ಹೇಳುವರಾರೂ ಕಾಣಬರಲಿಲ್ಲ. ಪದ್ಮಿನಿಯು ಮಾತ್ರ ಇತರ ಸ್ತ್ರೀಯ ರಂತೆ ಚಿಂತಿಸುತ್ತ ಕುಳಿತುಕೊಳ್ಳದೆ, ಪತಿಯನ್ನು ಕಾರಾಗೃಹವಿಮುಕ್ತನನ್ನಾಗಿ ಮಾಡಲು ತಕ್ಕ ಉಪಾಯವನ್ನು ಆಲೋಚಿಸುತಲಿದ್ದಳು. ಆ ಸಮಯದಲ್ಲಿ ಆಕೆಯ ಸಹೋದರನಾದ ಘೋರಾಸಿಂಹನೂ, ಆತನ ಪುತ್ರನಾದ ಬಾದಳ ಸಿಂಹ ಎಂಬ ಬಾಲವೀರನೂ ಆಕೆಯ ಬಳಿಗೆ ಬರಲು, ಅವರೊಡನೆ ಆಲೋಚಿಸಿ, ಬಹು ವಿಚಿತ್ರವಾದ ಉಪಾಯವನ್ನು ಕಂಡುಹಿಡಿದಳು. ಆಮೇಲೆ ಪದ್ಮಿನಿಯು ಅಲ್ಲಾವುದ್ದೀನನಿಗೆ, "ನೀವು ಭೀಮಸಿಂಹನನ್ನು ಬಿಟ್ಟು, ಡಿಲ್ಲಿಗೆ ಪ್ರಯಾಣಸನ್ನದ್ಧ ರಾದರೆ, ನಾನು ನನ್ನ ದಾಸಿಯರೊಡನೆ ಅಲ್ಲಿಗೆ ಬರುವೆನು. ಆದರೆ ನನ್ನ ದಾಸಿ ಯರ ಮರ್ಯಾದೆಗೂ, ಗೋಷೆಗೂ ಭಂಗವುಂಟಾಗದಂತೆ ನೋಡಿಕೊಳ್ಳಬೇಕು ಎಂದು ನಿಮ್ಮ ಸೈನಿಕರಿಗೆ ಆಜ್ಞಾಪಿಸಬೇಕು.' ಎಂದು ಹೇಳಿಕಳುಹಿಸಿದಳು. ಈ ಮಾತುಗಳನ್ನು ಕೇಳಿ ಬಾದಷಹನು ಪ್ರಫುಲ್ಲಚಿತ್ತನಾದನು. ಆಕೆಯು ಹೇಳಿ

ದುದಕ್ಕೆ ಒಪ್ಪಿಕೊಂಡು ಆಕೆಯನ್ನು ಶೀಘ್ರವಾಗಿ ಬರುವಂತೆ ಹೇಳಿಕಳುಹಿಸಿದನು. ಪದ್ಮಿನಿಯು ಅಲ್ಲಾವುದ್ದೀನನಿಂದ ತಕ್ಕ ಪ್ರತ್ಯುತ್ತರವನ್ನು ಪಡೆದು ಹೊರಡುವುದಕ್ಕೆ ಏಳುನೂರು ಪಲ್ಲಕ್ಕಿಗಳನ್ನು ಸಿದ್ಧಪಡಿಸಿದಳು. ಒಂದೊಂದು ಪಲ್ಲಕ್ಕಿಯಲ್ಲಿ ಮೂರು ಮೂರು ಜನಶೂರರು ಕುಳಿತುಕೊಂಡರು. ಒಂದೊಂದು ಪಲ್ಲಕ್ಕಿಯನ್ನು ಆರಾರು ಜನ ಗುಪ್ತಾಯುಧರಾದ ಶೂರರು ಹೊತ್ತುಕೊಂಡರು. ಪದ್ಮಿನಿಯು ತನ್ನ ಸಹಾಯಾರ್ಥವಾಗಿ ಸೋದರನನ್ನೂ, ಸೋದರ ಪುತ್ರನನ್ನೂ ಕರೆದುಕೊಂಡು ಅಲ್ಲಾವುದ್ದೀನನ ಶಿಬಿರಕ್ಕೆ ಹೊರಟಳು. ಅಲ್ಲಾವುದ್ದೀನನ ಶಿಬಿರವನ್ನು ಸಮೀಪಿಸಿ, ಆತನ ಅನುಜ್ಞೆಯಿಂದ ತನ್ನ ಏಳ್ನೂರು ಪಲ್ಲಕ್ಕಿಗಳೊಡನೆ ಶಿಬಿರ ಮಧ್ಯಪ್ರದೇಶವನ್ನು ನಿರಾತಂಕವಾಗಿ ಪ್ರವೇಶಿಸಿ, ತನ್ನ ಪತಿಯನ್ನು ಒಂದು ಸಲ ನೋಡುವೆನು ಎಂದು ಬಾದಷಹನಿಗೆ ತಿಳಿಸಿ ಭೀಮಸಿಂಹನು ಇರುವ ಸೆರೆಮನೆಗೆ ತನ್ನ ಪಲ್ಲಕ್ಕಿಯನ್ನು ತೆಗೆಯಿಸಿಕೊಂಡು ಹೋದಳು. ಇಷ್ಟರಲ್ಲಿ ಸ್ತ್ರೀಯರಂತೆ ಇದ್ದ ಗುಪ್ತಸೈನಿಕರು ನಿಜಸ್ವರೂಪದೊಡನೆ ಹೊರಟು ಯವನ ಸೈನಿಕರನ್ನು ಸಂಹರಿಸಲಾರಂಭಿಸಿದರು. ಭೀಮಸಿಂಹನು ಇದೆಲ್ಲವೂ ಏನೆಂದು ಕೇಳಲು ಪದ್ಮಿನಿಯು ಆತನನ್ನು ತ್ವರೆಗೊಳಿಸಿ, ತನ್ನೊಡನೆ ಸಿದ್ಧಮಾಡಿ ತಂದಿದ್ದ ಕುದುರೆಗಳ ಮೇಲೆ ತಾವಿಬ್ಬರೂ ಕುಳಿತು, ಯುದ್ಧದ ಗಲಾಟೆಯಲ್ಲಿ ತಪ್ಪಿಸಿಕೊಂಡು ಹೋಗುವುದು ಉಚಿತವೆಂದು ತಿಳಿಸಿದಳು. ಅದರಂತೆಯೇ ಅವರಿಬ್ಬರೂ ತಮ್ಮ ಅಶ್ವಗಳನ್ನು ಅತಿವೇಗವಾಗಿ ನಡೆಸುತ್ತ ಸ್ವಲ್ಪಹೊತ್ತಿಗೆ ಚಿತ್ತೂರನ್ನು ಪ್ರವೇಶಿಸಿದರು. ಘೋರಾಸಿಂಹನ ಆಧಿಪತ್ಯದಲ್ಲಿ ರಜಪೂತಸೈನ್ಯವು ಮ್ಲೇಚ್ಛಸೈನ್ಯವನ್ನು ಸೋಲಿಸಿತು. ಆದರೆ ಅರ್ಜುನ ಸಮಾನನಾದ ಘೋರಾಸಿಂಹನೂ, ಆತನ ಪುತ್ರನೂ ಆ ಸಂಗ್ರಾಮದಲ್ಲಿ ಮೃತರಾದುದರಿಂದ ರಾಜಪುತ್ರರಿಗೆ ವಿಜಯವು ವಿಶೇಷ ಸಂತಸವನ್ನು ಉಂಟುಮಾಡಲಿಲ್ಲ. ಅಲ್ಲಾವುದ್ದೀನನು ಪರಾಜಯಕ್ಕೆ ಚಿಂತಿಸುತ್ತ ಸೈನ್ಯದೊಡನೆ ಡಿಲ್ಲೀ ಮಾರ್ಗವನ್ನು ಹಿಡಿದನು.

ಆಯುದ್ಧವು ಸಮಾಪ್ತವಾದ ಕೆಲವು ಕಾಲಕ್ಕೆ ಅಲ್ಲಾವುದ್ದೀನನು ಪುನಃ ಬಹು ಸೈನ್ಯಸಹಿತನಾಗಿ ಬಂದು ಚಿತ್ತೂರನ್ನು ಮುತ್ತಿಗೆಹಾಕಿದನು. ಈಸಲ ಚಿತ್ತೂರಿನಲ್ಲಿ ಶೂರರು ಬಹುಅಲ್ಪ ಸಂಖ್ಯಾಕರಾಗಿದ್ದುದರಿಂದ, ರಾಜಪುತ್ರರು ತಮಗೆ ಅಪಜಯವು ಉಂಟಾಗುವುದು ಸತ್ಯವು ಎಂದು ತಿಳಿದು, ಪ್ರಾಣಗಳ ಮೇಲಿನ ಆಶೆಯನ್ನು ತೊರೆದು ಯುದ್ಧಮಾಡಲಾರಂಭಿಸಿದರು. ಯುದ್ಧವು ನಡೆಯುತ್ತಿರುವ ಸಮಯದಲ್ಲಿ ಒಂದುದಿನ ರಾತ್ರಿ ಭೀಮಸಿಂಹನ ಸ್ವಪ್ನದಲ್ಲಿ ಗ್ರಾಮದೇವತೆಯು ಪ್ರತ್ಯಕ್ಷಳಾಗಿ, 'ನನಗೆ ಅತಿದಾಹವಾಗಿದೆ. ಹನ್ನೆರಡು ಮಂದಿ ರಾಜಕುಮಾರರ ರಕ್ತವನ್ನು ಪಾನಮಾಡಿಸಿದ ಹೊರತು ತೃಪ್ತಿಯು ಉಂಟಾಗಲಾರದು.' ಎಂದು ಹೇಳಿದಳಂತೆ. ಅದರಂತೆಯೇ ಭೀಮಸಿಂಹನ ಹನ್ನೊಂದುಜನ ಪುತ್ರರೂ ರಣರಂಗದಲ್ಲಿ ವೀರಸ್ವರ್ಗವನ್ನು ಹೊಂದಿದರು.

ಆಗಲೂ ರಜಪೂತರು ಅಧೈರ್ಯವನ್ನು ಹೊಂದಲಿಲ್ಲ. ಪುರುಷರೆಲ್ಲರೂ ಯುದ್ಧದಲ್ಲಿ ವೀರಸ್ವರ್ಗವನ್ನು ಪಡೆಯಲು ನಿಶ್ಚಯಿಸಿ, ಭೀಮಸಿಂಹನ ಕನಿಷ್ಠಪುತ್ರನನ್ನು ಒಬ್ಬ ದಾದಿಯ ಕೈಯಲ್ಲಿ ಕೊಟ್ಟು, ಸಮೀಪದಲ್ಲಿರುವ ಅರಣ್ಯಕ್ಕೆ ಕಳುಹಿಸಿ ಸಿಸೋದಿಯಾವಂಶಕ್ಕೆ ಅಂಕುರವು ಇರುವದು ಎಂದು ತೃಪ್ತಮನಸ್ಕರಾಗಿ ಸಂಗ್ರಾಮರಂಗಕ್ಕೆ ಹೊರಟರು. ಆ ದಿವಸ ಆರಿಹೋಗುವ ದೀಪಕ್ಕೆ ಕಾಂತಿಯು ಹೆಚ್ಚುವಂತೆ, ರಜಪೂತರ ಶೌರ್ಯಾಗ್ನಿಯು ಪ್ರಜ್ವಲಿಸಲು, ಅವರು ಶತ್ರುಗಳೊಡನೆ ಅತ್ಯಂತ ಶೌರ್ಯದೊಡನೆ ಹೋರಾಡಿದರು. ಆದರೆ ಅಸಾರವಾದ ಮ್ಲೇಚ್ಛಸೈನ್ಯದ ಮುಂದೆ ರಾಜಪುತ್ರರು ನಿಲ್ಲಲಾರದೆ ಹೋದರು. ಸಾಯಂಕಾಲವಾಗುವ ಸಮಯಕ್ಕೆ ರಾಜಪುತ್ರರೆಲ್ಲರೂ ವೀರಸ್ವರ್ಗವನ್ನು ಪಡೆದರು. ಜಯಲಕ್ಷ್ಮಿಯು ಬಾದಷಹನನ್ನು ಸೇರಿದಳು.

ಭೀಮಸಿಂಹನೊಡನೆ ಸಕಲ ರಾಜಪುತ್ರರೂ ಹತರಾದರು ಎಂಬ ವಿಷಯವನ್ನು ಪುರಸ್ತ್ರೀಯರು ಕೇಳಿದರು. ಪದ್ಮಿನಿಯೂ, ಮಿಕ್ಕಸ್ತ್ರೀಯರೂ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಚಿತೆಯನ್ನು ಸಿದ್ಧಮಾಡಿ ಅದರಲ್ಲಿ ಎಲ್ಲರೂ ಧುಮುಕಿದರು. (ಈ ವಿಧವಾದ ಅಗ್ನಿಪ್ರವೇಶಕ್ಕೆ ರಜಪೂತರು ಜೋಹಾರ್ ಅಥವಾ ಜಹರವ್ರತವೆಂದು ಹೇಳುತ್ತಾರೆ.) ವಿಜಯಾನಂದದೊಡನೆ ಅಲ್ಲಾವುದ್ದೀನನು ಚಿತ್ತೂರನ್ನು ಪ್ರವೇಶಿಸಲು, ಪುರವೆಲ್ಲವೂ ಚಿತಾಮಯವಾಗಿತ್ತು. ತಾನು ಇಷ್ಟು ಪ್ರಯತ್ನವನ್ನು ಮಾಡಿ ಕೈಕೊಳ್ಳಲು ಎಣಿಸಿದ ಪದ್ಮಿನಿಯ ಶರೀರವು ಭಸ್ಮವಾಗಿ ಇರುವುದನ್ನು ನೋಡಿ ಬಾದಷಹನು ಚಿಂತಾಕ್ರಾಂತನಾದನು. ಯುದ್ಧವು ನಡೆಯುವುದಕ್ಕೆ ಪೂರ್ವವೇ ಭೀಮಸಿಂಹನು ಸ್ತ್ರೀಯರೆಲ್ಲರನ್ನೂ ಒಂದು ಗುಹೆಯೊಳಕ್ಕೆ ಕಳುಹಿಸಿ, ಗುಹೆಯ ದ್ವಾರವನ್ನು ಮುಚ್ಚಿ ಅಗ್ನಿಯನ್ನು ಹಚ್ಚಿ ಯುದ್ಧಕ್ಕೆ ಹೊರಟನು ಎಂದು ಕೆಲವು ಚರಿತ್ರಕಾರರು ಬರೆದಿದಾರೆ.

ಮೊಲ್ಲ.

ಕಿಂಕುಲೇನ ವಿಶಾಲೇನ ವಿದ್ಯಾಹೀನೇನ ದೇಹಿನಾಂ
ದುಷ್ಕುಲಂ ಚಾಪಿವಿದುಷೋ ದೇವೈರಪಿ ಸುಪೂಜ್ಯತೇ.

ಈಕೆಯು ಆಂಧ್ರಭಾಷೆಯಲ್ಲಿ ರಾಮಾಯಣವನ್ನು ರಚಿಸಿದುದರಿಂದ, ಆಂಧ್ರಲೋಕದಲ್ಲಿ ಈಕೆಯ ಕೀರ್ತಿಯು ಶಾಶ್ವತವಾಗಿದೆ. ಈಕೆಯ ತಂದೆಯ ಹೆಸರು ಆತ್ಮಕೂರಿಕೇಶವಯ್ಯಸೆಟ್ಟಿ. ಈಕೆಯ ವಾಸಸ್ಥಳವು ನೆಲ್ಲೂರಿನ ಬಳಿ ಇರುವ ಗೋಪವರ ಎಂಬ ಗ್ರಾಮ. ಈ ರಮಣಿಯು ೧೬ ನೆಯ ಶತಾಬ್ದದಲ್ಲಿ ಇದ್ದಳೆಂದು ಊಹಿಸುತ್ತಾರೆ. ಮೊಲ್ಲ ರಾಮಾಯಣವನ್ನು ಓದಿದವರು ಕವಿತ್ವವು ಮೃದುಮಧುರವಾಗಿರುವುದರಿಂದ ದ್ರಾಕ್ಷಾಪಾಕವುಳ್ಳುದಾಗಿ ಇದೆ ಎಂದು ಹೇಳುತ್ತಾರೆ. ಈಕೆಗೆ ಕವಿತ್ವಸ್ಫೂರ್ತಿಯು ವಿಶೇಷವಾಗಿ ಇದ್ದುದರಿಂದ ಆಶುಕವಿತ್ವವನ್ನು ಸುಲಭವಾಗಿ ಹೇಳುತಿದ್ದಳು. ಈಕೆಯು ಅಭ್ಯಂಜನ ಸ್ನಾನವನ್ನು ಮಾಡಿ ತಲೆಯ ಕೂದಲುಗಳು ಆರುವುದರೊಳಗಾಗಿ ತನ್ನ ಕವಿತೆಯಲ್ಲಿ ಒಂದು ಕಾಂಡವನ್ನು ಮುಗಿಸಿದಳು ಎಂದು ಲೋಕವಾರ್ತೆಯು ಉಂಟು. "ಅಲ್ಲಲ್ಲಿ ಕೆಲವು ವ್ಯಾಕರಣ ದೋಷಗಳು ಇದ್ದರೂ ಒಟ್ಟಿನ ಮೇಲೆ ಈಕೆಯ ಕವಿತ್ವವು ಮೃದು ಮಧುರವಾಗಿಯೂ, ರಸವತ್ತಾಗಿಯೂ ಇದೆ. ಈ ರಾಮಾಯಣವನ್ನು ಹಿಂದೆ ಕೆಲವು ಕಾಲದವರೆಗೂ ಪಾಠಶಾಲೆಗಳಲ್ಲಿ ಬಾಲಕರಿಗೆ ಕಂಠಪಾಠವಾಗಿ ಕಲಿಸುತ್ತಿದ್ದರು. ಪುರುಷರು ರಚಿಸಿದ ಅನೇಕ ಗ್ರಂಥಗಳಿಗಿಂತಲೂ ಇದು ಮನೋಜ್ಞವಾಗಿದೆ." ಎಂದು ಕವಿಚರಿತ್ರಕಾರರು ಈ ರಾಮಾಯಣವನ್ನು ಕುರಿತು ಬರೆದಿದಾರೆ. ಈಗಲೂ ಆಗಾಗ ಈ ರಾಮಾಯಣದ ಕೆಲವು ಭಾಗವನ್ನು ಪ್ರವೇಶ ಪರೀಕ್ಷೆಗೆ ಪಠನೀಯ ಗ್ರಂಥವನ್ನಾಗಿ ಇಡುತ್ತಾರೆ.

ಈಕೆಯು ಕುಲಾಲವಂಶಜಳಾದರೂ ತನ್ನ ವಿದ್ಯಾಪ್ರಭಾವದಿಂದಲ್ಲವೆ ಅಗ್ರವರ್ಣಸ್ಥರಿಗೂ ಮಾನನೀಯಳಾದಳು?

ಕೃಪಾಬಾಯಿ.

ತಮ್ಮ ವಿದ್ಯೆಯಿಂದಲೂ ಸದ್ಗುಣದಿಂದಲೂ ಭರತಖಂಡವನ್ನಲಂಕರಿಸಿದ ಆಧುನಿಕ ಸ್ತ್ರೀಯರಲ್ಲಿ ಕೃಪಾಬಾಯಿಯು ಒಬ್ಬಳು ಈಕೆಯು ೧೮೬೨ ನೆಯ ಇಸವಿಯಲ್ಲಿ ಅಹಮ್ಮದು ನಗರದಲ್ಲಿ ಜನ್ಮಿಸಿದಳು. ಈಕೆಯ ತಂದೆಯ ಹೆಸರು ಹರಿಪಂತು. ತಾಯಿಯ ಹೆಸರು ರಾಧಾಬಾಯಿ. ಇವರು ಪೂರ್ವದಲ್ಲಿ ಮಹಾರಾಷ್ಟ್ರ ಬ್ರಾಹ್ಮಣರಾಗಿದ್ದು ಅನಂತರ ಕ್ರೈಸ್ತವ ಮತವನ್ನು ಅವಲಂಬಿಸಿದರು. ಕೃಪಾಬಾಯಿಯು ಚಿಕ್ಕವಳಾಗಿರುವಾಗಲೇ ತಂದೆಯು ಗತಿಸಿದುದರಿಂದ ಈಕೆಯು ಪಿತೃನುಗ್ರಹ ಸುಖವನ್ನರಿಯಳು. ಬುದ್ಧಿವಂತಳಾದ ರಾಧಾಬಾಯಿಯು ಪತಿವಿಹೀನಳಾದರೂ ತನ್ನ ಸಂತಾನದ ವಿದ್ಯಾಬುದ್ಧಿಗಳಿಗೆ ಲೋಪವು ಉಂಟಾಗದಂತೆ ಸಂಸಾರವನ್ನು ನಿರ್ವಹಿಸುತಲಿದ್ದಳು. ತಾನು ವಿದ್ಯಾವಿಹೀನಳಾದರೂ ಗುಣವತಿಯಾದುದರಿಂದ ಮಕ್ಕಳಿಗೆ ಸದ್ಗುಣಗಳನ್ನು ಬೋಧಿಸುತಲಿದ್ದಳು.

ಕೃಪಾಬಾಯಿಯು ಬಾಲ್ಯದಲ್ಲಿಯೇ ಸೂಕ್ಷ್ಮಬುದ್ಧಿಯುಳ್ಳವಳಾಗಿದ್ದಳು. ಈಕೆಯು ತನ್ನ ಚಿಕ್ಕಣ್ಣನೊಡನೆ ಕುಳಿತು ಓದಬೇಕೆಂದು ಅಪೇಕ್ಷಿಸುತಲಿದ್ದಳು. ಆದರೆ ತನ್ನೊಡನೆ ಈಕೆಯು ಓದಲು ಕುಳಿತರೆ ತನ್ನ ತಪ್ಪುಗಳನ್ನು ತೋರಿಸುವಳೆಂದು ಆ ಬಾಲಕನು ತಂಗಿಯನ್ನು ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಳ್ಳುತಲಿರಲಿಲ್ಲ. ಈಕೆಯ ದೊಡ್ಡಣ್ಣನಾದ ಭಾಸ್ಕರನು ಮಾತ್ರ ತಂಗಿಯ ಮೇಲೆ ಪ್ರೀತಿಯುಳ್ಳವನಾಗಿ ಈಕೆಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಲಿದ್ದನು. ಈಕೆಯು ಸೃಷ್ಟಿ ಸೌಂದರ್ಯವನ್ನು ನೋಡಲು ಬಹು ಕುತೂಹಲವುಳ್ಳವಳಾಗಿದ್ದುದರಿಂದ, ಪ್ರತಿನಿತ್ಯವೂ ಅಣ್ಣನೊಡನೆ ಹೋಗಿ ಪರ್ವತಗಳನ್ನೂ, ವನಗಳನ್ನೂ, ಉಪವನಗಳನ್ನೂ ನೋಡಿಬರುತಲಿದ್ದಳು. ಹೀಗೆ ಕೆಲವುಕಾಲ ಕಳೆಯಲು ಭಾಸ್ಕರನು ಮೃತನಾದನು. ತನ್ನನ್ನು ಪ್ರಾಣಸಮಾನಳನ್ನಾಗಿ ಪ್ರೀತಿಸುತಲಿದ್ದ ಭ್ರಾತೃವಿನ ಮರಣದಿಂದ ಕೃಪಾಬಾಯಿಯು ಅತ್ಯಂತ ದುಃಖಿತೆಯಾದಳು. ದುಃಖಭರದಿಂದ ಈಕೆಯ ಶರೀರವು ವ್ಯಾಧಿಗ್ರಸ್ತವಾಯಿತು. ಆಗ ಈಕೆಯ ದುಃಖವನ್ನು ಹೋಗಲಾಡಿಸುವದಕ್ಕಾಗಿ ಬೊಂಬಾಯಿ ನಗರದಲ್ಲಿರುವ ಜನಾನಾ ಮಿಷನರೀ ಪಾಠಶಾಲೆಗೆ ಕಳುಹಿಸಿದರು. ಈಕೆಯು ಅಲ್ಲಿಗೆ ಹೋದಮೇಲೆ ಆ ಪಾಠಶಾಲೆಯವರು ಈಕೆಯನ್ನು ಪರೀಕ್ಷಿಸಿ ಅಲ್ಲಿರುವ ವಿದ್ಯಾರ್ಥಿನಿಯರೆಲ್ಲರಿಗಿಂತಲೂ ಈಕೆಯು ಹೆಚ್ಚಾಗಿ ಓದಿದ್ದುದರಿಂದ, ಈಕೆಯನ್ನು ಯಾವ ತರಗತಿಗೂ ಸೇರಿಸದೆ

ಪ್ರತ್ಯೇಕವಾಗಿ ಪಾಠಗಳನ್ನು ಕಲಿಸುವಂತೆ ಏರ್ಪಾಟು ಮಾಡಿದರು. ಕೃಪಾಬಾಯಿಯು ಆ ಪಾಠಶಾಲೆಯಲ್ಲಿ ಓದುತಲಿದ್ದ ಸಮಯದಲ್ಲಿ, ವೈದ್ಯ ವಿದ್ಯಾನಿಪುಣಳಾದ ಒಬ್ಬ ಅಮೆರಿಕಾ ಸ್ತ್ರೀಯೊಡನೆ ಸ್ನೇಹವು ಉಂಟಾಯಿತು. ಅಂದಿನಿಂದ ಈಕೆಗೆ ವೈದ್ಯವಿದ್ಯೆಯನ್ನು ಅಭ್ಯಸಿಸಬೇಕು ಎಂಬ ಅಪೇಕ್ಷೆಯು ಉಂಟಾಯಿತು.

ಆಕೆಗೆ ವೈದ್ಯವಿದ್ಯೆಯಲ್ಲಿರುವ ಆಸಕ್ತಿಯನ್ನು ನೋಡಿ ಆಕೆಯ ಹಿತ ಜನರು ಆಕೆಯನ್ನು ಯೂರೋಪ್ ಖಂಡಕ್ಕೆ ಕಳುಹಿಸಬೇಕು ಎಂದು ಎಣಿಸಿದರು. ಕೃಪಾಬಾಯಿಯ ಶರೀರ ಸ್ಥಿತಿಗೆ ಪಶ್ಚಿಮ ದೇಶದ ಗಾಳಿಯು ಅಹಿತಕರವಾದುದೆಂದು ವೈದ್ಯರು ಅಭಿಪ್ರಾಯಪಟ್ಟದ್ದರಿಂದ ಆಕೆಯು ಆ ಆಲೋಚನೆಯನ್ನು ಬಿಟ್ಟಳು. ಕೆಲವು ದಿವಸಕ್ಕೆ ಮದರಾಸಿನಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಸ್ತ್ರೀಯರಿಗೆ ಸಹ ವೈದ್ಯವಿದ್ಯೆಯನ್ನು ಕಲಿಸಲು ಏರ್ಪಾಡಾದುದರಿಂದ ಕೃಪಾಬಾಯಿಯು ಮದರಾಸಿಗೆ ಹೋದಳು. ಅಲ್ಲಿ ಆಕೆಯು ಒಬ್ಬೊಂಟಿಗಳಾದುದರಿಂದ, ತದ್ಗ್ರಾಮ ನಿವಾಸಿಗಳಾದ ರೆವರೆಂಡ್ ಸತ್ಯನಾರ್ಥಯವರ ಮನೆಯಲ್ಲಿ ವಾಸಮಾಡುತಲಿದ್ದಳು. ಈ ಸತ್ಯನಾರ್ಥಯವರು ದೊಡ್ಡ ಮನುಷ್ಯರಾಗಿದ್ದರು. ಆತನ ಪುತ್ರಿಯೂ, ಗೃಹಿಣಿಯೂ ಗುಣವತಿಯರಾದುದರಿಂದ ಅವರು ಕೃಪಾಬಾಯಿಯನ್ನು ಪ್ರೀತಿಯೊಡನೆ ನೋಡಿಕೊಳ್ಳುತಲಿದ್ದರು. ಈಕೆಯು ಅವರ ಮನೆಯಲ್ಲಿದ್ದು ಕಾಲವನ್ನು ಸುಖವಾಗಿ ಕಳೆದಳು. ಒಂದು ವರ್ಷವು ಕಳೆದ ಅನಂತರ, ಸಂವತ್ಸರಾಂತದಲ್ಲಿ ನಡೆದ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿಯೂ ಈಕೆಯು ಕೃತಾರ್ಥಳಾದಳು. ಪರೀಕ್ಷಕನು ಆಕೆಯ ಸೂಕ್ಷ್ಮಬುದ್ಧಿಯನ್ನು ನೋಡಿ ಶ್ಲಾಘಿಸಿದನು.

ಯದಿಸಂತಿಗುಣಾಃಪುಂಸಾಂ ವಿಕಸಂತ್ಯೇವತೇಸ್ವಯಂ ।
ನಹಿಕಸ್ತೂರಿ ಕಾಮೋದಃ ಶಪಥೇನ ನಿವಾರ್ಯತೆ ॥

ಕೃಪಾಬಾಯಿಯು ವಿದ್ಯೆಯಲ್ಲಿ ಅತ್ಯಾಸಕ್ತಿಯುಳ್ಳವಳಾದರೂ, ಆಕೆಯ ಶರೀರವು ಮಾತ್ರ ಆ ಶ್ರಮೆಯನ್ನು ಸಹಿಸುವಷ್ಟು ದೃಢವಾದುದಾಗಿರಲಿಲ್ಲ. ಪರೀಕ್ಷಾನಂತರ ಈಕೆಯು ಪುನಃ ವ್ಯಾಧಿಯಿಂದ ಪೀಡಿತಳಾದಳು. ಆಕೆಯ ರೋಗವು ಗುಣವಾಗಲಿಲ್ಲ. ಆದಕಾರಣ ಆಕೆಯು ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು.

ರೆವರೆಂಡ್ ಸತ್ಯನಾರ್ಥಯವರ ಪುತ್ರನಾದ ನಾಮ್ಯುಯಲ್ ಸತ್ಯನಾರ್ಥ ಎಂಬಾತನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಕೃತಾರ್ಥನಾಗಿ ೧೮೮೧ನೆಯ ವರ್ಷದಲ್ಲಿ ಸ್ವದೇಶಕ್ಕೆ ಬಂದನು. ನಾಮ್ಯುಯಲ್ ಸತ್ಯನಾಥನೂ, ಕೃಪಾಬಾಯಿಯೂ ಒಂದು ಮನೆಯಲ್ಲಿಯೇ ವಾಸವಾಗಿದ್ದುದ

ರಿಂದ ಒಬ್ಬರ ಸದ್ಗುಣಗಳನ್ನು ಒಬ್ಬರು ನೋಡಿ ಪರಸ್ಪರ ಅನುರಾಗವುಳ್ಳವ ರಾದರು. ಅನಂತರ ಸ್ವಲ್ಪಕಾಲದಲ್ಲಿಯೇ ಅವರ ವಿವಾಹವು ನಡೆಯಿತು. ವಿವಾಹಾನಂತರ ಕೃಪಾಬಾಯಿಯ ಪತಿಗೆ ಉದಕಮಂಡಲದಲ್ಲಿ ಒಂದು ಕಲಾಶಾಲೆಯಲ್ಲಿ ಮುಖ್ಯೋಪಾಧ್ಯಾಯ ಪದವಿಯು ದೊರೆಯಿತು. ಈ ನೂತನ ದಂಪತಿಗಳು ಅಲ್ಲಿಗೆ ಹೋದರು. ಅಲ್ಲಿ ನೀಲಗಿರಿಪ್ರಾಂತದ ಗಾಳಿ ಯಿಂದ ಕೃಪಾಬಾಯಿಯ ಶರೀರವು ಸ್ವಲ್ಪ ಆರೋಗ್ಯದಲ್ಲಿ ಇತ್ತು.

ಅಲ್ಲಿರುವ ಸಮಯದಲ್ಲಿ ಕೃಪಾಬಾಯಿಯು ಮಹಮ್ಮದೀಯ ಬಾಲಕಿಯರಿ ಗಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದಳು. ಆ ಪಾಠಶಾಲೆಯು ಈಗಲೂ ಕ್ರಮವಾಗಿ ನಡೆಯುತಲಿದೆಯಂತೆ. ಆಕೆಯು ಉದಕಮಂಡಲದಲ್ಲಿರುವ ಕಾಲ ದಲ್ಲಿಯೇ ಆಂಗ್ಲೇಯ ವಾರ್ತಾಪತ್ರಿಕೆಗಳಿಗೂ, ಇತರ ಕೆಲವು ಮಾಸಪತ್ರಿಕೆ ಗಳಿಗೂ ಉಪನ್ಯಾಸಗಳನ್ನು ಬರೆಯಲು ಪ್ರಾರಂಭಿಸಿದಳು. ಪ್ರಶಂಸನೀಯ. ಗಳಾದ ಆ ಉಪನ್ಯಾಸಗಳ ದೆಸೆಯಿಂದ ಕೃಪಾಬಾಯಿಯ ಕೀರ್ತಿಯು ನಾಲ್ಕು ಕಡೆಯಲ್ಲಿಯೂ ಹರಡಿಕೊಳ್ಳಲಾರಂಭಿಸಿತು.

೧೮೮೪ ನೆಯ ಇಸವಿಯಲ್ಲಿ ಸತ್ಯನಾಥನನ್ನು ರಾಜಮಹೇಂದ್ರವರಕ್ಕೆ ವರ್ಗಮಾಡಿದರು. ಅಲ್ಲಿಗೆ ಬಂದನಂತರ ಕೃಪಾಬಾಯಿಯ ರುಗ್ಣತೆಯು ಹೆಚ್ಚಾಗುತ ಬಂದಿತು. ಅಲ್ಲಿದ್ದ ಒಂದು ವರ್ಷಕಾಲವೂ ವ್ಯಾಧಿಯಿಂದ ಬಾಧಿತ ಳಾಗಿದ್ದರೂ ಉಪನ್ಯಾಸಗಳನ್ನು ಬರೆಯುತಲೇ ಇದ್ದಳು. ಅನಂತರ ಇವರು ಕುಂಭಕೋಣಕ್ಕೆ ಹೋದರು. ಅಲ್ಲಿಗೆ ಬಂದನಂತರ ಈಕೆಗೆ ಕವಿತ್ವ ಸ್ಫೂರ್ತಿಯೂ, ಪ್ರಭಂದರಚನೇಚ್ಛೆಯೂ ಉಂಟಾದುವು. ಆಕೆಯು ಬರೆದ ಪದ್ಯಗಳನ್ನು ಓದಿದರೆ ಆಕೆಗೆ ಇರುವ ಆಂಗ್ಲೇಯಭಾಷಾ ಕವಿತ್ವಸ್ಫೂರ್ತಿಯು ತಿಳಿಯಬರುವುದೆಂದು ತದ್ಜ್ಞರು ನುಡಿಯುತ್ತಾರೆ.

೧೮೮೬ ನೆಯ ವರ್ಷದಲ್ಲಿ ಆಕೆಯ ಪತಿಯನ್ನು ಮದುರಾಸಿಗೆ ವರ್ಗ ಮಾಡಿದರು. ಅಲ್ಲಿಗೆ ಬಂದಮೇಲೆ ಪತಿಯ ಅಭೀಷ್ಟಾನುಸಾರವಾಗಿ ತನ್ನ ಬಾಲ್ಯಕಾಲದ ಅನೇಕ ವಿಷಯಗಳನ್ನು ಜ್ಞಾಪಕ ಮಾಡಿಕೊಂಡು, ಅವುಗಳೊಡನೆ ತನ್ನ ಕಲ್ಪನೆಗಳನ್ನು ಸೇರಿಸಿ 'ಸಗುಣಮ್ಮ' ಎಂಬ ಪ್ರಬಂಧವನ್ನು ಇಂಗ್ಲೀಷು ಭಾಷೆಯಲ್ಲಿ ರಚಿಸಿದಳು. ಆ ಪುಸ್ತಕವನ್ನು ಆಂಧ್ರಭಾಷೆಗೆ ತರ್ಜುಮೆ ಮಾಡಿದಾರೆ. ಅದರಲ್ಲಿ ಈ ದೇಶದ ಕೈಸ್ತವರ ಗೃಹಸ್ಥಿತಿಗಳನ್ನೂ, ನದೀ ಪರ್ವತಾರಣ್ಯಗಳ ಸೌಂದರ್ಯವನ್ನೂ ಚೆನ್ನಾಗಿ ವರ್ಣಿಸಿ ಇದೆ. ಈ ಗ್ರಂಥವು ಪೂರ್ತಿಯಾದ ಮೇಲೆ ಆಕೆಗೆ ಒಬ್ಬ ಮಗಳು ಹುಟ್ಟಿ ಅಲ್ಪಕಾಲದಲ್ಲಿಯೇ ದೈವಾಧೀನಳಾದಳು. ಆ ದುಃಖದಿಂದ ಆಕೆಯು ಉತ್ಸಾಹಹೀನಳಾದಳು.

ಆಕೆಯ ಶರೀರದಲ್ಲಿರುವ ವ್ಯಾಧಿಯು ಇನ್ನೂ ಹೆಚ್ಚಾಯಿತು. ಆಗ ಆಕೆಯ ಪತಿಯು ಸತಿಯನ್ನು ಕರೆದುಕೊಂಡು ಬೊಂಬಾಯಿಗೆ ಹೋದನು. ಪ್ರಯಾಣಾಯಾಸದಿಂದ ಆಕೆಯ ವ್ಯಾಧಿಯು ಮತ್ತಷ್ಟು ಹೆಚ್ಚಾಗಲು, ಮರಳಿ ಮದರಾಸಿಗೆ ಕರೆತಂದು, ಅಲ್ಲಿ ಆಂಗ್ಲೇಯ ವೈದ್ಯಶಾಲೆಯಲ್ಲಿ ಅನೇಕ ದಿವಸಗಳು ಔಷಧೋಪಚಾರಗಳನ್ನು ಮಾಡಿದಮೇಲೆ ವ್ಯಾಧಿಯು ಸ್ವಲ್ಪ ಕಡಮೆಯಾಯಿತು. ಆದರೆ ವೈದ್ಯರು ವ್ಯಾಧಿಯು ಅಸಾಧ್ಯವಾದುದೆಂದು ಕೃಪಾಬಾಯಿಗೆ ತಿಳಿಸಿದರು. ಆಕೆಯು ಅದಕ್ಕೆ ಅಣುಮಾತ್ರವೂ ಚಿಂತಿಸಲಿಲ್ಲ.

ಮಾರನೆಯವರ್ಷ ಕೃಪಾಬಾಯಿಯ ಆಪ್ತರು ಇಬ್ಬರು ಗತಿಸಿದುದರಿಂದ ಆಕೆಯ ವ್ಯಾಧಿಯು ಪುನಃ ಹೆಚ್ಚಾಯಿತು. ದೇಹಸ್ಥಿತಿಯು ಈ ಪರಿಯಾಗಿದ್ದರೂ ಆಕೆಯು ಲಕ್ಷ್ಯಮಾಡದೆ 'ಕಮಲಾ' ಎಂಬ ಒಂದು ಪ್ರಬಂಧವನ್ನು ಬರೆಯಲಾರಂಭಿಸಿದಳು. ನೀಲಗಿರಿಯ ಗಾಳಿಯು ಆಕೆಗೆ ಸ್ವಲ್ಪ ಆರೋಗ್ಯವನ್ನು ಉಂಟುಮಾಡುವದೇನೋ ಎಂದು ಆಕೆಯನ್ನು ಅಲ್ಲಿಗೆ ಕಳುಹಿಸಿದರು. ಆಕೆಯ ರೋಗವು ಹೆಚ್ಚಾಗುತಲಿತ್ತೇ ಹೊರತು ಕಡಮೆಯಾಗಲಿಲ್ಲ. ನೀಲಗಿರಿಯಲ್ಲಿ ಇರುವಾಗಲೇ ಆ ಗ್ರಂಥವನ್ನು ಪೂರ್ತಿಮಾಡಿದಳು. ಆ ಪ್ರಬಂಧವು ಒಂದು ಮಾಸಪತ್ರಿಕೆಯಲ್ಲಿ ಪ್ರಚುರಿತವಾಯಿತು. ಅದರಿಂದ ಆಕೆಗೆ ಬಹು ಸಂತೋಷವು ಉಂಟಾಯಿತು. ಕೃಪಾಬಾಯಿಯು ಭಾರತರಮಣಿಯಾದರೂ ಆಕೆಯು ಆಂಗ್ಲೇಯ ಭಾಷೆಯಲ್ಲಿ ಬರೆದ ಈ ಗ್ರಂಥವನ್ನು ಓದಿದರೆ, ಯಾರೋ ಒಬ್ಬ ಪ್ರವೀಣನಾದ ಆಂಗ್ಲೇಯ ಗ್ರಂಥಕಾರನಿಂದ ರಚಿತವಾಗಿರಬಹುದು ಎಂದು ತೋರುವುದಂತೆ. ಈ ನಾರೀರತ್ನವು ೧೮೯೪ ನೆಯ ಇಸವಿ ಆಗಸ್ಟು ೮ ನೆಯ ತಾರೀಖಿನಲ್ಲಿ, ತನ್ನ ೩೨ ನೆಯ ವಯಸ್ಸಿನಲ್ಲಿ ಪರಲೋಕವನ್ನು ಸೇರಿದಳು. ದೇಶದ ದೌರ್ಭಾಗ್ಯದೆಸೆಯಿಂದ ಸ್ತ್ರೀಯರಿಗೆ ಉಪಕೃತವಾದ ಅನೇಕ ಗ್ರಂಥಗಳನ್ನು ರಚಿಸಲಿಚ್ಛೆಯುಳ್ಳ ಕೃಪಾಬಾಯಿಯು ಅಕಾಲಮೃತ್ಯುವದನಕ್ಕೆ ಗ್ರಾಸವಾದಳು.

ಪೃಥ್ವೀರಾಜನ ಭಾರ್ಯೆಯು.

ಗುಣೋಭೂಷಯತೇರೂಪಂ ಶೀಲಂಭೂಷಯತೇಕುಲಂ.

ಈಕೆಯು ಸಿಸೋದಿಯಾ ವಂಶದಲ್ಲಿ ಹುಟ್ಟಿ ಸುಕ್ತಾವತ ವಂಶಸ್ಥಾಪಕನಾದ ಸುಕ್ತರಾಜನ ಪುತ್ರಿ ಎಂತಲೂ, ರಾಠೋರ್ ವಂಶದಲ್ಲಿ ಪ್ರಸಿದ್ಧನಾದ ಪೃಥಿವೀರಾಜನ ಪತ್ನಿ ಎಂತಲೂ ಪೂರ್ವ ಚರಿತ್ರೆಗಳಿಂದ ತಿಳಿದುಬರುತ್ತದೆ. ಈಕೆಯು ಅಕ್ಬರ್ ಬಾದಷಹನ ಕಾಲದಲ್ಲಿದ್ದಳಾದುದರಿಂದ ಹದಿನಾರನೆಯ ಶತಾಬ್ದದಲ್ಲಿ ಇದ್ದಳೆಂದು ತಿಳಿದುಕೊಳ್ಳಬಹುದು.

ಅಕ್ಬರ್ ಬಾದಷಹನು ಇತರ ತರುಷ್ಕ ಪ್ರಭುಗಳಂತೆ ತನ್ನ ಪ್ರಜೆಗಳನ್ನು ಬಾಧಿಸದೆ, ಅವರವರ ಧರ್ಮಾನುಸಾರವಾಗಿ ನಡೆಯಲು ಅಭ್ಯಂತರವನ್ನುಂಟು ಮಾಡದೆ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ ಇದ್ದುದರಿಂದ ಈತನು ಧರ್ಮಾತ್ಮನೆಂದು ಪ್ರಸಿದ್ಧನಾದನು. ಈ ಬಾದಷಹನು ತನಗೂ, ತನ್ನ ಪ್ರಜೆಗಳಿಗೂ ಉಲ್ಲಾಸವಾಗಿರುವುದಕ್ಕಾಗಿ ವರ್ಷಂಪ್ರತಿಯಲ್ಲಿಯೂ ತನ್ನ ನಗರದಲ್ಲಿ ಒಂದು ಉತ್ಸವವನ್ನು ಮಾಡಿಸುತಲಿದ್ದನು. ಒಂದು ಸಲ ನಡೆದ ಆ ಉತ್ಸವದ ಕಡೆಯ ದಿನದಲ್ಲಿ, ಸ್ತ್ರೀಯರೆಲ್ಲರೂ ಸೇರಿ ವಿನೋದವಾಗಿ, ಕೆಲವರು ಹಾಡುತ್ತಲೂ, ಕೆಲವರು ನಾಟ್ಯವಾಡುತ್ತಲೂ, ಇನ್ನು ಕೆಲವರು ಮಾರುತ್ತಲೂ, ಮತ್ತೆ ಕೆಲವರು ಕೊಳ್ಳುತ್ತಲೂ ಇದ್ದರು. ಆ ಉತ್ಸವವನ್ನು ಮಾಡುವವರೂ, ನೋಡುವವರೂ ಎಲ್ಲರೂ ಸ್ತ್ರೀಯರೇ ಆಗಿದ್ದರು. ಅಲ್ಲಗೆ ಪುರುಷರು ಪ್ರವೇಶಿಸಕೂಡದು ಎಂದು ಬಾದಷಹನು ಆಜ್ಞಾಪಿಸಿದ್ದನು. ಆದಕಾರಣ ಅಲ್ಲಿ ಬಾದಷಹನ ಅಂತಃಪುರ ರಮಣಿಯರೂ, ಇತರ ರಾಜಮಹಿಳೆಯರೂ ನಿರಾಟಂಕವಾಗಿ ಸಂಚರಿಸುತಲಿದ್ದರು. ಆ ದಿವಸ ಬಾದಷಹನು ಮಾತ್ರ ಸ್ತ್ರೀವೇಷವನ್ನು ಧರಿಸಿ, ಗುಪ್ತವಾಗಿ ಅಲ್ಲಿ ಸುಳಿದಾಡುತಲಿದ್ದನು.

ಆ ದಿವಸ ಪೃಥಿವೀರಾಜನ ಪತ್ನಿಯು ಉತ್ಸವವನ್ನು ನೋಡುವುದಕ್ಕಾಗಿ ಅಲ್ಲಿಗೆ ಬಂದಿದ್ದಳು. ಅತಿರೂಪವತಿಯಾದ ಆಕೆಯನ್ನು ನೋಡಿ ಪ್ರಚ್ಛನ್ನ ವೇಷದಲ್ಲಿದ್ದ ಬಾದಷಹನು ಮೋಹಿಸಿದನು. ಆಕೆಯು ಗೃಹಾಭಿಮುಖವಾಗಿ ಹೋಗುವ ಮಾರ್ಗದಲ್ಲಿ ಬಾದಷಹನು ಆಕೆಯ ಬರುವಿಕೆಯನ್ನು ನಿರೀಕ್ಷಿಸುತ ಲಿದ್ದನು. ಆ ಸಾಧ್ವಿಯು ಉತ್ಸವವನ್ನು ನೋಡಿಕೊಂಡು ತನ್ನ ಅರಮನೆಗೆ

ಹೋಗುವುದಕ್ಕಾಗಿ ಬಾದಷಹನು ಕಾದಿದ್ದ ಮಾರ್ಗದಲ್ಲಿ ಹೋಗುತಲಿದ್ದಳು. ಆಕೆಯು ತನ್ನ ಸಮೀಪಕ್ಕೆ ಬಂದೊಡನೆಯೆ ಬಾದಷಹನು ಆಕೆಯನ್ನು ಅಡ್ಡಗಿಸಿದನು. ತನ್ನನ್ನು ಅಡ್ಡಕಟ್ಟಿದವನು ಅಕ್ಬರನೆಂತಲೂ, ದುರುದ್ದೇಶದೊಡನೆ ತನ್ನ ದಾರಿಯನ್ನು ಅಡ್ಡಗಿಸಿದನೆಂತಲೂ ಆಕೆಯು ತಿಳಿದುಕೊಂಡಳು. ಮತ್ತು ಕಪಟ ವೇಷಧರನಾದ ಈ ಡಿಲ್ಲೀಶ್ವರನು ಈ ವಿಧನಾಗಿ ತನ್ನಂತಹ ಎಷ್ಟುಮಂದಿ ಪತಿವ್ರತೆಯರ ಪಾತಿವ್ರತ್ಯವನ್ನು ಕೆಡಿಸಲು ಯತ್ನಿಸಿದನೋ ಎಂದು ಎಣಿಸಿ ಕ್ರೋಧಾವೇಶಪರವಶಳಾಗಿ, ಕಣ್ಣುಗಳಿಂದ ಕಿಡಿಗಳನ್ನು ಸುರಿಸುತ್ತ, ತನ್ನ ಗುಪ್ತ ಖಡ್ಗವನ್ನು ಹಿರಿದು ಅತಿ ಧೈರ್ಯದಿಂದ 'ಪವಿತ್ರವಾದ ಕ್ಷತ್ರಿಯವಂಶಕ್ಕೆ ಕಳಂಕವನ್ನು ಉಂಟುಮಾಡಲು ಎಣಿಸಿದ ದುಷ್ಟನನ್ನು ನನ್ನ ಪಾತಿವ್ರತ್ಯ ರಕ್ಷಣಾರ್ಥವಾಗಿ ಈ ಖಡ್ಗಕ್ಕೆ ಬಲಿಕೊಡುವೆನು.' ಎಂದು ನುಡಿಯಲು, ವಿಜ್ಞಾನಿಯಾದ ಆ ಬಾದಷಹನು ತನ್ನ ಅಜ್ಞಾನಕ್ಕೆ ಲಜ್ಜಿಸಿ ಆ ಸಾಧ್ವೀಮಣಿಗೆ ನಮಸ್ಕರಿಸಿದನು. ಅಂದಿನಿಂದ ಅಕ್ಬರನು ಆಕೆಯನ್ನು ಸೋದರಿಯಂತೆ ಭಾವಿಸುತಲಿದ್ದನು.

ಪನ್ನಾ.

ಮೇವಾಡದೇಶದ ರಾಜನಾದ ಸಂಗ್ರಾಮಸಿಂಹನು ಮೃತನಾದ ಅನಂತರ ಆತನ ಮೂವರು ಪುತ್ರರಲ್ಲಿ ಇಬ್ಬರು ಅಲ್ಪಕಾಲಮಾತ್ರ ರಾಜ್ಯಸುಖವನ್ನು ಅನುಭವಿಸಿ ಮೃತರಾದರು. ಮೂರನೆಯವನಾದ ಉದಯಸಿಂಹನು ಐದು ವರ್ಷದ ಬಾಲಕನಾದುದರಿಂದ ಇನ್ನೂ ಧಾತ್ರಿಯ ಪೋಷಣೆಯಲ್ಲಿಯೇ ಇದ್ದನು. ಈತನ ಧಾತ್ರಿಯ ಹೆಸರು ಪನ್ನಾ. ಈಕೆಗೆ ರಾಜಧಾತ್ರೀತ್ವವು ವಂಶಪರಂಪರೆಯಾಗಿ ಬರುತಲಿತ್ತು. ಈಕೆಯ ಸುಗುಣಸ್ವರೂಪವನ್ನು ತಿಳಿಸುವ ಸಲುವಾಗಿಯೋ ಏನೋ ಎಂಬಂತೆ, ಈಕೆಯ ಜನನೀಜನಕರು ಈಕೆಗೆ ನವರತ್ನಗಳಲ್ಲಿ ಒಂದಾದ 'ಪನ್ನಾಪಚ್ಚೆ' ಯ ಹೆಸರನ್ನು ಇಟ್ಟರು! ಹೆಸರಿಗೆ ತಕ್ಕಂತೆಯೇ ಪನ್ನೆಯು ಗುಣವತಿಯಾದಳು.

ಪೃಥ್ವಿವೀರಾಜನ ದಾಸೀಪುತ್ರನಾದ ಬನಬೀರನೆಂಬುವನು ಉದಯಸಿಂಹನ ಹೆಸರಿನಲ್ಲಿ ರಾಜ್ಯವನ್ನು ಪಾಲಿಸುವಂತೆ ಏರ್ಪಾಟಾಯಿತು.* ಬನಬೀರನು

* ನೀಚಃ ಪೂಜ್ಯಪದಸ್ಥೋಪಿ ಸ್ವನೀಚತ್ವಂ ನಮುಂಚತಿ । ದೇವತಾಕೃತಿ ಮೇತ್ಯಾಪಿ ನಕಾಶಿನ್ಯಂತ್ಯಜೇಚ್ಛಿಲಾ॥ ನೀಚನಿಗೆ ಪೂಜ್ಯಪದವಿಯು ಬಂದರೂ ತನ್ನ ನೀಚತನವನ್ನು ಬಿಡುವುದಿಲ್ಲ. ಕಲ್ಲಿಗೆ ದೇವರ ಆಕಾರವು (ವಿಗ್ರಹ) ಬಂದರೂ ಅದು ಗಟ್ಟಿಯಾಗಿರುವುದಲ್ಲದೆ ಮೆತ್ತಗಾಗಿರುವುದಿಲ್ಲ!

ಜನ್ಮದಂತೆಯೇ ನೀಚಗುಣಗಳುಳ್ಳವನಾಗಿದ್ದುದರಿಂದ, ರಾಜ್ಯಾಧಿಕಾರಕ್ಕೆ ತಾನು ಅನರ್ಹನಾದರೂ ಅದೃಷ್ಟವಶದಿಂದ ರಾಜ್ಯಪಾಲನವು ಲಭಿಸಿದುದಕ್ಕೆ ತೃಪ್ತನಾಗಿರದೆ, ತನಗೆ ರಾಜ್ಯಾಧಿಕಾರವು ಶಾಶ್ವತವಾಗಿರುವ ಬಗೆಯನ್ನು ಆಲೋಚಿಸಿದನು. ರಾಜಕುಮಾರನನ್ನು ಕೊಂದ ಹೊರತು ತನ್ನ ಮನೋರಥವು ಸಫಲವಾಗಲಾರದು ಎಂದೆಣಿಸಿ, ಆ ಕಾರ್ಯವನ್ನು ತಾನು ಒಬ್ಬನೇ ಏಕಾಂತವಾಗಿ ಮಾಡಲು ನಿಶ್ಚಯಿಸಿಕೊಂಡನು. ತನ್ನ ಮನೋಭಾವವು ಸ್ವಲ್ಪ ಹೊರಗಾದರೂ ರಜಪೂತ ಸರದಾರರು ತನ್ನನ್ನು ಕತ್ತರಿಸಿ ಹಾಕುವರು ಎಂದರಿತು, ಎಲ್ಲರಲ್ಲಿಯೂ ಬಹು ಮರ್ಯಾದೆಯಿಂದ ನಡೆದುಕೊಳ್ಳತಲಿಪ್ಪನು. ಆರಿಗೂ ಬನಬೀರನ ವಿಷಯದಲ್ಲಿ ಸಂದೇಹವು ಉಂಟಾಗಲಿಲ್ಲ.

ಪಾಪಾಲೋಚನೆಗಳು ರಹಸ್ಯವಾಗಿರುವುದು ಅಸಂಭವವಾದ ಕಾರಣ, ಈ ಬನಬೀರನ ಕುತಂತ್ರಗಳನ್ನೆಲ್ಲ ಹೇಗೋ ಒಬ್ಬ ನಾಪಿತನು ತಿಳಿದುಕೊಂಡನು. ರಾಜಭಕ್ತನಾದ ಈ ನಾಪಿತನು ಬಹು ಯುಕ್ತಿಯಿಂದ ಬನಬೀರನ ದುರಾಲೋಚನೆಗಳನ್ನೆಲ್ಲ ಗ್ರಹಿಸುತಲಿದ್ದನು.

ಒಂದು ದಿವಸ ರಾತ್ರಿ ಅರಮನೆಯೆಲ್ಲ ನಿಶ್ಶಬ್ದವಾಗಿತ್ತು. ಪನ್ನೆಯು ರಾಜಪುತ್ರನನ್ನೂ, ರಾಜಪುತ್ರನ ಸಮ ವಯಸ್ಕನಾದ ತನ್ನ ಪುತ್ರನನ್ನೂ ಮಲಗಿಸಿ, ತಾನು ಒಂದುಕಡೆ ಕುಳಿತುಕೊಂಡು ಯಾವುದನ್ನೋ ಹೊಲಿಯುತಲಿದ್ದಳು. ದ್ವಾರದಲ್ಲಿ ಯಾರೋ ನಡೆದಂತೆ ಕಾಲಿನ ಸಪ್ಪಳ ಕೇಳಿ ಬರಲು ಆಧಾತ್ರಿಯು ಎದ್ದು ನೋಡಿದಳು. ಮೇಲೆ ಹೇಳಿದ ನಾಪಿತನು ಅತಿವೇಗವಾಗಿ ಬರುತಲಿದ್ದನು. ಅವನು ಬರುವ ಬಗೆಯನ್ನು ನೋಡಿ ಪನ್ನೆಯು "ನೀನು ಇಷ್ಟು ತ್ವರೆಯಾಗಿ ಬಂದು, ಹುಚ್ಚನಂತೆ ಆತುರಭಾವವನ್ನು ತೋರಲು ಕಾರಣವೇನು? ಅಪ್ರಿಯವೇನಾದರೂ ಉಂಟೋ?" ಎಂದು ಕೇಳಿದಳು. ಅದಕ್ಕವನು "ಹೌದು ಅತಿಕ್ರೂರವಾದ ಕಾರ್ಯವು ನಡೆಯುವುದು. ಇನ್ನೊಂದು ಗಳಿಗೆಯೊಳಗೆ ಬನಬೀರನು ರಾಜಕುಮಾರನನ್ನು ಕೊಲ್ಲಲು ಇಲ್ಲಿಗೆ ಬರುವನು." ಎನಲು, ಪನ್ನೆಯು ಬೆಚ್ಚಿಬಿದ್ದು "ನಾನು ಇಷ್ಟು ದಿವಸವೂ ಉಂಟಾಗಬಹುದೆಂದು ಭೀತಿಗೊಳ್ಳುತಲಿದ್ದ, ವಿಪತ್ತು ಈ ಹೊತ್ತು ಪ್ರಾಪ್ತವಾಯಿತು. ಆ ದುಷ್ಟನಲ್ಲಿ ನಾನು ಮೊದಲಿನಿಂದಲೂ ಅನುಮಾನವುಳ್ಳವಳಾಗಿಯೇ ಇದ್ದೆನು. ಆದರೂ ಹೆಂಗಸಾದುದರಿಂದ ಏನೂ ಮಾಡಲಾರದೆ ಸುಮ್ಮನೆ ಇದ್ದೆನು. ಯಾವುದು ಹೇಗಾದರೂ ಈಗ ರಾಜಪುತ್ರನನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ." ಎಂದಳು. ನಾಪಿತನು 'ಈ ಕಾರ್ಯವು ಬಹು ದುರ್ಘಟವಾದುದು. ನಿನಗೆ ಯಾವುದಾದರೂ ಒಂದು ಉಪಾಯವು ತೋರಿದರೆ ಹೇಳು. ನೀನು ಎಂತಹ ಕಾರ್ಯವನ್ನು ಹೇಳಿದರೂ ನಾನು ನಿರ್ವಹಿಸಬಲ್ಲೆನು." ಎಂದು ನುಡಿದನು. ಪನ್ನೆಯು ಸ್ವಲ್ಪ ಯೋಚಿಸಿ "ರಾಜಕುಮಾರನನ್ನು ಸುರಕ್ಷಿತವಾದ ಸ್ಥಳಕ್ಕೆ

ಕೊಂಡುಹೋಗುವೆನು" ಎಂದಳು. ನಾಪಿತನು "ಆ ಪಾಪಾತ್ಮನು ಈ ದಿವಸ ಯಾವ ಬಾಲಕನನ್ನೂ ಅರಮನೆಯಿಂದ ಹೊರಗೆ ತೆಗೆದುಕೊಂಡು ಹೋಗ ಕೂಡದೆಂದು ಅಪ್ಪಣೆಯನ್ನು ಮಾಡಿರುವನು" ಎಂದನು. ಅದಕ್ಕೆ ಪನ್ನೆಯು ಇಂತೆಂದಳು. "ನಾನು ರಾಜಪುತ್ರನನ್ನು ಒಂದು ಬುಟ್ಟಿಯಲ್ಲಿ ಇಟ್ಟು ಮೇಲೆ ಕಸವನ್ನು ಹಾಕಿಕೊಡುವೆನು. ನೀನು ಅದನ್ನು ಕೊಂಡುಹೋಗಿ ಸುರಕ್ಷಿತವಾದ ಸ್ಥಳದಲ್ಲಿ ಸೇರಿಸು." ಅದಕ್ಕೆ ನಾಪಿತನು "ಬನಬೀರನು ಸ್ವಲ್ಪ ಹೊತ್ತಿನಲ್ಲಿ ಇಲ್ಲಿಗೆ ಬರುತ್ತಾನೆ. ರಾಜಪುತ್ರನು ಇಲ್ಲಿಲ್ಲದ ಪಕ್ಷಕ್ಕೆ, ಆ ದುರಾತ್ಮನು ಸೇವಕ ರನ್ನು ಕಳುಹಿಸಿ ಬಾಲಕನನ್ನು ತರಿಸುವನು. ಹಾಗಾದರೆ ರಾಜಪುತ್ರನ ಪ್ರಾಣ ವನ್ನು ನಾವು ಕಾಪಾಡಲಾರೆವು" ಎಂದನು. ಆಗ ಪನ್ನೆಯು ಸ್ವಲ್ಪ ಯೋಚಿಸಿ ಬಹು ಗಂಭೀರವಾಗಿ "ಇದಕ್ಕಾಗಿ ಇಷ್ಟು ಚಿಂತಿಸಲೇಕೆ? ಅವನು ಇಲ್ಲಿಗೆ ಬಂದಾಗ ರಾಜಕುಮಾರನು ಇಲ್ಲಿಲ್ಲ ಎಂಬ ವಿಷಯವೇ ಆತನಿಗೆ ತಿಳಿಯಲಾರದು. ರಾಜಪುತ್ರನ ಬಟ್ಟೆಗಳನ್ನೂ, ಒಡವೆಗಳನ್ನೂ ನನ್ನ ಮಗನಿಗೆ ತೊಡಿಸಿ, ಆ ಹಾಸಿಗೆಯ ಮೇಲೆ ಮಲಗಿಸುವೆನು! ನನ್ನ ಪುತ್ರನ ಮರಣದಿಂದ ಮೇವಾಡ ದೇಶದ ಅರಸನೂ, ನಮ್ಮ ಪ್ರಭುವೂ ಆದ ಈ ಬಾಲಕನು ಸುರಕ್ಷಿತನಾಗುವನು. ಆದಕಾರಣ ಈ ಕಾರ್ಯವು ನನಗೆ ಸಮ್ಮತವಾದುದು." ಎಂದಳು. ಪನ್ನೆಯು ದೃಢನಿಶ್ಚಯಳಾಗಿ ನುಡಿದ ವಾಕ್ಯಗಳನ್ನು ಕೇಳಿ ನಾಪಿತನು ನಿಶ್ಚೇಷ್ಟಿತನಾಗಿ ನಿಂತನು. ಪನ್ನೆಯು ತ್ವರೆಯಲ್ಲಿ ರಾಜಕುಮಾರನನ್ನು ಒಂದು ಬುಟ್ಟಿಯಲ್ಲಿ ಇಟ್ಟು ಮೇಲೆ ಎಲೆಗಳನ್ನೂ, ಕಸವನ್ನೂ, ತುಂಬಿ "ಈ ಬುಟ್ಟಿಯನ್ನು ಶೀಘ್ರ ವಾಗಿ ಕೊಂಡು ಹೋಗು" ಎಂದಳು. ಇದನ್ನೆಲ್ಲ ನೋಡಿ ನಾಪಿತನು, ಪನ್ನೆಯ ಧೈರ್ಯವನ್ನೂ, ರಾಜಭಕ್ತಿಯನ್ನೂ ಕೊಂಡಾಡಿ, ಆಕೆಯಲ್ಲಿ ಕರುಣೆಯುಳ್ಳವ ನಾಗಿ "ಎಲೌ! ಪನ್ನೆ! ನೀನು ಇಷ್ಟು ಸಾಹಸಕಾರ್ಯವನ್ನು ಏಕೆ ಮಾಡುವೆ? ಸ್ವಲ್ಪ ಯೋಚಿಸಿ ನೋಡು" ಎಂದನು. ಅದಕ್ಕೆ ಆಕೆಯು "ಯೋಚಿಸಲೇಕೆ? ಯೋಚಿಸಿಯೇ ನನ್ನ ಕರ್ತವ್ಯವನ್ನು ನಾನು ಮಾಡಿದೆನು. ನೀನು ಇಂತಹ ಆಟಂಕಗಳನ್ನು ಹೇಳುತ್ತ ಕಾಲಹರಣ ಮಾಡಬೇಡ" ಎಂದಳು.

ತಾನು ಹೇಳುವ ಮಾತುಗಳಿಗೆ ಪನ್ನೆಯು ಕಿವಿಗೊಡದೆ ಹೋದುದರಿಂದ, ಇನ್ನು ಸಾವಕಾಶಮಾಡಿದರೆ ರಾಜಪುತ್ರನು ಹತನಾಗುವನು ಎಂದು ತಿಳಿದು ಆ ನಾಪಿತನು ಬುಟ್ಟಿಯನ್ನು ತಲೆಯ ಮೇಲೆ ಇರಿಸಿಕೊಂಡು ಅರಮನೆಯನ್ನು ಬಿಟ್ಟು ಹೊರಟು ಹೋದನು. ಪನ್ನೆಯು ರಾಜಪುತ್ರನ ವಸ್ತ್ರಾಭರಣಗಳನ್ನು ತನ್ನ ಕುಮಾರನಿಗೆ ಧರಿಸಿ, ರಾಜಪುತ್ರನ ಶಯ್ಯೆಯಮೇಲೆ ಮಲಗಿಸಿ, ನಿದ್ರೆ ಮಾಡುತಲಿದ್ದ ಪುತ್ರನ ಸಮೀಪದಲ್ಲಿ ಕುಳಿತು, ಬನಬೀರನ ಬರುವಿಕೆಯನ್ನು ನಿರೀಕ್ಷಿಸುತಲಿದ್ದಳು. ಒಂದು ಗಳಿಗೆಯೊಳಗೆ ಆ ಕಾಲಸ್ವರೂಪನು ಅಲ್ಲಿಗೆ ಬಂದು

ಸದಯಹೃದಯನಂತೆ "ರಾಜಪುತ್ರನ ಶರೀರದಲ್ಲಿ ಆರೋಗ್ಯವಾಗಿದೆಯೇ?" ಎಂದು ಪ್ರಶ್ನೆಯನ್ನು ಮಾಡಿದನು. ಪನ್ನೆಯು ಮೌನವಾಗಿರಲು, ಬಾಲಕನನ್ನು ನೋಡುವೆನು ಎಂದು ಶಯ್ಯೆಯ ಸಮೀಪಕ್ಕೆ ಹೋಗಿ ಮಲಗಿರುವವರು ಯಾರು ಎಂದು ವಿಚಾರಿಸದೆ, ಆ ಆರ್ಭಕನ ಹೃದಯದಲ್ಲಿ ತನ್ನ ಖಡ್ಗವನ್ನು ಚುಚ್ಚಿ ಓಡಿಹೋದನು! ಆ ಬಾಲಕನು ಒಂದು ಚೀತ್ಕಾರವನ್ನು ಮಾಡಿ ಪ್ರಾಣವನ್ನು ಬಿಟ್ಟನು. ಆ ಚೀತ್ಕಾರಧ್ವನಿಯು ರಾಜಭವನದಲ್ಲೆಲ್ಲ ಕೇಳಿಬಂದುದರಿಂದ, ಅಲ್ಲಿದ್ದವರು ಎಲ್ಲರೂ ಎಚ್ಚತ್ತು ಬಾಲಕನು ಇದ್ದ ಸ್ಥಳಕ್ಕೆ ಬಂದರು.

ಅವರೆಲ್ಲರೂ ಅಲ್ಲಿಗೆ ಬಂದು ನೋಡಲು, ರಾಜಪುತ್ರನ ಶರೀರವೆಲ್ಲರಕ್ತಮಯವಾಗಿ ಆ ಬಾಲಕನು ಮೃತನಾಗಿದ್ದನು. ಸಮೀಪದಲ್ಲಿಯೇ ಪನ್ನೆಯು ಮೂರ್ಛಿತಳಾಗಿ ಬಿದ್ದಿದ್ದಳು. ಮೃತನಾದ ಬಾಲಕನು ರಾಜಕುಮಾರನೆಂದು ಅವರೆಲ್ಲರೂ ದುಃಖಿತರಾದರು. ಪನ್ನೆಯು ಎಚ್ಚೆತ್ತ ಮೇಲೆ ರಾಜಪುತ್ರನನ್ನು ಕೊಂದವರು ಯಾರು ಎಂದು ಕೇಳಲು, ಆ ಧಾತ್ರಿಯು 'ಯಾರೋ ಒಬ್ಬ ಕರಿಯ ಮನುಷ್ಯನು ಕೊಂದನು' ಎಂದಳು. ಎಲ್ಲರೂ ರಾಜಪುತ್ರನನ್ನು ಕೊಂದವರು ಯಾರಾಗಿರಬಹುದು ಎಂದು ಯೋಚಿಸಿ, ಸಾಕ್ಷಿಗಳಾರೂ ಇಲ್ಲದುದರಿಂದ ಕೊಲೆ ಮಾಡಿದವನನ್ನು ತಿಳಿಯಲಾರದೆ ಹೋದರು. ಪನ್ನೆಯು ಅಲ್ಲಿಂದ ಹೊರಟು ರಾಜಕುಮಾರನು ಇದ್ದಸ್ಥಳಕ್ಕೆ ಹೋಗಿ ಆ ಬಾಲಕನು ಯೌವನಸ್ಥನಾಗುವವರೆಗೂ ಪೋಷಿಸಿದಳು. ಈ ವಿಷಯವೆಲ್ಲ, ರಜಪೂತರಿಗೆ ತಿಳಿಯಲು, ಬನಬೀರನನ್ನು ದೇಶದಿಂದ ಹೊರಡಿಸಿ, ಉದಯಸಿಂಹನಿಗೆ ಪಟ್ಟಾಭಿಷೇಕವನ್ನು ಮಾಡಿದರು. ರಾಜಭಕ್ತಿಯುತಳಾದ ಪನ್ನೆಯ ದೆಸೆಯಿಂದ ಸಂಗ್ರಾಮಸಿಂಹನ ವಂಶವು ನಿಂತಿತು. ಪನ್ನೆಯ ಕೀರ್ತಿಯು ಭರತಖಂಡದಲ್ಲಿ ಶಾಶ್ವತವಾಗಿ ನೆಲೆಗೊಂಡಿತು. ಉದಯಸಿಂಹನು ಪನ್ನೆಯನ್ನು ಮಾತೆಯಂತೆ ಭಾವಿಸಿ ಪೂಜಿಸುತಲಿದ್ದನು.

ಖಡ್ಗತಿಕ್ಕನನ ಪತ್ನಿ.



ಅಮೃತಂ ಸದ್ಗುಣಾಭಾರ್ಯಾ.

ಈ ಯುವತೀ ರತ್ನವು ೧೩ ನೆಯ ಶತಾಬ್ದದಲ್ಲಿ ಇದ್ದಳು. ಈಕೆಯ ಹೆಸರು ಯಾರಿಗೂ ತಿಳಿಯದು. ಆ ಕಾಲದಲ್ಲಿ ನೆಲ್ಲೂರು ಮಂಡಲದ ಘೂರೆಯಾದ ಸೂರ್ಯವಂಶಜನಾದ ಮನುಮ ಸಿದ್ಧಿಯ ಆಸ್ಥಾನದಲ್ಲಿ ಕವಿತಿಕ್ಕನ, ಖಡ್ಗತಿಕ್ಕನ, ಕಾರ್ಯತಿಕ್ಕನ ಎಂಬ ಮೂವರು ಸೋದರರು ಇದ್ದರು. ಇವರು ಲೌಕಿಕ ಬ್ರಾಹ್ಮಣರು. ಇವರಲ್ಲಿ ಖಡ್ಗತಿಕ್ಕನನಿಗೆ ಈ ಚರಿತ್ರನಾಯಕಿಯು ಭಾರ್ಯೆಯು. ಈತನು ತನ್ನ ಪರಾಕ್ರಮದಿಂದ ರಾಜನಿಂದಲೂ, ಜನರಿಂದಲೂ ಬಹು ಮನ್ನಣೆಯನ್ನು ಹೊಂದುತಲಿದ್ದನು.

ಈ ಯುವತಿಯು ವಿದ್ಯಾವತಿಯೂ, ಗುಣವತಿಯೂ ಆಗಿದ್ದಳು. ಈಕೆಯು ಪತಿಶ್ರೇಯವನ್ನೇ ಸದಾ ಅಪೇಕ್ಷಿಸುತಲಿದ್ದಳು. ಆತನು ಮಾಡುವ ಕಾರ್ಯಗಳಲ್ಲಿ ಯಾವುದಾದರೂ ಮಾಡಬಾರದ ಕೆಲಸಗಳಿದ್ದರೆ ಅಂತಹ ಕೆಲಸಗಳನ್ನು ತನ್ನ ಚಾತುರ್ಯದಿಂದ ಮಾಡಗೊಡಿಸದೆ ಇರುತಲಿದ್ದಳು.

ಒಂದಾನೊಂದು ಸಮಯದಲ್ಲಿ ಮನುಮಸಿದ್ಧಿರಾಜನ ಮೇಲೆ ಶತ್ರುಗಳು ದಂಡೆತ್ತಿ ಬಂದರು. ಆಗ ಸ್ವಲ್ಪ ಸೇನೆಯನ್ನು ತೆಗೆದುಕೊಂಡು ಖಡ್ಗತಿಕ್ಕನನು ಶತ್ರುಗಳೊಡನೆ ಯುದ್ಧಮಾಡಲು ಹೊರಟನು. ತಿಕ್ಕನನು ಎಷ್ಟು ಶೂರನಾದರೂ ಶತ್ರು ಸೇನೆಯು ತನ್ನ ಸೇನೆಗಿಂತಲೂ ಅತ್ಯಧಿಕವಾಗಿರುವುದರಿಂದ, ಆತನ ಶೌರ್ಯದಿಂದ ಏನೂ ಪ್ರಯೋಜನವುಂಟಾಗಲಿಲ್ಲ. ಆತನು ವೈರಿಗಳೊಡನೆ ಸ್ವಲ್ಪ ಹೊತ್ತು ಕಾದಾಡಿ, ತನಗೆ ಜಯವು ದೊರೆಯುವುದಿಲ್ಲವೆಂದು ತಿಳಿದು ಶತ್ರುಗಳಿಗೆ ಬೆನ್ನು ತೋರಿಸಿ ರಣರಂಗದಿಂದ ಮನೆಗೆ ಬಂದನು.

ತನ್ನ ಪತಿಯು ವೈರಿಗಳಿಂದ ಪರಾಜಿತನಾಗಿ, ಮನೆಗೆ ಬರುತಲಿರುವನು ಎಂದು ಕೇಳಿ, ಮಾನವತಿಯಾದ ಆತನ ಕಾಂತೆಯು ಸಮಯೋಚಿತ ಜ್ಞಾನವುಳ್ಳವಳಾದುದರಿಂದ, ಮರೆಯಾದ ಸ್ಥಳದಲ್ಲಿ ಸ್ನಾನಕ್ಕೆ ನೀರನ್ನು ಇಟ್ಟು, ಸ್ನಾನಜಲವಿರಿಸಿದ್ದ ಹಂಡೆಗೆ ಅರಿಸಿನದ ಮುದ್ದೆಯನ್ನು ಹಚ್ಚಿ, ಹೆಂಗಸರು ಸ್ನಾನ ಮಾಡಲು ಅವಶ್ಯಕವಾದ ವಸ್ತುಗಳನ್ನು ಅಲ್ಲಿಟ್ಟು, ಪತಿಯು ಬಂದ ಅನಂತರ, ತಿರಸ್ಕಾರ ಭಾವದೊಡನೆ 'ಸ್ನಾನ ಮಾಡಿರಿ' ಎಂದಳು. ಖಡ್ಗತಿಕ್ಕ

ನನು ಹೆಂಡತಿಯ ಮುಖಭಾವವನ್ನು ನೋಡಿ ಏನೂ ಹೇಳದೆ ಸ್ನಾನಕ್ಕೆ ಹೋದನು. ಅಲ್ಲಿ ಸ್ತ್ರೀಯರು ಸ್ನಾನಮಾಡುವ ಮರೆಯಾದ ಸ್ಥಳದಲ್ಲಿ ತನಗೆ ನೀರು ಇಟ್ಟಿರುವುದನ್ನೂ, ಅರಿಸಿನದ ಮುದ್ದೆಯನ್ನೂ ನೋಡಿ, ಆತನು ಮನಸ್ಸಿನಲ್ಲಿ, ಇದೆಲ್ಲವು ತಾನು ಪರಾಜಿತನಾಗಿ ಬಂದುದಕ್ಕಾಗಿ ಪತ್ನಿಯು ಮಾಡಿದ ಕೆಲಸವೆಂದು ಅರಿತು, ಏನೂ ತಿಳಿಯದವನಂತೆ ತನ್ನ ಭಾರ್ಯೆಯನ್ನು ಕರೆದು ಇದೆಲ್ಲವು ಏನೆಂದು ಕೇಳಿದನು. ಆಗ ಆ ವೀರಪತ್ನಿಯು ಆತನಿಗೆ ಪೌರುಷವು ಉಂಟಾಗುವುದಕ್ಕಾಗಿ "ಶತ್ರುಗಳಿಗೆ ಬೆನ್ನು ತೋರಿಸಿ ಓಡಿಬಂದರೆ ಶೂರರು ನಿನ್ನನ್ನು ಪರಿಹಾಸಮಾಡಿ ನಗದಿರುವರೆ? ಇದುವರೆಗೂ ಅತ್ತೆಸೊಸೆಯರಾದ ನಾವು ಇಬ್ಬರು ಹೆಂಗಸರು ಮನೆಯಲ್ಲಿದ್ದೆವು. ಈಗ ಮೂರು ಜನರಾದೆವು. ಇನ್ನು ಸ್ನಾನ ಮಾಡುವಾಗ ಇವೆಲ್ಲವೂ ಏಕೆ ಎಂದು ಕೇಳಲೇಕೆ?" ಎಂಬ ಅರ್ಥವುಳ್ಳ ಒಂದು ಪದ್ಯವನ್ನು ಸ್ವಭಾಷೆ (ಆಂಧ್ರಭಾಷೆ) ಯಲ್ಲಿ ಹೇಳಿದಳು. ಈ ವಾಕ್ಯಗಳನ್ನು ಕೇಳಿದೊಡನೆಯೇ ಆತನು ಬಹು ಲಜ್ಜಿತನಾಗಿ ಯುದ್ಧರಂಗಕ್ಕೆ ಹೋಗಿ ಬಹು ಪರಾಕ್ರಮದೊಡನೆ ಯುದ್ಧವನ್ನು ಮಾಡಿ ಕೀರ್ತಿಯನ್ನು ಪಡೆದನು. ಆಂಧ್ರದೇಶದಲ್ಲಿ ಪೂರ್ವಕಾಲದಲ್ಲಿ ಇಂತಹ ಪೂಜನೀಯರಾದ ವೀರಮಾತೆಯರೂ, ವೀರಪತ್ನಿಯರೂ, ವೀರಭಗಿನಿಯರೂ ಇದ್ದುದರಿಂದಲೇ ಬ್ರಾಹ್ಮಣರಲ್ಲಿಯೂ ಕ್ಷಾತ್ರತೇಜವು ಪ್ರಕಾಶಿಸುತಲಿತ್ತು ಎಂದು ಹೇಳಲು ಸಂಶಯವಿಲ್ಲ.

ತರಗೊಂಡ ವೆಂಗಮಾಂಬ.

ಈಕೆಯು ವಸಿಷ್ಠಗೋತ್ರಜನೂ, ನಂದವೈದಿಕ ಬ್ರಾಹ್ಮಣನೂ ಆದ ಕೃಷ್ಣಯ್ಯನ ತನಯಳು. ಈಕೆಯ ನಿವಾಸವು ಕಡಪ ಡಿಸ್ಟ್ರಿಕ್ಟಿನಲ್ಲಿ ಇರುವ ತರಿಗೊಂಡ. ಈಕೆಯು ಆಂಧ್ರ ವಿದ್ವಾಂಸಳು. ಸಂಸ್ಕೃತದಲ್ಲಿ ಈಕೆಗೆ ಸ್ವಲ್ಪ ಪರಿಚಯವು ಉಂಟು. ಈಕೆಯು ಬಾಲವಿತಂತು. ವೇದಾಂತಗ್ರಂಥ ಪಠನದಿಂದಲೂ ಗ್ರಂಥರಚನೆಯಿಂದಲೂ ವೆಂಗಮಾಂಬನ ಕೀರ್ತಿಯು ಆಂಧ್ರದೇಶದಲ್ಲೆಲ್ಲ ವ್ಯಾಪಿಸಿತು. ಅದರಿಂದ ಜನರು ಆಕೆಯಲ್ಲಿ ವಿಶ್ವಾಸವುಳ್ಳವರಾಗಿ ನನ್ಮಾದೇಶಾಚಾರ ಪ್ರಕಾರವಾಗಿ ಅನೇಕ ಕಥೆಗಳನ್ನು ಹೇಳಲಾರಂಭಿಸಿದರು. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಉದಹರಿಸುವೆನು.

ವೆಂಗಮಾಂಬನು ಗ್ರಂಥರಚನೆಯನ್ನು ಮಾಡುತ್ತ ಏಕಾಂತವಾಗಿ ಒಂದು ಕೊಠಡಿಯಲ್ಲಿ ಕುಳಿತುಕೊಳ್ಳುತಲಿದ್ದಳು. ಅಲ್ಲಿಂದ ಆಕೆಯು ಹೊರಕ್ಕೆಬಂದ ಕೂಡಲೆ ಆಕೆಯ ಮುಖದಲ್ಲಿಯೂ ಶರೀರದಲ್ಲಿಯೂ ಸುಗಂಧವು ಕಾಣಬರುತಲಿತ್ತು. ಇದರಿಂದ ಆಕೆಯ ಅತ್ತಿಗೆಯರಿಗೆ ಸಂಶಯವು ತೋರಿ, ಒಂದು ದಿವಸ ಆ ಕೊಠಡಿಯ ದ್ವಾರದಲ್ಲಿ ಕಾದುಕೊಂಡಿದ್ದರಂತೆ. ಅನಂತರ ಸ್ವಲ್ಪ ಹೊತ್ತಿಗೆ ಒಳಗೆ ಯಾರೋ ಪುರುಷನು ನಕ್ಕುಂತೆಯೂ, ನೃತ್ಯಮಾಡಿದಂತೆಯೂ ಅವರಿಗೆ ಕೇಳಿಬಂತಂತೆ. ಆಮೇಲೆ ಅವರು ತಮ್ಮ ಪತಿಗಳನ್ನು ಕರೆದು ತಾವು ಕೇಳಿದ ಸಂಗತಿಗಳನ್ನು ತಿಳಿಸಲು, ಅವರೆಲ್ಲರೂ ಸೇರಿ ವೆಂಗಮಾಂಬನನ್ನು ಕದವನ್ನು ತೆರೆಯಬೇಕೆಂದು ಕೇಳಿದರು. ಆಕೆಯು ನಿರ್ಭಯದೊಡನೆ ಕದವನ್ನು ತೆರೆಯಲು, ಅವರೆಲ್ಲರು ಒಳಗೆಹೋಗಿ ಕೊಠಡಿಯನ್ನೆಲ್ಲ ಶೋಧಿಸಿದರು. ಅಲ್ಲಿ ಯಾವ ಪುರುಷನೂ ಇರಲಿಲ್ಲ. ಆಕೆಯನ್ನು ಕೇಳಲು "ಶ್ರೀ ಕೃಷ್ಣನು ವಿನಹ ನನ್ನ ಕೊಠಡಿಗೆ ಮತ್ತಾರು ಬರುವರು" ಎಂದು ಹೇಳಿದಳಂತೆ. ಇವೆಲ್ಲವು ಆಕೆಯ ಭಕ್ತಿಯನ್ನು ತಿಳಿಸುವ ಕಥೆಗಳಾಗಿವೆ.

ಆಕೆಯು ಶಿರೋಜಗಳನ್ನು ತೆಗೆಸದೆ ತನ್ನ ಜೀವಿತಕಾಲವನ್ನೆಲ್ಲ ಕಳೆದಳಂತೆ. ಆಕೆಯು ಬಹುದಿವಸಗಳವರೆಗೂ ಶಿರೋಜಗಳನ್ನು ತೆಗೆಯಿಸಿಕೊಳ್ಳಲಿಲ್ಲವಾದುದರಿಂದ ಆಕೆಯ ಸೋದರರನ್ನು ಪ್ರಜೆಗಳು ಬಹಿಷ್ಕರಿಸುವೆವು ಎಂದು ಹೇಳಿದರು. ಅನಂತರ ಶಂಕರಸ್ವಾಮಿಗಳು ಆ ವೂರಿಗೆ ಬರಲು ಜಗದ್ಗುರುವಿಗೆ ಈ ವಿಷಯವನ್ನು ವಿನ್ನವಿಸಿದರು. ಆಮೇಲೆ ಸ್ವಾಮಿಗಳು ವೆಂಗಮಾಂಬನನ್ನು ಕರೆಸಿ, "ನಿನ್ನ ಶಿರೋಜಗಳನ್ನು ತೆಗೆಸಿಕೊಳ್ಳಬೇಕು." ಎಂದು ಹೇಳಿದರು. ಆಕೆಯು, "ದೇವರು ಕೊಟ್ಟಬ್ಬನ್ನು ನಾವು ಏಕೆ ತೆಗೆಯಬೇಕು? ಅದರಿಂದ ಪರಪುರುಷ ಸ್ಪರ್ಶದೋಷವು ಉಂಟಾಗುವುದು. ಮತ್ತು ಒಂದುಸಲ ಶಿರೋಜಗಳನ್ನು ತೆಗೆಸಿದರೆ ಪುನಃ ಅವು ಬೆಳೆಯುವವು. ಆದಕಾರಣ ಆ ಕಾರ್ಯವು ಪರಮೇಶ್ವರನಿಗೆ ಅಸಮ್ಮತವಾದುದು ಎಂದು ಸ್ಪಷ್ಟವಾಗಿ ತಿಳಿಯಬರುವದು, ಮತ್ತು ಪರಮೇಶ್ವರನಿಗೆ ಇಷ್ಟವಿಲ್ಲದ ಕಾರ್ಯವನ್ನು ನಾವು ಮಾಡಬಾರದು." ಎಂದು ಹೇಳಿದಳು. ಆದರೆ ಗುರುಸ್ವಾಮಿಯು ಸುಮ್ಮನಿರದೆ ಬಂಧುಗಳಿಗೆ ಹೇಳಿದರು, ಅವರು ಆಕೆಯನ್ನು ಹಿಡಿದುಕೊಂಡು ಬಲವಂತವಾಗಿ ತಲೆಯ ಕೂದಲನ್ನು ತೆಗೆಸಿದರು. ಆಮೇಲೆ ಆಕೆಯು ನದಿಗೆಹೋಗಿ ಸ್ನಾನಮಾಡಲು ಕೇಶಗಳು ತಲೆಯತುಂಬ ಮೊದಲಿನಂತೆ ಬೆಳೆದಿದ್ದವೆಂತಲೂ, ಅದನ್ನು ನೋಡಿ ಗುರುಸ್ವಾಮಿಯೂ, ಬಂಧುಗಳೂ ಆಶ್ಚರ್ಯಮಗ್ನರಾಗಿ ಅದರ ಮೇಲೆ ಆಕೆಯನ್ನು ಕುರಿತು ಏನೂ ಹೇಳದೆ ಸುಮ್ಮನಿದ್ದರೆಂತಲೂ ಕೆಲವರು ಹೇಳುತ್ತಾರೆ. ಮುಖ್ಯವಾಗಿ ವೆಂಗಮಾಂಬನಿಗೆ ವಿತಂತುಗಳು ಕೇಶವಪನವನ್ನು ಮಾಡಿಕೊಳ್ಳುವುದು ಅಸಮ್ಮತವು ಎಂದು ನಾವು ತಿಳಿಯಬೇಕು. ಈ ಕೃತ್ಯವು ನಮ್ಮ ದೇಶದಲ್ಲಿ ಅಂಧ ಪರಂಪರೆಯಾಗಿ ಬಂದ

ಆಚಾರವಾಗಿರುವುದರಿಂದ, ಕೆಲಯುವತಿಯರು ಕೇಶವಪನಕ್ಕೆ ಸಮ್ಮತಿಸಿದಂತೆ ತೋರಿದರೂ, ಮನಸ್ಸಿನಲ್ಲಿ ಬಹು ದುಃಖಿಸುತಲಿರುವರೆಂಬುದು ಸತ್ಯವು. ಅವರಿಗೆ ವಪನಕರ್ಮದಿಂದ ನಿಜವಾಗಿ ತಮಗೂ, ತಮ್ಮ ಪತಿಗಳಿಗೂ ಪುಣ್ಯಲೋಕವು ಉಂಟಾಗುವುದು ಎಂಬ ನಂಬಿಕೆಯು ಇದ್ದರೆ, ಅವರು ಆ ಕಾಲದಲ್ಲಿ ದುಃಖಿಸದೆ ಸಂತೋಷಿಸುತಲಿದ್ದರಲ್ಲವೆ? ಸ್ತ್ರೀಯರು ಪತಿವಿಹೀನೆಯರಾಗಿ, ಅಲಂಕಾರ ರಹಿತರಾಗಿ, ಮಂಗಳಕಾರ್ಯಕ್ಕೆ ದೂರಸ್ಥರಾಗಿ, ದುಃಖವಹ್ನಿಯಲ್ಲಿ ಹೊರಳು ತಿರಲು, ಸುಖವಾಗಿರುವ ಅವರ ಬಂಧುಗಳು, ಒಳ್ಳೆಯ ಮಾತುಗಳಿಂದ ಅವರ ಶೋಕಾಗ್ನಿಯನ್ನು ಆರಿಸುವುದಕ್ಕೆ ಬದಲಾಗಿ, ಪರಮೇಶ್ವರನು ಕೊಟ್ಟ ಕಿರೀಟವೋ ಎಂಬಂತಿರುವ ಕೇಶಗಳನ್ನು ನಾಶಮಾಡಿ, ಆ ದುಃಖಾಗ್ನಿಯಲ್ಲಿ ತುಪ್ಪವನ್ನು ಸುರಿದು ಪ್ರಜ್ವಲಿಸುವಂತೆ ಮಾಡುವರು! ಇದು ಎಷ್ಟು ಅನ್ಯಾಯ! ಈ ದುರಾಚಾರವು ಸಹಗಮನದಷ್ಟು ಕ್ರೂರವಾದುದಲ್ಲ. ಆದರೂ ಕೆಲಸ್ತ್ರೀಯರು ಸಹಗಮನಕ್ಕಿಂತಲೂ ಈ ಕಾರ್ಯವು ಬಹು ಭಯಂಕರವಾದುದೆಂತಲೂ, ವಿರೂಪಿಗಳಾಗಿ ನಾಲ್ಕುಜನರಲ್ಲಿ ಅವಮಾನದಿಂದ ಬಾಳುವುದಕ್ಕಿಂತಲೂ, ಒಂದು ಗಳಿಗೆಯ ದುಃಖದಿಂದ ಸಹಗಮನ ಮಾಡಿ ಪ್ರಾಣವನ್ನು ಬಿಡುವುದೇ ಮೇಲೆಂತಲೂ ಎಣಿಸುತ್ತಾರೆ. ಸಾಧಾರಣವಾಗಿ ಪುರುಷರಾದರೂ ದುಸ್ಸಹವಾದ ಅವಮಾನದಿಂದ ಜೀವಿಸುವುದಕ್ಕಿಂತಲೂ ಸಾಯುವುದು ಉತ್ತಮ ಎಂದೆಣಿಸುವರಲ್ಲವೆ? ಆದಕಾರಣ ಅಸ್ಮದ್ದೇಶಬಾಂಧವರೆಲ್ಲರೂ ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಉಂಟಾಗುತಲಿರುವ ಈ ವ್ಯಸನಕರವಾದ ಅವಮಾನವನ್ನು ತೊಲಗಿಸಿ ತಮ್ಮ ದಯಾರ್ದ್ರಭಾವವನ್ನು ವ್ಯಕ್ತಗೊಳಿಸಬಾರದೆ?

ಈಕೆಯು ಬಹು ವೃದ್ಧಳಾಗಿ ಕಾಲಧರ್ಮವನ್ನು ಹೊಂದಿದಳು. ೧೮೪೦ನೆಯ ವರ್ಷದವರೆಗೂ ಈಕೆಯು ಜೀವಿಸಿದ್ದಂತೆ ತಿಳಿಯಬರುತ್ತದೆ. ಬಾಲವಿತಂತುವಾದುದರಿಂದ ಈಕೆಯ ಪತಿಯ ನಾಮಗೋತ್ರಗಳು ತಿಳಿಯವು. ಈಕೆಯು ಭಾಗವತದ ತೃತೀಯಸ್ಕಂಧಾಂತರ್ಗತವಾದ ಕಪಿಲ, ದೇವಹೂತಿ ಸಂವಾದವನ್ನು ಆಧಾರವಾಗಿ ತೆಗೆದುಕೊಂಡು "ರಾಜಯೋಗಸಾರ" ಎಂಬ ಒಂದು ಗ್ರಂಥವನ್ನು ರಚಿಸಿದಳು. ಈ ಗ್ರಂಥದಲ್ಲಿ ವೇದಾಂತವು ಸಾಮಾನ್ಯ ಜನರಿಗೆ ಸಹ ಸುಲಭವಾಗಿ ಗ್ರಾಹ್ಯವಾಗುವಂತೆಯೂ, ಬಹುರಸವತ್ತಾಗಿಯೂ ರಚಿತವಾಗಿದೆ. ವಿಷ್ಣುಮೂರ್ತಿಯು ಪದ್ಮಾವತಿಯನ್ನು ವಿವಾಹಮಾಡಿಕೊಂಡ ಕಥೆಯನ್ನು ಬಹುಚಿತ್ರವಾಗಿ ವರ್ಣಿಸಿರುವ "ವೆಂಕಟಾಚಲ ಮಹಾತ್ಮ್ಯ" ಎಂಬ ಇನ್ನೊಂದು ಗ್ರಂಥವನ್ನು ರಚಿಸಿದಳು. ಈಕೆಯು ತನ್ನ ಗ್ರಂಥಗಳನ್ನು ತರಿಗೊಂಡನ ನಿಂಹಸ್ವಾಮಿಗೆ ಅಂಕಿತ ಮಾಡಿರುವಳು.

———:o:———

ಸಂಗ್ರಾಮೇಸುಭಟೇಂದ್ರಾಣಾಂ ಕವೀನಾಂಕವಿಮಂಡಲೇ
ದೀಪ್ತಿರ್ವಾ ದೀಪ್ತಿಹಾನಿರ್ವಾ ಮುಹೂರ್ತಾದೇವಜಾಯತೆ.

ಪೀರಾಬಾಯಿಯು ಚಿತೂರು ಸಂಸ್ಥಾನಾಧೀಶ್ವರನಾದ ಉದಯಸಿಂಹನ ಧರ್ಮಪತ್ನಿಯು. ಈಕೆಯು ಅಕ್ಬರುಬಾದಷಹನ ಸಮಕಾಲೀನಳು. ಈಕೆಯ ತಾಯಿತಂದೆಗಳು ಯಾರೆಂಬುದನ್ನೂ, ಜನನ ಮರಣಗಳ ಇಸವಿಗಳನ್ನೂ ತಿಳಿಯಲು ಸಾಧ್ಯವಾಗಲಿಲ್ಲ. ವಿರಾಬಾಯಿಯು ತನ್ನ ಪರಾಕ್ರಮದಿಂದ ಅಕ್ಬರನನ್ನು ಸೋಲಿಸಿ, ತನ್ನ ಪತಿಯನ್ನು ಸೆರೆಯಿಂದ ಬಿಡಿಸಿಕೊಂಡಳು. ಅಕ್ಬರನು ಚಿತೂರಿನಮೇಲೆ ಎರಡುಸಲ ದಂಡೆತ್ತಿಬಂದನು. ಆದರೆ ಫೆರಿಸ್ತಾ ಎಂಬ ಮೊಗಲ ಚರಿತ್ರಕಾರನು, ತನ್ನ ಗ್ರಂಥದಲ್ಲಿ ಒಂದುಸಲ ದಂಡೆತ್ತಿದುದನ್ನು ಮಾತ್ರವೇ ವರ್ಣಿಸಿದಾನೆ. ಒಬ್ಬ ರಜಪೂತಹೆಂಗಸಿನಿಂದ ಬಾದಷಹನು ಸೋತುಹೋದನು ಎಂಬ ಅಪಕೀರ್ತಿ ಕಾರಣವಾದ ಮಾತುಗಳನ್ನು ಸಜಾತೀಯನಾದ ಚರಿತ್ರಕಾರನು ಹೇಗೆತಾನೆ ಬರೆಯಬಲ್ಲನು? ಅದರಿಂದ ಆತನು ಅಕ್ಬರನ ಎರಡನೆಯ ದಂಡಯಾತ್ರೆಯನ್ನು ಕುರಿತು ಬರೆಯಲಿಲ್ಲ. ಆ ಕಾಲದಲ್ಲಿ ಚಿತೂರು ದರ್ಬಾರಿನಲ್ಲಿದ್ದ ಚರಿತ್ರಕಾರರು ಈ ವಿಷಯವನ್ನು ಚೆನ್ನಾಗಿ ಬರೆದಿಟ್ಟಿದಾರೆ.

ಪ್ರಥಮದಲ್ಲಿ ಅಕ್ಬರನು ಚಿತೂರಿನಮೇಲೆ ದಂಡೆತ್ತಿಹೋದ ಸಮಯದಲ್ಲಿ, ಅಲ್ಲಿ ಉದಯಸಿಂಹನು ರಾಜ್ಯವಾಳುತಲಿದ್ದನು. ಉದಯಸಿಂಹನಷ್ಟು ಭೀರು ಸ್ವಭಾವವುಳ್ಳ ರಾಜಪುತ್ರನು ಯಾರೂ ಇರಲಾರನು. ಮೊಗಲ್ ಸೈನ್ಯವು ತಮ್ಮ ನಗರವನ್ನು ಸಮೀಪಿಸಿತು ಎಂದು ಕೇಳಿ ಉದಯಸಿಂಹನು ಭಯಕಂಪಿತನಾಗಿ, ಯವನರೊಡನೆ ಯುದ್ಧಮಾಡಲು ಹಿಂತೆಗೆದನು. ಆತನ ಶೂರರಾದ ಸರದಾರರೆಲ್ಲರೂ ಆತನಿಗೆ ಕುಂಭರಾಣಾ ಮೊದಲಾದ ಆತನ ಪೂರ್ವಿಕರ ಶೌರ್ಯವನ್ನು ತಿಳಿಸಿ, ಯುದ್ಧಸನ್ನದ್ಧನಾಗಲು ಪ್ರೋತ್ಸಾಹವನ್ನು ಮಾಡಿದರು. ಎಷ್ಟು ಹೇಳಿದರೂ ರಾಣಾ ಯುದ್ಧಕ್ಕೆ ಹೊರಡಲು ಸಮ್ಮತಿಸಲಿಲ್ಲ. ಆಗ ಆತನ ಸರದಾರರು ಆಗ್ರಹಯುತರಾಗಿ, "ನೀವು ಶತ್ರುಗಳೊಡನೆ ಯುದ್ಧಮಾಡದಿದ್ದರೆ, ನಿಮ್ಮನ್ನು ರಾಜ್ಯಭ್ರಷ್ಟರನ್ನಾಗಿ ಮಾಡುವೆವು." ಎಂದರು.

ಈ ವಿಧವಾಗಿ ತನ್ನ ಸರದಾರರೆಲ್ಲರು ನಿರ್ಬಂಧಮಾಡಿದುದರಿಂದ ರಾಣಾ ವಿಧಿಯಿಲ್ಲದೆ, ಭಯದಿಂದ ಶರೀರವೆಲ್ಲ ನಡಗುತ್ತಿರಲು, ವೀರರಾದ ತನ್ನ ಸರ

ದಾರರೊಡನೆ ರಣಭೂಮಿಯನ್ನು ಸಮೀಪಿಸಿದನು. ಅಲ್ಲಿ ಸಾಗರದಂತೆ ನಿಂತಿರುವ ಯವನಸೈನ್ಯವನ್ನು ನೋಡಿ ಉದಯಸಿಂಹನು ನಿಶ್ಚೇಷ್ಟಿತನಾದನು. ಒಂದೆರಡು ಗಳಿಗೆಗಳು ಕಳೆದನಂತರ ರಾಣಾ ಹೇಗೋ ಚೇತರಿಸಿಕೊಂಡು, ತನ್ನ ಸೈನ್ಯಕ್ಕೆ ಯುದ್ಧಮಾಡಲು ಅನುಜ್ಞೆಯನ್ನು ಕೊಟ್ಟನು. ರಜಪೂತರು ಬಹು ಪರಾಕ್ರಮದೊಡನೆ ಯುದ್ಧಮಾಡಲು ಪ್ರಾರಂಭಿಸಿದರು. ಅವರು ಎಷ್ಟು ಪರಾಕ್ರಮದೊಡನೆ ಯುದ್ಧಮಾಡಿದರೂ ಮುಖ್ಯನಾಯಕನ ಅಧೈರ್ಯದಿಂದಲೂ, ಶತ್ರುಸೇನೆಯು ಅಸಂಖ್ಯಾಕವಾಗಿರುವುದರಿಂದಲೂ, ಜಯಲಕ್ಷ್ಮಿಯು ಅಕ್ಬರನನ್ನೇ ಸೇರಿದಳು. ಉದಯಸಿಂಹನು ಪರಾಜಿತನಾಗಿ ವೈರಿಗಳ ವಶನಾದನು. ಅನಂತರ ರಾಜಪುತ್ರರು ಉದಯಸಿಂಹನು ವೈರಿಗಳ ಹಸ್ತಗತನಾದುದರಿಂದ ಯದ್ಧರಂಗವನ್ನು ಬಿಟ್ಟು ತಮ್ಮ ಮನೆಗಳಿಗೆ ಹೊರಟರು. ಅವರು ಮನೆಗಳನ್ನು ಸೇರುವಹೊತ್ತಿಗೆ, ಅವರ ಪತ್ನಿಯರು ಬೀದಿಯಬಾಗಿಲನ್ನು ಮುಚ್ಚಿ, "ರಾಜಪುತ್ರ ವಂಶದಲ್ಲಿ ನೀವೇಕೆ ಜನ್ಮಿಸಿದಿರಿ? ನಿಮ್ಮ ಮುಖವನ್ನು ನಮಗೆ ತೋರಲು ನಿಮಗೆ ನಾಚಿಕೆಯಾಗುವುದಿಲ್ಲವೆ? ಸಂಗ್ರಾಮದಲ್ಲಿ ಜಯವನ್ನಾಗಲಿ, ಮರಣವನ್ನಾಗಲಿ ಪಡೆದರೆ ನಿಮಗೆ ಕೀರ್ತಿಯುಂಟಾಗುವುದು. ಆದುದರಿಂದ ಪುನಃ ರಣರಂಗಕ್ಕೆ ಹೊರಡಿ." ಎಂದು ತಿರಸ್ಕರಿಸಿದರು.

ರಾಣಾ ಸೆರೆಸಿಕ್ಕಿದನೆಂಬ ವರ್ತಮಾನವು ಕೇಳಿಬಂದಕೂಡಲೆ ರಾಜಭವನದಲ್ಲಿ ಆರ್ತನಾದಗಳು ತುಂಬಿಹೋದವು. ರಾಜಪುತ್ರವೀರರೆಲ್ಲರು ಒಂದು ಸಭೆಯನ್ನು ಮಾಡಿ ಶತ್ರುಗಳನ್ನು ಜೈಸಿ ರಾಣಾನನ್ನು ಬಿಡಿಸುವ ಉಪಾಯವನ್ನು ಆಲೋಚಿಸುತಲಿದ್ದರು. ಎಷ್ಟು ಹೊತ್ತು ಆಲೋಚಿಸಿದರೂ ಅವರಿಗೆ ಏನೂ ತೋರಲಿಲ್ಲ. ಸ್ವಲ್ಪಹೊತ್ತಿನವರೆಗೂ ಪುರವೆಲ್ಲ ನಿಶ್ಶಬ್ದವಾಗಿತ್ತು. ಉತ್ತರಕ್ಷಣದಲ್ಲಿಯೇ ಒಬ್ಬ ಸ್ತ್ರೀಯು ಅವರಿಗೆಲ್ಲ ಸಂತೋಷವನ್ನುಂಟುಮಾಡಿದಳು. ಆಕೆ ಯಾರು? ಉದಯಸಿಂಹನ ಪಟ್ಟದರಸಿಯಾದ ವೀರಾಬಾಯಿ. ರಾಜಪುತ್ರರು ಸೋತುಹೋಗಿ, ತನ್ನ ಪತಿಯು ಶತ್ರುವಶನಾದುದರಿಂದ ಇನ್ನು ಚಿತ್ತೂರು ನಗರವು ಶತ್ರುಗಳ ಪಾಲಾಗುವುದಲ್ಲದೆ ತಾವು ಸಹ ಆ ನೀಚರ ವಶವಾಗಬೇಕಲ್ಲವೆ? ಎಂದು ಯೋಚಿಸಿ, ಅದಕ್ಕೆ ತಕ್ಕ ಪ್ರತೀಕಾರವನ್ನು ಚಿಂತಿಸುತ್ತ ವಿರಾಬಾಯಿಯು ರಾಜಭವನದಲ್ಲಿ ಸಂಚರಿಸುತ್ತ ಆಯುಧಾಗಾರವನ್ನು ಪ್ರವೇಶಿಸಿದಳು. ಅಲ್ಲಿ ನಿರುಪಯೋಗಗಳಾಗಿ ಬಿದ್ದಿದ್ದ ಅನೇಕ ಶಸ್ತ್ರಾಸ್ತ್ರಗಳು ಆಕೆಯ ದೃಷ್ಟಿಗೋಚರಗಳಾದ ಕೂಡಲೆ, ಆಕೆಯ ಮನಸ್ಸಿನಲ್ಲಿ ಅಡಗಿದ್ದ ಶೌರ್ಯಾಗ್ನಿಯು ಪ್ರಜ್ವಲಿತವಾಯಿತು. ವಿರಾಬಾಯಿಯು ಪುರುಷವೇಷವನ್ನು ಧರಿಸಿ ಅನೇಕ ಶಸ್ತ್ರಾಸ್ತ್ರಗಳನ್ನು ಕೈಗೊಂಡು, ಉದಾಶೀನಭಾವದಿಂದ ಕುಳಿತಿದ್ದ ರಾಜಪುತ್ರರ ಸಭೆಯಲ್ಲಿ ಸಾಕ್ಷಾತ್ ದುರ್ಗೆಯಂತೆ ಪ್ರತ್ಯಕ್ಷಳಾದಳು.

ಸುಕುಮಾರಳಾದ ವಿರಾಬಾಯಿಯು ಪುರುಷವೇಷದೊಡನೆ ಶಸ್ತ್ರಸಹಿತಳಾಗಿ ಪ್ರವೇಶಿಸಿದುದನ್ನು ನೋಡಿ ರಾಜಪುತ್ರರು ಆಶ್ಚರ್ಯಮಗ್ನರಾದರು. ಸ್ವಾತಂತ್ರ್ಯೇಚ್ಛೆಯೂ, ಸ್ವಧರ್ಮಾಭಿಮಾನವೂ ಹೃದಯದಲ್ಲಿ ತುಂಬಿರಲು ತೇಜಃ ಪುಂಜದಂತೆ ಪ್ರಕಾಶಿಸುತಲಿರುವ ತಮ್ಮ ರಾಣಿಯನ್ನು ನೋಡಿ ಅವರು ಸ್ವಲ್ಪಭೀತರಾದರು. ಆಕೆಯು ರೋಷಸಂಭ್ರಮಗಳೊಡನೆ, "ಶೂರಾಗ್ರೇಸರರಾದ ರಜಪೂತರೇ! ನೀವು ಅಧೋಮುಖರಾಗಿ ಕುಳಿತುಕೊಂಡು ಯಾರಿಗಾಗಿ ನಿರೀಕ್ಷಿಸುತಲಿರುವಿರಿ? ನಿಮ್ಮಲ್ಲಿರುವ ಶೌರ್ಯಾದಿ ಕ್ಷತ್ರಿಯಗುಣಗಳು ಎಲ್ಲಿ ಹೋದವು? ಚಿತ್ತೂರುಸಂಸ್ಥಾನವು ಈಗಲೆ ಪೌರುಷಹೀನನಾಯಿತೆ? ಚಿತ್ತೂರಿನ ರಾಜಪುತ್ರ ವೀರರೆಲ್ಲರು ಕೇವಲ ಶ್ವಾಸೋಚ್ಛ್ವಾಸವುಳ್ಳ ಹುಳಗಳಾಗಿ ಹೋದರೆ? ವೀರ ಜನನಿಯಾದ ಭರತವರ್ಷವು ಈದಿನವೇ ನಿಸ್ತೇಜವಾಯಿತೆ? ನೀವು ಶೂರವಂಶದಲ್ಲಿ ಏಕೆ ಜನಿಸಿದಿರಿ? ಹೀಗೆ ಜನಿಸಿ ಶತ್ರುಗಳಿಗೆ ಹೇಗೆ ಬೆನ್ನನ್ನು ತೋರಿಸಿದಿರಿ? ಈಗ ನೀವೆಲ್ಲರು ಇಲ್ಲಿಸೇರಿ ಆಲೋಚಿಸುತಲಿರುವುದೇನು? ಚಿತ್ತೂರಿಗೆ ಅಲಂಕಾರಪ್ರಾಯನೂ, ನಮಗೆ ಪ್ರಾಣಸಮಾನನೂ ಆದ ಮಹಾರಾಜನನ್ನು ಶತ್ರುಗಳು ಸೆರೆಹಿಡಿದಿರಲು, ಹೆಂಗಸರಂತೆ ಕೈಗೆ ಬಳೆಗಳನ್ನು ತೊಟ್ಟುಕೊಂಡು ಮನೆಯಲ್ಲಿರುವುದಕ್ಕೆ ನಿಮಗೆ ಲಜ್ಜೆಯಿಲ್ಲವೆ? ನಾನು ಈ ವಿಧವಾಗಿ ನಿಮ್ಮನ್ನು ಬಹಿರಂಗವಾಗಿ ಮಾಡುವ ಅವಮಾನವನ್ನು ಸೈರಿಸುವುದಕ್ಕಿಂತಲು ರಣರಂಗದಲ್ಲಿ ಶತ್ರುಗಳೊಡನೆ ಯುದ್ಧಮಾಡಿ ಮಡಿಯುವುದು ಸರ್ವೋತ್ತಮವಲ್ಲವೆ? ಶೂರವರರೇ! ಇನ್ನು ಉಪೇಕ್ಷೆಯನ್ನು ಮಾಡಬೇಡಿ. ನಿಮಗೆ ಉಂಟಾದ ಪೌರುಷಹೀನತೆಯೆಂಬ ಕಳಂಕವನ್ನು ಈಗಲೆ ತೊಳೆದು ನಿಮಗಿರುವ ಶೌರ್ಯಧೈರ್ಯಾದಿಗುಣಗಳನ್ನು ತೋರಲು ಇದೇ ಸುಸಮಯ. ಮತ್ತೊಬ್ಬರಿಗಾಗಿ ಕಾದಿರಲೇಕೆ? ಒರೆಗಳಿಂದ ನಿಮ್ಮ ಖಡ್ಗಗಳನ್ನು ಹಿರಿಯಿರಿ, 'ಜಯಹರ' 'ಜಯಮಹಾದೇವ' ಎಂಬ ರಣಘೋಷದೊಡನೆ, ಅತಿಶೀಘ್ರವಾಗಿ ಹೊರಟು ಯುದ್ಧಭೂಮಿಯಲ್ಲಿ ನಿಮ್ಮ ನಿಮ್ಮ ಪರಾಕ್ರಮವನ್ನು ತೋರಿರಿ. ನಾನು ಯುದ್ಧಕ್ಕೆ ಹೊರಡುತಲಿದೇನೆ." ಎಂದು ನುಡಿದು ವಿರಾಬಾಯಿಯು ಅಶ್ವವನ್ನಾರೋಹಿಸಿದಳು.

ರಾಜಪುತ್ರರೆಲ್ಲರು ಯುದ್ಧಸನ್ನದ್ಧರಾದರು. ಕುರಿಗಳಂತಿದ್ದ ಆ ವೀರರು, ವಿರಾಬಾಯಿಯ ಪ್ರೋತ್ಸಾಹವಾಕ್ಯಗಳಿಂದ ಹುಲಿಗಳಾದರು; ಆ ಸಭೆಯಲ್ಲಿದ್ದ ಶೂರರೆಲ್ಲರು ಜಯಘೋಷವನ್ನು ಮಾಡಿ, 'ಯುದ್ಧದಲ್ಲಿ ಶತ್ರುಗಳನ್ನು ಕಡಿಯುವೆವು. ಇಲ್ಲದಿದ್ದರೆ ಅವರಿಂದ ಕಡಿಯಲ್ಪಡುವೆವೇ ಹೊರತು ಶತ್ರುಗಳಿಗೆ ಬೆನ್ನನ್ನು ಮಾತ್ರ ತೋರುವುದಿಲ್ಲ.' ಎಂದು ಪ್ರತಿಜ್ಞೆಯನ್ನು ಮಾಡಿದರು.

ರಾಜಪುತ್ರರ ವೀರಾವೇಶವನ್ನೂ, ಸ್ಥಿರಪ್ರತಿಜ್ಞೆಯನ್ನೂ ನೋಡಿ ವಿರಾಬಾಯಿಯು ಅತ್ಯಂತ ಧೈರ್ಯದೊಡನೆ ಯುದ್ಧಭೂಮಿಗೆ ಹೊರಟಳು. ಆಕೆಯು

ತನ್ನ ಸೈನ್ಯದೊಡನೆ ಕ್ಷುಧಾತುರವಾದ ಹೆಣ್ಣುಸಿಂಹದಂತೆ ಆಕಸ್ಮಿಕವಾಗಿ ಶತ್ರು ಸೈನ್ಯದಮೇಲೆ ಬಿದ್ದಳು. ವಿಜಯಾನಂದದಲ್ಲಿ ಮಗ್ನರಾಗಿದ್ದ ಮೊಗಲರು ಈ ಆಕಸ್ಮಿಕ ಭಯದಿಂದ ಧೈರ್ಯಹೀನರಾಗಿ ನಾಲ್ಕುಕಡೆಗೂ ಓಡಲಾರಂಭಿಸಿದರು. ವಿರಾಬಾಯಿಯ ಸೈನಿಕರು ಓಡಿಹೋಗುವವರನ್ನು ತಡೆದು ಯುದ್ಧಮಾಡಿ ಕೊಲ್ಲುತಲಿದ್ದರು. ಪ್ರಳಯಾಗ್ನಿಯನ್ನು ಹೋಲಿದ ವಿರಾಬಾಯಿಯ ಪರಾಕ್ರಮವನ್ನು ನೋಡಿ ಅಕ್ಬರನು ನಿಶ್ಚೇಷ್ಟಿತನಾದನು. ಸಮಯವನ್ನು ನೋಡಿಕೊಂಡು ರಾಜಪುತ್ರರು ಕಾಲಕಿಂಕರರಂತೆ, ಎಣಿಸಲು ಅಶಕ್ಯವಾದಷ್ಟು ಜನಯವನರನ್ನು ಯಮಪುರಿಗೆ ಕಳುಹಿಸಿದರು. ಬಾದಷಹನು ತನ್ನ ವಿಜಯವೆಲ್ಲ ಒಂದುಕ್ಷಣ ಮಾತ್ರದಲ್ಲಿ ಅಪಜಯವಾದುದನ್ನು ಕಂಡು, ಸಂಧಿಯನ್ನು ಸೂಚಿಸುವ ಬಾವಟಿಯನ್ನು ಹಿಡಿದನು. ಅನಂತರ ಉದಯಸಿಂಹನನ್ನು ಸಹ ಬಂಧಮುಕ್ತನನ್ನಾಗಿ ಮಾಡಿದನು. ಪರಾಕ್ರಮವತಿಯಾದ ವಿರಾಬಾಯಿಯಿಂದ ಮಹಾಬಲವಂತನಾದ ಅಕ್ಬರ್‌ಬಾದಷಹನು ಸಹ ಸೋತುಹೋದನು. ಅನಂತರ ಹತಶೇಷರಾದ ಸೈನಿಕರೊಡನೆ ಬಾದಷಹನು ತನ್ನ ನಗರಕ್ಕೆ ಹೊರಟನು. ಆಮೇಲೆ ರಜಪೂತರು ವಿಜಯಾನಂದದಿಂದ ಸಿಂಹನಾದಗಳನ್ನು ಮಾಡುತ್ತ, ವಿರಾಬಾಯಿ ಉದಯಸಿಂಹರೊಡನೆ ಚಿತ್ತೂರನ್ನು ಪ್ರವೇಶಿಸಿದರು. ತತ್ಪೂರ್ವದಲ್ಲಿ ತೇಜೋಹೀನವಾಗಿದ್ದ ಚಿತ್ತೂರುನಗರವು ರಾಣಿಯ ವಿಜಯವಾರ್ತೆಯನ್ನು ಕೇಳಿ ದಿವ್ಯತೇಜವನ್ನು ಧರಿಸಿತು. ಪುರಜನರು ಪರಮಾನಂದ ಭರಿತರಾಗಿ ಪಟ್ಟಣವನ್ನು ಶೃಂಗರಿಸಿ, ವಿರಾಬಾಯಿಯನ್ನು ಹೊಗಳುತ್ತ, ಮಂಗಳವಾದ್ಯಗಳೊಡನೆ ರಾಣಾಯವರನ್ನೂ, ರಾಣಿಯವರನ್ನೂ ಎದುರ್ಗೊಂಡು, ಅವರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತ, ಆ ದಂಪತಿಗಳನ್ನು ಅರಮನೆಗೆ ಪ್ರವೇಶಮಾಡಿಸಿದರು.

ಜನ್ಮಮಧ್ಯದಲ್ಲಿ ಯುದ್ಧವೆಂಬುದನ್ನೇ ಅರಿಯದ ವಿರಾಬಾಯಿಯು, ಒಂದುಕ್ಷಣ ಮಾತ್ರದಲ್ಲಿ ತನ್ನ ಶೌರ್ಯದಿಂದ 'ಶೂರವನಿತೆ' ಎಂಬ ಹೆಸರನ್ನು ಪಡೆದು, ಪ್ರಸ್ತುತಚರಿತ್ರೆಗೆ ಶಿರೋಲೇಖನವಾಗಿರುವ ಶ್ಲೋಕಾರ್ಥವನ್ನು ಸಾರ್ಥಕಗೊಳಿಸಿದಳು.

*

*

ಆವಡಾಬಾಯಿ.

ವಿದ್ಯಾದದಾತಿವಿನಯಂ ವಿನಯಾದ್ಯಾತಿಪಾತ್ರತಾಂ.

ಈಕೆಯು ಮಹಾರಾಷ್ಟ್ರಬ್ರಾಹ್ಮಣ ಯುವತಿ. ರತ್ನಗಿರಿ ಎಂಬ ಗ್ರಾಮದಲ್ಲಿ ಸ್ ೧೮೬೯ ನೆಯ ಇಸವಿಯಲ್ಲಿ ಈಕೆಯು ಜನ್ಮಿಸಿದಳು. ಆವಡಾಬಾಯಿಯ ತಂದೆಯ ಹೆಸರು ರಾವುಬಹದೂರು ವಿಷ್ಣುನೊರೇಶ್ವರಭಿಡೇ. ಈತನು ಅಸಿ ಸ್ಟೆಂಟ್ ಕಲೆಕ್ಟರ್ ಕೆಲಸವನ್ನು ನೋಡುತಲಿದ್ದನು. ಆವಡಾಬಾಯಿಯು ಹುಟ್ಟಿದ ಎರಡುಮೂರು ತಿಂಗಳಿಗೆ ಈತನನ್ನು ನಾಸಿಕಕ್ಕೆ ವರ್ಗಮಾಡಿದರು. ಈಕೆಗೆ ನಾಲ್ಕುವರ್ಷಗಳು ತುಂಬುವವರೆಗೂ ಅಲ್ಲಿಯೇ ಇದ್ದರು. ಅನಂತರ ಅವರು ಸೂರತ್‌ನಗರಕ್ಕೆ ಬಂದರು. ಆವೂರಿನ ನೀರು ಅವರಿಗೆ ಅನಾರೋಗ್ಯವನ್ನುಂಟುಮಾಡಿದುದರಿಂದ ಆತನು ತನ್ನ ಕುಟುಂಬವನ್ನು ಪೂನಾನಗರಕ್ಕೆ ಕಳುಹಿದನು. ಆವಡಾಬಾಯಿಯು ತನ್ನ ಜನ್ಮವನ್ನೆಲ್ಲ ಇಲ್ಲಿಯೇ ಕಳೆದಳು. ಈಕೆಯು ಬಾಲ್ಯದಲ್ಲಿ ಸ್ವಲ್ಪ ಓದುವುದನ್ನೂ, ಬರೆಯುವುದನ್ನೂ ಮಾತ್ರವೇ ಕಲಿತಿದ್ದಳು. ಈಕೆಯಲ್ಲಿ ಅತಿಬಾಲ್ಯದಿಂದಲೂ, ಸಹನೆ, ಶುಚಿ ಎಂಬುವು ಕಂಡುಬರುತಲಿವ್ವು.

೧೮೮೦ ನೆಯ ಇಸವಿಯಲ್ಲಿ ಸೋಲಾಪುರ ನಿವಾಸಿಗಳಾದ ದಾದಾ ಸಾಹೇಬ್ ಜೋಗ್‌ಯವರ ಪುತ್ರನಾದ ಅಪ್ಪಾಸಾಹೇಬ್ ಎಂಬಾತನಿಗೆ ಆವಡಾ ಬಾಯಿಯನ್ನು ಕೊಟ್ಟು ವಿವಾಹ ಮಹೋತ್ಸವವನ್ನು ಬೆಳೆಸಿದರು. ವಿವಾಹವಾದ ಆರುತಿಂಗಳಿಗೆ ಆಕೆಯ ಅತ್ತೆಮಾವಂದಿರು ಗತಿಸಿದುದರಿಂದ ಜನರು ಆವಡಾ ಬಾಯಿಯ ಪಾದಗುಣ ಫಲವೆಂದು ಆಕೆಯನ್ನು ನಿಂದಿಸಿದರು. ಅನಂತರ ೧೮೮೨ ನೆಯ ಇಸವಿಯಲ್ಲಿ ಆವಡಾಬಾಯಿಗೆ ದುಸ್ಸಹವಾದ ವೈಧವ್ಯವು ಸಂಪ್ರಾಪ್ತವಾಯಿತು. ಪತಿಯು ಗತಿಸುವ ಸಮಯಕ್ಕೆ ಆವಡಾಬಾಯಿಗೆ ಹದಿ ನೇಳು ವರ್ಷಗಳ ವಯಸ್ಸಾಗಿತ್ತು. ಇಷ್ಟು ಚಿಕ್ಕವಯಸ್ಸಿನಲ್ಲಿ ಮಗಳಿಗೆ ಉಂಟಾದ ವೈಧವ್ಯದುಃಖವನ್ನು ನೋಡಿ ಭಿಡೇಯು ಆವಡಾಬಾಯಿಯನ್ನು ವಿದ್ಯಾವತಿಯನ್ನಾಗಿ ಮಾಡಿ, ಆ ವಿದ್ಯೆಯಿಂದ ಉಂಟಾಗುವ ಆನಂದದಿಂದ, ಆಕೆಯ ವೈಧವ್ಯದುಃಖವನ್ನು ಮರೆಯುವಂತೆ ಮಾಡಲು ಎಣಿಸಿದನು.

ಹಿಂದೂದೇಶದ ಹಿತಚಿಂತಕರಲ್ಲಿ ಒಬ್ಬನಾದ ಸರ್ ವಿಲಿಯಂ ವೇಡರ್‌ಬರ್ನ್ ದೊರೆಯು ಪೂನಾ ನಿವಾಸಿಗಳನ್ನು ಪ್ರೋತ್ಸಾಹಗೊಳಿಸಿ, ಅವರಿಗೆ ಅನೇಕವಿಧ

ವಾದ ಸಹಾಯಗಳನ್ನು ಮಾಡಿ, ಸ್ತ್ರೀಯರಿಗಾಗಿ ಸ್ಥಾಪಿಸಿದ ಹೈಸ್ಕೂಲಿಗೆ ಸೇರಿದವರಲ್ಲಿ ಆವಡಾಬಾಯಿಯು ಪ್ರಥಮ ವಿದ್ಯಾರ್ಥಿನಿಯು. ಈಕೆಯು ಪಾಠಶಾಲೆಯನ್ನು ಸೇರುವುದಕ್ಕೆ ಮೊದಲೇ ಇಂಗ್ಲಿಷು ಮೊದಲನೆಯ ಪುಸ್ತಕವನ್ನೂ, ಮಹಾರಾಷ್ಟ್ರದಲ್ಲಿ ನಾಲ್ಕು ಪುಸ್ತಕಗಳನ್ನೂ ಮನೆಯಲ್ಲಿ ಓದಿದ್ದಳಾದುದರಿಂದ, ಪಾಠಶಾಲಾಧ್ಯಕ್ಷಳು ಆಕೆಯನ್ನು ಪರೀಕ್ಷಿಸಿ ಇಂಗ್ಲಿಷ್ ಎರಡನೆಯ ತರಗತಿಯಲ್ಲಿ ಸೇರಿಸಿಕೊಂಡಳು. ಅಲ್ಲಿ ಆವಡಾಬಾಯಿಯು ತನ್ನ ಸತ್ಪ್ರವರ್ತನೆಯಿಂದಲೂ, ವಿದ್ಯಾಭಿರುಚಿಯಿಂದಲೂ, ತನ್ನ ಉಪಾಧ್ಯಾಯಿನಿಯರ, ಸಹಾಧ್ಯಾಯಿನಿಯರ ಪ್ರೀತಿಗೆ ಪಾತ್ರಳಾದಳು. ಈಕೆಯು ಪ್ರತಿವರ್ಷದಲ್ಲಿಯೂ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಬಹುಮಾನಗಳನ್ನು ಪಡೆಯುತಲಿದ್ದಳು. . ತಾನು ಓದಿದ ಪುಸ್ತಕಗಳನ್ನೂ, ತಾನು ಬರೆದ ಕಾಪೀ ಪುಸ್ತಕಗಳನ್ನೂ, ವಾರಪರೀಕ್ಷೆಯ ಪ್ರಶ್ನೋತ್ತರ ಪತ್ರಗಳನ್ನೂ, ತನ್ನ ಮರಣಕಾಲದ ವರೆಗೂ ಶ್ರದ್ಧೆಯೊಡನೆ ಬಚ್ಚಿಟ್ಟಿದ್ದಳು. ೧೮೮೪ ನೆಯ ವರ್ಷದಿಂದ ೧೮೮೮ ನೆಯ ವರ್ಷದ ವರೆಗೆ ನಾಲ್ಕು ವರ್ಷಗಳಲ್ಲಿ ಇಂಗ್ಲಿಷಿನಲ್ಲಿ ಆರು ಪುಸ್ತಕಗಳನ್ನು ಓದಿದಳು. ಈಕೆಯು ಇಂಗ್ಲಿಷು ನಾಲ್ಕನೆಯ ಪುಸ್ತಕವನ್ನು ಓದುವಾಗ ಸಂಸ್ಕೃತಾಧ್ಯಯನಕ್ಕೆ ಪ್ರಾರಂಭಿಸಿದಳು. ಈ ಭಾಷೆಯಲ್ಲಿಯೂ ಶ್ರದ್ಧೆಯೊಡನೆ ಕೃಷಿಮಾಡಿ, ಅಲ್ಪಕಾಲದಲ್ಲಿಯೇ ರಘುವಂಶ, ವೇಣೀಸಂಹಾರ, ಶಾಕುಂತಲ ಮುಂತಾದ ಗ್ರಂಥಗಳನ್ನು ಪೂರ್ತಿಮಾಡಿದಳು. ಈಕೆಯು ಮನೆಯಲ್ಲಿ ಡ್ರಾಯಿಂಗ್ ಕಲಿಯುತಲಿದ್ದಳು. ೧೮೮೭ ನೆಯ ಇಸವಿಯಲ್ಲಿ ಡ್ರಾಯಿಂಗ್ ಫಸ್ಟ್‌ಗ್ರೇಡ್ ಪರೀಕ್ಷೆಯಲ್ಲಿ ಕೃತಾರ್ಥಳಾದಳು. ಅನಂತರ ಫ್ರೀಹ್ಯಾಂಡ್, ಮಾಡಲ್ ಡ್ರಾಯಿಂಗ್‌ಗಳಲ್ಲಿ ಬಹುಮಾನ ಪತ್ರಿಕೆಗಳನ್ನೂ, ಕರ್ತವ್ಯ ರೇಖಾಗಣಿತದಲ್ಲಿ ದೊಡ್ಡ ಬಹುಮಾನವನ್ನೂ ಸಂಪಾದಿಸಿದಳು. ೧೮೮೭ ನೆಯ ವರ್ಷದಲ್ಲಿ ನಡೆದ ವಿದ್ಯಾರ್ಥಿ ವೇತನ (ಸ್ಕಾಲರ್‌ಷಿಪ್) ಪರೀಕ್ಷೆಗೆ ವಾಮನ ಪ್ರಭಾಕರಬಾವೇ ಎಂಬಾತನು ಪರೀಕ್ಷಕನಾಗಿ ನಿಯಮಿತನಾದನು. ಆ ವರ್ಷದಲ್ಲಿ ಆವಡಾಬಾಯಿಯು ಇಂಗ್ಲೀಷು ಐದನೆಯ ಪುಸ್ತಕವನ್ನು ಓದುತಲಿದ್ದಳು. ಆಗ ಪರೀಕ್ಷಕನು ಕೇಳಿದ ಪ್ರಶ್ನೆಗೆ ಆವಡಾಬಾಯಿಯು ಕೊಟ್ಟ ಉತ್ತರವು ಆಂಗ್ಲೇಯ ಭಾಷೆಯಲ್ಲಿ ಬಹು ರಸವತ್ತಾಗಿದೆ ಎಂದು ತಥ್ಯಭಾಷಾ ಪಾರಂಗತರು ಮೆಚ್ಚಿಕೊಳ್ಳುತ್ತಾರೆ. ಉತ್ತಮ ಭಾಷೆಯೂ, ಉದಾತ್ತ ವಿಚಾರವೂ ಉಳ್ಳ ಇಂತಹ ಉತ್ತರವನ್ನು ಪ್ರವೇಶಪರೀಕ್ಷೆಯಲ್ಲಿ ತೇರ್ಗಡೆಯಾದವರು ಸಹ ಕೊಡುವುರೋ ಇಲ್ಲವೊ ಎಂದು ಸಂಶಯವು ಉಂಟಾಗುವುದಂತೆ. ಆವಡಾಬಾಯಿಯು ಬರೆದ ಉತ್ತರದ ತಾತ್ಪರ್ಯವನ್ನು ಇಲ್ಲಿ ಬರೆದಿರುವೆನು.

ಪರೀಕ್ಷಕನ ಪ್ರಶ್ನೆ :—ನೀನು ಈ ಪಾಠಶಾಲೆಯಲ್ಲಿ ಕಲಿತ ವಿದ್ಯೆಯನ್ನು ಗೃಹಕೃತ್ಯದಲ್ಲಿ ಹೇಗೆ ಉಪಯೋಗಿಸುವೆ?

ಆವಡಾಬಾಯಿಯು ಬರೆದ ಉತ್ತರ:—ನನಗೆ ಇಲ್ಲಿ ಕಲಿಸುವ ವಿದ್ಯೆಯಿಂದ, ನಾನು ಉತ್ತರೋತ್ತರ ವಿಶೇಷ ಪ್ರಯೋಜನವನ್ನು ಹೊಂದುವೆನು ಎಂದು ಎಣಿಸುವೆನು. ನನ್ನ ಸಂಸಾರ ಪಾಶಗಳನ್ನು ಭಗವಂತನು ಕತ್ತರಿಸಿದುದರಿಂದ, ನನ್ನ ಜನ್ಮವನ್ನು ಧರ್ಮಾರ್ಥವಾದ ಪರೋಪಕಾರದಲ್ಲಿಯೇ ಕಳೆಯಲು ಎಣಿಸಿದೆನು. ನಾನು ಈಗ ಕಲಿಯುತಲಿರುವ ವಿದ್ಯೆಯು ನನ್ನ ಕೋರಿಕೆಗೆ ಸಹಾಯಕಾರಿಯಾಗುವುದು. ಮನೆಯ ಲೆಕ್ಕಗಳನ್ನು ನೋಡಿಕೊಳ್ಳುವುದರಲ್ಲಿ ತಾಯಿಗೆ ಸಹಾಯಕಳಾಗುವೆನು. ಇಂಗ್ಲಿಷು ಗ್ರಂಥಗಳನ್ನು ಓದಿ ಅದರ ಅರ್ಥವನ್ನು ಆಕೆಗೆ ತಿಳಿಸುವೆನು. ಮಹಾರಾಷ್ಟ್ರ ಸ್ತ್ರೀಯರಿಗಾಗಿ ಇಂಗ್ಲಿಷ್ ಗ್ರಂಥಗಳನ್ನು ಮಹಾರಾಷ್ಟ್ರದಲ್ಲಿ ಬರೆಯುವೆನು. ನಮ್ಮ ತಾಯಿಗೆ ಸಂಸ್ಕೃತ ಗ್ರಂಥಗಳ ಅರ್ಥವನ್ನು ವಿವರಿಸುವೆನು. ಪುರಾಣಗಳನ್ನು ಕೇಳಲು ಆಕೆಯು ಇಷ್ಟಪಡುವಳಾದುದರಿಂದ ಆಕೆಗಾಗಿ ಪುರಾಣ ಪಠನವನ್ನು ಮಾಡಿ ಆಕೆಯನ್ನು ತೃಪ್ತಿ ಪಡಿಸುವೆನು. ನಾನು ಸಂತಾನವತಿಯಾಗುವುದು ಪರಮೇಶ್ವರನಿಗೆ ಅಸಮ್ಮತವಾದರೂ, ನನ್ನ ಅಕ್ಕತಂಗಿಯರ, ಮತ್ತು ಸ್ನೇಹಿತೆಯರ ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸುವೆನು. ಈ ಪ್ರಕಾರವಾಗಿ ನನ್ನ ಕಾರ್ಯವು ಅವರಿಗೆ ಉಪಯೋಗವಾದರೆ ನನ್ನ ಜನ್ಮವು ಸ್ವಲ್ಪ ಸಾರ್ಥಕವಾಗುವುದು. ನನ್ನಂತೆ ಸೌಭಾಗ್ಯಹೀನೆಯರಾದ, ಅವಿದ್ಯಾವತಿಯರಾದ ಅನೇಕ ಬಾಲಿಕೆಯರು ವಿದ್ಯಾಯುತರಾದ ತಂದೆ, ಸೋದರರು ಮೊದಲಾದವರೊಡನೆ ಉಪಯುಕ್ತವಾದ ವಿಷಯಗಳನ್ನು ಮಾತನಾಡಲು ಅರಿಯದೆ ಮೌನವಾಗಿರುವರು. ನಾನು ಅವರಂತೆ ಮೌನವಾಗಿರುವುದು ಅನವಸರವಾದುದರಿಂದ ನನಗೆ ತಿಳಿದ ಶಾಸ್ತ್ರ ವಿಷಯಗಳನ್ನು ಅವರೊಡನೆ ಮಾತನಾಡುವೆನು. ನನಗೆ ಇದೇ ವಿದ್ಯೆಯಿಂದುಂಟಾಗುವ ಆನಂದವು.

ನಾನು ಈಗ ಅಭ್ಯಸಿಸುತಲಿರುವ ವಿದ್ಯೆಯಿಂದ ನನಗೆ ಸ್ವಲ್ಪ ದ್ರವ್ಯಾರ್ಜನಾ ಶಕ್ತಿಯು ಉಂಟಾಗುವುದು. ಆ ದ್ರವ್ಯದಿಂದ ಬಡವರಿಗೆ ಸಹಾಯಮಾಡುವೆನು. ಏತದ್ವಿಷಯವಾಗಿ ನನಗೆ ಸ್ವಲ್ಪ ಸ್ವತಂತ್ರತೆಯು ಉಂಟಾಗುವುದು.

ನನ್ನ ಸ್ವದೇಶ ಸೋದರೀಮಣಿಗಳು ಯಾವಯಾವ ವಿದ್ಯೆಯನ್ನು ಕಲಿಯಲಪೇಕ್ಷಿಸುವರೋ, ಆವಿದ್ಯೆಯನ್ನು ಅವರಿಗೆ ಶ್ರದ್ಧೆಯಿಂದ ಕಲಿಸುವೆನು. ನಾನು ಮಾಡಲು ಎಣಿಸಿದ ಕಾರ್ಯಗಳಲ್ಲಿ ಇದೇ ಮುಖ್ಯವಾದುದು. ಡ್ರಾಯಿಂಗ್ ಮೊದಲಾದ ಇತರ ವಿದ್ಯೆಗಳನ್ನು ಕಲಿಯುವುದರಿಂದ ನನಗೆ ಮನೋಲ್ಲಾಸ ವುಂಟಾಗುವುದು. ಈವಿಧವಾಗಿ ಸುಖಸಂತೋಷಗಳೊಡನೆ, ಸ್ವತಂತ್ರಳಾಗಿ ಎಂದರೆ ಇತರರಿಗೆ ಭಾರವಿಲ್ಲದೆ ನನ್ನ ಜೀವಿತವನ್ನು ಕಳೆಯುವ ಶಕ್ತಿಯು ನನಗೆ ಇಲ್ಲಿ ಹೇಳುವ ವಿದ್ಯೆಯಿಂದ ಉಂಟಾಗುವುದು.

ಮೇಲೆಬರೆದ ವ್ಯಾಸವನ್ನು ಓದಿ ಪರೀಕ್ಷಕನು ಬಹು ಸಂತೋಷಿಸಿದನು. ಈ ವ್ಯಾಸಕ್ಕೆ ನಿರ್ಣಯಿಸಿದ ೪೦ ಗುಣಗಳಲ್ಲಿ ೩೫ ಗುಣಗಳನ್ನು ಕೊಟ್ಟನು. ಈ ಪರೀಕ್ಷೆಗೆ ನಿರ್ಣಯಿಸಿದ್ದ ೫೨೫ ಗುಣಗಳಲ್ಲಿ ಆವಡಾಬಾಯಿಯು ೪೩೦ ಗುಣಗಳನ್ನು ಪಡೆದಳು. ಒಂದುನೂರು ಗುಣಗಳಿಗೆ ೮೨ ಗುಣಗಳನ್ನು ಪಡೆಯುವ ವಿದ್ಯಾರ್ಥಿನಿಯರು ಅಪೂರ್ವರಲ್ಲವೆ ?

ಈ ವ್ಯಾಸದಲ್ಲಿರುವ ಆಕೆಯ ಉದಾರ ಕಲ್ಪನೆಯೂ, ಪರೋಪಕಾರ ಬುದ್ಧಿಯೂ ಸ್ತುತ್ಯವಾದುದು. ವಿದ್ಯಾವಂತರಾದ ತಂದೆ, ಅಣ್ಣತಮ್ಮಂದಿರೊಡನೆ ಅವರಿಗೆ ಸಂತೋಷಕರವಾದ ದೊಡ್ಡವಿಷಯಗಳನ್ನು ಕುರಿತು ಮಾತನಾಡಬೇಕೆಂಬ ಆಕೆಯ ಇಷ್ಟವು ಉತ್ತಮವಾದುದು. ನಮ್ಮದೇಶದಲ್ಲಿ ವಿದ್ವಾಂಸರಾದ, ರಾಜಕೀಯ, ಸಾಂಘಿಕಸಂಸ್ಕರಣೆಗಳೇ ಮೊದಲಾದ ಪರೋಪಕಾರಗಳಿಗಾಗಿ ತಮ್ಮ ತನುಮನಗಳನ್ನು ಅರ್ಪಿಸಿದ, ಅನೇಕಪುರುಷರಿಗೆ, ತಂತಮ್ಮ ಮನೆಗಳಲ್ಲಿ ಕೆಲಸಕ್ಕೆಬಾರದ ಹರಟೆಗಳುವಿನಹ ಮತ್ತಾವುದೂ ಕೇಳಿಬರುವದಿಲ್ಲವಾದುದರಿಂದ, ಅವರಿಗೆ ಹೊರಗೆ ವಿದ್ವಾಂಸರೊಡನೆ ಪ್ರಸಂಗಿಸುವ ಸಮಯದಲ್ಲಿ ೨೦ ನೆಯ ಶತಾಬ್ದದಂತೆ ತೋರಿದರೂ, ಮನೆಗೆ ಹೋದಕೂಡಲೆ ೧೪ ನೆಯ ಶತಾಬ್ದದಂತೆ ತೋರುವುದು ಸಾಧಾರಣವಾಗಿದೆ. ಆವಡಾಬಾಯಿಯಂತಹ ರಮಣೀರತ್ನಗಳು ಗೃಹದಲ್ಲಿದ್ದರೆ, ಅಂತಹಪುರುಷರ ಸಂತೋಷಕ್ಕೆ ಪಾರವಿರಲಾರದಲ್ಲವೆ ?

ಸ್ತ್ರೀವಿದ್ಯಾ ಶತ್ರುಗಳಿಗೆ (ಅಂದರೆ ಸ್ತ್ರೀಯರಿಗೆ ಅಕ್ಷರಾಭ್ಯಾಸವನ್ನು ಸಹ ಮಾಡಿಸಕೂಡದು ಎಂಬುವವರಿಗೆ) ಪೂನಾನಗರದಲ್ಲಿನ ಹೈಸ್ಕೂಲು ಆ ಗರ್ಭ ಶತ್ರುವಿನಂತೆ ಕಾಣಬರುತಲಿತ್ತು. ಅಲ್ಲಿ ವಿದ್ಯಾಭ್ಯಾಸ ಮಾಡುವ ಬಾಲಿಕೆಯರನ್ನು ದೂಷಿಸುವುದೇ ಅವರಿಗೆ ಸತ್ಕಾಲಕ್ಷೇಪವಾಗಿ ತೋರುತಲಿತ್ತು. ಅದರಿಂದ ಅಲ್ಲಿ ವಿದ್ಯಾಭ್ಯಾಸವನ್ನು ಮಾಡುತಲಿದ್ದವರಲ್ಲಿ, ಅಗ್ರಗಣ್ಯಳಾದ ಆವಡಾಬಾಯಿಗೆ ಅವರು ಬಹು ಬಾಧೆಯನ್ನುಂಟು ಮಾಡುತಲಿದ್ದರು. ಅವರು ಆಕೆಯನ್ನು ಬೀದಿಗಳಲ್ಲಿ ಹಾಸ್ಯಮಾಡುವುದು, ಬಯ್ಯುವುದು ಹೀಗೆಲ್ಲಮಾಡಿ ಅವಮಾನ ಗೊಳಿಸುತಲಿದ್ದರು. ಅನೇಕ ಭೀಭತ್ಸ ವಚನಗಳೊಡನೆ ಆಕಾಶರಾಮನ ಹೆಸರಿಗೆ ಅನೇಕ ಲೇಖನಗಳನ್ನು ಬರೆದು ಆವಡಾಬಾಯಿಗೆ ಕಳುಹಿಸುತಲಿದ್ದರು. ಆಕೆಯನ್ನು ಹೊಡೆದು ಕೊಲ್ಲುವೆವು ಎಂದು ಭಯಪಡಿಸಿದರು. ದುಃಖಸಮುದ್ರದಲ್ಲಿ ಮುಳುಗಿ ಹೋಗಿ ವಿದ್ಯೆಯೆಂಬ ನಾವೆಯ ಆಧಾರಬಲದಿಂದ, ಆ ಸಮುದ್ರದಿಂದ ಮೇಲಕ್ಕೆ ಬರುವುದಕ್ಕೆ ಪ್ರಯತ್ನಪಡುತಲಿರುವ ಆವಡಾಬಾಯಿಯಮೇಲೆ, ದುಷ್ಟರು ಕಠಿನ ವಾಕ್ಯಗಳುಎಂಬ ಶಿಲಾವರ್ಷವನ್ನು ಸುರಿಸುತ್ತಿರಲು ಆಕೆಯ ಮನಸ್ಸು ಹೇಗಿತ್ತೋ ಪಾಠಕರೇ ಊಹಿಸಬಲ್ಲರು! ಯಾರೆಷ್ಟು ನಿಂದಿಸಿದರೂ ಆವಡಾಬಾಯಿಯು ಪರಮೇಶ್ವರನನ್ನು ನಂಬಿ ವಿದ್ಯಾಭ್ಯಾಸವನ್ನು ಮಾಡುತಲಿದ್ದಳು.

೧೮೮೭ ನೆಯ ಇಸವಿಯಲ್ಲಿ ಆವಡಾಬಾಯಿಯನ್ನು ಬಹು ಪ್ರೇಮದಿಂದ ನೋಡುತಲಿದ್ದ ಆಕೆಯ ಅಗ್ರಸೋದರಿಯಾದ ಚಿಂಗೂಬಾಯಿಯು ಕ್ಷಯರೋಗದಿಂದ ಮೃತಳಾದಳು. ಈಕೆಯು ತನ್ನ ಮುದ್ದುತಂಗಿಗೆ ಉಂಟಾದ ವೈಧವ್ಯಕ್ಕಾಗಿ ವಿಶೇಷವಾಗಿ ಚಿಂತಿಸುತ್ತ, ಆವಡಾಬಾಯಿಗೆ ದುಃಖೋಪಶಮನ ವಾಕ್ಯಗಳನ್ನು ಹೇಳುತ್ತ, ಆಕೆಗೆ ವಿದ್ಯಾಭ್ಯಾಸದಲ್ಲಿಯೂ, ಪರೋಪಕಾರದಲ್ಲಿಯೂ ವಿಶೇಷ ಆಸಕ್ತಿ ಯುಂಟಾಗುವಂತೆ ಮಾಡಿದ್ದಳು. ಈಕೆಯ ಮರಣದಿಂದ ಆವಡಾಬಾಯಿಯು ವಿಶೇಷ ದುಃಖಪೀಡಿತಳಾಗಿ ಕೆಲವುದಿವಸದವರೆಗೂ ವಿದ್ಯಾವ್ಯಾಸಂಗವನ್ನು ಬಿಟ್ಟಿದ್ದಳು. ಅನಂತರ ತಂದೆಯ ಪ್ರೋತ್ಸಾಹದಿಂದ ಮನಸ್ಸನ್ನು ಒಂದು ವಿಧವಾಗಿ ಸಮಾಧಾನಮಾಡಿಕೊಂಡು ಓದುತಲಿದ್ದಳು. ೧೮೮೭ ನೆಯ ವರ್ಷಾಂತದಲ್ಲಿ ಆವಡಾಬಾಯಿಗೆ ಸ್ವಲ್ಪ ಅನಾರೋಗ್ಯವು ಉಂಟಾದುದರಿಂದ ಆಕೆಯನ್ನು ಮಹಾಬಲೇಶ್ವರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಕೆಲವು ದಿವಸಗಳಿದ್ದು ಪುನಃ ಊರಿಗೆಬಂದಮೇಲೆ ಆಕೆಯ ವ್ಯಾಧಿಯು ಕ್ರಮೇಣ ವೃದ್ಧಿಯಾಗುತಲಿತ್ತು. ಅದರಿಂದ ಆಕೆಯು ವಿದ್ಯಾಭ್ಯಾಸವನ್ನು ಪೂರ್ತಿಯಾಗಿ ನಿಲ್ಲಿಸಬೇಕಾಯಿತು. ಆಂಗ್ಲೇಯವೈದ್ಯರೂ, ಭಾರತೀಯವೈದ್ಯರೂ ಆಕೆಯ ಶರೀರವನ್ನು ಪರೀಕ್ಷಿಸಿ ಅನೇಕವಿಧವಾದ ಔಷಧೋಪಚಾರಗಳನ್ನು ಮಾಡಿದರು. ಅದರಿಂದ ಉಪಯೋಗವು ಕಂಡುಬರಲಿಲ್ಲ. ವ್ಯಾಧಿಯು ದಿನದಿನಕ್ಕೂ ಹೆಚ್ಚುತಲಿತ್ತು. ಹೊಟ್ಟೆಯಲ್ಲಿ ಶೂಲೆಯು ವಿಶೇಷವಾಗಿ ಹುಟ್ಟುತಲಿದ್ದುದರಿಂದ, ಮರಣಕ್ಕೆ ಕೆಲವುದಿವಸಗಳಿಗೆ ಪೂರ್ವದಲ್ಲಿ ಆಕೆಯು ಬಾಧೆಯನ್ನು ಸಹಿಸಲಾರದೆ, ಆಗಾಗ್ಗೆ ಗಟ್ಟಿಯಾಗಿ ಕೂಗಿಕೊಳ್ಳುತಲಿದ್ದಳು. ಅದಕ್ಕೆ ತಂದೆಯು 'ಮಗೂ! ನಿನ್ನ ಕಣ್ಣಿಗೆ ಏನಾದರೂ ಕಂಡುಬರುತಲಿದೆಯೇ? ನಿನಗೆ ಮರಣಭೀತಿಯುಂಟಾಗುತಲಿದೆಯೇ?' ಎಂದು ಕೇಳಿದನು. ಆವಡಾಬಾಯಿಯು ಅದಕ್ಕೆ "ನನಗೆ ಮರಣಎಂದರೆ ಭಯವೇನೂಇಲ್ಲ. ನಾನು ಯಾವ ಪಾಪಕಾರ್ಯವನ್ನೂ ಮಾಡದಿರುವಾಗ ಪರಲೋಕ ಯಾತ್ರೆಗೆ ಭಯಪಡಲೇಕೆ? ಪ್ರಾಣ ಸಮಾನವಾಗಿ ಸಲಹಿದ ನಿಮ್ಮನ್ನು ಬಿಟ್ಟು ಹೋಗಬೇಕೆಂತಲೂ, ನಾನು ಹುಟ್ಟಿದುದಕ್ಕೆ ಜನೋಪಯೋಗಕರವಾದ ಒಂದು ಕಾರ್ಯವನ್ನಾದರೂ ಮಾಡಲಿಲ್ಲ ವಲ್ಲಎಂತಲೂ ಸ್ವಲ್ಪ ವ್ಯಸನವಾಗಿದೆ. ಆದರೆ ಈಶ್ವರಾಜ್ಞೆಯನ್ನು ಶಿರಸಾವಹಿಸಿ ಸಂತೋಷದೊಡನೆ ಹೊರಡುವುದು ನಮ್ಮ ಕರ್ತವ್ಯವು. ನನ್ನ ಹೊಟ್ಟೆಯಲ್ಲಿ ಹುಟ್ಟುವ ಸಹಿಸಲಶಕ್ಯವಾದ ಶೂಲೆಯಿಂದ ನಾನು ಹಾಗೆ ಕೂಗಿಕೊಳ್ಳುವೆನೇ ಹೊರತು ಮರಣ ಭೀತಿಯಿಂದ ಕೂಗುವದಿಲ್ಲ." ಎಂದಳು. ಅದರಮೇಲೆ ಭಿಡೆಯು "ಆವಡಾ! ನಿನ್ನ ಮನಸ್ಸಿನಲ್ಲಿ ಯಾರಿಗಾದರು ದ್ರವ್ಯಸಹಾಯ ಮಾಡಬೇಕು ಎಂಬ ಅಪೇಕ್ಷೆಯುಇದ್ದರೆ ನನ್ನೊಡನೆಹೇಳು." ಎಂದನು. ಆವಡಾಬಾಯಿಯು ಅದಕ್ಕೆ "ನಾನು ಈ ವರ್ಷ ನನ್ನನ್ನು ಚಿಕ್ಕತನದಲ್ಲಿ ಬೆಳೆಸಿದ

ಗೋವಿಂದಚಿಂಧಡೇ ಯವರಿಗೆ ಏನೂ ಕಳುಹಿಸಲಿಲ್ಲ. ಪ್ರತಿವರ್ಷವೂ, ಪಾಠ ಶಾಲೆಯಲ್ಲಿ ನಾನು ಪಡೆಯುತಲಿದ್ದ ಬಹುಮಾನರೂಪವಾದ ದ್ರವ್ಯವನ್ನು ಆತನಿಗೆ ಕಳುಹಿಸುತಲಿದ್ದೆನು. ವ್ಯಾಧಿಯ ದೆಸೆಯಿಂದ ಈವರ್ಷ ಬಹುಮಾನವನ್ನು ಪಡೆಯಲಿಲ್ಲವಾದಕಾರಣ ಆತನಿಗೆ ದ್ರವ್ಯವನ್ನು ಕಳುಹಿಸಲಾಗಲಿಲ್ಲ. ನೀವು ಆತನಿಗೆ ಏನಾದರೂ ಕಳುಹಿಸಿದರೆ ನನಗೆ ಬಹಳ ಸಂತೋಷವಾಗುವುದು." ಎಂದಳು. ಆತನು ತಕ್ಷಣವೇ ಚಿಂಧಡೇ ಯವರಿಗೆ ೨೦ ರೂಪಾಯಿಗಳನ್ನು ಆವಡಾಬಾಯಿಯ ಹೆಸರಿನಲ್ಲಿ ಕಳುಹಿಸಿದನು.

ಆಮೇಲೆ ಭಿಡೇಯು ತನ್ನಪುತ್ರಿಯ ಜ್ಞಾಪಕಾರ್ಥವಾಗಿ, ಆಕೆಯು ಪಠಿ ಸಿದ ಪಾಠಶಾಲೆಯಲ್ಲಿ ಒಂದು ಬಹುಮಾನವನ್ನು ಇಡಲೆಳಸಿ, ತನ್ನ ಅಭಿಪ್ರಾ ಯವನ್ನು ಆಕೆಗೆತಿಳಿಸಿ, ಆಕೆಗೆ ಯಾವವಿಷಯದಲ್ಲಿ ವಿಶೇಷ ಪ್ರೀತಿಯುಂಟೋ ತಿಳಿಸಬೇಕು ಎಂದು ಕೇಳಿದನು. ಆವಡಾಬಾಯಿಯು "ಅಪ್ಪಾ! ನನ್ನನ್ನು ಜನರು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದಷ್ಟು ಯಾವ ಘನಕಾರ್ಯವನ್ನೂ ನಾನು ಮಾಡಲಿಲ್ಲ. ನೀವುಮಾಡುವ ಬಹುಮಾನಕ್ಕೆ ನಾನು ಅರ್ಹಳಲ್ಲ." ಎಂದಳು. ಆಕೆಯ ಮಾತುಗಳನ್ನು ಕೇಳಿ ತಂದೆಯು ಮತ್ತಷ್ಟು ತ್ವರೆಪಡಿಸಲು ತನಗೆ ಗಣಿತದಲ್ಲಿಯೂ, ಡ್ರಾಯಿಂಗ್‌ನಲ್ಲಿಯೂ ವಿಶೇಷಪ್ರೀತಿಯು ಉಂಟುಎಂದು ತಿಳಿಸಿದಳು. ಆಗಲೇ ಆತನು ಒಂದುಸಾವಿರ ರೂಪಾಯಿಗಳನ್ನು ಪಾಠಶಾಲಾ ಧ್ಯಕ್ಷನಿಗೆ ಕಳುಹಿಸಿ, ಅದರಮೇಲೆ ಬರುವ ಬಡ್ಡಿಯನ್ನು ಪ್ರತಿವರ್ಷದಲ್ಲಿಯೂ ಡ್ರಾಯಿಂಗ್ ಮತ್ತು ಗಣಿತಗಳಲ್ಲಿ ಎಲ್ಲರಿಗಿಂತಲು ಪ್ರಥಮಸ್ಥಾನದಲ್ಲಿ ತೇರ್ಗಡೆ ಯನ್ನು ಹೊಂದಿದ ಕನ್ಯೆಗೆ ಬಹುಮಾನವಾಗಿ ಕೊಡುವಂತೆ ನಿಯಮಿಸಿದನು. ಈ ಸಂಭಾಷಣೆಯು ನಡೆದ ೨೪ ಗಂಟೆಗಳಿಗೆ ಎಂದರೆ ೧೮೮೮ ನೆಯ ಇಸವಿ ಜನವರಿ ೨೨ ನೆಯ ತಾರೀಖು ಮಂಗಳವಾರ ಮಧ್ಯಾಹ್ನ ಎರಡು ಗಂಟೆಯ ಸಮಯದಲ್ಲಿ, ಆವಡಾಬಾಯಿಯು ಈನಶ್ವರವಾದ ದೇಹವನ್ನು ಭೂಲೋಕದಲ್ಲಿ ಬಿಟ್ಟು, ತನ್ನ ಕೀರ್ತಿ ಶರೀರವನ್ನು ಶಾಶ್ವತವಾಗಿ ನಿಲ್ಲಿಸಿ, ದುಷ್ಟರ ದುರ್ಭಾಷೆ ಗಳಿಗೆ ಅವಕಾಶವಿಲ್ಲದ, ಸದಾನಂದಮಯನಾದ ಪರಲೋಕಕ್ಕೆ ನಡೆದಳು! ಆಕೆಯ ಮರಣದಿಂದ ಆಕೆಯ ಜನನೀಜನಕರಿಗೆ ಅತ್ಯಂತ ದುಃಖವು ಉಂಟಾಯಿ ತೆಂದರೆ ಆಶ್ಚರ್ಯವೇನೂ ಇಲ್ಲ. ಎಂತಹ ಅನಾಮಧೇಯರು ಗತಿಸಿದರೂ ಅವರ ಪಿತೃಗಳಿಗೆ ದುಃಖವುಂಟಾಗುವುದು ಸ್ವಭಾವಿಕವು. ಆದರೆ ರಕ್ತಸಂಬಂಧ ವಿಲ್ಲದ ಇತರಜನರಿಗೆ, ಯಾರಮರಣದಿಂದ ವಿಶೇಷದುಃಖವು ಉಂಟಾಗುವುದೋ ಅವರೇ ಮನುಷ್ಯನಾಮಕ್ಕೆ ಅರ್ಹರು. ಪಾಠಶಾಲೆಯಲ್ಲಿ ಆವಡಾಬಾಯಿಗಾಗಿ ದುಃಖಿಸದ ಬಾಲಿಕೆಯಾಗಲಿ, ಉಪಾಧ್ಯಾಯಿನಿಯಾಗಲಿ ಕಂಡುಬರಲಿಲ್ಲ. ಅನೇ ಕರು ಆಕೆಯ ಸದ್ಗುಣಗಳನ್ನು ಜ್ಞಾಪಿಸಿಕೊಂಡು ಆಕೆಯ ತಾಯಿತಂದೆಗಳಿಗೆ ಲೇಖನಗಳನ್ನು ಬರೆದರು. ಗ್ರಂಥವಿಸ್ತರಭೀತಿಯಿಂದ ಅವುಗಳಲ್ಲಿ ಒಂದನ್ನು

ಮಾತ್ರ ಇಲ್ಲಿ ಬರೆಯುವೆನು. ಇದು ಆಕೆಯ ಉಪಾಧ್ಯಾಯಿನಿಯರಲ್ಲಿ ಒಬ್ಬಳಾದ ಆಂಗ್ಲೇಯ ಸ್ತ್ರೀ ಬರೆದದ್ದು.

"ನಮ್ಮ ಪ್ರಿಯ ಶಿಷ್ಯಳಾದ ಆವಡಾಬಾಯಿಯು ದೇವಲೋಕಕ್ಕೆ ಹೋದಳು. ಆದರೂ ಆಕೆಗೆ ವಿದ್ಯೆಯನ್ನು ಕಲಿಸುತಲಿದ್ದ ಉಪಾಧ್ಯಾಯಿನಿಯರ ಹೃದಯಗಳು ಮಾತ್ರ ಆಕೆಯನ್ನು ಮರೆಯಲಾರವು.

ಆಕೆಯು ಪ್ರಾರಂಭಿಸಿದವುಗಳನ್ನೆಲ್ಲ ಶ್ರದ್ಧೆಯಿಂದ ಪೂರ್ತಿ ಮಾಡುತಲಿದ್ದಳು. ಮಧ್ಯದಲ್ಲಿ ಯಾವಾಗಲೂ ಬಿಡುತಲಿರಲಿಲ್ಲ.

ನನ್ನ ಅದೃಷ್ಟವಶದಿಂದ ಆಕೆಗೆ ಎರಡು ವರ್ಷಗಳಕಾಲ ಗಣಿತವನ್ನು ಕಲಿಸುವ ಭಾಗ್ಯವು ಉಂಟಾಗಿತ್ತು. ಆ ವಿಷಯವನ್ನು ಆಕೆಯು ಬಹು ಶ್ರದ್ಧೆಯಿಂದ ಕಲಿಯುತಲಿದ್ದಳು. ಈ ಯೆರಡು ವರ್ಷಗಳಲ್ಲಿಯೇ ಆಕೆಯು ಗಣಿತದಲ್ಲಿ ಬಹು ಪ್ರವೀಣಳಾದಳು. ನಾನು ಆಕೆಗೆ ಕಲಿಸುವ ಸಮಯವು ಯಾವಾಗ ಬರುವುದೋ ಎಂದು ನಿರೀಕ್ಷಿಸುತಲಿದ್ದೆನು. ಈ ವಿಷಯವನ್ನು ಆಕೆಗೆ ಕಲಿಸುವುದು ನನಗೆ ಒಂದು ವಿನೋದವಾಗಿದ್ದಿತು."

ಆವಡಾಬಾಯಿಯು ಜರೀಕೆಲಸವನ್ನು ಮಾಡುವುದರಲ್ಲಿ ಸಹ ವಿಶೇಷ ನಿಪುಣಳಾಗಿದ್ದಳು. ಆಕೆಯು ತನ್ನ ಸುಸ್ವಭಾವದಿಂದ ಉಪಾಧ್ಯಾಯಿನಿಯರಿಗೂ, ಸಹಾಧ್ಯಾಯಿನಿಯರಿಗೂ ಪ್ರಿಯತಮಳಾಗಿದ್ದಳು. ಪಾಠಶಾಲೆಯನ್ನು ನೋಡಲು ಬಂದ ಅನೇಕ ಸದ್ಗೃಹಸ್ಥರು ಆವಡಾಬಾಯಿಯನ್ನು ಪ್ರಶಂಸಿಸುತಲಿದ್ದರು. ಆಕೆಯಲ್ಲಿ ಅದ್ವಿತೀಯವಾದ ವಿನಯವು ಪ್ರಕಾಶಿಸುತಲಿತ್ತು. ಆ ಗುಣದಿಂದಲೇ ಆಕೆಯು ಸರ್ವರಿಗೂ ಪ್ರಿಯತಮಳಾಗಿದ್ದಳು.

ರುದ್ರಮದೇವಿ.

ಈ ಸತೀರತ್ನವು ಆಂಧ್ರದೇಶದಲ್ಲಿರುವ ಓರುಗಲ್ಲು ರಾಜ್ಯವನ್ನು ಬಹು ಚೆನ್ನಾಗಿ ಆಳಿದಳು. ಈಕೆಯು ಕಾಕತೀಯ ಗಣಪತಿರಾಜನ ಪತ್ನಿ. ದೇವಗಿರಿ ರಾಜನ ಮಗಳು. ರುದ್ರಮದೇವಿಯು ತನ್ನ ಪತಿಯ ಮರಣಾನಂತರ ೧೨೫೭ ನೆಯ ಇಸವಿಯಿಂದ ೧೨೯೫ ನೆಯ ಇಸವಿಯವರೆಗೆ ರಾಜ್ಯವನ್ನು ಪಾಲಿಸಿದಂತೆ ಶಾಸನದಿಂದಲೂ, ಚರಿತ್ರೆಯಿಂದಲೂ ತಿಳಿಯಬರುತ್ತದೆ.

ಕಾಕತೀಯ ಗಣಪತಿರಾಜನು ಗತಿಸಿದ ಅನಂತರ ರುದ್ರಮದೇವಿಯು ವಿಶೇಷ ದುಃಖಾಕ್ರಾಂತಳಾಗಿದ್ದಳು. ಆಗ ಮಂತ್ರಿಯಾದ ಶಿವದೇವಯ್ಯನು ಆಕೆಗೆ, "ತಾಯೀ! ನೀವು ದುಃಖವನ್ನು ಮರೆತು, ರಾಜ್ಯವನ್ನು ಪಾಲಿಸಿರಿ. ರಾಜ್ಯಕ್ಕೆ ವಾರಸದಾರರು ಯಾರೂ ಇಲ್ಲ ಎಂಬ ಚಿಂತೆಯನ್ನು ಬಿಡಿ. ತಮ್ಮ ಪುತ್ರಿಯಾದ ಉಮ್ಮಕ್ಕನಿಗೆ ಜನಿಸುವಕುಮಾರನು ಮುಂದೆ ರಾಜ್ಯಾಧಿಪತಿಯಾಗುವುನು." ಎಂದು ಅನೇಕ ಹಿತವಚನಗಳನ್ನು ನುಡಿದನು. ಅದರಂತೆಯೆ ರುದ್ರಮದೇವಿಯು ಮನಸ್ಸನ್ನು ಸಮಾಧಾನಮಾಡಿಕೊಂಡು ರಾಜನ ಮುದ್ರಿಕೆಯನ್ನೂ, ಖಡ್ಗವನ್ನೂ ಸಿಂಹಾಸನದಮೇಲಿಟ್ಟು ಶಿವದೇವಯ್ಯನ ಸಹಾಯದಿಂದ ರಾಜ್ಯವನ್ನು ಪಾಲಿಸುತಲಿದ್ದಳು. ಆಕೆಯು ತನ್ನ ರಾಜಧಾನಿಯಾದ ಓರುಗಲ್ಲಿನಸುತ್ತು ನಾಲ್ಕು ಪ್ರಾಕಾರಗಳುಳ್ಳ ಕೋಟೆಯನ್ನು ಶತ್ರುಗಳಿಗೆ ಅಭೇದ್ಯವಾಗುವಂತೆ ಕಟ್ಟಿಸಿದಳು. ಮತ್ತು ತಕ್ಕ ಸ್ಥಳಗಳಲ್ಲಿ ಸೈನ್ಯಗಳನ್ನು ಇಟ್ಟಳು. ಅದರಿಂದ ಶತ್ರುಗಳು ಈಕೆಯ ರಾಜ್ಯವನ್ನು ಗೆಲ್ಲುವುದು ಶ್ರಮಸಾಧ್ಯವು ಎಂದು ಎಣಿಸುತಲಿದ್ದರು. ರುದ್ರಮದೇವಿಯು ಪ್ರಜೆಗಳನ್ನು ನ್ಯಾಯವಾಗಿ ಪರಿಪಾಲಿಸುತಲಿದ್ದುದರಿಂದ, ಅವರು ಆಕೆಯ ಆಳ್ವಿಕೆಯು ಶಾಶ್ವತವಾಗಿ ಇರಬೇಕು ಎಂದು ಅಪೇಕ್ಷಿಸುತಲಿದ್ದರು.

ಈಕೆಯು ತನ್ನ ರಾಜ್ಯದಲ್ಲಿ ಅನೇಕ ಕೆರೆಗಳನ್ನೂ, ಬಾವಿಗಳನ್ನೂ ತೋಡಿಸಿದಳು. ಅನೇಕ ಸತ್ರಗಳನ್ನು ಕಟ್ಟಿಸಿದಳು. ಬಡ ಬ್ರಾಹ್ಮಣರಿಗೆ ಚಿನ್ನದ ಕೊಂಬುಗಳುಳ್ಳ ಅನೇಕ ಗೋವುಗಳನ್ನು ದಾನ ಮಾಡಿದಳು. ಅನೇಕ ದೇವಸ್ಥಾನಗಳನ್ನು ಕಟ್ಟಿಸಿ, ಅವುಗಳಿಗೆ ಭೂಮಿಯನ್ನು ಬಿಡಿಸಿಕೊಟ್ಟಳು.

ಒಂದುಸಲ ರುದ್ರಮದೇವಿಯು ಉಮ್ಮಕ್ಕನೊಡನೆ ಮೊಗಲಿಚೆರ್ಲು ಎಂಬ ಸ್ಥಳಕ್ಕೆ ಹೋಗಿ ಅಲ್ಲಿ ವೀರಾಶಕ್ತಿಯನ್ನು ಪೂಜಿಸುತ್ತ ಐದು ದಿವಸಗಳನ್ನು ಅಲ್ಲಿಯೇ ಕಳೆದಳು. ಆ ಸಮಯದಲ್ಲಿ ಹರಿಹರದೇವ, ಮುರಾರಿ ಎಂಬುವವರು ಆಕೆಯ ಮೇಲೆ ದಂಡೆತ್ತಿ ಬರಲು ಅವರನ್ನು ಸಾಮೋಪಾಯದಿಂದ ಸಂತೈಸಿ, ಅವರೊಡನೆ ಸ್ನೇಹಮಾಡಿಕೊಂಡು ಓರುಗಲ್ಲಿಗೆ ಹೋದಳು. ಅನಂತರ ಅವರ ಮಸಲತ್ತನ್ನೆಲ್ಲ ತಿಳಿದು ತನ್ನ ಸೈನ್ಯವನ್ನು ಕಳುಹಿಸಿ ಅವರನ್ನು ಸೋಲಿಸಿದಳು.

ಕೆಲವು ದಿವಸಗಳು ಕಳೆದಮೇಲೆ ದೇವಗಿರಿರಾಜನು ಓರುಗಲ್ಲನ್ನು ಮುತ್ತಿಗೆ ಹಾಕಿದನು. ರುದ್ರಮದೇವಿಯು ಈಶ್ವರನನ್ನು ಪ್ರಾರ್ಥಿಸಿ ಧೈರ್ಯದಿಂದ ಶತ್ರುಗಳೊಡನೆ ಹೋರಿ ಅವರಕೊಬ್ಬನ್ನು ಅಡಗಿಸಿದಳು. ಅವರು ಓರುಗಲ್ಲಿನ ಸೈನಿಕರ ಪರಾಕ್ರಮಕ್ಕೆ ನಿಲ್ಲಲಾರದೆ ನಾಲ್ಕುಕಡೆಗೂ ಓಡಲಾರಂಭಿಸಿದರು. ರುದ್ರಮದೇವಿಯು ಅವರನ್ನು ದೇವಗಿರಿಯವರೆಗೂ ಹಿಂದಟ್ಟಿ ಓಡಿಸಿದಳು. ಆಗ

ಅವರು ರುದ್ರಮದೇವಿಯ ಶೌರ್ಯಕ್ಕೆ ಆಶ್ಚರ್ಯಪಟ್ಟು ಒಂದುಕೋಟಿ ರೂಪಾಯಿಗಳನ್ನು ಆಕೆಗೆಕೊಟ್ಟು ಸಮಾಧಾನಪಡಿಸಿದರು. ಅನಂತರ ರುದ್ರಮದೇವಿಯು ಜಯಭೇರಿಯೊಡನೆ ಪುರವನ್ನು ಪ್ರವೇಶಿಸಿ, ಶೂರರಾದ ತನ್ನ ಸೈನಿಕರಿಗೆ ತಕ್ಕ ಬಹುಮಾನವನ್ನು ಕೊಟ್ಟು ಸಂತೋಷಗೊಳಿಸಿದಳು.

ಅನಂತರ ಆಕೆಯ ಪುತ್ರಿಯಾದ ಉಮ್ಮಕ್ಕನು ಅಂತರ್ವತ್ನಿಯಾಗಲು, ಆಕೆಯು ಅತ್ಯಂತಾನಂದವನ್ನು ಹೊಂದಿ ಪುಂಸವನವೇ ಮೊದಲಾದ ಸಂಸ್ಕಾರಗಳನ್ನು ಮಾಡಿಸಿ ವಿನೋದವಾಗಿ ಕಾಲವನ್ನು ಕಳೆಯುತಲಿದ್ದಳು. ಶಾಲಿವಾಹನ ಶಕ ೧೧೬೬ ನೆಯ ವರ್ಷದ ಚೈತ್ರ ಶುದ್ಧ ಗುರುವಾರ ಪ್ರಾತಃಕಾಲದಲ್ಲಿ ಉಮ್ಮಕ್ಕನಿಗೆ ಪುತ್ರೋದಯವಾಯಿತು. ಹನ್ನೊಂದನೆಯ ದಿವಸ ರುದ್ರಮದೇವಿಯು ಬಾಲಕನಿಗೆ ಸ್ನಾನಮಾಡಿಸಿ, ಸಿಂಹಾಸನದಮೇಲೆ ಮಲಗಿಸಿ, ಪೌರರಿಗೂ, ಸಾಮಂತರಿಗೂ ಈತನೇ ನಿಮ್ಮ ಪ್ರಭುವು ಎಂದು ಬಾಲಕನನ್ನು ತೋರಿದಳು. ಅವರೆಲ್ಲರು ಬಹು ಸಂತೋಷದಿಂದ ಉತ್ಸವಗಳನ್ನು ಮಾಡಿಕೊಂಡರು. ರುದ್ರಮದೇವಿಯು ಪುತ್ರೋತ್ಸವಕಾಲದಲ್ಲಿ ಅನೇಕ ದಾನಧರ್ಮಗಳನ್ನು ಮಾಡಿದಳು. ಅರ್ಭಕನ ನಾಮಕರಣದ ದಿವಸ, ಮಂತ್ರಿಯಾದ ಶಿವದೇವಯ್ಯನು ಪೂಜ್ಯಳಾದ ರುದ್ರಮದೇವಿಯ ಹೆಸರನ್ನು ಬಾಲಕನಿಗೆ ಇಡಲೆಣಿಸಿ, 'ಪ್ರತಾಪರುದ್ರ' ಎಂದು ನಾಮಕರಣವನ್ನುಮಾಡಿದನು. ಬಾಲಕನು ದಿನದಿನಕ್ಕೆ ಪ್ರವರ್ಧಮಾನನಾಗಿ ಶಿವದೇವಯ್ಯನಿಂದ ಸಕಲವಿದ್ಯೆಗಳನ್ನೂ ಕಲಿತನು. ಈತನ ಅನಂತರ ಉಮ್ಮಕ್ಕನಿಗೆ ಇನ್ನೊಬ್ಬಪುತ್ರನು ಹುಟ್ಟಿದನು. ಆತನಿಗೆ ಅನ್ನಮದೇವ ಎಂದು ಹೆಸರನ್ನಿಟ್ಟರು.

ಆಕೆಯು ದೌಹಿತ್ರನಿಗೆ ಗರ್ಭಾಷ್ಟಮದಲ್ಲಿ ಉಪನಯನವನ್ನು ಮಾಡಿ, "ಸಕಲವಿದ್ಯೆಗಳನ್ನೂ ಕಲಿಸಿ ಯುಕ್ತವಯಸ್ಕನಾದಮೇಲೆ ರಾಜ್ಯವನ್ನು ಆತನಿಗೆ ಕೊಡಬೇಕು" ಎಂದು ಶಿವದೇವಯ್ಯನಿಗೆ ತಿಳಿಸಿ, ಆಂಧ್ರದೇಶ ಶಿರೋರತ್ನಳಾದ ರುದ್ರಮದೇವಿಯು ಸ ೧೨೯೫ ನೆಯ ಇಸವಿಯಲ್ಲಿ ಪರಲೋಕವನ್ನು ಸೇರಿದಳು. ಸ್ತ್ರೀಯರಲ್ಲಿ ಇಂತಹವರು ಇರುವರೆಂದು ಪ್ರತ್ಯಕ್ಷವಾಗಿ ನೋಡುತಲಿದ್ದರೂ ನಮ್ಮ ದೇಶೀಯರು ಸ್ತ್ರೀಯರನ್ನು ಹೀನರನ್ನಾಗಿ ನೋಡುವುದು ಬಹು ಶೋಚನೀಯವಲ್ಲವೆ!

ಡಾಕ್ಟರು ಆನಂಟೀಬಾಯಿ ಜೋಶಿ.

" ದೇವತೆಗಳು ಕ್ಷೀರಸಮುದ್ರವನ್ನು ಮಥಿಸಿದಕಾಲದಲ್ಲಿ, ಅದರಲ್ಲಿ ಹುಟ್ಟಿದ ರತ್ನಗಳಿಂದ ತೃಪ್ತರಾಗಲಿಲ್ಲ; ಹಾಲಾಹಲದ ದೆಶೆಯಿಂದ ಭೀತರಾಗಲಿಲ್ಲ. ಅಮೃತವನ್ನು ಪಡೆಯುವವರೆಗೂ ತಮ್ಮ ಯತ್ನದಿಂದ ವಿಮುಖರಾಗಲಿಲ್ಲ. ಹಾಗೆಯೇ ನಿಶ್ಚಿತಾರ್ಥವನ್ನು ಪಡೆಯುವವರೆಗೂ ತಮ್ಮ ಪ್ರಯತ್ನವನ್ನು ಬಿಡದಿರುವುದೇ ಧೀರರ ಲಕ್ಷಣ. " ಎಂದು ಭರ್ತೃಹರಿಯ ಸುಭಾಷಿತ.

ಈ ಯುತ್ತಮ ರಮಣಿಯು ಕ್ರೀ.ಶ. ೧೮೬೫ ನೆ ಇಸವಿಯ ಮಾರ್ಚಿ ೩೧ ನೆಯ ತಾರೀಖಿನಲ್ಲಿ ಪೂನಾನಗರದಲ್ಲಿ ಜನ್ಮಿಸಿದಳು. ಈಕೆಯ ತಂದೆಯ ಹೆಸರು ಗಣಪತಿರಾವ್ ಅಮೃತೇಶ್ವರ್ ಜೋಶಿ. ಈತನು ಪೂರ್ವರುಗಳಿಸಿದ್ದ ಅಗ್ರಹಾರದಲ್ಲಿ ಉತ್ಪತ್ತಿಯಾಗುವಧನದಿಂದ ಜೀವಿಸುತಲಿದ್ದನು. ಇವರು ಕಳ್ಯಾಣ ಪಟ್ಟಣದಲ್ಲಿ ವಾಸವಾಗಿದ್ದರು. ಈತನ ಪತ್ನಿಯು ಪ್ರಸವನಿಮಿತ್ತವಾಗಿ ತನ್ನ ತೌರೂರಾದ ಪೂನೆಗೆ ಹೋದಳಾದಕಾರಣ ಆನಂದೀಬಾಯಿಯು ಆ ನಗರದಲ್ಲಿ ಜನ್ಮಿಸಿದಳು. ಹೆಣ್ಣುಮಗು ಹುಟ್ಟಿದುದರಿಂದ ಆಕೆಯ ಮಾತಾ ಪಿತೃಗಳು ವ್ಯಸನಯುತರಾದರು. ಆಗ ಈ ಮಗುವಿನ ದೆಸೆಯಿಂದ ತಾವು ಸಹ ಪ್ರಸಿದ್ಧರಾಗುವೆವು ಎಂದು ಅವರಿಗೆ ಹೇಗೆ ತಿಳಿಯುವುದು? ದೇಶಾಚಾರ ದಂತೆ ಹನ್ನೆರಡನೆಯ ದಿವಸ ಮಗುವಿಗೆ ಯಮುನೆ ಎಂದು ನಾಮಕರಣವನ್ನು ಮಾಡಿದರು. ಬಾಲಿಕೆಗೆ ಮೂರನೆಯ ತಿಂಗಳು ಪ್ರವೇಶಿಸಿದ ಅನಂತರ ತಾಯಿಯು ಕಳ್ಯಾಣಕ್ಕೆ ಬಂದಳು. ಯಮುನೆಯು ಕ್ರಮಕ್ರಮವಾಗಿ ತನ್ನ ಬಾಲಲೀಲೆಗಳಿಂದ ತಾಯಿತಂದೆಗಳನ್ನು ಆನಂದಸಾಗರದಲ್ಲಿ ಮುಳುಗಿಸುತ್ತಲಿದ್ದಳು. ಈಕೆಯು ನಾಲ್ಕೈದು ವರ್ಷದ ಬಾಲಿಕೆಯಾಗಿರುವಾಗಲೆ ಬುದ್ಧಿಶಾಲಿಸಿಯಾಗಿ ತೋರುತಲಿದ್ದಳು. ಆಮೇಲೆ ಆಕೆಯ ತಾಯಿಯು ಮಗಳು ಮನೆಯಲ್ಲಿದ್ದರೆ ತುಂಟಕೆಲಸಗಳನ್ನು ಮಾಡುತಲಿರುವಳು ಎಂದು ಸಮೀಪದಲ್ಲಿದ್ದ ಪಾಠಶಾಲೆಗೆ ಕಳುಹಿಸುತಲಿದ್ದಳು. ಆದರೆ ಯಮುನೆಯು ಬಾಲ್ಯದಲ್ಲಿ ಕ್ರೀಡಾಸಕ್ತಳಾಗಿ ವಿದ್ಯಾಭ್ಯಾಸದಲ್ಲಿ ಅಶ್ರದ್ಧೆಯುಳ್ಳವಳಾಗಿದ್ದಳು. ಆಕೆಯ ತಾಯಿಯು ಮಕ್ಕಳನ್ನು ಪಶುಗಳನ್ನು ಶಿಕ್ಷಿಸುವಂತೆ ಶಿಕ್ಷಿಸುವ ಮೂರ್ಖಸ್ತ್ರೀಯಾದಕಾರಣ, ಈ ಹುಡುಗಿಯು ತಾಯಿಯ ಕೈಯಲ್ಲಿ ನಿತ್ಯವೂ ಏಟುಗಳನ್ನು ತಿನ್ನುತಲಿದ್ದಳು. ಯಮುನೆಯ ಅಜ್ಜಿ (ತಾಯಿಯ ತಾಯಿ) ಯೂ ಗಣಪತಿರಾಯರ ಸ್ನೇಹ

ಯಲ್ಲಿಯೇ ಇರುತಲಿದ್ದಳಾದುದರಿಂದ ಯಮುನೆಯನ್ನು ಯಾರು ಬೈದರೂ, ಹೊಡೆದರೂ ಆಕೆಯು ಅವರೊಡನೆ ಜಗಳವಾಡುತಲಿದ್ದಳು. ಯಮುನೆಯು ಬಾಲ್ಯದಿಂದಲೂ ಒಂದು ನಿಮಿಷವಾದರೂ ಸುಮ್ಮನಿರದೆ ಯಾವುದಾದರೂ ಒಂದು ಕೆಲಸವನ್ನು ಮಾಡುತಲಿರುವ ಸ್ವಭಾವವುಳ್ಳವಳಾಗಿದ್ದಳು. ಯಮುನೆಗೆ ಏಳುವರ್ಷಗಳಾದೊಡನೆಯೆ ಆಕೆಯ ಜನನೀಜನಕರಿಗೆ ಮಗಳವಿವಾಹವನ್ನು ಕುರಿತು ಚಿಂತೆಯು ಉಂಟಾಯಿತು. ಅವರು ಅನೇಕ ಸ್ಥಳಗಳಲ್ಲಿ ಹುಡುಕತ ಲಿರಲು, ಒಬ್ಬ ಗೃಹಸ್ಥನು ಠಾಣಾ ಎಂಬ ಗ್ರಾಮದಿಂದ ಕಳ್ಯಾಣಕ್ಕೆ ಬಂದನು. ಆತನೊಡನೆ ಗಣಪತಿರಾಯನು ತನ್ನ ಮಗಳ ವಿವಾಹವಿಷಯವನ್ನು ಕುರಿತು ಪ್ರಸ್ತಾಪಿಸಲು, ಆತನು 'ಠಾಣಾದಲ್ಲಿರುವ ಪೋಸ್ಟುಮಾಸ್ಟರ್‌ಯವರ ಹೆಂಡತಿಯು ಕಾಲವಾಧಳು; ನೀವು ಆತನ ಬಳಿಗೆ ಹೋಗಿ ವಿಚಾರಿಸಿ.' ಎಂದು ಹೇಳಿದನು.

ಆ ಗೃಹಸ್ಥನು ಹೇಳಿದ ಪೋಸ್ಟುಮಾಸ್ಟರು ಗೋಪಾಲವಿನಾಯಕ ಜೋಶಿ ಸಂಗಮನೇರ್‌ಕರ್ ಎಂಬಾತನು. ಈತನು ತನ್ನ ಬಾಲ್ಯದಲ್ಲಿ ತನ್ನ ಅಕ್ಕನೊಡನೆ ವಿದ್ಯಾಭ್ಯಾಸ ಮಾಡುತಲಿದ್ದುದರಿಂದ, ಸ್ತ್ರೀಯರಮೇಧಾಶಕ್ತಿಯು ಪುರುಷರ ಬುದ್ಧಿಯೊಡನೆ ಸಮಾನವಾದುದು ಎಂಬುದನ್ನು ಅರಿತಿದ್ದನು. ಈ ಗೋಪಾಲ ರಾವಿಗೆ ಚಿಕ್ಕತನದಲ್ಲಿಯೇ ಪ್ರಥಮವಿವಾಹವು ನಡೆಯಿತು. ಆತನು ತನ್ನ ಪತ್ನಿಯನ್ನು ವಿಶೇಷ ವಿದ್ಯಾವತಿಯನ್ನಾಗಿಮಾಡಿ ಸ್ತ್ರೀವಿದ್ಯಾಲಾಭಗಳನ್ನು ಲೋಕಕ್ಕೆ ತೋರಬೇಕು ಎಂದು ನಿಶ್ಚಯಿಸಿ, ಅತ್ಯಂತ ಶ್ರದ್ಧೆಯೊಡನೆ ತನ್ನ ಸತಿಗೆ ವಿದ್ಯೆಯನ್ನು ಕಲಿಸುತಲಿದ್ದನು. ಆದರೆ ಆಕೆಯು ಗೃಹಕಾರ್ಯಗಳಲ್ಲಿ ಅತ್ತೆ ಹೆಣ್ಣುಮಕ್ಕಳ ದೆಸೆಯಿಂದ ವಿಶೇಷ ಸೊಸೆತನವನ್ನು ಅನುಭವಿಸುತ ಲಿದ್ದುದರಿಂದ ವಿದ್ಯಾಭ್ಯಾಸವನ್ನು ಮಾಡಲು ಆಗಲಿಲ್ಲ. ಹೀಗಿರಲು ಆಕೆಯು ಹದಿಮೂರನೆಯ ವರ್ಷದಲ್ಲಿಯೇ ಒಬ್ಬ ಪುತ್ರನನ್ನು ಪಡೆದು ಸ್ವರ್ಗಸ್ಥಳಾದಳು. ಗೋಪಾಲರಾಯನು ಪ್ರಥಮಭಾರ್ಯೆಯು ಸ್ವರ್ಗಸ್ಥಳಾದ ಮೇಲೆ ಉದಾಸೀನ ಭಾವದಿಂದ ದ್ವಿತೀಯವಿವಾಹವನ್ನು ಮಾಡಿಕೊಳ್ಳಲಿಲ್ಲ. ಪ್ರಥಮಪತ್ನಿಯು ಜೀವಿಸಿರುವಕಾಲದಲ್ಲಿಯೇ ಈತನಿಗೆ ಪೋಸ್ಟಾಫೀಸಿನಲ್ಲಿ ಒಂದು ಚಿಕ್ಕ ಕೆಲಸವು ದೊರೆತು, ಅಲ್ಪಕಾಲದಲ್ಲಿಯೇ ಸ್ವತಂತ್ರವಾದ ಪೋಸ್ಟ್‌ಮಾಸ್ಟರ್ ಕೆಲಸವಾಯಿತು. ಆತನು ತನ್ನ ಪ್ರಥಮಪತ್ನಿಗೆ ಉಂಟಾದ ಸೊಸೆತನವನ್ನು ನೋಡಿ ಚಿಕ್ಕತನ ದಲ್ಲಿಯೇ ಹೆಣ್ಣುಮಕ್ಕಳಿಗೆ ವಿವಾಹವನ್ನುಮಾಡಿ ಅತ್ತೆಯ ಮನೆಗೆ ಕಳುಹಿಸುವ ತಾಯಿತಂದೆಗಳನ್ನೂ, ಪರರ ಮಕ್ಕಳನ್ನು ಅತಿ ಕ್ರೂರವಾಗಿ ಹಿಂಸಿಸುವ ಅತ್ತೆಯರನ್ನೂ ದೂಷಿಸುತಲಿದ್ದನಲ್ಲದೆ, ಆ ಕಾರಣದಿಂದಲೇ ಪುನಃ ವಿವಾಹವನ್ನು ಮಾಡಿಕೊಳ್ಳಲು ಇಷ್ಟಪಡಲಿಲ್ಲ. ಈ ವಿಧವಾಗಿ ಕೆಲವುಕಾಲ ಕಳೆದಮೇಲೆ ಗಣಪತಿರಾಯನು ತಾನಾಗಿಯೇ ಬಂದು ತನ್ನ ಪುತ್ರಿಯನ್ನು ವಿವಾಹಮಾಡಿ

ಕೊಳ್ಳಬೇಕು ಎಂದು ಕೇಳಿಕೊಳ್ಳಲು, ಗೋಪಾಲರಾಯನು, "ನನ್ನ ಭಾರ್ಯೆಗೆ ನಾನು ಯಾವ್ಹ. ವಿಧವಾದ ವಿದ್ಯಾಭ್ಯಾಸವನ್ನು ಮಾಡಿಸಿದರೂ, ತಾವು ಆಟಂಕ ಮಾಡದೆ ಇರಲು ಒಪ್ಪಿದರೆ, ನಾನು ತಮ್ಮ ಕುಮಾರಿಯನ್ನು ಮದುವೆ ಮಾಡಿಕೊಳ್ಳಲು ಸಮ್ಮತಿಸುವೆನು." ಎಂದನು. ಗಣಪತಿರಾಯನು ಹಾಗೆಯೇ ಆಗಲಿ ಎಂದು ಒಪ್ಪಿಕೊಂಡು ಗೋಪಾಲರಾಯನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿದನು. ವಿವಾಹಾನಂತರ ಯಮುನಾಬಾಯಿಗೆ 'ಆನಂದೀಬಾಯಿ' ಎಂದು ಅತ್ತೆಯ ಮನೆಯವರು ಹೆಸರಿಟ್ಟರು. ಅನಂತರ ಗೋಪಾಲರಾಯನು ಮಾವನ ಅನುಜ್ಞೆಯನ್ನು ಪಡೆದು ಪ್ರತಿದಿವಸವೂ ಸಾಯಂಕಾಲದಲ್ಲಿ ಕಳ್ಯಾಣಪಟ್ಟಣಕ್ಕೆ ಬಂದು ಪತ್ನಿಗೆ ಓದುಬರಹವನ್ನು ಕಲಿಸುತಲಿದ್ದನು. ಆಕಾಲದಲ್ಲಿ ಆನಂದೀ ಬಾಯಿಗೆ ಪತಿ ಎಂದರೆ ಒಂದು ವ್ಯಾಘ್ರದಂತೆ ತೋರುತಲಿದ್ದುದರಿಂದ ಅತ್ಯಂತ ಭಯಪೀಡಿತೆಯಾಗಿದ್ದಳು. ಗೋಪಾಲರಾಯನು ಆಕೆಯ ಭಯವನ್ನು ಹೋಗ ಲಾಡಿಸಿ ಅತ್ಯಾದರದೊಡನೆ ಪಾಠಗಳನ್ನು ಹೇಳುತಲಿದ್ದನು.

ಗಣಪತಿರಾಯನಿಗೆ ತನ್ನ ಮಗಳಿಗೆ ಅಳಿಯನು ಓದುಬರಹಗಳನ್ನು ಹೇಳಿ ಕೊಡುವುದು ಅಸಮಾಧಾನಕರವಾಗಿತ್ತು. ಆದರೆ ತಾನು ವಿವಾಹಕ್ಕೆ ಪೂರ್ವದಲ್ಲಿ ಒಪ್ಪಿಕೊಂಡನಾದಕಾರಣ ಏನೂ ಹೇಳಲಾರದೆ 'ಸ್ತ್ರೀವಿದ್ಯೆಯು ಅನೇಕ ನಷ್ಟ ಗಳಿಗೆ ಕಾರಣವಾದುದು' ಎಂದು ಸ್ನೇಹಿತರ ಮೂಲಕವಾಗಿ ಅಳಿಯನಿಗೆ ತಿಳಿಯ ಪಡಿಸಿದನು. ಗೋಪಾಲರಾಯನು ಅವರಿಗೆ ತಕ್ಕ ಸಮಾಧಾನಗಳನ್ನು ಹೇಳಿ ಕಳುಹಿಸಿ, ಮಾವನ ಗ್ರಾಮಸವಿಾಪದಲ್ಲಿ ನಿವಾಸಿಸುವುದರಿಂದ ತನ್ನ ಸತಿಯ ವಿದ್ಯಾಭ್ಯಾಸಕ್ಕೆ ವಿಘ್ನವುಉಂಟಾಗುವುದು ಎಂದು, ಅಲ್ಲೀಬಾಗೆಂಬ ಗ್ರಾಮಕ್ಕೆ ವರ್ಗಮಾಡಿಸಿಕೊಂಡನು. ಆತನೊಡನೆ ಆನಂದೀಬಾಯಿಯೂ, ಆಕೆಯ ಮುತ್ತಜ್ಜಯೂ ಹೋದರು.

ಅಲ್ಲಿಗೆ ಹೋದಮೇಲೆ ಗೋಪಾಲರಾಯನು ಆನಂದೀಬಾಯಿಗೆ ವಿದ್ಯಾ ಲಾಭಗಳನ್ನು ಕುರಿತು ಮನಹಿಡಿಯುವಂತೆ ಬೋಧಿಸಲು, ಆಕೆಯು ಶ್ರದ್ಧೆ ಯೊಡನೆ ಪಾಠಗಳನ್ನು ಕಲಿಯುತಲಿದ್ದಳು. ಆತನು ಸಂತೋಷದಿಂದ ಪತ್ನಿಗೆ ಅನೇಕವಿಷಯಗಳನ್ನು ತಿಳಿಸುತಲಿದ್ದನು. ಹೀಗೆ ಕೆಲವುಕಾಲ ಕಳೆಯಲು ಆನಂದೀಬಾಯಿಯು ಗರ್ಭವತಿಯಾದುದರಿಂದ ಆಕೆಯನ್ನು ಕಳ್ಯಾಣಕ್ಕೆ ಕರೆದು ಕೊಂಡು ಹೋದರು. ಅಲ್ಲಿ ಆಕೆಗೆ ಒಂದು ಗಂಡುಮಗುವು ಹುಟ್ಟಿ ಹತ್ತನೆಯ ದಿವಸವೇ ಸತ್ತುಹೋಯಿತು! ಪುತ್ರಶೋಕದಿಂದ ಆನಂದೀಬಾಯಿಯು ಕೆಲವು ದಿವಸದವರೆಗೂ ವಿದ್ಯಾಭ್ಯಾಸವನ್ನು ಮಾಡಲಿಲ್ಲ. ಕೆಲವು ತಿಂಗಳು ಕಳೆದ ಮೇಲೆ ಆಕೆಯು ಪುನಃ ವಿದ್ಯಾಭ್ಯಾಸವನ್ನು ಮಾಡಲು ಪ್ರಾರಂಭಿಸಿದಳು. ಅಲ್ಪಕಾಲದಲ್ಲಿಯೇ ತನ್ನ ಮನೋಗತವನ್ನು ಬರೆಯುವಷ್ಟು ಜ್ಞಾನವನ್ನು ಪಡೆ

ದಳು. ಅಲ್ಲೀಬಾಗಿನಲ್ಲಿದ್ದ ಜನರು ಆನಂದೀಬಾಯಿಯು ವಿದ್ಯಾಭ್ಯಾಸಮಾಡು ವುದನ್ನು ನೋಡಿ ಸಹಿಸಲಾರದೆ ಗೊಪಾಲರಾಯನಿಗೆ ಅನೇಕಕಷ್ಟಗಳನ್ನು ಉಂಟುಮಾಡುತಲಿದ್ದರು. ಆದಕಾರಣ ಅಲ್ಲಿರಲು ಇಷ್ಟಪಡದೆ, ಕೋಲಾಪುರ ದಲ್ಲಿ ಸ್ತ್ರೀವಿದ್ಯಾಭಿಮಾನಿಗಳು ಇರುವರು ಎಂದು ಕೇಳಿ ಗೋಪಾಲರಾಯನು ಬಹು ಪ್ರಯತ್ನದಿಂದ ಆ ವೂರಿಗೆ ವರ್ಗಾಯಿಸಿಕೊಂಡನು. ಕೋಲಾಪುರದಲ್ಲಿದ್ದ ಬಾಲಿಕಾಪಾಠಶಾಲೆಯು ಇವರ ಮನೆಗೆ ಬಹುದೂರದಲ್ಲಿ ಇದ್ದುದರಿಂದ, ಅಲ್ಲಿಗೆ ಆನಂದೀಬಾಯಿಯು ಒಬ್ಬಳೇ ನಡೆದುಕೊಂಡು ಹೋಗುವುದು ಅಸಾಧ್ಯವಾಗಿತ್ತು. ಪಾಠಶಾಲೋಪಾಧ್ಯಾಯಿನಿಯಾದ ಮಿಸ್ ಮಾಯಿಸೀಯವರ ಮನೆಯು ಇವರ ಮನೆಗೆ ಸಮೀಪದಲ್ಲಿದ್ದುದರಿಂದ ಗೋಪಾಲರಾಯನು ಆಕೆಯ ಮನೆಗೆ ಹೋಗಿ ಪ್ರಸಂಗವಶದಲ್ಲಿ, "ನನ್ನ ಪತ್ನಿಯನ್ನು ತಮ್ಮ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಹೋಗುವಿರಾ?" ಎಂದು ಕೇಳಲು, ಆಕೆಯು ಸ್ವಲ್ಪಯೋಚಿಸಿ ಹಾಗೆಯೇ ಆಗ ಲೆಂದಳು. ಕೆಲವುದಿವಸ ಆನಂದೀಬಾಯಿಯು ಆಕೆಯೊಡನೆ ಪಾಠಶಾಲೆಗೆ ಹೋಗುತಲಿದ್ದಳು. ಅನಂತರ ಯಾವ ಕಾರಣದಿಂದಲೋ ಮಾಯಿಸೀ ತನ್ನ ಗಾಡಿಯಲ್ಲಿ ಸ್ಥಳವನ್ನು ಕೊಡಲು ಒಪ್ಪಿಕೊಳ್ಳಲಿಲ್ಲ. ಆದಕಾರಣ, ಆನಂದೀ ಬಾಯಿಯು ಪಾಠಶಾಲೆಗೆ ಹೋಗುವುದನ್ನು ನಿಲ್ಲಿಸಬೇಕಾಯಿತು. ಕೋಲಾ ಪುರದಲ್ಲಿ ಈ ದಂಪತಿಗಳು ಆಗಾಗ್ಗೆ ಪಾದ್ರಿಗಳ ಮನೆಗೆ ಹೋಗುತಲಿದ್ದರು. ಪಾದ್ರೀಹೆಂಗಸರು ಆನಂದೀಬಾಯಿಗೆ ಇಂಗ್ಲೀಷಿನಲ್ಲಿ ಎರಡು ಮೂರು ಪುಸ್ತಕ ಗಳನ್ನು ಕಲಿಸಿದರು. ಆನಂದೀಬಾಯಿಯು ಅಲ್ಪವಯಸ್ಕಳಾದರೂ, ಅವರು ಮಾಡುವ ಮತಬೋಧೆಯನ್ನು ಗ್ರಹಿಸದೆ ವಿದ್ಯಾಭ್ಯಾಸವನ್ನು ಮಾಡುತಲಿದ್ದಳು. ಈ ಪಾದ್ರಿಗಳಿಂದಲೇ ಈಕೆಗೆ ಅಮೆರಿಕಾದೇಶದ ಅನೇಕವಿಷಯಗಳು ತಿಳಿದು ಬಂದವು. ಅಂದಿನಿಂದ ಆನಂದೀಬಾಯಿಗೆ ಅಮೆರಿಕಾದೇಶಕ್ಕೆ ಹೋಗಿ ವಿದ್ಯಾ ಭ್ಯಾಸಮಾಡಬೇಕು ಎಂಬ ಅಪೇಕ್ಷೆಯು ಹುಟ್ಟಿತು.

೧೮೭೯ ನೆಯ ಇಸವಿಯಲ್ಲಿ ಗೋಪಾಲರಾಯನಿಗೆ ಬೊಂಬಾಯಿಯಲ್ಲಿ ಕೆಲಸವಾಯಿತು. ಅಲ್ಲಿದ್ದಕಾಲದಲ್ಲಿ ಆನಂದೀಬಾಯಿಯು ಸ್ವಲ್ಪ ಇಂಗ್ಲೀಷನ್ನೂ, ಸಂಸ್ಕೃತವನ್ನೂ ಅಭ್ಯಾಸಿಸಿದಳು. ಆದರೆ ಅಲ್ಲಿನ ಪ್ರಜೆಗಳು ಸಹ ಆಕೆಯ ವಿದ್ಯಾ ಭ್ಯಾಸಕ್ಕೆ ಅನೇಕ ವಿಘ್ನಗಳನ್ನು ಉಂಟುಮಾಡುತಲಿದ್ದರು. ೧೮೮೦ ನೆಯ ವರ್ಷದಲ್ಲಿ ಇವರು ಭೂಜ್ ಎಂಬ ಗ್ರಾಮಕ್ಕೆ ಹೋದರು. ಬೊಂಬಾಯಿಯಿಂದ ಭೂಜಗ್ರಾಮಕ್ಕೆ ಹೋಗುವಾಗ ಆನಂದೀಬಾಯಿಯ ಮುತ್ತಜ್ಜಿಯು ಸ್ವಗ್ರಾಮಕ್ಕೆ ತೆರಳಿದಳಾದಕಾರಣ ಮನೆಯ ಕೆಲಸಗಳನ್ನೆಲ್ಲ ಈಕೆಯು ಒಬ್ಬಳೇ ಮಾಡಿಕೊಳ್ಳ ಬೇಕಾಯಿತು. ಅಲ್ಲಿರುವಕಾಲದಲ್ಲಿಯೇ ಆಕೆಯು ಇಂಗ್ಲೀಷುಭಾಷೆಯಲ್ಲಿ ಧಾರಾಳವಾಗಿ ಮಾತನಾಡಲು ಕಲಿತಳು.

ಗೋಪಾಲರಾಯನು ತನ್ನ ಪತ್ನಿಯನ್ನು ವಿಶೇಷವಿದ್ಯಾವತಿಯನ್ನಾಗಿ ಮಾಡಲೆಣಿಸಿರುವನು ಎಂಬ ವೃತ್ತಾಂತವನ್ನು ವರ್ತಮಾನಪತ್ರಿಕೆಯ ಮೂಲಕ, ಅಮೆರಿಕಾಖಂಡದ ನ್ಯೂಯಾರ್ಕ್‌ನಗರ ನಿವಾಸಿನಿಯಾದ ಮಿಸಸ್ ಬಿ. ಎಫ್. ಕಾರ್ಪೆಂಟರ್ ಎಂಬಾಕೆಯು ಕೇಳಿ ಆನಂದೀಬಾಯಿಗೆ ಸಹಾಯಮಾಡಲೆಣಿಸಿ, ಆಕೆಗೆ ಒಂದು ಲೇಖನವನ್ನು ಬರೆದಳು. ಈಕೆಯೇ ಆನಂದೀಬಾಯಿಯ ವಿದ್ಯಾ ವಿಷಯದಲ್ಲಿ ವಿಶೇಷ ಸಹಾಯವನ್ನು ಮಾಡಿ, ಆಕೆಯನ್ನು ಪುತ್ರಿಯಂತೆ ಪ್ರೀತಿ ಸುತಲಿದ್ದಳು. ಅದರಿಂದ ಆನಂದೀಬಾಯಿಯು ಆಕೆಯನ್ನು ಚಿಕ್ಕಮ್ಮ ಎಂದು ಸಂಬೋಧಿಸುತಲಿದ್ದಳು. ಆಕೆಗೆ ಆನಂದೀಬಾಯಿಯು ಬರೆದ ಉತ್ತರಗಳಿಂದ ನಮ್ಮ ದೇಶದ ಸ್ತ್ರೀಯರ ಅಸ್ವಾತಂತ್ರ್ಯ ದೆಶೆಯೂ, ತನ್ನಿವಾರಣಾರ್ಥವಾಗಿ ಆನಂದೀಬಾಯಿಯು ಸೂಚಿಸಿದ ಸದಭಿಪ್ರಾಯಗಳೂ ತಿಳಿಯಬರುವುವು. ಸ್ತ್ರೀಯರು ಉನ್ನತ ವಿದ್ಯೆಯನ್ನು ಅಭ್ಯಸಿಸಿದಲ್ಲದೆ ಸ್ವಹಿತವನ್ನು ತಿಳಿಯಲಾರರೆಂತಲೂ, ಈ ವಿಷಯವನ್ನು ಸ್ವಾನುಭವದಿಂದ ತಿಳಿದುಕೊಂಡೆನೆಂತಲೂ ಈಕೆಯು ಬರೆದಿದ್ದಳು.

ಅನಂತರ ಅವರು ಕಲಿಕತ್ತೆಗೆ ಹೋದರು. ಅಲ್ಲಿರುವಕಾಲದಲ್ಲಿ ಪೋಸ್ಟಲ್ ಡಿಪಾರ್ಟ್‌ಮೆಂಟಿನವರು ಆನಂದೀಬಾಯಿಯನ್ನು ೩೦ ರೂಪಾಯಿಗಳ ಮಾಸಾಶನವುಳ್ಳ ಒಂದು ನೌಕರಿಯನ್ನು ಸ್ವೀಕರಿಸಬೇಕು ಎಂದು ಹೇಳಿದರು. ಆದರೆ ಉದ್ಯೋಗವನ್ನು ಸ್ವೀಕರಿಸಿ ಸ್ವಾತಂತ್ರ್ಯವನ್ನು ಹೋಗಲಾಡಿಸಿಕೊಳ್ಳಲು ಆಕೆಯು ಒಪ್ಪಿಕೊಳ್ಳಲಿಲ್ಲ. ಆಕೆಗೆ ಅಮೆರಿಕಾಖಂಡಕ್ಕೆ ಹೋಗಿ ವೈದ್ಯವಿದ್ಯೆಯನ್ನು ಕಲಿಯಬೇಕು ಎಂಬ ಅಪೇಕ್ಷೆಯು ದಿನದಿನಕ್ಕೆ ಅಧಿಕವಾಗುತಲಿತ್ತು. ಆಮೇಲೆ ಅವರು ಶ್ರೀರಾಮಪುರಕ್ಕೆ ಹೋದರು. ಅಲ್ಲಿಗೆ ಹೋದಮೇಲೆ ಗೋಪಾಲರಾಯನು ಕೆಲವುದಿವಸಗಳು ವಿಶ್ರಾಂತಿಯನ್ನು ಪಡೆದು ಸಮೀಪದಲ್ಲಿರುವ ಆಗ್ರಾ, ಜಯಪೂರ್, ಗ್ವಾಲೇರ್, ಲಖ್‌ನೌ, ಕಾನ್‌ಪೂರ್, ಡಿಲ್ಲೀ, ಪ್ರಯಾಗ, ಕಾಶೀ ಮೊದಲಾದ ಸ್ಥಳಗಳಿಗೆ ಆನಂದೀಬಾಯಿಯೊಡನೆ ಹೋಗಿ, ದರ್ಶನೀಯವಾದ ಸ್ಥಳಗಳನ್ನು ತೋರಿದನು. ಇದರಿಂದ ಆನಂದೀಬಾಯಿಗೆ ಸ್ವಲ್ಪಮಟ್ಟಿಗೆ ಪ್ರವಾಸ ಸ್ಥಿತಿಯು ಬೋಧೆಯಾಯಿತು. ಅನಂರು ಶ್ರೀರಾಮಪುರಕ್ಕೆ ಬಂದ ಕೆಲವುದಿವಸಗಳಲ್ಲಿ ಪುನಃ ಎರಡು ವರ್ಷಗಳು ವಿಶ್ರಾಂತಿಯನ್ನು ತೆಗೆದುಕೊಂಡು ಅಮೆರಿಕಾಖಂಡಕ್ಕೆ ಹೋಗಲು ನಿಶ್ಚಯಿಸಿಕೊಂಡರು. ಆದರೆ ಈಗಾಗಲೆ ಪುನಃ ರಜಾ ಕೊಡಲಾರೆವು ಎಂದು ಮೇಲಿನ ಅಧಿಕಾರಿಗಳು ಬರೆದರು. ಆಗ ಗೋಪಾಲರಾಯನು ಪತ್ನಿಯನ್ನು ಮಾತ್ರ ಅಮೆರಿಕಾಕ್ಕೆ ಕಳುಹಿಸಲು ಎಣಿಸಿದನು. ಒಂದು ದಿವಸ ಆಕೆಯೂ, ಗೋಪಾಲರಾಯನೂ ಇಂತು ಪ್ರಸಂಗಿಸಿದರು:—

ಗೋಪಾಲ:—(ಚಿಂತೆಯಿಂದ) ನೀನು ಒಬ್ಬಳೇ ಅಮೆರಿಕಾಖಂಡಕ್ಕೆ ಹೋಗಬಾರದೆ? ನನಗೆ ವಿರಾಮವು ಸಿಕ್ಕುವುದಿಲ್ಲ. ನೀನು ಇಲ್ಲಿದ್ದರೆ ವಿದ್ಯಾ

ಭ್ಯಾಸವು ನಡೆಯುವುದಿಲ್ಲ. ಆದುದರಿಂದ ನೀನು ಹೊರಡುವದು ಉತ್ತಮ. ನಾವು ಇಬ್ಬರೂ ಹೋಗಬೇಕಾದರೆ ಇನ್ನೈರಡು ವರ್ಷಗಳವರೆಗೂ ಸಾಧ್ಯ ವಾಗುವುದಿಲ್ಲ. ನೀನು ಅಲ್ಲಿಗೆ ಹೋದರೆ ಈ ಎರಡು ವರ್ಷಗಳಲ್ಲಿ ನಿನ್ನ ವಿದ್ಯಾ ಭ್ಯಾಸವು ಬಹುಮಟ್ಟಿಗೆ ವೃದ್ಧಿಯಾಗುವುದು.

ಆನಂದೀ:— ಪ್ರತ್ಯುತ್ತರವನ್ನು ಕೊಡದೆ, ನೀನು ಏನು ಹೇಳುವಿರಿ ಎಂದು ಕೇಳುವಂತೆ, ಪತಿಗೆ ಅಭಿಮುಖಳಾಗಿ ನೋಡುತಲಿದ್ದುದನ್ನು ಕಂಡು,

ಗೋಪಾಲ:— ಇಂದಿನವರೆಗೂ ಬ್ರಾಹ್ಮಣಸ್ತ್ರೀಯು ಪರದೇಶಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಮಾಡಿದ ಉದಾಹರಣೆಯು ಕಂಡುಬರಲಿಲ್ಲ. ಆದುದರಿಂದ ನೀನು ಹೋಗಿ ವಿದ್ಯಾಭ್ಯಾಸವನ್ನು ಮಾಡಿ ಉದಾಹರಣೀಯಳಾಗು. ಸ್ತ್ರೀಯರು ಸಾಮರ್ಥ್ಯಹೀನರು ಎಂಬ ವಾಕ್ಯವು ಅನೃತವೆಂದು ಸ್ಥಾಪಿಸು. ಅಲ್ಲಿಗೆ ಹೋದ ಅನಂತರ ನಮ್ಮ ಆಚಾರಗಳನ್ನು ಬಿಡದೆ ಅಮೆರಿಕಾದೇಶೀಯರಿಗೆ ಸಹ ನಮ್ಮ ಆಚಾರಗಳನ್ನು ಕಲಿಸು. ಪ್ರಸ್ತುತಕಾಲದಲ್ಲಿ ದೇಶಾಭಿವೃದ್ಧಿಗೆ ಸ್ತ್ರೀಯರವಿಷ ಯದಲ್ಲಿ ಅನೇಕ ಸಂಸ್ಕರಣೆಗಳನ್ನು ಮಾಡಬೇಕು ಎಂದು ಹೇಳುವ ಪುರುಷರು ಅನೇಕರು ಇರುವುರು. ಆದರೆ ಅವರಿಂದ ಅಣುಮಾತ್ರವೂ ಸಂಸ್ಕರಣೆಯಾಗಲಿಲ್ಲ. ನೀನು ಹೆಂಗಸಾಗಿದ್ದು, ಅಲ್ಪಸಂಸ್ಕರಣೆಯನ್ನು ಮಾಡಿದರೂ, ಅದು ದೇಶಕ್ಕೆ ಅತ್ಯಂತ ಉಪಯೋಗಕರವಾದುದು, ಎಂಬ ಈ ಮಾತುಗಳನ್ನೆಲ್ಲ ಆಲಿಸಿ ಆನಂದೀಬಾಯಿಯು ಒಬ್ಬಳೇ ಹೋಗಲು ಸಮ್ಮತಿಸಿದಳು. ಆಹಾ! ಸ್ವದೇಶ ಸೋದರಿಯರಿಗೆ ಒಂದು ಉದಾಹರಣೆಯನ್ನು ತೋರುವುದಕ್ಕಾಗಿ ಅನೇಕಕಷ್ಟ ಗಳಿಂದ ಕೂಡಿದ, ಬಹುದೂರದಲ್ಲಿರುವ ಅಮೆರಿಕಾದೇಶದ ಪ್ರಯಾಣಕ್ಕೆ ಆನಂದೀಬಾಯಿಯಂತಹ ಧೀರ ರಮಣಿಯರಲ್ಲದೆ, ಮತ್ತಾರು ಸಮ್ಮತಿಸಬಲ್ಲರು?

ಅವರು ಕೃತನಿಶ್ಚಯರಾದರು, ಆನಂದೀಬಾಯಿಗೆ ಪರದೇಶ ವಾಸಾನುಕೂಲ ವಾದ ಬಟ್ಟೆಗಳನ್ನು ಹೊಲಿಸಿ ಸಿದ್ಧಪಡಿಸುತಲಿದ್ದರು. ಆನಂದೀಬಾಯಿಯು ಪರ ದೇಶವಸ್ತ್ರಗಳನ್ನು ಧರಿಸುವುದಿಲ್ಲ ಎಂದು ನಿಶ್ಚಯಿಸಿಕೊಂಡು, ನಮ್ಮ ದೇಶದಲ್ಲಿ ತಯಾರಾದ ಒರಟುಬಟ್ಟೆಗಳಿಂದಲೇ ಉಡುಪುಗಳನ್ನು ಹೊಲಿಸಿಕೊಂಡಳು! ಈಕೆಯು ಅಮೆರಿಕಾಕ್ಕೆ ಹೋಗುವಳು ಎಂಬ ವೃತ್ತಾಂತವನ್ನು ಕೇಳಿ ಅನೇಕರು ಹಲವು ಆಕ್ಷೇಪಣೆಗಳನ್ನು ಮಾಡತೊಡಗಿದರು. ಅವರ ಸಮಾಧಾನಾರ್ಥವಾಗಿ, ಆನಂದೀಬಾಯಿಯು ಒಂದು ಪಾಠಶಾಲಾಮಂದಿರದಲ್ಲಿ ಸಭೆಯನ್ನುಮಾಡಿ ಹೂಣಭಾಷೆಯಲ್ಲಿ ಒಂದು ಗಂಟೆಯಹೊತ್ತು ಅಸ್ಖಲಿತವಾಗಿ ಉಪನ್ಯಸಿಸಿದಳು. ಉಪನ್ಯಾಸದಿಂದ ಆಕೆಗೆ ಆಂಗ್ಲಭಾಷೆಯಲ್ಲಿರುವ ಪ್ರತಿಭಾವಿಶೇಷವೂ, ಆಕೆಯ ಅಪ್ರತಿಮವಕ್ತೃತ್ವಶಕ್ತಿಯೂ ಪ್ರಕಾಶವಾಯಿತು. ಆ ಉಪನ್ಯಾಸದ ಸಾರಾಂಶ ವನ್ನು ಇಲ್ಲಿ ಬರೆಯುವೆನು:

" ನನ್ನ ಅಮೆರಿಕಾಪ್ರಯಾಣವನ್ನು ಕುರಿತು, ಅನೇಕರು ಅಸಂಖ್ಯಪ್ರಶ್ನೆಗಳನ್ನು ಕೇಳುತಲಿರುವರು. ನಾನು ಅವುಗಳಲ್ಲಿ ಮುಖ್ಯವಾದ ಕೆಲವು ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಇಲ್ಲಿ ಹೇಳಲು ಎಣಿಸಿದೆನು.

ಆ ಪ್ರಶ್ನೆಗಳಾವುವೆಂದರೆ :—

೧. ನಾನು ಅಮೆರಿಕಾದೇಶಕ್ಕೆ ಏಕೆ ಹೋಗಬೇಕು?

೨ ಹಿಂದೂದೇಶದಲ್ಲಿ ಕೃಷಿಮಾಡುವುದಕ್ಕೆ ಸಾಧನೆಗಳಿಲ್ಲವೆ?

೩. ನಾನು ಒಬ್ಬೊಂಟಿಗಳಾಗಿ ಹೋಗಲೇಕೆ?

೪. ನಾನು ಹಿಂದೂದೇಶಕ್ಕೆ ಹಿಂತಿರಿಗಿ ಬಂದಾಗ ಸ್ವಜಾತಿಯವರು ಬಹಿಷ್ಕರಿಸುವುದಿಲ್ಲವೆ?

೫. ಯಾವುದಾದರೂ ಒಂದು ಅಪಾಯವು ಸಂಭವಿಸಿದರೆ ನಾನು ಏನು ಮಾಡಬೇಕು?

೬. ಸ್ತ್ರೀಯರಲ್ಲಿ ಯಾರೂ ಮಾಡದ ಕಾರ್ಯವನ್ನು ನಾನು ಮಾಡುವುದೇತಕ್ಕೆ?

೧. **ಒಂದನೆಯ ಪ್ರಶ್ನೆಗೆ ಉತ್ತರ:—** ನಾನು ವೈದ್ಯಕಲಿಯುವುದಕ್ಕಾಗಿ ಅಮೆರಿಕಾದೇಶಕ್ಕೆ ಹೊರಡಲು ಎಣಿಸಿದೆನು. ಈ ಹಿಂದೂದೇಶದಲ್ಲಿ ಸ್ತ್ರೀಯರ ಚಿಕಿತ್ಸೆಗೆ ತಕ್ಕ ಸಾಧನಕಲಾಪಗಳು ಇಲ್ಲದ ಕಾರಣಗಳಿಂದ ಉಂಟಾಗುತಲಿರುವ ಬಾಧೆಗಳನ್ನು ಪ್ರಕೃತದಲ್ಲಿ ಇಲ್ಲಿಗೆ ದಯಮಾಡಿಸಿರುವ ನಾರೀಮಣಿಯರು ಚೆನ್ನಾಗಿ ಅರಿತಿರುವರು. ಪ್ರಕೃತಿಶಾಸ್ತ್ರಗಳನ್ನೂ ಸ್ತ್ರೀವಿದ್ಯೆಯನ್ನೂ ಅಭಿವೃದ್ಧಿಗೊಳಿಸಲು, ಈ ದೇಶದಲ್ಲಿ ಪ್ರತಿಷ್ಠಿತವಾಗಿರುವ ಯಾವ ಸಮಾಜವೂ, ನಮ್ಮ ಯುವತಿಯರಲ್ಲಿ ಒಬ್ಬರನ್ನಾದರೂ, ನಾಗರಿಕತೆಯಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಖಂಡಾಂತರಗಳಿಗೆ ಕಳುಹಿಸಿ, ವೈದ್ಯಶಾಸ್ತ್ರದಲ್ಲಿ ಪ್ರವೀಣೆಯರನ್ನಾಗಿ ಮಾಡಿ, ಅವರಿಂದ ಇಲ್ಲಿನ ಮಹಿಳೆಯರಿಗೆ ಆ ವೈದ್ಯಶಾಸ್ತ್ರವನ್ನು ಬೋಧಿಸಲಿಕ್ಕೆ ತಕ್ಕ ಕಲಾಶಾಲೆಯು ಸ್ಥಾಪಿಸದಿರುವುದೆನಗೆ ಆಶ್ಚರ್ಯವನ್ನು ಉಂಟುಮಾಡುತಲಿದೆ. ತನ್ನಲ್ಲಿ ಇರುವ ಲೋಪಗಳನ್ನು ಹೊರಡಿಸದೆ, ಲೋಪಗಳನ್ನು ನಿವಾರಣೆಮಾಡಿಕೊಳ್ಳಲು ಯತ್ನಿಸದೆ, ನಿಂದಾಸ್ಪದವಾಗಿರುವುದು ನಮ್ಮ ಹಿಂದೂದೇಶವು ಮಾತ್ರವೇ ಆಗಿದೆ. ಈ ಹಿಂದೂದೇಶದಲ್ಲೆಲ್ಲಾ ಸ್ತ್ರೀವೈದ್ಯರು ಇಲ್ಲದಿರುವ ಲೋಪವು ಬಹು ಕಷ್ಟವಾಗಿದೆ. ಯೂರಪುದೇಶದ ನಾರಿಯರೂ, ಭಾರತರಮಣಿಯರೂ ಅವಸರವುಂಟಾದಾಗ ತಮ್ಮ ದೇಹಸ್ಥಿತಿಯನ್ನು ಕುರಿತು ಪರಪುರುಷ

ರಿಗೆ ತಿಳಿಸಿ, ಅವರಿಂದ ಚಿಕಿತ್ಸೆಯನ್ನುಮಾಡಿಸಿಕೊಳ್ಳಲು ಸಹಜವಾಗಿ ಇಷ್ಟ ಪಡುವುದಿಲ್ಲ. ಯೂರಪ್, ಅಮೆರಿಕಾದೇಶಗಳಿಂದ ಕೆಲಸ್ತ್ರೀವೈದ್ಯರು ಇಲ್ಲಿಗೆ ಬರುತಲಿದಾರೆ. ಆದರೆ ಅವರ ಭಾಷೆ ಮತ್ತು ಆಚಾರಮರ್ಯಾದೆಗಳು ನಮ್ಮವರಿಗೆ ಹೊಸದಾದಕಾರಣ, ಅವರಿಂದ ನಮ್ಮ ಸ್ತ್ರೀಯರಿಗೆ ವಿಶೇಷ ಉಪ ಯೋಗವುಂಟಾಗುವುದಿಲ್ಲ. ತಮ್ಮ ದೇಶದಮೇಲೆಯೂ, ತಮ್ಮ ದೇಶೀಯರ ಮೇಲೆಯೂ ನೈಸರ್ಗಿಕಪ್ರೇಮವುಳ್ಳ ಹೈಂದವಯುವತಿಯರು, ಪರದೇಶ ಸುಂದರಿ ಯರೊಡನೆ ಬೆರೆಯಲಾರರು. ಆದಕಾರಣ ಅವರಿಂದ ಹೆಚ್ಚು ಸಹಾಯವನ್ನು ಇವರು ಹೊಂದಲಾರದಿರುವರು. ಅದರಿಂದ ನಮ್ಮ ದೇಶಕ್ಕೆ ಸ್ವದೇಶ ಸ್ತ್ರೀವೈದ್ಯರ ಸಹಾಯವು ಅತ್ಯಂತಾಪೇಕ್ಷಣೀಯವು ಎಂದು ಎನಗೆ ತೋರುವುದು.

೨. **ಎರಡನೆಯ ಪ್ರಶ್ನೆಗೆ ಉತ್ತರ:**—ಈ ಹಿಂದೂದೇಶದಲ್ಲಿ ತಕ್ಕ ಸಾಧನೆಗಳು ಇಲ್ಲವೆಂದು ನಾನು ಹೇಳಬಲ್ಲೆನು. ಅಲ್ಪಸ್ವಲ್ಪ ವಿದ್ದರೂ ಅವು ಸುಲಭ ಸಾಧ್ಯವಾದುವಲ್ಲ ಎಂದು ನನ್ನ ಅಭಿಪ್ರಾಯವು. ಮದರಾಸಿನಲ್ಲಿ ಒಂದು ಸರ್ವಕಲಾಶಾಲೆಯೂ, ಪ್ರತಿಯೊಂದು ರಾಜಧಾನಿಯಲ್ಲಿಯೂ, ಮಂತ್ರಸಾನಿಯರ ತರಗತಿಗಳೂ ಇರುವುದು ಸತ್ಯವಾದರೂ, ಅಲ್ಲಿನ ಬೋಧಕರು ಪ್ರಾಚೀನಾಚಾರ ಪ್ರಭಿಷ್ಟರಾದುದರಿಂದಲೂ ಸ್ವಲ್ಪ ಅಸಹಿಷ್ಣುತಾಭಾವವುಳ್ಳವರಾಗಿ ಇರುವುದ ರಿಂದಲೂ, ಅಲ್ಲಿ ಉಪದೇಶಿಸುತಲಿರುವ ವಿದ್ಯೆಯು ಅಸಂಪೂರ್ಣವಾದುದಾಗಿಯೂ, ಲೋಪಸಹಿತವಾದುದಾಗಿಯೂ ಇರುವುದು. ನಾನು ಈ ಪರಿಯಾಗಿ ಹೇಳು ವುದು ಆಬೋಧಕರ ತಪ್ಪನ್ನು ಎಣಿಸುವುದಕ್ಕೆ ಅಲ್ಲ. ಅದು ನಮ್ಮ ಪುರುಷರ ಸ್ವಭಾವವು. ಇವರಿಗೆ ಪ್ರತಿಯಾಗಿ ಆಸ್ಥಾನವನ್ನು ಸ್ತ್ರೀಯರು ಅಲಂಕರಿಸುವ ವರೆಗೂ, ನಾವು ಈ ಅನಾನುಕೂಲಗಳನ್ನು ತಾಳ್ಮೆಯಿಂದ ಸಹಿಸಿಕೊಂಡು ಇರಬೇಕು.

ನಾನು ಕ್ರೈಸ್ತಳಲ್ಲ; ಬ್ರಾಹ್ಮಮತಾವಲಂಬಿನಿಯಲ್ಲ; ಆದುದರಿಂದ ಹಿಂದೂಮತಾಭಿಮಾನಿನಿಯಾಗಿ ತದ್ಧರ್ಮಗಳನ್ನು ಅನುಷ್ಠಿಸುತ್ತ, ಈ ದೇಶದಲ್ಲಿ ಪಾಠಶಾಲೆಗೆ ಹೋಗಿ ವಿದ್ಯಾಭ್ಯಾಸಮಾಡುವುದು ನನ್ನಂತಹ ರಮಣಿಗೆ ದುಷ್ಕರವು. ಆಂಗ್ಲೇಯರ ಉಡುಪುಗಳನ್ನು ಧರಿಸಿ ತಿರುಗಾಡುವ ಮತಾಂತರ ದವರಾರೂ, ಇಲ್ಲಿನ ಪ್ರಜೆಗಳು ನನ್ನನ್ನು ನೋಡುವಂತೆ ನೋಡುವುದಿಲ್ಲ. ಪಟ್ಟಣ ಗಳಲ್ಲಿಯೂ, ಹಳ್ಳಿಗಳಲ್ಲಿಯೂ, ಮನೆಗಳಲ್ಲಿಯೂ, ಬೀದಿಗಳಲ್ಲಿಯೂ ನನ್ನಂತಹ ಹಿಂದೂಸ್ತ್ರೀಯರಿಗೆ ಉಂಟಾಗುತಲಿರುವ ದುರಾಕ್ಷೇಪಣೆಗಳೂ, ದುರ್ವದಂತಿ ಗಳೂ, ಸ್ವದೇಶ ಕ್ರೈಸ್ತ ಸ್ತ್ರೀಯರಿಗೆ ಲೇಶಮಾತ್ರವೂ ಉಂಟಾಗುವುದಿಲ್ಲ. ಹೊಗೆಗಾಡಿಯಲ್ಲಾಗಲಿ, ಬೀದಿಯಲ್ಲಾಗಲಿ, ನಾನು ಒಬ್ಬೊಂಟಿಗಳಾಗಿ ಹೋಗು ವಾಗಲೆಲ್ಲ ಕೆಲಪ್ರಜೆಗಳು ಸೇರಿ ನನ್ನ ಮುಖವನ್ನು ನೋಡುತ್ತ ಅನುಚಿತ

ಪ್ರಶ್ನೆಗಳಿಂದ ನನ್ನ ಮನಸ್ಸಿಗೆ ಆಯಾಸವನ್ನುಂಟುಮಾಡುತಲಿದ್ದರು. ಈ ಚಿಕ್ಕ ಮಾತುಗಳಿಗಿಂತಲೂ ಕೆಲಉದಾಹರಣೆಗಳಿಂದ ನಿಜವು ನಿಮ್ಮ ಮನಸ್ಸಿಗೆ ಹತ್ತು ವಂತೆ ಹೇಳುವೆನು. ಆಲ್ಸಿಸಿರಿ.

ಕೆಲವು ವರ್ಷಗಳ ಹಿಂದೆ ನಾನು ಬೊಂಬಾಯಿಯಲ್ಲಿರುವ ಸಮಯದಲ್ಲಿ ಪಾಠಶಾಲೆಗೆ ಹೋಗುತಲಿದ್ದೆನು. ಕೈಯಲ್ಲಿ ಪುಸ್ತಕಗಳನ್ನು ಧರಿಸಿ ನಾನು ಪಾಠ ಶಾಲೆಗೆ ಹೋಗುತಲಿರುವಾಗ, ಕೆಲವರು ಕಿಟಕಿಗಳಿಂದ ನನ್ನನ್ನು ನೋಡುತ್ತಲೂ, ಬೀದಿಗಳಲ್ಲಿ ತಿರುಗಾಡುವ ಕೆಲವರು ಗಟ್ಟಿಯಾಗಿ ನಗುತ್ತಲೂ " ಇದೇನು ಚಿತ್ರ ! ಕಾಲಿಗೆ ಕಾಲುಚೀಲಗಳನ್ನೂ, ಬೂಟ್ಸುಗಳನ್ನೂ ಧರಿಸಿ, ಕೈಯಲ್ಲಿ ಪುಸ್ತಕಗಳನ್ನು ಹಿಡಿದು, ಪಾಠಶಾಲೆಗೆ ಹೋಗುತಲಿರುವ ಈ ಹೆಂಗಸು ಯಾರು ? ಇದರಿಂದ ಕಲಿಯು ಈಗಲೇ ಪ್ರಜೆಗಳ ಮನಸ್ಸನ್ನು ಆವಹಿಸಿದಂತೆ ತೋರುತ್ತದೆಯಲ್ಲವೆ ? " ಎಂದು ನನಗೆ ಕೇಳಿಬರುವಂತೆ ಕೋಲಾಹಲವಾಗಿ ಮಾತನಾಡಿಕೊಳ್ಳುತಲಿದ್ದರು.

ಓ ಮಾನಿನೀಮಣಿಯರೆ ! ನಿಮ್ಮನ್ನು ಸಂಬೋಧಿಸಿ ಇಂತಹ ಪ್ರಶ್ನೆಗಳನ್ನು ಕೇಳಿದಾಗ ನಿಮ್ಮ ಮನಸ್ಸು ಎಷ್ಟು ಸಂತಾಪವನ್ನು ಹೊಂದುವ್ರದೋ ನೀವೇ ಊಹಿಸಿಕೊಳ್ಳಿರಿ.

ಒಂದುಸಲ ನಾನು ಸ್ವಲ್ಪಕಾಲ ಪಾಠಶಾಲೆಯಲ್ಲಿ ಇರಬೇಕಾಗಿ ಬರಲು, ಭೋಜನಾರ್ಥವಾಗಿ ದಿನಕ್ಕೆ ಎರಡು ಸಲ ಬಂಧುಗಳ ಮನೆಗೆ ಹೋಗಬೇಕಾಗಿ ಬಂದಿತು. ನಾನು ಹೋಗುವಾಗಲೂ, ಬರುವಾಗಲೂ ಬೀದಿಯಲ್ಲಿ ಹೋಗು ವವರು ಸುತ್ತಲು ಸೇರಿ ಹಾಸ್ಯಮಾಡುತಲಿದ್ದರು. ಕೆಲವರು (ಹೊಟ್ಟೆಯುಬ್ಬು ವಂತೆ) ನಗುತಲಿದ್ದರು. ಕೆಲಗೃಹಸ್ಥರು ತಮ್ಮ ಗೃಹ ಪ್ರಾಂಗಣದಲ್ಲಿ ಕುಳಿತು ಕೊಂಡು ವಿಕೃತಾಲಾಪಗಳನ್ನಾಡುತ್ತ, ನನ್ನಮೇಲೆ ಕಲ್ಲನ್ನು ಎಸೆಯಲು ಸಹ ಲಜ್ಜಿಸುತಲಿರಲಿಲ್ಲ. ಅಂಗಡಿಗಳಲ್ಲಿ ಕುಳಿತಿರುವವರು ನನ್ನನ್ನು ಅಣಿಕಿಸುತ್ತ ಅಸಹ್ಯಕರವಾದ ಸಂಜ್ಞೆಗಳನ್ನು ಮಾಡುವದಕ್ಕೆ ಹಿಂತೆಗೆಯುತಲಿರಲಿಲ್ಲ. ಅಂತಹ ಸಮಯದಲ್ಲಿ ನನ್ನ ಮನಸ್ಸಿನ ಸ್ಥಿತಿಯು ಹೇಗಿದ್ದಿತೋ, ಶೀಘ್ರವಾಗಿ ಮನೆ ಯನ್ನು ಸೇರಿಕೊಳ್ಳಲು ನಾನು ಎಷ್ಟು ಆತುರಗೊಳ್ಳುತಲಿದ್ದೆನೋ ನೀವೇ ಊಹಿಸಿಕೊಳ್ಳಬಹುದು.

ಬೊಂಬಾಯಿನಗರ ನಿವಾಸಿಗಳ ಪರಿಯು ಹೀಗಿರಲು, ಬಂಗಾಳಿಯವರ ರೀತಿಯನ್ನು ಹೇಳಲು ಅಶಕ್ಯವು. ಇದು ಅತ್ಯಂತ ಶೋಚನೀಯವು. ಒಳ್ಳೆಯ ಗಾಳಿಗಾಗಿ ನಾನು ಹೊರಗೆ ಹೋದಾಗ ಇಂಗ್ಲೀಷಿನವರು ಸಹ ನನ್ನನ್ನು ಕಣ್ಣೆತ್ತಿ ನೋಡುತಲಿರಲಿಲ್ಲ. ಆದರೆ ಬಂಗಾಳಿಗಳು ಮಾತ್ರ ತಮ್ಮ ಡಂಭವೆಲ್ಲವು ಹೊರಬೀಳುವಂತೆ ಅಟ್ಟಹಾಸವನ್ನು ಮಾಡುತ್ತ ನನ್ನನ್ನು ನೋಡಿ, " ನೀನು

ಯಾರು? ನಿನ್ನ ಹೆಸರೇನು? ನಿನ್ನ ಸ್ಥಳವು ಯಾವುದು? ನೀನು ಎಲ್ಲಿಗೆ ಹೋಗುವೆ?" ಎಂದು ಅಪರಿಚಿತರು ಕೇಳಬಾರದ ಪ್ರಶ್ನೆಗಳನ್ನು ಕೇಳುತ್ತ ಲಿದ್ದರು. ಶ್ರೀರಾಮಪುರದಲ್ಲಿ ವಿದ್ಯಾವಂತರು ಎಂದು ಖ್ಯಾತಿಯನ್ನು ಹೊಂದಿದ ಕೆಲ ಸ್ವದೇಶ ಕ್ರೈಸ್ತವರು ನಾನು ವಿವಾಹಿತಳೋ? ವಿತಂತುವೋ? ದುರ್ಮಾ ರ್ಗಳೋ? ಕುಲಭ್ರಷ್ಟಳೋ? ಎಂದು ಶಂಕಿಸುತಲಿದ್ದರು.

ಧರ್ಮ ಪ್ರಿಯರಾದ ಸಭಾಸದರೇ! ಇಂತಪ್ಪ ಅವಿನಯ ಪ್ರಚಾರವನ್ನು ಸ್ವದೇಶ ಕ್ರೈಸ್ತವರು ಮಾಡಬಹುದೇ? ಮಾಡಕೂಡದು. ಇವುಗಳನ್ನು ನಿಮಗೆ ಬಿನ್ನವಿಸಿದುದು ಏಕೆಂದರೆ? ನೀವು ಇಂತಹ ಲೋಪಗಳನ್ನು ಸರಿಪಡಿಸು ವಿರೆಂತಲೂ, ನಿಮ್ಮಲ್ಲಿ ಈ ಕಷ್ಟಗಳನ್ನು ಯಾವಾಗಲೂ ಅರಿಯದವರು ನಾನು ಅಮೆರಿಕಾಖಂಡಕ್ಕೆ ಹೋಗುವುದು ವಿನೋದಕ್ಕಲ್ಲವೆಂದು ತಿಳಿಯುವಿರಿ ಎಂತಲೂ ತಿಳಿಸಿದೆನು.

೩. **ಮೂರನೆಯ ಪ್ರಶ್ನೆಗೆ ಉತ್ತರ:**—ನಾನು ಒಬ್ಬೊಂಟಿಗಳಾಗಿ ಹೋಗಲು ಪ್ರಥಮದಲ್ಲಿ ಇಷ್ಟಪಡಲಿಲ್ಲ. ನಾನು ಪತಿಯೊಡನೆಯೇ ಹೋಗಬೇಕು ಎಂದು ಎಣಿಸಿದನು. ಆಮೇಲೆ ಸ್ಥಿತಿಗತಿಗಳನ್ನು ವಿಚಾರಿಸಿ ಆ ಆಲೋಚನೆಯನ್ನು ಬಿಡಬೇಕಾಯಿತು. ನಮ್ಮಲ್ಲಿ ದ್ರವ್ಯವು ಪುಷ್ಕಳವಾಗಿಲ್ಲ. ಋಣವನ್ನುಮಾಡಲು ಇಷ್ಟವಿಲ್ಲ. ಮತ್ತು ಮುಖ್ಯವಾಗಿ ನನ್ನ ಪತಿಗೆ ವಯೋವೃದ್ಧಳಾದ ಮಾತೆಯೂ, ಅಲ್ಪವಯಸ್ಕರಾದ ಸೋದರಸೋದರಿಯರೂ ಇರುವರು. ಇವರಿಗೆಲ್ಲ ನನ್ನ ಪತಿಯೇ ಸಂರಕ್ಷಕನಾದಕಾರಣ, ಆತನು ನನ್ನೊಡನೆ ಬಂದರೆ, ಅವರು ದಿಕ್ಕಿಲ್ಲದ ವರಾಗಿ ಕೊನೆಯಿಲ್ಲದ ದಾರಿದ್ರ್ಯಕ್ಕೆ ಒಳಗಾಗುವುರು. ನನ್ನೊಬ್ಬಳಿಗೋಸ್ಕರ ಅನೇಕರನ್ನು ದುಃಖದಾರಿದ್ರ್ಯಗಳಿಗೆ ಪಾತ್ರರನ್ನಾಗಿ ಮಾಡುವುದು ಅಮಾನುಷ ಕೃತ್ಯವಲ್ಲವೆ? ಆದಕಾರಣ ನಾನು ಒಬ್ಬಳೇ ಹೋಗಲು ನಿಶ್ಚಯಿಸಿದೆನು.

೪. **ನಾಲ್ಕನೆಯ ಪ್ರಶ್ನೆಗೆ ಉತ್ತರ:**—ಬಹಿಷ್ಕಾರ ಭಯದಿಂದ ನಾನು ಚಲಿಸುವೆನು ಎಂದು ತಿಳಿಯುವಿರಾ? ನಾನು ಅದಕ್ಕೆ ಅಣುಮಾತ್ರವೂ ಚಲಿಸುವು ದಿಲ್ಲ. ನಾನು ಇಲ್ಲಿ ಯಾವವಿಧವಾಗಿರುವೆನೋ ಅಲ್ಲಿಯೂ ಅದೇವಿಧವಾಗಿ ಇರಲು ನಿಶ್ಚಯಿಸಿಕೊಂಡಿರಲು ನನ್ನನ್ನು ಬಹಿಷ್ಕರಿಸಲೀಕೆ? ನನ್ನ ಆಚಾರ ವ್ಯವಹಾರಗಳಲ್ಲಿಯೂ, ಆಹಾರವಿಹಾರಗಳಲ್ಲಿಯೂ, ವೇಷಭಾಷೆಗಳಲ್ಲಿಯೂ ನಾನು ಮಾರ್ಪುಮಾಡುವುದಿಲ್ಲ. ಹಿಂದೂಯುವತಿಯಾಗಿಯೇ ಹೋಗಿ, ಪುನಃ ಹಿಂದೂಸುಂದರಿಯಾಗಿಯೇಬಂದು ಇಲ್ಲಿನ ಹಿಂದೂಮಾನವತಿಯರೊಡನೆಯೇ ಸೇರಿಇರಲು ನಿಶ್ಚಯಿಸಿದೇನೆ. ನನ್ನ ಪೂರ್ವಿಕರು ಹೇಗೆ ಸಾಮಾನ್ಯವಾಗಿ ಜೀವಿ ಸಿದರೋ ಹಾಗೆಯೇ ನಾನು ಜೀವಿಸುವೆನು. ನಾನು ಹೀಗೆನಡೆದುಕೊಂಡರೂ

ಅಸ್ಮದ್ದೇಶೀಯರು ನನ್ನನ್ನು ಬಹಿಷ್ಕರಿಸುವುದಾದರೆ, ಆ ಕೆಲಸವನ್ನು ನಾನು ಬಂದ ಮೇಲೆ ಮಾಡಲೇಕೆ? ಈಗಲೇ ಮಾಡಬಹುದು. ಅದಕ್ಕೆ ಅವರಿಗೆ ಸರ್ವ ಸ್ವಾತಂತ್ರ್ಯವು ಉಂಟು. ನಮ್ಮ ಮಹಾರಾಷ್ಟ್ರ ಕುಟುಂಬವು ಒಂದಾದರೂ ಇಲ್ಲದ ಈ ಬಂಗಾಳಾದೇಶದೊಳಗೆ ಈ ಸ್ಥಳದಲ್ಲಿ ನಾನು ಈಗ ವಾಸಮಾಡುತ ಲಿರುವೆನಲ್ಲವೆ? ನಾನು ಈ ಸ್ಥಳದಲ್ಲಿ ನನ್ನ ದೇಶಾಚಾರ ಧರ್ಮಗಳನ್ನು ಅನುಷ್ಠಿಸಿ ಪ್ರವರ್ತಿಸುತಲಿರುವೆನೋ ಇಲ್ಲವೋ ಯಾರಿಗೆ ಗೊತ್ತು? ಆದುದ ರಿಂದ ಎಂದಿಗೂ ಸಂಭವಿಸಲಾರದ, ಸಂಭವಿಸಿದಾಗ ಮಾನುಷಪ್ರಯತ್ನಕ್ಕೆ ಅಸಾಧ್ಯವಾದ ವಿಷಯಗಳನ್ನು ಕುರಿತು ಚಿಂತಿಸದೇ ಇರುವುದು ಉತ್ತಮ.

೫. **ಐದನೆಯ ಪ್ರಶ್ನೆಗೆ ಉತ್ತರ:**—ಕೆಲವು ಜನರು ಪ್ರಪಂಚದಲ್ಲಿ ಕಂಡುಬರುವುದಕ್ಕಿಂತಲೂ ಅತ್ಯಧಿಕ ಭಯಂಕರವಾಗಿ ಗ್ರಂಥಗಳಲ್ಲಿ ಕಂಡುಬರುವ ದುರ್ದೆಶೆಗಳನ್ನು, ಮರವಸ್ಥೆಗಳನ್ನು, ಉದಾಹರಣೆಯಾಗಿ ತೋರಿ, ಭಯವನ್ನು ಅತಿಶಯಗೊಳಿಸಲು ಪ್ರಯತ್ನಿಸುವರು. ಆದರೆ ಆ ವಿಪತ್ತುಗಳು ಎಷ್ಟು ಭಯಂ ಕರಗಳೋ ಅಷ್ಟು ಅಪೂರ್ವವಾಗಿ ಸಂಭವಿಸುವಂತೆ ವಿಧಿಸಲ್ಪಟ್ಟಿವೆ. ಪುರುಷ ರಾಗಲಿ, ಸ್ತ್ರೀಯರಾಗಲಿ ಒಂದು ಕಾರ್ಯವನ್ನು ಮಾಡಲು ಪ್ರಯತ್ನಿಸುವುದಕ್ಕೆ ಪೂರ್ವದಲ್ಲಿ ತಾವು ಮಾಡುವಕಾರ್ಯವು ಸತ್ಫಲವನ್ನು ಕೊಡುವುದು ಎಂದು ಎಣಿಸುವರಲ್ಲದೆ, ದುಷ್ಫಲವನ್ನು ಕೊಡುವುದು ಎಂದು ಎಣಿಸುವುದಿಲ್ಲ. ಒಂದು ವೇಳೆ ತಾವುಮಾಡಿದ ಕಾರ್ಯದಿಂದ ಕೆಡುಕು ಉಂಟಾದರೆ ಯಾರಾದರೂ ಅನುಭವಿಸಲೇಬೇಕು. ಆದರೆ ಆ ವಿಪತ್ತು ಬರಬಹುದು ಎಂದು ಎಣಿಸಿದಾಗ ಇರುವ ಬಾಧೆಗಿಂತಲೂ, ಬಂದಾಗಬರುವ ಬಾಧೆಯು ಅಲ್ಪವಾಗಿ ಇರುವದು ಎಂಬುದು ಜಗದ್ವಿದಿತವು. ಈ ಲೋಕದಲ್ಲಿ ಯಾವವಿಧದಿಂದಲಾದರೂ ಶಾಶ್ವತ ಸುಖವನ್ನು ಹೊಂದಬಲ್ಲವೇ? ಎಂಬ ಶಂಕೆಯ ನಿವೃತ್ತಿಯನ್ನು ಮಾಡಿ ಕೊಳ್ಳಲು, ಈ ಪ್ರಪಂಚವು ನಮಗೆ ಎಂದಿಗೂ ಅವಕಾಶವನ್ನು ಉಂಟುಮಾಡ ಲಾರದು. ಸೌಖ್ಯಎಂಬುದು ಕೆಲವರು ಮಾಡಿ ತಮ್ಮೊಳಗೆ ತಾವು ವಿಭಾಗಿಸಿ ಕೊಳ್ಳುವ ಪದಾರ್ಥವಲ್ಲ. ಅದು ನಮ್ಮ ಮನಸ್ಸನ್ನು ಅನುಸರಿಸಿರುವುದು. ದುರವಸ್ಥೆಗಳಿಲ್ಲೆಲ್ಲ ಮರಣವೇ ದೊಡ್ಡದುಎಂದು ಎಣಿಸೋಣ ಎಂದರೆ, ಕೆಲವರು ಮೃತ್ಯುವಿನ ಬರುವಿಕೆಗೆ ಸಂತೋಷಿಸುವುದೇಕೆ? ಕೆಲವರು ದುಃಖಿಸುವುದೇಕೆ? ಮೃತ್ಯುವೂ ದುರ್ದೆಶೆಯೂ, ಸಜ್ಜನರಿಗೂ, ದುರ್ಜನರಿಗೂ, ಪುಣ್ಯಾತ್ಮರಿಗೂ ಪಾಪಾತ್ಮರಿಗೂ, ಧನವಂತರಿಗೂ, ದರಿದ್ರರಿಗೂ, ದೇಶಸಂಚಾರಿಗಳಿಗೂ, ಗೃಹ ದಲ್ಲಿಯೇ ವಾಸಮಾಡುವವರಿಗೂ ಸಮಾನವಾಗಿಯೇ ಬರುವುದು ಸುಪ್ರಸಿದ್ಧವು. ಬರಬಹುದಾದ ವಿಪತ್ತುಗಳನ್ನು ಎಂತಹ ಮನುಷ್ಯನಾವರೂ ತಡೆಯಲಾರನು. ವಿಪತ್ತು ಸರ್ವದಾ ನಮ್ಮನ್ನು ಹಿಂಬಾಲಿಸಿಯೇ ಇರುವುದು. ಯಾವುದಾದರೂ ಒಂದು ಘನಕಾರ್ಯದ ಫಲಿತವು ಅನುಕೂಲವಾಗಿದ್ದರೆ, ಆ ಕಾರ್ಯವನ್ನು

ಮಾಡಿದವರನ್ನು ಪ್ರಶಂಸಿಸುವೆವು. ಅದು ಪ್ರತಿಕೂಲವಾಗಿ ಪರಿಸಮಾಪ್ತಿಯನ್ನು ಹೊಂದಿದರೆ ತತ್ಕಾರ್ಯಕರ್ತರ ಅವಜ್ಞತೆಯನ್ನು ನಿಂದಿಸುವೆವು.

ಇನ್ನು ಕೆಲವರು ಕೂಪಸ್ಥಮಂಡೂಕದಂತೆ ಮನೆಯೊಳಗೇ ಇರುವವರು ಮಾತ್ರವೇ ಸುಖಿಗಳು ಎನ್ನುತ್ತಾರೆ. ಅವರಿಗೆ ಸುಖಭೋಗವು ಹೇಗೆ ಉಂಟಾಗುವುದೋ ತಿಳಿಯದು. ಅದು ಅಪೇಕ್ಷಿಸಿದಾಗ ಅನುಭವಿಸಲು ಸಿದ್ಧವಾಗಿರುವ ಪದಾರ್ಥವಲ್ಲವಷ್ಟೆ? ಕೆಲವರಿಗೆ ನೂತನ ವಿಷಯಗಳಲ್ಲಿ ವಿಶೇಷ ಪ್ರೀತಿಯಿರುವುದರಿಂದ, ಅವರು ಸೌಖ್ಯವಾದರೂ ಸರ್ವದಾ ಇರುವುದರಿಂದ ಅದರಲ್ಲಿ ರುಚಿಯಿರುವುದಿಲ್ಲವೆಂದು ಆಗಾಗ್ಗೆ ಕಷ್ಟಗಳನ್ನು ಅಪೇಕ್ಷಿಸುವರು. ವಿದೇಶಗಳಿಗೆ ಹೋಗುವುದು ಕೆಟ್ಟಕೆಲಸವಲ್ಲ. ಕೆಲವು ಅಂಶಗಳನ್ನು ಹಿಡಿದು ನೋಡಿದರೆ ಪರದೇಶಗಳನ್ನು ನೋಡುವುದು ಉತ್ತಮವಾದುದು ಎಂತಲೇ ಹೇಳಬೇಕು. ದೇಶಾಟನೆಯಿಂದ ಆಯಾದೇಶದ ಪ್ರಜೆಗಳ ಸ್ಥಿತಿಗತಿಗಳು ಚೆನ್ನಾಗಿ ಮನಸ್ಸಿಗೆ ಹಿಡಿಯುವುದು. ಅಂತಹ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ನಾವು ವಿಮುಖರಾಗಬಾರದು. ಅವಜ್ಞತೆಯನ್ನು ನಾವು ಬುದ್ಧಿಪೂರ್ವಕವಾಗಿ ಅವಲಂಬಿಸುವುದು ಗುರುತರವಾದ ದೋಷಗಳಲ್ಲಿ ಒಂದಾಗಿದೆ. ವಿದೇಶಯಾತ್ರೆಗಳನ್ನು ಮಾಡುವುದರಿಂದ ನಮಗೆ ಬುದ್ಧಿವಿಕಾಸವೂ, ಜ್ಞಾನಾಭಿವೃದ್ಧಿಯೂ ಉಂಟಾಗುವುದಲ್ಲದೆ, ಅಂತರಿಸಿದ ಕಲಾಕೌಶಲ್ಯಗಳ ಉದ್ಧಾರವೂ ಆಗುವುದು ಉಂಟು. ಪ್ರತಿಯೊಬ್ಬರೂ ಯುಕ್ತವಾದ ಕಾರ್ಯವನ್ನು ಮಾಡಲೇಬೇಕು. ಪ್ರತಿಯೊಬ್ಬರೂ ತಮ್ಮ ಸಹಜೀವಿಗಳಿಗೆ ಕೈಯಲ್ಲಾದಷ್ಟು ಉಪಕಾರವನ್ನು ಮಾಡಲು ಬದ್ಧರಾಗಿರುವರು. ನರಜನ್ಮವನ್ನು ಎತ್ತಿದವರೆಲ್ಲರೂ ಇತರರಿಂದ ತಮಗೆ ಉಂಟಾದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಿ ಋಣವಿಮುಕ್ತರಾಗಬೇಕು. ಪರದೇಶದಲಿ ಎನಗೆ ಸಹಾಯಕರು ಯಾರು ಎಂದು ನೀವು ಕೇಳಬಹುದು. ಏತದ್ವಿಷಯದಲ್ಲಿ ಗೋಲ್ಡ್‌ಸ್ಮಿತ್ ಎಂಬ ಆಂಗ್ಲೇಯ ಕವಿಯು ಮಾಡಿದ ಮಹೋಪದೇಶವನ್ನು ನಾವು ತಿಳಿಯಬೇಕು. ಅದು ಯಾವುದು ಎಂದರೆ, "ಅಂಧರ ಬುದ್ಧಿವಿಶೇಷವನ್ನು ಅನುಸರಿಸಲು ಕಲಿತುಕೊ. ಏಕೆಂದರೆ ಅವರು ಯಾವಾಗಲೂ ತಮ್ಮ ಊರುಗೋಲಿನಿಂದ ಭೂಮಿಯನ್ನು ಮುಟ್ಟಿನೋಡದೆ ಮುಂದಕ್ಕೆ ಹೆಜ್ಜೆಯನ್ನು ಇಡುವುದಿಲ್ಲ." ಎಂಬುವುದೆ. ಆ ವಿಧವಾಗಿಯೇ ನಾನು ಸರ್ವಶಕ್ತಿ ಸಂಪನ್ನನಾದ ನನ್ನ ಪರಮಪಿತನನ್ನು ನನಗೆ ಊರುಗೋಲನ್ನಾಗಿ ಮಾಡಿಕೊಳ್ಳುವೆನು. ಆತನೇ ನನ್ನ ಮಾರ್ಗವನ್ನು ಪರಿಶೀಲಿಸಿ ನನ್ನನ್ನು ಮುಂದಕ್ಕೆ ನಡೆಸುವವನು. ಅದಕ್ಕಿಂತಲೂ ಮಹೋತ್ತಮವಾದ ಊರುಗೋಲು ಮತ್ತಾವುದು ಉಂಟು?

೬. **ಕೊನೆಗೆ ನನ್ನ ಜಾತಿಯವರು ಯಾರೂ ಮಾಡದ ಕಾರ್ಯವನ್ನು ನಾನುಮಾಡುವುದು ಏಕೆ? ಎಂಬ ಪ್ರಶ್ನೆಗೆ ಉತ್ತರ:**—ನಮ್ಮಲ್ಲಿ

ಪ್ರತಿಯೊಬ್ಬರೂ ಸಂಘಕ್ಕೆ ಋಣಬದ್ಧರಾಗಿ ಮಾಡಬೇಕಾದ ಕಾರ್ಯಗಳನೇಕ ವಿರುವವು. ಇವರು ಈ ಕೆಲಸವನ್ನು ಮಾಡಿದರೆ ಋಣವಿಮುಕ್ತರಾಗುವರು ಎಂದು ಬಿಡಿಸಿ ಹೇಳುವುದು ಅಸಾಧ್ಯ. ಒಂದು ಕಾರ್ಯದಿಂದ ಒಬ್ಬರಿಗೆ ಒಳ್ಳೆಯದಾಗುವುದಾದರೆ, ತತ್ಕಾರ್ಯವನ್ನು ಸರ್ವರೂ ಆಚರಿಸಿ ಮೇಲನ್ನು ಹೊಂದಬಹುದಲ್ಲವೆ? ಆದುದರಿಂದ ಸರ್ವಜನರಿಗೂ ಶ್ರೇಯಸ್ಕರವಾದ ಕಾರ್ಯವನ್ನು ಮಾಡಲು ನಾವೆಲ್ಲರೂ ಪ್ರಯತ್ನಿಸಬೇಕು. ಮನುಸ್ಮೃತಿಯಲ್ಲಿ, "ಮಾಡಬಹುದಾದ ಧರ್ಮವನ್ನು ಮಾಡಲು ಉಪೇಕ್ಷಿಸುವವರು, ಕ್ಷಮಿಸಲು ಅನರ್ಹರಾದ ಮಹಾಪಾತಕರು." ಎಂದು ಹೇಳಿ ಇದೆ. ಆದಕಾರಣ ನನ್ನಂತಹ ಸ್ತ್ರೀಯರು ಮಾಡದ ಕಾರ್ಯವನ್ನು ನಾನು ಮಾಡಕೂಡದು ಎಂಬುವುದು ಆಶ್ಚರ್ಯಕರವಾಗಿದೆ. ಮೃತಜೀವಿಗಳು ಎಂದು ಪ್ರಸಿದ್ಧಿಯನ್ನು ಪಡೆದ ನಮ್ಮ ಪೂರ್ವಿಕರು ಇಂತಹ ಊಹೆಗಳನ್ನುಳ್ಳವರಾಗಿ ಇರಲಿಲ್ಲ. ನನ್ನ ಕ್ರೈಸ್ತವ ಮಿತ್ರರು ನಾನು ಕೇಳುವ ಕೆಳಗಿನ ಪ್ರಶ್ನೆಗೆ ಯಾವ ಉತ್ತರವನ್ನು ಕೊಡುವರೋ ನೋಡೋಣ. ಪ್ರಿಯಸೋದರಿಯರೆ! ನಿಮ್ಮ ಮತಧರ್ಮಗಳನ್ನು ಹಿಡಿದು ಯೇಸುಕ್ರಿಸ್ತನು ನಿಮ್ಮೆಲ್ಲರಿಗಾಗಿ ತನ್ನ ಪ್ರಾಣವನ್ನು ಕೊಡದಿದ್ದರೆ, ನಿಮಗೆ ಪಾಪವಿಮುಕ್ತಿ ಯಾಗುತಲಿತ್ತೆಂದು ನೀವೆಣಿಸುವಿರಾ? ಆತನು ಅನೇಕ ಲೋಕೋಪಕಾರಗಳನ್ನು ಮಾಡುತ್ತಿರಲು, ಆತನಿಗೆಉಂಟಾದ ಘೋರಪಂಡನೆಗೆ ಆ ಮಹಾನುಭಾವನು ಹೆದರಿದನೆ? ಇಲ್ಲ. ಆತನು ಭಯಭ್ರಾಂತನಾದನು ಎಂದು ನೀವು ಎಂದಿಗೂ ಒಪ್ಪಿಕೊಳ್ಳಲಾರಿರಿ ಎಂದು ನಾನು ನಿಶ್ಚಯವಾಗಿ ಬಲ್ಲೆನು. ನಮ್ಮ ಪೂರ್ವಕಾಲದ ರಾಜರಲ್ಲಿ ಸಹ ಶಿಬಿ, ಮಯೂರಧ್ವಜ ಮುಂತಾದವರು ಪರೋಪಕಾರಕ್ಕಾಗಿ ಪ್ರಾಣತ್ಯಾಗವನ್ನು ಮಾಡಲು ಹಿಂತೆಗೆಯುತಲಿರಲಿಲ್ಲ. ನಮ್ಮ ಕಾರ್ಯಕ್ಕೆ ಎಲ್ಲಿ ವಿಘ್ನಗಳು ಸಂಭವಿಸುವವೋ, ನಮಗೆ ಆಪತ್ತುಗಳು ಎಲ್ಲಿ ಉಂಟಾಗುವವೋ ಎಂಬ ಭಯದಿಂದ ನಾವು ಮಾಡಬೇಕಾದ ಕಾರ್ಯಗಳನ್ನು ಮಾಡದಿರುವುದು ಬಹು ಅನ್ಯಾಯ. ನಾವು ಮಾಡಬೇಕಾದ ಪ್ರಯತ್ನವನ್ನು ಮಾಡಿಯೇ ತೀರಬೇಕು. ಅನಂತರ ಜಯವು ಉಂಟಾದರೂ, ಅಪಜಯವು ಉಂಟಾದರೂ ಚಿಂತೆಯಿಲ್ಲ. ಮನುಷ್ಯರನ್ನು ಮೂರುವಿಧವಾಗಿ ವಿಂಗಡಿಸಬಹುದು. ವಿಘ್ನವುಂಟಾಗುವುದೆಂಬ ಭಯದಿಂದ ಕಾರ್ಯವನ್ನು ಆರಂಭಿಸದಿರುವವರು ಅಧಮರು. ಕಾರ್ಯಾರಂಭವನ್ನು ಮಾಡಿ ವಿಘ್ನವು ಉಂಟಾದಕೂಡಲೆ ಆ ಕಾರ್ಯವನ್ನು ವಿಸರ್ಜಿಸುವವರು ಮಧ್ಯಮರು. ಪ್ರಾರಂಭಿಸಿದ ಕಾರ್ಯಕ್ಕೆ ಎಷ್ಟು ಅಂತರಾಯಗಳು ಉಂಟಾದರೂ ಅವುಗಳನ್ನೆಲ್ಲ ತಡೆದು ವಿಜಯವನ್ನು ಹೊಂದುವವರು ಉತ್ತಮರು. ಈ ಅರ್ಥವನ್ನು ಭರ್ತೃಹರಿಯೂ ಹೇಳಿಇದಾನೆ.

ಕಷ್ಟಗಳು ಎಷ್ಟು ಉತ್ಕೃಷ್ಟಗಳಾಗಿರುವುವೋ ನಮ್ಮ ಧೈರ್ಯ ಸ್ಥೈರ್ಯಗಳು ಅಷ್ಟು ಅಧಿಕವಾಗಿ ಇರಬೇಕು. ಆದುದರಿಂದ ನಾವು ಆರಂಭಿಸಿದ ಕಾರ್ಯ

ವನ್ನು ನಿಲ್ಲಿಸಕೂಡದು. ಇನ್ನು ನನ್ನ ಬಿನ್ನಹವು ಪೂರ್ತಿಯಾಯಿತು. ನನ್ನ ದೀರ್ಘ ಪ್ರಸಂಗವನ್ನು ಬೇಸರಿಕೆಯಿಲ್ಲದೆ ಆಲಿಸಿದ್ದಕ್ಕೆ ನಿಮಗೆ ಅನೇಕ ವಂದನೆಗಳು. ನಾನು ನಿಮಗೆ ಉಂಟುಮಾಡಿದ ಆಯಾಸಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ಉಪನ್ಯಾಸವನ್ನು ಕೊಟ್ಟ ಅನಂತರ ಆನಂದೀಬಾಯಿಯು, ಒಂದು ಕೈಸ್ತವ ಗುರುಗಳ ಕುಟುಂಬದೊಡನೆ ಅಮೆರಿಕಾ ಖಂಡಕ್ಕೆ ಪ್ರಯಾಣ ಮಾಡಲು ನಿಶ್ಚಯಿಸಿಕೊಂಡಳು. ಒಬ್ಬ ಹಿಂದೂ ಬ್ರಾಹ್ಮಣ ಯುವತಿಯು ಅಮೆರಿಕಾ ಖಂಡಕ್ಕೆ ಹೋಗುವಳು ಎಂದು ಕೇಳಿ ರಾವ್‌ಸಾಹೇಬ್ ದಾಂಡೇಕರ್ ಎಂಬಾತನಿಗೆ ಬಹು ಚಿಂತೆಯು ಉಂಟಾಯಿತು. ಆತನು ಅನೇಕ ಪ್ರಯತ್ನಗಳನ್ನು ಮಾಡಿ ಆಕೆಯ ಪ್ರಯಾಣವನ್ನು ನಿಲ್ಲಿಸಲು ಯತ್ನಿಸಿದನು. ತನ್ನ ಪ್ರಯತ್ನಗಳು ವಿಫಲವಾದುದರಿಂದ ಈ ವಿಷಯವನ್ನು ಆಕೆಯ ಆಪ್ತರಿಗೆ ತಿಳಿಸಿ, ಅವರಿಂದ ಅನೇಕ ಲೇಖನಗಳನ್ನು ಬರೆಯಿಸಿದನು. ಅದರಿಂದಲೂ ಆಕೆಯ ಪ್ರಯಾಣವು ನಿಲ್ಲಲಿಲ್ಲ. ನಾಳೆ ಪ್ರಯಾಣ ಮಾಡಬೇಕು ಎಂದಿರುವಾಗ ಆನಂದೀಬಾಯಿಯ ಅಕ್ಕನ ಬಳಿಯಿಂದ ತಮ್ಮನಿಗೆ ಪ್ರಾಣಾಂತವಾಗಿದೆ ಎಂತಲೂ ನೀನು ತಕ್ಷಣವೇ ಹೊರಟು ಬರಬೇಕು ಎಂತಲೂ ಲೇಖನವು ಬಂದಿತು. ಅದನ್ನು ನೋಡಿ ಆನಂದೀಬಾಯಿಯು ಸ್ವಲ್ಪ ಆಲೋಚಿಸಲು, ಆ ಲೇಖನವು ನಿನ್ನ ಪ್ರಯಾಣವನ್ನು ನಿಲ್ಲಿಸುವುದಕ್ಕಾಗಿ ಬರೆಯಲ್ಪಟ್ಟಿತೆಂತಲೂ, ನಿನ್ನ ತಮ್ಮನಿಗೆ ನಿಜವಾಗಿಯೂ ಪ್ರಾಣಾಂತವಾಗಿದ್ದರೆ, ನೀನು ಹೋಗಿ ನೋಡುವವರೆಗೂ ಆತನು ಜೀವಿಸಿರಲಾರನೆಂತಲೂ, ಆದಕಾರಣ ನೀನು ಮಾಡುವ ಮಹಾಕಾರ್ಯವನ್ನು ನಿಲ್ಲಿಸುವುದು ಅನುಚಿತವೆಂತಲೂ, ಆಕೆಯ ಮನೋದೇವತೆಯು ಹೇಳಿ ಆಕೆಯ ನಿಶ್ಚಯವನ್ನು ಚಲಿಸದಂತೆ ಮಾಡಿತು!

ನಮ್ಮಲ್ಲಿ ಅನೇಕರು ಚಿಕ್ಕಚಿಕ್ಕ ಸಂಕಟಗಳು ಬಂದರೂ ಹೆದರಿ, ಅಂಗೀಕೃತಕಾರ್ಯವನ್ನು ಪರಿತ್ಯಜಿಸುವರು. ಅಂತಹವರು ಆನಂದೀಬಾಯಿಯ ಚರಿತ್ರೆಯನ್ನು ಓದಿ ದೃಢನಿಶ್ಚಯವೆಂಬ ಸದ್ಗುಣವನ್ನು ಕಲಿಯಬೇಕು.

ಅನಂತರ ೧೮೮೩ನೆಯ ಇಸವಿ ಏಪ್ರಲ್ ೭ನೆಯ ತಾರೀಖಿನಲ್ಲಿ ಆನಂದೀಬಾಯಿಯು ಅಮೆರಿಕಾ ಖಂಡಕ್ಕೆ ಹೊರಡಲು ಜಹಜನ್ನೇರಿದಳು. ಆಸಮಯದಲ್ಲಿ ಆ ದಂಪತಿಗಳಿಗೆ ಉಂಟಾದ ವಿಯೋಗದುಃಖವನ್ನು ಯಾರು ವರ್ಣಿಸಬಲ್ಲರು? ಸ್ವದೇಶಹಿತಕ್ಕಾಗಿ ಅವರು ತಮ್ಮ ಸ್ವಸುಖವನ್ನು ಪರಿತ್ಯಜಿಸಿದರು. ಅವರ ಸ್ವದೇಶಭಕ್ತಿಯನ್ನು ವರ್ಣಿಸಬಲ್ಲವರು ಯಾರು? ದಾರಿಯಲ್ಲಿ ಆಕೆಯ ಸಹವಾಸಿಗಳಾಗಿದ್ದ ಕ್ರೈಸ್ತವ ಸ್ತ್ರೀಯರು ಆಕೆಯನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ವಿಶೇಷವಾಗಿ ಬೋಧಿಸಿದರು. ಆನಂದೀಬಾಯಿಯು ಅವರಿಗೆ ತಕ್ಕ

ಪ್ರತ್ಯುತ್ತರವನ್ನಿತ್ತು ತನ್ಮತವನ್ನು ಖಂಡಿಸಿದಳು. ಆದಕಾರಣ ಆ ಯುವತಿಯರು ಆಕೆಯನ್ನು ತಿರಸ್ಕಾರವಾಗಿ ನೋಡುತ್ತ, ಆಕೆಯು ಅಸ್ವಸ್ಥೆಯಾಗಿದ್ದರೂ ವಿಚಾರಿಸದೆ, ಆಕೆಯು ಉಪವಾಸವಾಗಿದ್ದರೂ ಊಟಮಾಡೆಂದು ಹೇಳದೆ, ಆಕೆಯ ಭುಜಿಸುವುದಿಲ್ಲವೆಂದು ತಿಳಿದಿದ್ದರೂ ಮೊಂಸಾಹಾರವನ್ನು ತಿನ್ನವೆಯಾ ಎಂದು ಹೀಯಾಳಿಸುತ್ತ ಅನೇಕ ಬಾಧೆಗಳನ್ನು ಉಂಟುಮಾಡಿದರು. ಅವರೆಷ್ಟು ಬಾಧಿಸಿದರೂ ಆನಂದೀಬಾಯಿಯು ಆಗ್ರಹಗೊಳ್ಳದೆ, ಸ್ವದೇಶ, ಸ್ವಜನ ವಿಯೋಗದಿಂದ ಉಂಟಾದ ದುಃಖವನ್ನು ತಾನೇ ಸಮಾಧಾನಮಾಡಿಕೊಳ್ಳುತ್ತ, ದೊರೆತಾಗ ಧಾನ್ಯಾಹಾರವನ್ನು ಭುಜಿಸುತ್ತ, ದೊರೆಯದಾಗ ಉಪವಾಸ ಮಾಡುತ್ತ ಹೊಗೆಯ ಜಹಜಿನಮೇಲೆ ಪ್ರಯಾಣಮಾಡುತಲಿದ್ದಳು.

ಕೆಲ ಕ್ರೈಸ್ತವಮತಬೋಧಕರು ಪ್ರಥಮದಲ್ಲಿ ತಾವು ವಿಶೇಷ ಪ್ರೇಮವುಳ್ಳವರಂತೆ ನಟಿಸಿ, ತಮ್ಮ ಮತವನ್ನು ಇತರರಿಗೆ ಬೋಧಿಸುವರು. ಅವರು ತಮ್ಮ ಮತವನ್ನು ಅವಲಂಬಿಸುವುದಿಲ್ಲವೆಂದು ತಿಳಿದಕೂಡಲೆ ಅವರನ್ನು ಬಹುವಿಧವಾಗಿ ಅವಮಾನಿಸುವರು. ಧರ್ಮಗುರುಗಳಾದವರಿಗೆ ಇದು ತಕ್ಕಕಾರ್ಯವಲ್ಲವು.

ಆನಂದೀಬಾಯಿಯು ಅಲ್ಪವಯಸ್ಕಳಾದರೂ ತನ್ನ ಅಸಹಾಯಕ್ಕೆ ಚಿಂತಿಸದೆ ದೇವರನ್ನು ನಂಬಿ, ಧೈರ್ಯದೊಡನೆ ಪ್ರಯಾಣಮಾಡುತ್ತ, ಅನೇಕದ್ವೀಪಗಳನ್ನು ದಾಟಿ ಜೂ ೧೮ ನೆಯ ತಾರೀಖಿನಲ್ಲಿ ಅಮೆರಿಕಾಖಂಡವನ್ನು ಸೇರಿದಳು. ಆಕೆಯ ಬರುವಿಕೆಯನ್ನು ಕೇಳಿ ತತ್ಪೂರ್ವವೇ ಕಾರ್ಪೆಂಟರ್ ದೊರೆಸಾನಿಯು ಜಹಜಿನಬಳಿಗೆ ಬಂದು ಆನಂದೀಬಾಯಿಯನ್ನು ಇದಿರುಗೊಂಡಳು. ಅವರಿಬ್ಬರಿಗೂ ಆ ಸಮಯದಲ್ಲಿ ಉಂಟಾದ ಸಂತಸವನ್ನು ನಾವು ವರ್ಣಿಸಲಾರೆವು. ಕಾರ್ಪೆಂಟರು ದೊರೆಸಾನಿಯು ಆನಂದೀಬಾಯಿಯ ಸದ್ಗುಣಗಳನ್ನು ಮರೆಯದೆ ಇಂತಹಸ್ತ್ರೀಯರು ಸ್ತ್ರೀಲೋಕದಲ್ಲಿ ಅತಿವಿರಳರು ಎಂದು ನುಡಿಯುತಲಿದ್ದಳು.

ಆನಂದೀಬಾಯಿಯು ನ್ಯೂಜರಸೀಪಟ್ಟಣಕ್ಕೆ ಹೋಗಲು, ಅಲ್ಲಿ ಕಾರ್ಪೆಂಟರ್ ದೊರೆಸಾನಿಯ ಕುಟುಂಬದವರೆಲ್ಲರು ಆಕೆಯನ್ನು ಬಹುಮರ್ಯಾದೆಯಿಂದ ನೋಡಿದರು. ಇವರ ಮನೆಯಲ್ಲಿಯೇ ಇದ್ದು, ಆನಂದೀಬಾಯಿಯು ತನ್ನ ವಿದ್ಯಾಭ್ಯಾಸಕ್ಕೆ ಅನುಕೂಲವಾದಸ್ಥಳವನ್ನು ಹುಡುಕಿಕೊಂಡಳು. ಆಕೆಯು ಅಲ್ಲಿದ್ದ ನಾಲ್ಕುತಿಂಗಳನ್ನು ವ್ಯರ್ಥವಾಗಿ ಕಳೆಯದೆ, ಹೊಲಿಗೆಯ ಕೆಲಸ, ಜರೀ ಕೆಲಸ ಮುಂತಾದವುಗಳನ್ನು ಕಲಿತುಕೊಂಡಳು. ಅನಂತರ ಫಿಲಾಡೇಲ್ಫಿಯಾ ಎಂಬ ಮಹಾಪಟ್ಟಣದಲ್ಲಿ ವೈದ್ಯವಿದ್ಯೆಯನ್ನು ಕಲಿಯುವಂತೆ ನಿರ್ಧರವಾಯಿತು.

ಕೆಲ ಪುರುಷರಾಗಲಿ ಸ್ತ್ರೀಯರಾಗಲಿ ತಮ್ಮ ದೇಶವನ್ನುಬಿಟ್ಟು ಪರ ದೇಶಕ್ಕೆ ಹೋದ ಅನಂತರ ತಮ್ಮ ದೇಶಾಚಾರಗಳನ್ನು ತ್ಯಜಿಸಿ, ಆ ದೇಶಾಚಾರ ಗಳನ್ನು ಸ್ವೀಕರಿಸುವರು. ಆದರೆ ಆನಂದೀಬಾಯಿಯುಮಾತ್ರ ಹಾಗೆ ಮಾಡದೆ ಆ ದೇಶೀಯರಿಗೂ ತನ್ನ ದೇಶಾಚಾರವನ್ನು ಕಲಿಸಿದಳು. ಅಲ್ಲಿ ತನ್ನ ಸ್ನೇಹಿತೆ ಯರಿಗೂ, ಕಾರ್ಪೆಂಟರ್ ದೊರೆಸಾನಿಯ ಮನೆಯವರಿಗೂ ಮಹಾರಾಷ್ಟ್ರ ಸ್ತ್ರೀ ಯರು ಹಾಕಿಕೊಳ್ಳುವಂತೆ ಜಡೆಯನ್ನು ಹಾಕಿ, ಸೀರೆಗಳನ್ನು ಉಡಿಸುತಲಿದ್ದಳು. ಆಕೆಯು ನ್ಯೂಜರಸೀಪಟ್ಟಣವನ್ನು ಬಿಟ್ಟು ಹೋಗುವುದಕ್ಕೆ ಪೂರ್ವದಲ್ಲಿ ತನ್ನ ಮಿತ್ರರಿಗೆ ಒಂದು ಔತಣವನ್ನು ಮಾಡಿದಳು. ಆದಿವಸ ಆನಂದೀಬಾಯಿಯು ತನ್ನ ದೇಶದ ಪಕ್ವಾನ್ನಗಳನ್ನುಮಾಡಿ, ಕುಳಿತುಕೊಳ್ಳಲು ಮಣೆಗಳನ್ನು ಹಾಕಿ, ಎಲೆಗಳನ್ನೂ, ದೊನ್ನೆಗಳನ್ನೂಹಚ್ಚಿ ತನ್ನ ದೇಶಾಚಾರವನ್ನನುಸರಿಸಿ ಸಕಲ ಪದಾರ್ಥಗಳನ್ನೂ ಬಡಿಸಿ, ಬಂದಯುವತಿಯರನ್ನು ಸೀರೆಗಳು, ಬಳೆಗಳು, ಅರಿಸಿನ ಕುಂಕುಮ ಇವುಗಳಿಂದಲಂಕರಿಸಿ, ಅವರಿಗೆ ಕೈಯಲ್ಲಿ ಊಟಮಾಡುವ ವಿಧವನ್ನು ತಿಳಿಸಿ ತಾನುಸಹ ಅವರೊಡನೆ ಕುಳಿತು ಊಟಮಾಡಿದಳು.

ಅನಂತರ ಕಾರ್ಪೆಂಟರ್ ದೊರೆಸಾನಿಯು ಆನಂದೀಬಾಯಿಯನ್ನು ಕರೆದು ಕೊಂಡು ಫಿಲಾಡೇಲ್ಫಿಯಾ ಪಟ್ಟಣಕ್ಕೆ ಹೋಗಿ ಅಲ್ಲಿ ಆಕೆಗೆ ಮನೆ ನೊದ ಲಾದವುಗಳನ್ನು ವಿಚಾರಿಸಿ ಪುನಃ ತನ್ನ ಮನೆಗೆ ಬಂದಳು. ಆನಂದೀಬಾಯಿಯು ತನ್ನ ಸ್ನೇಹಿತೆಯರೊಡನೆ ನಾಲ್ಕು ವರ್ಷಕಾಲ ವಿದ್ಯಾಭ್ಯಾಸವನ್ನು ಮಾಡಿದಳು. ಆವ್ಯವಧಿಯಲ್ಲಿ ಆಕೆಗೆ ಅನೇಕ ಶಾರೀರಕವಾದ ಮತ್ತು ಮಾನಸಿಕವಾದ ದುಃಖ ಗಳು ಉಂಟಾದವು. ಅವುಗಳ ದೆಶೆಯಿಂದ ಆಕೆಯ ದೇಹವು ದಿನೇ ದಿನೇ ಕೃಶಿಸುತಲಿತ್ತು. ಆಕೆಯು ಓದಿಕೊಳ್ಳುತಲಿದ್ದ ಕಾಲದಲ್ಲಿ, ಹಿಂದೂ ದೇಶದಿಂದ ಸ್ತ್ರೀವಿದ್ಯಾಶತ್ರುಗಳನೇಕರು ಆಕೆಗೆ ಹೇಯವಾದ ಲೇಖನಗಳನ್ನು ಬರೆದು ಚಿಂತೆ ಯನ್ನುಂಟುಮಾಡಿದರು. ಕೆಲವರು ಆಕೆಯು ಪರದೇಶಕ್ಕೆ ಹೋಗಿ ಸ್ವಧರ್ಮ ವನ್ನು ತ್ಯಜಿಸಿದಳೆಂದು ಆಕೆಯಪತಿಗೆ ತಿಳಿಸಿ, ಆ ದಂಪತಿಗಳಿಗೆ ವಿರೋಧ ವನ್ನುಂಟುಮಾಡಲು ಪ್ರಯತ್ನಿಸಿದರು. ಈ ವಿಧವಾಗಿ ಸತ್ಕಾರ್ಯಗಳಿಗೆ ವಿಘ್ನ ಗಳನ್ನುಂಟುಮಾಡಿ ಅವನ್ನು ಕೆಡಿಸಬೇಕೆಂದು ಅಪೇಕ್ಷಿಸುವ ಧರ್ಮಾತ್ಮರು ನಮ್ಮ ದೇಶದಲ್ಲಿ ಇರುವುದಕ್ಕೆ ನಾವು ವಿಶೇಷವಾಗಿ ಚಿಂತಿಸಬೇಕಾಗಿದೆ. ಅಮೇರಿಕದ ಲ್ಲಿರುವಾಗ ಆನಂದೀಬಾಯಿಯು ಅನೇಕಉಪನ್ಯಾಸಗಳನ್ನು ಹೇಳಿ ಅಲ್ಲಿನ ವಿದ್ವಾಂಸ ರನ್ನು ಸಂತೋಷಗೊಳಿಸಿದಳು.

ತನ್ನ ಪತ್ನಿಯು ಹೊರಟ ಎರಡುವರ್ಷಗಳಿಗೆ ಗೋಪಾಲರಾಯನು ಅಮೆರಿ ಕಾಕ್ಕೆ, ತನ್ನ ಭಾರ್ಯೆಯ ನಡೆವಳಿಕೆಯನ್ನು ಪರೀಕ್ಷಿಸುವ ಸಲುವಾಗಿ ಆಕೆಗೆ ತಿಳಿಸದೆ ಅಕಸ್ಮಾತ್ತಾಗಿ ಹೋದನು. ಅಲ್ಲಿಗೆ ಹೋದಮೇಲೆ ಆಕೆಯ ವಿಶುದ

ಚರಿತೆಯನ್ನು ಕಂಡು, ಪರಮಸಾಧ್ವಿಯಾದ ಆಕೆಯನ್ನು ಪರೀಕ್ಷಿಸಿದುದಕ್ಕಾಗಿ ಪಶ್ಚಾತ್ತಾಪಗೊಂಡು ಆಕೆಯಲ್ಲಿ ಕ್ಷಮೆಯನ್ನು ಬೇಡಿದನು. ನಾಲ್ಕುವರ್ಷಗಳು ಕಳೆದಮೇಲೆ ಆನಂದೀಬಾಯಿಯು ವೈದ್ಯವಿದ್ಯೆಯಲ್ಲಿ ಪ್ರವೀಣಳಾದಳು. ಅನಂತರ ಆ ದಂಪತಿಗಳು ಅಲ್ಲಿ ನೋಡಬೇಕಾದಸ್ಥಳಗಳನ್ನು ನೋಡಿಕೊಂಡು, ಕಾರ್ಪೆಂಟರು ದೊರೆಸಾನಿಯಲ್ಲಿ ಬೀಳ್ಕೊಂಡು ಸ್ವದೇಶಕ್ಕೆ ಬಂದರು. ಆನಂದೀಬಾಯಿಯು ಅಮೆರಿಕಾದಲ್ಲಿರುವಾಗಲೇ ಕೋಲಾಪುರಸರ್ಕಾರದವರು, ಆನಂದೀಬಾಯಿಯು ಕೋಲಾಪುರದ ಸ್ತ್ರೀ ವೈದ್ಯಾಲಯಾಧಿಕಾರಿಣಿಯಾಗಿರಬೇಕೆಂತಲೂ, ಮಾಸ ಒಂದಕ್ಕೆ ಮುನ್ನೂರು ರೂಪಾಯಿಗಳ ಮಾಸಾಶನವನ್ನು ಕೊಡುವೆವು ಎಂತಲೂ, ಕಾಲಕ್ರಮದಲ್ಲಿ ಐದುನೂರು ರೂಪಾಯಿಗಳವರೆಗೆ ವೃದ್ಧಿಮಾಡುವೆವು ಎಂತಲೂ ತಿಳಿಸಿದರು. ಆಕೆಯು ಅದಕ್ಕೆ ಒಪ್ಪಿಕೊಂಡಳು. ಆದರೆ ಭಾರತ ಮಹಿಳೆಯರ ದುರದೃಷ್ಟದಿಂದ ಆನಂದೀಬಾಯಿಗೆ ವಿದ್ಯಾಭ್ಯಾಸಕಾಲದಲ್ಲಿಯೇ ಕ್ಷಯವ್ಯಾಧಿಯು ಅಂಕುರಿಸಿ ಕ್ರಮವಾಗಿ ವೃದ್ಧಿಯಾಗುತಲಿತ್ತು. ವ್ಯಾಧಿಯೊಡನೆಯೇ ಆಕೆಯು ನಮ್ಮದೇಶಕ್ಕೆ ಬಂದಳು. ಸಮುದ್ರ ಪ್ರಯಾಣದಿಂದ ಆಕೆಯ ವ್ಯಾಧಿಯು ಹೆಚ್ಚಾಯಿತು. ಬೊಂಬಾಯಿಯಲ್ಲಿಯೂ, ಪೂನಾನಗರದಲ್ಲಿಯೂ ಆಕೆಗೆ ಅನೇಕ ಔಷಧೋಪಚಾರಗಳನ್ನು ಮಾಡಿ ನೋಡಿದರು. ಯಾವ ಔಷಧವೂ ಫಲಕಾರಿಯಾಗಲಿಲ್ಲ. ಕೊನೆಗೆ ಪ್ರಾತಃಸ್ಮರಣೀಯಳಾದ ಆನಂದೀಬಾಯಿಯು ತಾನು ಜನ್ಮಿಸಿದ ಪೂನಾನಗರದಲ್ಲಿಯೇ ೧೮೮೭ ನೆಯ ಫಿಬ್ರವರಿ ೨೬ ನೆಯ ತಾರೀಖಿನಲ್ಲಿ ಪರಮಪದವನ್ನು ಸೇರಿದಳು. ಮರಣ ಸಮಯದಲ್ಲಿ "ನನ್ನ ಕೈಯಲ್ಲಾದಷ್ಟು ಕೆಲಸವನ್ನು ಮಾಡಿದೆನು" ಎಂದು ನುಡಿದು ಪ್ರಾಣವನ್ನು ಬಿಟ್ಟಳು.

ಸ್ತ್ರೀಪುರುಷಪಾಠಕ ಮಹಾಶಯರೆ! ನಮ್ಮದೇಶದಲ್ಲಿ ಇಂತಹ ರತ್ನಗಳು ಅಸಂಖ್ಯಾಕವಾಗಿರುವವು. ಅವುಗಳನ್ನು ಸಾಣೆಹಿಡಿದು ಪ್ರಕಾಶಗೊಳಿಸುವುದಕ್ಕೆ ಗೋಪಾಲರಾಯರಂತಹವರು ವಿರಳರಾಗಿರುವ ಕಾರಣ ಆ ರತ್ನಗಳು ಕಲ್ಲುಗಳಂತೆ ಕಾಣಬರುತಲಿವೆ. ಹೆಣ್ಣುಮಕ್ಕಳಾಗಲಿ, ಗಂಡುಮಕ್ಕಳಾಗಲಿ ಬಾಲ್ಯದಲ್ಲಿ ಕೆಟ್ಟವರಾಗಿಕಂಡುಬಂದರೂ ಸತ್ಸಹವಾಸದಲ್ಲಿ ಬೆಳೆದು ವಿದ್ಯಾವಂತರಾಗಿ ದೊಡ್ಡವರಾದರೆ ಸಜ್ಜನರಾಗುವರು. ಆನಂದೀಬಾಯಿಯು ಬಾಲ್ಯದಲ್ಲಿ ಕೆಟ್ಟವಳಾಗಿ ಕಂಡುಬಂದರೂ, ವಿದ್ಯಾವತಿಯಾದಹಾಗೆಲ್ಲ ಗುಣವತಿಯಾದಳು. ಆಕೆಯು ವಿದುಷೀಶ್ರೇಷ್ಠಳಾದರೂ ಆಕೆಯಲ್ಲಿ ಗರ್ವವೆಂಬ ದುರ್ಗುಣವು ಸುಳಿಯುತಲಿರಲಿಲ್ಲ. ಈಕೆಯ ಚರಿತ್ರೆಯನ್ನು ಅಮೆರಿಕಾದೇಶೀಯರು ಪೂಜ್ಯಭಾವದೊಡನೆ ಓದುತಲಿರುವರು. ಈ ಉತ್ತಮಸತಿಯು ದೇಶಾಂತರಗಳಲ್ಲಿಯೂ ಕೀರ್ತಿಯನ್ನು ಪಡೆದು, ವಿದ್ಯಾಭ್ಯಾಸದಿಂದ ಸ್ತ್ರೀಯರು ಸ್ವಧರ್ಮವನ್ನು ತ್ಯಜಿಸುವರೆಂದೂ, ಪತಿಯನ್ನು ಗಣನೆಗೆ ತರುವುದಿಲ್ಲವೆಂದೂ, ಸ್ವಚ್ಛಂದಚಾರಿಗಳಾಗು

ವರೆಂದೂ ಹೇಳುವ ಕೆಲವರವಾಕ್ಯಗಳು ದ್ವೇಷಜನ್ಯಗಳಾದ ಅಸತ್ಯವಾಕ್ಯಗಳೆಂದು ತನ್ನ ಸ್ವಚರಿತ್ರೆಯಿಂದ ಸ್ಥಾಪಿಸಿದಳು.

ಮಹಾರಾಣೀ ಝಾನ್ಸೀ ಲಕ್ಷ್ಮೀಬಾಯಿ.



ಭರತಖಂಡದಲ್ಲಿ ಶೌರ್ಯಾತಿಶಯದಿಂದ ಪ್ರಖ್ಯಾತರಾದ ಯುವತೀರತ್ನಗಳಲ್ಲಿ ಲಕ್ಷ್ಮೀಬಾಯಿಯು ಅಗ್ರಗಣ್ಯಳು. ಈಕೆಯ ರಾಜ್ಯವು ಉತ್ತರ ಹಿಂದೂಸ್ಥಾನದಲ್ಲಿರುವ ಬುಂದೇಲುಖಂಡ್ ಎಂಬ ಪ್ರದೇಶದಲ್ಲಿ ಒಂದು ಭಾಗವು. ಈ ರಾಜ್ಯವನ್ನು ಈಕೆಯ ಮಾವಂದಿರ ಅಣ್ಣನಾದ ರಘುನಾಥರಾವ್ ಯವರ ಪ್ರತಾಪಕ್ಕೆ ಮೆಚ್ಚಿ, ಪೂರ್ವದಲ್ಲಿ ಪೂನಾಪೇಷ್ವೆಯವರು ಕೊಟ್ಟರು. ಈತನಿಗೆ ಪುತ್ರರು ಇಲ್ಲದ ಕಾರಣ ಈತನ ಅನಂತರ ರಾಜ್ಯವು ಶಿವರಾಂಭಾವ ಎಂಬ ಈತನ ತಮ್ಮನಿಗೆ ಬಂದಿತು. ಈ ಶಿವರಾಂಭಾವಿನ ಕಾಲದಲ್ಲಿ ಪೇಷ್ವೆಗಳ ಪ್ರತಾಪವು ಕ್ಷೀಣವಾಗಲು ಪ್ರಾರಂಭವಾಯಿತು. ಎರಡನೆಯ ಬಾಜೀರಾಯನು ರಾಜಕಾರ್ಯ ನಿಪುಣನಲ್ಲವಾದಕಾರಣ, ಈತನು ಪೇಷ್ವೆಯನ್ನು ಅತಿಕ್ರಮಿಸಿ ಸ್ವತಂತ್ರನಾದನು. ಈತನ ಕಾಲದಲ್ಲಿಯೇ ಆಂಗ್ಲೇಯರ ಪ್ರಭುತ್ವವು ಸರ್ವತ್ರ ವ್ಯಾಪಿಸುತಲಿದ್ದುದರಿಂದ ಈತನು ಅವರೊಡನೆ ಸ್ನೇಹವನ್ನು ಬೆಳೆಸಿ, ಅವರಿಗೆ ಅನೇಕ ಸಮಯಗಳಲ್ಲಿ ಸಹಾಯಮಾಡುತಲಿದ್ದನು. ಈ ಶಿವರಾಂಭಾವನಿಗೆ ಕೃಷ್ಣಾರಾವ್, ರಘುನಾಥರಾವ್, ಗಂಗಾಧರರಾವ್ ಎಂಬ ಮೂವರು ಪುತ್ರರಿದ್ದರು. ತಂದೆಯು ಜೀವಿಸಿರುವಾಗಲೇ ಪ್ರಥಮಪುತ್ರನು ಮೃತನಾದುದರಿಂದ, ಈತನ ಅನಂತರ ಮೊಮ್ಮಗ (ಕೃಷ್ಣಾರಾವಿನಪುತ್ರ) ನಾದ ರಾಮಚಂದ್ರರಾವ್ ರಾಜ್ಯಾಧಿಪತಿಯಾದನು. ಈತನಕಾಲದಲ್ಲಿ ಪೇಷ್ವೆಗಳ ರಾಜ್ಯವೆಲ್ಲವೂ ಇಂಗ್ಲಿಷರ ವಶವಾದುದರಿಂದ ಝಾನ್ಸೀ ಸಂಸ್ಥಾನಾಧೀಶನೊಡನೆ ಅವರಿಗೆ ವಿಶೇಷ ಸ್ನೇಹವು ಉಂಟಾಯಿತು. ರಾಮಚಂದ್ರರಾಯನು ಪುತ್ರಹೀನನಾದಕಾರಣ ಈತನ ಅನಂತರ ರಘುನಾಥರಾಯನೂ, ಆತನ ಅನಂತರ ಗಂಗಾಧರರಾಯನೂ ಅಭಿಷಿಕ್ತರಾದರು. ಈ ಗಂಗಾಧರರಾಯನು ಈ ಚರಿತ್ರನಾಯಕಿಯ ಭರ್ತ.

ಮೋರೋಪಂತುತಾಂಬೆ ಎಂಬ ಕರಾಡೇ ಬ್ರಾಹ್ಮಣನು ಪೂನಾನಗರದಲ್ಲಿ ವಾಸಮಾಡುತ್ತಿದ್ದನು. ಈತನಲ್ಲಿ ಎರಡನೆಯ ಬಾಜೀರಾಯನ ಸೋದರನಾದ ಚಿಮಾಜೀಅಪ್ಪಾಯನವರಿಗೆ ವಿಶೇಷ ಸ್ನೇಹವೂ, ವಿಶ್ವಾಸವೂ ಉಂಟಾಗಿದ್ದಿತು. ೧೮೧೭ನೆಯ ಇಸವಿಯಲ್ಲಿ ೮ ಲಕ್ಷರೂಪಾಯಿಗಳ ಉಪಕಾರ

ವೇತನವನ್ನು ಪಡೆದು, ಸರ್ವರಾಜ್ಯವನ್ನೂ ಇಂಗ್ಲೀಷರಿಗೆ ಕೊಟ್ಟಂತೆ ಪತ್ರವನ್ನು ಬರೆದುಕೊಟ್ಟು, ಎರಡನೆಯ ಬಾಜೀರಾಯನು ಬ್ರಹ್ಮಾವರ್ತಕ್ಕೆ ಹೊರಟು ಹೋದನು. ಆ ಸಮಯದಲ್ಲಿ ಆತನ ತಮ್ಮನಾದ ಅಪ್ಪಾಯವರು ಸಹ ತಮಗೆ ದೊರೆತ ವೇತನವನ್ನೂ ಸೇವಕರನ್ನೂ ಕರೆದುಕೊಂಡು ಕಾಶೀಕ್ಷೇತ್ರಕ್ಕೆ ಹೊರಟು ಹೋದರು. ಆತನ ಪರಿವಾರದಲ್ಲಿ ಸೇರಿದವನಾದಕಾರಣ ಮೋರೋಪಂತು ಸಹ ಕಾಶಿಗೆ ಹೋದನು. ಈತನನ್ನು ಶ್ರೀಮಂತರಿಗೆ ದಿವಾನನಾಗಿ ನಿಯಮಿಸಿ, ತತ್ಪ್ರೀತ್ಯರ್ಥವಾಗಿ ಐವತ್ತುರೂಪಾಯಿಗಳ ವೇತನವನ್ನು ಕೊಡುತ್ತಿದ್ದರು. ಮೋರೋಪಂತನ ಪತ್ನಿಯಾದ ಭಾಗೀರಥಿಬಾಯಿಯು ಗುಣವತಿ ಎಂತಲೂ, ಸುಶೀಲೆ ಎಂತಲೂ ಪ್ರಖ್ಯಾತಳಾಗಿದ್ದಳು. ಪತ್ನಿಯು ಸುಗುಣವತಿಯಾದಕಾರಣ ಮೋರೋಪಂತನಿಗೆ ಸಂಸಾರಯಾತ್ರೆಯು ಸುಖಕರವಾಗಿ ನಡೆಯುತಲಿದ್ದಿತು. ಈ ದಂಪತಿಗಳು ಕಾಶೀಕ್ಷೇತ್ರದಲ್ಲಿ ವಾಸಮಾಡುತಲಿದ್ದ ಕಾಲದಲ್ಲಿ ೧೮೩೫ ನೆಯ ಇಸವಿಯ ನವಂಬರ್ ೧೯ ನೆಯ ತಾರೀಖಿನಲ್ಲಿ ಒಂದು ಕನ್ಯಾರತ್ನವನ್ನು ಪಡೆದರು. ಜಾತಕರ್ಮ ನಾಮಕರಣ ಮಹೋತ್ಸವಗಳನ್ನು ಮಾಡಿ ಶಿಶುವಿಗೆ 'ಮನೂಬಾಯಿ' ಎಂದು ನಾಮವನ್ನು ಇಟ್ಟರು. ಈ ಬಾಲೆಯು ದಿನದಿನಕ್ಕೆ ಪ್ರವರ್ಧಮಾನಳಾಗುತ್ತ, ತನ್ನ ಮುದ್ದುಮಾತಿನಿಂದಲೂ ಮನೋಹರಸ್ವರೂಪದಿಂದಲೂ ಜನನೀಜನಕರನ್ನೂ, ಅವರ ಪರಿವಾರವನ್ನೂ ಆನಂದಗೊಳಿಸುತಲಿದ್ದಳು. ಈ ಹುಡುಗಿಗೆ ಮೂರುನಾಲ್ಕು ವರ್ಷಗಳಾಗುವಹೊತ್ತಿಗೆ ತನ್ಮಾತೆಯಾದ ಭಾಗೀರಥೀಬಾಯಿಯು ಪರಲೋಕವನ್ನೈದಿದಳು. ಈ ಕಾಲದಲ್ಲಿಯೇ ಅಪ್ಪಾಯವರು ಸಹ ಕಾಲವಾದುದರಿಂದ ಮೋರೋಪಂತ್ ಬ್ರಹ್ಮಾವರ್ತಕ್ಕೆ ಹೋಗಬೇಕಾಯಿತು. ಬಾಜೀರಾಯನು ಈತನ ಬರುವಿಕೆಗೆ ಸಂತೋಷಿಸಿ, ಕುಟುಂಬಸಂರಕ್ಷಣೆಯನ್ನು ಮಾಡುತಲಿದ್ದನು. ಮನೂಬಾಯಿಗೆ ಬಾಲ್ಯದಲ್ಲಿಯೇ ಮಾತೃವಿಯೋಗವು ಉಂಟಾದುದರಿಂದ ಪಿತನ ಪೋಷಣೆಯಲ್ಲಿಯೇ ಇರುತ್ತ ಸರ್ವದಾ ಆತನನ್ನು ಎಡೆಬಿಡದೆ ಪುರುಷರಲ್ಲಿಯೇ ತಿರುಗಾಡುತಲಿದ್ದಳು. ಮಾತೃಹೀನಳಾದ ಬಾಲಿಕೆಯಾದುದರಿಂದಲೂ, ಸುಸ್ವರೂಪ ಮಧುರಭಾಷಿಣಿಯಾದುದರಿಂದಲೂ ಶ್ರೀಮಂತರ ಬಳಿಯಲ್ಲಿ ಇರುವವರೆಲ್ಲರೂ ಮನೂಬಾಯಿಯನ್ನು ಪ್ರೀತಿಸುತಲಿದ್ದರು. ಪೇಷ್ವೆಯ ದತ್ತಪುತ್ರರಾದ ನಾನಾಸಾಹೇಬ, ರಾವುಸಾಹೇಬರು ಆ ಕಾಲದಲ್ಲಿ ಬಾಲಕರಾದಕಾರಣ ಅವರೊಡನೆ ಈ ಬಾಲಿಕೆಯು ಸದಾ ಆಡಿಕೊಳ್ಳುತಲಿದ್ದಳು. ನಾನಾಸಾಹೇಬನು ಕಲಿಯುವದನ್ನೆಲ್ಲ ಈಕೆಯೂ ಕಲಿಯುತಲಿದ್ದಳು. ವಿದ್ಯಾಭ್ಯಾಸ, ಅಶ್ವಾರೋಹಣ, ಖಡ್ಗಪ್ರಯೋಗ ಮುಂತಾದವುಗಳನ್ನೆಲ್ಲ ನಾನಾಸಾಹೇಬನೊಡನೆ ಮನೂಬಾಯಿಯು ಕಲಿತುಕೊಂಡಳು. ಇವರಿಬ್ಬರು ಅಣ್ಣತಂಗಿಯರ ಓವೆಯಿಂದ ಕರೆದುಕೊಳ್ಳುತಲಿದ್ದರು. ಈಕೆಯ ಸ್ವಭಾವವು ಬಾಲ್ಯದಿಂದಲೂ ಶೌರ್ಯಗುಣ ಪ್ರಧಾನವಾಗಿದ್ದಿತು. ಇದಕ್ಕೆ ಕ್ಷತ್ರಿಯಾಗ್ರಗಣ್ಯ

ಗುಣಸಹಿತರಾದ ಶೂರರ ಸಹವಾಸವೇ ಕಾರಣವು ಎಂದು ಹೇಳಬಹುದು. ಇದರಿಂದ ಸ್ತ್ರೀಯರು ಸ್ವಭಾವದಲ್ಲಿ ಅತ್ಯಂತ ಭೀರುಗಳೆಂತಲೂ ಅವರಿಗೆ ಶೌರ್ಯ ಧೈರ್ಯಾದಿ ಗುಣಗಳುಂಟಾಗಲಾರವು ಎಂತಲೂ ಹೇಳುವವರ ಸಂಶಯವು ನಿವಾರಣೆಯಾಗುವುದು.

ಒಂದುದಿವಸ ಝಾನ್ಸೀಸಂಸ್ಥಾನದ ಜ್ಯೋತಿಷ್ಯನಾದ ತಾತ್ಯಾದೀಕ್ಷಿತನು ಬಾಜೀರಾಯನನ್ನು ನೋಡುವುದಕ್ಕಾಗಿ ಬ್ರಹ್ಮಾವರ್ತಕ್ಕೆ ಬಂದನು. ಸಂದರ್ಭಾನುಸಾರವಾಗಿ ಮೋರೋಪಂತನು ಆತನೊಡನೆ 'ನಮ್ಮ ಹುಡುಗಿಗೆ ತಕ್ಕವರನು ನಿಮ್ಮ ಸಂಸ್ಥಾನದಲ್ಲಿ ಯಾರಾದರು ಇರುವರೇ?' ಎಂದು ಕೇಳಿದನು. ಅದಕ್ಕೆ ಆತನು 'ಝಾನ್ಸೀಸಂಸ್ಥಾನಾಧೀಶ್ವರನಾದ ಗಂಗಾಧರರಾವ್ ಬಾಬಾಸಾಹೇಬರ ಪ್ರಥಮಪತ್ನಿಯು ಗತಿಸಿದಳು. ಆದುದರಿಂದ ನಿನ್ನಪುತ್ರಿಗೆ ಆ ಸಂಬಂಧವನ್ನು ವಿಚಾರಿಸು' ಎಂದನು. ಅನಂತರ ಈ ವಿಷಯವನ್ನು ಕುರಿತು ಬಾಜೀರಾಯನು ಗಂಗಾಧರರಾವಿಗೆ ತಿಳಿಸಲು, ಆತನು ಸಮ್ಮತಿಸಿದನು. ಲಗ್ನವು ನಿಶ್ಚಯವಾದ ಮೇಲೆ ಆಪ್ತರಾದ ಕೆಲವರನ್ನು ಕರೆದುಕೊಂಡು ಮೊರೋಪಂತು ಝಾನ್ಸೀಗೆ ಹೋದನು. ೧೮೪೨ನೆಯ ವರ್ಷದಲ್ಲಿ ಮನೂಬಾಯಿಯ ವಿವಾಹವು ಅತಿವೈಭವದೊಡನೆ ನಡೆಯಿತು. ಅನಂತರ ಮನೂಬಾಯಿಗೆ ಅತ್ತೆಯಮನೆಯಲ್ಲಿ 'ಲಕ್ಷ್ಮೀಬಾಯಿ' ಎಂದು ಹೆಸರಿಟ್ಟರು. ಗಂಗಾಧರರಾಯನು ಮೋರೋಪಂತಿಗೆ ಮುನ್ನೂರು ರೂಪಾಯಿಗಳ ಮಾಸಾಶನವನ್ನು ಏರ್ಪಡಿಸಿ ತನ್ನಬಳಿಯಲ್ಲಿಯೇ ಇರಿಸಿಕೊಂಡನು. ಅದರಿಂದ ಲಕ್ಷ್ಮೀಬಾಯಿಯು ಪುನಃ ಬ್ರಹ್ಮಾವರ್ತಕ್ಕೆ ಹೋಗಲಿಲ್ಲ.

ಗಂಗಾಧರರಾಯನ ಅಣ್ಣನಾದ ರಘುನಾಥರಾಯನಕಾಲದಲ್ಲಿ ರಾಜ್ಯವು ವಿಶೇಷ ದುಃಸ್ಥಿತಿಗೆ ಬಂದುದರಿಂದ ಆ ರಾಜ್ಯಾಧಿಕಾರವನ್ನು ಆಂಗ್ಲೇಯರು ಪೂರ್ಣವಾಗಿ ವಹಿಸಿ, ರಾಜ್ಯದ ಋಣವನ್ನು ತೀರಿಸುತಲಿದ್ದರು. ಲಕ್ಷ್ಮೀಬಾಯಿಯ ವಿವಾಹಾನಂತರ, ಗಂಗಾಧರರಾಯನ ಯೋಗ್ಯತೆಯನ್ನುನೋಡಿ ಬುಂದೇಲ್‌ಖಂಡ್ ಪೊಲಿಟಿಕಲ್ ಏಜಂಟನಾದ ಕರ್ನಲ್ ಸ್ಲೀಮ್ಯ ದೊರೆಯು ರಾಜ್ಯಪಾಲನಾಧಿಕಾರವನ್ನು ಈತನಿಗೇ ವಹಿಸಿಕೊಟ್ಟನು.

ಈತನು ತನ್ನಪ್ರಜೆಗಳನ್ನು ಮಕ್ಕಳಂತೆನೋಡಿಕೊಳ್ಳುತ್ತ, ಅವರು ಸುಖವಾಗಿರಲು ಸರ್ವಪ್ರಯತ್ನಗಳನ್ನೂ ಮಾಡುತಲಿದ್ದನು. ಈತನ ಕಾಲದಲ್ಲಿ ಸಾಲವೆಲ್ಲವುತೀರಿ ಧನಾಗಾರದಲ್ಲಿ ಧನವು ದಿನದಿನಕ್ಕೂ ಅಭಿವೃದ್ಧಿಯನ್ನು ಹೊಂದುತಲಿತ್ತು. ಪ್ರಜೆಗಳು ರಾಜದಂಪತಿಗಳನ್ನು ಹರಸುತ್ತ ಸುಖವಾಗಿ ಬಾಳುತಲಿದ್ದರು.

ಲಕ್ಷ್ಮೀಬಾಯಿಯು ಪತಿಯೊಡನೆ ಕೆಲವುಕಾಲ ಸುಖವಾಗಿ ಇದ್ದಳು. ಅನಂತರ ಆಕೆಗೆ ಒಬ್ಬಪುತ್ರನು ಹುಟ್ಟಿ ಮೂರುತಿಂಗಳುಮಾತ್ರ ಜೀವಿಸಿ

ಮೃತನಾದನು. ಗಂಗಾಧರರಾಯನಿಗೆ ಮನಸ್ಸಿನಲ್ಲಿ ಪುತ್ರಶೋಕವು ಅತ್ಯಧಿಕವಾಗಿ ಅದರಿಂದ ಆತನು ದಿನದಿನಕ್ಕೆ ಕೃಶನಾಗುತಲಿದ್ದನು. ವೈದ್ಯೋಪಚಾರಗಳಿಂದ ನಡುನಡುವೆ ಸ್ವಲ್ಪ ಸ್ವಸ್ಥತೆಯನ್ನು ಹೊಂದುತಲಿದ್ದನು. ೧೮೫೩ ನೆಯ ಅಕ್ಟೋಬರ್ ಪ್ರಾರಂಭದಿಂದ ಆತನ ವ್ಯಾಧಿಯು ಹೆಚ್ಚಾಗಿ ಯಾವ ವೈದ್ಯೋಪಚಾರಗಳಿಂದಲೂ ಕಡಮೆಯಾಗಲಿಲ್ಲ. ನವಂಬರ್ ೧೫ ನೆಯ ತಾರೀಖಿನಲ್ಲಿ ಆತನ ಪ್ರಕೃತಿಯಲ್ಲಿ ವಿಕಾರಚೇಷ್ಟೆಗಳು ಕಂಡುಬಂದವು. ಅದರಿಂದ ಸಂಸ್ಥಾನದ ಮಂತ್ರಿಯಾದ ನರಸಿಂಹರಾಯನೂ, ನೋರೋಪಂತುತಾಂಬೆಯೂ ಮುಂದಿನ ಸಂಸ್ಥಾನದ ವ್ಯವಸ್ಥೆಯನ್ನು ಕುರಿತು ಮಹಾರಾಜನೊಡನೆ ಪ್ರಸ್ತಾಪಿಸಿದರು. ಅದಕ್ಕೆ ಮಹಾರಾಜನು ನನಗೆ ಈಗಲೆ ವ್ಯಾಧಿಯು ಅಸಾಧ್ಯವಾಗಿಲ್ಲವೆಂತಲೂ ಮುಂದೆ ಅಸಾಧ್ಯವೆಂದು ತೋರಿದರೆ ತಮ್ಮ ವಂಶಸ್ಥನಾದ ಆನಂದರಾಯನನ್ನು ತನಗೆ ದತ್ತಪುತ್ರನನ್ನಾಗಿಮಾಡಿ, ಆ ಬಾಲಕನು ಯುಕ್ತವಯಸ್ಕನಾಗುವವರೆಗೂ ಆತನಹೆಸರಿನಲ್ಲಿ ಲಕ್ಷ್ಮೀಬಾಯಿಯು ರಾಜ್ಯವನ್ನು ಪಾಲಿಸಬೇಕೆಂತಲೂ ಹೇಳಿದನು. ಅದರಮೇಲೆ ಅವರೆಲ್ಲರು ಕೂಡಲೆ ಮುಹೂರ್ತನಿಶ್ಚಯವನ್ನುಮಾಡಿ ಶೀಘ್ರವಾಗಿ ದತ್ತವಿಧಿಯನ್ನು ನೆರವೇರಿಸಿದರು. ಆ ಮಹೋತ್ಸವಕ್ಕೆ ಝಾಶಿಯಲ್ಲಿರುವ ಅನೇಕ ಪ್ರಮುಖರನ್ನು ಕರೆದರು. ಅವರೊಡನೆ ಬುಂದೇಲುಖಂಡದ ಪೊಲಿಟಿಕಲ್ ಏಜಂಟನಾದ ಮೇಜರ್ ಯೇಲೀಸ್ ದೊರೆಯನ್ನೂ, ಸೇನಾಧಿಪತಿಯಾದ ಕ್ಯಾಪ್ಟ್ಯ ಮಾರ್ಟಿ ದೊರೆಯನ್ನೂ ಕರೆದಿದ್ದರು. ಇವರೆಲ್ಲರ ಸಮುಖದಲ್ಲಿಯೇ ದತ್ತ ವಿಧಾನವು ನಡೆದು ಆನಂದರಾಯನಿಗೆ ದಾಮೋದರರಾವ್ ಎಂಬ ಹೆಸರನ್ನು ಇಟ್ಟರು.

ಅನಂತರ ಗಂಗಾಧರರಾಯನು ದಿವಾನನಮೂಲಕ ಹಿಂದೂ ದೇಶದ ಪಾಲಕ (ಇಂಡಿಯಾ ಗವರ್ನಮೆಂಟಿನವ) ರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಬರೆಯಿಸಿ, ಅದರಲ್ಲಿ ತನ್ನ ಕೈಬರಹವನ್ನುಮಾಡಿ, ಆ ಪತ್ರವನ್ನು ತನ್ನ ಹಸ್ತದಿಂದ ಪೊಲಿಟಿಕಲ್ ಏಜಂಟನಹಸ್ತಕ್ಕೆ ಕೊಟ್ಟನು. ಅದರಲ್ಲಿ ಪೂರ್ವದಲ್ಲಿ ಇಂಗ್ಲೀಷರು ತಮ್ಮ ತಂದೆಯೊಡನೆ ಮಾಡಿಕೊಂಡ ಕರಾರಿನಪ್ರಕಾರ, ರಾಜ್ಯವು ತಮ್ಮ ವಂಶಪಾರಂಪರ್ಯವಾಗಿ ಬರಬೇಕೆಂತಲೂ, ತನಗೆ ಔರಸ ಸಂತತಿಯು ಇಲ್ಲದಕಾರಣ ಒಬ್ಬ ದತ್ತಪುತ್ರನನ್ನು ಸ್ವೀಕರಿಸಿದೆನೆಂತಲೂ, ಪಾಲಕರು ಆ ದತ್ತವಿಧಿಯನ್ನು ಅಂಗೀಕರಿಸಿ, ಆ ಬಾಲಕನಿಗೆ ರಾಜ್ಯಾಧಿಕಾರವನ್ನುಕೊಟ್ಟು ಅವನು ಯುಕ್ತವಯಸ್ಕನಾಗುವವರೆಗೂ ಅವನಹೆಸರಿನಲ್ಲಿ ತನ್ನ ಪತ್ನಿಯಾದ ಲಕ್ಷ್ಮೀಬಾಯಿಯು ರಾಜ್ಯಪಾಲನೆಯನ್ನು ಮಾಡುವಂತೆ ಅನುಜ್ಞೆಯನ್ನು ಕೊಡಬೇಕೆಂತಲೂ ಬರೆದಿತ್ತು. ಇದನ್ನು ಬರೆಯಿಸಿದ ದಿವಸವೇ ಆತನು ಪರಲೋಕಗತನಾದನು. ಕುಲಾಚಾರದಂತೆ ಮಹಾರಾಜನಿಗೆ ಪ್ರೇತವಿಧಿಗಳೆಲ್ಲವು ನೆರವೇರಿದವು. ಅನಂತರ ಕೆಲವು ದಿವಸಗಳಿಗೆ ಲಕ್ಷ್ಮೀಬಾಯಿಯು

ಸರ್ವಾನುಮತದಿಂದ ತನ್ನ ಪುತ್ರನಿಗೆ ರಾಜ್ಯವನ್ನು ಕೊಡಬೇಕು ಎಂದು ರಾಜ್ಯಾಂಗದವರಿಗೆ ಒಂದು ವಿಜ್ಞಾಪನಾಪತ್ರವನ್ನು ಬರೆದಳು. ಆದರೆ ಆಕೆಯ ಉದ್ದೇಶವು ಸಿದ್ಧಿಸಲಿಲ್ಲ.

ವಿಜ್ಞಾಪನೆಯಂತೆ ಬ್ರಿಟಿಷ್ ಸರ್ಕಾರದವರು ತಮ್ಮ ದತ್ತತೆಯನ್ನು ಅಂಗೀಕರಿಸಿ ರಾಜ್ಯವನ್ನು ಕೊಡುವರು ಎಂದು ಝಾನ್ಸೀಸಂಸ್ಥಾನದ ಪ್ರಜೆಗಳೂ, ರಾಣೀ ಲಕ್ಷ್ಮೀಬಾಯಿಯೂ ಅತ್ಯಾಶೆಯಿಂದ ಇದಿರುನೋಡುತಲಿದ್ದರು. ಆದರೆ ೧೮೫೫ನೆಯ ಇಸವಿ ಮಾರ್ಚಿ ೨೫ ನೆಯ ತಾರೀಖಿನಲ್ಲಿ ಆಂಗ್ಲೇಯ ಸರ್ಕಾರದವರು ದತ್ತತೆಯನ್ನು ಅಂಗೀಕರಿಸದೆ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು ಎಂದು ತಿಳಿಯಬಂದಿತು. ಪತಿವಿಯೋಗದಿಂದ ವ್ಯಸನಾಕ್ರಾಂತಳಾಗಿದ್ದ ಲಕ್ಷ್ಮೀಬಾಯಿಗೆ ರಾಜ್ಯವಿಯೋಗವುಸಹ ಸಂಭವಿಸಿತು! ಪಾಲಕರು ಆ ರಾಜ್ಯವನ್ನು ಸ್ವಾಧೀನಮಾಡಿಕೊಂಡು, ಪಶ್ಚಿಮೋತ್ತರಪ್ರಾಂತದ ಗವರ್ನರು ಅದನ್ನು ಪಾಲಿಸುವಂತೆ ಅಪ್ಪಣೆಯನ್ನು ಕೊಟ್ಟರು. ರಾಜ್ಯಕ್ಕೂ, ರಾಜಕುಟುಂಬಕ್ಕೂ ಕೆಲವು ನಿಬಂಧನೆಗಳನ್ನು ಮಾಡಿದರು.

ಗ್ರಾಮದಲ್ಲಿದ್ದ ರಾಜಭವನವನ್ನು ರಾಣಿಯ ನಿವಾಸಕ್ಕೆ ಕೊಟ್ಟು ಕೋಟೆಯನ್ನು ತಾವು ತೆಗೆದುಕೊಂಡರು. ಭಂಡಾರದಲ್ಲಿದ್ದ ದ್ರವ್ಯದಲ್ಲಿ ಸ್ವಲ್ಪ ಮಾತ್ರ ರಾಣಿಗೆ ಕೊಟ್ಟು ಮಿಕ್ಕದ್ರವ್ಯವನ್ನೂ, ಒಡವೆಗಳನ್ನೂ, ದತ್ತಪುತ್ರನ ಮೈನಾರಿಟಿಯು ಮುಗಿದನಂತರ ಕೊಡುವುದಕ್ಕಾಗಿ ತಮ್ಮಲ್ಲಿಯೇ ಇಟ್ಟುಕೊಂಡರು. ರಾಣಿಯು ಜೀವಿಸಿರುವವರೆಗೂ ಐದು ಸಾವಿರ (೫೦೦೦) ರೂಪಾಯಿಗಳ ಮಾಸಾಶನವನ್ನು ಏರ್ಪಡಿಸಿ, ಆಕೆಯ ಸೈನಿಕರಿಗೆ ವಿಶ್ರಾಂತಿಯನ್ನು ಉಂಟುಮಾಡಿ, ಅವರಿಗೆ ಬದಲಾಗಿ ತಮ್ಮ ಸೈನ್ಯವನ್ನು ಇಟ್ಟರು.

ಆಂಗ್ಲೇಯರು ಮಾಸಾಶನವನ್ನು ಕೊಡುವೆವು ಎಂದು ಹೇಳಿದರು. ಆದರೆ ರಾಜ್ಯವನ್ನು ಪಡೆಯಬೇಕು ಎಂಬ ಉತ್ಕಟೇಚ್ಛೆಯುಳ್ಳ ರಾಣಿಯು ಆ ಅಲ್ಪ ದ್ರವ್ಯವನ್ನು ತನ್ನ ಜೀವಿತದಲ್ಲಿ ಒಂದು ದಿವಸವಾದರೂ ಸ್ವೀಕರಿಸಲಿಲ್ಲ. ಮತ್ತು ಆಕೆಯು ಆರುಲಕ್ಷ ರೂಪಾಯಿಗಳನ್ನು ಕೊಟ್ಟು ಉಮೇಶಚಂದ್ರ ಬನರ್ಜಿ ಎಂಬ ಒಬ್ಬ ವಂಗದೇಶೀಯನನ್ನೂ, ಒಬ್ಬ ಆಂಗ್ಲೇಯ ಪ್ಲೀಡರನ್ನೂ ಇಂಗ್ಲೆಂಡಿಗೆ ಕಳುಹಿಸಿದಳು. ಅವರು ಅಲ್ಲಿಗೆಹೋಗಿ ಏನುಮಾಡಿದರೋ, ಏನಾದರೋ ಎಂಬ ವಿಷಯವು ಇಂದಿನವರೆಗೂ ತಿಳಿಯಬರಲಿಲ್ಲ. ಲಕ್ಷ್ಮೀಬಾಯಿಯುಮಾತ್ರ, ಅವರು ಅನೇಕ ಉಪಾಯಗಳಿಂದ ತನಗೆ ರಾಜ್ಯವು ಬರುವಂತೆ ಮಾಡುವರು ಎಂದು ನಂಬಿದ್ದಳು.

೧೮೫೫ ನೆಯ ವರುಷದಲ್ಲಿ ದಾಮೋದರರಾಯನಿಗೆ ಉಪನಯನವನ್ನು

ಮಾಡಲು ಎಣಿಸಿ, ಆ ಬಾಲಕನ ಹೆಸರಿನಲ್ಲಿ ಸರ್ಕಾರದವರ ವಶದಲ್ಲಿರುವ ಆರುಲಕ್ಷ ರೂಪಾಯಿಗಳಲ್ಲಿ ಒಂದುಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ರಾಣಿಯು ಸರ್ಕಾರದವರನ್ನು ಕೇಳಿದಳು. ಸರ್ಕಾರದವರು ಇದಕ್ಕಾಗಿ ನೀನು ಯಾರನ್ನಾದರೂ ಜಾಮೀನುಕೊಟ್ಟರೆ ಹಣವನ್ನು ಕೊಡುವೆವುಎಂದು ಹೇಳಿದರು. ಅವರ ಇಷ್ಟದಂತೆ ಜಾಮೀನನ್ನುಕೊಟ್ಟು ಒಂದುಲಕ್ಷ ರೂಪಾಯಿ ಗಳನ್ನು ತೆಗೆದುಕೊಂಡು ಪುತ್ರನ ಉಪನಯನವನ್ನು ಮಹಾ ವೈಭವದೊಡನೆ ನೆರೆವೇರಿಸಿದಳು. ತನ್ನಪತಿಯ ಆಸ್ತಿಯನ್ನು ಪುತ್ರನ ಉಪನಯನಕ್ಕೆ ಉಪ ಯೋಗಿಸಿಕೊಳ್ಳಲು ಪರರನ್ನು ಜಾಮೀನು ಕೊಡಬೇಕಾಗಿಬಂದುದಕ್ಕೆ ರಾಣಿಯ ಮನಸ್ಸು ಎಷ್ಟು ವ್ಯಾಕುಲವನ್ನು ಹೊಂದಿರಬಹುದು ಎಂಬುದನ್ನು ಪಾಠಕರೇ ಊಹಿಸಬಲ್ಲರು!

ರಾಣಿಯು ದುಃಖದಿಂದ ಕಾಲವನ್ನು ಕಳೆಯುತಲಿರಲು ೧೮೫೭ ನೆಯ ಇಸವಿಯಲ್ಲಿ ಭಾರತೀಯ ಸೈನಿಕರು ಆಂಗ್ಲೇಯರಮೇಲೆ ತಿರಿಗಿಬಿದ್ದ ಭಯಂಕರಕಾಲವು ಪ್ರಾಪ್ತವಾಯಿತು. ಈ ಯುದ್ಧವು ಇತಿಹಾಸದಲ್ಲಿ ವರ್ಣಿತ ವಾಗಿರುವುದರಿಂದ ಇತಿಹಾಸಜ್ಞರೆಲ್ಲರಿಗೂ ತಿಳಿದುದೇ ಆಗಿದೆ. ಸೈನ್ಯಗಳು ತಿರುಗಿಬಿದ್ದ ವಿಷಯವು ಝಾನ್ಸಿಯ ಹಿಂದೂಪಟಾಲಗಳಿಗೆ ತಿಳಿದುಬಂದು ಅವರೂ ದರೋಡೆಗೆ ಪ್ರಾರಂಭಿಸಿದರು. ಅವರ ಸೇನಾನಾಯಕನು ಅವರನ್ನು ಸನ್ಮಾರ್ಗಕ್ಕೆ ತಿರುಗಿಸಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ಆತನು ಗ್ರಾಮದಲ್ಲಿರುವ ಆಂಗ್ಲೇಯರಿಗೆ ನೀವೆಲ್ಲರೂ ಭದ್ರವಾಗಿ ಕೋಟೆ ಯೊಳಕ್ಕೆ ಹೋಗಿರಿ ಎಂದು ಗುಪ್ತವಾಗಿ ತಿಳಿಸಿದನು. ಆದರೆ ಮಾರನೆಯ ದಿವಸವೇ ಆ ಸೈನಿಕರು ತಮ್ಮ ಅಧಿಪತಿಯನ್ನು ಕೊಂದು, ಕೋಟೆಗೆ ಮುತ್ತಿಗೆ ಯನ್ನು ಹಾಕಿ ಒಳಗಿರುವವರನ್ನು ಅತಿ ಪ್ರಯತ್ನದಿಂದ ಹೊರಕ್ಕೆ ತೆಗದು, ಅತಿಕ್ರೂರರಾಗಿ ಅವರನ್ನೆಲ್ಲ ಒಂದುಕ್ಷಣಮಾತ್ರದಲ್ಲಿ ಕತ್ತರಿಸಿ, ಹಿಂದಿನ ತಮ್ಮ ದ್ವೇಷಾಗ್ನಿಯನ್ನು ಆರಿಸಿಕೊಂಡರು. ಝಾನ್ಸಿಯಲ್ಲಿ ಒಂದು ಆಂಗ್ಲೇಯ ಶಿಶುಸಹಿತ ಇಲ್ಲದಂತೆಮಾಡಿ, ರಾಜ್ಯವು ಮಹಾರಾಣೀ ಲಕ್ಷ್ಮೀಬಾಯಿಯದು ಎಂದು ಹೇಳುತ್ತಾ ಧ್ವಜವನ್ನು ಎತ್ತಿದರು. ಅಂದಿನಿಂದ ರಾಣಿಯು ತನ್ನ ಸೇನೆಗಳೊಡನೆ ಸೇರಿ ಸ್ವತಂತ್ರವಾಗಿ ಝಾನ್ಸೀ ಸಂಸ್ಥಾನದಲ್ಲಿ ತನ್ನ ರಾಜ್ಯ ವನ್ನು ಸ್ಥಾಪಿಸಲು ಯತ್ನಿಸಿದಳು. ಆಕೆಯು ರಾಜ್ಯವನ್ನಾಳಿದುದು ಕೆಲವು ದಿವಸಗಳುಮಾತ್ರವೇ ಆದರೂ, ಆಕೆಯು ರಾಜ್ಯವ್ಯವಸ್ಥೆಯನ್ನು ಬಹು ನಿಪುಣತೆಯಿಂದ ಮಾಡಿದಳು. ತನ್ನ ಬುದ್ಧಿವಿಶೇಷದಿಂದ ಯಾವಕೆಲಸಕ್ಕೆ ಯಾರನ್ನು ನಿಯಮಿಸಬೇಕು ಎಂಬುದನ್ನು ತಿಳಿದುಕೊಂಡು ಅವರಿಗೆ ಕೆಲಸ ಗಳನ್ನು ನಿಯಮಿಸುತಲಿದ್ದಳು. ಪೂರ್ವದಲ್ಲಿ ಇದ್ದವರನ್ನು ಆಂಗ್ಲೇಯರು ತೆಗೆದು ಹಾಕಿದ್ದುದರಿಂದ ಯೋಗ್ಯರಾದವರು ಆ ಸಮಯದಲ್ಲಿ ಆಕೆಗೆ ದೊರೆಯುವುದು

ಕಷ್ಟವಾಗಿತ್ತು. ದುರ್ಗರಕ್ಷಣಾರ್ಥವಾಗಿ ಆಕೆಯು ಹೊಸ ಸೇನೆಯನ್ನು ಸಿದ್ಧ ಪಡಿಸಿದಳು.

ಲಕ್ಷ್ಮೀಬಾಯಿಯು ಝಾನ್ಸೀರಾಜ್ಯವನ್ನು ಪಾಲಿಸುತ್ತಿರುವಳು ಎಂಬುದನ್ನು ಕೇಳಿ, ಅವರವಂಶೀಯರಲ್ಲಿ ಒಬ್ಬನಾದ ಸದಾಶಿವನಾರಾಯಣನು ಝಾನ್ಸಿಗೆ ಸಮೀಪದಲ್ಲಿರುವ ಕರೇರಾದುರ್ಗವನ್ನು ವಶಮಾಡಿಕೊಂಡು, ಅಲ್ಲಿ ಝಾನ್ಸೀ ರಾಜ್ಯಾಭಿಷೇಕವನ್ನು ಮಾಡಿಕೊಂಡನು. ಹೀಗೆ ಮಾಡಿದರೆ ರಾಣಿಯು ಅಂತಃಪುರದಲ್ಲಿರುವ ಅಬಲೆಯಾದುದರಿಂದ ತನಗೆ ಸ್ವಾಧೀನಳಾಗುವಳು ಎಂದು ಆತನು ಎಣಿಸಿದನು. ಆದರೆ ಪ್ರಬಲೆಯಾವ ಲಕ್ಷ್ಮೀಬಾಯಿಯು ತನ್ನ ಸೈನ್ಯ ವನ್ನು ಕಳುಹಿಸಿ, ಆತನನ್ನು ಹಿಡಿತರಿಸಿ ಝಾನ್ಸೀ ಕೋಟೆಯೊಳಗೆ ಬಂಧಿಸಿದಳು.

ಈಕೆಯು ಒಬ್ಬ ಶತ್ರುವನ್ನು ಸೆರೆಹಿಡಿಯುವದರೊಳಗಾಗಿಯೇ ಇನ್ನೊಬ್ಬ ಶತ್ರುವು ಉತ್ಪನ್ನನಾದನು. ಝಾನ್ಸೀಸಮೀಪದಲ್ಲಿದ್ದ ಓರಚಾಸಂಸ್ಥಾನದ ನವಾಬನಾದ ನಧೇಖಾ ಎಂಬವನು ಬಹು ಸೈನ್ಯದೊಡನೆ ದಂಡೆತ್ತಿಬಂದು "ನಿಮಗೆ ಇದುವರೆಗು ಆಂಗ್ಲೇಯರು ಕೊಡುತಲಿದ್ದ ಮಾಸವೇತನವನ್ನು ನಾವು ಕೊಡುವೆವು. ಆದಕಾರಣ ರಾಜ್ಯವನ್ನು ನಮಗೆ ಸ್ವಾಧೀನಮಾಡಬೇಕು" ಎಂದು ರಾಣಿಗೆ ವರ್ತಮಾನವನ್ನು ಕಳುಹಿಸಿದನು. ಈ ವರ್ತಮಾನವನ್ನು ಕೇಳಿ ರಾಣಿಯ ಮಂತ್ರಿಗಳು ಭೀತಚಿತ್ತರಾಗಿ ನಮಗೆ ಮಾಸಾಶನವನ್ನು ಕೊಟ್ಟರೆ ಸಾಕೆಂತಲೂ, ಅವರೊಡನೆ ಯುದ್ಧಮಾಡಿ ನಾವು ಗೆಲ್ಲಲಾರವೆಂತಲೂ ಹೇಳಿ ದರು. ಅಸಮಾನಶೂರಳಾದ ರಾಣಿಯು ಅವರ ಮಾತಿಗೆ ಕಿವಿಗೊಡದೆ "ಆಂಗ್ಲೇಯರು ಸಾರ್ವಭೌಮರು, ನಿಗ್ರಹಾನುಗ್ರಹ ಸಮರ್ಥರು ಅವರೊಡನೆ ಸಮಾನನು ಎಂದೆಣಿಸಿ, ನೀನು ನನಗೆ ವೇತನವನ್ನು ಕೊಡುವೆನು ಎಂದು ಹೇಳುವೆ. ನಿನ್ನಂತಹವರು ಹತ್ತುಜನರು ಬಂದರೂ ನಾನು ಅವರನ್ನೆಲ್ಲ ಪೌರುಷ ಹೀನರನ್ನಾಗಿ ಮಾಡಬಲ್ಲೆನು. ಇನ್ನು ನಿನ್ನನ್ನು ಲೆಕ್ಕಿಸುವೆನೇ?" ಎಂದು ಆ ನವಾಬನಿಗೆ ವರ್ತಮಾನವನ್ನು ಕಳುಹಿಸಿದಳು. ನಧೇಖಾ ನವಾಬನು ಈ ವರ್ತಮಾನವನ್ನು ಕೇಳಿ, ಆಗ್ರಹಪೂರಿತ ಮನಸ್ಕನಾಗಿ ತನ್ನ ಸೇನೆಗಳನ್ನು ಬಹು ವೇಗದಿಂದ ನಡೆಯಿಸಿಕೊಂಡು ಬಂದು ಝಾನ್ಸಿಯನ್ನು ಸಮೀಪಿಸಿದನು. ಲಕ್ಷ್ಮೀಬಾಯಿಯೂ ಆ ವರ್ತಮಾನವನ್ನು ಕಳುಹಿಸಿ ಯುದ್ಧಸನ್ನದ್ಧಳಾಗಿದ್ದಳು. ಆಗ ಆಕೆಯು ಪುರುಷವೇಷಧಾರಿಣಿಯಾಗಿ, ತಾನೇ ಸೇನಾಧಿಪತ್ಯವನ್ನು ವಹಿಸಿ ಯುದ್ಧವನ್ನು ಮಾಡಿ ನಧೇಖಾ ನವಾಬನನ್ನು ಸೋಲಿಸಿ ಅವನಿಂದ ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು ಸಂಧಿಯನ್ನು ಮಾಡಿಕೊಂಡಳು.

ರಾಣಿಯು ಪ್ರಜೆಗಳನ್ನು ಪ್ರೇಮದಿಂದ ಪಾಲಿಸುತಲಿದ್ದುದರಿಂದ ಅವರು ರಾಣಿಗೆ ಶುಭವುಂಟಾಗಬೇಕು ಎಂದು ಸರ್ವದಾ ಅಪೇಕ್ಷಿಸುತಲಿದ್ದರು. ಲಕ್ಷ್ಮೀ

ಬಾಯಿಗೆ ಪುರುಷವೇಷದಲ್ಲಿ ದರ್ಬಾರ್‌ಮಾಡುವುದು, ಅಶ್ವಾರೋಹಣವಂ ಮಾಡುವುದು ಪ್ರಿಯವಾದ ಕಾರ್ಯಗಳಾದುದರಿಂದ ಆಕೆಯು ಅನೇಕ ಸಮಯ ಗಳಲ್ಲಿ ಪುರುಷವೇಷದಲ್ಲಿಯೇ ಇರುತಲಿದ್ದಳು. ಆಕೆಯು ಸ್ತ್ರೀವೇಷದಲ್ಲಿದ್ದರೂ ಆಭರಣಗಳನ್ನು ಧರಿಸದೆ ಶ್ವೇತವಸ್ತ್ರವನ್ನು ಧರಿಸಿಕೊಂಡಿರುತಲಿದ್ದಳು.

ರಾಣಿಯು ಬಡವರಲ್ಲಿ ದಯೆಯುಳ್ಳವಳಾಗಿದ್ದಳು. ಒಂದು ದಿವಸ ಈಕೆಯು ಮಹಾಲಕ್ಷ್ಮಿಯ ದರ್ಶನಕ್ಕೆ ಹೋಗಿಬರುವಾಗ ಕೆಲಬಡಜನರು ದಾರಿಯಲ್ಲಿ ಅಡ್ಡವಾಗಿ ನಿಂತುಕೊಂಡರು. ಹಾಗೆ ಅವರು ನಿಂತುಕೊಳ್ಳಲು ಕಾರಣವು ಏನು ಎಂದು ಕೇಳಿದಳು. ಅವರು ಚಳಿಯಿಂದ ಬಾಧಿತರಾಗಿರುವ ಕಾರಣ ವಸ್ತ್ರದಾನವನ್ನು ಅಪೇಕ್ಷಿಸಿ ಬಂದಿರುವರು ಎಂದು ತಿಳಿಯಬಂದಿತು. ಆಗ ರಾಣಿಯು ಅವರಿಗೆ ಕಂಬಳಿಗಳನ್ನು, ಅಂಗಿಗಳನ್ನು, ಟೋಪಿಗಳನ್ನೂ ತರಿಸಿಕೊಟ್ಟಳು.

ಮಧ್ಯಹಿಂದೂಸ್ಥಾನವೆಲ್ಲ ದರೋಡೆಸೈನಿಕರ ಸ್ವಾಧೀನವಾದುದರಿಂದ, ಆಗಿನ ಹಿಂದೂದೇಶದ ಗವರ್ನರ್‌ಜನರಲ್ ಲಾರ್ಡ್‌ಕ್ಯಾನಿಂಗ್ ದೊರೆಯು, ಇಂಗ್ಲೆಂಡ್ ದೊರೆತನದವರ ಅಪ್ಪಣೆಯನ್ನು ಪಡೆದು, ಇಂಗ್ಲೆಂಡಿನ, ಭರತಖಂಡದ ಪ್ರವೀಣರಾದ ಸೇನಾನಾಯಕರನ್ನು ಕರೆಯಿಸಿ, ರಾಜಭಕ್ತಿಯುಳ್ಳ ಇತರ ಸೈನ್ಯ ಗಳನ್ನೂ ಸಹಾಯಾರ್ಥವಾಗಿ ಬಂದ ಇತರ ಭೂಪತಿಗಳ ಸೈನ್ಯಗಳನ್ನೂ ಅವರ ವಶಪಡಿಸಿ, ಆ ಪ್ರಚಂಡಸೇನೆಯನ್ನು ನಡೆಸಲು ಯುದ್ಧಕಲಾವಿಶಾರದನಾದ ಸರ್ ಹ್ಯೂರಾಜ್‌ದೊರೆಗೆ ಸರ್ವ ಸೈನ್ಯಾಧಿಪತ್ಯವನ್ನು ಕೊಟ್ಟನು.

೧೮೫೭ನೆಯ ಡಿಸಂಬರ್ ೧೭ನೆಯ ತಾರೀಖಿನಲ್ಲಿ ಹ್ಯೂರಾಜ್ ದೊರೆಯು ಸೇನಾಧಿಪತ್ಯವನ್ನು ಸ್ವೀಕರಿಸಿ, ಯುದ್ಧಕ್ಕೆ ಹೋಗಲು ಅನುಕೂಲವಾದ ಮಾರ್ಗ ಗಳನ್ನು ವಿಚಾರಿಸಿ, ಸೈನ್ಯಗಳು ಬೇರೆಬೇರೆ ಮಾರ್ಗಗಳಲ್ಲಿ ಹೋಗಬೇಕಾದ ಕ್ರಮವನ್ನು ತಿಳಿಸಿದನು. ಕ್ರಮಕ್ರಮವಾಗಿ ಹ್ಯೂರಾಜ್ ದೊರೆಯು ತನ್ನ ಸಂಗ್ರಾಮಕೌಶಲವನ್ನು ಎಲ್ಲರು ಹೊಗಳುವಂತೆ, ದರೋಡೆ ಸೈನಿಕರ ವಶವಾ ಗಿದ್ದ ಅನೇಕ ಸ್ಥಳಗಳನ್ನು ಗೆದ್ದು, ಝಾನ್ಸಿಯನ್ನು ಗೆಲ್ಲುವ ಉದ್ದೇಶದಿಂದ ಅಲ್ಲಿಗೆ ೧೪ ಮೈಲಿಗಳ ದೂರದಲ್ಲಿ ತನ್ನ ಸೈನ್ಯದೊಡನೆ ಶಿಬಿರವನ್ನು ಸ್ಥಾಪಿಸಿದನು. ಅಲ್ಲಿಂದ ಝಾನ್ಸೀ ವರ್ತಮಾನಗಳನ್ನು ತಿಳಿದುಕೊಂಡು, ಪುರರಚನಾಕ್ರಮವ ನ್ನರಿತು, ೧೮೫೮ನೆ ಮಾರ್ಚಿ ೨೦ನೆಯ ತಾರೀಖಿನಲ್ಲಿ ಝಾನ್ಸಿಯ ಸರಹದ್ದನ್ನು ಪ್ರವೇಶಿಸಿ ಯುದ್ಧಸನ್ನದ್ಧನಾದನು. ಆಗ ರಾಣಿಯುಸಹ ತನ್ನ ಸೈನ್ಯಗಳನ್ನು ಸಿದ್ಧಪಡಿಸಿಕೊಂಡಳು. ನಥೇಖಾನವಾಬನೊಡನೆ ಯುದ್ಧಮಾಡಿದ ಕಾಲದಲ್ಲಿದ್ದ ಸೈನ್ಯದೊಡನೆ ಅನೇಕಸ್ಥಳಗಳಿಂದ ಬಂದ ದರೋಡೆ ಸೈನಿಕರು ಸೇರಿ ಆಕೆಯ

ಸೈನ್ಯವು ಅನೇಕ ಸೈನಿಕರಿಂದ ತುಂಬಿತ್ತು. ಈ ಸೈನ್ಯದಲ್ಲಿ ಶೂರರಾದ ಠಾಕುರು ಪ್ರಜೆಗಳೂ, ಪಠಾನರೂ ಇದ್ದರು. ರಾಣಿಯೇ ಸೈನ್ಯಾಧಿಪತ್ಯವನ್ನು ವಹಿಸಿ ಸೈನ್ಯಕ್ಕೆ ತಕ್ಕ ಬಂದೋಬಸ್ತನ್ನು ಮಾಡಿದಳು ಝಾನ್ಸೀಕೋಟೆಯು ವಿಶಾಲವಾದುದಾಗಿಯೂ, ಅಭೇದ್ಯವಾದುದಾಗಿಯೂ ಇದ್ದಿತು. ಕೋಟೆಯಲ್ಲಿ ದೊಡ್ಡ ದೊಡ್ಡ ಬುರುಜುಗಳಿದ್ದವು. ಕಿಲ್ಲೆಯೊಳಗೆ ಅನೇಕ ದಿವಸಗಳಿಂದ ನಿರುಪಯೋಗಗಳಾಗಿ ಬಿದ್ದಿದ್ದ ಫಿರಂಗಿಗಳನ್ನು ಸರಿಮಾಡಿಸಿ, ಬುರುಜುಗಳಮೇಲೆ ಇಡಿಸಿ, ಪ್ರತಿಯೊಂದು ಫಿರಂಗಿಯ ಬಳಿಯಲ್ಲಿಯು ಒಬ್ಬೊಬ್ಬ ಯುದ್ಧವಿದ್ಯಾನಿಪುಣನನ್ನು ನಿಯಮಿಸಿದಳು.

ಅದೇ ಮಾರ್ಚಿ ೨೩ನೆಯ ತಾರೀಖಿನಲ್ಲಿ ಯುದ್ಧವು ಪ್ರಾರಂಭವಾಯಿತು. ಆದಿವಸ ಶತ್ರುಗಳು ಝಾನ್ಸೀಕೋಟೆಯನ್ನು ಸಮೀಪಿಸಲು ಪ್ರಯತ್ನಿಸಿದರು. ಆದರೆ ಕೋಟೆಯೊಳಗಿನಿಂದ ಬರುವ ಆಗ್ನೇಯ ಬಾಣವೃಷ್ಟಿಯು ಅಸಹ್ಯವಾದುದರಿಂದ ಅವರು ಕೋಟೆಯನ್ನು ಸಮೀಪಿಸಲಾರದೆ ಹೋದರು. ಆ ರಾತ್ರಿಯಲ್ಲಿ ಆಂಗ್ಲೇಯರು ಕೋಟೆಯನ್ನು ಸಮೀಪಿಸಿ ನಾಲ್ಕು ಬುರುಜುಗಳನ್ನು ಏರ್ಪಡಿಸಿ, ಅವುಗಳಮೇಲೆ ಫಿರಂಗಿಗಳನ್ನು ಇಟ್ಟರು. ಆ ರಾತ್ರಿ ಕೋಟೆಯೊಳಗಿನವರುಸಹ ಯುದ್ಧಪ್ರಯತ್ನವನ್ನೇ ಮಾಡುತ್ತಿದ್ದರು. ೨೪ನೆಯ ತಾರೀಖಿನಲ್ಲಿಯೂ ಆಂಗ್ಲೇಯಸೈನ್ಯಗಳೇ ಹಿಂದೆಗೆದವು. ೨೫ನೆಯ ಪ್ರಾತಃಕಾಲದಿಂದ ಇಂಗ್ಲೀಷರ ಸೈನ್ಯದಿಂದ ಕೋಟೆಯಮೇಲೆಯೂ, ಪುರದಮೇಲೆಯೂ ಶತಮುಖಬಾಣವೃಷ್ಟಿಯಾಗಲಾರಂಭಿಸಿತು. ಆ ಗೋಳವು ಒಂದು ಬಿದ್ದರೆ ನಾಲ್ಕೈದು ಜನರು ಹತರಾಗಿ, ಹತ್ತು ಜನರು ಆಹತರಾಗುತಲಿದ್ದರು. ಆದಕಾರಣ ಪ್ರಜೆಗಳು ಆಹಾರಾದಿಗಳಿಗೆ ಸಹ ತಿರುಗಾಡಲಾರದಿದ್ದರು. ಪಟ್ಟಣವೆಲ್ಲವೂ ಹಾಹಾಕಾರಗಳಿಂದ ತುಂಬಿತು. ಪ್ರಜೆಗಳ ದೀನತ್ವವನ್ನು ನೋಡಿ ರಾಣಿಯು ಅವರಿಗೆ ಸುರಕ್ಷಿತಸ್ಥಳದಲ್ಲಿ ಒಂದು ಅನ್ನಸತ್ರವನ್ನು ಇಡಿಸಿದಳು. ಆಂಗ್ಲೇಯ ಸೈನ್ಯಗಳಿಂದ ಬರುವ ನಾರಾಯಣಾಸ್ತ್ರತುಲ್ಯಗಳಾದ, ಅಗ್ನಿಗೋಳಗಳ ದೆಸೆಯಿಂದ ತನ್ನ ಸೇನೆಗಳು ಧೈರ್ಯಹೀನವಾಗುವುದನ್ನು ಕಂಡು, ಅವರಿಗೆ ಉತ್ಸಾಹವನ್ನು ಉಂಟುಮಾಡಿ ಶತ್ರುಗಳನ್ನು ಧಿಕ್ಕರಿಸುತಲಿದ್ದಳು. ಈಪ್ರಕಾರವಾಗಿ ಉಭಯ ಸೈನ್ಯಗಳು ೩೦ ನೆಯ ತಾರೀಖಿನವರೆಗೂ ಯುದ್ಧಮಾಡಿದವು. ಇಂಗ್ಲೀಷರ ಸೇನೆಯನ್ನು ಅನೇಕ ಸೇನಾನಾಯಕರು ನಡೆಸುವುದರಿಂದಲೂ, ಸೈನಿಕರು ಯುದ್ಧಶಿಕ್ಷೆಯನ್ನು ಕ್ರಮವಾಗಿ ಅಭ್ಯಸಿಸಿರುವುದರಿಂದಲೂ ಅವರ ಸೈನ್ಯವು ನಿಂತು ಯುದ್ಧವನ್ನು ಮಾಡುವುದು ಆಶ್ಚರ್ಯವಲ್ಲ. ರಾಣಿಯ ಸೈನ್ಯವು ನೋಡುವುದಕ್ಕೆ ಹೆಚ್ಚಾಗಿ ಕಂಡುಬಂದರೂ, ಅವರಲ್ಲಿ ಅನೇಕರು ಯುದ್ಧಶಿಕ್ಷೆಯನ್ನಭ್ಯಸಿಸದ ದರೋಡೆಯವರು. ಆದುದರಿಂದ ಇವರು ನಿಂತು ಯುದ್ಧಮಾಡಲಾರದೆ ಹೋದರು. ಮತ್ತು ಇಷ್ಟು ದೊಡ್ಡ ಸೇನೆಯನ್ನು ರಾಣಿಯು ಒಬ್ಬಳೇ ನಡೆಸುವುದು ದುರ್ಘಟಕಾರ್ಯವು.

ಇಷ್ಟು ಕಷ್ಟಗಳಿದ್ದರೂ ಆ ವೀರರಮಣಿಯು ತನ್ನ ಬುದ್ಧಿಚಾತುರ್ಯದಿಂದಲೂ, ಶೌರ್ಯಸಂಪತ್ತಿನಿಂದಲೂ ವಿಖ್ಯಾತರಾದ ಆಂಗ್ಲೇಯ ಸೇನಾನಾಯಕರೊಡನೆ ಪ್ರತಿಘಟಿಸಿ ರಣರಂಗದಲ್ಲಿ ನಿಂತು ಅನೇಕ ದಿವಸಗಳು ಯುದ್ಧವನ್ನು ಮಾಡಿ ಅವರಿಂದ 'ಈಕೆಯನ್ನು ಗೆಲ್ಲುವುದು ಅಸಾಧ್ಯ' ಎಂದೆನ್ನಿಸಿಕೊಂಡುದು ಆಶ್ಚರ್ಯಜನಕವಾದುದಲ್ಲವೆ?

ಯುದ್ಧಸಮಯದಲ್ಲಿ ರಾಣಿಯು ತನ್ನ ದೃಷ್ಟಿಯನ್ನು ನಾಲ್ಕುಕಡೆಗೂ ಪ್ರಸರಿಸುತ್ತ, ಅಲ್ಲಲ್ಲಿ ಬೇಕಾದ ಏರ್ಪಾಟುಗಳನ್ನು ಮಾಡುತ್ತ, ಸೈನಿಕರಿಗೆ ಬಹುಮಾನಗಳನ್ನು ಕೊಡುತ್ತ, ಯುದ್ಧಧರ್ಮಗಳನ್ನು ಬೋಧಿಸಿ, ಅವರ ಮನಗಳಲ್ಲಿ ವೀರರಸವನ್ನು ಉಂಟುಮಾಡುತಲಿದ್ದಳು. ಗಾಯವನ್ನು ಪಡೆದ ಸೈನಿಕರಿಗೆ ತನ್ನ ಸಮುಖದಲ್ಲಿ ಚಿಕಿತ್ಸೆಯನ್ನು ಮಾಡಿಸುತ್ತಿದ್ದಳು.

ಈ ಪ್ರಕಾರವಾಗಿ ೩೧ ನೆಯ ತಾರೀಖಿನವರೆಗು ಯುದ್ಧವು ನಡೆದರೂ ಆಂಗ್ಲೇಯ ಸೈನ್ಯಗಳು ಕೋಟೆಯನ್ನು ಭೇದಿಸಲಾರದೆ ಹೋದವು. ಈ ರಣರಂಗದಲ್ಲಿ ಅವರ ಯುದ್ಧಸಾಮಗ್ರಿಗಳು ಕಡಮೆಯಾದುದರಿಂದ, ತಮಗೆ ಅಪಜಯವು ಉಂಟಾಗುವುದೇನೋ ಎಂದು ಶಂಕಿಸುತ್ತಲಿದ್ದರು. ಇಷ್ಟರಲ್ಲಿ ನಾನಾಸಾಹೇಬ್ * ಪೇಷ್ವೆಯ ಸೇನಾನಾಯಕನಾದ ತಾತಾಟೋಪೆ ಎಂಬ ವೀರನು, ರಾಣಿಯ ಸಹಾಯಾರ್ಥವಾಗಿ ಕಾಲ್ಪೀಯಿಂದ ಬಹು ಸೇನೆಯೊಡನೆ ಬರುತ್ತಿದ್ದನು. ಆ ಸೈನ್ಯವು ಬಹು ದೂರದಲ್ಲಿ ಇರುವಾಗಲೆ ಆಂಗ್ಲೇಯರು ದೂರದರ್ಶಕಯಂತ್ರದಿಂದ ನೋಡಿದರು. ಅನಂತರ ಅಗ್ನಿದೇವನಿಗೆ ವಾಯುದೇವನು ಸಹಾಯಕನಾದಂತೆ ಈ ರಾಣಿಗೆ ಆ ಸೈನ್ಯವು ಸಹಾಯವಾದರೆ ತಮಗೆ ಅಪಜಯವು ಉಂಟಾಗುವುದು ಸತ್ಯವು ಎಂದು ತಿಳಿದುಕೊಂಡರು. ಆದರೆ ಸರ್ ಹ್ಯೂರಾಜ್ ದೊರೆಯು ಭಯಪಡದೆ ರಾಣಿಯೊಡನೆ ಯುದ್ಧಮಾಡಲು ಸ್ವಲ್ಪ ಸೈನ್ಯವನ್ನು ಇಟ್ಟು ಮಿಕ್ಕ ಸೇನೆಯನ್ನು, ಕೋಟೆಯೊಳಗೆ ಇರುವವರು ಅರಿಯದಂತೆ ಕಾಲ್ಪೀಮಾರ್ಗವಾಗಿ ಕಳುಹಿಸಿದನು. ಅವರು ಅಲ್ಲಿಗೆ ಹೋಗಿ, ಬರುತಲಿದ್ದ ವಿಪುಲ ಸೈನ್ಯವನ್ನು ಮಾರ್ಗದಲ್ಲಿ ಅಡ್ಡಗಿಸಿ, ತಮ್ಮ ಯುದ್ಧಸಾಮರ್ಥ್ಯದಿಂದ ಅವರನ್ನು ಸೋಲಿಸಿದರು. ತಾತಾಟೋಪೆಯ ಸೇನೆಗಳು ಯುದ್ಧಸಾಹಿತ್ಯಗಳನ್ನು ಅಲ್ಲಿಯೇ ಬಿಟ್ಟು ಪಲಾಯನವಾದವು. ಸರ್ ಹ್ಯೂರಾಜ್ ದೊರೆಯ ಸೇನೆಯು, ಯುದ್ಧಸಾಮಗ್ರಿಗಳೊಡನೆ ಜಯವು ಸಂಭವಿಸಿದುದರಿಂದ ಉತ್ಸಾಹಯುತಗ

* ನಾನಾಸಾಹೇಬನು ಎರಡನೆಯ ಬಾಜೀರಾಯನ ದತ್ತಪುತ್ರನು. ೧೮೫೭ನೆ ಇಸವಿಯ ಸಿಪಾಯಿಗಳ ಸ್ವಾಮಿದ್ರೋಹಕ್ಕೆ ಈತನೇ ಪ್ರೋತ್ಸಾಹವನ್ನು ಉಂಟುಮಾಡಿದವನು. ಆಂಗ್ಲೇಯರಿಂದ ತನ್ನ ಪೂನಾರಾಜ್ಯವನ್ನು ಮರಳಿಪಡೆಯಬೇಕು ಎಂಬಾಶಯದಿಂದ ಹೀಗೆ ಮಾಡಿದನು.

ಳಾದವು. ಅವರೆಲ್ಲರು ಹಿಂತಿರುಗಿ ಬಂದು ಶತ್ರುಗಳಮೇಲೆ ತಪ್ತಗೋಳವರ್ಷ ವನ್ನು ಸುರಿಸಲಾರಂಭಿಸಿದರು.

ಸರ್ ಹ್ಯೂರಾಜ್ ದೊರೆಯು ಏಪ್ರಿಲ್ ೨ ನೆಯ ತಾರೀಖಿನವರೆಗು ಯುದ್ಧಮಾಡಿದರೂ ಪುರವನ್ನು ಪ್ರವೇಶಿಸಲು ಸಾಧ್ಯವಾಗದೇ ಇರುವುದಕ್ಕೆ ಚಿಂತಿಸಿ, ಆದಿವಸ ಹೇಗಾದರೂ ತಮ್ಮ ಬುದ್ಧಿಚಾತುರ್ಯದಿಂದ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಎಣಿಸಿದನು. ಆತನು ಕ್ರಮಪ್ರಕಾರವಾಗಿ ಸೇನೆಯನ್ನು ಕಳುಹಿಸಲು, ಅವರು ಶತ್ರುಗಳು ಸುರಿಸುತಲಿರುವ ಬಾಣವೃಷ್ಟಿ ಯನ್ನು ಲಕ್ಷ್ಯಮಾಡದೆ ಗ್ರಾಮದ್ವಾರದಿಂದಲೂ, ಕೋಟೆಯ ಗೋಡೆಯ ಮೂಲಕ ವಾಗಿಯೂ ಪುರವನ್ನು ಪ್ರವೇಶಿಸಲಾರಂಭಿಸಿದರು. ತಾತಾಟೋಪೆಯ ಪರಾ ಭವವನ್ನು ಕೇಳಿ ರಾಣಿಯಸೈನಿಕರು ನಿರುತ್ಸಾಹಿಗಳಾದರು. ಹತಶೇಷರಾದ ಸೈನಿಕರಿಗೆ ಉತ್ಸಾಹವನ್ನು ಉಂಟುಮಾಡುತ್ತ ರಾಣಿಯು ಯುದ್ಧವನ್ನು ನಡೆಸು ತ್ತಿದ್ದಳು. ಆದರೆ ೩ ನೆಯ ತಾರೀಖಿನಲ್ಲಿ ಪುರವು ಆಂಗ್ಲೇಯರಿಂದ. ತುಂಬಿ ಹೋಯಿತು. ೪ ನೆಯ ತಾರೀಖಿಗೆ ಪಟ್ಟಣವು ಸಂಪೂರ್ಣವಾಗಿ ಆಂಗ್ಲೇಯರ ವಶವಾಯಿತು.

ತಾನು ಇಷ್ಟುದಿವಸಗಳು ಮಾಡಿದ ಶ್ರಮೆಯು ಫಲಹೀನವಾಗಿ, ತಮ್ಮ ನಗರವು ಶತ್ರುವಶವಾದುದಕ್ಕೆ ರಾಣಿಯು ಚಿಂತಿಸಿ, ಕರ್ತವ್ಯವನ್ನು ಆಲೋಚಿಸಿ, ವಿಜಯೋತ್ಸಾಹಿಗಳಾದ ಶತ್ರುಗಳು ತನ್ನನ್ನು ಬಂಧಿಸುವರು ಎಂದು ತಿಳಿದು, ಹೇಗಾದರೂ ರಣರಂಗದಲ್ಲಿ ತನ್ನ ಪ್ರಾಣವನ್ನು ತ್ಯಜಿಸಬೇಕು ಎಂದು ನಿಶ್ಚಯಿಸಿ ಕೊಂಡಳು. ಅನಂತರ ಆಕೆಯು ಯೋಧವೇಷವನ್ನು ಧರಿಸಿ, ಪ್ರಿಯತಮನಾದ ದತ್ತಪುತ್ರನನ್ನು ಬಿಟ್ಟರಲಾರದೆ ಆ ಬಾಲಕನನ್ನು ಬೆನ್ನಿಗೆ ಕಟ್ಟಿಕೊಂಡು, ಅಶ್ವ ವನ್ನಾರೋಹಿಸಿ, ಅಲ್ಪಸೇನೆಯಿಂದೊಡಗೂಡಿ ಆಂಗ್ಲೇಯ ಸೈನ್ಯದೊಡನೆ ಯುದ್ಧ ಮಾಡುತ್ತ ಮಾರ್ಗವನ್ನು ಬಿಡಿಸಿಕೊಂಡು ನಾಲ್ಕನೆಯತಾರೀಖಿನ ರಾತ್ರಿ ಕಾಲ್ಪೀ ಮಾರ್ಗವಾಗಿ ಹೊರಟಳು.

ರಾಣಿಯು ತಮ್ಮ ಸೈನ್ಯಮಧ್ಯದಿಂದ ಹೊರಟು ಕಾಲ್ಪೀಮಾರ್ಗವನ್ನು ಹಿಡಿ ದಳೆಂದು ಕೇಳಿ ಸರ್ ಹ್ಯೂರಾಜ್ ದೊರೆಯು ಸಖೇದಾಶ್ಚರ್ಯ ಮಗ್ನನಾದನು! ಆಮೇಲೆ ಆತನು ಸ್ವಲ್ಪ ಸೈನ್ಯವನ್ನು ಕೊಟ್ಟು ಒಬ್ಬ ಸೇನಾನಾಯಕನನ್ನು, ಆಕೆಯನ್ನು ಹಿಂಬಾಲಿಸುವಂತೆ ಕಳುಹಿಸಿದನು. ಆದರೆ ರಾಣಿಯು ಅವರ ದೃಗ್ಗೋಚರವಾಗದೆ ತನ್ನ ತುರಗವನ್ನು ಅತಿ ತ್ವರಿತಗತಿಯಿಂದ ನಡೆಸುತ್ತ ಸೂರ್ಯೋದಯಕಾಲಕ್ಕೆ ಝಾನ್ಸೀಸಂಸ್ಥಾನದ ಮೇರೆಯಾದ ಭಾಂಡೇರ ಎಂಬ ಗ್ರಾಮವನ್ನು ಪ್ರವೇಶಿಸಿದಳು. ಅಲ್ಲಿ ಆಕೆಯು ಕುದುರೆಯನ್ನು ಇಳಿದು ಪುತ್ರನಿಗೆ

ಫಲಾಹಾರವನ್ನು ಕೊಟ್ಟು ಪುನಃ ಅಶ್ವಾರೋಹಣವನ್ನು ಮಾಡಿ, ಆಂಗ್ಲಸೇನೆಯು ತನ್ನನ್ನು ಸೆರೆಹಿಡಿಯಲು ಬರುತಲಿರುವ ವರ್ತಮಾನವನ್ನು ಕೇಳಿದಳು. ಆ ಸಮಯದಲ್ಲಿ ಆಕೆಯ ಬಳಿಯಲ್ಲಿ ೧೫೦ ಜನ ಸರದಾರರು ಮಾತ್ರವಿದ್ದರು. ಆದರೂ ಲಕ್ಷ್ಮೀಬಾಯಿಯು ಹೆದರದೆ ತನ್ನ ಖಡ್ಗವನ್ನು ಒರೆಯಿಂದ ತೆಗೆದು ಯುದ್ಧಸನ್ನದ್ಧಳಾಗಿ ಹೋಗುತಲಿದ್ದಳು. ಅನತಿಕಾಲದಲ್ಲಿಯೇ ಇಂಗ್ಲೀಷರ ಸೈನ್ಯವು ಆಕೆಯನ್ನು ಸಮೀಪಿಸಿತು. ಆಕೆಯು ತನ್ನ ಯುದ್ಧನೈಪುಣ್ಯದಿಂದ ಅವರಿಗೆ ದಿಕ್ಕುತೋರದಂತೆ ಮಾಡಿ ಅವರಲ್ಲಿ ಕೆಲವರನ್ನು ಸಂಹರಿಸಿ ಕ್ಷಣಮಾತ್ರದಲ್ಲಿ ಅದೃಶ್ಯಳಾದಳು. ಜನ್ಮಾದಿಯಿಂದಲು ಯುದ್ಧವೆಂಬ ಮಾತನ್ನು ಅರಿಯದೆ, ಸರ್ವದಾ ಅಂತಃಪುರದಲ್ಲಿ ಇದ್ದ ಬ್ರಾಹ್ಮಣವಿತಂತುವು, ಅನೇಕ ಸೈನ್ಯಸಹಿತನಾದ ಆಂಗ್ಲೇಯ ಸೇನಾಧಿಪತಿಯನ್ನು ಸೋಲಿಸಿದಳು ಎಂದು ಕೇಳಿ ಯಾರುತಾನೇ ಆಶ್ಚರ್ಯಸಾಗರವಮಗ್ನರಾಗದೆ ಇರಬಲ್ಲರು?

ಆಕೆಯು ಅಲ್ಲಿಂದ ಹೊರಟು ರಾತ್ರಿಯಾಗುವ ಸಮಯಕ್ಕೆ ಕಾಲ್ಪಿಯನ್ನು ಸೇರಿ ನಾನಾಸಾಹೇಬನನ್ನು ನೋಡಿದಳು. ಈ ವೀರಸಾಧ್ವಿಯು ನಿದ್ರಾಹಾರಗಳಿಲ್ಲದೆ ಅಶ್ವಾರೋಹಣವನ್ನು ಮಾಡಿ ಒಂದುನೂರಯೆಂಟು ಮೈಲಿಗಳನ್ನು ಪ್ರಯಾಣಮಾಡಿ ಬಂದಿದ್ದಳು!

ರಾಣೀಲಕ್ಷ್ಮೀಬಾಯಿಯು ಕಾಲ್ಪಿಗೆ ಬಂದ ವರ್ತಮಾನವನ್ನು ಕೇಳಿ ಬಂದೇವಾಲಾ ನವಾಬನುಸಹ ಸೈನ್ಯದೊಡನೆ ನಾನಾಸಾಹೇಬನಿಗೆ ಸಹಾಯಕನಾದನು. ಎಲ್ಲರೂ ತಂತಮ್ಮ ಸೇನೆಗಳೊಡನೆ ಯುದ್ಧಸನ್ನದ್ಧರಾಗುತಲಿದ್ದರು. ರಾಣಿಯ ಶೌರ್ಯವನ್ನು ತಿಳಿದವನಾದರೂ, ರಾವುಸಾಹೇಬ್ ಪೇಷ್ವೆಯು ಸ್ವಾಭಿಮಾನದಿಂದ ತನ್ನ ಸರ್ವ ಸೇನಾಧಿಪತ್ಯವನ್ನು ಆಕೆಗೆ ಕೊಡಲು ಸಮ್ಮತಿಸಲಿಲ್ಲ. ಇದರಿಂದ ರಾಣಿಯು ಕೆಲವು ದಿವಸಗಳು ನಿರುತ್ಸಾಹಿಯಾಗಿದ್ದಳು.

ಸರ್ ಹ್ಯೂರಾಜ್ ದೊರೆಯು ಕಾಲ್ಪಿಯನ್ನು ಗೆಲ್ಲುವುದಕ್ಕಾಗಿ ಸೈನ್ಯದೊಡನೆ ರಾತ್ರಿಂದಿನ ಪ್ರಯಾಣಮಾಡುತ್ತ ಕಾಲ್ಪೀ ಸಮೀಪದಲ್ಲಿ ಇರುವ ಕೂನ್ ಎಂಬ ಗ್ರಾಮದಲ್ಲಿ ಪೇಷ್ವೆಯ ಸೇನೆಯನ್ನು ಎದುರಿಸಿ, ಕ್ಷಣಮಾತ್ರದಲ್ಲಿ ಸೋಲಿಸಿದರು. ಅದರಿಂದ ಪೇಷ್ವೆ, ನವಾಬ ಮೊದಲಾದವರೊಡನೆ ರಾಣಿಯು ಕಾಲ್ಪಿಯನ್ನು ಸೇರಬೇಕಾಯಿತು. ಆ ಸಮಯದಲ್ಲಿ ಆಕೆಗೆ ಸ್ವಂತಸೇನೆಯು ಇಲ್ಲದುದರಿಂದಲೂ, ಪೇಷ್ವೆಯು ಆಕೆಗೆ ಮನ್ನಣೆಯನ್ನು ಮಾಡುದುದರಿಂದಲೂ ಆಕೆಯ ಶೌರ್ಯವು ಆ ಯುದ್ಧದಲ್ಲಿ ತಿಳಿಯಬರಲಿಲ್ಲ. ಅನಂತರ ಕಾಲ್ಪಿಗೆ ಹೋದ ಮೇಲೆ ಸೈನ್ಯದ ಬಂದೋಬಸ್ತಿನ ವಿಷಯವಾಗಿ ಆಕೆಯು ತನ್ನ ಅಭಿಪ್ರಾಯವನ್ನು ತಿಳಿಸಲು, ಪೇಷ್ವೆಯು ಆಕೆಯ ಬುದ್ಧಿಚಾತುರ್ಯಕ್ಕೆ ಸಂತೋಷಿಸಿ, ಆಕೆಯನ್ನೂ

ತಾತಾಟೋಪೆಯನ್ನೂ ಮುಖ್ಯಸೇನಾಧಿಪತಿಗಳಾಗಿ ನಿಯಮಿಸಿದನು. ಆಂಗ್ಲೇಯ ಸೈನ್ಯಗಳು ಕಾಲ್ಪೀನಗರಕ್ಕೆ ಮುತ್ತಿಗೆಯನ್ನು ಹಾಕಿತು. ಸ್ವಲ್ಪಕಾಲ ಉಭಯ ಸೈನ್ಯಗಳಿಗೂ ತುಮುಲಕಲಹವು ನಡೆದು ಕೊನೆಗೆ ಆಂಗ್ಲೇಯರು ಜಯವನ್ನು ಹೊಂದಿದರು. ಪೇಷ್ವೆಯೇ ಮೊದಲಾದವರು ಧೈರ್ಯಹೀನರಾದರು. ಲಕ್ಷ್ಮೀ ಬಾಯಿಯು ಅವರಿಗೆ ಧೈರ್ಯವನ್ನು ಹೇಳಿ, ಪುನಃ ತನ್ನ ಸ್ವಲ್ಪ ಸೇನೆಯೊಡನೆ ಯುದ್ಧವನ್ನು ಮಾಡಿದಳು. ಆದರೆ ಹಿಂದಿನಿಂದ ಇನ್ನೂ ಶತ್ರುಸೇನೆಗಳು ವಿಶೇಷ ವಾಗಿ ಬರುತ್ತಲಿದ್ದುದರಿಂದಲೂ, ತಮ್ಮ ಸೇನೆಯಲ್ಲಿ ಇತರ ಸೇನಾನಾಯಕರು ಪಲಾಯನವಾದುದರಿಂದಲೂ ರಾಣಿಯು ಯುದ್ಧವಿಮುಖಳಾಗ ಬೇಕಾಯಿತು.

ಕಾಲ್ಪಿಯಲ್ಲಿ ಅಪಜಯವನ್ನು ಹೊಂದಿದ ಈ ಪ್ರಮುಖರೆಲ್ಲರು ಗ್ವಾಲೇರಿನ ಕಡೆಯಲ್ಲಿರುವ ಗೋಪಾಲಪುರವನ್ನು ಸೇರಿ ಮುಂದೆಮಾಡಬೇಕಾದ ಕಾರ್ಯವನ್ನು ಆಲೋಚಿಸಿದರು. ಸೈನ್ಯವು ಅತ್ಯಲ್ಪವಾಗಿದ್ದುದರಿಂದ ಮುಂದೆಯುದ್ಧಮಾಡುವ ಬಗೆಯು ತೋರಲಿಲ್ಲ. ಸ್ವಲ್ಪಹೊತ್ತು ಯೋಚಿಸಿ ರಾಣೀ ಲಕ್ಷ್ಮೀಬಾಯಿಯು ಆ ಯಲ್ಪಸೈನ್ಯದೊಡನೆ ಗ್ವಾಲೇರಿಗೆ ಹೋಗಿ, ಸಿಂಧೆಯನ್ನು ತಮಗೆ ಸಹಾಯಕ ರಾಗುವಂತೆ ಕೇಳಿಕೊಳ್ಳಬೇಕೆಂತಲೂ, ಆತನು ಸಮ್ಮತಿಸಿದರೆ ಮುಂದೆ ಯುದ್ಧ ವನ್ನು ನಡೆಸುವುದು ಯುಕ್ತವೆಂತಲೂ ತಿಳಿಸಿದಳು. ಆಕೆಯು ಹೇಳಿದಂತೆಯೆ ಅವರೆಲ್ಲರು ದಿನಪ್ರಯಾಣಗಳನ್ನುಮಾಡಿ ೧೮೫೮ ನೆಯ ಇಸವಿ ಮೇ ೩೦ ನೆಯ ತಾರೀಖಿಗೆ ಗ್ವಾಲೇರಿನ ಸಮೀಪದಲ್ಲಿರುವ ಮುರಾರಿಪುರ ಪ್ರಾಂತ್ಯವನ್ನು ಸೇರಿ ತಮಗೆ ಸಹಾಯಕರಾಗಲು ಸಿಂಧೆಗೆ ವರ್ತಮಾನವನ್ನು ಕಳುಹಿಸಿದರು. ತತ್ಪೂರ್ವವೇ ತಾತಾಟೋಪೆಯಿಂದ ಬೋಧಿಸಲ್ಪಟ್ಟಿದ್ದ ಸರದಾರರೆಲ್ಲರು ಪೇಷ್ವೆಗೆ ಸಹಾಯಮಾಡುವೆವು ಎಂದರು. ಆದರೆ ಪ್ರಭುಭಕ್ತಿಯುಳ್ಳ ಜಯಾಜೀರಾವ್ ಸಿಂಧೆಯೂ, ದಿವಾನ್‌ದಿನಕರರಾಯನೂ ಅವರ ವಾಕ್ಯಗಳನ್ನಾಲಿಸದೆ, ಮೂರ ನೆಯ ದಿವಸ ಯುಕ್ತಿಯಿಂದ ಪೇಷ್ವೆಯ ಸೈನ್ಯವನ್ನು ಓಡಿಸಬೇಕು ಎಂದು ನಿಶ್ಚಯಿಸಿದರು. ಆ ರಾತ್ರಿಯಲ್ಲಿಯೇ ಯಾರೂ ದಿವಾನರು ಇಲ್ಲದ ಸಮಯದಲ್ಲಿ ಮಹಾರಾಜರನ್ನು ಯುದ್ಧಕ್ಕೆ ಪ್ರೋತ್ಸಾಹಗೊಳಿಸಲು, ಆತನು ತಮಗೆ ವಿಶ್ವಾಸ ಪಾತ್ರರಾದ ಸೇವಕರೊಡನೆ ಹೊರಟು ಸೂರ್ಯೋದಯಕಾಲಕ್ಕೆ ಮುರಾರಿಪುರಕ್ಕೆ ಎರಡು ಮೈಲಿಗಳ ದೂರದಲ್ಲಿರುವ ಬಹದುರಪುರದಲ್ಲಿ ಶಿಬಿರವನ್ನು ಸ್ಥಾಪಿಸಿ ಯುದ್ಧಕ್ಕೆ ಆರಂಭಮಾಡಿದನು. ಪ್ರಥಮದಲ್ಲಿ ಪೇಷ್ವೆಯ ಸೈನ್ಯದಮೇಲೆ ಗುಂಡು ಗಳು ಬೀಳುವುದನ್ನು ನೋಡಿ, ಪೂರ್ವದಲ್ಲಿ ಸಿಂಧೆಯು ಪೇಷ್ವೆಯ ಸಾಮಂತ ನಾಗಿದ್ದಕಾರಣ ತಮಗೆ ಅನುಕೂಲವಾಗಿ ತಮ್ಮನ್ನು ಇದಿರುಗೊಳ್ಳಲು ಬರುತ್ತಿರು ವನು ಎಂದು ಪೇಷ್ವೆಯು ಎಣಿಸಿದನು. ಆದರೆ ಆ ಬಾಣವೃಷ್ಟಿಯು ಕ್ರಮೇಣ ಹೆಚ್ಚುತಲಿರುವುದನ್ನು ನೋಡಿ ಆತನು ಭ್ರಾಂತನಾದನು. ರಾಣಿಯು ಕೂಡಲೆ ಸೈನ್ಯಗಳನ್ನು ಸಿದ್ಧಪಡಿಸಿ ಯುದ್ಧವನ್ನು ಆರಂಭಿಸಿದಳು. ಸ್ವಲ್ಪಹೊತ್ತು ಎರಡು

ಸೈನ್ಯಗಳೂ ಸಮಾನವಾಗಿ ಯುದ್ಧಮಾಡಿದ ಅನಂತರ ರಾಣಿಯ ಸೇನೆಗಳು ಸ್ವಲ್ಪಹಿಮ್ಮೆಟ್ಟುವಂತೆ ತೋರಲು, ರಾಣಿಯು ವೀರಾವೇಶದೊಡನೆ ಕೆಲವು ಆಶ್ವಿಕರೊಡನೆ ಹೊರಟು ಫಿರಂಗಿಗಳಮೇಲೆಬಿದ್ದು ಘೋರವಾಗಿ ಯುದ್ಧಮಾಡಲು ಆಕೆಯ ಪರಾಕ್ರಮಕ್ಕೆ ನಿಲ್ಲಲಾರದೆ ಸಿಂಧೆಯ ಸೈನಿಕರು ಓಡಲಾರಂಭಿಸಿದರು. ಅದನ್ನು ಕಂಡು ತಾತಾಟೋಪೆಯೇ ಮೊದಲಾದ ಸರದಾರರೂ, ಸೈನಿಕರೂ ಉತ್ಸಾಹ ಪೂರಿತರಾಗಿ ಶತ್ರುಗಳನ್ನು ಓಡಿಸಿದರು. ಅದರಿಂದ ಸಿಂಧೆಯು ತನ್ನ ಪರಾಕ್ರಮವೆಲ್ಲ ವ್ಯರ್ಥವಾದುದನ್ನು ಕಂಡು ದಿವಾನನನ್ನೂ ಇನ್ನು ಕೆಲ ಸರದಾರರನ್ನೂ ಕರೆದುಕೊಂಡು, ಅಗ್ರಾ ಖಿಲ್ಲೆಯೊಳಗಿರುವ ಆಂಗ್ಲೇಯರ ಸಹಾಯವನ್ನು ಕೇಳುವ ಸಲುವಾಗಿ ಅಲ್ಲಿಗೆ ಹೊರಟನು.

ವಿಪುಲ ಸೈನ್ಯಸಮೇತನಾದ ಒಬ್ಬ ತರುಣನೃಪನನ್ನು, ಅಲ್ಪ ಸೈನ್ಯ ಸಹಿತಳಾದ ಒಬ್ಬ ಅಬಲೆಯು ತನ್ನ ಶೌರ್ಯದಿಂದ ಸೋಲಿಸಿದಳು. ಇದರಿಂದಲೇ ಒಬ್ಬ ಕವಿಯು ಈ ವಿಧವಾಗಿ ಬರೆದಿರುವನು:—

'ಕ್ರಯಾಸಿದ್ಧಿಃ ಸತ್ವೇಭವತಿ ಮಹತಾಂನೋಪಕರಣೇ.'

ಅರ್ಥ.—ಮಹಾತ್ಮರಕಾರ್ಯವು ಅವರ ಪರಾಕ್ರಮದಿಂದಲೇ ಸಿದ್ಧಿಸುವುದಲ್ಲದೆ ಕೇವಲ ಸಾಮಗ್ರಿಯಿಂದಲ್ಲ.

ಸಿಂಧೆಯು ಪುರವನ್ನುಬಿಟ್ಟು ಹೊರಟು ಹೋದಮೇಲೆ ಆತನ ಅಂತಃಪುರ ಸ್ತ್ರೀಯರು ನರವರವೆಂಬ ಪುರಕ್ಕೆ ಹೋದರು. ಇವರೆಲ್ಲರು ಸ್ವಲ್ಪದೂರ ಹೋದಮೇಲೆ ಸಿಂಧೆಯು ಶತ್ರುವಶವಾದನು ಎಂದು ಯಾರೋ ಹೇಳಲು, ಅವರಲ್ಲಿ ಒಬ್ಬಳಾದ ಗಜರಾ ಎಂಬ ಸ್ತ್ರೀಯು ಖಡ್ಗವನ್ನುಧರಿಸಿ ಹಿಂತಿರುಗಿಬಂದು ರಾಜಭವನವನ್ನು ಪ್ರವೇಶಿಸಿ, ಸಿಂಧೆಯು ಸುರಕ್ಷಿತವಾಗಿಹೋದನು ಎಂಬ ವರ್ತಮಾನವನ್ನು ಕೇಳಿ ಪುನಃ ಹೊರಟಳು. ಈಕೆಯ ಸಾಹಸವು ಸ್ತುತ್ಯವಾದುದಲ್ಲವೆ?

ಸಿಂಧೆಯು ಹೊರಟು ಹೋದಮೇಲೆ ಸಕಲ ಸೈನ್ಯವು ತಮ್ಮ ವಶವಾಗಲು, ಪೇಷ್ವೆಯು ಅರಮನೆಯನ್ನು ಪ್ರವೇಶಿಸಿ, ಇಷ್ಟುಮಾತ್ರದಿಂದಲೇ ತಾವು ಸಾರ್ವಭೌಮರಾದೆವು ಎಂದೆಣಿಸಿ, ಪಟ್ಟಾಭಿಷೇಕವನ್ನು ಮಾಡಿಕೊಂಡು, ಬ್ರಾಹ್ಮಣ ಸಂತರ್ಪಣಾದಿ ಮಹೋತ್ಸವಗಳಲ್ಲಿ ಮುಳುಗಿದ್ದನು. ಲಕ್ಷ್ಮೀಬಾಯಿಯು ಇವೆಲ್ಲವು ರಾಜ್ಯನಾಶಕಹೇತುಗಳೆಂದೂ, ಈ ಆಡಂಬರಗಳನ್ನು ನಿಲ್ಲಿಸಿ ಸೈನ್ಯವನ್ನು ಯುದ್ಧಕ್ಕೆ ಅಣಿಮಾಡಿಟ್ಟುಕೊಳ್ಳಬೇಕೆಂದೂ ಹೇಳಿದಳು. ಆದರೆ ಅವು ಸ್ತ್ರೀವಾಕ್ಯಗಳಾದಕಾರಣ ಗಣನೆಗೆ ತರತಕ್ಕ ಅವಶ್ಯಕವಿಲ್ಲವೆಂದು ಪೇಷ್ವೆಯೂ, ತಾತಾಟೋಪೆಯೂ ತಮ್ಮ ಮಹೋತ್ಸವಗಳಲ್ಲಿಯೇ ಮುಳುಗಿದ್ದರು.

ಜೂ ೧೬ ನೆಯ ತಾರೀಖಿಗೆ ಸರ್ ಹ್ಯೂರಾಜ್‌ರೋಸೆಯು ಬಹದ್ದುರ ಪುರವನ್ನು ಪ್ರವೇಶಿಸಿದನು. ಭೋಗಪರಾಯಣನಾದ ಪೇಷ್ವೆಗೆ ಈ ವಿಷಯವು ತಿಳಿಯಲೇಇಲ್ಲ. ಆಂಗ್ಲಸೇನಾನಾಯಕರು ಮುರಾರಿಕೋಟೆಯನ್ನು ಸ್ವಾಧೀನ ಮಾಡಿಕೊಂಡರು ಎಂದು ಕೇಳಿದಮೇಲೆಯೂ ಪೇಷ್ವೆಯು ನಿಶ್ಚಿಂತನಾಗಿ ಪುಣ್ಯ ಕಾರ್ಯದಲ್ಲಿ ನಿರತನಾಗಿ ಇದ್ದನು. ಅನಂತರ ತಾತಾಟೋಪೆಯು ಆತನ ಅನುಜ್ಞೆಯನ್ನು ಪಡೆದು ಸೈನ್ಯವ್ಯವಸ್ಥೆಯಾಗುವಬಗೆ ಹರಿಯದೆ, ಲಕ್ಷ್ಮೀಬಾಯಿಯನ್ನು ಕೇಳಿಕೊಂಡನು. ಆಕೆಯು ತಮಗೆ ಅಪಜಯವು ಉಂಟಾಗುವುದು ನಿಜವೆಂದು ತಿಳಿದಿದ್ದರೂ, ವೀರಸ್ವರ್ಗವನ್ನು ಹೊಂದಲಪೇಕ್ಷಿಸಿ, ಸ್ವಲ್ಪಸೇನೆಯನ್ನು ತನ್ನವಶದಲ್ಲಿ ಇಟ್ಟುಕೊಂಡು ಮಿಕ್ಕಸೇನೆಯನ್ನು ಇತರ ಸೇನಾನಾಯಕರ ವಶಪಡಿಸಿದಳು. ಆಕೆಯು ತನ್ನ ಸೇನೆಯನ್ನು ಅನೇಕ ಭಾಗಗಳಾಗಿವಿಂಗಡಿಸಿ ಭದ್ರಪಡಿಸಿ ಯುದ್ಧಸನ್ನದ್ಧಳಾಗಿ ಗ್ವಾಲೇರಿನ ಪೂರ್ವಭಾಗವನ್ನು ರಕ್ಷಿಸುವೆನು ಎಂದು ಹೇಳಿ ತನ್ನ ಸೇನೆಯನ್ನು ಅಲ್ಲಿ ನಿಲ್ಲಿಸಿಕೊಂಡಳು. ಇತರ ಸೇನಾನಾಯಕರು ಸಹ ತಂತಮ್ಮ ಶಕ್ತ್ಯನುಸಾರವಾಗಿ ವ್ಯೂಹಗಳನ್ನು ನಿರ್ಮಿಸಿಕೊಂಡು ಯದ್ಧಸನ್ನದ್ಧರಾದರು.

೧೭ ನೆ ತಾರೀಖಿನಲ್ಲಿ ಬ್ರಿಗೋಡಿಯರ್ ಸ್ಮಿತ್ ಎಂಬ ಸೇನಾನಾಯಕನು ಗ್ವಾಲೇರಿನ ಪೂರ್ವದಿಕ್ಕಿನಲ್ಲಿ ಇದ್ದ ಸೈನ್ಯದಮೇಲೆ ಬಾಣವೃಷ್ಟಿಯನ್ನು ಸುರಿಸಲಾರಂಭಿಸಿದನು. ಅದು ರಾಣಿಯ ಸೇನೆಯಾದುದರಿಂದ ಆ ದಿವಸ ಅವರು ಇಂಗ್ಲೀಷರೊಡನೆ ಧೈರ್ಯವಾಗಿ ಯುದ್ಧಮಾಡಿದರು. ಎರಡನೆಯ ದಿವಸ ಲಕ್ಷ್ಮೀಬಾಯಿಯು ವೀರೋತ್ಸಾಹವಚನಗಳಿಂದ ಅನೇಕ ವೀರರು ಶತ್ರುಗಳನ್ನು ಕೊಂದು ತಾವು ವೀರಸ್ವರ್ಗಕ್ಕೆ ಹೋಗುತ್ತಿದ್ದರು. ಆಕೆಯ ಶೌರ್ಯವನ್ನು ನೋಡಿ ಆಂಗ್ಲೇಯ ಸೇನಾನಾಯಕರು ಆಶ್ಚರ್ಯಯುತರಾಗಿ ಆಕೆಯನ್ನು ಸೋಲಿಸಲು ನಿಶ್ಚಯಿಸಿದರು. ಅವರೆಲ್ಲರು ಆಕೆಯನ್ನು ಸುತ್ತಿಕೊಂಡು ಬಾಣವೃಷ್ಟಿಯನ್ನು ಸುರಿಸಲಾರಂಭಿಸಿದರು. ಇದರಿಂದ ರಾಣಿಯ ಸೇವಕರು ದಿಕ್ಕುಗೆಟ್ಟು ಓಡಲಾರಂಭಿಸಿದರು. ಆಕೆಯ ಮುಖ್ಯಸೇವಕರು ವಿನಹ ಮಿಕ್ಕವರೆಲ್ಲರು ಓಡಿಹೋದುದರಿಂದಲೂ, ತತ್ಪೂರ್ವವೇ ಮಿಕ್ಕ ಸೇನಾನಾಯಕರು ಪರಾಜಿತರಾದುದರಿಂದಲೂ ರಾಣಿಯು ತನ್ನ ಖಡ್ಗದಿಂದ ಅನೇಕರನ್ನು ಹತಮಾಡುತ್ತ ಮುಂದಕ್ಕೆ ಹೋಗುತ್ತಿದ್ದಳು. ಆಕೆಯು ಬಹು ದೂರ ಹೋದಮೇಲೆ, ಆಕೆಯೊಡನೆ ಪುರುಷವೇಷವನ್ನು ಧರಿಸಿ ಬರುತ್ತಿದ್ದ 'ಮುಂದರೆ' ಎಂಬ ದಾಸಿಯ ಅಂತಿಮ ಶಬ್ದವು ಆಕೆಯ ಕಿವಿಗೆ ಬಿತ್ತು. ಅದರಿಂದ ಆಕೆಯು ಹಿಂದಿರುಗಿ ನೋಡಿ ತನ್ನ ಪ್ರಿಯದಾಸಿಯನ್ನು ಕೊಂದ ಮನುಷ್ಯನನ್ನು ಕೃತಾಂತಗೃಹಕ್ಕೆ ಕಳುಹಿಸಿ ಅತಿತ್ವರೆಯಿಂದ ಹೋಗುತ್ತಿದ್ದಳು. ಮಾರ್ಗಮಧ್ಯದಲ್ಲಿ ಒಂದು ಜಲಪ್ರವಾಹವು ಅಡ್ಡವಾಗಿ ಹರಿಯುತ್ತಿತ್ತು.

ಅನೇಕ ಗಾಯಗಳಿಂದ ಬಾಧೆಪಡುತ್ತಿದ್ದ ಆ ಕುದುರೆಯು ಆ ಜಲಪ್ರವಾಹವನ್ನು ನೋಡಿ ಅದನ್ನು ದಾಟಲಾರದೆ ನಿಂತಿತು. ರಾಣಿಯು ಕುದುರೆಯನ್ನು ಆಚೆಪಡಕ್ಕೆ ತೆಗೆದುಕೊಂಡು ಹೋಗಲು ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಇಷ್ಟರಲ್ಲಿ ಶತ್ರುಗಳು ಆಕೆಯನ್ನು ಸಮೀಪಿಸಲು, ಆ ಯುವತಿಯು ರೋಷಪೂರಿತಳಾಗಿ ಅವರಲ್ಲಿ ಅನೇಕರನ್ನು ಯಮಪುರಿಗೆ ಕಳುಹಿಸಿದಳು. ಆದರೆ ಅವರು ಬಹುಜನರೂ ಈಕೆಯು ಒಬ್ಬಳೂ ಆದಕಾರಣ ಅವರಲ್ಲಿ ಒಬ್ಬನು ಆಕೆಯ ಹಿಂಭಾಗದಿಂದ ಬಂದು ಆಕೆಯ ತಲೆಯ ಬಲಭಾಗವನ್ನು ಕತ್ತರಿಸಿದನು. ತಲೆಯಿಂದ ರಕ್ತವು ಪ್ರವಾಹದಂತೆ ಸುರಿಯಲಾರಂಭಿಸಿತು. ಆ ಸೈನಿಕನು ಪುನಃ ಆಕೆಯ ಹೃದಯವನ್ನು ಇರಿದನು. ಆಗ ರಾಣಿಯು ಆಸನ್ನಸ್ಥಿತಿಯನ್ನು ಹೊಂದಿದಳು. ಆದರೂ ಆ ವೀರಯುವತಿಯು ಆ ಸ್ಥಿತಿಯಲ್ಲಿಯೂ ಧೈರ್ಯವನ್ನು ಬಿಡದೆ ತನಗೆ ಆ ಸ್ಥಿತಿಯನ್ನುಂಟುಮಾಡಿದ ಸೈನಿಕನನ್ನು ಪರಲೋಕಕ್ಕೆ ಕಳುಹಿದಳು! ಈಕೆಯು ಪುರುಷವೇಷದಲ್ಲಿ ಇದ್ದುದರಿಂದ ಆ ಸೈನಿಕರು ಈಕೆಯನ್ನು ಶತ್ರುಸೈನ್ಯಾಧಿಪರಲ್ಲಿ ಒಬ್ಬನು ಎಂದು ಭಾವಿಸಿಇದ್ದರು. ಲಕ್ಷ್ಮೀಬಾಯಿಯು ಅವನನ್ನುಕೊಂದು ಪೂರ್ತಿಯಾಗಿ ಬಲಹೀನಳಾದಳು. ಅಷ್ಟರವರೆಗೂ ಆಕೆಯನ್ನು ಹಿಂಬಾಲಿಸಿಬರುತ್ತಿದ್ದ ದೇಶಮುಖ್ ರಾಮಚಂದ್ರರಾಯನು ಅರ್ಧಮುಖಮಾತ್ರಳಾದ ರಾಣಿಯನ್ನು ಸಮೀಪದಲ್ಲಿದ್ದ ಪರ್ಣಕುಟೀರಕ್ಕೆ ಕರೆದುಕೊಂಡುಹೋಗಿ ಆಕೆಗೆ ಅನೇಕ ಉಪಚಾರಗಳನ್ನು ಮಾಡಿದನು. ಆದರೆ ೧೮೫೮ ನೆ ಇಸವಿ ಜೂನ್ ೧೮ ನೆಯ ತಾರೀಖಿನಲ್ಲಿ ಅದ್ವಿತೀಯ ಶೌರ್ಯಗುಣಮಂಡಿತಳಾದ ರಾಣಿ ಲಕ್ಷ್ಮೀಬಾಯಿಯು ಈ ಲೋಕವನ್ನುಬಿಟ್ಟು ಶಾಶ್ವತಸುಖಪ್ರದವಾದ ಲೋಕಕ್ಕೆ ಹೊರಟುಹೋದಳು. ದೇಶಮುಖ್ ರಾಮಚಂದ್ರರಾಯನು ರಾಣಿಯ ಆಜ್ಞೆಯಂತೆ ಆಕೆಯ ಶರೀರವು ಶತ್ರುವಶವಾಗದಂತೆ ಗುಪ್ತನಾಗಿ ಅಗ್ನಿಸಂಸ್ಕಾರವನ್ನು ಮಾಡಿದನು.

ಅನಂತರ ಆಂಗ್ಲೇಯಸೇನಾಧಿಪರು ಜಯಶೀಲರಾಗಿ ಸಿಂಧೆಗೆ ರಾಜ್ಯಪದವಿಯನ್ನು ಪುನಃ ಕೊಟ್ಟರು. ಆಮೇಲೆ ಆ ಸೇನಾನಾಯಕರು ಕ್ರಮವಾಗಿ ದರೋಡೆಸೈನ್ಯಗಳನ್ನು ಗೆದ್ದು, ತಾತಾಟೋಪೆ ಮೊದಲಾದ ಸೈನ್ಯಾಧಿಪರನ್ನು ಗಲ್ಲಿಗೆ ಹಾಕಿದರು. ಬಂದೆವಾಲಾ ನವಾಬನು ಶರಣಾಗತನಾದುದರಿಂದ ಕ್ಷಮೆಗೆ ಪಾತ್ರನಾದನು.

ಆಂಗ್ಲೇಯ ಪ್ರಭುಗಳು ಜಯಶೀಲರಾದುದರಿಂದಲೆ ಸುಖಪ್ರದವಾದ ಈ ಆಂಗ್ಲೇಯ ರಾಜ್ಯಪಾಲನೆಯಲ್ಲಿ ನಾವು ಸ್ತ್ರೀವಿದ್ಯಾಲಾಭಾದಿಗಳಿಂದ ಅತ್ಯಂತ ಸುಖಿಗಳಾಗಿ ಬಾಳುತ್ತಿದ್ದೇವೆ.

ರಾಣಿಯದತ್ತಪುತ್ರನು ತಾಯಿಯ ಅನಂತರ ಅನೇಕ ಕಷ್ಟಗಳನ್ನು ಅನುಭವಿಸಿ, ಪ್ರಸ್ತುತಕಾಲದಲ್ಲಿ ಸಾಮಾನ್ಯಮಾನವನಂತೆ ಇಂದೋರಿನಲ್ಲಿ ಕಾಲವನ್ನು ಕಳೆಯುತ್ತಿದಾನೆ!

ಲಕ್ಷ್ಮೀಬಾಯಿಯು ಆಂಗ್ಲೇಯರೊಡನೆ ಯುದ್ಧಮಾಡಿದರೂ ಗುಣಗ್ರಾಹಿಗಳಾದ ಆಂಗ್ಲೇಯಸೇನಾನಾಯಕರು ಆಕೆಯನ್ನು ಹೊಗಳಿದ್ದಾರೆ. ಅವುಗಳಲ್ಲಿ ಕೆಲವನ್ನು ಕೆಳಗೆ ಬರದಿದೇನೆ:—

(೧) ರಾಣಿಗೆ ಪ್ರತಿಪಕ್ಷಿಯಾಗಿ ನಿಂತು ಆಕೆಯನ್ನು ಸೋಲಿಸಿದ ಸರ್ ಹ್ಯೂರಾಜ್ ಸೇನಾಧಿಪನು 'ಗುಣೇಗುಣಂವೇತ್ತಿ' ಎಂಬ ನ್ಯಾಯಾನುಸಾರವಾಗಿ ಆಕೆಯನ್ನು ಕುರಿತು ಹೀಗೆ ಬರೆದಿದಾನೆ: "ರಾಣಿಲಕ್ಷ್ಮೀಬಾಯಿಯು ಅತ್ಯಂತ ಪವಿತ್ರವಾದ ಸೌಶೀಲ್ಯವುಳ್ಳವಳಾದುದರಿಂದಲೂ ಆಕೆಗೆ ಆಶ್ರಿತಜನರಲ್ಲಿಯೂ, ಸೈನಿಕರಲ್ಲಿಯೂ ಇದ್ದ ಔದಾರ್ಯದಿಂದಲೂ, ಆಕೆಯು ದೊಡ್ಡದೊಡ್ಡ ಸಂಕಟ ಸಮಯಗಳಲ್ಲಿ ಸಹ ನಿಶ್ಚಲವಾದ ಧೈರ್ಯವುಳ್ಳವಳಾಗಿ ಇದ್ದುದರಿಂದಲೂ ಸೈನಿಕರಿಗೆ ಆಕೆಯಲ್ಲಿ ಪೂಜ್ಯಭಾವವು ಹೆಚ್ಚಾಗಿದ್ದ ಪ್ರಯುಕ್ತ, ಆಕೆಯ ಪಕ್ಷವು ನಮಗೆ ಭಯಂಕರವಾಗಿದ್ದಿತು."

"ಗ್ವಾಲೇರಿನಲ್ಲಿ ನಡೆದಯುದ್ಧದ ಉತ್ತಮಪರಿಣಾಮವು ಝಾನ್ಸೀ ರಾಣಿಯ ಮರಣವು. ಆಕೆಯು ಅಬಲೆಯಾದರೂ, ನಮ್ಮೊಡನೆ ಪ್ರತಿಘಟಿಸಿದವರಲ್ಲಿ ಆಕೆಯು ಅತಿಶೂರಳೂ, ಅತ್ಯುತ್ತಮಸೇನಾಗ್ರಣಿಯೂ ಆಗಿದ್ದಳು."

(೨) "ಆ ಯುದ್ಧದಲ್ಲಿ ಅತ್ಯಂತ ದೃಢನಿಶ್ಚಯಳೂ, ತೇಜಸ್ವಿನಿಯೂ, ಜನಾನುರಾಗವುಳ್ಳವಳೂ, ಉತ್ತಮ ಸೇನಾಧ್ಯಕ್ಷಳೂಆದ ರಾಣಿ ಲಕ್ಷ್ಮೀಬಾಯಿಯು ಕೊಲ್ಲಲ್ಪಟ್ಟಳು."—ಡಾಕ್ಟರು ಲೋ.

(೩) "ಲಕ್ಷ್ಮೀಬಾಯಿಯು ಯೌವನ ಮಧ್ಯದಲ್ಲಿದ್ದುದರಿಂದ ಅತ್ಯಂತ ಸುಂದರಳಾಗಿದ್ದಳು. ಆಕೆಯು ಪ್ರಾಣವನ್ನು ತ್ಯಜಿಸಲು ಚಿಂತಿಸುತ್ತಿರಲಿಲ್ಲ. ಆದರೆ ಮಾನಹಾನಿಯು ಉಂಟಾಗಬಾರದೆಂಬ ಅಭಿಪ್ರಾಯವುಳ್ಳವಳಾಗಿದ್ದಳು. ಆಕೆಯ ಮನಸ್ಸು ಉತ್ಸಾಹಪೂರ್ಣವಾದುದಾಗಿಯೂ, ಆಕೆಯ ಶರೀರವು ಸಶಕ್ತವಾದುದಾಗಿಯೂ ಇತ್ತು."—ಮಾರ್ಟಿನ್‌ಡೊರೆ.

(೪) "ಯಾವ ಸ್ತ್ರೀಯನ್ನು ರಾಜ್ಯತಂತ್ರಗಳನ್ನು ನಡೆಸಲು ಅಸಮರ್ಥಳು ಎಂದು ಭಾವಿಸಿ ರಾಜ್ಯಭ್ರಷ್ಟಳಾಗಿ ಮಾಡಿದೆವೋ, ಆ ಮಹಿಳೆಯೇ ಪ್ರಚಂಡ ಸೈನ್ಯದ ಆಧಿಪತ್ಯವನ್ನು ವಹಿಸಲು ಸಂಪೂರ್ಣ ಸಾಮರ್ಥ್ಯವುಳ್ಳವಳು ಎಂದು ಈಗ ತಿಳಿಯಬಂದಿತು."—ಎಡ್ವಿನು ಆರ್ನೋಲ್ಡ್‌ದೊರೆ.

(೫) "ಶತ್ರುಗಳಲ್ಲಿ ಅತ್ಯುತ್ತಮ ಮನೀಷಿಯು ಝಾನ್ಸೀ ಮಹಾರಾಣಿ ಲಕ್ಷ್ಮೀಬಾಯಿಯು ಒಬ್ಬಳೇ."—ಜಸ್ಟಿಸ್ ಮ್ಯಾಕರ್ತಿದೊರೆ.

ವಿಮಲದೇವಿ.

ಈಕೆಯು ಮಾರ್ವಾಡಿಗೆ ಸೇರಿದ ರೂಪನಗರದ ರಾಜನಾದ ಅಮರಸಿಂಹನ ಪುತ್ರಿ. ಆಕಾಲದಲ್ಲಿ ಡಿಲ್ಲಿಯಲ್ಲಿ ಔರಂಗಜೇಬನು ಬಾದಷಹನಾಗಿದ್ದನು. ರಾಜ ಪುತ್ರರಾಜರಲ್ಲಿ ಕೆಲವರು ಔರಂಗಜೇಬನಿಗೆ ಹೆದರಿ ತಮ್ಮ ಹೆಣ್ಣುಮಕ್ಕಳನ್ನು ಆತನಿಗೆ ಕೊಟ್ಟು, ಆತನ ಅನುಗ್ರಹವನ್ನು ಪಡೆಯುತ್ತಿದ್ದರು. ವಿಮಲದೇವಿಯ ತಂದೆಯು ಸಹ ತನ್ನ ದೊಡ್ಡಮಗಳನ್ನು ಔರಂಗಜೇಬನಿಗೆ ಕೊಟ್ಟು ವಿವಾಹವನ್ನು ಮಾಡಿದ್ದನು. ರಾಜಪುತ್ರಕನ್ಯೆಯರನ್ನು ಯವನರಿಗೆ ಕೊಟ್ಟು ಮದುವೆಯನ್ನು ಮಾಡುವುದು ಅಸಹ್ಯಕರವಾದ ಪದ್ಧತಿಯು ಎಂದು ವಿಮಲದೇವಿಯು ಭಾವಿಸಿದ್ದಳು. ಮಾತಾಪಿತೃಗಳು ತನ್ನನ್ನು ಸತ್ಕುಲೀನನಾದ ರಾಜಕುಮಾರನಿಗೆ ಕೊಟ್ಟು ವಿವಾಹಮಾಡದಿದ್ದರೆ ತನ್ನ ಜೀವಿತವನ್ನು ಕನ್ಯಾತ್ವದಲ್ಲಿ ಕಳೆಯುವೆನೇಹೊರತು, ಪ್ರಾಣಹೋದರೂ ಯವನನ ಕೈ ಹಿಡಿಯಲಾರನೆಂದು ಪ್ರತಿಜ್ಞೆಯನ್ನು ಮಾಡಿದಳು.

ಒಂದುಸಲ ಔರಂಗಜೇಬನ ರಾಣಿಯಾದ ಕೇಸರಿಬಾಯಿ ಎಂಬ ವಿಮಲೆಯ ಅಗ್ರಸೋದರಿಯು ತೌರುಮನೆಗೆ ಬಂದಳು. ವಿಮಲದೇವಿಯ ತಾಯಿಯಾದ ಕೌಮಾರದೇವಿಯೇ ಮೊದಲಾದವರು, ಕೇಸರಿಬಾಯಿಯು ಪೃಥಿವೀಶ್ವರನ ಪತ್ನಿಯಾದುದರಿಂದ ಆಕೆಗೆ ಬಹು ಮರ್ಯಾದೆಯನ್ನು ಮಾಡಿದರು. ವಿಮಲದೇವಿಯು ಮಾತ್ರ ಅಕ್ಕನ ಮುಖವನ್ನು ನೋಡಲಾರದೆ ಏಕಾಂತದಲ್ಲಿ ಮುಕ್ಕಣ್ಣನನ್ನು ಪೂಜಿಸುತ್ತಿದ್ದಳು. ಆಗ ಕೇಸರಿಬಾಯಿಯು ತಂಗಿಯನ್ನು ನೋಡುವುದಕ್ಕೆ ಅಲ್ಲಿಗೆ ಬಂದು, ಆಕೆಯು ಪೂಜಿಸುತ್ತಿದ್ದ ಈಶ್ವರನನ್ನು ನಿಂದಿಸಿದಳು. ಇದರಿಂದ ವಿಮಲದೇವಿಯು ಆಗ್ರಹವಶಳಾಗಿ ಸಹೋದರಿಯೊಡನೆ, "ನಿಷ್ಕಳಂಕವಾದ ಕ್ಷತ್ರಿಯಕುಲದಲ್ಲಿಹುಟ್ಟಿ ನೀಚವಂಶಜನನ್ನು ಕೈಹಿಡಿದ ನಿನ್ನನ್ನು ನೋಡಿದರೆ ದೋಷವು ಉಂಟಾಗುವುದು. ನಾನು ನನ್ನಪ್ರಾಣಹೋದರೂ ಯವನನನ್ನು ವಿವಾಹಮಾಡಿಕೊಳ್ಳಲಾರೆನು. ಶೌರ್ಯಧುರಂಧರನಾದ ರಾಜಪುತ್ರನ ಪಾಣಿ

ಗ್ರಹಣವನ್ನು ಮಾಡುವೆನು. " ಎಂದು ನುಡಿದಳು. ಅದಕ್ಕೆ ಕೇಸರಿಬಾಯಿಯು, " ನಾನು ನಿನ್ನನ್ನು ಯವನನಿಗೆ ಕೊಡಿಸದಿದ್ದರೆ ಔರಂಗಜೇಬನ ರಾಣಿಯೇ ಅಲ್ಲ, " ಎಂದು ನುಡಿದು ಡಿಲ್ಲಿಗೆ ಹೋದಮೇಲೆ ಈ ವಿಷಯವನ್ನು ಬಾದಷಹನೊಡನೆ ತಿಳಿಸಿದಳು. ಅದರಮೇಲೆ ಔರಂಗಜೇಬನು ' ವಿಮಲೆಯನ್ನು ನನಗೆಕೊಟ್ಟು ವಿವಾಹಮಾಡಬೇಕು. ' ಎಂದು ಅಮರಸಿಂಹನಿಗೆ ಪತ್ರವನ್ನು ಬರೆದನು.

ತಾನು ಮಾಡಿದ ಪ್ರತಿಜ್ಞೆಯನ್ನು ವಿಮಲದೇವಿಯು ತನ್ನ ತಾಯಿತಂದೆಗಳಿಗೆ ಹೇಳಲು ಅವರು ಪುತ್ರಿಯವಾಕ್ಯಗಳಿಗೆ ಬಹು ಸಂತೋಷಿಸಿ ಆಕೆಯನ್ನು ಕೊಂಡಾಡಿದರು. ಆದರೆ ಔರಂಗಜೇಬನ ಪತ್ರವನ್ನು ನೋಡಿದ ಮೇಲೆ, ಮಗಳನ್ನು ಆತನಿಗೆ ಕೊಡುವುದಕ್ಕೆ ನಿಶ್ಚಯಿಸಿದರು. ವಿಮಲದೇವಿಯು ಜನನೀ ಜನಕರ ಅಭೀಷ್ಟವನ್ನು ತಿಳಿದು ಚಿಂತಿತಳಾಗಿ, ವೀರವರೇಣ್ಯನಾದ ಉದಯಪುರದ ರಾಣಾರಾಜಸಿಂಹನಿಗೆ ಒಂದು ಪತ್ರವನ್ನು ಬರೆದು, ಅದನ್ನು ತನ್ನ ಗುರುವಿನ ಕೈಯಲ್ಲಿ ಕೊಟ್ಟುಕಳುಹಿಸಿದಳು. ಆ ಪತ್ರದಲ್ಲಿ, " ರಾಜಹಂಸಿಯು ಕಾಗೆಯನ್ನು ಕೈಹಿಡಿಯ ಬಹುದೇ? ನಿರ್ದೋಷವಾದ ರಾಜಪುತ್ರಕುಲದಲ್ಲಿ ಹುಟ್ಟಿ ಕಪಿಮುಖನಾದ ಯವನನನ್ನು ವಿವಾಹಮಾಡಿಕೊಳ್ಳಬಹುದೇ? ಶೂರವರ! ಶ್ರೀಕೃಷ್ಣನು ರುಕ್ಮಿಣಿಯನ್ನು ಕರೆದುಕೊಂಡು ಹೋದಂತೆ ನೀನು ನನ್ನನ್ನು ಕರೆದುಕೊಂಡು ಹೋಗು. ಇಲ್ಲದಿದ್ದರೆ ನಾನು ಪ್ರಾಣಪರಿತ್ಯಾಗವನ್ನು ಮಾಡುವುದು ಸತ್ಯವು. " ಎಂದು ವಿಮಲದೇವಿಯು ಬರೆದಿದ್ದಳು. ರಾಜಸಿಂಹನು ಪತ್ರವನ್ನು ಓದಿಕೊಂಡು, ಭೂಸುರನಿಂದ ವಿಮಲದೇವಿಯ ಸುಗುಣಸೌಂದರ್ಯಗಳನ್ನು ಕೇಳಿ ಸಂತುಷ್ಟನಾಗಿ, ವಿಶೇಷಸೈನ್ಯವನ್ನು ತೆಗೆದುಕೊಂಡು ರೂಪನಗರಕ್ಕೆ ಹೊರಟನು. ಇಷ್ಟರೊಳಗೆ ವಿವಾಹಕಾಲವು ಸಮೀಪಿಸಿದುದರಿಂದ ಬಾದಷಹನು ಬಹು ಅಟ್ಟಹಾಸದೊಡನೆ ರೂಪನಗರದಮಾರ್ಗವನ್ನು ಹಿಡಿದನು. ಔರಂಗಜೇಬನ ಬರುವಿಕೆಯನ್ನು ಕೇಳಿ ವಿಮಲದೇವಿಯು ಪ್ರಾಣವನ್ನು ಬಿಡಲು ಸಿದ್ಧಳಾಗಿದ್ದಳು. ದೈವಕೃಪೆಯಿಂದ ರಾಜಸಿಂಹನು ಶೀಘ್ರದಲ್ಲಿಯೇ ಬಂದು ವಿಮಲದೇವಿಯನ್ನು ಕರೆದುಕೊಂಡು ತನ್ನರಾಜ್ಯಕ್ಕೆ ಹೊರಟನು. ಮಾರ್ಗಮಧ್ಯದಲ್ಲಿ ಇವರು ವಿಶ್ರಾಂತಿಗಾಗಿ ಕೆಲವು ಬೆಟ್ಟಗಳ ನಡುವೆ ನಿಂತರು. ಅಲ್ಲಿಗೆ ಸಮೀಪದಲ್ಲಿಯೇ ಔರಂಗಜೇಬನು ಸಹ ತನ್ನ ಪರಿವಾರದೊಡನೆ ಇಳಿದಿದ್ದನು. ಆ ಸಮಯದಲ್ಲಿ ವಿಮಲೆಯ ಸೋದರಿಯೂ, ಬಾದಷಹನ ಪತ್ನಿಯೂ ಆದ ಕೇಸರಿಬಾಯಿಯನ್ನು ಒಬ್ಬ ಬೇಡನು ಹೇಗೋ ಹಿಡಿದುಕೊಂಡು ಬಂದು ಒಂದು ಗುಹೆಯಲ್ಲಿ ಇಡಲು ಆಕೆಯು ' ನನ್ನನ್ನು ಯಾರಾದರೂ ಕಾಪಾಡಿರಿ.' ಎಂದು ಕೂಗಿಕೊಳ್ಳುತ್ತಿದ್ದಳು. ಆ ಧ್ವನಿಯನ್ನು ಕೇಳಿ ವಿಮಲೆಯು ಅಲ್ಲಿಗೆ ತನ್ನ ಪತಿಯನ್ನು ಕಳುಹಿದಳು. ರಾಜಸಿಂಹನು ಆಕೆಯನ್ನು ಬೇಡನಕೈಯಿಂದ ಬಿಡಿಸಿ ತನ್ನ ಬಿಡಾರಕ್ಕೆ ಕರೆದುಕೊಂಡು ಬಂದನು. ಕೇಸರಿಬಾಯಿಯು ಲಜ್ಜೆಯಿಂದ ತನ್ನ

ತಂಗಿಯ ಮುಖವನ್ನು ನೋಡಲಾರದೆ, ಆಕೆಯು ತನಗೆ ಮಾಡಿದ ಮಹೋಪ ಕಾರಕ್ಕೆ ಬಹಳ ಸಂತೋಷಿಸಿ, ತಾನು ಮಾಡಿದ ಅಪಕಾರವನ್ನು ಕ್ಷಮಿಸಬೇಕು ಎಂದು ತಂಗಿಯನ್ನು ಪ್ರಾರ್ಥಿಸಿದಳು. ಆಗ ವಿಮಲೆಯು ತನ್ನ ಅಕ್ಕನನ್ನು ಸಮಾಧಾನಗೊಳಿಸಿ ಕೆಲಸೇವಕರೊಡನೆ ಆಕೆಯನ್ನು ಔರಂಗಜೇಬನ ಬಳಿಗೆ ಕಳುಹಿಸಿದಳು. ಬಾದಷಹನು ನಡೆದ ಸಮಾಚಾರವನ್ನು ಕೇಳಿ, ರಾಜಸಿಂಹನ ಮೇಲೆ ಇರುವ ವಿರೋಧವನ್ನು ತ್ಯಜಿಸಿ ಡಿಲ್ಲಿಗೆ ಹೋದನು. ರಾಜಸಿಂಹನು ತನ್ನ ಸತಿಯೊಡನೆ ಉದಯಪುರಕ್ಕೆ ಹೋಗಿ ಸುಖವಾಗಿದ್ದನು.

ಸತ್ಯವತಿ.

ಬಂಗಾಳೆಗೆಸೇರಿದ ಮಾಲ್‌ಮಹದನೀ ಪ್ರಾಂತ್ಯದಲ್ಲಿರುವ ಗೌಡಮ ಗ್ರಾಮ ದಲ್ಲಿ ರಾಮಾನಂದಗೋಸ್ವಾಮಿ ಎಂಬ ಆತನು ವಾಸಮಾಡಿಕೊಂಡಿದ್ದನು. ಈತನ ಸೊಸೆಯೇ ಸತ್ಯವತಿ. ಗೋಸ್ವಾಮಿಯ ಪತ್ನಿಯ ಹೆಸರು ಸುನೀತಿ. ಈಕೆಯು ಉದಾರಹೃದಯಳು. ತನ್ನ ಮನೆಯ ಕೆಲಸಗಳೆಲ್ಲ ಮುಗಿದ ಅನಂತರ, ಗ್ರಾಮದಲ್ಲಿ ಕ್ಷುಧಾತುರರು ಯಾರೂ ಇಲ್ಲ ಎಂಬುದನ್ನು ತಿಳಿದು, ಆಮೇಲೆ ಪತಿ ಸುತರಿಗೆ ಭೋಜನವನ್ನುಮಾಡಿಸಿ, ತಾನು ಭೋಜನವನ್ನುಮಾಡುತಲಿದ್ದಳು. ಭಗವದ್ಭಕ್ತನೂ ಪಾಪಭೀರುವೂಆದ ರಾಮಾನಂದನು ತನಗಿರುವ ಮಾನ್ಯದಿಂದ ಜೀವಯಾತ್ರೆಯನ್ನುನಡೆಸುತ್ತ ಅದರಿಂದಲೇ ಸಂತುಷ್ಟನಾಗಿದ್ದನು. ಆತನು ತನ್ನ ಪುತ್ರನಾದ ಪ್ರೇಮಾನಂದನಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ, ಸದ್ಗುಣವಂತನನ್ನಾಗಿ ಮಾಡಿದನು. ಅವರ ಸೊಸೆಯು ಸಹ ವಿದ್ಯಾವತಿಯಾಗಿಯೂ ಗುಣವತಿ ಯಾಗಿಯೂ ಇದ್ದಳು. ಈಕೆಯು ವಿಶೇಷರೂಪವತಿಯಾಗಿ ಇದ್ದಳು. ಈಕೆಯು ರಾಣೀಭವಾನಿಯ ಕಾಲದಲ್ಲಿ ಇದ್ದಳು ಎಂದು ತಿಳಿಯಬರುತ್ತದೆ. ಈ ಗುಣವತಿಯು ಅತ್ತೆಮಾವಂದಿರ, ಪತಿಯ ಸೇವೆಯನ್ನು ಅತಿಭಕ್ತಿಯಿಂದ ಮಾಡುತ್ತ ಅವರ ಆದರಕ್ಕೆ ಪಾತ್ರಳಾಗಿ ಇದ್ದಳು. ಸೌಖ್ಯವಾಗಿ ಬಾಳುತಲಿದ್ದ ಇವರಿಗೆ ಒಂದು ದೊಡ್ಡಸಂಕಟವು ಪ್ರಾಪ್ತವಾಯಿತು. ಆ ಯಾಪತ್ತಿನದೆಸೆ ಯಿಂದಲೇ ಸತ್ಯವತಿಯ ಧೈರ್ಯಸ್ಥೈರ್ಯಗಳು ಲೋಕಕ್ಕೆ ಗೊತ್ತಾಗಿ ಆಕೆಯ ಕೀರ್ತಿಯು ಶಾಶ್ವತವಾಗಿ ನಿಂತಿತು.

ಆ ಕಾಲದಲ್ಲಿಯೇ ಆ ದೇಶದಲ್ಲಿ ಕಂಪೆನಿಯವರ ಪ್ರಭುತ್ವವು ನೂತನವಾಗಿ ಪ್ರಾರಂಭವಾಯಿತು. ಆ ಸಮಯದಲ್ಲಿ ಅನಾವೃಷ್ಟಿದೋಷದಿಂದ ದೇಶದಲ್ಲಿ ಮಹಾ ಕ್ಷಾಮವು ಪ್ರಾಪ್ತವಾಯಿತು. ಅದರಿಂದ ಕೃಷಿಕರು ಹೀನಸ್ಥಿತಿಯನ್ನು ಹೊಂದಿದರು. ಆದರೂ ಪಾಲಕರ ನೌಕರರು ಪಾಲಕರಿಗೆ ಕೊಡಬೇಕಾದ ಕಂದಾಯಕ್ಕಾಗಿ ರೈತರ ಮನೆಗಳನ್ನು, ಹೊಲಗಳನ್ನು ಮಾರಿ ಅವರನ್ನು ಅನೇಕವಿಧವಾಗಿ ಹಿಂಸಿಸುತಲಿದ್ದರು. ಮತ್ತು ಅವರಲ್ಲಿ ದ್ರವ್ಯವಿಲ್ಲದ ಪಕ್ಷದಲ್ಲಿ ಅವರನ್ನು ರಕ್ಷಕಭಟರ ವಶಮಾಡುತ ಲಿದ್ದರು. ಆ ಕ್ರೂರರಾದ ಭಟರು ಅವರನ್ನೂ ಅವರ ಹೆಂಗಸರನ್ನೂ ಅನೇಕವಿಧ ವಾಗಿ ಹಿಂಸಿಸುತಲಿದ್ದರು. ಆ ಸ್ತ್ರೀಯರನ್ನು ಸಭೆಯಲ್ಲಿ ನಿಲ್ಲಿಸಿ ಅವಮಾನವನ್ನು ಮಾಡುತಲಿದ್ದರು. ಇಂತಹ ದುಷ್ಕಾಲದಲ್ಲಿ ದೇವೀಸಿಂಹನೆಂಬ ಉದ್ಯೋಗಸ್ಥನು, ಮಾನ್ಯವಾಗಿ ಕೊಟ್ಟಿದ್ದ ರಾಮಾನಂದನ ಭೂಮಿಗೆ ಅನ್ಯಾಯವಾಗಿ ಕಂದಾಯ ವನ್ನು ಕೇಳಿದನು. ಆಗ ರಾಮಾನಂದನ ಬಳಿಯಲ್ಲಿ ದ್ರವ್ಯವಿಲ್ಲದುದರಿಂದ, ದೇವೀಸಿಂಹನು ಆತನ ಮನೆಯಲ್ಲಿದ್ದ ಪದಾರ್ಥಗಳನ್ನೆಲ್ಲ ಹರಾಜುಹಾಕಿಸಿದನು. ಈ ಯಾಪತ್ಕಾಲದಲ್ಲಿ ರಾಮಾನಂದನು ರಂಗಪುರದಲ್ಲಿ ತನ್ನ ಶಿಷ್ಯರಿದ್ದುದರಿಂದ, ಅಲ್ಲಿಗೆ ತನ್ನಪರಿವಾರಸಹಿತ ಹೊರಟನು. ಆದರೆ ಮಾರ್ಗಮಧ್ಯದಲ್ಲಿ ಇವರನ್ನು ರಾಜಭಟರು ಹಿಡಿದುಕೊಂಡುಹೋಗಿ ರಾಜಾಸ್ಥಾನದಲ್ಲಿ ನಿಲ್ಲಿಸಿದರು. ಅಲ್ಲಿ ಸಾಧ್ವಿಗಳಿಗೆ ಉಂಟಾಗುವ ಅವಮಾನವನ್ನು ನೋಡಿ ಸಹಿಸಲಾರದೆ ಪ್ರೇಮಾ ನಂದನು ಕ್ರೋಧಾಂಧನಾಗಿ ಇಂತಹ ಕಾರ್ಯಗಳಿಗೆ ಕಾರಣಭೂತನಾದ ದೇವೀ ಸಿಂಹನನ್ನು ತನ್ನ ಪಸ್ತದಲ್ಲಿದ್ದ ಖಡ್ಗದಿಂದ ಕತ್ತರಿಸಲು ಕೈಯನ್ನು ಎತ್ತಿದನು. ಆದರೆ ರಾಜಭಟರು ಶೀಘ್ರವಾಗಿ ಪ್ರೇಮಾನಂದನನ್ನು ಹಿಡಿದುಕೊಂಡು, ಒಂದು ಕೊಠಡಿಯೊಳಕ್ಕೆ ಕರೆದುಕೊಂಡುಹೋಗಿ ಲೆಕ್ಕಿಸಲಾಗದಷ್ಟು ಏಟುಗಳನ್ನು ಹೊಡೆದರು. ತತ್ಪೂರ್ವದಲ್ಲಿಯೇ ಇಂತಹ ಏಟುಗಳಿಂದ ನಾಲ್ಕುಜನರು ಮೃತ ರಾಗಿದ್ದರು. ಈ ಸಮಾಚಾರವನ್ನು ಕೇಳಿ ರಾಮಾನಂದನು ಕಾರಾಗೃಹಕ್ಕೆಹೋಗಿ ನೋಡಲು, ಅಲ್ಲಿ ಪ್ರೇಮಾನಂದನು ಏರೂಪಿಯಾಗಿ ಮೂರ್ಛಿತನಾಗಿ ಬಿದ್ದಿದ್ದನು. ಆದಕಾರಣ ರಾಮಾನಂದನು ಮಗನು ಮೃತನಾದನು ಎಂದೆಣಿಸಿ ಸೊಸೆಯೊಡನೆ ಈ ವೃತ್ತಾಂತವನ್ನು ತಿಳಿಸಿದನು. ಸತ್ಯವತಿಯು ಪತಿಮರಣದಿಂದ ಅತ್ಯಂತ ದುಃಖಿತೆಯಾಗಿ ಅನುಗಮನವನ್ನು ಮಾಡಲು ಪ್ರಯತ್ನಿಸಿದಳು. ರಾಮಾನಂದನು ಆಕೆಗೆ ಸಮಾಧಾನವನ್ನು ಹೇಳುತ್ತ ಪ್ರಯಾಣಮಾಡುತಲಿರಲು, ದೇವೀಸಿಂಹನು ಸುರೂಪವತಿಯರಾದ ಯುವತಿಯರನ್ನು ಬಲವಂತವಾಗಿ ಕರೆತಂದು ಅವರನ್ನು ಆಂಗ್ಲೇಯೋದ್ಯೋಗಿಗಳಿಗೆ ಸಮರ್ಪಿಸಿ ಅವರ ಅನುಗ್ರಹವನ್ನು ಪಡೆಯುತಲಿರುವನು ಎಂಬ ವೃತ್ತಾಂತವು ಇವರಿಗೆ ತಿಳಿಯಬಂದಿತು ಅಂದಿನಿಂದಲು ಅವರು ಗ್ರಾಮ ಗಳಿಗೆ ಹೋಗದೆ ಅರಣ್ಯದಲ್ಲಿಯೇ ಸಂಚರಿಸುತಲಿದ್ದರು. ಇವರು ಒಂದು ದಿವಸ ಒಂದು ಗ್ರಾಮಸಮೀಪಾರಣ್ಯವನ್ನು ಸೇರಲು, ರಾಜಭಟರು ಒಬ್ಬ ಸೌಂದರ್ಯ

ವತಿಯಾದ ಯುವತಿಯನ್ನು ಹುಡುಕುತ್ತ ಬರುತಲಿರುವರು' ಎಂಬ ವರ್ತ ಮಾನವನ್ನು ಕೇಳಿದರು. ಆಗ ರಾಮಾನಂದನು ಸೊಸೆಯನ್ನು ನೋಡಿ 'ಅಮ್ಮಾ, ನೀನು ನನ್ನ ಸಮೀಪದಲ್ಲಿ ಇದ್ದರೆ ನಿನಗೆ ಅನೇಕ ಸಂಕಟಗಳು ಸಂಭವಿಸುವವು. ಆದುದರಿಂದ ನೀನು ಈ ವೃದ್ಧದಾಸಿಯನ್ನೂ, ಭೃತ್ಯನನ್ನೂ ಕರೆದುಕೊಂಡು ಕಾಶೀಕ್ಷೇತ್ರಕ್ಕೆ ಹೊರಡು.' ಎಂದನು. ಅದಕ್ಕೆ ಸತ್ಯವತಿಯು, 'ನೀವು ನನಗೆ ಮಾವಂದಿರಾದರೂ ನನ್ನನ್ನು ಕನ್ಯೆಗಿಂತಲು ಹೆಚ್ಚಾಗಿ ನೋಡಿಕೊಳ್ಳುತಲಿರುವಿರಿ. ನಿಮ್ಮನ್ನು ಎಂದಿಗೂ ಬಿಟ್ಟುಹೋಗಲಾರೆನು. ನಿಮ್ಮೊಡನೆ ಇರುವುದೇ ನನಗೆ ದುಃಖದಲ್ಲಿ ಸಹ ಸುಖವಾಗಿರುವುದು. ಪತಿವ್ರತೆಯರನ್ನು ಯಾರೂ ಕೆಡಿಸಲಾರರು. ಮನೋನಿಶ್ಚಯವುಳ್ಳ ಸ್ತ್ರೀಯರನ್ನು ಅವಮಾನಗೊಳಿಸಲು ಯಾರೂ ಶಕ್ತರಲ್ಲ' ಎಂದು ಹೇಳಿ ದುಃಖಾವೇಶದಿಂದ ಮೂರ್ಛಿತಳಾದಳು. ಸ್ವಲ್ಪಹೊತ್ತಿಗೆ ಎಚ್ಚತ್ತು' 'ಹಾ ಪರಮೇಶ್ವರಾ! ನನ್ನನ್ನು ನನ್ನ ಪ್ರಾಣನಾಥನೊಡನೆ ಕರೆದು ಕೊಂಡು ಹೋಗಲಿಲ್ಲವೇಕೆ? ನನಗೆ ಈ ಸೌಂದರ್ಯದಿಂದ ಪ್ರಯೋಜನವೇನು? ಇದರಿಂದ ಸುಖವನ್ನು ಅನುಭವಿಸುವವರು ಇಲ್ಲ. ಸಂಕಟ ಮೂಲವಾದ ಈ ಸೌಂದರ್ಯದೊಡನೆ ಭೂಮಿಯಮೇಲೆ ಇರುವುದು ಕಷ್ಟ. ಆದುದ ರಿಂದ ಕಿವಿಮೂಗುಗಳನ್ನು ಕತ್ತರಿಸಿಕೊಂಡು ವಿರೂಪಿಯಾಗುವೆನು.' ಎಂದು ನುಡಿದು ಕೈಗೆ ಖಡ್ಗವನ್ನು ತೆಗೆದುಕೊಳ್ಳಲು ರಾಮಾನಂದನು ಆಕೆಗೆ ಸಮಾ ಧಾನವನ್ನು ಹೇಳಿ ವೃದ್ಧದಾಸಿಯನ್ನೂ, ವಿಶ್ವಾಸಾರ್ಹನಾದ ಭೃತ್ಯನನ್ನೂ ಕೊಟ್ಟು ಆಕೆಯನ್ನು ಅರಣ್ಯಮಾರ್ಗವಾಗಿ ಕಳುಹಿಸಿದನು. ಆಗ ಆಕೆಯಲ್ಲಿ ಉಟ್ಟುಕೊಂಡಿರುವ ಬಟ್ಟೆಯಲ್ಲದೆ ಬೇರೆ ಬಟ್ಟೆಯಾಗಲಿ ಧನವಾಗಲಿ ಇರಲಿಲ್ಲ.

ಸೊಸೆಯನ್ನು ಕಳುಹಿಸಿ ರಾಮಾನಂದನು ಭಗವನ್ನಾಮಸಂಕೀರ್ತನೆಯನ್ನು ಮಾಡುತ್ತಿರಲು, ರಾಜಭಟರು ಅಲ್ಲಿಗೆಬಂದು ಆತನನ್ನು ಹಿಡಿದುಕೊಂಡು ಹೋಗಿ ಕಾರಾಗೃಹದಲ್ಲಿ ಇಟ್ಟರು. ಸತ್ಯವತಿಯು ಸ್ವಲ್ಪದೂರಹೋಗಿ, ಮಾವ ನನ್ನು ಬಿಟ್ಟುಹೋಗಲು ಮನಸ್ಸುಬರದೆ ಪುನಃ ಹಿಂದಿರುಗಿ ಬಂದುನೋಡಿ ಆತನನ್ನು ರಾಜಭಟರು ಹಿಡಿದುಕೊಂಡು ಹೋಗಿ ಕಾರಾಗೃಹದಲ್ಲಿ ಇಟ್ಟರು ಎಂಬ ವರ್ತ ಮಾನವನ್ನುಕೇಳಿ ದುಃಖಿತೆಯಾಗಿ, ಸ್ವಲ್ಪಹೊತ್ತು ಮಾವನನ್ನುಬಿಡಿಸುವ ಉಪಾಯ ವನ್ನು ಆಲೋಚಿಸಿದಳು. ಅನಂತರ ಆಕೆಯು ಧೈರ್ಯವನ್ನು ಅವಲಂಬಿಸಿ ಪುರುಷವೇಷವನ್ನು ಧರಿಸಿಕೊಂಡು, ಬಂದಿಖಾನೆಯನ್ನು ಸಮೀಪಿಸಿ, ತನ್ನ ಸೇವಕ ರನ್ನು ಅಲ್ಲಿಯೇನಿಲ್ಲಿಸಿ, ತಾನು ಮುಂದಕ್ಕೆ ಹೋದಳು.

ಕಾರಾಗೃಹಾಧಿಕಾರಿಯಾದ ರಾಮಸಿಂಹನು ಆ ಬಾಲಕನನ್ನುನೋಡಿ ನೀನು ಯಾರು ಎಂದು ಕೇಳಲು, ಆ ವೇಷಧಾರಿಯು ತನ್ನ ಹೆಸರು ನಾನಕ ಎಂತಲೂ ತಮ್ಮನಿವಾಸವು ಗಯಾಜಿಲ್ಲೆಗೆ ಸೇರಿದ ಪೂರ್ಣಿಯಾಗ್ರಾಮ ಎಂತಲೂ, ತಾನು

ಯಾವುದಾದರೂ ಒಂದು ಉದ್ಯೋಗವನ್ನು ಪಡೆಯುವಸಲುವಾಗಿ ಬಂದೆನು ಎಂತಲೂ ತಿಳಿಸಿದನು. ಅದರಮೇಲೆ ರಾಮಸಿಂಹನು ಆ ಬಾಲಕನಿಗೆ ಅಲ್ಪ ವೇತನವನ್ನು ಏರ್ಪಾಟುಮಾಡಿ ತನ್ನಲ್ಲಿಯೇ ಇಟ್ಟುಕೊಂಡನು. ಆ ಬಾಲಕನು ಯಜಮಾನನ ಸೇವೆಯನ್ನು ಚೆನ್ನಾಗಿಮಾಡಿ ಆತನ ಕೃಪೆಗೆ ಪಾತ್ರನಾದನು. ಅನಂತರ ಒಂದು ದಿವಸ ಯಜಮಾನನ ಅನುಮತಿಯನ್ನುಪಡೆದು ಕೈದು ಖಾನೆಯೊಳಗೆ ಹೋಗಿ ರಾಮಾನಂದನನ್ನು ಯುಕ್ತಿಯಿಂದ ಬಿಡಿಸಿಕೊಂಡು ಅರಣ್ಯಮಾರ್ಗದಲ್ಲಿ ಹೋಗುತ್ತಿರಲು, ಅರಣ್ಯಮಧ್ಯದಲ್ಲಿ ಒಬ್ಬ ಯೋಗಿನಿಯು * ತನ್ನ ಗೃಹಕ್ಕೆ ಕರೆದುಕೊಂಡು ಹೋದಳು. ಅವರು ಸ್ವಲ್ಪಹೊತ್ತು ಆಕೆಯೊಡನೆ ಪ್ರಸಂಗಿಸುತ್ತಿರಲು, ಮಡಿದನು ಎಂದು ಎಣಿಸಿಕೊಂಡಿದ್ದ ಪ್ರೇಮಾನಂದನು ಸಜೀವಿಯಾಗಿ ಕಲಿಕತ್ತೆಯ ಕಾರಾಗೃಹದಲ್ಲಿ ಇರುವಂತೆ ತಿಳಿಯಿತು. ಆಗ ಸತ್ಯವತಿಯು ಪತಿಯನ್ನು ಬಿಡಿಸಲೆಣಿಸಿ ಒಬ್ಬ ಭೃತ್ಯನನ್ನು ಕರೆದುಕೊಂಡು, ಪುರುಷವೇಷವನ್ನು ಧರಿಸಿ, ರಾಮಕೃಷ್ಣನೆಂಬ ನಾಮದೊಡನೆ ಕಲಿಕತ್ತೆಗೆ ಹೊರಟಳು. ವಿಪತ್ತುಗಳು ಮನುಷ್ಯರಿಗೆ ಶತ್ರುಗಳು ಎಂದು ಎಣಿಸುತ್ತಾರೆ. ಆದರೆ ಅವು ನಿಜವಾಗಿಯೂ ಮಿತ್ರರೆಂದು ನುಡಿಯಬಹುದು. ಆಪತ್ಕಾಲದಲ್ಲಿಯೇ ದೊಡ್ಡವರ ಪವಿತ್ರಚರಿತ್ರೆ, ಚಾತುರ್ಯ, ಧೈರ್ಯ ಮೊದಲಾದವು ಪ್ರಕಾಶವಾಗುವುದಕ್ಕೆ ಅವಕಾಶವು ಉಂಟಾಗಿ, ಅವರ ಕೀರ್ತಿಯು ಶಾಶ್ವತವಾಗಿ ನಿಲ್ಲುವುದು.

ಸತ್ಯವತಿಯು ಮೂರು ಹಗಲುರಾತ್ರೆಗಳು ಪ್ರಯಾಣಮಾಡಿ ಕಲಿಕತ್ತೆಯನ್ನು ಸೇರಿದಳು. ಅಲ್ಲಿನ ಕಾರಾಗೃಹವು ರಾಮಾನಂದನು ಇದ್ದ ಕಾರಾಗೃಹಾಧಿಕಾರಿಯ ವಶದಲ್ಲಿಲ್ಲದೆ, ಆತನಿಗಿಂತಲು ಮೇಲಿನ ಅಧಿಕಾರಿಯ ವಶದಲ್ಲಿತ್ತು. ಆದುದರಿಂದ ಅಲ್ಲಿ ವ್ಯಾಜ್ಯವನ್ನು ತಂದರೆ ಪ್ರೇಮಾನಂದನು ಬಂಧವಿಮುಕ್ತನಾಗುವನು ಎಂದು ತಿಳಿಯಬಂದಿತು. ಆದರೆ ಕೋರ್ಟುವ್ಯಾಜ್ಯಕ್ಕೆ ವಿಶೇಷ ದ್ರವ್ಯವು ಅವಸರವಾಗಿತ್ತು. ದ್ರವ್ಯಕ್ಕಾಗಿ ಆಕೆಯು ವಿಚಾರಿಸುತ್ತಿರಲು, ಕೆಲವರು ಗಂಗಾ ಗೋವಿಂದಸಿಂಹ ಎಂಬ ಗೃಹಸ್ಥನ ಮನೆಗೆ ಯಾಚಕಾರ್ಥವಾಗಿ ಹೋಗುತಲಿರುವರು ಎಂದು ಕೇಳಿ ಆಕೆಯೂ ಅವರೊಡನೆ ಪುರುಷವೇಷದೊಡನೆ ಹೋದಳು. ಆದರೆ ಅಲ್ಲಿ ಏನೂ ದೊರಿಯಲಿಲ್ಲ. ಆಮೇಲೆ ಆ ಸಾಧ್ವಿಯು ಒಂದು ವೃಕ್ಷದಕೆಳಗೆ ಚಿಂತೆಯೊಡನೆ ಕುಳಿತುಕೊಂಡು, ನಿದ್ರಾಹಾರಗಳಿಲ್ಲದೆ

---

* ಈ ಯೋಗಿನಿಯು ಯಾರೋ ತಿಳಿಯದು. ಆ ಕಾಲದಲ್ಲಿಯೇ ಇದ್ದು ದೇವೀಸಿಂಹನ ಭಯದಿಂದ ಅರಣ್ಯದಲ್ಲಿ ಯೋಗಿನಿಯಾಗಿ ವಾಸಮಾಡುತಲಿದ್ದ ಕಮಲಾದೇವಿಯಾಗಿರಬಹುದು ಎಂದು ಊಹಿಸುತ್ತಾರೆ. ಕಮಲಾದೇವಿಯ ಚರಿತ್ರೆಯನ್ನು ನೋಡುವುದು.

ಕೆಲವು ದಿನಗಳನ್ನು ಕಳೆದಳು. ಒಂದುದಿವಸ ಆ ದಾರಿಯಲ್ಲಿ ಒಬ್ಬ ದೊಡ್ಡ ಮನುಷ್ಯನು ಹೋಗುತ್ತಿರಲು ಆತನಿಗೆ ತಿಳಿಯದೆ ಆತನ ಕೈಯಿಂದ ಕೆಲವು ಕಾಗದಗಳು ಕೆಳಗೆಬಿದ್ದವು. ಸತ್ಯವತಿಯು ಅದನ್ನುನೋಡಿ ಶೀಘ್ರವಾಗಿ ಆ ಸ್ಥಳಕ್ಕೆ ಹೋಗಿ ಆ ಕಾಗದಗಳನ್ನು ತೆಗೆದುಕೊಟ್ಟಳು. ಆತನು ಆ ಬಾಲಕನಿಗೆ ಕೃತಜ್ಞನಾಗಿ, 'ನೀನು ನನಗೆ ಬರುತಲಿದ್ದ ದೊಡ್ಡಸಂಕಟವನ್ನು ತಪ್ಪಿಸಿದೆ. ನಿನಗೆ ಏನುಬೇಕೋ ಕೇಳು.' ಎಂದು ನುಡಿದನು. ಅದಕ್ಕೆ ಆಕೆಯು ತನ್ನ ಬಂಧುವು ಆ ವೂರಿನಲ್ಲಿರುವ ಕಾರಾಗೃಹದಲ್ಲಿರುವನು ಎಂತಲೂ, ಆತನನ್ನು ಬಿಡಿಸಲು ದ್ರವ್ಯವು ಅವಶ್ಯಕವಾಗಿದೆ ಎಂತಲೂ ದ್ರವ್ಯಾಭಾವದಿಂದ ಆ ಕಾರ್ಯವು ಅಸಾಧ್ಯವಾಗಿರುವುದರಿಂದ ತಾವು ಆ ಕಾರ್ಯಕ್ಕೆ ಸಹಾಯಕರಾಗಬೇಕು ಎಂತಲೂ ಅಪೇಕ್ಷಿಸಿದಳು. ಅದಕ್ಕೆ ಆ ಗೃಹಸ್ಥನು ಒಪ್ಪಿಕೊಂಡು ರಾಮಕೃಷ್ಣನ (ಸತ್ಯವತಿಯ) ಇಚ್ಛೆಯಂತೆ ಪ್ರೇಮಾನಂದನನ್ನು ಕಾರಾಗೃಹದಿಂದ ಬಿಡಿಸಿದನು. ಪ್ರೇಮಾನಂದನು ಕಾರಾಗೃಹದಿಂದ ಹೊರಗೆಬಂದು ಪುರುಷವೇಷದಲ್ಲಿದ್ದ ತನ್ನ ಸತಿಯನ್ನು ಗುರುತಿಸಲಾರದೆ, ತನ್ನ ಬಂಧುಗಳಲ್ಲಿ ಯಾರೋಒಬ್ಬನು ಬಿಡಿಸಿದನು ಎಂದು ಎಣಿಸಿದನು. ಅನಂತರ ಅವರು ನುನೆಗೆ ಬಂದಮೇಲೆ ಸತ್ಯವತಿಯು ನಿಜರೂಪದೊಡನೆ ಬಂದು ಪತಿಯ ಪಾದಗಳಮೇಲೆ ಬಿದ್ದಳು. ಪ್ರೇಮಾನಂದನು ತನ್ನ ಪತ್ನಿಯು ಮಾಡಿದ ಅದ್ಭುತಕಾರ್ಯಕ್ಕೆ ಆಶ್ಚರ್ಯಪಟ್ಟು ಆಕೆಯನ್ನಾಲಂಗಿಸಿಕೊಂಡನು. ಮೃತನಾವನು ಎಂದೆಣಿಸಿಕೊಂಡಿದ್ದ ಪತಿಯನ್ನು ಹನ್ನೆರಡುವರ್ಷಗಳಿಗೆ ಪಡೆದು ಸತ್ಯವತಿಯು ಪರಮಾನಂದವನ್ನು ಹೊಂದಿದಳು. ಅವರಿಬ್ಬರೂ ಭೃತ್ಯನನ್ನು ಕರೆದುಕೊಂಡು ರಾಮಾನಂದನೂ ಯೋಗಿನಿಯೂ ಇದ್ದ ಸ್ಥಳಕ್ಕೆ ಬಂದರು. ರಾಮಾನಂದನು ಮಗನನ್ನು ನೋಡಿ ಅತ್ಯಂತ ಸಂತೋಷವನ್ನು ಹೊಂದಿ ಸೊಸೆಯನ್ನು ಕೊಂಡಾಡಿದನು ಆಮೇಲೆ ಅವರೆಲ್ಲರೂ ರಂಗಪುರವನ್ನು ಸೇರಿ ಸೌಖ್ಯವಾಗಿದ್ದರು.

ಮಹಾರಾಣಿ ತ್ರಿಪುರಸುಂದರಿ.

ಈಕೆಯು ನೇಪಾಳಾಧೀಶ್ವರನಾದ ರಾಣಾಬಹದುರನ ಪ್ರಥಮಪತ್ನಿ. ಈ ರಾಜನು ೧೭೯೫ ನೆಯ ಇಸವಿಯಲ್ಲಿ ಸಿಂಹಾಸನಾರೂಢನಾದನು. ಈತನಿಗೆ ಇಬ್ಬರು ಪತ್ನಿಯರು ಇದ್ದರು. ಅವರಲ್ಲಿ ಪಟ್ಟಮಹಿಷಿಯಾದ ತ್ರಿಪುರಸುಂದರಿಯು ಗುಲ್ಮೀರಾಜನ ಪುತ್ರಿಯು. ಈಕೆಯು ಸುಗುಣವತಿಎಂತಲೂ, ಔದಾರ್ಯವತಿ

ಎಂತಲೂ ಚರಿತ್ರಕಾರರು ಬರೆದಿದಾರೆ. ಈಕೆಯು ವಂಧ್ಯಳಾಗಿದ್ದಕಾರಣ ರಾಜನು ಈಕೆಯಲ್ಲಿ ಅಯಿಷ್ಟವುಳ್ಳವನಾಗಿದ್ದನು ಈ ಸಾಧ್ವಿಯುಮಾತ್ರ ಪತಿ ಭಕ್ತಿ ಪರಾಯಣೆಯಾಗಿದ್ದಳು.

೯೯ ೧೮೦೦ ನೆಯ ಇಸವಿಯಲ್ಲಿ ರಾಜನಿಗೆ ಮತಿಭ್ರಮೆಯು ಉಂಟಾಗಿ ರಾಜ್ಯವನ್ನೆಲ್ಲ ಚಿಕ್ಕ ಹೆಂಡತಿಯಮಗನಿಗೆ ಕೊಟ್ಟು, ಚಿಕ್ಕ ಹೆಂಡತಿಯನ್ನು ಬಾಲಕನಿಗೆ ಪಾಲನಕರ್ತ್ರಿಯಾಗಿ ನಿಯಮಿಸಿ, ಕಾಶಿಯಲ್ಲಿ ವಾಸಮಾಡಲು ಹೊರಟುಹೋದನು. ಸಾಧ್ವೀಮಣಿಯಾದ ತ್ರಿಪುರಸುಂದರಿಯು ಪತಿಯೊಡನೆ ಕಾಶಿಗೆ ಹೋದಳು. ಆದರೆ ರಾಜನು ಈಕೆಯನ್ನು ಅನೇಕವಿಧವಾಗಿ ಒಂಸಿಸಿ ಮನೆಯಿಂದ ಹೊರಡಿಸಿದುದರಿಂದ ಈಕೆಯು ನೇಪಾಳಕ್ಕೆ ಬರಬೇಕಾಯಿತು.

ಈಕೆಯು ನೇಪಾಳಕ್ಕೆ ಬರುತಲಿರುವಾಗ ಮಾರ್ಗಮಧ್ಯದಲ್ಲಿ ಬಾಲರಾಜನ ಪಾಲನ ಕರ್ತೃತ್ವವನ್ನು ವಹಿಸಬೇಕು ಎಂಬ ಇಚ್ಛೆಯು ಈಕೆಗೆ ಉಂಟಾಯಿತು. ಬಾಲರಾಜನ ಪಾಲನ ಕರ್ತೃತ್ವವನ್ನು ಪಟ್ಟದರಾಣಿಯು ಮಾತ್ರವೇ ವಹಿಸ ಬೇಕಾದುದಾದಕಾರಣ ಈಕೆಗೆ ಉಂಟಾದ ಇಚ್ಛೆಯನ್ನು ಕುರಿತು ನಾವು ಈಕೆಯನ್ನು ನಿಂದಿಸಬಾರದು. ರಾಣಿಯು ತನ್ನ ಅಧಿಕಾರವನ್ನು ಪಡೆಯುವ ನಿಮಿತ್ತವಾಗಿ ಸೈನ್ಯವನ್ನು ಸೇರಿಸಿಕೊಂಡು ನೇಪಾಳದ ಸರಿಹದ್ದಿನ ಸಮೀಪಕ್ಕೆ ಬಂದಳು. ಪ್ರಜೆಗಳು ಈಕೆಗೆ ಅನುಕೂಲರಾದುದರಿಂದ ಚಿಕ್ಕರಾಣಿಗೆ ಬಹು ಚಿಂತೆಯು ಉಂಟಾಯಿತು.

೧೮೦೨ ನೆಯ ಇಸವಿ ನವಂಬರ್ ತಿಂಗಳಿನಲ್ಲಿ ತ್ರಿಪುರಸುಂದರಿಯು ಸರಿ ಹದ್ದನ್ನು ದಾಟಿ ನೇಪಾಳರಾಜ್ಯವನ್ನು ಪ್ರವೇಶಿಸಿದಳು. ಆದರೆ ಮಾರ್ಗದಲ್ಲಿಯೇ ಈಕೆಯ ಸೈನ್ಯವನ್ನು ಚಿಕ್ಕರಾಣಿಯ ಸೈನ್ಯವು ಸೋಲಿಸಿತು. ಈ ಪರಾಭವದಿಂದ ಮಹಾರಾಣಿಯು ಧೈರ್ಯಗೆಡದೆ ಮತ್ತೊಂದುಸಲ ಸೈನ್ಯವನ್ನು ಸೇರಿಸಿಕೊಂಡು ೧೮೦೩ನೆ ಇಸವಿಯ ಫಿಬ್ರವರಿ ತಿಂಗಳಿನಲ್ಲಿ ಚಿಕ್ಕರಾಣಿಯ ಸೈನ್ಯವನ್ನು ಸೋಲಿಸಿ, ಮಹಾವಿಭವದೊಡನೆ ನಿಜರಾಜಧಾನಿಯಾದ ಖಟಮಂಡೂ ನಗರವನ್ನು ಪ್ರವೇಶಿಸಿದಳು. ಚಿಕ್ಕರಾಣಿಯು ಪುತ್ರನೊಡನೆ ಪಲಾಯನಳಾದಳು. ಆದರೆ ಮಹಾ ರಾಣಿಯು ರಾಜಪುತ್ರನನ್ನು ಕರೆತರಿಸಿ ಸಿಂಹಾಸನದಮೇಲೆ ಕುಳ್ಳಿರಿಸಿ ತಾನು ಪಾಲನಕರ್ತ್ರಿಯಾಗಿ ರಾಜ್ಯಭಾರವನ್ನು ನಡೆಸಲಾರಂಭಿಸಿದಳು. ನ್ಯಾಯ ಪ್ರವರ್ತಕಳಾದ ತ್ರಿಪುರಸುಂದರಿಯು ಚಿಕ್ಕರಾಣಿಯನ್ನಾಗಲಿ ಈಕೆಯ ಕಡೆಯವ ರನ್ನಾಗಲಿ ಸ್ವಲ್ಪವೂ ಬಾಧಿಸಿದವಳಲ್ಲ. ಅವರ ಅಪರಾಧಗಳನ್ನೆಲ್ಲ ಕ್ಷಮಿಸಿದಳು. ಈಕೆಯ ಕ್ಷಮಾಗುಣವು ಅನುಕರಣೀಯವಾದುದು! ರಕ್ತಪಾತವಿಲ್ಲದೆ ಪ್ರಭುತ್ವ ದಲ್ಲಿ ಇಂತಹ ಮಾರ್ಪಾಟು ಉಂಟಾದುದು ಈ ರಾಜ್ಯದಲ್ಲಿ ಮಾತ್ರವೇ ಎಂದು

ಹೇಳುತ್ತಾರೆ. ಈಕೆಯು ತಮ್ಮ ನಗರದಲ್ಲಿದ್ದ ಆಂಗ್ಲೇಯ ರಾಯಭಾರಿಯೊಡನೆ ವಿಶೇಷ ಸ್ನೇಹವನ್ನು ತೋರಲಿಲ್ಲವಾದಕಾರಣ ಆತನು ಆ ದೇಶದಲ್ಲಿರುವ ಆಂಗ್ಲೇಯರ ಇಲಾಖೆಗೆ ಹೋದನು.

ಗಂಭೀರಳಾದ ಈ ರಾಣಿಯು ಪ್ರಜೆಗಳು ಹೊಗಳುವಂತೆ ರಾಜಕಾರ್ಯಗಳನ್ನು ನಿರ್ವಹಿಸುತಲಿದ್ದಳು. ಈಕೆಯು ದೀರ್ಘಕಾಲ ರಾಜ್ಯವನ್ನು ಪಾಲಿಸಿದಳು. ಮತಿಭ್ರಮೆಯು ಹೋದನಂತರ ಈಕೆಯಪತಿಯು ಕೆಲವುದಿವಸ ರಾಜ್ಯಭಾರವನ್ನು ಮಾಡಿದನು. ಪತಿಯು ರಾಜ್ಯಭಾರವನ್ನು ಮಾಡುವಕಾಲದಲ್ಲಿ ಈಕೆಯು ಪತಿಸೇವಾತತ್ಪರಳಾಗಿದ್ದಳು. ೧೮೦೫ ನೆಯ ಇಸವಿಯಲ್ಲಿ ರಾಜನು ಮೃತನಾದನು. ತದನಂತರ ಈಕೆಯು ಭೀಮಸೇನ ಎಂಬ ಆತನನ್ನು ಮಂತ್ರಿಯಾಗಿ ನಿಯಮಿಸಿಕೊಂಡು ಚಾತುರ್ಯದಿಂದ ರಾಜ್ಯವನ್ನು ಪಾಲಿಸಿದಳು. ಪತಿಯಿಂದ ತಿರಸ್ಕರಿಸಲ್ಪಟ್ಟರೂ, ಸಪತ್ನಿಯಿಂದ ಪರಾಭವವನ್ನು ಹೊಂದಿದರೂ, ಪಾತಿವ್ರತ್ಯ, ಕ್ಷಾತ್ರಗುಣ ಮೊದಲಾದ ಸದ್ಗುಣಗಳನ್ನು ತ್ಯಜಿಸದೆ, ಧೈರ್ಯದೊಡನೆ ತನಗೆ ಯೋಗ್ಯವಾದ ಹಕ್ಕುಗಳನ್ನು ಶೌರ್ಯದಿಂದ ಸಂಪಾದಿಸಿ, ಶತ್ರುಗಳನ್ನು ಸಹ ದಯಾರ್ದ್ರಹೃದಯದೊಡನೆ ಕಾಣುತ್ತ, ಸಕಲಜನರು ಹೊಗಳುವಂತೆ ರಾಜ್ಯಭಾರವನ್ನು ನಡೆಸಿದ ಸತೀಮಣಿಯು ಸ್ತುತ್ಯರ್ಹಳಲ್ಲವೆ!

ಲೀಲಾವತಿ.

ಗಣಿತಶಾಸ್ತ್ರಪಂಡಿತನೆಂದು ಪ್ರಸಿದ್ಧಿಯನ್ನು ಹೊಂದಿದ ಭಾಸ್ಕರಾಚಾರ್ಯನಿಗೆ ಲೀಲಾವತಿ ಎಂಬೊಬ್ಬ ಕುಮಾರಿಯು ಇದ್ದಳು. ಸಿದ್ಧಾಂತಶಿರೋಮಣಿ ಎಂಬ ಗ್ರಂಥದಲ್ಲಿ ಭಾಸ್ಕರಾಚಾರ್ಯರು, ತಾವು ಆ ಗ್ರಂಥವನ್ನು ಶಾಲಿವಾಹನ ಶ. ೧೦೭೨ ನೆಯ ಇಸವಿಯಲ್ಲಿ ರಚಿಸಿದೆವೆಂದು ಬರೆದಿರುವುದರಿಂದ ಲೀಲಾವತಿಯು ೧೨ ನೆಯ ಶತಾಬ್ದದಲ್ಲಿದ್ದಳೆಂದು ತಿಳಿಯಬರುತ್ತದೆ. ಲೀಲಾವತಿಯು ಬಾಲವಿತಂತುವಾದ ಕಾರಣ ಆಕೆಯ ಪತಿಯವಂಶವು ತಿಳಿಯಬರುವುದಿಲ್ಲ. ಆದಕಾರಣ ಈಕೆಯಚರಿತ್ರೆಯನ್ನು ತಿಳಿಯಲು ಸಂಭವಾಸಂಭವಗಳಾದ ಕೆಲವು ಕಥೆಗಳಲ್ಲದೆ ಬೇರೆಆಧಾರವಿಲ್ಲ. ಆದುದರಿಂದ ಆ ಕಥೆಗಳಲ್ಲಿ ಕೆಲವನ್ನಿಲ್ಲಿ ಬರೆಯುವೆನು.

ಭಾಸ್ಕರಾಚಾರ್ಯನು ಜ್ಯೋತಿಷ್ಯದಲ್ಲಿ ಪ್ರವೀಣನಾದುದರಿಂದ ಲೀಲಾವತಿಗೆ ವೈಧವ್ಯವುಂಟಾಗುವುದೆಂದು ಜಾತಕದಿಂದ ತಿಳಿದುಕೊಂಡನು. ಆತನು

ಪೂರ್ಣಾಯುಷ್ಯನಾದ ವರನನ್ನು ಹುಡುಕಿತಂದು, ಸುಮುಹೂರ್ತದಲ್ಲಿ ವಿವಾಹವನ್ನುಮಾಡಲು ನಿಶ್ಚಯಿಸಿದನು. ವಿವಾಹಾತ್ಪೂರ್ವದಲ್ಲಿ ನಡೆಯಬೇಕಾದ ವಿಧಿಗಳೆಲ್ಲವೂ ನಡೆದಮೇಲೆ ಕನ್ಯಾವರರನ್ನು ಮಂಟಪದಲ್ಲಿ ಕುಳ್ಳಿರಿಸಿದರು. ಮುಹೂರ್ತವನ್ನು ತಿಳಿದುಕೊಳ್ಳುವುದಕ್ಕೆ ನೀರಿನಲ್ಲಿ ಘಟಿಕಾಯಂತ್ರವನ್ನು ಇಟ್ಟು ಪುರೋಹಿತಸಮೇತವಾಗಿ ಸುಮುಹೂರ್ತವನ್ನಿದಿರು ನೋಡುತಲಿದ್ದರು. ಸ್ವಲ್ಪ ಹೊತ್ತಿಗೆ ಲೀಲಾವತಿಯು ಆ ಪಾತ್ರೆಗೆ ನೀರುಬರುವ ಕ್ರಮವನ್ನು ನೋಡಲೆಣಿಸಿ ಸ್ವಲ್ಪ ಮುಂದಕ್ಕೆಹೋಗಿ ಬಗ್ಗಿ ನೋಡುತಲಿರಲು, ಆಕೆಯ ಶಿರೋಭೂಷಣದಿಂದೊಂದು ಸಣ್ಣ ಮುತ್ತು ಆ ಪಾತ್ರೆಯೊಳಗೆ ಬಿದ್ದು ನೀರುಬರುವ ಮಾರ್ಗವನ್ನು ಮುಚ್ಚಿಬಿಟ್ಟಿತು. ಮುತ್ತು ಬಿದ್ದುದನ್ನು ಯಾರೂನೋಡಲಿಲ್ಲ. ಎಷ್ಟು ಹೊತ್ತು ನೋಡಿದರೂ ಪಾತ್ರೆಯು ತುಂಬದಿರುವುದನ್ನು ನೋಡಿ, ಆಚಾರ್ಯನು ಕಾರಣವನ್ನರಿತು, ಹತಾಶನಾಗಿ ಯಾವುದೋಒಂದು ಮುಹೂರ್ತದಲ್ಲಿ ಲೀಲಾವತಿಯ ವಿವಾಹವನ್ನು ನೆರವೇರಿಸಿದನು.

ವಿವಾಹಾನಂತರ ಅಲ್ಪಕಾಲದಲ್ಲಿಯೇ ಲೀಲಾವತಿಗೆ ವೈಧವ್ಯವು ಸಂಭವಿಸಿತು. ಆಚಾರ್ಯನು ಮಗಳಿಗೆ ಸಂಭವಿಸಿದ ದುರವಸ್ಥೆಗೆ ಅತ್ಯಂತ ದುಃಖಪೀಡಿತನಾಗಿ ಲೀಲಾವತಿಯು ಸಂಸಾರ ಸುಖದಿಂದ ವಂಚಿತಳಾದರೂ, ಆಕೆಗೆ ವಿದ್ಯಾನಂದವನ್ನುಂಟುಮಾಡಿ ಅದರಿಂದ ಸುಖಿಯಾಗಿ ಮಾಡಬೇಕೆಂದೆಣಿಸಿ ಆಕೆಗೆ ಗಣಿತಶಾಸ್ತ್ರವನ್ನು ಕಲಿಸಲು ಪ್ರಾರಂಭಿಸಿದನು. ಕೆಲವು ದಿವಸಗಳಿಗೆ ಲೀಲಾವತಿಯು ತನ್ನ ದುಃಖವನ್ನು ಮರೆತು ವಿಶೇಷ ಶ್ರದ್ಧೆಯಿಂದ ಗಣಿತಶಾಸ್ತ್ರವನ್ನು ಅಭ್ಯಾಸಮಾಡಿ, ಅಲ್ಪಕಾಲದಲ್ಲಿಯೇ ಗಣಿತಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿದಳು. ಆಕೆಯು ವೃಕ್ಷದಲ್ಲಿರುವ ಎಲೆಗಳ ಸಂಖ್ಯೆಯನ್ನು ಸಹ ಅರ್ಧ ಘಂಟೆಯಲ್ಲಿ ಗಣಿಸಿ ಹೇಳುತಲಿದ್ದಳೆಂದು ಲೋಕವಾರ್ತೆಯುಂಟು. ಲೀಲಾವತಿಗೆ ಗಣಿತದಲ್ಲಿರುವ ಅಸಾಮಾನ್ಯ ಪ್ರಜ್ಞೆಯನ್ನು ನೋಡಿ ಜನರು ಇದನ್ನು ಕಲ್ಪಿಸಿರಬಹುದೆಂದು ತೋರುತ್ತದೆ.

ಆಕೆಗೆ ಗಣಿತವನ್ನು ತಿಳಿಸುವಾಗ ಕೇಳಿದ ಪ್ರಶ್ನೆಗಳನ್ನೂ, ಅದಕ್ಕೆ ಆಕೆಯು ಹೇಳಿದ ಉತ್ತರಗಳನ್ನೂ ಸೇರಿಸಿ, ಭಾಸ್ಕರಾಚಾರ್ಯನು ಅದಕ್ಕೆ 'ಲೀಲಾವತಿ ಗಣಿತ' ಎಂಬ ಹೆಸರಿಟ್ಟನು ಎಂದು ಹೇಳುತ್ತಾರೆ. ಈ ವಿಷಯವು ಲೀಲಾವತಿಯ ಗಣಿತದಲ್ಲಿರುವ "ಬಾಲೇಬಾಲಕುರಂಗಲೋಲನಯನೇ ಲೀಲಾವತೀಪ್ರೋಪಾಚ್ಯತಾಂ।" "ಅಯೇಬಾಲೇ ಲೀಲಾವತಿ ಮತಿಮತಿಬ್ರೂಹಿ॥" (ಲೀಲಾವತೀಯೆಂಬ ಬಾಲೆಯೇ ಈ ಲೆಕ್ಕವನ್ನು ಹೇಳು ಎಂದರ್ಥ) ಎಂಬ ವಾಕ್ಯಗಳಿಂದ ಈ ವಿಷಯವು ಯಥಾರ್ಥವಾಗಿರಬಹುದೆಂದು ತೋರುತ್ತದೆ. ಈ ಗಣಿತದಿಂದೀಕೆಯ ಕೀರ್ತಿಯು ಸಕಲದೇಶಗಳಲ್ಲಿಯೂ ತುಂಬಿದೆ. ಲೀಲಾವತಿಗಣಿತವು ಫಾರಷಿ, ಇಂಗ್ಲೀಷು

ಮೊದಲಾದ ಪರಭಾಷೆಗಳಿಗೆ ಸಹ ಭಾಷಾಂತರಮಾಡಲ್ಪಟ್ಟಿದೆ. ಈ ಗಣಿತವನ್ನು ಮಾಡುವುದಕ್ಕೆ ಪುರುಷರಿಗೇ ಕಷ್ಟವಂತೆ! ಈಕೆಯ ಚರಿತ್ರೆಯಿಂದ ಆ ಕಾಲದಲ್ಲಿ ಸ್ತ್ರೀವಿದ್ಯೆಯು ಸರ್ವಸಾಧಾರಣವಾಗಿದ್ದಿತೆಂದು ತಿಳಿಯಬರುತ್ತದೆ.

ಸಾವಿತ್ರೀಬಾಯಿ ಶಾಣಿಕೇರಿಯವರು.

ಈ ಶೂರನಾರಿಯು ಭುಯಿಕೋಟೆಗೆ ಅಧಿಪತಿಯಾಗಿದ್ದ ಯೇಸಾಜಿಯ ಭಾರ್ಯೆ. ಈ ಕೋಟೆಯು ಕರ್ನಾಟಕದಲ್ಲಿರುವ ಬೆಳಗಾಂ ಜಿಲ್ಲೆಗೆ ಸೇರಿದ ಬೇಲವಾಡಿಗೆ ಸೇರಿದುದು. ಈಕೆಯು ಶಿವಾಜಿಯ ಸೈನ್ಯದೊಡನೆ ಯುದ್ಧವನ್ನು ಮಾಡಿದಳು.

ಶಿವಾಜಿಯು ಒಂದುಸಲ ಕರ್ನಾಟಕದಮೇಲೆ ದಂಡೆತ್ತಿದನು. ಆಗ ತನ್ನ ಸೇನಾನಾಯಕನಾದ ದಾದೋಜಿಯನ್ನು ಅಲ್ಲಿರುವ ದುರ್ಗಗಳನ್ನು ಜೈಸುವಂತೆ ನಿಯಮಿಸಿ, ತಾನು ತನ್ನ ದೇಶದಲ್ಲಿರುವ ಔರಂಗಜೇಬನ ಸೈನ್ಯಗಳೊಡನೆ ಯುದ್ಧಮಾಡಲು ಹೊರಟುಹೋದನು. ದಾದೋಜಿಯು ಪ್ರಥಮದಲ್ಲಿ ಭುಯಿಕೋಟೆಯನ್ನು ಗೆದ್ದರೆ ಮಿಕ್ಕಕೋಟೆಗಳನ್ನು ಗೆಲ್ಲುವುದು ಸುಲಭವೆಂದು ಎಣಿಸಿ, ಭುಯಿಕೋಟೆಗೆ ಮುತ್ತಿಗೆಯನ್ನು ಹಾಕಿದನು. ಅದರ ಸಂರಕ್ಷಕನಾದ ಯೇಸಾಜಿಯು ಬಹುಘೋರವಾಗಿ ಯುದ್ಧಮಾಡಿ ಸ್ವಲ್ಪಹೊತ್ತಿಗೆ ಯುದ್ಧಭೂಮಿಯಲ್ಲಿ ಮಡಿದನು. ಆಗ ಆತನ ಸೈನ್ಯಗಳು ದಿಕ್ಕುಪಾಲಾಗಿ ಓಡಿಹೋದುವು. ಸಾವಿತ್ರಿಬಾಯಿಯು ಪತಿಯ ಮರಣವನ್ನು ಚಾರರಮುಖದಿಂದ ಕೇಳಿ ಕೆಲದಾಸಿಯರನ್ನು ಕರೆದುಕೊಂಡು ರಣರಂಗವನ್ನು ಪ್ರವೇಶಿಸಿದಳು. ಅಲ್ಲಿ ಗತಪ್ರಾಣನಾಗಿದ್ದರೂ, ತನ್ನ ಪತಿಯು ಖಡ್ಗವನ್ನು ಭಲ್ಲೆಯವನ್ನು ಬಿಡದಿರುವುದನ್ನು ನೋಡಿ, ನೀರಾವೇಶವನ್ನು ಹೊಂದಿ, ಪತಿಯ ಕೈಯಲ್ಲಿರುವ ಆಯುಧಗಳನ್ನು ತೆಗೆದು ತಾನು ಧರಿಸಿಕೊಂಡು, ಪತಿಸನ್ನಿಧಿಯಲ್ಲಿ ನಿಂತು, ತನ್ನ ಸೈನಿಕರನ್ನು ಕುರಿತು "ಓ ವೀರಶ್ರೇಷ್ಠರೇ! ಹೆಂಗಸರಂತೆ ಓಡಿಹೋಗುತಲಿರುವಿರೇಕೆ? ನೀವು ಶೂರರು ಎಂತಲೂ ಶತ್ರುವಿಗೆ ಬೆನ್ನುತೋರಿಸುವವರು ಅಲ್ಲವೆಂತಲೂ ಕೀರ್ತಿಯನ್ನು ಪಡೆದಿರುವಿರಿ ಅಲ್ಲವೆ? ಆ ಕೀರ್ತಿಯನ್ನು ಕಾಪಾಡಿಕೊಳ್ಳುವ ಕ್ರಮವು ಬಹು ಚನ್ನಾಗಿದೆ! ನಿಮ್ಮ ಅಧಿಪತಿಯು ಇಲ್ಲಿ ಬಿದ್ದಿರಲು, ನೀವು ಆತನನ್ನು ಶತ್ರುವಶಮಾಡಿ ಓಡಿಹೋಗುವುದು ಶೂರಲಕ್ಷಣವೇ? ನಿಮ್ಮ ಅಜ್ಜರು, ತಂದೆಗಳು ರಾಜಭಕ್ತರಾಗಿ, ತಮ್ಮ ಪ್ರಾಣಗಳನ್ನು ರಾಜನಿಗಾಗಿ ಅರ್ಪಿಸಿ, ಸ್ವರ್ಗಕ್ಕೆ

ಹೋಗಿರಲು, ನೀವು ನರಕಕ್ಕೆ ಹೋಗುವುದು ಉಚಿತವೆ? ನಿಮ್ಮ ಶತ್ರುಗಳು, ನಿಮ್ಮ ಯಜಮಾನನ, ಬಂಧುಗಳ, ಸಹಚರರ ಶವಗಳನ್ನು ನಿರ್ದಯರಾಗಿ ಪಶುಗಳನ್ನು ಎಳೆದುಹಾಕುವಂತೆ ಎಳೆದು ಕೋಟೆಯ ಕೆಳಗೆ ಬಿಸಾಡುವರೋ ಅಥವಾ ಅಂತ್ಯಜರಕೈಯಿಂದ ಒಂದು ಹಳ್ಳದಲ್ಲಿ ಹಾಕಿಸುವರೋ, ನಾಯಿನರಿ ಗಳಿಗೆ ಆಹಾರವಾಗಿ ಕೊಟ್ಟು ಮಿಕ್ಕ ಅಸ್ಥಿಮಾಂಸಗಳನ್ನು ಅರಣ್ಯದಲ್ಲಿ ಬಿಸಾಡು ವರೋ ಎಂದಾದರೂ ನಿಮಗೆ ಲಜ್ಜೆಯಿರಬೇಡವೆ? ಹಿಂದಿರಿಗಿರಿ. ನಿಮ್ಮ ಕೈಯ ಲ್ಲೇನೂ ಆಗದಿದ್ದರೆ ನನ್ನ ಮತ್ತು ನನ್ನದಾಸಿಯರ ಪರಾಕ್ರಮವನ್ನು ನೋಡುತ್ತ ನಿಂತುಕೊಳ್ಳಿರಿ" ಎಂದು ಉಚ್ಚರಿಸಿ, ಮಹಿಷಾಸುರಮರ್ದಿನಿಯ ಅವತಾರದಂತೆ ಇರುವ ಆ ವೀರಯುವತಿಯು ಅಶ್ವವನ್ನು ಏರಿದಳು. ಒಡನೆಯೇ ಆಕೆಯ ದಾಸಿಯರು ತಂತಮ್ಮ ಆಯುಧಗಳೊಡನೆ ಕುದುರೆಗಳನ್ನು ಹತ್ತಿದರು. ಇದ ನ್ನೆಲ್ಲ ನೋಡಿ ಓಡಿಹೋಗುತಲಿದ್ದ ಸೈನಿಕರು ಲಜ್ಜಿತರಾಗಿ, ಹಿಂದಿರುಗಿ ಸಾವಿತ್ರೀ ಬಾಯಿಯ ಆಜ್ಞೆಯಂತೆ ಯುದ್ಧಮಾಡಲು ಸಿದ್ಧರಾದರು.

ಸಾವಿತ್ರೀಬಾಯಿಯು ಸೈನ್ಯವನ್ನೆಲ್ಲ ಜತೆಮಾಡಿಕೊಂಡು ಕೋಟೆಯನ್ನು ಮರಳಿ ಸ್ವಾಧೀನಪಡಿಸಿಕೊಳ್ಳಲು ನಿಶ್ಚಯಿಸಿದಳು. ಈ ಸಮಾಚಾರವನ್ನು ಕೇಳಿ ದಾದೋಜಿಯು ಆಶ್ಚರ್ಯಯುತನಾಗಿ "ಸ್ತ್ರೀಯರು ಇಂತಹಸಾಹಸಮಾಡು ವುದು ಅನುಚಿತ. ನಿಮ್ಮಜೀವನಕ್ಕೆ ಶಿವಾಜಿಯವರು ಬೇಕಾದಷ್ಟುಭೂಮಿ ಯನ್ನು ಕೊಡುವರು ನೀವು ನಿಮ್ಮ ಮತ್ತು ನಿಮ್ಮ ಸೈನಿಕರ ಪ್ರಾಣಗಳನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡಿ" ಎಂದು ಹೇಳಿ ಕಳುಹಿಸಿದನು. ಈವಚನ ಗಳು ಆಶೂರ ಯುವತಿಗೆ ರುಚಿಸದಕಾರಣ "ನನ್ನ ಪ್ರಾಣಾಧಾರನಾದ ಪ್ರಾಣ ನಾಥನು ಮೊದಲೇ ಸ್ವರ್ಗಕ್ಕೆಹೋದನು. ಆದಕಾರಣ ನಾನು ನನ್ನ ಪ್ರಾಣಕ್ಕೆ ಹೆದರುವುದಿಲ್ಲ. ನನ್ನ ತೌರುಮನೆಯವರೂ, ಅತ್ತೆಮನೆಯವರೂ ಪ್ರಾಣ ಕ್ಕಿಂತಲೂ ಕರ್ತವ್ಯವನ್ನೇ ಅಧಿಕವಾಗಿ ಎಣಿಸುವವರಾಗಿದ್ದರು. ನನ್ನ ಪತಿಯು ನೆರವೇರಿಸಬೇಕು ಎಂದು ಎಣಿಸಿದಕಾರ್ಯವನ್ನು ನೆರವೇರಿಸದೆ ಪರಲೋಕಗತ ರಾದಕಾರಣ ಅದನ್ನು ನೆರವೇರಿಸುವುದು ನನ್ನ ಕರ್ತವ್ಯವಾಗಿದೆ. ನೀವು ಕೂಡಲೆ ಕೋಟೆಯನ್ನು ಸ್ವಾಧೀನಮಾಡಿ; ಇಲ್ಲದಿದ್ದರೆ ಯುದ್ಧಕ್ಕೆಸಿದ್ಧರಾಗಿ; ಈ ಎರಡು ವಾಕ್ಯಗಳಲ್ಲದೆ ಮೂರನೆಯವಾಕ್ಯಕ್ಕೆ ನಾನುಎಂದಿಗೂ ಸಮ್ಮತಿಸಲಾರೆನು." ಎಂದು ಪುನಃ ದಾದೋಜಿಗೆ ವರ್ತಮಾನವನ್ನು ಕಳುಹಿಸಿದಳು.

ಈಕೆಯಮಾತುಗಳು ದಾದೋಜಿಗೆ ಅಸಮ್ಮತಗಳಾದರೂ ವಿಧಿಯಿಲ್ಲದೆ ಯುದ್ಧಕ್ಕೆ ಬರಬೇಕಾದವನಾದನು. ಸಾವಿತ್ರಿಬಾಯಿಯು ಮೂರು ಅಥವಾ ನಾಲ್ಕುನೂರು ಸೈನಿಕರೊಡನೆ ಸಾವಿರಗಟ್ಟಿಯಾಗಿರುವ ದಾದೋಜಿಯಸೈನ್ಯ ಗಳೊಡನೆ ಯುದ್ಧಮಾಡಿ, ಅವರ ವ್ಯೂಹಗಳನ್ನು ಕೆಡಿಸಿ, ಅವರಲ್ಲಿ ಅನೇಕರನ್ನು ಹತ ಆಹತರನ್ನಾಗಿಮಾಡಿ ರಣರಂಗದಲ್ಲಿ ಎಲ್ಲಿನೋಡಿದರೂ ತಾನೇ ಕಾಣಬರುತ್ತ

ಎಲ್ಲರಿಗೂ ಭಯವನ್ನುಹುಟ್ಟಿಸುತ್ತ, ಎರಡುಜಾವಗಳು ಯುದ್ಧವನ್ನು ನಡೆಸಿ, ದಾದೋಜಿಯ ಸೈನ್ಯಗಳನ್ನು ದಿಕ್ಕುದಿಕ್ಕಿಗೆ ಓಡಿಸಿ ಕೋಟೆಯ ದ್ವಾರವನ್ನು ತೆರೆದಳು!

ಅನಂತರ ಯೇಸಾಜಿಯು ಪುನಃ ಏಳೆಂಟುಸಾವಿರ ಸೈನ್ಯಗಳನ್ನು ತಂದು ಕೋಟೆಗೆ ಮುತ್ತಿಗೆ ಹಾಕಿದನು. ಆಗಲೂ ಸಾವಿತ್ರೀಬಾಯಿಯು ಧೈರ್ಯಗೆಡದೆ ಯುದ್ಧಕ್ಕೆನಿಂತಳು. ಆದರೆ ಈಸಲ ಆಕೆಯ ಬಳಿಯಲ್ಲಿ ಸೈನಿಕರು ಬಹು ಸ್ವಲ್ಪವಾಗಿದ್ದರು. ಆಕೆಯು ತನ್ನ ಭಟರು ಧೈರ್ಯಹೀನರಾದಂತೆ ತೋರಲು, ತನ್ನ ಕಂಠದಲ್ಲಿದ್ದ ಹಾರಗಳನ್ನು ತೆಗೆದು ಅವರಿಗೆ ಬಹುಮಾನವಾಗಿ ಕೊಟ್ಟು ಉತ್ಸಾಹವನ್ನು ಉಂಟುಮಾಡಿದಳು. ಅವರು ಉತ್ಸಾಹಪೂರಿತರಾಗಿ ಯುದ್ಧವನ್ನು ಮಾಡಿ ಮಡಿಯುತಲಿದ್ದರು. ದಾದೋಜಿಯು ಇನ್ನೂ ಕೆಲವು ಸಾವಿರ ಸೈನ್ಯಗಳನ್ನುತಂದು ಸಾವಿತ್ರೀಬಾಯಿಯನ್ನು ಸುತ್ತಿಕೊಂಡು, ಆಕೆಯ ಕುದುರೆಯ ಹಿಂಗಾಲುಗಳನ್ನು ಕಡಿದನು. ಅದರಿಂದ ಆಕೆಯು ಕೂಡಲೆ ಕುದುರೆಯಿಂದ ಇಳಿದಳು. ದಾದೋಜಿಯು ಆಕೆಯ ಬಲಗೈಯನ್ನು ಕತ್ತರಿಸಲು, ಖಡ್ಗಸಹಿತ ವಾದಾಹಸ್ತವು ಕಳಚಿಬಿದ್ದಿತು. ಆಕೆಯು ಹಸ್ತವು ಹೋದುದಕ್ಕಿಂತಲೂ ಖಡ್ಗವು ಹೋದುದಕ್ಕೆ ವಿಶೇಷ ವ್ಯಥಿತಳಾದಳು!

ಅನಂತರ ದಾದೋಜಿಯು ಶಿವಾಜಿಯ ಪತಾಕವನ್ನು ಕೋಟೆಯಮೇಲೆ ನೆಡಿಸಿ, ಪಟ್ಟಣದಲ್ಲಿ ತಮ್ಮ ವಿಜಯವನ್ನು ಸಾರಿ, ಸಾವಿತ್ರೀಬಾಯಿಯನ್ನು ಕರೆದು ಕೊಂಡು ಕೋಲಾಪುರಕ್ಕೆ ಹೋದನು. ದಾದೋಜಿಯು ಅಲ್ಲಿ ಶಿವಾಜಿಯ ಬಳಿಯಲ್ಲಿ ಸಾವಿತ್ರೀಬಾಯಿಯ ಧೈರ್ಯಸ್ಥೈರ್ಯಗಳನ್ನೂ, ಯುದ್ಧವಿಶಾರದತ್ವವನ್ನೂ, ದೃಢನಿಶ್ಚಯವನ್ನೂ, ಇತರ ಸದ್ಗುಣಗಳನ್ನೂ ವರ್ಣಿಸಲು, ಶಿವಾಜಿಯು ಆಶ್ಚರ್ಯಾನ್ವಿತನಾಗಿ ಆಕೆಯನ್ನು ತನ್ನ ಸಮೀಪಕ್ಕೆ ಕರೆಯಿಸಿದನು. ಶಿವಾಜಿಗೆ ಆಕೆಯನ್ನು ನೋಡಿದೊಡನೆಯೇ ಪಶ್ಚಾತ್ತಾಪವು ಉಂಟಾಯಿತು. ಅದರಿಂದ ಆತನು ಸಾವಿತ್ರೀಬಾಯಿಗೆ ಅನೇಕ ಸಮಾಧಾನ ವಚನಗಳನ್ನು ಹೇಳಿ, ಮರಳಿ ರಾಜ್ಯವನ್ನು ಕೊಡುವೆನು ಎಂದು ಹೇಳಿದನು. ಆದರೆ ಸಾವಿತ್ರೀಬಾಯಿಯು ಆ ಮಾತುಗಳನ್ನು ಆಲೈಸದೆ " ನನಗೆ ಯಾವುದೂಬೇಡ; ನನ್ನ ವಂಶದಲ್ಲಿಲ್ಲದ ಅಪಕೀರ್ತಿಯು ನನ್ನಿಂದ ಉಂಟಾಯಿತು. ನನ್ನ ಖಡ್ಗವನ್ನೂ, ಶತ್ರುವನ್ನೂ ನನ್ನ ವಶಮಾಡಿ; ಇಲ್ಲದಿದ್ದರೆ ಈಗಲೆ ನನ್ನ ಕಂಠವನ್ನು ಕತ್ತರಿಸಿ ಪುಣ್ಯವನ್ನು ಪಡೆಯಿರಿ. " ಎಂದು ನುಡಿದಳು. ಶಿವಾಜಿಯು ಆಕೆಯು ಬೇಡಿದುದನ್ನು ಕೊಡಲಾರದೆ ಆಕೆಯನ್ನು ಮನೆಗೆ ಕಳುಹಿಸಿದನು. ಆ ವೀರಸಾಧ್ವಿಯು ತನಗೆ ಉಂಟಾದ ಅಪಜಯವನ್ನು ಸೈರಿಸಲಾರದೆ ದುಃಖದಿಂದ ಕೃಶಿಸಿ ಎರಡು ಮೂರು ತಿಂಗಳಿಗೆಲ್ಲ ಮೃತಳಾದಳು.

ವಾಕ್ಸುಷ್ಟಾ.

ಈ ಪುಣ್ಯಶೀಲೆಯು ಕಾಶ್ಮೀರಾಧಿಪತಿಯಾದ ತುಂಜೀನನ ಪತ್ನಿ. ಈತನು ಪ್ರಜೆಗಳಲ್ಲಿ ವಾತ್ಸಲ್ಯವುಳ್ಳವನಾಗಿ ಧರ್ಮದಿಂದ ಧರಣಿಯನ್ನು ಪರಿಪಾಲಿಸಿದನು. ಈತನ ಕಾಲದಲ್ಲಿಯೇ ಒಂದು ಸಮಯದಲ್ಲಿ ಕಾಶ್ಮೀರದೇಶದಲ್ಲಿ ಮಹಾಕ್ಷಾಮವು ಪ್ರಾಪ್ತವಾಯಿತು. ಕ್ಷಾಮವು ಸಂಭವಿಸಲು ಕಾರಣವು ಏನಂದರೆ ಕುಯಿಲಿಗೆ ಸಿದ್ಧವಾಗಿದ್ದ ಪೈರುಗಳಮೇಲೆ ಮಂಜು ವಿಶೇಷವಾಗಿ ಸುರಿದು ಧಾನ್ಯವನ್ನೆಲ್ಲ ಸಂಪೂರ್ಣವಾಗಿ ನಾಶಮಾಡಿತು. ಇದರಿಂದ ಪ್ರಜೆಗಳು ಅನ್ನಾತುರರಾಗಿ ತಿರುಗಾಡಲಾರಂಭಿಸಿದರು. ರಾಜದಂಪತಿಗಳು ಪ್ರಜೆಗಳ ಸಂಕಟವನ್ನು ನೋಡಿ ಧನಾಗಾರದಲ್ಲಿರುವ ದ್ರವ್ಯದಿಂದ ಧಾನ್ಯವನ್ನು ತರಿಸಿ ಪ್ರಜೆಗಳಿಗೆ ಅನ್ನವನ್ನು ಇಡಿಸುತಲಿದ್ದರು. ಪ್ರಜೆಗಳು ಸಂತುಷ್ಟರಾದರು. ಕೆಲವು ದಿವಸಗಳಿಗೆ ಭಂಡಾರವು ಬರಿದಾಯಿತು. ರಾಜನು ಮಂತ್ರಿಯ ಸಹಾಯದಿಂದ ಕೆಲವು ದಿವಸಗಳು ಪ್ರಜೆಗಳನ್ನು ಪೋಷಿಸಿದನು. ವಾಕ್ಸುಷ್ಟೆಯು ತನ್ನ ಆಭರಣಗಳನ್ನೆಲ್ಲ ವಿಕ್ರಯಿಸಿ ಧಾನ್ಯವನ್ನು ತರಿಸಿದಳು. ಆ ಸ್ವಲ್ಪ ದ್ರವ್ಯದಿಂದ ತರಿಸಿದ ಧಾನ್ಯವು ಎಷ್ಟು ದಿವಸಗಳಿಗೆ ಸಾಕಾಗುವುದು? ಅದೂ ಮುಗಿದುಹೋಯಿತು.

ಅಂದಿನಿಂದ ಕ್ಷಾಮದೊಡನೆ ಅನೇಕವ್ಯಾಧಿಗಳು ತಲೆದೋರಿದವು. ಜನನೀ ಜನಕರು ತಮ್ಮ ಮಕ್ಕಳಮೇಲೆ ನಿರ್ದಯರಾದರು. ಭಾರ್ಯಾಭರ್ತರು, ಪರಸ್ಪರ ಇರಬೇಕಾದ ಪವಿತ್ರವಾದ ದಾಂಪತ್ಯ ಪ್ರೇಮವನ್ನು ತ್ಯಜಿಸಿದರು. ಸೋದರ ಪ್ರೇಮವು ರೂಪವಿಲ್ಲದೆ ಹೋಯಿತು. ಆಹಾರಕ್ಕಾಗಿ ಎಲ್ಲರೂ ಮನಸ್ಸು ಬಂದಂತೆ ತಿರುಗಾಡುತಲಿದ್ದರು. ಅನ್ನಾಭಾವದಿಂದ ಅನೇಕರು ಮೃತರಾದರು. ವೃದ್ಧರು, ಬಾಲರು, ತರುಣರು ಎಂಬ ಬೇಧವಿಲ್ಲದೆ ಎಲ್ಲರೂ ಕೃತಾಂತನಿಗೆ ಗ್ರಾಸವಾದರು. ಕಳೆದುಳಿದವರು ನೋಡುವುದಕ್ಕೆ ಅತಿವಿಕಾರರೂಪಿಗಳಾಗಿ ಭಯವನ್ನು ಹುಟ್ಟಿಸುತಲಿದ್ದರು. ಆ ಸಮಯದಲ್ಲಿ ಕಾಶ್ಮೀರದೇಶವು ದಂಡಧರಪುರದಂತೆ ತೋರುತಲಿತ್ತು. ಒಂದುದಿವಸರಾತ್ರಿ ಪುರಜನರು ಅನ್ನಕ್ಕಾಗಿ ರಾಜಗೃಹವನ್ನು ಮುತ್ತಿಕೊಂಡು ಆಕ್ರಂದನ ಮಾಡಲಾರಂಭಿಸಿದರು. ಕ್ಷಾಮದಿಂದಲೂ, ರೋಗದಿಂದಲೂ ಪೀಡಿತರಾದ ಆ ದೀನರ ಅವಸ್ಥೆಯನ್ನು ನೋಡಿ ವಾಕ್ಸುಷ್ಟೆಯು ಚಿಂತಾಕ್ರಾಂತಳಾಗಿ ನಿವಾರಣೋಪಾಯವನ್ನು ಅರಿಯದೆ, ಪತಿಯ ಭುಜದಮೇಲೆ ತಲೆಯನ್ನು ಇಟ್ಟುಕೊಂಡು ದೈವವನ್ನು ಪ್ರಾರ್ಥಿಸುತಲಿದ್ದಳು. ತುಂಜೀನನು ವ್ಯಾಕುಲ ಚಿತ್ತದೊಡನೆ ಪತ್ನಿಯನ್ನು ಕುರಿತು ಕಾಂತಾಮಣೀ! ನಾವುಮಾಡಿದ ಪಾಪದ

ದೆಸೆಯಿಂದ ನಮ್ಮ ಪ್ರಜೆಗಳಿಗೆ ಇಂತಹ ದುರ್ದೆಶೆಯು ಉಂಟಾಯಿತು. ಪ್ರಜೆಗಳ ಹಸಿವನ್ನು ನಿವಾರಣೆ ಮಾಡಲು ನಾವು ಮಾಡಿದ ಪ್ರಯತ್ನಗಳೆಲ್ಲವು ನಿಷ್ಫಲವಾದವು. ಮಕ್ಕಳಂತೆ ಸಲಹಿದ ಪ್ರಜೆಗಳು ನಾಶವಾದರು. ಇನ್ನೂ ನಾಶವಾಗುತಲಿದಾರೆ. ರಾಜ್ಯದಲ್ಲಿ ಎಲ್ಲಿನೋಡಿದರೂ ಪತಿಗಳಿಗಾಗಿ ದುಃಖಿಸುವ ಸತಿಯರೂ, ಪುತ್ರರಿಗಾಗಿ ಶೋಕಿಸುತಲಿರುವ ಜನನೀಜನಕರೂ, ಅನ್ನಕ್ಕಾಗಿ ತಪಿಸುವ ಜನರೂ ಅಸಂಖ್ಯವಾಗಿ ಕಾಣಬರುತಲಿದಾರೆ. ಪ್ರಪಂಚದಲ್ಲಿ ಇದಕ್ಕಿಂತಲು ದುಃಖಕರವಾದ ಸಮಯವು ಸಂಭವಿಸುವುದೇ? ರತ್ನಗಳಿಂದಲೂ, ಸುವರ್ಣರಜಿತಾದಿ ದ್ರವ್ಯಗಳಿಂದಲೂ, ಧಾನ್ಯ ಸಮೃದ್ಧಿಯಿಂದಲೂ ಒಪ್ಪಿ ಸುಂದರವಾಗಿ ಕಾಣಿಸುತಲಿದ್ದ ಕಾಶ್ಮೀರದೇಶವು ಈ ದಿವಸ ಶ್ಮಶಾನತುಲ್ಯವಾಗಿ ಕಾಣಿಸುತಲಿದೆ. ನಾಲ್ಕುಕಡೆಯಲ್ಲಿಯೂ ಸುತ್ತಿಕೊಂಡಿರುವ ವಿಪತ್ಸಮುದ್ರದಲ್ಲಿ ಬಿದ್ದಿರುವ ಈ ದೀನರಿಗೆ ತರಣೋಪಾಯವು ಯಾವುದು? ಈ ದುಸ್ಸಹವಾದ ಪ್ರಜಾದುಃಖವನ್ನು ನಾನು ನೋಡಲಾರೆನು. ಆದಕಾರಣ ಅಗ್ನಿಗುಂಡದಲ್ಲಿ ಬಿದ್ದು ಪ್ರಾಣಪರಿತ್ಯಾಗವನ್ನು ಮಾಡಿ ನನ್ನ ಖೇದವನ್ನು ಹೋಗಲಾಡಿಸಿಕೊಳ್ಳುವೆನು. ತನ್ನ ಪ್ರಜೆಗಳು ರಾತ್ರಿ ಸುಖವಾಗಿ ನಿದ್ರಿಸುವುದನ್ನು ನೋಡುವ ರಾಜನು ಎಷ್ಟು ಪುಣ್ಯಶಾಲಿಯೋ? ಪ್ರಾಣೇಶ್ವರೀ ನಮಗೆ ಇಂತಹ ದುರವಸ್ಥೆಯು ಉಂಟಾಗಲು ನಾವು ಮಾಡಿದ ಘೋರಪಾತಕವು ಎಂತಹುದುದೋ ಎಂದುಸುರಿ ಮೂರ್ಛಿತನಾದನು.

ಪತಿಯ ವಾಕ್ಯಗಳನ್ನು ಆಲೈಸುತಲಿದ್ದ ವಾಕ್ಪುಷ್ಪೆಯು ತನ್ನ ಪತಿಯ ಸ್ಥಿತಿಯನ್ನು ನೋಡಿ ಶೈತ್ಯೋಪಚಾರಗಳಿಂದ ಆತನಿಗೆ ಎಚ್ಚರಿಕೆಯನ್ನು ಉಂಟು ಮಾಡಿ "ತಾವು ಇಷ್ಟು ವ್ಯಸನಪಡುವುದು ಅನುಚಿತವಾದುದು. ಇಂತಹ ಸಮಯದಲ್ಲಿ ಅಧೈರ್ಯವನ್ನು ತೋರಿದರೆ ತಮ್ಮ ಗೌರವವು ನಿಲ್ಲುವುದೇ? ಅಜ್ಞಾನಿಗಳಂತೆ ಅಧೈರ್ಯವನ್ನು ವಹಿಸಿದರೆ ಲಾಭವೇನು? ಇಂದ್ರನಾಗಲಿ, ಯಮನಾಗಲಿ, ಬ್ರಹ್ಮನಾಗಲಿ ಸತ್ಯಶೀಲನಾದ ರಾಜನನ್ನು ಕೆಡಿಸಲಾರರು. ರಾಜನು ಪ್ರಜೆಗಳಿಗೆ ಪಿತೃಸಮಾನನು. ಸಾಯಲು ಸಿದ್ಧರಾಗಿರುವ ಪುತ್ರರನ್ನು ಬಿಟ್ಟುಹೋಗುವುದು ತಂದೆಗೆ ಧರ್ಮವಲ್ಲ. ಸತಿಯು ಪತಿಯಲ್ಲಿ ಭಕ್ತಿಯುತಳಾಗಿರುವುದು ಹೇಗೆ ಕರ್ತವ್ಯವಾದುದೋ ಹಾಗೆಯೇ ಪ್ರಜೆಗಳನ್ನು ಸರ್ವಕಾಲಗಳಲ್ಲಿಯೂ ಪ್ರೇಮದಿಂದ ನೋಡಿಕೊಳ್ಳುವುದು ರಾಜನ ಕರ್ತವ್ಯ. ಆತ್ಮಹತ್ಯೆಯು ಪಂಚಮಹಾಪಾತಕಗಳಲ್ಲಿ ಒಂದು ಎಂದು ದೊಡ್ಡವರು ಹೇಳುತ್ತಾರೆ. ಅಂತಹ ಪಾತಕವನ್ನು ಮಾಡಲು ಪ್ರಯತ್ನಿಸಲೇಕೆ? ಆಶಾಂಕುರವನ್ನು ಎಂದಿಗೂ ನಾಶಪಡಿಸಕೂಡದು. ನಾವು ಉಳಿಸುವುದಕ್ಕೂ ನಮ್ಮನ್ನು ಆಶ್ರಯಿಸುವುದಕ್ಕೂ ಒಂದು ಪ್ರಾಣಿಯು ಸಹ ಇಲ್ಲದಿರುವಾಗ ನಾವು ಪ್ರಾಣತ್ಯಾಗವನ್ನು ಮಾಡೋಣ" ಎಂದು ನುಡಿದಳು.

ಈ ವಾಕ್ಯಗಳನ್ನು ಉಚ್ಚರಿಸುವಾಗ ವಾಕ್ಪುಷ್ಟೆಯ ಶರೀರದಲ್ಲೊಂದು ಕಾಂತಿಯು ಉಂಟಾಯಿತು. ಆಗ ಆಕೆಯು ಪರಮೇಶ್ವರನನ್ನು ಏಕಾಗ್ರಚಿತ್ತ ದಿಂದ ಭಜಿಸಿ, ಪತಿಯೊಡನೆ "ಏಳಿ, ತಾವು ಇನ್ನು ಚಿಂತಿಸಬೇಡಿ ನಮ್ಮ ಪ್ರಜೆ ಗಳು ಕ್ಷಾಮದಿಂದ ರಕ್ಷಿಸಲ್ಪಡುವರು" ಎಂದಳು.

ಪರಮಪತಿವ್ರತೆಯ ವಾಕ್ಯಗಳು ಎಂದಿಗೂ ಸುಳ್ಳಾಗಲಾರದು. ಪವಿತ್ರ ಳಾದ ವಾಕ್ಪುಷ್ಟೆಯ ಮಾತುಗಳು ಸತ್ಯವಾದವು. ಮಾರನೆಯದಿವಸ ಸಾವಿರಗಟ್ಟಿ ಕಪೋತಗಳು ಆ ಪುರದೊಳಗೆ ಸತ್ತು ಬಿದ್ದುವು. ಪ್ರಜೆಗಳು ಅವುಗಳನ್ನೇ ತಿಂದು ಬದುಕಿದರು. ಇತಿಹಾಸಜ್ಞರಾದವರು ಸ್ಕಾಟ್‌ಲಂಡ್ ಚರಿತ್ರೆಯಲ್ಲಿ ಇಂತಹ ಅದ್ಭುತವು ನಡೆದುದನ್ನು ಅರಿತಿರಬಹುದು. ಆದುದರಿಂದ ಅವರಿಗೆ ಇದು ಅಸಂಭವವಾದುದು ಎಂದು ತೋರಲಾರದು. ತುಂಜೀನನು ತನ್ನಭಾರ್ಯೆಯಲ್ಲಿ ಇಂತಹ ಅಸಾಮಾನ್ಯಗುಣವಿರುವುದನ್ನು ಕಂಡು ಆತ್ಮಹತ್ಯೆಯ ಪ್ರಯತ್ನವನ್ನು ಬಿಟ್ಟನು. ಕಾಶ್ಮೀರವಾಸಿಗಳು ಸುಸ್ಥಿರರಾದರು. ವಾಕ್ಪುಷ್ಟೆಯ ಪುಣ್ಯಚರಿತೆ ಯಿಂದ ಅನತಿಕಾಲದಲ್ಲಿಯೇ ಕಾಶ್ಮೀರದೇಶವು ಧನಧಾನ್ಯಸಮೃದ್ಧವಾಗಿ ಪ್ರಜೆ ಗಳು ಸುಖಸಂಪತ್ತುಗಳನ್ನು ಹೊಂದಿದರು.

ತುಂಜೀನನು ರಾಜ್ಯಭೋಗಗಳನ್ನು ಅಲ್ಪಕಾಲಮಾತ್ರವೇ ಅನುಭವಿಸಿ, ತನ್ನ ಮುವ್ವತ್ತಾರನೆಯ ವರ್ಷದಲ್ಲಿ ಮೃತನಾದನು. ವಾಕ್ಪುಷ್ಟೆಯು ಸಹಗಮನ ವನ್ನು ಮಾಡಿದಳು.

ರಾಣಿಮಿಸ್ಯವರು.

——:o:——

ಈಕೆಯು ಪಂಜಾಬುದೇಶಕ್ಕೆ ಸೇರಿದ ಪಟಿಯಾಲ ಸಂಸ್ಥಾನವನ್ನು ಪಾಲಿಸಿದ ರಾಜಾಸಾಹೇಬ್ ಸಿಂಹನ ಪತ್ನಿ. ಈತನು ೧೮ ನೆ ಶತಾಬ್ದಾಂತ್ಯ ದಲ್ಲಿಯೂ, ೧೯ ನೆಯ ಶತಾಬ್ದಾದಿಯಲ್ಲಿಯೂ ರಾಜ್ಯವನ್ನು ಪಾಲಿಸುತಲಿದ್ದನು. ಈತನು ವಿಚಾರಶೂನ್ಯನೂ, ರಾಜ್ಯಪಾಲನಾಶಕ್ತಿಹೀನನೂ, ದುಸ್ಸಹವಾಸವುಳ್ಳ ವನೂ ಆಗಿದ್ದುದರಿಂದ ಕ್ರಮಕ್ರಮವಾಗಿ ರಾಜ್ಯವು ಅತ್ಯಂತ ಹೀನಸ್ಥಿತಿಗೆ ಬರ ಲಾರಂಭಿಸಿತು. ರೈತರು ಕಂದಾಯವನ್ನು ತೆರತ್ತಿರಲಿಲ್ಲ. ನೌಕರರು ತಮ್ಮ ಮೇಲಿನ ಅಧಿಕಾರಿಗಳ ಮಾತನ್ನು ಕೇಳುತ್ತಿರಲಿಲ್ಲ. ರಾಜ್ಯದ ದುರವಸ್ಥೆಯನ್ನು ನೋಡಿ ರಾಜನು ತಾನು ಅದನ್ನು ಸರಿಮಾಡಲಾರೆನು ಎಂದು ತಿಳಿದು, ತನ್ನ

ವಿಮಾತೆಯಾದ ಖೇಮ್‌ಕುವರ್ ಎಂಬ ಆಕೆಯನ್ನು ತನಗಾಗಿ ರಾಜ್ಯವನ್ನು ಆಳಲು ನಿಯಮಿಸಬೇಕು ಎಂದು ಎಣಿಸಿದನು. ಆದರೆ ಆಕೆಯು ರಾಜನಿಗೆ ವಿಮಾತೆಯಾದುದರಿಂದ, ಆಕೆಯ ಕೈಗೆ ರಾಜ್ಯವನ್ನು ಒಪ್ಪಿಸಿದರೆ ರಾಜನಿಗೂ, ಯುವರಾಜನಿಗೂ ಮಂಗಳವು ಉಂಟಾಗಲಾರದು ಎಂದು ಊಹಿಸಿ, ಸಾಮಂತ ರಾಜರೂ, ಬ್ರಿಟಿಷಿನವರೂ ರಾಜ್ಯವನ್ನು ಆತನ ಪತ್ನಿಗೆ ಕೊಡಲು ನಿಶ್ಚಯಿಸಿದರು. ಬ್ರಿಟಿಷರ ಏಜಂಟನು ಸಮಯವು ದೊರೆತಾಗ ರಾಣಿಗೆ ರಾಜ್ಯವನ್ನು ಒಪ್ಪಿಸು ವಂತೆ ಅನುಜ್ಞೆಯನ್ನು ಪಡೆದಿದ್ದನು. ರಾಜನ ಸಹಚರರಾದ ದುಷ್ಟರು ಈ ವಿಷಯಗಳನ್ನೆಲ್ಲ ಕೇಳಿ ಸುಗುಣಮಣಿಯಾದ ರಾಣಿಯ ಕೈಗೆ ರಾಜ್ಯವು ದೊರೆತರೆ ತಮ್ಮ ದುರ್ನಡತೆಗಳಿಗೆ ಅವಕಾಶವು ಇರುವುದಿಲ್ಲವೆಂದು ಅರಿತು ಆಕೆಯ ಮೇಲೆ ರಾಜನೊಡನೆ ಅನೇಕ ದೂರುಗಳನ್ನು ಹೇಳಿ ಅವರಿಬ್ಬರಿಗೂ ದ್ವೇಷ ವನ್ನು ಉಂಟುಮಾಡಿದರು. ಅನಂತರ ಏಜಂಟನು ಪಟಯಾಲಕ್ಕೆ ಬಂದು ಸಂಸ್ಥಾನಕ್ಕೆ ಉಂಟಾಗುತಲಿರುವ ನಷ್ಟಗಳನ್ನೆಲ್ಲ ಬೋಧಿಸಿ ರಾಜ್ಯವನ್ನು ರಾಣಿಯ ಸ್ವಾಧೀನಮಾಡಿದನು. ಈಕೆಯು ರಾಜ್ಯಪಾಲನೆಯನ್ನು ಕೈಗೊಂಡೊಡ ನೆಯೇ ರಾಜ್ಯವು ಸ್ವಸ್ಥತೆಯನ್ನು ಹೊಂದಿತು. ಆಕೆಯು ಬುದ್ಧಿವಂತನೂ, ಪ್ರಾಮಾಣಿಕನೂ ಆದ ಒಬ್ಬನನ್ನು ಮಂತ್ರಿಯಾಗಿ ನಿಯಮಿಸಿಕೊಂಡಳು. ಅನೇಕ ವರ್ಷಗಳಿಂದ ಕಂದಾಯವು ಬರದೇಇದ್ದ ಗ್ರಾಮಗಳಿಂದ ಪೂರ್ವದ ಬಾಕಿಯನ್ನೆಲ್ಲ ವಸೂಲು ಮಾಡಿದಳು. ಸಾಮಂತರು ಕೊಡಬೇಕಾಗಿದ್ದ ಧನವನ್ನೂ ಸೈನ್ಯವನ್ನೂ ಸ್ನೇಹದೊಡನೆ ಬರಮಾಡಿಕೊಂಡಳು. ರಾಜನ ಕಾಲ ದಲ್ಲಿ ಒಂದುನೂರು ಸೈನ್ಯವು ಬೇಕಾಗಿದ್ದರೂ ಸಿದ್ಧವಾಗುತಲಿರಲಿಲ್ಲ. ರಾಣಿಯು ಎರಡುಸಾವಿರ ಪದಾತಿಗಳನ್ನೂ ಎರಡುಸಾವಿರ ಅಶ್ವಿಕರನ್ನೂ ಸಿದ್ಧಪಡಿಸಿದಳು. ಕೆಲವು ದಿವಸಗಳಲ್ಲಿಯೇ ಸಂಸ್ಥಾನದ ಋಣವೆಲ್ಲವೂ ತೀರಿ ಬೊಕ್ಕಸದಲ್ಲಿ ಒಂದು ಲಕ್ಷ ರೂಪಾಯಿಗಳು ಸೇರಿದವು. ನೌಕರರು ತಂತಮ್ಮ ಕಾರ್ಯಗಳನ್ನು ಜಾಗರೂಕತೆಯಿಂದ ನಿರ್ವಹಿಸುತ್ತ ರಾಜಭಕ್ತಿಯುತರಾಗಿದ್ದರು. ಪ್ರಜೆಗಳೂ, ರೈತರೂ ಸಂತುಷ್ಟರಾದರು.

ಆದರೆ ದುಷ್ಟರಾದ ರಾಜನ ಸ್ನೇಹಿತರಿಗೆ ಈಕೆಯ ಪಾಲನೆಯು ಅತ್ಯಂತ ದುಃಖಕರವಾಗಿತ್ತು; ಅವರಲ್ಲಿ ಮುಖ್ಯರಾದ ಆಲ್ಬಲ್‌ಸಿಂಗ್, ಗುರ್ಜರಸಿಂಗ್ ಎಂಬ ಇಬ್ಬರು ರಾಜನೊಡನೆ 'ರಾಣಿಯು ನಿನ್ನನ್ನು ವಿಷಪ್ರಯೋಗದಿಂದ ಕೊಲ್ಲಲು ನಿಶ್ಚಯಿಸಿರುವಳು' ಎಂದು ರಾಜನ ಮನಸ್ಸಿಗೆ ಹಿಡಿಯುವಂತೆ ಬೋಧಿಸಿದರು. ಅವರಿಗೆ ರಾಣಿಯೊಡನೆ ಇಷ್ಟು ವೈರವು ಉಂಟಾಗಲು ಕಾರಣ ವೇನಂದರೆ, ಆಲ್ಬಲ್‌ಸಿಂಗನು ರಾಜನಲ್ಲಿ ಸ್ವಲ್ಪ ಭೂಮಿಯನ್ನು ಕೌಲಿಗೆ ತೆಗೆದುಕೊಂಡು ವರ್ಷ ೧ಕ್ಕೆ ಏಳು ಸಾವಿರ ರೂಪಾಯಿಗಳನ್ನೂ, ಸ್ವಲ್ಪ ಸೈನ್ಯ ವನ್ನೂ ಕೊಡುವಂತೆ ಏರ್ಪಾಟುಮಾಡಿಕೊಂಡನು. ಆದರೆ ರಾಣಿಯು ಆ

ಭೂಮಿಗೆ ೧೪ ಸಾವಿರ ರೂಪಾಯಿಗಳನ್ನು ಕೇಳಿದಳು. ಆತನು ನಿರಾಕರಿಸಿದುದರಿಂದ ರಾಣಿಯು ಆ ಭೂಮಿಯನ್ನು ಬೇರೆ ಒಬ್ಬರಿಗೆ ಕೊಟ್ಟು ೧೪ ಸಾವಿರ ರೂಪಾಯಿಗಳನ್ನು ಬರಮಾಡಿಕೊಳ್ಳುತ್ತಲಿದ್ದಳು. ಗುರ್ಜರಸಿಂಗನು ಸಹ ಹಾಗೆಯೇ ಸ್ವಲ್ಪ ಭೂಮಿಯನ್ನು ಕೌಲಿಗೆ ತೆಗೆದುಕೊಂಡು ಸ್ವಲ್ಪವಾದ ತೆರಿಗೆಯನ್ನು ಕೊಡುತ್ತಲಿದ್ದುದರಿಂದ ರಾಣಿಯು ಅದನ್ನು ಬೇರೆ ಒಬ್ಬರಿಗೆ ಕೊಟ್ಟು ತಕ್ಕ ದ್ರವ್ಯವನ್ನು ಬರಮಾಡುತಲಿದ್ದಳು. ರಾಜನು ಸ್ವಲ್ಪ ಮತಿಭ್ರಮೆಯುಳ್ಳವನಾದಕಾರಣ ಅವರಮಾತುಗಳನ್ನು ನಂಬಿ, ಆಗ್ರಹವಶನಾಗಿ ರಾಣಿಯನ್ನು, ಆಕೆಯ ಪುತ್ರನಾದ ಯುವರಾಜನನ್ನು, ಸತ್ಯನಿರತನಾದ ಮಂತ್ರಿಯನ್ನು ಕಾರಾಗೃಹದಲ್ಲಿ ಇಟ್ಟನು. ಆದರೆ ಆತನು ಧೈರ್ಯಹೀನನಾದುದರಿಂದ ತಾನು ಮಾಡಿದ ಕಾರ್ಯದಿಂದ ಯಾವುದಾದರೂ ವಿಪತ್ತು ಉಂಟಾಗುವುದೇನೋ ಎಂದು ಹೆದರುತಲಿದ್ದನು. ರಾಜ್ಯವು ಮರಳಿ ದುಸ್ಥಿತಿಗೆ ಬಂದಿತು. ಸೈನಿಕರು ಮನಬಂದ ಕಡೆಗೆ ಹೊರಟುಹೋದರು. ಆದಕ್ಕೆ ರಾಜನು ಚಿಂತಿಸಿ, ಪತ್ನಿಯನ್ನೂ, ಪುತ್ರನನ್ನೂ, ಮಂತ್ರಿಯನ್ನೂ ಸೆರೆಯಿಂದ ಬಿಡಿಸಿ, ರಾಜ್ಯವನ್ನು ಕ್ರಮಕ್ಕೆ ತರಬೇಕು ಎಂದು ಬೇಡಿಕೊಂಡನು. ಆಕೆಯು ತನ್ನನ್ನು ಪುನಃ ಸೆರೆಯಲ್ಲಿ ಇಡಿಸದಂತೆ ಭದ್ರವನ್ನು ಮಾಡಬೇಕೆಂತಲೂ ಅಡಿಗಡಿಗೆ ತನ್ನನ್ನು ಸೆರೆಯಲ್ಲಿಡಿಸುತಲಿದ್ದರೆ ಪ್ರಜೆಗಳು ತನಗೆ ಮನ್ನಣೆಯನ್ನು ಮಾಡಲಾರರು ಎಂತಲೂ ಅದಕ್ಕಾಗಿ ಯಾರನ್ನಾದರೂ ಹೊಣೆಯಾಗಿ ಇಡಬೇಕು ಎಂತಲೂ ತಿಳಿಸಿ, ಏಜಂಟನನ್ನು ಕರೆಯಿಸಿದಳು ಏಜಂಟನ ಬರುವಿಕೆಯಿಂದ ರಾಜನು ಪುನಃ ಕ್ರೋಧ ಉಳ್ಳವನಾದನು. ಏಜಂಟನು ಹೇಗೋ ರಾಣಿಗೆ ರಾಜ್ಯವನ್ನು ಒಪ್ಪಿಸಿ ಹೊರಟುಹೋದನು. ಈಸಲ ರಾಜ್ಯವು ಹೆಸರಿಗೆ ಮಾತ್ರ ರಾಣಿಯದಾಗಿದ್ದಿತು. ಆಕೆಯ ಅಧಿಕಾರವನ್ನು ಯಾರೂ ಒಪ್ಪಿಕೊಳ್ಳುತಲಿರಲಿಲ್ಲ. ಕೊನೆಗೆ ಆಕೆಯ ಪ್ರಾಣಕ್ಕೇ ಹಾನಿಯು ಉಂಟಾಗುವಂತೆ ತೋರಿತು. ರಾಜ್ಯದಲ್ಲಿರುವ ದುಷ್ಟರೆಲ್ಲರು ರಾಣಿಗೆ ಶತ್ರುಗಳಾದರು. ರಾಜನೇ ಸ್ವಲ್ಪ ಸೈನ್ಯದೊಡನೆ ರಾಣಿಯನ್ನು ಕೊಲ್ಲಲು ಪ್ರಯತ್ನಿಸಿದನು. ಆಕೆಯ ದರ್ಬಾರಿಗೆ ಯಾರೂ ಬರುತಲಿರಲಿಲ್ಲ. ಕೊನೆಗೆ ರಾಣಿಯು ಈ ವಿಷಯಗಳನ್ನೆಲ್ಲ ಏಜಂಟನಿಗೆ ತಿಳಿಸಲು, ಆತನು ಸ್ವಲ್ಪ ಸೇನೆಯೊಡನೆ ಬಂದು ಬಹು ಪ್ರಯತ್ನದೊಡನೆ, ಸರ್ವಾಧಿಕಾರವನ್ನು ರಾಣಿಗೆ ಕೊಟ್ಟು ರಾಜನ ಕೈಯಲ್ಲಿರುವ ಗುರುಮುಖಿಯೆಂಬ ರಾಜಮುದ್ರೆಯನ್ನು ಕೊಡಿಸಿ, ರಾಜನಿಗೆ ಸ್ವಲ್ಪ ಭೂಮಿಯನ್ನೂ, ಮಾಸಾಶನವನ್ನೂ ಏರ್ಪಡಿಸಿದನು. ರಾಣಿಯು ಸರ್ವಾಧಿಕಾರಿಣಿಯಾದರೂ ಪತಿಯ ಅನುಮತಿಯಿಲ್ಲದೆ ಯಾವಕಾರ್ಯವನ್ನೂ ಮಾಡುತಲಿರಲಿಲ್ಲ. ಈ ಸ್ವಾತಂತ್ರ್ಯದಿಂದ ಆ ಭ್ರಮಿಷ್ಟನಿಗೆ ನಷ್ಟವೇ ಉಂಟಾಯಿತು. ಆತನು ತನ್ನ ಅನಂತರ ಪುತ್ರನಿಗೆ ಏನೂ ಇಲ್ಲದಂತೆ ಮಾಡುವೆನು ಎಂದು ಹೇಳಿ ದ್ರವ್ಯವನ್ನೆಲ್ಲ ಮನಸ್ಸಿಗೆ

ತೋರಿದಂತೆ ವೆಚ್ಚಮಾಡಲಾರಂಭಿಸಿದನು. ಇದರಿಂದ ಆತನ ಸ್ವಂತ ದ್ರವ್ಯವನ್ನು ಸಹ ಧನಾಗಾರದಲ್ಲಿ ರಕ್ಷಿಸಬೇಕಾಯಿತು. ೧೪೧೩ನೆಯ ವರ್ಷದಲ್ಲಿ ಈತನು ಕಾಲಗತಿಯನ್ನೈದಿದನು.

ಅನಂತರ ಆತನ ಪುತ್ರನಾದ ಕರಮ್‌ಸಿಂಹನು ಸಿಂಹಾಸನಾರೂಢನಾದನು. ಈತನು ಬಾಲಕನಾದುದರಿಂದ, ಆತನ ಹೆಸರಿನಲ್ಲಿ ರಾಣಿಯು ಕೆಲವುಕಾಲ ರಾಜ್ಯವನ್ನು ಆಳಿದಳು. ಕರಮ್‌ಸಿಂಹನು ದೊಡ್ಡವನಾದಮೇಲೆ ರಾಜ್ಯವನ್ನು ಪಾಲಿಸುವೆನು ಎಂದು ತಾಯಿಯನ್ನು ಕೇಳಿದನು. ಔಸ್ಕುವರು ಇದಕ್ಕೆ ಸಮ್ಮತಿಸದೆ ಪುತ್ರನೊಡನೆ ಕಲಹಿಸಿದಳು. ಕರಮ್‌ಸಿಂಹನು ತಾಯಿಗೆ ಸ್ವಲ್ಪ ಧನವನ್ನು ಕೊಟ್ಟು ಸಮಾಧಾನಗೊಳಿಸಿ, ಆಕೆಯನ್ನು ಬೇರೊಂದುಸ್ಥಳಕ್ಕೆ ಕಳುಹಿಸಿದನು. ಇಲ್ಲಿಗೆ ಈಕೆಯ ರಾಜ್ಯಪಾಲನಾಚರಿತ್ರೆಯು ಮುಗಿಯಿತು. ಈ ರಾಣಿಯು ಸ್ವಲ್ಪ ಮಹತ್ವಾಂಕ್ಷೆಯುಳ್ಳವಳಾದರೂ ಅದು ಸಾಮರ್ಥ್ಯವಂತರಿಗೆ ಸಹಜವಾದುದರಿಂದ, ಆ ಗುಣವನ್ನು ದೋಷವಾಗಿ ಎಣಿಸಬಾರದು. ಈಕೆಯಲ್ಲಿ ವಾಸಮಾಡುತಲಿದ್ದ ಧರ್ಮ, ನೀತಿ, ಸತ್ಯ, ಸ್ವಾಭಿಮಾನ, ಪರಹಿತೇಚ್ಛೆ ಮೊದಲಾದವು ಶ್ಲಾಘನೀಯವಾದವುಗಳು.

ಈ ಚರಿತ್ರೆಯಿಂದಲೂ, ಇದಕ್ಕೆ ಪೂರ್ವದಲ್ಲಿ ಬರೆದಿರುವ ರಾಣಿಯರ ಚರಿತ್ರೆಗಳಿಂದಲೂ, ಮುಂದೆಬರೆಯುವ ಚರಿತ್ರೆಗಳಿಂದಲೂ, ಸ್ತ್ರೀಯರು ರಾಜ್ಯಪಾಲನೆಯಲ್ಲಿ ಸಮರ್ಥರೆಂತಲೂ, ಅನೇಕ ಸಮಯಗಳಲ್ಲಿ ಪುರುಷರು ತಮ್ಮ ಬುದ್ಧಿಹೀನತೆಯಿಂದ ಹಾಳುಮಾಡಿದ ಕೆಲವು ಸಂಸ್ಥಾನಗಳನ್ನು ಅವರು ಸುಸ್ಥಿತಿಗೆ ತಂದರೆಂತಲೂ ತಿಳಿಯಬರುತ್ತದೆ. ಈ ವಿಷಯವನ್ನುಕುರಿತು ಕಳೆದ ಶತಾಬ್ದದಲ್ಲಿ ಇಂಡಿಯಾದೇಶದಲ್ಲಿ ವಾಸಮಾಡಿದ ಇಂಗ್ಲೆಂಡಿನ ಒಬ್ಬ ತತ್ವಶಾಸ್ತ್ರಜ್ಞನು ಈ ಪ್ರಕಾರವಾಗಿ ನುಡಿದಿರುವನು:—

"ಈ ವಿಷಯವನ್ನುಕುರಿತು ವಿಚಾರಮಾಡಿದರೆ ಏಷ್ಯಾಖಂಡದಲ್ಲಿಯೂ ಯೂರೋಪ್‌ಖಂಡದಲ್ಲಿಯೂ ರಾಜ್ಯವನ್ನು ನಿಪುಣತೆಯಿಂದ ಪರಿಪಾಲಿಸಿದವರಲ್ಲಿ ಸ್ತ್ರೀಯರ ಸಂಖ್ಯೆಯೇ ಹೆಚ್ಚಾಗಿದೆ. ಹಿಂದೂಸ್ಥಾನದಲ್ಲಿ ಯಾವುದಾದರೂ ಒಂದು ರಾಜ್ಯವು ಸುವ್ಯವಸ್ಥೆಯನ್ನುಳ್ಳದ್ದಾಗಿಯೂ, ಮಿತವ್ಯಯದಿಂದಕೂಡಿ ನಿಯಮಾನುಸಾರವಾಗಿ ನಡೆಯುತ್ತಲಿದೆ ಎಂತಲೂ ರೈತರಿಗೆ ಅನ್ಯಾಯವುಂಟಾಗದೆ, ಸಂಸ್ಥಾನಕ್ಕೆ ಆದಾಯವು ದಿನೆದಿನೇ ಹೆಚ್ಚುತಲಿದೆ ಎಂತಲೂ ಪ್ರಜೆಗಳು ಸುಖಿಗಳಾಗಿರುವುರು ಎಂತಲೂ ಕೇಳಿದರೆ, ಅಂತಹ ನಾಲ್ಕುರಾಜ್ಯಗಳಲ್ಲಿ ಮೂರುರಾಜ್ಯಗಳು ಸ್ತ್ರೀಯರಿಂದ ಪಾಲಿಸಲ್ಪಡುತಲಿದೆ ಎಂದು ನಿಶ್ಚಯವಾಗಿ ಹೇಳಬಹುದು. ಈ ಸಂಗತಿಯು ನನಗೆ ಪೂರ್ವದಲ್ಲಿ ತಿಳಿಯದಿದ್ದರೂ, ಹಿಂದೂಸ್ಥಾನದ ಪ್ರಧಾನ

ರಾಜ್ಯವ್ಯವಸ್ಥೆಯ ಸಮಾಜದಲ್ಲಿ ನನಗೆ ಉಂಟಾದ ಸಂಬಂಧದಿಂದ, ಹಿಂದೂ ದೇಶದ ಅನೇಕರಾಜ್ಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳು ನನಗೆ ದೊರೆತವು. ಅವುಗಳಿಂದಲೇ ನಾನು ಈ ಮಾತನ್ನು ಸ್ಥಾಪಿಸಬಲ್ಲವನಾದೆನು. ಅವುಗಳಲ್ಲಿ ಇಂತಹ ಉದಾಹರಣೆಗಳು ಅನೇಕವಾಗಿ ದೊರೆತವು. ಹಿಂದುಗಳ ಆಚಾರ ಪ್ರಕಾರವೂ, ಮತಪ್ರಕಾರವೂ, ಸ್ತ್ರೀಯರಿಗೆ ರಾಜ್ಯಾರ್ಹತೆಯು ಇಲ್ಲವಾದರೂ ರಾಜ್ಯಕ್ಕೆ ವಾರಸದಾರರಾದವರು ಅಜ್ಞಾನದೆಶೆಯಲ್ಲಿರುವುದೂ, ಅವರಿಗಾಗಿ ಅವರ ತಾಯಿಯರು ರಾಜ್ಯವನ್ನು ಪಾಲಿಸುವುದೂ ಅನೇಕಸಲ ಸಂಭವಿಸುವುದು. ಏಕಂದರೆ, ಅನೇಕ ರಾಜರು ಸೋಮಾರಿಗಳಾಗಿಯೂ, ವಿಷಯಾಸಕ್ತರಾಗಿಯೂ ಇರುವುದರಿಂದ ಅವರು ಅಲ್ಪವಯಸ್ಸಿನಲ್ಲಿಯೇ ಮೃತರಾಗುತ್ತಾರೆ. ಈ ರಾಣಿಯರು, ಅಥವಾ ರಾಜಪುತ್ರಿಯರು ಪ್ರಜೆಗಳ ಸಮಕ್ಷಮಕ್ಕೆ ಬರುವುದಿಲ್ಲ. ಅವರು ತಮ್ಮ ಕುಟುಂಬದ ಪುರುಷರೊಡನೆ ವಿನಹ ಅನ್ಯಪುರುಷರೊಡನೆ ಸಂಭಾಷಿಸುವುದಿಲ್ಲ. ಸಂಭಾಷಿಸಬೇಕಾದರೆ ತೆರೆಯೊಳಗಿನಿಂದ ಸಂಭಾಷಿಸುತ್ತಾರೆ. ಅವರಿಗೆ ವಿದ್ಯೆಯು ಬರುವುದಿಲ್ಲ. ಬಂದರೂ, ರಾಜ್ಯಪಾಲನಾವಿಷಯಗಳು ಇರುವ ಪುಸ್ತಕಗಳು ಅವರ ಭಾಷೆಯಲ್ಲಿ ಒಂದೂ ಇಲ್ಲ. ಈ ಉದಾಹರಣೆಗಳಿಂದ ಸ್ತ್ರೀಯರಲ್ಲಿ ರಾಜ್ಯಪಾಲನಕ್ಕೆ ತಕ್ಕ ಗುಣಗಳು ಸ್ವಾಭಾವಿಕವಾಗಿಯೇ ಇರುವುದು ಎಂದು ಚೆನ್ನಾಗಿ ಮನಸ್ಸಿಗೆ ಹಿಡಿಯುವುದು. *

ರಾಣೀಸಾಹೇಬ್ ಕುವರ್.

ಪಂಜಾಬ್‌ದೇಶದ ಪಟಿಯಾಲ ಸಂಸ್ಥಾನಾಧೀಶನಾದ ರಾಜಾಸಾಹೇಬ್ ಸಿಂಹನು ಈಕೆಯ ಸಹೋದರನು. ಬಾರೀದುಪಾಟಿಯಲ್ಲಿ ಅಧಿಕಭಾಗಕ್ಕೆ ಅಧಿಪತಿಯಾದ ಜಯಮಲ್‌ಸಿಂಹನು ಈಕೆಯ ಪತಿಯು. ೧೭೯೩ ನೆಯ ಇಸವಿಯಲ್ಲಿ ರಾಜಾಸಾಹೇಬ್‌ಸಿಂಹನಿಗೆ ಮಂತ್ರಿಗಳೂ, ಉದ್ಯೋಗಸ್ಥರೂ ವಿರೋಧಿಗಳಾದುದರಿಂದ, ರಾಜ್ಯಪಾಲನೆಯನ್ನು ಕ್ರಮವಾಗಿ ಮಾಡಲಾರದೆ ತನ್ನ ಅನುಜೆಯನ್ನು ಕರೆಯಿಸಿ ಆಕೆಗೆ ಮಂತ್ರಿಪದವಿಯನ್ನು ಕೊಟ್ಟನು. ಆಕೆಯು ವಿಶ್ವಾಸಾರ್ಹರಾದ ಉದ್ಯೋಗಸ್ಥರನ್ನು ನಿಯಮಿಸಿಕೊಂಡು, ರಾಜ್ಯದಲ್ಲಿ ನಡೆಯುತಲಿದ್ದ

---

* ಜಾನ್ ಸ್ಟುಅರ್ಟ್ ಮಿಲ್ ಕೃತವಾದ "ಸಬ್ಜಕ್ಷನ್ ಆಫ್ ವಿಮೆನ್" ಎಂಬ ಗ್ರಂಥರಾಜದ ಭಾಷಾಂತರವಾದ "ಸ್ತ್ರೀಯಾಂಚಿಪರವಶತಾ" ಎಂಬ ಮಹಾರಾಷ್ಟ್ರ ಗ್ರಂಥದ ಭಾಷಾಂತರವು.

ಅನ್ಯಾಯಗಳನ್ನು ನಿರ್ಮೂಲಮಾಡಿ ಪ್ರಜೆಗಳಿಗೆ ಸೌಖ್ಯವನ್ನು ಉಂಟು ಮಾಡಿದಳು.

ಈಕೆಯು ಪಟಿಯಾಲದಲ್ಲಿ ಇರುವ ಸಮಯದಲ್ಲಿ ಈಕೆಯ ಪತಿಯಾದ ಜಯಮಲ್‌ಸಿಂಹನ ಭಾಗಸ್ಥನಾದ ಫತೇಸಿಂಹನು ಈತನ ಮೇಲೆ ಇರುವ ವೈರ ದಿಂದ ಈತನಿಗೆ ವಿಶೇಷಕಷ್ಟಗಳನ್ನು ಉಂಟುಮಾಡುತಲಿರುವನು ಎಂದು ತಿಳಿ ಯಿತು. ಆಗ ಈಕೆಯು ಈ ವಿಷಯವನ್ನು ತನ್ನ ಅಗ್ರಜನಿಗೆ ತಿಳಿಸಿ, ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಫತ್ತೇಪುರಕ್ಕೆ ಹೋಗಿ ಫತೇಸಿಂಹನನ್ನು ಯುದ್ಧದಲ್ಲಿ ಗೆದ್ದು, ಕಾರಾಗೃಹದಲ್ಲಿದ್ದ ತನ್ನ ಪತಿಯನ್ನು ಕರೆದುಕೊಂಡು ಜಯಘೋಷ ದೊಡನೆ ಪಟಿಯಾಲವನ್ನು ಪ್ರವೇಶಿಸಿದಳು.

೧೭೯೪ ನೆಯ ಇಸವಿಯಲ್ಲಿ ಆನಂದರಾವ್, ಲಕ್ಷ್ಮಣರಾವ್ ಎಂಬ ಮರಾಟಿ ಸೈನ್ಯಾಧಿಪರು ವಿಶೇಷ ಸೈನ್ಯಸಹಿತರಾಗಿ ಯಮುನಾ ನದಿಯನ್ನು ದಾಟಿ, ಪಟಿಯಾಲ ಸಂಸ್ಥಾನವನ್ನು ಗೆಲ್ಲುವುದಕ್ಕಾಗಿ ಬರುತಲಿದ್ದರು. ಅವರು ಬರುತ ಲಿರುವಾಗ ಮಾರ್ಗಮಧ್ಯದಲ್ಲಿರುವ ಅನೇಕ ಸಾಮಂತರಾಜರು ಅವರ ಶೌರ್ಯಕ್ಕೆ ಹೆದರಿ ಕೆಲವರು ಧನವನ್ನೂ, ಕೆಲವರು ಅನೇಕ ವಸ್ತುವಾಹನಗಳನ್ನೂ ಸಮ ರ್ಪಿಸಿ ಅವರ ಅನುಗ್ರಹವನ್ನು ಪಡೆದರು. ಆದರೆ ಅಸಮರ್ಥನಾದ ರಾಜನಿಗೆ ಮಂತ್ರಿಯಾಗಿದ್ದ ಅಬಲೆಯು ಮಾತ್ರ ಅವರಿಗೆ ಹೆದರದೆ ಅವರನ್ನು ಗೆಲ್ಲಲು ಪ್ರಯತ್ನಮಾಡಿದಳು. ಆಕೆಯ ಪ್ರಯತ್ನವನ್ನು ನೋಡಿ ಸುತ್ತುಮುತ್ತಲಿರುವ ರಾಜರೂ, ಜಮಿನ್ದಾರರೂ ಕೆಲಸೈನ್ಯದೊಡನೆ ಆಕೆಗೆ ಸಹಾಯಕರಾದರು. ಸೈನ್ಯವೆಲ್ಲವೂ ೭ ಸಾವಿರವಾಯಿತು. ಈ ಸೈನ್ಯಕ್ಕೆಲ್ಲ ಸಾಹೇಬ್ ಕುವರಳೇ ಆಧಿಪತ್ಯವನ್ನು ವಹಿಸಿ, ಅಂಬಾಲಪಟ್ಟಣಕ್ಕೆ ಸಮೀಪದಲ್ಲಿರುವ ಮರ್ದನಪುರ ದಲ್ಲಿ ಶತ್ರುಗಳ ಮಾರ್ಗವನ್ನು ಅಡ್ಡಗಿಸಿದಳು. ಉಭಯರೂ ಘೋರವಾಗಿ ಯುದ್ಧಮಾಡಿದರು. ರಾಣಿಯ ಸೈನಿಕರು ಕ್ರಮಶಿಕ್ಷಣವಿಲ್ಲದವರಾದುದರಿಂದಲೂ, ಸಂಖ್ಯೆಯಲ್ಲಿ ಶತ್ರುಗಳಿಗಿಂತಲೂ ಕಡಮೆಯಾಗಿರುವುದರಿಂದಲೂ, ಶತ್ರುಗಳ ಬಾಣಪರಂಪರೆಗಳನ್ನು ತಡೆಯಲಾರದೆ ಸ್ವಲ್ಪ ಹಿಮ್ಮೆಟ್ಟಿದರು. ಆಗ ಧೈರ್ಯವತಿ ಯಾದ ರಾಣಿಯು ತನ್ನ ರಥದಿಂದ ಇಳಿದು, ಖಡ್ಗವನ್ನು ಝಳಿಪಿಸುತ್ತ ಸೈನಿಕ ರೊಡನೆ, 'ಸೈನಿಕರೇ! ನಾನು ನನ್ನ ಪ್ರಾಣವು ಇರುವವರೆಗೂ ಇಲ್ಲಿಯೇ ನಿಂತು ಯುದ್ಧಮಾಡುವೆನು. ನಾನು ನಿಮ್ಮೊಡೆಯನಿಗೆ ತಂಗಿಯು; ಮತ್ತು ಹೆಂಗಸು; ನನ್ನನ್ನು ಬಿಟ್ಟುಹೋಗುವುದು ನಿಮಗೆ ಧರ್ಮವಲ್ಲ. ಯುದ್ಧವನ್ನು ಬಿಟ್ಟುಹೋದರೂ ಒಂದು ದಿವಸ ಮೃತ್ಯುವು ನಿಮಗೆ ಸಿದ್ಧವಾಗಿಯೇ ಇರುವುದು. ನೀವು ಇದುವರೆಗೆ ಪಡೆದ ಕೀರ್ತಿಯನ್ನು ಹಾಳುಮಾಡಿಕೊಳ್ಳುವುದರಿಂದ ಪ್ರಯೋ ಜನವೇನು? ಧೈರ್ಯವನ್ನು ವಹಿಸಿ ಯುದ್ಧಮಾಡಿ ಶತ್ರುಗಳನ್ನು ಗೆಲ್ಲಿರಿ.'

ಎಂದು ನುಡಿದು ಅವರಿಗೆ ಉತ್ಸಾಹವನ್ನು ಉಂಟುಮಾಡಿದಳು. ಸೂರ್ಯಾಸ್ತ ಮಯದವರೆಗೂ ಯುದ್ಧವು ನಡೆಯಿತು. ಜಯಾಪಜಯಗಳು ತಿಳಿಯಲಿಲ್ಲ. ಆದಿವಸ ರಾತ್ರಿ ಸೈನಿಕರು ರಾಣಿಯೊಡನೆ, "ತಾಯಿ! ನಮಗೆ ಜಯವು ಉಂಟಾಗುವುದಿಲ್ಲ; ನಾವು ಎಲ್ಲಿಗಾದರೂ ಓಡಿಹೋಗಿ ಪ್ರಾಣರಕ್ಷಣೆಯನ್ನು ಮಾಡಿಕೊಳ್ಳೋಣ." ಎಂದರು. ಅದಕ್ಕೆ ರಾಣಿಯು ಸಮ್ಮತಿಸದೆ, 'ನಾವು ಈ ರಾತ್ರಿಯಲ್ಲಿ ಶತ್ರುಸೈನ್ಯದಮೇಲೆ ಅಕಸ್ಮಾತ್ತಾಗಿ ಬಿದ್ದು ಅವರನ್ನು ಗೆಲ್ಲೋಣ.' ಎಂದಳು. ಹಾಗೆಯೇ ಅವರೆಲ್ಲರೂ ನಿರ್ಭಯರಾಗಿ ಕೋಳಿಕೂಗುವ ಹೊತ್ತಿಗೆ ಎದ್ದು ಮರಾಟಿಯ ಶಿಬಿರದಮೇಲೆ ಬಿದ್ದರು. ಈ ಸೈನಿಕರು ಅವರಿಗೆ ಯಾವ ಅಪಾಯವನ್ನೂ ಉಂಟುಮಾಡದಿದ್ದರೂ, ಕತ್ತಲಿನಲ್ಲಿ ಮರಾಟಿಯ ಸೈನಿಕರು ಇವರನ್ನು ನೋಡಿದಕೂಡಲೆ ಹೆದರಿ ಓಡಿಹೋಗಲಾರಂಭಿಸಿದರು. ಆಗ ರಾಣಿಯು ತಮ್ಮ ಸಹಾಯಾರ್ಥವಾಗಿ ಹಿಂದೆ ಇನ್ನೂ ಸೈನ್ಯಗಳು ಬರುತಲಿವೆ ಎಂದು ಒಂದು ವರ್ತಮಾನವನ್ನು ಶತ್ರುಸೈನ್ಯದಲ್ಲಿ ಹುಟ್ಟಿಸಿದಳು. ಇದರಿಂದ ಅವರು ತಮಗೆ ಜಯವು ಉಂಟಾಗಲಾರದು ಎಂದೆಣಿಸಿ ಸೂರ್ಯೋದಯವಾಗುವದರೊಳಗಾಗಿ ತಮ್ಮ ಸೇನೆಗಳನ್ನು ಬಂದ ದಾರಿಯಲ್ಲಿಯೇ ತೆಗೆದುಕೊಂಡು ಹೋದರು. ಸಾಹೇಬ್ ಕುವರಳು ಜಯಶೀಲಳಾಗಿ ಮಹಾವಿಭವದೊಡನೆ ಪಟಯಾಲವನ್ನು ಪ್ರವೇಶಿಸಿ ರಾಜ್ಯಪರಿಪಾಲನೆಯನ್ನು ಮಾಡುತಲಿದ್ದಳು. ಕೆಲವು ದಿವಸಗಳು ಕಳೆದನಂತರ ದೇಶದಲ್ಲಿ ಕೆಲವರು ರಾಜದ್ರೋಹಿಗಳಾಗಿ ರಾಜ್ಯದಲ್ಲೆಲ್ಲ ಅನೇಕ ಉಪದ್ರವಗಳನ್ನು ಉಂಟುಮಾಡುತಲಿದ್ದರು. ಆಗ ಸಾಹೇಬ್ ಕುವರು ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ನಹನನ್ ಎಂಬ ನಗರಕ್ಕೆ ಹೋಗಿ ಮೂರು ತಿಂಗಳಿನಲ್ಲಿ ರಾಜದ್ರೋಹಿಗಳ ಹೆಸರಿಲ್ಲದಂತೆ ಮಾಡಿ ರಾಜ್ಯಕ್ಕೆ ಸೌಖ್ಯವನ್ನು ಉಂಟುಮಾಡಿದಳು.

ರಾಜ್ಯವು ಈಕೆಯ ಆಳ್ವಿಕೆಯಲ್ಲಿದ್ದುದರಿಂದ ರಾಜನ ಗೆಳೆಯರಾದ ದುಷ್ಟರ ತಂತ್ರಗಳು ನಡೆಯುತ್ತಿರಲಿಲ್ಲ. ಆದಕಾರಣ ಅವರೆಲ್ಲರು ಆಕೆಗೆ ಶತ್ರುಗಳಾದರು. ಚಟ್ಟಾಸಂಸ್ಥಾನಾಧೀಶನ ಪುತ್ರಿಯೂ ರಾಜಪತ್ನಿಯೂ ಆದ ರಾಣಿ ಔಸ್ಕುವರು ಯುವರಾಜನ ತಾಯಿಯೂ, ರಾಜ್ಯವನ್ನಾಳುವ ಸಾಮರ್ಥ್ಯವುಳ್ಳವಳೂ ಆದುದರಿಂದ, ಆಕೆಯು ಸಹ ಭರ್ತೃಸೋದರಿಯು ರಾಜ್ಯಾಡಳಿತಗಳನ್ನು ನೋಡಿಕೊಳ್ಳುತಲಿರುವುದಕ್ಕೆ ಸಮ್ಮತಿಸಲಿಲ್ಲ. ಸಾಹೇಬ್ ಕುವರಿಗೆ ರಾಜ್ಯದಲ್ಲೆಲ್ಲ ಶತ್ರುಗಳು ಹೆಚ್ಚಾದರು. ಅವರು ಆಕೆಯಮೇಲೆ ಅನೇಕ ದೋಷಾರೋಪಣೆಗಳನ್ನು ಮಾಡಲಾರಂಭಿಸಿದರು. ಅವುಗಳಲ್ಲಿ ಮೊದಲನೆಯ ದೋಷವು ಯಾವುದೆಂದರೆ, ನಹನನು ಪಟ್ಟಣದಲ್ಲಿ ನಡೆದ ಮಹಾಯುದ್ದದಲ್ಲಿ ಜಯವನ್ನು ಹೊಂದಿದುಕ್ಕಾಗಿ ಅಲ್ಲಿನ ಸಾಮಂತ ರಾಜನು ಆಕೆಗೆ ಬಹುಮಾನವಾಗಿ ಕೊಟ್ಟ ಮತ್ತಗಜವನ್ನು ರಾಜನಿಗೆ ಕೊಡದೆ ತನ್ನ ಬಳಿಯಲ್ಲಿಯೆ ಇರಿಸಿಕೊಂಡಳು.

ಅಕೆಯು ಶೌರ್ಯದಿಂದ ಪಡೆದ ಬಹುಮಾನವನ್ನು ಅಕೆಯು ಇರಿಸಿ ಕೊಳ್ಳಕೂಡದಂತೆ. ಎರಡನೆಯದು ರಾಜನ ಅನುಮತಿಯಿಲ್ಲದೆ ತನ್ನ ಜಹ ಗೀರಿನಲ್ಲಿ ಒಂದು ಕೋಟೆಯನ್ನು ಕಟ್ಟಿಸಿಕೊಂಡದ್ದು. ಇದರಿಂದ ರಾಜನಿಗೆ ವಿಶೇಷ ಕೊಪವು ಉಂಟಾಗಿ ಅಲ್ಪ ಬುದ್ಧಿಯುಳ್ಳವನಾದ ರಾಜನು ಅಕೆಯು ತನಗೆ ಮಾಡಿದ ಉಪಕಾರಗಳನ್ನೆಲ್ಲ ಮರೆತು, ಅಕೆಯನ್ನು ನಿನ್ನ ಪತಿಯ ಬಳಿಗೆ ಹೋಗು ಎಂದನು. ಸಾಹೇಬ್‌ಕುವರಳು ರಾಜಧಾನಿಯನ್ನು ಬಿಟ್ಟು ಜಹಗೀರಿನಲ್ಲಿ ಇದ್ದ ಕೋಟೆಗೆ ಹೋಗಿ ಅಲ್ಲಿಯೇ ವಾಸಮಾಡಿಕೊಂಡಿದ್ದಳು. ಅಕೆಯು ಅಲ್ಲಿದ್ದರೆ ತನಗೆ ವಿಪತ್ತು ಉಂಟಾಗಬಹುದು ಎಂದು ರಾಜನು ಹೆದರಿ, ಸ್ವಲ್ಪ ಸೈನ್ಯದೊಡನೆ ಅಕೆಯ ಕೋಟೆಯನ್ನು ಮುತ್ತಿಗೆಹಾಕಲು ಹೊರಟನು. ಕೆಲಧೀಶಾಲಿಗಳು ಸ್ತ್ರೀಯೊಡನೆ ಯುದ್ಧಮಾಡುವುದು ಅನುಚಿತ ವೆಂದು ನುಡಿದು, ಅವರಿಬ್ಬರಿಗೂ ಸಂಧಿಯನ್ನು ಉಂಟುಮಾಡುವೆವು ಎಂದು ಹೇಳಿ ಅಕೆಯನ್ನು ಪಟಯಾಲಕ್ಕೆ ಕರೆಯಿಸಿದರು. ಅಕೆಯು ಬರುತ್ತಾ ಮಾರ್ಗಮಧ್ಯದಲ್ಲಿ ರಾಜನು ತನ್ನನ್ನು ಕೊಲ್ಲಲು ಕರೆಸಿದನು ಎಂದು ಕೇಳಿ ಪುನಃ ತನ್ನ ಕೋಟೆಗೆ ಹೊರಟುಹೋದಳು. ಕೆಲವು ದಿವಸಗಳು ಕಳೆದ ಅನಂತರ ರಾಜನು ಆಕೆಗೆ ನಂಬಿಕೆಯನ್ನು ಉಂಟುಮಾಡಿ ಕರೆಯಿಸಿ ಕಾರಾ ಗೃಹದಲ್ಲಿ ಇಟ್ಟನು. ಸಾಹೇಬ್‌ಕುವರು ಕೆಲವು ದಿವಸಗಳು ಕಾರಾಗೃಹದಲ್ಲಿದ್ದು, ತನ್ನ ಬಟ್ಟೆಗಳನ್ನು ದಾಸಿಗೆ ಉಡಿಸಿ, ದಾಸಿಯ ಬಟ್ಟೆಗಳನ್ನು ತಾನು ಧರಿಸಿ ಕೊಂಡು ಉಪಾಯದಿಂದ ಕಾರಾಗೃಹವಿಮುಕ್ತಳಾಗಿ ತನ್ನ ಕೋಟೆಯನ್ನು ಸೇರಿದಳು. ಈಕೆಯು ೧೭೯೯ನೆಯ ಇಸವಿಯಲ್ಲಿ ಮೃತಳಾದಳು.

ಕಮಲಾದೇವಿ.

ಈಕೆಯು ಸತ್ಯವತಿಯ ಕಾಲದಲ್ಲಿ ಇದ್ದಳು ಎಂದು (ಸತ್ಯವತಿಯ ಚರಿತ್ರೆಯನ್ನು ನೋಡುವುದು) ಊಹಿಸಿದ್ದಾರೆ. ಈಕೆಯ ಪತಿಯ ಹೆಸರು ಜಗನ್ನಾಥ ಭಟ್ಟಾ ಚಾರ್ಯನು. ಇವರು ಮುರ್ಷಿದಾಬಾದಿಗೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ವಾಸಮಾಡುತಲಿದ್ದರು. ಕಮಲಾದೇವಿಯು ಶಾಂತಸುಶೀಲಾದಿ ಸದ್ಗುಣಗಳಿಂದ ಕೂಡಿದವಳಾದುದರಿಂದ ಗ್ರಾಮಸ್ಥರೆಲ್ಲರೂ ಆಕೆಯನ್ನು ಬಹು ಗೌರವವಾಗಿ ಕಾಣುತಲಿದ್ದರು. ಆಗ ಆ ದೇಶವು ಕಂಪೆನಿಯವರ ವಶಕ್ಕೆ ನೂತನವಾಗಿ ಬಂದಿತ್ತು. ಆಗಲೇ ಕ್ಷಾಮವೂ ತಲೆದೋರಿತು. ಇದೇ ಒಳ್ಳೆಯ ಸಮಯವೆಂದು ಸರ್ಕಾರ್

ನೌಕರರು ಮೊದಲೇ ದುರ್ಭಿಕ್ಷಪೀಡಿತರಾದ ಪ್ರಜೆಗಳನ್ನು ತಾವು ಸಹ ವಿಶೇಷವಾಗಿ ಹಿಂಸಿಸುತಲಿದ್ದರು. ಆಗಿನ ಪಾಲಕರಿಗೆ ದೇಶಭಾಷೆಯ ಪರಿಚಯವಿಲ್ಲದ ಕಾರಣ, ಅವರು ಪ್ರಜೆಗಳ ಕಷ್ಟವನ್ನು ತಿಳಿದುಕೊಳ್ಳುವುದಕ್ಕೆ ಆಗುತಲಿರಲಿಲ್ಲ. ಇಂತಹ ದುಷ್ಕಾಲದಲ್ಲಿ ಮುರ್ಷಿದಾಬಾದಿಗೆ ಗಂಗಾಗೋವಿಂದಸಿಂಹ ಎಂಬ ದುಷ್ಟನು ಅಧಿಕಾರಿಯಾಗಿದ್ದನು. ಈತನು ಜಗನ್ನಾಥನ ಕುಟುಂಬವನ್ನು ದುಃಖ ಸಮುದ್ರದಲ್ಲಿ ಮುಳುಗಿಸಿದನು. ಅವರಿಗೆ ಆ ವರ್ಷದಲ್ಲಿ ಬೆಳೆಯು ಸ್ವಲ್ಪವೂ ಆಗಲಿಲ್ಲ. ಆದಕಾರಣ ಅವರು ಪ್ರಭುಗಳಿಗೆ ಕಂದಾಯವನ್ನು ಕೊಡಲು ಅಸಮರ್ಥರಾಗಿದ್ದರು. ಗಂಗಾಗೋವಿಂದಸಿಂಹನು ಕಂದಾಯವನ್ನು ವಸೂಲ್ಮಾಡುವ ನೆಪದಿಂದ ಅವರ ಹೊಲವನ್ನೂ, ಅವರ ಮನೆಯನ್ನೂ, ಸಮಸ್ತವಸ್ತುಗಳನ್ನೂ ಹರಾಜು ಹಾಕಿಸಿದನು. ಅದರಿಂದ ಅವರಿಗೆ ಆ ಸಮಯದಲ್ಲಿ ಧರಿಸಿರುವ ಬಟ್ಟೆಯು ವಿನಹ ಬೇರೊಂದುಬಟ್ಟೆಯು ಸಹ ಇರಲಿಲ್ಲ. ಕಮಲಾದೇವಿಯು ಶರೀರವೆಲ್ಲ ಮುಚ್ಚುವಷ್ಟು ಬಟ್ಟೆಯು ಸಹ ಇಲ್ಲದಸ್ಥಿತಿಯಲ್ಲಿ ಮನೆಯನ್ನು ಬಿಡಬೇಕಾಯಿತು. ಪುತ್ರರು ಭಿಕ್ಷಾಟನೆಯಿಂದ ತಂದ ಕಾಳುಗಳು ಅವರಿಗೆ ಅರ್ಧ ಭೋಜನಕ್ಕೂ ಸಾಕಾಗುತಲಿರಲಿಲ್ಲ. ಈ ದುಃಖವನ್ನೆಲ್ಲ ನೋಡಿ ಭಟ್ಟಾಚಾರ್ಯನು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಲು, ಕಮಲಾದೇವಿಯು ಬಹು ಕಷ್ಟದಿಂದ ಆತನ ಪ್ರಯತ್ನವನ್ನು ನಿಲ್ಲಿಸಿದಳು. ಆದರೆ ಕೆಲವು ದಿನಗಳು ಕಳೆದ ಅನಂತರ ಭಟ್ಟಾಚಾರ್ಯನು ಯಾರಿಗೂ ತಿಳಿಯದಂತೆ ಉರಲುಹಾಕಿಕೊಂಡು ಪ್ರಾಣತ್ಯಾಗ ಮಾಡಿದನು. ಕಮಲಾದೇವಿಯು ವಿಶೇಷ ದುಃಖಿತಳಾಗಿ, ಪುತ್ರರ ದುಃಖವನ್ನು ನೋಡಿ ತನ್ನ ದುಃಖವನ್ನು ಒಂದು ವಿಧವಾಗಿ ಸೈರಿಸಿಕೊಂಡು ಅವರಿಗೆ ಧೈರ್ಯವನ್ನು ಹೇಳುತ್ತ ಕಾಲವನ್ನು ಕಳೆಯುತಲಿದ್ದಳು. ಆಕೆಯ ದೊಡ್ಡಮಗನಾದ ಕ್ಷೇತ್ರನಾಥನು ತಂದೆಯು ಜೀವಿಸಿರುವಾಗ ಡಿಲ್ಲಿಗೆ ಹೋದರೆ ತಮ್ಮ ಹೊಲಗಳನ್ನು ಬಿಡಿಸಿಕೊಳ್ಳಬಹುದು ಎಂದು ಹೇಳುತಲಿದ್ದ ಮಾತುಗಳನ್ನು ನೆನೆಸಿಕೊಂಡು, ಡಿಲ್ಲಿಗೆ ಪ್ರಯಾಣಮಾಡಲು ಸಿದ್ಧನಾದನು. ಇನ್ನು ಸ್ವಲ್ಪಕಾಲವು ಕಳೆದ ಅನಂತರ ಹೋಗಬಹುದು ಎಂದು ತಾಯಿಯು ಎಷ್ಟು ಹೇಳಿದರೂ ಕೇಳದೆ, ಆ ಹನ್ನೆರಡುವರುಷದ ಬಾಲಕನು ಒಂದು ದಿವಸ ಅರ್ಧರಾತ್ರಿಯಲ್ಲಿ ಎದ್ದು ಯಾರಿಗೂ ತಿಳಿಯದಂತೆ ಹೊರಟುಹೋದನು. ಕಮಲಾದೇವಿಗೆ ದುಃಖದಮೇಲೆ ದುಃಖವು ಸಂಪ್ರಾಪ್ತವಾಗುತಲಿತ್ತು. ಆಕೆಯು ಮಿಕ್ಕ ಇಬ್ಬರು ಮಕ್ಕಳನ್ನು ರಕ್ಷಿಸುತ್ತ ಕಾಲವನ್ನು ಕಳೆಯುತ್ತಿರಲು, ಕೆಲವು ದಿನಗಳಮೇಲೆ ಆ ಬಾಲಕರು ಇಬ್ಬರೂ ಅನ್ನಾಭಾವದಿಂದ ಕಾಲಗ್ರಾಸಕ್ಕೆ ತುತ್ತಾದರು. ಕಮಲಾದೇವಿಯು ಹೃದಯದಿಂದ ಹೊರಡುವ ದುಃಖಜ್ವಾಲೆಯನ್ನು ಸೈರಿಸಲಾರದೆ, ಮೃತರಾದ ಆ ಬಾಲಕರನ್ನು ಎರಡು ಭುಜಗಳಮೇಲೆ ಹಾಕಿಕೊಂಡು ಕೈಯ್ಯಲ್ಲಿ ಖಡ್ಗವನ್ನು ಧರಿಸಿ ಗಂಗಾಗೋವಿಂದಸಿಂಹನ ಬಳಿಗೆ ಹೋಗಿ

ಅತ್ಯಂತ ಆಗ್ರಹದಿಂದ ಆತನನ್ನು ಕಡಿಯಲು ಹೋದಳು. ಆಕೆಯು ಜಗನ್ನಾಥ ಭಟ್ಟಾಚಾರ್ಯನ ಪತ್ನಿಯು ಎಂದು ಅರಿತು ಗೋವಿಂದಸಿಂಹನು ಕಂಪಿತನಾದನು. ಭಟರು ಆಕೆಯ ಕೈಯಿಂದ ಕತ್ತಿಯನ್ನು ತೆಗೆದುಕೊಂಡು, ಆ ಬಾಲಕನನ್ನು ಬೇರೊಬ್ಬರಿಗೆ ಒಪ್ಪಿಸಿ, ಆಕೆಯನ್ನು ಅಲ್ಲಿಂದ ಹೊರಡಿಸಿದರು.

ಗೋವಿಂದಸಿಂಹನ ಕೈಕೆಳಗಿನ ಅಧಿಕಾರಿಯಾದ ದೇವೀಸಿಂಹನು ಸುಂದರಿಯರಾದ ಸ್ತ್ರೀಯರನ್ನು ಹಿಡಿದು ತರಿಸಿ ಅವರನ್ನೊಂದು ಗೃಹದಲ್ಲಿರಿಸಿ, ಅವರನ್ನು ಆಂಗ್ಲೇಯಾಧಿಕಾರಿಗಳ ಬಳಿಗೆ ಕಳುಹಿಸಿ ಅವರ ಅನುಗ್ರಹವನ್ನು ಪಡೆಯುತಲಿದ್ದನು. ಕಮಲಾದೇವಿಯು ಹುಚ್ಚಳಂತೆ ತಿರುಗಾಡುತಲಿದ್ದುದರಿಂದ ದೇವೀಸಿಂಹನ ಚಾರರು ಆಕೆಯನ್ನು ಸಹ ಹಿಡಿದುಕೊಂಡು ಹೋದರು. ಅಲ್ಲಿರುವ ಸಮಯದಲ್ಲಿ ಆಕೆಗೆ ದೇವೀಸಿಂಹನ ಕಪಟವೆಲ್ಲ ತಿಳಿಯಿತು. ಆಗ ಆಕೆಯು ಒಂದು ಕತ್ತಿಯನ್ನು ತನ್ನಲ್ಲಿ ಬಚ್ಚಿಟ್ಟುಕೊಂಡಳು. ಒಂದುದಿವಸ ದೇವೀಸಿಂಹನು ಕಮಲಾದೇವಿಯನ್ನು ಒಬ್ಬ ಆಂಗ್ಲೇಯನಬಳಿಗೆ ಕಳುಹಿಸಿದನು. ಆತನು ಆಕೆಯ ಸಮೀಪಕ್ಕೆ ಬರಲು, ಆಕೆಯು ಕತ್ತಿಯಿಂದ ಆತನ ಎದೆಯನ್ನು ಇರಿದಳು. ಆದರೆ ಆ ಹೂಣನು ದಪ್ಪವಾದ ವಸ್ತ್ರಗಳನ್ನು ಧರಿಸಿದ್ದುದರಿಂದ ವಿಶೇಷ ಅಪಾಯವು ಉಂಟಾಗದೆ ಸ್ವಲ್ಪ ಘಾಯಮಾತ್ರ ಉಂಟಾಯಿತು. ಆಮೇಲೆ ಆತನು ಆಕೆಯನ್ನು ಕಳುಹಿಸಿ, ಅಂತಹ ಸ್ತ್ರೀಯನ್ನು ಕಳುಹಿಸಿದುದಕ್ಕೆ ದೇವೀಸಿಂಹನನ್ನು ನಿಂದಿಸಿದನು. ಸಿಂಹನು ಆಕೆಯನ್ನು ಶೆರೆಯಲ್ಲಿಟ್ಟು ಅನೇಕ ದುರ್ಬೋಧನೆಗಳನ್ನು ಮಾಡುತಲಿದ್ದನು. ದೇವೀಸಿಂಹನ ಜಮಾದಾರನಾದ ಲಕ್ಷ್ಮಣಸಿಂಹನಿಗೆ ಕಮಲಾದೇವಿಯಮೇಲೆ ದಯೆಯುಂಟಾಗಿ ಆಕೆಯ ಚರಿತ್ರೆಯನ್ನೆಲ್ಲ ಕೇಳಿ ತಿಳಿದುಕೊಂಡು, ಆಕೆಯಲ್ಲಿ ಮಾತೃಭಾವವುಳ್ಳವನಾಗಿ ಆಕೆಯನ್ನು ಅಲ್ಲಿಂದ ಕರೆದುಕೊಂಡು ಹೋಗಿ ದೀನಾಜ್‌ಪುರದಲ್ಲಿರುವ ತನ್ನ ತಮ್ಮನಾದ ರಾಮಸಿಂಹನ ಬಳಿಯಲ್ಲಿರಿಸಿದನು. ಕೆಲವು ದಿನಗಳಾದಮೇಲೆ ಆತನು ಸಹ ನೌಕರಿಯನ್ನು ಬಿಟ್ಟು ದೀನಾಜ್‌ಪುರಕ್ಕೆ ಬಂದು ಕಮಲಾದೇವಿಯ ಸೇವೆಯನ್ನು ಭಕ್ತಿಯಿಂದ ಮಾಡುತ್ತ, ಆಕೆಯ ಪುತ್ರನನ್ನು ಹುಡುಕಲು ಜನರನ್ನು ಕಳುಹಿಸಿದನು. ದೇವೀಸಿಂಹನ ಚಾರರು ಕಮಲಾದೇವಿಯನ್ನು ಹುಡುಕುತಲಿರುವರು ಎಂದು ತಿಳಿಯಬರಲು, ಆಕೆಗೆ ಯೋಗಿನಿಯ ವೇಷವನ್ನು ಧರಿಸಿಸಿ ಸಮೀಪಾರಣ್ಯಕ್ಕೆ ಕಳುಹಿಸಿದರು. ಕೆಲವು ದಿವಸಗಳಿಗೆ ಕ್ಷೇತ್ರನಾಥನು ಹೊಲಗಳನ್ನು ಬಿಡಿಸಿಕೊಂಡು ತಾಯಿಯ ಬಳಿಗೆ ಬರಲು, ತಾಯಿಮಕ್ಕಳು ಸ್ವಲ್ಪಹೊತ್ತು ದುಃಖಿಸಿ, ಲಕ್ಷ್ಮಣಸಿಂಹನಿಗೆ ಕೃತಜ್ಞರಾಗಿ ತಮ್ಮ ಗ್ರಾಮಕ್ಕೆ ಹೊರಟುಹೋದರು.

ತಾರಾಬಾಯಿ.

ಈಕೆಯು ಮಹಾರಾಷ್ಟ್ರ ರಾಜ್ಯಸ್ಥಾಪಕನಾದ ಶಿವಾಜಿಯ ಪುತ್ರನಾದ ರಾಜಾರಾಮನ ಪತ್ನಿಯು. ಶಿವಾಜಿಯ ಮರಣಾನಂತರ ಆತನ ಪ್ರಥಮಪುತ್ರನಾದ ಸಂಭಾಜಿಯು ಸಿಂಹಾಸನಾರೂಢನಾದನು. ಆತನನ್ನು ಔರಂಗಜೇಬನು ಹಿಡಿದುಕೊಂಡು ಹೋಗಿ ಬಹು ಕ್ರೂರವಾಗಿ ವಧಿಸಿ, ಆತನ ಪತ್ನೀಪುತ್ರರನ್ನು ಸೆರೆಯಲ್ಲಿಟ್ಟಿದ್ದರಿಂದ, ರಾಜಾರಾಮನು ರಾಜ್ಯಾಧಿಪತಿಯಾದನು. ಈತನ ಪಾಲನೆಯು ಪ್ರಜೆಗಳಿಗೆ ಬಹು ಸುಖಕರವಾಗಿತ್ತು. ಆತನು ಕ್ರೀ.ಶ. ೧೭೦೦ ನೆಯ ಇಸವಿಯಲ್ಲಿ ದೀರ್ಘವ್ಯಾಧಿಯಿಂದ ಮೃತನಾದನು. ಆತನ ಮರಣಕಾಲದಲ್ಲಿ ಜ್ಯೇಷ್ಠಪತ್ನಿಯಾದ ತಾರಾಬಾಯಿಯಲ್ಲಿ ಜನಿಸಿದ ಶಿವಾಜಿ ಎಂಬ ಹತ್ತುವರುಷದ ಬಾಲಕನೂ, ದ್ವಿತೀಯಭಾರ್ಯೆಯಾದ ರಾಜಸಾಬಾಯಿಯಲ್ಲಿ ಉದಯಿಸಿದ ಸಂಭಾಜಿ ಎಂಬ ಮೂರುವರ್ಷದ ಬಾಲಕನೂ ಇದ್ದರು.

ರಾಜಾರಾಮನ ಅನಂತರ ತಾರಾಬಾಯಿಯು ತನ್ನ ಪುತ್ರನನ್ನು ಸಿಂಹಾಸನಸ್ಥನನ್ನಾಗಿ ಮಾಡಿ, ರಾಮಚಂದ್ರಪಂತು, ಶಂಕರಾಜೀ, ನಾರಾಯಣ, ದನಾಜೀ ಜಾಧವ್ ಮೊದಲಾದ ಪ್ರಧಾನಿಗಳ ಸಹಾಯದಿಂದ ರಾಜ್ಯಭಾರವನ್ನು ಮಾಡುತಲಿದ್ದಳು. ಈಕೆಯು ಒಂದು ಸ್ಥಳದಲ್ಲಿಯೇ ಇರದೆ ಪ್ರತಿಯೊಂದು ಕೋಟೆಯನ್ನೂ ತಾನೇ ಹೋಗಿ ನೋಡುತ್ತ, ಅಲ್ಲಿಗೆ ಬೇಕಾದ ಬಂದೋಬಸ್ತುಗಳನ್ನು ಮಾಡಿಸುತಲಿದ್ದಳು. ತನ್ನ ಸೈನ್ಯಗಳನ್ನು ಮೊಗಲರಮೇಲೆ ಕಳುಹಿಸಿ, ಔರಂಗಜೇಬನು ತನ್ನ ಕೋಟೆಗಳಲ್ಲಿ ಒಂದನ್ನು ಗೆಲ್ಲುವಷ್ಟರೊಳಗೆ ತಾನು ಆತನ ಕೋಟೆಗಳಲ್ಲಿ ಐದಾರು ಕೋಟೆಗಳನ್ನು ಜೈಸುತಲಿದ್ದಳು. ಒಂದುಸಲ ರಾಮಚಂದ್ರಪಂತನು ಮಹಮ್ಮದೀಯರಿಗೆ ಸಹಾಯಕನಾಗಿರುವನು ಎಂದು ಊಹಿಸಿ ಆತನಲ್ಲಿ ಅನುಮಾನವುಳ್ಳವಳಾಗಿದ್ದಳು. ಆದರೆ ಆತನು ಪಾವನಗಡದುರ್ಗವನ್ನು ಬಹು ಶೌರ್ಯದಿಂದ ಗೆದ್ದು, ಪನ್ಹಾಳದುರ್ಗವನ್ನು ಸಹ ಕೈವಶಮಾಡಿಕೊಂಡುದರಿಂದ ಆತನಲ್ಲಿರುವ ಅಪನಂಬಿಕೆಯನ್ನು ಬಿಟ್ಟು, ಆತನಿಗೆ ಅನೇಕ ಬಹುಮಾನಗಳನ್ನು ಕೊಟ್ಟಳು. ಈಕೆಯು ಪನ್ಹಾಳದುರ್ಗದಲ್ಲಿ ವಾಸಮಾಡಿಕೊಂಡು ಇದ್ದಳು.

ಹೀಗೆ ಕೆಲವುಕಾಲ ಕಳೆದಮೇಲೆ ಔರಂಗಜೇಬನು ಮೃತನಾಗಲು, ಸಂಬಾಜಿಯ ಪುತ್ರನಾದ ಸಾಹುವು ಬಿಡುಗಡೆಯನ್ನು ಹೊಂದಿದನು. ಆತನು ಚಿಕ್ಕಮ್ಮನ

ಬಳಿಗೆ ಬಂದು ತನ್ನ ರಾಜ್ಯವನ್ನು ತನಗೆ ಕೊಡಬೇಕು ಎಂದು ಕೇಳಿದನು. ತಾರಾಬಾಯಿಯು ರಾಜ್ಯವನ್ನು ಕೊಡಲೊಪ್ಪದೆ, ನೀನು ನಿಜವಾದ ಸಾಹು ಅಲ್ಲವೆಂತಲೂ, ವೇಷಧಾರಿ ಎಂತಲೂ ಕೆಲವು ಆಟಂಕಗಳನ್ನು ಹೇಳಿದಳು. ಆದರೆ ಕೆಲಸರದಾರರು ಸಾಹುವಿನ ವಶರಾದಕಾರಣ, ತಾರಾಬಾಯಿಗೂ, ಆತನಿಗೂ ಯುದ್ಧವು ನಡೆಯಿತು. ಆಗ ತಾರಾಬಾಯಿಯು ಸತಾರಾಪಟ್ಟಣವನ್ನು ತನ್ನ ಭಾವನ ಮಗನಿಗೆ ಬಿಟ್ಟು, ತನ್ನ ಮಗನಾದ ಶಿವಾಜಿಗಾಗಿ ಕೋಲಾಪುರದಲ್ಲಿ ಬೇರೆ ಒಂದು ರಾಜ್ಯವನ್ನು ಸ್ಥಾಪಿಸಿದಳು. ಆ ರಾಜ್ಯವು ಇಂದಿನವರೆಗೂ ಸ್ಥಿರವಾಗಿದೆ.

ತಾರಾಬಾಯಿಯು ತನ್ನ ಪಕ್ಷವನ್ನು ಅವಲಂಬಿಸಿ ತನಗೆ ಸಹಾಯಕರಾಗಿದ್ದ ರಾಮಚಂದ್ರಪಂತು, ಶಂಕರಾಜೀ, ನಾರಾಯಣ ಎಂಬ ಮಂತ್ರಿಗಳೊಡನೆ ಕೋಲಾಪುರು ರಾಜ್ಯವನ್ನು ಶಿವಾಜಿಯ ಹೆಸರಿನಲ್ಲಿ ಪಾಲಿಸುತಲಿದ್ದಳು. ಕೋಲಾಪುರ ಸಮೀಪದಲ್ಲಿರುವ ರಾಯಗಡ ಎಂಬ ಕೋಟೆಯು ಮಹಾರಾಷ್ಟ್ರ ರಾಜ್ಯಕ್ಕೆ ಮೂಲಸ್ಥಾನವಾದುದರಿಂದ, ಸಾಹುವು ಅದನ್ನು ಗೆಲ್ಲಲು ಪ್ರಯತ್ನಿಸುತಲಿದ್ದನು. ಈ ಸಮಯದಲ್ಲಿ ತಾರಾಬಾಯಿಯ ಪುತ್ರನು ಮಶೂಚಿಕಾಜಾಡ್ಯದಿಂದ ಮೃತನಾದನು; ಈ ದುಃಖದಲ್ಲಿ ಆಕೆಯು ಮುಳುಗಿರಲು, ರಾಮಚಂದ್ರಪಂತನು ತಾರಾಬಾಯಿಯನ್ನು ರಾಜ್ಯದಿಂದ ತೆಗೆದು, ಆಕೆಯ ಸಪತ್ನೀಪುತ್ರನಾದ ಸಂಭಾಜಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ತಾನೇ ರಾಜ್ಯಾಡಳಿತಗಳನ್ನು ನೋಡಿಕೊಳ್ಳುತಲಿದ್ದನು. ಆ ಸಮಯದಲ್ಲಿ ತಾರಾಬಾಯಿಯು ಗರ್ಭಿಣಿಯಾದ ತನ್ನ ಸೊಸೆಯನ್ನು ಶತ್ರುಭಯದಿಂದ ಅಜ್ಞಾತವಾಸದಲ್ಲಿ ಇಟ್ಟಳು. ಅಲ್ಲಿಯೇ ಆಕೆಯು ಪುರುಷಶಿಶುವನ್ನು ಪ್ರಸವಿಸಿದಳು. ಆ ಶಿಶುವು ಸಹ ಅಜ್ಞಾತವಾಸದಲ್ಲಿಯೇ ಬೆಳೆಯುತಲಿತ್ತು.

ಕ್ರಿ.ಶ. ೧೭೫೦ನೆಯ ಇಸವಿಯಲ್ಲಿ ಸಾಹು ಮಹಾರಾಯನು ಸ್ವರ್ಗಸ್ಥನಾದನು. ಆತನಿಗೆ ಪುತ್ರಸಂತಾನವು ಇಲ್ಲದುದರಿಂದ, ತಾರಾಬಾಯಿಯು ಅಜ್ಞಾತವಾಸದಲ್ಲಿದ್ದ ತನ್ನ ಪೌತ್ರನಾದ ರಾಮರಾಜನನ್ನು ಸಾತಾರಕ್ಕೆ ಅಧಿಪತಿಯಾಗಿ ಮಾಡಿ ರಾಜ್ಯಪಾಲನೆಯನ್ನು ಮಾಡುತಲಿದ್ದಳು. ಆದರೆ ರಾಜ್ಯಕ್ಕೆ ವಂಶಪರಂಪರೆಯಾಗಿ ಮಂತ್ರಿತ್ವವನ್ನು ವಹಿಸುತಲಿದ್ದ ಬಾಲಾಜಿಬಾಜೀರಾಯ ಎಂಬ ಪೇಷ್ವೆಯು ಪ್ರಬಲನಾಗಿ, ರಾಜನ ಹೆಸರಿನಲ್ಲಿ ತಾನೇ ರಾಜ್ಯಾಡಳಿತಗಳನ್ನು ನೋಡಿಕೊಳ್ಳಲು ಯತ್ನಿಸಿದನು. ಇದರಿಂದ ಪೇಷ್ವೆಗೂ, ತಾರಾಬಾಯಿಗೂ ವೈರವು ಸಂಭವಿಸಿತು. ಅದರ ಮೇಲೆ ತಾರಾಬಾಯಿಯು ತನ್ನ ಪತಿಯ ಸಮಾಧಿಯನ್ನು ನೋಡುವ ಕಾರಣದಿಂದ ಸಿಂಹಗಡಕ್ಕೆ ಹೋಗಿ, ಅಲ್ಲಿರುವ ಅಮಾತ್ಯನ ಸಹಾಯದಿಂದ ರಾಜ್ಯವನ್ನು ತಾನೇ ಆಳಲು ಯತ್ನಿಸಿದಳು. ಈ ವಿಷಯ

ವನ್ನೆಲ್ಲ ಪೇಷ್ವೆಯು ಅರಿತು, ಸೈರದಿಂದ ತಾರಾಬಾಯಿಯನ್ನು ಸ್ವಾಧೀನ ಮಾಡಿಕೊಳ್ಳುವುದು ಅಸಾಧ್ಯವೆಂದು ಎಣಿಸಿ, ಒಳ್ಳೆಯ ಮಾತುಗಳಿಂದ ಆಕೆಯನ್ನು ಪೂನಾನಗರಕ್ಕೆ ಕರೆದುಕೊಂಡು ಹೋಗಿ, ರಾಜ್ಯದಲ್ಲಿ ನಡೆಯ ಬೇಕಾದ ವಿಷಯಗಳನ್ನೆಲ್ಲ ನಿನ್ನ ಅಭೀಷ್ಟದಂತೆಯೆ ನಡೆಸುವೆನು ಎಂದು ಹೇಳಿ ಆಕೆಯನ್ನು ಸಮಾಧಾನಗೊಳಿಸಿ, ರಾಜನು ಮಾತ್ರ ತನ್ನ ಆಜ್ಞೆಯಂತೆ ನಡೆಯಬೇಕು ಎಂದು ಉಸುರಿದನು.

ಈ ಸಮಯದಲ್ಲಿ ರಾಮರಾಜನು ಸಾಗೋಳಿ ಎಂಬ ಗ್ರಾಮದಲ್ಲಿದ್ದನು. ಈತನಿಗೆ ರಾಜ್ಯವ್ಯವಸ್ಥೆಯು ತಿಳಿಯದಕಾರಣ, ತನಗೆ ಸ್ವಲ್ಪ ಜಹಗೀರನ್ನು ಕೊಟ್ಟು ರಾಜ್ಯವನ್ನೆಲ್ಲ ಪೇಷ್ವೆಯು ಆಳಬಹುದು ಎಂದು ಬರೆದು ಕಳುಹಿಸಿದನು. ಆ ಪ್ರಕಾರವೇ ಪೇಷ್ವೆಯು ರಾಜನಾದನು. ಜಹಗೀರನ್ನು ಮಾತ್ರ ಕೊಡಲಿಲ್ಲ. ರಾಮರಾಜನನ್ನು ಪೇಷ್ವೆಯು ಸ್ವಲ್ಪ ಸೈನ್ಯದೊಡನೆ ಸತಾರಕ್ಕೆ ಕಳುಹಿಸಿ, ಅಲ್ಲಿ ಪಟ್ಟಣದಲ್ಲಿ ಮಾತ್ರ ಸಂಚರಿಸುವುದಕ್ಕೆ ಅನುಜ್ಞೆಯನ್ನು ಕೊಟ್ಟನು. ಆಮೇಲೆ ಪೇಷ್ವೆಯು ಔರಂಗಾಬಾದಿಗೆ ಹೋಗಲು, ತಾರಾಬಾಯಿಯು ಅಲ್ಲಿಗೆ ಬಂದು, ರಾಮರಾಜನಿಗೆ ಸ್ವತಂತ್ರ್ಯವಿಲ್ಲವೆಂಬುದನ್ನು ತಿಳಿದುಕೊಂಡು, ಕೂಡಲೆ ಆಕೆಯು ದಾಮಾಜೀ ಗಾಯಕ್ವಾಡನಿಗೆ, "ಇಲ್ಲಿ ನಿನಗೆ ಪ್ರತಿ ಪಕ್ಷಿಗಳು ಯಾರೂ ಇಲ್ಲದುದರಿಂದ ಮರಾಠಿಗಳ ರಾಜ್ಯವನ್ನು ಬ್ರಾಹ್ಮಣರ (ಪೇಷ್ವೆಗಳ) ಪಾಲಾಗದಂತೆ ಕಾಪಾಡ ಬೇಕು." ಎಂದು ಪತ್ರವನ್ನು ಬರೆಯಿಸಿ ಕಳುಹಿಸಿದಳು. ಅನಂತರ ರಾಮರಾಜನನ್ನು ಪಟ್ಟಣದಿಂದ ಕೋಟೆಯೊಳಕ್ಕೆ ಕರೆಯಿಸಿ, "ಎಲೋ! ನೀನು ಶಿವಾಜಿಯ ವಂಶಸ್ಥನಲ್ಲ. ನಾನು ನನ್ನ ಮೊಮ್ಮಗ ನನ್ನು ಹೀನರ ಮನೆಯಲ್ಲಿ ಬಚ್ಚಿಟ್ಟಿನು. ಅವರು ನನ್ನ ಮಗುವನ್ನು ಬಚ್ಚಿಟ್ಟು ಕೊಂಡು, ಅವರ ಮಗುವನ್ನು ನನಗೆ ಕೊಟ್ಟಂತೆ ತೋರುತ್ತದೆ. ನಾನು ಅದನ್ನು ವಿಚಾರಿಸದೆ ನಿನ್ನನ್ನು ಇಷ್ಟು ಪದವಿಗೆ ತಂದು ಈಗ ಚಿಂತಿಸಬೇಕಾ ಯಿತು. ನಾನು ಹೀನ ವಂಶಜನನ್ನು ಶಿವಾಜಿಯ ವಂಶಸ್ಥನನ್ನಾಗಿಮಾಡಿದ ಪಾಪಕ್ಕಾಗಿ, ಕೃಷ್ಣಾತೀರಕ್ಕೆ ಹೋಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು." ಎಂದು ತಿರಸ್ಕಾರೋಕ್ತಿಗಳನ್ನು ನುಡಿದು ಆತನನ್ನು ಕಾರಾಗೃಹದಲ್ಲಿಟ್ಟಳು.

ಆ ಮೇಲೆ ಆವೃದ್ಧನಾರಿಯು ಕೋಟೆಯ ಅಧಿಕಾರಿಗಳನ್ನು ಕರೆಯಿಸಿ, "ರಾಜ ಸಹ ಚರರಮೇಲೆಯೂ, ಕೋಕಣಸ್ಥ ಬ್ರಾಹ್ಮಣರ (ಪೇಷ್ವೆಗಳ) ಪಕ್ಷಪಾತಿಗಳ ಗೃಹಗಳಮೇಲೆಯೂ ಘರಂಗಿಗಳನ್ನು ಪ್ರಯೋಗಿಸಿ ನಿರ್ಮೂಲ ಮಾಡಿರಿ." ಎಂದಾಜ್ಞಾಪಿಸಿದಳು. ಈ ವಾರ್ತೆಯನ್ನು ಪೇಷ್ವೆಯ ಪಕ್ಷಪಾತಿ ಗಳು ಕೇಳಿ, ಈ ಮುದುಕಮ್ಮನಿಗೆ ಮತಿಚಾಂಚಲ್ಯವು ಉಂಟಾಗಿರಬಹುದು ಎಂದೆಣಿಸಿದರು. ಆದರೆ ಸೈನ್ಯಸಹಿತನಾಗಿ ಗಾಯಕ್ವಾಡಿಯು ಬರುತಲಿರುವುದನ್ನು

ಕಂಡು, ಅವರೆಲ್ಲರು ಕೃಷ್ಣಾತೀರದಲ್ಲಿದ್ದ ಪಾರೋಳೆ ಎಂಬ ಗ್ರಾಮದಲ್ಲಿ ಯುದ್ಧ ಸನ್ನದ್ಧರಾಗಿದ್ದರು. ದಾಮಾಜೀಗಾಯಕ್ವಾಡನು ಹದಿನೈದುಸಾವಿರ ಸೇನೆಯೊಡನೆ ಪಾರೋಳೆಗ್ರಾಮವನ್ನು ಸಮೀಪಿಸಿದನು. ಉಭಯಸೈನ್ಯಗಳಿಗೂ ಯುದ್ಧವು ನಡೆಯಿತು. ದಾಮಾಜಿಯು ಪ್ರತಿಪಕ್ಷದವರನ್ನು ಸೋಲಿಸಿ, ಸತಾರಾ ಪಟ್ಟಣವನ್ನು ಪ್ರವೇಶಿಸಿದನು. ಈತನು ಹೋಗಿ ತಾರಾಬಾಯಿಯನ್ನು ಸೇರಿದೊಡನೆಯೇ ಆಕೆಯು ಎರಡುಮೂರು ದುರ್ಗಗಳನ್ನು ಸ್ವಾಧೀನಪಡಿಸಿಕೊಂಡಳು. ಶತ್ರುವು ತಾರಾಬಾಯಿಗೆ ಅನುಕೂಲನಾದುದನ್ನು ತಿಳಿದು, ಪೇಷ್ವೆಯು ಶೀಘ್ರವಾಗಿ ಸಾತಾರಕ್ಕೆ ಬಂದು ದಾಮಾಜಿಯನ್ನು ಗೆದ್ದು ಪೂನೆಗೆ ಕಳುಹಿಸಿದನು. ತಾರಾಬಾಯಿಯನ್ನು ತನ್ನ ಸ್ವಾಧೀನಮಾಡಿಕೊಳ್ಳಲು ಅನೇಕ ಪ್ರಯತ್ನಗಳನ್ನು ಮಾಡಿದನು. ಆ ಸ್ವಾಭಿಮಾನಿಯಾದ ತಾರಾಬಾಯಿಯು ಎಷ್ಟು ವಿಧವಾದ ಪ್ರಯತ್ನಗಳಿಂದಲೂ ಸ್ವಾಧೀನಳಾಗಲಿಲ್ಲ. ಸರದಾರರೆಲ್ಲರೂ ಆಕೆಗೆ ಅನುಕೂಲರಾದುದರಿಂದ ಆಕೆಯನ್ನು ಬಲಾತ್ಕಾರದಿಂದ ಹೊರಕ್ಕೆ ಕರೆತರುವುದು ಅನುಚಿತವೆಂದು ಅರಿತು, ಪೇಷ್ವೆಯು ಮರಾಠಿಯವರ (ಸಾತಾರಾ, ಕೋಲಾಪುರ) ರಾಜ್ಯಗಳ ಮೇಲೆ ಅನೇಕ ಸಲ ದರೋಡೆಯವರನ್ನು ಕಳುಹಿಸಿ, ಗ್ರಾಮಗಳನ್ನು ಕೊಳ್ಳೆಹೊಡಿಯಿಸಿ, ತಾರಾಬಾಯಿಯನ್ನೂ ಕೋಲಾಪುರಾಧಿಪತಿಯಾದ ಸಂಭಾಜಿಯನ್ನೂ ವಶಮಾಡಿಕೊಂಡನು.

ಪೇಷ್ವೆಯು ಒಂದು ಕಾರ್ಯಾರ್ಥವಾಗಿ ಔರಂಗಾಬಾದಿಗೆ ಹೋಗಲು, ತಾರಾಬಾಯಿಯು ಐದುಸಾವಿರ ಸೈನ್ಯದೊಡನೆ ವಾಯಿ, ಸಾತಾರಪ್ರಾಂತ್ಯಗಳನ್ನು ಸ್ವಾಧೀನಪಡಿಸಿಕೊಂಡಳು. ಆಮೇಲೆ ಬಾಲಾಜಿಯು ಪೂನಾನಗರಕ್ಕೆ ಬಂದು ಕರ್ಣಾಟಕದ ಮೇಲಕ್ಕೆ ದಂಡೆತ್ತಿ ಹೋಗುವುದಕ್ಕಿಂತಲೂ, ತಾರಾಬಾಯಿಯ ವಶದಲ್ಲಿರುವ ಕೋಟೆಯನ್ನು ಗೆಲ್ಲುವುದು ಮುಖ್ಯನಾದುದು ಎಂದೆಣಿಸಿ, ಬಹುಸೈನ್ಯದೊಡನೆ ಆಕೆಯು ಇರುವ ಸಾತಾರಕೋಟೆಯನ್ನು ಮುತ್ತಿಗೆ ಹಾಕಿದನು. ಕೋಟೆಯೊಳಕ್ಕೆ ಅನ್ನಪಾನಗಳು ಹೋಗದಂತೆ ಮಾಡಿದನು. ಆಗ ದುರ್ಗಾಧಿಪತಿಯು ಯುದ್ಧಮಾಡುವುದು ಅಪ್ರಯೋಜನವಾದುದು ಎಂದು ತಿಳಿದು, ರಾಜನನ್ನು ತಾರಾಬಾಯಿಯ ಕೋಟೆಯಿಂದ ಹೊರಕ್ಕೆ ಕರೆತರಲು ಯತ್ನಿಸಿದನು. ಆತನ ಪ್ರಯತ್ನವು ತಾರಾಬಾಯಿಗೆ ಹೇಗೋ ತಿಳಿಯಿತು. ಆ ತಕ್ಷಣವೆ ಆಕೆಯು ಆ ದುರ್ಗಾಧಿಪತಿಗೆ ಮರಣದಂಡನೆಯನ್ನು ವಿಧಿಸಿದಳು. ಪೇಷ್ವೆಯು ತಾರಾಬಾಯಿಯನ್ನು ಗೆಲ್ಲುವುದು ದುಸ್ತರವೆಂದರಿತು, ಆಗ್ಯೆ ಆಕೆಯೊಡನೆ ಯುದ್ಧವನ್ನು ಬಿಟ್ಟು, ಸೈನ್ಯವನ್ನು ತೆಗೆದುಕೊಂಡು ಕರ್ಣಾಟಕಕ್ಕೆ ಹೊರಟುಹೋದನು.

ಈ ಶೂರ ವನಿತೆಯು ಪ್ರಥಮದಲ್ಲಿ ಪುತ್ರನ ಹೆಸರಿನಲ್ಲಿಯೂ, ಅನಂತರ ಪೌತ್ರನ ಹೆಸರಿನಲ್ಲಿಯೂ ರಾಜ್ಯವನ್ನು ನಿಪುಣತೆಯಿಂದ ಪಾಲಿಸಿ, ಸರ್ವಭೌಮ

ನಾದ ಔರಂಗಜೇಬನೊಡನೆಯೂ, ಮಹಾಬಲವಂತನಾದ ಪೇಷ್ವೆಯೊಡನೆಯೂ ಸಮಾನವಾಗಿ ಯುದ್ಧವನ್ನು ಮಾಡಿ, ಸ್ವಾಭಿಮಾನಿ ಎಂದು ಪ್ರಸಿದ್ಧಿಯನ್ನು ಪಡೆದು, ಎಂಭತ್ತಾರುವರ್ಷಗಳು ಜೀವಿಸಿ, ೧೭೬೧ ನೆಯ ಇಸವಿಯಲ್ಲಿ ಪರಲೋಕವನ್ನು ಸೇರಿದಳು.

ಗನೋರುಸಂಸ್ಥಾನದ ರಾಣಿ.

ಈ ಶೌರ್ಯಶಾಲಿನಿಯಾದ ಸತೀರತ್ನವು ಮಾಡಿದ ಸಾಹಸಕೃತ್ಯಗಳಲ್ಲದೆ, ವಿಶೇಷ ಚರಿತ್ರೆಗಳೇನೂ ತಿಳಿಯಬರುವುದಿಲ್ಲ. ಈಕೆಯ ಹೆಸರೇನೋ, ಜನನೀ ಜನಕರ ನಾಮಧೇಯವೇನೋ ತಿಳಿಯದು. ಅದರಿಂದ ಈಕೆಯ ಸ್ವಲ್ಪಚರಿತ್ರೆಯನ್ನು ಮಾತ್ರವೇ ಇಲ್ಲಿ ಬರೆದಿರುವೆನು.

ಮಧ್ಯಹಿಂದೂಸ್ಥಾನದಲ್ಲಿರುವ ಭೋಪಾಲಸಮೀಪದಲ್ಲಿ ಪೂರ್ವಕಾಲದಲ್ಲಿ ಗನೋರುಸಂಸ್ಥಾನ ಎಂಬ ಒಂದು ರಾಜ್ಯವು ಇತ್ತು. ಮಹಮ್ಮದೀಯರು ಹಿಂದೂಸ್ಥಾನದಲ್ಲಿ ಸ್ವದೇಶರಾಜರ ಸ್ವಾಧೀನದಲ್ಲಿದ್ದ ರಾಜ್ಯಗಳನ್ನು ತಾವು ಸ್ವಾಧೀನ ಮಾಡಿಕೊಳ್ಳುತಲಿದ್ದ ಕಾಲದಲ್ಲಿ, ಈ ಚಿಕ್ಕ ಸಂಸ್ಥಾನವು ಧೈರ್ಯದೊಡನೆ ಕೆಲವು ಕಾಲದವರೆಗೂ ಸ್ವತಂತ್ರವಾಗಿಯೇ ಇದ್ದಿತು. ಮೊಗಲರು ಡಿಲ್ಲಿಯನ್ನು ಪ್ರವೇಶಿಸಿ, ಅಲ್ಲಿರುವ ತುರುಷ್ಕರನ್ನು ಹೊರಡಿಸಲು, ಅವರು ನಾಲ್ಕುಕಡೆಗೂ ಹೊರಟು ಅಲ್ಲಲ್ಲಿ ತಂತಮ್ಮ ಶಕ್ತ್ಯನುಸಾರವಾಗಿ ರಾಜ್ಯಗಳನ್ನು ಸ್ಥಾಪಿಸಲಾರಂಭಿಸಿದರು. ಇಂತಹವರಲ್ಲಿ ಸೇರಿದ ಒಬ್ಬ ಮಹಮ್ಮದೀಯನು ಮಧ್ಯಹಿಂದೂಸ್ಥಾನಕ್ಕೆ ಬಂದು ಗನೋರುರಾಜ್ಯವನ್ನು ಜೈಸಿ, ಅಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಬೇಕು ಎಂದು ನಿಶ್ಚಯಿಸಿ, ಗನೋರಿನಮೇಲೆ ದಂಡೆತ್ತಿ ಬಂದನು. ಶೂರನಾದ ಗನೋರು ರಾಜನು ರೋಷಯುಕ್ತನಾಗಿ ಶತ್ರುಸೈನ್ಯಗಳನ್ನು ತಾಕಿ ಘೋರವಾಗಿ ಯುದ್ಧವನ್ನು ಮಾಡಿದನು. ರಣರಂಗದಲ್ಲಿ ರಕ್ತವು ಪ್ರವಾಹದಂತೆ ಹರಿಯಲಾರಂಭಿಸಿತು. ಆದರೆ ಅವು ಮಹಮ್ಮದೀಯರಿಗೆ ಸುದಿನಗಳಾದಕಾರಣ ಸ್ವಲ್ಪಹೊತ್ತಿಗೆ ಗನೋರುರಾಜನು ವೀರಸ್ವರ್ಗವನ್ನು ಪಡೆಯಲು, ಜಯಲಕ್ಷ್ಮಿಯು ಯವನರನ್ನು ಸೇರಿದಳು.

ರಾಜನೂ, ಅನೇಕ ಶೂರವರರೂ ರಣರಂಗದಲ್ಲಿ ಮೃತರಾದರು ಎಂದು ಕೇಳಿ ರಾಣಿಯು ಅತ್ಯಂತ ದುಃಖಿತೆಯಾದಳು. ಸ್ವಲ್ಪಹೊತ್ತಿಗೆ ದುಃಖಿಸುವುದಕ್ಕೆ

ಇದು ಸಮಯವಲ್ಲವೆಂದು ಧೈರ್ಯವನ್ನು ತಳೆದು, ಮರಳಿ ಹೊಸ ಸೈನ್ಯಗಳನ್ನು ಸಿದ್ಧಪಡಿಸಿಕೊಂಡು ಯುದ್ಧಕ್ಕೆ ಹೊರಟಳು. ಯುದ್ಧನಿಪುಣೆಯಾದ ಆ ರಾಣಿಯು ಹತಶೇಷರೊಡನೆ ಹೊಸ ಸೈನ್ಯವನ್ನು ಸೇರಿಸಿ ಯುದ್ಧಕ್ಕೆ ಪ್ರಾರಂಭಿಸಿದಳು. ಈಕೆಯ ಸೈನ್ಯವು ಯವನರ ಸೈನ್ಯದಲ್ಲಿ ಅರ್ಧಭಾಗವೂ ಇರಲಿಲ್ಲ. ಅದರಿಂದ ಈಕೆಯ ಪ್ರಯತ್ನವು ನಿಷ್ಫಲವಾಗಿ, ಇವರ ಕೋಟೆಗಳಲ್ಲಿ ಐದಾರನ್ನು ಯವನರು ವಶಮಾಡಿಕೊಂಡರು. ಆದರೂ ರಾಣಿಯು ಇಪ್ಪ ಅಲ್ಪಸೇನೆಯೊಡನೆಯೇ ಯುದ್ಧವನ್ನು ಮಾಡುತಲಿದ್ದಳು. ಸ್ವಲ್ಪಹೊತ್ತಿಗೆ ಅವರು ತಮ್ಮನ್ನು ಸೆರೆಹಿಡಿಯಬಹುದು ಎಂದು ತೋರಲು, ರಾಣಿಯು ತಮ್ಮ ವಶದಲ್ಲಿ ನಿಕ್ಕಿದ್ದ ನರ್ಮದಾ ಕೋಟೆಯನ್ನು ಸೇರಲು ಹೊರಟಳು. ತುರುಷ್ಕಸೇನೆಯು ಬೆನ್ನುಹತ್ತಿತು. ಆಕೆಯು ಅತಿಶೀಘ್ರವಾಗಿ ಕೋಟೆಯನ್ನು ಹೊಕ್ಕು ಬಾಗಿಲುಗಳನ್ನು ಮುಚ್ಚಿಸಿದಳು. ಈ ಸಂದರ್ಭದಲ್ಲಿ ಅನೇಕಜನ ಹಿಂದೂಸೈನಿಕರು ಹೊರಗೆ ನಿಲ್ಲಬೇಕಾಯಿತು. ಹೊರಗೆ ನಿಂತವರನ್ನು ಯವನಸೈನಿಕರು ಅತಿಕ್ರೂರವಾಗಿ ಕೊಂದರು. ಒಳಗೆಇಪ್ಪ ಅಲ್ಪಸೇನೆಯಿಂದಲೇ ರಾಣಿಯು ಯುದ್ಧಮಾಡುತಲಿದ್ದಳು. ಆದರೆ ಮ್ಲೇಚ್ಛರು ನಿಚ್ಚಣಿಗೆಗಳನ್ನು ಹಾಕಿ ಕೋಟೆಯ ಮೇಲಕ್ಕೆ ಹತ್ತಿ ಸಾವಿರಗಟ್ಲೆಯಾಗಿ ಕೋಟೆಯೊಳಕ್ಕೆ ಬರಲಾರಂಭಿಸಿದರು. ಆಗ ರಾಣಿಯು ಯುದ್ಧದಿಂದ ಪ್ರಯೋಜನವಿಲ್ಲ ಎಂದು ತಿಳಿದು, ಅವರಿಗೆ ಶರಣಾಗತಳಾಗಲು ಎಣಿಸಿ, "ಕೋಟೆಯನ್ನು ನಿಮ್ಮ ಸ್ವಾಧೀನ ಮಾಡುವೆವು; ಯುದ್ಧವನ್ನು ನಿಲ್ಲಿಸಿರಿ." ಎಂದು ವರ್ತಮಾನವನ್ನು ಕಳುಹಿಸಿದಳು.

ಈ ವರ್ತಮಾನದಿಂದ ಖಾನುಸಾಹೇಬನು ಸಂತುಷ್ಟನಾದನು. ಅವನು ಯುದ್ಧಸಮಯದಲ್ಲಿ ರಾಣಿಯ ಅಸಮಾನರೂಪವನ್ನು ಕೇಳಿ, ಆಕೆಯನ್ನು ಎಂದಿಗೆ ಕೈಹಿಡಿಯುವೆನೋ ಎಂದು ಆತುರನಾಗಿದ್ದ ಕಾರಣ ಬಂದಚಾರನೊಡನೆ, "ತಮ್ಮ ಅಧಿಕಸೌಂದರ್ಯವನ್ನು ಕೇಳಿ ನಾನು ಮೆಚ್ಚಿದೆನು. ತಾವು ಇದುವರೆಗೂ ಮಹಾರಾಜ್ಞಿಯ ಪದವಿಯಲ್ಲಿದ್ದವರಾದ ಕಾರಣ ನಾನು ಜೀವಿಸಿರುವವರೆಗೂ ತಮ್ಮನ್ನು ಆ ಪದವಿಯಲ್ಲಿಯೇ ಇಟ್ಟಿರುವೆನು. ನಾನು ತಮ್ಮ ಸೇವಕನಂತೆ ರಾಜ್ಯವನ್ನು ಆಳುವೆನು." ಎಂದು ಸಂಕೋಚವಿಲ್ಲದೆ ಹೇಳಿ ಕಳುಹಿಸಿದನು. ಈ ಮಾತುಗಳಿಂದ ರಾಣಿಯು ಆ ದುಷ್ಟನ ಅಭಿಪ್ರಾಯವನ್ನು ತಿಳಿದು ಸ್ವಲ್ಪಹೊತ್ತು ಯೋಚಿಸಿ, ಆ ದುರಾತ್ಮನನ್ನು ಕಪಟೋಪಾಯದಿಂದ ಸಂಹರಿಸಿ, ಯವನರಮೇಲೆ ತನಗಿರುವ ಹಗೆಯನ್ನು ತೀರಿಸಿಕೊಳ್ಳಲೆಣಿಸಿ, "ನಾನು ಸಹ ತಮ್ಮ ಅತುಲಪರಾಕ್ರಮವನ್ನು ಕೇಳಿದ ಮೊದಲ್ಗೊಂಡು ತಮ್ಮ ಪತ್ನಿಯಾಗಲು ಆತುರಳಾಗಿರುವೆನು. ಕ್ಷತ್ರಿಯ ರಮಣಿಯರು ಪರಾಕ್ರಮವಂತರನ್ನೇ ಮೆಚ್ಚುವರು. ನನ್ನಂತಹ ಸ್ತ್ರೀಯನ್ನು ತಾವು ವಿವಾಹಮಾಡಿಕೊಳ್ಳಲೆಣಿಸಿದುದು ನನ್ನ ಭಾಗ್ಯವೇ ಸರಿ. ಆದರೆ ವಿವಾಹಪ್ರಯತ್ನಗಳನ್ನು ಚೆನ್ನಾಗಿ ಮಾಡುವುದಕ್ಕೆ

ನನಗೆ ಸ್ವಲ್ಪ ಅವಕಾಶವನ್ನು ಕೊಡಬೇಕು." ಎಂದು ದೂತನೊಡನೆ ಹೇಳಿ ಕಳುಹಿಸಿದಳು.

ಖಾನನು ಆಕೆಯು ಹೇಳಿದಂತೆ ಒಪ್ಪಿಕೊಂಡನು. ಆ ಸಮಯದಲ್ಲಿ ಅವನಿಗೆ ಉಂಟಾದ ಸಂತೋಷವು ಹಿಂದೆ ಯಾವಾಗಲೂ ಉಂಟಾಗಲಿಲ್ಲ. ಆ ಖಾನುಸಾಹೇಬನು ಸಂತೋಷವಾಗಿ ಕೆಲವು ದಿನಗಳನ್ನು ಕಳೆದನು. ಒಂದು ದಿವಸ ರಾಣಿಯು ಲಗ್ನ ನಿಶ್ಚಯಾರ್ಥವೆಂದು ರತ್ನಖಚಿತವಾದ ಉಡುಪನ್ನು ಖಾನನಿಗೆ ಕಳುಹಿಸಿದಳು. ಖಾನನು ಆ ಉಡುಪನ್ನು ನೋಡಿ ಮಿತಿಯಿಲ್ಲದ ಸಂತೋಷದೊಡನೆ ಅದನ್ನು ಧರಿಸಿ ವಿವಾಹಕ್ಕೆ ಯಾವಾಗ ಕರೆಯುವರೋ ಎಂದು ನಿರೀಕ್ಷಿಸಿಕೊಂಡಿದ್ದನು. ರಣವಾದ್ಯಗಳೂ ಘೋರನಾದಗಳೂ ಕೇಳಿಬರುತಲಿದ್ದ ಸ್ಥಳದಲ್ಲಿ, ಮಂಗಳವಾದ್ಯಗಳೂ, ಶುಭವಾಕ್ಯಗಳೂ ಕೇಳಿಬರುತಲಿದ್ದವು. ತನ್ನ ಅಧಿಪತಿಯ ವಿವಾಹ ಸಂತೋಷದಿಂದ ಮ್ಲೇಚ್ಛಸೈನಿಕರು ಮದಿರಾಪಾನ ಮತ್ತರಾಗಿದ್ದರು.

ಒಂದೆರಡು ಗಳಿಗೆಗಳಾಳಗೆಯೇ ಚಾರರು ಖಾನನನ್ನು ಕರೆಯಲು ಬಂದರು. ಅವನು ಪರಮಾನಂದದೊಡನೆ ವಿವಾಹಮಂಟಪಕ್ಕೆ ಬಂದನು. ಅವನು ರಾಣಿಯ ಲಾವಣ್ಯವನ್ನು ನೋಡಿ ಪರವಶನಾದನು. ನರ್ಮದಾನದೀ ತೀರದಲ್ಲಿದ್ದ ಒಂದು ವಿಶಾಲಭವನವು ವಿವಾಹಕ್ಕಾಗಿ ಅಲಂಕರಿಸಲ್ಪಟ್ಟಿತ್ತು. ರಾಣಿಯು ಸರ್ವಾಭರಣಭೂಷಿತೆಯಾಗಿ ಬಂದು ಮಂಚದಮೇಲೆ ಕುಳಿತಿದ್ದಳು. ಮಿಕ್ಕ ರಾಣಿವಾಸದ ಸ್ತ್ರೀಯರೂ, ದಾಸಿಯರೂ ಉನ್ನತವಾದ ಒಂದು ಸ್ಥಳದಲ್ಲಿ ಕುಳಿತಿದ್ದರು. ಅವರೆಲ್ಲರೂ ಕೈಯಲ್ಲಿ ದೀವಟಿಗೆಗಳನ್ನು ಹಿಡಿದಿದ್ದರು. ಖಾನನು ಬಂದಕೂಡಲೆ ರಾಣಿಯು ಆತನನ್ನು ಬೇರೊಂದು ಮಂಚದಮೇಲೆ ಕುಳ್ಳಿರಿಸಿದಳು. ಆತನು ಮಂಚದಮೇಲೆ ಕುಳಿತು ರಾಣಿಯೊಡನೆ ಸ್ವಲ್ಪಹೊತ್ತು ಮಾತನಾಡುತ್ತಿರಲು, ಅವನ ಶರೀರದಲ್ಲಿ ಒಂದು ವಿಧವಾದ ತಾಪವು ಉಂಟಾಯಿತು. ಶರೀರವೆಲ್ಲ ಕಪ್ಪಾಗಿ ನಾಲಿಗೆಯು ಎಳೆದುಕೊಂಡು ಹೋಯಿತು. ಅವನು ಮರಣವೇದನೆಯನ್ನು ತಡೆಯಲಾರದೆ ನೆಲದಮೇಲೆ ಬಿದ್ದು ಉರುಡಾಡಲಾರಂಭಿಸಿದನು. ಆಗ ರಾಣಿಯು ಅವನನ್ನು ಸಮೀಪಿಸಿ, "ಪಾಪೀ! ನಿನ್ನ ಪಾಪಫಲವನ್ನು ಅನುಭವಿಸು. ಕೆಟ್ಟವೋರೆಯವನೆ! ನಿನಗೆ ಮೃತ್ಯುವು ಸಮೀಪಿಸಿತು. ನೀನು ಧರಿಸಿರುವ ಉಡುಪು ವಿಷಯುಕ್ತವಾದುದು. ಆದಕಾರಣ ಆ ವಿಷವೆಲ್ಲ ನಿನ್ನ ಶರೀರದಲ್ಲಿ ಸೇರಿ ನಿನ್ನ ಜೀವಿತಾಶೆಯನ್ನು ಪೂರ್ತಿಮಾಡಿತು. ನನ್ನ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳಲು ಬೇರೊಂದು ಮಾರ್ಗವನ್ನು ಕಾಣದೆ ಈ ನಿಂದಿತಕಾರ್ಯವನ್ನು ಮಾಡಲು ಸಾಹಸಮಾಡಿದೆನು." ಎಂದಳು. ಖಾನು ಸಾಹೇಬನ ಅವಸ್ಥೆಯನ್ನು ನೋಡಿ ಆತನ ಸೇವಕರು ನಿಶ್ಚೇಷ್ಟಿತರಾದರು.

ಅವರು ಎಚ್ಚತ್ತುಕೊಳ್ಳುವದರೊಳಗೆ ರಾಣಿಯು ನರ್ಮದೆಯೊಳಗೆ ದುಮುಕಿದಳು. ದಾಸಿಯರು, ಆ ಸ್ತ್ರೀಯರು ತುಪಾಕಿಯ ಮದ್ದಿನ ಚೀಲಗಳಮೇಲೆ ಕುಳಿತಿದ್ದುದರಿಂದ ಕೈಯಲ್ಲಿದ್ದ ದೀವಟಿಗೆಗಳಿಂದ ಅವುಗಳಿಗೆ ಬೆಂಕಿಯನ್ನು ಹಚ್ಚಲು ಅಲ್ಲಿದ್ದವರೆಲ್ಲರು ಸುಟ್ಟು ಬೂದಿಯಾದರು! ತೇಜೋಮಯಳಾದ ಆ ರಾಣಿಯು ಅತಿಯುಕ್ತಿಯಿಂದ ಶತ್ರುವನ್ನು ನಾಶಮಾಡಿ, ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡಳು!

ಜಸರೇಶ್ವರಿ.

ಈ ಯುವತಿಯು ಅಕ್ಬರ್‌ಬಾದಷಹನ ಕಾಲದಲ್ಲಿ ಇದ್ದಳು. ಈಕೆಯ ನಿಜವಾದ ಹೆಸರು ಯಾರಿಗೂ ತಿಳಿಯದು. ಗ್ರಾಮದೇವತೆಯಾದ ಜಸರೇಶ್ವರಿಯ ಹೆಸರಿನಿಂದಲೇ ಈಕೆಯನ್ನು ಕರೆಯುತಲಿದ್ದರು. ಜೇಸೋರ್ ಸಂಸ್ಥಾನಾಧೀಶನಾದ ವಿಕ್ರಮಾದಿತ್ಯನು ಈಕೆಯ ಮಾವ. ಈಕೆಯ ಪತಿಯ ಹೆಸರು ಪ್ರತಾಪಾದಿತ್ಯ. ಈತನು ಅಕ್ಬರನಿಗೆ ಕಪ್ಪವನ್ನು ಸಲ್ಲಿಸುತಲಿದ್ದ ಬಂಗಾಳಿಯ ಮಾಂಡಲೀಕರಲ್ಲಿ ಒಬ್ಬನು.

ಪ್ರತಾಪಾದಿತ್ಯನು ಶೂರನಾದರೂ, ದುರ್ಗುಣಗಳಿಗೆ ಆಶ್ರಯಭೂತನಾಗಿ ಪ್ರಜೆಗಳನ್ನು ಪೀಡಿಸುತಲಿದ್ದನು. ಒಂದಾನೊಂದುಸಲ ಈತನ ಪೂರ್ವಿಕರಲ್ಲಿ ಯಾರಿಗೋ ಗ್ರಾಮದೇವತೆಯು ಪ್ರತ್ಯಕ್ಷಳಾಗಿ, ನಿಮ್ಮ ವಂಶದಲ್ಲಿ ಯಾರಾದರೂ ಪಾಪಾಚರಣೆಯನ್ನು ನಡೆಸಿದರೆ ನಾನು ಗ್ರಾಮವನ್ನು ಬಿಡುವೆನೆಂತಲೂ, ನನ್ನ ವಿಗ್ರಹದ ಮುಖವು ಬೇರೊಂದುಕಡೆಗೆ ತಿರುಗಿದರೆ ನಾನು ಗ್ರಾಮವನ್ನು ಬಿಟ್ಟಿನು ಎಂದು ತಿಳಿಯಬೇಕೆಂತಲೂ ಹೇಳಿದಳು ಎಂದು ಪ್ರತೀತಿಯು ಉಂಟು. ಪ್ರತಾಪಾದಿತ್ಯನ ದುಷ್ಪ್ರವರ್ತನೆಯನ್ನು ನೋಡಿ ಪ್ರಜೆಗಳು ಅಲ್ಪಕಾಲದಲ್ಲಿಯೇ ಗ್ರಾಮದೇವತೆಯು ಗ್ರಾಮವನ್ನು ತ್ಯಜಿಸುವಳು ಎಂದು ಹೆದರುತಲಿದ್ದರು. ಜಸರೇಶ್ವರಿಯು ದುಷ್ಟನಾದ ಪತಿಯನ್ನು ಭಕ್ತಿಯೊಡನೆ ಸೇವಿಸುತ್ತ, ಆತನನ್ನು ಸನ್ಮಾರ್ಗಕ್ಕೆ ತರಲು ಸರ್ವದಾ ಪ್ರಯತ್ನಿಸುತಲಿದ್ದಳು.

ರಾಜನು ಪತ್ನಿಯ ಮಾತುಗಳನ್ನು ಲಾಲಿಸದೆ ದುರ್ಮಾರ್ಗದಲ್ಲಿಯೇ ನಡೆಯುತಲಿದ್ದನು. ಆತನು ದ್ರವ್ಯಾಶೆಯಿಂದ, ಸೈನ್ಯಸಹಿತನಾಗಿ ಗ್ರಾಮಗಳನ್ನೂ ಹಳ್ಳಿಗಳನ್ನೂ ಕೊಳ್ಳೆಹೊಡೆಯುತಲಿದ್ದನು. ಆತನ ವರ್ತನವನ್ನು ಅರಿತು ಅನೇಕ

ದುಷ್ಟರು ಆತನೊಡನೆ ಸೇರಿದರು. ಈತನು ಅವರ ಸಹಾಯದಿಂದ ದಕ್ಷಿಣ ಬಂಗಾಳೆಯಲ್ಲಿರುವ ಸಾಮಂತರನ್ನೂ ಜಮೀನ್ದಾರರನ್ನೂ ಕೊಳ್ಳೆಹೊಡೆದು, ತಾನು ಅವರಿಗೆ ಪ್ರಭುವು ಎಂದು ಹೇಳಿ ಅವರಿಂದ ಕಪ್ಪವನ್ನು ತೆಗೆದುಕೊಳ್ಳುತ ಲಿದ್ದನು. ಈತನಿಗೆ ಪೋರ್ಚುಗೀಸರು ಸಹಾಯಕರಾದುದರಿಂದ ಬಂಗಾಳಾ ಸುಬೇದಾರನಿಗೂ ಈತನು ದುಸ್ಸಾಧ್ಯನಾಗಿದ್ದನು. ಈತನು ಅಕ್ಬರನಿಗೆ ಕಪ್ಪವನ್ನು ಕಟ್ಟದೆ ಸ್ವತಂತ್ರವನ್ನು ವಹಿಸಿದನು.

ಪ್ರತಾಪಾದಿತ್ಯನಿಗೆ ಚಿಕ್ಕಪ್ಪನಾದ ಬಸಂತರಾಯನು ಸುಗುಣವಂತನಾಗಿ, ಪ್ರಜಾನುರಾಗವನ್ನು ಪಡೆದು ಜೇಸೋರಿನಲ್ಲಿಯೇ ವಾಸಮಾಡಿಕೊಂಡಿದ್ದನು. ಈತನು ಆಗಾಗ್ಗೆ ತನ್ನ ಅಣ್ಣನ ಮಗನಿಗೆ ಅನೇಕ ವಿಧವಾಗಿ ನೀತಿಮಾರ್ಗ ವನ್ನು ಉಪದೇಶಿಸುತಲಿದ್ದನು. ಈ ದುರಾತ್ಮನಿಗೆ ಆ ಮಾತುಗಳಿಂದ ಬಸಂತ ರಾಯನಲ್ಲಿ ದ್ವೇಷವು ಉಂಟಾಗಿ, ತನ್ನ ಪ್ರಜೆಗಳು ಆತನ ಸತ್ಸ್ವಭಾವದಿಂದ ಆತನವಶರಾಗಿ ತನ್ನನ್ನು ರಾಜ್ಯದಿಂದ ಹೊರಡಿಸಿ, ಆತನಿಗೆ ರಾಜ್ಯಾಧಿಕಾರ ವನ್ನು ಕೊಡಬಹುದು ಎಂದು ಎಣಿಸಿ, ಆತನನ್ನು ಕೊಲ್ಲಲು ನಿಶ್ಚಯಿಸಿದನು.

ಜಸರೇಶ್ವರಿಯು ಪತಿಯ ದುರಾಲೋಚನೆಯನ್ನು ಅರಿತು, ತನ್ನಿವಾರ ಣಾರ್ಥವಾಗಿ ಪತಿಗೆ ಅನೇಕ ವಿಧವಾಗಿ ಬೋಧಿಸಿ, ಬಸಂತರಾಯನನ್ನು ರಕ್ಷಿಸ ಬೇಕು ಎಂದು ಬೇಡಿಕೊಂಡಳು. ಅದರಿಂದ ಫಲವು ಉಂಟಾಗಲಿಲ್ಲ. ರಾಜನು ತಾನು ಎಣಿಸಿದ ಕಾರ್ಯವನ್ನು ಮಾಡಲು ನಿಶ್ಚಯಮಾಡಿಕೊಂಡು, ಸಮಯ ವನ್ನು ನಿರೀಕ್ಷಿಸಿಕೊಂಡು ಇದ್ದನು. ಜಸರೇಶ್ವರಿಯು ತನ್ನ ಪತಿಯಿಂದ ಅಂತಹ ದುಷ್ಕಾರ್ಯವು ನಡೆಯಬಾರದು ಎಂದು ಒಂದು ಉಪಾಯವನ್ನು ಆಲೋಚಿ ಸಿದಳು.

ಬಂಗಾಳೆಯಲ್ಲಿ ಒಬ್ಬ ಹೆಂಗಸು ಯಾವುದಾದರೂ ಒಂದು ಸಾಹಸಕಾರ್ಯ ವನ್ನು ಒಬ್ಬ ಶೂರ ಪುರಷನಿಂದ ಮಾಡಿಸಲು ಎಣಿಸಿದರೆ, ಆಕೆಯು ತನ್ನ ಹಸ್ತ ಕಂಕಣವನ್ನು ಶೂರರ ಸಭೆಗೆ ಕಳುಹಿಸುವಳು. ಆ ಕಂಕಣವನ್ನು ಒಬ್ಬ ದಾಸಿಯು ಆ ಶೂರರ ಮಧ್ಯದಲ್ಲಿ ಇಡುವಳು. ಅಲ್ಲಿರುವ ಶೂರರಲ್ಲಿ ಒಬ್ಬನು ಆ ಕಂಕಣವನ್ನು ತೆಗೆದುಕೊಂಡು, ಕಂಕಣವನ್ನು ಕಳುಹಿಸಿದ ಸ್ತ್ರೀಯು ಎಂತಹ ದುರ್ಘಟಕಾರ್ಯ ವನ್ನು ಹೇಳಿದರೂ ನಿರ್ವಹಿಸುವೆನು ಎಂದು ಪ್ರತಿಜ್ಞೆಯನ್ನು ಮಾಡುವನು. ಆ ದೇಶದಲ್ಲಿ ಈ ಯಾಚಾರವು ಬಹು ಕಾಲದಿಂದಲೂ ನಡೆಯುತಲಿರುವುದಂತೆ. ವರ್ತಮಾನಕಾಲದಲ್ಲಿಯೂ ಅದು ಅಪರೂಪವಾಗಿ ನಡೆಯುವುದು ಉಂಟಂತೆ. ಈ ಯಾಚಾರವನ್ನು ಅನುಸರಿಸಿ ಜಸರೇಶ್ವರಿಯು ಪ್ರತಾಪಾದಿತ್ಯನ ಸಭಾಮಂದಿರಕ್ಕೆ ತನ್ನ ಹಸ್ತಕಂಕಣವನ್ನು ಕಳುಹಿಸಿದಳು. ಕಂಕಣವನ್ನು ನೋಡಿ ಸಭಿಕರು

ಆಶ್ಚರ್ಯಾನ್ವಿತರಾದರು. ಎಲ್ಲರೂ ರಾಜನನ್ನು ನೋಡುತಲಿದ್ದರು. ಪ್ರತಾಪಾದಿತ್ಯನು ತಿರಸ್ಕಾರಭಾವದಿಂದ ಕಂಕಣವನ್ನು ನೋಡಲಿಲ್ಲ. ಸ್ವಲ್ಪಹೊತ್ತಿನವರೆಗೂ ಸಭೆಯು ನಿಶ್ಶಬ್ದವಾಗಿತ್ತು. ಕೊನೆಗೆ ಒಬ್ಬ ಪುರುಷನು ಎದ್ದು ಮೆಲ್ಲ ಮೆಲ್ಲಗೆ ಹೆಜ್ಜೆಯನ್ನು ಇಡುತ್ತ ಬಂದು ಕಂಕಣವನ್ನು ಎತ್ತಿಕೊಂಡು, ರಾಜನಿಗೆ ಅಭಿಮುಖನಾಗಿ, " ಈ ಕಂಕಣವು ತಮ್ಮ ಪತ್ನಿಯ ಬಳಿಯಿಂದ ಬಂದಿತು. ರಾಣಿಯವರಿಗೆ ಅಂತಹ ಸಂಕಟವೇನು ಸಂಭವಿಸಿತೋ ನಾನರಿಯೆ. ತಾವೇ ಇದನ್ನೆತ್ತುವಿರೆಂದು ಇದಿರುನೋಡುತಲಿದ್ದೆನು. ತಾವು ತೆಗೆದುಕೊಳ್ಳಲಿಲ್ಲವಾದ ಕಾರಣ, ನಾನು ತೆಗೆದುಕೊಳ್ಳಬೇಕಾಯಿತು. ಏಕೆಂದರೆ ಯಾರೂ ಕಂಕಣವನ್ನು ತೆಗೆದುಕೊಳ್ಳದಿದ್ದರೆ ಈ ಸಭಾಮಂದಿರದಲ್ಲಿ ಶೂರರೇ ಇಲ್ಲವೆಂದು ಅರ್ಥವಾಗುವುದು. ನಾನು ಈ ಕಂಕಣವನ್ನು ಕೈಯಲ್ಲಿ ಹಿಡಿದು ಹೀಗೆ ಪ್ರತಿಜ್ಞೆಯನ್ನು ಮಾಡುತಲಿದೇನೆ. ನನ್ನ ಶರೀರದಲ್ಲಿ ಪ್ರಾಣವಿರುವವರೆಗೂ ರಾಣಿಯವರ ಅಭೀಷ್ಟಕಾರ್ಯವನ್ನು ನೆರವೇರಿಸದೆ ಬಿಡೆನು." ಎಂದು ಉಸುರಿದನು. ಈ ಶೂರವರನು ರಾಣಿಯ ಸೋದರನೂ, ಸೇನಾನಾಯಕನೂ ಆಗಿದ್ದನು.

ಸೇನಾಧಿಪತಿಯ ಪ್ರತಿಜ್ಞೆಯನ್ನು ಕೇಳಿ ರಾಜನಿಗೆ ಅತ್ಯಾಗ್ರಹವು ಉಂಟಾಯಿತು. ಆದರೆ ರಾಜನು ತನ್ನ ಭಾವಮೈದುನನನ್ನು ಏನೂಮಾಡಲಾರದೆ ಸುಮ್ಮನಾದನು. ಕಂಕಣವಾಹಕಳಾದ ದಾಸಿಯು ಸೇನಾಧಿಪತಿಯ ವಾಕ್ಯಗಳನ್ನು ಕೇಳಿ ಸಂಭ್ರಮದೊಡನೆ, " ರಾಣಿಯವರ ಅಭೀಷ್ಟವನ್ನು ಕೇಳಿರಿ. ಈ ಕಂಕಣವನ್ನು ತೆಗೆದ ವೀರ ಪುರುಷನು ರಾಜಾಬಸಂತರಾಯನನ್ನೂ, ಆತನ ಕುಟುಂಬವನ್ನೂ ರಕ್ಷಿಸುವುದಕ್ಕೆ ತನ್ನ ಪ್ರಾಣವು ಇರುವವರೆಗೂ ಪ್ರಯತ್ನಿಸಬೇಕು." ಎಂದು ನುಡಿದಳು. " ಆಕೆಯ ಇಚ್ಛೆಯಂತೆಯೇ ನಡೆಯುವುದು," ಎಂದು ಹೇಳಿ ಸೇನಾಧಿಪತಿಯು ಸ್ವಸ್ಥಾನದಲ್ಲಿ ಕುಳಿತುಕೊಂಡನು.

ಆ ದಿವಸ ಸಭೆಯು ಪೂರ್ತಿಯಾದ ಅನಂತರ ರಾಜನು ರಾಣಿಯಗೃಹಕ್ಕೆ ಬಂದನು. ಪ್ರತಾಪಾದಿತ್ಯನು ಇತರರಿಗೆ ಎಷ್ಟು ಭಯಂಕರನಾಗಿದ್ದರೂ, ಚಾತುರ್ಯವತಿಯಾದ ತನ್ನ ಪತ್ನಿಯ ಬಳಿಯಲ್ಲಿ ಮಾತ್ರ ಪರಮಸಾತ್ವಿಕನಾಗಿ ಇರುತಲಿದ್ದನು. ಎಷ್ಟು ದುಷ್ಟರಾದರೂ ಆಕೆಯನ್ನು ನೋಡಿದೊಡನೆಯೇ ಶಿಷ್ಟರಾಗುತಲಿದ್ದರು. ಪ್ರತಾಪಾದಿತ್ಯನು ನಯದಿಂದಲೂ, ಭಯದಿಂದಲೂ ರಾಣಿಯ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿದನು. ಬಸಂತರಾಯನು ಮೃತನಾದರೆ ತಮಗೆ ಅನೇಕ ಲಾಭಗಳು ಉಂಟೆಂತಲೂ, ಆತನು ಜೀವಿಸಿದ್ದರೆ ತನಗೆ ಸೌಖ್ಯವಿಲ್ಲವೆಂತಲೂ ತಿಳಿಸಿದನು. ಆದರೆ ರಾಣಿಯು ತನ್ನ ನಿಶ್ಚಯವನ್ನು ಬಿಡದೆ, " ನಿಮಗೆ ಸುಖವು ಉಂಟಾದರೂ, ದುಃಖವು ಉಂಟಾದರೂ ಅಂತಹ ದುಷ್ಕಾರ್ಯವನ್ನು ನಿಮ್ಮಿಂದ ಮಾಡಗೊಡೆನು." ಎಂದು ಸ್ಪಷ್ಟವಾಗಿ ನುಡಿದಳು.

ಅನಂತರ ರಾಜನು ಬಹಿರಂಗವಾಗಿ ಚಿಕ್ಕಪ್ಪನನ್ನು ಸಂಹರಿಸುವುದು ಅಸಾಧ್ಯವು ಎಂದು ತಿಳಿದು ಕಪಟಮಾರ್ಗವನ್ನು ಅವಲಂಬಿಸಿದನು. ಆತನು ತಾನು ಇದುವರೆಗೂ ನಡೆಸಿದ ದುಷ್ಕಾರ್ಯಗಳಿಗಾಗಿ ಪಶ್ಚಾತ್ತಾಪಪಟ್ಟವನಂತೆ ನಟಿಸಿ, ಬಸಂತರಾಯನ ಸಮಕ್ಷಮಕ್ಕೆಹೋಗಿ, ಆತನಿಗೆ ಎರಿಗಿ ಕ್ಷಮಿಸಬೇಕು ಎಂದು ಕೇಳಿಕೊಂಡನು. ಕಪಟ ರಹಿತನಾದ ಬಸಂತರಾಯನು ಕುಮಾರನ ಪಶ್ಚಾತ್ತಾಪವನ್ನು ಕಂಡು ಸಂತುಷ್ಟನಾಗಿ ಆತನನ್ನು ಕ್ಷಮಿಸಿದನು. ಆಮೇಲೆ ರಾಜನು ಚಿಕ್ಕಪ್ಪನನ್ನು, "ತಾವು ಈ ದಿನ ನನ್ನೊಡನೆ ಭೋಜನಕ್ಕೆ ದಯಮಾಡಬೇಕು." ಎಂದು ಬೇಡಿಕೊಂಡನು. ನಿಷ್ಕಲ್ಮಷಹೃದಯನಾದ ಆ ವೃದ್ಧನು ಅದಕ್ಕೆ ಒಪ್ಪಿಕೊಂಡನು.

ಪ್ರತಾಪಾದಿತ್ಯನ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ರಾಣಿಯು, ತನ್ನ ಪತಿಯು ಬಸಂತರಾಯನ ಬಳಿಗೆ ಹೋಗುವುದಕ್ಕೆ ಪೂರ್ವದಲ್ಲಿಯೇ ಬಸಂತರಾಯನ ಪುತ್ರನನ್ನು ಕರೆತಂದು ತನ್ನ ಬಳಿಯಲ್ಲಿ ಇಟ್ಟುಕೊಂಡು ಅನಂತರ ಪತಿಯು ಚಿಕ್ಕಮಾವಂದಿರ ಬಳಿಗೆ ಹೋಗಲು ಒಪ್ಪಿಕೊಂಡಳು. ಬಸಂತರಾಯನು ಕುಮಾರನ ಅಭೀಷ್ಟದಂತೆ ಭೋಜನಕ್ಕಾಗಿ ಗೃಹದಿಂದ ಹೊರಡುತ್ತ, ಏತಕ್ಕೋ ಮನಸ್ಸಿಗೆ ಸ್ವಲ್ಪ ಸಂಶಯ ತೋರಲು, ಪತ್ನಿಯನ್ನು ಕರೆದು, "ನಾನು ಈ ಪಾರಿವಾಳವನ್ನು ನನ್ನೊಡನೆ ತೆಗೆದುಕೊಂಡು ಹೋಗುವೆನು. ಇದು ನನ್ನನ್ನು ಬಿಟ್ಟು ನಿನ್ನ ಸಮೀಪಕ್ಕೆ ಬಂದರೆ, ನನಗೆ ಕಾರಾಗೃಹವಾಸವೋ, ಸ್ವರ್ಗವಾಸವೋ ಉಂಟಾಯಿತು ಎಂದು ತಿಳಿ" ಎಂದು ನುಡಿದು ತನ್ನ ಪತ್ನಿಯಲ್ಲಿ ಬೀಳ್ಕೊಂಡು ಅಶ್ವವನ್ನಾರೋಹಿಸಿ ಮಿತಪರಿವಾರದೊಡನೆ ಜೆಸೋರನ್ನು ಕುರಿತು ಪ್ರಯಾಣ ಮಾಡಿದನು.

ಬಸಂತರಾಯನನ್ನು ಇದಿರುಗೊಳ್ಳಲು ರಾಜನು ಕಳುಹಿಸಿದ ಸೇನೆಯು ಮಾರ್ಗ ಮಧ್ಯದಲ್ಲಿ ಆತನನ್ನು ಸಂಹರಿಸಲು, ಪಾರಿವಾಳವು ಆತನ ಪತ್ನಿಯ ಬಳಿಗೆ ಹೋಯಿತು. ಪಾರಿವಾಳವನ್ನು ನೋಡಿ ಆ ಸಾಧ್ವಿಯು ಮಾನಹಾನಿಯು ಉಂಟಾಗುವುದೇನೋ ಎಂಬ ಭಯದಿಂದ, ತನ್ನ ಪರಿವಾರದೊಡನೆ ಸಮೀಪದಲ್ಲಿದ್ದ ಕೆರೆಯಲ್ಲಿಬಿದ್ದು ಪ್ರಾಣವನ್ನು ಬಿಟ್ಟಳು. ಆಕೆಯ ಪುತ್ರನು ಮಾತ್ರ ಜಸರೇಶ್ವರಿಯ ಬಳಿಯಲ್ಲಿ ಸುಖವಾಗಿ ಇದ್ದನು.

ಚಿಕ್ಕಪ್ಪನು ಮೃತನಾದರೆ ತಾನು ಸುಖಿಯಾಗುವೆನು ಎಂದು ರಾಜನು ಎಣಿಸಿದ್ದನು. ಆದರೆ ಆತನ ಪಾಪಫಲವು ಅಧಿಕವಾದುದರಿಂದ, ಅಲ್ಪಕಾಲದಲ್ಲಿಯೇ ಅಕ್ಬರನ ಸೇನಾನಾಯಕನಾದ ರಾಜಾಮಾನಸಿಂಹನು ಬಹು ಸೈನ್ಯ ಸಮೇತನಾಗಿ ಬಂದು ಪ್ರತಾಪಾದಿತ್ಯನನ್ನು ವಶಮಾಡಿಕೊಳ್ಳಲು ಸಿದ್ಧನಾದನು.

ಆದಿತ್ಯನು ಐವತ್ತು ಸಾವಿರ ಪದಾತಿಗಳೊಡನೆಯೂ, ಹತ್ತು ಸಾವಿರ ಆಶ್ವಿಕರೊಡನೆಯೂ, ಎರಡು ನೂರು ಆನೆಗಳೊಡನೆಯೂ ಕೂಡಿದ ಸೇನೆಯೊಡನೆ ಮಾನಸಿಂಹನನ್ನು ತಾಕಿದನು. ಈತನಿಗೆ ಪೋರ್ಚುಗೀಸರು ಸಹಾಯಕರಾದರು. ಈತನಲ್ಲಿ ನೂರು ತೋಪುಗಳು ಸಹ ಇದ್ದವು. ಕೊನೆಗೆ ಇಷ್ಟು ಸೇನೆಯು ಇದ್ದರೂ ಪ್ರತಾಪಾದಿತ್ಯನಿಗೆ ಅಪಜಯವೇ ಸಂಭವಿಸಿತು. ಇದಕ್ಕೆ ಕಾರಣವು ಏನೆಂದರೆ, ಯುದ್ಧಸಮಯದಲ್ಲಿ ಗ್ರಾಮದೇವತೆಯ ಮುಖವು ಬೇರೊಂದು ಕಡೆಗೆ ತಿರಿಗಿತಂತೆ. ಈ ವಿಷಯವು ಸಂಗ್ರಾಮ ಭೂಮಿಯಲ್ಲಿದ್ದ ಸೈನಿಕರಲ್ಲಿ ಪ್ರಚಾರವಾಗಲು, ಅವರು ತಮ್ಮ ರಾಜನ ದುಷ್ಟವರ್ತನೆಯಿಂದ ದೇವತೆಯು ಗ್ರಾಮವನ್ನು ಬಿಟ್ಟು ಹೋದಳಾದಕಾರಣ ತಮಗೆ ಜಯವು ಉಂಟಾಗಲಾರದು ಎಂದು ನಿರುತ್ಸಾಹಿಗಳಾದರು. ಅವರ ಹುಚ್ಚು ನಂಬಿಕೆಯನ್ನು ಹೋಗಲಾಡಿಸಲು ರಾಜನು ಎಷ್ಟು ಪ್ರಯತ್ನಪಟ್ಟರೂ, ಅವರು ರಾಜನ ದುಷ್ಟ ವರ್ತನೆಯನ್ನು ಕಂಡವರಾದಕಾರಣ, ಯುದ್ಧಭೂಮಿಯನ್ನು ಬಿಟ್ಟು ಓಡಿಹೋದರು. ಅಲ್ಪ ಕಾಲದಲ್ಲಿಯೇ ರಾಜನು ಮಾನಸಿಂಹನ ಬಂದಿಯಾದನು.

ಮಾನಸಿಂಹನು ಶತ್ರುವು ತನ್ನ ವಶನಾದಮೇಲೆ ಜೆಸೋರನ್ನು ವಶ ಮಾಡಿಕೊಳ್ಳಲು ನಗರವನ್ನು ಸಮೀಪಿಸಿದನು. ಆಗ ಪಟ್ಟಣವು ನಾಲ್ಕು ದಿಕ್ಕುಗಳಲ್ಲಿಯೂ ಸಂರಕ್ಷಕರಿಂದ ರಕ್ಷಿಸಲ್ಪಡುತಲಿದ್ದುದನ್ನು ಕಂಡು, ನಗರವನ್ನು ಯಾರು ರಕ್ಷಿಸುತಲಿರುವರು ಎಂದು ವಿಚಾರಿಸಲು, ರಾಣೀಜಸರೇಶ್ವರಿಯು ಸೈನ್ಯಾಧಿಪತ್ಯವನ್ನುವಹಿಸಿ ನಗರ ರಕ್ಷಣೆಯನ್ನು ಮಾಡುತಲಿರುವಳು ಎಂದು ತಿಳಿಯಬಂತು. ಆಮೇಲೆ ಮಾನಸಿಂಹನು ನಗರವನ್ನು ಸ್ವಾಧೀನ ಪಡಿಸಬೇಕು ಎಂದು ಜಸರೇಶ್ವರಿಗೆ ವರ್ತಮಾನವನ್ನು ಕಳುಹಲು, ಸ್ವಪರ ಬಲ ತಾರತಮ್ಯವನ್ನು ಅರಿತ ರಾಣಿಯು ಚಾತುರ್ಯದೊಡನೆ, "ನಾನು ಅಪೇಕ್ಷಿಸುವ ಕೆಲವು ವಿಷಯಗಳಿಗೆ ನೀವು ಸಮ್ಮತಿಸಿದರೆ, ನಗರವನ್ನು ನಿಮ್ಮ ಸ್ವಾಧೀನಮಾಡುವೆನು. ನಗರ ರಕ್ಷಣಾರ್ಥವಾಗಿ ರಕ್ತದಿಂದ ಭೂಮಿಯನ್ನು ತೋಯಿಸುವುದು ನಿಷ್ಪ್ರಯೋಜನವೆಂದು ನನಗೆ ತಿಳಿಯುವುದು. ನಮ್ಮ ಗ್ರಾಮಸ್ಥರನ್ನು ಕೊಳ್ಳೆ ಹೊಡಿಯುವುದೇ ಮೊದಲಾದ ಕಾರ್ಯಗಳಿಂದ ಬಾಧಿಸದೆ, ನಾನು ನನ್ನ ಪತಿಯು ಇರುವಸ್ಥಳದಲ್ಲಿಯೇ ಇರಲೊಪ್ಪಿಕೊಂಡರೆ, ನಿರಾಟಂಕವಾಗಿ ಪಟ್ಟಣವನ್ನು ನಿಮ್ಮ ಸ್ವಾಧೀನಪಡಿಸುವೆನು. ಇಲ್ಲದಿದ್ದರೆ ನನ್ನ ದೇಹದಲ್ಲಿ ಪ್ರಾಣವು ಇರುವವರೆಗೂ ಯುದ್ಧಮಾಡುವೆನು." ಎಂದು ವರ್ತಮಾನ ಕಳುಹಿಸಿದಳು.

ರಾಜಾಮಾನಸಿಂಹನು ಆಕೆಯ ಮಾತುಗಳಿಗೆ ಸಮ್ಮತಿಸಿ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡನು. ಅನಂತರ ಪ್ರತಾಪಾದಿತ್ಯನೊಡನೆ ಡಿಲ್ಲಿಗೆ

ಪ್ರಯಾಣ ಮಾಡಿದನು. ಪತಿಪರಾಯಣೆಯಾದ ಜಸರೇಶ್ವರಿಯು ಪತಿಯೊಡನೆ ಹೊರಟಳು. ಪ್ರತಾಪಾದಿತ್ಯನು ಕಾರಾಗೃಹ ದುಃಖವನ್ನು ಸೈರಿಸಲಾರದೆ ಮಾರ್ಗದಲ್ಲಿಯೇ ಪರಲೋಕವನ್ನು ಸೇರಿದನು. ಜಸರೇಶ್ವರಿಯು ಅನುಗಮನವನ್ನು ಮಾಡಿದಳು.

ಈ ರಾಜನು ಗುಣರೂಪ ಸಂಪನ್ನೆಯಾದ ಪತ್ನಿಯನ್ನು ಪಡೆದಿದ್ದರೂ ಆಕೆಯ ಸಹವಾಸಫಲವನ್ನು ಅನುಭವಿಸದೆ, ತನ್ನ ದುಷ್ಕರ್ಮಗಳಿಂದ ಆಕೆಗೆ ಸದಾ ದುಃಖವನ್ನು ಉಂಟುಮಾಡುತಲಿದ್ದನು. ಆ ಸಾಧ್ವೀಮಣಿಯು ತನ್ನ ಪತಿಯಲ್ಲಿ ಅಸಾಮಾನ್ಯ ಭಕ್ತಿಯುತಳಾಗಿ ಸರ್ವದಾ ಆತನನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸುತಲಿದ್ದಳು. ಈ ವಿಧವಾಗಿ ನಡೆದುಕೊಳ್ಳಬೇಕಾದುದು ಪತ್ನಿಯ ಧರ್ಮವೇ ಹೌದು. ಆದರೆ ಆತನು ನಡೆದುಕೊಂಡುದು ಪತಿಯ ಧರ್ಮವಲ್ಲ.

ಜೋಧಪುರದರಾಣಿ.

ಈ ರಾಣಿಯು ಹದಿನೇಳನೆಯ ಶತಾಬ್ದದಲ್ಲಿ ಇದ್ದಳು. ಷಹಜಹಾನ್ ಬಾದಷಹನ ಕಾಲದಲ್ಲಿ ಮಾರ್ವಾಡೆಯಲ್ಲಿರುವ ಜೋಧಪುರಸಂಸ್ಥಾನವನ್ನು ಯಶೋವಂತಸಿಂಹನು ಪಾಲಿಸುತಲಿದ್ದನು. ಈತನ ಪತ್ನಿಯೇ ಚರಿತ್ರನಾಯಕಿಯು. ಈಕೆಯು ಮಾಡಿದ ಕಾರ್ಯಗಳನ್ನು ಅನೇಕ ಸ್ಥಳಗಳಲ್ಲಿ ವರ್ಣಿಸಿದಾರೆ. ಆದರೆ ಈಕೆಯ ಹೆಸರು ಮಾತ್ರ ಎಲ್ಲಿಯೂ ಬರೆದಿಲ್ಲ.

ಈ ಯಶೋವಂತಸಿಂಹನು ಷಹಜಹಾನನಿಗೆ ಸಾಮಂತನಾಗಿದ್ದನು. ಈತನು ಬಹು ಪರಾಕ್ರಮದೊಡನೆ ಔರಂಗಜೇಬನನ್ನು ಉತ್ತರಕ್ಕೆ ಬರಗೊಳಿಸದೆ ಮಾಳ್ವಾಪ್ರಾಂತದಲ್ಲಿ ಯುದ್ಧಮಾಡುತ್ತ ಬಹುದಿನಗಳವರೆಗೂ ತಡೆದನು. ಔರಂಗಜೇಬನು ತಂದೆಯಾದ ಷಹಜಹಾನನನ್ನು ಪದಚ್ಯುತನಾಗಿ ಮಾಡುವ ಉದ್ದಿಶ್ಯದಿಂದ ಸೋದರಸಹಿತನಾಗಿ ಡಿಲ್ಲಿಗೆ ಬರುತ್ತಿರಲು, ದಾರಿಯಲ್ಲಿರುವ ಉಜ್ಜಯಿನಿಯ ಸಮೀಪದಲ್ಲಿ ಯಶೋವಂತಸಿಂಹನು ಇವನನ್ನು ಅಡ್ಡಗಿಸಿದನು. ಎರಡುಕಡೆಯವರೂ ಬಹು ಘೋರವಾಗಿ ಯುದ್ಧಮಾಡಿದರು. ಯುದ್ಧದಲ್ಲಿ ತನ್ನ ಸೈನಿಕರೆಲ್ಲರೂ ಮಡಿದುದರಿಂದ ಯಶೋವಂತಸಿಂಹನು ತನಗೆ ಜಯವು ಉಂಟಾಗಲಾರದು ಎಂದು ತಿಳಿದು ನಗರಕ್ಕೆ ಹಿಂದಿರುಗಿ ಬರುತಲಿದ್ದನು.

ಆತನು ಗ್ರಾಮವನ್ನು ಸಮೀಪಿಸುತ್ತಲಿರುವಾಗ ಆತನಿಗೆ ಒಂದು ವಿಧವಾದ ಭಯವು ಉಂಟಾಯಿತು. ಏಕೆಂದರೆ ಪರಾಜಯವನ್ನು ಹೊಂದಿ ಪಲಾಯಿತನಾಗಿ ಬಂದನು ಎಂದು ತಿಳಿದು ರಾಣಿಯು ತನ್ನನ್ನು ಏನೆನ್ನುವಳೋ ಎಂದು ನಿಜ ಪತ್ನಿಯ ಕ್ಷಾತ್ರತೇಜವನ್ನು ಅರಿತವನಾದಕಾರಣ ಶಂಕಾಸ್ಪಿತನಾದನು. ಆತನ ಶಂಕೆಗೆ ಸರಿಯಾಗಿ ರಾಣಿಯು ನಗರದ್ವಾರಗಳನ್ನು ಮುಚ್ಚಿಸಿ ಈತನು ಒಳಕ್ಕೆ ಬರದಂತೆ ತಡೆದಳು.

ಅನಂತರ ರಾಣಿಯು ಪತಿಗೆ, "ಜೋಧಪುರಾಧೀಶನು ಅಪಜಯವನ್ನು ಹೊಂದಿ ತನ್ನ ದೀನಮುಖವನ್ನು ಪುರವಾಸಿಗಳಿಗೆ ತೋರದಿರುವುದು ಉತ್ತಮ. ಇಂತಹ ಧೈರ್ಯಹೀನನಿಗೆ ಪತ್ನಿಯಾದೆನು ಎಂದು ನನಗೆ ಬಹು ನಾಚಿಕೆಯಾಗಿದೆ. ಜೋಧಪುರಾಧಿಪತಿಯಾಗಿ ಮೇವಾಡಾಧೀಶನಿಗೆ ಅಳಿಯನಾಗಿ ಯುದ್ಧದಲ್ಲಿ ಪರಾಜಯವನ್ನು ಹೊಂದಿ ಓಡಿಬರುವುದಕ್ಕಿಂತ ಹೀನತ್ವವು ಆವುದುಂಟು?" ಎಂದು ಹೇಳಿ ಕಳುಹಿಸಿ, ಸೇವಕರೊಡನೆ "ಚಿತೆಯನ್ನು ಸಿದ್ಧಮಾಡಿರಿ. ಜೋಧಪುರೇಶನು ಯುದ್ಧದಲ್ಲಿ ಪರಾಜಯವನ್ನು ಹೊಂದಿರಲಾರನು. ಆತನನ್ನು ಶತ್ರುಗಳು ಕೊಂದಿರಬಹುದು. ಆದುದರಿಂದ ನಾನು ನನ್ನ ಪತಿಯನ್ನು ಸೇರಲು ಹೋಗುವೆನು." ಎಂದಳು.

ಒಂದು ವಾರದವರೆಗೂ ಯಶೋವಂತಸಿಂಹನು ನಗರದಹೊರಗೆ ಇದ್ದನು. ಅನಂತರ ಈ ವಿಷಯವನ್ನೆಲ್ಲ ಕೇಳಿ ರಾಣಿಯ ತಾಯಿಯು ಜೋಧಪುರಕ್ಕೆ ಬಂದು ಮಗಳಿಗೆ ಆತನು ಈಗ ಅಪಜಯವನ್ನು ಹೊಂದಿದರೂ ಪುನಃ ಸೈನ್ಯವನ್ನು ಸೇರಿಸಿಕೊಂಡು ಯುದ್ಧಮಾಡುವನು ಎಂದು ತಿಳಿಸಿದಳು. ಆಕೆಯು ತಾಯಿಯಿಂದ ಅನೇಕವಿಧವಾಗಿ ಬೋಧಿತಳಾಗಿ, ನಗರದ್ವಾರಗಳನ್ನು ತೆಗೆಸಿದಳು. ಯಶೋವಂತಸಿಂಹನು ಮನೆಗೆ ಬಂದಮೇಲೆ ಆಕೆಯು ಪತಿಯ ಗಾಯಗಳನ್ನು ನೋಡಿ ವ್ಯಥಿತಳಾಗಿ, ಔಷಧೋಪಚಾರಗಳಿಂದ ಗಾಯಗಳನ್ನು ವಾಸಿಮಾಡಿದಳು.

ಔರಂಗಜೇಬನು ಡಿಲ್ಲಿಯನ್ನು ಸೇರಿ ತಂದೆಯನ್ನು ಕಾರಾಗೃಹದಲ್ಲಿಟ್ಟು, ಸೋದರರನ್ನು ಕೊಂದು, ರಾಜ್ಯವನ್ನು ಅಪಹರಿಸಿದ ನಂತರ, ಯಶೋವಂತಸಿಂಹನಮೇಲೆ ದೃಷ್ಟಿಯನ್ನು ಪ್ರಸರಿಸಿದನು. ಆತನನ್ನು ಯಮಸದನಕ್ಕೆ ಕಳುಹಿಸಿದರೆ ತನ್ನರಾಜ್ಯವು ನಿಷ್ಕಂಟಕವಾಗುವುದು ಎಂದು ಔರಂಗಜೇಬನು ಎಣಿಸಿದನು. ಅದಕ್ಕಾಗಿ ಉಪಾಯವನ್ನು ಹುಡುಕುತಲಿದ್ದನು. ಆ ಸಮಯದಲ್ಲಿ ಕಾಬೂಲಿನಲ್ಲಿ ನಡೆಯುತಲಿದ್ದ ಪ್ರಜಾಯುದ್ಧವನ್ನು ನಿಲ್ಲಿಸುವುದಕ್ಕಾಗಿ ಯಶೋವಂತಸಿಂಹನಿಗೆ ಸೈನ್ಯಾಧಿಪತ್ಯವನ್ನು ಕೊಟ್ಟು ಅಲ್ಲಿಗೆ ಕಳುಹಿಸಿದನು. ಔರಂಗಜೇಬನ ಕಪಟವನ್ನು ಅರಿಯದ ಯಶೋವಂತಸಿಂಹನು ತನಗೆ ಜೊರೆತ

ಸೈನ್ಯಾಧಿಪತ್ಯಕ್ಕೆ ಸಂತುಷ್ಟನಾಗಿ ದಂಡಯಾತ್ರೆಗೆ ಹೊರಟನು. ಆತನೊಡನೆ ಆತನ ಪತ್ನಿಯೂ ಪ್ರಯಾಣವಾದಳು. ಈ ದಂಪತಿಗಳು ಇಬ್ಬರೂ ತಮಗೆ ಪೂರ್ವದಲ್ಲಿ ಉಂಟಾದ ಅಪಕೀರ್ತಿಯನ್ನು ಹೋಗಲಾಡಿಸಿಕೊಂಡು ಶಾಶ್ವತ ಕೀರ್ತಿಯನ್ನು ಪಡೆಯಬೇಕು ಎಂದು ಕೃತನಿಶ್ಚಯರಾಗಿ, ತಮ್ಮ ಪುತ್ರನಾದ ಪೃಥಿವೀಸಿಂಹನಿಗೆ ರಾಜ್ಯಭಾರವನ್ನು ವಹಿಸಿ ಸೈನ್ಯಸಹಿತರಾಗಿ ಹೊರಟರು.

ಆ ಸಮಯದಲ್ಲಿ ರಾಣಿಯು ಪುರುಷವೇಷವನ್ನು ಧರಿಸಿ ಒಬ್ಬ ಶೂರ ವರನಂತೆ ಪತಿಯೊಡನೆ ಪ್ರಯಾಣಮಾಡುತಲಿದ್ದಳು. ಅವರು ಬಹು ಕಷ್ಟ ದೊಡನೆ ಅಲ್ಲಿನ ಮಾರ್ಗದಲ್ಲಿರುವ ಪರ್ವತ ಪ್ರದೇಶಗಳನ್ನೆಲ್ಲ ದಾಟಿ ಕಾಬೂಲನ್ನು ಸೇರಿದರು. ದೇಶವೆಲ್ಲವೂ ರಾಜದ್ರೋಹಿಗಳಿಂದ ತುಂಬಿತ್ತು. ಇವರು ಸೈನ್ಯ ಸಹಾಯದಿಂದ ಅವರನ್ನು ಶಾಸಿಸಲು ಪ್ರಯತ್ನಮಾಡಿದರು. ಇವರಿಗೆ ಆ ಸಮಯ ದಲ್ಲೆಲ್ಲಿ ನೋಡಿದರೂ ಶತ್ರುಭಯವೇ ತೋರುತಲಿತ್ತು. ವಿಶ್ರಾಂತಿಯು ಅಣು ಮಾತ್ರವೂ ಇರಲಿಲ್ಲ. ಇವರಮೇಲೆ ಅಲ್ಲಿನ ಪರ್ವತಜಲವೂ, ವಾಯುವೂ ಅವರಿಗೆ ಅಹಿತಕಾರಿಗಳಾಗಿದ್ದವು. ಈ ಭಯಂಕರವಾದ ಯುದ್ಧದ ಸಮಯದಲ್ಲಿ ರಾಣಿಯು ಗರ್ಭವತಿಯಾಗಿದ್ದರೂ, ಪತಿಯನ್ನು ಛಾಯೆಯಂತೆ ಹಿಂಬಾಲಿಸುತ್ತ ಆತನಿಗೆ ಸರ್ವ ಕಾರ್ಯಗಳಲ್ಲಿಯೂ ಸಹಾಯಕಳಾಗಿದ್ದಳು. ಆಕೆಯ ಶೌರ್ಯಧೈರ್ಯಗಳನ್ನು ಕಂಡು ರಜಪೂತರು ಬೆರಗಾಗುತಲಿದ್ದರು.

ಅದು ರಾಣಿಗೆ ದುಷ್ಕಾಲವಾಗಿತ್ತು. ಔರಂಗಜೇಬನು ಈ ದಂಪತಿಗಳು ಕಾಬೂಲಿನಲ್ಲಿರುವಾಗಲೇ ಯಶೋವಂತಸಿಂಹನನ್ನು ವಿಷಪ್ರಯೋಗದಿಂದ ಕೊಲ್ಲಿ ಸಿದನು. ಪೃಥಿವೀಸಿಂಹನನ್ನು ಡಿಲ್ಲಿಗೆ ಕರೆಸಿ ವಿಷಪ್ರಯೋಗದಿಂದ ಕೊಲ್ಲಿ ಸಿದನು. ಔರಂಗಜೇಬನು ತಾನು ಮಾಡಿದ ಕಾರ್ಯದಿಂದ ಯಶೋವಂತ ಸಿಂಹನ ವಂಶವು ಸಮೂಲವಾಗಿ ನಾಶವಾಯಿತು ಎಂದು ಸಂತೋಷಿಸಿದನು.

ಯಶೋವಂತಸಿಂಹನು ಮರಣಾನಂತರ ರಾಣಿಯು ಅನುಭವಿಸಿದ ಕಷ್ಟ ಗಳನ್ನು ವರ್ಣಿಸಲಸಾಧ್ಯವು. ಮೃತನಾದ ಪತಿಯೊಡನೆ ಸಹಗಮನವನ್ನು ಮಾಡು ವುದು ಆ ಕಾಲದಲ್ಲಿ ಶ್ರೇಷ್ಠವಾದ ಆಚಾರವಾಗಿತ್ತು. ಆದರೆ ರಾಣಿಯು ಅಂತರ್ವ ತ್ನಿಯಾಗಿದ್ದ ಕಾರಣ ಸಹಗಮನವನ್ನು ನಿಲ್ಲಿಸಬೇಕಾಯಿತು. ಅಸಹ್ಯವಾದಾ ದುಃಖಕಾಲದಲ್ಲಿ, ಸೇನೆಯನ್ನು ನಡೆಸಲು ಬೇರೊಬ್ಬರಿಲ್ಲದುದರಿಂದ ರಾಣಿಯೇ ಸೇನಾಧ್ಯಕ್ಷಳಾಗಿ ಸೇನೆಯೊಡನೆ ಹಿಂದೂಸ್ಥಾನದ ಮಾರ್ಗವನ್ನು ಹಿಡಿದಳು. ಈಕೆಯು ಕಾಬೂಲಿನಲ್ಲಿ ಇರುವಾಗಲೇ ಒಂದು ಪುರುಷ ಶಿಶುವನ್ನು ಪ್ರಸವಿಸಿದಳು. ಈ ಶಿಶುಸಿಂಹನೇ ಯುಕ್ತವಯಸ್ಕನಾದಮೇಲೆ ತನ್ನ ತಂದೆಯನ್ನು ಸೋದರ ನನ್ನು ಕೊಂದ ಔರಂಗಜೇಬಿನ ಮೇಲಿರುವ ಹಗೆಯನ್ನು ತೀರಿಸಿಕೊಂಡನು.

ರಾಣಿಯು ಶರೀರದಲ್ಲಿ ಸ್ವಲ್ಪ ಬಲ ಸಂಚಾರವಾದಮೇಲೆ ಪ್ರಯಾಣವನ್ನು ಬೆಳೆಸಿದಳು. ಇವರು ಪೇಶಾವರೀ ನಗರವನ್ನು ಸಮೀಪಿಸುವದರೊಳಗೆ ಶತ್ರುಗಳು ಇವರ ಹಾದಿಯನ್ನು ಅಡ್ಡಗಿಸಿದರು.. ಇವರು ಅವರೊಡನೆ ಯುದ್ಧಮಾಡುತ್ತ ಗ್ರಾಮವನ್ನು ಸೇರುವಲ್ಲಿಗೆ ಇವರ ಸಹಾಯಾರ್ಥವಾಗಿ ಜೋಧಪುರದಿಂದ ಸ್ವಲ್ಪ ಸೈನ್ಯವು ಬಂದಿತು. ಇವರೆಲ್ಲರೂ ಅಲ್ಲಿಂದ ಹೊರಟು ಡಿಲ್ಲಿಯನ್ನು ಸಮೀಪಿಸಿದರು. ಔರಂಗಜೇಬನು ಯಶೋವಂತಸಿಂಹನ ಪತ್ನಿಯು ಅಜಿತಸಿಂಹನೆಂಬ ಪುತ್ರನೊಡನೆ ಡಿಲ್ಲಿಯವರೆಗೂ ಬಂದಳು ಎಂದು ಕೇಳಿ ಕ್ರೋಧಾಂಧನಾಗಿ, ರಾಣಿಗೆ, "ನಿನ್ನ ಮಗನನ್ನು ಕೂಡಲೆ ನನ್ನ ಬಳಿಗೆ ಕಳುಹಿಸು" ಎಂದು ವರ್ತಮಾನವನ್ನು ಕಳುಹಿಸಿದನು. ರಾಣಿಯು ಮಗನನ್ನು ಕಳುಹಿಸಲೊಪ್ಪದೆ ಔರಂಗಜೇಬನೊಡನೆ ಯುದ್ಧಮಾಡಿ ಮಗುವನ್ನೂ ತನ್ನನ್ನೂ ರಕ್ಷಿಸಿಕೊಳ್ಳಬೇಕು ಎಂದು ನಿಶ್ಚಯಿಸಿ, ಆ ಬಾಲಕನನ್ನು ಒಂದು ಬಿದಿರುಬುಟ್ಟಿಯಲ್ಲಿ ಇಟ್ಟು ಸೇವಕನ ಕೈಯಲ್ಲಿ ಕೊಟ್ಟಳು. ಅವನು ಹಣ್ಣುಗಳನ್ನು ತೆಗೆದುಕೊಂಡು ಹೋಗುವ ನೆಪದಿಂದ ಆ ಬುಟ್ಟಿಯನ್ನು ಕೊಂಡುಹೋಗಿ ನಿಯಮಿತಸ್ಥಳವನ್ನು ಸೇರಿದನು.

ಅನಂತರ ರಾಣಿಯೂ, ಆಕೆಯ ಸೈನಿಕರೂ ಬಾದಷಹನ ಸೈನ್ಯದೊಡನೆ ಬಹು ಘೋರವಾಗಿ ಯುದ್ಧಮಾಡಿ ಅವರನ್ನು ಸೋಲಿಸಿ ಮೇವಾಡಮಾರ್ಗವನ್ನು ಹಿಡಿದರು. ಆ ಸಮಯದಲ್ಲಿ ರಾಣಿಯಿಂದ ಹತರಾದ ಅನೇಕ ವೀರಭಟರ ತಲೆಗಳು ಡಿಲ್ಲೀನಗರದಲ್ಲೆಲ್ಲ ಚಲ್ಲಲ್ಪಟ್ಟಿತಂತೆ. ಅವರೆಲ್ಲರು ಕೆಲವು ದಿನಗಳಿಗೆ ಅಜಿತಸಿಂಹನು ಇದ್ದಸ್ಥಳಕ್ಕೆ ಬಂದರು. ತನ್ನ ಪುತ್ರನು ಪ್ರಾಣಭಯವಿಲ್ಲದೆ ಸುರಕ್ಷಿತನಾಗಿರುವುದನ್ನು ಕಂಡು ರಾಣಿಯು ಪರಮಾನಂದಭರಿತೆಯಾದಳು. ಆಕೆಯು ಮೇವಾಡೆಯನ್ನು ಸೇರಿ ತನ್ನ ಸೋದರನಬಳಿಗೆ ಹೋದಳು. ಅಜಿತಸಿಂಹನು ಸ್ವಲ್ಪ ದೊಡ್ಡವನಾದಮೇಲೆ, ಆತನಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ ಸಂರಕ್ಷಿಸಬೇಕು ಎಂದು ಸೋದರನಿಗೆ ಒಪ್ಪಿಸಿದಳು.

ಅಜಿತಸಿಂಹನು ದೊಡ್ಡವನಾದಮೇಲೆ, ತನ್ನ ಶೌರ್ಯದಿಂದ ಮೊಗಲರನ್ನು ಅನೇಕಸಲ ಸೋಲಿಸಿದನು. ರಾಣಿಯು ತನ್ನ ಪುತ್ರನ ಸಂಗ್ರಾಮನೈಪುಣ್ಯಕ್ಕೆ ಆನಂದವನ್ನು ಹೊಂದುತ್ತ, ಹೆತ್ತ ಋಣವು ತೀರಿತು ಎಂದು ಹೇಳುತಲಿದ್ದಳು. ಈಕೆಯು ಬಹು ವೃದ್ಧಳಾಗಿ ಕಾಲಗತಿಯನ್ನೈದಿದಳು.

ವಿಮಲೆ.

ಈ ಪತಿವ್ರತೆಯು ಘೂರ್ಜರಾಧಿಪತಿಯಾದ ಜಯಶಿಖರನ ಸಹೋದರಿ. ಈತನು ಕ್ರಿ.ಶ. ೬೯೫ ನೆಯ ಇಸವಿಯಲ್ಲಿ ಪಂಚಾಸರ ಎಂಬ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಘೂರ್ಜರದೇಶವನ್ನು ಪಾಲಿಸುತಲಿದ್ದನು. ಆ ಕಾಲದಲ್ಲಿ ಘೂರ್ಜರದೇಶವು ಉನ್ನತಸ್ಥಿತಿಯಲ್ಲಿತ್ತು. ವಿಮಲೆಯು ಯುಕ್ತ ವಯಸ್ಕಳಾದಮೇಲೆ ಆಕೆಯ ಸೌಂದರ್ಯವನ್ನು ಕೇಳಿ ಅನೇಕ ದೇಶದ ರಾಜ ಕುಮಾರರು ಆಕೆಯನ್ನು ವರಿಸಲು ಅಪೇಕ್ಷಿಸುತಲಿದ್ದರು. ಗುಣವತಿಯಾದ ವಿಮಲೆಯು ಐಶ್ವರ್ಯಭೋಗಗಳನ್ನು ಇಚ್ಛಿಸದೆ ಶೌರ್ಯನಿಧಿಯಾದ ವರನನ್ನು ವರಿಸಲು ನಿಶ್ಚಯಿಸಿಕೊಂಡಳು.

ಕೆಲವು ದಿವಸಗಳಿಗೆ ಮುಲ್ತಾನುಪಟ್ಟಣದ ಅರಸನು ಸಕುಟಂಬವಾಗಿ ಪ್ರಭಾಸಕ್ಷೇತ್ರವನ್ನು ನೋಡುವುದಕ್ಕೆ ಹೋಗುತ್ತ ಮಾರ್ಗದಲ್ಲಿದ್ದ ಪಂಚಾಸರಕ್ಕೆ ಬಂದನು. ಅವರನ್ನು ಜಯಶಿಖರನು ಮರ್ಯಾದೆಯೊಡನೆ ತನ್ನ ಮನೆಗೆ ಕರೆದುಕೊಂಡು ಹೋಗಿ ಕೆಲವು ದಿವಸಗಳು ಭೋಜನಾದಿಗಳಿಂದ ಸತ್ಕರಿಸಿದನು. ಅವರು ಅಲ್ಲಿದ್ದಕಾಲದಲ್ಲಿ ಮುಲ್ತಾನುರಾಜನ ಮಗನಾದ ಸುರಪಾಲನೊಡನೆ ಜಯಶಿಖರನು ಕ್ರೀಡಾಯುದ್ಧವನ್ನು ಮಾಡುತ್ತಿರಲು ಅಂತಃಪುರದ ಸ್ತ್ರೀಯರೆಲ್ಲರು ಅದನ್ನು ನೋಡುತಲಿದ್ದರು. ಆ ಸಮಯದಲ್ಲಿ ವಿಮಲೆಯು ಸುರಪಾಲನು ಶೌರ್ಯವಂತನು ಎಂದು ತಿಳಿದುಕೊಂಡಳು. ಅನಂತರ ಒಂದು ದಿವಸ ಆ ರಾಜಪುತ್ರರಿಬ್ಬರು ಸಿಂಹದ ಬೇಟೆಗೆ ಹೋಗುತ್ತ ಅಂತಃಪುರದ ಸ್ತ್ರೀಯರನ್ನು ಸಹ ಕರೆದುಕೊಂಡು ಹೋಗಿ, ಆ ಅರಣ್ಯದಲ್ಲಿ ಒಂದು ಮಂಚಣಿಗೆಯನ್ನು ಹಾಕಿಸಿ ಅದರ ಮೇಲೆ ಅವರನ್ನು ಕುಳ್ಳಿರಿಸಿದರು. ಬೇಟೆಯಾಡುವ ಸಮಯದಲ್ಲಿ ಒಂದು ಸಿಂಹವು ಜಯಶಿಖರನ ಮೇಲೆ ಬೀಳಲು, ಸುರಪಾಲನು ಬಹು ಶೌರ್ಯದಿಂದ ಆ ಸಿಂಹವನ್ನು ಕೊಂದನು. ಆತನ ಶೌರ್ಯಧೈರ್ಯಗಳಿಗೆ ಮೆಚ್ಚಿ ವಿಮಲೆಯು ಆತನನ್ನು ವರಿಸಿದಳು. ಆಮೇಲೆ ಸುರಪಾಲನ ತಂದೆಯು ಜಯಶಿಖರನಲ್ಲಿ ಬೀಳ್ಕೊಂಡು ಹೊರಟುಹೋದನು. ಸುರಪಾಲನಿಗೆ ರೂಪಸುಂದರಿ ಎಂಬ ಒಬ್ಬ ಸೋದರಿಯು ಇದ್ದಳು. ಜಯಶಿಖರನು ಆಕೆಯನ್ನು ವರಿಸಿದನು. ಅವರೆಲ್ಲರೂ ಹೊರಟುಹೋದ ಅನಂತರ ಜಯಶಿಖರನು ರೂಪಸುಂದರಿಗೆ ಒಂದು ಪತ್ರವನ್ನು ಬರೆದು ಕಳುಹಿಸಲು, ವಿಮಲೆಯು ಸುರಪಾಲನಿಗೆ ಒಂದು ಪತ್ರವನ್ನು ಲಿಖಿಸಿ ಆ ಸೇವಕನ ಕೈಯಲ್ಲಿ ಕೊಟ್ಟು ಕಳುಹಿದಳು. ಪತ್ರವಾಹಕನು ಪತ್ರಗಳನ್ನು

ಸುರಪಾಲನಿಗೆ ಕೊಟ್ಟನು. ಅನಂತರ ಕೆಲವು ದಿವಸಗಳಲ್ಲಿಯೇ ರೂಪಸುಂದರಿಯನ್ನು ಜಯಶಿಖರನಿಗೆ ಕೊಟ್ಟು ವಿವಾಹಮಾಡಲು ನಿಶ್ಚಯವಾಯಿತು. ಜಯಶಿಖರನು ಮುಲ್ತಾನಿಗೆ ಹೋಗಿ ವಿವಾಹವನ್ನು ಮಾಡಿಕೊಂಡು, ರೂಪಸುಂದರಿಯನ್ನೂ, ಸುರಪಾಲನನ್ನೂ ಕರೆದುಕೊಂಡು ತನ್ನ ದೇಶಕ್ಕೆ ಹೊರಟನು. ಮಾರ್ಗಮಧ್ಯದಲ್ಲಿ ಲಾಟದೇಶಾಧೀಶನು ತನಗೆ ಕೊಡಬೇಕಾದ ಕಪ್ಪವನ್ನು ಬಹು ವರ್ಷಗಳಿಂದಲೂ ಕೊಡಲಿಲ್ಲವೆಂದು ಆತನ ಮೇಲಕ್ಕೆ ಸೈನ್ಯವನ್ನು ಕಳುಹಿಸಿದನು. ಸೈನ್ಯಾಧಿಪತಿಯೊಡನೆ ಸುರಪಾಲನು ಸಹ ಹೊರಟನು. ಲಾಟದೇಶದಲ್ಲಿ ಉಭಯರಿಗೂ ಘೋರಯುದ್ಧವು ನಡೆದು ಜಯಶಿಖರನ ಸೇನಾಧಿಪತಿಯು ಮೃತನಾದನು. ಸುರಪಾಲನು ಅನಂತರ ತಾನೇ ಸೇನಾಧಿಪತ್ಯವನ್ನು ವಹಿಸಿ ಶೌರ್ಯದೊಡನೆ ಯುದ್ಧಮಾಡಿ, ಶತ್ರುಗಳನ್ನು ಹತಮಾಡಿ, ಆ ರಾಜನನ್ನು ಸೆರೆ ಹಿಡಿದುಕೊಂಡು ಬಂದು ಜಯಶಿಖರನಿಗೆ ಒಪ್ಪಿಸಿದನು. ಆತನು ಮಾಡಿದ ಸಾಹಸಕಾರ್ಯಕ್ಕೆ ಮೆಚ್ಚಿ ಜಯಶಿಖರನು ಆತನಿಗೆ ತನ್ನ ತಂಗಿಯನ್ನು ಕೊಟ್ಟು ವಿವಾಹವನ್ನು ಬೆಳಸಿದನು.

ಅನಂತರ ಕೆಲವು ದಿವಸಗಳಿಗೆ ಕಳ್ಯಾಣಾಧಿಪತಿಯು (ಈತನು ಕಳ್ಯಾಣ ಪುರವನ್ನು ಸ್ಥಾಪಿಸಿದ ಚಾಳುಕ್ಯ ವಂಶದವನಾಗಿರಬಹುದು) ಘೂರ್ಜರದೇಶದ ಕೀರ್ತಿಯನ್ನು ಕೇಳಿ ದಂಡೆತ್ತಿಬಂದನು. ಆದರೆ ಆತನ ಸೇನೆಗಳು ಸುರಪಾಲನ ಶೌರ್ಯಕ್ಕೆ ನಿಲ್ಲಲಾರದೆ ಧೈರ್ಯಗೆಟ್ಟು ಓಡಿಹೋಗಲು ಆತನು ಮರಳಿ ತನ್ನ ದೇಶಕ್ಕೆ ಹೊರಟುಹೋದನು.

ಅನಂತರ ಕಳ್ಯಾಣಾಧಿಪತಿಯು ತನ್ನ ಅಪಜಯಕ್ಕೆ ಸುರಪಾಲನೇ ಕಾರಣನಾದುದರಿಂದ ಆತನನ್ನು ಜಯಶಿಖರನ ಬಳಿಯಿಂದ ದೂರಮಾಡಬೇಕು ಎಂದು ಎಣಿಸಿ, "ನೀನು ಜಯಶಿಖರನನ್ನು ಬಿಡುವುದಾದರೆ ರಾಜ್ಯವನ್ನೂ, ಬೇಕಾದಷ್ಟು ದ್ರವ್ಯವನ್ನೂ ಕೊಡುವೆನು." ಎಂದು ಆಶೆಯನ್ನು ತೋರಿಸುತ್ತ ಒಂದು ಕಾಗದವನ್ನು ಬರೆದನು. ಈ ಲೇಖನವು ಸುರಪಾಲನು ಅಂತಃಪುರದಲ್ಲಿರುವ ಸಮಯದಲ್ಲಿ ಒಬ್ಬ ಭೃತ್ಯನು ತಂದುಕೊಟ್ಟನು. ಆತನು ಪತ್ರವನ್ನೋದಿ, ತನ್ನ ಮನೋಭಿಪ್ರಾಯವನ್ನು ಹೊರಪಡಿಸದೆ ಪತ್ನಿಯ ಗುಣವನ್ನು ಪರೀಕ್ಷಿಸುವುದಕ್ಕಾಗಿ ಪತ್ರದಲ್ಲಿರುವ ವಿಷಯವನ್ನು ತಿಳಿಸಿ, "ನಿನಗೆ ರಾಣಿಯಾಗಿ ಭೋಗಗಳನ್ನು ಅನುಭವಿಸಬೇಕು ಎಂಬ ಅಪೇಕ್ಷೆ ಇದ್ದರೆ ಹೇಳು, ಆ ಲೇಖನದಲ್ಲಿರುವಂತೆ ನಡೆದುಕೊಳ್ಳೋಣ." ಎಂದನು. ಆ ಮಾತನ್ನು ಕೇಳಿ ವಿಮಲೆಯು, "ನೀನು ಸತ್ಯವ್ರತನೆಂತಲೂ, ಕೃತಜ್ಞನೆಂತಲೂ ತಿಳಿದು ನಿನ್ನನ್ನು ವಿವಾಹ ಮಾಡಿಕೊಂಡೆನು. ನೀನು ಕೃತಘ್ನನು ಎಂದು ನಾನು ಅರಿತಿರಲಿಲ್ಲ. ನಾನು ಇಷ್ಟುವರೆಗೂ ದುಸ್ಸಾಂಗತ್ಯವನ್ನು ಮಾಡಿದವಳಲ್ಲ. ಇನ್ನು ಮುಂದೆಯೂ

ಮಾಡಲಾರೆನು. ನೀವು ಪತ್ರದಲ್ಲಿರುವಂತೆ ನಡೆದುಕೊಳ್ಳುವಿರಾದರೆ ನಮ್ಮಿಬ್ಬರ ಋಣವು ಇಂದಿಗೆ ಮುಗಿಯಿತು. ಸತಿಯು ಪತಿಯನ್ನು ದೇವರಂತೆ ನೋಡಬೇಕು. ಆದರೆ ಪತಿಯು ದುಷ್ಕಾರ್ಯವನ್ನು ಮಾಡುವಂತೆ ಪ್ರೋತ್ಸಾಹಿಸಿದರೆ ಪತಿಗಿಂತಲು ಅಧಿಕನಾದ ಪರಮೇಶ್ವರನು ಇರುವನು ಎಂಬುದನ್ನು ತಿಳಿದು ಆ ಪರಮೇಶ್ವರನಿಗೆ ಹೆದರಬೇಕು. ಆದಕಾರಣ ನಾನು ನೀವು ಮಾಡುವ ದುಷ್ಕಾರ್ಯಕ್ಕೆ ಸಹಾಯಕಳಾಗಿ ಪರಮೇಶ್ವರನ ಶಿಕ್ಷೆಗೆ ಒಳಗಾಗಲಾರೆನು." ಎಂದು ಹೇಳಿದಳು. ಭಾರ್ಯೆಯು ಹೇಳಿದ ನೀತಿಗೂ, ಆಕೆಯ ಧರ್ಮಬುದ್ಧಿಗೂ ಸಂತೋಷಿಸಿ, ತನ್ನ ನಿಜವಾದ ಅಭಿಪ್ರಾಯವನ್ನು ಆಕೆಗೆ ಹೇಳಿದನು. ಆಗ ಆ ದಂಪತಿಗಳಿಬ್ಬರೂ ಆಲೋಚಿಸಿ ತಿರಸ್ಕಾರೋಕ್ತಿಗಳೊಡನೆ ಒಂದು ಪತ್ರವನ್ನು ಒರೆದು ಕಳ್ಯಾಣಾಧಿಪತಿಗೆ ಕಳುಹಿಸಿದರು. ಪತ್ರವನ್ನು ತಂದ ದೂತನನ್ನು ಶಿಕ್ಷಿಸುವೆನು ಎಂದು ಸುರಪಾಲನು ಹೇಳಲು ದೂತನನ್ನು ಶಿಕ್ಷಿಸುವುದು ಅಧರ್ಮವೆಂದು ಹೇಳಿ, ವಿಮಲೆಯು ಅವನನ್ನು ಕಳುಹಿಸಿದಳು.

ಸುರಪಾಲನ ಪತ್ರವನ್ನು ನೋಡಿ ಕಳ್ಯಾಣಾಧಿಪತಿಯು ಕ್ರೋಧಾಂಧನಾಗಿ ಬಹು ಸೈನ್ಯವನ್ನು ಸಿದ್ಧಮಾಡಿಕೊಂಡು ಘೂರ್ಜರದಮೇಲೆ ದಂಡೆತ್ತಿಬಂದನು. ಈಸಲ ಸ್ವಲ್ಪಯುದ್ಧವು ನಡೆದಮೇಲೆ ಜಯವುಂಟಾಗುವುದೆಂಬ ಆಶೆಯು ಜಯಶಿಖರನಿಗೆ ಕಡಮೆಯಾಯಿತು. ಅದರಿಂದ ಆತನು ಗರ್ಭವತಿಯಾದ ಪತ್ನಿಯನ್ನೂ, ಸೋದರಿಯನ್ನೂ ಗುಪ್ತವಾಗಿ ಅರಣ್ಯದಲ್ಲಿ ಬಿಟ್ಟುಬರುವಂತೆ ಸುರಪಾಲನಿಗೆ ಹೇಳಿದನು. ಹಾಗೆಯೇ ಸುರಪಾಲನು ಅವರನ್ನೆಲ್ಲ ಕರೆದುಕೊಂಡುಹೋಗಿ ಅರಣ್ಯದಲ್ಲಿ ಕಿರಾತಕರವಶದಲ್ಲಿ ಬಿಟ್ಟು, ಕೆಲವೀರಭಟರನ್ನು ಅವರ ಸಂರಕ್ಷಣೆಗಾಗಿ ನಿಯಮಿಸಿ, ಮರಳಿ ಪಟ್ಟಣಕ್ಕೆ ಹೊರಟನು. ಈ ಅವಕಾಶದಲ್ಲಿ ಯುದ್ಧರಂಗದಲ್ಲಿ ಸುರಪಾಲನು ಇಲ್ಲವೆಂಬುದನ್ನು ತಿಳಿದು, ಕಳ್ಯಾಣದ ಸೈನಿಕರು ಧೈರ್ಯದೊಡನೆ ಯುದ್ಧಮಾಡಿ ಜಯಶಿಖರನನ್ನು ಸಂಹರಿಸಿದರು. ಕಳ್ಯಾಣರಾಜನ ಪುತ್ರನಾದ ಕರ್ಣ ಎಂಬವನು ಸುರಪಾಲನನ್ನು ಹುಡುಕುವುದಕ್ಕಾಗಿ ಸೈನ್ಯದೊಡನೆ ಅರಣ್ಯಕ್ಕೆ ಹೊರಟನು. ಸುರಪಾಲನು ಬೇರೊಂದು ಮಾರ್ಗದಲ್ಲಿ ಬರುತಲಿದ್ದುದರಿಂದ ಇವರಿಗೆ ದೊರೆಯಲಿಲ್ಲ. ಕರ್ಣನು ಅರಣ್ಯದಲ್ಲಿ ಪ್ರಯಾಣಮಾಡುತ್ತ, ವಿಮಲಾರೂಪಸುಂದರಿಯರು ಇರುವ ಸ್ಥಳಕ್ಕೆ ಹೋದನು. ಅಲ್ಲಿದ್ದ ಅಲ್ಪರಾದ ವೀರಭಟರನ್ನು ಕರ್ಣನು ಸೈನ್ಯಸಹಾಯದಿಂದ ಕ್ಷಣಕಾಲದಲ್ಲಿ ಸಂಹರಿಸಿದನು. ಅನಂತರ ಅಲ್ಲಿದ್ದ ವಿಮಲಾರೂಪಸುಂದರಿಯರನ್ನು ನೋಡಿ, ವಿಮಲೆಯನ್ನು ಮೋಹಿಸಿ ಆಕೆಯನ್ನು ಬಲಾತ್ಕಾರದಿಂದ ಹಿಡಿದುಕೊಂಡುಹೋಗಿ ತನ್ನ ಶಿಬಿರದಲ್ಲಿಟ್ಟುಕೊಂಡನು. ಆ ಸಮಯದಲ್ಲಿ ಆಕೆಯ ರೋದನವನ್ನು ಕೇಳಿ ಕರ್ಣನು ವಿನಹ ಮಿಕ್ಕವರೆಲ್ಲರೂ ಕರುಣಾರ್ದ್ರಹೃದಯರಾದರು. ವಿಮಲೆಯು ಕರ್ಣನು ಬಲಾತ್ಕಾರಮಾಡುವನೇನೋ ಎಂಬ ಭಯದಿಂದ ಪ್ರಾಣತ್ಯಾಗ

ಮಾಡಲು ಪ್ರಯತ್ನಮಾಡಲು, ಕರ್ಣನು ನೀನು ಸಮ್ಮತಿಸದಿದ್ದರೆ ನಾನು ಬಲಾತ್ಕಾರಮಾಡುವುದಿಲ್ಲವೆಂದು ಹೇಳಿ ಆಕೆಯ ಉದ್ಯಮವನ್ನು ನಿವಾರಿಸಿದನು. ಕರ್ಣನದಾಸಿಯರು ವಿಮಲೆಯ ಮನಸ್ಸನ್ನು ತಿರಿಗಿಸಲು ಅನೇಕ ವಿಧವಾಗಿ ಬೋಧಿಸುತಲಿದ್ದರು. ಅದರಿಂದೇನೂ ಪ್ರಯೋಜನವು ಉಂಟಾಗಲಿಲ್ಲ. ಆಗ ಕರ್ಣನು ಸುರಪಾಲನ ಭೃತ್ಯನಿಗೆ ಲಂಚವನ್ನು ಕೊಟ್ಟು ಆತನು ಸತ್ತುಹೋದನು ಎಂದು ಹೇಳಿಸಿದನು. ಇದರಿಂದ ಆಕೆಯು ಪತಿಯ ಆಶೆಯನ್ನು ಬಿಟ್ಟು ತನಗೆ ವಶಳಾಗುವಳು ಎಂದು ತಿಳಿದನು. ಆದರೆ ವಿಮಲೆಯು ಆ ವೃತ್ತಾಂತವು ಕಿವಿಗೆ ಬಿದ್ದೊಡನೆಯೇ ಸಹಗಮನವನ್ನು ಮಾಡಲು ಸಿದ್ಧಳಾದಳು. ಕರ್ಣನು ಆಕೆಯನ್ನು ಸಹಗಮನ ಮಾಡಗೊಡದೆ ತನ್ನನ್ನು ಧರ್ಮಶಾಸ್ತ್ರಪ್ರಕಾರವಾಗಿ ವಿವಾಹ ಮಾಡಿಕೊಳ್ಳಬೇಕು ಎಂದು ನಿರ್ಬಂಧಮಾಡಿದನು. ಆತನ ಸೈನಿಕರು ವಿಮಲೆಯ ಸುಗುಣಗಳನ್ನು ನೋಡಿ ಕರ್ಣನನ್ನು ತಿರಸ್ಕರಿಸಿ, ಆಕೆಯ ಸಹಗಮನಕ್ಕೆ ಸಿದ್ಧಪಡಿಸಿದರು. ವಿಮಲೆಯು ಅಲ್ಲಿಗೆಬಂದ ಸ್ತ್ರೀಯರಿಗೆ ಪಾತಿವ್ರತ್ಯವನ್ನೂ, ಸೈನಿಕರಿಗೆ ನೀತಿಯನ್ನೂ ಬೋಧಿಸಿ ಚಿತಿಯನ್ನೇರಲು ಸಿದ್ಧಳಾದಳು. ಆ ಸಮಯದಲ್ಲಿ ಕರ್ಣನು ಸಹ ಪಶ್ಚಾತ್ತಾಪವುಳ್ಳವನಾಗಿ ಆಕೆಯಲ್ಲಿ ಕ್ಷಮಾಪಣೆಯನ್ನು ಬೇಡಿಕೊಂಡನು. ವಿಮಲೆಯು, "ನೀನು ಪರಮೇಶ್ವರನಲ್ಲಿ ಕ್ಷಮೆಯನ್ನು ಬೇಡಿಕೋ. ಪುನಃ ಇಂತಹ ಕಾರ್ಯಗಳನ್ನು ಮಾಡಬೇಡ." ಎಂದು ನುಡಿದು ಚಿತೆಯನ್ನೇರಿದಳು.

ಅಲ್ಲಿ ಸುರಪಾಲನು ಗ್ರಾಮವನ್ನು ಸಮಿಾಪಿಸಿ ಗ್ರಾಮವು ಶತ್ರುವಶವಾಯಿತು ಎಂದು ತಿಳಿದು ಪುನಃ ಅರಣ್ಯಕ್ಕೆ ಬಂದು, ಅಲ್ಲಿ ತನ್ನವರು ಯಾರೂ ಕಾಣದಿರಲು, ಒಬ್ಬ ಕಿರಾತನಿಂದ ವೃತ್ತಾಂತವನ್ನೆಲ್ಲ ತಿಳಿದುಕೊಂಡು, ಕರ್ಣನ ಬಳಿಯಲ್ಲಿರುವ ತನ್ನ ಪತ್ನಿಯನ್ನು ಬಿಡಿಸಿಕೊಂಡುಬರಲು ಸೋರಟ್‌ನಗರಕ್ಕೆ ಹೊರಟನು. ಆ ನಗರವನ್ನು ಸಮಿಾಪಿಸಿ ವಿಮಲೆಯನ್ನು ಬಿಡಿಸುವ ಉಪಾಯವನ್ನು ಕಾಣದೆ ಚಿಂತಿಸುತ್ತಿರಲು, ಯಾರೋಒಬ್ಬ ಮನುಷ್ಯನು ವಿಮಲೆಯ ಸಹಗಮನ ವೃತ್ತಾಂತವನ್ನು ತಿಳಿಸಿದನು. ಕೂಡಲೆ ಸುರಪಾಲನು ವೇಷವನ್ನು ಧರಿಸಿಕೊಂಡು ಜನರ ಗುಂಪಿನಲ್ಲಿ ಹೋಗಿ ಚಿತೆಯ ಮೇಲಿದ್ದ ವಿಮಲೆಯನ್ನೆತ್ತಿಕೊಂಡು ಹೋಗಿ ಕುದುರೆಯಮೇಲೆ ಕುಳ್ಳಿರಿಸಿಕೊಂಡು ಅರಣ್ಯ ಮಾರ್ಗದಲ್ಲಿ ಹೊರಟನು. ವಿಮಲೆಯು ಕರ್ಣನೇ ತನ್ನನ್ನು ಎತ್ತಿಕೊಂಡು ಹೋಗುತಲಿರುವನು ಎಂದು ತಿಳಿದಳು. ಸ್ವಲ್ಪಹೊತ್ತಿಗೆ ಸುರಪಾಲನ ಮಾತುಗಳಿಂದ ತನ್ನ ಪತಿಯ ಮೃತಿಯು ಅನೃತವೆಂದರಿತು, ಆತನೇ ತನ್ನನ್ನು ಬಿಡಿಸಿದನು ಎಂಬುದನ್ನು ತಿಳಿದುಕೊಂಡಳು. ಅನಂತರ ಅವರಿಬ್ಬರೂ ವೇಷವನ್ನು ಧರಿಸಿಕೊಂಡು ಮಾರ್ಗದಲ್ಲಿ ಯಾರೂ ತಮ್ಮನ್ನರಿಯದಂತೆ ಅರಣ್ಯವನ್ನುಸೇರಿ, ರೂಪಸುಂದರಿಯು ಇರುವಸ್ಥಳಕ್ಕೆ ಬಂದರು. ತತ್ಪೂರ್ವವೇ

ರೂಪಸುಂದರಿಯು ಪುರುಷಶಿಶುವನ್ನು ಪ್ರಸವಿಸಿದ್ದಳು. ಆ ಬಾಲಕನಿಗೆ ಕಿರಾತರು ವನರಾಜ ಎಂದು ಹೆಸರಿಟ್ಟರು. ಪುತ್ರಸಹಿತಳಾದ ಅತ್ತಿಗೆಯನ್ನು ನೋಡಿ ವಿಮಲೆಯು ಸಂತುಷ್ಟಳಾದಳು. ಅವರೆಲ್ಲರೂ ಅರಣ್ಯದಲ್ಲಿಯೇ ಗುಪ್ತವಾಗಿ ವಾಸಮಾಡಿಕೊಂಡಿದ್ದರು. ಅರಣ್ಯಜಲವು ವಿಮಲೆಗೆ ಸರಿಬೀಳದೆ ಆಕೆಯು ದಿನೇದಿನೇ ಕೃಶಳಾಗಿ ಕೆಲವು ದಿವಸಗಳಿಗೆ ಮೃತಳಾದಳು.

ಪದ್ಮಾವತಿ.

———:o:———

ಸಾಭಾರ್ಯಾಯಾ ಶುಚಿರ್ದಕ್ಷಾ ಸಾಭಾರ್ಯಾಯಾ ಪತಿವ್ರತಾ ।
ಸಾಭಾರ್ಯಾಯಾ ಪತಿಸ್ಪ್ರೀತಾ ಸಾಭಾರ್ಯಾ ಸತ್ಯವಾದಿನೀ ॥ *

ಪದ್ಮಾವತಿಯು ಜಗನ್ನಾಥ (ಪುರಿ) ನಿವಾಸಸ್ಥನಾದ ಅಗ್ನಿಹೋತ್ರ ಎಂಬ ವಿಪ್ರನ ಮಗಳು. ಈಕೆಯ ಪತಿಯು ಮಹಾ ಕವಿಯಾದ ಜಯದೇವನು.

ಅಗ್ನಿಹೋತ್ರಿಯು ತನ್ನ ಪುತ್ರಿಯಾದ ಪದ್ಮಾವತಿಯು ಯುಕ್ತವಯಸ್ಕಳಾಗಲು, ಆಕೆಗೆ ತಕ್ಕ ವರನನ್ನು ವಿಚಾರಿಸುತಲಿದ್ದನು. ಬಿಲ್ವಾ ಎಂಬ ಗ್ರಾಮದಲ್ಲಿ ನಾರಾಯಣಭಟ್ಟ ಎಂಬ ಒಬ್ಬ ಬ್ರಾಹ್ಮಣನು ಇರುವನೆಂತಲೂ, ಆತನ ಪುತ್ರನಾದ ಜಯದೇವನು ಸಕಲಸದ್ಗುಣ ಪರಿಪೂರ್ಣನೆಂತಲೂ ಅಗ್ನಿಹೋತ್ರಿಗೆ ತಿಳಿಯಬರಲು, ವರನು ಬಡವನು ಎಂದು ಶಂಕಿಸದೆ, ತನ್ನ ಪುತ್ರಿಯನ್ನು ಆತನಿಗೆ ಕೊಟ್ಟು ವಿವಾಹಮಾಡಿದನು. ಪದ್ಮಾವತಿಯು ಅತ್ತೆಯ ಮನೆಗೆ ಹೋಗಿ ಪತಿಭಕ್ತಿಯುಳ್ಳವಳಾಗಿ, ತಮಗೆ ಇಪ್ಪುದರಲ್ಲಿಯೇ ಸಂಸಾರವನ್ನು ಗೋಪ್ಯವಾಗಿ ನಿರ್ವಹಿಸುತಲಿದ್ದಳು. ಗುಣವತಿಯಾದ ಸತಿಯನ್ನು ಪಡೆದುದರಿಂದ ಜಯದೇವನಿಗೆ ಸಂಸಾರವು ಅಸಾರವಾಗಿ ತೋರದೆ ಸಸಾರವಾಗಿಯೇ ತೋರಿತು. ಜಯದೇವನು ಪೀಯೂಷ ವರ್ಷನಾದ ಕವಿ ಎಂದು ಪ್ರಸಿದ್ಧಿಯನ್ನು ಹೊಂದಿದನು. ಆತನು ಸಂಗೀತಸಾಹಿತ್ಯಗಳಲ್ಲಿ ಅಸಮಾನ ಪಾಂಡಿತ್ಯವನ್ನು ಪಡೆದು "ಪ್ರಸನ್ನರಾಘವ" ಎಂಬ ನಾಟಕವನ್ನೂ, "ಗೀತಗೋವಿಂದ" ಎಂಬ ಸಂಗೀತ ಗ್ರಂಥವನ್ನೂ ರಚಿಸಿದನು.

* ಪವಿತ್ರಳೂ ಚಾತುರ್ಯವತಿಯೂ ಆಗಿ, ಪತಿವ್ರತೆಯಾಗಿ, ಪತಿಯ ಅನುಗ್ರಹವನ್ನು ಹೊಂದಿ, ಸತ್ಯವನ್ನು ನುಡಿಯುವವಳೇ ಸದ್ಭಾರ್ಯೆ ಎನಿಸುವಳು.

ಇವರು ಸುಖವಾಗಿ ಕೆಲವು ಕಾಲವನ್ನು ಕಳೆದರು. ಈತನ ಕೀರ್ತಿಯು ಎಲ್ಲೆಲ್ಲಿಯೂ ಹರಡಿಕೊಂಡುದದರಿಂದ ನೆರೆಹೊರೆಯ ಗ್ರಾಮದವನಾದ ಒಬ್ಬ ಸಾಹುಕಾರನು ಜಯದೇವನನ್ನು ತನ್ನ ಗ್ರಾಮಕ್ಕೆ ಕರೆದುಕೊಂಡು ಹೋಗಿ ಕೆಲವು ದಿವಸಗಳಿರಿಸಿಕೊಂಡನು. ಆ ಗ್ರಾಮದಲ್ಲಿ ಅನೇಕರನ್ನು ಜಯದೇವನು ಭಕ್ತರನ್ನಾಗಿ ಮಾಡಿದನು. ಜಯದೇವನು ಸ್ವಗ್ರಾಮಕ್ಕೆ ಪ್ರಯಾಣಮಾಡಲು, ಆತನು ದ್ರವ್ಯವನ್ನು ಸ್ವೀಕರಿಸಲಾರನು ಎಂದು ಎಣಿಸಿ, ಆ ಸಾಹುಕಾರನು ಆತನಿಗೆ ತಿಳಿಯದಂತೆ ಸ್ವಲ್ಪ ದ್ರವ್ಯವನ್ನು ಗಾಡಿಯ ಕೆಳಭಾಗದಲ್ಲಿ ಬಚ್ಚಿಟ್ಟು, ಮನೆಗೆ ಹೋದಮೇಲೆ ಪದ್ಮಾವತಿಯವರಿಗೆ ಕೊಡಬೇಕು ಎಂದು ಗಾಡಿಯವನಿಗೆ ಹೇಳಿದನು.

ಗಾಡಿಯು ಸ್ವಲ್ಪ ದೂರ ಹೋದಮೇಲೆ ಅರಣ್ಯವಾಸಿಗಳಾದ ಕೆಲವು ಚೋರರು ಗಾಡಿಯಲ್ಲಿ ದ್ರವ್ಯವು ಇರುವ ವಿಷಯವನ್ನು ಹೇಗೋ ತಿಳಿದುಕೊಂಡು, ಆ ಗಾಡಿಯನ್ನು ನಿಲ್ಲಿಸಿ ಧನವನ್ನು ತೆಗೆದುಕೊಂಡು, ಜಯದೇವನನ್ನು ಬಿಟ್ಟರೆ ಆತನು ರಾಜಭಟರಿಗೆ ತಿಳಿಸಿ ತಮಗೆ ಶಿಕ್ಷೆಯನ್ನು ಮಾಡಿಸುವನು ಎಂದು ಆತನ ಕೈಕಾಲುಗಳನ್ನು ಹೊಡೆದು ಒಂದು ಹಾಳುಭಾವಿಯಲ್ಲಿ ಬಿಸಾಟರು. ಸ್ವಲ್ಪಹೊತ್ತಿಗೆ ಕ್ರೌಂಚದೇಶಾಧೀಶನು ಬೇಟೆಗಾಗಿ ಆ ಯರಣ್ಯಕ್ಕೆ ಬಂದು ಅಲ್ಲಿ ಜಯದೇವನನ್ನು ಕಂಡು, ತನ್ನ ನಗರಕ್ಕೆ ಕರೆದುಕೊಂಡುಹೋಗಿ, ವೈದ್ಯರಿಂದ ಬಹುವಿಧ ಔಷಧೋಪಚಾರಗಳನ್ನು ಮಾಡಿಸಲು, ಆತನ ಕೈಕಾಲುಗಳ ಘಾಯಗಳು ವಾಸಿಯಾದವು. ಜಯದೇವನ ಪಾಂಡಿತ್ಯವನ್ನೂ, ನಿರ್ಮಲ ದೈವಭಕ್ತಿಯನ್ನೂ, ಅಪ್ರತಿಮಸಾಧುವೃತ್ತಿಯನ್ನೂ ನೋಡಿ ಕ್ರೌಂಚರಾಜನು ಆತನನ್ನು ಗುರುವಿನಂತೆ ಭಾವಿಸಿ ಅಧಿಕಭಕ್ತಿಯಿಂದ ಸೇವಿಸುತಲಿದ್ದನು.

ಇಲ್ಲಿ ಪದ್ಮಾವತಿಯು ಪತಿಗಾಗಿ ಅನೇಕ ಸ್ಥಳಗಳಲ್ಲಿ ಹುಡುಕಿಸಿ, ಆತನು ಇರುವ ಸ್ಥಳವನ್ನು ತಿಳಿಯದೆ ತೌರುಮನೆಗೆ ಹೋಗಿ ದುಃಖದಿಂದ ಕಾಲವನ್ನು ಕಳೆಯುತಲಿದ್ದಳು. ಕೆಲವು ದಿವಸಗಳಿಗೆ ಕ್ರೌಂಚದೇಶದ ಅರಸನು ಜಯದೇವನ ಸಮಾಚಾರವನ್ನು ತಿಳಿಸಿ, ಪದ್ಮಾವತಿಯನ್ನು ಕರೆತರುವಂತೆ ಕೆಲವು ಜನರನ್ನು ಜಗನ್ನಾಧಕ್ಕೆ ಕಳುಹಿಸಿದನು. ಪದ್ಮಾವತಿಯು ಪರಮಾನಂದದಿಂದ ಅವರೊಡನೆ ಪತಿಯ ಬಳಿಗೆ ಹೋದಳು.

ಪದ್ಮಾವತಿಯು ಗುರುಪತ್ನಿಯಾದುದರಿಂದಲೂ, ಸಾಧ್ವೀಮಣಿ ಎಂದು ಪ್ರಸಿದ್ಧಿಯನ್ನು ಪಡೆದಿರುವುದರಿಂದಲೂ ರಾಜಪತ್ನಿಯು ಆಕೆಯಿಂದ ಅನೇಕ ನೀತಿ ವಿಷಯಗಳನ್ನು ಶ್ರದ್ಧೆಯಿಂದ ತಿಳಿದುಕೊಳ್ಳುತಲಿದ್ದಳು. ಒಂದು ದಿವಸ ಪದ್ಮಾವತಿಯು ಪಾತಿವ್ರತ್ಯವನ್ನು ಕುರಿತು ಉಪನ್ಯಸಿಸುತ್ತಿರಲು, ಒಬ್ಬ ಸೇವಕನು

ಅಲ್ಲಿಗೆ ಬಂದು, ರಾಜಪತ್ನಿಯ ಸಮೀಪ ಬಂಧುವು ಒಬ್ಬನು ಮೃತನಾದ ನೆಂತಲೂ, ಆತನ ಪತ್ನಿಯು ಸಹಗಮನಮಾಡಲು ಸಿದ್ಧಳಾಗಿರುವಳೆಂತಲೂ, ತಿಳಿಸಿದನು. ಆ ಸಂಗತಿಯನ್ನು ಕೇಳಿ ಅಲ್ಲಿನ ಸ್ತ್ರೀಯರೆಲ್ಲರೂ ಆಶ್ಚರ್ಯಯುತರಾದರು. ಪದ್ಮಾವತಿಯ ಮುಖದಲ್ಲಿ ಮಾತ್ರ ಆಶ್ಚರ್ಯಭಾವವು ಇಲ್ಲದೇ ಇರುವುದನ್ನು ಕಂಡು ರಾಜಪತ್ನಿಯು, "ಅಮ್ಮಾ! ಆ ಮಹಾಪತಿವ್ರತೆಯು ಸಕಲ ಸುಖಗಳನ್ನೂ ತ್ಯಜಿಸಿ ಪತಿಯೊಡನೆ ಅನುಮೃತಳಾಗುವಳು ಎಂಬ ವಾರ್ತೆಯು ನಿಮಗೆ ಆಶ್ಚರ್ಯವನ್ನು ಉಂಟುಮಾಡಲಿಲ್ಲವೇ? ದಯವಿಟ್ಟು ನಿಮ್ಮ ಮನೋಗತವನ್ನು ತಿಳಿಸಿರಿ." ಎಂದು ಕೇಳಿಕೊಂಡಳು. ಆಗ ಪದ್ಮಾವತಿಯು ಆಕೆಯೊಡನೆ ಇಂತೆಂದಳು, "ಪತಿಯು ಮೃತನಾದೊಡನೆಯೇ ಪ್ರೇಮವುಳ್ಳ ಪತ್ನಿಯ ಪ್ರಾಣವು ಶರೀರದಿಂದ ಹೊರಡಬೇಕು. ಇದೇ ನಿಜವಾದ ಪ್ರೇಮ ಲಕ್ಷಣ. ಈ ವಿಧವಾಗಿ ಕೂಡಲೆ ಪ್ರಾಣವನ್ನು ಬಿಡದೆ, ಅನಂತರ ಪ್ರಾಣತ್ಯಾಗ ಮಾಡುವುದು ಆತ್ಮಘಾತವೇ ಹೊರತು ಪತ್ನೀಧರ್ಮವಲ್ಲ."

ಪದ್ಮಾವತಿಯ ಶುದ್ಧಾಂತಃಕರಣದಿಂದ ಹೊರಟ ಈ ಮಾತುಗಳು ರಾಜಪತ್ನಿಯ ಕಿವಿಗೆ ಬಾಣದಂತೆ ತೋರಿತು. ಆಕೆಯು, ಪದ್ಮಾವತಿಯು ತಾನೇ ನಿಜವಾದ ಪತಿವ್ರತೆ ಎಂದು ತೋರಿಕೊಳ್ಳುವ ಸಲುವಾಗಿ ಈ ಜಂಭದ ಮಾತುಗಳನ್ನು ನುಡಿದಳು ಎಂದೆಣಿಸಿ, ಪದ್ಮಾವತಿಯನ್ನು ಪರೀಕ್ಷಿಸಿ ಭಂಗಪಡಿಸಬೇಕು ಎಂದು ನಿಶ್ಚಯಿಸಿಕೊಂಡಳು.

ಆಮೇಲೆ ಕೆಲವು ದಿವಸಗಳಿಗೆ ಜಯದೇವನು ರಾಜನೊಡನೆ ಅರಣ್ಯಕ್ಕೆ ಹೋದನು. ಆಗ ರಾಜಪತ್ನಿಯು ಮಂತ್ರಿಯನ್ನು ಕರೆಯಿಸಿ ತನ್ನ ದುರಾಲೋಚನೆಗಳನ್ನು ಆತನಿಗೆ ತಿಳಿಸಿ, ತದನುಸಾರವಾಗಿ ಕಾರ್ಯವನ್ನು ನಿರ್ವಹಿಸಲು ಆತನನ್ನು ನಿಯಮಿಸಿದಳು. ಆ ದಿವಸವೂ ರಾಣಿಯು ಯಥಾಪ್ರಕಾರವಾಗಿ ಪದ್ಮಾವತಿಯ ಗೃಹಕ್ಕೆ ಹೋಗಿ, ಆಕೆಯೊಡನೆ ಪ್ರಸಂಗಿಸುತಲಿದ್ದಳು. ಒಂದೆರಡು ಗಳಿಗೆಗಳು ಕಳೆಯುವದರೊಳಗೆ ಒಬ್ಬ ಪರಿಚಾರಿಕೆಯು ದೀನಮುಖದೊಡನೆ ಬಂದು, "ಅಡವಿಯಲ್ಲಿ ಆಕಸ್ಮಿಕವಾಗಿ ಜಯದೇವನು ಹುಲಿಯಬಾಯಿಗೆ ತುತ್ತಾದನು ಎಂದು ಗದ್ಗದಸ್ವರದೊಡನೆ ನುಡಿದಳು! ವಜ್ರಘಾತದಂತಹ ಆ ಮಾತನ್ನು ಕೇಳಿದೊಡನೆಯೇ ಪದ್ಮಾವತಿಯು ನಿಶ್ಚೇಷ್ಟಿತಳಾಗಿ ಸ್ವಲ್ಪಹೊತ್ತಿಗೆ ಎಚ್ಚತ್ತು ಪತಿಯನಾಮವನ್ನು ಸ್ಮರಿಸುತ್ತ ಮರಣತುಲ್ಯವಾದ ಮೂರ್ಛೆಯನ್ನು ಹೊಂದಿದಳು. ಆ ಸಮಯದಲ್ಲಿ ಅಲ್ಲಿದ್ದವರೆಲ್ಲರೂ ಆಕೆಯು ಸತ್ಯವಾಗಿ ಮೃತಳಾದಳು ಎಂದು ತಿಳಿದರು.

ಪದ್ಮಾವತಿಯ ಪಾತಿವ್ರತ್ಯವನ್ನು ಪರೀಕ್ಷಿಸಲು ಈ ತಂತ್ರವನ್ನು ಮಾಡಿದ

ರಾಣಿಯು ಆಕೆಯ ಸ್ಥಿತಿಯನ್ನು ನೋಡಿ ಏನೂತೋರದೆ ದುಃಖಿಸುತಲಿದ್ದಳು. ಮೊದಲು ಈ ಕಾರ್ಯದಲ್ಲಿ ರಾಜಪತ್ನಿಗೆ ಸಹಾಯಕರಾದವರೆಲ್ಲರೂ, ಈಗ ಆಕೆಯನ್ನು ನಿಂದಿಸತೊಡಗಿದರು. ರಾಣಿಯು ಸಪರಿವಾರವಾಗಿ ಶೋಕಿಸುತ್ತಿರಲು, ರಾಜನೂ ಜಯದೇವನೂ ಪುರವನ್ನು ಪ್ರವೇಶಿಸಿ, ಮನೆಗೆ ಬಂದು ಪದ್ಮಾವತಿಯ ಮರಣವೃತ್ತಾಂತವನ್ನು ಕೇಳಿ ಆಕೆಯನ್ನು ಸಮಿಾಪಿಸಿದರು. ಜಯದೇವನು ಪತ್ನಿಯನ್ನು ನೋಡಿ ದುಃಖವನ್ನು ತಡೆಯಲಾರದೆ ಸ್ವಲ್ಪಹೊತ್ತು ದುಃಖಿಸಿದನು. ಮೊದಲಿನ ದುಃಖವು ಸ್ವಲ್ಪ ಕಡಮೆಯಾದಮೇಲೆ ಜಯದೇವನು ಸ್ವಲ್ಪ ಧೈರ್ಯವನ್ನು ವಹಿಸಿ, ತನ್ನ ಸಂಗೀತವು ಪದ್ಮಾವತಿಗೆ ಬಹು ಪ್ರಿಯವಾದುದಾದಕಾರಣ, ತನ್ನ ವೀಣೆಯನ್ನು ತರಿಸಿ, ತಾನು ರಚಿಸಿದ ಗೀತಗೋವಿಂದವನ್ನು ಬಹು ಮನೋಹರವಾಗಿ ಹಾಡಲು ಪ್ರಾರಂಭಿಸಿದನು. ಸಂಗೀತವನ್ನು ಪ್ರಾರಂಭಿಸಿದ ಸ್ವಲ್ಪಹೊತ್ತಿಗೆ ಆಕೆಯ ಮುಖದಲ್ಲಿ ಸ್ವಲ್ಪ ಕಳೆಯು ಉಂಟಾಯಿತು. ಇಪ್ಪತ್ತೈದನೆಯ ಅಷ್ಟಪದಿಯು ಮುಗಿದಕೂಡಲೆ ಆಕೆಯು ಎಚ್ಚತ್ತು ಕಣ್ಣು ತೆರೆದು ಜಯದೇವನನ್ನು ನೋಡಿ ಅತಿಹರ್ಷದೊಡನೆ ಎದ್ದು ಪತಿಯ ಪಾದಗಳಿಗೆ ನಮಸ್ಕರಿಸಿದಳು.

ರಾಜನು ಈ ಅನರ್ಥಕ್ಕೆಲ್ಲ ತನ್ನಪತ್ನಿಯೇ ಕಾರಣವಾದುದರಿಂದ ಆಕೆಯನ್ನು ತ್ಯಜಿಸಲು ಎಣಿಸಿದನು. ದಯಾಮಯಳಾದ ಪದ್ಮಾವತಿಯು ರಾಜನನ್ನು ಸಮಾಧಾನಗೊಳಿಸಿ, ಆ ದಂಪತಿಗಳು ಸಖ್ಯವಾಗಿರುವಂತೆ ಮಾಡಿದಳು. ಅನಂತರ ಜಯದೇವ ಪದ್ಮಾವತಿಯರು ವಾರಣಾಸಿ ನಗರಕ್ಕೆ ಹೋಗಿ ಅಲ್ಲಿ ಪುರುಷರಿಗೆ ಭಕ್ತಿಯನ್ನೂ, ಸ್ತ್ರೀಯರಿಗೆ ಪಾತಿವ್ರತ್ಯವನ್ನೂ ಬೋಧಿಸುತ್ತ ತಮ್ಮ ಪ್ರವರ್ತನೆಯಿಂದ ಅವರಿಗೆ ಸನ್ಮಾರ್ಗವನ್ನು ತೋರಿಸುತ್ತ ಕೆಲವುಕಾಲ ಅಲ್ಲಿದ್ದು ಅನಂತರ ತಮ್ಮ ಗ್ರಾಮಕ್ಕೆ ಹೋಗಿ ಅಲ್ಲಿಯೇ ಮೃತರಾದರು.

ಪದ್ಮಾವತಿಯು ರಾಜಪತ್ನಿಗೆ ಉಪದೇಶಿಸಿದ ಒಂದು ಉಪನ್ಯಾಸವು ಆಂಧ್ರಮಹಾಭಕ್ತವಿಜಯದಲ್ಲಿದೆ. ಅದನ್ನು ಕೆಳಗೆ ಬರೆದಿರುವೆನು.

"ಅಮ್ಮಾ! ಲೋಕದಲ್ಲಿ ಸತಿಗಳಿಗೆ ಮುಖ್ಯವಾಗಿ ಬೇಕಾದ ಧರ್ಮವು ಒಂದಿರುವುದು. ಪತಿಹೊರತು ಬೇರೆಗತಿಯಾಗಲಿ, ಪತಿಹೊರತು ಬೇರೆ ಬಂಧುವಾಗಲಿ, ಪತಿಹೊರತು ಬೇರೆ ದೈವವಾಗಲಿ, ಪತಿಹೊರತು ಬೇರೆ ಸಂಪತ್ತಾಗಲಿ, ಪತಿಸೇವೆಗಿಂತಲೂ ಉತ್ಕೃಷ್ಟವಾದ ಧರ್ಮವಾಗಲಿ ಇಲ್ಲ ಎಂತಲೂ, ಪಾತಿವ್ರತ್ಯಕ್ಕೆ ಎಂದಿಗೂ ಭಂಗ ಉಂಟಾಗದಂತೆ ಕಾಪಾಡಿಕೊಳ್ಳುವುದೇ ಬ್ರಹ್ಮಜ್ಞಾನವೆಂತಲೂ, ಅನವರತವು ಪತಿನಾಮವನ್ನು ಸ್ಮರಿಸುತಲಿರುವುದೇ ಬ್ರಹ್ಮಧ್ಯಾನವೆಂತಲೂ, ಪತಿಯನ್ನು ಸರ್ವದಾ ಎಡಬಿಡದಿರುವುದೇ ಬ್ರಹ್ಮಾನಂದ

ವೆಂತಲೂ, ಪತಿ ಮೃತನಾದೊಡನೆಯೇ ಪ್ರಾಣವನ್ನು ಬಿಡುವುದೇ ಮೋಕ್ಷ ವೆಂತಲೂ ನಿಶ್ಚಯಿಸಿಕೊಂಡು ನಡೆಯುತಲಿರುವ ಸತಿಗೆ ಸಕಲಶುಭಗಳು ಸುಲಭವಾಗಿ ಸಿದ್ಧಿಸುವವು. ವ್ರತಗಳಲ್ಲಿ ಉತ್ತಮವಾದುದು ಪತಿವ್ರತ. (ಪಾತಿವ್ರತ್ಯ.) ಲೋಕದಲ್ಲಿರುವ ಜಪತಪ ಹೋಮಾದಿಗಳು ಪಾತಿವ್ರತ್ಯದೊಡನೆ ಸಮಾನವಲ್ಲ. ಪತಿವ್ರತೆಯಾದ ಸ್ತ್ರೀಯು ಭಾಗೀರಥಿ ಯೆನಿಸುವಳು. ಪತಿವ್ರತೆಗೆ ಯಾವಲೋಪವೂ ಉಂಟಾಗುವುದಿಲ್ಲ. ಸ್ತ್ರೀಗೆ ಭೂಷಣಗಳಲ್ಲಿ ಶ್ರೇಷ್ಠವಾದುದು ಪಾತಿವ್ರತ್ಯವು ಒಂದೇ. ಪಾತಿವ್ರತ್ಯವನ್ನು ಕೆಡಿಸಿಕೊಂಡ ಸ್ತ್ರೀಯು ಒಂದುವೇಳೆ ಇತರ ಸತ್ಕರ್ಮಗಳನ್ನು ಮಾಡಿದರೂ ಅವು ದುಷ್ಕರ್ಮಗಳಾಗಿ ಪರಿಣಮಿಸಿ ದುಃಖಭಾಜನಗಳಾಗುವವು. ಪತಿವ್ರತೆಯರ ಪ್ರಭಾವದಿಂದಲೇ ಭೂತಲವು ಅಂತರದಲ್ಲಿ ನಿಂತಿದೆ ಎಂತಲೂ, ಪತಿವ್ರತೆಯರ ವಿಷಯದಲ್ಲಿ ಬ್ರಹ್ಮಾದಿ ದೇವತೆಗಳು ಸಹ ಹೆದರುವರೆಂತಲೂ ನಮ್ಮ ಪೂರ್ವಿಕರು ನುಡಿದಿದಾರೆ. ಪೂರ್ವಕಾಲದಲ್ಲಿ ಮೃತನಾದ ಪತಿಯನ್ನು ಸಾವಿತ್ರಿಯು ಬದುಕಿಸಿಕೊಂಡಳು. ತನ್ನ ಚಿತ್ತ ಶುದ್ಧಿಯನ್ನು ತೋರುವಸಲುವಾಗಿ ಸೀತಾದೇವಿಯು ಅಗ್ನಿಯಲ್ಲಿ ಪ್ರವೇಶಿಸಿದಳು. ತನಗೆ ಮಾನಹಾನಿಯನ್ನು ಉಂಟುಮಾಡಲು ಬಂದ ಕಿರಾತನನ್ನು ದಮಯಂತಿಯು ಭಸ್ಮಮಾಡಿದಳು. ಚಂದ್ರಮತಿಯು ತನ್ನ ಮಾಂಗಲ್ಯವು ಇತರರಿಗೆ ಕಾಣದಂತೆ ರಕ್ಷಿಸಿಕೊಂಡಳು. ರೇಣುಕಾದೇವಿಯು ಮರಳಿನಲ್ಲಿ ಮಡಿಕೆಯನ್ನು ಮಾಡಿ ನೀರನ್ನು ತಂದಳು. ಬೃಂದೆಯು ತನ್ನ ಪತಿಯಂತೆ ವೇಷವನ್ನು ಧರಿಸಿ ಬಂದ, ವಿಷ್ಣುಮಾಯೆಯನ್ನು ತಿಳಿದುಕೊಂಡಳು. ಅನಸೂಯೆಯು ನಾರದರುಕೊಟ್ಟ ಕಬ್ಬಿಣದ ತುಂಡುಗಳನ್ನು ಕಡಲೆಯಂತೆ ಉಸಲಿಯಾಗಿ ಬೇಯಿಸಿದಳು. ಆಕೆಯು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸಹ ತನಗೆ ಮಕ್ಕಳಾಗಿ ಮಾಡಿಕೊಂಡಳು. ಅರುಂಧತಿಯು ಮರಳನ್ನು ಗಳಿಗೆಯೊಳಗೆ ಬೇಯಿಸಿದಳಲ್ಲವೇ? ಲಕ್ಷ್ಮೀದೇವಿಯು ಪರಮಶಿವನಿಗೆ ಉಂಟಾದ ಬ್ರಹ್ಮಹತ್ಯೆಯನ್ನು ಹೋಗಲಾಡಿಸಿದಳು. ಪಾರ್ವತೀದೇವಿಯು ಪತಿಯ ಅರ್ಧಾಂಗವನ್ನು ಸಂಪಾದಿಸಿಕೊಂಡಳು. ಪಾತಿವ್ರತ್ಯದಿಂದಲ್ಲವೆ ಅವರು ಇಂತಹ ಮಹಾಶಕ್ತಿಯನ್ನು ಪಡೆದರು. ನೋಡು! ಅರುಂಧತಿಯು ಕೀಳುಜಾತಿಯಲ್ಲಿ ಜನ್ಮಿಸಿದರೂ, ಪಾತಿವ್ರತ್ಯ ಮಹಿಮೆಯಿಂದ ಸಪ್ತರ್ಷಿಮಂಡಲದಲ್ಲಿ ವಸಿಷ್ಠರ ಸಮೀಪದಲ್ಲಿ ಪೂರ್ಣಕಾಂತಿಯಿಂದ ಹೊಳೆಯುತಲಿರುವಳು. ಒಂದು ಸಲ ಅಗ್ನಿಹೋತ್ರನು ಸಪ್ತರ್ಷಿಗಳ ಪತ್ನಿಯರ ಮೇಲಿನ ಮೋಹದಿಂದ ಕೃಶಿಸುತ್ತಿರಲು ಆತನ ಪತ್ನಿಯಾದ ಸ್ವಾಹಾದೇವಿಯು ಆರು ಮಂದಿ ಋಷಿಪತ್ನಿಯರ ರೂಪವನ್ನು ಧರಿಸಿ, ಪರಮಪವಿತ್ರಳು ಎಂಬ ಹೇತುವಿನ ಮೇಲೆ ಅರುಂಧತಿಯ ರೂಪವನ್ನು ಧರಿಸಲು ಶಂಕಿಸಿದಳಲ್ಲವೇ? ಸತ್ಕುಲ ಪ್ರಸೂತಳೂ, ಸಕಲಗುಣಸಂಪನ್ನಳೂ ಆದ ಅಹಲ್ಯೆಯು ಮನೋವೈಕಲ್ಯದಿಂದ

ಪಾತಿವ್ರತ್ಯವನ್ನು ಕೆಡಿಸಿಕೊಂಡುದುದರಿಂದಲ್ಲವೇ ಪಾಷಾಣವಾಗಿ ಬಿದ್ದಿದ್ದು ಚಿರ ಕಾಲ ದುಃಖವನ್ನು ಅನುಭವಿಸಬೇಕಾಯಿತು. ಈಗಲೂ ವಿವಾಹಕಾಲದಲ್ಲಿ ಕಲ್ಲು ಎಂಬ ನೆಪದಿಂದ ಅಹಲ್ಯೆಯನ್ನು ಕನ್ಯೆಯಿಂದ ತುಳಿಸುವುದೂ, ಅರುಂಧತಿಯನ್ನು ತೋರಿಸಿ ಪೂಜೆಮಾಡಿಸುವುದೂ ಆಚಾರವಾಗಿದೆ. ದೇವತಾಚಾರ್ಯನ ಪತ್ನಿಯಾದ ತಾರೆಯು ಚಂದ್ರನ ಸಂಪರ್ಕದಿಂದ ಶಾಶ್ವತವಾದ ಅಪಕೀರ್ತಿಯನ್ನು ಅನುಭವಿಸುತಲಿರುವಳು. ಸಖಿಯರೊಡನೆ ಜಲಕ್ರೀಡೆಯನ್ನು ಮಾಡುತಲಿದ್ದ ಚಿತ್ರರಥನನ್ನು ನೋಡಿ ಭ್ರಮಿಸಿದುದರಿಂದಲ್ಲವೆ ರೇಣುಕೆಯು ಮರಳಿನಲ್ಲಿ ಮುಡಿಕೆಯನ್ನು ಮಾಡಲಾರದೆ ಪತಿಯ ಆಗ್ರಹಕ್ಕೆ ಪಾತ್ರಳಾಗಿ ಪುತ್ರನಿಂದ ಕಡಿಯಲ್ಪಟ್ಟಳು? ದ್ರೌಪದಿಯು ಕರ್ಣನಮೇಲೆ ಕಣ್ಣಿಟ್ಟುದುದರಿಂದ ತಪೋಧನನಿಗೆ ಉಪಯೋಗವಾದ ಫಲವನ್ನು ವೃಕ್ಷಕ್ಕೆ ಏರಿಸಲಾರದೆ ನಾಚಿಕೆಗೊಳ್ಳಬೇಕಾಯಿತು. ಪಾತಿವ್ರತ್ಯವನ್ನು ಕಾಪಾಡಿಕೊಳ್ಳದೆ ಉಪವಾಸಾದಿ ವ್ರತಗಳನ್ನು ಮಾಡುವುದು ನಿಷ್ಪ್ರಯೋಜನವಾದುದು. ಮೃತರಾದವರನ್ನು ಬದುಕಿಸಬೇಕಾದರೂ, ಭೂತಲವನ್ನು ತಲೆಕೆಳಗೆ ಮಾಡಬೇಕಾದರೂ ಪತಿವ್ರತೆಯರಿಗೆ ಅಸಾಧ್ಯವಲ್ಲ. ಸರ್ವೋತ್ಕೃಷ್ಟವಾದ ಬ್ರಹ್ಮನಿಷ್ಠೆಯು ಪುರುಷರಿಗೆ ಚಿತ್ತಶುದ್ಧಿಯನ್ನುಂಟುಮಾಡಿ, ಪೂಜ್ಯವಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವಂತೆ ಪಾತಿವ್ರತ್ಯವು ಸತಿಯರಿಗೆ ಪರಮಪದವಿಯನ್ನೀಯುವುದು. ಏಕಪತ್ನೀವ್ರತರಾದ ಪುರುಷರಿಗೆ ಅನ್ಯಸ್ತ್ರೀ ಸಹವಾಸವು ವಿಸರ್ಜನೀಯವಾದಂತೆ ಪತಿವ್ರತೆಯರಿಗೆ ಅನ್ಯಪುರುಷ ಸಹವಾಸವು ಸರ್ವದಾ ವರ್ಜನೀಯವಾದುದು. ಏಕಾಂತದಲ್ಲಿ ಏಕಾಸನದಲ್ಲಿ ಕುಲ ಭಾಮಿನಿಯು ಪುತ್ರನೊಡನೆಯಾದರೂ ಕುಳಿತುಕೊಳ್ಳಬಾರದು. ಕೈಹಿಡಿದ ವನು ಧನಿಕನಾದರೂ, ನಿರ್ಧನಿಕನಾದರೂ, ರೂಪವಂತನಾದರೂ, ರೂಪಹೀನನಾದರೂ, ವಿವೇಕಿಯಾದರೂ, ವಿವೇಕಹೀನನಾದರೂ, ರೋಗಿಯಾದರೂ, ನಿರೋಗಿಯಾದರೂ ಆತನಲ್ಲಿ ಕಪಟವಿಲ್ಲದೆ ನಡೆದುಕೊಳ್ಳಬೇಕಾದುದು ಪತ್ನಿಯ ಧರ್ಮವು. ಪತಿಯು ಯಾವ ಪದಾರ್ಥವನ್ನು ಕೊಟ್ಟರೂ ತೃಪ್ತಿಯನ್ನು ಹೊಂದಬೇಕಲ್ಲದೆ ಅತೃಪ್ತಿಯನ್ನು ತೋರಿಸಬಾರದು. ಪತಿಯು ತಂದುಕೊಟ್ಟ ವಸ್ತುಗಳನ್ನು ಭದ್ರವಾಗಿಟ್ಟು ಆತನು ಕೇಳಿದಾಗ ನಿಷ್ಕಪಟವಾಗಿ ಕೊಡಬೇಕು. ಬಲಿಭಿಕ್ಷೆಯನ್ನು ತಪ್ಪದೆ ಇಡುತ್ತಿರಬೇಕು. ದೇವಪಿತೃ ಪೂಜಾಕಾಲಗಳಲ್ಲಿ ತನ್ನ ಪತಿಗೆ ಅನವರತವು ಶುಭ ಉಂಟಾಗುವಂತೆ ಪ್ರಾರ್ಥಿಸಬೇಕು. ಪತಿಯ ಅನುಮತಿಯಿಲ್ಲದೆ ದೇವತೆಗಳನ್ನಾಗಲಿ, ಪಿತೃಗಳನ್ನಾಗಲಿ ಪೂಜಿಸಬಾರದು. ಹಾಗೆ ಪೂಜಿಸಿದರೆ ಸತಿಯು ಸದ್ಗತಿಯನ್ನು ಹೊಂದಲಾರಳು. ಈ ವಿಷಯದಲ್ಲಿ ಪಾರ್ವತಿದೇವಿಯು ನುಡಿದ ಒಂದು ಇತಿಹಾಸವನ್ನು ನುಡಿಯುವೆನು. ಪೂರ್ವದಲ್ಲಿ ಒಬ್ಬ ಬ್ರಾಹ್ಮಣನಿಗೆ ಇಬ್ಬರು ಪತ್ನಿಯರಿದ್ದರು. ಅವರಲ್ಲಿ ಒಬ್ಬಳು ಪತಿಯ ಅನುಮತಿಯಂತೆ ವಿನಯದಿಂದ ನಡೆದುಕೊಳ್ಳುತಲಿದ್ದಳು. ಇನ್ನೊಬ್ಬಳು ತನ್ನ

ಇಷ್ಟಪ್ರಕಾರ ಪಿತೃದೇವತಾತಿಥಿಪೂಜೆಗಳನ್ನು ಮಾಡುತಲಿದ್ದಳು. ಕೆಲಕಾಲಕ್ಕೆ ವಿಧಿವಶದಿಂದ ಅವರು ಮುವ್ವರೂ ಏಕಕಾಲದಲ್ಲಿಯೇ ಮೃತರಾದರು. ಆಗ ಪತಿಗೆ ಹಿತವಾಗಿ ನಡೆದ ಸತಿಯು ಪತಿಯು ಹೋದಸುಗತಿಗೆ ಹೋದಳು. ಪತಿಯ ಅಭೀಷ್ಟಕ್ಕೆ ವಿರೋಧವಾಗಿ ನಡೆದುಕೊಳ್ಳುತಲಿದ್ದ ಸತಿಯನ್ನು ಯಮನು ಹೋಗ ಬಾರದು ಎಂದು ಅಡ್ಡಗಿಸಿದನು. ಆಕೆಯು ಹಿಂದೆಯೇ ನಿಂತುಕೊಂಡು ಅಳುತ ಲಿದ್ದಳು. ಅದನ್ನು ನೋಡಿ ಯಮನು ದಯಾರ್ದ್ರಹೃದಯನಾಗಿ ಆಕೆಯನ್ನು ನೋಡಿ, "ಪತಿಗೆ ಸಮ್ಮತವಿಲ್ಲದ ಧರ್ಮಗಳನ್ನು ಸತಿಯು ಎಂದಿಗೂ ಮಾಡ ಕೂಡದು. ಮಾಡಿದರೆ ದುರ್ಗತಿಗೆ ಪಾತ್ರಳಾಗುವಳು. ಈಗಲಾದರೂ ನೀನು ಬುದ್ಧಿಯನ್ನು ತಂದುಕೊಂಡು ಪತಿಗೆ ಹಿತವಾದ ಕಾರ್ಯಗಳನ್ನು ಆಚರಿಸಿದರೆ ಆತನ ಗತಿಯನ್ನು ಪಡೆಯುವೆ." ಎಂದು ಉಸುರಲು ಆಕೆಯು ಹಿಂತಿರುಗಿ ಹೊರಟುಹೋದಳು. ಕೆಲದುಷ್ಟ ಸ್ತ್ರೀಯರು ಕ್ರೂರಾತ್ಮರಾಗಿ, ಧನಧಾನ್ಯಗಳನ್ನು ನಾಶಮಾಡುತ್ತ, ಅಧಿಕಭೋಗಾಸಕ್ತರಾಗಿ, ಅಸೂಯೆಗೆ ನೆಲೆಯಾದ ಹೃದಯ ವನ್ನುಳ್ಳವರಾಗಿರುತ್ತಾರೆ. ಇಂತಹ ಹೆಂಗಸರು ನಿಸ್ಸಂಶಯವಾಗಿ ಪತಿವಂಶದವ ರನ್ನು ನರಕಕ್ಕೆ ಕಳುಹಿಸಿ ತಾವೂ ನರಕಕ್ಕೆ ಹೋಗುವರು. ಇಂತಹ ದುಷ್ಟ ಸ್ತ್ರೀಯರಾದರೂ ಕೊನೆಗೆ ಜ್ಞಾನವನ್ನು ತಂದುಕೊಂಡು ಪತಿಭಕ್ತಿಯುಳ್ಳವರಾಗಿ, ಅನುರಕ್ತಿಯೊಡನೆ ಸತ್ಕೃತ್ಯಗಳನ್ನು ಮಾಡುತ್ತ ಶಾಂತಿಯೊಡನೆ ಪ್ರವರ್ತಿಸುತ ಲಿದ್ದರೆ, ಪೂರ್ವದಲ್ಲಿ ಮಾಡಿದ ಪಾಪದಿಂದ ಮುಕ್ತರಾಗಿ ಪತಿಯೊಡನೆ ಸ್ವರ್ಗಕ್ಕೆ ಹೋಗುವರು.

ಕೃಷ್ಣಾಕುಮಾರಿ.

ಈ ವೀರಬಾಲೆಯು ಮೇವಾಡ ದೇಶಾಧಿಪತಿಯಾದ ಮಹಾರಾಣಾ ಭೀಮ ಸಿಂಹನ ಮಗಳು. ಈಕೆಯು ೧೭೯೨ ನೆಯ ಇಸವಿಯಲ್ಲಿ ಉದಯಪುರದಲ್ಲಿ ಜನ್ಮಿಸಿದಳು. ಜಾತಕರ್ಮಾದಿ ಸಂಸ್ಕಾರಗಳು ನಡೆದನಂತರ 'ಕೃಷ್ಣಾಕುಮಾರಿ' ಎಂದು ನಾಮಕರಣವನ್ನು ಮಾಡಿದರು. ಕೃಷ್ಣಾಕುಮಾರಿಯನ್ನು ಆಕೆಯ ಜನನಿಯು ಬಹು ಪ್ರೇಮದಿಂದ ಸಲಹುತಲಿದ್ದಳು. ಈ ಬಾಲೆಯು ಬಹು ರೂಪವತಿಯಾಗಿದ್ದಳು. ಈಕೆಯು ಬೆಳೆಯುತ ಬೆಳೆಯುತ ತನ್ನ ಸದ್ಗುಣ ಗಳಿಂದ ವಿಶೇಷ ಕೀರ್ತಿಯನ್ನು ಪಡೆದಳು. ಕೆಲವು ವರ್ಷಗಳಿಗೆ ಕೃಷ್ಣಾ ಕುಮಾರಿಯು ವಿವಾಹ ಯೋಗ್ಯಳಾದುದರಿಂದ ಆಕೆಯ ಮಾತೆಯು ಪುತ್ರಿಗೆ

ಎಂತಹ ವರನು ದೊರೆಯುವನೋ ಎಂದು ಚಿಂತಿತಳಾದಳು. ಈ ಬಾಲೆಯ ಅತುಲನೀಯವಾದ ರೂಪವೂ, ಅನುಪಮವಾದ ಸದ್ಗುಣಗಳೂ ದೇಶದಲ್ಲೆಲ್ಲ ವ್ಯಾಪಿಸಿದ್ದುದರಿಂದ, ಜನರು ಈ ಕನ್ಯಾರತ್ನವು ರಾಜಸ್ಥಾನ ವೆಂಬ ಸರೋವರದಲ್ಲಿ ಹುಟ್ಟಿದ ಅಪೂರ್ವವಾದ ಪದ್ಮವು ಎಂದು ಹೊಗಳುತಲಿದ್ದರು.

ರಾಜಪುತ್ರರಲ್ಲಿ, ಕನ್ಯೆಯನ್ನು ತಮಗಿಂತಲೂ ಉಚ್ಚವಂಶೀಕರಿಗೆ ಕೊಡದಿದ್ದರೆ ಬಹು ಅವಮಾನವು ಉಂಟಾಗುವುದು. ಆ ಕಾಲದಲ್ಲಿ ರಾಜಪುತ್ರ ರಾಜರಲ್ಲೆಲ್ಲ ಉದಯಪುರದ ರಾಜರು ಶ್ರೇಷ್ಟಕುಲೀನರು ಎಂದು ಎಣಿಸಲ್ಪಡುತಲಿದ್ದರು. ಅದರಿಂದ ಭೀಮಸಿಂಹನು ಸಮಾನ ವಂಶಸ್ಥನಾದ ವರನನ್ನು ಹುಡುಕುತಲಿದ್ದನು. ಕುಲೀನನಾದ ವರನು ಸಿಕ್ಕಿದರೆ ಅವನಿಗೆ ವಿದ್ಯಾ ಗುಣೈಶ್ವರ್ಯಗಳು ಇರುತಲಿರಲಿಲ್ಲ. ವಿದ್ಯಾಗುಣೈಶ್ವರ್ಯಗಳಿರುವ ವರನು ಅಲ್ಪ ವಂಶೀಕನಾಗಿರುತಲಿದ್ದನು. ಭೀಮಸಿಂಹನು ಹುಡುಕಿ ಹುಡುಕಿ ಕೊನೆಗೆ ಮಾರ್ವಾಡದೇಶದ ರಾಣಾಭೀಮಸಿಂಹನಿಗೆ ಕನ್ಯೆಯನ್ನು ಕೊಡಲು ನಿಶ್ಚಯಿಸಿದನು. ಆದರೆ ಪ್ರಾರಬ್ಧವಶದಿಂದ ಅಚಿರಕಾಲದಲ್ಲಿಯೇ ಮಾರ್ವಾಡೆಯ ಭೀಮಸಿಂಹನು ಕಾಲವಾದನು.

ಅನಂತರ ಜಯಪುರಾಧೀಶನಾದ ರಾಣಾಜಯಸಿಂಹನು ಕೃಷ್ಣಾಕುಮಾರಿಯನ್ನು ತನಗೆ ಕೊಡಬೇಕು ಎಂದು ದೂತನೊಡನೆ ಹೇಳಿ ಕಳುಹಿದನು. ಉದಯಪುರಾಧೀಶ್ವರನು ಆ ದೂತನೊಡನೆ ಕನ್ಯೆಯನ್ನು ರಾಣಾಜಯಸಿಂಹನಿಗೆ ಕೊಡುವೆನು ಎಂದು ಹೇಳಿ ಕಳುಹಿಸಿದನು. ಇಷ್ಟರಲ್ಲಿ ಮಾರ್ವಾಡದೇಶದ ಸಿಂಹಾಸನವನ್ನೇರಿದ ರಾಣಾಮಾನಸಿಂಹನು ಭೀಮಸಿಂಹನಿಗೆ ಈಪರಿಯಾಗಿ ವರ್ತಮಾನವನ್ನು ಕಳುಹಿಸಿದನು: "ಪ್ರಥಮದಲ್ಲಿ ಈ ಸಿಂಹಾಸನದ ಮೇಲಿರುವವನಿಗೆ ಕನ್ಯೆಯನ್ನು ಕೊಡಲು ನಿಶ್ಚಯಿಸಿದಿರಿ. ವಿಧಿವಶದಿಂದ ಆತನು ಗತಿಸಿದನು. ಆದರೂ ಆ ಕನ್ಯೆಯು ಈ ಸಿಂಹಾಸನಕ್ಕೆ ವಾಗ್ದತ್ತಳಾದುದರಿಂದ ನನಗೆ ಕೊಡಬೇಕು." ರಾಣಾಭೀಮಸಿಂಹನು ದೂತನೊಡನೆ "ನಿಮ್ಮೊಡೆಯನಿಗೆ ಕನ್ಯೆಯನ್ನು ಕೊಡುವುದಿಲ್ಲ ಎಂದು ಹೇಳು." ಎಂದು ಸ್ಪಷ್ಟವಾಗಿ ಹೇಳಿ ಕಳುಹಿದನು. ಅದರಿಂದ ಮಾರ್ವಾಡೆಗೂ, ಮೇವಾಡೆಗೂ ವೈರವು ಸಂಪ್ರಾಪ್ತವಾಯಿತು. ಎರಡು ದೇಶಗಳಲ್ಲಿಯೂ ಸಮರಸನ್ನಾಹವು ನಡೆಯುತಲಿತ್ತು. ಆ ಸಮಯದಲ್ಲಿ ಗ್ವಾಲೇರಿನ ರಾಜನಾದ ಸಿಂಧೆಯು, ಜಯಪುರಾಧೀಶನ ಮೇಲೆ ತನಗಿರುವ ವೈರವನ್ನು ನೆಪಮಾಡಿಕೊಂಡು "ಕೃಷ್ಣಾಕುಮಾರಿಯನ್ನು ಜಯಪುರದ ರಾಣಾವಿಗೆ ಕೊಡುವುದಾದರೆ, ನಾನು ಮಾನಸಿಂಹನೊಡನೆ ಸೇರಿ ನಿನ್ನೊಡನೆ ಯುದ್ಧಮಾಡುವೆನು ಎಂದು ರಾಣಾಭೀಮಸಿಂಹನಿಗೆ ಹೇಳಿ ಕಳುಹಿಸಿದನು. ಭೀಮಸಿಂಹನು ಮಾತ್ರ ತನ್ನ ನಿಶ್ಚಯವನ್ನು ಬಿಡಲಿಲ್ಲ. ಗ್ವಾಲೇರಿನ ರಾಜನು

ತನ್ನ ಸೈನ್ಯದೊಡನೆ ಹೊರಟು ಉದಯಪುರ ಪ್ರಾಂತದಲ್ಲಿ ಶಿಬಿರವನ್ನು ಸ್ಥಾಪಿಸಿದನು. ಒಂದೆರಡು ದಿನಗಳು ಕಳೆದನಂತರ ರಾಣಾಭೀಮಸಿಂಹನೂ, ಸಿಂಧೆಯೂ ಒಂದು ದೇವಾಲಯದಲ್ಲಿ ಸೇರಿ ಏಕಾಂತವಾಗಿ ಏನೋ ಮಾತನಾಡಿಕೊಂಡು ಜಯಸಿಂಹನಿಗೆ 'ಕನ್ಯೆಯನ್ನು ಕೊಡುವುದಿಲ್ಲ' ಎಂದು ಹೇಳಿ ಕಳುಹಿದರು. ಜಯಪುರಾಧಿಪತಿಯು ತನ್ನ ಆಶೆಯೆಲ್ಲ ನಿರಾಶೆಯಾದುದರಿಂದ ಕೋಪಾವೇಶವುಳ್ಳವನಾಗಿ ಮಾನಸಿಂಹನೊಡನೆ ಯುದ್ಧಮಾಡಲು ಸಿದ್ಧನಾದನು. ಅಲ್ಲಿ ಮಾನಸಿಂಹನು ಸಹ ಯುದ್ಧಕ್ಕೆ ಸಿದ್ಧನಾದನು. ಉಭಯರಿಗೂ ಪರ್ವತಶಿಖರ ಎಂಬ ಸ್ಥಳದಲ್ಲಿ ಘೋರಸಂಗ್ರಾಮವು ನಡೆಯಿತು. ಆ ಯುದ್ಧದಲ್ಲಿ ಮಾನಸಿಂಹನ ಸೈನಿಕರಲ್ಲಿ ಅನೇಕರು ಜಯಸಿಂಹನೊಡನೆ ಸೇರಿದುದರಿಂದ, ಮಾನಸಿಂಹನು ರಣಭೂಮಿಯಿಂದ ಪಲಾಯಿತನಾಗಿ ಯೋಧಗಡ ಎಂಬ ದುರ್ಗದಲ್ಲಿ ಔತು ಕೊಂಡನು. ಜಯಸಿಂಹನು ಯೋಧಗಡಕ್ಕೆ ಮುತ್ತಿಗೆ ಹಾಕಿದನು. ಆದರೆ ಆ ದುರ್ಗವು ಅಭೇದ್ಯವಾದುದಾದಕಾರಣ ಜಯಸಿಂಹನು ಹಿಂತಿರುಗಬೇಕಾಯಿತು. ಈ ಯುದ್ಧದಲ್ಲಿ ಜಯಸಿಂಹನ ಸೇನೆಯಲ್ಲಿ ಬಹುಭಾಗವು ನಷ್ಟವಾದುದರಿಂದ ಆತನು ತನ್ನ ನಗರವನ್ನು ಸೇರಿಕೊಂಡನು.

ಮಾನಸಿಂಹನ ಶತ್ರುರಾಜನೊಬ್ಬನು ತನ್ನ ಸೈನ್ಯದಲ್ಲಿರುವ ನವಾಬ್ ಅಮೀರ್‌ಖಾನ್ ಎಂಬ ಮ್ಲೇಚ್ಛನಿಂದ ಹತನಾದನು. ಈ ವಿಶ್ವಾಸಘಾತುಕನೇ ಅನೇಕ ಉಪಾಯಗಳನ್ನು ಮಾಡಿ ಉದಯಪುರಾಧಿಪತಿಯ ಬಳಿಯಲ್ಲಿ ಸೇರಿ, ಆತನೊಡನೆ ಸಖ್ಯವನ್ನುಬೆಳೆಸಿ, ಅಜಿತಸಿಂಹ ಎಂಬ ಒಬ್ಬ ಕ್ರೂರಾತ್ಮನನ್ನು ಆತನ ಬಳಿಯಲ್ಲಿ ಮುಖ್ಯಸೇವಕನಾಗಿ ನಿಯಮಿಸಿದನು.

ಒಂದುಸಲ ನಡೆದ ಸಂಗ್ರಾಮದಲ್ಲಿ ಇಷ್ಟು ನಷ್ಟ ಕಷ್ಟಗಳನ್ನು ಅನುಭವಿಸಿದರೂ ಜಯಸಿಂಹ, ಮಾನಸಿಂಹರಿಗೆ ಸಂಗ್ರಾಮಾಪೇಕ್ಷೆಯು ಕಡಿಮೆಯಾಗಲಿಲ್ಲ. ಅವರಿಬ್ಬರು ಪುನಃ ಸೈನ್ಯಗಳನ್ನು ಸಿದ್ಧಪಡಿಸಿಕೊಂಡು ಉದಯಪುರವನ್ನು ಕುರಿತು ಬರುತಲಿದ್ದರು. ಈ ವೃತ್ತಾಂತವನ್ನು ಕೇಳಿ ಭೀಮಸಿಂಹನು ಅವರಿಬ್ಬರನ್ನೂ ಸಮಾಧಾನಪಡಿಸುವ ಬಗೆ ಹೇಗೆಂದು, ತನ್ನ ಸ್ನೇಹಿತನಾದ ಅಮೀರ್‌ಖಾನನೊಡನೆ ಏಕಾಂತವಾಗಿ ಆಲೋಚಿಸಿದನು. ಆಗ ಆ ದುಷ್ಟನು ಕೃಷ್ಣಾಕುಮಾರಿಯನ್ನು ಮಾನಸಿಂಹನಿಗಾದರೂ ಕೊಡಬೇಕು. ಅಥವಾ ಯಮಸದನಕ್ಕಾದರೂ ಕಳುಹಿಸಬೇಕು ಎಂದು ಹೇಳಿದನು. ಎರಡನೆಯದೇ ಉತ್ತಮವಾದುದು ಎಂದು ರಾಜನಿಗೆ ತೋರಿತು. ಆದರೆ ಆತನ ಸೇವಕರು ಸ್ತ್ರೀಹತ್ಯೆಯನ್ನು ಮಾಡಲೊಪ್ಪಲಿಲ್ಲ. ಭೀಮಸಿಂಹನು ದೌಲತಸಿಂಹ ಎಂಬ ಒಬ್ಬ ಭೃತ್ಯನನ್ನು ಕರೆದು ಕುಮಾರಿಯನ್ನು ಕೊಲ್ಲುವಂತೆ ಹೇಳಲು, ಅವನು ಪ್ರಭುವನ್ನು ತಿರಸ್ಕರಿಸಿ ತಾನು ಆ ಕಾರ್ಯವನ್ನು ಮಾಡುವದಿಲ್ಲ ವೆಂದು ಹೇಳಿದನು. ಅನಂತರ ರಾಣಾ

ಯೌವನಸಿಂಹ ಎಂಬ ಬೇರೊಬ್ಬನನ್ನು ಕರೆದು ಆ ದುಷ್ಕೃತ್ಯವನ್ನು ಮಾಡುವಂತೆ ಆಜ್ಞಾಪಿಸಿದನು. ಆ ಸೇವಕನು ರಾಜಾಜ್ಞೆಗೆ ಹೆದರಿ ಕೃಷ್ಣಾಕುಮಾರಿಯು ನಿದ್ರಿಸುತಲಿದ್ದ ಗೃಹಕ್ಕೆ ಹೋಗಿ, ಅಲ್ಲಿ ಪರ್ಯಂಕದಮೇಲೆ ನಿದ್ರಿಸುತಲಿರುವ ಆ ಸೌಂದರ್ಯರಾಶಿಯನ್ನು ನೋಡಿದನು. ಅವನ ಕೈಯಲ್ಲಿರುವ ಖಡ್ಗವು ಜಾರಿ ಬಿದ್ದಿತು. ಅವನು ದುಃಖದಿಂದ ತಾನು ಮಾಡಬೇಕಾದ ಕಾರ್ಯವನ್ನು ಮಾಡ ಲಾರದೆ ಹೊರಟುಹೋದನು. ಆಮೇಲೆ ಅಮೀರ್‌ಖಾನನ ದುರ್ಮಂತ್ರವು ಹೊರಬೀಳಲು ರಾಜಸತಿಯ ದುಃಖಕ್ಕೆ ಪಾರವಿಲ್ಲದೆ ಹೋಯಿತು.

ರಾಜಭವನವೆಲ್ಲವೂ ದುಃಖಮಯವಾಯಿತು. ಆದರೆ ಕೃಷ್ಣಾಬಾಯಿಯ ಮುಖದಲ್ಲಿ ಮಾತ್ರ ಮೃತ್ಯುಭೀತಿಯು ಸ್ವಲ್ಪವೂ ಕಾಣಬರಲಿಲ್ಲ. ಆಕೆಯು ಎಂದಿನಂತೆಯೇ ವಿನೋದವಾಗಿ ತನ್ನ ಸಖಿಯರೊಡನೆ ಆಡಿಕೊಳ್ಳುತಲಿದ್ದಳು. ಆಗ ಅಮೀರ್‌ಖಾನನು ಭೀಮಸಿಂಹನಿಗೆ ನಿನ್ನ ಪುತ್ರಿಯನ್ನು ವಿಷಪ್ರಯೋಗ ದಿಂದ ಕೊಲ್ಲಬೇಕು ಎಂದು ಹೇಳಿದನು. ರಾಣಾ ಆ ನೀಚಕೃತ್ಯಕ್ಕೆ ಸಹ ಸಮ್ಮತಿಸಿ, ಒಂದು ಬಂಗಾರದ ಬಟ್ಟಲಿನಲ್ಲಿ ವಿಷವನ್ನು ಸುರಿದು, ಅದನ್ನು ಕೃಷ್ಣಾಕುಮಾರಿಯ ಬಳಿಗೆ ಕಳುಹಿಸಿದನು. ಸೇವಕನು "ಇದನ್ನು ನಿಮ್ಮ ತಂದೆ ಯವರು ಕಳುಹಿಸಿದರು. ಆದಕಾರಣ ನೀವು ಸ್ವೀಕರಿಸಬೇಕು" ಎಂದನು. ಕೃಷ್ಣಾ ಕುಮಾರಿಯು ತಂದೆಯ ಆಜ್ಞೆಯನ್ನು ಶಿರಸಾವಹಿಸಿ ವಿಷಪಾತ್ರೆಯನ್ನು ತೆಗೆದು ಕೊಂಡು, ಪರಮೇಶ್ವರನನ್ನು ಪ್ರಾರ್ಥಿಸಿ, ತಂದೆಗೆ ಧನಧಾನ್ಯ ಆಯುಷ್ಯಗಳು ವೃದ್ಧಿಯಾಗಲಿ ಎಂದು ನುಡಿದು ವಿಷವನ್ನು ಪಾನಮಾಡಿದಳು. ವಿಷಪ್ರಾಶನಾ ನಂತರವು ಆಕೆಯು ಮರಣಭಯವನ್ನು ಹೊಂದದೆ ದೇವರನ್ನು ಸ್ತುತಿಸುತ ಲಿದ್ದಳು. ಆಕೆಯು ತನ್ನ ತಾಯಿಯು ವಿಶೇಷವಾಗಿ ಶೋಕಿಸುತಲಿರುವುದನ್ನು ಕಂಡು "ಅಮ್ಮಾ! ನೀನೇಕೆ ಈಪರಿ ಚಿಂತಿಸುವೆ. ದುಃಖವು ಎಷ್ಟುಬೇಗ ಕಡಮೆ ಯಾದರೆ ಅಷ್ಟುಒಳ್ಳೆಯದು. ನಾನು ಕ್ಷತ್ರಿಯವೀರನ ಮಗಳಾದುದರಿಂದ ಮರಣಕ್ಕೆ ಅಂಜುವುದಿಲ್ಲ. ಈ ಶರೀರಕ್ಕೆ ಹುಟ್ಟಿದಾಗಲೆ ಮರಣವು ನಿಶ್ಚಯ; ಇನ್ನು ನನ್ನ ಮರಣಕ್ಕಾಗಿ ನೀನು ಚಿಂತಿಸಲೇಕೆ?" ಎಂದು ಸಮಾಧಾನಮಾಡಿ ನಗುತಲಿದ್ದಳು. ಆಕೆಗೆ ಮರಣಚಿಹ್ನೆಗಳು ಕಂಡುಬರಲಿಲ್ಲವಾದಕಾರಣ ಎರಡ ನೆಯ ಭೃತ್ಯನು ಬೇರೊಂದು ಪಾತ್ರೆಯಲ್ಲಿ ವಿಷವನ್ನು ತಂದುಕೊಟ್ಟನು. ಕೃಷ್ಣಾಕುಮಾರಿಯು ಅದನ್ನು ಕುಡಿದಳು. ಆದರೆ ಅದರಿಂದಲೂ ಆಕೆಗೆ ಆಯಾಸವುಂಟಾಗಲಿಲ್ಲ

ಕೊನೆಗೆ ಸಮರಸ ಎಂಬ ಭಯಂಕರವಾದ ವಿಷವನ್ನು ಆಕೆಗೆ ಕೊಟ್ಟರು. ಅದನ್ನು ಕುಡಿದೊಡನೆಯೆ ಆ ಕನ್ಯಾರತ್ನದ ಪವಿತ್ರಚರಿತೆಯು ಮುಗಿಯಿತು. ಆದರೆ ಕೃಷ್ಣಾಕುಮಾರಿಯ ಧೈರ್ಯ, ನಿರ್ಭಯತ್ವ, ದೇಶಕ್ಕಾಗಿಯೂ, ತಂದೆ

ಗಾಗಿಯೂ ತೋರಿದ ಆತ್ಮತ್ಯಾಗ ಇವುಗಳಿಂದ ಆಕೆಯ ಕೀರ್ತಿಯು ಈ ಪ್ರಪಂಚದಲ್ಲಿ ಶಾಶ್ವತವಾಗಿ ನಿಂತಿತು.

ರಖಮಾಬಾಯಿಕಿಬೇ.

ಈ ನಾರೀಮಣಿಯು ಕ್ರೀ.ಶ. ೧೭೬೫ ನೆಯ ಇಸವಿಯಲ್ಲಿ ಜನ್ಮಿಸಿದಳು. ಈಕೆಯ ತಂದೆಯ ಹೆಸರು ಬಾಳಂಭಟ್ಟು; ತಾಯಿಯ ಹೆಸರು ಸಾವಿತ್ರಿಬಾಯಿ; ಇವರು ಪಾರೋಳೇ ಎಂಬ ಗ್ರಾಮದಲ್ಲಿ ವಾಸಮಾಡಿಕೊಂಡಿದ್ದರು. ಈಕೆಯ ತಂದೆಯು ಭೈಕ್ಷುಕವೃತ್ತಿಯಿಂದ ಜೀವಿಸುತಲಿದ್ದನು. ತಾಯಿತಂದೆಗಳು ಈಕೆಗೆ ಭಿವರಾಬಾಯಿಯೆಂದು ನಾಮಕರಣವನ್ನು ಮಾಡಿದರು. ಈಕೆಯ ಬಾಲ್ಯೇತಿಹಾಸವು ಸರಿಯಾಗಿ ತಿಳಿಯಬರುವುದಿಲ್ಲ. ಈಕೆಯನ್ನು ವಿಠಲ್‌ಮಹದೇವ ನೆಂಬಾತನಿಗೆ ಕೊಟ್ಟು ಮದುವೆಯನ್ನು ಮಾಡಿದರು. ವಿವಾಹಾನಂತರ ಈಕೆಗೆ ರಖಮಾಬಾಯಿಯೆಂಬ ನಾಮಾಂತರವು ಉಂಟಾಯಿತು. ಪತಿಯ ಜೀವಿತಕಾಲದಲ್ಲೀಕೆಯ ಬುದ್ಧಿವೈಭವವು ವಿಶೇಷ ಪ್ರಕಾಶವಾಗದಿದ್ದರೂ, ಈಕೆಯು ಆತನಿಗೆ ರಾಜಕಾರ್ಯಗಳಲ್ಲಿ ಅನೇಕಸಲ ಸಹಾಯಕಳಾಗಿದ್ದಳೆಂದು ತಿಳಿಯಬರುತ್ತದೆ.

ಕ್ರೀ.ಶ. ೧೭೯೬ ನೆಯ ವರ್ಷದಲ್ಲಿ ವಿಠಲ್‌ಮಹದೇವನು ಮೃತನಾದನು. ಆತನು ಮರಣಕ್ಕೆ ಪೂರ್ವವೇ ಜ್ಯೇಷ್ಠಪುತ್ರಿಯ ಪುತ್ರನಾದ ಗಣೇಶವಿಠಲ್‌ಜೋಗ್ ಎಂಬ ಬಾಲಕನನ್ನು ದತ್ತಪುತ್ರನಾಗಿ ಸ್ವೀಕರಿಸಿದನು. ಅನಂತರ ಅಲ್ಪಕಾಲದಲ್ಲಿಯೇ ಮಹಾರಾಜಾಮಲ್ಹಾರ್‌ರಾವ್ ಹೋಳಕರ್‌ಯವರು ಗಣೇಶವಿಠಲನಿಗೆ ತಮ್ಮ ದಿವಾಗಿರಿಯನ್ನು ಕೊಟ್ಟರು. ಆಗ ಆತನು ಬಾಲಕನಾದುದರಿಂದ ರಾಜ್ಯವ್ಯವಸ್ಥೆಯನ್ನೆಲ್ಲ ರಖಮಾಬಾಯಿಯೇ ನೋಡಿಕೊಳ್ಳುತಲಿದ್ದಳು. ಅನಂತರ ಕೆಲವು ದಿವಸಗಳಿಗೆ ರಾವ್‌ಜೀ ತ್ರಿಯಂಬಕನೆಂಬಾತನ ಪ್ರೋತ್ಸಾಹದಿಂದ ಗಣೇಶವಿಠಲನನ್ನು ದಿವಾನ್‌ಗಿರಿಯಿಂದ ತೆಗೆದು ಆತನನ್ನೇ ದಿವಾನನಾಗಿ ನಿಯಮಿಸಿದರು. ಅನಂತರ ರಖಮಾಬಾಯಿಯು ತನ್ನ ದ್ರವ್ಯದಿಂದ ವ್ಯಾಪಾರವನ್ನು ಮಾಡಿ ವೃದ್ಧಿಗೊಳಿಸುತಲಿದ್ದಳು. ಆಕೆಯ ವರ್ತಕಶಾಲೆಗಳು ಹಿಂದೂದೇಶದಲ್ಲಿಯೂ, ಚೀನಾದೇಶದಲ್ಲಿಯೂ ಇದ್ದವು. ಈಕೆಯು ವ್ಯಾಪಾರದಿಂದಲೇ ಪ್ರತಿದಿವಸವೂ ಒಂದುಲಕ್ಷ ಇಪ್ಪತ್ತೈದುಸಾವಿರ ರೂಪಾಯಿಗಳ ಲಾಭವನ್ನು ಪಡೆಯುತಲಿದ್ದಳಂತೆ. ಪ್ರತಿಯೊಂದು ವರ್ತಕಶಾಲೆಯಲ್ಲಿಯೂ ಒಂದುಲಕ್ಷರೂಪಾಯಿಗಳನ್ನು ಮೂಲಧನವಾಗಿಟ್ಟು, ಆ ಧನದಿಂದ ಬಂದಲಾಭದಲ್ಲಿ ಸ್ವಲ್ಪಭಾಗವನ್ನು ಶಾಲಾಧಿ

ಕಾರಿಗೆ ಕೊಡುತಲಿದ್ದುದರಿಂದ ಆ ಶಾಲಾಧಿಕಾರಿಗಳು ಮೋಸವನ್ನುಮಾಡದೆ ವರ್ತಕವನ್ನು ಚೆನ್ನಾಗಿ ನಡೆಸುತಲಿದ್ದರು. ೧೮೨೭ ನೆಯ ವರ್ಷದ ಮೊದಲ್ಗೊಂಡು ೧೮೩೩ ನೆಯ ವರ್ಷದವರೆಗೂ ಆಕೆಯು ತನ್ನ ವ್ಯಾಪಾರವನ್ನು ಚೆನ್ನಾಗಿ ನಡೆಸುತಲಿದ್ದಳು.

೧೮೩೩ ನೆಯ ಅಕ್ಟೋಬರ್ ತಿಂಗಳಿನಲ್ಲಿ ಮಲ್ಹಾರಿರಾವ್ ಹೋಳಕರ್ ಯವರು ಸ್ವರ್ಗಸ್ಥರಾದರು. ಈತನು ಪುತ್ರಹೀನನಾಗಿ ಗತಿಸಿದುದರಿಂದ ಆತನ ಪತ್ನಿಯಾದ ಗೌತಮಬಾಯಿಯು, ತಾಯಿಯಾದ ಕೇಸರಿಬಾಯಿಯು, ರಖಮಾಬಾಯಿಯ ಸಹಾಯದಿಂದ ಮಾರ್ತಾಂಡರಾವೆಂಬ ಬಾಲಕನನ್ನು ದತ್ತುಮಾಡಿಕೊಂಡರು.

ಈ ಸಂಧಿಕಾಲದಲ್ಲಿ ಅಷ್ಟುವರೆಗೂ ಮಹೇಶ್ವರವೆಂಬ ಪಟ್ಟಣದಲ್ಲಿ ರಾಜನಿರ್ಬಂಧದಲ್ಲಿದ್ದ ಹರಿರಾವ್ ಹೋಳಕರನೆಂಬಾತನು ಬಂಧಮುಕ್ತನಾಗಿ ಬಂದು ರಾಜ್ಯವನ್ನು ಪಾಲಿಸಲಾರಂಭಿಸಿದನು. ಆಗ ಕೆಲವು ಕಾರಣಗಳಿಂದ ರಖಮಾಬಾಯಿಯು ಇಂದೂರನ್ನುಬಿಟ್ಟು ಉಜ್ಜಯಿನಿಯಲ್ಲಿ ಆಂಗ್ಲೇಯರ ಆಶ್ರಯದಲ್ಲಿ ಕೆಲವುಕಾಲ ಇರಬೇಕಾಯಿತು.

ಈಕೆಯು ಉಜ್ಜಯಿನಿಯಲ್ಲಿರುವಾಗ ಅಲ್ಲಿ ಅನೇಕ ಗೃಹಗಳನ್ನು ಕಟ್ಟಿಸಿದಳು. ಕ್ಷಿಪ್ರಾನದೀತೀರದಲ್ಲೊಂದು ಘಟ್ಟವನ್ನು ಕಟ್ಟಿಸಿ, ಅಲ್ಲಿ ಗಂಗೆಯ ಮೂರ್ತಿಯನ್ನು ಸ್ಥಾಪಿಸಿದಳು. ಒಂದು ಅನ್ನಸತ್ರವನ್ನು ಸ್ಥಾಪಿಸಿದಳು. ಆಕೆಯು ಬಡವರ ಕ್ಷೇಮವನ್ನು ಸುಹೃದಯದೊಡನೆ ವಿಚಾರಿಸುತ್ತ ಅವರಿಗೆ ಬೇಕಾದ ಸಹಾಯವನ್ನು ಮಾಡುತಲಿದ್ದಳು.

೧೮೪೩ ನೆಯ ಇಸವಿಯಲ್ಲಿ ಹರಿರಾವ್ ಹೋಳಕರನು ಗತಿಸಿದನು. ಅನಂತರ ಖಂಡೇರಾವ್ ಎಂಬಾತನು ಸಿಂಹಾಸನಾರೂಢನಾದನು. ಆಗ ಹರಿರಾವ್ ಹೋಳಕರನ ಕಾಲದಲ್ಲಿ ಜಪ್ತಿಮಾಡಿದ ರಖಮಾಬಾಯಿಯ ಅಗ್ರಹಾರವು ಮರಳಿ ಕೊಡಲ್ಪಟ್ಟಿತು. ಆಕೆಯು ಮರಳಿ ಇಂದೂರಿಗೆ ಬಂದಳು.

ರಖಮಾಬಾಯಿಯು ಹೋಳಕರನಿಗೆ ಸಹ ತನ್ನ ದ್ರವ್ಯವನ್ನು ಸಾಲವಾಗಿ ಕೊಟ್ಟಳು. ಆ ಸಾಲವು ಇಂದಿನವರೆಗೂ ತೀರಿಸಲ್ಪಡುತಲಿದೆಯಂತೆ. ಈಕೆಯು ಮಧ್ಯಹಿಂದೂಸ್ಥಾನದ, ರಾಜಪುತಾನದ ಸಂಸ್ಥಾನೀಕರನೇಕರಿಗೆ ಅನೇಕ ಲಕ್ಷ ರೂಪಾಯಿಗಳನ್ನು ಸಾಲವಾಗಿಕೊಟ್ಟು ಅವರಿಂದ ವಿಶೇಷ ಮರ್ಯಾದೆಯನ್ನು ಹೊಂದುತಲಿದ್ದಳು. ಈಗಲೂ ಆಕೆಯ ವಂಶೀಕರನ್ನು ಸಂಸ್ಥಾನೀಕರೆಲ್ಲರು ತಮ್ಮೊಡನೆ ಸಮಾನವಾಗಿ ಗೌರವಿಸುತ್ತಾರೆ.

೧೮೪೪ ನೆಯ ಇಸವಿಯಲ್ಲಿ ಖಂಡೇರಾವ್ ಹೋಳಕರನು ಮೃತನಾದನು. ಆಗ ರಾಜ್ಯಕ್ಕೆ ವಾರಸದಾರರು ಯಾರೂ ಇಲ್ಲದುದರಿಂದ ಎಲ್ಲರಿಗೂ ಬಹುಚಿಂತೆಯುಂಟಾಯಿತು. ಆ ಸಮಯದಲ್ಲಿ ರೆಸಿಡೆಂಟ್ ದೊರೆಯೂ, ರಖಮಾಬಾಯಿಯೂ ರಾಜ್ಯಾಧಿಪತಿಯನ್ನು ಏರ್ಪಾಟುಮಾಡಲು ಬಹುಕಷ್ಟಗಳನ್ನು ಅನುಭವಿಸಿದರು.

ಏಪ್ರೆಲ್ ತಿಂಗಳಿನ ೪ ನೆಯ ತಾರೀಖಿನಲ್ಲಿ ವೇಡ್ (ರೆಸಿಡೆಂಟನ ಹೆಸರು) ದೊರೆಯನ್ನು ಬೇರೊಂದು ಸ್ಥಳಕ್ಕೆ ವರ್ಗಮಾಡಿ, ಆ ಸ್ಥಳಕ್ಕೆ ಹ್ಯಾಮಿಲ್ಟ್ಬದೊರೆಯನ್ನು ನಿಯಮಿಸಿದರು. ಆಗ ವೇಡ್‌ದೊರೆಯು, ಹ್ಯಾಮಿಲ್ಟ್ಬದೊರೆಯನ್ನು ರಖಮಾಬಾಯಿಯ ಬಳಿಗೆ ಕರೆತಂದು ಈಕೆಗೆ ನೀವು ಸಹಾಯಮಾಡಬೇಕೆಂದು ತಿಳಿಸಿದನು. ರಖಮಾಬಾಯಿಯು ಸಂಸ್ಥಾನದ ವಿಷಯವಾಗಿ ತನಗಿರುವ ಚಿಂತೆಯನ್ನೆಲ್ಲ ತಿಳಿಸಿದಳು. ಹ್ಯಾಮಿಲ್ಟ್ಬದೊರೆಯು ರಾಜ್ಯಕ್ಕೆ ವಾರಸನನ್ನು ಏರ್ಪಾಟು ಮಾಡುವುದರಲ್ಲಿ ರಖಮಾಬಾಯಿಗೆ ಸಹಾಯಮಾಡಲೊಪ್ಪಿಕೊಂಡನು. ಭಾವುಳಕರ್‌ಯವರ ಇಬ್ಬರು ಪುತ್ರರಲ್ಲಿ ಯಾವ ಬಾಲಕನನ್ನು ದತ್ತನಾಗಿ ಸ್ವೀಕರಿಸಬೇಕೆಂಬ ಯೋಚನೆಯು ಕೆಲವು ದಿವಸಗಳವರೆಗು ನಡೆಯುತಲಿತ್ತು. ರಖಮಾಬಾಯಿಯು ಅವರಲ್ಲಿ ಚಿಕ್ಕವನನ್ನು ಮೆಚ್ಚಿ ಆ ಬಾಲಕನೇ ರಾಜ್ಯಾಧಿಪತಿಯಾಗಲು ಅರ್ಹನೆಂದು ತಿಳಿಸಿದಳು. ಆಕೆಯ ಅಭೀಷ್ಟದಂತೆಯೇ ಆ ಬಾಲಕನನ್ನು ದತ್ತಪುತ್ರನಾಗಿ ಸ್ವೀಕರಿಸಿದರು. ಈ ಬಾಲಕನೇ ಅನಂತರ ತುಕೋಜೀ ಮಹಾರಾಜನೆಂದು ಪ್ರಸಿದ್ಧಿಯನ್ನು ಪಡೆದನು. ಈತನು ಯಾವ ಜೀವವೂ ರಖಮಾಬಾಯಿಯ ಉಪಕಾರವನ್ನು ಮರೆಯದೆ ಆಕೆಯನ್ನು, ಆಕೆಯ ವಂಶಸ್ಥರನ್ನು ಮನ್ನಣೆಯಿಂದ ಕಾಣುತಲಿದ್ದನು.

ಕುಮಾರನು ದೊಡ್ಡವನಾದಮೇಲೆ ವ್ಯವಹಾರಗಳನ್ನಾತನಿಗೆ ಒಪ್ಪಿಸಿ, ರಖಮಾಬಾಯಿಯು ದಾನಧರ್ಮಗಳಲ್ಲಿ ಮನಸ್ಸಿಟ್ಟು ಕಾಲವನ್ನು ಕಳೆಯುತಲಿದ್ದಳು. ಆಕೆಯು ಹರಿದ್ವಾರದಿಂದ ರಾಮೇಶ್ವರಕ್ಕೆ ಹೋಗುವ ದಾರಿಯಲ್ಲಿ ಅಲ್ಲಲ್ಲಿ ಅನ್ನ ಸತ್ರಗಳನ್ನಿಡಿಸಿದಳು. ಕಾಶಿಯಲ್ಲೊಂದು ದೇವಾಲಯವನ್ನು ನಿರ್ಮಿಸಿ ವಿಠ್ಠಲಮೂರ್ತಿಯನ್ನು ಸ್ಥಾಪಿಸಿದಳು. ಕಾಶಿಯಲ್ಲಿಯೂ, ಇತರ ಸ್ಥಳಗಳಲ್ಲಿಯೂ ಇರುವ ವರ್ತಕ ಶಾಲೆಗಳಲ್ಲಿ ಸ್ವಲ್ಪ ದ್ರವ್ಯವು ದಾನಧರ್ಮಗಳಿಗೆ ಉಪಯೋಗಿಸುವಂತೆ ಏರ್ಪಾಟು ಮಾಡಿದಳು.

ಹೀಗೆ ಕೆಲವುಕಾಲ ಕಳೆದಮೇಲೆ ಆಕೆಗೆ ದ್ವಾರಕಾ ಯಾತ್ರೆಯನ್ನು ಮಾಡಬೇಕೆಂಬ ಅಭಿಲಾಷೆಯು ಉಂಟಾಗಿ ಬಹು ವೈಭವದೊಡನೆ ಯಾತ್ರೆಗೆ ಹೊರಟಳು. ಮಾರ್ಗದಲ್ಲಿ ಗಾಯಕವಾಡ್ ಮಹಾರಾಜರು ರಖಮಾಬಾಯಿ

ಯನ್ನು ಸಾದರದೊಡನೆ ಕರೆದುಕೊಂಡುಹೋಗಿ ತಕ್ಕ ಮರ್ಯಾದೆಗಳನ್ನು ಮಾಡಿದರು. ಈಕೆಯು ಅಲ್ಲಿಂದ ಹೊರಟು ಮಾರ್ಗದಲ್ಲಿ ನೀರಿಲ್ಲದ ಸ್ಥಳ ಗಳಲ್ಲಿ ಬಾವಿಗಳನ್ನು ತೋಡಿಸುತ್ತ, ಪ್ರಯಾಣಿಕರಿಗೂ, ನಿವಾಸಿಗಳಿಗೂ ಇರುವ ಬಾಧೆಯನ್ನು ನಿವಾರಣೆಮಾಡುತ್ತ ಪ್ರಯಾಣವನ್ನು ಮಾಡಿ ಯಾತ್ರೆಯನ್ನು ಸಾಂಗವಾಗಿ ನೆರವೇರಿಸಿಕೊಂಡು ಮರಳಿ ಸ್ವಗ್ರಾಮವನ್ನು ಸೇರಿದಳು.

ವಿಕ್ರಮಾರ್ಕ ಶಕೆ ೧೯೦೮ ನೆಯ ವರ್ಷದ ಆಷಾಡಶುದ್ಧ ಯೇಕಾ ದಶಿಯ ದಿವಸ ಪುಣ್ಯಶ್ಲೋಕಳಾದ ರಖಮಾಬಾಯಿಯು ಪುಣ್ಯಲೋಕಕ್ಕೆ ಹೋದಳು! ಮರಣ ಸಮಯದಲ್ಲಿ ಈಕೆಗೆ ಸುಮಾರು ೫೭ ವರ್ಷಗಳು ವಯ ಸ್ಸಾಗಿತ್ತು. ಈಕೆಯ ಮರಣದಿಂದ ಪಟ್ಟಣದ ಪ್ರಜೆಗಳೆಲ್ಲರು ಅತ್ಯಂತ ದುಃಖಿತ ರಾದರು.

ರಖಮಾಬಾಯಿಗೆ ಇಬ್ಬರು ಪುತ್ರಿಯರಿದ್ದರು. ಅವರಲ್ಲಿ ದೊಡ್ಡವಳಾದ ಜೀಜಿಬಾಯಿಯನ್ನು ಬಾಪೂಸಾಹೇಬ್ ಪಣಶೀಕರ್ ಯವರಿಗೆ ಕೊಟ್ಟು ಮದುವೆ ಯನ್ನು ಮಾಡಿದರು. ಈಕೆಯ ಮಗನನ್ನೇ ರಖಮಾಬಾಯಿಯು ಸ್ವೀಕಾರ ಮಾಡಿಕೊಂಡು ಆತನಿಗೆ ಗಣಪತಿರಾವ್ ಅಥವಾ ದಾಜೀಸಾಹೇಬ್ ಕಿಬೇ ಎಂದು ಹೆಸರಿಟ್ಟಳು. ಎರಡನೆಯಮಗಳಾದ ಚಿಮಾತಾಬಾಯಿಯನ್ನು ನಾನಾ ಸಾಹೇಬ್ ಕಾಕಿರ್ಡೇ ಎಂಬಾತನಿಗೆ ಕೊಟ್ಟು ಮದುವೆಯನ್ನು ಮಾಡಿದರು. ಈಕೆಯ ವಂಶವು ಸಹ ವೃದ್ಧಿಯನ್ನು ಹೊಂದುತಲಿದೆ.

ಮೈನಲದೇವಿ.

ಈಕೆಯು ೧೦೭೨ ನೆಯ ಇಸವಿಯ ಸ್ಸಾಂತದಲ್ಲಿದ್ದಳು. ವಿದರ್ಭದೇಶದ ಚಂದ್ರಪುರಕ್ಕೆ ಅಧಿಪತಿಯಾದ ರಾಜಾ ಜಯಕೇಶನು ಮೈನಲದೇವಿಯ ತಂದೆಯು. ಈಕೆಯು ಯುಕ್ತವಯಸ್ಕಳಾಗಲು ಜಯಕೇಶನು ಅನೇಕ ರಾಜಪುತ್ರರ ಛಾಯಾ ಪಠಗಳನ್ನು ತರಿಸಿ ಈಕೆಗೆ ತೋರಿಸಿದನು. ಅವುಗಳಲ್ಲಿ ಘೂರ್ಜರಾಧಿಪತಿಯೂ ಚಾಳುಕ್ಯ ವಂಶಜನೂ ಆದ ಕರ್ಣರಾಜನ ರೂಪವನ್ನು ನೋಡಿ ಮೈನಲ ದೇವಿಯು ವರಿಸಿದಳು. ಆಮೇಲೆ ಆಕೆಯ ಭಾವಚಿತ್ರವನ್ನು ವಿಪ್ರರು ತೆಗೆದು ಕೊಂಡು ಹೋಗಿ ಕರ್ಣರಾಜನಿಗೆ ತೋರಿಸಲು, ಆತನು ಮೈನಲದೇವಿಯನ್ನು ವಿವಾಹ ಮಾಡಿಕೊಳ್ಳಲು ಒಪ್ಪಿಕೊಂಡನು. ಅನಂತರ ಮೈನಲದೇವಿಯು

ಘೂರ್ಜರ ದೇಶಕ್ಕೆ ಹೋಗಲು, ಅಲ್ಲಿಯೇ ಅವರಿಬ್ಬರಿಗೂ ವಿವಾಹವು ನಡೆಯಿತು. ಪ್ರತಿ ದಿವಸವೂ ಹೊಸ ಪುಷ್ಪವನ್ನು ಆಘ್ರಾಣಿಸುವ ಕೆಲ ಪುರುಷರ ಸ್ವಭಾವವನ್ನನುಸರಿಸಿ ವಿವಾಹವಾದನಂತರ ಕರ್ಣರಾಜನಿಗೆ ಮೈನಲದೇವಿಯ ಮೇಲೆ ಇದ್ದ ಪ್ರೇಮವು ಕಡಮೆಯಾಯಿತು. ಪತಿಪ್ರೇಮದಿಂದ ವಂಚಿತಳಾಗಿ ಜೀವಿಸಿರುವುದು ಮೈನಲದೇವಿಗೆ ಅಸಹ್ಯವಾಗಿ ತೋರಿ ಆಕೆಯು ಅನೇಕಸಲ ಆತ್ಮ ಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದಳು. ಆದರೆ ಆಕೆಯ ಅತ್ತೆಯು ಆಕೆಯ ಪ್ರಯತ್ನವನ್ನು ಕಂಡುಹಿಡಿದು, ಹಿತಬೋಧೆಯಿಂದ ಮೈನಲದೇವಿಯ ಮನಸ್ಸನ್ನು ಸ್ವಲ್ಪ ಸಮಾಧಾನ ಗೊಳಿಸಿದಳು. ಈ ವಿಧವಾಗಿ ಕೆಲವು ದಿವಸಗಳು ಕಳೆದಮೇಲೆ 'ಮುಂಜಳಾ' ಎಂಬ ವಾರಕಾಂತೆಯಲ್ಲಿ ಕರ್ಣರಾಜನಿಗೆ ಅಭಿಲಾಷೆಯು ಉಂಟಾಯಿತು. ಮಂತ್ರಿಯು ಈ ವಿಷಯವನ್ನು ತಿಳಿದು, ಮೈನಲದೇವಿಯ ಮೇಲೆ ಕನಿಕರವುಳ್ಳವನಾಗಿ ಮುಂಜಳಾ ಎಂಬ ನೆಪದಿಂದ ಮೈನಲದೇವಿಯನ್ನೇ ರಾಜನ ಬಳಿಗೆ ಕಳುಹಿಸಿದನು. ವೇಷಾಂತರವನ್ನು ಧರಿಸಿದ್ದ ತನ್ನ ಪತ್ನಿಯನ್ನು ರಾಜನು ವಾರಕಾಂತೆಯೆಂದು ಭಾವಿಸಿ ಆಕೆಯೊಡನೆ ಆ ರಾತ್ರಿಯನ್ನು ಸಂತೋಷದಿಂದ ಕಳೆದನು. ಮೈನಲದೇವಿಯು ಗುರುತಿಗಾಗಿ ಆತನ ಉಂಗುರವನ್ನು ತೆಗೆದುಕೊಂಡಳು.

ಪರಮೇಶ್ವರನ ಅನುಗ್ರಹದಿಂದ ಮೈನಲದೇವಿಯು ಗರ್ಭವತಿಯಾದಳು. ಅನಂತರ ಕೆಲವು ಕಾರಣಗಳಿಂದ ವೇಶ್ಯೆಯ ಸಹವಾಸವನ್ನು ಮಾಡಿದುದಕ್ಕಾಗಿ ರಾಜನು ಪಶ್ಚಾತ್ತಾಪಪಟ್ಟು, ತದ್ದೋಷಪರಿಹಾರಾರ್ಥವಾಗಿ, ಬ್ರಾಹ್ಮಣಾನುಮತದಿಂದ ಐದುತಪ್ತಪ್ರತಿಮೆಗಳನ್ನು ಆಲಿಂಗನಮಾಡಿಕೊಳ್ಳುವುದಕ್ಕೂ ಸಿದ್ಧನಾದನು. ಆ ಸಮಯದಲ್ಲಿ ಮಂತ್ರಿಯು ನಡೆದ ನಿಜವೃತ್ತಾಂತವನ್ನು ತಿಳುಹಿಸಲು ರಾಜನ ಮನಸ್ಸು ಸಮಾಧಾನವನ್ನು ಹೊಂದಿತು. ಅನಂತರ ಕೆಲವು ದಿವಸಗಳಿಗೆ ರಾಣಿಯು ಪುತ್ರನನ್ನು ಪಡೆದಳು. ಆ ಬಾಲಕನಿಗೆ 'ಸಿದ್ಧರಾಜಜಯಸಿಂಹ' ಎಂದು ಹೆಸರಿಟ್ಟರು.

ಈ ಬಾಲಕನು ಅಲ್ಪವಯಸ್ಕನಾಗಿರುವಾಗಲೇ ೧೦೯೪ ನೆ ಇಸವಿಯಲ್ಲಿ ಕರ್ಣರಾಜನು ಮೃತನಾದನು. ಪತಿಯ ಮರಣದಿಂದ ಮೈನಲದೇವಿಗೆ ವರ್ಣಿಸಲು ಅಸಾಧ್ಯವಾದ ದುಃಖವು ಉಂಟಾಯಿತು. ಈಕೆಯು ದುಃಖಸಮುದ್ರದಲ್ಲಿ ಮುಳುಗಿರುವಾಗಲೇ ರಾಜ್ಯಭಾರವನ್ನು ವಹಿಸಿ ಪ್ರಜೆಗಳಿಗೆ ಸುಖವನ್ನುಂಟು ಮಾಡಬೇಕಾಯಿತು. ಕರ್ಣರಾಜನ ಅನಂತರ ಸಿದ್ಧರಾಜಜಯಸಿಂಹನಿಗೆ ಪಟ್ಟವನ್ನು ಕಟ್ಟಿ, ಆ ಬಾಲಕನ ಹೆಸರಿನಲ್ಲಿ ಕರ್ಣರಾಜನ ಮಾತುಲನಾದ ಮದನಪಾಲನು ರಾಜ್ಯವನ್ನು ಪಾಲಿಸುತ್ತಿದ್ದನು. ಈತನು ವಿಚಾರಶೂನ್ಯನಾದುದರಿಂದ ಪ್ರಜೆಗಳಿಗೆ ನ್ಯಾಯವು ದೊರೆಯುತ್ತಿರಲಿಲ್ಲ. ಅದರಿಂದ ಸಾಮಂತನೆಂಬ ಪ್ರಧಾನಿ

ಯೊಬ್ಬನು ಬಾಲರಾಜನನ್ನು ವಶಮಾಡಿಕೊಂಡು ಯುಕ್ತಿಯಿಂದ ಮದನಪಾಲನನ್ನು ಕೊಲ್ಲಿಸಿದನು. ಇದರಿಂದ ಮೈನಲದೇವಿಯು ರಾಜ್ಯಭಾರವನ್ನು ವಹಿಸಿದಳು. ಸಾಮಂತಿ, ಮುಂಜ, ಉದಾ ಎಂಬ ಮುವ್ವರು ಮಂತ್ರಿಗಳ ಸಹಾಯದಿಂದ ರಾಜ್ಯವಿಷಯಗಳನ್ನು ಈಕೆಯು ಬಹು ವಿಚಕ್ಷಣೆಯಿಂದ ನೋಡಿಕೊಳ್ಳುತ್ತಿದ್ದಳು. ಈಕೆಯು ನ್ಯಾಯಶಾಸನಗಳನ್ನು ರಚಿಸಿ ಪ್ರಜೆಗಳು ಅದರಂತೆ ನಡೆಯಬೇಕೆಂದು ಶಾಸಿಸಿದಳು. ಈಕೆಯು 'ಮೊನರಸ' ಎಂಬ ತಟಾಕವನ್ನೂ 'ಮಲಾವ' ಎಂಬ ಕೆರೆಯನ್ನೂ ಕಟ್ಟಿಸಿದಳು.

ಮಲಾವ ಕೆರೆಯನ್ನು ಕಟ್ಟಿಸುವಾಗ ಒಬ್ಬ ವೇಶ್ಯೆಯ ಗೃಹವನ್ನು ಕೆಡವಿದಲ್ಲದೆ ಸಮವಾಗಿ ಕೆರೆಯನ್ನು ಕಟ್ಟಲು ಸಾಧ್ಯವಾಗಲಿಲ್ಲ. ಆದುದರಿಂದ ರಾಣಿಯು ಆ ವೇಶ್ಯೆಗೆ ವಿಶೇಷ ದ್ರವ್ಯವನ್ನು ಕೊಟ್ಟು ಆಕೆಯ ಮನೆಯನ್ನು ಕೊಂಡು ಕೊಳ್ಳಲು ಪ್ರಯತ್ನಿಸಿದಳು. ಆದರೆ ಆ ವೇಶ್ಯೆಯು "ನಿಮಗೆ ತಟಾಕವನ್ನು ನಿರ್ಮಿಸುವುದರಿಂದ ಎಷ್ಟು ಕೀರ್ತಿಯು ಉಂಟಾಗುವುದೋ ಅದನ್ನು ಕಟ್ಟದಂತೆ ಮಾಡುವುದರಿಂದ ನನಗೆ ಅಷ್ಟು ಕೀರ್ತಿಯು ಉಂಟಾಗುವುದು" ಎಂದು ನುಡಿದು ಮನೆಯನ್ನು ವಿಕ್ರಯಿಸಲು ಒಪ್ಪಲಿಲ್ಲ. ನ್ಯಾಯಪ್ರವರ್ತಕಳಾದ ಮೈನಲದೇವಿಯು ಯಾರ ಸ್ವತ್ತಿನಲ್ಲಿ ಅವರಿಗೆ ಪೂರ್ಣಾಧಿಕಾರವಿದೆ ಎಂದೆಣಿಸಿ, ಆ ವೇಶ್ಯೆಯನ್ನು ಹಿಂಸೆಮಾಡದೆ, ಅವಳ ಮನೆಯನ್ನು ಬಿಟ್ಟು ಕೆರೆಯನ್ನು ವಕ್ರವಾಗಿಯೇ ಕಟ್ಟಿಸಿದಳು. ಈ ನ್ಯಾಯದಿಂದ ಈಗಲೂ ಅಲ್ಲಿನ ಪ್ರಜೆಗಳು "ನ್ಯಾಯವನ್ನು ತಿಳಿಯಬೇಕಾದರೆ ಮಲಾವ ತಟಾಕವನ್ನೀಕ್ಷಿಸಬೇಕು" ಎಂದು ನುಡಿಯುತ್ತಾರೆ.

ಆಕೆಯ ಮಂತ್ರಿಗಳು ಸಹ ಆಕೆಯ ಅನುಜ್ಞೆಯಿಂದ ಅನೇಕ ಧರ್ಮಕಾರ್ಯಗಳನ್ನು ಮಾಡುತಲಿದ್ದರು. ಒಂದಾನೊಂದು ಸಮಯದಲ್ಲಿ ಮೈನಲದೇವಿಯು ಪುತ್ರಸಹಿತಳಾಗಿ ಸೋಮನಾಥಕ್ಕೆ ಹೊರಟು ಭಾಲೋಡ ಎಂಬ ಗ್ರಾಮದಲ್ಲಿ ಯಾತ್ರೀಕರಿಗೆ ತೆರಿಗೆಯಿಂದ ಉಂಟಾಗುತಲಿದ್ದ ಬಾಧೆಯನ್ನು ನೋಡಿ, ಕುಮಾರನಿಂದ ತೆರಿಗೆಯನ್ನು ಬಿಡುವಂತೆ ಧಾರೆಯನ್ನು ಬಿಡಿಸಿದಳು. ಈ ಸತಿಯು ಅನೇಕ ಸತ್ಕಾರ್ಯಗಳನ್ನು ಮಾಡುತ್ತ ರಾಜ್ಯವನ್ನಾಳಿ, ಪುತ್ರನಿಗೆ ರಾಜ್ಯಭಾರವನ್ನು ಒಪ್ಪಿಸಿ, ಬಹು ವೃದ್ಧಳಾಗಿ ಸ್ವರ್ಗಸ್ಥಳಾದಳು.

ನಾಚಿ.

ಈ ವಿದ್ವಾಂಸಳು ಏಲೇಶ್ವರೋಪಾಧ್ಯಾಯನ ಮಗಳು. ಈತನು ಆಂಧ್ರ ಬ್ರಾಹ್ಮಣನು; ದೊಡ್ಡ ವಿದ್ವಾಂಸನು. ಈತನ ನಿವಾಸಸ್ಥಳವು ಏಲೇಶ್ವರ ಪುರವು; ಈ ಗ್ರಾಮವು ಶ್ರೀಶೈಲಕ್ಕೆ ಪಶ್ಚಿಮದಲ್ಲಿ ಇದೆ. ಈತನು ವಿದ್ಯಾರ್ಥಿಗಳಿಗೆ ಪ್ರತಿ ದಿನವೂ ಮನೆಯಲ್ಲಿಯೇ ಸಂಸ್ಕೃತ ಭಾಷೆಯನ್ನು ಹೇಳಿಕೊಡುತಲಿದ್ದನು. ಈತನ ಮನೆಯಲ್ಲಿರುವವರೆಲ್ಲರೂ ಅದನ್ನು ಯಾವಾಗಲೂ ಕೇಳುತ್ತಲಿದ್ದುದರಿಂದ ಆ ಭಾಷೆಯನ್ನು ಬಹು ಚನ್ನಾಗಿ ಮಾತನಾಡುತಲಿದ್ದರಂತೆ. ಈತನೇ ಆಂಧ್ರ ದೇಶದಲ್ಲೆಲ್ಲ ನಾಡುಗಳ ಭೇದಗಳನ್ನು ಏರ್ಪಾಟುಮಾಡಿ ವಿವಾಹಾದಿಗಳು ಆಯಾ ನಾಡಿನವರಲ್ಲಿಯೇ ನಡೆಯಬೇಕು ಎಂದು ಏರ್ಪಾಟು ಮಾಡಿದನು ಎಂದು ಪ್ರತೀತಿಯುಂಟು. ಆ ವಿಭಾಗವು ಈಗಲೂ ಆಂಧ್ರದೇಶದಲ್ಲಿ ಪ್ರಚಾರ ದಲ್ಲಿದೆ. ಈತನಿಗೆ ಪುತ್ರಸಂತತಿಯು ಇಲ್ಲ. ಇಬ್ಬರು ಪುತ್ರಿಯರುಮಾತ್ರ ಇದ್ದರು.

ಈತನು ಶಾಲಿವಾಹನ ಶಕದ ಏಳನೆಯ ಶತಾಬ್ದದಲ್ಲಿ ಇದ್ದಂತೆ ತಿಳಿಯ ಬರುತ್ತದೆ. ಆದುದರಿಂದ ನಾಚಿಯು ಸಹ ಆ ಶತಾಬ್ದದವಳು ಎಂದು ತಿಳಿಯ ಬೇಕು. ನಾಚಿಯು ಆಂಧ್ರಸ್ತ್ರೀಯಾದರೂ ಈಕೆಯ ಚರಿತ್ರೆಗೆ ಆಂಧ್ರದೇಶದಲ್ಲಿ ಯಾವ ಸಾಧನವೂ ದೊರೆಯದೆ, ಮಹಾರಾಷ್ಟ್ರದಲ್ಲಿ ದೊರೆತ ಆಧಾರಗಳಿಂದ ಈಕೆಯ ಅಲ್ಪ ಚರಿತ್ರೆಯನ್ನು ಬರೆಯಬೇಕಾಯಿತು. ಈಕೆಯು ಬಾಲವಿತಂತು ವಾದಕಾರಣ ಈಕೆಗೆ ದುಃಖವು ತೋರದಿರುವುದಕ್ಕಾಗಿ ಈಕೆಯ ತಂದೆಯು ವಿದ್ಯಾಭ್ಯಾಸವನ್ನು ಮಾಡಿಸುತಲಿದ್ದನು. ನಾಚಿಯು ತನಗೆ ವಿದ್ಯೆಯು ಶೀಘ್ರವಾಗಿ ಬರಲಿಲ್ಲವೆಂದು ಚಿಂತಿಸಿ, ತನ್ನತಂದೆಯು ವಿದ್ಯಾರ್ಥಿಗಳಿಗೆ ಬುದ್ಧಿ ವೈಭವವನ್ನುಂಟು ಮಾಡುವುದಕ್ಕಾಗಿ ಸಿದ್ಧಪಡಿಸಿ ಇಟ್ಟಿದ್ದ ಜ್ಯೋತಿಷ್ಮತಿ ಎಂಬ ತೈಲವನ್ನು ಯಾರಿಗೂ ತಿಳಿಯದಂತೆ ಕುಡಿದಳು. ಅದರನಂತರ ಆಕೆಯ ದೇಹದಲ್ಲಿ ಅತ್ಯಂತ ತಾಪವು ಉಂಟಾಗಲು ಮನೆಯಲ್ಲಿದ್ದ ಬಾವಿಯೊಳಗೆ ದುಮುಕಿದಳು. ಅನಂತರ ಮನೆಯವರು ಆಕೆಯನ್ನು ಹುಡುಕಿ ಎಲ್ಲಿಯೂ ಕಾಣದೆ ಬಾವಿಯಲ್ಲಿ ನೋಡಿದರು. ಅಷ್ಟುಹೊತ್ತಿಗೆ ಆಕೆಗೆ ತಾಪವು ಸ್ವಲ್ಪ ಕಡಮೆಯಾದಕಾರಣ ತನ್ನ ವೃತ್ತಾಂತ ವನ್ನೆಲ್ಲ ಅವರೊಡನೆ ಹೇಳಿದಳು. ಆಗ ಆಕೆಯ ತಂದೆಯು ಆಕೆಯನ್ನು ಇನ್ನು ಕೆಲವು ಗಳಿಗೆಗಳು ಬಾವಿಯಲ್ಲಿಟ್ಟು ಆಮೇಲೆ ಈಚೆಗೆ ತೆಗೆದನು. ನಾಚಿಗೆ ಆದಿವಸ ಮೊದಲ್ಗೊಂಡು ವಿಶೇಷ ತಿಳುವಳಿಕೆಯೂ, ಜ್ಞಾಪಕಶಕ್ತಿಯೂ

ಉಂಟಾದುದರಿಂದ ತಂದೆಗೆ ಬರುವ ವಿದ್ಯೆಯನ್ನೆಲ್ಲ ಅಲ್ಪಕಾಲದಲ್ಲಿಯೇ ಕಲಿತುಕೊಂಡಳು.

ವಿದ್ಯಾವತಿಯಾದ ಮೇಲೆ ಈಕೆಗೆ ತೀರ್ಥಯಾತ್ರೆಯನ್ನು ಮಾಡಬೇಕು ಎಂಬ ಅಭಿಲಾಷೆಯುಂಟಾಗಲು ತಂದೆಯು ಅದಕ್ಕೆ ಅಂಗೀಕರಿಸಿ ಆಕೆಯನ್ನು ಯಾತ್ರೆಗೆ ಕಳುಹಿಸಿದನು. ಆಗ ನಾಚಿಯು ಕಾಶೀ ಮೊದಲಾದ ಸ್ಥಳಗಳಿಗೆ ಹೋಗಿ ಅಲ್ಲಿ ಪಂಡಿತರೊಡನೆ ವಾದಿಸಿ ಅವರನ್ನು ಗೆದ್ದಳು. ಮತ್ತು ಈ ಪಂಡಿತಳು ಡಿಲ್ಲಿ, ಆಗ್ರಾ ಮೊದಲಾದ ಸ್ಥಳಗಳಿಗೆ ಹೋಗಿ ರಾಜ ಸಭೆಗಳಲ್ಲಿ ವಿದ್ವಾಂಸರನ್ನು ವಾದದಲ್ಲಿ ಗೆದ್ದು ಅನೇಕ ಬಹುಮಾನಗಳನ್ನು ಪಡೆದಳು. ಆಕೆಯು ಮನೆಗೆ ಬಂದು ತನ್ನ ಯಾತ್ರಾ ವೃತ್ತಾಂತವನ್ನು ತಂದೆಗೆ ಹೇಳಿ ತಾನು ಪಡೆದ ಬಹುಮಾನಗಳನ್ನೆಲ್ಲ ತೋರಿಸಿದಳು. ಆ ಬ್ರಾಹ್ಮಣನು ಪುತ್ರಿಯ ವೈಧವ್ಯ ದುಃಖವನ್ನು ಮರೆತು ಆಕೆಯೇ ತನ್ನ ಪುತ್ರನು ಎಂದೆಣಿಸಿ, ಆಕೆಯ ಪಾಂಡಿತ್ಯಕ್ಕೆ ಮನಸ್ಸಿನಲ್ಲಿ ಬಹು ಸಂತೋಷವನ್ನು ಹೊಂದಿದನು. ನಾಚಿಯು ತನ್ನ ಚರಿತ್ರೆಯನ್ನು ಅನುಸರಿಸಿ ನಾಚಿ ನಾಟಕ ಎಂಬ ಹೆಸರಿನಲ್ಲಿ ಒಂದು ಸಂಸ್ಕೃತ ನಾಟಕವನ್ನು ರಚಿಸಿದಳು.

ಸರಸವಾಣಿ.

——:o:——

ಈ ಪಂಡಿತಳು ಆದಿ ಶಂಕರಾಚಾರ್ಯರ ಸಮಕಾಲೀನಳು. ಕೆಲವು ಆಧಾರಗಳಿಂದ ಆದಿ ಶಂಕರಾಚಾರ್ಯರು ಕ್ರೀ.ಶ. ೮ ನೆಯ ಶತಾಬ್ದಾಂತ್ಯ ದಲ್ಲಿಯೂ, ೯ ನೆಯ ಶತಾಬ್ದಾದಿಯಲ್ಲಿಯೂ ಇದ್ದಂತೆ ಅನೇಕರು ನಿರ್ಣಯಿಸಿದಾರೆ. ಶೋಣನದೀತೀರದಲ್ಲಿ ವಾಸಮಾಡುತಲಿದ್ದ ವಿಷ್ಣುಶರ್ಮ ಎಂಬ ಬ್ರಾಹ್ಮಣನಿಗೆ ಸರಸವಾಣಿಯು ಒಬ್ಬಳೇ ಮಗಳು. ತಾಯಿತಂದೆಗಳು ಈಕೆಯನ್ನು ಬಹು ಮುದ್ದಿನಿಂದ ಸಲಹುತಲಿದ್ದರು. ಸರಸವಾಣಿಯು ಬಹು ಸೂಕ್ಷ್ಮಬುದ್ಧಿಯುಳ್ಳವಳಾದುದರಿಂದ, ತಾಯಿತಂದೆಗಳು ಈಕೆಗೆ ಸಾಂಖ್ಯ, ಪಾತಂಜಲ ವೈಶೇಷಿಕ, ನ್ಯಾಯ, ಮೀಮಾಂಸ, ವೇದಾಂತ ಎಂಬ ಆರು ಶಾಸ್ತ್ರಗಳನ್ನೂ, ಕಾವ್ಯ ನಾಟಕಗಳನ್ನೂ, ಇನ್ನೂ ಇತರ ವಿದ್ಯೆಗಳನ್ನೂ ಕಲಿಸಿದರು. ಜನರು ಈಕೆಯ ಪಾಂಡಿತ್ಯವನ್ನು ನೋಡಿ ಈಕೆಯು ಸರಸ್ವತಿಯ ಅವತಾರವೆಂದೆಣಿಸಿ ಉಭಯಭಾರತಿ ಎಂದು ಕರೆಯುತಲಿದ್ದರು.

ವಿದ್ಯಾರೂಪ ಗುಣಸಂಪನ್ನೆಯಾದ ಸರಸವಾಣಿಯು ಯೌವನವತಿ ಯಾದಳು. ಆ ಕಾಲದಲ್ಲಿ ವಿಶ್ವರೂಪ ಎಂಬ ಅಪರನಾಮವುಳ್ಳ ಮಂಡನಮಿಶ್ರನು ವಿದ್ವಾಂಸನೆಂತಲೂ, ರೂಪವಂತನೆಂತಲೂ, ಸುಗುಣವಂತನೆಂತಲೂ ಎಲ್ಲ ರಿಂದಲು ಹೊಗಳಿಸಿ ಕೊಳ್ಳುತಲಿದ್ದನು. ಸರಸವಾಣಿಯು ಆತನ ಖ್ಯಾತಿಯನ್ನು ಕೇಳಿ ಆತನೇ ತನಗೆ ಅನುರೂಪನಾದ ವರನು ಎಂದು ಮನಸ್ಸಿನಲ್ಲಿ ನಿಶ್ಚ ಯಿಸಿಕೊಂಡಳು. ಮಂಡನಮಿಶ್ರನು ಸಹ ಸರಸವಾಣಿಯ ಸುಗುಣಗಳನ್ನು ಕೇಳಿ ಆಕೆಯನ್ನು ನೋಡಲು ಇಚ್ಛೈಸಿದನು. ಆದರೆ ಅವರಿಬ್ಬರೂ ತಂತಮ್ಮ ಮನೋಗತಗಳನ್ನು ತಾಯಿತಂದೆಗಳಿಗೆ ತಿಳಿಸದೆ ಕೃಶಿಸುತಲಿದ್ದರು.

ಕೆಲವು ದಿವಸಗಳು ಕಳೆದನಂತರ ತಮ್ಮ ಮಕ್ಕಳು ಈ ವಿಧವಾಗಿ ಕೃಶಿ ಸಲು ಕಾರಣವು ಏನಾಗಿರಬಹುದು ಎಂದು ಅವರ ಜನನೀಜನಕರು ಚಿಂತಿಸಿ, ತಮ್ಮ ಮಕ್ಕಳನ್ನು ನಿಮ್ಮ ಮನಸ್ಸಿನಲ್ಲಿರುವದನ್ನು ಹೇಳಬೇಕು ಎಂದು ನಿರ್ಬಂಧಿಸಲು, ಅವರು ತಮ್ಮ ಮನೋಗತವನ್ನು ತಿಳಿಸಿದರು.

ಅನಂತರ ಮಂಡನಮಿಶ್ರನ ತಂದೆಯಾದ ಹಿಮಮಿತ್ರನು ಸರಸವಾಣಿಯ ತಂದೆಯ ಬಳಿಗೆ ಕನ್ಯೆಯನ್ನು ವಿಚಾರಿಸಲು ಇಬ್ಬರು ಬ್ರಾಹ್ಮಣರನ್ನು ಕಳುಹಿದನು. ವಿಷ್ಣುಶರ್ಮನು ಬಂದವಿಪ್ರರಿಗೆ ತಕ್ಕ ಮರ್ಯಾದೆಯನ್ನು ಮಾಡಿ ಅವರ ಆಗಮನ ಕಾರಣವನ್ನು ಕೇಳಲು, ಅವರು ತಾವು ಬಂದ ವಿಷಯವನ್ನು ತಿಳಿಸಿ, ಕನ್ಯೆಯನ್ನು ಮಂಡನನಿಗೆ ಕೊಡಬೇಕು ಎಂದು ಕೇಳಿದರು. ಅದಕ್ಕೆ ವಿಷ್ಣು ಶರ್ಮನು ತನ್ನ ಪತ್ನಿಯೊಡನೆ ಯೋಚಿಸಿ ನಿಶ್ಚಯಮಾಡಿಕೊಂಡು ಹೇಳುವೆನು ಎಂದು ಒಳಗೆಹೋಗಿ ಆಕೆಯನ್ನು ಕೇಳಲು ಆಕೆಯು ಪತಿಯೊಡನೆ :—

"ಧನವನ್ನೂ, ಕುಲವನ್ನೂ, ಶೀಲವನ್ನೂ ನೋಡಿ ಕನ್ಯೆಯನ್ನು ಕೊಡ ಬೇಕು ಎಂದು ಶಾಸ್ತ್ರಗಳು ಹೇಳುತಲಿವೆ. ದೊಡ್ಡವರು ಹಾಗೆಯೇ ಹೇಳುತ್ತಾರೆ. ಈ ಬಾಲಕನಾದರೋ ದೂರದಲ್ಲಿರುವನು. ಈತನ ಕುಲಶೀಲಗಳು ನಮಗೆ ತಿಳಿಯದು ; ಆದುದರಿಂದ ನಾನೇನುಹೇಳಲಿ" ಎಂದಳು. ಅದಕ್ಕೆ ವಿಷ್ಣು ಶರ್ಮನು ಮಂಡನಮಿಶ್ರನ ವಿದ್ಯಾಪ್ರಭಾವವನ್ನು ಹೊಗಳಿ ಧನಕ್ಕಿಂತಲೂ ವಿದ್ಯೆಯೇ ಶ್ರೇಷ್ಠವಾದುದು ಎಂದು ತಿಳಿಸಿದನು. ಅದರಮೇಲೆ ಆ ದಂಪತಿ ಗಳಿಬ್ಬರು ಮಗಳ ಬಳಿಗೆ ಹೋಗಿ ಆಕೆಯ ಮನೋಭಿಪ್ರಾಯವನ್ನರಿತುಕೊಳ್ಳು ವುದಕ್ಕಾಗಿ ಈ ವಿಷಯವನ್ನೆಲ್ಲ ತಿಳಿಸಿದರು. ಅವರು ಆ ಸಮಾಚಾರವನ್ನು ಮುಡಿದೊಡನೆಯೇ ಆ ಬಾಲೆಗೆ ಅಪರಿಮಿತ ಸಂತೋಷವು ಉಂಟಾಗಿ ಆ ಸಂತೋಷವು ಆಕೆಯ ಮನಸ್ಸಿನಲ್ಲಿ ನಿಲ್ಲಲಾರದೆ ರೋಮಾಂಚರೂಪವಾಗಿ ಹೊರಗೆ ಬಂದಿತು. ಅವರು ಅದರಿಂದಲೇ ಆಕೆಯ ಅಭಿಪ್ರಾಯವನ್ನು ತಿಳಿದು

ಕೊಂಡು, ಬಂದಿರುವ ಬ್ರಾಹ್ಮಣರೊಡನೆ, ವರನನ್ನು ನೋಡಿ ಲಗ್ನ ನಿಶ್ಚಯ ಮಾಡಿಕೊಂಡು ಬರಲು, ತಾವು ಒಬ್ಬ ಭೂಸುರನನ್ನು ಕಳುಹಿದರು. ಗಣಿತ ದಲ್ಲಿ ಪ್ರವೀಣಳಾದ ಸರಸವಾಣಿಯು ಅಂದಿಗೆ ಹದಿನಾಲ್ಕನೆಯ ದಿವಸದ ದಶ ಮಿಯು, ಶುಭಚಂದ್ರಯುಕ್ತವಾದ ಸುಮುಹೂರ್ತವು ಎಂದು ಬರೆದು ತಮ್ಮ ಬ್ರಾಹ್ಮಣನ ಕೈಯಲ್ಲಿ ಕೊಟ್ಟಳು.

ಆಗ ಆ ಬ್ರಾಹ್ಮಣರು ಮುವ್ವರೂ ಕೆಲವು ದಿವಸಗಳಿಗೆ ಮುಂಡನಮಿಶ್ರನ ಗ್ರಾಮಕ್ಕೆ ಹೋಗಿ ಆತನ ತಂದೆಯ ಕೈಯಲ್ಲಿ ಶುಭಲೇಖನವನ್ನು ಕೊಟ್ಟರು. ಆತನು ಅದನ್ನು ಓದಿಕೊಂಡು ಸಂತಸದೊಡನೆ ಬಂಧುಮಿತ್ರ ಸಮೇತನಾಗಿ ಶುಭದಿನದಲ್ಲಿ ಪ್ರಯಾಣವನ್ನು ಮಾಡಿ, ವಿಷ್ಣುಶರ್ಮನ ಗ್ರಾಮವನ್ನು ಸೇರಿ ಮಗನಿಗೆ ಮದುವೆಯನ್ನು ಮಾಡಿದನು.

ಮಗಳು ಅತ್ತೆಯಮನೆಗೆ ಹೋಗುವ ಸಮಯದಲ್ಲಿ ಸರಸವಾಣಿಯ ಜನನೀ ಜನಕರು ಆಕೆಗೆ "ಪ್ರಿಯಕುಮಾರೀ! ಈ ದಿನದಿಂದಲೂ ನಿನಗೆ ಅಪೂರ್ವ ವಾದ ಸ್ಥಿತಿಯು ಉಂಟಾಯಿತು. ಈ ಸುಸ್ಥಿತಿಗೆ ತಕ್ಕಂತೆ ಪ್ರವರ್ತಿಸು. ಬಾಲ್ಯ ಕ್ರೀಡೆಗಳನ್ನು ತ್ಯಜಿಸು. ಏಕಂದರೆ ನಿನ್ನ ಆಟಗಳು ನಮಗೆ ಸಂತೋಷಜನಕ ಗಳಾಗುವಂತೆ ಇತರರಿಗೆ ಸಂತೋಷವನ್ನು ಉಂಟುಮಾಡಲಾರವು. ಸ್ತ್ರೀಯು ಅವಿವಾಹಿತೆಯಾಗಿರುವಾಗ ತಾಯಿತಂದೆಗಳ ಆಜ್ಞೆಯಲ್ಲಿರಬೇಕು. ವಿವಾಹಾ ನಂತರ ಪತಿಯೇಗತಿ. ಆದಕಾರಣ ನೀನು ಪತಿಯ ಆಜ್ಞೆಯಂತೆ ನಡೆಯುತ ಲಿರು. ಪತಿಗಿಂತಲೂ ಮೊದಲು ಹಾಸಿಗೆಯನ್ನು ಬಿಟ್ಟೆದ್ದು ಸ್ನಾನವನ್ನು ಮಾಡು. ಪತಿಯು ಭುಜಿಸುವುದಕ್ಕೆ ಪೂರ್ವದಲ್ಲೆಂದಿಗೂ ಭುಜಿಸಬೇಡ. ಪತಿಯು ಪ್ರವಾಸ ದಲ್ಲಿರುವಾಗ ಭೂಷಣಾದಿಗಳನ್ನು ಧರಿಸಬೇಡ. ಅರುಂಧತ್ಯಾದಿ ಪತಿವ್ರತೆಯ ರಂತೆ ನಡೆಯುವುದೇ ನಿನಗೆ ಭೂಷಣವು. ಪತಿಯು ಕೋಪವಶನಾದರೆ ನೀನು ಮೌನವಾಗಿರು. ಆತನ ಕೋಪವನ್ನು ಸಹಿಸಿಕೋ. ನೀನು ಈ ವಿಧವಾಗಿ ನಡೆದರೆ ಆತನು ನಿನ್ನಮೇಲೆ ಕೋಪವನ್ನು ಬಿಟ್ಟು ಪ್ರೇಮದಿಂದ ಆದರಿಸುವನು: ಶಾಂತದೊಡನೆ ಸಮಾನವಾದುದು ಯಾವುದೂ ಇಲ್ಲ. ಪತಿಯು ಗೃಹದಲ್ಲಿ ಇಲ್ಲದ ಸಮಯದಲ್ಲಿ ಯಾರಾದರೂ ಅತಿಥಿಗಳು ಬಂದರೆ ಅವರನ್ನು ಸರಿಯಾಗಿ ಸನ್ಮಾನಿಸಿ ಆದರದೊಡನೆ ಕಳುಹಿಸು. ಇಲ್ಲದಿದ್ದರೆ ಅವರಲ್ಲಿ ಯಾರಾದರೂ ಮಹಾತ್ಮರಿದ್ದರೆ ಕುಲದಾಹವಾಗುವುದು. ಅತ್ತೆಮಾವಂದಿರನ್ನು ಜನನೀಜನಕ ರಂತೆಯೂ, ಭಾವಮೈದಂದಿರನ್ನು ಅಣ್ಣತಮ್ಮಂದಿರಂತೆಯೂ ಭಾವಿಸಿ ನಡೆ. ಇವರಿಗೆ ಕೋಪವುಂಟಾದರೆ ನಿನಗೂ ನಿನ್ನ ಪತಿಗೂ ಅನ್ಯೋನ್ಯಪ್ರೇಮವು ವಿಶೇಷವಾಗಿ ಇದ್ದರೂ ನಿಮ್ಮಲ್ಲಿ ನಿಮಗೆ ಭೇದವನ್ನು ಹುಟ್ಟಿಸುವರು. ನೀನು ಈ ವಿಧವಾಗಿ ನಡೆದರೆ ಉಭಯಲೋಕಗಳಲ್ಲಿಯೂ ಕೀರ್ತಿಯನ್ನು ಪಡೆಯುವೆ." ಎಂದು ಹೇಳಿದರು.

ಈ ವಿಧವಾಗಿ ಅವರು ಪುತ್ರಿಗೆ ಬುದ್ಧಿವಾದವನ್ನು ಹೇಳಿ ಶ್ವಶುರಗೃಹಕ್ಕೆ ಕಳುಹಿಸಿದರು. ಮಂಡನಮಿಶ್ರ ಸರಸವಾಣಿಯರು ಗೃಹಸ್ಥಾಶ್ರಮವನ್ನು ಸರಿಯಾಗಿ ನಡೆಸುತ್ತ ಕೆಲವು ಕಾಲವನ್ನು ಕಳೆದರು. ಇವರ ವಿದ್ಯಾಪ್ರಾವೀಣ್ಯವು ಲೋಕದಲ್ಲೆಲ್ಲ ಪ್ರಸರಿಸಲು, ಆದಿ ಶಂಕರಾಚಾರ್ಯರು ಇವರ ಕೀರ್ತಿಯನ್ನು ಕೇಳಿ ಇವರೊಡನೆ ವಾದಿಸಬೇಕು ಎಂಬ ಅಭಿಲಾಷೆಯಿಂದ ಆ ಗ್ರಾಮಕ್ಕೆ ಬಂದು ಮಂಡನಮಿಶ್ರನ ಗೃಹವು ಯಾವುದು? ಎಂದು ನೀರು ತರುತಲಿದ್ದ ಯುವತಿಯರನ್ನು ಪ್ರಶ್ನಿಸಿದರು. ಅದಕ್ಕೆ ಆ ಯುವತಿಯರು ಇಂತೆಂದರು:—

"ಯಾರಗೃಹದ್ವಾರದಲ್ಲಿ ಪಂಜರದಲ್ಲಿರುವ ಹೆಣ್ಣುಗಿಣಿಯು ವೇದವು ಸ್ವತಃ ಪ್ರಮಾಣವೋ ಪರತಃ ಪ್ರಮಾಣವೋ ಎಂದು ಚರ್ಚಿಸುತಲಿರುವುದೋ ಆ ಗೃಹವೇ ಮಂಡನಮಿಶ್ರನದು ಎಂದು ತಿಳಿ."

"ಪೂರ್ವಕೃತ ಕರ್ಮದಿಂದ ನಾವು ಈಗ ಮಾಡುವಕಾರ್ಯಕ್ಕೆ ಫಲವು ಸಂಭವಿಸುವುದೋ ಅಥವಾ ಪುರುಷಪ್ರಯತ್ನದಿಂದಲೇ ಫಲವು ಸಂಭವಿಸುವುದೋ ಎಂದು ಯಾರ ಗೃಹದ್ವಾರದಲ್ಲಿ ಪಂಜರಸ್ಥಗಳಾದ ಶುಕಯುವತಿಗಳು ವಾದಿಸುತಲಿರುವವೋ ಅದೇ ಮಂಡನ ಪಂಡಿತನ ಮನೆ ಎಂದು ತಿಳಿ."

"ಜಗತ್ತು ನಿತ್ಯವಾದುದೋ ಅನಿತ್ಯವಾದುದೋ ಎಂದು ಯಾವ ಗೃಹದ ಸಿಂಹದ್ವಾರದಲ್ಲಿ ಪಂಜರದಲ್ಲಿರುವ ಹೆಣ್ಣುಅರಗಿಣಿಗಳು ಮಾತನಾಡುತಲಿರುವವೋ ಆ ಗೃಹವೇ ಮಂಡನ ಮಿಶ್ರನದು ಎಂದು ತಿಳಿ."

ಅವರ ಮಾತುಗಳನ್ನು ಕೇಳಿ ಶಂಕರಾಚಾರ್ಯರು ಅಲ್ಲಿಗೆ ಹೋಗಿ ಮಂಡನ ಮಿಶ್ರನಿಂದ ವಾದಭಿಕ್ಷೆಯನ್ನು ಅಪೇಕ್ಷಿಸಿದರು. ಅನಂತರ ಸಮಸ್ತ ವಿದ್ಯಾ ವಿಶಾರದಳಾದ ಸರಸವಾಣಿಯನ್ನು ಸಭಾಧ್ಯಕ್ಷಳನ್ನಾಗಿ ನಿಯಮಿಸಿ, ಅವರಿಬ್ಬರೂ ವಾದವಿವಾದಗಳಿಗೆ ಉದ್ಯುಕ್ತರಾದರು.

ಕೆಲವು ದಿವಸಗಳು ವಾದವು ನಡೆದಮೇಲೆ ಮಂಡನಮಿಶ್ರನು ಸೋತು ಹೋಗಲು, ಶಂಕರಾಚಾರ್ಯರು ಆತನಿಗೆ ಸನ್ಯಾಸವನ್ನು ಕೊಡಲು ಸಿದ್ಧರಾದರು. ಆಗ ಸರಸವಾಣಿಯು ಆಚಾರ್ಯರೊಡನೆ ಇಂತೆಂದಳು:—

"ಎಲೈ ಯತಿಶ್ರೇಷ್ಠನೆ! ನಿನ್ನ ಉದ್ದೇಶವನ್ನು ನಾನು ತಿಳಿದೆನು. ನೀನು ನನ್ನ ಪತಿಯನ್ನು ಗೆದ್ದೆಯಾದಕಾರಣ ಆತನನ್ನು ನಿನ್ನ ಶಿಷ್ಯನಾಗಿ ಮಾಡಿಕೊಳ್ಳುವುದು ನ್ಯಾಯವೇ ಹೌದು. ಆದರೆ ನೀನು ಆತನನ್ನು ಸಂಪೂರ್ಣವಾಗಿ ಗೆಲ್ಲಲಿಲ್ಲ. ಆತನ ಅರ್ಧಾಂಗಿಯಾದ ನನ್ನನ್ನು ಗೆದ್ದರೆ ನೀನು ಸಂಪೂರ್ಣವಾಗಿ

ಜಯಿಸಿದಂತಾಗುವುದು. ನೀನು ಮಹಾಪುರುಷನಾದರೂ ನಿನ್ನೊಡನೆ ವಾದಿಸ ಬೇಕು ಎಂಬ ಅಭಿಲಾಷೆಯು ಎನಗೆ ಅತಿಶಯವಾಗಿದೆ."

ಶಂಕರಾಚಾರ್ಯರು:—ನಿನ್ನ ಅಭಿಲಾಷೆಯು ನೆರವೇರುವುದು ಅಸಾಧ್ಯ. ಮಹಾಪುರುಷರು ಸ್ತ್ರೀಯರೊಡನೆ ವಾದಿಸುವುದಿಲ್ಲ.

ಸರಸವಾಣಿ:—ಸ್ವಮತವನ್ನು ಸ್ಥಾಪಿಸಬೇಕು ಎಂದು ಎಣಿಸುವವರು, ತಮ್ಮ ಮತವನ್ನು ಖಂಡಿಸುವವರು ಸ್ತ್ರೀಯರಾದರೂ, ಪುರುಷರಾದರೂ ಅವ ರೊಡನೆ ವಾದಿಸಿ, ಅವರನ್ನು ಪರಾಜಿತರನ್ನಾಗಿ ಮಾಡುವುದು ಅವಶ್ಯಕ. ಅದ ರಿಂದಲೇ ಪೂರ್ವದಲ್ಲಿ ಯಾಜ್ಞವಲ್ಕ್ಯನು ಗಾರ್ಗಿಯೊಡನೆಯೂ, ಜನಕನು ಸುಲಭೆ ಯೊಡನೆಯೂ ವಾದವನ್ನು ಮಾಡಿದರು.

ಸರಸವಾಣಿಯು ನುಡಿದ ಯುಕ್ತಿವಾದದಿಂದಲೂ, ಪೂರ್ವೋದಾಹರಣೆ ಯಿಂದಲೂ ಕುಂಠಿತರಾಗಿ ಶಂಕರಾಚಾರ್ಯರು ಆಕೆಯೊಡನೆ ಸಭೆಯಲ್ಲಿ ವಾದಿ ಸಲು ಒಪ್ಪಿಕೊಂಡರು.

ಪರಸ್ಪರ ಜಯೋತ್ಸುಕರಾದ ಸರಸವಾಣೀ ಶಂಕರರು ತಮ್ಮ ಬುದ್ಧಿ ಚಾತುರ್ಯದಿಂದ ರಚಿಸಿದ ಶಬ್ದ ಎಂಬ ಅಮೃತದಿಂದ ಕೇಳುವವರು ವಿಸ್ಮಯ ರಾಗುವಂತೆ ಅತ್ಯದ್ಭುತವಾಗಿ ವಾದಿಸಲು ಪ್ರಾರಂಭಿಸಿದರು.

ಅಸಮಾನ ವಿದ್ಯಾವಂತರಾದ ಸರಸವಾಣೀ ಶಂಕರರಿಗೆ ಹದಿನೇಳು ಅಹೋ ರಾತ್ರಿಗಳು ವಾದವಿವಾದಗಳು ನಡೆದು ಕೊನೆಗೆ ಸರಸವಾಣಿಯ ಪ್ರಶ್ನೆಗೆ ಸದುತ್ತರವನ್ನು ಕೊಡಲಾರದೆ, ಶಂಕರಾಚಾರ್ಯರು ಆಕೆಯಿಂದ ಆರು ತಿಂಗಳು ವ್ಯವಧಿಯನ್ನು ಕೇಳಿಕೊಂಡು ಹೋಗಿ ಇನ್ನು ಸ್ವಲ್ಪ ವಿದ್ಯಾಭ್ಯಾಸವನ್ನುಮಾಡಿ, ಪುನಃ ಬಂದು ಆಕೆಗೆ ಸಮಾಧಾನವನ್ನು ಕೊಟ್ಟರು. ಅನಂತರ ಮಂಡನ ಮಿಶ್ರನು ಸನ್ಯಾಸವನ್ನು ಸ್ವೀಕರಿಸಲು ಸರಸವಾಣಿಯು ಸ್ವರ್ಗಕ್ಕೆ ಹೋದಳು.

ಈ ಸರಸವಾಣಿಯ ಚರಿತ್ರೆಯಿಂದ ಆಕೆಯ ಕಾಲದಲ್ಲಿ ಹಿಂದೂ ಸುಂದರಿ ಯರು ಮಹಾ ವಿದ್ವಾಂಸರೊಡನೆ ವಾದಮಾಡುವಷ್ಟು ಉತ್ತಮ ಪಂಡಿತೆಯ ರಾಗಿದ್ದರು ಎಂದು ತಿಳಿಯಬರುತ್ತದೆ. ಮತ್ತು ಆ ಕಾಲದಲ್ಲಿ ಬ್ರಾಹ್ಮಣರಲ್ಲಿ ಸಹ ಅಜ್ಞಾನಿಗಳಾದ ಬಾಲ ಬಾಲಕಿಯರಿಗೆ ಅವರ ತಾಯಿ ತಂದೆಗಳು ತಮ್ಮ ಸಮ್ಮತಿಯಂತೆ ವಿವಾಹವನ್ನು ಮಾಡುವ ಆಚಾರವಿಲ್ಲದೆ, ಕನ್ಯಾವರರು ಯುಕ್ತ ವಯಸ್ಕರಾದ ಅನಂತರ ಅವರ ಅಭೀಷ್ಟವನ್ನು ಅನುಸರಿಸಿ ವಿವಾಹಗಳನ್ನು ನಡೆಸುತಲಿದ್ದರೆಂದು ತಿಳಿಯಬರುತ್ತದೆ. ಆ ಕಾಲದಲ್ಲಿ ಅಷ್ಟು ಉನ್ನತ

ಸ್ಥಿತಿಯಲ್ಲಿದ್ದ ಮಹಿಳೆಯರ ಸಂತತಿಯವರಾದ ಪ್ರಸ್ತುತ ರಮಣಿಯರು ತಮ್ಮ ದುರ್ದೆಶೆಯನ್ನೇ ತಿಳಿದುಕೊಳ್ಳಲಾರದಷ್ಟು ಅಜ್ಞಾನಿಗಳಾಗಿರುವುದು ಅತ್ಯಂತ ಶೋಚನೀಯವಾದುದಾಗಿದೆ.

ಚಾಂದಬೀಬಿ.

ಈ ಶೂರನಾರಿಯು ನಿಜಾಮ್ ಶಾಹಿಯಲ್ಲಿ ಮೂರನೆಯ ಪುರುಷನಾದ ಹುಸೇನ್‌ನಿಜಾಮ್‌ಶಹನ ಪುತ್ರಿ. ಆದಿಲ್‌ಶಾಹಿಯಲ್ಲಿ ನಾಲ್ಕನೆಯ ಪುರುಷನಾದ ಅಲ್ಲೀ ಆದಿಲ್‌ಷಹನ ಪತ್ನಿ. ಇವರಿಬ್ಬರಿಗೂ ಪರಸ್ಪರ ಕಲಹಗಳು ಉಂಟಾಗಿತ್ತು. ಆದರೆ ಅಹಮ್ಮದ್ ನಗರ, ಬಿಜಾಪುರ, ಗೋಲಕೊಂಡದ ನವಾಬರು ಒಂದಾಗಿ ವಿಜಯನಗರದಮೇಲೆ ದಂಡೆತ್ತಲು ನಿಶ್ಚಯಿಸಿಕೊಂಡ ಕಾಲದಲ್ಲಿ, ಅಹಮ್ಮದ್ ನಗರದ ಒಡೆಯನಾದ ಹುಸೇೈಷಹನು, ಬಿಜಾಪುರದ ನವಾಬನಾದ ಅಲ್ಲೀಷಹನೊಡನೆ ಸಖ್ಯವನ್ನು ಮಾಡಿಕೊಳ್ಳುವುದಕ್ಕಾಗಿ ತನ್ನ ಮಗಳಾದ ಚಾಂದಬೀಬಿಯನ್ನು ಆತನಿಗೆ ಕೊಟ್ಟು ವಿವಾಹಮಾಡಿದನು. ಅನಂತರ ಕ್ರೀ.ಶ. ೧೫೬೫ ನೆ ಇಸವಿಯಲ್ಲಿ ತಾಳಿಕೋಟಿಯಲ್ಲಿ ಮಹಮ್ಮದೀಯರಿಗೂ, ವಿಜಯನಗರಾಧಿಪತಿಯಾದ ರಾಮರಾಜನಿಗೂ ಯುದ್ಧವು ನಡೆದು ವಿಜಯನಗರ ಸಂಸ್ಥಾನವು ನಾಶವಾಯಿತು ಎಂಬುದು ಹಿಂದೂದೇಶ ಚರಿತ್ರೆಯನ್ನು ಓದಿದವರಿಗೆ ತಿಳಿದಿದೆ. ಆದರೆ ಪಾಠಕರ ಸೌಲಭ್ಯಾರ್ಥವಾಗಿ ಪ್ರಸ್ತುತ ಚರಿತ್ರೆಗೆ ಸಂಬಂಧಿಸಿದ ವಿಷಯವನ್ನು ಸಂಗ್ರಹವಾಗಿ ತಿಳಿಸುವೆನು.

ಕ್ರೀ.ಶ. ೧೩೨೬ ನೆಯ ಇಸವಿಯಲ್ಲಿ ಬ್ರಾಹ್ಮಣೀ ರಾಜ್ಯ ಎಂಬ ತುರುಷ್ಕ ರಾಜ್ಯವು ಅಂತ್ಯದೆಶೆಗೆ ಬಂದಿತು. ಆಗ ದಕ್ಷಿಣದಲ್ಲಿ ಐದುಜನಯವನರು ಸ್ವತಂತ್ರ ರಾದರು. ಅವರಲ್ಲಿ ಬಿಜಾಪುರ ರಾಜ್ಯವನ್ನು ಆಳುವವರು "ಆದಿಲ್‌ಷಹ" ಗಳೆಂತಲು, ಗೋಲಕೊಂಡ ರಾಜ್ಯವನ್ನು ಪಾಲಿಸುವವರು "ಕುತುಬ್‌ಷಹ" ಗಳೆಂತಲು, ಬೀರಾರ್ ನವಾಬರನ್ನು "ಇಮಾದ್‌ಷಹ" ಗಳೆಂತಲು, ಅಹಮ್ಮದ್ ನಗರದ ಪ್ರಭುಗಳನ್ನು "ನಿಜಾಮ್‌ಷಹ" ಗಳೆಂತಲು, ಅಹಮದಾಬಾದ್ ಪಾಲಕರನ್ನು "ಬರೀದ್‌ಷಹ" ಗಳೆಂತಲು ಕರೆಯುತಲಿದ್ದರು. ಕೆಲವು ದಿವಸ ಗಳಿಗೆ "ಇಮಾದ್‌ಶಾಹಿ" "ಬರೀದ್‌ಶಾಹಿ" ಗಳು ನಾಶವಾದವು. ಮಿಕ್ಕ ಮೂರು ಶಾಹಿಗಳು ನಿಂತಿದ್ದವು. ಶಾಹಿಯೆಂದರೆ ರಾಜ್ಯವೆಂತಲು, ಷಹ ಎಂದರೆ ರಾಜನೆಂತಲು ಅರ್ಥ.

ಚಾಂದಬೀಬಿಯ ಪತಿಯಾದ ಅಲ್ಲಿಯು ಭೋಗಾಸಕ್ತನಾಗಿ ರಾಜ್ಯ ವಿಷಯಗಳಲ್ಲಿ ಸ್ವಲ್ಪವೂ ದೃಷ್ಟಿಯಿಡದೆ ಕಾಲವನ್ನು ಕಳೆಯುತಲಿದ್ದನು. ಕ್ರಿ.ಶ. ೧೫೮೦ ನೆಯ ಇಸವಿಯಲ್ಲಿ ಒಂದುದಿವಸ ಆತನು ಅಜಾಗರೂಕನಾಗಿರಲು ಒಬ್ಬನು ಆಕಸ್ಮಿಕವಾಗಿ ಆತನನ್ನು ಕೊಂದನು. ಅನಂತರ ಆತನ ತಮ್ಮನ ಮಗನಾದ ಎರಡನೆಯ ಇಬ್ರಾಹಿಮ್ ಆದಿಲ್‌ಷಹನು ಸಿಂಹಾಸನಾರೂಢನಾದನು. ಆತನು ಒಂಭತ್ತುವರ್ಷದ ಬಾಲಕನಾದುದರಿಂದ ಅವನ ದೊಡ್ಡ ತಾಯಿಯಾದ ಚಾಂದಬೀಬಿಯು ಅಮಿರ್‌ಖಾನ್ ಎಂಬ ಮಂತ್ರಿಯ ಸಹಾಯದಿಂದ ರಾಜ್ಯವನ್ನು ಪಾಲಿಸುತಲಿದ್ದಳು. ಕೆಲವು ದಿವಸಗಳಿಗೆ ಅಮಿರ್‌ಖಾನನಿಗೆ ರಾಜ್ಯಕಾಂಕ್ಷೆಯು ಹೆಚ್ಚಾದುದನ್ನು ಕಂಡು, ಚಾಂದಬೀಬಿಯು ಈಶ್ವರಖಾನ್ ಎಂಬವನ ಸಹಾಯದಿಂದ ಅವನನ್ನು ಕೊಂದು ಈಶ್ವರಖಾನನಿಗೆ ಮಂತ್ರಿತ್ವವನ್ನು ಕೊಟ್ಟಳು. ಆದರೆ ಕೆಲವುಕಾಲಕ್ಕೆ ಈಶ್ವರಖಾನನು ಸಹ ಕೃತಘ್ನನಾಗಿ ಚಾಂದಬೀಬಿಯಮೇಲೆ ಕೆಲವು ದೋಷಗಳನ್ನು ಆರೋಪಿಸಿ, ಆಕೆಯನ್ನು ಸಾತಾರ ಕೋಟೆಯಲ್ಲಿ ನಿರ್ಬಂಧದಲ್ಲಿಟ್ಟನು. ಅವನು ಚಾಂದಬೀಬಿಯನ್ನು ಖೈದಿನಲ್ಲಿಟ್ಟಮೇಲೆ ರಾಜ್ಯದಲ್ಲೆಲ್ಲ ಸಂಕ್ಷೋಭವನ್ನು ಉಂಟುಮಾಡಲು, ಯೆಕ ಸಾಲ್‌ಖಾನ್ ಎಂಬೊಬ್ಬ ಸಿದ್ದೀ ಸರದಾರನು ಬಂದು ಈಶ್ವರಖಾನನನ್ನು ಓಡಿಸಿ, ಚಾಂದಬೀಬಿಯನ್ನು ಸೆರೆಯಿಂದ ಬಿಡಿಸಿದನು. ಅನಂತರ ಬೀಬಿಯು ಯೆಕ ಸಾಲ್‌ಖಾನನನ್ನೇ ವಜೀರನಾಗಿ ನಿಯಮಿಸಿಕೊಂಡು ರಾಜ್ಯಾಡಳಿತಗಳನ್ನು ನೆರವೇರಿಸುತಲಿದ್ದಳು. ಈ ವಜೀರನು ಹಳೆ ನೌಕರರನ್ನು ತೆಗೆದು ಹೊಸ ನೌಕರರನ್ನು ನಿಯಮಿಸಿದನು. ಆಕಾಲದಲ್ಲಿ ಬಿಜಾಪುರದ ಪ್ರಜೆಗಳು ಮಂತ್ರಿತ್ವವನ್ನು ಉನ್ ಉಲ್‌ಮುಲ್ಕ್ ಸಿದ್ದಿ ಎಂಬವನಿಗೆ ಕೊಡಬೇಕೆಂದು ಕೆಲವರೂ, ಅಬ್ದುಲ್‌ಹಸನ್ ಎಂಬ ದಕ್ಷಿಣ ತುರುಷ್ಕನಿಗೆ ಕೊಡಬೇಕೆಂದು ಕೆಲವು ಜನರೂ ಅಭಿಪ್ರಾಯವುಳ್ಳವರಾಗಿದ್ದರು. ರಾಜ್ಯದಲ್ಲಿ ಈ ವಿಧನಾಗಿ ಅಂತಃ ಕಲಹಗಳುಂಟಾಗಿರುವ ಸಮಯದಲ್ಲಿ ಮೂರ್ತಿಜಾ ನಿಜಾಮ್ ಷಹ, ಕುಲೀ ಕುತುಬ್ ಷಹಗಳು ಇಬ್ಬರೂ ಅಹಮ್ಮದ್ ನಗರದಮೇಲೆ ದಂಡೆತ್ತಿಬಂದರು.

ಪ್ರಜೆಗಳಲ್ಲಿ ಐಕ್ಯಮತ್ಯ ಲೇಶವು ಇಲ್ಲದುದರಿಂದ ಆ ಸಮಯವು ವೈರಿಗಳಿಗೆ ಅನುಕೂಲವಾಗಿತ್ತು. ಆಗ ಚಾಂದಬೀಬಿಯು ಅಬ್ದುಲ್ ಹಸನನಿಗೆ ಮಂತ್ರಿತ್ವವನ್ನು ಕೊಟ್ಟು, ಯುಕ್ತಿಯಿಂದ ಪ್ರಜೆಗಳನ್ನು ಸಮಾಧಾನಪಡಿಸಿ ವೈರಿಗಳನ್ನು ಹಿಂದಿರುಗಿ ಹೋಗುವಂತೆ ಮಾಡಿದಳು. ಮೇಲೆಹೇಳಿದ ವೈರಿಗಳು ಎಲ್ಲರು ಹೊರಟು ಹೋದಮೇಲೆ ದಿಲಾರ್‌ಖಾನ್ ಎಂಬ ಸಿದ್ದಿಯು ಗರ್ವಿಸಿ ಅಬ್ದುಲ್ ಹಸನನ್ನು ಕೊಂದು ತಾನೇ ವಜೀರನಾದನು. ಒಂದುವರೆ ವರ್ಷದೊಳಗೆ ಮುವ್ವರು ಮಂತ್ರಿಗಳು ಮಡಿದರು. ದಿಲಾರ್‌ಖಾನ್ ಸಿದ್ದಿಯು ಚಾತುರ್ಯವಂತನಾದುದರಿಂದ ತನಗಿರುವ ರಾಜ್ಯಕಾಂಕ್ಷೆಯನ್ನು ಹೊರಗೆ

ತೋರದೆ ರಾಜ್ಯವನ್ನು ಚನ್ನಾಗಿ ಪಾಲಿಸುತಲಿದ್ದನು. ಆದರೆ ಚಾಂದಬೀಬಿಯು ಅಲ್ಲಿರುವವರೆಗೂ ತನ್ನ ಆಟಗಳು ನಡೆಯಲಾರವು ಎಂದರಿತು, ಇಬ್ರಾಹಿಂ ಆದಿಲ್‌ಷಹನ ತಂಗಿಯಾದ ಖುದೀಜಾ ಸುಲ್ತಾನಾ ಎಂಬ ರಾಜಪುತ್ರಿಯನ್ನು ಮೂರ್ತಿಜಾ ನಿಜಾಮ್‌ಷಹನ ಮಗನಾದ ಮಿರಾನ್‌ಹುಸೇನನಿಗೆ ಕೊಡಿಸಿ, ಕ್ರೀ.ಶ. ೧೫೮೪ನೆಯ ಇಸವಿಯಲ್ಲಿ ಖುದೀಜಾ ಸುಲ್ತಾನಾ ಸಂಗಡ ಚಾಂದಬೀಬಿಯನ್ನು ನಿಜಾಮ್‌ಶಾಹಿಗೆ ಕಳುಹಿಸಿ ಬಾಲರಾಜನನ್ನು ಆಶ್ರಯಹೀನನಾಗಿ ಮಾಡಿದನು.

ಚಾಂದಬೀಬಿಯು ನಿಜಾಮ್‌ಶಾಹಿಗೆ ಬಂದು ಐದಾರುವರ್ಷಗಳು ಕಳೆದವು. ಇಷ್ಟರೊಳಗೆ ಮೂರ್ತಿಜಾ ನಿಜಾಮ್‌ಷಹನನ್ನೂ, ಆತನ ಮಗನಾದ ಮಿರಾನ್ ಹುಸೇನನನ್ನೂ ಆತನ ಚಿಕ್ಕಪ್ಪನ ಮಗನಾದ ಪುರಾಣಸಹಾ ಎಂಬವನು ಕೊಂದು ತಾನೇ ರಾಜ್ಯವನ್ನಾಳುತಲಿದ್ದನು. ಇವನ ಅನಂತರ ಇವನ ಮಗನಾದ ಇಸ್ಮಾಯೆಲ್‌ಷಹ ಎಂಬವನೂ, ಅನಂತರ ಅವನ ತಮ್ಮನಾದ ಇಬ್ರಾಹಿಮ್ ನಿಜಾಮ್‌ಷಹ ಎಂಬವನೂ ರಾಜ್ಯವನ್ನಾಳಿದರು. ಈತನ ಮರಣಾನಂತರ ಅವನ ಪುತ್ರನಾದ ಬಹದುರನನ್ನು ಕಾರಾಗೃಹದಲ್ಲಿಟ್ಟು, ಮಿಆನ್ ಎಂಬ ದಕ್ಷಿಣ ತುರುಷ್ಕ ಮಂತ್ರಿಯು ನಿಜಾಮ್‌ಶಾಹಿ ಯೊಳಗಿನವನು ಎಂದು ಕರೆಯಲ್ಪಡುತ ಲಿದ್ದ ಅಹಮ್ಮದ್ ಎಂಬುವನನ್ನು ಸಿಂಹಾಸನದಮೇಲೆ ಕುಳ್ಳಿರಿಸಿ ತಾನೇ ರಾಜ್ಯ ವನ್ನು ಆಳಲು ಪ್ರಾರಂಭಿಸಿದನು. ಈ ಅಹಮ್ಮದನಿಗೆ ರಾಜ್ಯವನ್ನು ಕೊಡುವುದು ಸಿದ್ದೀಸರದಾರರಿಗೆ ಇಷ್ಟವಿಲ್ಲದುದರಿಂದ ಅವರು ಬಹದುರನ ಸಮವಯಸ್ಕ ನಾದ ಒಬ್ಬ ಬಾಲಕನನ್ನು ತಂದು ಅವನೇ ರಾಜನು ಎಂದು ಹೇಳಲಾರಂಭಿ ಸಿದರು. ಈ ವಿಧವಾಗಿ ಪ್ರಜೆಗಳು ಎರಡು ಪಕ್ಷಗಳಾಗಿ ಸೈನ್ಯಸಹಿತರಾಗಿರುವು ದನ್ನು ಕಂಡು ಮಿಆನ್‌ಮುಂಜೂ ಬಹಳ ಚಿಂತಿಸಿ ಅಕ್ಬರ್ ಬಾದಷಹನ ಮಗನಾದ ಮುರಾದನಿಗೆ ನೀವು ನನಗೆ ಸಹಾಯ ಮಾಡಿದರೆ ಅಹಮ್ಮದ್ ನಗರವನ್ನು ನಿಮ್ಮ ಸ್ವಾಧೀನಮಾಡುವೆನು ಎಂದು ವರ್ತಮಾನವನ್ನು ಕಳುಹಿ ಸಿದನು. ಆದರೆ ಮುರಾದನು ಅಹಮ್ಮದ್ ನಗರವನ್ನು ಪ್ರವೇಶಿಸುವುದರೊಳಗೆ ಅಹಮ್ಮದ್ ನಗರದಲ್ಲಿರುವ ಉಭಯ ಪಕ್ಷದವರಿಗೂ ಯುದ್ಧವು ನಡೆದು ಸಿದ್ದಿಗಳನ್ನು ಮಿಆನ್‌ಮುಂಜೂ ಸೋಲಿಸಿದನು. ಅದರಿಂದ ತಾನು ನುಡಿದ ಪ್ರಕಾರ ಮುರಾದನಿಗೆ ರಾಜ್ಯವನ್ನು ಕೊಡಲು ಅವನು ಒಪ್ಪಲಿಲ್ಲ. ಅದರ ಮೇಲೆ ಮುರಾದನು ಯುದ್ಧಸನ್ನದ್ಧನಾದನು. ಆ ಸಮಯದಲ್ಲಿ ಮಿಆನ್ ಮುಂಜೂ ತನ್ನ ಸೈನ್ಯದೊಡನೆ ಆದಿಲ್‌ಷಹ, ಕುತುಬ್‌ಷಹರನ್ನು ಸಹಾಯಕ್ಕೆ ಕರೆತರಲು ಹೋದನು. ಆತನು ಹೋದಮೇಲೆ ಬಹದುರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಚಾಂದಬೀಬಿಯು ರಾಜ್ಯವನ್ನು ಪಾಲಿಸುತಲಿದ್ದಳು.

ಆ ಸಮಯದಲ್ಲಿ ಇಬ್ಬರು ಮುವ್ವರು ರಾಜ್ಯವು 'ತಮಗೇ ಬರಬೇಕೆಂದು ಹೇಳುತಲಿದ್ದುದರಿಂದ ಪ್ರಜೆಗಳು ಎರಡು ಮೂರು ಪಕ್ಷಗಳಾಗಿದ್ದರು. ಆದರೂ

ಚಾಂದಬೀಬಿಯು ದೃಢನಿಶ್ಚಯಳಾಗಿ ನೇಹಾಂಗಖಾನನಿಗೂ, ಅಲ್ಲೀ ಸಿದ್ದಿಗೂ, ರಾಜಧಾನಿಗೆ ಬರುವಂತೆ ವರ್ತಮಾನವನ್ನು ಕಳುಹಿದಳು. ಆಕೆಯ ಆಜ್ಞೆಯಂತೆ ಅವರಿಬ್ಬರೂ ಬರುತಿರಲು ದಾರಿಯಲ್ಲಿ ಶತ್ರುಗಳು ಅಡ್ಡಗಿಸಿದರು. ನೇಹಾಂಗಖಾನನು ಮಾತ್ರ ಉಪಾಯದಿಂದ ಶತ್ರುಸೈನ್ಯದಲ್ಲಿ ಮಾರ್ಗವನ್ನು ಮಾಡಿಕೊಂಡು ರಾಜಧಾನಿಯನ್ನು ಪ್ರವೇಶಿಸಿದನು

ಆದಿಲ್‌ಷಹ, ಕುತುಬ್‌ಷಹರು ಮುರಾದನ ಬರುವಿಕೆಯನ್ನು ಕೇಳಿ, ಮುರಾದನು ಪ್ರಥಮದಲ್ಲಿ ನಿಜಾಮ್‌ಶಾಹಿಯನ್ನು ಗೆದ್ದು ಅನಂತರ ತಮ್ಮ ರಾಜ್ಯಗಳಮೇಲೆ ದಂಡೆತ್ತಿ ಬರಬಹುದೆಂದು ಎಣಿಸಿ ತಮ್ಮ ಸೈನ್ಯಗಳೊಡನೆ ನಿಜಾಮ್‌ಶಾಹಿಗೆ ಬರುತಲಿದ್ದರು. ಮುರಾದನು ಅವರೆಲ್ಲರು ಬಂದರೆ ತನಗೆ ಜಯವು ಉಂಟಾಗುವುದು ದುರ್ಲಭವು ಎಂದರಿತು, ಅವರು ಬರುವದರೊಳಗೆ ಗ್ರಾಮವನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಗ್ರಾಮಕ್ಕೆ ಮುತ್ತಿಗೆ ಹಾಕಿದನು. ಅವನ ಸೈನಿಕರು ಬುರುಜುಗಳಿಗೆ ರಂಧ್ರವನ್ನು ಮಾಡಿ ಮದ್ದನ್ನು ತುಂಬಿ ಅದಕ್ಕೆ ಬೆಂಕೆಯನ್ನಿಟ್ಟು ಬುರುಜುಗಳನ್ನು ಸುಡಲು ಪ್ರಯತ್ನಿಸುತಲಿದ್ದರು. ಚಾತುರ್ಯವತಿಯಾದ ಚಾಂದಬೀಬಿಯು ಒಳಗಿನಿಂದ ಹೊರಗಿನವರೆಗೂ ರಂಧ್ರವನ್ನು ಮಾಡಿಸಿ ಅವರು ತುಂಬಿದ ಮದ್ದನ್ನೆಲ್ಲ ಈಚೆಗೆ ತೆಗೆಯಿಸುತಲಿದ್ದಳು. ಆದರೆ ಮೊಗಲರು ಒಂದು ಬುರುಜಿಗೆ ಮದ್ದನ್ನು ತುಂಬಿ ಬೆಂಕೆಯನ್ನು ಹಚ್ಚಿದರು. ಆ ಬುರುಜಿನ ಸಮೇತವಾಗಿ ಅನೇಕರು ನಾಶವಾದರು. ಆ ಮಾರ್ಗದಿಂದ ಶತ್ರುಗಳು ನಗರವನ್ನು ಪ್ರವೇಶಿಸಲು ಪ್ರಯತ್ನಿಸಲು ನಿಜಾಮ್‌ಶಾಹಿಯ ಸೈನಿಕರು ಓಡಲಾರಂಭಿಸಿದರು. ಆಗ ಚಾಂದಬೀಬಿಯು ಧೈರ್ಯದೊಡನೆ ಖಡ್ಗವನ್ನು ತೆಗೆದುಕೊಂಡು, ಕವಚವನ್ನು ಧರಿಸಿ ಮುಖವನ್ನಾಚ್ಛಾದಿಸಿಕೊಂಡು "ನನ್ನ ದೇಹದಲ್ಲಿ ಪ್ರಾಣವಿರುವವರೆಗೂ ಪಟ್ಟಣವನ್ನು ಶತ್ರುವಶಮಾಡಲಾರೆನು" ಎಂದು ಹೇಳುತ್ತ ಬಿದ್ದುಹೋದ ಬುರುಜಿನಕಡೆಗೆ ಓಡಿದಳು. ಅದನ್ನು ನೋಡಿ ಸೈನಿಕರು ಧೈರ್ಯವನ್ನು ವಹಿಸಿ ಹಿಂತಿರುಗಿ ಬಂದು ಶತ್ರುಗಳೊಡನೆ ಯುದ್ಧ ಮಾಡ ತೊಡಗಿದರು. ಆ ದಿವಸವೆಲ್ಲ ಯುದ್ಧವು ನಡೆಯಿತು. ಆದರೂ ಚಾಂದ ಬೀಬಿಯು ಶತ್ರುಗಳನ್ನು ಪಟ್ಟಣದೊಳಕ್ಕೆ ಬಿಡದೆ, ಬಹುಶೌರ್ಯದೊಡನೆ ಶತ್ರುಗಳನ್ನು ತಡೆದಳು. ಆ ಸಮಯದಲ್ಲಿ ಆಕೆಯ ಶೌರ್ಯವನ್ನು ನೋಡಿ ಶತ್ರುಗಳು ಸಹ ವಿಸ್ಮಯರಾದರೆಂದು ಪ್ರತ್ಯಕ್ಷವಾಗಿ ನೋಡಿದವರು ವರ್ಣಿಸಿದಾರೆ. ಮುರಾದನು ಚಾಂದಬೀಬಿಯನ್ನು ಗೆಲ್ಲುವುದು ದುಸ್ತರವು ಎಂದೆಣಿಸಿ "ನಮಗೆ ಬೀರಾರ್ ಪ್ರಾಂತ್ಯವನ್ನು ಕೊಟ್ಟರೆ ನಮ್ಮ ದೇಶಕ್ಕೆ ಹೋಗುವೆವು" ಎಂದು ಹೇಳಿ ಕಳುಹಿಸಿದನು. ತಮ್ಮ ಸಹಾಯಕ್ಕೆ ಯಾರಸೈನ್ಯವೂ ಶೀಘ್ರವಾಗಿ ಬರುವಂತೆ ತೋರದಕಾರಣ, ಚಾಂದಬೀಬಿಯು ಬೀರಾರ್ ಪ್ರಾಂತ್ಯವನ್ನು ಕೊಟ್ಟು ಸಂಧಿಯನ್ನು ಮಾಡಿಕೊಂಡಳು.

ಅನಂತರ ಬಹದುರನನ್ನು ಕಾರಾಗೃಹದಿಂದ ಬಿಡಿಸಿ ಆತನಿಗೆ ಪಟ್ಟಾಭಿಷೇಕವನ್ನು ಮಾಡಿ ಅಹಮ್ಮದ್‌ಖಾನ್ ಎಂಬವನಿಗೆ ದಿವಾಣಗಿರಿಯನ್ನು ಕೊಟ್ಟು ತಾನು ರಾಜ್ಯತಂತ್ರಗಳನ್ನು ನಡೆಸುತಲಿದ್ದಳು. ಕೆಲವು ದಿವಸಗಳಿಗೆ ಆತನಿಗೆ ರಾಜ್ಯಕಾಂಕ್ಷೆಯು ಹೆಚ್ಚಾದುದರಿಂದ ಆತನು ಚಾಂದಬೀಬಿಯನ್ನು ಲಕ್ಷ್ಯ ಮಾಡುತಲಿರಲಿಲ್ಲ. ಈ ವಿಷಯವು ಸೈನಿಕರಿಗೆ ತಿಳಿಯಬರಲು ಅವರು ಅಹಮ್ಮದ್‌ಖಾನನನ್ನು ಬಂಧಿಸಿ ಚಾಂದಬೀಬಿಯ ವಶಮಾಡಿದರು. ಆಮೇಲೆ ಆ ಕೆಲಸವನ್ನು ನೇಹಾಂಗಖಾನನಿಗೆ ವಹಿಸಲು ಆತನೂ ಕೆಲವು ದಿವಸಗಳಿಗೆ ಚಾಂದಬೀಬಿಗೆ ವೈರಿಯಾದನು. ಈ ಸಮಯದಲ್ಲಿಯೇ ಷಹಾಪುರದಲ್ಲಿ ಮುರಾದನು ಕಾಲವಾದನು. ಆಗ ಅಕ್ಬರ್‌ಬಾದಷಹನು ತನ್ನ ಚಿಕ್ಕಮಗನಾದ ಡಾನಿಯಲ್ ಎಂಬವನನ್ನು ಮುರಾದನಿಗೆ ಬದಲಾಗಿ ಕಳುಹಿ ಖಾನ್‌ಖಾನ್ ಎಂಬವನಿಗೆ ಮಂತ್ರಿತ್ವವನ್ನು ಕೊಟ್ಟನು. ಆಮೇಲೆ ಅಕ್ಬರನು ಕ್ರೀ.ಶ. ೧೬೦೯ ರಲ್ಲಿ ಬೀರಾರಿಗೆ ಬಂದು ಡಾನಿಯಲನನ್ನು ಅಹಮ್ಮದ್ ನಗರದಮೇಲಕ್ಕೆ ಯುದ್ಧ ಮಾಡುವುದಕ್ಕೆ ಕಳುಹಿಸಿದನು.

ಈ ಸಮಯದಲ್ಲಿ ನಿಜಾಮ್‌ಶಾಹಿಯು ಅತ್ಯಂತ ಅವ್ಯವಸ್ಥೆಯಲ್ಲಿತ್ತು. ಧೀಮತಿಯಾದ ಚಾಂದಬೀಬಿಯು ರಾಜ್ಯವನ್ನು ಪಾಲಿಸುತಲಿದ್ದರೂ, ಆಕೆಗೆ ವಿಶ್ವಾಸ ಪಾತ್ರರಾದವರಾರೂ ಇಲ್ಲದಕಾರಣ ಆಕೆಯು ಏನೂ ಮಾಡಲಾರದಿದ್ದಳು. ನೇಹಾಂಗಖಾನನು ಚಾಂದಬೀಬಿಯೊಡನೆ ಆಲೋಚಿಸಿ ವೈರಿಗಳನ್ನು ಮಾರ್ಗದಲ್ಲಿ ಅಡ್ಡಗಿಸಲು ಹೋದನು. ಆದರೆ ಶತ್ರುಗಳು ಬೇರೊಂದು ಮಾರ್ಗದಿಂದ ಬಂದು ನಗರವನ್ನು ಮುತ್ತಿದರು. ಆಗ ಚಾಂದಬೀಬಿಯು ತನ್ನ ಆಜ್ಞೆಯನ್ನು ಪಾಲಿಸುವವರಾರೂ ಇಲ್ಲದಕಾರಣ ಬಾಲರಾಜನನ್ನು ಕರೆದುಕೊಂಡು ಜುನ್ನರ್ ಎಂಬ ಗ್ರಾಮಕ್ಕೆ ಹೋಗಲು ನಿಶ್ಚಯಿಸಿದಳು. ಈ ವಿಷಯವು ಆಕೆಯ ಸಮೀಪದಲ್ಲಿದ್ದ ಹಮೀದ್‌ಖಾನನಿಗೆ ಸರಿಬೀಳದೆ, ಅವನು ಚಾಂದಬೀಬಿಯು ರಾಜ್ಯವನ್ನು ಹಗೆಗಳಿಗೆ ಒಪ್ಪಿಸುತಲಿದಾಳೆ ಎಂದು ಊರಿನಲ್ಲೆಲ್ಲ ಸಾರಲು ಪ್ರಾರಂಭಿಸಿದನು. ದಕ್ಷಿಣ ತುರುಷ್ಕರು ಆ ಮಾತನ್ನು ನಿಜವೆಂದು ನಂಬಿ, ಹಮೀದನನ್ನು ಮುಂದಿಟ್ಟುಕೊಂಡು ಅಂತಃಪುರವನ್ನು ಪ್ರವೇಶಿಸಿ ನಿರ್ದಯರಾಗಿ ಚಾಂದಬೀಬಿಯನ್ನು ಸಂಹರಿಸಿದರು. ಹಿಂದೂಸ್ಥಾನದ ಚರಿತ್ರೆಯಲ್ಲಿ ಪ್ರಸಿದ್ಧಳಾದ ಈ ಶೂರ ರಮಣಿಯ ಜೀವಿತವು ಈ ಪರಿಯಾಗಿ ಮುಗಿಯಿತು.

ಈಕೆಯು ಪ್ರಥಮದಲ್ಲಿ ವೈದುನನ ಮಗನಿಗಾಗಿ ಆದಿಲ್‌ಶಾಹಿಯನ್ನು ರಕ್ಷಿಸಿದಳು. ಅನಂತರ ತಮ್ಮನ ಪೌತ್ರನಾದ ಬಹದುರನಿಗಾಗಿ ನಿಜಾಮಶಾಹಿಯನ್ನು ಬಹು ಕುಶಲತ್ವದಿಂದ ರಕ್ಷಿಸಿ, ಸರ್ವಭೌಮನಾದ ಅಕ್ಬರನ ಸೈನ್ಯಗಳನ್ನು ಸಹ ಹಿಂದಿರುಗುವಂತೆ ಮಾಡಿದಳು. ಆದರೆ ಮೂರ್ಖರಾದ ಜನರು ಆಕೆಯು

ಯೋಗ್ಯತೆಯನ್ನರಿಯದೆ ಸಂಹರಿಸಿದರು. ಈಗಲೂ ದಕ್ಷಿಣದಲ್ಲಿ ಸ್ತ್ರೀಯರ ಶೌರ್ಯವನ್ನು ಕುರಿತು ಪ್ರಸಂಗಿಸುವಾಗ ಅಲ್ಲಿನ ಜನರು ಚಾಂದಬೀಬಿಯನ್ನೇ ಪ್ರಥಮದಲ್ಲಿ ಶ್ಲಾಘಿಸುತ್ತಾರೆ.

ಧನಲಕ್ಷ್ಮಿ.

—:o:—

ಈ ಸಾಧ್ವಿಯು ಬರೋಡಾ ರಾಜ್ಯದಲ್ಲಿರುವ ಬೀಲ್ಮಾಗ್ರಾಮನಿವಾಸಿಯಾದ ಜಗನ್ನಾಥ ಲಕ್ಷ್ಮೀರಾಮನ ಸೊಸೆ. ಜೀವರಾಮನ ಪುತ್ರಿ. ಧನಲಕ್ಷ್ಮಿಯು ಅತ್ತೆಯ ಹೆಸರು ಮಹಾಕುವರು. ಈಕೆಯು ವಿದ್ಯಾವಿವೇಕ ಸಂಪನ್ನಳಾದ ಕಾರಣ ತನ್ನ ಸೊಸೆಗೂ ಸದ್ಗುಣಗಳನ್ನು ಕಲಿಸುತಲಿದ್ದಳು. ಮಗನಾದ ಗಿರಿಜಾ ಶಂಕರನಿಗೆ ಬಾಲ್ಯದಿಂದಲೂ ವಿದ್ಯಾಬುದ್ಧಿಗಳನ್ನು ಕಲಿಸಿ ಗುಣವಂತನನ್ನಾಗಿ ಮಾಡಿದಳು. ಧನಲಕ್ಷ್ಮಿಯ ವಿವಾಹಾನಂತರ ಜಗನ್ನಾಥನ ಗೌರವವು ಹೆಚ್ಚುತ ಲಿತ್ತು. ಮಹಾಕುವರು ಧನಲಕ್ಷ್ಮಿಯನ್ನು ಮಗಳಿನಂತೆ ಪ್ರೀತಿಸುತಲಿದ್ದುದ ರಿಂದ ಧನಲಕ್ಷ್ಮಿಯು ಅತ್ತೆಯನ್ನು ಬಿಟ್ಟು ತೌರುಮನೆಗೆ ಹೋಗಲು ಇಚ್ಛೈಸುತ ಲಿರಲಿಲ್ಲ. ಒಂದುವೇಳೆ ತೌರುಮನೆಯವರು ಬಲವಂತದಿಂದ ಕರೆದುಕೊಂಡು ಹೋದರೂ ಎರಡುಮೂರು ದಿವಸಗಳಿದ್ದು ಅತ್ತೆಯ ಮನೆಗೆ ಬಂದುಬಿಡುತ ಲಿದ್ದಳು. ಈಕಾಲದಲ್ಲಿ ಸೊಸೆಯರನ್ನು ಬಾಧಿಸುವ ಅತ್ತೆಯರೂ, ಅತ್ತೆಯರನ್ನು ಅವಮಾನಗೊಳಿಸುವ ಸೊಸೆಯರೂ ಇವರ ಚರಿತ್ರೆಯನ್ನು ಓದಿ ಇವರನ್ನು ಅನುಕರಿಸುವುದು ಉಚಿತವಾದುದಲ್ಲವೆ? ಯಾವ ಗೃಹದಲ್ಲಿ ಅತ್ತೆಸೊಸೆಯರು ಐಕಮತ್ಯದಿಂದ ಇರುವರೋ ಆ ಗೃಹದಲ್ಲಿ ಸುಖಕ್ಕೆ ಕುಂದುಂಟಾಗಲಾರದು. ಧನಲಕ್ಷ್ಮಿಯು ಅತ್ತೆಮಾವರ ಸೇವೆಯನ್ನು ಅನನ್ಯಭಕ್ತಿಯಿಂದ ಮಾಡುತ್ತ ಅವರಿಂದ ಆಶೀರ್ವಾದಗಳನ್ನು ಪಡೆಯುತಲಿದ್ದಳು. ಅತ್ತೆಯಂತೆಯೇ ಸದ್ಗ್ರಂಥ ಗಳನ್ನೋದಿ ಅವುಗಳಲ್ಲಿರುವ ಸಾರಾಂಶವನ್ನು ತನ್ನ ಹೃದಯದೊಳಗೆ ಭದ್ರ ಪಡಿಸುತಲಿದ್ದಳು. ಆ ಗೃಹವು ಪತಿವ್ರತೆಯರಾದ ಆ ಅತ್ತೆಸೊಸೆಯರಿಂದ ಸುಶೋಭಿತವಾಗಿ ಆನಂದಸಾಗರವೋ ಎಂಬಂತೆ ಇತ್ತು! ಆದರೆ ಸಂಕಟ ಸಮಯದಲ್ಲಿಯೇ ಪತಿವ್ರತೆಯರನ್ನು ಪರೀಕ್ಷಿಸಬೇಕು ಎಂದು ಪರಮೇಶ್ವರನು ಅವರಿಗೆ ಒಂದು ಕಷ್ಟವನ್ನುಂಟುಮಾಡಿದನು. ವಿ.ಶ. ೧೯೪೫ನೆಯ ಚೈತ್ರ ಶುದ್ಧದಲ್ಲಿ ಇವರ ಬಂಧುವಾದ ವಿಶ್ವನಾಥನ ಮನೆಯಲ್ಲಿ ಎರಡು ಮದುವೆ ಗಳು ನಡೆಯಬೇಕಾಗಿತ್ತು. ಆ ವಿವಾಹಗಳಿಗಾಗಿ ಗಿರಿಜಾಶಂಕರನೂ, ಧನ

ಲಕ್ಷ್ಮಿಯೂ ಹೋದರು. ವಿವಾಹಗಳು ಖಂಬಾತಿನಲ್ಲಿ ನಡೆದವು. ಅನಂತರ ಅವರೆಲ್ಲರೂ ಜಂಬೂಸರಕ್ಕೆ ಬರುವುದಕ್ಕಾಗಿ ಹಡಗುಗಳನ್ನೇರಿದರು. ಎರಡು ವಿವಾಹದವರೂ ಸೇರಿದ್ದುದರಿಂದ ಹಡಗಿನಲ್ಲಿ ಬಹುಜನರಿದ್ದರು. ಹಡಗು ಜಂಬೂ ಸರವನ್ನು ಸೇರುವುದಕ್ಕೆ ಖಂಬಾತಿನಿಂದ ಕಾವೀರೇವಿನವರೆಗೂ ಸಮುದ್ರದಲ್ಲಿ ಬರಬೇಕಾಗಿತ್ತು. ಹಡಗು ತೀರವನ್ನು ಬಿಟ್ಟು ಸ್ವಲ್ಪದೂರಬಂದೊಡನೆಯೇ ತುಫಾನು ಪ್ರಾರಂಭವಾಯಿತು. ಸಮುದ್ರದ ಅಲೆಗಳು ಆಕಾಶವನ್ನು ಮುಟ್ಟುತ ಲಿತ್ತು. ಆಗ ಹಡಗಿನಲ್ಲಿರುವವರಲ್ಲಿ ಕೆಲವರು ಆಪ್ತರನ್ನು ಕಟ್ಟಿಕೊಂಡು ಅಳುತ ಲಿದ್ದರು; ಕೆಲವರು ಪರಮೇಶ್ವರನನ್ನು ಪ್ರಾರ್ಥಿಸುತಲಿದ್ದರು; ಇನ್ನು ಕೆಲವರು ಭಯದಿಂದ ಮೂರ್ಛಿತರಾಗುತಲಿದ್ದರು. ನಾವಿಕರು ಅವರಿಗೆ ಎಷ್ಟು ಧೈರ್ಯ ವನ್ನು ಹೇಳಿದರೂ ಅವರು ಧೈರ್ಯವನ್ನು ವಹಿಸಲಾರದೆ ಇದ್ದರು. ಧನ ಲಕ್ಷ್ಮಿಯುಮಾತ್ರ ಧೈರ್ಯದಿಂದಿದ್ದಳು. ಆಕೆಯು ಚಿಕ್ಕಂದಿನಲ್ಲಿ, ಹಡಗಿನಲ್ಲಿ ಕುಳಿತುಕೊಳ್ಳುವಾಗ ಬಹು ಜಾಗರೂಕತೆಯಿಂದ ಕುಳಿತುಕೊಳ್ಳಬೇಕೆಂತಲೂ, ಹಡಗಿನಲ್ಲಿ ನುಗ್ಗೆಕಟ್ಟಿಗೆಗಳನ್ನಿಟ್ಟಿರುತ್ತಾರೆಂತಲೂ, ಒಂದು ಸೇರು ನುಗ್ಗೆಕಟ್ಟಿಗೆಯು ಒಬ್ಬ ಮನುಷ್ಯನನ್ನು ನೀರಿನಲ್ಲಿ ತೇಲಿಸುವುದೆಂತಲೂ, ಒಬ್ಬ ನಾವಿಕನು ಒಂದು ಕಟ್ಟಿಗೆಯನ್ನು ಹಿಡಿದುಕೊಂಡು ನೀರಿನಮೇಲೆ ಮೂರು ದಿವಸಗಳು ತೇಲುತಲಿದ್ದ ನೆಂತಲೂ ಅರೇಬಿಯರ್ ನೈಟ್ಸ್ ಎಂಬ ಗ್ರಂಥದಲ್ಲಿ ಓದಿದ್ದಳು. ಆಗ ಆ ವಿಷಯವು ಜ್ಞಾಪಕಕ್ಕೆ ಬರಲು, ಧನಲಕ್ಷ್ಮಿಯು ಹಡಗಿನಲ್ಲಿ ಹುಡುಕಿ ನುಗ್ಗೆ ಕಟ್ಟಿಗೆಯನ್ನು ತೆಗೆದುಕೊಂಡಳು. ಹಡಗು ಮುಳುಗಲು ಸಿದ್ಧವಾಗಲು ಧನ ಲಕ್ಷ್ಮಿಯು ಕಟ್ಟಿಗೆಯ ಒಂದು ಕಡೆಯನ್ನು ತಾನು ಹಿಡಿದುಕೊಂಡು ಮತ್ತೊಂದು ಕಡೆಯನ್ನು ಪತಿಯನ್ನು ಹಿಡಿದುಕೊಳ್ಳುವಂತೆ ಹೇಳಿದಳು. ಗಿರಿಜಾಶಂಕರನು ಒಂದು ಕೈಯಲ್ಲಿ ಕಟ್ಟಿಗೆಯನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಒಡವೆಯ ಪೆಟ್ಟಿಗೆಯನ್ನು ಹಿಡಿದುಕೊಂಡನು. ಆತನ ಮನಸ್ಸೆಲ್ಲ ಒಡವೆಯ ಪೆಟ್ಟಿಗೆಯ ಮೇಲೆಯೆ ಇತ್ತು. ಅದನ್ನುಕಂಡು ಧನಲಕ್ಷ್ಮಿಯು ಆ ಪೆಟ್ಟಿಗೆಯನ್ನು ಹಡಗಿಗೆ ತಗಲಿಸಿದಳು. ಆಮೇಲೆ ಆ ದಂಪತಿಗಳು ಆ ಕಟ್ಟಿಗೆಯನ್ನು ಹಿಡಿದುಕೊಂಡು ಸಮುದ್ರದಲ್ಲಿ ಹೋಗುತಲಿದ್ದರು. ಹಡಗಿನಲ್ಲಿದ್ದ ಮಿಕ್ಕವರೆಲ್ಲರು ಮುಳುಗಿಹೋದರು ಈ ದಂಪತಿಗಳ ಬಾಯಿಯೊಳಕ್ಕೆ ಸಮುದ್ರದ ನೀರು ಹೋಗುತಲಿತ್ತು. ನದಿ ಯಲ್ಲಿ ಇಳಿದು ಸ್ನಾನಮಾಡುವುದಕ್ಕೆ ಸಹ ಹೆದರುತಲಿದ್ದ ಗಿರಿಜಾಶಂಕರನು ಈ ಸಮಯದಲ್ಲಿ ಅತ್ಯಂತ ಭಯದಿಂದ ಕಾತರನಾದನು. ಧನಲಕ್ಷ್ಮಿಯು ಆತನಿಗೆ ಧೈರ್ಯವನ್ನು ಹೇಳುತ್ತ, ಈಜು ಕಲಿತವಳಾದಕಾರಣ ಈಜುತ್ತ ಕಟ್ಟಿಗೆಯ ಸಹಾಯದಿಂದ ಮುಂದಕ್ಕೆ ಹೋಗುತಲಿದ್ದಳು. ಇಷ್ಟರಲ್ಲಿ ಹರಿಶಂಕರ ಎಂಬ ಒಬ್ಬನು ಅವರ ಸಮೀಪಕ್ಕೆ ಬಂದು ಆ ಕಟ್ಟಿಗೆಯನ್ನು ಹಿಡಿದುಕೊಂಡನು. ಆ ಕಟ್ಟಿಗೆಯು ಮೂರುಜನರನ್ನು ತೇಲಿಸಲಾರದೆ ಮುಳುಗಿಸುವಂತೆ ತೋರಿದ್ದರಿಂದ

ಧನಲಕ್ಷ್ಮಿಯು ಅವರಿಗೆ ಆ ಕಟ್ಟಿಗೆಯನ್ನು ಹಿಡಿದುಕೊಂಡುಹೋಗುವ ಬಗೆಯನ್ನು ಹೇಳಿ, ತಾನು ಒಬ್ಬಳು ಸತ್ತು ಇಬ್ಬರು ಬ್ರಾಹ್ಮಣರನ್ನು ಬದುಕಿಸುವುದು ಉತ್ತಮ ಕಾರ್ಯವೆಂದರಿತು, ಆ ಕಟ್ಟಿಗೆಯನ್ನು ಅವರಿಗೆಬಿಟ್ಟು ತಾನು ಈಜಿಕೊಂಡು ಹೋಗುತಲಿದ್ದಳು! ಈಕೆಯ ಪರೋಪಕಾರ ಬುದ್ಧಿಯನ್ನು ಎಷ್ಟು ಕೊಂಡಾಡಿದರೂ ಅಲ್ಪವೇ. ಈಕೆಯು ಸ್ವಲ್ಪದೂರ ಹೋಗುವದರೊಳಗೆ ಒಂದು ದೊಡ್ಡ ಅಲೆಯು ಬಂದು ಆಕೆಯನ್ನು ಮುಳುಗಿಸಿತು. ಆಕೆಯು ನೀರಿನಲ್ಲಿ ಮುಳುಗುವ ಬಗೆಯನ್ನು ಅರಿತವಳಾದಕಾರಣ ಜಗದೀಶ್ವರನ ಕೃಪೆಯಿಂದ ಪುನಃ ಮೇಲಕ್ಕೆ ಬಂದಳು. ಆಕೆಯು ಮೇಲಕ್ಕೆಬಂದಮೇಲೆ ನೋಡಲು ಆಕೆಯ ಪತಿಯು ದೃಗ್ಗೋಚರನಾಗಲಿಲ್ಲ. ಆಗ ಧನಲಕ್ಷ್ಮಿಯು ಪತಿಯನ್ನು ರಕ್ಷಿಸಬೇಕೆಂದು ಪರಮೇಶ್ವರನನ್ನು ಪ್ರಾರ್ಥಿಸಿದಳು. ಸಮೀಪದಲ್ಲಿಯೇ ಒಡೆದು ಹೋದ ಹಡಗು ಕಣ್ಣಿಗೆಬಿತ್ತು. ಹಡಗಿನಸಮೀಪಕ್ಕೆ ಹೋಗಿ ಒಡವೆಯ ಪೆಟ್ಟಿಗೆಯನ್ನು ಕಾಲಿಗೆ ತಗಲಿಸಿಕೊಂಡು ಅಲ್ಲಿ ಒಂದು ಕಟ್ಟಿಗೆಯು ಕಾಣಬರಲು ಅದನ್ನು ಹಿಡಿದುಕೊಂಡು ಒಂದುಕಾಲಿನಲ್ಲಿಯೇ ನೀರನ್ನು ತಳ್ಳುತ್ತ ಹೋಗುತಲಿದ್ದಳು. ಆ ಸಮಯದಲ್ಲಿ ಸಮುದ್ರವು ಅಲ್ಲಕಲ್ಲೋಲವಾಗಿತ್ತು. ಧನಲಕ್ಷ್ಮಿಯು ಸ್ವಲ್ಪದೂರಹೋಗಿ ಕೈ ಕಾಲುಗಳು ಸೋತುಹೋದುದರಿಂದ ಒಡವೆಯ ಪೆಟ್ಟಿಗೆಯನ್ನು ಬಿಟ್ಟು ಬಹುಕಷ್ಟದಿಂದ ಈಜುತ್ತ ರೇವಿಗೆ ಒಂದು ವೈಲಿಯದೂರಕ್ಕೆ ಬಂದಳು. ಅಲೆಗಳು ಆಕೆಯನ್ನು ಅಲ್ಲಿಂದ ಮುಂದಕ್ಕೆ ಹೋಗಗೊಡಲಿಲ್ಲ, ಒಂದು ದೊಡ್ಡ ಅಲೆಯು ಆಕಾಶಕ್ಕೆ ಎತ್ತಿಹಾಕಿತು. ಆಕೆಯು ಮೇಲಕ್ಕೆ ಹಾರುವಾಗ ಸಮುದ್ರದಲ್ಲಿ ಯಾರೋ ಮುಳುಗಿ ಹೋಗುತಲಿರುವಂತೆ ತೋರಿತು. ಆಕೆಯು ಮುಳುಗುತಲಿರುವವರು ತನ್ನ ಪತಿಯಾಗಿರಬಹುದೆಂದೆಣಿಸಿ ಆತನನ್ನು ಕಾಪಾಡಬೇಕೆಂದು ದೇವರನ್ನು ಪರಿಪರಿಯಾಗಿ ಬೇಡಿಕೊಂಡಳು. ಈ ಪರಮಸಾಧ್ವಿಯು ಅಂತಹ ಸಂಕಟಸಮಯದಲ್ಲಿಯೂ ಪತಿಯಕ್ಷೇಮವನ್ನು ಮರೆಯಲಿಲ್ಲ. ಈಕೆಯು ಅರ್ಧಮೈಲಿಯದೂರಕ್ಕೆ ಹೋಗುವದರೊಳಗೆ ಸೂರ್ಯನು ಪಶ್ಚಿಮಾದ್ರಿಯನ್ನು ಸೇರುತಲಿದ್ದನು. ತೀರದಲ್ಲಿ ವಿಶ್ವನಾಥನು ಹಡಗಿನಿಂದ ಬೀಗರನ್ನು ಇಳಿಸಿಕೊಂಡು ಹೋಗುವುದಕ್ಕಾಗಿ ಗಾಡಿಗಳನ್ನು ತೆಗೆದುಕೊಂಡು ಬಂದಿದ್ದನು. ಅಲ್ಲಿ ಗಾಡಿಗಳನ್ನು ತೊಳೆಯುವವರೂ, ಹಡಗಿನಲ್ಲಿ ಸಾಮಾನುಗಳನ್ನು ತುಂಬುವವರೂ ಬಹುಜನರಿದ್ದುದರಿಂದ ತೀರದಲ್ಲಿ ಬಹು ಕೋಲಾಹಲವಾಗಿತ್ತು. ಧನಲಕ್ಷ್ಮಿಗೆ ತೀರವೂ, ತೀರದಲ್ಲಿದ್ದ ಜನರೂ ಕಾಣಬರಲು ಆಕೆಯು ಎರಡುಕೈಗಳನ್ನು ಎತ್ತಿ ಸಂಜ್ಞೆಯನ್ನುಮಾಡಿದಳು. ಆಕೆಯ ಕೈಗಳನ್ನು ಒಬ್ಬ ಗಾಡಿಯವನು ನೋಡಿ ಯಾರೊಬ್ಬ ಮನುಷ್ಯನು ಸಮುದ್ರದಲ್ಲಿ ಹೊಡೆದುಕೊಂಡು ಬರುತಲಿರುವನೆಂದು ಅಲ್ಲಿರುವ ಬೆಸ್ತರೊಡನೆ ಹೇಳಿದನು. ಆಗ ತುಫಾನು

ಸಮಯವಾದಕಾರಣ ಸಮುದ್ರವು ಅಲ್ಲಕಲ್ಲೋಲವಾಗಿತ್ತು. ಅದರಿಂದ ಯಾರೂ ಸಮುದ್ರದಲ್ಲಿಳಿಯಲು ಸಾಹಸಮಾಡಲಿಲ್ಲ. ಸಮುದ್ರದ ಅಲೆಗಳು ಧನಲಕ್ಷ್ಮಿಯನ್ನು ಹಿಂದಕ್ಕೆ ತಳ್ಳುತಲಿತ್ತು. ಆಕೆಯು ಕೇವಲ ನಿತ್ರಾಣಳಾಗಿದ್ದುದರಿಂದ ಈಜಲು ಶಕ್ತಿಯಿಲ್ಲದೆ ಪ್ರಾಣದಮೇಲೆ ಆಶೆಯನ್ನು ಬಿಟ್ಟು, ದೇವರನ್ನು ಸ್ಮರಿಸುತ ಲಿದ್ದಳು. ಆಗ ಒಬ್ಬ ಬೆಸ್ತನು ಆಕೆಯಮೇಲೆ ದಯೆಯುಳ್ಳವನಾಗಿ ಸಮುದ್ರ ದೊಳಕ್ಕೆ ಇಳಿದು ಈಜುತ್ತ ಆಕೆಯನ್ನು ಸಮೀಪಿಸಿ, 'ಅಮ್ಮಾ, ಧೈರ್ಯವಾಗಿರು; ನಾನು ನಿನ್ನನ್ನು ರಕ್ಷಿಸಲು ಬಂದೆನು.' ಎಂದನು. ಅದಕ್ಕೆ ಆಕೆಯು, "ನಾನು ಧೈರ್ಯವಾಗಿದೇನೆ. ಆದರೆ ಬಹುದೂರದಿಂದ ಈಜಿಕೊಂಡುಬಂದೆನಾದಕಾರಣ ನಿತ್ರಾಣಳಾಗಿದೇನೆ. ನೀನು ನನಗೆ ಈಜುವುದರಲ್ಲಿ ಸ್ವಲ್ಪಸಹಾಯವನ್ನುಮಾಡು." ಎಂದು ಕೇಳಲು, ಆ ಬೆಸ್ತನು ಕಟ್ಟಿಗೆಯನ್ನು ಮುಂದಕ್ಕೆ ತಳ್ಳುತ್ತ ಆಕೆಯೊಡನೆ ತೀರವನ್ನು ಸಮೀಪಿಸಿದನು. ವಿಶ್ವನಾಥನು ಧನಲಕ್ಷ್ಮಿಯಿಂದ ನಡೆದ ವೃತ್ತಾಂತವನ್ನು ಕೇಳಿ ಶೋಕಾಕುಲಮಾನಸನಾಗಿ ಆಕೆಯನ್ನು ಒಬ್ಬ ವಿಪ್ರನಮನೆಗೆ ಕಳುಹಿಸಿ, ತಾನು ದೀವಟಿಗೆಗಳನ್ನು ಪಿಡಿಸಿಕೊಂಡು ಸಮುದ್ರತೀರವನ್ನೆಲ್ಲ ಹುಡುಕಲು ಹೋದನು.

ಧನಲಕ್ಷ್ಮಿಯು ಆ ವಿಪ್ರನ ಮನೆಗೆ ಹೋಗಿ ತನ್ನ ಪತಿಯು ಜೀವಿತನಾಗಿ ಬಂದ ಸುಳುಹನ್ನು ಕಾಣದೆ ಆತನು ಯಾವ ಅಪಾಯಕ್ಕೆ ಗುರಿಯಾದನೋ ಎಂದು, ತಾನು ಮಾತ್ರ ಬದುಕಿ ಬಂದುದಕ್ಕೆ ಚಿಂತಿಸುತಲಿದ್ದಳು. ಆಗ ಅಲ್ಲಿರುವವರೆಲ್ಲರು, "ತಾಯಿ! ನೀನು ಸಮುದ್ರ ಮಧ್ಯದಲ್ಲಿ ಬಿದ್ದರೂ ಧೈರ್ಯವನ್ನು ಬಿಡದೆ ಪರೋಪಕಾರ ಬುದ್ಧಿಯೊಡನೆ ಇಬ್ಬರ ಪ್ರಾಣಗಳನ್ನು ಕಾಪಾಡಿಕೊಳ್ಳುವ ಉಪಾಯವನ್ನು ತಿಳಿಸಿ, ನೀನು ಪ್ರಾಣದೊಡನೆ ಇಲ್ಲಿಗೆ ಬಂದಿರುವೆ. ಹೀಗಿರುವಾಗ ಈಗ ಧೈರ್ಯವನ್ನು ಬಿಡುವುದು ಅನುಚಿತ. ನಿನಗೆ ಪ್ರಸ್ತುತದಲ್ಲಿ ಎಲ್ಲವು ಶುಭಸೂಚಕಳಾಗಿಯೇ ಕಾಣಬರುತಲಿವೆ. ನೀನು ಇಷ್ಟುಹೊತ್ತು ಸಮುದ್ರದಲ್ಲಿ ಈಜಿದರೂ ನಿನ್ನ ಹಣೆಯಮೇಲಿನ ಕುಂಕುಮವು ಕೆಡಲಿಲ್ಲ* ಆದುದರಿಂದ ನಿನ್ನ ಸೌಭಾಗ್ಯವು ಶಾಶ್ವತವಾಗಿರುವುದು. ಚಿಂತಿಸಬೇಡ." ಎಂದರು. ಧನಲಕ್ಷ್ಮಿಯು ಪತಿಯಮೇಲೆ ಮನಸ್ಸುಳ್ಳವಳಾಗಿ ತ್ಯದೇಕ ಧ್ಯಾನದೊಡನೆ ಅನ್ನಪಾನಗಳನ್ನು ಸ್ವೀಕರಿಸದೆ ಇದ್ದಳು. ಆ ಗ್ರಾಮದ ರಕ್ಷಕ ಭಟನು ಧನಲಕ್ಷ್ಮಿಯು ಇರುವ ಮನೆಗೆ ಬಂದು, ತಾನೇ ಆಕೆಯನ್ನು ರಕ್ಷಿಸಿದಂತೆ ಕೈಫಿಯತ್ತನ್ನು ಕೊಡಬೇಕು ಎಂದು ಕೇಳಿದನು. ನೀತಿವಿಶಾರದಳಾದ ಧನಲಕ್ಷ್ಮಿಯು ತನ್ನನ್ನು ಬೆಸ್ತನು ರಕ್ಷಿಸಿದಂತೆ ಯಥಾರ್ಥವಾದ ಕೈಫಿಯತ್ತನ್ನು ಕೊಟ್ಟಳು. ಸ್ವಲ್ಪಹೊತ್ತಿಗೆ ಆಕೆಯ ಪತಿಯು ಸಜೀವಿಯಾಗಿ ಬರುತಲಿರುವನು

* ಕೆಲಸ್ತ್ರೀಯರು ಹಣೆಗೆ ಮೇಣವನ್ನು ಹಚ್ಚಿಕೊಂಡು ಕುಂಕುಮವನ್ನು ಹಚ್ಚಿಕೊಳ್ಳುತ್ತಾರೆ. ಅದು ನೀರಿನಿಂದ ಕೆಡುವುದಿಲ್ಲ.

ಎಂದು ಪೋಲೀಸಿನವರು ತಿಳಿಸಿದರು. ಧನಲಕ್ಷ್ಮಿಯು ತಲಬಾಗಲಿಗೆ ಬರುವ ಹೊತ್ತಿಗೆ ಆತನೇ ಮನೆಗೆ ಬಂದನು. ಆಗ ಅವರಿಬ್ಬರೂ ಪರಸ್ಪರ ಸಂದರ್ಶನ ದಿಂದ ಮಿತಿಯಿಲ್ಲದ ಆನಂದವನ್ನು ಪಡೆದರು. ಗಿರಿಜಾಶಂಕರನು ಆಕೆಯ ಧೈರ್ಯವನ್ನೂ, ಪರೋಪಕಾರ ಬುದ್ಧಿಯನ್ನೂ ವಿಶೇಷವಾಗಿ ಶ್ಲಾಘಿಸಿದನು. ಈ ವಿಷಯವು ಗ್ರಾಮದಲ್ಲೆಲ್ಲ ಹರಡಲು ಜನರು ಗುಂಪುಗುಂಪಾಗಿ ಬಂದು ಧನಲಕ್ಷ್ಮಿಯ ಪಾದಗಳಿಗೆ ನಮಸ್ಕರಿಸಿ ಆಕೆಯು ಲಕ್ಷ್ಮಿಯ ಅವತಾರವೆಂದು ಸ್ತುತಿಸಿದರು. ಧನಲಕ್ಷ್ಮಿಯು ನನ್ನನ್ನು ಸ್ತುತಿಸಬೇಡಿ. ದೇವರನ್ನು ಸ್ತುತಿಸಿ ದರೆ ಕೃತಾರ್ಥರಾಗುವಿರಿ ಎಂದು ನುಡಿದು, ಅಲ್ಲಿ ನೆರೆದಿದ್ದ ಸ್ತ್ರೀಯರಿಗೆ ಪಾತಿ ವ್ರತ್ಯವನ್ನು ಕುರಿತು ಸ್ವಲ್ಪ ಉಪನ್ಯಸಿಸಿದಳು. ಇವರು ಮಾರನೆಯ ದಿವಸ ಸ್ವಗ್ರಾಮಕ್ಕೆ ಹೋದರು. ಧನಲಕ್ಷ್ಮಿಯ ಅತ್ತೆಮಾವಂದಿರು ನಡೆದ ವೃತ್ತಾಂತ ವನ್ನೆಲ್ಲ ಕೇಳಿ ಅಧಿಕ ಹರ್ಷಿತರಾಗಿ ಸೊಸೆಯನ್ನು ನೋಡಿ, ನೀನು ನಮ್ಮ ಭಾಗದ ಭಾಗ್ಯದೇವತೆಯೆಂದು ಕೊಂಡಾಡಿದರು. ಆಗ ಬರೋಡಾ ಸಂಸ್ಥಾನದಲ್ಲಿ ಒಂದು ಅಧಿಕಾರದಲ್ಲಿದ್ದ ಹರ್ಶಿವಲ್ ದೊರೆಯು ಈ ವರ್ತಮಾನವನ್ನು ಕೇಳಿ, ಸ್ವಯಮಾಗಿ ಬಂದು ಧನಲಕ್ಷ್ಮಿಯನ್ನು ದರ್ಶಿಸಿ ಆಕೆಯ ಧೈರ್ಯವನ್ನು ಮೆಚ್ಚಿಕೊಂಡನಂತೆ. ಈಕೆಯ ವಿಷಯವೆಲ್ಲ ಆಗಿನ ಗುಜರಾತೀ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿತವಾಯಿತು.

ಪಿಡ್ಡತ್ತುಟುಂಬ.

ಈ ಕುಟುಂಬದಲ್ಲಿರುವವರೆಲ್ಲರೂ ವಿದ್ವಾಂಸರಾದಕಾರಣ ಇದಕ್ಕೆ ಈ ಹೆಸರು ಉಂಟಾಯಿತು. ಈ ಕುಟುಂಬವನ್ನು ಕುರಿತು ನಂಬುವುದಕ್ಕೆ ಅರ್ಹ ವಾದ ಚರಿತ್ರೆಯು ದೊರೆಯಲಿಲ್ಲ. ಅದರಿಂದ ಜನರು ಹೇಳಿಕೊಳ್ಳುವ ಕಥೆ ಯನ್ನು ಅನುಸರಿಸಿ ಕೆಳಗಿನ ವಿಷಯಗಳನ್ನು ಬರೆಯಬೇಕಾಯಿತು. ಪೂರ್ವ ದಲ್ಲಿ ದ್ರಾವಿಡದೇಶದಲ್ಲಿ ವೇದಮೌಳಿ ಎಂಬ ಒಬ್ಬ ಭವಿಷ್ಯವಾದಿಯು ಇದ್ದನು. ಆತನು ಒಂದು ದಿವಸ ತನ್ನ ಗೃಹದ ತಲೆಬಾಗಲಿನಲ್ಲಿ ನಿಂತಿರಲು, ಒಂದು ನಕ್ಷತ್ರವು ಹೊಲೆಯರ ಕೇರಿಯಲ್ಲಿ ಬಿದ್ದುದನ್ನು ನೋಡಿದನು. ಮಾರನೆಯ ದಿವಸ ಆತನು ಹೊಲೆಯರ ಕೇರಿಯಲ್ಲಿ ಯಾರಾದರೂ ಪ್ರಸವಿಸಿದರೇ ಎಂದು ವಿಚಾರಿಸಲು, ಒಬ್ಬ ಹೊಲೆಯರವಳು ನಕ್ಷತ್ರವು ಬಿದ್ದ ಸಮಯದಲ್ಲಿಯೇ ಒಂದು ಹೆಣ್ಣು ಮಗುವನ್ನು ಪ್ರಸವಿಸಿದಳು ಎಂದು ತಿಳಿಯಬಂದಿತು. ಆಗ ವೇದ

ಮೌಳಿಯು ಆ ಹುಡುಗಿಯು ತನ್ನ ಸೊಸೆಯಾಗುವಳು ಎಂದು ತಿಳಿದು ಚಿಂತಿಸಿ, ಕುಲದವರ ಸಮ್ಮತಿಯಿಂದ ಆ ಹುಡುಗಿಯ ತಂದೆಯನ್ನು ಕರೆಯಿಸಿ, "ನಿನ್ನ ಮಗಳನ್ನು ಬಿಡುವೆಯೋ? ಅಥವಾ ಬ್ರಾಹ್ಮಣಕುಲವನ್ನು ನಾಶಮಾಡುವಿಯೋ"? ಎಂದು ಕೇಳಿದನು. ಹೊಲೆಯನು ಬ್ರಾಹ್ಮಣ ಕುಲವನ್ನು ನಾಶಮಾಡಲು ಇಷ್ಟಪಡದೆ ತನ್ನ ಮಗಳನ್ನು ತಂದು ವಿಪ್ರನಿಗೆ ಒಪ್ಪಿಸಿದನು. ವೇದಮೌಳಿಯು ಆ ಮಗುವನ್ನು ಕೊಲ್ಲಲಾರದೆ ಒಂದು ಪೆಟ್ಟಿಗೆಯಲ್ಲಿಟ್ಟು, ಪೆಟ್ಟಿಗೆಯನ್ನು ಕಾವೇರಿನದಿಯಲ್ಲಿ ಬಿಟ್ಟನು. ಆ ಪೆಟ್ಟಿಗೆಯು ನದಿಯಲ್ಲಿ ತೇಲಿಕೊಂಡು ಬಹುದೂರ ಹೋಗಿ ಒಂದು ಘಟ್ಟವನ್ನು ಸೇರಿತು. ಆ ಘಟ್ಟಕ್ಕೆ ಸ್ನಾನಾರ್ಥವಾಗಿ ಬಂದಿದ್ದ ಒಬ್ಬ ವಿದ್ವಾಂಸನು ಪೆಟ್ಟಿಗೆಯನ್ನು ಕಂಡು, ಅದನ್ನು ಈಚೆಗೆ ತೆಗೆದು, ತೆರೆದುನೋಡಿ ಅದರೊಳಗಿದ್ದ ಮಗುವನ್ನು ನೋಡಿ, ಸಂತಾನ ಹೀನನಾದಕಾರಣ ಸಂತೋಷದೊಡನೆ ಆ ಮಗುವನ್ನು ತೆಗೆದುಕೊಂಡುಹೋಗಿ ಅಕ್ಕರೆಯಿಂದ ಬೆಳಸುತ್ತ, ವಿದ್ಯಾಬುದ್ಧಿಗಳನ್ನು ಕಲಿಸುತಲಿದ್ದನು.

ಇಲ್ಲಿ ಕೆಲವು ದಿವಸಗಳಿಗೆ ವೇದಮೌಳಿಯು ಗತಿಸಿದನು. ಅದರಿಂದ ಆತನ ಪುತ್ರನಾದ ಪಿರಲಿಯು ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಬೇಕಾಯಿತು. ಪಿರಲಿಯು ಪ್ರಯಾಣಮಾಡುತ್ತ ಈ ಹುಡುಗಿಯು ಇದ್ದ ವಿದ್ವಾಂಸನ ಮನೆಗೆ ಬಂದನು. ಆ ಬ್ರಾಹ್ಮಣನು ಈ ಬಾಲಕನನ್ನು ಕಂಡು ತನ್ನ ಸಾಕುಮಗಳನ್ನು ಆತನಿಗೆ ಕೊಟ್ಟು ವಿವಾಹಮಾಡಬಹುದು ಎಂದೆಣಿಸಿ, ಆ ಬಾಲಕನನ್ನು ತನ್ನ ಮನೆಯಲ್ಲಿಟ್ಟುಕೊಂಡು ಸಮಸ್ತವಿದ್ಯೆಗಳನ್ನೂ ಕಲಿಸಿದನು. ಅನಂತರ ಪಿರಲಿಗೂ ಆ ಬಾಲಕಿಗೂ ವಿವಾಹವು ನಡೆದು ಅವರಿಬ್ಬರೂ ಸೌಖ್ಯವಾಗಿ ಅಲ್ಲಿಯೇ ಇದ್ದರು. ಕೆಲವು ದಿವಸಗಳು ಕಳೆದ ಅನಂತರ ಈ ಬಾಲಕಿಯು ಕಾವೇರಿಯಲ್ಲಿ ದೊರೆತವಳು ಎಂದು ಪಿರಲಿಗೆ ತಿಳಿಯಬಂದಿತು. ಅದರಮೇಲೆ ಪಿರಲಿಯು ತನ್ನ ತಂದೆಯು ಕಾವೇರಿಯಲ್ಲಿ ಹಾಕಿದ ಹುಡುಗಿಯನ್ನೇ ತಾನು ವಿವಾಹಮಾಡಿಕೊಂಡೆನಲ್ಲ ಎಂದು ಚಿಂತಿಸಿ, ಒಂದುದಿವಸ ರಾತ್ರಿ ಮಾವನಿಗೂ, ಪತ್ನಿಗೂ ತಿಳಿಯದಂತೆ ಗೃಹತ್ಯಾಗವನ್ನುಮಾಡಿ ಪಲಾಯನವಾದನು. ಮಾರನೆಯ ದಿವಸ ಆಕೆಯು ಪತಿಯನ್ನು ಎಲ್ಲಿಯೂ ಕಾಣದೆ ವೃದ್ಧನಾದ ತಂದೆಯ ಅನುಮತಿಯನ್ನು ಪಡೆದು ಪತಿಯನ್ನು ಹುಡುಕಲು ಹೊರಟಳು.

ಆಕೆಯು ಒಂದು ಸ್ಥಳದಲ್ಲಿ ಪಿರಲಿಯನ್ನು ನೋಡಿ ಮನೆಗೆ ಬರಬೇಕೆಂದು ಬಹು ವಿಧವಾಗಿ ಬೇಡಿಕೊಂಡಳು. ಆದರೆ ಪಿರಲಿಯು ಎಷ್ಟು ಬೇಡಿಕೊಂಡರೂ ಮನೆಗೆ ಬರಲೊಪ್ಪದಕಾರಣ ಆಕೆಯು ಆತನನ್ನು ಹಿಂಬಾಲಿಸಿದಳು. ಈ ದಂಪತಿಗಳಿಬ್ಬರೂ ಕೆಲವು ದಿವಸಗಳು ಪ್ರಯಾಣಮಾಡಿದ ಮೇಲೆ ಒಂದು ಸ್ಥಳದಲ್ಲಿ ಆಕೆಯು ನಿದ್ರಿಸುತ್ತಿರಲು ಪಿರಲಿಯು ಆಕೆಯನ್ನು ಬಿಟ್ಟು ಹೊರಟುಹೋದನು. ಸ್ವಲ್ಪಹೊತ್ತಿಗೆ ಆಕೆಯು ಎಚ್ಚತ್ತು ಭರ್ತನನು

ಹುಡುಕುತ್ತಿರಲು, ಒಬ್ಬ ಧನವಂತನು ಅಲ್ಲಿಗೆ ಬಂದು ಆಕೆಯ ವೃತ್ತಾಂತವನ್ನು ಕೇಳಿ ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಪುತ್ರಿಯಂತೆ ಭಾವಿಸಿ ಪೋಷಿಸುತಲಿದ್ದನು. ಈಕೆಯು ಹೋದ ಸ್ವಲ್ಪಕಾಲದಲ್ಲಿಯೇ ಆ ಧನವಂತನು ಮೃತನಾದನು. ಆತನು ಗತಿಸುವ ಸಮಯದಲ್ಲಿ ತನ್ನ ಆಸ್ತಿಯನ್ನು ಪುತ್ರರೊಡನೆ ಸಮಾನವಾಗಿ ಈಕೆಗೆ ಹಂಚಿಕೊಟ್ಟನು. ಈಕೆಯು ಆ ಧನದಿಂದ ಒಂದು ಅನ್ನ ಸತ್ರವನ್ನು ಸ್ಥಾಪಿಸಿ, ಬಂದ ಪಾಂಥರಿಗೆ ಅನ್ನದಾನವನ್ನು ಮಾಡುತಲಿದ್ದಳು. ಈ ವಿಧವಾಗಿ ಕೆಲವು ತಿಂಗಳು ಕಳೆದಮೇಲೆ ಒಂದು ದಿವಸ ಪಿರಲಿಯು ಆ ಸತ್ರಕ್ಕೆ ಬಂದನು. ಆಕೆಯು ತನ್ನ ಪದ್ಧತಿಯಂತೆ ಬಂದ ಅತಿಥಿಯನ್ನು ಸತ್ಕರಿಸಿ ಅನ್ನಪಾನಗಳನ್ನು ಕೊಟ್ಟಳು. ಪಿರಲಿಯು ಆಕೆಯು ತನ್ನ ಪತ್ನಿಯೆಂದು ತಿಳಿದು ಆಕೆಯ ಸತ್ಪ್ರವರ್ತನೆಯನ್ನು ಕಂಡು ಕನಿಕರವುಳ್ಳವನಾದನು. ಆದರೆ ತನ್ನನ್ನು ಹಿಂಬಾಲಿಸುವಳೆಂಬ ಭಯದಿಂದ ಆಕೆಗೆ ತನ್ನ ಪರಿಚಯವನ್ನು ಹೇಳಲಿಲ್ಲ.

ಮೂರನೆ ದಿವಸ ಆತನು ಸತ್ರದಿಂದ ಹೊರಡಲು ಆಕೆಯು ಆತನನ್ನು ಬೀಳ್ಕೊಡಲು ಬಂದು ಅನೇಕ ಉಪಚಾರ ವಚನಗಳನ್ನು ನುಡಿದಳು. ಪಿರಲಿಯು ಆಕೆಯ ವಿನಯ ಸಂಭಾಷಣೆಯಿಂದ ದಯೆಯುಳ್ಳವನಾಗಿ ತನ್ನ ಪರಿಚಯವನ್ನು ಪತ್ನಿಗೆ ತಿಳಿಸಿದನು. ಆಗ ಪಿರಲಿಯು ಆಕೆಯೊಡನೆ ನೀನು ನನ್ನ ಮಾತನ್ನು ಕೇಳುತಲಿದ್ದರೆ, ನಾನು ನಿನ್ನನ್ನು ತ್ಯಜಿಸುವುದಿಲ್ಲ ಎಂದು ಪ್ರಮಾಣಮಾಡಿದನು. ಅನಂತರ ಅವರಿಬ್ಬರು ಕೆಲವು ದಿವಸಗಳು ಅಲ್ಲಿಯೇ ಇದ್ದು ದೇಶಾಟನಕ್ಕೆ ಹೊರಟರು. ಅವರು ದೇಶಾಟನವನ್ನು ಮಾಡುತಲಿರುವ ಕಾಲದಲ್ಲಿ ಅವರಿಗೆ ಕ್ರಮವಾಗಿ ಅವ್ವಯರ್, ಆಪಗ್ಗಾ, ವಾಲೀಜ್, ಮುರಗ್ಗಾ ಎಂಬ ನಾಲ್ವರು ಪುತ್ರಿಯರೂ, ತಿರುವಳ್ಳೇರ್, ಅಧಿಕಮಾ, ಕಪಿಲರ್ ಎಂಬ ಮೂವರು ಪುತ್ರರೂ ಜನಿಸಿದರು. ಇವರೆಲ್ಲರನ್ನೂ ಪಿರಲಿಯ ಆಜ್ಞೆಯಂತೆ ಆತನ ಪತ್ನಿಯು ಹುಟ್ಟಿದ ಸ್ಥಳದಲ್ಲಿಯೇ ಬಿಟ್ಟುಹೋಗುತಲಿದ್ದಳು. ಈ ಮಕ್ಕಳೆಲ್ಲರೂ ಬೇರೆಬೇರೆ ಜಾತಿಯವರಿಗೆ ದೊರೆತು ಅವರಿಂದ ಬೆಳೆಸಲ್ಪಟ್ಟು ವಿದ್ವಾಂಸರಾದರು. ಇವರಲ್ಲಿ ದೊಡ್ಡವಳಾದ ಅವ್ವಯರನ್ನು ತಂದೆತಾಯಿಗಳು ಅರಣ್ಯದಲ್ಲಿ ಬಿಟ್ಟುಹೋಗಲು ಆಕೆಯು ಒಬ್ಬ ವಿದ್ವಾಂಸನಿಗೆ ದೊರೆತು ಆತನಿಂದ ವಿದ್ಯಾಬುದ್ಧಿಗಳನ್ನು ಕಲಿತು ದೊಡ್ಡ ಪಂಡಿತಳಾದಳು. ದ್ರಾವಿಡದಲ್ಲಿ ಈಕೆಯು ದೊಡ್ಡ ಕವಯಿತ್ರಿ. ಈಕೆಯು ನೀತಿಶಾಸ್ತ್ರ, ಜ್ಯೋತಿಷಶಾಸ್ತ್ರ, ವೈದ್ಯಶಾಸ್ತ್ರ, ಭೂಗೋಳಶಾಸ್ತ್ರಗಳಲ್ಲಿ ಪ್ರವೀಣಳು. ಈಕೆಯು ಆಯಾ ವಿಷಯಗಳಲ್ಲಿ ಒಂದೊಂದು ಗ್ರಂಥವನ್ನು ರಚಿಸಿದಳು. ಆ ಗ್ರಂಥಗಳನ್ನು ಈಗಲೂ ಪಾಠಶಾಲೆಗಳಲ್ಲಿ ಕಲಿಸುತ್ತಾರಂತೆ. ಈಕೆಯು ಕಲ್ಪ ವಿದ್ಯಾಪ್ರಭಾವದಿಂದ ೨೪೦ ವರ್ಷಗಳು ಜೀವಿಸಿದ್ದಳು ಎಂದು ವದಂತಿಯುಂಟು. ಈಕೆಯು ತನ್ನ ಜೀವಿತವನ್ನೆಲ್ಲ ಕನ್ಯಾತ್ವದಲ್ಲಿಯೇ ಕಳೆದಳು. ದ್ರವಿಡದೇಶದಲ್ಲಿ ಈಕೆಯನ್ನು ಪೂಜ್ಯಭಾವದೊಡನೆ ಗೌರವಿಸುತ್ತಾರೆ.

ಎರಡನೆಯವಳಾದ ಆಹಗ್ಗಾ.—ಈಕೆಯು ಅವ್ವಯರ್ ತಂಗಿ. ಈಕೆಯು ಸಹ ದ್ರಾವಿಡಕವಯಿತ್ರಿ. ಈಕೆಯು ಆರ್ಕಾಟ್‌ಮಂಡಲದ ಊಟಕಾಡು ಎಂಬ ಗ್ರಾಮದಲ್ಲಿ ಜನ್ಮಿಸಿದಳು. ಜನನೀಜನಕರು ಆಕೆಯನ್ನು ಅಲ್ಲಿಯೇ ಬಿಟ್ಟು ಹೋದರು. ಆ ಮಗುವು ಒಬ್ಬ ರಜಕಸ್ತ್ರೀಗೆ ದೊರೆತಳು. ಈಕೆಗೆ ವಿದ್ಯಾಬುದ್ಧಿಗಳು ಹೇಗೆಬಂದವೋ ತಿಳಿಯದು ಈಕೆಯು ದ್ರಾವಿಡಭಾಷೆಯಲ್ಲಿ ಒಂದು ನೀತಿಶಾಸ್ತ್ರವನ್ನು ರಚಿಸಿದಳು. ಈಕೆಯು ಸಹ ಅವಿವಾಹಿತಳಾಗಿಯೇ ಜನ್ಮವನ್ನು ಕಳೆದಳು.

ವಾಲೀಜ್.—ಈಕೆಯು ಅವ್ವಯರಿನ ಎರಡನೆಯ ತಂಗಿ. ಈಕೆಯನ್ನು ತಾಯಿತಂದೆಗಳು ಬಿಟ್ಟುಹೋದಮೇಲೆ ಕಾರವಾರ್ ಕುಲದವರು ಬೆಳೆಸಿದರು. ಈಕೆಯು ದ್ರಾವಿಡದಲ್ಲಿ ಅನೇಕ ಕಾವ್ಯಗಳನ್ನು ರಚಿಸಿದಳು.

ಮುರಗ್ಗಾ.—ಈಕೆಯು ಅವ್ವಯರಿನ ಮೂರನೆಯ ತಂಗಿ. ಈಕೆಯು ಒಬ್ಬ ವರ್ತಕನಿಂದ ಬೆಳೆಸಲ್ಪಟ್ಟಳು. ಈಕೆಯು ಸಹ ದ್ರಾವಿಡದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದಳು.

ಇವರೆಲ್ಲರು ತಮ್ಮ ಕುಲವನ್ನು ತಿಳಿಯದಿದ್ದರೂ, ತಮ್ಮ ವಿದ್ಯಾಪ್ರಭಾವದಿಂದಲೇ ಜಗತ್ಪ್ರಸಿದ್ಧರಾದರು. ಆದುದರಿಂದ ಮನುಷ್ಯರು ವಿದ್ಯೆಯಿಂದ ಪೂಜ್ಯತೆಯನ್ನು ಹೊಂದುವರೇ ವಿನಹ ಕುಲದಿಂದ ಪೂಜ್ಯತೆಯನ್ನು ಪಡೆಯುವುದಿಲ್ಲ.

ಮಹಾರಾಣಿ ಸ್ವರ್ಣಮಯಿ.

ಈ ಚರಿತ್ರನಾಯಕಿಯು ಬರದ್ವಾನ್ ಪ್ರಾಂತ್ಯಕ್ಕೆ ಸೇರಿದ ಭಟ್ಟಕೋಲ್ ಎಂಬ ಗ್ರಾಮದಲ್ಲಿ ಕ್ರಿ.ಶ. ೧೮೨೨ ರಲ್ಲಿ ಜನ್ಮಿಸಿದಳು. ಈಕೆಗೆ ಹನ್ನೊಂದು ವರ್ಷಗಳು ತುಂಬಲು, ಕಾಶಿಂಬಜಾರು ರಾಜಕುಟುಂಬದಲ್ಲಿ ಪ್ರಖ್ಯಾತನಾದ ರಾಜಾಕಿಸನ್ನಾಥ ರಾಯ್‌ಬಹದ್ದೂರು ಯವರಿಗೆ ಈಕೆಯನ್ನು ಕೊಟ್ಟು, ೧೮೩೮ ರಲ್ಲಿ ಮದುವೆಯನ್ನು ಮಾಡಿದರು. ಈಕೆಗೆ ಉತ್ತಮನಾದ ಪತಿಯು ದೊರೆತುದಕ್ಕೆ ಈಕೆಯ ಜನನೀಜನಕರು ಅತ್ಯಂತ ಹರ್ಷಿತರಾದರು. ಆದರೆ ಆ ಭಾಗ್ಯವು ರಾಣಿಗೆ ಚಿರಕಾಲವಿರಲಿಲ್ಲ. ಅಲ್ಪಕಾಲದಲ್ಲಿಯೇ ರಾಜನಿಗೆ ಮನೋಭ್ರಮಣವುಂಟಾಗಿ, ೧೮೪೪ ನೆಯ ಇಸವಿಯಲ್ಲಿ ಆತನು ಆತ್ಮಹತ್ಯೆಯನ್ನು

ಮಾಡಿಕೊಂಡನು. ಮತ್ತು ಈತನು ಮರಣಕ್ಕೆ ಪೂರ್ವದಲ್ಲಿ ಮತಿಚಾಂಚಲ್ಯವುಳ್ಳವನಾಗಿದ್ದುದರಿಂದ ತನ್ನ ಆಸ್ತಿಯನ್ನೆಲ್ಲ ಆಗ ರಾಜ್ಯಭಾರವನ್ನು ಮಾಡುತಲಿದ್ದ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಕೊಡಬೇಕು ಎಂದು ಮರಣ ಶಾಸನದಲ್ಲಿ ಬರೆದಿಟ್ಟನು. ಆ ಶಾಸನದಲ್ಲಿ ತನ್ನ ಪತ್ನಿಗೆ ಏನೂ ಬರೆಯಲಿಲ್ಲ. ಯೌವನ ಕಾಲದಲ್ಲಿಯೇ ಪತಿವಿಯೋಗವೂ, ಧನವಿಯೋಗವೂ ಸಂಭವಿಸಿದುದರಿಂದ ರಾಣಿಯ ಮನಸ್ಸಿನ ಸ್ಥಿತಿಯು ಆ ಸಮಯದಲ್ಲಿ ಇದ್ದ ಬಗೆಯನ್ನು ಪಾಠಕರು ಊಹಿಸಬೇಕೇ ಹೊರತು ಬರೆಯುವುದಕ್ಕೆ ಅಸಾಧ್ಯವು. ಮಹಾರಾಣಿಯು ಅಷ್ಟು ದುಃಖದಲ್ಲಿಯೂ ಸ್ವಲ್ಪ ಧೈರ್ಯವನ್ನು ವಹಿಸಿ, " ತನ್ನ ಸ್ವತ್ತನ್ನು ಕಂಪೆನಿಯವರು ಅಪಹರಿಸಿದರು." ಎಂದು ಸುಪ್ರೀಂ ಕೋರ್ಟಿನಲ್ಲಿ ಅಭಿಯೋಗವನ್ನು ತಂದಳು. " ಪತಿಯು ಚಿತ್ತಚಾಂಚಲ್ಯ ವಿರುವಕಾಲದಲ್ಲಿ ಬರೆದ ಶಾಸನವಾದಕಾರಣ, ಆ ಮರಣ ಶಾಸನವು ನಿರುಪಯೋಗವಾದುದು" ಎಂದು ಆ ಕೋರ್ಟಿನಲ್ಲಿ ತೀರ್ಪುಮಾಡಿದರು. ಸ್ವರ್ಣಮಯಿಗೆ ಮರಳಿ ಆಸ್ತಿಯು ಲಭಿಸಿತು.

ಪುನಃ ರಾಜ್ಯವನ್ನು ಪಡೆದ ಅನಂತರ ಸ್ವರ್ಣಮಯಿಯು ತನ್ನ ಧನವನ್ನು ಸದ್ವ್ಯಯ ಮಾಡಲಾರಂಭಿಸಿದಳು. ಸಂತತೌದಾರ್ಯದಿಂದ ಈಕೆಯು ಉಭಯವಂಶಗಳಿಗೂ, ತನ್ನ ಸಂಸ್ಥಾನಕ್ಕೂ ಭೂಷಣ ತುಲ್ಯಳಾದಳು. ಸತ್ಕಾರ್ಯಗಳಿಗಾಗಿ ಈಕೆಯು ಖರ್ಚುಮಾಡುತಲಿದ್ದ ಅಧಿಕ ದ್ರವ್ಯವನ್ನು ನೋಡಿದವರಿಗೆ, ಈ ಧನರಾಶಿಯು ಈಕೆಯದಲ್ಲದೆ, ಮತ್ತೊಬ್ಬರು ಈಕೆಯಲ್ಲಿ ಬಚ್ಚಿಟ್ಟ ಹಣವಾಗಿರಬಹುದು ಎಂದು ತೋರುತಲಿತ್ತು. ಸ್ವರ್ಣಮಯಿಯು ವಿದ್ವಾಂಸಳಲ್ಲ. ಶಾಸ್ತ್ರಗಳನ್ನು ಪಠಿಸಿದವಳಲ್ಲ. ಆದರೆ ಆಪನ್ನರ ವಿಪತ್ತನ್ನು ಪರಿಹರಿಸುವುದು, ಅನಾಥ ವಿತಂತುಗಳ ನೇತ್ರಗಳಿಂದ ಬೀಳುವ ಅಶ್ರುಗಳನ್ನು ತಡೆಯುವದು, ಕ್ಷುಧಾರ್ತರಿಗೆ ಅನ್ನವನ್ನು ಇಡುವುದು, ವಸ್ತ್ರಹೀನರಿಗೆ ವಸ್ತ್ರದಾನವನ್ನು ಮಾಡುವುದು, ಮನೆಯಿಲ್ಲದವರಿಗೆ ಗೃಹದಾನವನ್ನುಮಾಡುವುದು, ಅವಿದ್ಯಾವಂತರಿಗೆ ವಿದ್ಯಾದಾನವನ್ನು ಮಾಡುವುದು, ವ್ಯಾಧಿಗ್ರಸ್ತರಿಗೆ ಔಷಧಗಳನ್ನು ಕೊಡಿಸುವುದು, ಇವೇ ಮೊದಲಾದ ಪರೋಪಕಾರ ಕೃತ್ಯಗಳಲ್ಲಿ ಸ್ವರ್ಣಮಯಿಯು ಪಾರಂಗತೆಯಾಗಿದ್ದಳು. ಈಕೆಯು ಸಂತಾನಹೀನಳಾದರೂ, ವಿಶ್ವಕುಟುಂಬಿನಿಯಾದ ಈ ರಾಣಿಯು ಆಪನ್ನರನ್ನೆಲ್ಲ ತನ್ನ ಮಕ್ಕಳಂತೆ ಭಾವಿಸುತಲಿದ್ದಳು. ಈಕೆಯು ಹೆಂಗಸಾದುದರಿಂದ ಯುಕ್ತಾಯುಕ್ತ ವಿಚಕ್ಷಣೆಯಿಲ್ಲದೆ ದಾನವನ್ನು ಮಾಡುತಲಿದ್ದಳೆಂದು ಊಹಿಸುವರೇನೋ? ಸ್ವರ್ಣಮಯಿಯು ತನ್ನ ಮಂತ್ರಿಯೂ, ವಿಜ್ಞನೂ, ವಿದ್ವಾಂಸನೂ ಆದ ರಾಯರಾಜೀವಲೋಚನ ರಾಯಬಹದ್ದುರನ ಸಹಾಯದಿಂದ ಪಾತ್ರಾಪಾತ್ರವಿಚಾರಮಾಡಿ ದಾನವನ್ನು ಮಾಡುತಲಿದ್ದಳು.

ಈಕೆಯು ಮಾಡುವ ದಾನಧರ್ಮಗಳನ್ನು ಕೇಳಿ ಆಂಗ್ಲೇಯ ದೊರೆತನದವರು

ಅನೇಕ ಬಿರುದುಗಳನ್ನು ದಯಪಾಲಿಸಿದರು. ವಿಕ್ಟೋರಿಯಾ ಚಕ್ರವರ್ತಿನಿಯು ಈಕೆಯ ಔದಾರ್ಯವನ್ನು ಕೇಳಿ, ಆಗ್ಗೆ ಭರತಖಂಡದಲ್ಲಿ ಯಾರಿಗೂ ಕೊಡದ "ಕ್ರೌನ್ ಆಫ್ ಇಂಡಿಯಾ" ಎಂಬ ಬಿರುದನ್ನು ಕೊಟ್ಟರು. ಧನಸಂಪನ್ನೆಯರಾದ ಕೆಲವು ಸ್ತ್ರೀಯರು ತಮ್ಮ ಬಂಧುಗಳಿಗೆ ಮಾತ್ರ ಸಹಾಯಮಾಡುತ್ತಾರೆ. ಸ್ವರ್ಣಮಯಿಯು ಬಂಧುಗಳನ್ನೂ, ಇತರರನ್ನೂ ಸಮದೃಷ್ಟಿಯಿಂದ ನೋಡುತಲಿದ್ದಳು.

ಈಕೆಗೆ ಸ್ವ ೧೮೪೪ರಲ್ಲಿ ಆಸ್ತಿಯು ಸ್ವಾಧೀನವಾಯಿತು. ಆಗ ಸಂಸ್ಥಾನವು ವಿಶೇಷ ಋಣಗ್ರಸ್ತವಾಗಿತ್ತು. ಸ್ವರ್ಣಮಯಿಯು ಬುದ್ಧಿವಂತನಾದ ಮಂತ್ರಿಯ ಸಹಾಯದಿಂದ ಸಂಸ್ಥಾನದ ಸಾಲವನ್ನು ತೀರಿಸಿ ವರ್ಷಾದಾಯವನ್ನು ವೃದ್ಧಿಮಾಡಿದಳು. ಅಧಿಕವಾಗಿ ಬರುವ ಧನವನ್ನು ವ್ಯರ್ಥಮಾಡದೆ ರಾಜ್ಯದಲ್ಲಿರುವ ಪ್ರಜೆಗಳ ನಾಗರಿಕವನ್ನು ವೃದ್ಧಿಮಾಡುವುದಕ್ಕೂ, ಕಂದಾಯವನ್ನು ತೆರಲಾರದ ಬಡರೈತರಿಗೆ ಸಹಾಯಮಾಡುವುದಕ್ಕೂ ವಿನಿಯೋಗಿಸುತಲಿದ್ದಳು. ರಾಣೀಸ್ವರ್ಣಮಯಿಯ ಮಹಾಕಾರ್ಯಗಳನ್ನು ನೋಡಿ ಬ್ರಿಟಿಷ್‌ಸರ್ಕಾರದವರು ೧೮೭೪ನೆಯ ಇಸವಿಯಲ್ಲಿ ಒಂದು ದೊಡ್ಡ ಸಭೆಯನ್ನುಮಾಡಿ ಆಕೆಗೆ 'ಮಹಾರಾಣಿ' ಯೆಂಬ ಬಿರುದನ್ನು ದಯಪಾಲಿಸಿದರು. ಅದೇ ವರ್ಷದಲ್ಲಿ ಸಂಭವಿಸಿದ ಮಹಾಕ್ಷಾಮದಲ್ಲಿ ಮಹಾರಾಣಿ ಸ್ವರ್ಣಮಯಿಯು ಅನೇಕಸಾವಿರ ಕುಟುಂಬಗಳಿಗೆ ಅನ್ನದಾನವಂ ಮಾಡಿ ಕಾಪಾಡಿದಳು. ಅನಂತರ ಸರ್ವೋತ್ತಮಳಾದ ಈ ಮಹಾರಾಣಿಗೆ ಇಂಡಿಯಾ ಪ್ರಭುತ್ವದವರು ನೀವು ನಿಮ್ಮ ಸಂಸ್ಥಾನಕ್ಕೆ ಮುಂದೆ ವಾರಸದಾರನನ್ನಾಗಿ ನಿಯಮಿಸುವವನಿಗೆ ಸಹ ನಾವು 'ಮಹಾರಾಜಾ' ಎಂಬ ಬಿರುದನ್ನು ಕೊಟ್ಟಿವು ಎಂದು ತಿಳಿಸಿದರು.

ಸ್ವ ೧೮೭೮ ರಲ್ಲಿ "ಮೆಂಬರ್ ಆಫ್ ಇಂಪೀರಿಯಲ್ ಆರ್ಡರ್ ಆಫ್ ಇಂಡಿಯಾ" ಎಂಬ ಬಿರುದನ್ನು ಇಂಗ್ಲೀಷಿನವರು ರಾಣಿ ಸ್ವರ್ಣಮಯಿಗೆ ಕೊಟ್ಟರು. ಆ ಸಮಯದಲ್ಲಿ ಕಾಸಿಂಬಜಾರಿನ ರಾಜಗೃಹದಲ್ಲಿ ಒಂದು ದೊಡ್ಡ ಸಭೆಯನ್ನುಮಾಡಿ, ರಾಜಪ್ರತಿನಿಧಿಗೆ ಬದಲಾಗಿ ಪೀಕಾಕ್‌ದೊರೆಯು ಆ ಸಮಯದಲ್ಲಿ ಸ್ವರ್ಣಮಯಿಯನ್ನು ಸಂಬೋಧಿಸಿ, ಈ ಪ್ರಕಾರವಾಗಿ ನುಡಿದನು:—

"ಪರೋಪಕಾರಾರ್ಥವಾಗಿ ತಾವು ಅನೇಕಸಲ ಅಸಂಖ್ಯ ಧನರಾಶಿಗಳನ್ನು ವೆಚ್ಚಿಸಿದ ಸಂಗತಿಯನ್ನು ಪ್ರಭುತ್ವದವರು ಕೇಳಿ, ತಮ್ಮನ್ನು ಗೌರವಿಸುವುದಕ್ಕಾಗಿ ತಮಗೆ ಈ ಬಿರುದನ್ನು ಕೊಡುತಲಿದಾರೆ. . . . . ೧೮೭೧ ನೆಯ ವರ್ಷದ ಮೊದಲ್ಗೊಂಡು ೧೮೭೫ ನೆಯ ವರ್ಷದವರೆಗೆ ತಾವು ೫೨,೫೦೦ ರೂಪಾಯಿಗಳನ್ನು

ಜನಹಿತಕಾರ್ಯಗಳಿಗೆ ವೆಚ್ಚಮಾಡಿರುವಿರಿ. ಈ ಧನವು ತಮ್ಮ ಆದಾಯದ ಷಷ್ಠಾಂಶಕ್ಕಿಂತಲೂ ಅಧಿಕವಾದುದು. ತಾವು ದಾನಮಾಡುವಾಗ ತೋರುವ ದೂರದೃಷ್ಟಿ, ವಿವೇಚನಾಶಕ್ತಿ ಮೊದಲಾದವುಗಳಿಗಾಗಿ ತಮ್ಮನ್ನೆಷ್ಟು ಕೊಂಡಾಡಿದರೂ ಸ್ವಲ್ಪವೇ. ಈ ದೇಶದಲ್ಲಿ ದಾನಮಾಡುವವರಲ್ಲಿ ನಿಷ್ಕಾಮ ಬುದ್ಧಿಯಿಂದ ದಾನಮಾಡುವವರು ಅತ್ಯಲ್ಪವಾಗಿದಾರೆ ಅನೇಕರು ಸಹಾಯಮಾಡಬೇಕಾದ ಕಾರ್ಯದ ಯೋಗ್ಯತೆಯನ್ನು ವಿಚಾರಿಸಿ ಧನವನ್ನು ಕೊಡದೆ ತಮಗೆ ಅತ್ಯಂತ ಕೀರ್ತಿಯು ಉಂಟಾಗಬೇಕು ಎಂಬ ಅಭಿಲಾಷೆಯಿಂದ ಧರ್ಮವನ್ನು ಮಾಡುತ್ತಾರೆ. ತಾವು ಮಾತ್ರ ಯುಕ್ತಾಯುಕ್ತ ವಿಚಾರವನ್ನುಮಾಡಿ, ಬಲಗೈಯಿಂದ ಕೊಡುವದನ್ನು ಎಡಗೈಯಿಗೆ ತಿಳಿಯದಂತೆ ಧರ್ಮಮಾಡುವಿರಿ. . . . . ದಾನಧರ್ಮಗಳ ವಿಷಯದಲ್ಲಿ ಮಾತ್ರವೇ ಅಲ್ಲದೆ, ಸಂಸ್ಥಾನಕಾರ್ಯಗಳನ್ನು ನಿರ್ವಹಿಸುವದರಲ್ಲಿಯೂ ವಿಶೇಷ ಬುದ್ಧಿಕುಶಲತೆಯನ್ನು ತೋರುತಲಿರುವಿರಿ. ಆದುದರಿಂದಲೇ ನಿಮ್ಮ ಜಮಿನ್ದಾರಿಯು ಇತರ ಜಮಿನ್ದಾರಿಗಳಂತೆ ಸಾಲದಲ್ಲಿ ಮುಳುಗಿರದೆ ದಿನದಿನಕ್ಕೆ ಅಭಿವೃದ್ಧಿಯನ್ನು ಪಡೆಯುತಲಿದೆ.”

ಈಕೆಯು ಸಾಯುವದಕ್ಕೆ ಪೂರ್ವ ಕೆಲವು ವರ್ಷಗಳಿಂದ ತನ್ನ ಆದಾಯದಲ್ಲಿ ವರ್ಷ ಒಂದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಲೋಕಹಿತಾರ್ಥವಾಗಿ ವೆಚ್ಚಮಾಡಲು ನಿಶ್ಚಯಿಸಿಕೊಂಡಳು. ದೇಶದಲ್ಲಿ ಯಾವ ವಿಪತ್ತುಂಟಾದರೂ, ಅಥವಾ ಯಾವ ಪುಣ್ಯಕಾರ್ಯವು ನಡೆಯಬೇಕಾದರೂ ಮಹಾರಾಣೀ ಸ್ವರ್ಣಮಯಿಯು ಮುಂದೆ ಹೆಜ್ಜೆಯನ್ನಿಟ್ಟು ಧನವ್ಯಯವನ್ನು ಮಾಡುತಲಿದ್ದಳು.

ಈ ಸದ್ಗುಣ ರಾಶಿಯಾದ ರಾಣಿಯು ೧೮೮೭ ರಲ್ಲಿ ಕೀರ್ತಿಶೇಷಳಾದಳು. ಈಕೆಯ ಅನಂತರ ರಾಜ್ಯವು ಈಕೆಯ ಅತ್ತೆಯ ವಶವಾಯಿತು.

ಇಂತಹ ರಮಣಿಯರಲ್ಲವೇ ತಮ್ಮ ಸುಗುಣಗಣಗಳಿಂದ ತಮ್ಮ ದೇಶದ ನಾರಿಯರಿಗೆ ಮಾತ್ರವೇ ಅಲ್ಲದೆ ಲೋಕದಲ್ಲಿರುವ ಸ್ತ್ರೀವರ್ಗಕ್ಕೆಲ್ಲ ಗೌರವವನ್ನೂ, ಕೀರ್ತಿಯನ್ನೂ ತರುವವರು?

ವನಲತಾ ದೇವಿ.

ವಂಗದೇಶಕ್ಕೆ ಸೇರಿದ ನದಿಯಾ ಜಿಲ್ಲೆಯೊಳಗಿನ ಕೃಷ್ಣನಗರ ಎಂಬ ಗ್ರಾಮದಲ್ಲಿ ಶಶಿಪಾದಬನರ್ಜಿ ಎಂಬ ಬ್ರಾಹ್ಮಮತಾವಲಂಬಿಯು ಪೋಸ್ಟಾಫೀಸಿನಲ್ಲಿ ಸೂಪರಿಂಟೆಂಡಾಗಿದ್ದನು. ಈ ಮಹನೀಯನು ಅನೇಕ ವರ್ಷಗಳ ಹಿಂದೆಯೇ ಒಂದು ವಿತಂತು ಶರಣಾಲಯವನ್ನು ಸ್ಥಾಪಿಸಿದನು. ಈತನ ಪುತ್ರಿಯೇ ವನಲತಾದೇವಿ. ಈಕೆಯು ೧೮೭೯ ನೆಯ ಇಸವಿ ಡಿಶಂಬರ್ ೩೦ ನೆಯ ತಾರೀಖಿನಲ್ಲಿ ಕೃಷ್ಣನಗರದಲ್ಲಿ ಜನ್ಮಿಸಿದಳು. ಈಕೆಯು ಅತಿಸೂಕ್ಷ್ಮ ಬುದ್ಧಿಯುಳ್ಳವಳಾದುದರಿಂದ ಬನರ್ಜಿಯು ಈಕೆಗೆ ಅತಿಬಾಲ್ಯದಿಂದಲೇ ವಿದ್ಯಾಭ್ಯಾಸವನ್ನು ಮಾಡಿಸಿದನು. ಈಕೆಗೆ ಎಂಟು ವರ್ಷಗಳು ತುಂಬುವದರೊಳಗಾಗಿಯೇ ಕವಿತ್ವ ಶಕ್ತಿಯು ಉಂಟಾಯಿತು! ವನಲತಾದೇವಿಗೆ ಸೇವಾ, ಪ್ರೇಮ, ವೈರಾಗ್ಯ ಎಂಬ ಗುಣತ್ರಯವು ಪ್ರಿಯಕರವಾದುದು. ಈಕೆಯ ಆಚರಣೆಯಲ್ಲಿಯೂ, ಕವಿತ್ವದಲ್ಲಿಯೂ, ಉಪದೇಶದಲ್ಲಿಯೂ ಈ ಮೂರು ಮಾತುಗಳು ಮುಖ್ಯವಾಗಿ ಇರುತಲಿದ್ದವು. ಈಕೆಗಿರುವ ಮಾತೃಪಿತೃಭಕ್ತಿಯೂ, ಪತಿಪ್ರೇಮವೂ ಅನಿರ್ವಚನೀಯವಾದುವು. ವನಲತಾದೇವಿಯು ತನ್ನ ಹದಿಮೂರನೆಯ ವಯಸ್ಸಿನಲ್ಲಿ, 'ಸುಮತೀ ಸಮಿತಿ' ಎಂಬ ಒಂದು ಸ್ತ್ರೀ ಸಮಾಜವನ್ನು ಸ್ಥಾಪಿಸಿದಳು. ಈಕೆಯು ಅಷ್ಟು ಚಿಕ್ಕವಯಸ್ಸಿನಲ್ಲಿ ಸ್ಥಾಪಿಸಿದ ಸಮಾಜಕ್ಕೆ ಈಕೆಯ ಒಡನಾಡಿಯರೂ, ಮರ್ಯಾದೆಯನ್ನುಳ್ಳ ದೊಡ್ಡ ಕುಟುಂಬದ ಅನೇಕ ಸ್ತ್ರೀಯರೂ ಸಭಿಕರಾಗಿ ಸೇರಿದ್ದರು. ಆ ಸಮಾಜದ ಉಪ್ದೇಶಗಳನ್ನು ವಿದ್ವಾಂಸರಾದ ಪುರುಷರು ಕೇಳಿ ಸಂತೋಷಿಸುತಲಿದ್ದರು. ಈಗಲೂ ಈ ಸಮಾಜವು ದಿನದಿನಾಭಿವೃದ್ಧಿಯನ್ನು ಹೊಂದಿ, ಅನೇಕ ಸ್ತ್ರೀಜನೋನ್ನತ ಕಾರ್ಯಗಳನ್ನು ಮಾಡುತಲಿದೆ. ಈಕೆಯು ಬ್ರಹ್ಮಮತಾವಲಂಬಿನಿಯಾದರೂ ತನ್ನ ಸದ್ಗುಣಗಳಿಂದಲೂ, ಸದುದ್ದೇಶಗಳಿಂದಲೂ ಎಲ್ಲ ಮತದವರಿಗೂ ಪ್ರೇಮಾಸ್ಪದಳಾಗಿದ್ದಳು. ಈಕೆಯು ಭಾನುವಾರದ ಪಾಠಶಾಲೆಯನ್ನು ಸ್ಥಾಪಿಸಿ, ಪ್ರತಿಭಾನುವಾರದಲ್ಲಿ ಬಾಲಬಾಲಕಿಯರಿಗೆ ತನ್ನಿಂದ ರಚಿತವಾದ ನೀತಿಬೋಧಕಗಳಾದ ಪದ್ಯಗಳನ್ನೂ, ಹೃದಯಂಗಮವಾದ ಕೀರ್ತನೆಗಳನ್ನೂ ಅವರಿಗೆ ಕಲಿಸುತಲಿದ್ದಳು. ಮತ್ತು ಅವರಿಗೆ ಸುಲಭವಾಗಿ ತಿಳಿಯುವಂತೆ ಅನೇಕ ಉಪನ್ಯಾಸಗಳನ್ನು ಹೇಳುತಲಿದ್ದಳು. ಆ ಮಕ್ಕಳಿಗೆ ವಿನೋದವಾಗಿರುವಂತೆ ಗದ್ಯಪದ್ಯ ರೂಪಗಳಾದ ಚಿಕ್ಕಚಿಕ್ಕ ನಾಟಕಗಳನ್ನು ರಚಿಸಿ, ಅದನ್ನು ಅವರಿಂದ ಆಡಿಸಿ, ತನ್ಮೂಲಕ ಅವರಿಗೆ ನೀತಿಯನ್ನು ಬೋಧಿ

ಸುತಲಿದ್ದಳು. ಬಾಲಬಾಲಕಿಯರು ಭಾನುವಾರದ ದಿವಸ ವನಲತಾದೇವಿಯ ಬಳಿಗೆ ಹೋಗಲು ಬಹು ಸಂತೋಷಪಡುತಲಿದ್ದರು.

ಈಕೆಯು ಸುಮತೀಸಮಾಜಾನು ಮತದಿಂದ 'ಅಂತಃಪುರ' ಎಂಬ ಮಾಸಪತ್ರಿಕೆಯನ್ನು ಸ್ತ್ರೀಯರಿಗಾಗಿ ಸ್ಥಾಪಿಸಿ ಮೂರುವರ್ಷಗಳು ನಡೆಸಿದಳು. ಈ ಪತ್ರಿಕೆಗೆ ಲೇಖಕರು, ಉಪಲೇಖಕರು, ಕಾರ್ಯದರ್ಶಿಗಳು ಎಲ್ಲರೂ ಸ್ತ್ರೀಯರೇ ಆಗಿದ್ದರು. ಇದರ ಅಂತಃಸ್ವರೂಪದಂತೆಯೆ ಬಾಹ್ಯಸ್ವರೂಪವು ಸಹ ಬಹು ಸುಂದರವಾಗಿತ್ತು. ಸಾಧಾರಣವಾಗಿ ಪ್ರತಿಯೊಬ್ಬ ಬಂಗಾಳಾ ಕುಟುಂಬಿಯೂ ಈ ಮಾಸಪತ್ರಿಕೆಗೆ ಚಂದಾದಾರನಾಗಿದ್ದನು. ಈ ಮಾಸಪತ್ರಿಕೆಯಿಂದ ಸ್ತ್ರೀಯರು ಸ್ವಾತಂತ್ರ್ಯವಾಗಿ ಯಾವಕಾರ್ಯವನ್ನೂ ನೆರವೇರಿಸಲಾರರು ಎಂಬ ಭ್ರಮೆಯು ನಾಶವಾಯಿತು. ಆಕೆಯು ಮರಣಕ್ಕೆ ಪೂರ್ವದಲ್ಲಿ ವಿಶೇಷ ರೋಗ ಗ್ರಸ್ತೆಯಾಗಿದ್ದರೂ 'ಅಂತಃಪುರ' ಕ್ಕೆ ವ್ಯಾಸಗಳನ್ನು ಬರೆಯುತಲೇ ಇದ್ದಳು. ಮರಣ ಸಮಯದಲ್ಲಿ ಆಕೆಯು 'ಅಂತಃಪುರ,' 'ಸುಮತೀಸಮಿತಿ' ಎಂಬ ಎರಡು ಪದಗಳನ್ನು ಉಚ್ಚರಿಸಿ ಅವುಗಳ ಶಾಶ್ವತವನ್ನು ಕೋರುತ್ತ ಪ್ರಾಣವನ್ನು ಬಿಟ್ಟಳು. ರುಗ್ಣಶಯ್ಯೆಯಲ್ಲಿ ಇರುವ ಸಮಯದಲ್ಲಿ ಸಹ ಮನೆಗೆ ಬೇಕಾದ ಪದಾರ್ಥಗಳನ್ನು ತಾನೇ ತರಿಸುತ್ತ, ಅಡಿಗೆ ಮಾಡಬೇಕಾದ ಪದಾರ್ಥಗಳನ್ನು ತಿಳಿಸುತ್ತ ಮನೆಯಲ್ಲಿರುವವರ ಕ್ಷೇಮವನ್ನು ವಿಚಾರಿಸುತಲಿದ್ದಳು. ತನ್ನ ಬಳಿಯಲ್ಲಿಯೇ ಪುಸ್ತಕವನ್ನೂ ಸೀಸದಕಡ್ಡಿಯನ್ನೂ ಇರಿಸಿಕೊಂಡು ಮನೆಯ ಆದಾಯವ್ಯಯಗಳನ್ನು ಬರೆಯುತಲಿದ್ದಳು. ಈಕೆಗೆ ಗೃಹಕೃತ್ಯದಲ್ಲಿರುವ ಶ್ರದ್ಧೆಯೂ, ಶಿಶುಪೋಷಣೆಯಲ್ಲಿರುವ ಜಾಣತನವೂ ವರ್ಣನೀಯವಾದುವು.

ವನಲತಾದೇವಿಯು ತನ್ನ ಪತಿಯನ್ನು ದೇವರಂತೆಭಾವಿಸಿ ಆತನ ಕೆಲಸಗಳನ್ನು ಸೇವಕರಿಂದಮಾಡಿಸದೆ ತಾನೇ ಸ್ವಂತವಾಗಿ ಮಾಡುತಲಿದ್ದಳು. ಆಕೆಯ ನಡತೆಯನ್ನು ನೋಡಿದವರೆಲ್ಲರು ಪತಿಭಕ್ತಿಯನ್ನು ಆಕೆಯಿಂದಲೇ ಕಲಿಯಬೇಕು ಎಂದು ಹೇಳುತಲಿದ್ದರು. ವ್ಯಾಧಿಯಿಂದ ಸ್ವಂತವಾಗಿ ಪತಿಗೆ ಭೋಜನವನ್ನು ಇಡಲು ಅಸಮರ್ಥಳಾಗಿದ್ದರೂ, ಪತಿ ಪುತ್ರರಿಗೆ ತನ್ನ ಸಮಕ್ಷಮದಲ್ಲಿ ಭೋಜನವನ್ನು ಇಡಿಸುತಲಿದ್ದಳು. ಈಕೆಯ ಮರಣ ದಿನದಲ್ಲಿ ಈಕೆಯಪತಿಗೆ ಶರೀರವು ಸ್ವಲ್ಪ ಅಸ್ವಸ್ಥವಾಗಿತ್ತು. ಈಕೆಯ ಮರಣಕ್ಕೆ ಅರ್ಧ ಗಂಟೆಗೆ ಪೂರ್ವದಲ್ಲಿ ಪತಿಯು ಬನಾತಿನ ಅಂಗಿಯನ್ನು ಹಾಕಿಕೊಳ್ಳದೆ ಇರುವುದನ್ನು ನೋಡಿ ನಿಮಗೆ 'ಶರೀರವು ಅಸ್ವಸ್ಥವಾಗಿರುವಾಗ ಬೆಚ್ಚಗಿರುವ ಅಂಗಿಯನ್ನು ಧರಿಸಿಕೊಳ್ಳದೇ ಇರಬಹುದೇ' ಎಂದು ನುಡಿದು ದಾಸಿಯಿಂದ ಅಂಗಿಯನ್ನು ತರಿಸಿ ಪತಿಯನ್ನು ಧರಿಸಿಕೊಳ್ಳುವಂತೆ ಮಾಡಿದಳು. ತನ್ನ ಮರಣವೇದನೆಯನ್ನು

ಒಂದು ಮೂಲೆಯಲ್ಲಿ ಇಟ್ಟು ಪತಿಕಳ್ಯಾಣವನ್ನೇ ಅಪೇಕ್ಷಿಸುತಲಿದ್ದ ಈ ಪರಮಸಾಧ್ವಿಯನ್ನು ಹೇಗೆ ಸ್ತುತಿಸಬೇಕೋ ನಾನು ಱರಿಯೆನು! ಅನೇಕ ಪುತ್ರ ಪುತ್ರಿಯರನ್ನು ಪಡೆದು, ಅವರನ್ನು ಬೆಳೆಸಿ ದೊಡ್ಡವರನ್ನಾಗಿಮಾಡಿ ತನ್ನ ಶಿಶುಪಾಲನಾ ನೈಪುಣ್ಯವನ್ನು ಲೋಕಕ್ಕೆತೋರಲು ಈಕೆಗೆ ಅವಕಾಶವಿಲ್ಲ ದಿದ್ದರೂ, ಈಕೆಯು ಬಹು ಅಕ್ಕರೆಯಿಂದ ಸಾಕಿ ಬಿಟ್ಟುಹೋದ ಮೂರುವರ್ಷದ ಬಾಲಕನಿಂದ ವನಲತಾದೇವಿಗೆ ತಿಳಿದ ಮಾತೃ ಮಹತ್ವ ಕರ್ತೃತ್ವ ಶಕ್ತಿಯು ಇತರ ಮಾತೆಯರಿಗೆ ತಿಳಿಯುವುದು ದುಸ್ತರವಾದುದು ಎಂದು ತಿಳಿದುಕೊಳ್ಳ ಬಹುದು. ಈ ಮೂರುವರ್ಷದ ಬಾಲಕನು ತಾಯಿಯ ಆಜ್ಞೆಯಂತೆ ನಡೆ ಯುತಲಿದ್ದನು. ವನಲತಾದೇವಿಯು ಮಗನಿಗೆ ಅನೇಕ ನೀತಿಗಳನ್ನು ಕಲಿಸಿ ದ್ದಳು. ಈಕೆಗೆ ತನ್ನ ವ್ಯಾಧಿಯು ನಿವಾರಣೆಯಾಗುವದಿಲ್ಲ ಎಂದು ತಿಳಿದ ಮೇಲೆ, ಒಂದು ದಿವಸ ಯಾರೂ ಇಲ್ಲದ ಸಮಯದಲ್ಲಿ ಮಗನನ್ನು ಕರೆದು, "ಅಪ್ಪಾ! ನನ್ನ ಶರೀರದಲ್ಲಿ ರೋಗವು ಹೆಚ್ಚಿತು. ಅದು ಇಲ್ಲಿ ವಾಸಿಯಾಗ ಲಾರದು. ನಾನು ಪರಮೇಶ್ವರನ ಸನ್ನಿಧಿಗೆ ಹೋದರೆ ನನ್ನ ಬಾಧೆಯು ನಿವಾ ರಣೆಯಾಗುವುದು. ಅನಂತರ ಇಲ್ಲಿಗೆ ಬರುವೆನು. ನಾನು ಹೋಗುವಾಗ ನೀನು ಅಳದೆ ಸಂತೋಷವಾಗಿ ಬುದ್ಧಿವಂತನಾಗಿರು' ಎಂದು ಹೇಳಲು ಆ ಬಾಲಕನು, 'ಹಾಗೆಯೇ ಆಗಲಿ.' ಎಂದನು. ಅನಂತರ ವನಲತಾದೇವಿಯು ೧೯೦೦ ನೆಯ ನವಂಬರ್ ೩ ನೆಯ ತಾರೀಖಿನಲ್ಲಿ ಸ್ವರ್ಗಸ್ಥಳಾದಳು. ಆಕೆ ಗಾಗಿ ಆಕೆಯ ಬಂಧುಗಳೆಲ್ಲರು ದುಃಖಿಸುತಲಿದ್ದರು. ಆದರೆ ತಾಯಿಯ ಮಾತಿ ನಲ್ಲಿ ಸಂಪೂರ್ಣವಿಶ್ವಾಸವನ್ನುಳ್ಳ ಆಕೆಯ ಪುತ್ರನು ಮಾತ್ರ ಅಳದೆ, ಗುಲಾಬಿಯ ಪುಷ್ಪಗಳನ್ನು ತಂದು ತಾಯಿಯ ಶವದಮೇಲಿರಿಸಿ, "ಅಮ್ಮಾ! ದೇವರ ಬಳಿಗೆ ಹೋಗಿ ಆರೋಗ್ಯವನ್ನು ಹೊಂದಿ ಬಾ.' ಎಂದು ಹೇಳಿದನು. ಆಕೆಯನ್ನು ತೆಗೆದುಕೊಂಡು ಹೋದಮೇಲೆ ಅಳುವವರನ್ನು ನೋಡಿ, ಆ ಬಾಲಕನು, 'ನೀವೇಕೆ ಅಳುವಿರಿ? ನಮ್ಮ ತಾಯಿಯ ವ್ಯಾಧಿಯು ಇಲ್ಲಿ ವಾಸಿಯಾಗಲಿಲ್ಲ ವಾದಕಾರಣ ದೇವರ ಬಳಿಗೆ ಹೋಗಿದಾಳೆ. ಅಲ್ಲಿ ವಾಸಿಮಾಡಿಕೊಂಡು ಮರಳಿ ಬರುವಳು. ಹೀಗೆಂದು ನನ್ನೊಡನೆ ಹೇಳಿದಳು" ಎಂದು ತನ್ನ ಮುದ್ದುಮಾತು ಗಳಿಂದ ನುಡಿದನು. ವನಲತಾದೇವಿಯ ಮರಣಕ್ಕೆ ಆಕೆಯ ಬಂಧುಗಳೂ ಆಕೆಯ ಪರಿಚಯವುಳ್ಳವರೆಲ್ಲರೂ ಬಹಳ ದುಃಖಿಸಿದರು.

ಗಣಪಾಂಬ.

ಈಕೆಯು ಬೇಟರಾಜನ ಪತ್ನಿ. ಗಣಪತಿದೇವನ ಪುತ್ರಿ. ಈ ಗಣಪತಿ ದೇವನು ಕ್ರಿ.ಶ. ೧೨೫೭ ನೆ ಇಸವಿಯಿಂದ ೧೨೯೨ ನೆ ಇಸವಿಯ ವರೆಗು ಓರುಗಂಟಿ ರಾಜ್ಯವನ್ನು ಪಾಲಿಸಿದ ರಾಜನಾಗಿದ್ದ ಪಕ್ಷದಲ್ಲಿ ಈಕೆಯು ರುದ್ರಮ ದೇವಿಯಪುತ್ರಿ ಎಂದು ಊಹಿಸಲು ಅವಕಾಶವಿತ್ತು. ಆದರೆ ಇದಕ್ಕೆ ಪ್ರಬಲ ನಿದರ್ಶನಗಳಾವುವೂ ಇಲ್ಲದುದರಿಂದ ಈಕೆಯು ನಿಶ್ಚಯವಾಗಿ ರುದ್ರಮದೇವಿಯ ಪುತ್ರಿ ಎಂದು ಹೇಳಲಾಗುವದಿಲ್ಲ. ಈಕೆಯು ತನ್ನ ಪತಿಯ ಅನಂತರ ಆರುಸಾವಿರ ಗ್ರಾಮಗಳನ್ನು ಬಹು ಚೆನ್ನಾಗಿ ಪಾಲಿಸಿದಳು. ಗಣಪಾಂಬನ ಧರ್ಮಕೃತ್ಯಗಳನ್ನು ತಿಳಿಸುವ ಒಂದು ಶಿಲಾಶಾಸನವು ಕೃಷ್ಣಾಮಂಡಲಕ್ಕೆ ಸೇರಿದ ಗುಂಟೂರು ತಾಲೂಕಿನಲ್ಲಿದೆ. ಅದರೊಳಗಿರುವ ಕೆಲವಿಷಯಗಳನ್ನು ಕೆಳಗೆ ಬರೆದಿರುವೆನು.

" ಬಹು ಪ್ರಸಿದ್ಧಿಯನ್ನು ಪಡೆದ ಕಾಕತೀಯ ವಂಶದಲ್ಲಿ ಅನೇಕ ಪ್ರಭು ಗಳು ರಾಜ್ಯವನ್ನಾಳಿದ ಮೇಲೆ ವೈರಿ ಭೀಕರನಾದ ಬೇಟರಾಜನು ಸಿಂಹಾಸನಾ ರೂಢನಾದನು. ಶಿವನಿಗೆ ಪಾರ್ವತಿಯಂತೆಯೂ, ವಿಷ್ಣುವಿಗೆ ಲಕ್ಷ್ಮಿ ಯಂತೆಯೂ ಬೇಟರಾಜನಿಗೆ ಗಣಪಾಂಬನು ಧರ್ಮ ಪತ್ನಿಯಾದಳು ಈತನು ಧರ್ಮಕಟಕಪುರಿಯನ್ನು ಬಹು ಯೋಗ್ಯವಾಗಿ ಪಾಲಿಸಿ ಕೀರ್ತಿಶೇಷನಾದನು. ಅನಂತರ ಆತನ ಪತ್ನಿಯಾದ ಗಣಪಾಂಬೆಯು ಸಿಂಹಾಸನವನ್ನು ಏರಿದಳು. ಈಕೆಯು ಪತಿಯ ಸುಗತಿಯನ್ನು ಅಭಿಲಷಿಸಿ, ಆತನ ಹೆಸರಿನಲ್ಲಿ ಧನ್ಯಕಟಕ ಪುರಿಯಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದಳು. ಈ ಯುದ್ದೇಶದಿಂದಲೇ ಚಿನ್ನನ ಕಳಶವುಳ್ಳ ಬೇರೊಂದು ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಬೇಟೇಶ್ವರ ಎಂಬ ಲಿಂಗವನ್ನು ಪ್ರತಿಷ್ಠಿಸಿದಳು. ದೇವಾಲಯಕ್ಕಾಗಿ ಈ ದೇವಿಯು ಫಲವಂತವಾದ ಬೀನದೀವಿ ಎಂಬ ಗ್ರಾಮವನ್ನು ಕೊಟ್ಟಳು. ಈ ಮಹನೀಯಳು ಧರ್ಮಕಟಕಪುರಿಯಲ್ಲಿ ೧೨ ಜನ ಭೂಸುರರಿಗೆ ೧೨ ಭೂ ವಸತಿಗಳನ್ನೂ, ೧೨ ಗೃಹಗಳನ್ನೂ ದಾನಮಾಡಿದಳು. ಮತ್ತು ಈಕೆಯ ತಂದೆಯ ಹೆಸರಿನಲ್ಲಿ ಗಣಪೇಶ್ವರಾಲಯ ಎಂಬ ಶಿವಾಲಯವನ್ನು ಕಟ್ಟಿ ಸಿದಳು. ಈ ದೇವಸ್ಥನಕ್ಕಾಗಿ ಚಿಂತವಾಡ ಎಂಬ ಗ್ರಾಮವನ್ನು ಕೊಟ್ಟಳು. ಈಕೆಯ ಹಸ್ತಗಳು ಸತತವು ಶಿವಾರ್ಚನೆಯಲ್ಲಿಯೇ ವಿನಿಯೋಗಿಸಲ್ಪಟ್ಟವು. ಶಿವ ಮಹಾತ್ಮ್ಯವನ್ನು ಪ್ರಕಟಿಸುವ ಶ್ಲೋಕಗಳು ಈಕೆಗೆ ಆನಂದದಾಯಕ

ಗಳಾಗಿದ್ದವು. ಈ ರಾಣಿಗೆ ವೇವಗಳಲ್ಲಿ ಸಂಪೂರ್ಣ ವಿಶ್ವಾಸ ವಿದ್ದುದರಿಂದಲೇ ಈಕೆಗೆ ವಿಶಾಲ ರಾಜ್ಯಕ್ಲೇಶಗಳಿದ್ದರೂ ಆನಂದಮೊಡನೆ ಕಾಲವನ್ನು ಕಳೆಯುತ ಲಿದ್ದಳು. ಎರಡನೆಯ ಪಾರ್ವತಿ ಎನಿಸುವ ಈಕೆಯ ಮಹಾತ್ಮ್ಯವನ್ನು ಯಾರು ವರ್ಣಿಸ ಬಲ್ಲರು?" ಈ ಮಹನೀಯಳ ಚರಿತ್ರೆಯು ಇದಕ್ಕಿಂತಲು ಹೆಚ್ಚಾಗಿ ತಿಳಿಯದ ಕಾರಣ ಇಲ್ಲಿಗೆ ಮುಗಿಸಬೇಕಾಯಿತು.

ಚರಿತ್ರೆಗಳು ಚೆನ್ನಾಗಿ ತಿಳಿಯದ ಕೆಲ ಸ್ತ್ರೀಯರ ವೃತ್ತಾಂತಗಳು.

———:o:———

೧. **ಭಾಮತಿ.**—ಭಾಗೀರಥೀ ತೀರದಲ್ಲಿರುವ ಪಾಟಲೀ ಪುತ್ರ (ಪಾಟ್ನಾ) ಎಂಬ ನಗರದಲ್ಲಿ ವಾಚಸ್ಪತಿ ಎಂದು ಕೀರ್ತಿಯನ್ನುಪಡೆದ ಒಬ್ಬ ವಿದ್ವಾಂಸನು ವಾಸವಾಗಿದ್ದನು. ಈತನ ಭಾರ್ಯೆಯು ಭಾಮತಿ. ಈಕೆಯು ವಿಶೇಷ ವಿದ್ಯಾವತಿಯಾಗಿದ್ದಳು ವಾಚಸ್ಪತಿಕೃತವಾದ . ಕಲ್ಪತರು ಎಂಬ ಗ್ರಂಥಕ್ಕೆ ಈಕೆಯು ಟೀಕೆಯನ್ನು ಬರೆದಳು.

೨. **ಅಕಾ.**—ಈ ಭಕ್ತಳು ರುದ್ರಾಜೀಪಂತ್ ದೇಶಪಾಂಡೇ ಕರ್ಹಾಡ್ ಕರ್‌ಯವರ ಪುತ್ರಿ. ಮಹಾರಾಷ್ಟ್ರರಾಜ್ಯ ಸ್ಥಾಪಕನಾದ ಶಿವಾಜಿಗೆ ಗುರುವಾದ ರಾಮದಾಸಸ್ವಾಮಿಯ ಶಿಷ್ಯಳು. ಅಕಾ ಬಾಲವಿತಂತು. ಈಕೆಗೆ ಸ್ವಲ್ಪ ಜ್ಞಾನ ಉಂಟಾದನೆಲೆ ತನ್ನ ದುಃಖಸಮುದ್ರಕ್ಕೆ ತೀರವನ್ನುಕಾಣದೆ ಪರಮಾರ್ಥ ವಿಚಾರವನ್ನು ಮಾಡುತ್ತ, ತಂದೆಯ ಆಜ್ಞೆಯನ್ನು ಪಡೆದು ರಾಮದಾಸಸ್ವಾಮಿ ಯಲ್ಲಿ ಉಪದೇಶವನ್ನು ಹೊಂದಿದಳು. ಉಪದೇಶವಾದ ಮೊದಲ್ಗೊಂಡು ಈಕೆಯು ಗುರುಸನ್ನಿಧಾನದಲ್ಲಿಯೇ ಇದ್ದು ಆತನ ಸೇವೆಯನ್ನು ಮಾಡುತ ಲಿದ್ದಳು. ರಾಮದಾಸಸ್ವಾಮಿಯ ಅನಂತರ ಈಕೆಯು ವರಳೀಕಿಲ್ಲೆಯಲ್ಲಿ ಗುರು ವಿಗೆ ಸಮಾಧಿಯನ್ನೂ, ಸಭಾಮಂಟಪವನ್ನೂ ಕಟ್ಟಿಸಿದಳು. ಆಚಾರ್ಯರ ಅನಂತರ ಆತನ ಸೋದರ ಪುತ್ರನನ್ನು, ಚಾಫಲ ಎಂಬ ಗ್ರಾಮದಲ್ಲಿರುವ ಆತನ ಪೀಠದಲ್ಲಿರಿಸಿ, ಆಪೀಠ ಸಂಸ್ಥಾನವನ್ನು ಈಕೆಯೇ ಮುವ್ವತ್ತಾರು ವರ್ಷ ಗಳು ಪಾಲಿಸಿದಳು. ಈಕೆಯು ಶಾ.ಶ. ೧೬೪೩ ನೆಯ ವರ್ಷದಲ್ಲಿ ಸಿದ್ಧಿಯನ್ನು ಹೊಂದಿದಳು.

೩. **ಕಾನೊಪಾತ್ರಾ.**—ಈಕೆಯು ವೇಶ್ಯಾಕುಲದಲ್ಲಿ ಹುಟ್ಟಿದವಳಾ ದರೂ ಆ ಕುಲವನ್ನು ತಿರಸ್ಕರಿಸಿ, ಪಾತಿವ್ರತ್ಯದಲ್ಲಿ ಚಿತ್ತವನ್ನು ನಿಲ್ಲಿಸಿ, ಭಕ್ತಾ

ಗ್ರೇಸರಳಾದುದರಿಂದ ಸರ್ವಜನರಿಗೂ ಪೂಜ್ಯಳಾದಳು. ಮಂಗಳವೇಢೇ ಎಂಬ ಗ್ರಾಮದಲ್ಲಿ ಶ್ಯಾಮ ಎಂಬ ಒಬ್ಬ ವೇಶ್ಯೆಯು ಇದ್ದಳು. ಆಕೆಗೆ ಕಾನೂಪಾತ್ರಾ ಒಬ್ಬಳೇ ಮಗಳು. ಈಕೆಯು ಬೆಳೆಯುತ್ತ ಬೆಳೆಯುತ್ತ ಅಸಮಾನ ಸೌಂದರ್ಯವತಿಯೂ ಸಂಗೀತ ವಿದ್ಯಾಪ್ರವೀಣಳೂ ಆದಳು. ಈಕೆಯ ರೂಪವೂ, ಸಂಗೀತವೂ ಎಲ್ಲೆಲ್ಲಿಯೂ ಹರಡಿಕೊಂಡಿತು. ಈಕೆಯು ಯುಕ್ತವಯಸ್ಕಳಾದ ಮೇಲೆ ಈಕೆಯ ತಾಯಿಯು ಮಗಳನ್ನು ಬೇದರಿಗೆ ಕರೆದುಕೊಂಡುಹೋಗಿ ಬಾದಷಹನಿಗೆ ಕೊಡಬೇಕು ಎಂದು ಎಣಿಸಿದಳು. ಕಾನೂಪಾತ್ರೆಯು ತಾಯಿಯ ಅಭಿಪ್ರಾಯಕ್ಕೆ ಸಮ್ಮತಿಸದೆ, ಪಂಡರಪುರಕ್ಕೆಹೋಗಿ, ವಿಠಲದೇವಾಲಯವನ್ನು ಪ್ರವೇಶಿಸಿ, ವಿಠಲನನ್ನು ಸ್ತೋತ್ರಮಾಡುತಲಿದ್ದಳು. ಆಗ ಈಕೆಯ ಪ್ರವರ್ತನೆಯನ್ನು ನೋಡಿದವರೆಲ್ಲರು ಆಶ್ಚರ್ಯಯುತರಾದರು. ದಿನ ಕ್ರಮೇಣ ಈಕೆಯ ವಿಷಯವು ಬೇದರ್ ಬಾದಷಹನಿಗೆ ತಿಳಿದು, ಆತನು ಕಾನೂಪಾತ್ರೆಯನ್ನು ಕರಿತರಲು ಭಟರನ್ನು ಕಳುಹಿಸಿದನು. ಅವರು ಪಂಡರಪುರಕ್ಕೆ ಹೋಗಿ, ಆಕೆಗೆ ರಾಜಾಜ್ಞೆಯನ್ನು ತಿಳಿಸಿದರು. ಆಕೆಯು ವಿಠಲನನ್ನು ದರ್ಶಿಸಿ ಬರುವೆನು ಎಂದು ಹೇಳಿ ಗರ್ಭಾಲಯವನ್ನು ಪ್ರವೇಶಿಸಿ ಸ್ವಾಮಿಯನ್ನು ಬಹುವಿಧವಾಗಿ ಪ್ರಾರ್ಥಿಸುತ್ತ ಅಲ್ಲಿಯೇ ಪ್ರಾಣವನ್ನು ಬಿಟ್ಟಳು.

೪. **ಜನಾಬಾಯಿ.**—ಈಕೆಯು ಶೂದ್ರಳು. ಈಕೆಯು ಮಹಾರಾಷ್ಟ್ರ ಮಹಾಭಕ್ತರಲ್ಲಿ ಒಬ್ಬಳು. ವಿಖ್ಯಾತನಾದ ನಾಮದೇವ ಎಂಬ ಭಕ್ತನ ಮನೆಯಲ್ಲಿ ಈಕೆಯು ಪರಿಚಾರಿಕೆಯಾಗಿ ಕೆಲಸವನ್ನು ಮಾಡಿಕೊಂಡಿದ್ದಳು. ಈಕೆಯು ಜನ್ಮವನ್ನೆಲ್ಲ ಕನ್ಯಾತ್ವದಲ್ಲಿಯೇ ಕಳೆದಳು. ಈಕೆಯಿಂದ ರಚಿತವಾದ ಅನೇಕ ಮಹಾರಾಷ್ಟ್ರ ಪದ್ಯಗಳನ್ನು ಭಗವದ್ಭಕ್ತರು ಬಹು ಆದರದೊಡನೆ ಪಠಿಸುತ್ತಾರೆ.

೫. **ಪ್ರೇಮಾಬಾಯಿ.**—ಈ ಸಾಧ್ವಿಯ ನಿವಾಸಸ್ಥಳವು ತಿಳಿಯದು. ಈಕೆಯು ಶಾ.ಶ. ೧೯ ನೆಯ ಶತಾಬ್ದದಲ್ಲಿದ್ದಳು ಎಂದು ಕೆಲವರು ಹೇಳುತ್ತಾರೆ. ಈಕೆಯ ಹೆಸರು ಭಕ್ತವಿಜಯದಲ್ಲಿದೆ. ಈ ಯುವತಿಯು ಕೃಷ್ಣಭಕ್ತಳಾಗಿ ಸದಾ ಭಾಗವತ ಶ್ರವಣವನ್ನು ಮಾಡುತಲಿದ್ದಳು. ಈಕೆಯು ರಚಿಸಿದ ಅಭಂಗಗಳು, ಕೀರ್ತನೆಗಳು ಬಹು ಚನ್ನಾಗಿವೆ. ಈಕೆಯ ಮಗನು ಸಹ ಈಕೆಯಂತೆಯೆ ಭಗವದ್ಭಕ್ತನು. ಒಂದು ಸಮಯದಲ್ಲಿ ಈಕೆಯು ಪುತ್ರನಿಗೆ ಪರಮಾರ್ಥೋಪದೇಶವನ್ನು ಮಾಡುತ್ತ ಪರಮಪದವನ್ನು ಸೇರಿದಳು.

೬. **ಬಾಯಿಜಾಬಾಯಿ ಸಿಂಧೆ.**—ಸಿಂಧೆ ವಂಶೀಕನಾದ ದೌಲತ್ ರಾವ್ ಸಿಂಧೆಗೆ ಈಕೆಯು ಪತ್ನಿ. ಅಹಲ್ಯಾಬಾಯಿ ಹೋಳಕರೀಣ್ಯವರ ಕೀರ್ತಿಯಂತೆ ತನ್ನ ಕೀರ್ತಿಯು ಶಾಶ್ವತವಾಗಿರಬೇಕು ಎಂದು ಈಕೆಯು

ಅನೇಕ ಧರ್ಮಕಾರ್ಯಗಳನ್ನು ಮಾಡಿದಳು. ಈಕೆಯು ಅತಿಚತುರಳೆಂತಲೂ, ತೇಜಸ್ವಿನಿಯೆಂತಲೂ ಪ್ರಸಿದ್ಧಿಯನ್ನು ಹೊಂದಿದಳು. ಈಕೆಯು ಗತಿಸಿ ಸುಮಾರು ಐವತ್ತು ವರ್ಷಗಳಾದವು.

೭. **ಮೈನಾವತಿ.**—ಈ ಯುವತಿಯು ಕಾಂಚನಪುರದ ಅರಸನಾದ ತ್ರೈಲೋಕ್ಯಚಂದ್ರನ ಸತಿ. ಗೋಪೀಚಂದ್ರನ ತಾಯಿ. ಭರ್ತೃಹರಿ, ವಿಕ್ರಮಾದಿತ್ಯರಿಗೆ ಈಕೆಯು ಸಹೋದರಿ ಎಂದು ಹೇಳುತ್ತಾರೆ. ಈಕೆಯು ಜಾಲಂಧರ ಎಂಬ ಯೋಗಿಯಿಂದ ಉಪದೇಶವನ್ನು ಪಡೆದು ವಿಶೇಷ ಜ್ಞಾನವತಿಯಾದಳು. ಈಕೆಯ ಉಪದೇಶದಿಂದ ಗೋಪೀಚಂದ್ರನು ವೈರಾಗ್ಯವನ್ನು ಹೊಂದಿದನು.

೮. **ಮೋಹನಾಂಗಿ.**—ಕೃಷ್ಣದೇವರಾಯರಿಗೆ ಮೋಹನಾಂಗಿ ಎಂಬ ಒಬ್ಬ ಪುತ್ರಿಯು ಇದ್ದಳೆಂದು ಹೇಳುತ್ತಾರೆ. ಈಕೆಯು ಬಹು ವಿದ್ವಾಂಸಳಾಗಿ ಕವಿತ್ವವನ್ನು ಸಹ ಮಾಡುತಲಿದ್ದಳು. ಈಕೆಯು ಮಾರೀಚ ಪರಿಣಯ ಎಂಬ ಒಂದು ನಾಟಕವನ್ನು ರಚಿಸಿದಳು. ಈಕೆಗೆ ತಾರುಣ್ಯದಲ್ಲಿಯೇ ಪತಿವಿಯೋಗವು ಸಂಭವಿಸಿದುದರಿಂದ ಪತಿಯೊಡನೆ ಅನುಗಮನವನ್ನು ಮಾಡಿದಳು.

೯. **ವೇಣೂಬಾಯಿ.**—ಈಕೆಯು ಶಾಲಿವಾಹನ ಶಕ ೧೫೪೯ ನೆಯ ವರ್ಷದಲ್ಲಿ ಮಿರಾಜ ನಗರದಲ್ಲಿ ಜನ್ಮಿಸಿದಳು. ಈಕೆಯ ತಂದೆಯ ಹೆಸರು ದೇಶಪಾಂಡೆ. ಈಕೆಗೆ ವಿವಾಹವಾದಕೂಡಲೆ ಪತಿಯು ಗತಿಸಿದನು. ಅನಂತರ ಈಕೆಯು ರಾಮದಾಸ ಸ್ವಾಮಿಗೆ ಶಿಷ್ಯಳಾಗಿ ಜನ್ಮವನ್ನೆಲ್ಲ ರಾಮಭಜನೆಯಲ್ಲಿಯೆ ಕಳೆದಳು. ಈ ಭಕ್ತಳು ಅಧ್ಯಾತ್ಮ ವಿದ್ಯಾವಿಶಾರದಳಾಗಿದ್ದಳು. ಈಕೆಯು ರಚಿಸಿದ ಕೀರ್ತನೆಗಳು ಭಕ್ತಿರಸಪರಿಪೂರ್ಣಗಳಾಗಿವೆ.

೧೦. **ಪುಬ್ಬರಾಜು ವೆಂಕಟರಾಮಮ್ಮ.**—ನೈಜಾಮ್ ಹೈದರಾಬಾದು ಪ್ರದೇಶದಲ್ಲಿರುವ ಕಮ್ಮಂ ತಾಲೂಕಿನಲ್ಲಿ ಈಕೆಯು ಪತಿವ್ರತೆ ಎಂದು ಬಹುಖ್ಯಾತಿಯನ್ನು ಪಡೆದಿದಾಳೆ. ಈಕೆಯನ್ನು ಪ್ರತ್ಯಕ್ಷವಾಗಿ ನೋಡಿದವರು ಈಕೆಯು ಪೌರಾಣಿಕ ಪತಿವ್ರತೆಯರಲ್ಲಿ ಒಬ್ಬ ಪತಿವ್ರತೆಯ ಅವತಾರವು ಎಂದು ಈಕೆಯನ್ನು ಭಾವಿಸುತಲಿದ್ದರು. ಈಕೆಯ ಪತಿಯ ಹೆಸರು ರಾಜೇಶ್ವರರಾಯ. ಈಕೆಗೆ ಒಬ್ಬ ಪುತ್ರನೂ, ಒಬ್ಬ ಪುತ್ರಿಯೂ ಇದ್ದರು. ಈಕೆಯು ಪತಿಯೇ ದೇವರು ಎಂದು ನಂಬಿ ಆತನು ಆಜ್ಞಾಪಿಸಿದ ಸಕಲ ಕಾರ್ಯಗಳನ್ನೂ ಬಹು ಶ್ರದ್ಧೆಯಿಂದ ನಿರ್ವಹಿಸುತಲಿದ್ದಳು. ಕೆಲವು ದಿವಸಗಳಿಗೆ ಇವರ ಏಕ ಪುತ್ರನು ಗತಿಸಿದನು. ಆಗ ಈ ದಂಪತಿಗಳಿಗೆ ವಿಶೇಷ ದುಃಖ ಉಂಟಾಯಿತು ಎಂದು ನುಡಿಯಬೇಕಾದ ಅವಸರವಿಲ್ಲ. ಆದರೆ ಈ ಸಾಧ್ವಿಯು ಪತಿಯ ದುಃಖವು ಹೆಚ್ಚುವುದು ಎಂದು ತನ್ನ ದುಃಖವನ್ನು ತೋರ್ಪಡಿಸದೆ, ಭರ್ತನ

ಮನಸ್ಸಿಗೆ ಸಮಾಧಾನವನ್ನು ಉಂಟುಮಾಡಲು ಅನೇಕ ಪುರಾಣ ವಚನಗಳನ್ನೂ, ಕಲ್ಪಿತ ಕಥೆಗಳನ್ನೂ, ವೇದಾಂತವಾಕ್ಯಗಳನ್ನೂ ಹೇಳುತ್ತ, ಆತನ ದುಃಖವನ್ನು ಕಡಮೆಮಾಡುತಲಿದ್ದಳು. ತನಗೆ ವಿಶೇಷ ದುಃಖ ಉಂಟಾದರೆ ತಾನೊಬ್ಬಳೇ ಏಕಾಂತದಲ್ಲಿ ದುಃಖಿಸಿ ಪತಿಯು ಬರುವ ಸಮಯಕ್ಕೆ ತಾನು ಸಮಾಧಾನವಾಗಿರು ವಂತೆ ಕಂಡುಬರುತಲಿದ್ದಳು!

೧೧. **ಲಕ್ಷ್ಮಮ್ಮ.**—ಈಕೆಯು ನಾಯಡು (ಇವರನ್ನು ಆಂಧ್ರ ದೇಶದಲ್ಲಿ ಶೂದ್ರರಲ್ಲಿ ಉತ್ತಮರಾದವರು ಎಂದು ಎಣಿಸುತ್ತಾರೆ) ಕುಲದಲ್ಲಿ ಜನ್ಮಿಸಿದಳು. ಈಕೆಯ ನಿವಾಸಸ್ಥಳವು ಕೃಷ್ಣಾಮಂಡಲದಲ್ಲಿರುವ ಲಿಂಗಾಲ ಎಂಬ ಹಳ್ಳಿ. ಈಕೆಯು ಶೂದ್ರಳಾದರೂ ಬ್ರಾಹ್ಮಣ ಸ್ತ್ರೀಯರಿಗಿಂತಲೂ ಹೆಚ್ಚಾಗಿ ಪಾತಿವ್ರತ್ಯ ಧರ್ಮಗಳನ್ನು ಪಾಲಿಸುತಲಿದ್ದಳು ಲಕ್ಷ್ಮಮ್ಮನು ತನ್ನ ಸದ್ಗುಣ ಗಳಿಂದ ಪತಿಗೆ ಅತ್ಯಂತಪ್ರಿಯಳಾಗಿದ್ದಳು. ಗ್ರಾಮವಾಸಿಗಳು ಈಕೆಯನ್ನು ತಮ್ಮ ಭಾಗ್ಯದೇವತೆ ಎಂದು ಭಾವಿಸುತಲಿದ್ದರು. ಈಕೆಯ ಕೀರ್ತಿಯನ್ನು ಕೇಳಿ ಈಕೆಯ ಅತ್ತೆನಾದಿನಿಯರಿಗೆ ಅತ್ಯಂತ ಕ್ರೋಧ ಉಂಟಾಗಿ, ಅವರು ಅನೇಕ ತಂತ್ರಗಳಿಂದ ಲಕ್ಷ್ಮಮ್ಮನಮೇಲೆ ಅನೇಕ ದೋಷಾರೋಪಣೆಗಳನ್ನುಮಾಡಿ ಆಕೆಯ ಪತಿ ಯಿಂದಲೇ ಕೊಲ್ಲಿಸಿದರು ಎಂದು ಹೇಳುತ್ತಾರೆ. ಆದರೆ ಅವರು ಆಕೆಯನ್ನು ಈ ವಿಧವಾಗಿ ಕೊಂದದ್ದರಿಂದ ಆಕೆಯ ನಶ್ವರವಾದ ದೇಹವು ಮಾತ್ರ ನಾಶ ವಾಯಿತು. ಆಕೆಯ ಅಖಂಡ ಕೀರ್ತಿಯು ಶಾಶ್ವತವಾಗಿನಿಂತಿತು. ಪ್ರಜೆಗಳು ಲಕ್ಷ್ಮಮ್ಮನು ಪಾತಿವ್ರತ್ಯಕ್ಕಾಗಿ ಪ್ರಾಣವನ್ನು ಕೊಟ್ಟ ದೇವಿ ಎಂದು ನಂಬಿ ಆಕೆಯ ಪ್ರತಿಮೆಯನ್ನು ಒಂದು ಆಲಯದಲ್ಲಿ ಸ್ಥಾಪಿಸಿ ಈಗಲೂ ಪೂಜಿಸುತ ಲಿದಾರೆ. ಆ ಗ್ರಾಮದಲ್ಲಿ ಆಕೆಯ ಹೆಸರಿನಲ್ಲಿ ಪ್ರತಿ ವರ್ಷದಲ್ಲಿಯು ಜಾತ್ರೆಯು ನಡೆಯುತ್ತದೆ. ಈಕೆಯು ಪುಣ್ಯಲೋಕವನ್ನು ಹೊಂದಿ ಸುಮಾರು ೫೦ ವರ್ಷ ಗಳಾದವು.

೧೨. **ಲೀಲಾವತಿ.**—ಈಕೆಯು ಭೋಜರಾಜನ ಪತ್ನಿ. ಭೋಜರಾಜನ ಪತ್ನಿಯ ಹೆಸರು ಲೀಲಾವತಿ ಎಂದು ಕೆಲವರೂ, ಭಾನುಮತಿ ಎಂದು ಕೆಲವರೂ ನುಡಿಯುತ್ತಾರೆ. ಈ ಎರಡು ನಾಮಗಳು ಒಬ್ಬ ಸ್ತ್ರೀಗೆ ಇದ್ದಿತೋ, ಅಥವಾ ಈ ನಾಮಗಳುಳ್ಳ ಇಬ್ಬರು ಸ್ತ್ರೀಯರು ಭೋಜರಾಜನಿಗೆ ಪತ್ನಿಯರಾಗಿದ್ದರೋ ತಿಳಿ ಯದು. ಆದರೆ ಭೋಜರಾಜನಿಗೆ ಗಾರಡಿವಿದ್ಯೆಯಲ್ಲಿ ' ಅಪಾರಪಾಂಡಿತ್ಯವುಳ್ಳ ಒಬ್ಬ ಪತ್ನಿಯು ಇದ್ದಳೆಂಬುದುಮಾತ್ರ ನಿಶ್ಚಯ. ಈಗಲೂ ಗಾರಡಿಯವರು ತಮ್ಮ ಆಟವನ್ನು ಪ್ರಾರಂಭಿಸುವಾಗ ಆಕೆಯನ್ನು ಪ್ರಾರ್ಥಿಸುತ್ತಾರೆ. ಭೋಜಪ್ರಬಂಧ ದಿಂದ ಭೋಜರಾಜನ ಪತ್ನಿಯು ದೊಡ್ಡವಿದುಷಿಯಾಗಿದ್ದಳು ಎಂದು ತಿಳಿಯ ಬರುತ್ತದೆ. ಆಕೆಯ ಆಜ್ಞೆಯಿಂದಲೆ ಭೋಜರಾಜನ ರಾಜ್ಯದಲ್ಲೆಲ್ಲ ಬಾಲಿಕಾಪಾಠ ಶಾಲೆಗಳು ಸ್ಥಾಪಿತವಾಗಿದ್ದವು.

೧೩. **ವಿಧ್ಯಾಧರಿ.**—ಈಕೆಯು ಭೋಜರಾಜನ ಸಮಕಾಲೀನಳು. ಈಕೆಯ ಪತಿಯು ಭೋಜನರಾಜ್ಯದಲ್ಲಿ ಒಂದು ಪಾಠಶಾಲೆಗೆ ಉಪಾಧ್ಯಾಯನಾಗಿದ್ದನು. ಆತನ ಹೆಸರು ಮಣಿಮಿಶ್ರನು. ವಿದ್ಯಾಧರಿಯು ವಿದ್ವಾಂಸಳಾದುದರಿಂದ, ತನ್ನ ಸಂತಾನಕ್ಕೆ ಬಾಲ್ಯದಿಂದಲು ಸದ್ವಿದ್ಯೆಯನ್ನು ಕಲಿಸುತಲಿದ್ದಳು. ಒಂದು ದಿವಸ ಭೋಜರಾಜನು ಈ ಪಾಠಶಾಲೆಯನ್ನು ನೋಡಲು ಬಂದು, ಅಲ್ಲಿ ಐದು ವರ್ಷದ ಬಾಲಕನು ಅತಿಸ್ವಚ್ಛವಾಗಿ ಸಂಸ್ಕೃತಭಾಷೆಯನ್ನು ಮಾತನಾಡುತಲಿರುವುದನ್ನು ನೋಡಿ, ಇವನಿಗಿಂತಲು ದೊಡ್ಡವರಾದ ಬಾಲಕರಿಗೆ ಇಲ್ಲದ ತಿಳುವಳಿಕೆಯು ಈ ಬಾಲಕನಿಗೆ ಹೇಗೆ ಉಂಟಾಯಿತು ಎಂದು ಮಣಿಮಿಶ್ರನನ್ನು ಕೇಳಿದನು. ಅದಕ್ಕೆ ಮಣಿಮಿಶ್ರನು ಈ ಪ್ರಶ್ನೆಗೆ ಸದುತ್ತರವನ್ನು ನನ್ನ ಪತ್ನಿಯು ಕೊಡುವಳು ಎಂದು ಹೇಳಿ, ಅಲ್ಲಿಗೆ ತನ್ನ ಪತ್ನಿಯನ್ನು ಕರೆದನು. ಆಗ ವಿದ್ಯಾಧರಿಯು ಅಲ್ಲಿಗೆಬಂದು, ತನ್ನ ಮಗನಾದ ಆ ಪಂಚವರ್ಷದ ಬಾಲಕನಿಗೆ ತಾನು ಕಲಿಸುವುದರಿಂದ ಇಷ್ಟು ತಿಳುವಳಿಕೆಯು ಉಂಟಾಯಿತೆಂತಲೂ, ಇತರ ಬಾಲಕರ ಮಾತೆಯರು ವಿದ್ಯಾಹೀನೆಯರಾದುದರಿಂದ, ಅವರ ಪುತ್ರರು ವಯಸ್ಸಿನಲ್ಲಿ ದೊಡ್ಡವರಾದರೂ ಮೂರ್ಖರಾಗಿ ವಿದ್ಯೆಯನ್ನು ಶೀಘ್ರವಾಗಿ ಕಲಿಯಲಾರದಿರುವರೆಂತಲೂ ತಿಳಿಸಿ, 'ಮಹಾರಾಜರಾದ ನೀವು ನಿಮ್ಮ ರಾಜ್ಯದಲ್ಲಿ ಯಾವ ಲೋಪವೂ ಉಂಟಾಗದಂತೆ, ಬಾಲಿಕಾ ಪಾಠಶಾಲೆಗಳನ್ನು ನಿರ್ಮಿಸಿ.' ಎಂದು ಪ್ರಾರ್ಥಿಸಿದಳು. ಆಗ ಸ್ತ್ರೀವಿದ್ಯಾಲಾಭವನ್ನು ಅರಿತು ಭೋಜರಾಜನು ತನ್ನ ರಾಜ್ಯದಲ್ಲೆಲ್ಲ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಿದನು.

೧೪. **ಜಿಜಾಬಾಯಿ.**—ಈಕೆಯು ಮಹಾರಾಷ್ಟ್ರರಾಜ್ಯಸ್ಥಾಪಕನಾದ ಶಿವಾಜಿಯ ತಾಯಿಯು. ಈಕೆಯು ಶಾ.ಶ. ೧೫೧೮ ರಲ್ಲಿ ಜನ್ಮಿಸಿದಳು. ಈಕೆಯ ಪತಿಯ ಹೆಸರು ಷಹಾಜೀ. ಈತನು ಜಿಜಾಬಾಯಿಯನ್ನು ವಿಶೇಷವಾಗಿ ಗೌರವಿಸದೆ, ತುಕಾಬಾಯಿಯೆಂಬ ಯುವತಿಯನ್ನು ಪುನಃ ವಿವಾಹ ಮಾಡಿಕೊಂಡನು. ಜಿಜಾಬಾಯಿಗೆ ಶಿವಾಜಿ, ಸಂಭಾಜಿ ಎಂಬ ಇಬ್ಬರು ಪುತ್ರರು ಉದಯಿಸಿದರು. ಚಿಕ್ಕವನಾದ ಸಂಭಾಜಿಯು ಒಂದು ಯುದ್ಧದಲ್ಲಿ ಮಡಿದನು. ಜಿಜಾಬಾಯಿಯು ಪತಿಯ ಅನುಗ್ರಹವಿಲ್ಲದಿದ್ದರೂ, ಮಗನಾದ ಶಿವಾಜಿಯ ತಿಳುವಳಿಕೆಗೆ ಸಂತೋಷಿಸುತ್ತ, ಆತನಿಗೆ ಸಹಜವಾಗಿರುವ ಸ್ವದೇಶ ಸ್ವಮತಾಭಿಮಾನಗಳನ್ನು ಅಭಿವೃದ್ಧಿಪಡಿಸುತಲಿದ್ದಳು. ಆಕೆಯ ಪತಿಯು ಮ್ಲೇಚ್ಛಪ್ರಭುಗಳ ಬಳಯಲ್ಲಿ ಸರದಾರನಾಗಿದ್ದರೂ, ಈಕೆಯು ತುರುಷ್ಕಪ್ರಭುತ್ವದಲ್ಲಿ ದ್ವೇಷವುಳ್ಳವಳಾಗಿದ್ದಳು. ಆಕೆಯ ಸದ್ಬೋಧೆಗಳಿಂದಲೇ ಶಿವಾಜಿಯು ಶೂರನಾಗಿ, ತಮ್ಮ ದೇಶದಲ್ಲಿರುವ ಯವನ ರಾಜ್ಯವನ್ನು ನಿರ್ನಾಮಮಾಡಿ, ಮಹಾರಾಷ್ಟ್ರ ರಾಜ್ಯವನ್ನು ಸ್ಥಾಪಿಸಿದನು. ನ್ಯಾಯಮೂರ್ತಿಗಳಾದ ಮಹದೇವ ಗೋವಿಂದ ರಾವ್‌ರಾನಡೇ ಯವರು ಶಿವಾಜಿಯ ಪರಾಕ್ರಮಕ್ಕೆ ಆತನ ತಾಯಿಯಾದ

ಜಿಜಾಬಾಯಿಯೇ ಮೂಲಕಾರಣಳೆಂದು ಬರೆದಿದಾರೆ. ಶಿವಾಜಿಯು ಯಾವ ಕಾರ್ಯವನ್ನು ಮಾಡಬೇಕಾದರು ತಾಯಿಯ ಅನುಜ್ಞೆಯನ್ನು ಪಡೆಯುತಲಿದ್ದನು. ಶಿವಾಜಿಯು ಯವನರೊಡನೆ ವೈರವನ್ನು ಬೆಳಸುವದು ಷಹಾಜಿಗೆ ಇಷ್ಟವಿರಲಿಲ್ಲ. ಜಿಜಾಬಾಯಿಯೇ ಮಗನನ್ನು ಈ ವಿಷಯದಲ್ಲಿ ಪ್ರೋತ್ಸಾಹಿಸಿ, ತನಗಿರುವ ದೇಶಾಭಿಮಾನ ಮತಾಭಿಮಾನಗಳನ್ನು ಮಗನಿಗೆ ಬೋಧಿಸಿ, ತನ್ನ ಉದ್ದೇಶಗಳನ್ನು ಅತನ ಮೂಲಕ ನೆರವೇರಿಸಿಕೊಂಡಳು. ಈ ವೀರಮಾತೆಯು ಎಂಭತ್ತು ವರ್ಷಗಳು ಜೀವಿಸಿ ಶಾ.ಶ. ೧೬೦೦ ನೆ ವರ್ಷದಲ್ಲಿ ಕಾಲವಾದಳು.

೧೫. ನಿಜಾಮ್‌ಷಹನ ತಾಯಿ.—ಈಕೆಯು ಕ್ರಿ.ಶ. ೫ ನೆಯ ಶತಾಬ್ದಾಂತ್ಯದಲ್ಲಿದ್ದಳು. ಈಕೆಯು ತನ್ನ ಪತಿಯ ಅನಂತರ ನಿಜಾಮ್‌ಷಹನೆಂಬ ತನ್ನ ಜ್ಯೇಷ್ಠಪುತ್ರನಿಗಾಗಿಯೂ, ಅನಂತರ ಚಿಕ್ಕ ಮಗನಾದ ಅಹಮ್ಮದ್‌ಷಹನಿಗಾಗಿಯೂ ರಾಜ್ಯವನ್ನು ಬಹು ಚೆನ್ನಾಗಿ ಆಳಿದಳು. ಈ ಷಹರಿಬ್ಬರು ಬ್ರಾಹ್ಮಣೀ ರಾಜ್ಯದ ೧೨ ನೆಯ ೧೩ ನೆಯ ಪುರುಷರು.

೧೬. ಕುಂತಲಾದೇವಿ.—ಈಕೆಯು ಶಾ.ಶ. ೭ ನೆಯ ಶತಾಬ್ದಾಂತ್ಯದಲ್ಲಿಯೂ, ೮ ನೆಯ ಶತಾಬ್ದಾದಿಯಲ್ಲಿಯೂ ಇದ್ದಳು. ಈಕೆಯು ಅನುಮಕೊಂಡದ ರಾಜನಾದ ಎರುಕದೇವರಾಜನಿಗೆ ಸೋದರತ್ತೆ. ಎರುಕದೇವರಾಜನ ಬಾಲ್ಯದಲ್ಲಿ ಅತನಿಗಾಗಿ ಈಕೆಯು ರಾಜ್ಯವನ್ನು ಪಾಲಿಸಿದಳು. ಕುಂತಲಾದೇವಿಯು ಮಂತ್ರಿಗಳು ಮಾಡುತಲಿದ್ದ ಮೋಸಕ್ಕೆ ಒಳಗಾಗದೆ ರಾಜ್ಯವನ್ನು ಪಾಲಿಸುತ್ತ, ಯವನ, ಘೂರ್ಜರ, ಮಹಾರಾಷ್ಟ್ರ ದೇಶಗಳಮೇಲೆ ದಂಡೆತ್ತಿ ಹೋಗಿ ಅವರನ್ನು ಗೆದ್ದು, ಆಯಾಸ್ಥಳಗಳಲ್ಲಿ ಜಯಸ್ತಂಭಗಳನ್ನು ಸ್ಥಾಪಿಸಿ, ಅವರಿಂದ ಕಪ್ಪಗಳನ್ನು ತೆಗೆದುಕೊಂಡಳು. ಆ ಸಮಯದಲ್ಲಿ ಕಟಕವಲ್ಲಭನೆಂಬಾತನು ಕುಂತಲಾದೇವಿಯ ಆಜ್ಞೆಯನ್ನು ಅತಿಕ್ರಮಿಸಲು, ಗೆಂಗಿರೇವ್ ಎಂಬ ಸೇನಾನಾಯಕನನ್ನು ಅತನೊಡನೆ ಯುದ್ಧವನ್ನುಮಾಡಲು ಕಳುಹಿಸಿದಳು. ಗೆಂಗಿರೇವನು ಕಟಕವಲ್ಲಭನನ್ನು ಕೊಂದನು. ಆಮೇಲೆ ಕುಂತಲಾದೇವಿಯು ಕಟಕವಲ್ಲಭನ ಪುತ್ರನಿಗೆ ರಾಜ್ಯವನ್ನುಕೊಟ್ಟು ಅವನಿಂದ ಸ್ವಲ್ಪ ದ್ರವ್ಯವನ್ನು ಸ್ವೀಕರಿಸಿದಳು. ಈಕೆಯು ಹತ್ತೊಂಭತ್ತು ವರ್ಷಗಳು ರಾಜ್ಯವನ್ನು ಪಾಲಿಸಿ, ಎರುಕದೇವರಾಜನಿಗೆ ಪಟ್ಟವನ್ನು ಕಟ್ಟಿದಳು.

೧೭. ಪಂಡಿತ ಸುಲೀಬಾ.—ಕಾಶೀಧಾಮಕ್ಕೆ ಸಮೀಪಸ್ಥವಾದ ರಾಮನಗರವೆಂಬ ನಗರದಲ್ಲಿ ಕೃಷ್ಣವರ್ಮ ಎಂಬಾತನು ವಾಸವಾಗಿದ್ದನು. ಈತನ ಮಗಳೇ ಸುಲೀಬಾ. ಈತನು ವಿದ್ವಾಂಸನಾದುದರಿಂದ ತನ್ನ ಮಗಳಿಗೆ ವಿಶೇಷವಿದ್ಯೆಯನ್ನು ಕಲಿಸಿ, ವೇದವೇದಾಂಗಗಳಲ್ಲಿಯೂ, ಜ್ಯೋತಿಷಪುರಾಣ

ಗಳಲ್ಲಿಯೂ ಪಾರಂಗತಳಾಗಿ ಮಾಡಿದನು. ಈಕೆಯ ಶರೀರವು ದುರ್ಬಲವಾದುದಾದರೂ, ಮನಸ್ಸು, ಧರ್ಮ, ನೀತಿ, ಮೊದಲಾದ ಸದ್ಗುಣಗಳಿಗೆ ಆಶ್ರಯ ಭೂತವಾಗಿ ಸಬಲವಾಗಿತ್ತು. ಸುಲೀಬೆಯನ್ನು ಆ ಯೂರಿನಲ್ಲಿಯೇ ವಾಸಮಾಡುತಲಿದ್ದ ಜಗನ್ನಾಥಶಾಸ್ತ್ರಿ ಎಂಬಾತನಿಗೆಕೊಟ್ಟು ವಿವಾಹಮಾಡಿದರು. ಜಗನ್ನಾಥಶಾಸ್ತ್ರಿಯು ಸಹ ವಿದ್ವಾಂಸನಾದುದರಿಂದ ಈ ದಂಪತಿಗಳು ಪರಸ್ಪರಾನುರಾಗವುಳ್ಳವರಾಗಿ ಸಂಸಾರಸುಖವನ್ನು ಅನುಭವಿಸುತಲಿದ್ದರು. ಸುಲೀಬೆಯು ಆ ಗ್ರಾಮದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಕನ್ಯೆಯರಿಗೂ, ವಿತಂತುಗಳಿಗೂ ಶ್ರದ್ಧೆಯೊಡನೆ ವಿದ್ಯೆಯನ್ನು ಕಲಿಸುತಲಿದ್ದಳು. ಅನೇಕ ಧರ್ಮಗಳನ್ನು ಅವರಿಗೆ ಬೋಧಿಸುತಲಿದ್ದಳು. ಧರ್ಮ, ನೀತಿ, ವೇದಾಂತಾದಿ ವಿಷಯಗಳನ್ನು ಬೋಧಿಸುವ "ತತ್ವದರ್ಶನ" ಎಂಬ ಗ್ರಂಥವು ಈಕೆಯಿಂದ ರಚಿತವಾಯಿತು. ಒಂದುಸಲ ಈಕೆಯು ರಾಮೇಶ್ವರಯಾತ್ರೆಗೆ ಹೋಗುತ್ತ ಹಾಗೆಯೇ ಶ್ರೀರಂಗಪಟ್ಟಣಕ್ಕೆ ಹೋದಳು. ಅಲ್ಲಿ ಪಂಡಿತರಿಗೆ ಜೀವಬ್ರಹ್ಮರ ವಿಷಯವಾಗಿ ವಾದವು ನಡೆಯುತಲಿತ್ತು. ಸುಲೀಬೆಯು ಸಭೆಗೆಹೋಗಿ ತನ್ನ ಸುವಿಚಾರಗಳನ್ನು ಅವರಿಗೆ ತಿಳಿಸಿ ಅವರನ್ನು ಮೆಚ್ಚಿಸಿದಳು. ಆ ಪಂಡಿತರು ಸುಲೀಬೆಗೆ 'ಪಂಡಿತ' ಎಂಬ ಬಿರುದನ್ನು ಕೊಟ್ಟರು. ಅಂದಿನಿಂದ ಆಕೆಯು 'ಪಂಡಿತ ಸುಲೀಬಾ' ಎಂದು ಕರೆಯಲ್ಪಡುತಲಿದ್ದಳು. ಆಕೆಯು ಯಾತ್ರೆಯನ್ನು ನೆರವೇರಿಸಿಕೊಂಡು ತನ್ನ ಗ್ರಾಮಕ್ಕೆ ಬಂದು ಪತಿಯೊಡನೆ ಬಹು ದಿವಸಗಳು ಸುಖವಾಗಿ ಬಾಳಿ, ಪತಿಯೊಡನೆ ಅನುಗಮನವನ್ನು ಮಾಡಿದಳು.

೧೮. **ಪಾರ್ವತಿ.**—ಭೋಜರಾಜನಕಾಲದಲ್ಲಿ ಧಾರಾನಗರದಲ್ಲಿ ದೇವಶರ್ಮನೆಂಬ ವಿಪ್ರನಿದ್ದನು. ಆತನ ಪತ್ನಿಯೇ ಪಾರ್ವತಿ. ಈಕೆಯು ಪಾತಿವ್ರತ್ಯ ಧರ್ಮಗಳನ್ನು ಕ್ರಮವಾಗಿ ನಡೆಸುತ್ತ, ಸನ್ಯಾಸಿಗಳನ್ನು ವಿನಹ ಇತರ ಪುರುಷರನ್ನು ನೋಡುವುದಿಲ್ಲವೆಂದು ವ್ರತವನ್ನು ಹಿಡಿದಿದ್ದಳು. ಈಕೆಯ ಖ್ಯಾತಿಯನ್ನು ಕೇಳಿ ಭೋಜರಾಜನು ಒಂದುದಿವಸ ಯತಿವೇಷವನ್ನು ಧರಿಸಿ, ಈಕೆಯ ಮನೆಗೆ ಭಿಕ್ಷಕ್ಕೆ ಬಂದನು. ಪಾರ್ವತಿಯು ರಾಜನೆಂದು ತಿಳಿದು ಆತನನ್ನು ಶಪಿಸಲೆಣಿಸಲು, ರಾಜನು ಆಕೆಗೆ ನಮಸ್ಕರಿಸಿ, ಪೂಜ್ಯಭಾವದೊಡನೆ ಹಿಂದಿರುಗಿ ಹೊರಟು ಹೋದನು.

೧೯. **ಕವಿಸೀತೆ.**—ಈಕೆಯು ಭೋಜರಾಜನ ಸಭಾ ವಿದ್ವಾಂಸರಲ್ಲೊಬ್ಬಳು. ಈಕೆಯ ಪತಿಯು ಸಹ ದೊಡ್ಡ ವಿದ್ವಾಂಸನು. ಈಕೆಯು ಆಶು ಕವಿತ್ವವನ್ನು ಹೇಳುವುದರಲ್ಲಿ ಬಹು ಪ್ರಸಿದ್ಧಿಯನ್ನು ಪಡೆದಳು. ತನ್ನ ಕವಿತ್ವದಿಂದ ಸಭೆಯಲ್ಲಿರುವ ವಿದ್ವಾಂಸರನ್ನು ಅನೇಕಸಲ ಮೆಚ್ಚಿಸಿ, ಅನೇಕ ಬಹುಮಾನಗಳನ್ನು ಪಡೆದಳು.

೨೦. ರೂಪಮಂಜರಿ.—ಬಂಗಾಳಿಗೆ ಸೇರಿದ ವರ್ಧಮಾನ ಜಿಲ್ಲೆಯಲ್ಲಿ ಗಕುಲಾ ಎಂಬ ಗ್ರಾಮವಿರುವುದು. ಅಲ್ಲಿ ನಾರಾಯಣದಾಸ ಸುಧಾಮುಖಿಯರೆಂಬ ದಂಪತಿಗಳು ವಾಸವಾಗಿದ್ದರು. ಇವರಿಗೆ ಕ್ರಿ.ಶ. ೧೭೭೬ ರಲ್ಲಿ ಒಂದು ಸ್ತ್ರೀಶಿಶುವು ಜನ್ಮಿಸಿತು. ಆ ಮಗುವಿಗೆ ತಾಯಿತಂದೆಗಳು ರೂಪಮಂಜರಿ ಎಂದು ನಾಮಕರಣವನ್ನು ಮಾಡಿದರು. ಅವರಿಗೆ ಈಕೆಯು ಒಬ್ಬಳೇ ಮಗಳಾದುದರಿಂದ ಬಹು ಪ್ರೀತಿಯೊಡನೆ ಬೆಳಸುತಲಿದ್ದರು. ಈಕೆಗೆ ಐದನೆಯ ವರ್ಷವು ಪ್ರವೇಶಿಸಿದಮೇಲೆ, ವಿದ್ಯಾವಂತನಾದ ನಾರಾಯಣದಾಸನು ಮಗಳಿಗೆ ಅಕ್ಷರಾಭ್ಯಾಸವನ್ನು ಮಾಡಿಸಿದನು. ರೂಪಮಂಜರಿಯು ಒಂದೆರಡುಸಲ ಕೇಳಿದ ಮಾತ್ರದಿಂದಲೇ ಗ್ರಹಿಸುವಷ್ಟು ಬುದ್ಧಿಸೂಕ್ಷ್ಮವುಳ್ಳವಳಾದ ಕಾರಣ ಅಲ್ಪಕಾಲದಲ್ಲಿಯೇ ವಿಶೇಷ ವಿದ್ಯೆಯನ್ನು ಆರ್ಜಿಸಿದಳು. ಮಗಳ ವಿದ್ಯಾಭಿಲಾಷೆಯನ್ನು ಕಂಡು ನಾರಾಯಣದಾಸನು ಆಕೆಗೆ ವ್ಯಾಕರಣಶಾಸ್ತ್ರ, ಶಬ್ದಶಾಸ್ತ್ರಗಳನ್ನು ಕಲಿಸಿದನು. ಅವುಗಳನ್ನು ಸಹ ಆಕೆಯು ಅತಿ ಶೀಘ್ರದಲ್ಲಿಯೆ ಅಭ್ಯಸಿಸಿದುದರಿಂದ, ಆತನು ತನ್ನ ಕುವರಿಯನ್ನು ಬಹಾದುರ್‌ಪುರದಲ್ಲಿರುವ ವರ್ದಾಚಂದ್ರತರ್ಕಾಲಂಕಾರನ ಮನೆಗೆ ವಿದ್ಯಾಭ್ಯಾಸಾರ್ಥವಾಗಿ ಕಳುಹಿಸಿದನು. ಅಲ್ಲಿ ರೂಪಮಂಜರಿಯು ಪಾಠಶಾಲೆಯಲ್ಲಿ ಗಂಡುಮಕ್ಕಳೊಡನೆ ವಿದ್ಯಾಭ್ಯಾಸವನ್ನು ಮಾಡುತಲಿದ್ದಳು. ಈಕೆಯು ಅಲ್ಲಿರುವಾಗಲೆ ನಾರಾಯಣದಾಸನು ಮೃತನಾದುದರಿಂದ ಈಕೆಯು ಮನೆಗೆ ಬಂದು ತಂದೆಗೆ ನಡೆಸಬೇಕಾದ ಪ್ರೇತಕರ್ಮಗಳನ್ನೆಲ್ಲ ಮಾಡಿದಳು. ಅನಂತರ ರೂಪಮಂಜರಿಗೆ ಕಾವ್ಯಗಳನ್ನು ಓದಬೇಕೆಂಬ ಇಚ್ಛೆಯುಂಟಾಗಲು, ಸರಗಾಮಿನಲ್ಲಿರುವ ಪಂಡಿತ ಗೋಪಾಲಾನಂದರ ಬಳಿಗೆಹೋಗಿ, ಅಲ್ಲಿ ವೈದ್ಯಶಾಸ್ತ್ರವೇ ಆದಿಯಾಗಿ ಅನೇಕ ಶಾಸ್ತ್ರಗಳನ್ನು ಕಲಿತಳು.

ಈ ವಿದ್ವಾಂಸಳು ಸಕಲ ಸದ್ಗುಣಗಳುಳ್ಳವಳಾಗಿದ್ದಳು. ಈಕೆಯು ವೈಷ್ಣವ ಮತಾವಲಂಬಿನಿ. ರೂಪಮಂಜರಿಯು ಪುರುಷರಂತೆಯೆ ಮುಂದುಗಡೆ ಕ್ಷೌರವನ್ನು ಮಾಡಿಸಿಕೊಂಡು ಹಿಂದೆ ಜುಟ್ಟುಬಿಡಿಸಿಕೊಂಡಿದ್ದಳು. ಈಕೆಯು ಪುರುಷವಸ್ತ್ರಗಳನ್ನೇ ಧರಿಸುತಲಿದ್ದಳು. ಈಕೆಯು ಜನ್ಮವನ್ನೆಲ್ಲ ಅವಿವಾಹಿತೆಯಾಗಿಯೇ ಕಳೆದಳು. ಈಕೆಯು ತಾನು ವಿದ್ಯಾಭ್ಯಾಸವನ್ನು ಮಾಡುತ್ತ ಅನೇಕರಿಗೆ ವಿದ್ಯಾದಾನವನ್ನು ಮಾಡುತಲಿದ್ದಳು. ಆಕೆಯ ಬಳಿಯಲ್ಲಿ ಕಾವ್ಯ, ವ್ಯಾಕರಣಾದಿಗಳನ್ನು ಕಲಿಯುವ ಅನೇಕ ವಿದ್ಯಾರ್ಥಿಗಳಿರುತಲಿದ್ದರು. ರೂಪಮಂಜರಿಗೆ ಸಂಸಾರಿಗಳ, ವ್ಯಾಪಾರಗಾರರ ಲೆಕ್ಕಗಳು ಚೆನ್ನಾಗಿ ತಿಳಿದಿದ್ದವು. ವೈದ್ಯಶಾಸ್ತ್ರದಲ್ಲಿ ಈಕೆಗೆ ವಿಶೇಷ ಪ್ರವೀಣತೆಯು ಇದ್ದುದರಿಂದ, ಈಕೆಯು ಅದರಿಂದಲೆ ಜೀವನಕ್ಕೆ ಬೇಕಾದ ಧನವನ್ನು ಆರ್ಜಿಸುತಲಿದ್ದಳು. ಸಾಧಾರಣವಾದ ಜನರು ಈಕೆಯನ್ನು ತರ್ಕಾಲಂಕಾರಳೆಂದೂ, ವಿದ್ಯಾಲಂಕಾರಳೆಂದೂ, ಸಂಬೋಧಿಸುತಲಿದ್ದರು. ಈಕೆಯು ೯೦ ವರ್ಷಗಳ ಮುದುಕಿಯಾದಮೇಲೆ ಸರ್ವತೀರ್ಥಗಳನ್ನು ಸೇವಿಸಿ

ಕೊಂಡು ಸ್ವಗ್ರಾಮಕ್ಕೆ ಬಂದು ಕೆಲವು ವರ್ಷಗಳು ಜೀವಿಸಿ, ತನ್ನ ೧೦೨ ನೆಯ ವಯಸ್ಸಿನಲ್ಲಿ ಕ್ರಿ.ಶ. ೧೮೭೫ ರಲ್ಲಿ ಗತಿಸಿದಳು. ಮಾನಕ ಗ್ರಾಮವಾಸಿಯಾದ ಕವಿನಾಥಬೋಲಾನಾಥನು ಈಕೆಯ ಬಳಿಯಲ್ಲಿ ವೈದ್ಯವಿದ್ಯೆಯನ್ನು ಕಲಿತು ಪ್ರವೀಣನಾದನು.

೨೧. ಶರತ್‌ಸುಂದರಿ.—ಬಂಗಾಳಾ ದೇಶದಲ್ಲಿ ರಾಜಶಾಹೀ ಪ್ರಾಂತದಲ್ಲಿ ಪುತೀ ಆ ಎಂಬ ಒಂದು ಚಿಕ್ಕ ಸಂಸ್ಥಾನವಿತ್ತು. ಇದಕ್ಕೆ ಅಧಿಪತಿಯಾದ ರಾಜಾ ಜೋಗೇಂದ್ರನಾಥನು ಈಕೆಯ ಪತಿ. ಈಕೆಗೆ ಹದಿನಾಲ್ಕನೆಯ ವಯಸ್ಸಿನಲ್ಲಿ ವೈಧವ್ಯವು ಸಂಭವಿಸಿತು. ಅನಂತರ ಈಕೆಯು ತನ್ನ ಆಭರಣಗಳನ್ನೆಲ್ಲ ಬಡವರಿಗೆ ದಾನಮಾಡಿ ಹಿಂದೂಮತಾಚಾರದಂತೆ ಸರ್ವಾಲಂಕಾರಗಳನ್ನು ತ್ಯಜಿಸಿ, ಸಮ ದುಃಖಿನಿಯರಾದ ವಿತಂತುಗಳೊಡನೆ ಕಾಶೀ ಕ್ಷೇತ್ರಕ್ಕೆ ಹೋಗಿ ದೈವಭಕ್ತಿಯಲ್ಲಿ ಕಾಲವನ್ನು ಕಳೆಯುತಲಿದ್ದಳು. ಈಕೆಯು ಒಬ್ಬ ಬಾಲಕನನ್ನು ದತ್ತು ತೆಗೆದುಕೊಂಡು ಅವನಿಗೆ ವಿವಾಹವನ್ನು ಮಾಡಿದಳು. ಆದರೆ ಆತನು ಬಹು ದಿನಗಳು ಜೀವಿಸದೆ ಮೃತನಾದನು. ಈಕೆಯು ತನ್ನ ದೇಶವಾಸಿಗಳಿಗೆ ಮಾಡಿದ ಅನೇಕ ಮಹೋಪಕಾರಗಳಿಂದಲೂ, ಈಕೆಯ ಸದ್ಗುಣಗಳಿಂದಲೂ ಸಂತುಷ್ಟರಾಗಿ ಪ್ರಭುತ್ವದವರು ಈಕೆಗೆ ಮಹಾರಾಣಿ ಎಂಬ ಬಿರುದನ್ನು ಕೊಟ್ಟರು. ಈಕೆಯ ಮರಣದಿಂದ ಬಹು ಜನರು ದುಃಖಿತರಾದರು. ಪ್ರೊಫೆಸರ್ ವರ್ಡಸ್ ನಂತಹ ಘನವಂತನು ಸಹ ಈಕೆಯ ಸದ್ಗುಣಗಳನ್ನು ವರ್ಣಿಸಿದನು.

೨೨. ಹೇಮಂತಕುಮಾರಿ.—ಈಕೆಯು ಶರತ್ ಸುಂದರಿಯ ಸೊಸೆ. ಈಕೆಯು ತನ್ನ ಅತ್ತೆಯಂತೆಯೆ ವಿದ್ಯಾವತಿಯೂ, ಗುಣವತಿಯೂ ಆಗಿದ್ದಳು. ಶರತ್ ಸುಂದರಿಯ ಮರಣಾನಂತರ ಈಕೆಯು ರಾಜ್ಯವನ್ನು ಪಾಲಿಸುತಲಿದ್ದಳು. ರಾಜ್ಯವನ್ನು ಪಾಲಿಸುವಷ್ಟು ಶಕ್ತಿಸಾಮರ್ಥ್ಯಗಳು ಈಕೆಯಲ್ಲಿ ಇವೆಯೋ ಇಲ್ಲವೋ ಎಂದು ಪರೀಕ್ಷಿಸುವುದಕ್ಕಾಗಿ ಪ್ರಭುತ್ವದವರು ಒಬ್ಬ ಕಲೆಕ್ಟರನನ್ನು ಆಕೆಯ ಬಳಿಗೆ ಕಳುಹಿಸಿದರು. ಆಗ ಆ ಕಲೆಕ್ಟರನೂ, ಇತರ ಸರದಾರರೂ ತೆರೆಯ ಆಚೆ ಕುಳಿತುಕೊಂಡರು. ಹೇಮಂತಕುಮಾರಿಯು ತೆರೆಯೊಳಗೆ ಕುಳಿತುಕೊಂಡಳು. ಆಗ ಕಲೆಕ್ಟರನು ವಿದ್ಯಾವಿಷಯವಾಗಿಯೂ, ರಾಜ್ಯಪಾಲನಾ ವಿಷಯವಾಗಿಯೂ ಆಕೆಯನ್ನು ಅನೇಕ ಪ್ರಶ್ನೆಗಳನ್ನು ಕೇಳಿ ಆಕೆಯು ಕೊಟ್ಟ ಸದುತ್ತರಗಳಿಗೆ ವಿಸ್ಮಿತನಾದನು. ಆಕೆಯ ವಿನಯ ಸಂಭಾಷಣೆಯನ್ನೂ, ರಾಜ್ಯನೀತಿ ವಿಶಾರದತ್ವವನ್ನೂ ಕೇಳಿ, ಕಲೆಕ್ಟರನು ಹೇಮಂತಕುಮಾರಿಯು ರಾಜ್ಯವನ್ನು ಪಾಲಿಸಲು ಸಮರ್ಥಳೆಂದು ತಿಳಿಸಿದನು. ಈಕೆಯ ಶುದ್ಧಾಂತಃಕರಣದಿಂದ ದಾನಧರ್ಮಗಳನ್ನು ಮಾಡುತ್ತ ರಾಜ್ಯವನ್ನು ಪಾಲಿಸಿ ಸ್ವರ್ಗಕ್ಕೆ ಹೋದಳು.

೨೩. ಕಲಾವತಿ.—ಈ ಪತಿವ್ರತೆಯು ರಾಜಪುತ್ರಸ್ಥಾನದಲ್ಲಿರುವ ಒಂದು ಚಿಕ್ಕ ಸಂಸ್ಥಾನಕ್ಕೆ ಅಧಿಪತಿಯಾದ ಕರ್ಣಸಿಂಹನ ಸತಿ. ಒಂದಾನೊಂದು ಸಮಯದಲ್ಲಿ, ಡಿಲ್ಲೀಪತಿಯಾದ ಅಲ್ಲಾವುದ್ದೀನನು ಕರ್ಣಸಿಂಹನ ಮೇಲೆ ದಂಡೆತ್ತಿ ಬರಲು ಕರ್ಣಸಿಂಹನು ಆತನೊಡನೆ ಯುದ್ಧಮಾಡಲು ಸಿದ್ಧನಾದನು. ಕಲಾವತಿಯು ಪತಿಯೊಡನೆ ರಣಭೂಮಿಗೆ ಹೋಗಿ ಶತ್ರುಸೈನಿಕರನ್ನು ತನ್ನ ಖಡ್ಗಕ್ಕೆ ಆಹುತಿಕೊಡುತಲಿದ್ದಳು. ಒಬ್ಬ ಶತ್ರುಸೈನಿಕನು ಕರ್ಣಸಿಂಹನನ್ನು ಸಂಹರಿಸಲು ಪ್ರಯತ್ನಿಸುತಲಿದ್ದನು. ಕರ್ಣರಾಜನು ಅಜಾಗರೂಕನಾಗಿ ಶತ್ರುವಿನ ಬರುವಿಕೆಯನ್ನು ಅರಿಯದೆ ಇದ್ದನು. ಆ ಸಮಯದಲ್ಲಿ ಕಲಾವತಿಯು ಪತಿಗೆ ಉಂಟಾಗುತಲಿದ್ದ ಅಪಾಯವನ್ನು ತಿಳಿದು, ತನ್ನ ಖಡ್ಗದಿಂದ ಆ ಸೈನಿಕನನ್ನು ಸಂಹರಿಸಿ ಪತಿಪ್ರಾಣಗಳನ್ನು ಕಾಪಾಡಿದಳು. ಕೊನೆಗೆ ಮೊಗಲರನ್ನು ರಾಜಪುತ್ರರು ಸೋಲಿಸಿದರು. ಆದರೆ ಕರ್ಣರಾಜನಿಗೆ ಮಾತ್ರ ಖಡ್ಗಪ್ರಹಾರದಿಂದ ದೊಡ್ಡ ಘಾಯವುಂಟಾಯಿತು. ಮನೆಗೆ ಬಂದಮೇಲೆ ವೈದ್ಯರಿಗೆ ಘಾಯವನ್ನು ತೋರಿಸಲು ಅವರು ಆ ಘಾಯವು ವಿಷಹೆಚ್ಚಿದ ಶಸ್ತ್ರದಿಂದ ಉಂಟಾದುದು ಆದಕಾರಣ ವಾಸಿಯಾಗುವುದು ಅಸಾಧ್ಯವೆಂದೂ, ಆದರ ರಸವನ್ನು ಯಾರಾದರೂ ಬಾಯಿಯಿಂದ ಹೀರಿದರೆ ಅದು ವಾಸಿಯಾಗುವುದೆಂದೂ, ಆದರೆ ಆ ರಸವನ್ನು ಹೀರಿದ ಮನುಷ್ಯನು ಮಾತ್ರ ಬದುಕುವುದಿಲ್ಲವೆಂದೂ ನುಡಿದರು. ಕರ್ಣಸಿಂಹನು ತನ್ನ ಪ್ರಾಣವನ್ನು ಕಾಪಾಡಿಕೊಳ್ಳುವಸಲುವಾಗಿ ಬೇರೊಬ್ಬರ ಪ್ರಾಣವನ್ನು ತೆಗೆಯಲು ಒಪ್ಪಿಕೊಳ್ಳಲಿಲ್ಲ. ದಿನೆದಿನೇ ಆತನ ಘಾಯವು ವಿಶೇಷ ಬಾಧೆಯನ್ನುಂಟುಮಾಡುತಲಿತ್ತು. ಪತಿಯ ಬಾಧೆಯನ್ನು ನೋಡಲಾರದೆ ಕಲಾವತಿಯು ಒಂದು ದಿವಸ ಆತನು ನಿದ್ರಿಸುತ್ತಿರಲು ಘಾಯದ ರಸವನ್ನು ಹೀರಿ ಮೃತಳಾದಳು. ಕರ್ಣಸಿಂಹನಿಗೆ ಘಾಯವು ವಾಸಿಯಾಯಿತು. ಆತನು ಕಲಾವತಿಯನ್ನೇ ಸ್ಮರಿಸುತ್ತ ಬೇರೇ ವಿವಾಹವನ್ನು ಮಾಡಿಕೊಳ್ಳದೆ ಕೆಲವು ದಿವಸಗಳಿಗೆ ಮೃತನಾದನು.

೨೪. ಕರ್ಮದೇವಿ.—ಈ ಪ್ರತಾಪಶಾಲಿನಿಯು ರಾಣಾಸಮರಸಿಂಹನ ಭಾರ್ಯೆಯು. ಈತನು ಮೇವಾಡದೇಶಕ್ಕೆ ಅಧಿಪತಿ. ಈ ರಾಣಾ ಕ್ರಿ.ಶ. ೧೨ ನೆಯ ಶತಾಬ್ದದಲ್ಲಿ ಇದ್ದನು. ಸ್ವದೇಶ ರಕ್ಷಣಾರ್ಥವಾಗಿ ಡಿಲ್ಲೀಪತಿಯಾದ ಪೃಥಿವೀರಾಜನೂ, ಮೇವಾಡಾಧಿಪತಿಯಾದ ಸಮರಸಿಂಹನೂ ಆಫ್ಘನ್ ದೇಶಸ್ಥನಾದ ಶಹಾಬುದ್ದೀನ್ ಘೋರಿಯೊಡನೆ ಸಂಗ್ರಾಮವನ್ನುಮಾಡಿ ಅನೇಕಸಲ ಅವನನ್ನು ಸೋಲಿಸಿದರು. ಆದರೆ ಕೊನೆಗೆ ಯವನರಿಗೆ ಜಯವುಂಟಾಗಿ ಸಮರಸಿಂಹನೂ, ಪೃಥಿವೀರಾಜನೂ ಯುದ್ಧದಲ್ಲಿ ಮೃತರಾದರು. ಅದರಿಂದ ಘೋರಿಗೆ ಬಹು ಸಂತೋಷವುಂಟಾಗಿ ಹಿಂದೂಸ್ಥಾನವನ್ನೆಲ್ಲ ಅಲ್ಲಕಲ್ಲೋಲಮಾಡಿ ಮೇವಾಡೆಯನ್ನು ಸ್ವಾಧೀನಪಡಿಸಿಕೊಳ್ಳಲು ತನ್ನ ಮಗನಾದ ಕುತುಬುದ್ದೀನನನ್ನು ಕಳುಹಿಸಿ

ದನು. ಮೇವಾಡಿಯಲ್ಲಿ ಸಮರಸಿಂಹನು ರಣನಿಹತನಾದುದರಿಂದ ಕುಮಾರನಿಗೆ ಪಟ್ಟವನ್ನು ಕಟ್ಟ ಕರ್ಮದೇವಿಯು ರಾಜ್ಯವನ್ನು ಪಾಲಿಸುತಲಿದ್ದಳು. ಆಕೆಯು ಕುತುಬುದ್ದೀನನು ಬರುತಲಿರುವನು ಎಂದು ಕೇಳಿ ಕೋವಾವೇಶದೊಡನೆ ಕವಚವನ್ನೂ, ಸಕಲ ಶಸ್ತ್ರಾಸ್ತ್ರಗಳನ್ನೂ ಧರಿಸಿ, ಸೈನ್ಯಸಹಿತಳಾಗಿ ಸ್ವದೇಶ ಸ್ವಧರ್ಮ ರಕ್ಷಣಾರ್ಥವಾಗಿ ಯವನರನ್ನು ಎದುರಿಸಿದಳು. ಕುತುಬುದ್ದೀನನು ಸೈನ್ಯದೊಡನೆ ರಾಣಿಯ ಸುತ್ತುಮುತ್ತಿ ಯುದ್ಧವನ್ನು ಪ್ರಾರಂಭಿಸಿದನು. ಆ ವೀರವನಿತೆಯು ಹೆದರದೆ, ತನ್ನ ಸೈನಿಕರಿಗೆ ಉತ್ಸಾಹದೀಪಕಗಳಾದ ವಚನಗಳನ್ನು ಹೇಳುತ್ತ ಶಕ್ತಿ ರೂಪಧಾರಿಣಿಯಾಗಿ ಶತ್ರುಗಳನ್ನು ತುಂಡುತುಂಡಾಗಿ ಕತ್ತರಿಸುತಲಿದ್ದಳು. ಆಕೆಯ ಪ್ರತಾಪದಿಂದ ರಾಜಪುತ್ರರಿಗೆ ಜಯವುಂಟಾಯಿತು. ಕುತುಬುದ್ದೀನನು ಈಕೆಯ ರೌದ್ರರೂಪವನ್ನು ಕಂಡು ದಿಗ್ಭ್ರಮೆಯನ್ನುಹೊಂದಿ ವಿಜಯಕಾಂಕ್ಷೆಯನ್ನು ತ್ಯಜಿಸಿ ಪ್ರಾಣಭಯದಿಂದ ಪಲಾಯನವಾದನು. ಕರ್ಮದೇವಿಯು ಶೂರಳೆಂದು ಪ್ರಸಿದ್ಧಿಯನ್ನು ಪಡೆದು ಸ್ವಲ್ಪಕಾಲ ರಾಜ್ಯವನ್ನು ಪಾಲಿಸಿ, ಪರಲೋಕವನ್ನು ಸೇರಿದಳು.

೨೫. ಇಂದುಲೇಖ.—ಈಕೆಯು ಸಂಸ್ಕೃತ ಕವಯಿತ್ರಿ. 'ಸುಭಾಷಿತ ರತ್ನಭಾಂಡಾಗಾರ,' 'ಸುಭಾಷಿತಾವಲಿ' ಮೊದಲಾದ ಗ್ರಂಥಗಳಲ್ಲಿ ಈಕೆಯಿಂದ ರಚಿತವಾದ ಶ್ಲೋಕಗಳು ಉದಹರಿಸಲ್ಪಟ್ಟಿವೆ. ಆದರೆ ಈಕೆಯು ರಚಿಸಿದ ಗ್ರಂಥಗಳು ದೊರೆಯಲಿಲ್ಲ.

೨೬. ಮಾರುಲ.—ಈಕೆಯು ವಿಖ್ಯಾತಳಾದ ಸಂಸ್ಕೃತ ಕವಯಿತ್ರಿ. ಈಕೆಯನ್ನೂ, ಇನ್ನೂ ಇತರ ಕವಯಿತ್ರಿಗಳನ್ನೂ ಕುರಿತು ಧನದೇವನೆಂಬ ಕವಿಯು ಹೀಗೆ ಬರೆದಿದಾನೆ :—

ಶ್ಲೋ॥ ಶೀಲಾವಿಜ್ಜಾಮಾರುಲಾಮೊರಿಕಾದ್ಯಾಃ
ಕಾವ್ಯಂ ಕರ್ತುಂ ಸಂತಿವಿಜ್ಞಾಃ ಸ್ತ್ರಿಯೋಪಿ ।
ವಿದ್ಯಾವೇತ್ತುಂವಾದಿನೋನಿರ್ವಿಜೇತುಂ
ವಿಶ್ವಂ ವಕ್ತುಂಯಃ ಪ್ರವೀಣಃ ಸವಂದ್ಯಃ ॥

ಅಂದರೆ ಶೀಲಾ, ವಿಜ್ಜಾ, ಮಾರುಲಾ, ಮೊರಿಕಾ ಮೊದಲಾದ ಸ್ತ್ರೀಯರು ಕಾವ್ಯವನ್ನು ರಚಿಸುವಷ್ಟು ಶಕ್ತಿಯುಳ್ಳವರಾಗಿದಾರೆ. ವಿದ್ಯೆಯನ್ನು ಕಲಿತವರೂ, ವಾದಿಸುವವರನ್ನು ಗೆಲ್ಲತಕ್ಕವರೂ, ವಿಶ್ವವನ್ನು ವರ್ಣಿಸಲು ಕಲಿತವರೂ ಯಾರಾದರೂ ವಂದ್ಯರೇ ಹೌದು.

ಈ ಶ್ಲೋಕದಿಂದ ಆ ಕಾಲದಲ್ಲಿ ಅನೇಕ ಸ್ತ್ರೀಯರು ವಿಶೇಷ ವಿದ್ಯೆಯನ್ನು ಕಲಿತು ವಾದದಲ್ಲಿ ಪಂಡಿತರನ್ನು ಗೆಲ್ಲುತಲಿದ್ದರೆಂತಲೂ, ವಿದ್ವಾಂಸರು ಮೆಚ್ಚುವಂಥಾ ಕಾವ್ಯಗಳನ್ನು ರಚಿಸುತಲಿದ್ದರೆಂತಲೂ ಸ್ಪಷ್ಟವಾಗುತ್ತದೆ.

೨೭. ವಿಜ್ಜಿಕ.—ಈಕೆಗೆ ವಿಜ್ಜಕಾ ಎಂದು ನಾಮಾಂತರ ಉಂಟು. ಈಕೆಯಿಂದ ರಚಿತವಾದ ಶ್ಲೋಕಗಳು ಅನೇಕ ಗ್ರಂಥಗಳಲ್ಲಿ ಉದಹರಿಸಿವೆ. ಈಕೆಯನ್ನು ಜನರು ಸರಸ್ವತಿಯ ಅವತಾರವೆಂದು ಭಾವಿಸುತಲಿದ್ದರು. ಈಕೆಯು ಅಭಿಮಾನದಿಂದ ಹೀಗೆ ಹೇಳಿಕೊಂಡಿದಾಳೆ:—

ಶ್ಲೋ॥ ನೀಲೋತ್ಪಲದಲ ಶ್ಯಾಮಾಂ ವಿಜ್ಜಕಾಂ ಮಾಮಜಾನತಾ।
ವೃಥೈವದಂಡಿನಾವ್ಯೋಕ್ತಂ ಸರ್ವಶುಕ್ಲಾ ಸರಸ್ವತೀ॥

ಅಂದರೆ ಕುಮುದಪುಷ್ಪಗಳಂತೆ ದೇಹವಿರುವ ನನ್ನನ್ನು ತಿಳಿಯದೆ ದಂಡಿ ಕವಿಯು ಸುಮ್ಮನೆ ಸರಸ್ವತೀದೇವಿಯ ಶರೀರವೆಲ್ಲ ಬಿಳುಪಾದುದೇ ಎಂದು ವರ್ಣಿಸಿದನು.

೨೮. ಸುಭದ್ರ.—ಈ ಸಂಸ್ಕೃತ ಕವಯಿತ್ರಿಯನ್ನು ಕುರಿತು ರಾಜಶೇಖರ ನೆಂಬ ಕವಿಯು ಹೀಗೆ ಬರೆದಿದಾನೆ:—

ಶ್ಲೋ॥ ಪಾರ್ಥನ್ಯಮನಿಸಿಸ್ಥಾನಂ ಲೇಭೇಕಲು ಸುಭದ್ರಯಾ।
ಕವೀನಾಂಚವಚೋವೃತ್ತಿ ಚಾತುರ್ಯೇಣ ಸುಭದ್ರಯಾ॥

ಅಂದರೆ ಪೂರ್ವದಲ್ಲಿ ಸುಭದ್ರೆಯು ಪಾರ್ಥನ ಮನಸ್ಸಿನಲ್ಲಿ ಸ್ಥಳವನ್ನು ಸಂಪಾದಿಸಿದಳು. ಈಗ ಸುಭದ್ರೆಯೆಂಬ ಕವಯಿತ್ರಿಯು ಕವಿತಾರಚನಾ ಚಾತುರ್ಯದಿಂದ ಕವಿಗಳ ಮನಸ್ಸಿನಲ್ಲಿ ಸ್ಥಾನವನ್ನು ಸಂಪಾದಿಸಿದಳು.

೨೯. ಶೀಲಾಭಟ್ಟಾರಿಕ.—ಈ ಕವಯತ್ರಿಯನ್ನು ಕುರಿತು ರಾಜ ಶೇಖರನೆಂಬ ಕವಿಯು ಹೀಗೆ ಹೇಳಿದಾನೆ:—

ಶ್ಲೋ॥ ಶಬ್ದಾರ್ಥಯೋಸಮೋಗುಂಪಃ ಪಾಂಚಾಲೀರೀತಿರುಚ್ಯತೇ।
ಶೀಲಾಭಟ್ಟಾರಿಕಾವಾಚಿ ಬಾಣೋತ್ತಿಷುಚಸಾಯದಿ॥

ಅಂದರೆ ಶೀಲಾಭಟ್ಟಾರಿಕೆಯ, ಬಾಣಭಟ್ಟನ ಕಾವ್ಯಗಳಲ್ಲಿರುವ ಪದಗಳ, ಅರ್ಥಗಳ ಸಮಾನಗುಂಭನವು ಪಾಂಚಾಲೀರೀತಿ ಎನಿಸಲ್ಪಡುವುದು.

೩೦. ಸತೀವು.—ಈ ಧರ್ಮಸ್ಥಾಪಕಳು ೧೮ ನೆಯ ಶತಾಬ್ದದಲ್ಲಿದ್ದಳು. ಈಕೆಯ ಪತಿಯ ಹೆಸರು ರಾಮಶರಣಪಾಲ, ಮಗನ ಹೆಸರು ದುಲಾಲ್ ಚಂದ. ಇವರ ನಿವಾಸಗ್ರಾಮವು ಕಲಕತ್ತಾ ನಗರಕ್ಕೆ ಉತ್ತರದಲ್ಲಿ ಮುವ್ವತ್ತು ಮೈಲಿಯ ದೂರದಲ್ಲಿ ಗಂಗಾತೀರದಲ್ಲಿರುವ ಘೋಷಾಯೆಂಬ ಹಳ್ಳಿ. ಇವರು ಒಕ್ಕಲಿಗರು. ಈಕೆಯೂ ಈಕೆಯ ಪುತ್ರನೂ ಸೇರಿ ಒಂದು ಧರ್ಮವನ್ನು

ಸ್ಥಾಪಿಸಿದರು. ಆ ಧರ್ಮದ ಹೆಸರು ಔಲ್ ಅಥವಾ ಕರ್ತಾಭಜನೆ, ಅಥವಾ ಸತ್ಯ ಧರ್ಮ ಎಂದು ಹೇಳುತ್ತಾರೆ. ಆ ಮತದಲ್ಲಿ ಸಾಧುಸಾಂಗತ್ಯ, ನಾಮ-ಸಂಕೀರ್ತನೆ, ಗುರುಭಜನೆ ಈ ಮೂರು ಪ್ರಧಾನವಾದುದು. ಈಕೆಗೆ ಪ್ರಥಮದಲ್ಲಿ ಇಪ್ಪತ್ತೈರಡು ಜನ ಶಿಷ್ಯರು ದೊರೆತರು. ಅವರಿಗೆ ಔಳೈಂದು ಹೆಸರು. ಶಿಷ್ಯರು ಈಕೆಯನ್ನು ಮಾ ಎಂದು ಕರೆಯುತಲಿದ್ದರು. ಮಾ ಎಂದರೆ ತಾಯಿ ಎಂದರ್ಥ. ಈಕೆಯು ತನ್ನ ಶಿಷ್ಯರಿಗೆ ಬ್ರಹ್ಮಚರ್ಯ ವ್ರತವನ್ನು ಕುರಿತು ಚೆನ್ನಾಗಿ ಬೋಧಿಸುತಲಿದ್ದಳು. ಇತರ ಮತಸ್ಥಾಪಕರಲ್ಲಿದ್ದ ಮಹತ್ವವೂ, ದೈವಿಕ ಮಹತ್ವವೂ ಈಕೆಯಲ್ಲಿತ್ತೆಂದು ಈಕೆಯನ್ನು ಕುರಿತು ಅನೇಕ ಕಥೆಗಳನ್ನು ಹೇಳುತ್ತಾರೆ. ಈ ಧರ್ಮವು ಪ್ರಸ್ತುತದಲ್ಲಿ ಬಂಗಾಳದೇಶದಲ್ಲಿದೆ.

ಈಕೆಯ ಮಗನು ಶಿಷ್ಯರಿಗೆ ಅನೇಕ ಧರ್ಮಗಳನ್ನು ತಾಯಿಯ ಅನುಜ್ಞೆಯನ್ನುಪಡೆದು ಬೋಧಿಸುತಲಿದ್ದನು. ಈತನು ಬಂಗಾಳಿಯಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದನು. ಆ ಕೀರ್ತನೆಗಳು ಭಕ್ತಿರಸ ಪರಿಪೂರ್ಣಗಳಾಗಿರುವುದರಿಂದ ಅವುಗಳನ್ನು ಆ ದೇಶೀಯರು ಬಹು ಪೂಜ್ಯಭಾವದೊಡನೆ ಪಠಿಸುತ್ತಾರೆ. ಈತನು ತಾಯಿಗಿಂತಲು ಮೊದಲೇ ಪರಲೋಕಕ್ಕೆ ಹೋದನು. ಸುತನ ಮರಣಕಾಲದಲ್ಲಿ ಎಲ್ಲರ ಜನನಿಯರಂತೆ ಸತೀಮಾ ದುಃಖಿಸುತಲಿರದೆ ನಾಮ ಸಂಕೀರ್ತನೆಯನ್ನು ಮಾಡುತ್ತ ಸಮಾಪದಲ್ಲಿ ಕುಳಿತುಕೊಂಡು, "ಅಪ್ಪಾ, ನೀನು ಹೋಗುವಾಗ ಪ್ರಾಣಿಗಳಿಗೆ ಏನುಕೊಡುವೆ." ಎಂದು ಕೇಳಿದಳು. ಅದಕ್ಕೆ ಆತನು ತಾನು ರಚಿಸಿದ ಕೀರ್ತನೆಗಳೆಂದು ಪ್ರತ್ಯುತ್ತರವನ್ನು ಕೊಟ್ಟನು. ಪ್ರಸ್ತುತದ ಘೋಷಾಪಾರಾದಲ್ಲಿರುವ ಘೋಷಾ ಜಮ್ಮಿ್ದಾರರು ಈಕೆಯ ವಂಶಸ್ಥರು.

೩೧. ಸಂಗ ಮಿತ್ರ.—ಈಕೆಯು ಬೌದ್ಧ ಧರ್ಮಾಭಿಮಾನಿಯಾದ ಅಶೋಕರಾಜನ ಪುತ್ರಿ. ಅಶೋಕರಾಜನು ಕ್ರಿ.ಶ. ಪೂರ್ವದಲ್ಲಿ ೩ನೆಯ ಶತಾಬ್ದದಲ್ಲಿದ್ದಂತೆ ತಿಳಿಯಬರುತ್ತದೆ. ಈಕೆಯ ಅಣ್ಣನಾದ ಮಹಿನ್ದನೂ, ಈಕೆಯೂ ಇಪ್ಪತ್ತುವರ್ಷಗಳ ವಯಸ್ಸಿನೊಳಗೆಯೇ ಬೌದ್ಧ ಧರ್ಮವನ್ನು ಉಪದೇಶಿಸಲು ಸಕಲ ದೇಶಗಳಿಗೂ ಹೋದರು. ಇವರು ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಲಂಕೆಗೆ (ಸಿಂಹಳದ್ವೀಪಕ್ಕೆ) ಹೋಗಿ ಅಲ್ಲಿನ ರಾಜನಾದ ತಿಷ್ಯನಿಗೂ, ಇತರ ಪುರುಷರಿಗೂ ಮಹಿನ್ದನೂ, ರಾಣಿಯಾದ ಅನುಲೆಗೂ ಇತರ ಸ್ತ್ರೀಯರಿಗೂ ಸಂಗಮಿತ್ರೆಯೂ ಬೌದ್ಧ ಧರ್ಮವನ್ನು ಉಪದೇಶಿಸುತಲಿದ್ದರು. ಈಕೆಯು ಬುದ್ಧಗಯೆಯಿಂದ ತೆಗೆದುಕೊಂಡು ಹೋಗಿ ಲಂಕೆಯಲ್ಲಿ ಹಾಕಿದ ಬೋಧಿವೃಕ್ಷ (ಅಶ್ವತ್ಥವೃಕ್ಷ) ದ ಶಾಖೆಯು ಅಲ್ಲಿ ವೃದ್ಧಿಯನ್ನು ಹೊಂದುತ್ತ ಪ್ರಪಂಚದಲ್ಲಿ ಇರುವ ವೃಕ್ಷಗಳಲ್ಲೆಲ್ಲ ಪುರಾತನ ವಾದುದೆಂದು ಎಣಿಸಲ್ಪಡುತಲಿದೆ. ಆಕೆಯಿಂದ ಪ್ರಸರಿಸಲ್ಪಟ್ಟ ಬೌದ್ಧ ಧರ್ಮವು ಈಗ ಲಂಕೆಯಲ್ಲಿ ಇದೆ.

೩೨. **ಅಕ್ಕ ಮಹಾದೇವಿ.**—ಈ ವೈರಾಗ್ಯಶೀಲೆಯು ಕ್ರಿ.ಶ. ೧೨ನೆಯ ಶತಾಬ್ದದಲ್ಲಿದ್ದಂತೆ ತಿಳಿಯಬರುತ್ತದೆ. ಈಕೆಯ ತಾಯಿಯ ಹೆಸರು ಸುಗತಿ. ತಂದೆಯಹೆಸರು ವಿಮಲನು. ಇವರ ನಿವಾಸಸ್ಥಳವು ಕರ್ಣಾಟಕದಲ್ಲಿರುವ 'ಯುಡತಡಿ' ಎಂಬ ಗ್ರಾಮ. ಇವರು ಲಿಂಗಬಲಿಜಿಗಳು. ಈಕೆಯು ಬಾಲ್ಯದಿಂದಲು ಶಿವಭಕ್ತಳಾಗಿದ್ದಳು. ಈಕೆಯು ವಿಶೇಷ ಸೌಂದರ್ಯವತಿಯಾದುದರಿಂದ ಆ ದೇಶದರಾಜನು ಈಕೆಯನ್ನು ಮೋಹಿಸಿ ವಿವಾಹ ಮಾಡಿಕೊಳ್ಳಲೆಣಿಸಿದನು. ಆದರೆ ಅಕ್ಕ ಮಹಾದೇವಿಯು ಭಕ್ತಿಯೇ ಮುಕ್ತಿಸಾಧನವಾದುದೆಂದು ರಾಣಿಯ ಪದವಿಯನ್ನು ಸಹ ಧಿಕ್ಕರಿಸಿ ಅವಿವಾಹಿತೆಯಾಗಿರಲು ನಿಶ್ಚಯಿಸಿಕೊಂಡು, ರಾಜನಿಗೆ ಹೆದರದೆ ಆತನನ್ನು ತಿರಸ್ಕರಿಸಿ ಆ ರಾಜ್ಯದಲ್ಲಿ ಇರಬ್ಹಾರ್ದೆಂದು ಅಲ್ಲಿಂದ ಹೊರಟು, ಸರ್ವಸಂಗರಹಿತಳಾಗಿ ಲಿಂಗಮತ ~~ಸ್ಥಾಪಕನಾದ~~ ಬಸವನ ಸಭೆಗೆ ಬಂದು ಅಲ್ಲಿ ನಲ್ಲಮಪ್ರಭುವೆಂಬ ಮಹಾನುಭಾವನಿಂದ ಜ್ಞಾನೋಪದೇಶವನ್ನು ಪಡೆದಳು ಈಕೆಯು ಮದುವೆಯನ್ನು ಮಾಡಿಕೊಳ್ಳದೆ, ಶೈವ ಮತವನ್ನು ಸ್ಥಾಪಿಸುವುದರಲ್ಲಿ ಬಸವಣ್ಣನಿಗೆ ಬಹಳ ಸಹಾಯವನ್ನು ಮಾಡಿದಳು. ಈಕೆಯ ದೃಢನಿಶ್ಚಯವನ್ನೂ, ಭಕ್ತಿಯನ್ನೂ, ಜ್ಞಾನವನ್ನೂ, ಸತ್ವಗುಣವನ್ನೂ ಕಂಡು ಜನರು ಅಕ್ಕಮಹಾದೇವಿಯು ಪಾರ್ವತಿಯ ಸಾತ್ವಿಕಾಂಶ ಸಂಭೂತಳೆಂದು ನಂಬಿದ್ದರು.

೩೩. **ತ್ರಿಪುರಾಧೀಶ್ವರನ ಪತ್ನಿ.**—ಭರತವರ್ಷಕ್ಕೆ ಪೂರ್ವದಿಕ್ಕಿನಲ್ಲಿ ಪ್ರಾಚೀನಕಾಲದಿಂದಲು ಒಂದು ರಾಜ್ಯವಿದೆ. ಈ ರಾಜ್ಯವು ಅತಿ ಪ್ರಾಚೀನ ಕಾಲದಿಂದ ವರ್ತಮಾನಕಾಲದವರೆಗೂ ಸ್ವದೇಶ ಪ್ರಭುಗಳ ಪಾಲನೆಯಲ್ಲಿಯೇ ಇದೆ. ಇದರ ಹೆಸರು ತ್ರಿಪುರ (ಟಿಪ್ಪಾರಾ). ಈ ರಾಜ್ಯಾಧಿಪತಿಯ ಪತ್ನಿಯೇ ಈ ಚರಿತ್ರೆ ನಾಯಕಿಯು. ೬೬೦ ವರ್ಷಗಳ ಕೆಳಗೆ ಆ ರಾಜ್ಯವನ್ನು ಮಹಾರಾಜಾ ಚೇಥೂಮ್ಫಾ ಎಂಬ ದೊರೆಯು ಆಳುತಲಿದ್ದನು. ಆಗ ಆ ರಾಜ್ಯದಲ್ಲಿ ಹೀರಾವಂತನೆಂಬ ಒಬ್ಬ ಧನಿಕನು ವಾಸಮಾಡುತಲಿದ್ದನು. ಆತನ ಬಂಗಾಳಾ ರಾಜನಬಳಿಯಲ್ಲಿ ಒಂದು ದೊಡ್ಡ ಅಧಿಕಾರದಲ್ಲಿದ್ದು ಪರಾಕ್ರಮವಂತನೆಂದು ಹೆಸರುಹೊಂದಿದನು. ಈ ಹೀರಾವಂತನು ಒಂದು ಸಲ ತ್ರಿಪುರಾಧೀಶ್ವರನನ್ನು ಅವಮಾನಗೊಳಿಸಿದನು. ಅದರಿಂದ ಆ ರಾಜನು ಬಹಳ ಆಗ್ರಹಗೊಂಡು ಆತನ ಮೇಲೆ ತನ್ನ ಸೇನಾನಾಯಕರನ್ನು ವಿಪುಲ ಸೈನ್ಯಸಹಿತವಾಗಿ ಕಳುಹಿಸಿದನು. ಈ ಸೈನ್ಯವನ್ನು ನೋಡಿ ಹೀರಾವಂತನು ಭೀತನಾಗಿ ವಂಗದೇಶಾಧಿಪತಿಯ ಸಹಾಯವನ್ನು ಕೇಳಲು, ಆತನು ತ್ರಿಪುರಾಧೀಶನ ಸೈನ್ಯಕ್ಕೆರಡರಷ್ಟು ಸೈನ್ಯವನ್ನು ಕೊಟ್ಟನು. ಹೀರಾವಂತನು ಚೇಥೂಮ್ಫಾ ಸೈನ್ಯಗಳು ಬರುವುದರೊಳಗಾಗಿಯೇ ತನ್ನ ಸೈನ್ಯಗಳನ್ನು ತೆಗೆದು ಕೊಂಡು ತ್ರಿಪುರರಾಜ್ಯವನ್ನು ಸಮಿಾಪಿಸಿದನು. ತ್ರಿಪುರರಾಜನು ಹೀರಾವಂತನ ಸೈನ್ಯಗಳು ತನ್ನ ಸೈನ್ಯಕ್ಕಿಂತಲು ಅಧಿಕವಾಗಿರುವುದನ್ನು ನೋಡಿ ಯುದ್ಧ

ಮಾಡಲು ಸಂದೇಹಿಸಿದನು. ಈ ವಿಷಯವನ್ನು ಕೇಳಿ ರಾಜಪತ್ನಿಯು ತನ್ನ ಪತಿಗೆ ಅನೇಕ ಉತ್ಸಾಹವಚನಗಳನ್ನು ನುಡಿದು ಯುದ್ಧಕ್ಕೆ ಹೋಗುವಂತೆ ಹೇಳಿದಳು. ಆದರೆ ರಾಜನು ಅನೇಕ ಆಟಂಕಗಳನ್ನು ಹೇಳಿ ಯುದ್ಧಕ್ಕೆ ಹೋಗುವುದಿಲ್ಲವೆಂದು ಹೇಳಿದನು. ಆಗ ರಾಣಿಯು ತಾನೇ ಯುದ್ಧಕ್ಕೆ ಹೋಗಲು ನಿಶ್ಚಯಿಸಿ, ಯುದ್ಧಕ್ಕೆ ಸಿದ್ಧವಾಗಿರುವಂತೆ ಸೇನಾಧಿಪತಿಗೆ ಆಜ್ಞೆಯನ್ನು ಕಳುಹಿಸಿದಳು. "ನಾನೇ ರಣರಂಗಕ್ಕೆ ಬಂದು ಸ್ವದೇಶ ಕೀರ್ತಿಯನ್ನು ಕಾಪಾಡುವೆನು. ನೀವು ಹೆದರದೆ ಯುದ್ಧವನ್ನು ಮಾಡಿ" ರೆಂದು ಸೈನಿಕರಿಗೆ ತಿಳಿಸಿದಳು. ರಾಣಿಯ ಮಾತುಗಳಿಂದ ಸೈನಿಕರು ಧೈರ್ಯಯುತರಾದರು. ರಾಣಿಯು ಯುದ್ಧವು ನಡೆಯುವುದಕ್ಕೆ ಮುಂದಿನ ದಿವಸವೆ ಸೈನ್ಯವನ್ನೆಲ್ಲ ಯುದ್ಧಭೂಮಿಗೆ ಕಳುಹಿಸಿ, ಮೂರನೆಯದಿವಸ ಸೈನ್ಯಾಧಿಪತಿಯೊಡನೆ ತಾನು ಸಂಗ್ರಾಮ ಭೂಮಿಗೆ ಹೋದಳು. ಅನಂತರ ಎರಡುಪಕ್ಷದವರಿಗೂ ದೊಡ್ಡ ಯುದ್ಧವು ನಡೆದು, ರಾಣಿಯ ಶೌರ್ಯಧೈರ್ಯಗಳಿಂದ ಆಕೆಯ ಸೇನೆಯು ಅಲ್ಪ ಸಂಖ್ಯೆಯುಳ್ಳದ್ದಾದರೂ ಆಕೆಗೆ ಜಯವುಂಟಾಯಿತು. ಶತ್ರುಗಳು ಹೇಳದೆ ಕೇಳದೆ ಓಡಿ ಹೋದರು. ರಾಜ ಮಹಿಷಿಯು ಜಯದುಂದುಭಿಗಳ ಧ್ವನಿಯೊಡನೆ ಮಹಾ ವಿಭವದಿಂದ ಪುರವನ್ನು ಪ್ರವೇಶಮಾಡಿದಳು.

೩೪. **ಕೈಲಾಸಕಾಮಿನಿ.**—ಈಕೆಯು ದೊಡ್ಡ ವಿದ್ವಾಂಸಳು. ಈಕೆಯ ತಂದೆಯ ಹೆಸರು ಭುವನಮೋಹನದೇದ್‌ಸರ್ಕಾರ್. ತಾಯಿಯ ಹೆಸರು ಮನಮೋಹಿನಿ. ಕೈಲಾಸಕಾಮಿನಿಗೆ ತಾಯಿತಂದೆಗಳು ಬಾಲ್ಯದಲ್ಲಿಯೇ ಸತ್ತು ಹೋದರು. ಅನಂತರ ಈಕೆಯು ಕಲಿಕತ್ತೆಗೆ ಹೋಗಿ ಬೆಥೂ ವಿದ್ಯಾಲಯದಲ್ಲಿ ಓದುಬರಹಗಳನ್ನು ಕಲಿಯುತಲಿದ್ದಳು. ಆ ಪಾಠಶಾಲೆಯಲ್ಲಿಯೇ ಈಕೆಗೆ ಬ್ರಹ್ಮಮತವನ್ನು ಕುರಿತು ಸ್ವಲ್ಪಪರಿಚಯವಾಯಿತು. ಅನಂತರ ಒಬ್ಬ ಬ್ರಾಹ್ಮ ಮತಾವಲಂಬಿಯು ಈಕೆಗೆ ಪತಿಯಾದನು. ಶಿಶುಪಾಲನೆಯಲ್ಲಿಯೂ, ಗೃಹಕೃತ್ಯಗಳನ್ನು ನಿರ್ವಹಿಸುವುದರಲ್ಲಿಯೂ ಈಕೆಯು ವಿಶೇಷ ಬುದ್ಧಿಸೂಕ್ಷ್ಮವನ್ನು ತೋರಿಸುತಲಿದ್ದಳು. ಈಕೆಯು ತನ್ನ ಕಾರ್ಯಗಳನ್ನು ನಿಯಮಿತಸಮಯಕ್ಕೆ ಮುಗಿಸುತಲಿದ್ದಳು. ಅಧ್ಯಯನಾಧ್ಯಾಪನೆಗಳಲ್ಲಿ ಈಕೆಯು ಪ್ರಖ್ಯಾತಳಾದಳು. ಪತಿಭಕ್ತಿ ಎಂಬುದು ಈಕೆಯ ಸ್ವಾಭಾವಿಕಗುಣವಾಗಿತ್ತು. ಈ ಸತಿಯ ಸದ್ಗುಣಗಳನ್ನು ಕಂಡು ಕೇಶವಚಂದ್ರಸೇನನು ಈಕೆಯನ್ನು ಪುತ್ರಿಯಂತೆ ಭಾವಿಸಿ ಪ್ರೇಮಿಸುತಲಿದ್ದನು. ಈಕೆಯು ಬ್ರಹ್ಮಸಮಾಜಕ್ಕೆ ವಿಶೇಷ ಸಹಾಯವನ್ನು ಮಾಡುತಲಿದ್ದಳು. ಈಕೆಯು ಕ್ರಿ.ಶ. ೧೮೯೮ ರಲ್ಲಿ ಪರಲೋಕಕ್ಕೆ ಹೋದಳು.

೩೫. **ಹರೀವಿದ್ಯಾಲಂಕಾರ್.**—ಈಕೆಯು ಹಠಾಜಾತಿಯ ಬ್ರಾಹ್ಮಣ ಕುಲಕ್ಕೆ ಸೇರಿದವಳು. ಈಕೆಯು ಸ್ಮೃತಿಗಳನ್ನು, ನ್ಯಾಯಶಾಸ್ತ್ರ ಮೊದಲಾದವು

ಗಳನ್ನು ಚೆನ್ನಾಗಿ ಅಭ್ಯಸಿಸಿ, ಕಾಶಿಯಲ್ಲಿ ಒಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿದಳು. ಹಿಂದೂಸ್ಥಾನದ ಅನೇಕ ವಿದ್ಯಾರ್ಥಿಗಳು ಆ ಪಾಠಶಾಲೆಗೆ ವಿದ್ಯಾಭ್ಯಾಸಾರ್ಥವಾಗಿ ಬರುತಲಿದ್ದರು. ಹರಿಯು ಅವರಿಗೆ ಬಹು ಶ್ರದ್ಧೆಯಿಂದ ವಿದ್ಯೆಯನ್ನು ಕಲಿಸುತಲಿದ್ದಳು. ಹರಿಯು ಅಸಾಮಾನ್ಯಶಾಸ್ತ್ರಾಭಿಜ್ಞಳಾದ ಕಾರಣ, ನ್ಯಾಯ ನಿರ್ಣಯವನ್ನು ಮಾಡುವ ಸಭೆಗಳಿಗೂ, ಸಮಾರಂಭಗಳಿಗೂ ಈಕೆಯನ್ನು ಗೌರವದೊಡನೆ ಕರಿಯುತಲಿದ್ದರು. ಆಕೆಯು ಅವರ ಆ ಮಂತ್ರಣವನ್ನು ನಿರಾಕರಿಸದೆ ಸಭೆಗಳಿಗೆ ಹೋಗಿ ಅಲ್ಲಿ ಶಾಸ್ತ್ರೀಯವಾದ ವಾದಗಳಿಂದ ಸಭಿಕರನ್ನು ತೃಪ್ತಿಗೊಳಿಸುತಲಿದ್ದಳು.

೩೬. **ಮೃಗನಯನೆ.**—ಈಕೆಯು ಘೂರ್ಜರ ರಾಜನ ಮಗಳು. ಗ್ವಾಲೇರಿನ ಅರಸನಾದ ಮಾನಸಿಂಹನ ಪತ್ನಿ. ಈಕೆಯು ವಿಶೇಷ ಸೌಂದರ್ಯವತಿ. ಈಕೆಯು ಸಂಗೀತಶಾಸ್ತ್ರ ವಿಶಾರದಳು. ಅನೇಕ ರಾಗಗಳನ್ನು ಮೃಗನಯನೆಯು ನಿರ್ಮಿಸಿದಳೆಂದು ಹೇಳುತ್ತಾರೆ. ಆ ಕಾಲದಲ್ಲಿ ಗ್ವಾಲೇರಿನಲ್ಲಿ ಸಂಗೀತ ಮಹಿಮೆಯು ಅಧಿಕವಾಗಿತ್ತು. ಮೃಗನಯನೆಯ ಸಂಗೀತವು ಸಕಲದೇಶಗಳಲ್ಲಿ ಪ್ರಸಿದ್ಧಿಯನ್ನು ಹೊಂದಿತ್ತು. ತಾನಸೇನನೆಂಬ ವಿಖ್ಯಾತ ಗಾನಪ್ರವೀಣನು ಸಹ ಮೃಗನಯನೆಯ ಕೀರ್ತಿಯನ್ನು ಕೇಳಿ, ಗ್ವಾಲೇರಿಗೆಬಂದು ಆಕೆಯ ಗಾನವನ್ನು ಕೇಳಿ ಸಂತೋಷಿಸಿದನು.

೩೭. **ಕೃಷ್ಣಾರಾವಿನಸೊಸೆ.**—ಶಿವಾಜಿಯ ಮೊಮ್ಮಗನಾದ ಸಾಹು ರಾಜನಿಗೂ, ಕೃಷ್ಣರಾವೆಂಬ ಜಹಗೀರದಾರನಿಗೂ, ಯುದ್ಧವು ನಡೆಯಿತು. ಯುದ್ಧದಲ್ಲಿ ಅನೇಕ ಘಾಯಗಳನ್ನು ಹೊಂದಿ ಕೃಷ್ಣರಾಯನು ವೀರಸ್ವರ್ಗಕ್ಕೆ ಹೋದನು. ಅನಂತರ ಆತನ ಮಗನಿಗೆ ಸಹ ವಿಶೇಷ ಗಾಯಗಳು ತಗಲಿದುದರಿಂದ ಆತನು ಮೂರ್ಛಿತನಾದನು. ಆ ಮಗನ ಹೆಂಡತಿಯು ಶೂರವರಳಾದುದರಿಂದ ತನ್ನ ಸೀರೆಯ ಸೆರಗನ್ನು ಹರಿದು ಪತಿಯ ಗಾಯಗಳಿಗೆ ಕಟ್ಟಿ ಆತನನ್ನು ಅಂಬಾರಿಯಲ್ಲಿ ಮಲಗಿಸಿ, ಆತನ ಬಿಲ್ಲುಬತ್ತಳಿಕೆಗಳನ್ನು ತೆಗೆದುಕೊಂಡು ತನ್ನ ಗಜವನ್ನು ಸೇನೆಯ ಮುಂಭಾಗಕ್ಕೆ ನಡಿಸಿದಳು. ಆಕೆಯ ಧೈರ್ಯವನ್ನು ನೋಡಿ ಸೈನಿಕರು ಉತ್ಸಾಹದೊಡನೆ ಯುದ್ಧಮಾಡಿದರು. ಈಕೆಯ ಪತಿಯು ಸ್ವಲ್ಪ ಹೊತ್ತಿಗೆ ಮೃತನಾದನು. ಅನಂತರ ಈಕೆಯು ತನ್ನ ಅಲ್ಪಸೇನೆಯೊಡನೆ ಶತ್ರುವಶಳಾದಳು. ಶತ್ರು ಸೈನಿಕರು ಈಕೆಯನ್ನು ಕರೆದುಕೊಂಡು ಹೋಗಿ ತಮ್ಮ ಪ್ರಭುವಿಗೆ ತೋರಿಸಿದರು. ಬಾಳಾಜೀವಿಶ್ವನಾಥನೂ, ಶ್ರೀಪತಿರಾಯನೂ ಈಕೆಯ ಶೌರ್ಯವನ್ನು ನೋಡಿ ಸಂತೋಷಪಟ್ಟು ಈಕೆಯನ್ನು ಕೊಂಡಾಡಿದರು. ಆಗ ಈಕೆಯು, "ನಾನು ನಿಮ್ಮ ಧರ್ಮಸಹೋದರಿ. ನಾನು ನನ್ನ ಪತಿಯೊಡನೆ ಅನುಗಮನ ಮಾಡುವೆನಾದಕಾರಣ, ನೀವು ಅದಕ್ಕೆ

ಎಲ್ಲವನ್ನು ಸಿದ್ಧಮಾಡಿರಿ." ಎಂದು ಅವರನ್ನು ಕೇಳಿದಳು. ಅವರು ಹಾಗೆಯೇ ಚಿತೆಯನ್ನು ಸಿದ್ಧಮಾಡಲು ಆ ಸಾಧ್ವಿಯು ಯುದ್ಧಭೂಮಿಯಲ್ಲಿಯೇ ಸಹಗಮನವನ್ನು ಮಾಡಿದಳು.

೩೮. **ಜಸಮಾ.**—ಈ ಪತಿವ್ರತಾ ತಿಲಕವು ಮಾಳವದೇಶದ ಒಡ್ಡರ ಕುಲದಲ್ಲಿ ಜನ್ಮಿಸಿದಳು. ಈಕೆಯು ಅನುಪಮಾನ ಸೌಂದರ್ಯವುಳ್ಳವಳಾ ಗಿದ್ದುದರಿಂದ, ಈಕೆಯ ರೂಪವನ್ನು ಕೇಳಿ ಕರ್ಣರಾಜನ ಪುತ್ರನಾದ ಜಯ ಸಿಂಹನು ಈಕೆಯಲ್ಲಿ ಇಚ್ಛೈಯುಳ್ಳವನಾದನು. ಅದರಿಂದ ಆತನು ಸಹಸ್ರ ಲಿಂಗ ವೆಂಬ ಕೆರೆಯನ್ನು ಕಟ್ಟಿಸುವ ನೆಪದಿಂದ ಮಾಳವದೇಶದಲ್ಲಿರುವ ಒಡ್ಡರನ್ನೆಲ್ಲ ಕರೆ ಯಿಸಿದನು. ಅವರೊಡನೆ ಜಸಮಾಪತಿ ಸಹಿತಳಾಗಿ ಅಲ್ಲಿಗೆ ಬಂದಳು. ಜಯ ಸಿಂಗನು ಆಕೆಗೆ ತನ್ನ ಅಭೀಷ್ಟವನ್ನು ತಿಳಿಸಿ, ಆಕೆಯು ತನ್ನನ್ನು ವರಿಸಿದರೆ ರಾಜ್ಯಕ್ಕೆ ಆಕೆಯನ್ನೇ ಒಡತಿಯಾಗಿಮಾಡಿ, ಆಕೆಯ ಪುತ್ರನಿಗೆ ಯುವರಾಜ ಪದವಿಯನ್ನು ಕೊಡುವಂತೆ ಹೇಳಿದನು. ಮತ್ತು ನನ್ನ ಅನಂತರ ನಿನ್ನ ಪುತ್ರನೇ ರಾಜ್ಯಾಧಿಪತಿಯಾಗುವನೆಂತಲು ತಿಳಿಸಿದನು. ಆದರೆ ಜಸಮಾ ಅದಕ್ಕೆ ಸಮ್ಮತಿಸದೆ ಪಾತಿವ್ರತ್ಯವನ್ನು ಕೆಡಿಸಿಕೊಂಡು ರಾಣಿಯಾಗಿ ರಾಜ್ಯವನ್ನಾಳು ವುದಕ್ಕಿಂತಲು, ಪತಿವ್ರತೆಯಾಗಿದ್ದು ಮಣ್ಣನ್ನು ಅಗೆದು ಜೀವಿಸುವದೇ ಶ್ರೇಷ್ಠ ವಾದುದೆಂದು ತಿಳಿಸಿದಳು! ಅನಂತರ ರಾಜನು ಆಕೆಯನ್ನು ಬಲಾತ್ಕಾರದಿಂದ ವಶಮಾಡಿಕೊಳ್ಳಬೇಕೆಂದು ಪ್ರಯತ್ನವನ್ನುಮಾಡಲು ಜಸಮಾ ಭಯಭ್ರಾಂತ ಳಾಗಿ ತನ್ನ ದೇಶಕ್ಕೆ ಹೊರಟಳು. ಜಯಸಿಂಗನು ಆಕೆಯನ್ನು ಸೈನ್ಯದೊಡನೆ ಹಿಂಬಾಲಿಸಿದನು. ಇದರಿಂದ ಜಸಮಾ ತಾನು ರಾಜನಿಗೆ ಸಿಕ್ಕಿಬೀಳುವೆ ನೆಂದು ತಿಳಿದು ಅರಣ್ಯದಲ್ಲಿ ಒಂದು ಚಿತೆಯನ್ನು ಸಿದ್ಧಮಾಡಿ ಅದರಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದಳು! ಈಕೆಯು ಬೆಂಕಿಯಲ್ಲಿ ಬೀಳುವಾಗ ಸಹಸ್ರ ಲಿಂಗದಲ್ಲಿ ನೀರು ಒಣಗಿ ಹೋಗಲಿ ಎಂದು ಶಾಪವನ್ನಿಟ್ಟಳಂತೆ! ಈಕೆಯ ಚರಿತ್ರೆಯಿಂದ ಸ್ತ್ರೀಯರ ಸ್ವಭಾವವು ಮೂಢತ್ವದಲ್ಲಿಯೂ ಸದ್ಗುಣಗಳ ಕಡೆಗೆ ಆಕರ್ಷಿಸಲ್ಪಡುವುದೆಂದು ತಿಳಿಯಬರುತ್ತದೆ. ಇಂತಹ ಸುಸ್ವಭಾವವುಳ್ಳ ಸ್ತ್ರೀ ಯರು ಸದ್ವಿದ್ಯೆಯನ್ನು ಕಲಿತರೆ ಕೆಡುವರೆಂದು ಹೇಳುವುದಕ್ಕಿಂತಲೂ ವೈಪ ರೀತ್ಯವಾವುದುಂಟು?

೩೯. **ಕರ್ಣಾಟ.**—ಈ ಕವಯಿತ್ರಿಯ ನಾಮವಾವುದೋ ತಿಳಿಯದು. ಈಕೆಯು ಕರ್ಣಾಟ ದೇಶಸ್ಥಳಾದುದರಿಂದ ಈಕೆಯನ್ನು ಕರ್ಣಾಟಿಯೆಂದೇ ಕರೆಯುತ್ತಾರೆ. ಈಕೆಯನ್ನು ಕುರಿತು ಸೂಕ್ತಿಮುಕ್ತಾವಳಿಯಲ್ಲಿ ಹೀಗೆ ಬರೆದಿದೆ:—

ಶ್ಲೋ॥ ಸರಸ್ವತೀವಕರ್ಣಾಟೀ ವಿಜಯಾಂ ಕಾಜಯತ್ಯಸಾ।
ಯಾವೈದರ್ಭಗಿರಾಂವಾಸಃ ಕಾಲಿದಾಸಾದನಂತರಂ॥

ಅರ್ಥ :—'ವಿಜಯ' ಎಂಬ ಬಿರುದನ್ನುಳ್ಳ ಕರ್ಣಾಟಿಯು ಸರಸ್ವತಿಯಂತೆ ಜಯಹೊಂದುತಲಿದಾಳೆ. ಕಾಳಿದಾಸನ ಅನಂತರ ವೈದರ್ಭಿರೀತಿಯು ಈಕೆಯಲ್ಲಿಯೇ ವಾಸಮಾಡುತಲಿದೆ.

ಈಕೆಯು ತನ್ನ ರಮ್ಯಕವಿತ್ವದಿಂದ ಕವಿಗಳನ್ನೆಲ್ಲ ಗೆದ್ದು, 'ವಿಜಯ' ಎಂಬ ಬಿರುದನ್ನು ಹೊಂದಿದಳಾದುದರಿಂದ, ಪೂಜ್ಯರಾದ ವ್ಯಾಸವಾಲ್ಮೀಕಿಗಳನ್ನು ವಿನಹ ಮತ್ಯಾರನ್ನೂ ಮೆಚ್ಚುತಲಿರಲಿಲ್ಲ. ಈಕೆಯು ತನ್ನನ್ನು ಕುರಿತು ಈ ವಿಧವಾಗಿ ಬರೆದುಕೊಂಡಿದಾಳೆ :—

ಶ್ಲೋ॥ ಏಕೋಭೂನ್ನಲಿನಾತ್ತ ತಶ್ಚ ಪುಲಿನಾದ್ವಲ್ಮೀಕತಶ್ಚಾಪರಃ
ತೇಸರ್ವೇಕವಯೋ ಭವನ್ತಿ ಗುರುವಸ್ತೇಭ್ಯೋನಮಸ್ಕುರ್ಮಹೇ।
ಅರ್ವಾಂಚೋಯದಿಗದ್ಯಪದ್ಯ ರಚನೈಶ್ಚೇತಶ್ಚಮತ್ಕುರ್ವತೇ
ತೇಷಾಂಮೂರ್ಧ್ನಿದದಾಮಿವಾಮಚರಣಂ ಕರ್ಣಾಟರಾಜಪ್ರಿಯಾ॥

ಅರ್ಥ :—ಪೂರ್ವ ಕವಿಗಳಾದ ಬ್ರಹ್ಮ, ವ್ಯಾಸ, ವಾಲ್ಮೀಕಾದಿಗಳು ನನಗೆ ಗುರುಗಳು. ಅವರಿಗೆ ನಮಸ್ಕಾರವನ್ನು ಮಾಡುವೆನು; ಆದರೆ ಆಧುನಿಕ ಕವಿಗಳಾರಾದರು ಗದ್ಯಪದ್ಯ ರಚನೆಯಿಂದ ಚಿತ್ತರಂಜನೆಯನ್ನು ಮಾಡುವೆವು ಎಂದರೆ ಅವರ ಶಿರಸ್ಸಿನಮೇಲೆ ನನ್ನ ವಾಮಪಾದವನ್ನಿಡುವೆನು.

ಈ ಶ್ಲೋಕದಲ್ಲಿರುವ 'ಕರ್ಣಾಟ ರಾಜಪ್ರಿಯಾ' ಎಂಬ ಪದದಿಂದ ಈಕೆಯು ಮೋಹನಾಂಗಿಯಾಗಿರಬಹುದೇ ಎಂದು ತೋರುತ್ತದೆ. ಮೋಹನಾಂಗಿಯು ಕೃಷ್ಣದೇವರಾಯನ ಮಗಳೆಂತಲೂ, ರಾಮರಾಜನ ಪತ್ನಿಯೆಂತಲೂ, ಕವಯಿತ್ರಿಯೆಂತಲೂ ಪ್ರತೀತಿಯುಂಟು. ಆದರೆ ಇದನ್ನು ಕುರಿತು ಇನ್ನೂ ಪರಿಶೋಧಿಸಬೇಕು.

೪೦. ರಾಣೀ ರಾಜೇಂದ್ರ ಲಕ್ಷ್ಮಿ.—ಈಕೆಯು ನೇಪಾಳಾಧೀಶ್ವರನ ಹೆಂಡತಿ. ಸಂಗಪ್ರತಾಪರಾಜನು ೧೭೭೫ ರಲ್ಲಿ ಮೃತನಾದನು. ಆಗ್ಯೆ ಆತನಿಗೆ ಒಬ್ಬ ಮಗನಿದ್ದನು. ಆತನು ಬಾಲಕನಾದುದರಿಂದ ಆತನ ತಾಯಿಯಾದ ರಾಜೇಂದ್ರ ಲಕ್ಷ್ಮಿಯು ರಾಜ್ಯ ಸೂತ್ರಗಳನ್ನು ಹಿಡಿಯಬೇಕಾಯಿತು. ಈಕೆಯು ತನ್ನ ರಾಜ್ಯದಲ್ಲಿಯೂ, ಸೈನ್ಯದಲ್ಲಿಯೂ, ಕಾಲೋಚಿತವಾದ ಅನೇಕ ಮಾರ್ಪಾಟುಗಳನ್ನೂ, ಸಂಸ್ಕರಣೆಗಳನ್ನೂ ಮಾಡಿದಳು. ಧೀಮಂತಳೂ, ಧೈರ್ಯ ಸಾಹಸಯುತಳೂ ಆದ ಈ ರಾಣಿಯು ದಂಡೆತ್ತಿಹೋಗಿ ಅನೇಕ ಪರ ಸಂಸ್ಥಾನಗಳನ್ನು ಸ್ವಾಧೀನ ಮಾಡಿಕೊಂಡಳು.

೪೧. ಮುಕ್ತಾಬಾಯಿ.—ಈಕೆಯು ಮಹಾರಾಷ್ಟ್ರ ದೇಶದಲ್ಲಿದ್ದಳು. ಈಕೆಯು ಕವಯಿತ್ರಿಯೂ, ಅಧ್ಯಾತ್ಮ ತತ್ವ ವಿಶಾರದೆಯೂ ಆಗಿದ್ದಳು. ಈಕೆಯ ಅಗ್ರಸೋದರನಾದ ಜ್ಞಾನದೇವನು ಭಗವದ್ಗೀತೆಗೆ ಟೀಕೆಯನ್ನು ಬರೆದನು. ಮುಕ್ತಾಬಾಯಿಯು ಅವಿವಾಹಿತೆಯಾಗಿ ಜನ್ಮವನ್ನು ಕಳೆದಳು. ಈಕೆಯು ಒಂದು ಸಲ ಚಾಂಗದೇವ್ ಎಂಬ ಸಿದ್ಧನೊಡನೆ ವಾದಮಾಡಿ ಆತನನ್ನು ಗೆದ್ದು ತನ್ನ ಶಿಷ್ಯನಾಗಿ ಮಾಡಿಕೊಂಡಳು. ಈಕೆಯಿಂದ ರಚಿತವಾದ ಕೀರ್ತನೆಗಳು, ಪದ್ಯಗಳು ಭಕ್ತಿರಸ ಪರಿಪುಟಗಳಾಗಿ ಇರುವುದರಿಂದ ಮಹಾರಾಷ್ಟ್ರ ದೇಶೀಯರು ಬಹು ಭಕ್ತಿಯಿಂದ ಪಠಿಸುತ್ತಾರೆ.

೪೨. ಅನುಲ.—ಈಕೆಯು ಸಂಗಮಿತ್ರೆಯ ಕಾಲದಲ್ಲಿ ಇದ್ದಳು. ಸಿಂಹಳ ರಾಜನಾದ ತಿಷ್ಯನ ಪತ್ನಿ. ಸಿಂಹಳದ್ವೀಪದಲ್ಲಿ ಬೌದ್ಧ ಧರ್ಮವನ್ನು ಈಕೆಯು ಬಹು ಶ್ರದ್ಧೆಯೊಡನೆ ವೃದ್ಧಿಮಾಡಿದಳು. ಈಕೆಯು ಬೌದ್ಧ ಧರ್ಮದಲ್ಲಿ ವಿಶೇಷ ಜ್ಞಾನವನ್ನು ಪಡೆದಿದ್ದಳು. ಈಕೆಯು ಇತರರಿಗೆ ಆ ಧರ್ಮವನ್ನು ಬೋಧಿಸಿ ಅವರು ಅದರಂತೆ ನಡೆಯಬೇಕೆಂದು ಉಪದೇಶಿಸುತ್ತಿದ್ದಳು. ಈಕೆಗೆ ಇರುವ ಬೌದ್ಧಧರ್ಮಾ ಸಕ್ತಿಯನ್ನು ನೋಡಿ, ಈಕೆಯ ಆಚಾರ್ಯಳಾದ ಸಂಗಮಿತ್ರೆಯು ಈಕೆಯನ್ನು ಬೌದ್ಧಧರ್ಮಾಚಾರ್ಯಾ ಎಂದು ಸಂಬೋಧಿಸುತ್ತಿದ್ದಳು.

೪೩. ಮದಿನಸುಭದ್ರಮ್ಮ.—ಈಕೆಯು ಶ್ರೀ ಸರ್ ಮಹಾರಾಜಾ ಗೋಡೆನಾರಾಯಣ ಗಜಪತಿರಾಯರ ಸೋದರತ್ತೆ. ಶತಕಗಳನ್ನು ರಚಿಸುವ ಸ್ತ್ರೀಯರಲ್ಲಿ ಈಕೆಯು ಅಗ್ರಗಣ್ಯಳು. ಈಕೆಯು ತರಿಗೊಂಡವೆಂಗಮಾಂಬೆಯ ಸಮಕಾಲೀನಳು. ಈಕೆಯು 'ಶ್ರೀರಾಮದಂಡಕ', 'ರಘುನಾಯಕಶತಕ,' 'ಕೇಶವಶತಕ', 'ಕೃಷ್ಣಶತಕ', ರಾಘವರಾಮಶತಕ' ಗಳನ್ನು ರಚಿಸಿದಳು.

೪೪. ಐವತ್ತೆಂಟು ಮಹಾರಾಣಿಯರು.—ಇವರೆಲ್ಲರು ವಿ.ಶ. ೧೬೯೦ ಸಂವತ್ಸರ ಪ್ರಾಂತದಲ್ಲಿ ಘೂರ್ಜರ, ಮಹಾರಾಷ್ಟ್ರ, ಮಾರ್ವಾಡೆಗಳನ್ನು ಬಹು ಪರಾಕ್ರಮದಿಂದ ಆಳಿದ ಅಜಿತಸಿಂಗನ ಪತ್ನಿಯರು. ಈ ಮಹಾಯೋಧನು ಒಂದು ಸಲ ಮಹಮ್ಮದುಷಾ ಎಂಬ ಮಹಮ್ಮದೀಯನೊಡನೆ ಯುದ್ಧಮಾಡಿದನು. ಆ ಸಮಯದಲ್ಲಿ ಶೂರರಾದ ಈತನ ಪತ್ನಿಯರೆಲ್ಲರು ಸೇನಾನಾಯಕತ್ವವನ್ನು ವಹಿಸಿ ಯುದ್ಧಕ್ಕೆ ಹೊರಟರು. ಯುದ್ಧರಂಗಕ್ಕೆ ಬಂದು ಪತಿಯೊಡನೆ ಸಮಾನವಾಗಿ ತನ್ನ ಸೇನೆಗಳನ್ನು ಹತಮಾಡುತಲಿರುವ ಈ ನಾರಿಯರನ್ನು ನೋಡಿ ಮಹಮ್ಮದುಷಾ ನಿರ್ವಿಣ್ಣನಾದನು. ಆತನ ಸೈನಿಕರು ಆ ಶೂರ ರಮಣಿಯರ ಖಡ್ಗ ಪ್ರಹಾರಕ್ಕೆ ನಿಲ್ಲಲಾರದೆ ಓಡಲಾರಂಭಿಸಿದರು. ಆದರೆ

ಆ ಸಮಯದಲ್ಲಿ ಯಾವ ಮೂಲೆಯಿಂದಲೋ ಒಂದಾಯುಧವು ಬಂದು ಅಜಿತ ಸಿಂಗನ ಕಂಠವನ್ನು ಅರ್ಧಕ್ಕೆ ಕತ್ತರಿಸಿತು. ಅದರಿಂದ ಆತನು ಮೃತನಾದನು. ಆತನ ರಾಣಿಯರು ಅದನ್ನು ನೋಡಿ ಶರವೇಗದಿಂದ ತಮ್ಮ ಸೇನಗಳೊಡನೆ ಮಹಮ್ಮದ್‌ಷಾನ ಸೇನೆಗಳನ್ನು ತಾಕಿ ಆತನನ್ನು ಪ್ರಾಣಮಾತ್ರಾವಶಿಷ್ಟನನ್ನಾಗಿ ಮಾಡಿ ಮರಳಿ ಬಂದು ತಮ್ಮ ಪತಿಯೊಡನೆ ಐವತ್ತೈಂಟು ಮಂದಿಯೂ ಸಹಗಮನವನ್ನು ಮಾಡಿದರು!

ಕರಮೇತೀಬಾಯಿ.

ಈಕೆಯ ತಂದೆಯ ಹೆಸರು ಪರಶುರಾಮ ಪಂಡಿತನು. ಇವರ ವಾಸಸ್ಥಳವು ಖಾಜಲ ಎಂಬ ಗ್ರಾಮವು. ಪರಶುರಾಮ ಪಂಡಿತನು ವಿಶೇಷ ದೈವಭಕ್ತಿಯುಳ್ಳವನಾಗಿ ಇದ್ದನು. ಕರಮೇತೀಬಾಯಿಯು ಸಹ ಬಾಲ್ಯದಿಂದಲೂ ತಂದೆಯಂತೆ ವಿಶೇಷ ದೈವಭಕ್ತಿಯುಳ್ಳವಳಾಗಿ ಇದ್ದಳು. ಪರಶುರಾಮನು ಈಕೆಗೆ ಬಾಲ್ಯದಿಂದಲೂ ಚೆನ್ನಾಗಿ ವಿದ್ಯಾಭ್ಯಾಸವನ್ನು ಮಾಡಿಸಿದನು. ವಿದ್ಯೆಯೊಡನೆ ಭಕ್ತಿಯು ಸಹ ಈಕೆಯಲ್ಲಿ ಕ್ರಮಕ್ರಮವಾಗಿ ವೃದ್ಧಿಯನ್ನು ಹೊಂದುತಲಿತ್ತು. ಈಕೆಗೆ ಸಂಸಾರವಾಸನೆಯಲ್ಲಿ ಇಚ್ಛೆಯು ಇಲ್ಲದೇ ಇದ್ದರೂ, ತಂದೆಯ ಆಜ್ಞಾನುಸಾರವಾಗಿ ವಿವಾಹವನ್ನು ಮಾಡಿಕೊಂಡಳು.

ಈಕೆಯು ತೌರುಮನೆಯಲ್ಲಿ ಯಾವ ಕಷ್ಟವನ್ನೂ ಅರಿಯದೆ, ಅಹೋರಾತ್ರಿಗಳಲ್ಲಿಯೂ ಹರಿನಾಮ ಸಂಕೀರ್ತನೆಯನ್ನು ಮಾಡುತ್ತ ಕಾಲವನ್ನು ಕಳೆಯುತಲಿದ್ದಳು. ಆದರೆ, ಅತ್ತೆಯಮನೆಗೆ ಹೋದಮೇಲೆ ಈಕೆಗೆ ಅನೇಕ ಕಷ್ಟಗಳು ಸಂಭವಿಸಿದವು. ಭಾರ್ಯಾಭರ್ತರಿಗೆ ಮನೋಮಾಲಿನ್ಯವು ಉಂಟಾಯಿತು. ಕರಮೇತೀಬಾಯಿಯ ಪತಿಯು ವಿಷಯಲೋಲನು. ಆದುದರಿಂದ ಈಕೆಯ ಧರ್ಮಾನುಷ್ಠಾನ ಕಾರ್ಯಗಳಿಗೆ ಆಟಂಕವು ಉಂಟಾಯಿತು. ಕರಮೇತೀಬಾಯಿಯು ಪತಿಯ ದೌರ್ಜನ್ಯವನ್ನು ಸಹಿಸಲಾರದೆ ಭರ್ತೃಗೃಹವನ್ನು ಬಿಟ್ಟು, ತಂದೆಯ ಮನೆಯಲ್ಲಿ ವಾಸಮಾಡುತಲಿದ್ದಳು. ಆದರೆ ಅಲ್ಲಿಯೂ ಬಹುದಿವಸಗಳು ವಾಸಮಾಡುವುದಕ್ಕೆ ಆಗಲಿಲ್ಲ.

ಏಕಂದರೆ ಕೆಲವು ದಿವಸಗಳು ಕಳೆದಮೇಲೆ ಈಕೆಯ ಪತಿಯು ಬಂದು ಈಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿದನು.

ಇದಕ್ಕೆ ಕರಮೇತೀಬಾಯಿಯು ವಿಶೇಷವಾಗಿ ಚಿಂತಿಸಿ, ಪತಿಯಿಂದ ತಪ್ಪಿಸಿ ಕೊಂಡು ಬೃಂದಾವನಕ್ಕೆ ಹೋಗಬೇಕೆಂದು ನಿಶ್ಚಯಿಸಿಕೊಂಡಳು.

ಒಂದು ದಿವಸ ರಾತ್ರಿ ಕರಮೇತೀಬಾಯಿಯು ಶಯನಮಂದಿರವನ್ನು ಬಿಟ್ಟು ಮನೆಯ ಹೊರಗಡೆಗೆ ಬಂದು ನಿಂತುಕೊಂಡಳು. ಆದರೆ ಪ್ರಾಕಾರದ್ವಾರಗಳೆಲ್ಲವು ಮುಚ್ಚಿದ್ದುದರಿಂದ, ಏನುಮಾಡುವುದಕ್ಕೂ ತೋರದೆ, ಕೊನೆಗೆ ಮನೆಯಮೇಲೆ ಹತ್ತಿ ಪ್ರಾಕಾರದ ಗೋಡೆಯ ಆಚೆಗೆ ದುಮುಕಿದಳು. ಆದರೆ ಬೃಂದಾವನಕ್ಕೆ ಹೋಗುವ ಮಾರ್ಗವು ಆಕೆಗೆ ತಿಳಿಯದು. ಆಲಸ್ಯವಾದರೆ ಯಾರಾದರೂ ತನ್ನನ್ನು ನೋಡುವರೆಂದು ಕರಮೇತೀಬಾಯಿಯು ಯಾವುದೋ ಒಂದು ಮಾರ್ಗವನ್ನು ಹಿಡಿದು ಓಡಲಾರಂಭಿಸಿದಳು.

ಮರುದಿನ ಪ್ರಾತಃಕಾಲವಾದಮೇಲೆ ಪರಶುರಾಮಪಂಡಿತನು ಎಚ್ಚರಗೊಂಡು ಪುತ್ರಿಯನ್ನು ಕಾಣದೆ ದುಃಖಿಸುತ್ತ, ರಾಜನಬಳಿಗೆಹೋಗಿ ನಡೆದ ವಿಷಯವನ್ನು ಬಿನ್ನವಿಸಿಕೊಂಡನು. ರಾಜನು ಓಡಿಸಿಯೇ ಆಕೆಯನ್ನು ಹುಡುಕುವುದಕ್ಕೆ ಅನೇಕ ಭಟರನ್ನು ಕಳುಹಿಸಿದನು.

ಕರಮೇತೀಬಾಯಿಯು ಸ್ವಲ್ಪದೂರ ನಡೆದು ಹಿಂದಿರಿಗಿ ನೋಡಲು ರಾಜಭಟರು ಬರುತ್ತಿರುವಂತೆ ಆಕೆಗೆ ಕಂಡುಬಂದಿತು. ಆ ರಾಜಭಟರು ತನ್ನನ್ನು ಹುಡುಕಿಕೊಂಡು ಬರುತ್ತಿರುವರು ಎಂದು ತಿಳಿದು, ಕರಮೇತೀಬಾಯಿಯು ತಪ್ಪಿಸಿಕೊಳ್ಳಲು ಉಪಾಯವನ್ನು ಆಲೋಚಿಸುತ್ತ ಇದ್ದಳು. ಆಕೆಯು ನಡೆಯುತಲಿದ್ದ ಪ್ರದೇಶವು ಲತಾವೃಕ್ಷಶೂನ್ಯವಾದಬೈಲಾಗಿತ್ತು. ಆದಕಾರಣ ಔತುಕೊಳ್ಳುವುದಕ್ಕೆ ಆಗಲಿಲ್ಲ. ಅದರಿಂದ ಆಕೆಗೆ ಬೇರೆ ಯೋಚನೆಯು ತೋರದೆ ವೇಗವಾಗಿ ಓಡಲಾರಂಭಿಸಿದಳು. ಈಕೆಯು ಸ್ವಲ್ಪದೂರ ಓಡಿದಮೇಲೆ ಅಲ್ಲಿ ಸತ್ತುಬಿದ್ದಿದ್ದ ಒಂದು ಒಂಟೆಯು ಆಕೆಗೆ ಕಂಡುಬಂದಿತು. ನರಿಗಳು ಮಾಂಸವನ್ನು ತಿಂದಿದ್ದುದರಿಂದ ಅದರ ಹೊಟ್ಟೆಯು ಟೊಳ್ಳಾಗಿತ್ತು. ಅದನ್ನು ಕಂಡಕೂಡಲೆ ಕರಮೇತೀಬಾಯಿಯು ದುರ್ಗಂಧಮಯವಾದ ಆ ಹೊಟ್ಟೆಯಲ್ಲಿ ಔತುಕೊಂಡಳು. ರಾಜಭಟರು ತಮ್ಮ ದಾರಿಯನ್ನು ಹಿಡಿದುಕೊಂಡು ಹೊರಟುಹೋದರು. ಒಂಟೆಯ ಹೊಟ್ಟೆಯಲ್ಲಿ ಔತುಕೊಂಡಿದ್ದ ಕರಮೇತೀಬಾಯಿಯನ್ನು ಅವರು ನೋಡಲಿಲ್ಲ.

ರಾಜಭಟರು ಹೊರಟುಹೋದ ಮೇಲೆ ಕರಮೇತೀಬಾಯಿಯು, ಅಲ್ಲಿಂದ ಹೊರಟು ದೊರೆತಾಗ ಊಟಮಾಡುತ್ತ, ದೊರೆಯದೇ ಇದ್ದರೆ ಉಪವಾಸಮಾಡುತ್ತ ನಡೆದು, ಕೊನೆಗೆ ಬೃಂದಾವನವನ್ನು ಸೇರಿ ಮನೋವಾಂಛಾ ಸಿದ್ಧಿಯನ್ನು ಪಡೆದಳು. ಅಂದಿನಿಂದಲೂ ಆಕೆಯು ಬೃಂದಾವನದಲ್ಲೇ ವಾಸಮಾಡಿಕೊಂಡು, ಶ್ರೀಕೃಷ್ಣನನ್ನು ಆರಾಧಿಸುತ್ತ, ಸಂಕೀರ್ತನೆಯಲ್ಲಿ ಕಾಲವನ್ನು ಕಳೆಯುತಲಿದ್ದಳು.

ಪರಶುರಾಮಪಂಡಿತನು ರಾಜಭಟರಿಂದ ಪುತ್ರಿಯು ದೊರೆಯಲಿಲ್ಲನೆಂದು ಕೇಳಿ ವಿಶೇಷ ಚಿಂತಾಕ್ರಾಂತನಾಗಿ, ತಾನೇ ಹುಡುಕಲು ಹೊರಟನು. ಆತನು ಹುಡಿಕಿಹುಡಿಕಿ ಕೊನೆಗೆ ಬೃಂದಾವನದಲ್ಲಿ ಕರಮೇತೀಬಾಯಿಯನ್ನು ನೋಡಿದನು. ಆತನು ನೋಡುವಕಾಲಕ್ಕೆ ಕರಮೇತೀಬಾಯಿಯು ಮೌನಿಯಾಗಿದ್ದಳು. ನೇತ್ರಗಳಿಂದ ಪ್ರೇಮಾಸಲಿಲವು ಶರವೇಗದಿಂದ ಪ್ರವಹಿಸುತಲಿತ್ತು. ಆಕೆಯ ಮುಖಮಂಡಲವು ಅಪೂರ್ವವಾದ ತೇಜಸ್ಸನ್ನುಂಟಾಗಿತ್ತು. ಆಕೆಯ ಬಾಯಿಯಿಂದ 'ಕೃಷ್ಣಾ' ಎಂಬ ನಾಮವು ಎಡಬಿಡದೆ ಹೊರಡುತಲಿತ್ತು. ಅಂತಹ ಪರಮ ಭಕ್ತಳನ್ನು ನೋಡಿದಕೂಡಲೇ ಪರಶುರಾಮ ಪಂಡಿತನು ಅವನತಮಸ್ತಕನಾದನು.

ಅನಂತರ ಪರಶುರಾಮಪಂಡಿತನು ಪುತ್ರಿಯನ್ನು ಸ್ವಗೃಹಕ್ಕೆ ಕರೆದುಕೊಂಡು ಹೋಗಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡಿದನು. ಆದರೆ ಕರಮೇತೀಬಾಯಿಯು ಅದಕ್ಕೆ ಅಂಗೀಕರಿಸಲಿಲ್ಲ. ಆದಕಾರಣ, ಪಂಡಿತನು ಪುತ್ರಿಯನ್ನು ಬಿಡಲಾರದೆ ದುಃಖಿಸುತ್ತ ಸ್ವಗ್ರಾಮಕ್ಕೆ ಹೋಗಿ, ರಾಜನಿಗೆ ಈ ವೃತ್ತಾಂತವನ್ನೆಲ್ಲ ತಿಳಿಸಿದನು. ಆ ರಾಜನು ಭಕ್ತನಾದಕಾರಣ ಕರಮೇತೀಬಾಯಿಯ ಭಕ್ತಿನಿಷ್ಠೆಯನ್ನು ಕುರಿತು ಕೇಳಿದಕೂಡಲೆ, ಬೃಂದಾವನಕ್ಕೆ ಹೊರಟನು. ಅಲ್ಲಿ ಕರಮೇತೀಬಾಯಿಯನ್ನು ನೋಡಿ, ವಿಶೇಷ ಆನಂದವನ್ನು ಹೊಂದಿ ಆಕೆಯು ವಾಸಮಾಡುವುದಕ್ಕಾಗಿ ಒಂದು ಕುಟೀರವನ್ನು ನಿರ್ಮಿಸಲು ಪ್ರಯತ್ನಿಸಿದನು. ಆದರೆ ಕುಟೀರ ನಿರ್ಮಾಣದಿಂದ ಅನೇಕ ಕೀಟಕಗಳು ಮೃತಿಯನ್ನು ಹೊಂದುವವು ಎಂದು ಎಣಿಸಿ ಈಕೆಯು ಕುಟೀರವನ್ನು ನಿರ್ಮಿಸಬೇಡ ಎಂದಳು. ಆದರೆ ರಾಜನು ಕುಟೀರವನ್ನು ನಿರ್ಮಿಸಿದನು. ಇಂದಿನವರೆಗೆ ಜೀರ್ಣಾವಶಿಷ್ಟವಾಗಿರುವ ಆ ಕುಟೀರವು ಕರಮೇತೀಬಾಯಿಯ ಸ್ಮೃತಿಚಿಹ್ನೆಯಾಗಿ ಬೃಂದಾವನದಲ್ಲಿ ಕಾಣಬರುತಲಿದೆ.

ಲಕ್ಷ್ಮೀದೇವಿ.

ಮಿಥಿಲದೇಶಕ್ಕೆ ರಾಜನಾದ ಚಂದ್ರಸಿಂಹನ ಮಹಿಷಿಯ ಹೆಸರು ಲಕ್ಷ್ಮೀದೇವಿ. ಈಕೆಯು ವಿದ್ಯಾವಿವಾದದಲ್ಲಿ ವಿಶೇಷ ಅನುರಾಗಉಳ್ಳವಳಾಗಿ ಇದ್ದಳು. ಈಕೆಯು ಮಿಥಿಲದೇಶದ ಪಂಡಿತರಲ್ಲಿ ಅನೇಕರನ್ನು ತನ್ನ ಮನೆಯಲ್ಲಿಟ್ಟುಕೊಂಡು ಪೋಷಿಸುತಲಿದ್ದಳು. ವಿವಾದಚಂದ್ರ ಮೊದಲಾದ ಪುಸ್ತಕಗಳನ್ನು ರಚಿಸಿದ

ಮಿಸರು ಮಿಶ್ರನೂ, ಮಿತಾಕ್ಷರ ಟೀಕೆಯನ್ನು ರಚಿಸಿದ ಬಾಲಂಭಟ್ಟನೂ, ಲಕ್ಷ್ಮೀದೇವಿಯ ಆಶ್ರಯದಿಂದಲೂ, ಪ್ರೋತ್ಸಾಹದಿಂದಲೂ ಕೀರ್ತಿಯನ್ನು ಪಡೆದರು. ಈಕೆಯು ದರ್ಶನಶಾಸ್ತ್ರಗಳಲ್ಲಿ ವಿಶೇಷ ಪಂಡಿತೆಯಾಗಿ ಇದ್ದಳು. ಆದುದರಿಂದಲೇ ಈಕೆಯು ಪಂಡಿತರೊಡನೆ ವಾದಮಾಡಲು ಸಾಮರ್ಥ್ಯವುಳ್ಳವಳಾಗಿ ಇದ್ದಳು. ಲಕ್ಷ್ಮೀದೇವಿಯು ಮಿತಾಕ್ಷರವ್ಯಾಖ್ಯಾನ ಎಂಬ ಗ್ರಂಥವನ್ನು ರಚಿಸಿದಾಳೆ.

ಪ್ರವೀಣಾಬಾಯಿ.

ಬುಂದೆಲು ಖಂಡದ ರಾಜನಾದ ಇಂದ್ರಜಿತ್ಸಿಂಹನ ಸಭೆಯಲ್ಲಿ ಅನೇಕ ಕವಿರತ್ನಗಳು ಪ್ರಕಾಶಿಸುತಲಿದ್ದರು. ಅವರೆಲ್ಲರಲ್ಲಿಯೂ ವಿದುಷೀಮಣಿಯಾದ ಪ್ರವೀಣಾಬಾಯಿಯೂ, ಕೇಶವದಾಸಪಂಡಿತನೂ ವಿಶೇಷ ಪ್ರಸಿದ್ಧರಾಗಿದ್ದರು. ಪ್ರವೀಣಾಬಾಯಿಯ ಕವಿತ್ವವು ಸರ್ವಜನ ಸನ್ಮಾನಾರ್ಹವಾಗಿದ್ದಿತು. ಮಹಾ ಕವಿಯಾದ ಕೇಶವದಾಸ ಪಂಡಿತನು ಈಕೆಯನ್ನು ಸನ್ಮಾನಿಸುವಸಲುವಾಗಿ 'ಕವಿಪ್ರಿಯ' ಎಂಬ ಕಾವ್ಯವನ್ನು ರಚಿಸಿದನು.

ಪ್ರವೀಣಾಬಾಯಿಯು ಕವಿತ್ವವನ್ನು ಹೇಳುವುದಕ್ಕೆ ಕಲಿತ ಕೆಲವು ಕಾಲದಲ್ಲಿಯೇ ಈಕೆಯ ಯಶಶ್ಚಂದ್ರಿಕೆಯು ನಾಲ್ಕುದಿಕ್ಕುಗಳಿಗೂ ವ್ಯಾಪಿಸಲಾರಂಭಿಸಿತು. ಅಕ್ಬರುಚಕ್ರವರ್ತಿಯು ಈಕೆಯ ಯಶಸ್ಸನ್ನು ಕೇಳಿ ತನ್ನ ಸಭೆಗೆ ಈಕೆಯನ್ನು ಆಹ್ವಾನಮಾಡಿದನು ಆದರೆ ಇಂದ್ರಜಿತ್ಸಿಂಹನು ಈಕೆಯನ್ನು ಕಳುಹಿಸಲು ಅಂಗೀಕರಿಸಲಿಲ್ಲ.

ಅದರಿಂದ ಅಕ್ಬರನು ಆಗ್ರಹಗ್ರಸ್ತನಾಗಿ, ಹತ್ತುಲಕ್ಷ ರೂಪಾಯಿಗಳನ್ನು ಅಪರಾಧವಾಗಿ ಕೊಡಬೇಕೆಂದು ಇಂದ್ರಜಿತ್ಸಿಂಹನಿಗೆ ದಂಡನೆಯನ್ನು ವಿಧಿಸಿದನು. ಆಸಮಯದಲ್ಲಿ ಕೇಶವದಾಸನು ದರ್ಬಾರಿಗೆ ಹೋಗಿ ವೀರಬಲನಸಹಾಯದಿಂದ ಇಂದ್ರಜಿತ್ಸಿಂಹನನ್ನು ಅರ್ಥದಂಡನೆಯಿಂದ ತಪ್ಪಿಸಿದನು.

ಕೊನೆಗೆ ಪ್ರವೀಣಾಬಾಯಿಯನ್ನು ದರ್ಬಾರಿಗೆ ಅಕ್ಬರನು ಕರೆಯಿಸಿಕೊಂಡನು. ಚಕ್ರವರ್ತಿಯು ಈಕೆಯ ವಿದ್ಯಾತಿಶಯವನ್ನು ನೋಡಿ ಸಂತೋಷಿಸಿದನು. ಪ್ರವೀಣಾಬಾಯಿಯು ಕೆಲವುದಿನಗಳು ದರ್ಬಾರಿನಲ್ಲಿ ಇದ್ದು, ಅನಂತರ ಸ್ವಸ್ಥಾನಕ್ಕೆ

ಹೋದಳು. ದರ್ಬಾರಿನಲ್ಲಿ ಅಕ್ಬರಿನಿಗೂ, ಪ್ರವೀಣಾಬಾಯಿಗೂ ನಡೆದ ಸಂಭಾಷಣೆಯನ್ನೂ, ತತ್ಕಾಲವಲ್ಲಿ ಘಟಿಸಿದ ವಿಷಯವಿಧಾನವನ್ನೂ ಒಂದುಕಾವ್ಯವಾಗಿ ಬರೆದಿದಾರೆ.

ಮಧುರವಾಣಿ.

ತಂಜಾವೂರಿನ ದೊರೆಯಾದ ರಘುನಾಥ ಭೂಪಾಲನು ವಿದ್ವಾಂಸರನ್ನು ಬಹಳ ಆದರದಿಂದ ಕಾಣುತಲಿದ್ದನು. ಆದಕಾರಣ ಆತನ ಸಭೆಯಲ್ಲಿ ಅನೇಕ ಜನ ಪಂಡಿತರೂ, ವಿದುಷಿಯರೂ ಇದ್ದರು. ರಾಜನು ನಿರಂತರವೂ ಧರ್ಮ ಸಂಬಂಧವಾದ, ಕಾವ್ಯಸಂಬಂಧವಾದ ಆಲೋಚನೆಯನ್ನು ಮಾಡುತಲಿದ್ದನು. ಪಂಡಿತರು ಆತನಿಗೆ ಪ್ರತಿದಿನವು ನೂತನ ಕಾವ್ಯಗಳನ್ನು ಓದಿ ಹೇಳುತಲಿದ್ದರು.

ಆ ಸಭೆಯಲ್ಲಿ ಇದ್ದ ವಿದುಷೀಮಣಿಯರಲ್ಲೆಲ್ಲ ಮಧುರವಾಣಿಯು ಪ್ರಸಿದ್ಧಳಾದ ಪಂಡಿತೆಯಾಗಿ ಇದ್ದಳು. ರಘುನಾಥ ಭೂಪಾಲನು ಮಧುರವಾಣಿಯನ್ನು ಹೆಚ್ಚಾಗಿ ಗೌರವಿಸುತಲಿದ್ದನು. ಈಕೆಯ ಕವಿತ್ವವು ರಾಜನಿಗೆ ಆನಂದ ಪ್ರದವಾಗಿತ್ತು.

ಒಂದು ದಿವಸ ರಾಜಸಭೆಯನ್ನು ಅನೇಕ ವಿದುಷಿಯರು ಅಲಂಕರಿಸಿ ಇದ್ದರು. ಅವರಲ್ಲಿ ಕೆಲವರು ರಾಮಾಯಣವನ್ನು ಗಾನಮಾಡುತಲಿದ್ದರು. ಇನ್ನು ಕೆಲವರು ಭಕ್ತಿರಸವನ್ನುಳ್ಳ ಕೀರ್ತನೆಗಳನ್ನು ಪಾಡುತಲಿದ್ದರು. ಅವರಲ್ಲಿ ಒಬ್ಬ ರಮಣಿಯು ಮಹಾರಾಜನನ್ನು ಉದ್ದೇಶಿಸಿ ಒಂದು ಚಿಕ್ಕಕಾವ್ಯವನ್ನು ಬರೆದಳು. ಅದರಲ್ಲಿ ರಘುನಾಥ ಭೂಪಾಲನಿಗೆ ಶ್ರೀರಾಮಚಂದ್ರನಲ್ಲಿ ಇರುವ ನಿಗೂಢ ಭಕ್ತಿಯನ್ನು ಕುರಿತು ಆ ಕವಯಿತ್ರಿಯು ವರ್ಣಿಸಿ ಇದ್ದಳು. ಈ ಕಾವ್ಯದಲ್ಲಿ ಇರುವ ಶ್ರೀರಾಮಚಂದ್ರನಸ್ತವವನ್ನೂ, ಆತನ ಸದ್ಗುಣಗಳನ್ನು ವರ್ಣಿಸುವ ಘಟ್ಟಗಳನ್ನೂ ಕೇಳುವ ಸಮಯದಲ್ಲಿ ರಾಜನು ತನ್ಮಯನಾಗಿ ಆನಂದಬಾಷ್ಪಗಳನ್ನು ಬಿಡುತಲಿದ್ದನು.

ರಘುನಾಥ ಭೂಪಾಲನು ಕಾವ್ಯವನ್ನು ಪೂರ್ತಿಯಾಗಿ ಕೇಳಿ ಸಂತೋಷಿಸಿ, ಪಂಡಿತರನ್ನು ನೋಡಿ "ಶ್ರೀರಾಮಚಂದ್ರನ ಚರಿತ್ರೆಯನ್ನು ನಾನು ಅನೇಕ ಸಲ ಕೇಳಿದೇನೆ. ಆ ಚರಿತ್ರೆಯನ್ನು ಕೇಳುವ ಪ್ರತಿಯೊಂದು ಸಲವೂ, ಅದು ಹೊಸವಿಷಯವೆಂತಲೇ ನನ್ನ ಮನಸ್ಸಿಗೆ ಬೋಧೆಯಾಗುತ್ತದೆ. ಆದರೆ ಅದರ

ರಚನೆಯಲ್ಲಿ ಯಾವುದೋ ಒಂದು ಅಭಾವವು ಇರುವಂತೆ ತೋರುತ್ತದೆ. ಆ ಲೋಪವನ್ನು ತಿಳಿಸಲು ನಾನು ಅಸಮರ್ಥನಾಗಿ ಇದೇನೆ. ಆದಕಾರಣ ಶ್ರೀರಾಮಚಂದ್ರನ ಗುಣಕೀರ್ತನೆಯನ್ನು ಸಂಪೂರ್ಣವಾಗಿಮಾಡಿ ಯಾವ ಲೋಪವೂ ಇಲ್ಲದಂತೆ ಶ್ರೀರಾಮಾಯಣವನ್ನು ನಿಮ್ಮಲ್ಲಿ ಯಾರಾದರೂ ರಚಿಸಿರಿ." ಎಂದು ಹೇಳಿದನು. ಆದರೆ ಆ ಕಾರ್ಯಕ್ಕೆ ಯಾರೂ ಸಮ್ಮತಿಸಲಾರದೆ ಹೋದರು. ಅದರಿಂದ ರಾಜನು ವಿಚಾರಗ್ರಸ್ತನಾದನು.

ಆ ರಾತ್ರಿಯಲ್ಲಿ ಶ್ರೀರಾಮಚಂದ್ರನು ರಾಜನಿಗೆ ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ "ಎಲ್ಲೈ ದೊರೆಯೇ! ಚಿಂತಿಸಬೇಡ. ಅಪರಸರಸ್ವತಿ ಎನಿಸುವ ಮಧುರ ವಾಣಿಯು ನಿನ್ನ ಸಭೆಯಲ್ಲಿ ಇದಾಳೆ. ಆಕೆಯ ಕವಿತಾಗಾನಕ್ಕೆ ನಾನು ಸಂತುಷ್ಟ ಚಿತ್ತನಾದೆನು. ಆದಕಾರಣ ರಾಮಾಯಣ ರಚನಾಭಾರವನ್ನು ಆಕೆಗೆ ವಹಿಸುವ ನಾಗು. ಈ ಕಾರ್ಯವನ್ನು ನಿರ್ವಹಿಸುವುದಕ್ಕೆ ಆಕೆಯೇ ತಕ್ಕವಳು." ಎಂದು ನುಡಿದನು.

ಮರುದಿನ ಪ್ರಾತಃಕಾಲದಲ್ಲಿ ರಾಜನು ತನ್ನ ಸ್ವಪ್ನವೃತ್ತಾಂತವನ್ನು ಮಧುರ ವಾಣಿಗೆ ತಿಳಿಸಿದನು. ಅದಕ್ಕೆ ಆಕೆಯು "ಶ್ರೀರಾಮಚಂದ್ರನ ಅಪ್ಪಣೆಯನ್ನು ನಾನು ಶಿರಸಾವಹಿಸುತ್ತೇನೆ. ಆತನೇ ಈ ಕಾರ್ಯಕ್ಕೆ ಸಹಾಯಕನಾಗಿ ಇರು ವಾಗ ನನಗೆ ಶಂಕೆ ಏನು? ನನ್ನ ಸಮಸ್ತ ಲೋಪಗಳನ್ನೂ ಆತನೇ ಸರಿ ಮಾಡುವನು." ಎಂದು ಹೇಳಿದಳು.

ಅನಂತರ ಮಧುರವಾಣಿಯು ರಾಮಾಯಣವನ್ನು ರಚಿಸಿದಳು. ಮಂಗ ಳೂರು ಮಲ್ಲೇಶ್ವರ ವೇದವೇದಾಂತ ಮಂದಿರದಲ್ಲಿ ಇರುವ ಪುಸ್ತಕ ಭಾಂಡಾಗಾರದಲ್ಲಿ ಈ ಗ್ರಂಥದ ಕೆಲವುಭಾಗವು ರಕ್ಷಿತವಾಗಿದೆ. ಇದರಲ್ಲಿ ಹದಿ ನಾಲ್ಕು ಸರ್ಗಗಳು ಇವೆ. ಈ ಹದಿನಾಲ್ಕು ಸರ್ಗಗಳಲ್ಲಿ ಅನೇಕವಿಧವಾದ ವೃತ್ತಗಳಿಂದ ಕೂಡಿದ ಒಂದುಸಾವಿರ ಶ್ಲೋಕಗಳು ಇವೆ. ತಂಜಾವೂರು ರಾಜಸಭೆಯಲ್ಲಿ ಶತಸಂಖ್ಯೆಗಿಂತಲೂ ಅಧಿಕರಾದ ವಿದುಷಿಯರು ಇದ್ದರೆಂದು ಪ್ರಥಮ ಸರ್ಗದಲ್ಲಿ ಹೇಳಿದೆ. ಗ್ರಂಥವು ಕಥಾಸಂವಿಧಾನದಲ್ಲಿಯೂ, ಕವಿತ್ವ ಧಾರೆಯಲ್ಲಿಯೂ ಅದ್ವಿತೀಯವಾದುದಾಗಿ ಪ್ರಕಾಶಿಸುತಲಿದೆ.

ಮಧುರವಾಣಿಯು ಗುಣವತಿಯಾಗಿ ಇದ್ದಳು. ವೀಣಾವಾದ್ಯದಲ್ಲಿ ಈಕೆಯು ಅಸಮಾನಳಾಗಿ ಇದ್ದಳು. ಮತ್ತು ಸಂಸ್ಕೃತಾಂಧ್ರ ಭಾಷೆಗಳಲ್ಲಿ ಈಕೆಯು ವಿಶೇಷ ಪಾಂಡಿತ್ಯವನ್ನು ಪಡೆದಿದ್ದಳು. ಈಕೆಯು ಹತ್ತು, ಹದಿನೈದು ನಿಮಿಷಗಳಲ್ಲಿ ಒಂದುನೂರು ಶ್ಲೋಕಗಳನ್ನು ರಚಿಸುತ್ತಿದ್ದಳಂತೆ. ಈಕೆಯು ರಾಮಾಯಣ ದೊಡನೆ, ನೈಷಧ, ಕುಮಾರಸಂಭವ ಎಂಬ ಎರಡು ಗ್ರಂಥಗಳನ್ನು ರಚಿಸಿದಳು. ಹದಿನೇಳನೆಯ ಶತಾಬ್ದದಲ್ಲಿ ಈಕೆಯು ಜೀವಿಸಿ ಇದ್ದಳು.

ಗುಲ್‌ಬದನ್‌ಬೇಗಂ.

ಭರತಖಂಡದಲ್ಲಿ ಮಹಮ್ಮದೀಯ ಸ್ತ್ರೀಯರಲ್ಲಿ ಸುಪ್ರಸಿದ್ಧ ಚರಿತ್ರೆಯನ್ನುಳ್ಳ ಅನೇಕ ವಿದುಷಿಯರು ಇದ್ದರು. ಅವರಲ್ಲಿ ಅನೇಕರು ಕಾವ್ಯಗಳನ್ನೂ, ಇತಿಹಾಸ ಗ್ರಂಥಗಳನ್ನೂ ರಚಿಸಿ ಇದಾರೆ. ಆ ಗ್ರಂಥಗಳು ಇಂದಿನವರೆಗೂ ಪಂಡಿತರಿಂದ ವಿಶೇಷವಾಗಿ ಗೌರವಿಸಲ್ಪಡುತಲಿದೆ.

ಬಾಬರ್ ಚಕ್ರವರ್ತಿಯು ಗುಲ್‌ಬದನ್‌ಬೇಗಮಿನ ತಂದೆಯು. ಅಕ್ಬರು ಬಾದಷಹನಿಗೆ ಈಕೆಯು ಸೋದರತ್ತೆ ಯಾಗಬೇಕು. ಈಕೆಯು ವಿಶೇಷ ಭ್ರಾತೃ ಸ್ನೇಹ ಉಳ್ಳವಳಾದಕಾರಣ, ಸರ್ವದಾ ಹುಮಾಯೂನನೊಡನೆ ವಾಸಮಾಡುತ್ತಿದ್ದಳು ಆತನು ಎಲ್ಲಿಗೆಹೋದರೂ ಈಕೆಯು ಆತನನ್ನು ಹಿಂಬಾಲಿಸುತಲಿದ್ದಳು. ಈಕೆಯು ಸಹೋದರನ ಸೌಖ್ಯವೇ ತನ್ನ ಸೌಖ್ಯವೆಂದು ಭಾವಿಸಿ, ಯುದ್ಧಸಮಯದಲ್ಲಿ ಸಹ ಸೋದರನ ಸಮೀಪದಲ್ಲಿಯೇ ಇದ್ದು ಆತನಿಗೆ ಹಿತವನ್ನು ತಿಳಿಸುತ್ತಿದ್ದಳು.

ಈಕೆಯು ಅಸಾಧಾರಣ ಬುದ್ಧಿಮತಿಯಾಗಿ ಇದ್ದುದರಿಂದ ಹುಮಾಯೂನನು ಈಕೆಯೊಡನೆ ಆಲೋಚಿಸದೆ, ಯಾವರಾಜಕಾರ್ಯವನ್ನೂ ಮಾಡುತ್ತಿರಲಿಲ್ಲ. ವಿಶೇಷ ವಿದ್ಯಾವತಿಯಾದ ಈಕೆಯು 'ಹುಮಾಯೂನ್' ಎಂಬ ಗ್ರಂಥವನ್ನು ರಚಿಸಿದಳು. ಅದರಲ್ಲಿ ಹುಮಾಯೂನಿನ ಚರಿತ್ರೆಯನ್ನೂ, ಆ ಕಾಲದ ಮುಖ್ಯ ವಿಷಯಗಳನ್ನೂ ಈಕೆಯು ಬಹುಚೆನ್ನಾಗಿ ವರ್ಣಿಸಿ ಇದಾಳೆ. ಒಬ್ಬ ಸುಪ್ರಸಿದ್ಧನಾದ ಇತಿಹಾಸಲೇಖಕನ ಪತ್ನಿಯು ಈ ಗ್ರಂಥವನ್ನು ಆಂಗ್ಲೇಯ ಭಾಷೆಗೆ ಭಾಷಾಂತರೀಕರಿಸಿ, ಐತಿಹಾಸಿಕ ರಾಜ್ಯದಲ್ಲಿ ಗುಲ್‌ಬದನ್ ಬೇಗಮಿನ ಹೆಸರನ್ನು ಚಿರಸ್ಮರಣೀಯವಾಗಿ ಮಾಡಿದಾಳೆ.

ರಾಮಮಣಿ.

ವಂಗದೇಶದ ವಿದುಷಿಯರಲ್ಲಿ ರಾಮಮಣಿಯು ಬಹು ಪ್ರಾಚೀನಳು. ಈಕೆಯು ಚಂಡೀದಾಸನೆಂಬ ಮಹಾಕವಿಯಕಾಲದಲ್ಲಿ ಇದ್ದಳು. ಈಕೆಯು ಶ್ರೀರಾಧಾ ಕೃಷ್ಣರ ಪ್ರೇಮಲೀಲೆಯನ್ನು ಕುರಿತು ಕೆಲವು ಕೀರ್ತನೆಗಳನ್ನು ರಚಿಸಿದಳು. ಈ ಕೀರ್ತನೆಗಳು ಬಹು ಮನೋಹರವಾಗಿವೆಯಂತೆ.

ಈಕೆಯು ಕುಲದಲ್ಲಿ ನಾಪಿತೆಯು. ಈಕೆಯು ಏಕಾಕಿನಿಯಾಗಿ ದೇಶ ಸಂಚಾರಮಾಡುತ್ತ ವೀರಭೂಮಿ ಜಿಲ್ಲೆಯಲ್ಲಿ ಇರುವ ವಿಶಾಲಾಕ್ಷಿಯ ಮಂದಿರಕ್ಕೆ ಬಂದಳು. ಆಗ ಚಂಡೀದಾಸನು ಅಲ್ಲಿ ಪೂಜಾರಿಯಾಗಿ ಇದ್ದನು. ಆತನು ರಾಮಮಣಿಯ ಅವಸ್ಥೆಯನ್ನು ನೋಡಿ, ಆಕೆಯನ್ನು ದೇವಾಲಯದಲ್ಲಿ ದಾಸಿಯಾಗಿ ನಿಯಮಿಸಿದನು. ಅಂದಿನಿಂದ ರಾಮಮಣಿಯು ದೇವೀಪ್ರಸಾದವನ್ನು ಭುಜಿಸುತ್ತ ಅಲ್ಲಿಯೇ ಕಾಲವನ್ನು ಕಳೆಯುತ್ತ ಇದ್ದಳು.

ಚಂಡೀದಾಸನು ಈಕೆಯನ್ನು ತಾಯಿಯಂತೆ ಭಾವಿಸಿ ಇದ್ದನು. ಆತನು ತನ್ನ ಕಾವ್ಯಗಳಲ್ಲಿ ರಾಮಮಣಿಯನ್ನು ತಾಯಿ ಎಂತಲೂ, ಗುರ್ವಿ ಎಂತಲೂ ಸಂಬೋಧಿಸಿ ಇದಾನೆ. ರಾಮಮಣಿಯು ಸಹ ಚಂಡೀದಾಸನಲ್ಲಿ ವಿಶೇಷ ಪ್ರೇಮಉಳ್ಳವಳಾಗಿ ಇದ್ದಳು.

ಮಾಧವೀದೇವಿ.

ಈಕೆಯ ನಿವಾಸಸ್ಥಳವು ಜಗನ್ನಾಥ. ಚೈತನ್ಯಸ್ವಾಮಿಯ ಶಿಷ್ಯರಲ್ಲಿ ಪ್ರಸಿದ್ಧನಾದ ಶಿಖೀಮಹತಿಯು ಮಾಧವೀದೇವಿಯ ಸೋದರನು.

ಚೈತನ್ಯಸ್ವಾಮಿಯು ದಕ್ಷಿಣದೇಶದಿಂದ ನೀಲಾಚಲಕ್ಕೆ ಬಂದ ಸಮಯದಲ್ಲಿ ಮಾಧವೀದೇವಿಯು ಆತನನ್ನು ನೋಡಿದಳು. ಆಸಮಯದಲ್ಲಿ ಈಕೆಯ ಹೃದಯದಲ್ಲಿ ಭಗವದ್ಭಕ್ತಿಯು ಅಂಕುರಿಸಿತು. ಕ್ರಮಕ್ರಮವಾಗಿ ಭಕ್ತಿಯು ಅಭಿವೃದ್ಧಿಯಾಗಿ ಕೊನೆಗೆ ಮಹಾಭಕ್ತಳಾದಳು. ಚೈತನ್ಯಸ್ವಾಮಿಯು ಸನ್ಯಾಸವನ್ನು ಸ್ವೀಕರಿಸಿದ

ಮೇಲೆ ಸ್ತ್ರೀಮುಖವನ್ನು ನೋಡುವುದಿಲ್ಲವೆಂದು ದೀಕ್ಷೆಯನ್ನು ವಹಿಸಿದನು. ಆದುದರಿಂದ ಈಕೆಯು ಮರೆಯಲ್ಲಿ ನಿಂತುಕೊಂಡು ಆತನಿಗೆ ಶ್ರೀಕೃಷ್ಣನಲ್ಲಿ ಇರುವಭಕ್ತಿಯನ್ನು ನೋಡಿ ಪರವಶಳಾಗುತಲಿದ್ದಳು. ಮತ್ತು ಆತನ ಸಮಕ್ಷ ನುಕ್ಕೆ ಹೋಗುವುದಕ್ಕೆ ಇಲ್ಲದೇಹೋಯಿತೆಂದು ಚಿಂತಿಸುತ್ತ ಇದ್ದಳು. ಈ ವಿಷಯವು ಆಕೆಯು ರಚಿಸಿದ ಪದ್ಯಗಳಲ್ಲಿ ಕಂಡುಬರುತ್ತದೆ.

ಈಕೆಯು ರಚಿಸಿದ ಕೀರ್ತನೆಗಳಲ್ಲಿ ಬಹುಭಾಗವು 'ಪದಕಲ್ಪತರುವು' ಎಂಬ ಗ್ರಂಥದಲ್ಲಿ ಕಾಣಬರುತ್ತದೆ. ಈ ಕೀರ್ತನೆಗಳು ಒಳ್ಳೆಯ ಭಾಷೆಯಿಂದಲೂ, ಮೃದು ಮಧುರಭಾವದಿಂದಲೂ ಒಪ್ಪುತಲಿವೆ. ಈ ಕೀರ್ತನೆಗಳು ಸ್ವಲ್ಪಮಟ್ಟಿಗೆ ಇತಿಹಾಸವನ್ನು ಸಹ ತಿಳಿಸುತ್ತವೆ. ಇವುಗಳ ಆಧಾರದಿಂದ ಶ್ರೀಕೃಷ್ಣ ಚೈತನ್ಯಸ್ವಾಮಿಯ ಲೀಲೆಗಳನ್ನು ಸ್ವಲ್ಪಮಟ್ಟಿಗೆ ನಾವು ಗ್ರಹಿಸ ಬಹುದು.

ಉತ್ಕಲದೇಶಾಧೀಶ್ವರನಾದ ಪ್ರತಾಪರುದ್ರಗಜಪತಿಯು ಮಾಧವೀದೇವಿಯ ಕವಿತಾಮಾಧುರ್ಯವನ್ನೂ, ಸುಂದರವಾದ ಲಿಪಿಯನ್ನೂ ನೋಡಿ ಸಂತೋಷಿಸಿ ಈಕೆಯನ್ನು ಜಗನ್ನಾಥಸ್ವಾಮಿಯ ದಿನಚರ್ಯೆಯನ್ನು ಬರೆಯಲು ನಿಯಮಿಸಿದನು.

ಆನಂದಮಯೀದೇವಿ.

ಈಕೆಯು ವಂಗದೇಶದ ಫರೀದುಪೂರು ಜಿಲ್ಲೆಯ 'ಜಗಸಾ' ಎಂಬ ಗ್ರಾಮದಲ್ಲಿ ಜನ್ಮಿಸಿದಳು. ಈಕೆಯ ತಂದೆಯು ಕವೀಶ್ವರನೂ, ಸಾಧುವೂ ಆದ ಲಾಲಾರಾಮಗತಿರಾಯಿಯು. ಈಕೆಯ ಪತಿಯು ಪಾಯಗ್ರಾಮ ನಿವಾಸಿಯಾದ ಪಂಡಿತ ಕವೀಂದ್ರ ಅಯೋಧ್ಯರಾಮ.

ಆನಂದಮಯೀದೇವಿಯು ತಂದೆಯ ಹತ್ತಿರ ಸಂಸ್ಕೃತಭಾಷೆಯನ್ನೂ, ಬಂಗಾಳಿಭಾಷೆಯನ್ನೂ ಅಭ್ಯಸಿಸಿದಳು. ಮತ್ತು ಧರ್ಮಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದಳು. ಅದರಿಂದ ಈಕೆಯು ಬಾಲ್ಯದಿಂದಲೂ ವಿದುಷೀ ಮಣಿ ಎಂದು ಪ್ರಖ್ಯಾತಳಾದಳು.

ಈಕೆಯ ಪಾಂಡಿತ್ಯವಿಷಯವಾಗಿ ಈ ಕೆಳಗಿನ ಕಥೆಯನ್ನು ಹೇಳುತ್ತಾರೆ.

ರಾಜನಗರ ನಿವಾಸಿಯಾದ ಕೃಷ್ಣದೇವ ವಿದ್ಯಾವಾಗೀಶನ ಪುತ್ರನಾದ ಹರಿ ವಿದ್ಯಾಲಂಕಾರ ಎಂಬಾತನು, ಶಿವಪೂಜಾಸದ್ಧತಿಯನ್ನು ಕುರಿತು ಒಂದು ಗ್ರಂಥವನ್ನು ಬರೆದು ಆನಂದಮಯಿದೇವಿಯ ಬಳಿಗೆ ಕಳುಹಿದನು. ಈ ಗ್ರಂಥದಲ್ಲಿ ಅನೇಕ ದೋಷಗಳು ಇದ್ದವು. ಅದರಿಂದ ಈಕೆಯು "ಪುತ್ರನ ವಿದ್ಯಾವಿಷಯದಲ್ಲಿ ನೀವು ಬಹಳ ಅಶ್ರದ್ಧೆಯುಳ್ಳವರಾಗಿ ಇದೀರಿ" ಎಂದು ಕೃಷ್ಣದೇವವಿದ್ಯಾವಾಗೀಶನ ಹೆಸರಿಗೆ ಪತ್ರವನ್ನು ಬರೆದಳು. ಸಂಸ್ಕೃತದಲ್ಲಿ ವಿಶೇಷ ಪಾಂಡಿತ್ಯವು ಇಲ್ಲದಿದ್ದರೆ ಶಿವಪೂಜಾಪದ್ಧತಿಯಲ್ಲಿ ದೋಷವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಆದುದರಿಂದ ಆನಂದಮಯಿದೇವಿಯು ಸಂಸ್ಕೃತಭಾಷೆಯಲ್ಲಿ ಉತ್ತಮಜ್ಞಾನವನ್ನು ಪಡೆದಿದ್ದಳು ಎಂದು ತಿಳಿಯಬಹುದು.

ಒಂದುಸಲ ರಾಜವಲ್ಲಭ ಎಂಬ ರಾಜನು, ಲಾಲಾರಾಮಗತಿರಾಯನಿಗೆ ಅಗ್ನಿಷ್ಟೋಮವಿಧಾನವನ್ನು ಕುರಿತು ಬರೆದು ಕಳುಹಿಸುವಂತೆ ಒಂದು ಪತ್ರವನ್ನು ಬರೆದನು. ಆಗ ರಾಮಗತಿರಾಯನು ಪುನಶ್ಚರಣೆಯಲ್ಲಿ ಇದ್ದುದರಿಂದ ತಾನು ಆ ವಿಷಯಕ್ಕೆ ಪ್ರತ್ಯುತ್ತರವನ್ನು ಬರೆಯಲಾರದೆ ತನ್ನ ಮಗಳಾದ ಆನಂದಮಯಿದೇವಿಯನ್ನು ಆ ಕಾರ್ಯಕ್ಕೆ ನಿಯಮಿಸಿದನು. ಆಕೆಯ ಪಾಂಡಿತ್ಯದಲ್ಲಿ ಸಂಪೂರ್ಣ ವಿಶ್ವಾಸವು ಇದ್ದುದರಿಂದಲೇ, ಅನೇಕ ಪಂಡಿತರು ಇರುವ ಸಭೆಗೆ ಹೋಗುವ ಪ್ರತ್ಯುತ್ತರವನ್ನು ಬರೆಯುವುದಕ್ಕೆ ಆತನು ಪುತ್ರಿಯನ್ನು ನಿಯಮಿಸಿದನು. ತಂದೆಯ ಅನುಜ್ಞೆಯಂತೆ ಅಗ್ನಿಷ್ಟೋಮವಿಧಾನವನ್ನು ಬರೆದು, ಆನಂದಮಯಿದೇವಿಯು ರಾಜಸಭೆಗೆ ಕಳುಹಿಸಿದಳು.

ಈಕೆಯು ಚಿಕ್ಕಚಿಕ್ಕ ಕಾವ್ಯಗಳನ್ನು ಬರೆದು, ಅವುಗಳಿಂದ ಮಾತೃಭಾಷೆಯನ್ನು ಅಲಂಕರಿಸಿದಳು. ಈಕೆಯ ಚಿಕ್ಕಪ್ಪನಾದ ಲಾಲಾಜಯನಾರಾಯಣನು ಕವೀಶ್ವರನು. ಈತನು ರಚಿಸಿದ 'ಹರಿಲೀಲಾ' ಎಂಬ ಗ್ರಂಥದಲ್ಲಿ ಈಕೆಯು ರಚಿಸಿದ ಅನೇಕ ಪದ್ಯಗಳು ಇವೆಯೆಂದು ಹೇಳುತ್ತಾರೆ. ಈಕೆಯು ರಚಿಸಿದ ಯಾವಗ್ರಂಥವೂ ಈಗ ಪೂರ್ಣವಾಗಿ ದೊರೆಯುವದಿಲ್ಲ. ಆಯಾ ಗ್ರಂಥಗಳ ಕೆಲವು ಭಾಗಗಳು ಮಾತ್ರ ಅಲ್ಲಲ್ಲಿ ಕಾಣಬರುವುದು.

ಜಯನಾರಾಯಣನು ರಚಿಸಿದ ಚಂಡೀಕಾವ್ಯದಲ್ಲಿ ಸಹ ಈಕೆಯು ರಚಿಸಿದ ಪದ್ಯಗಳು ಇವೆಯಂತೆ. ಈಕೆಯು ರಚಿಸಿದ ಗ್ರಂಥಗಳಲ್ಲಿ 'ಉಮಾದೇವಿಯ ವಿವಾಹ' ಎಂಬ ಗ್ರಂಥವು ಪ್ರಸಿದ್ಧವಾದುದು. ಇದನ್ನು ಅನೇಕ ಜನರು ಕಂಠಸ್ಥ ಮಾಡಿಕೊಂಡು ಹಾಡುತ್ತಾರೆ.

ಗಂಗಾಮಣಿಯು ಆನಂದಮಯಿದೇವಿಯ ಸೋದರತ್ತೆಯು. ಈಕೆಯೂ ವಿದ್ಯಾವತಿ. ಈಕೆಯು ರಚಿಸಿದ ಮಂಗಳಗಳನ್ನೂ, ಇತರ ಹಾಡುಗಳನ್ನೂ

ವಿವಾಹವೇ ಮೊದಲಾದ ಶುಭಕಾರ್ಯಗಳ ಸಮಯದಲ್ಲಿ ಹಾಡುತ್ತಾರೆ. ಈಕೆಯು ಸೀತಾವಿವಾಹವನ್ನು ಕುರಿತು ಬರೆದ ಪದ್ಯಮಾಲಿಕೆಯು ಪ್ರಶಂಸಾರ್ಹವಾದುದಾಗಿದೆ.

ವೈಜಯಂತಿ.

——:o:——

ಈಕೆಯ ಜನ್ಮಸ್ಥಾನವು ವಂಗದೇಶದ ಫರಿದುಪುರಿಜಿಲ್ಲೆಗೆ ಸೇರಿದ ' ದನುಕಾ ' ಎಂಬ ಗ್ರಾಮವು. ಮಹಾಪಂಡಿತನಾದ ಮಯೂರ ಭಟ್ಟನ ವಂಶದಲ್ಲಿ ಈಕೆಯು ಜನ್ಮಿಸಿದಳು. ಈಕೆಗೆ ಬಾಲ್ಯದಿಂದಲೂ ವಿದ್ಯಾರ್ಜನೆಯಲ್ಲಿ ಆಸಕ್ತಿಯು ಹೆಚ್ಚು. ಆದಕಾರಣ ಈಕೆಯ ತಂದೆಯು ಈಕೆಗೆ ವಿಶೇಷ ಶ್ರದ್ಧೆಯಿಂದ ಓದು ಬರಹವನ್ನು ಕಲಿಸುತಲಿದ್ದನು. ಈಕೆಯು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ ಬಹು ಸ್ವಲ್ಪಕಾಲದಲ್ಲಿಯೇ ಸಂಸ್ಕೃತಭಾಷೆಯಲ್ಲಿ ಉತ್ತಮ ಜ್ಞಾನವನ್ನು ಪಡೆದಳಂತೆ. ವೈಜಯಂತಿಯು ವ್ಯಾಕರಣಶಾಸ್ತ್ರವನ್ನು ಅಭ್ಯಸಿಸಿದಮೇಲೆ ಧರ್ಮಶಾಸ್ತ್ರಗಳನ್ನು ಓದುವುದಕ್ಕೆ ಪ್ರಾರಂಭಿಸಿದಳು.

ದುರ್ಗಾದಾಸ ತರ್ಕವಾಗೀಶನ ಪುತ್ರನಾದ ಕೃಷ್ಣನಾಥ ಪಂಡಿತನಿಗೆ ವೈಜಯಂತಿಯನ್ನು ಕೊಟ್ಟು ಆಕೆಯ ತಂದೆಯು ವಿವಾಹವನ್ನು ಮಾಡಿದನು. ಆದರೆ ಈಕೆಯ ತಂದೆಗಿಂತಲೂ ಮಾವನು ವಂಶಮರ್ಯಾದೆಯಲ್ಲಿ ಶ್ರೇಷ್ಠನಾಗಿದ್ದುದರಿಂದ, ಆತನು ಪ್ರಥಮದಲ್ಲಿ ವೈಜಯಂತಿಯನ್ನು ತನ್ನ ಸೊಸೆಯಾಗಿ ಅಂಗೀಕರಿಸಲು ಇಷ್ಟಪಡಲಿಲ್ಲ. ಕೊನೆಗೆ ವೈಜಯಂತಿಯ ವಿದ್ಯಾಸಂಪತ್ತಿಗೆ ಮೆಚ್ಚಿ, ತರ್ಕವಾಗೀಶನು ಈಕೆಯನ್ನು ತನ್ನ ಮಗನಿಗೆ ತಂದುಕೊಳ್ಳಲು ಸಮ್ಮತಿಸಿದನು. ದುರ್ಗಾದಾಸ ತರ್ಕವಾಗೀಶನು ವಂಶಮರ್ಯಾದೆಯ ಅಭಿಮಾನವನ್ನು ಬಿಟ್ಟರೂ ಆತನ ಪುತ್ರನು ವಂಶಾಭಿಮಾನವನ್ನು ತ್ಯಜಿಸಲು ಒಪ್ಪಲಿಲ್ಲ. ಆದರೆ ತಂದೆಯ ಆಜ್ಞೆಯನ್ನು ಮೀರಲಾರದೆ ಆತನು ವೈಜಯಂತಿಯನ್ನು ವಿವಾಹಮಾಡಿಕೊಂಡನು.

ಮಾವನು ಜೀವಿಸಿ ಇರುವವರೆಗೂ ವೈಜಯಂತಿಯು ಕೆಲವುಕಾಲ ಭರ್ತೃಗೃಹದಲ್ಲಿಯೂ, ಕೆಲವುಕಾಲ ತೌರುಮನೆಯಲ್ಲಿಯೂ ವಾಸಮಾಡುತ್ತ ಇದ್ದಳು. ಮಾವನ ಮರಣಾನಂತರ ಈಕೆಯನ್ನು ಕೃಷ್ಣನಾಥ ಪಂಡಿತನು ತ್ಯಜಿಸಿದುದರಿಂದ, ಈಕೆಯು ತೌರುಮನೆಯಲ್ಲಿಯೇ ವಾಸವಾಡಬೇಕಾಯಿತು. ಈಕೆಯು

ಸರ್ವದಾ ವಿದ್ಯಾವ್ಯಾಸಂಗದಲ್ಲಿ ಕಾಲವನ್ನು ಕಳೆಯುತ್ತ ಮನೋದುಃಖವನ್ನು ಸ್ವಲ್ಪ ಕಡಮೆಮಾಡಿಕೊಳ್ಳುತ್ತ ಇದ್ದಳು.

ಕೆಲವುಕಾಲ ಹೀಗೆ ಕಳೆದಮೇಲೆ ವೈಜಯಂತಿಯು ಪತಿಗೆ ಒಂದು ಪತ್ರವನ್ನು ಲಿಖಿಸಿದಳು. ಕರುಣಾರಸಪೂರಿತಗಳಾದ ಪದ್ಯಗಳಿಂದ ತುಂಬಿರುವ ಆ ಪತ್ರವನ್ನುನೋಡಿ, ಕೃಷ್ಣನಾಥ ಪಂಡಿತನು ಬಹಳ ದುಃಖಿಸಿ, ಸಾಮಾನ್ಯವಾದ ವಂಶ ಮರ್ಯಾದೆಗಾಗಿ, ತಾನು ಭಾರ್ಯೆಯನ್ನು ತ್ಯಜಿಸಿದುದಕ್ಕೆ ಅನುತಪ್ತಹೃದಯನಾದನು. ಅನಂತರ ಮಾವನ ಮನೆಗೆ ಹೋಗಿ ಪತ್ನಿಯನ್ನು ತನ್ನ ಮನೆಗೆ ಕರೆದುಕೊಂಡು ಬಂದನು. ವೈಜಯಂತಿಯು ಪತಿಗೃಹಕ್ಕೆ ಬಂದ ಅನಂತರವೂ ವಿದ್ಯಾವ್ಯಾಸಂಗವನ್ನು ಬಿಡಲಿಲ್ಲ. ವಿರಾಮವು ದೊರೆತಾಗ ಈಕೆಯು ಪತಿಯ ಸಮೀಪದಲ್ಲಿಯೇ ಓದುತಲಿದ್ದಳು.

ಕೃಷ್ಣನಾಥನು ಷಡ್ದರ್ಶನಗಳಲ್ಲಿ ಅದ್ವಿತೀಯ ಪಂಡಿತನಾಗಿ ಇದ್ದನು. ಆತನ ಬಳಿಯಲ್ಲಿ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತ ಇದ್ದರು. ಒಂದು ದಿವಸ ಪಂಡಿತನು ವಿದ್ಯಾರ್ಥಿಗಳಿಗೆ ಪ್ರಾಚೀನ ದರ್ಶನಗ್ರಂಥದಲ್ಲಿ ಪಾಠವನ್ನು ಹೇಳುತ್ತ ಇದ್ದನು. ಆ ಗ್ರಂಥದಲ್ಲಿ ಒಂದುಕಡೆ 'ಅತ್ರತುನೋಕ್ತಂ', 'ತತ್ರಾಪಿನೋಕ್ತಂ' ಎಂದು ಬರೆದಿತ್ತು. ಅದಕ್ಕೆ ಕೃಷ್ಣನಾಥ ಪಂಡಿತನು 'ಇಲ್ಲಿಯೂ ಹೇಳುವುದಕ್ಕೆ ಅವಕಾಶವು ಇಲ್ಲ,' 'ಅಲ್ಲಿಯೂ ಹೇಳುವುದಕ್ಕೆ ಅವಕಾಶವು ಇಲ್ಲ.' ಎಂದು ಅರ್ಥವನ್ನು ಹೇಳಿದನು. ಆದರೂ ಆತನ ಮನಸ್ಸಿನ ಸಂದೇಹವು ಹರಿಯಲಿಲ್ಲ. ಅದಕ್ಕೆ ಸರಿಯಾದ ಅರ್ಥವು ತಿಳಿಯದೆ ಯೋಚಿಸುತ್ತಿರಲು ಭೋಜನ ಕಾಲವು ಅತಿಕ್ರಮಿಸಿತು. ಆದರೂ ಸರಿಯಾದ ಅರ್ಥವು ತಿಳಿಯಲಿಲ್ಲ.

ಆಗ ಒಬ್ಬ ಶಿಷ್ಯನು ಅಡಿಗೆಯ ಮನೆಗೆ ಹೋಗಲು, ಅವನನ್ನು ನೋಡಿ ವೈಜಯಂತಿಯು 'ಸ್ನಾನಾಹಾರಗಳನ್ನು ಮರೆತು ನೀವು ಏನುಮಾಡುತ್ತಿರುವಿರಿ?' ಎಂದು ಕೇಳಿದಳು. ಅದಕ್ಕೆ ವಿದ್ಯಾರ್ಥಿಯು 'ಅತ್ರತುನೋಕ್ತಂ ತತ್ರಾಪಿನೋಕ್ತಂ' ಎಂಬುದಕ್ಕೆ ಸರಿಯಾದ ಅರ್ಥವು ನಮ್ಮಗುರುಗಳಿಗೆ ಸ್ಫುರಿಸಲಿಲ್ಲ. ಆ ವಿಷಯವನ್ನು ಕುರಿತು ಆಲೋಚಿಸುತ್ತ ಇದಾರೆ. ಎಂದನು. ಆಗ ವೈಜಯಂತಿಯು 'ನಿಮ್ಮ ಗುರುಗಳನ್ನು ಭೋಜನಕ್ಕೆ ಏಳುವಂತೆ ಹೇಳು. ಭೋಜನಾನಂತರ ಅದರ ಅರ್ಥವು ತಿಳಿಯುತ್ತದೆ.' ಎಂದು ನುಡಿದಳು.

ಪತ್ನಿಯ ಮಾತುಗಳನ್ನು ಕೇಳಿ ಕೃಷ್ಣನಾಥ ಪಂಡಿತನು ಶಿಷ್ಯರೊಡನೆ ಸ್ನಾನಕ್ಕೆ ಹೋದನು. 'ಅತ್ರತುನೋಕ್ತಂ. ತತ್ರಾಪಿನೋಕ್ತಂ' ಎಂಬ ವಾಕ್ಯವನ್ನು ಕೇಳಿದ ಕೂಡಲೆ ಅದರ ಅರ್ಥವನ್ನು ವೈಜಯಂತಿಯು ಗ್ರಹಿಸಿದಳು. ಅದಕಾರಣ

ಪತಿಯು ಸ್ನಾನಕ್ಕೆ ಹೋದಮೇಲೆ ಈಕೆಯು ಆ ಗ್ರಂಥದಲ್ಲಿ, ಅತ್ರ, ತು, ನ, ಉಕ್ತಂ, ತತ್ರ, ಅಪಿ, ನ, ಉಕ್ತಂ ಎಂದು ಪದವಿಭಾಗವನ್ನು ಬರೆದು ಇಟ್ಟಳು. ಕೃಷ್ಣನಾಥನು ಸ್ನಾನಮಾಡಿಬಂದು ಭೋಜನವನ್ನುಮಾಡಿ ಶಯನಿಸಿದನು. ಸ್ವಲ್ಪ ಹೊತ್ತಿಗೆ ನಿದ್ರೆಯಿಂದ ಎದ್ದು ಶಿಷ್ಯರಿಗೆ ಪಾಠವನ್ನು ಹೇಳುವುದಕ್ಕಾಗಿ ಆ ಗ್ರಂಥವನ್ನುತೆರೆದು ಅದರಲ್ಲಿ ಇರುವ ಪದವಿಭಾಗವನ್ನು ನೋಡಿ ಬಹಳ ಸಂತೋಷಪಟ್ಟು, "ಇದನ್ನು ಬರೆದವರಿಗೆ ಬಹುಮಾನವನ್ನು ಕೊಡುವೆನು" ಎಂದು ಹೇಳಿ, "ಇದನ್ನು ಬರೆದವರು ಯಾರು" ಎಂದು ವಿದ್ಯಾರ್ಥಿಗಳನ್ನು ಕೇಳಿದನು. ಆದರೆ ವಿದ್ಯಾರ್ಥಿಗಳು ಯಾರೂ ಪ್ರತ್ಯುತ್ತರವನ್ನು ಕೊಡಲಿಲ್ಲ. ಆಗ ಆತನು ಈ ಪದವಿಭಾಗವನ್ನು ತನ್ನ ಪತ್ನಿಯು ಬರೆದಳು ಎಂದು ಗ್ರಹಿಸಿ ಪರಮಾನಂದ ಭರಿತನಾದನು.

ಈಕೆಯು ಅನೇಕ ಶ್ಲೋಕಗಳನ್ನು ರಚಿಸಿದಳು. ಅವು ಈಗ ಕಾಣಬರುವುದಿಲ್ಲ. ಕೃಷ್ಣನಾಥ ಪಂಡಿತನು ತಾನು ರಚಿಸಿದ 'ಆನಂದಲತಿಕಾಚಂಪು' ಎಂಬ ಗ್ರಂಥದಲ್ಲಿ ತಾನು ಈಗ್ರಂಥವನ್ನು ರಚಿಸುವಾಗ ತನ್ನ ಪತ್ನಿಯು ವಿಶೇಷ ಸಹಾಯವನ್ನು ಮಾಡಿದಳೆಂದು ಬರೆದಿದಾನೆ. 'ಆನಂದಲತಿಕಾ ಗ್ರಂಥೋ ಯೇನಾಕಾರೀಸ್ತ್ರಿಯಾ ಸಹಾ.' ಆ ಗ್ರಂಥವನ್ನು ಪರಿಶೀಲನೆಮಾಡಿ ಓದಿದರೆ, ಅದರಲ್ಲಿ ವೈಜಯಂತಿಯ ರಚನೆಯನ್ನೂ, ಕೃಷ್ಣನಾಥಪಂಡಿತನ ರಚನೆಯನ್ನೂ ನಾವು ಬೇರೆ ಬೇರೆಯಾಗಿ ತಿಳಿದುಕೊಳ್ಳಬಹುದು. ಆನಂದಲತಿಕೆಯನ್ನು ರಚಿಸುವಕಾಲದಲ್ಲಿ ಒಂದುದಿವಸ ಕೃಷ್ಣನಾಥಪಂಡಿತನು ಬೆಳಗಿನ ಜಾವದವರೆಗೂ ನಿದ್ರಿಮಾಡದೆ ನಾಯಿಕೆಯನ್ನು ವರ್ಣಿಸುತ್ತ ಇದ್ದನು. ಆಗ ವೈಜಯಂತಿಯು ಎಚ್ಚತ್ತು ಪತಿಯನ್ನು ನೋಡಿ 'ನಾಯಿಕೆಯನ್ನು ವರ್ಣಿಸುವುದಕ್ಕೆ ಇಷ್ಟುಕಾಲವುಬೇಕೇ? ನಾನು ಒಂದು ಶ್ಲೋಕದೊಳಗೆ ವರ್ಣಿಸುವೆನು ನೋಡಿರಿ.' ಎಂದು ಹೇಳಿ ಒಂದು ಶ್ಲೋಕದೊಳಗೆ ನಾಯಿಕೆಯ ವರ್ಣನೆಯನ್ನು ಪೂರ್ತಿಮಾಡಿದಳು.

ವೈಜಯಂತೀದೇವಿಯು ವಂಗದೇಶದ ವಿದುಷಿಯರಲ್ಲಿ ಸರ್ವ ಶ್ರೇಷ್ಠಳೆಂದು ಹೇಳಬಹುದು. ಈಕೆಯು ದೊಡ್ಡ ಕವಯಿತ್ರಿಯಾಗಿ ಇದ್ದಳು. ಈಕೆಯ ಕಾಲವು ಸರಿಯಾಗಿ ತಿಳಿಯುವುದಿಲ್ಲ. ಕೆಲವುಕಾರಣಗಳಿಂದ ಕ್ರಿ.ಶ. ೧೫೫೦ ನೆ ವರ್ಷದಲ್ಲಿ ಈಕೆಯು ಜನ್ಮಿಸಿದಳು ಎಂತಲೂ, ಈಕೆಯ ೨೫ ನೆಯ ವರ್ಷದಲ್ಲಿ 'ಆನಂದಲತಿಕಾಚಂಪು' ಎಂಬ ಗ್ರಂಥವು ರಚಿಸಲ್ಪಟ್ಟಿತು ಎಂತಲೂ ಹೇಳಬಹುದು.

ಮಾನಿನೀದೇವಿ.

—:o:—

ವಂಗದೇಶದ ಉತ್ತರಭಾಗದಲ್ಲಿ ಇರುವ ಒಂದು ಗ್ರಾಮದಲ್ಲಿ ಇಂದ್ರೇಶ್ವರ ಚೂಡಾಮಣಿ ಎಂಬ ಪಂಡಿತನು ವಾಸಮಾಡುತ್ತ ಇದ್ದನು. ಈತನ ಪುತ್ರಿಯೇ ಮಾನಿನೀದೇವಿ. ಈಕೆಯು ತನ್ನ ಅಣ್ಣನಾದ ಧನೇಶ್ವರನು ಅಕ್ಷರಗಳನ್ನು ಓದುತ್ತಿರುವಾಗ ಕೇಳಿ ಅಕ್ಷರಗಳನ್ನು ಕಲಿತುಕೊಂಡಳಂತೆ. ಈ ವಿಧವಾಗಿ ಈಕೆಯು ಆಡುತ್ತಲೇ ಸಂಸ್ಕೃತಭಾಷೆಯನ್ನು ಕಲಿತುಕೊಂಡು, ಧನೇಶ್ವರನು ವ್ಯಾಕರಣವನ್ನು ಓದುವಾಗ ಕೇಳಿ ಆ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದಳು ಎಂದು ಹೇಳುತ್ತಾರೆ.

ಸಾಯಂ ಸಂಧ್ಯೆಯು ಪೂರ್ತಿಯಾದಮೇಲೆ, ಉಪಾಧ್ಯಾಯನು ವಿದ್ಯಾರ್ಥಿಗಳು ಓದಿದ ಪಾಠಗಳಲ್ಲಿ ಪ್ರಶ್ನೆಗಳನ್ನು ಕೇಳುವುದು ಆಚಾರವಾಗಿ ಇದ್ದಿತು. ಇದರ ಹೆಸರು ಜಿಜ್ಞಾಸಾವಾದವೆಂದು ಹೇಳುತ್ತಾರೆ. ಜಿಜ್ಞಾಸಾವಾದದಲ್ಲಿ ಯಾರಾದರೂ ಸದುತ್ತರವನ್ನು ಕೊಡದಿದ್ದರೆ, ಇಂದ್ರೇಶ್ವರ ಚೂಡಾಮಣಿಯು ಪುತ್ರಿಯನ್ನುಕರೆದು "ಹೇಳಲಾರದ ವಿದ್ಯಾರ್ಥಿಯ ಪೂಜಾಪುಷ್ಪವನ್ನು ನಿನಗೆ ಕೊಡುವೆನು" ಎಂದು ಹೇಳಿ ಆಕೆಯಿಂದ ಪ್ರಶ್ನೆಗಳಿಗೆ ಸದುತ್ತರಗಳನ್ನು ಹೇಳಿಸುತಲಿದ್ದನಂತೆ.

ಈಕೆಯು ಪತಿಯು ಗತಿಸಿದಕೂಡಲೆ ಸಹಗಮನವನ್ನು ಮಾಡಲು ಯತ್ನಿಸಿದಳು. ಆದರೆ ಈಕೆಗೆ ಇಪ್ಪತ್ತು ದಿವಸದ ಒಂದು ಗಂಡುಮಗುವು ಇದ್ದಿತು. ಅದರಿಂದ ಬಂಧುಗಳು ಎಲ್ಲರೂ ಚಿಕ್ಕಮಗುವನ್ನು ಬಿಟ್ಟು ಸಹಗಮನವನ್ನು ಮಾಡಕೂಡದು ಎಂದು ಬಹುವಿಧವಾಗಿ ಮಾನಿನೀದೇವಿಗೆ ಬೋಧಿಸಿದರು. ಆದರೆ ಈಕೆಯು ಅವರ ಮಾತುಗಳನ್ನು ನಿರಾಕರಿಸಿ, ಅಂತಹ ಮರಣವು ಶಾಸ್ತ್ರೀಯವಾದುದು ಎಂದು ನುಡಿದು ಚಿತಿಯಲ್ಲಿ ಪ್ರವೇಶಿಸಿದಳು. ಈಕೆಯ ಪುತ್ರನೇ ಸುಪ್ರಸಿದ್ಧನಾದ ರುದ್ರಮುಂಗಳ ನ್ಯಾಯಾಲಂಕಾರನು. ಈತನು ನ್ಯಾಯಶಾಸ್ತ್ರದಲ್ಲಿ ಅದ್ವಿತೀಯ ಪಂಡಿತನು.

ಮಾನಿನೀದೇವಿಯು ಅನೇಕ ಶ್ಲೋಕಗಳನ್ನು ರಚಿಸಿದಳು. ಈಕೆಯು ರಚಿಸಿದ ಶಿವಸ್ತೋತ್ರದ ಕೆಲವು ಶ್ಲೋಕಗಳನ್ನು ಕೆಳಗೆ ಉಪಹರಿಸಿದೇನೆ.

"ತರಣಿರ್ಧರಣಿ ಸ್ಯಲಿಲಂಪವನೋ।
ಗಗನಂಚ ವಿರಿಂಚಿನುತನ್ವತನೋಃ॥

ಶಶಲಾಂಛನ ಭೂಷಣ ಚಂದ್ರಕಳಾ।
ಸ್ತನಸ್ತವ ಘೋಷಜ ಲೇಸಚಲೇ.॥

ತಮಸಿತ್ವಮಸೀಶ್ವರತೇಜಸಿಚ।
ಪೃಥಮೇಶಗಿತಾ ಜಲಧೀಬಸಸೀ,॥
ಅವಸೌಗಗನೇಚ ಗುಹಾನುಪಿತ।
ಹೃದಯೇಸಿ ಬಹಿಶ್ಚದ ದಾಸಿಜಗತ್.॥

ಕರುಣಾಂ ಜಲಧೇ ಹರಿಣಾಂಕಶಿರೋ।
ಗಿರಿರಾಜಸುತಾ ದಯಿತಾಪ್ರಣತಾಂ,॥
ತವಪಾದ ಸರೋರುಹ ಕಿಂಕರಿಕಾಂ।
ಸಕನಾಂಧರ ಸೇವ್ಯಸಮುದ್ಧರಮಾಂ."॥

ಪ್ರಿಯಂವದಾದೇವಿ.

ಸುಮಾರು ಮುನ್ನೂರು ವರ್ಷಗಳ ಕೆಳಗೆ ಪೂರ್ವಬಂಗಾಳೆಯಲ್ಲಿ ಇರುವ 'ಕೋಟಲೀಪಡಾ' ಎಂಬ ಗ್ರಾಮದಲ್ಲಿ ಶಿವರಾಮದೀಕ್ಷಿತನು ಎಂಬ ಒಬ್ಬ ದೊಡ್ಡ ವಿದ್ವಾಂಸನು ಇದ್ದನು. ಆತನ ಯಶೋಸೌರಭದಿಂದ ಆಕರ್ಷಿತರಾಗಿ ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಬಂದು ಆತನ ಬಳಿಯಲ್ಲಿ ಓದಿಕೊಳ್ಳುತ್ತ ಇದ್ದರು. ಆತನು ಪಾಠಗಳನ್ನು ಹೇಳುವುದಕ್ಕೆ 'ಚತುಷ್ಪಾಟಿ' ಮಂಟಪದಲ್ಲಿ ಕುಳಿತಿರುವಾಗ, ಆತನ ಬಳಿಯಲ್ಲಿಯೇ ಕುಳಿತುಕೊಂಡು ಒಬ್ಬ ಚಿಕ್ಕ ಹುಡುಗಿಯು ಪಾಠಗಳನ್ನು ಕೇಳುತ್ತ ಇರುವಳು. ಈ ಹುಡುಗಿಯೇ ಶಿವರಾಮದೀಕ್ಷಿತನ ಪುತ್ರಿಯಾದ ಪ್ರಿಯಂವದಾದೇವಿ. ಈ ಬಾಲಿಕೆಗೆ ಬಿಂದು ವಿಸರ್ಗಗಳು ಸಹ ತಿಳಿಯದು. ಆದರೆ ವಿದ್ಯಾರ್ಥಿಗಳು ಓದುವ ಶ್ಲೋಕಗಳ ಮೃದುಮಧುರಗಾನವು ಈ ಬಾಲಿಕೆಯ ಹೃದಯದಲ್ಲಿ ಆನಂದವನ್ನು ಉಂಟುಮಾಡುತ್ತ ಇದ್ದುದರಿಂದ ವಿದ್ಯಾರ್ಥಿಗಳು ಓದಿಕೊಳ್ಳುವ ಕಾಲದಲ್ಲಿ ಈ ಬಾಲಿಕೆಯು ಆಟಗಳನ್ನು ಬಿಟ್ಟು ತಂದೆಯ ಸಮೀಪದಲ್ಲಿ ಕುಳಿತುಕೊಂಡು ಇರುತ್ತಿದ್ದಳು. ಪಾಠಗಳು ಪ್ರಾರಂಭವಾಗುವುದಕ್ಕೆ ಮೊದಲು ಪ್ರಾರ್ಥನಾಶ್ಲೋಕವನ್ನು ಹೇಳಿರಿ ಎಂದು ದೀಕ್ಷಿತನು

ಅನುಜ್ಞೆಯನ್ನು ಕೊಟ್ಟಕೂಡಲೆ ಈ ಬಾಲೆಯು ಶ್ವಾಸವನ್ನು ಬಿಡುತ್ತ ಮಧುರ ಸ್ವರದಲ್ಲಿ " ಯಾಕುಂದೇಂದು ತುಷಾರಹಾರಧವಳಾ " ಎಂಬ ಶ್ಲೋಕವನ್ನು ಹೇಳಿ ಆನಂದಿಸುತಲಿದ್ದಳು.

ವಿದ್ಯಾರ್ಥಿಗಳ ಪಾಠಗಳು ಮುಗಿದಮೇಲೆ ಪ್ರಿಯಂವದಾದೇವಿಯು ಅವರು ಓದಿದ ಶ್ಲೋಕಗಳಲ್ಲಿ ಅನೇಕ ಶ್ಲೋಕಗಳನ್ನು ತಂದೆಗೆ ಒಪ್ಪಿಸಿ, ಅನೇಕ ಪ್ರಶ್ನೆಗಳನ್ನು ಕೇಳುತ್ತ ಇದ್ದಳು. ಅಪೂರ್ವಮೇಧಾಶಕ್ತಿ ಸಂಪನ್ನಳಾದ ಪ್ರಿಯಂವದಾದೇವಿಯು ವಿದ್ಯಾಭ್ಯಾಸವನ್ನು ಮಾಡಲು ಪ್ರಾರಂಭಿಸಿದ ಎರಡುಮೂರು ವರ್ಷಗಳಲ್ಲಿ ಸಂಸ್ಕೃತದಲ್ಲಿ ಉತ್ತಮ ಜ್ಞಾನವನ್ನು ಪಡೆದಳು.

ಅತ್ಯುತ್ಸಾಹದಿಂದಲೂ, ವಿಶೇಷ ಶ್ರದ್ಧೆಯಿಂದಲೂ ಪ್ರಿಯಂವದಾದೇವಿಯು ಓದಿಕೊಳ್ಳುತ್ತ ವಿದ್ಯಾರ್ಥಿಗಳೊಡನೆ ಶಾಸ್ತ್ರಚರ್ಚೆಯನ್ನು ಮಾಡುತ್ತ, ಮೃದು ಮಧುರ ಸ್ವರದೊಡನೆ ಶ್ಲೋಕಗಳನ್ನು ಹೇಳುತ್ತ ಎಲ್ಲರನ್ನೂ ಆನಂದಪರವಶರನ್ನಾಗಿ ಮಾಡುತ್ತ ಇದ್ದಳು. ಈ ದೃಶ್ಯವನ್ನು ನೋಡಿ ಶಿವರಾಮದೀಕ್ಷಿತನು ಆನಂದಸಾಗರದಲ್ಲಿ ನಿಮಗ್ನನಾಗುತ್ತಿದ್ದನು. ಈಕೆಯನ್ನು ನೋಡುತಲಿದ್ದ ವಿದ್ಯಾರ್ಥಿಗಳಿಗೆ ವಿದ್ಯಾವಿಷಯಿಕ ಚರ್ಚೆಯಲ್ಲಿ ಉತ್ಸಾಹವು ಇಮ್ಮಡಿಯಾಗುತಲಿತ್ತು.

ವಿದ್ಯಾರ್ಥಿಗಳಲ್ಲಿ ಒಬ್ಬನು ಪಶ್ಚಿಮದೇಶಸ್ಥನು. ಆತನಿಗೆ ಈಕೆಯಲ್ಲಿ ಅನುರಾಗವು ಹುಟ್ಟಿತು. ಆದರೆ ಆತನಿಗೆ ವಂಗಭಾಷೆಯು ಬಾರದಕಾರಣ ಆತನು ಈಕೆಯೊಡನೆ ಮಾತನಾಡಲು ಅವಕಾಶವು ಇಲ್ಲದೇ ಇದ್ದಿತು. ಪ್ರಿಯಂವದಾದೇವಿಗೆ ಸ್ವಲ್ಪಕಾಲದಲ್ಲಿಯೇ ಸಂಸ್ಕೃತದಲ್ಲಿ ಅನರ್ಗಳವಾಗಿ ಮಾತನಾಡುವ ಶಕ್ತಿಯು ಉಂಟಾಯಿತು. ಆಗ ಆತನು ಆಕೆಗೆ ತನ್ನ ಮನೋಭಿಪ್ರಾಯವನ್ನು ತಿಳಿಸಿದನು. ಅನಂತರ ಇವರಿಬ್ಬರಿಗೂ ಶಿವರಾಮದೀಕ್ಷಿತನು ಬಹು ಸಂತೋಷದಿಂದ ವಿವಾಹವನ್ನು ನಡೆಸಿದನು.

ಈಕೆಯು ನಾಟಕಾಲಂಕಾರ ಸಾಹಿತ್ಯವನ್ನು ಆರ್ಜಿಸಿದ ಮಾತ್ರದಿಂದ ತೃಪ್ತಳಾಗದೆ ಕವಿತ್ವವನ್ನು ಹೇಳಲು ಪ್ರಾರಂಭಿಸಿದಳು. ಈಕೆಯ ಹೃದಯ ಮಧ್ಯದಲ್ಲಿ ಕೆತುಕೊಂಡಿದ್ದ ಭಾವಪ್ರವಾಹವು ತಡೆಯಿಲ್ಲದೆ ಪ್ರವಹಿಸಲಾರಂಭಿಸಿತು. ಒಂದು ದಿವಸ ಈಕೆಯು ವಿದ್ಯಾರ್ಥಿಗಳೊಡನೆ ಕುಳಿತುಕೊಂಡು ಇದ್ದಳು. ಆಗ ತಂದೆಯ ಆಜ್ಞಾನುಸಾರವಾಗಿ ಈಕೆಯು ತಮ್ಮ ಕುಲದೇವರಾದ ಗೋವಿಂದದೇವನನ್ನು ಕುರಿತು ಈ ಕೆಳಗಿನ ಶ್ಲೋಕವನ್ನು ಬರೆದು ಓದಿದಳು.

ಶ್ಲೋ॥ ಕಾಳಿಂದೀಪುಲಿನೇಷುಕೇಳಿಕಲನಂ
ಕಂಸಾರಿದೈತ್ಯದ್ವಿಷಂ

ಗೋಪಾಲೇಭ್ಯರ ಭೀಷ್ಮದಂ ವ್ರಜವಧೂ
ನೇತ್ರೋತ್ಸವೈರರ್ಚಿತಂ ।
ಬರ್ಹಾಲಂಕೃತಮಸ್ತಕಂ ಸುಲಲಿತೈ
ರಂಗೈತ್ರಿಭಂಗಂಭಜೇ
ಗೋವಿಂದಂ ವ್ರಜಸುಂದರಂ ಭವಹರಂ
ವಂಶೀಧರಂ ಶ್ಯಾಮಲಂ ॥

ಪ್ರಿಯಂವದಾದೇವಿಯು ಈ ಶ್ಲೋಕವನ್ನು ವಿದ್ಯಾರ್ಥಿಗಳ ಮಧ್ಯದಲ್ಲಿ ನಿಂತುಕೊಂಡು ಓದುವಾಗ, ಶಿವರಾಮದೀಕ್ಷಿತನು ಪುತ್ರಿಯಕಡೆ ನೋಡಿ ಆನಂದಾಶ್ರುಗಳನ್ನು ಸುರಿಸುತ್ತ ಆಕೆಯನ್ನು ಆಲಿಂಗನಮಾಡಿಕೊಂಡನು. ಆಕೆಯ ಕವಿತ್ವಶಕ್ತಿಗೆ ವಿದ್ಯಾರ್ಥಿಗಳು ಆಶ್ಚರ್ಯಾನ್ವಿತರಾದರು.

ಅಂದಿನಿಂದ ಈಕೆಯು ಪ್ರತಿದಿನವೂ ಶ್ಲೋಕಗಳನ್ನು ರಚಿಸಿ ತಂದೆಗೆ ಹೇಳುತಲಿದ್ದಳು. ವಿವಾಹವು ನಡೆದಮೇಲೆ ಈಕೆಯು ಪತಿಗೃಹಕ್ಕೆ ಹೋದಳು. ಅಲ್ಲಿಯೂ ಈಕೆಯು ವಿದ್ಯಾವ್ಯಾಸಂಗವನ್ನು ಬಿಡದೆ ಕ್ರಮಕ್ರಮವಾಗಿ ವಿಶೇಷ ಪಾಂಡಿತ್ಯವನ್ನು ಪಡೆದಳು.

ಪ್ರಿಯಂವದಾದೇವಿಯು ವಿದ್ವಾಂಸಳೆಂಬ ಗರ್ವದಿಂದ, ಸಂಸಾರಸಂಬಂಧವಾದ ಕಾರ್ಯಗಳು ತುಚ್ಛವಾದುದು ಎಂದು ಕನಸ್ಸಿನಲ್ಲಿಯೂ ಭಾವಿಸಿದವಳಲ್ಲ. ಪತಿಸೇವೆ, ಅತಿಥ್ಯಭ್ಯಾಗತರಸತ್ಕಾರ, ಗೋಸೇವೆ, ಪಾಕ ಇವುಗಳನ್ನೆಲ್ಲ ಪ್ರಿಯಂವದಾದೇವಿಯು ಸ್ವಯಮಾಗಿ ಮಾಡುತ್ತ ಗೃಹಕೃತ್ಯಗಳನ್ನು ನಿರ್ವಹಿಸುತಲಿದ್ದಳು. ಈಕೆಯು ವಿರಾಮ ಸಮಯವನ್ನು ವ್ಯರ್ಥವಾಗಿ ಕಳೆಯದೆ ಸದ್ಗ್ರಂಥಗಳನ್ನು ಓದುತಲಿದ್ದಳು. ಇಲ್ಲೇ ಈಕೆಯ ಚರಿತ್ರೆಯು ಪರಿಪೂರ್ಣವಾಗಿ ವಿಕಾಸವನ್ನು ಪಡೆಯಿತು. ಈಕೆಯು ಯಾವ ಹಸ್ತದಿಂದ ಮೃದುಮಧುರ ಗೀತಗಳನ್ನು ಬರೆಯುತ್ತಲಿದ್ದಳೋ, ಆ ಹಸ್ತದಿಂದಲೇ ಮನೆಯನ್ನು ಗುಡಿಸುತ್ತಿದ್ದಳು. ಇಂತಹ ಕೆಲಸಗಳನ್ನು ಆಕೆಯು ಅವಮಾನಕರಗಳಾಮುವೆಂದು ತಿಳಿಯದೆ, ಅವುಗಳನ್ನು ಅತ್ಯಂತ ಸಂತೋಷದೊಡನೆ ಮಾಡುತಲಿದ್ದಳು. ಇಂತಹ ವಿದುಷೀಮಣಿಯಲ್ಲವೇ ಭಾರತಗೃಹಿಣಿಯರಿಗೆ ಆದರ್ಶಸ್ವರೂಪರು!

ಈಕೆಯ ಹೆಸರಿಗೆ ತಕ್ಕಂತೆಯೇ ಈಕೆಯ ಕಂಠಸ್ವರವುಸಹ ಬಾಲ್ಯದಿಂದಲೂ ಮಧುರವಾಗಿತ್ತು. ಈಕೆಯು ಪತಿಭಕ್ತಿ ಪರಾಯಣೆಯಾಗಿ, ಪತಿಯ ಆಜ್ಞೆಯನ್ನು ವೇದವಾಕ್ಯವೆಂದು ಎಣಿಸಿ ಪರಿಪಾಲಿಸುತ್ತಿದ್ದಳು. ಅನೇಕ ವಿದ್ಯಾರ್ಥಿಗಳು ಈಕೆಯ ಪತಿಯಹತ್ತಿರ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಪ್ರಿಯಂವದಾ

ದೇವಿಯು ಅವರನ್ನು ತಾಯಿಯಂತೆ ಕಾಪಾಡುತ್ತ, ಅವರಿಗೆಲ್ಲ ತಾನೇ ಅಡಿಗೆ ಯನ್ನುಮಾಡಿ ಊಟಮಾಡಿಸುತ್ತಿದ್ದಳು.

ಈಕೆಗೆ ಜ್ಞಾಪಕಶಕ್ತಿಯು ಹೆಚ್ಚು. ಒಂದು ತಿಂಗಳಿನಲ್ಲಿ ಅಮರವನ್ನೂ, ಮಹಾಭಾರತದಲ್ಲಿ ಇರುವ ಸಾವಿತ್ರೀ, ದಮಯಂತೀ ಚರಿತ್ರೆಗಳನ್ನೂ ಕಂಠಸ್ಥ ಮಾಡಿಕೊಂಡಳು ಎಂದು ಹೇಳುತ್ತಾರೆ. ಈಕೆಯು ಮದಾಲಸಾ ಚರಿತ್ರೆಗೆ ದಾರ್ಶನಿಕ ವ್ಯಾಖ್ಯಾನವನ್ನೂ, ಶಾಂತಿಪರ್ವದಲ್ಲಿ ಇರುವ ಮೋಕ್ಷಧರ್ಮಕ್ಕೆ ಟೀಕೆ ಯನ್ನೂ ರಚಿಸಿದಳು.

ಈಕೆಯ ಲಿಪಿಯು ಸೊಗಸಾಗಿ ಇದ್ದಿತು. ಅದರಿಂದ ಈಕೆಯು ತನ್ನ ಪತಿಯು ಕಾಶಿಯಿಂದ ತೆಗೆದುಕೊಂಡುಬಂದ ಸಂಸ್ಕೃತ ಗ್ರಂಥಗಳನ್ನು ವಂಗ ಲಿಪಿಯಲ್ಲಿ ಬರೆದಳು.

ಪ್ರಿಯಂವದಾದೇವಿಯು ವಿವಾಹಕ್ಕೆ ಪೂರ್ವದಲ್ಲಿ ಕಾವ್ಯಸಾಹಿತ್ಯದಲ್ಲಿ ವಿಶೇಷ ಶ್ರದ್ಧೆಯುಳ್ಳವಳಾಗಿ ಇದ್ದಳು. ವಿವಾಹಾನಂತರ ಪತಿಯ ಸಹಾಯ ದಿಂದ ದರ್ಶನಶಾಸ್ತ್ರಗಳಲ್ಲಿ ಸುಶಿಕ್ಷಿತೆಯಾದಳು.

ಜೇಬು ಉನ್ನೀಸಾ.

ಈಕೆಯು ಔರಂಗಜೇಬನ ಮಗಳು. ಈಕೆಯ ತಾಯಿಯೂ ಒಬ್ಬ ನವಾಬನ ಮಗಳು. ಔರಂಗಜೇಬನು ಜೇಬುಉನ್ನೀಸಳ ಬಾಲ್ಯದಿಂದಲೂ ಆಕೆಯಲ್ಲಿ ಅತ್ಯಂತಪ್ರೀತಿಯುಳ್ಳವನಾಗಿ ಇದ್ದನು. ಮತ್ತು ಆಕೆಯ ಬುದ್ಧಿ ವೈಭವವನ್ನು ನೋಡಿ ತಾನೇ ಆಕೆಗೆ ಓದುಬರಹವನ್ನು ಕಲಿಸುತಲಿದ್ದನು. ಈಕೆಗೆ ವಿಶೇಷ ಜ್ಞಾಪಕಶಕ್ತಿಯು ಇದ್ದಿತು. ಆದುದರಿಂದ ಈಕೆಯು ಬಾಲ್ಯದಲ್ಲಿಯೇ ಮಹಮ್ಮದೀಯ ಮತಗ್ರಂಥವಾದ ಖುರಾನನ್ನು ಕಂಠಸ್ಥಮಾಡಿಕೊಂಡು ತಂದೆಗೆ ಒಪ್ಪಿಸಿದಳು. ಆಗ ಔರಂಗಜೇಬನು ಪರಮಾನಂದಭರಿತನಾಗಿ ಪುತ್ರಿಗೆ ಮೂರುಸಾವಿರ ಮೊಹರಿಗಳನ್ನು ಬಹುಮಾನವಾಗಿ ಕೊಟ್ಟನು.

ಜೇಬುಉನ್ನೀಸಳು ಅತ್ಯಂತ ಸೌಂದರ್ಯವತಿಯಾಗಿ ಇದ್ದಳು. ಈಕೆಯ ಸೌಂದರ್ಯವು ಮೇಧಾಸಂಪತ್ತಿನೊಡನೆ ಸೇರಿದ್ದುದರಿಂದ ವಿಶೇಷ ಪ್ರಕಾಶ ವಾಗಿ ಇದ್ದಿತು. ಈ ಗರ್ಭಶ್ರೀಮಂತಳಾದ ಜೇಬುಉನ್ನೀಸಳು ವಿಶೇಷ

ವಿಲಾಸದಿಂದ ಬೆಳೆದವಳಾದರೂ, ಈಶ್ವರದತ್ತವಾದ ತನ್ನ ಮೇಧಾಶಕ್ತಿಯನ್ನು ನಿರುಪಯೋಗವಾದ ಕಾರ್ಯಗಳಲ್ಲಿ ವಿನಿಯೋಗಿಸದೆ ತನ್ನ ಶ್ರದ್ಧೆಯಿಂದಲೂ, ಸುಶಿಕ್ಷೆಯಿಂದಲೂ ದೊಡ್ಡ ವಿದ್ವಾಂಸಳಾದಳು. ಅರಬ್ಬೀ, ಪಾರಸೀಭಾಷೆಗಳಲ್ಲಿ ಈಕೆಯು ಅತ್ಯಂತ ಪಾಂಡಿತ್ಯವನ್ನು ಪಡೆದಿದ್ದಳು. ಈಕೆಯ ಅಕ್ಷರಗಳು ಸುಂದರವಾಗಿ ಇದ್ದಿತು ಎಂದು ಹೇಳುತ್ತಾರೆ.

ಬಾಲ್ಯದಲ್ಲಿಯೇ ಈಕೆಗೆ ಕವಿತ್ವಶಕ್ತಿಯು ಉಂಟಾಯಿತು. ಪದ್ಯರಚನೆಯಲ್ಲಿಯೂ, ಗದ್ಯರಚನೆಯಲ್ಲಿಯೂ ಈಕೆಯು ನಿಪುಣೆಯಾದಳು. ಈಕೆಯ ಕವಿತ್ವವು ಲಲಿತವಾಗಿಯೂ, ಭಾವಗಂಭೀರದಿಂದ ಕೂಡಿದುದಾಗಿಯೂ ಒಪ್ಪುತಲಿತ್ತು. ಮಹಮ್ಮದೀಯ ಪಂಡಿತರು ಈಗಲೂ ಈಕೆಯು ರಚಿಸಿದ ಪದ್ಯಗಳನ್ನು ಓದಿ ಪರಮಾನಂದವನ್ನು ಪಡೆಯುತಲಿದ್ದಾರೆ.

ಜೇಬು ಉನ್ನೀಸಳು ವಿದುಷೀಮಣಿಯಾಗಿ ಇದ್ದಳಲ್ಲದೆ, ವಿದ್ವಾಂಸರನ್ನು ಆದರಿಸಿ ಅವರಿಗೆ ಧನಸಹಾಯವನ್ನು ಸಹ ಮಾಡುತ್ತ ಇದ್ದಳು. ಆದುದರಿಂದ ಅನೇಕ ಶಾಸ್ತ್ರಜ್ಞರೂ, ಕವಿಗಳೂ, ಧಾರ್ಮಿಕರೂ ಸ್ವವೃತ್ತಿಯಲ್ಲಿಯೇ ಮನಸ್ಸನ್ನು ಇಟ್ಟು ವಿಶೇಷ ಕೀರ್ತಿಯನ್ನು ಪಡೆದುದಲ್ಲದೆ, ಅನೇಕ ಉತ್ಕೃಷ್ಟಗ್ರಂಥಗಳನ್ನು ರಚಿಸಿದರು. ಈಕೆಯ ಆಶ್ರಿತನಾದ ಸಫಿಯುದ್ದೀನ್ ಆರಜ್‌ಬೇಗ್ ಎಂಬ ವಿದ್ವಾಂಸನು ಕಾಶ್ಮೀರದೇಶದ 'ತಫ್ಸೀರ್ ಯಿಾಕಬೀರ್' ಎಂಬ ಶ್ರೇಷ್ಠವಾದ ಗ್ರಂಥವನ್ನು ಪಾರಸೀಭಾಷೆಗೆ ಭಾಷಾಂತರ ಮಾಡಿದನು. ಈ ಗ್ರಂಥವು ಜೇಬುಉನ್ನೀಸಳ ವಿದ್ಯಾನುರಾಗದ ಫಲವಲ್ಲವೇ?

ಆರಜ್‌ಬೇಗ್ ತನ್ನ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ತಾನು ಭಾಷಾಂತರಮಾಡಿದ ಗ್ರಂಥಕ್ಕೆ 'ಜೇಬುನ್‌ತಫ್ಸೀರ್' ಎಂದು ಹೆಸರನ್ನು ಇಟ್ಟನು. ಇನ್ನೂ ಅನೇಕ ಪಂಡಿತರು ತಮ್ಮ ಗ್ರಂಥಗಳನ್ನು ಜೇಬುಉನ್ನೀಸಳಿಗೆ ಅಂಕಿತವನ್ನು ಮಾಡಿದಾರೆ. ಆದಕಾರಣ ಈಕೆಯು ಆ ಕಾಲದ ಪಂಡಿತ ಮಂಡಲಿಯಲ್ಲಿ ವಿಶೇಷ ಕೀರ್ತಿಯನ್ನು ಆರ್ಜಿಸಿದಳು ಎಂದು ನಾವು ತಿಳಿಯಬಹುದು.

ಈಕೆಯು ರಾಜನೀತಿವಿಶಾರದೆಯಾಗಿ ಇದ್ದುದರಿಂದ ರಾಜಕಾರ್ಯ ವಿಷಯದಲ್ಲಿಯೂ ವಿಶೇಷ ಗೌರವವನ್ನು ಪಡೆದಿದ್ದಳು. ಈಕೆಯು ಇತರಗ್ರಂಥಗಳೊಡನೆ ರಾಜನೀತಿಶಾಸ್ತ್ರವನ್ನು ಚೆನ್ನಾಗಿ ಅಭ್ಯಸಿಸಿದಳು ಆದುದರಿಂದ ಔರಂಗಜೇಬನಿಗೆ ಮುಖ್ಯಮಂತ್ರಿಯಾದ 'ರೌಶನ್ ಆರಾಯ್' ಮರಣಾನಂತರ ಜೇಬುಉನ್ನೀಸಾ ಆಸ್ಥಾನವನ್ನು ಆಕ್ರಮಿಸಿದಳು. ಔರಂಗಜೇಬನು ಈಕೆಯೊಡನೆ ಆಲೋಚಿಸದೆ ಯಾವ ಗುರುತರ ಕಾರ್ಯವನ್ನೂ ಮಾಡುತ್ತಿರಲಿಲ್ಲ.

ಈಕೆಯು ಇಪ್ಪತ್ತೈದನೆಯ ವಯಸ್ಸಿನಲ್ಲಿ ಔರಂಗಜೇಬನು ವಿಶೇಷ ವ್ಯಾಧಿಗ್ರಸ್ತನಾದನು. ಆಗ ಈಕೆಯು ತಂದೆಯನ್ನು ಕಾಶ್ಮೀರಕ್ಕೆ ಹೋಗಿ ಕೆಲವುಕಾಲ ಅಲ್ಲಿ ಇರುವಂತೆ ಹೇಳಿದಳು. ಆದರೆ ಈ ಯುಪದೇಶವನ್ನು ಔರಂಗಜೇಬನು ಕೇಳಲಿಲ್ಲ. ಏಕಂದರೆ, ಆಗ್ರಾಬಂದಿಖಾನೆಯಲ್ಲಿ ವೃದ್ಧನಾದ ಷಾಜಹಾನು ಚಕ್ರವರ್ತಿಯು ಬಂಧಿತನಾಗಿ ಇದ್ದನು. ಆದಕಾರಣ ತಾನು ಕಾಶ್ಮೀರದೇಶಕ್ಕೆ ಹೋದರೆ ರಾಜ್ಯದಲ್ಲಿ ಪಿತೂರಿಗಳೂ, ಕಲಹಗಳೂ ನಡೆಯುವವೋ ಏನೋ ಎಂಬ ಭಯವು ಔರಂಗಜೇಬನನ್ನು ವಿಶೇಷವಾಗಿ ಬಾಧಿಸುತಲಿತ್ತು. ಇದರಿಂದ ಔರಂಗಜೇಬನು ತನ್ನ ತಂದೆಯನ್ನು ಕೊಲ್ಲಿಸಬೇಕೆಂದು ಸಂಕಲ್ಪವನ್ನು ಮಾಡಿದನು. ಆದರೆ ಜೇಬುಉನ್ನೀಸಳು ಈ ವಿಷಯವನ್ನು ಕೇಳಿ ತಂದೆಗೆ ಅನೇಕ ಸದುಪದೇಶಗಳನ್ನು ಮಾಡಿ ಆತನನ್ನು ಪಿತೃಹತ್ಯಾಪಾತಕದಿಂದ ವಿಮುಕ್ತನನ್ನಾಗಿ ಮಾಡಿದಳು.

ಇಷ್ಟರಲ್ಲಿ ಷಾಜಿಹಾನು ಚಕ್ರವರ್ತಿಯು ಮೃತನಾದನು. ಅನಂತರ ಔರಂಗಜೇಬನು ನಿರ್ವಿಚಾರವಾಗಿ ಮಗಳಿನೊಡನೆ ಕಾಶ್ಮೀರಕ್ಕೆ ಹೋಗಿ, ಸ್ವಲ್ಪ ಕಾಲ ಅಲ್ಲಿಯೇ ಇದ್ದನು. ಈಕೆಯು ತನ್ನ ಜೀವಿತವನ್ನು ತಂದೆಯ ಬಳಿಯಲ್ಲಿಯೇ ಕಳೆದಳು.

ಈಕೆಯು ಶಿವಾಜಿಯನ್ನು ಹೆಚ್ಚಾಗಿ ಪ್ರೇಮಿಸುತ್ತಿದ್ದಳು. ಆತನ ವೀರತ್ವವನ್ನು ಕೇಳುತ್ತ ಕೇಳುತ್ತ ಈಕೆಯ ಹೃದಯದಲ್ಲಿ ಪ್ರೇಮವು ಪ್ರವಾಹದಂತೆ ಹರಿಯುತಲಿತ್ತು. ವೀರವರನಾದ ಜಯಸಿಂಹನ ಮಾತುಗಳಿಗೆ ಭ್ರಮಿಸಿ ಶಿವಾಜಿಯು ಡಿಲ್ಲೀ ನಗರವನ್ನು ಪ್ರವೇಶಿಸಿ ಔರಂಗಜೇಬನ ದರ್ಬಾರಿಗೆ ಬಂದ ಸಮಯದಲ್ಲಿ ಜೇಬುಉನ್ನೀಸಳು ಪರದೆಯ ಹಿಂದುಗಡೆ ನಿಂತುಕೊಂಡು, ಆತನ ಪಾದಪದ್ಮಗಳನ್ನು ನಂದರ್ಶಿಸಿದಳು.

ತನ್ನ ಮನಃಕಲ್ಪಿತರಾಜ್ಯದಲ್ಲಿ ಯಾವ ಮಹಾವೀರನ ಗುಣಗಣಗಳನ್ನು ಕೇಳಿ ಸಂತೋಷಿಸುತ್ತ ಇದ್ದಳೋ, ಯಾವ ಪ್ರತಾಪಶಾಲಿಯ ಪ್ರತಾಪಕ್ಕೆ ಆತ್ಮಸಮರ್ಪಣೆಯನ್ನು ಮಾಡಿದಳೋ, ಯಾವ ಶೌರ್ಯಧುರ್ಯನ ನಾಮವನ್ನು ಪಂಚಾಕ್ಷರೀ ಮಂತ್ರದಂತೆ ಜಪಿಸುತಲಿದ್ದಳೋ, ಯಾವ ಮಹಾಪುರುಷನನ್ನು ತನ್ನ ಹೃದಯಸಿಂಹಾಸನದಲ್ಲಿ ಪ್ರತಿಷ್ಠಿಸಿ ಪೂಜಿಸುತ್ತಿದ್ದಳೋ ಆ ತೇಜೋಮಯ ಮೂರ್ತಿಯಾದ ತನ್ನ ಆರಾಧ್ಯದ ದೇವರು ತನ್ನ ನೇತ್ರಗೋಚರನಾದ ಸಮಯದಲ್ಲಿ ಈಕೆಯು ಪರವಶೆಯಾದಳು. ಈಕೆಯು ತನ್ನ ಪವಿತ್ರಹೃದಯವನ್ನು ಶಿವಾಜಿಯ ಪಾದಪದ್ಮಗಳಲ್ಲಿ ಸಮರ್ಪಿಸಿ ಕೃತಾರ್ಥಳಾದೆನು ಎಂದು ಸಂತೋಷಿಸಿದಳು.

ಔರಂಗಜೇಬನು ದರ್ಬಾರಿನಲ್ಲಿ ಶಿವಾಜಿಯನ್ನು ತಕ್ಕಹಾಗೆ ಗೌರವಿಸಲಿಲ್ಲ. ಅದರಿಂದ ಆ ಮಹಾರಾಷ್ಟ್ರವೀರನ ಶರೀರವು ಕಂಪಿಸಲಾರಂಭಿಸಿತು. ನೇತ್ರಗಳಿಂದ ಕೆಂಡಗಳು ಹೊರಡಿದವು. ಆದರೆ ಆ ವೀರನು ತನ್ನ ಕರ್ತವ್ಯವನ್ನು ತಿಳಿದುಕೊಂಡು, ತನ್ನ ಆಗ್ರಹವನ್ನು ಉಪಶಮನಮಾಡಿಕೊಂಡನು.

ಈ ಪ್ರತಾಪಸಿಂಹನ ಸ್ಥಿತಿಯನ್ನು ನೋಡಿ ದರ್ಬಾರಿನಲ್ಲಿ ಇದ್ದ ಮಂತ್ರಿಗಳೇ ಮೊದಲಾದವರು ಪರಿಹಾಸ ಸೂಚಕವಾದ ನಗುವನ್ನು ನಕ್ಕರು. ಆದರೆ ಪರದೆಯ ಹಿಂದುಗಡೆ ನಿಂತು ಈ ದೃಶ್ಯವನ್ನು ನೋಡುತಲಿದ್ದ ಜೇಬುಉನ್ನೀಸಳ ಕಣ್ಣುಗಳಿಂದ ನೀರು ಸುರಿಯಿತು. ಈಕೆಯು ಸಾಮಾನ್ಯ ಸ್ತ್ರೀಯರಂತೆ ತನ್ನ ಪ್ರೇಮಾಸ್ಪದನಿಗೆ ಅವಮಾನವು ಉಂಟಾಯಿತೆಂದು ದುಃಖಿಸಿದಳೇ? ಇಲ್ಲ. ಮಹಾವೀರನನ್ನು ಅತ್ಯಂತ ನಿರ್ದಯೆಯಿಂದ ಅವಮಾನಗೊಳಿಸುದುದು, ಧರ್ಮವನ್ನು ಅವಮಾನಗೊಳಿಸಿದಂತೆ ಆಯಿತೆಂದು ಈಕೆಯು ಪರಿತಾಪವನ್ನು ಹೊಂದಿದಳು.

ದರ್ಬಾರು ಪೂರ್ತಿಯಾದಮೇಲೆ ಔರಂಗಜೇಬನು ಅಂತಃಪುರಕ್ಕೆ ಬಂದನು. ಕೂಡಲೆ ಜೇಬುಉನ್ನೀಸಳು ತಂದೆಯಬಳಿಗೆ ಹೋಗಿ, 'ಜಹಾಪನಾ! ಮಹಾಸಭೆಯಲ್ಲಿ ವೀರನನ್ನು ಅವಮಾನಮಾಡಬಹುದೇ?' ಎಂದು ಕೇಳಿದಳು. ಈ ವಾಕ್ಯವು ಪೂರ್ತಿಯಾಗುವುದರೊಳಗೆ ಆಕೆಯ ಪ್ರೇಮಾಪ್ರದೀಪ್ತಗಳಾದ ಲೋಚನಗಳು ವಾರಿಪೂರಿತಗಳಾದವು. ಶಿರಸ್ಸು ಅವನತವಾಯಿತು. ಇನ್ನು ಮಾತನಾಡಲಾರದೆ ಹೋದಳು.

ಔರಂಗಜೇಬನು ಪುತ್ರಿಯ ವಾಕ್ಯವನ್ನು ಕೇಳಿ ವಿಸ್ಮಯಚಿತ್ತನಾದನು. ಉತ್ತರಕ್ಷಣದಲ್ಲಿಯೇ ಆಕೆಯ ಹೃದಯದ ಭಾವವನ್ನು ಗ್ರಹಿಸಿ ಆತನು ಆಗ್ರಹಗ್ರಸ್ತನಾದನು. ಆದರೆ ಚಕ್ರವರ್ತಿಯು ಜೇಬುಉನ್ನೀಸಳಲ್ಲಿ ಅತ್ಯಂತ ವಾತ್ಸಲ್ಯವುಳ್ಳವನಾಗಿ ಇದ್ದುದರಿಂದ ಕೋಪವನ್ನು ತಡೆದುಕೊಂಡು, "ಆ ಕಾಫರನು ಮುಸಲ್ಮಾನು ಮತವನ್ನು ಸ್ವೀಕರಿಸಿದರೆ ಅವನ ಅಪರಾಧಗಳನ್ನೆಲ್ಲ ಕ್ಷಮಿಸುವೆನು; ಮತ್ತು ಆಗ ನೀನು ಅವನನ್ನು ವಿವಾಹಮಾಡಿಕೊಳ್ಳಬಹುದು." ಎಂದು ನುಡಿದನು.

ಈ ಮಾತನ್ನು ಕೇಳಿದಕೂಡಲೆ ಜೇಬು ಉನ್ನೀಸಳ ಹೃದಯವು ಲಜ್ಜೆಯಿಂದ ದಗ್ಧವಾಗಲಾರಂಭಿಸಿತು. ಈಕೆಯು ಶಿವಾಜಿಯನ್ನು ಮದುವೆಮಾಡಿಕೊಳ್ಳುವುದಕ್ಕೆ ಅನುಜ್ಞೆಯನ್ನು ಕೇಳಲು ತಂದೆಯಬಳಿಗೆ ಬರಲಿಲ್ಲ. ವೀರನಿಗೆ ಸಂಭವಿಸಿದ ಅವಮಾನಕ್ಕೆ ಪ್ರತಿವಿಧಾನವನ್ನು ಮಾಡುವುದಕ್ಕೆ ಮಾತ್ರ ತಂದೆಯಬಳಿಗೆ ಬಂದಳು. ಆದರೆ ಈ ವಿಷಯವನ್ನು ಕುರಿತು ಪುನಃ ಮಾತನಾಡಲಾರದೆ,

ಹೃದಯ ಮಧ್ಯದಲ್ಲಿ ಬಹುಭದ್ರವಾಗಿ ಔತಿಟ್ಟ ರತ್ನವು ಹೊರಗೆ ಬಂದಿತು ಅಲ್ಲವೇ? ಎಂದು ಈಕೆಯು ಪರಿತಪಿಸುತ್ತ, ತನ್ನನ್ನು ತಾನೇ ನಿಂದಿಸಿಕೊಳ್ಳುತ್ತ ಹೊರಟು ಹೋದಳು.

ಅಂದಿನಿಂದ ಜೇಬು ಉನ್ನೀಸಳು ಶಿವಾಜಿಯಲ್ಲಿ ತನಗೆ ಇರುವ ಪ್ರೇಮವನ್ನು ಬಹು ಗುಪ್ತವಾಗಿ ಹೃದಯಾಂತರಾಳದಲ್ಲಿ ಪೋಷಿಸುತ್ತ ಇದ್ದಳು. ಈಕೆಯು ಆವಾಗಲೂ ಶಿವಾಜಿಯನ್ನು ವಿವಾಹಮಾಡಿಕೊಳ್ಳಬೇಕು ಎಂಬ ಅಪೇಕ್ಷೆಯಿಂದ ಉನ್ಮಾದಿನಿಯಾಗಲಿಲ್ಲ. ಈಕೆಯ ಮಹಾಪ್ರೇಮವು ಪ್ರತಿಫಲಶೂನ್ಯವಾದುದು. ಈಕೆಯು ಶಿವಾಜಿಯಲ್ಲಿ ಅನುರಾಗಉಳ್ಳವಳಾಗಿ ಇರಲಿಲ್ಲ. ಈಕೆಯು ಶಿವಾಜಿಯ ವೀರತ್ವದಲ್ಲಿ ಅನುರಾಗವುಳ್ಳವಳಾಗಿ ಇದ್ದಳು. ಇದಕ್ಕೆ ಕಾರಣವು ಏನೆಂದರೆ, ಈಕೆಯು ಶಿವಾಜಿಗೆ ಪರಮಶತ್ರುವಾದ ಔರಂಗಜೇಬನ ಮಗಳು. ಅದರಲ್ಲಿ ಮುಸಲ್ಮಾನಳು. ಆದುದರಿಂದ ಈಕೆಯು ಶಿವಾಜಿಯನ್ನು ವಿವಾಹಮಾಡಿ ಕೊಂಡರೆ ಆತನ ಶೌರ್ಯಪ್ರತಾಪಗಳು ಪ್ರಕಾಶವಾಗಲಾರದು. ಮತ್ತು ಆತನ ತೇಜಸ್ಸು ದಿನದಿನ ಪ್ರವರ್ಧಮಾನವಾಗಲಾರದು. ಆದಕಾರಣ ಶಿವಾಜಿಯ ಎದುರಿಗೆ ತನ್ನ ಪ್ರೇಮವನ್ನು ಪ್ರಕಾಶಪಡಿಸಬೇಕು ಎಂದು ಈಕೆಯು ಯಾವಾಗಲೂ ಎಣಿಸಲಿಲ್ಲ. ಸ್ವಸುಖನಾಂಛಾತೃಪ್ತಿಗಾಗಿ ಆತನಿಗೆ ಸ್ಥಾನಭ್ರಷ್ಟತ್ವವನ್ನು ಉಂಟು ಮಾಡುವುದು ಅನುಚಿತವಾದುದು ಎಂದು ಈಕೆಯು ಎಣಿಸಿ ಇದ್ದಳು.

ಜೇಬು ಉನ್ನೀಸಾ ಅವಿವಾಹಿತೆಯಾಗಿಯೇ ಇಹಲೋಕವನ್ನು ಬಿಟ್ಟಳು. ಈಕೆಯು ರಚಿಸಿದ ಪದ್ಯಗಳಲ್ಲಿ ಈಕೆಯ ಪ್ರೇಮಾವಿಲಸನವು ಪರಿಸ್ಫುಟವಾಯಿತು. ಕಾವ್ಯರಾಜ್ಯದಲ್ಲಿ ಈಕೆಯು ತನ್ನ ಪ್ರೇಮವನ್ನು ಗುಪ್ತವಾಗಿ ಇಟ್ಟುಕೊಳ್ಳಲು ಅಶಕ್ತೆಯಾದಳು. ಈಕೆಯು ರಚಿಸಿದ ಪದ್ಯಗಳ ಪ್ರತಿಪಾದದಲ್ಲಿಯೂ ಸ್ವಾರ್ಥ ರಹಿತವಾದ ಪ್ರೇಮದ ಆಕುಲಗಾನವು ಕರುಣಾರಸದೊಡನೆ ಪ್ರತಿಧ್ವನಿಸುತಲಿದೆ. ಅವುಗಳಲ್ಲಿ ಕೆಲವು ಪದ್ಯಗಳ ತಾತ್ಪರ್ಯವನ್ನು ಇಲ್ಲಿ ಉದಹರಿಸಿ ಇಟ್ಟೇನೆ.

"ಪ್ರೇಮಾವಶಳಾದ 'ಲಾಯಿಲೀ' ಪ್ರಿಯತಮನಾದ 'ಮಜನೂರಿ' ಗಾಗಿ ಉನ್ಮಾದಿನಿಯಾಗಿ ಮರುಭೂಮಿಗಳಲ್ಲಿ ಓಡುತಲಿರುವ ಹಾಗೆ ನಾನು ಸಹ ಓಡುತ ಲಿರಬೇಕು ಎಂದು ಎಣಿಸುತ್ತೇನೆ. ಆದರೆ ನನ್ನಪಾದಗಳು ಲಜ್ಜೆಎಂಬ ಶೃಂಖಲ ಗಳಿಂದ ಬಂಧಿತವಾಗಿ ಇವೆ."

"ಬುಲ್‌ಬಲ್ ಎಂಬ ಪಕ್ಷಿಯು ಗುಲಾಬಿ ಪುಷ್ಪದ ಸುತ್ತಲೂ ತಿರುಗುತ್ತ ಅದರೊಡನೆ ಪ್ರೇಮಾಲಾಪಗಳನ್ನು ಆಡುತಲಿದೆ. ಆದರೆ ಅದು ನನ್ನ ಬಳಿ ಯಲ್ಲಿಯೇ ಪ್ರೇಮಾ ಶಿಕ್ಷೆಯನ್ನು ಪಡೆಯಿತು."

"ನನ್ನ ಸಮ್ಮುಖದಲ್ಲಿ ಇರುವ ಗುಲೋಬಿನಲ್ಲಿರುವ ನಿರ್ಮಲ ಜ್ಯೋತಿಯಲ್ಲಿ ಅನೇಕ ಪತಂಗಗಳು ಆತ್ಮ ವಿಸರ್ಜನೆಯನ್ನು ಮಾಡುತಲಿವೆ. ಆದರೆ ಅವು ಆತ್ಮ ವಿಸರ್ಜನೆಯನ್ನು ಮಾಡುವ ಬಗೆಯನ್ನು ನನ್ನಲ್ಲಿಯೇ ಕಲಿತು ಕೊಂಡವು."

"ಗೋರಂಟಿ ಎಲೆಯು ತನ್ನ ಹೊರಗೆ ಇರುವ ಶುಭ್ರಶ್ಯಾಮಲ ವರ್ಣದಿಂದ ತನ್ನ ಒಳಗಿನ ರಕ್ತವರ್ಣವನ್ನು ಬಚ್ಚಿಟ್ಟುಕೊಂಡು ಇರುವಂತೆ, ನನ್ನ ಶಾಂತ ಮೂರ್ತಿಯು ಹೃದಯಾಂತರಾಳದಲ್ಲಿ ಇರುವ ತೀವ್ರಾನುರಾಗವನ್ನು ಗುಪ್ತವಾಗಿ ಇಟ್ಟಿದೆ."

"ನಾನು ಬಾದಷಹನ ಮಗಳು. ಆದರೆ ನನ್ನ ಪ್ರಾಣವು ಅತಿಥಿಯಹಾಗೆ ಇವೆ. ಮಹದೈಶ್ವರ್ಯವು ನನಗೆ ಆನಂದವನ್ನು ಉಂಟುಮಾಡುವುದಿಲ್ಲ. ಆದ ಕಾರಣ ನನಗೆ ದರಿದ್ರದುಃಖವೇ ಹೆಚ್ಚಾಗಿ ಇದೆ. ನನ್ನ ಹೆಸರು ಜೇಬು ಉನ್ನೀಸಾ (ಸುಂದರೀ ಶ್ರೇಷ್ಠಳು). ನನಗೆ ಈ ಸ್ವಲ್ಪ ಮಾತ್ರ ಗೌರವವು ಸಾಕು."

"ಎಲೈ ಮನಸ್ಸೆ! ಪ್ರೇಮಾವಿಷಯವನ್ನು ಕುರಿತು ಬಹಳ ಪ್ರಸಂಗವನ್ನು ಮಾಡಿರುವೆ. ಆದರೆ ಅದರಿಂದ ನಿನಗೆ ಏನುಲಾಭವು ದೊರೆಯಿತು? 'ಅಶ್ರುಧಾರೆಗಳು ವಿನಹ ಮತ್ತೇನೂ ಇಲ್ಲ.' ಎಂದು ಮನಸ್ಸು ಪ್ರತ್ಯುತ್ತರವನ್ನು ಕೊಟ್ಟಿತು."

"ನನ್ನ ಹೃದಯ ದುಃಖದಲ್ಲಿ ಅಣುಮಾತ್ರವನ್ನು ಆಕಾಶಕ್ಕೆ ಕೊಟ್ಟಿದೇನೆ. ಆದುದರಿಂದಲೇ ಅದು ನೀಲಿಬಣ್ಣವಾಗಿ ಬಗ್ಗಿ ಹೋಗುತಲಿದೆ."

"ಕೆಲವುಮಂದಿ ಈ ಸಂಸಾರಕ್ಕೆ ಬಂದು ಸಂಕಲ್ಪಸಿದ್ಧಿಯನ್ನು ಪಡೆದು ಹೊರಡುತಲಿದಾರೆ. ಆದರೆ ಜೇಬು ಉನ್ನೀಸಳುಮಾತ್ರ ಯಾರೊಡನೆಯೂ ಹೊಂದಲಿಲ್ಲವಲ್ಲವೇ!"

ಈಕೆಯು ಇನ್ನೂ ಅನೇಕ ವಿಷಯಗಳನ್ನು ಕುರಿತು ಬಹುಸ್ವಾರಸ್ಯವಾದ ಪದ್ಯಗಳನ್ನು ರಚಿಸಿ ಇರುವಳು. ಅವುಗಳಲ್ಲಿ ಒಂದರ ತಾತ್ಪರ್ಯವನ್ನು ಇಲ್ಲಿ ಬರೆದಿದೇನೆ.

"ನಿನ್ನ ಶತ್ರುವು ನಿನ್ನ ಬಳಿಯಲ್ಲಿ ನಮ್ರನಾದಾಗ ಅವನ ನಮ್ರತೆಯನ್ನು ಮರೆಯಬೇಡ. 'ಕುಟಿಲ ಧನುಸ್ಸು ಬಗ್ಗಿದಹಾಗೆಲ್ಲ ಅದು ತನ್ನ ಕಾರ್ಯದಲ್ಲಿ ಹೆಚ್ಚು ಬಲವುಳ್ಳದ್ದು ಆಗುವುದು ಅಲ್ಲವೇ?"

ವೇದಕಾಲದ ಮಹಿಳೆಯರು.

ವಿಶ್ವವರ.

ಈಕೆಯು ಅತ್ರಿಮುನಿಯ ಗೋತ್ರದಲ್ಲಿ ಜನ್ಮಿಸಿದಳು. ಋಗ್ವೇದಸಂಹಿತಾ ಪಂಚಮಮಂಡಲದಲ್ಲಿ ಇರುವ ಎರಡನೆಯ ಅನುವಾಕದ ಇಪ್ಪತ್ತೆಂಟನೆಯ ಸೂಕ್ತವನ್ನು ಈಕೆಯು ರಚಿಸಿದಳು. ಈ ಸೂಕ್ತದಲ್ಲಿ ಆರುಬುಕ್ಕುಗಳು ಮೃದುಮಧುರ ಭಾವದಿಂದಕೂಡಿವೆ. ಅವುಗಳ ತಾತ್ಪರ್ಯವು ಕೆಳಗೆ ಬರೆದಿದೆ.

"ಮಹಾತೇಜದಿಂದ ಪ್ರಜ್ವಲಿಸುತ್ತಿರುವ ಅಗ್ನಿಯು ಉಷೆಯಕಡೆಗೆ (ಉಷಃಕಾಲ) ದೇದೀಪ್ಯಮಾನವಾಗಿ ಇದೆ. ದೇವತಾರ್ಚನಾನಿರತೆಯಾದ ವಿಶ್ವವರೆಯು ಘೃತಪಾತ್ರೆಯೊಡನೆ ಆ ಯಗ್ನಿಯಕಡೆಗೆ ಹೋಗುತ್ತ ಇದಾಳೆ."

"ಎಲೈ ಅಗ್ನಿಯೇ! ಪ್ರಜ್ವಲಿಸುವನಾಗು, ನಿನ್ನ ಆಧಿಪತ್ಯವನ್ನು ಆ ಘೃತದ ಮೇಲೆ ಹರಡಿಸು. ಹವ್ಯಧಾತನಿಗೆ ಮಂಗಳವು ಉಂಟಾಗುವುದಕ್ಕಾಗಿ ನೀನು ಆತನ ಸಮೀಪದಲ್ಲಿ ಪ್ರಕಾಶಿಸು."

"ಎಲೈ ಅಗ್ನಿಯೇ! ನೀನು ನಮ್ಮಲ್ಲಿ ಪ್ರಸನ್ನನಾಗು. ನಮಗೆ ಸೌಭಾಗ್ಯವನ್ನು ಕೊಡು. ನಮ್ಮ ಶತ್ರುಗಳನ್ನು ಶಾಸಿಸು. ನಮ್ಮ ದಾಂಪತ್ಯವನ್ನು ಬಲಪಡಿಸಿ ವೃದ್ಧಿಗೊಳಿಸು."

"ಎಲೈ ದೀಪ್ತಿಮಂತನೇ! ನಿನ್ನ ಪ್ರಕಾಶವನ್ನು ನಾವು ಪೂಜಿಸುತಲಿದೇವೆ. ನೀನು ಯಜ್ಞಗಳಲ್ಲಿ ಪ್ರಜ್ವಲಿಸುತ್ತಿರು."

"ಎಲೈ ಯುಜ್ವಲಶಾಲಿಯೇ! ಭಕ್ತರು ನಿನ್ನನ್ನು ಆಹ್ವಾಸಿಸುತ್ತಿದಾರೆ. ಯಜ್ಞಕ್ಷೇತ್ರದಲ್ಲಿ ನೀನು ದೇವತೆಗಳನ್ನು ಆರಾಧಿಸು."

"ಭಕ್ತರೇ! ಯಜ್ಞದಲ್ಲಿ ಹವ್ಯವಾಹಕನಾದ ಅಗ್ನಿಯಲ್ಲಿ ಹೋಮವನ್ನು ಮಾಡಿರಿ. ಅಗ್ನಿಯನ್ನು ಸೇವಿಸಿರಿ. ದೇವತೆಗಳ-ಬಳಿಗೆ ಹವ್ಯವನ್ನು ತೆಗೆದು ಕೊಂಡು ಹೋಗುವುದಕ್ಕೆ ಆತನನ್ನು ಪ್ರಾರ್ಥಿಸಿರಿ.

ಇಂದ್ರಮಾತೃಗಣವು.

———:o:———

ಇಂದ್ರರ್ಷಿಯ ತಂದೆಗೆ ಅನೇಕಮಂದಿ ಹೆಂಡತಿಯರು ಇದ್ದರು. ಇವರೆಲ್ಲರೂ ಸೇರಿ ರಚಿಸಿದ ಋಕ್ಕುಗಳನ್ನು ಇಂದ್ರಮಾತೃಗಣ ಋಕ್ಕುಗಳೆಂದು ಕರೆಯುತ್ತಾರೆ. ಇವರ ತಂದೆಯು ಕಶ್ಯಪನು. ತಾಯಿಯು ಅದಿತಿ. ಇವರಲ್ಲಿ ಒಬ್ಬಳ ಹೆಸರು ದೇವಜಾಮಿ. ಪರಸ್ಪರದ್ವೇಷಾಸೂಯೆಗಳು ಇಲ್ಲದೆ, ಸಪತ್ನಿಗಳೆಲ್ಲರೂ ಸೇರಿ ಮಂತ್ರಗಳನ್ನು ರಚಿಸಿದ ಸುಹೃದ್ಭಾವವು ವರ್ಣನಾತೀತವಾದುದಲ್ಲವೇ?

ಇವರು ಋಗ್ವೇದಸಂಹಿತೆಯ ದಶಮಮಂಡಲದಲ್ಲಿ ಐವತ್ತನೆಯ ಸೂಕ್ತದಲ್ಲಿ ಇರುವ ಐದು ಋಕ್ಕುಗಳನ್ನು ರಚಿಸಿದರು. ಇಂದ್ರನನ್ನು ಉದ್ದೇಶಿಸಿ ಅವರು ಹೀಗೆ ಹೇಳಿದರು.

"ಎಲೈ ಇಂದ್ರನೇ! ಶತ್ರುಗಳನ್ನು ಜಯಿಸುವತೇಜವು ನಿನ್ನಲ್ಲಿ ಇರುವುದರಿಂದ, ನಾವು ನಿನ್ನನ್ನು ಪೂಜಿಸುತಲಿದೇವೆ. ನೀನು ವೃತ್ರಾಸುರನನ್ನು ಸಂಹರಿಸಿದೆ. ಆಕಾಶವನ್ನು ವಿಶಾಲವಾಗಿಮಾಡಿದೆ. ಸ್ವಶಕ್ತಿಯಿಂದ ಸ್ವರ್ಗವನ್ನು ಸಮುನ್ನತವಾಗಿ ಮಾಡಿದೆ. ಸೂರ್ಯನು ನಿನ್ನ ಸಹಚರನು. ನೀನು ಆತನನ್ನು ಬಾಹುಪಾಶಗಳಿಂದ ಬಂಧಿಸಿ ಇರುವೆ. ಆದುದರಿಂದ ನಾವು ನಿನ್ನನ್ನು ಆರಾಧಿಸುತಲಿದೇವೆ.

ಅಪಾಲಾ.

ಈಕೆಯು ಅತ್ರಿಮುನಿಯ ಗೋತ್ರದಲ್ಲಿ ಜನ್ಮಿಸಿದಳು. ಈಕೆಯ ಜೀವಿತವು ಅತ್ಯಂತ ದುಃಖಮಯವಾದುದು. ಈಕೆಗೆ ಚರ್ಮವ್ಯಾಧಿಯು ಇದ್ದುದರಿಂದ, ಈಕೆಯ ಪತಿಯು ಈಕೆಯನ್ನು ಪರಿತ್ಯಜಿಸಿದನು. ಆದುದರಿಂದ ಅಪಾಲೆಯು ತಂದೆಯ ತಪೋವನದಲ್ಲಿಯೇ ವಾಸಮಾಡುತ್ತ, ಈಶ್ವರಾರಾಧನೆಯಲ್ಲಿ ಕಾಲವನ್ನು ಕಳೆಯುತ್ತಿದ್ದಳು.

ಅಪಾಲಾ ವಿಶೇಷ ಪಿತೃಭಕ್ತಿಯುಳ್ಳವಳಾಗಿ ಇದ್ದಳು. ತನ್ನ ತಂದೆಯ

ಭೂಮಿಗಳು ವಂಧ್ಯಕ್ಷೇತ್ರಗಳಾಗಿ ಇದ್ದುದರಿಂದ ಅವುಗಳಲ್ಲಿ ಯಾವ ಬೆಳೆಯೂ ಬೆಳೆಯುತ್ತಿರಲಿಲ್ಲ. ಈಕೆಯು ಈಶ್ವರನನ್ನು ಆರಾಧಿಸಿ ವರವನ್ನು ಪಡೆದು ಆ ಭೂಮಿಗಳನ್ನು ಫಲವಂತವಾದವುಗಳನ್ನಾಗಿ ಮಾಡಿದಳು ಎಂದು ಹೇಳುತ್ತಾರೆ.

ಈಕೆಯು ಋಗ್ವೇದದಲ್ಲಿ ಎಂಟನೆಯ ಮಂಡಲದ ತೊಂಭತ್ತೊಂದನೆಯ ಸೂಕ್ತದಲ್ಲಿ ಎಂಟು ಋಕ್ಕುಗಳನ್ನು ರಚಿಸಿದಳು.

ಲೋಪಾಮುದ್ರೆ.

ಈಕೆಯು ವಿದರ್ಭರಾಜನ ಪುತ್ರಿಯು. ಅಗಸ್ತ್ಯನು ಪಿತೃದೇವತೆಗಳ ಅನುಜ್ಞೆಯಿಂದ ವಂಶೋನ್ನತಿಗಾಗಿ ಲೋಪಾಮುದ್ರೆಯನ್ನು ವಿವಾಹಮಾಡಿ ಕೊಂಡನು.

ವಿಂಧ್ಯಪರ್ವತವು ಆಕಾಶದವರೆಗೂ ಬೆಳೆದು ಸೂರ್ಯನ ಪಥವನ್ನು ನಿರೋಧಿಸಿ ಆತನ ರಥವು ಮುಂದಕ್ಕೆ ಹೊರಡದಂತೆ ಮಾಡಿದ ಸಮಯದಲ್ಲಿ ಅಗಸ್ತ್ಯನು ಉಪಾಯದಿಂದ ಸೂರ್ಯನ ಬಾಧೆಯನ್ನು ಹೋಗಲಾಡಿಸಿದನಂತೆ. ಆ ವಿಷಯವನ್ನು ಕುರಿತು ಪುರಾಣಗಳಲ್ಲಿ ಹೀಗೆ ಬರೆದಿದೆ.

ವಿಂಧ್ಯಪರ್ವತವು ಸೂರ್ಯನ ಗತಿಯನ್ನು ತಡೆದ ವಿಷಯವನ್ನು ಕುರಿತು ದೇವತೆಗಳು ಅಗಸ್ತ್ಯನೊಡನೆ ತಿಳಿಸಿದರು. ಆಗ ಅಗಸ್ತ್ಯನು ದೇವತೆಗಳ ಪ್ರಾರ್ಥನೆಯಂತೆ ವಿಂಧ್ಯಪರ್ವತದ ಬಳಿಗೆ ಹೋದನು. ವಿಂಧ್ಯಾಚಲವು ಅಗಸ್ತ್ಯನನ್ನು ನೋಡಿ ಪರಮಾನಂದದೊಡನೆ ತನ್ನ ಉನ್ನತವಾದ ಮಸ್ತಕವನ್ನು ಬಗ್ಗಿಸಿ ಋಷಿಯ ಪದತಲದಲ್ಲಿ ಇಟ್ಟು ಪ್ರಣಾಮವನ್ನು ಮಾಡಿತು. ಆಗ ಅಗಸ್ತ್ಯನು ವಿಂಧ್ಯಪರ್ವತವನ್ನು ಆಶೀರ್ವಾದ ಮಾಡಿ, "ವತ್ಸಾ, ನಾನು ಪುನಃ ಬರುವವರೆಗೆ ನೀನು ನಿನ್ನ ತಲೆಯನ್ನು ಎತ್ತಬೇಡ." ಎಂದು ಅದಕ್ಕೆ ಆಜ್ಞಾಪಿಸಿದನು. ಹೀಗೆಹೇಳಿ ಅಗಸ್ತ್ಯನು ಹೊರಟುಹೋದನು. ಆತನ ಆಜ್ಞಾನುಸಾರವಾಗಿ ವಿಂಧ್ಯಪರ್ವತವು ತಲೆಯನ್ನು ಬಗ್ಗಿಸಿಕೊಂಡು ಇತ್ತು. ಆದರೆ ಅಗಸ್ತ್ಯನು ಮಾತ್ರ ಹಿಂದಿರಿಗಿ ಬರಲಿಲ್ಲ. ಇದರಿಂದಲೇ ನಮ್ಮ ದೇಶದಲ್ಲಿ 'ಅಗಸ್ತ್ಯಯಾತ್ರೆ' ಎಂಬ ನಾಣ್ನುಡಿಯು ಬಳಕೆಗೆ ಬಂದಿದೆ.

ಲೋಪಾಮುದ್ರೆಯ ಚರಿತ್ರೆಯು ಪರಮಪಾವನವಾದುದು. ಈಕೆಯು

ವಿದ್ಯಾತಿಶಯದಿಂದಲೂ, ಪಾತಿವ್ರತ್ಯಪ್ರಭಾವದಿಂದಲೂ, ಭಾರತರಮಣಿಯರಿಗೆ ಆದರ್ಶಸ್ವರೂಪಳು. ಈಕೆಯು ಪತಿಯಾಜ್ಞೆಗೆ ವ್ಯತಿರೇಕವಾಗಿ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಪತಿಯು ಭುಜಿಸಿದ ಅನಂತರ ಭೋಜನಮಾಡುವುದು, ಆತನು ಮಲಗಿದ ಮೇಲೆ ಮಲಗುವುದು, ಆತನು ಏಳುವುದಕ್ಕೆ ಮೊದಲೇ ತಾನು ಏಳುವುದು ಮೊದಲಾದ ನಿಯಮಗಳನ್ನು ಈಕೆಯು ಕ್ರಮವಾಗಿ ಆಚರಿಸುತ್ತ ಇದ್ದಳು. ಈಕೆಯು ಸರ್ವದಾ ಪತಿಯನ್ನೇ ಧ್ಯಾನಿಸುತ್ತ, ಆತನೇ ತನ್ನ ಜ್ಞಾನಕ್ಕೆ ಮುಖ್ಯವಾದ ಆಧಾರಭೂತನೆಂದು ನಂಬಿದ್ದಳು. ಅಗಸ್ತ್ಯನು ಯಾವ ಕಾರಣದಿಂದಲಾದರೂ ಬೇಸರಗೊಂಡು ಇರುವ ಸಮಯದಲ್ಲಿ, ಲೋಪಾಮುದ್ರೆಯು ತನ್ನ ಅಸಂತುಷ್ಟಿಯನ್ನು ತೋರ್ಪಡಿಸದೆ ಭರ್ತೃವಿನ ಮನೋರಂಜನಾರ್ಥವಾಗಿ ಪ್ರಯತ್ನಿಸುತ್ತ ಇದ್ದಳು. ಲೋಪಾಮುದ್ರೆಯೊಡನೆ ಸಮಾನಳಾದ, ನಿಪುಣಳಾದ ಗೃಹಿಣಿಯು ಭಾರತವರ್ಷದಲ್ಲಿ ಮತ್ತೊಬ್ಬಳಿಲ್ಲ.

ಈಕೆಯು ದೇವತೆಗಳನ್ನು ಆರಾಧಿಸುವುದರಲ್ಲಿಯೂ, ಅತಿಥಿಅಭ್ಯಾಗತರನ್ನು ಪೂಜಿಸುವುದರಲ್ಲಿಯೂ ಶ್ರದ್ಧೆಯುಳ್ಳವಳಾಗಿದ್ದಳು. ಮತ್ತು ಗೋಸೇವೆಯೇ ಮೊದಲಾದ ಗೃಹಕಾರ್ಯಗಳನ್ನು ತಾನೇ ನೆರವೇರಿಸುತ್ತಿದ್ದಳು. ಋಗ್ವೇದದ ಪ್ರಥಮಮಂಡಲದಲ್ಲಿ ಇರುವ ಒಂದುನೂರ ಎಪ್ಪತ್ತೊಂಭತ್ತನೆಯ ಸೂಕ್ತನಲ್ಲಿ ಪ್ರಥಮದ್ವಿತೀಯ ಋಕ್ಕುಗಳನ್ನು ಲೋಪಾಮುದ್ರೆಯು ರಚಿಸಿದಳು. ಆ ಋಕ್ಕುಗಳಲ್ಲಿ ಈಕೆಯು ತನ್ನ ಪತಿಯನ್ನು ಉದ್ದೇಶಿಸಿ ಹೇಳಿದ ವಿಷಯಗಳು ಆರ್ಯನಾರೀಮಣಿಯರಿಗೆ ಪ್ರಾತಸ್ಸ್ಮರಣೀಯವಾದವು. ಅವುಗಳ ತಾತ್ಪರ್ಯವನ್ನು ಕೆಳಗೆ ವಿವರಿಸಿದೇನೆ.

"ಪ್ರಭುವೇ! ನನ್ನ ಜೀವಿತವನ್ನೆಲ್ಲ ನಿನ್ನ ಸೇವೆಯಲ್ಲಿಯೇ ಕಳೆದುದರಿಂದ ನಾನು ಈಗ ಆಯಾಸವನ್ನು ಹೊಂದಿದೇನೆ. ನಾನು ವೃದ್ಧಳಾದೆನು. ನನ್ನ ದೇಹವು ಕೃಶವಾಗುತಲಿದೆ. ಆದರೆ ನಿನ್ನ ಪಾದಸೇವೆಯೇ ನನಗೆ ಆನಂದದಾಯಕವಾದುದು. ನಿನ್ನ ಸೇವೆಯೇ ನನಗೆ ಪರಮತಪೋಧನವು. ನೀನು ಒಬ್ಬನು ಮಾತ್ರವೇ ನನಗೆ ಗತಿಯು. ಆದುದರಿಂದ ಓ ಪ್ರಭುವೇ! ನಿನ್ನ ಅನುಗ್ರಹವನ್ನು ನನ್ನಲ್ಲಿ ಸ್ಥಿರವಾಗಿ ಇಟ್ಟಿರು."

ಅದಿತಿ.



ಋಗ್ವೇದ ಸಂಹಿತೆಯ ಚತುರ್ಥಮಂಡಲದಲ್ಲಿರುವ ಎಂಭತ್ತನೆಯ ಸೂಕ್ತದ ೫, ೬, ೭ ನೆಯ ಋಕ್ಕುಗಳನ್ನು ಅದಿತಿಯು ರಚಿಸಿದಳು. ಅದಿತಿಯ ಮಗನೇ ಇಂದ್ರನು. ಒಂದುಸಲ ವಾಮದೇವನೆಂಬ ಋಷಿಯು ತನ್ನ ತಾಯಿಗೆ ಕಷ್ಟವನ್ನು ಉಂಟುಮಾಡಿದನು. ಆಗ ಆಕೆಯು ಇಂದ್ರನ ಮತ್ತು ಅದಿತಿಯ ಶರಣುಹೊಕ್ಕನು. ಅದಿತಿಯು ಒಂದು ಮಂತ್ರವನ್ನುರಚಿಸಿ ಆ ವಾಮದೇವನ ದುರ್ಮಾರ್ಗವನ್ನು ಹೋಗಲಾಡಿಸಿದಳು. ಅದಿತಿಯು ರಚಿಸಿದ ಋಕ್ಕುಗಳಲ್ಲಿ ಒಂದರ ತಾತ್ಪರ್ಯವು ಕೆಳಗೆ ಬರೆದಿದೆ.

" ನದಿಗಳು ಸಂತೋಷಪ್ರದವಾದ ನಿನಾದವನ್ನು ಮಾಡುತ್ತ ಪ್ರವಹಿಸುತ ಲಿವೆ. ಆದುದರಿಂದ ಎಲೈ ಋಷಿಯೇ! ನೀನು ಅವುಗಳನ್ನು ಪ್ರಶ್ನಿಸಿ ಅವು ಹೇಳುವ ವಿಷಯವನ್ನು ತಿಳಿದುಕೊಳ್ಳುವನಾಗು. "

ಈಕೆಯನ್ನು ಕುರಿತು ಪುರಾಣದಲ್ಲಿ ಕೆಳಗೆ ಬರೆದಿರುವಪ್ರಕಾರ ಹೇಳಿದೆ.

ಅದಿತಿಯು ಕಶ್ಯಪ ಪ್ರಜಾಪತಿಯ ಭಾರ್ಯೆಯು. ಈಕೆಯ ಪುತ್ರರೇ ಇಂದ್ರನೇ ಮೊದಲಾದ ದೇವತೆಗಳು. ಈಕೆಯ ಸಪತ್ನಿಯಾದ ದಿತಿಸುತರೇ ದೈತ್ಯರು. ಒಂದುಸಲ ದೈತ್ಯರು ಪ್ರಬಲಪ್ರತಾಪಾನ್ವಿತರಾದರು. ಅವರಲ್ಲಿ ಪ್ರಹ್ಲಾದನ ಪ್ರಪೌತ್ರನಾದ ಬಲಿಚಕ್ರವರ್ತಿಯು ' ವಿಶ್ವಜಿತ್ ' ಎಂಬ ಯಜ ವನ್ನುಮಾಡಿ ಸ್ವರ್ಗಾಧಿಪತ್ಯವನ್ನು ಪಡೆದನು. ಆದಕಾರಣ ದೇವತೆಗಳು ಸ್ವರ್ಗ ದಿಂದ ಓಡಿಸಲ್ಪಟ್ಟು ಅನೇಕ ಬಾಧೆಗಳಿಗೆ ಒಳಗಾದರು. ಆಗ ಅದಿತಿಯು ಶೋಕಾ ಕುಲಚಿತ್ತಳಾಗಿ ದೈತ್ಯರಿಗೆ ಪ್ರತೀಕಾರವನ್ನು ಮಾಡಲೆಣಿಸಿ ಪತಿಯನ್ನು ಶರಣು ಹೊಕ್ಕಳು.

ಕಶ್ಯಪ ಪ್ರಜಾಪತಿಯು ಅದಿತಿಯನ್ನು ನೋಡಿ, " ನೀನು ' ಪಯೋವ್ರತ ' ಎಂಬುದನ್ನು ಉದ್ಯಾಪನೆಮಾಡಿ ವಿಷ್ಣುಮೂರ್ತಿಯನ್ನು ಆರಾಧಿಸುವಳಾಗು. ಆಗ ನಿನ್ನ ಅಭೀಷ್ಟವು ನೆರವೇರುವುದು." ಎಂದು ನುಡಿದನು. ತದನುಸಾರ ವಾಗಿ ಅದಿತಿಯು ಏಕಾಗ್ರಚಿತ್ತದಿಂದ ವ್ರತವನ್ನು ಪಾಲಿಸಿದಳು. ಆಕೆಯ ವ್ರತ ನಿಷ್ಠೆಗೆ ಶ್ರೀಮನ್ನಾರಾಯಣನು ಮೆಚ್ಚಿ, ಆಕೆಯ ಗರ್ಭದಲ್ಲಿ ವಾಮನರೂಪದಲ್ಲಿ ಜನ್ಮಿಸಿದನು.

ಅನಂತರ ವಾಮನರೂಪನಾದ ಭಗವಂತನು ಉಪನೀತನಾಗಿ ಭಿಕ್ಷೆಗಾಗಿ ಬಲಿಚಕ್ರವರ್ತಿಯ ಬಳಿಗೆ ಹೋದನು. ಬಲಿಚಕ್ರವರ್ತಿಯು 'ನಿನಗೆ ಏನು ಬೇಕು' ಎಂದು ಕೇಳಲು, ವಾಮನನು ಮೂರಡಿಗಳ ಭೂಮಿಯನ್ನು ತನಗೆ ಕೊಡಬೇಕು ಎಂದು ಹೇಳಿದನು. ಬಲಿಚಕ್ರವರ್ತಿಯು ಸಾಮಾನ್ಯವಾದ ಈ ಕೋರಿಕೆಯನ್ನು ಪೂರ್ತಿಮಾಡಲು ಸಮ್ಮತಿಸಿದ ಕೂಡಲೆ, ವಾಮನನು ತನ್ನ ದೇಹವನ್ನು ಬೆಳಸಿ, ಒಂದು ಪಾದದಿಂದ ಭೂಮಿಯನ್ನು, ಒಂದು ಪಾದದಿಂದ ಸೂರ್ಯ, ಚಂದ್ರ, ನಕ್ಷತ್ರಮಂಡಲಗಳನ್ನು ಆಕ್ರಮಿಸಿದನು. ಆದರೆ ಮೂರನೆಯ ಅಡಿಯನ್ನು ಇಡುವುದಕ್ಕೆ ಸ್ಥಳವು ಇರಲಿಲ್ಲ. ಆಗ ಬಲಿಚಕ್ರವರ್ತಿಯು ಇದು ಈಶ್ವರಮಾಯೆ ಎಂದು ಎಣಿಸಿ ತನ್ನ ತಲೆಯನ್ನು ಬಗ್ಗಿಸಿ 'ಪ್ರಭೋ! ನನ್ನ ತಲೆಯಮೇಲೆ ನಿನ್ನ ಪಾದವನ್ನು ಇಡು' ಎಂದನು. ವಾಮನನು ಚಕ್ರವರ್ತಿಯ ತಲೆಯಮೇಲೆ ಪಾದವನ್ನು ಇಟ್ಟನು. ಕೂಡಲೆ ಬಲಿಯು ಪಾತಾಳಲೋಕಕ್ಕೆ ಹೋದನು. ದೇವತೆಗಳಿಗೆ ಪುನಃ ಸ್ವರ್ಗವು ಲಭಿಸಿತು.

ಯಮಿ.

ಈಕೆಯು ಋಗ್ವೇದ ಸಂಹಿತೆಯಲ್ಲಿ ಹತ್ತನೆಯ ಮಂಡಲದ ಹತ್ತನೆಯ ಸೂಕ್ತದಲ್ಲಿ೧,೩,೫,೭,೧೧ನೆಯ ಋಕ್ಕುಗಳನ್ನೂ, ನೂರಐವತ್ನಾಲ್ಕನೆಯ ಸೂಕ್ತದಲ್ಲಿ ಐದು ಋಕ್ಕುಗಳನ್ನೂ ರಚಿಸಿದಳು. ನಮ್ಮ ನಿರ್ಣಯದಲ್ಲಿ ಯಮನು ಮಹಾಭಯಂಕರನು. ಆದರೆ ಯಮಿಯಾ ಕೃತ ಋಕ್ಕುಗಳಲ್ಲಿ, ಯಮನು ಕೇವಲ ಪಾಪಿಗಳನ್ನು ದಂಡಿಸುವವನು ಮಾತ್ರವೇ ಅಲ್ಲದೆ ಸ್ವರ್ಗಸುಖವನ್ನು ಸಹ ಪ್ರಸಾದಿಸುವವನು ಎಂದು ವರ್ಣಿಸಿದೆ.

ಯಮಿಯಾ ರಚಿಸಿದ ನೂರಐವತ್ನಾಲ್ಕನೆಯ ಸೂಕ್ತದಲ್ಲಿ ಇರುವ ಋಕ್ಕುಗಳ ತಾತ್ಪರ್ಯವು ಕೆಳಗೆ ಬರೆದಿದೆ.

"ಕೆಲಪ್ರೇತಗಳಿಗಾಗಿ ಸೋಮರಸವು ಸ್ರವಿಸುತಲಿದೆ. ಕೆಲವರು ಘೃತವನ್ನು ಸೇವಿಸುತ ಲಿರುತ್ತಾರೆ. ಆದುದರಿಂದ ಓ ಪ್ರೇತಾ! ಎಲ್ಲ ಪ್ರೇತಗಳಿಗಾಗಿ ಮಧುರ ರಸವನ್ನು ಪ್ರವಹಿಸುವಂತೆ ಮಾಡುತಲಿರುವವನಬಳಿಗೆ ನೀನು ಹೋಗು."

"ಓ ಪ್ರೇತಾ! ಯಾರು ತಪೋಬಲದಿಂದ ಅಜೇಯರೋ, ಯಾರು ತಪಶ್ಶಕ್ತಿಯಿಂದ ಸ್ವರ್ಗಕ್ಕೆ ಹೋದರೋ, ಯಾರು ಅತ್ಯಂತ ಕಠಿನವಾದ ತಪಸ್ಸನ್ನು ಆಚರಿಸಿದರೋ ಅಂತಹವರ ಬಳಿಗೆ ನೀನು ಹೋಗು."

"ಓ ಪ್ರೇತಾ! ಯಾರು ರಣರಂಗದಲ್ಲಿ ಯುದ್ಧವನ್ನು ಮಾಡಿದರೋ, ಯಾವವೀರರು ಶರೀರ ಮಾಯೆಯನ್ನು ತ್ಯಜಿಸಿದರೋ, ಯಾರು ಸಹಸ್ರ ದಕ್ಷಿಣೆಗಳನ್ನು ದಾನಮಾಡಿದರೋ ಅಂತಹವರಬಳಿಗೆ ನೀನು ಹೋಗು."

"ಓ ಯಮಾ! ಪೂರ್ವಕಾಲದಲ್ಲಿ ಯಾರು ಸತ್ಕರ್ಮಾನುಷ್ಠಾನದಿಂದ ಪುಣ್ಯಾತ್ಮರಾಗಿ, ಪುಣ್ಯಪ್ರವಾಹವನ್ನು ವೃದ್ಧಿಮಾಡಿದರೋ, ಯಾರು ತಪಸ್ಸನ್ನು ಮಾಡಿದಾರೆಯೋ ಅಂತಹವರಬಳಿಗೆ ಈ ಪ್ರೇತನನ್ನು ಕಳುಹಿಸು."

"ಓ ಯಮಾ! ಯಾವ ಬುದ್ಧಿವಂತರು ಸಹಸ್ರವಿಧ ಸತ್ಕರ್ಮ ಪದ್ಧತಿಗಳನ್ನು ಪ್ರದರ್ಶಿಸಿದರೋ, ಯಾರು ಸೂರ್ಯನನ್ನು ರಕ್ಷಿಸಿದರೋ, ಯಾರು ತಪಸ್ಸಿನಿಂದ ಜನ್ಮಿಸಿ, ತಪಸ್ಸನ್ನೇ ಮಾಡುತ್ತಲಿದಾರೆಯೋ ಅಂತಹ ಋಷಿಗಳ ಬಳಿಗೆ ಈ ಪ್ರೇತನು ಹೋಗಲಿ."

ಪಶ್ಚಾತ್ತೀ.

ಈಕೆಯ ತಂದೆಯು ಅಂಗೀರನು. ಈಕೆಯ ಪತಿಯು ಅನಂಗನು ಎಂಬ ರಾಜನು. ಈಕೆಯು ಋಗ್ವೇದ ಸಂಹಿತೆಯ ಎಂಟನೆಯ ಮಂಡಲದ ಪ್ರಥಮ ಸೂಕ್ತದಲ್ಲಿ ಇರುವ ಮುವ್ವತ್ತನೆಯ ಮಂತ್ರವನ್ನು ರಚಿಸಿದಳು.

ಶಶ್ವತೀ ಭರ್ತನಾದ, ಅನಂಗನು ದೇವಶಾಪದಿಂದ ವಿಕಲಾಂಗನಾದನು. ಆಗ ಈಕೆಯು ಘೋರವಾದ ತಪಸ್ಸನ್ನುಮಾಡಿ ಪತಿಗೆ ಆರೋಗ್ಯವು ಉಂಟಾಗುವಂತೆ ಮಾಡಿದಳು. ಶಶ್ವತಿಯು ತಾನು ರಚಿಸಿದ ಮಂತ್ರದಲ್ಲಿ ತನ್ನ ಪತಿಯನ್ನು ಕುರಿತು ಸ್ತವಮಾಡಿದಾಳೆ.

ಊರ್ವಶಿ.

ಊರ್ವಶಿಯು ಅಪ್ಸರಕನ್ಯೆಯು. ಈಕೆಯು ಋಗ್ವೇದ ಸಂಹಿತೆಯ ದಶಮ ಮಂಡಲದಲ್ಲಿ ತೊಂಭತ್ತೈದನೆಯ ಸೂಕ್ತದಲ್ಲಿ ಇರುವ ಆರು ಋಕ್ಕುಗಳನ್ನು ರಚಿಸಿದಳು. ಪುರೂರವನೂ, ಊರ್ವಶಿಯೂ ಕೆಲವುಕಾಲ ಪತಿಪತ್ನಿಯರಂತೆ ವಾಸಮಾಡಿಕೊಂಡು ಇದ್ದರು. ಅನಂತರ ಇವರು ಒಬ್ಬರನ್ನೊಬ್ಬರು ಅಗಲಿಹೋಗ ಬೇಕಾಗಿಬಂದ ಸಮಯದಲ್ಲಿ ನಡೆದವಿಷಯವು ಆ ಋಕ್ಕಿನಲ್ಲಿ ಹೇಳಿದೆ. ಆ ಋಕ್ಕುಗಳ ತಾತ್ಪರ್ಯವು ಕೆಳಗೆ ತಿಳಿಸಿದೆ.

ಪುರೂರವನ ಪ್ರಶ್ನೆ: "ಪ್ರೇಯಸೀ! ನೀನು ಅತ್ಯಂತ ಕಠಿನಳು. ನೀನು ನನ್ನನ್ನು ಇಷ್ಟು ಶೀಘ್ರಕಾಲದಲ್ಲಿ ಬಿಟ್ಟು ಹೋಗಬೇಡ. ನಿನ್ನೊಡನೆ ಪ್ರೇಮಾಲಾಪಗಳನ್ನು ಆಡುವುದಕ್ಕಾಗಿ ಇನ್ನೂ ಸ್ವಲ್ಪಕಾಲವನ್ನು ಕೊಡು. ಮನಸ್ಸಿನಲ್ಲಿ ಇರುವುದನ್ನು ಪ್ರಕಾಶಮಾಡದೇ ಇದ್ದಪಕ್ಷಕ್ಕೆ ಚಿರಕಾಲ ಪರಿತಾಪವನ್ನು ಹೊಂದ ಬೇಕಾಗುವುದು."

ಊರ್ವಶಿಯ ಪ್ರತ್ಯುತ್ತರ: "ಪುರೂರವನೇ! ನೀನು ನಿನ್ನ ಮನೆಗೆ ಹೋಗು. ನಾನು ಉಷೆಯಂತೆ ನಿನ್ನಬಳಿಗೆ ಬಂದೆನು. ವಾಯುವನ್ನು ಹಿಡಿದು ಕೊಳ್ಳುವುದು ಹೇಗೆ ಅಸಾಧ್ಯವಾದುದೋ ಹಾಗೆಯೇ ನನ್ನನ್ನು ಹಿಡಿದುಕೊಳ್ಳುವುದೂ ಅಸಾಧ್ಯ. ಇಂತಹವಳಾದ ನನ್ನೊಡನೆ ನೀನು ಪ್ರೇಮಾಲಾಪಗಳನ್ನು ಹೇಗೆ ಆಡಬಲ್ಲೆ?"

ಪುರೂರವನು: "ನಿನ್ನ ವಿರಹದ ದೆಸೆಯಿಂದ ನನ್ನ ತೂಣೀರದಿಂದ ಇನ್ನುಬಾಣಗಳು ಹೊರಡಲಾರವು. ಯುದ್ಧದಲ್ಲಿ ಗೆದ್ದು ಗೋವುಗಳನ್ನು ಪಡೆಯಲಾರೆನು ರಾಜ್ಯದಲ್ಲಿ ನನ್ನ ವೀರತ್ವವು ಇರಲಾರದು. ನನ್ನ ರಾಜ್ಯ ಶೋಭೆಯು ಅಸ್ತಮಿಸುವುದು. ನನ್ನ ಸೈನಿಕಗಣವು ಮಾಡುವ ಹುಂಕಾರ ನಾದಗಳು ಇನ್ನು ಕೇಳಿ ಬರಲಾರವು."

ಊರ್ವಶಿಯು ಪುರೂರವನ ವಿಷಾದ ವಾಕ್ಯಗಳನ್ನು ಕವಿಯಲ್ಲಿ ಹಾಕಿ ಕೊಳ್ಳದೇ ಇದ್ದುದರಿಂದ, ಪುರೂರವನು ಪುನಃ ಹೀಗೆ ಹೇಳುತ್ತಾನೆ. "ಪುರೂರವನು ಈ ದಿನ ಸಾಯಲಿ! ಪುನಃ ಜೀವಿಸದೇ ಇರಲಿ! ಅವನು ಬಹುದೂರ

ಹೋಗಲಿ! ನೈರೃತಿಯ ಅಂಕದಲ್ಲಿ ಅವನು ಶಯನಿಸಲಿ! ಬಲವುಳ್ಳತೋಳ ಗಳು ಅವನನ್ನು ಭಕ್ಷಿಸಲಿ!"

ಊರ್ವಶಿ: "ಪುರೂರವನೇ! ಮೃತ್ಯುವನ್ನು ಅಪೇಕ್ಷಿಸಬೇಡ. ವೃಕಗಳು ನಿನ್ನನ್ನು ಭಕ್ಷಿಸದಿರಲಿ! ಸ್ತ್ರೀಯರ ಪ್ರಣಯವು ಅಸ್ಥಿರವಾದುದು. ನಾರೀ ಹೃದಯವು ವೃಕಹೃದಯವನ್ನು ಹೋಲಿದುದು. ಇಲಾಪುತ್ರನಾದ ಪುರೂರವನೇ! ನೀನು ಮೃತ್ಯುಂಜಯನಾಗುವಂತೆ ದೇವತೆಗಳು ನಿನ್ನನ್ನು ಆಶೀರ್ವಾದ ಮಾಡಲಿ!

ಇವರನ್ನು ಕುರಿತು ಒಂದು ಪುರಾಣಗಾಥೆಯು ಉಂಟು. ಅದನ್ನು ಕೆಳಗೆಬರೆದಿದೇನೆ. ಸ್ವರ್ಗಲೋಕವಾಸಿನಿಯಾದ ಊರ್ವಶಿಯು ಬ್ರಹ್ಮಶಾಪದಿಂದ ಮನುಷ್ಯಲೋಕದಲ್ಲಿ ಜನ್ಮಿಸಿದಳು. ಆ ಕಾಲದಲ್ಲಿ ಚಂದ್ರನ ಪೌತ್ರನೂ ಬುಧನ ಪುತ್ರನೂ ಆದ ಪುರೂರವನು ಎಂಬ ಅರಸನು ವಿದ್ವಾಂಸನಾಗಿಯೂ, ಧಾರ್ಮಿಕನಾಗಿಯೂ ಇದ್ದನು. ಮತ್ತು ಆತನು ಅಸಮಾನ ಬಾಹುಬಲ ಸಂಪನ್ನನಾಗಿ, ಸತ್ಯವನ್ನು ತಪ್ಪದೆ ರಾಜ್ಯವನ್ನು ಪಾಲಿಸುತ್ತ, ವೇದವಿಹಿತ ಕರ್ಮಗಳನ್ನು ಯಥಾ ವಿಧಿಯಾಗಿ ನಡಿಸುತಲಿದ್ದನು. ಆದುದರಿಂದ ಈತನ ಯಶಸ್ಸು ದೇಶದೇಶಾಂತರಗಳಲ್ಲಿ ವ್ಯಾಪಿಸಿತು.

ಊರ್ವಶಿಯು ಪುರೂರವನ ರೂಪಗುಣಗಳಿಗೆ ಆನಂದಿಸಿ, ಆತನನ್ನು ಪತಿಯಾಗಿ ವರಿಸಿದಳು. ಆದರೆ ವಿವಾಹಕಾಲದಲ್ಲಿ ಊರ್ವಶಿಯು ಪುರೂರವ ನನ್ನು ಕುರಿತು "ನೀನು ಯಾವಾಗಲೂ ವಿವಸ್ತ್ರನಾಗಿ ನನ್ನ ಕಣ್ಣುಗಳಿಗೆ ಕಂಡುಬರಬಾರದು. ನೀನು ವಿಶೇಷ ಆತ್ಮಸಂಯಮವನ್ನುಳ್ಳವನಾಗಿ ಇರಬೇಕು. ನನ್ನ ಶಯ್ಯಾಪಾರ್ಶ್ವದಲ್ಲಿ ಸರ್ವಕಾಲದಲ್ಲಿಯೂ ಎರಡು ಮೇಕೆಗಳನ್ನು ಕಟ್ಟಿಡಬೇಕು. ನೀನು ದಿನಕ್ಕೆ ಒಂದುಸಲ ಮಾತ್ರವೇ ಘೃತವನ್ನು ಪಾನ ಮಾಡಿ ಜೀವಧಾರಣೆಯನ್ನು ಮಾಡಿಕೊಳ್ಳಬೇಕು. ನೀನು ಈ ನಿಯಮಗಳಲ್ಲಿ ಯಾವುದನ್ನು ಉಲ್ಲಂಘಿಸಿದರೂ, ನಾನು ಕೂಡಲೇ ಗಂಧರ್ವಲೋಕಕ್ಕೆ ಹೋಗುವೆನು." ಎಂದು ಹೇಳಿದಳು. ಪುರೂರವನು ಈ ನಿಯಮಗಳನ್ನು ಅಂಗೀಕರಿಸಿ ಊರ್ವಶಿಯನ್ನು ವಿವಾಹಮಾಡಿಕೊಂಡು, ವಿಶೇಷ ಆತ್ಮ ಸಂಯಮವನ್ನು ಉಳ್ಳವನಾಗಿ ಆಕೆಯೊಡನೆ ಕೆಲವು ವರ್ಷಗಳು ವಾಸ ಮಾಡಿದನು.

ವಿಶ್ವಾವಸು ಎಂಬ ಗಂಧರ್ವನು ಊರ್ವಶಿಯನ್ನು ಶಾಪವಿಮುಕ್ತೆಯನ್ನಾಗಿ ಮಾಡಲೆಣಿಸಿ, ಒಂದು ದಿವಸ ಊರ್ವಶಿಯ ಶಯ್ಯಾಪಾರ್ಶ್ವದಲ್ಲಿ ಕಟ್ಟಿದ್ದ ಮೇಕೆಗಳನ್ನು ಕದ್ದನು. ಪುರೂರವನು ಹಾಸಿಗೆಯಿಂದ ಎದ್ದು ಮೇಕೆಗಳ

ಗಾಗಿ ಓಡಿದನು. ಆಸಮಯದಲ್ಲಿ ಗಂಧರ್ವರು ವಿದ್ಯುತ್ಪ್ರಕಾಶವನ್ನು ಉಂಟು ಮಾಡಿದರು. ಆಗ ಪುರೂರವನು ವಿವಸ್ತ್ರನಾಗಿ ಇದ್ದುದರಿಂದ, ಊರ್ವಶಿಯು ಆತನನ್ನು ನೋಡಿ, ಕೂಡಲೆ ಗಂಧರ್ವಲೋಕಕ್ಕೆ ಹೊರಟುಹೋದಳು.

ಇದರಿಂದ ಪುರೂರವನು ಶೋಕಾಕುಲಚಿತ್ತನಾಗಿ, ಊರ್ವಶಿಯನ್ನು ಹುಡುಕುತ್ತ, ದೇಶದೇಶಗಳಲ್ಲಿ ಸಂಚಾರಮಾಡಿ, ಪ್ಲಕ್ಷತೀರ್ಥದಲ್ಲಿ ಊರ್ವಶಿಯನ್ನು ಕಂಡನು. ಆಗ ಊರ್ವಶಿಯು ಪುರೂರವನೊಡನೆ "ಪುರೂರವನೇ! ನೀನು ಪ್ರಯಾಗಕ್ಕೆ ಹೋಗಿ ಅಲ್ಲಿ ಯಜ್ಞವನ್ನುಮಾಡು. ಅದರಿಂದ ನಾವಿಬ್ಬರೂ ಒಂದು ವರ್ಷದೊಳಗೆ ಸೇರುವಂತೆ ಸಂಭವಿಸುವುದು." ಎಂದು ನುಡಿದಳು.

ಪುರೂರವನು ಆಕೆಯು ಹೇಳಿದಂತೆ ಪ್ರಯಾಗದಲ್ಲಿ ಯಜ್ಞವನ್ನುಮಾಡಿ, ಗಂಧರ್ವಲೋಕಕ್ಕೆ ಹೋಗುವ ಅಧಿಕಾರವನ್ನು ಪಡೆದನು.

ಪುರೂರವನು ಪ್ರಯಾಗತೀರ್ಥದಲ್ಲಿ ಇರುವ ಪ್ರತಿಷ್ಠಾನ ಪುರದಲ್ಲಿ ರಾಜ್ಯವನ್ನು ಸ್ಥಾಪಿಸಿದನು. ಆತನಿಗೆ ಊರ್ವಶಿಯಲ್ಲಿ ಆರುಜನ ಪುತ್ರರು ಜನ್ಮಿಸಿದರು.

ಘೋಷಾ.

ಈಕೆಯ ತಂದೆಯ ಹೆಸರು ಕಕ್ಷೀವಾನನು. ಋಗ್ವೇದದ ದಶಮಮಂಡಲದಲ್ಲಿ ಇರುವ ಮುವ್ವತ್ತೊಂಭತ್ತನೆಯ, ನಾಲ್ವತ್ತನೆಯ ಸೂಕ್ತಗಳನ್ನು ಈಕೆಯು ರಚಿಸಿದಳು. ಬ್ರಹ್ಮವಾದಿನಿಯಾದ ಘೋಷಾ ಅಶ್ವಿನೀಕುಮಾರದ್ವಯವನ್ನು ಸಂಬೋಧಿಸಿ ಕೆಳಗೆ ಬರೆದಿರುವಂತೆ ಹೇಳಿದಳು.

"ಓ ಅಶ್ವಿನೀಕುಮಾರರೇ! ನೀವು ನಮಗೆ ಸುಮಧುರವಾಕ್ಯ ವಿನ್ಯಾಸವನ್ನು ಮಾಡುವ ಶಕ್ತಿಯನ್ನು ಪ್ರಸಾದಿಸಿರಿ. ಅದರೊಡನೆ ನಿಮಗೆ ನಾವು ವಂದನೆಗಳನ್ನು ಅರ್ಪಿಸುವೆವು. ನೀವು ನಮಗೆ ಸುಬುದ್ಧಿಯನ್ನು ಉಂಟುಮಾಡಿರಿ. ನಿಮ್ಮ ಅನುಗ್ರಹದಿಂದ ನಮ್ಮ ಶುಭಕಾರ್ಯಗಳು ಸಂಪದ್ಯುಕ್ತವಾದವುಗಳಾಗಲಿ! ಯಜ್ಞದಲ್ಲಿ ಸೋಮರಸವು ಆನಂದವನ್ನು ಉಂಟುಮಾಡುವಂತೆ ನಾವು ಲೋಕಕ್ಕೆ ಆನಂದವನ್ನು ಉಂಟುಮಾಡುವಂತೆ ಅನುಗ್ರಹಿಸಿ!"

" ಅವಿವಾಹಿತೆಯಾದ ಒಬ್ಬ ಯುವತಿಯು ತನ್ನ ಪಿತ್ರಾಲಯದಲ್ಲೇ ಇದ್ದು ವಾರ್ಧಕ್ಯವನ್ನು ಪ್ರವೇಶಿಸುತ್ತಿರಲು ತಾವು ಅನುಗ್ರಹಿಸಿ, ಆಕೆಗೆ ವರನನ್ನು ಪ್ರಸಾದಿಸಿದಿರಿ. ಜರಾಜೀರ್ಣರಿಗೂ, ರೋಗಿಗಳಿಗೂ, ವಿಕಲಾಂಗರಿಗೂ, ಅಂಧರು ಮೊದಲಾದವರಿಗೂ ನೀವೇ ಆಶ್ರಯಭೂತರು. ಜರಾಜೀರ್ಣನಾದ ಚ್ಯವನ ಋಷಿಗೆ ನೀವೇ ಯೌವನವನ್ನು ಅನುಗ್ರಹಿಸಿದಿರಿ. ತುಶ್ರತನಯೆಯನ್ನು ನೀರಿನಿಂದ ತೀರಕ್ಕೆ ಸೇರಿಸಿ ಕಾಪಾಡಿದಿರಿ. ನಿಮ್ಮ ಸತ್ಕಾರ್ಯಗಳು ಅನಂತವಾದವು. ಆದುದರಿಂದಲೇ ನಾವು ನಿಮಗೆ ಶರಣಾಗತರಾಗುವೆವು. ನಿಮ್ಮನ್ನು ಆಹ್ವಾನಿಸುತ್ತಿರುವೆವು. ವಂದನೆಗಳನ್ನು ಅರ್ಪಿಸುತಲಿರುವೆವು. ನಮ್ಮ ಆಹ್ವಾನವು ಶ್ರುತಿಗೋಚರವಾಗಲಿ. ತಂದೆಯು ಮಗನಿಗೆ ಕೊಡುವ ಶಿಕ್ಷೆಯನ್ನು ನೀವು ನಮಗೆ ಕೊಡಿ. ನಾವು ಜ್ಞಾನಶೂನ್ಯರು ಆದುದರಿಂದ ನಮಗೆ ಎಂದಿಗೂ ದುರ್ಬುದ್ಧಿಯುಂಟಾಗದಂತೆ ಅನುಗ್ರಹಿಸಿರಿ. "

" ನೀವೇ ಪುಕಮಿತ್ರನು ಎಂಬ ರಾಜನ ಪುತ್ರಿಯಾದ ಶುಂಧುವ ಎಂಬಾಕೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೋಗಿ ವಿಮದೇವನಿಗೆ ಕೊಟ್ಟು ವಿವಾಹವನ್ನು ಮಾಡಿದಿರಿ. ಬಧಿಮತಿ ಎಂಬ ಸ್ತ್ರೀಯು ಪ್ರಸವವೇದನೆಯಿಂದ ದುಃಖಿತೆಯಾದಾಗ ನೀವು ಆಕೆಯ ದುಃಖವನ್ನು ಹೋಗಲಾಡಿಸಿದಿರಿ. ಜರಾಜೀರ್ಣನಾದ ಕವಿಗೆ ನೀವು ಯೌವನವನ್ನು ಪ್ರಸಾದಿಸಿದಿರಿ. ವಿಪಲ್ಲಾ ಎಂಬ ಹೆಳವಳು ನಡೆಯುವಂತೆ ನೀವೇ ಅನುಗ್ರಹಿಸಿದಿರಿ. ರೇಭಕನೆಂಬವನನ್ನು ಶತ್ರುಗಳು ಮೃತಪ್ರಾಯನಾಗಿಮಾಡಿ ಒಂದು ಗುಹೆಯಲ್ಲಿ ಹಾಕಿದಾಗ ನೀವು ಅವನಿಗೆ ಪ್ರಾಣದಾನವನ್ನು ಮಾಡಿದಿರಿ. ಅತ್ರಿಮುನಿಯು ಅಗ್ನಿಕುಂಡದಲ್ಲಿ ಬಿದ್ದಾಗ ನೀವು ಅಗ್ನಿಯ ತೇಜವನ್ನು ಹೋಗಲಾಡಿಸಿದಿರಿ. ಓ ಅಶ್ವಿನೀಕುಮಾರರೇ! ನಿಮ್ಮ ನಾಮಧೇಯಗಳು ಮಹಾಪುಣ್ಯಪ್ರದವಾದವು. ನೀವು ಸಂಚರಿಸುವ ಮಾರ್ಗಕ್ಕೆ ನಾಲ್ಕು ದಿಕ್ಕುಗಳಿಂದಲೂ ಸ್ತೋತ್ರಪೂರ್ವಕವಾದ ಗಾನಗಳು ಕೇಳಿಸುತ್ತಿರುವುವು. ಋಭುಗಳೆಂಬ ದೇವತೆಗಳು ನಿಮಗಾಗಿ ನಿರ್ಮಿಸಿದ ರಥವು ಆಕಾಶಮಾರ್ಗದಲ್ಲಿ ಬರುವಾಗ ಉಷಾದೇವಿ ಎಂಬ ಆಕಾಶ ಕನ್ಯೆಯು ಹುಟ್ಟುತ್ತದೆ. ಮನೋವೇಗಕ್ಕಿಂತಲೂ ಅಧಿಕವಾದ ವೇಗವನ್ನುಳ್ಳ ಆ ರಥವನ್ನೇರಿ ನೀವು ದಯಮಾಡಿರಿ. ಆ ರಥವನ್ನೇರಿ ನೀವು ಪರ್ವತಾಭಿಮುಖವಾಗಿ ಹೊರಡಿ. ಶಯನೆಂಬಾತನ ವೃದ್ಧಧೇನುವನ್ನು ಪುನಃ ದುಗ್ಧವತಿಯನ್ನಾಗಿ ಮಾಡಿರಿ. "

" ನಿಮಗಾಗಿ ಭೃಗುಸಂತಾನವು ನಿರ್ಮಿಸಿದ ರಥದಂತಹುದುದನ್ನು ನಾನು ಸಹ ಮಂತ್ರಗಳೊಡನೆ ರಚಿಸಿದೆನು. ವಿವಾಹಕಾಲದಲ್ಲಿ ತಂದೆಯು ಕನ್ಯೆಯನ್ನು ಅಲಂಕಾರಗಳಿಂದ ಅಲಂಕರಿಸುವಂತೆ, ನಾನೂ ಈ ಮಂತ್ರಗಳನ್ನು ನಿಮ್ಮ ಸ್ತೋತ್ರಗಳಿಂದ ಅಲಂಕರಿಸಿ ಇದೇನೆ. ಓ ಧನಶಾಲಿಗಳಾದ ಅಶ್ವಿನೀಕುಮಾರರೇ!

ನೀವು ನನಗೆ ಕಲ್ಯಾಣವಿಧಾತರು. ಆದಕಾರಣ ನೀವು ನನಗೆ ರಕ್ಷಕರು. ಆದು ದರಿಂದ ನೀವು ನನ್ನ ಮನೋರಥ ಸಿದ್ಧಿಗಾಗಿ ನನ್ನ ಮೇಲೆ ನೀವು ಕೃಪಾವರ್ಷ ವನ್ನು ಸುರಿಸಿರಿ. ನಾನು ಪತಿಗೃಹಕ್ಕೆ ಹೋಗಿ ಪತಿಯ ಪ್ರೀತಿಗೆ ಪಾತ್ರಳಾಗು ವಂತೆ ನನ್ನನ್ನು ಆಶೀರ್ವಾದ ಮಾಡಿರಿ.

ಸೂರ್ಯೆ.

ಋಗ್ವೇದದ ದಶಮಮಂಡಲದಲ್ಲಿ ಎಂಭತ್ತೈದನೆಯ ಸೂಕ್ತವನ್ನು ಸೂರ್ಯೆಯು ರಚಿಸಿದಳು. ಈ ಸೂಕ್ತದಲ್ಲಿ ನೂತನ ದಂಪತಿಯರಿಗಾಗಿ ಮಾಡುವ ಪ್ರಾರ್ಥನೆ ಗಳೂ, ಆಶೀರ್ವಾದಗಳೂ ಇವೆ. ಅವುಗಳಲ್ಲಿ ಕೆಲವು ಋಕ್ಕುಗಳ ತಾತ್ಪರ್ಯ ವನ್ನು ಕೆಳಗೆ ಬರೆದಿದೆ.

" ಸೂರ್ಯೆಯ ವಿವಾಹ ಸಮಯದಲ್ಲಿ, ರೈಭಿ ಎಂಬ ಹೆಸರನ್ನುಳ್ಳ ಋಕ್ಕು ಗಳು ಆಕೆಗೆ ಸಖಿಗಳಾದವು. ನರಾಶಂಶೀ ಎಂಬ ಹೆಸರುಳ್ಳ ಋಕ್ಕುಗಳು ಆಕೆಗೆ ದಾಸಿಗಳಾದುವು. ಆಕೆಯು ಧರಿಸಿದ ಮನೋಹರವಾದ ವಸ್ತ್ರಗಳು ಸಾಮಗಾನದಿಂದ ಪವಿತ್ರವಾಗಿ ಪ್ರಕಾಶಿಸಲಾರಂಭಿಸಿತು. ಆಕೆಯ ಧರ್ಮ ಜೀವನವೇ ವಿವಾಹಕಾಲದಲ್ಲಿ ಆಕೆಗೆ ಬಹುಮಾನವಾಯಿತು. ಆಕೆಯ ಸುಶಾಂತಚಿತ್ತವೇ ಆಕೆಯು ಪತಿಗೃಹಕ್ಕೆ ತೆರಳಲು ವಾಹನವಾಯಿತು."

" ವಧುವನ್ನು ಹುಡುಕಲು ಹೋಗುವ ನಮ್ಮ ಮಿತ್ರರಿಗೆ ಮಾರ್ಗದಲ್ಲಿ ಆಪತ್ತುಗಳು ಸಂಭವಿಸದಿರಲಿ! ದೇವತೆಗಳೇ! ದಾಂಪತ್ಯ ಸಂಬಂಧವು ಅಕ್ಷಯ ವಾಗಲಿ!"

" ಪಿತೃಕುಲವೆಂಬ ವೃಕ್ಷದಿಂದ ಹುಟ್ಟಿದ ಕನ್ಯೆ ಎಂಬ ಈ ಪವಿತ್ರ ಪುಷ್ಪವು ಪತಿಹಸ್ತದಲ್ಲಿ ಸಮರ್ಪಿತವಾಗಿದೆ. ಓ ಇಂದ್ರನೇ! ಈ ಕನ್ಯೆಯು ಪತಿಗೃಹ ದಲ್ಲಿ ಸೌಭಾಗ್ಯವತಿಯಾಗಿ ಬಾಳಲಿ!"

" ಓ ಕನ್ಯೆಯೇ! ಉಷಾದೇವತೆಯು ನಿನ್ನ ಹಸ್ತವನ್ನು ಹಿಡಿದುಕೊಂಡು ನಿನ್ನನ್ನು ಪಿತೃಗೃಹದಿಂದ ಪತಿಗೃಹಕ್ಕೆ ಕರೆದುಕೊಂಡುಹೋಗಲಿ! ಅಶ್ವಿನೀ ಕುಮಾರರು ನಿನ್ನನ್ನು ತಮ್ಮ ರಥದಮೇಲೆ ಕುಳ್ಳಿರಿಸಿಕೊಂಡು ತೌರುಮನೆಯಿಂದ

ಅತ್ತೆಯಮನೆಗೆ ಕರೆದುಕೊಂಡು ಹೋಗಲಿ! ಪತಿಗೃಹದಲ್ಲಿ ನೀನು ಪ್ರಶಂಸಾರ್ಹಳಾದ ಗೃಹಮೇಧಿನಿಯಾಗಿ ಬಾಳು!"

"ಈ ದಂಪತಿಗಳಿಗೆ ಕೇಡನ್ನುಂಟುಮಾಡಲು ಬರುವವರು ನಾಶವಾಗಲಿ! ಇವರು ತಮಗೆ ಸಂಭವಿಸುವ ಕಷ್ಟಗಳನ್ನು ತಮ್ಮ ಪುಣ್ಯಫಲದಿಂದ ಹೋಗಲಾಡಿಸಿಕೊಳ್ಳಲಿ! ಇವರ ಸಮೀಪದಿಂದ ಶತ್ರುಗಳು ಪಲಾಯನವಾಗಲಿ!"

"ಈ ನೂತನ ವಧುವು ಸುಲಕ್ಷಣ ಸಂಪನ್ನಳು. ಆದಕಾರಣ ನೀವೆಲ್ಲರೂ ಬಂದು ಈಕೆಯನ್ನು ನೋಡಿ, 'ಸೌಭಾಗ್ಯವತಿಯಾಗಿಯೂ, ಭರ್ತನಿಗೆ ಪ್ರಿಯಳಾಗಿಯೂ ಬಾಳು' ಎಂದು ಆಶೀರ್ವಾದಮಾಡಿ, ನಿಮ್ಮನಿಮ್ಮ ಮನೆಗಳಿಗೆ ಹೊರಡುವರಾಗಿ!"

"ಓ ದಂಪತಿಯರೇ! ನೀವು ಸರ್ವದಾ ಒಬ್ಬರನ್ನೊಬ್ಬರು ಎಡಬಿಡದೆ ಇರುವರಾಗಿ. ನಿಮ್ಮ ಸಂಬಂಧವು ಯಾವಾಗಲೂ ಬೇರೆಯಾಗದಿರಲಿ!"

"ಪ್ರಜಾಪತ್ಯಾಶೀರ್ವಾದದಿಂದ ನಿಮಗೆ ಪುತ್ರರೂ, ಪೌತ್ರರೂ ಉಂಟಾಗಲಿ! ಆರ್ಯಮಾದೇವತೆಯು, ನೀವು ವೃದ್ಧರಾಗುವವರೆಗೂ ನಿಮ್ಮ ಸಂಬಂಧವು ದೃಢತರವಾಗಿರುವಂತೆ ಮಾಡಲಿ! ಓ ವಧೂ! ನೀನು ಕಲ್ಯಾಣಯುಕ್ತಳಾಗಿ ಚಿರಕಾಲವೂ ಪತಿಗೃಹದಲ್ಲಿ ವಾಸಮಾಡು. ದಾಸದಾಸಿಯರಲ್ಲಿಯೂ, ಪಶುಗಳು ಮೊದಲಾದ ಜಂತುಗಳಲ್ಲಿಯೂ ಸದಯಹೃದಯಳಾಗಿ ಅವುಗಳನ್ನು ವಾತ್ಸಲ್ಯದೊಡನೆ ಕಾಪಾಡುತ್ತಿರು."

"ಓ ವಧೂ! ನಿನ್ನ ನೇತ್ರದ್ವಯವು ಸರ್ವಕಾಲದಲ್ಲಿಯೂ ದೋಷಶೂನ್ಯವಾಗಿರಲಿ! ನೀನು ಪತಿಗೆ ಕಲ್ಯಾಣದಾಯಿನಿಯಾಗಿ ಇರು. ನೀನು ಯಾವಾಗಲೂ ಪ್ರಫುಲ್ಲ ಚಿತ್ತಳಾಗಿ ಇರು. ನಿನ್ನ ದೇಹವು ಲಾವಣ್ಯಯುಕ್ತವಾದುದಾಗಿ ಇರಲಿ! ದೇವತೆಗಳಲ್ಲಿ ನಿನಗೆ ದೃಢತರವಾದ ಭಕ್ತಿಯು ಇರಲಿ!"

"ಓ ಇಂದ್ರಾದಿದೇವತೆಗಳೇ! ನೀವು ಭಾರ್ಯಾಭರ್ತರ ಹೃದಯಗಳನ್ನು ಏಕವಾಗಿ ಮಾಡಿರಿ. ವಾಯುವೂ, ಧಾತನೂ, ವಾಗ್ದೇವಿಯೂ ಈ ದಂಪತಿಗಳು ಐಕಮತ್ಯವನ್ನುಳ್ಳವರಾಗಿರುವಂತೆ ಮಾಡಲಿ ಎಂಬುದೇ ನಮ್ಮ ಪ್ರಾರ್ಥನೆಯು."

ಮೈತ್ರೇಯಿ.

ಮೈತ್ರೇಯಿಯು ಮಿತ್ರಋಷಿಯ ಪುತ್ರಿಯು. ಈಕೆಗೆ ತಂದೆಯು ಬಾಲ್ಯದಿಂದಲೂ ವಿದ್ಯೆಯನ್ನುಕಲಿಸಿ ವಿಶೇಷ ವಿದ್ವಾಂಸಳನ್ನಾಗಿ ಮಾಡಿದನು. ಶುಕ್ಲಯಜುರ್ವೇದ ಕರ್ತನಾದ ಯಾಜ್ಞವಲ್ಕ್ಯ ಋಷಿಯನ್ನು ಈಕೆಯು ವಿವಾಹಮಾಡಿಕೊಂಡಳು. ಈ ಯಾಜ್ಞವಲ್ಕ್ಯಋಷಿಯು ಕಾತ್ಯಾಯಿನಿ ಯೆಂಬಾಕೆಯನ್ನು ಸಹ ವಿವಾಹಮಾಡಿಕೊಂಡನು. ಇವರಿಬ್ಬರಲ್ಲಿ ಕಾತ್ಯಾಯಿನಿಯು ಗೃಹಕಾರ್ಯನಿಪುಣಳಾಗಿ ಸಂಸಾರಭಾರವನ್ನು ವಹಿಸಿದ್ದಳು. ಮೈತ್ರೇಯಿಯು ಬ್ರಹ್ಮಜ್ಞಾನದಲ್ಲಿ ಪತಿಯೊಡನೆ ಸಮಾನ ಪ್ರಜ್ಞೆಯುಳ್ಳವಳಾಗಿ ಬ್ರಹ್ಮವಾದಿನಿ ಎಂಬ ಬಿರುದನ್ನು ವಹಿಸಿದಳು.

ಮೈತ್ರೇಯಿಯು ಸದ್ಗುಣವತಿಯೂ, ಪತಿಗನುಕೂಲೆಯೂ ಆಗಿದ್ದಳು. ಮತ್ತು ತನ್ನ ಸಪತ್ನಿಯಾದ ಕಾತ್ಯಾಯಿನಿಯನ್ನು ಬಹುಗೌರವದಿಂದ ಕಾಣುತ್ತ 'ಕುರುಪ್ರಿಯಸಖೀ ವೃತ್ತಿಂಸಪತ್ನೀಜನೇ' ಎಂಬ ಕಾಳಿದಾಸನ ವಚನವನ್ನು ಸಾರ್ಥಕಮಾಡಿದಳು. ಗೃಹಕೃತ್ಯನಿಪುಣಳಾದ ಕಾತ್ಯಾಯಿನಿಯನ್ನೂ, ತತ್ವ ವಿದ್ಯಾಪಾರಂಗತಳಾದ ಮೈತ್ರೇಯಿಯನ್ನೂ ಯಾಜ್ಞವಲ್ಕ್ಯನು ಸಮಾನಭಾವದಿಂದ ನೋಡುತ್ತಿದ್ದನು.

ಯಾಜ್ಞವಲ್ಕ್ಯನು ಕೆಲವುಕಾಲ ಗೃಹಸ್ಥಾಶ್ರಮದಲ್ಲಿದ್ದು ಅನಂತರ ಸನ್ಯಾಸಾಶ್ರಮವನ್ನು ಸ್ವೀಕರಿಸಲೆಣಿಸಿ, ಒಂದು ದಿವಸ ಜೇಷ್ಠಪತ್ನಿಯಾದ ಮೈತ್ರೇಯಿಯನ್ನು ಕರೆದು ಆಕೆಯೊಡನೆ "ನಾನು ಗೃಹಸ್ಥಾಶ್ರಮವನ್ನು ತ್ಯಜಿಸಿ ಸನ್ಯಾಸಾಶ್ರಮವನ್ನು ಸ್ವೀಕರಿಸಲು ಇಚ್ಛೆಯುಳ್ಳವನಾಗಿದೇನೆ. ಅದಕ್ಕೆ ನಿನ್ನ ಅನುಮತಿಯು ಬೇಕಾಗಿದೆ. ಮತ್ತು ನಿನಗೂ ಕಾತ್ಯಾಯಿನಿಗೂ ಧನವನ್ನು ವಿಭಾಗಮಾಡಿ ಕೊಡುವೆನು." ಎಂದು ಹೇಳಿದನು. ಅದರಮೇಲೆ ಮೈತ್ರೇಯಿಗೂ, ಯಾಜ್ಞವಲ್ಕ್ಯನಿಗೂ ಉಂಟಾದ ಸಂವಾದವನ್ನು ಕೆಳಗೆ ಬರೆದಿದೇನೆ. ಈ ಸಂವಾದವು ಸೃಷ್ಟ್ಯಾದಿಯಿಂದಲೂ ನಡೆದ ದಾಂಪತ್ಯಸಂವಾದಗಳಲ್ಲಿ ಅದ್ವಿತೀಯವಾದುದೂ, ಅತಿರಮ್ಯವಾದುದೂ, ಜ್ಞಾನಪ್ರದವಾದುದೂ, ಅಸಂಖ್ಯಜನರ ಮನಶ್ಶಾಂತಿಗೆ ಹೇತುಭೂತವಾದುದೂ ಆಗಿ ಒಪ್ಪುತ್ತಿದೆ.

ಮೈತ್ರೇಯಿ:—ಓ ಯಾಜ್ಞವಲ್ಕ್ಯನೇ! ಈ ಭೂಮಿಯೆಲ್ಲವೂ ತುಂಬು ವಷ್ಟು ಧನವನ್ನು ನಾನು ಹೊಂದಿದರೆ ಆ ಧನದಿಂದ ನಾನು ಮುಕ್ತಳಾಗುವೆನೇ?

ಯಾಜ್ಞವಲ್ಕ್ಯ:—ಓ ಮೈತ್ರೇಯಿಾ! ಲೋಕದಲ್ಲಿ ಧನವಂತರು ಸುಖ ಜೀವನವನ್ನು ಮಾಡುವಂತೆ ನೀನು ಆ ಧನದಿಂದ ಸುಖಜೀವನವನ್ನು ಮಾಡ ಬಹುದೇ ಹೊರತು ಧನದಿಂದ ಮುಕ್ತಿಯನ್ನು ಹೊಂದಲಾರೆ.

ಮೈ:—ಮುಕ್ತಿಯನ್ನು ಕೊಡಲಾರದ ಧನದಿಂದ ನನಗೆ ಪ್ರಯೋಜನ ವಿಲ್ಲ. ಮರಣರಹಿತವಾದ ಮುಕ್ತಿಯನ್ನು ಹೊಂದುವುದಕ್ಕೆ ಅನುಕೂಲವಾದ ಯಾವ ವಿದ್ಯೆಯನ್ನು ನೀನು ತಿಳಿದುಕೊಂಡಿರುವೆಯೋ ಅದನ್ನು ನನಗೆ ತಿಳಿಸು.

ಯಾ:- ಓ ಮೈತ್ರೇಯಿಾ! ನೀನು ಇಷ್ಟುವರೆಗೂ ನನ್ನಭೀಷ್ಟವನ್ನು ನೆರವೇರಿಸಿ, ಪ್ರೇಮವನ್ನು ವೃದ್ಧಿಗೊಳಿಸಿದೆಯಾದಕಾರಣ ಪೂಜ್ಯಳಾದ ನಿನಗೆ ಈಗ ಮೋಕ್ಷಸಾಧನೆಯನ್ನು ತಿಳಿಸುವೆನು. ಸಾವಧಾನಚಿತ್ತದಿಂದ ಕೇಳು.

ಓ ಮೈತ್ರೇಯಿಾ! ಭರ್ತೃಜಾಯಾ ಪುತ್ರಾದಿಗಳೆಲ್ಲರೂ ಆಯಾ ಭರ್ತೃ ಜಾಯಾ ಪುತ್ರಾದಿಗಳ ಕಾಮ (ಸೌಖ್ಯ) ಕ್ಕಾಗಿ ನಮಗೆ ಪ್ರಿಯರಾಗುವುದಿಲ್ಲ. ಅವರೆಲ್ಲರೂ ಆತ್ಮಕಾಮ (ನಮ್ಮ ಸೌಖ್ಯ) ಕ್ಕಾಗಿಯೇ ನಮಗೆ ಪ್ರಿಯರಾಗುತ್ತಾರೆ. ಸರ್ವವೂ ಆತ್ಮಸೌಖ್ಯಕ್ಕಾಗಿಯೇ ನಮಗೆ ಇಷ್ಟವಾದುದಾಗುತ್ತದೆ. ಆದುದರಿಂದ ಓ ಮೈತ್ರೇಯಿಾ! ಆತ್ಮವನ್ನೇ ನೋಡಬೇಕು; ಆತ್ಮವಿಷಯವನ್ನೇ ಆಚಾರ್ಯಾ ಗಮಗಳಿಂದ ಕೇಳಬೇಕು; ತರ್ಕದಿಂದಲೂ ಆತ್ಮವಿಷಯವನ್ನೇ ವಿಚಾರಿಸಬೇಕು. ಈ ವಿಧವಾಗಿ ಶ್ರವಣಮನನನಿಧಿ ಧ್ಯಾನಗಳಿಂದ ಆತ್ಮವು ನೋಡಲ್ಪಟ್ಟು ತನ್ನನ್ನು ತಾನೇ ತಿಳಿದುಕೊಂಡರೆ ಸರ್ವವನ್ನೂ ತಿಳಿದುಕೊಂಡಂತೆ ಆಗುವುದು. ಆತ್ಮವೇ ಸರ್ವಸ್ವರೂಪವಾದ ಕಾರಣ, ಆ ಸರ್ವಸ್ವರೂಪವಾದ ಆತ್ಮವನ್ನು ತಿಳಿದುಕೊಂಡರೆ ಸರ್ವವನ್ನೂ ತಿಳಿದುಕೊಳ್ಳಬಹುದು. ಆತ್ಮವು ಸರ್ವಸ್ವರೂಪವಾದುದು ಹೇಗಂ ದರೆ: ಈ ಬ್ರಾಹ್ಮಣ, ಕ್ಷತ್ರಿಯ ಮೊದಲಾದ ಜಾತಿಗಳನ್ನೂ, ಲೋಕಗಳನ್ನೂ, ದೇವತೆಗಳನ್ನೂ, ಭೂತಗಳನ್ನೂ ಮತ್ತು ಇತರ ಸಮಸ್ತ ವಸ್ತುಗಳನ್ನೂ ಯಾವ ಮನುಷ್ಯನು ಆತ್ಮಸ್ವರೂಪಕ್ಕೆ ಭಿನ್ನವಾದುದಾಗಿ ತಿಳಿಯುತ್ತಾನೆಯೋ ಅವನನ್ನು ಈ ಬ್ರಾಹ್ಮಣಾದಿ ಸರ್ವವೂ ಬೇರೆಯಾಗಿಯೇ ಮಾಡುತ್ತದೆ. ನಮಗೆ ಕಾಣ ಬರುವ ಈ ಬ್ರಹ್ಮಕ್ಷತ್ರಾದಿ ಸಮಸ್ತವೂ ಸೃಷ್ಟಿಕಾಲದಲ್ಲಿ ಆತ್ಮದಿಂದಲೇ ಹುಟ್ಟಿ, ಲಯಃಕಾಲದಲ್ಲಿ ಆತ್ಮದಲ್ಲಿಯೇ ಲೀನವಾಗಿ, ಸ್ಥಿತಿಕಾಲದಲ್ಲಿ ಆತ್ಮಸ್ವರೂಪವಾಗಿ ರುತ್ತದೆ. ಆದುದರಿಂದ ಯಾವುದೂ ಆತ್ಮಕ್ಕೆ ಭಿನ್ನವಾದುದಾಗಿ ಕಂಡುಬರುವು ದಿಲ್ಲ. ಹೀಗೆ ಇರುವುದರಿಂದ ಸರ್ವವನ್ನೂ ಆತ್ಮಸ್ವರೂಪವಾದುದಾಗಿಯೇ ತಿಳಿಯಬೇಕು. ಈ ಪ್ರಕಾರವಾಗಿ ಆತ್ಮವನ್ನು ತಿಳಿದುಕೊಂಡು ಆತ್ಮವೇ ತಾನಾದ ಕಾರಣ ಸರ್ವವನ್ನೂ ತಿಳಿದುಕೊಳ್ಳಬಹುದು.

ಆತ್ಮಕ್ಕಿಂತಲೂ ಬೇರೆಯಾದುದು ಯಾವುದೂ ಇಲ್ಲದೆ ಎಲ್ಲವೂ ಆತ್ಮ

ಮಾತ್ರವೇ ಆಗಿರುವಕಾರಣ, ಆತ್ಮಸ್ವರೂಪವನ್ನು ತಿಳಿದುಕೊಂಡರೆ ಸರ್ವವನ್ನೂ ತಿಳಿದುಕೊಂಡಂತೆ ಆಗುತ್ತದೆ.

ಉತ್ಪತ್ತಿಕಾಲದಲ್ಲಿಯೂ, ಉತ್ಪತ್ತಿಗಿಂತಲು ಪೂರ್ವದಲ್ಲಿಯೂ ಸರ್ವವೂ ಪರಬ್ರಹ್ಮನೆಂದು ತಿಳಿದುಕೊಳ್ಳಬಹುದು. ಅದುಹೇಗಂದರೆ: ಹೊಗೆ, ಕಿಡಿಗಳು, ಜ್ವಾಲೆ ಇವುಗಳು ಬೇರೆಬೇರೆಯಾಗಿ ಕಂಡುಬಂದರೂ ಇವುಗಳ ಪೂರ್ವರೂಪವು ಅಗ್ನಿ ಎಂಬುದು ಒಂದೇ ಆಗಿದೆ. ಹಾಗೆಯೇ ನಾಮರೂಪ ವಿಕಾರಗಳುಳ್ಳ ಅನೇಕ ಪದಾರ್ಥಗಳನ್ನೊಳಗೊಂಡಿರುವ ಈ ಜಗತ್ತು ಉತ್ಪತ್ತಿಗೆ ಪೂರ್ವದಲ್ಲಿ ಪ್ರಜ್ಞಾನ ಘನಸ್ವರೂಪನಾದ ಪರಮಾತ್ಮನೊಬ್ಬನೇ ಆಗಿದ್ದನು ಎಂದು ಗ್ರಹಿಸುವುದು ಯುಕ್ತವು. ಅದು ಹೇಗಂದರೆ: ಋಗ್ಯಜುಸ್ಸಾಮಾಥರ್ವಣಗಳೂ, ಇತಿಹಾಸಗಳೂ, ಪುರಾಣಗಳೂ, ನೃತ್ಯಗೀತಾದಿ ಶಾಸ್ತ್ರಗಳೂ, ಉಪನಿಷತ್ತುಗಳೂ, ಮಂತ್ರಗಳೂ, ಪರಮಾತ್ಮಸ್ವರೂಪವನ್ನು ತಿಳಿಸುವ ವೇದವಾಕ್ಯಗಳೂ, ವ್ಯಾಖ್ಯಾನಗಳೂ, ಲೋಕದಲ್ಲಿ ಪುರುಷನ ವಿಶ್ವಾಸದಂತೆ ಆ ಪರಮಾತ್ಮನ ವಿಶ್ವಾಸದಿಂದ ಉಂಟಾಗುತ್ತದೆ. ಆದುದರಿಂದ ಈ ಸರ್ವವೂ ಸ್ಥಿತಿಕಾಲದಲ್ಲಿ ಸಹ ಅಗ್ನಿ ದೃಷ್ಟಾಂತದಂತೆ ಪರಬ್ರಹ್ಮವೇ ಆಗಿದೆ.

ಹೇಗಂದರೆ ಓ ಮೈತ್ರೇಯಿಾ! ಸಮುದ್ರವು ಉದಕಗಳಿಗೆಲ್ಲ ಮುಖ್ಯಸ್ಥಾನವಾಗಿರುವಂತೆ ಸಮಸ್ತಸ್ಪರ್ಶಗಳಿಗೆ ತ್ವಗಿಂದ್ರಿಯವೂ, ಸರ್ವ ರಸಗಳಿಗೆ ಜಿಹ್ವೇಂದ್ರಿಯವೂ, ಸಮಸ್ತಗ್ರಂಥಗಳಿಗೆ ಘ್ರಾಣೇಂದ್ರಿಯವೂ, ಸಮಸ್ತ ರೂಪಗಳಿಗೆ ಚಕ್ಷುರಿಂದ್ರಿಯವೂ, ಸಮಸ್ತ ಶಬ್ದಗಳಿಗೆ ಶ್ರೋತ್ರೇಂದ್ರಿಯವೂ, ಸಮಸ್ತ ಸಂಕಲ್ಪಗಳಿಗೆ ಮನಸ್ಸೂ, ಸಮಸ್ತ ವಿದ್ಯೆಗಳಿಗೆ ಹೃದಯವೂ, ಬುದ್ಧಿಯೂ, ಸಮಸ್ತ ಕರ್ಮಗಳಿಗೆ ಹಸ್ತವೂ, ಗಮನಕ್ಕೆ ಪಾದಗಳೂ, ಸಮಸ್ತ ವೇದಗಳಿಗೆ ವಾಕ್ಕೂ ಮುಖ್ಯಸ್ಥಾನಗಳಾಗಿವೆ.

ದೃಶ್ಯವಾದ ಕಾರ್ಯಜಾತಕ್ಕೆ ವಿಲಯವು ಉಂಟಾಗುವಾಗ ಸರ್ವವೂ ಬ್ರಹ್ಮಮಾತ್ರವಾಗಿ ಹೇಗೆ ಆಗುತ್ತದೆ ಎಂದರೆ, ಓ ಮೈತ್ರೇಯಿಾ! ಬಾಹ್ಯಾಂತರ ಭೇದವಿಲ್ಲದ ಉಪ್ಪುಕಲ್ಲಿನ ಸರ್ವಾವಯವವೂ ನೀರಿನ ಗಡ್ಡೆಯಾಗಿ ಇರುವಂತೆ ಬಾಹ್ಯಾಂತರ ಭೇದವಿಲ್ಲದ ಈ ಆತ್ಮವು ಪ್ರಜ್ಞಾನದ ಘನೀಭಾವವೇ ಆಗಿರುತ್ತದೆ. ಇಂತಹ ಆತ್ಮವು ಈ ಭೂತಗಳಿಂದ ಹುಟ್ಟಿ, ಈ ಭೂತಗಳನ್ನು ಅನುಸರಿಸಿ ಮರಣವನ್ನು ಹೊಂದುತ್ತದೆ.

ಮೈತ್ರೇಯಿ:—ಓ ಯಾಜ್ಞವಲ್ಕ್ಯನೇ! ಪೂಜ್ಯನಾದ ನೀನು ನನ್ನನ್ನು ಈ ಪ್ರಜ್ಞಾನ ಘನಸ್ವರೂಪವಾದ ಆತ್ಮವಸ್ತುವಿಷಯವಾಗಿ ಮೋಹವನ್ನುಂಟು ಮಾಡುತ್ತಿರುವೆ. ಈ ಆತ್ಮಸ್ವರೂಪವನ್ನು ನಾನು ತಿಳಿದುಕೊಳ್ಳಲಾರೆನು.

ಯಾಜ್ಞವಲ್ಕ್ಯ:—ಓ ಮೈತ್ರೇಯಿಯಾ! ನಾನು ಮೋಹ(ಭ್ರಮೆ) ವನ್ನುಂಟು ಮಾಡುವ ವಿಷಯವನ್ನು ತಿಳಿಸಲಿಲ್ಲ. ಈ ಯಾತ್ಮಸ್ವರೂಪವು ವಿಕಾರರೂಪವಾದ ನಾಶವನ್ನಾಗಲಿ, ಅಭಾವರೂಪವಾದ ನಾಶವನ್ನಾಗಲಿ ಹೊಂದುವುದಿಲ್ಲ.

ಓ ಮೈತ್ರೇಯಿಯಾ! ಆತ್ಮನು ಭೇದವನ್ನು ಹೊಂದಿದಂತೆ ತೋರಿದಾಗ ಆ ಯಾತ್ಮನು ತಾನೇ ಬೇರೆಯಾಗಿ ತನಗೆ ಭಿನ್ನವಾಗಿ ತೋರುವ ರೂಪರಸ ಗಂಧಾದಿಗಳನ್ನು ನೇತ್ರ ಜಿಹ್ವ ಘ್ರಾಣಾದಿಗಳ ಮೂಲಕವಾಗಿ ತಿಳಿದುಕೊಳ್ಳುತ್ತಾನೆ. ಆತ್ಮನು ಅಜ್ಞಾನಾವಸ್ಥೆಯಲ್ಲಿ ಭೇದವಾಗಿರುವಂತೆ ತೋರಿ, ಜ್ಞಾನಾವಸ್ಥೆಯಲ್ಲಿ ಸರ್ವಾತ್ಮಸ್ವರೂಪವಾದ ತನ್ನಲ್ಲಿ ತನಗೆ ಭೇದವಿಲ್ಲದೇ ಇರುವ ಸಮಯದಲ್ಲಿ, ಯಾವುದರಿಂದ ಯಾವುದನ್ನು ನೋಡುವುದು? ಯಾವುದರಿಂದ ಯಾವುದನ್ನು ಆಘ್ರಾಣಿಸುವುದು? ಯಾವುದರಿಂದ ಯಾವುದನ್ನು ರುಚಿನೋಡುವುದು? ಯಾವುದರಿಂದ ಯಾವುದನ್ನು ಕೇಳುವುದು? ಯಾವುದರಿಂದ ಯಾವುದನ್ನು ಎಣಿಸುವುದು? ಯಾವುದರಿಂದ ಯಾವುದನ್ನು ಮುಟ್ಟುವುದು? ಯಾವುದರಿಂದ ಯಾವುದನ್ನು ತಿಳಿದುಕೊಳ್ಳುವುದು? ಈ ಜೀವನು ಯಾವ ಆತ್ಮಸ್ವರೂಪದಿಂದ ಈ ಸಮಸ್ತವನ್ನು ತಿಳಿದುಕೊಳ್ಳುತ್ತಾನೆಯೋ, ಆ ಯಾತ್ಮಸ್ವರೂಪವನ್ನು ಇನ್ನು ಯಾವುದರಿಂದ ತಿಳಿದುಕೊಳ್ಳಬಹುದು? ಅದಕ್ಕೆ ಅನ್ಯವಾದುದು ಯಾವುದೂ ಇಲ್ಲದುದರಿಂದ, ಅದನ್ನು ಯಾವುದರಿಂದಲೂ ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. "ನೇತಿ ನೇತಿ," ಎಂಬ ಮಹಾವಾಕ್ಯದಿಂದ ಆತ್ಮಕ್ಕಿಂತಲೂ ಭಿನ್ನವಾಗಿರುವ ಸರ್ವವೂ 'ಇದಲ್ಲ ಇದಲ್ಲ; ಎಂದು ನಿಷೇಧಿಸಿ ಸರ್ವಶೇಷಿ ಎಂದು ನಿಶ್ಚಯಿಸಿದ ಆತ್ಮವು ಆಕಾರವಿಲ್ಲದುದಾದಕಾರಣ ಕರ್ಮೇಂದ್ರಿಯಗಳಾದ ಹಸ್ತಾದಿಗಳಿಂದ ಗ್ರಹಿಸಲು ಸಾಧ್ಯವಾಗದೆಯೂ, ಆಕಾರವಿಲ್ಲದುದಾದಕಾರಣ ದೊರೆಯದುದಾಗಿಯೂ, ಯಾವುದರ ಒಡನೆಯೂ ಸೇರದೆ ಅಸಂಗವಾಗಿ ಇರುವುದು. ಮತ್ತು ಯಾವುದರಿಂದಲೂ ಬಾಧೆಯನ್ನು ಹೊಂದದೆಯೂ, ನಾಶರಹಿತವಾದುದಾಗಿಯೂ ಇರುವುದು. ಓ ಮೈತ್ರೇಯಿಯಾ! ಸರ್ವವನ್ನು ತಿಳಿದುಕೊಳ್ಳುವ ಆತ್ಮವನ್ನು ಯಾವುದರಿಂದ ತಿಳಿದುಕೊಳ್ಳಬಹುದು? ಆತ್ಮನೇ ಆತ್ಮವನ್ನು ತಿಳಿದುಕೊಳ್ಳುವುದು. ನೀನು ಹೀಗೆ ಅಜ್ಞಾಪಿಸಲ್ಪಟ್ಟವಳಾದೆ. ಓ ಮೈತ್ರೇಯಿಯಾ! ಆತ್ಮಕ್ಕಿಂತಲೂ ಬೇರೆಯಾದುದು ಯಾವುದೂ ಇಲ್ಲದುದರಿಂದ ಸರ್ವವಿಜ್ಞಾತವಾಗಿ ತಾನು ನಿಲ್ಲುವಂತಹ ಇದೇ ಮುಕ್ತಿಯಲ್ಲವೇ?

ತನ್ನ ಸಹಧರ್ಮಚಾರಿಣಿಯಾದ ಮೈತ್ರೇಯಿಗೆ ಯಾಜ್ಞವಲ್ಕ್ಯನು ಈ ವಿಧವಾಗಿ ಬ್ರಹ್ಮತತ್ವವನ್ನು ಉಪದೇಶಮಾಡಿ, ದ್ವಿತೀಯ ಪತ್ನಿಯಾದ ಕಾತ್ಯಾಯನಿಗೆ ಧನವನ್ನು ಕೊಟ್ಟು, ಇಬ್ಬರನ್ನೂ ಸಮಾಧಾನಪಡಿಸಿದನು. ಅನಂತರ ಪತ್ನಿಯರ ಅನುಮತಿಯನ್ನು ಪಡೆದು ಆತನು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಸಫಲಮನೋರಥನಾದನು.

ಮೇಲೆ ಉದಹರಿಸಿರುವ ಸಂವಾದವು ಬೃಹದಾರಣ್ಯಕೋಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿ ಇದೆ. ಇದಕ್ಕೆ 'ಮೈತ್ರೇಯ್ಯುಪನಿಷತ್' ಎಂದು ಹೆಸರು. ಇದರಮೇಲೆ ಶ್ರೀಶಂಕರಾಚಾರ್ಯರು ಅದ್ವೈತಪರವಾಗಿಯೂ, ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತಪರವಾಗಿಯೂ, ಶ್ರೀಮಧ್ವಾಚಾರ್ಯರು ದ್ವೈತಪರವಾಗಿಯೂ, ಶ್ರೀವಲ್ಲಭಾಚಾರ್ಯರು ಶುದ್ಧಾದ್ವೈತಪರವಾಗಿಯೂ ಭಾಷ್ಯಗಳನ್ನು ಬರೆದಿದಾರೆ.

ಮೇಲೆ ಬರೆದಿರುವ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ಪತ್ನಿಯನ್ನು 'ಅರೇ' ಎಂದು ಸಂಬೋಧಿಸಿದಾನೆ. 'ಅರೇ' ಎಂಬ ಸಂಬೋಧನೆಯು ಪುರುಷವಾಚಕವೆಂತಲೂ, ಬ್ರಹ್ಮಜ್ಞಾನವನ್ನು ತಿಳಿದುಕೊಂಡುದುದರಿಂದ, ಮೈತ್ರೇಯಿಯು ಪುರುಷನಾದ ತನ್ನೊಡನೆ ಸಮಾನಳೆಂದು ಭಾವಿಸಿ 'ಅರೇ' ಎಂದು ಸಂಬೋಧಿಸಿದನೆಂತಲೂ ಭಾಷ್ಯಕಾರರು ಬರೆದಿದಾರೆ. ಇದರಿಂದ ಆಕಾಲದಲ್ಲಿ ಪುರುಷರು ವಿದುಷಿಯರಾದ ಮಹಿಳೆಯರನ್ನು ಎಷ್ಟು ಗೌರವದಿಂದ ಕಾಣುತ್ತಿದ್ದರು ಎಂಬುದನ್ನು ತಿಳಿದುಕೊಳ್ಳಬಹುದು.

ಬ್ರಹ್ಮವಾದಿನಿಯಾದ ಮೈತ್ರೇಯಿಯು ಕರಗಳನ್ನು ಮುಗಿದು ಪರಮೇಶ್ವರನನ್ನು ಹೀಗೆ ಪ್ರಾರ್ಥಿಸಿದಾಳೆ.

"ಅಸತೋಮಾಸದ್ಗಮಯ— ತಮಸೋಮಾಜ್ಯೋತಿರ್ಗಮಯ—ಮೃತ್ಯೋರ್ಮಾಮೃತಂಗಮಯ—ಆವೀರಾವೀರ್ಮ ಏಧಿರುದ್ರಯತ್ತೇ—ದಕ್ಷಿಣ ಮುಖಂತೇನ ಮಾಂಪಾಹಿನಿತ್ಯಮ್."

ಅರ್ಥ—"ಓ ಸತ್ಯಸ್ವರೂಪನೇ! ನನ್ನನ್ನು ಅಸತ್ಯದಿಂದ ಕಾಪಾಡಿ ನಿನ್ನ ಸತ್ಯಸ್ವರೂಪವನ್ನು ಪ್ರಸಾದಿಸು. ಓ ಜ್ಞಾನಸ್ವರೂಪನೇ! ನನ್ನ ಮೋಹಾಂಧಕಾರವನ್ನು ಹೋಗಲಾಡಿಸಿ ಜ್ಞಾನಪ್ರಕಾಶವನ್ನು ತೋರಿಸು. ಓ ಆನಂದಸ್ವರೂಪನೇ! ನನ್ನನ್ನು ಮೃತ್ಯುವಿನಿಂದ ತಪ್ಪಿಸಿ ಅಮೃತದಲ್ಲಿ ಸೇರಿಸು. ಓ ಸ್ವಪ್ರಕಾಶನೇ! ನೀನು ನನ್ನ ಇದಿರಿಗೆ ಪ್ರಕಾಶಿಸು. ಓ ದುಃಖನಿವಾರಕನೇ! ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ನಿನ್ನ ಪ್ರಸನ್ನತೆಯಿಂದ ನನ್ನನ್ನು ರಕ್ಷಿಸು."

ಮಾನವಹೃದಯಕ್ಕೆ ಶಾಂತಿಯನ್ನು ಪ್ರಸಾದಿಸುವ ಈ ವ್ಯಾಕುಲ ಪ್ರಾರ್ಥನೆಯು ನಾರೀಕಂಠದಿಂದ ಬಹಿರ್ಗತವಾದುದರಿಂದ ಅತಿರಮಣೀಯವಾಗಿದೆ. ಈ ಮಂತ್ರವು ಯುಗಯುಗಾಂತರಗಳಿಂದ-ದೈವಭಕ್ತರ ಹೃದಯದಲ್ಲಿ ಪ್ರತಿಧ್ವನಿಸುತ್ತಿದೆ. ತಾಯಿಾ! ನಿನ್ನ ಪವಿತ್ರಪ್ರಾರ್ಥನೆಯು ಧನ್ಯತ್ವದಾಯಿ!!

ವಾಗ್ದೇವಿ.

ತತ್ವಕೋವಿದಳಾದ ಈ ವನಿತಾಮಣಿಯು ಅಂಭೃಣಋಷಿಯ ಪುತ್ರಿಯು. ಸಕಲ ತತ್ವಗಳಿಗೂ ಮೂಲಾಧಾರವಾದ ಅದ್ವಿತೀಯ ವೇದವಚನಗಳನ್ನು ಈಕೆಯು ರಚಿಸಿದಳು. ಋಗ್ವೇದಸಂಹಿತೆಯ ದಶಮಮಂಡಲದ ನೂರ ಎಪ್ಪತ್ತೈದನೆಯ ಸೂಕ್ತದಲ್ಲಿ ಎಂಟು ಮಂತ್ರಗಳನ್ನು ಈಕೆಯು ರಚಿಸಿದಳು. ಈ ಮಂತ್ರಗಳನ್ನು ದೇವೀಸೂಕ್ತವೆಂದು ಕರೆಯುತ್ತಾರೆ. ಈ ಸೂಕ್ತದಲ್ಲಿ ಈಕೆಯು ತನ್ನ ಆತ್ಮ ಸ್ವರೂಪವನ್ನು ವರ್ಣಿಸಿ, ಜೀವಬ್ರಹ್ಮಸ್ವರೂಪವನ್ನು ಸಿದ್ಧಾಂತಮಾಡಿದಾಳೆ. ಉಪನಿಷತ್ತುಗಳಲ್ಲಿಯೂ, ವೇದಾಂತ ದರ್ಶನಗಳಲ್ಲಿಯೂ ಹೇಳಿರುವ ಆತ್ಮಜ್ಞಾನ ವೃಕ್ಷದಬೀಜವನ್ನು, ಸಂಹಿತೆಯಲ್ಲಿ ಈಕೆಯೇ ಮೊದಲು ಬಿತ್ತಿದಳೆಂದು ತಿಳಿಯ ಬರುತ್ತದೆ.

ಈಕೆಯು ರಚಿಸಿದ ಋಗ್ವೇದ ಮಂತ್ರಗಳನ್ನು ಅನುಸರಿಸಿ ಉಪನಿಷತ್ತು ಗಳೂ ಈ ಉಪನಿಷತ್ತುಗಳ ಆಧಾರದಮೇಲೆ ಷಡ್ದರ್ಶನಗಳೂ ಹುಟ್ಟಿದುವು. ಪುರಾಣಗಳೂ ಇವುಗಳನ್ನು ಅನುಸರಿಸಿ ಹುಟ್ಟಿದವು. ಷಡ್ದರ್ಶನಗಳಲ್ಲಿ ಇರುವ ವೇದಾಂತದರ್ಶನ (ವ್ಯಾಸಸೂತ್ರ) ಗಳನ್ನು ನೋಡಿ ಶ್ರೀಶಂಕರಾಚಾರ್ಯಾದಿ ಸಿದ್ಧಾಂತಕರ್ತರು ಅವರವರ ಮತಗಳನ್ನು ಸ್ಥಿರಪಡಿಸಿಕೊಂಡರು. ಈ ಸೂತ್ರ ಗಳಿಗೆ ಭಾಷ್ಯಗಳನ್ನು ಬರೆದು ಶ್ರೀಶಂಕರಾಚಾರ್ಯರು ಜಗತ್ಪೂಜ್ಯರಾದರು. ಅವರು ಅದ್ವೈತಸಿದ್ಧಾಂತ ಸ್ಥಾಪಕರೆಂದು ಖ್ಯಾತಿಯನ್ನು ಪಡೆದಿದಾರೆ. ಆದರೆ ಅದ್ವೈತಸಿದ್ಧಾಂತದ ಮೂಲಸೂತ್ರಗಳನ್ನು ಐದುಸಾವಿರ ವರ್ಷಗಳಕೆಳಗೆ ವಾಗ್ದೇವಿಯು ಸೃಷ್ಟಿಸಿದಳು. ಆದಕಾರಣ ಶ್ರೀಶಂಕರಾಚಾರ್ಯರಿಗೆ ಉಂಟಾಗಿರುವ ಯಶಸ್ಸಿನಲ್ಲಿ ಮೂರುಭಾಗವು ವಾಗ್ದೇವಿಗೆ ಸೇರಬೇಕಾಗಿದೆ. ಈಕೆಯು ರಚಿಸಿದ ಮಂತ್ರಗಳ ಅರ್ಥವನ್ನು ಕೆಳಗೆ ಬರೆದಿದೇನೆ.

೧. "ನಾನು ರುದ್ರ, ವಸುಮೊದಲಾದವರ ಆತ್ಮಸ್ವರೂಪದಲ್ಲಿ ಚರಿಸು ತ್ತೇನೆ. ಉಭಯ ಮಿತ್ರಸು, ವರುಣಸು, ಇಂದ್ರನು, ಅಗ್ನಿ, ಅಶ್ವಿನೀಕುಮಾರರು ಇವರೆಲ್ಲರನ್ನೂ ನಾನೇ ಧರಿಸಿದೇನೆ."

೨. "ತ್ವಷ್ಟಾ, ಪೂಷಾ ಮೊದಲಾದ ದೇವತೆಗಳನ್ನು ನಾನು, ಧರಿಸಿದೇನೆ. ಹಾಗೆಯೇ ಸೋಮನನ್ನೂ ಧರಿಸಿದೇನೆ. ಈ ಸೋಮನು ಪ್ರಸ್ಥರ ನಿಷ್ಪಡನದಿಂದ

ಹುಟ್ಟಿದನು. ಯಾವ ಯಜಮಾನನು ಯಜ್ಞಸಂಬಂಧವಾದ ದ್ರವ್ಯಗಳನ್ನು ಉಪಯೋಗಿಸಿ ಸೋಮನನ್ನು ಸ್ತುತಿಸಿ, ದೇವಗಣಕ್ಕೆ ಪ್ರೀತಿಯನ್ನು ಉಂಟು ಮಾಡುವನೋ ಆ ಯಜಮಾನನಿಗೆ ನಾನೇ ಧನವನ್ನು ಕೊಡುತ್ತೇನೆ."

೩. "ನಾನೇ ಸಮಸ್ತ ಜಗತ್ತಿಗೂ ಯಜಮಾನಳು; ಯಾಗ ಫಲವನ್ನು ಕೊಡುವವಳು; ಮತ್ತು ಪರಬ್ರಹ್ಮ ಜ್ಞಾನವನ್ನುಳ್ಳವಳು. ಆದುದರಿಂದ ಯಜಮಾನಗಣದಲ್ಲಿ ನಾನೇ ಶ್ರೇಷ್ಠಳು. ನಾನು ಜಗತ್ಸ್ವರೂಪಳು. ಏವಂಗುಣ ವಿಶಿಷ್ಟಳು. ನನ್ನಲ್ಲಿ ಸಮಸ್ತ ಪ್ರಾಣಿಗಳೂ ವಾಸಮಾಡುತ್ತಿವೆ. ಸಕಲ ದೇವತೆಗಳೂ ನನ್ನನ್ನು ಸೇವಿಸುತ್ತಾರೆ."

೪. "ಜೀವಿಗೆ ನೋಡುವ ಶಕ್ತಿಯೂ, ಪ್ರಾಣಧಾರಣ ಶಕ್ತಿಯೂ, ಊಟ ಮಾಡುವ ಶಕ್ತಿಯೂ ನನ್ನ ಪ್ರಭಾವದಿಂದಲೇ ಉಂಟಾಗುತ್ತದೆ. ಲೋಕದಲ್ಲಿ ಇರುವವರು ನಾನು ಅಂತರ್ಯಾಮಿ ಸ್ವರೂಪಿಣಿ ಎಂಬುವದನ್ನು ಅರಿಯರು. ಅವರ ಅಜ್ಞಾನದಿಂದಲೇ ಈ ಸಂಸಾರವು ಹೀನದೆಶೆಯಲ್ಲಿ ಇದೆ. ಓ ವಿದ್ವಾಂಸರೇ! ನಾನು ಉಪದೇಶಮಾಡುವ ವಿಷಯವನ್ನು ಶ್ರದ್ಧೆಯಿಂದ ಕೇಳಿರಿ."

೫. "ನಾನು ಸ್ವಯಮಾಗಿ ಈ ಬ್ರಹ್ಮಪದಾರ್ಥವನ್ನು ತಿಳಿದೆನು. ನನ್ನನ್ನೇ ದೇವಗಣವೂ, ಮನುಷ್ಯಗಣವೂ ಸೇವಿಸುತ್ತಿದೆ. ನಾನೇ ಸಮಸ್ತ ಕಾಮ್ಯಗಳನ್ನೂ ಕೊಡತಕ್ಕವಳು. ನಾನು ಲೋಕಗಳಿಗೆ ತ್ವಷ್ಟಳು. ಋಷಿಗಳನ್ನು ಮಾಡುವವಳು ನಾನೇ."

೬. "ಸ್ತೋತ್ರದ್ವೇಷ್ಟರನ್ನು, ಹಿಂಸಕರನ್ನು ವಧಿಸುವುದಕ್ಕಾಗಿ ರುದ್ರನನ್ನು ನಾನೇ ಸೃಷ್ಟಿಸಿದೆನು. ಭಕ್ತಜನರಿಗೆ ಉಪಕಾರವನ್ನು ಮಾಡುವುದಕ್ಕಾಗಿ ನಾನೇ ಪ್ರತಿಪಕ್ಷಿಗಳೊಡನೆ ಯುದ್ಧವನ್ನು ಮಾಡುವೆನು. ನಾನು ಸ್ವರ್ಗವನ್ನೂ, ಪೃಥಿವಿಯನ್ನೂ ರಚಿಸಿಇದೇನೆ."

೭. "ಸಮುದ್ರದಲ್ಲಿಯೂ, ಜಲದಲ್ಲಿಯೂ ನನ್ನ ತಂದೆಯು ವಾಸಮಾಡುತ್ತಿರುವನು. ಗುಣವಂತಳಾದ ನಾನು ನಿಖಿಲ ಭೂಮಂಡಲದಲ್ಲಿಯೂ ತುಂಬಿದೇನೆ. ನಾನು ವಿವಿಧಪದಾರ್ಥಗಳಲ್ಲಿಯೂ ಅಡಗಿದೇನೆ. ನಾನು ಕಾರಣ ಸ್ವರೂಪಳು. ಮಾಯಾಮಯವಾದ ನನ್ನ ದೇಹದಿಂದ ಬಹುದೂರದಲ್ಲಿ ಇರುವ ಸ್ವರ್ಗವನ್ನು ನಾನು ಮುಟ್ಟುವೆನು."

೮. "ವಾಯುವು ಯಾವ ವಿಧದಿಂದ ಸ್ವೇಚ್ಛೆಯಾಗಿ ಸಕಲದಿಕ್ಕುಗಳಲ್ಲಿಯೂ ಸಂಚರಿಸುವುದೋ ಹಾಗೆಯೇ ಸಕಲ ಭುವನಕರ್ತ್ರಿಯಾದ ನಾನು

ನನ್ನ ಇಚ್ಛಾನುಸಾರವಾಗಿ ಆಯಾ ಕಾರ್ಯಗಳನ್ನು ನಿರ್ವಹಿಸುತ್ತಿರುವೆನು. ನಾನು ಈ ಆಕಾಶ, ಪೃಥಿವಿಗಳಿಗಿಂತಲೂ ಉನ್ನತವಾದವಳು. ನಾನು ವಿಷಯ ನಿರ್ಲಿಪ್ತಳು. ನಾನು ಬ್ರಹ್ಮಸ್ವರೂಪಿಣಿಯು. ನನ್ನ ಮಹಾತ್ಮ್ಯದಿಂದಲೇ ಈ ಸಮಸ್ತವೂ ಹುಟ್ಟಿತು.”

ಮೇಲೆ ಬರೆದಿರುವ ವೇದವಾಕ್ಯಗಳಲ್ಲಿ ‘ನಾನು ಇಂತಹವಳು,’ ‘ನಾನು ಅಂತಹವಳು’ ಎಂದು ಬಂದಿರುವುದರಿಂದ, ಇವು ವಾಗ್ದೇವಿಯ ಗರ್ವವನ್ನು ಸೂಚಿಸುವ ವಾಕ್ಯಗಳೆಂದು ಪಾಠಕರು ಊಹಿಸಬಹುದು. ಆದರೆ ಈ ಊಹೆಯು ಸರಿಯಾದುದಲ್ಲ.

ಅದ್ವೈತಸಂಪ್ರದಾಯವನ್ನು ತಿಳಿದವರಿಗೆ ಇದು ಆಶ್ಚರ್ಯವನ್ನುಂಟುಮಾಡಲಾರದು. ಮೂಲತತ್ವವನ್ನು ಕುರಿತಾಗಲಿ, ಬ್ರಹ್ಮವಿಷಯವನ್ನು ಕುರಿತಾಗಲಿ ಹೇಳುವಾಗ ಅದ್ವೈತರು ಪ್ರಥಮಪುರುಷವನ್ನು ಉಪಯೋಗಿಸದೆ ಉತ್ತಮ ಪುರುಷವನ್ನು ಉಪಯೋಗಿಸುತ್ತಾರೆ. ಜೀವಬ್ರಹ್ಮರಿಗೆ ಬೇಧವಿಲ್ಲ ಎಂಬುದು ಅವರ ಸಿದ್ಧಾಂತವಾದುದರಿಂದ ಅವರು ಹಾಗೆ ಮಾತನಾಡುತ್ತಾರೆ. ಆದುದರಿಂದ ಅದ್ವೈತಸಿದ್ಧಾಂತದಲ್ಲಿ ಇಷ್ಟವಿಲ್ಲದವರು ಇದಕ್ಕೆ ವಿಪರೀತಾರ್ಥಗಳನ್ನು ಮಾಡದೆ, ಸಂಪ್ರದಾಯಾನುಸಾರವಾಗಿಯೇ ಅರ್ಥವನ್ನು ಮಾಡಬೇಕು.

ಗಾರ್ಗಿ.

ಈಕೆಯು ತನ್ನ ಕಾಲದಲ್ಲಿ ವಿಶೇಷ ವಿದ್ಯಾವತಿಯು ಎಂತಲೂ, ಬ್ರಹ್ಮವಾದಿನಿಯು ಎಂತಲೂ ಪ್ರಸಿದ್ಧಿಯನ್ನು ಪಡೆದಳು. ಈಕೆಯು ವಚಕ್ನುಮಹಾಮುನಿಯ ಪುತ್ರಿಯು.

ವೈದಿಕಕಾಲದಲ್ಲಿ ತತ್ವವಿಷಯಗಳನ್ನು ಕುರಿತು ನಾನಾವಿಧವಾದ ತರ್ಕಗಳು ಮಗಧದೇಶದಲ್ಲಿ ವಿಶೇಷವಾಗಿ ನಡೆಯುತ್ತಿತ್ತು. ಮಗಧದೇಶಾಂತರ್ಗತವಾದ ವಿದೇಹದೇಶವನ್ನು ಜನಕರಾಜನು ಪರಿಪಾಲಿಸುತ್ತಿದ್ದನು. ಈ ರಾಜ್ಯಕ್ಕೆ ಮಿಥಿಲಾನಗರವು ರಾಜಧಾನಿಯಾಗಿತ್ತು. ವಿದೇಹದೇಶದ ರಾಜರಿಗೆಲ್ಲ ಜನಕರು ಎಂದು ಹೆಸರು. ಈ ಜನಕರೆಲ್ಲರೂ ಧರ್ಮಾತ್ಮರೂ, ವಿದ್ವಾಂಸರೂ, ಬ್ರಹ್ಮಜ್ಞಾನಿಗಳೂ ಆಗಿ ಇದ್ದರು. ಇವರು ವಿದ್ವಾಂಸರನ್ನು ಅತ್ಯಂತ ಗೌರವವಾಗಿ ಕಾಣುತ್ತಿದ್ದರು.

ಆ ಜನಕಮಹಾರಾಜನು ಒಂದು ಸಮಯದಲ್ಲಿ, ತನ್ನ ಪುರೋಹಿತನ ಅನುಮತಿಯನ್ನು ಪಡೆದು 'ಬಹುದಕ್ಷಿಣಾಕ' ಎಂಬ ಒಂದು ಯಜ್ಞವನ್ನು ಮಾಡಲು ನಿಶ್ಚಯಿಸಿದನು. ಆ ಯಜ್ಞಕ್ಕಾಗಿ ರಾಜನು ಕುರುಪಾಂಚಾಲ ದೇಶಗಳಲ್ಲಿರುವ ಅನೇಕ ವಿದ್ವಾಂಸರನ್ನೂ ಬ್ರಹ್ಮಜ್ಞಾನಿಗಳನ್ನೂ ಕರೆಯಿಸಿದನು. ಇನ್ನೂ ಅನೇಕರು ಆ ಯಜ್ಞವನ್ನು ನೋಡುವುದಕ್ಕೆ ಬಂದರು. ಅವರೆಲ್ಲರನ್ನೂ ರಾಜನು ತಕ್ಕಹಾಗೆ ಗೌರವಿಸಿದನು. ಆತನು ಆ ವಿದ್ವತ್ಸಂಘದೊಡನೆ ಅಸಮಾನ ಪಾಂಡಿತ್ಯವುಳ್ಳ ಗಾರ್ಗ್ಯಯನ್ನು ಸಹ ಕರೆದು ಮನ್ನಣೆಯನ್ನು ಮಾಡಿದನು.

ವಿದ್ಯಾವಂತರು, ಬ್ರಹ್ಮವೇತ್ತರು, ಅಧ್ಯಾತ್ಮಿಕವಿದರು, ರಾಜಋಷಿಗಳು, ಬ್ರಹ್ಮರ್ಷಿಗಳು ಮೊದಲಾದವರು ಸೇರಿ ಇದ್ದುದರಿಂದ ಆ ಸಭೆಯು ಅಪೂರ್ವ ಶೋಭೆಯನ್ನುಳ್ಳದುದಾಗಿತ್ತು. ಈ ಕಾಲದಲ್ಲಿ ಜನಿಸಿದವರು ಆ ಮಹಾಸಭೆಯು ಈ ವಿಧವಾಗಿ ಇದ್ದಿತೆಂದು ವರ್ಣಿಸಲಾರರು. ಸಕಲ ಮತಸ್ಥರೂ, ಸಕಲ ದೇಶಸ್ಥರೂ ಆದ ಪಂಡಿತೋತ್ತಮರಿಂದ ಅಲಂಕೃತವಾದ ಈಗಿನ ದೇಶೀಯ ಮಹಾಸಭೆಯಂತೆ, ಆ ಸಭೆಯು ಇದ್ದಿತೆಂದು ಊಹಿಸಿಕೊಳ್ಳಬಹುದು.

ಯಜ್ಞಾಂತದಲ್ಲಿ ನೇತ್ರಾನಂದವನ್ನುಂಟುಮಾಡುತ್ತಿರುವ ಆ ಸಭಾಜನರನ್ನು ನೋಡಿ ಜನಕರಾಜನು ಇವರಲ್ಲಿ ಸಂಪೂರ್ಣ ಬ್ರಹ್ಮಜ್ಞಾನಿಗಳು ಯಾರು ಎಂಬುದನ್ನು ತಿಳಿದುಕೊಳ್ಳಬೇಕೆಂದು ಎಣಿಸಿದನು. ಅನಂತರ ರಾಜನು ಕೂಡಲೆ ಒಂದುಸಾವಿರ ಗೋವುಗಳನ್ನು ತರಿಸಿ, ಅವುಗಳಲ್ಲಿ ಪ್ರತಿಯೊಂದು ಗೋವಿನ ಕೊಂಬುಗಳಿಗೂ ಸ್ವರ್ಣಮುದ್ರೆಗಳನ್ನು ಕಟ್ಟಿಸಿ, ಅವುಗಳನ್ನು ಒಂದು ಸ್ಥಳದಲ್ಲಿ ನಿಲ್ಲಿಸಿ, "ಪೂಜ್ಯರಾದ ಬ್ರಾಹ್ಮಣರೇ! ನಿಮ್ಮಲ್ಲಿ ಶ್ರೇಷ್ಠನಾದ ಬ್ರಹ್ಮಜ್ಞಾನಿಗೆ ಈ ಸ್ವರ್ಣ ಮುದ್ರೆಗಳಿಂದ ಕೂಡಿದ ಗೋವುಗಳು ಲಭಿಸುವವು. ಆದುದರಿಂದ ಅಂತಹವರು ಈ ಗೋವುಗಳನ್ನು ತೆಗೆದುಕೊಳ್ಳಿರಿ." ಎಂದು ನುಡಿದನು. ಆಗ ಯಾಜ್ಞವಲ್ಕ್ಯನೆಂಬ ಮುನಿಯು ಸಭಾರಂಗದಿಂದ ಎದ್ದು ತನ್ನ ಶಿಷ್ಯನಾದ ಸಾಮಶ್ರವನನ್ನು ಕರೆದು, "ನೀನು ಈ ಹಸುಗಳನ್ನು ನಮ್ಮಮನೆಗೆ ಅಟ್ಟಿಕೊಂಡು ಹೋಗು" ಎಂದನು. ಆ ಶಿಷ್ಯನು ಗುರುವಿನ ಆಜ್ಞೆಯಂತೆ ಆ ಗೋವುಗಳನ್ನು ಅಟ್ಟಿಕೊಂಡು ಹೋದನು. ಆಗ ಅಲ್ಲಿದ್ದ ವಿದ್ವಾಂಸರೆಲ್ಲರು 'ಈ ಯಾಜ್ಞವಲ್ಕ್ಯನು ನಮ್ಮೆಲ್ಲರಲ್ಲಿಯು ತಾನೇ ಬ್ರಹ್ಮಜ್ಞಾನಿಯು ಎಂದು ಹೇಗೆ ತಿಳಿದುಕೊಂಡನು' ಎಂದು ಆಗ್ರಹವನ್ನು ಹೊಂದಿದರು. ಅನಂತರ ಆ ಯಜ್ಞದಲ್ಲಿ ಜನಕಮಹಾರಾಜನಿಗೆ ಋತ್ವಿಕ್ಕಾದ ಅಶ್ವಲನೆಂಬುವನು ಯಾಜ್ಞವಲ್ಕ್ಯನ ಬ್ರಹ್ಮಜ್ಞಾನವನ್ನು ಪರೀಕ್ಷಿಸುವುದಕ್ಕಾಗಿ, ಆತನನ್ನು ಕೆಲವು ಪ್ರಶ್ನೆಗಳನ್ನುಕೇಳಿ, ಆತನಿಂದ ತಕ್ಕ ಪ್ರತ್ಯುತ್ತರಗಳನ್ನು ಪಡೆದನು. ಅನಂತರ ಆ ಸಭೆಯಲ್ಲಿ ಇದ್ದ ಆರ್ತಭಾಗನು, ಭುಜ್ಯುವು, ಉಷನ್ತನು, ಕಹೋಳನು ಮೊದಲಾದ ಕೆಲವರುಪಂಡಿತರು ಯಾಜ್ಞ

ವಲ್ಕ್ಯನೊಡನೆ ವಾದಿಸಿ ನಿರುತ್ತರರಾದರು. ಆಮೇಲೆ ನಮ್ಮ ಚರಿತ್ರನಾಯಕೆ ಯಾದ ಗಾರ್ಗಿಯು ಆತನೊಡನೆ ವಾದಮಾಡಲು ಉಪಕ್ರಮಿಸಿದಳು.

ಗಾರ್ಗಿ:—ಓ ಯಾಜ್ಞವಲ್ಕ್ಯನೇ! ಈ ಪೃಥಿವಿಗೆ ಸಂಬಂಧಪಟ್ಟ ಧಾತುಜಾತ ವೆಲ್ಲವು ವಸ್ತ್ರದ ಹೊಕ್ಕುಹಾಸುಗಳ ದಾರಗಳಂತೆ ಬಾಹ್ಯಾಂತರ್ಭೂತಗಳಾವ ಉದಕಗಳಿಂದ ಸಕಲ ಸ್ಥಳಗಳಲ್ಲಿಯೂ ವ್ಯಾಪಿಸಿ ಇವೆ. ಆಪ್ರಕಾರವಾಗಿ (ವಸ್ತ್ರದ ಹೊಕ್ಕುಹಾಸುಗಳಂತೆ) ಉದಕಗಳು ಯಾವುದರಲ್ಲಿ ಇವೆ?

ಯಾಜ್ಞವಲ್ಕ್ಯ:—ಓ ಗಾರ್ಗೀ! ಅವು ವಾಯುವಿನಲ್ಲಿ ಇವೆ.

ಗಾರ್ಗಿ:—ವಾಯುವು ಯಾವುದರಲ್ಲಿ ಇದೆ?

ಯಾಜ್ಞ:—ಓ ಗಾರ್ಗೀ! ಗಂಧರ್ವಲೋಕಗಳಲ್ಲಿ ಇದೆ.

ಗಾರ್ಗಿ:—ಗಂಧರ್ವಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಆದಿತ್ಯಲೋಕಗಳಲ್ಲಿ ಇವೆ.

ಗಾರ್ಗಿ:—ಆದಿತ್ಯಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಓ ಗಾರ್ಗೀ! ಚಂದ್ರಲೋಕಗಳಲ್ಲಿ ಇವೆ.

ಗಾರ್ಗಿ:—ಚಂದ್ರಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಚಂದ್ರಲೋಕಗಳು ನಕ್ಷತ್ರಲೋಕಗಳಲ್ಲಿ ಇವೆ.

ಗಾರ್ಗಿ:—ನಕ್ಷತ್ರಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಓ ಗಾರ್ಗೀ! ದೇವಲೋಕಗಳಲ್ಲಿ ಇವೆ.

ಗಾರ್ಗಿ:—ದೇವಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಇಂದ್ರಲೋಕಗಳಲ್ಲಿ ಇವೆ.

ಗಾರ್ಗಿ:—ಇಂದ್ರಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಓ ಗಾರ್ಗೀ! ಪ್ರಜಾಪತಿಲೋಕಗಳಲ್ಲಿ ಇವೆ.

ಗಾರ್ಗಿ:—ಪ್ರಜಾಪತಿಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಓ ಗಾರ್ಗೀ! ಬ್ರಹ್ಮಲೋಕಗಳಲ್ಲಿ ಇವೆ.

ಗಾರ್ಗಿ:—ಬ್ರಹ್ಮಲೋಕಗಳು ಯಾವುದರಲ್ಲಿ ಇವೆ?

ಯಾಜ್ಞ:—ಓ ಗಾರ್ಗೀ! ನ್ಯಾಯವನ್ನು ಅತಿಕ್ರಮಿಸಿ ಪ್ರಶ್ನೆಯನ್ನು ಮಾಡ ಬೇಡ. ಹಾಗೆ ಪ್ರಶ್ನೆಮಾಡಿದರೆ ನಿನ್ನ ಶಿರಸ್ಸು ಒಡೆಯುವುದು. ನ್ಯಾಯವನ್ನು ಅತಿಕ್ರಮಿಸಿ ಪ್ರಸಿದ್ಧವಾಗಿ ಪ್ರಶ್ನೆಮಾಡಬಾರದ ದೇವತೆಯನ್ನು ಕುರಿತು ನೀನು ನ್ಯಾಯವನ್ನು ಅತಿಕ್ರಮಿಸಿ ಪ್ರಶ್ನೆಮಾಡುವೆ. ನೀನು ಹಾಗೆ ಕೇಳಬೇಡ.

ಯಾಜ್ಞವಲ್ಕ್ಯನು ತನ್ನ ಪ್ರಶ್ನೆಗೆ ಉತ್ತರವನ್ನು ಕೊಡಲಾರದೆ ಹೇಳಿದ ಕೊನೆಯ ವಾಕ್ಯವನ್ನು ಕೇಳಿ ಗಾರ್ಗಿಯು ಆಗ್ಯೆ ಪುನಃ ಪ್ರಶ್ನೆಮಾಡದೆ ಸುಮ್ಮನೆ ಇದ್ದಳು.

ಅನಂತರ ಅರುಣಪುತ್ರನಾದ ಉದ್ದಾಲಕನು ಯಾಜ್ಞವಲ್ಕ್ಯನೊಡನೆ ಸ್ವಲ್ಪ ವಾದಿಸಿ ನಿರುತ್ತರನಾದನು.

ಈತನು ವಾದಿಸುತ್ತಿದ್ದ ಸಮಯದಲ್ಲಿ, ಏನನ್ನೋ ಆಲೋಚಿಸಿಕೊಳ್ಳುತ ಲಿದ್ದ ಗಾರ್ಗಿಯು ಪುನಃ ಯಾಜ್ಞವಲ್ಕ್ಯನೊಡನೆ ವಾದಮಾಡಲೆಣಿಸಿ, ಅದಕ್ಕೆ ಆ ಸಭೆಯವರ ಅನುಮತಿಯನ್ನು ಪಡೆಯಲು, " ಪೂಜ್ಯರಾದ ಬ್ರಾಹ್ಮಣರೇ! ನೀವು ಅಂಗೀಕರಿಸಿದರೆ ನಾನು ಈ ಯಾಜ್ಞವಲ್ಕ್ಯನನ್ನು ಎರಡು ಪ್ರಶ್ನೆಗಳನ್ನು ಕೇಳುವೆನು. ಆ ಪ್ರಶ್ನೆಗಳಿಗೆ ಯಾಜ್ಞವಲ್ಕ್ಯನು ಉತ್ತರವನ್ನು ಹೇಳಿದರೆ, ನಿಮ್ಮಲ್ಲಿ ಯಾರೂ ಆತನನ್ನು ಈ ವಾದದಲ್ಲಿ ಜಯಿಸಲಾರರಿ " ಎಂದು ಹೇಳಿದಳು. ಆಕೆಯ ಮಾತುಗಳನ್ನು ಕೇಳಿ ಅಲ್ಲಿದ್ದ ಬ್ರಾಹ್ಮಣರೆಲ್ಲರು " ಓ ಗಾರ್ಗೀ! ಹಾಗೆಯೇ ಆಗಲಿ, ನೀನು ಆತನನ್ನು ಪ್ರಶ್ನಿಸಬಹುದು " ಎಂದು ಹೇಳಿದರು. ಬ್ರಹ್ಮವೇತ್ತರಾದ ಅನೇಕ ಬ್ರಾಹ್ಮಣರು ಯಾಜ್ಞವಲ್ಕ್ಯನೊಡನೆ ವಾದಿಸಿ ಸೋತುಹೋದಮೇಲೆ ಒಬ್ಬ ಹೆಂಗಸು ವಾದಮಾಡುವುದಕ್ಕಾಗಿ ಅವರ ಅನುಜ್ಞೆಯನ್ನು ಕೇಳಲು, ಅವರು ಅದರಿಂದ ತಮ್ಮ ಗೌರವವು ಕಡಮೆಯಾಗುವುದೆಂದು ಎಣಿಸದೆ, ಆಕೆಗೆ ವಾದಿ ಸಲು ಅನುಜ್ಞೆಯನ್ನು ಕೊಟ್ಟುದುದನ್ನು ನೋಡಿದರೆ, ಆಕೆಯ ಕಾಲದಲ್ಲಿ ಸ್ತ್ರೀಪುರುಷರಲ್ಲಿ ಯಾರಾದರೂ ವಿದ್ಯಾಗುಣಸಂಪನ್ನರಿದ್ದರೆ ಅವರೆಲ್ಲರೂ ಒಂದೇ ವಿಧವಾಗಿ ಸನ್ಮಾನಿತರಾಗುತ್ತ ಇದ್ದರೆಂದು ಬೋಧೆಯಾಗುತ್ತದೆ. ಸ್ತ್ರೀಯರು ಪುರುಷರಿಗಿಂತಲು ಹೆಚ್ಚಾದ ಪಾಂಡಿತ್ಯವನ್ನುಳ್ಳವರಾಗಿದ್ದರೂ ಸ್ತ್ರೀಜನ್ಮವನ್ನೆತ್ತಿದ ದೋಷದಿಂದಲೇ ಅವಮಾನ ಪಾತ್ರರಾಗುತ್ತಿರಲಿಲ್ಲ. ಭೂಸುರರ ಅನುಮತಿ ಯನ್ನು ಪಡೆದಮೇಲೆ ಗಾರ್ಗಿಯು ಯಾಜ್ಞವಲ್ಕ್ಯನಿಗೆ ಅಭಿಮುಖಿಯಾಗಿ ಓ ಯಾಜ್ಞವಲ್ಕ್ಯನೇ! ಕಾಶೀವಿದೇಹದೇಶಗಳಲ್ಲಿ, ಶೂರವಂಶದಲ್ಲಿ ಜನಿಸಿದ ಒಬ್ಬ ರಾಜಪುತ್ರನು, ಬಿಲ್ಲಿಗೆ ಹೆದೆಯನ್ನೇರಿಸಿ, ಶತ್ರುಗಳಿಗೆ ವ್ಯಥೆಯನ್ನುಂಟುಮಾಡು ವಂತಹ ಎರಡು ಉತ್ತಮವಾದ ಬಾಣಗಳನ್ನು ಕೈಯಲ್ಲಿ ಇಟ್ಟುಕೊಂಡು ತನ್ನ ಶತ್ರುಗಳನ್ನು ಸಮಿಾಪಿಸುವಂತೆ, ನಾನು ಶ್ರೇಷ್ಠಗಳಾದ ಎರಡು ಪ್ರಶ್ನೆಗಳೊಡನೆ ನಿನ್ನನ್ನು ಸಮಿಾಪಿಸಿದೇನೆ. ನೀನು ಬ್ರಹ್ಮವಿದನಾದರೆ ಈ ಪ್ರಶ್ನೆಗಳಿಗೆ ಸಮಾ ಧಾನವನ್ನು ಹೇಳು.

ಯಾಜ್ಞ.:—ಓ ಗಾರ್ಗೀ! ಹಾಗೆಯೇ ಪ್ರಶ್ನೆಯನ್ನುಮಾಡು.

ಗಾರ್ಗಿ:—ಓ ಯಾಜ್ಞವಲ್ಕ್ಯನೇ! ಬ್ರಹ್ಮಾಂಡಕ್ಕಿಂತಲು ಉಪರಿಭಾಗ

ದಲ್ಲಿಯೂ, ಕೆಳಭಾಗದಲ್ಲಿಯೂ, ಮಧ್ಯದಲ್ಲಿಯೂ, ಭೂತವೂ, ವರ್ತಮಾನವೂ, ಭವಿಷ್ಯತ್ತೂ ಆದ ಮತ್ತು ದ್ವೈತವಾದ ಈ ಸಮಸ್ತವೂ ವಸ್ತ್ರದ ಹೊಕ್ಕುಹಾಸು ಗಳಂತೆ ಯಾವುದರಲ್ಲಿ ಏಕವಾಗಿ ಕಲ್ಪಿತವಾಗಿವೆ?

ಯಾಜ್ಞವಲ್ಕ್ಯ:—ಓ ಗಾರ್ಗೀ! ಬ್ರಹ್ಮಾಂಡಕ್ಕಿಂತಲು ಉಪರಿಭಾಗ ದಲ್ಲಿಯೂ, ಕೆಳಭಾಗದಲ್ಲಿಯೂ, ಮಧ್ಯಭಾಗದಲ್ಲಿಯೂ, ಭೂತವೂ, ವರ್ತ ಮಾನವೂ, ಭವಿಷ್ಯತ್ತೂ ಆದ ಮತ್ತು ವ್ಯಾಕೃತವಾದ ಸೂತ್ರಾತ್ಮಕಜಗತ್ತು ಎಲ್ಲವೂ ಯಾವುದರಲ್ಲಿ ಏಕವಾಗಿ ಕಲ್ಪಿತವಾಗಿದೆ ಎಂದು ಹೇಳುತ್ತಾರೋ ಅಂತಹ ಸೂತ್ರವು ಉತ್ಪತ್ತಿಸ್ಥಿತಿಲಯಕಾಲಗಳಲ್ಲಿ, ಅವ್ಯಾಕೃತಾಕಾಶದಲ್ಲಿ ವಸ್ತ್ರದ ಹೊಕ್ಕು ಹಾಸುಗಳಂತೆ ಏಕವಾಗಿ ಕಲ್ಪಿತವಾಗಿ ಇದೆ.

ಗಾರ್ಗಿ:—ಓ ಯಾಜ್ಞವಲ್ಕ್ಯನೆ! ನೀನು ನಾನು ಕೇಳಿದುದಕ್ಕಿಂತಲು ಹೆಚ್ಚಾಗಿಯೇ ನನಗೆ ಹೇಳಿದೆ. ಆದಕಾರಣ ನಿನಗೆ ನಮಸ್ಕಾರವನ್ನು ಮಾಡು ತ್ತೇನೆ. ಇನ್ನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ನನಗೆ ಧೈರ್ಯವು ಉಂಟಾಗು ವಂತೆ ಮಾಡುವನಾಗು.

ಯಾಜ್ಞ:—ಓ ಗಾರ್ಗೀ! ನೀನು ಪ್ರಶ್ನೆಯನ್ನು ಕೇಳಬಹುದು.

ಗಾರ್ಗಿ:—ಓ ಯಾಜ್ಞವಲ್ಕ್ಯನೇ! ಬ್ರಹ್ಮಾಂಡಕ್ಕಿಂತಲು ಊರ್ಧ್ವಭಾಗ ದಲ್ಲಿಯೂ, ಕೆಳಭಾಗದಲ್ಲಿಯೂ, ಮಧ್ಯದಲ್ಲಿಯೂ, ಭೂತವೂ, ವರ್ತಮಾನವೂ, ಭವಿಷ್ಯತ್ತೂ ಆದ ಈ ಸಮಸ್ತವೂ ಯಾವ ಸೂತ್ರವೆಂದು ಹೇಳುತ್ತಾರೆಯೋ ಅದು ಯಾವುದರಲ್ಲಿ ವಸ್ತ್ರದ ಹೊಕ್ಕು ಹಾಸುಗಳಂತೆ ಕಲ್ಪಿತವಾಗಿವೆ?

ಯಾಜ್ಞ:—ಓ ಗಾರ್ಗೀ! ಬ್ರಹ್ಮಾಂಡಕ್ಕಿಂತಲೂ, ಊರ್ಧ್ವಭಾಗದಲ್ಲಿಯೂ, ಭೂತವೂ, ಭವಿಷ್ಯತ್ತೂ, ವರ್ತಮಾನವೂ ಆದ ಈ ಸೂತ್ರರೂಪವಾದ ಸಮಸ್ತವೂ ಯಾವುದೆಂದು ಹೇಳುತ್ತಾರೆಯೋ ಆ ಸೂತ್ರರೂಪವಾದ ಸರ್ವವೂ ಅವ್ಯಾಕೃತ ವಾದ ಆಕಾಶದಲ್ಲಿ ವಸ್ತ್ರದ ಹೊಕ್ಕು ಹಾಸುಗಳಂತೆ ಕಲ್ಪಿತವಾಗಿವೆ.

ಗಾರ್ಗಿ:—ಓ ಯಾಜ್ಞವಲ್ಕ್ಯನೇ! ಆ ಅವ್ಯಾಕೃತಾಕಾಶವು ಯಾವುದರಲ್ಲಿ ವಸ್ತ್ರದ ಹೊಕ್ಕು ಹಾಸುಗಳಂತೆ ಕಲ್ಪಿತವಾಗಿವೆ?

ಯಾಜ್ಞ:—ಓ ಗಾರ್ಗೀ! ನೀನು ಅವ್ಯಾಕೃತಾಕಾಶವು ಯಾವುದರಲ್ಲಿ ಹೊಕ್ಕು ಹಾಸುಗಳಂತೆ ಕಲ್ಪಿತವಾಗಿದೆಯೆಂದು ಕೇಳಿದೆಯೋ ಅದು ನಾಶ ವಾದಕಾರಣ ಅದನ್ನು ಅಕ್ಷರಸ್ವರೂಪವೆಂದು ಬ್ರಹ್ಮವೇತ್ತರು ನುಡಿಯುತ್ತಾರೆ.

ಗಾರ್ಗಿ:—ಓ ಯಾಜ್ಞವಲ್ಕ್ಯನೇ? ಆ ಅಕ್ಷರವೆನ್ನುವುದು ಯಾವುದು?

ಯಾಜ್ಞ:—ಓ ಗಾರ್ಗೀ! ಅಕ್ಷರವು ಸ್ಥೂಲವಾದುದೂ ಅಲ್ಲ. ಸೂಕ್ಷ್ಮವಾದುದೂ ಅಲ್ಲ. ಉದ್ದವಾದುದೂ ಅಲ್ಲ. ಹೀಗೆ ಪದಾರ್ಥಗಳ ಆರು ಧರ್ಮಗಳನ್ನೂ ನಿಷೇಧಿಸಿ ಇರುವುದರಿಂದ ಆ ಅಕ್ಷರವು ದ್ರವ್ಯವಲ್ಲ. ಅದು ನಾಶವನ್ನು ಹೊಂದದ ಅಕ್ಷರಸ್ವರೂಪವು. ಮತ್ತು ಅಕ್ಷರವು ಪದಾರ್ಥಗುಣಗಳಾದ ಸ್ನೇಹವೂ, ಛಾಯೆಯೂ, ತಮಸ್ಸೂ, ವಾಯುವೂ, ಆಕಾಶವೂ ಅಲ್ಲ. ಅದು ಅರಗಿನಂತೆ ವಸ್ತುಗಳಿಗೆ ಅಂಟಿಕೊಳ್ಳುವುದಿಲ್ಲ. ಅದು ರಸವಲ್ಲ ಮತ್ತು ಗಂಧವಲ್ಲ. ಅದಕ್ಕೆ ನೇತ್ರೇಂದ್ರಿಯವೂ, ವಾಗ್ಮನಗಳೂ ಇಲ್ಲ. ಅದಕ್ಕೆ ಪ್ರಕಾಶವೂ, ಪ್ರಾಣವೂ, ಮುಖವೂ, ಪರಿಮಿತಿಯೂ, ರಂಧ್ರವೂ, ಬಾಹ್ಯವೂ ಇಲ್ಲ. ಅಕ್ಷರವು ಯಾವುದನ್ನೂ ತಿನ್ನುವುದಿಲ್ಲ. ಮತ್ತು ಅದನ್ನು ಯಾವುದೂ ತಿನ್ನುವುದಿಲ್ಲ. ಅಕ್ಷರದ ಆಜ್ಞೆಯಿಂದಲೇ ಸೂರ್ಯಚಂದ್ರರು ಆಕಾಶದಲ್ಲಿ, ಆಯಾ ಕಾಲಗಳಲ್ಲಿ ಕ್ರಮತಪ್ಪದೆ ಪ್ರಕಾಶಿಸುತಲಿದಾರೆ. ಮತ್ತು ಭೂಮ್ಯಂತರಿಕ್ಷಗಳು ತಮ್ಮ ಸ್ಥಳಗಳಲ್ಲಿವೆ. ಅಕ್ಷರ ಪರಬ್ರಹ್ಮನ ಆಜ್ಞೆಯಿಂದಲೇ ನಿಮೇಷವೂ, ಮುಹೂರ್ತವೂ, ಅಹೋರಾತ್ರೆಗಳೂ, ಪಕ್ಷಗಳೂ, ಮಾಸಗಳೂ, ಸಂವತ್ಸರಗಳೂ ಕ್ರಮತಪ್ಪದೆ ಉಂಟಾಗುತ್ತಿವೆ. ಹಿಮಾಲಯವೇ ಮೊದಲಾದ ಪರ್ವತಗಳಿಂದ ಪೂರ್ವದಿಕ್ಕಿಗೆ ಹರಿಯುವ ನದಿಗಳು ಪೂರ್ವದಿಕ್ಕಿಗೂ, ಪಶ್ಚಿಮದಿಕ್ಕಿಗೆ ಹರಿಯುವ ನದಿಗಳು ಪಶ್ಚಿಮದಿಕ್ಕಿಗೂ, ಇನ್ನೂ ಆಯಾದಿಕ್ಕುಗಳಲ್ಲಿ ಪ್ರವಹಿಸುವ ನದಿಗಳು ಆಯಾ ದಿಙ್ಮುಖಗಳಾಗಿಯೂ ಅಕ್ಷರ ಪರಬ್ರಹ್ಮನ ಆಜ್ಞೆಯಿಂದಲೇ ಕ್ರಮವಾಗಿ ಹರಿಯುತ್ತಿವೆ. ಪ್ರಮಾಣವನ್ನು ಅರಿತ ಮನುಷ್ಯರು ದಾನಾರ್ಹಗಳಾದ ಸ್ವರ್ಣವೇ ಮೊದಲಾದವುಗಳನ್ನು ಅಕ್ಷರಪರಬ್ರಹ್ಮನ ಆಜ್ಞೆಯಿಂದ ಸ್ತುತಿಸುತ್ತಾರೆ. ದೇವತೆಗಳು ಪುರೋಡಾಶವೇ ಮೊದಲಾದ ಜೀವನ ಪದಾರ್ಥಗಳ ನಿಮಿತ್ತವಾಗಿ ಯಜಮಾನನನ್ನು ಪಿತೃದೇವತೆಗಳ ಮೂಲಕ ಹೋಮವನ್ನು ಅನುಸರಿಸಿ ಹೊಂದುತ್ತಾರೆ. ರಾಜನ ಆಜ್ಞೆಯಿಂದ ರಾಜಕಾರ್ಯಗಳು ಕ್ರಮವಾಗಿ ನಡೆಯುವಂತೆ ಅಕ್ಷರಪರಬ್ರಹ್ಮನ ಆಜ್ಞೆಯಿಂದ ಲೋಕದಲ್ಲಿ ನಡೆಯುವ ಸಕಲಕಾರ್ಯಗಳು ಕ್ರಮಪ್ರಕಾರ ನಡೆಯುತ್ತಿವೆ. ಓ ಗಾರ್ಗೀ! ಯಾವ ಮನುಷ್ಯನು ಈ ಅಕ್ಷರಪರಬ್ರಹ್ಮವನ್ನು ತಿಳಿದುಕೊಳ್ಳದೆ ಈ ಲೋಕದಲ್ಲಿ ಹೋಮವನ್ನು ಮಾಡುತ್ತಾನೆಯೋ ಮತ್ತು ಅನೇಕ ವರ್ಷಗಳು ತಪಸ್ಸನ್ನು ಮಾಡುತ್ತಾನೆಯೋ ಆ ಮನುಷ್ಯನ ಕರ್ಮಫಲವೆಲ್ಲವು ನಾಶವಾಗುತ್ತದೆ. ಯಾವ ಮನುಷ್ಯನು ಈ ಅಕ್ಷರಪರಬ್ರಹ್ಮವನ್ನು ತಿಳಿದುಕೊಳ್ಳದೆ ಮರಣವನ್ನು ಹೊಂದಿ ಈ ಲೋಕದಿಂದ ಹೋಗುತ್ತಾನೆಯೋ ಅವನು ಜನನಮರಣ ರೂಪವಾದ ಸಂಸಾರ ಕಷ್ಟವನ್ನು ಎಡಬಿಡದೆ ಅನುಭವಿಸುತ್ತಾನೆ. ಯಾವ ಮನುಷ್ಯನು ಈ ಅಕ್ಷರಪರಬ್ರಹ್ಮ ಸ್ವರೂಪವನ್ನು ತಿಳಿದುಕೊಂಡು ಮರಣವನ್ನು ಹೊಂದುತ್ತಾನೆಯೋ ಅವನು ಅಕ್ಷರಸ್ವರೂಪಿಯಾದ ಬ್ರಾಹ್ಮಣನಾಗುತ್ತಾನೆ. ಅಂದರೆ ಅಕ್ಷರಪರಬ್ರಹ್ಮನಾಗುತ್ತಾನೆ. ಓ ಗಾರ್ಗೀ!

ಪ್ರಸಿದ್ಧವಾದ ಈ ಅಕ್ಷರಪರಬ್ರಹ್ಮವು ತಾನು ನೋಡುವುದಕ್ಕೆ ವಿಷಯವಲ್ಲದೆ ಇದ್ದರೂ ದೃಕ್ಸ್ವರೂಪವಾದುದೂ, ಮನಸ್ಸಿಗೆ ವಿಷಯವಲ್ಲದೆ ಇದ್ದರೂ ಎಣಿಸಲ್ಪಡುವುದೂ, ಬುದ್ಧಿಗೆ ವಿಷಯವಲ್ಲದೇ ಇದ್ದರೂ ವಿಜ್ಞಾತೃಸ್ವರೂಪವಾದುದೂ ಆಗಿದೆ. ಮತ್ತು ಈ ಅಕ್ಷರಸ್ವರೂಪಕ್ಕಿಂತಲು ಬೇರೆ ದ್ರಷ್ಟನೂ, ಬೇರೆ ಸ್ರೋತನೂ, ಬೇರೆ ವಿಜ್ಞಾತನೂ ಇಲ್ಲ. ಓ ಗಾರ್ಗೀ! ಅಂತಹ ಅಕ್ಷರ ಸ್ವರೂಪದಲ್ಲಿಯೇ ಅವ್ಯಾಕೃತಾಕಾಶವು ವಸ್ತ್ರದ ಹೊಕ್ಕು ಹಾಸುಗಳಂತೆ ಏಕವಾಗಿ ಕಲ್ಪಿತವಾಗಿದೆ. ಯಾಜ್ಞವಲ್ಕ್ಯನು ತನ್ನ ಪ್ರಶ್ನೆಗಳಿಗೆ ಈ ವಿಧವಾಗಿ ಸಮಾಧಾನವನ್ನು ಹೇಳಲು ಬ್ರಹ್ಮವಿದೆಳಾದ ಗಾರ್ಗಿಯು ಸತ್ಯದಲ್ಲಿ ಇಚ್ಛೆಯುಳ್ಳವಳಾದಕಾರಣ ವಿತಂಡವಾದವನ್ನು ಮಾಡದೆ ಆತನು ಪೂರ್ಣಬ್ರಹ್ಮವೇತ್ತನು ಎಂದು ಒಪ್ಪಿಕೊಂಡಳು. ಅನಂತರ ಆಕೆಯು ಆ ಸಭೆಯಲ್ಲಿರುವ ಬ್ರಾಹ್ಮಣರು ಪುನಃ ಯಾಜ್ಞವಲ್ಕ್ಯನನ್ನು ಪ್ರಶ್ನಿಸದೆ ಇರುವಂತೆ ಮಾಡಬೇಕೆಂದು ಎಣಿಸಿ, ಅತ್ಯಂತ ವಿನಯದೊಡನೆ ಆ ಸಭೆಯವರನ್ನು ಕುರಿತು " ಪೂಜ್ಯರಾದ ಬ್ರಾಹ್ಮಣರೇ! ನೀವು ಎಲ್ಲರೂ ಯಾಜ್ಞವಲ್ಕ್ಯನಿಗೆ ನಮಸ್ಕಾರವನ್ನು ಮಾಡಿ ಮುಕ್ತರಾಗುವುದೇ ಉತ್ತಮವು. ನಿಮ್ಮಲ್ಲಿ ಯಾರೂ ಬ್ರಹ್ಮವಾದದಲ್ಲಿ ಯಾಜ್ಞವಲ್ಕ್ಯನನ್ನು ಗೆಲ್ಲಲಾರಿರಿ " ಎಂದು ಹೇಳಿ ಸುಮ್ಮನಾದಳು.

ಅನಂತರ ಶಾಕಲ್ಯನೆಂಬ ಭೂಸುರನು ಮಾತ್ರ ಯಾಜ್ಞವಲ್ಕ್ಯನನ್ನು ಕೆಲವು ಪ್ರಶ್ನೆಗಳನ್ನು ಕೇಳಿ ಆತನಿಂದ ತಕ್ಕ ಪ್ರತ್ಯುತ್ತರವನ್ನು ಪಡೆದನು. ಮಿಕ್ಕವರೆಲ್ಲರು ಗಾರ್ಗಿಯ ವಚನಗಳು ಸತ್ಯವು ಎಂದು ತಿಳಿದುಕೊಂಡು ಮೌನವಾಗಿದ್ದರು. ಯಾಜ್ಞವಲ್ಕ್ಯನು ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳಿದನು. ಆದರೆ ಅವರು ಯಾರೂ ಉತ್ತರವನ್ನು ಹೇಳದುದರಿಂದ ಆತನು ವಿಜಯವನ್ನು ಪಡೆದು ಮನೆಗೆ ಹೊರಟನು.

ಈ ಚರಿತ್ರೆಯಲ್ಲಿರುವ ವಿಷಯಗಳು ಶುಕ್ಲಯಜುರ್ವೇದಕ್ಕೆ ಸೇರಿದ ಬೃಹದಾರಣ್ಯಕೋಪನಿಷತ್ತಿನಲ್ಲಿ ಇವೆ.

೫ಡ.

ಈಕೆಯು ವೇದಕಾಲದಲ್ಲಿ ನಹುಷರಾಜನಿಗೆ ಧರ್ಮೋಪದೇಶಕಳಾಗಿ ಇದ್ದಳು. ಈ ವಿದುಷಿಯು ಧರ್ಮಜ್ಞಮನುವಿನ ಪುತ್ರಿಯು. ರಾಜನಿಗೆ ಧರ್ಮವನ್ನು ಉಪದೇಶಿಸುತ್ತಿದ್ದುದರಿಂದ ಈಕೆಯು ಆಕಾಲದಲ್ಲಿ ಎಲ್ಲರಿಗಿಂತಲು ವಿಶೇಷ ಪಾಂಡಿತ್ಯವನ್ನುಳ್ಳವಳಾಗಿ ಇದ್ದಳು ಎಂದು ನಾವು ತಿಳಿದುಕೊಳ್ಳಬಹುದು. ಋಗ್ವೇದದ ಪ್ರಥಮಾಷ್ಟಕದಲ್ಲಿ ದ್ವಿತೀಯಾಧ್ಯಾಯದ ಮುವ್ವತ್ತುನಾಲ್ಕನೆಯ ವರ್ಗಾದಿಯಲ್ಲಿ ಈಕೆಯನ್ನು ಕುರಿತು,

'ಓ ಅಗ್ನಿಹೋತ್ರನೇ! ಪ್ರಥಮದಲ್ಲಿ ದೇವತೆಗಳು ನಹುಷರಾಜನಿಗೆ ನಿನ್ನನ್ನು ಸೇನಾನಾಯಕನನ್ನಾಗಿಯೂ, ಮನುವಿನ ಪುತ್ರಿಯಾದ ಇಡೆಯನ್ನು ಧರ್ಮೋಪದೇಶಕಳನ್ನಾಗಿಯೂ ನಿಯಮಿಸಿದರು. ಆಗ ಅಂಗಿರಸ ವಂಶದಲ್ಲಿ ಮಗನು ಹುಟ್ಟಿದ ಸಮಯದಲ್ಲೆಲ್ಲ ನೀನು ಅಂಗಿರಸರಿಗೆ ತಂದೆಯಾದುದರಿಂದ ನೀನೇ ಪುತ್ರನಾಗಿ ಜನ್ಮಿಸಿದೆ' ಎಂದು ಬರೆದಿದೆ. ಈ ವಾಕ್ಯಗಳಿಂದ ವೇದಕಾಲದಲ್ಲಿ ಪುರುಷರಂತೆಯೇ ಸ್ತ್ರೀಯರು ಸಹ ಧರ್ಮೋಪದೇಶವನ್ನು ಮಾಡುವ ಅಧಿಕಾರವನ್ನು ಪಡೆದಿದ್ದರೆಂದು ತಿಳಿಯಬರುತ್ತದೆ. ಈಗಿನ ನಮ್ಮಸ್ಥಿತಿಯು ಇರುವ ವಿಧವನ್ನೂ ಆಕಾಲದ ಮಹಿಳೆಯರು ಇದ್ದ ಸ್ಥಿತಿಯನ್ನೂ ಆಲೋಚಿಸಿ ನೋಡಿದರೆ ಆಕಾಲದಲ್ಲಿ ಭಾರತ ರಮಣಿಯರು ಇಷ್ಟು ಔನ್ನತ್ಯ ದೆಶೆಯಲ್ಲಿ ಇದ್ದರೇ? ಎಂದು ನಮಗೆ ಅತ್ಯಂತಾಶ್ಚರ್ಯವು ಉಂಟಾಗುವುದು.

ವಿಶ್ಪಲ.

ಈ ವೀರಾಗ್ರಗಣ್ಯಳು ಭೇಲನ ಧರ್ಮಪತ್ನಿಯು. ಈಕೆಯ ಜೀವಿತವನ್ನು ಕುರಿತು ವೇದದಲ್ಲಿ ಹೆಚ್ಚಾಗಿ ಬರೆದಿಲ್ಲ. ಈಕೆಯು ಯುದ್ಧಮಾಡುತ್ತಿರಲು ಶತ್ರುಗಳು ಈಕೆಯ ಕಾಲನ್ನು ಖಂಡಿಸಿದರೆಂದು ವೇದದಿಂದ ತಿಳಿಯಬರುತ್ತದೆ. ಋಗ್ವೇದದ ಪ್ರಥಮಾಷ್ಟಕದಲ್ಲಿ ೧೩ನೆಯ ಋಕ್ಕಿನಲ್ಲಿ ಈ ವಿಷಯವನ್ನು ಕುರಿತು,

"ಓ ಅಶ್ವಿನೀದೇವತೆಗಳಿರಾ! ನೀವು ಪ್ರಾಚೀನನಾದ ಶಯನನೆಂಬ ಋಷಿಗೋಸ್ಕರ ಆತನ ಕರುಹಾಕದ ಹಸುವು, ಕರುವನ್ನುಹಾಕಿ ಯಾವಾಗಲೂ ಹೆಚ್ಚಾದ ಹಾಲನ್ನು ಕೊಡುತ್ತಿರುವಂತೆ ಮಾಡಿದಿರಿ. ನಾಯಿಯು ಹಿಡಿದು ಕೊಂಡ ಹಕ್ಕಿಯನ್ನು ಅದರ ಬಾಯಿಯಿಂದ ಬಿಡಿಸಿದಿರಿ. ಹಾಗೆಯೇ ಅಗಸ್ತ್ಯನನ್ನು ಪುರೋಹಿತನನ್ನಾಗಿ ಮಾಡಿಕೊಂಡಿರುವ ಭೇಲನ ಪತ್ನಿಯಾದ ವಿಶ್ವಲೆಯ ಕಾಲನ್ನು ಯುದ್ಧದಲ್ಲಿ ಶತ್ರುಗಳು ಕಡೆಯಲು, ಕಬ್ಬಿಣದಕಾಲನ್ನು ಸೇರಿಸಿದಿರಿ!" ಎಂದು ಬರೆದಿದೆ.

ದೇವಹೂತಿ.

——:o:——

ಈಕೆಯ ತಂದೆಯು ಸ್ವಾಯಂಭುವಮನುವು. ತಾಯಿಯ ಹೆಸರು ಶತರೂಪ. ಪ್ರಸಿದ್ಧರಾದ ಉತ್ತಾನಪಾದ, ಪ್ರಿಯವ್ರತರೆಂಬ ಭೂಮಿಪಾಶರು ಈಕೆಯ ಸಹೋದರರು. ವಿದ್ಯಾರ್ಜನೆಯಲ್ಲಿ ಈಕೆಗೆ ಇದ್ದ ಅನುರಾಗವು ಅತ್ಯಂತ ಶ್ಲಾಘನೀಯವಾದುದು.

ರಾಜಕನ್ಯೆಯಾದರೂ ಜ್ಞಾನಾರ್ಜನಾನಿರತಳಾದಕಾರಣ ದೇವಹೂತಿಯು ಶುಷ್ಕದರಿದ್ರನಾದ ಕರ್ದಮಋಷಿಯನ್ನು ವರಿಸಿದಳು. ಆಕಾಲದಲ್ಲಿ ಕರ್ದಮನು ಶ್ರೇಷ್ಠನಾದ ವಿದ್ವಾಂಸನಾಗಿದ್ದನು. ಆತನು ಬ್ರಹ್ಮಚರ್ಯಾಶ್ರಮವನ್ನುಕಳೆದು ಅನನ್ಯಸಾಮಾನ್ಯಗುಣವತಿಯಾದ ದೇವಹೂತಿಯನ್ನು ವಿವಾಹ ಮಾಡಿಕೊಂಡು ಧನ್ಯನಾದನು. ದೇವಹೂತಿಯು ಮಹದೈಶ್ವರ್ಯಯುತವಾದ ಪಿತೃಗೃಹವನ್ನು ಬಿಟ್ಟು ಪತಿಯೊಡನೆ ತಪೋವನಕ್ಕೆ ಹೋದಳು. ದಿನಕ್ರಮದಲ್ಲಿ ದೇವಹೂತಿಗೆ ವಿದ್ಯಾರ್ಜನಾಕಾಂಕ್ಷೆಯು ಅಭಿವೃದ್ಧಿಯನ್ನು ಹೊಂದುತಲಿದ್ದುದರಿಂದ ಕರ್ದಮನೂ ಪರಮೋತ್ಸಾಹದೊಡನೆ ಆಕೆಗೆ ವಿದ್ಯಾದಾನವನ್ನು ಮಾಡುತ್ತಿದ್ದನು. ಈಕೆಯು ಬ್ರಹ್ಮಚಾರಿಗಳಂತೆ ತರುಚ್ಛಾಯೆಯಲ್ಲಿ ಪತಿಪಾದ ಪದ್ಮವನ್ನಾಶ್ರಯಿಸಿ, ಏಕಾಗ್ರಚಿತ್ತದೊಡನೆ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಳು. ಜ್ಞಾನವು ಅಭಿವೃದ್ಧಿಯಾದಹಾಗೆಲ್ಲ ಈಕೆಗೆ ಬ್ರಹ್ಮಾಂಡದಲ್ಲಿರುವ ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷೆಯುಂಟಾಗುತ್ತಿತ್ತು. ಚಿಂತಾಶಾಲಿನಿಯಾದ ದೇವಹೂತಿಯು ಪ್ರಾಣವನ್ನೇ ಪಣವಾಗಿಟ್ಟು ಅವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಳು.

ದೇವಹೂತಿಗೆ ಒಂಭತ್ತುಜನ ಪುತ್ರಿಯರೂ, ಒಬ್ಬ ಪುತ್ರನೂ ಜನಿಸಿದರು. ಪುತ್ರಿಯರಲ್ಲಿ ಅನಸೂಯೆಯೂ, ಅರುಂಧತಿಯೂ ವಿಶೇಷ ಪ್ರಸಿದ್ಧಿಯನ್ನು ಪಡೆದವರು. ಅರುಂಧತೀದೇವಿಯು ವಸಿಷ್ಠಮಹಾಋಷಿಯ ಪತ್ನಿಯು. ಈಕೆಯ ಪಾತಿವ್ರತ್ಯವು ಜಗತ್ತಿನಲ್ಲಿ ಅತುಲನೀಯವಾದುದಲ್ಲವೇ? ಸ್ತ್ರೀಯರೆಲ್ಲರು ಈಕೆಯಂತೆ ಪತಿವ್ರತೆಯರಾಗಬೇಕೆಂಬ ಉದ್ದೇಶದಿಂದಲೇ "ಅರುಂಧತೀದೇವೀ! ನಾನು ನಿನ್ನಂತೆಯೇ ಪತಿಯಿಂದ ಪ್ರೇಮಿಸಲ್ಪಡಬೇಕೆಂಬುವುದೇ ನನ್ನ ಪ್ರಾರ್ಥನೆಯು" ಎಂಬ ಅಭಿಪ್ರಾಯವುಳ್ಳ ಮಂತ್ರವನ್ನು ವಿವಾಹಕಾಲದಲ್ಲಿ ವಧುವಿನಿಂದ ಹೇಳಿಸುತ್ತಾರೆ.

ಅನಸೂಯೆಯು ಅತ್ರಿಮುನಿಯನ್ನು ವಿವಾಹಮಾಡಿಕೊಂಡಳು. ಈಕೆಯು ಸಹ ಅರುಂಧತಿಯಂತೆಯೇ ಸುಗುಣವತಿಯಾಗಿ ಇದ್ದಳು. ಆದುದರಿಂದಲೇ ಈ ಅಕ್ಕತಂಗಿಯರ ಪವಿತ್ರನಾಮಗಳು ಭಾರತೀಯರಿಗೆ ಪ್ರಾತಃ ಸ್ಮರಣೀಯಗಳಾಗಿ ಇವೆ.

ಸಾಂಖ್ಯದರ್ಶನವನ್ನು ರಚಿಸಿದ ಕಪಿಲ ಋಷಿಯು ಈಕೆಯ ಪುತ್ರನು. ಭರತಖಂಡದಲ್ಲಿ ಜ್ಞಾನಜ್ಯೋತಿಯ ಸಹಾಯದಿಂದ ಗಾಢಾಂಧಕಾರ ಬಂಧುರವಾದ ಮಾನವಹೃದಯವನ್ನು ಸೂಕ್ಷ್ಮದೃಷ್ಟಿಯೊಡನೆ ಪರಿಶೀಲಿಸಿ, ಮನುಷ್ಯನು ದುಃಖದೂರನಾಗಿ ಮುಕ್ತಿಯನ್ನು ಹೊಂದುವುದಕ್ಕೆ ಮಾರ್ಗವನ್ನು ಮೊದಲು ಕಪಿಲಋಷಿಯು ಕಂಡುಹಿಡಿದನು. ಆದರೆ ಕಪಿಲನನ್ನು ಸುಶಿಕ್ಷಾಸಂಪನ್ನನ್ನಾಗಿ ಮಾಡಿ, ಆತನನ್ನು ಮಾನವಹೃದಯಾನ್ವೇಷಣಕ್ಕೆ ಪ್ರೋತ್ಸಾಹಗೊಳಿಸಿದವಳು ವಿದುಷೀಮಣಿಯಾದ ದೇವಹೂತಿಯು. ದೇವಹೂತಿಯ ಆರಾಧನೆಯಲ್ಲಿ ಲಭ್ಯವಾದ ದರ್ಶನಶಾಸ್ತ್ರವೆಂಬ ಅಮೂಲ್ಯಬೀಜವು ಆಕೆಯ ಪುತ್ರನಾದ ಕಪಿಲನ ಸಹಾಯದಿಂದ ಮಹಾವೃಕ್ಷವಾಗಿ, ಇಂದಿಗೆ ಪ್ರಪಂಚವನ್ನೆಲ್ಲ ಆವರಿಸಿಕೊಂಡು ಫಲಪುಷ್ಪಶೋಭಿತವಾಗಿ ಪ್ರಕಾಶಿಸುತ್ತಿದೆ.

ಮದಾಲಸೆ.

——:o:——

ಈಕೆಯು ಗಂಧರ್ವಕನ್ಯೆಯು. ಈಕೆಯು ಋತುಧ್ವಜನೆಂಬ ರಾಜನನ್ನು ವಿವಾಹಮಾಡಿಕೊಂಡಳು. ಈಕೆಯು ವಿದ್ಯಾವತಿಯಾಗಿಯೂ, ಭಕ್ತಳಾಗಿಯೂ ಇದ್ದಳು. ಈಕೆಗೆ ವಿಕ್ರಾಂತ, ಸುಬಾಹು, ಶತ್ರುಮರ್ದನ, ಅಲರ್ಕ ಎಂಬ ನಾಲ್ವರು

ಪುತ್ರರು ಉಂಟಾದರು. ಮದಾಲಸೆಯು ಪುತ್ರರಿಗೆ ಸ್ವಯಮಾಗಿ ವಿದ್ಯೆಯನ್ನು ಕಲಿಸಿದಳು. ಮದಾಲಸೆಯ ಉಪದೇಶಾನುಸಾರವಾಗಿ ವಿಕ್ರಾಂತ, ಸುಬಾಹು, ಶತ್ರುಮರ್ದನರೆಂಬ ಮುವ್ವರು ಪುತ್ರರೂ ವಿರಾಗಿಗಳಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಈಕೆಯು ಪುತ್ರರಿಗೆ ಬೋಧಿಸುತ್ತಿದ್ದ ವಿಧವನ್ನು ಕೆಳಗೆ ಬರೆದಿರುವ ಕಥೆಯಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಒಂದುದಿವಸ ಈಕೆಯ ಜ್ಯೇಷ್ಠಪುತ್ರನಾದ ವಿಕ್ರಾಂತನು ಬೇರೊಬ್ಬ ಬಾಲಕನಿಂದ ಏಟುಗಳನ್ನು ತಿಂದು ಅಳುತಳುತ ತಾಯಿಯಬಳಿಗೆ ಬಂದು "ಅಮ್ಮಾ! ನನ್ನನ್ನು ಒಬ್ಬ ಬಾಲಕನು ಹೊಡೆದನು. ಅವನು ಹೀನಕುಲಜನು. ನಾನು ರಾಜಪುತ್ರನು. ಮತ್ತು ಸನ್ಮಾನಯೋಗ್ಯನು. ಆದಕಾರಣ ಅವನನ್ನು ತಕ್ಕಹಾಗೆ ಶಿಕ್ಷಿಸು." ಎಂದನು. ಆ ಮಾತುಗಳನ್ನುಕೇಳಿ ಮದಾಲಸೆಯು "ವತ್ಸಾ! ನೀನು ಪರಿಶುದ್ಧಾತ್ಮನು. ಆತ್ಮಸ್ವರೂಪವು ಎಂದಿಗೂ ನಾಮದಿಂದ ಕಲುಷಿತವಾಗಲಾರದು. ವಿಕ್ರಾಂತನೆಂಬ ನಿನ್ನ ಹೆಸರಾಗಲಿ, ರಾಜಕುಮಾರನೆಂಬ ಗೌರವವಾಗಲಿ ಯಥಾರ್ಥವಾದವುಗಳಲ್ಲ. ಅವು ಕಲ್ಪಿತವಾದವುಗಳು. ನಮಗೆ ಕಂಡುಬರುತ್ತಿರುವ ನಿನ್ನ ಶರೀರವು ಪಂಚಭೂತಮಯವಾದುದು. ಆದರೆ ನೀನುಮಾತ್ರ ಶರೀರವಲ್ಲ. ಆದಕಾರಣ ದೇಹವಿಕಾರಕ್ಕಾಗಿ ಏಕೆ ರೋದಿಸುವೆ?" ಎಂದು ಹೇಳಿ ಪುತ್ರನನ್ನು ಸಮಾಧಾನ ಗೊಳಿಸಿದಳು.

ಪತ್ನಿಯ ಉಪದೇಶದಿಂದ ಮುವ್ವರು ಪುತ್ರರೂ ಸನ್ಯಸಿಸಿದುದನ್ನುನೋಡಿ ಋತುಧ್ವಜನು ಚಿಂತಾಕುಲಚಿತ್ತನಾಗಿ, ಮದಾಲಸೆಯನ್ನುನೋಡಿ "ಮದಾಲಸಾ! ನೀನು ಮುವ್ವರು ಪುತ್ರರನ್ನೂ ವನವಾಸಕ್ಕೆ ಕಳುಹಿಸಿದೆ. ನಾಲ್ಕನೆಯವನನ್ನಾದರೂ ಮನೆಯಲ್ಲಿ ಇರುವಂತೆ ಮಾಡು. ಅವನು ಸಹ ಸನ್ಯಸಿಸಿದರೆ ರಾಜ್ಯವನ್ನು ಶಾಸಿಸುವರಾರು?" ಎಂದನು.

ಪತಿಯ ಅಭೀಷ್ಟಾನುಸಾರವಾಗಿ ಆಗಿನಿಂದಲೂ ಮದಾಲಸೆಯು ಆಲರ್ಕನಿಗೆ ರಾಜನೀತಿಯನ್ನು ಉಪದೇಶಮಾಡುತ್ತಿದ್ದಳು. ರಾಜನೀತಿ ವಿಶಾರದೆಯಾದ ಮದಾಲಸೆಯು ತನ್ನ ಪುತ್ರನಿಗೆ ಮಾಡಿದ ಉಪದೇಶವನ್ನು ಓದಿದರೆ ಬಹು ಆಶ್ಚರ್ಯವು ಉಂಟಾಗುವುದಂತೆ.

ಮಾರ್ಕಂಡೇಯ ಪುರಾಣದಲ್ಲಿ ಮದಾಲಸೆಯ ಕಥೆಯು ಬರೆದಿದೆ. ಅದನ್ನು ಕೆಳಗೆ ಉದಹರಿಸುತ್ತೇನೆ.

ಗಾಲವಋಷಿಗೆ ದಾನವರಕ್ರೂರಕೃತ್ಯದಿಂದ ತಪೋಭಂಗವಾಗುತ್ತಿತ್ತು. ಆ ವಿಷಯವನ್ನುಕೇಳಿ ಶತ್ರುಜಿತ್ತುಮಹಾರಾಜನು ತನ್ನ ಪುತ್ರನಾದ ಋತುಧ್ವಜನನ್ನು ಋಷಿಯ ತಪೋರಕ್ಷಣಾರ್ಥವಾಗಿ ಆತನ ಆಶ್ರಮಕ್ಕೆ ಕಳುಹಿಸಿದನು.

ಒಂದುದಿವಸ ಗಾಲವನು ಈಶ್ವರಾರಾಧನೆಯನ್ನು ಮಾಡುತ್ತಿರಲು, ಪಾತಾಳಕೇತು ಎಂಬ ದಾನವನು ಸೂಕರರೂಪದೊಡನೆ ಮುನಿಯ ತಪಸ್ಸನ್ನು ಕೆಡಿಸುವುದಕ್ಕಾಗಿ ಆಶ್ರಮಕ್ಕೆ ಬಂದನು. ಆಗ ಋತುಧ್ವಜನು ಆ ದಾನವನ ಮೇಲೆ ಬಾಣಗಳನ್ನು ಬಿಡಲು, ಅವನು ಆ ಬಾಣಘಾತವನ್ನು ತಡೆಯಲಾರದೆ ಓಡಲಾರಂಭಿಸಿದನು. ಋತುಧ್ವಜನು ಕುವಲಯವೆಂಬ ತನ್ನ ಅಶ್ವದಮೇಲೆ ಹತ್ತಿ ಆ ಸೂಕರರೂಪನಾದ ದಾನವನನ್ನು ಹಿಂಬಾಲಿಸಿದನು. ಆ ದೈತ್ಯನು ಸಹಸ್ರ ಯೋಜನಗಳು ಓಡಿ, ಅನಂತರ ಒಂದು ಭೂಬಿಲದಲ್ಲಿ ಪ್ರವೇಶಿಸಿ ಕಣ್ಣಿಗೆ ಕಾಣದೆ ಹೋದನು.

ಆಗ ಋತುಧ್ವಜನು ಆ ಬಿಲವನ್ನುಹೊಕ್ಕು ಅವನನ್ನು ಹುಡುಕಲಾರಂಭಿಸಿದನು. ಆ ಬಿಲವು ಅಂಧಕಾರ · ಬಂಧುರವಾಗಿತ್ತು. ಆದಕಾರಣ ಸ್ವಲ್ಪ ಹೊತ್ತಿನವರೆಗೂ ಋತುಧ್ವಜನಿಗೆ ಏನೂ ಕಾಣಬರಲಿಲ್ಲ. ಹಾಗೆಯೇ ಸ್ವಲ್ಪ ದೂರ ನಡೆದಮೇಲೆ ಬೆಳಕು ಕಂಡಿತು. ಆತನು ಆ ಬೆಳಕಿನಕಡೆಗೆ ನೋಡಲು ಅಲ್ಲಿ ಅಮರಾವತಿಗಿಂತಲೂ ಉತ್ತಮವಾದ ಒಂದು ಮಹಾನಗರವು ಕಂಡು ಬಂದಿತು. ಋತುಧ್ವಜನು ಆ ಪಟ್ಟಣದಲ್ಲಿ ಆ ದೈತ್ಯನನ್ನು ಹುಡುಕುತ್ತ, ಒಂದು ಮಂದಿರವನ್ನು ಪ್ರವೇಶಿಸಿ, ಅಲ್ಲಿ ಸಖೀಜನ ಪರಿವೇಷ್ಟಿತಳಾದ ಒಬ್ಬ ಯುವತೀ ರತ್ನವನ್ನು ನೋಡಿದನು. ಆದರೆ ಆ ಯುವತಿಯು ಋತುಧ್ವಜನನ್ನು ನೋಡಿದ ಕೂಡಲೆ ಮೂರ್ಛಿತೆಯಾದಳು.

ಸಖಿಯರ ಶೈತ್ಯೋಪಚಾರದಿಂದ ಆಕೆಯು ಸ್ವಲ್ಪಹೊತ್ತಿಗೆ ಮೂರ್ಛೆಯಿಂದ ಎಚ್ಚತ್ತಳು. ಅನಂತರ ಋತುಧ್ವಜನು ಅವರನ್ನುನೋಡಿ 'ನೀವುಯಾರು' ಎಂದು ಕೇಳಲು, ಅವರಲ್ಲಿ ಒಬ್ಬ ವನಿತೆಯು "ಈ ಯುವತಿಯು ಗಂಧರ್ವ ರಾಜನಾದ ವಿಶ್ವಾವಸುವಿನ ಮಗಳು. ಈಕೆಯ ಹೆಸರು ಮದಾಲಸೆ. ಒಂದು ದಿವಸ ಈಕೆಯು ಉದ್ಯಾನವನದಲ್ಲಿ ವಿಹರಿಸುತ್ತಿರಲು ವಜ್ರಕೇತು ಎಂಬ ದಾನವ ಪುತ್ರನಾದ ಪಾತಾಳಕೇತುವು ಈಕೆಯನ್ನು ವಿವಾಹಮಾಡಿಕೊಳ್ಳಲೆಣಿಸಿ, ತಮೋ ಮಯವಾದ ಮಾಯೆಯನ್ನು ಕಲ್ಪಿಸಿ ಈಕೆಯನ್ನು ಎತ್ತಿಕೊಂಡುಬಂದನು. ಅಂದಿನಿಂದ ಈಕೆಯು ಇಲ್ಲಿ ನಿರ್ಬಂಧದಲ್ಲಿ ಇದಾಳೆ." ಎಂದು ನುಡಿದು, "ನೀನು ಯಾರು? ಈ ಪಾತಾಳಪುರಿಗೆ ಏಕೆಬಂದೆ?" ಎಂದು ಕೇಳಿದಳು. ಆಗ ಋತುಧ್ವಜನು ತಾನು ಬಂದ ಕಾರ್ಯವನ್ನು ಹೇಳಿದನು. ಆಮೇಲೆ ಆಕೆಯು ಪುನಃ "ರಾಜಕುಮಾರಾ! ನೀನು ನಮ್ಮ ಸಖಿಯನ್ನು ಈ ದಾನವನ ನಿರ್ಬಂಧದಿಂದ ಉದ್ಧರಿಸಿ ಕಾಪಾಡುವನಾಗು. ನಮ್ಮ ಸಖಿಯು ನಿನ್ನಲ್ಲಿ ಬದ್ಧಾನುರಾಗಿಯಾಗಿ ಇದಾಳೆ. ಆದಕಾರಣ ನೀನು ಈಕೆಯ ಪಾಣಿಗ್ರಹಣವನ್ನು ಮಾಡು. ಗಂಧರ್ವ ಕನ್ಯೆಯಾದ ಮದಾಲಸೆಯು ನಿನಗೆ ಅರ್ಹಳಾದ ಪತ್ನಿಯು. ಮತ್ತು ನೀನು ನಮ್ಮ ಸಖಿಗೆ ಅನುರೂಪನಾದ ಪತಿಯು" ಎಂದು ಹೇಳಿದಳು.

ಆಕೆಯ ಮಾತುಗಳಿಗೆ ಸಮ್ಮತಿಸಿ, ಋತುಧ್ವಜನು ಮದಾಲಸೆಯನ್ನು ವಿವಾಹಮಾಡಿಕೊಂಡು, ಪಾತಾಳಪುರಿಯಿಂದ ಪತ್ನೀಸಹಿತನಾಗಿ ಹೊರಟನು. ಆದರೆ ಮಾರ್ಗದಲ್ಲಿ ದೈತ್ಯರು ಆತನನ್ನು ಸುತ್ತಿಕೊಂಡರು. ಆಗ ಈತನಿಗೂ, ದೈತ್ಯರಿಗೂ ಘೋರಯುದ್ಧವು ನಡೆಯಿತು. ಋತುಧ್ವಜನು ಒಬ್ಬನೇ ಆದರೂ ಅವರೆಲ್ಲರನ್ನೂ ಸಂಹರಿಸಿ, ಭಾರ್ಯಾಸಹಿತನಾಗಿ ರಾಜಧಾನಿಯನ್ನು ಪ್ರವೇಶಿಸಿದನು. ಪುತ್ರನನ್ನೂ, ಪುತ್ರವಧುವನ್ನೂ ನೋಡಿ ರಾಜದಂಪತಿಗಳು ಬಹು ಸಂತೋಷಿಸಿ ಆಶೀರ್ವಾದವನ್ನು ಮಾಡಿದರು. ಪ್ರಜೆಗಳು ವಿಶೇಷ ಆನಂದಿತರಾದರು.

ವಿವಾಹವಾದ ಕೆಲವುಕಾಲಕ್ಕೆ ಋತುಧ್ವಜನು ತಂದೆಯ ಅನುಜ್ಞೆಯಿಂದ ಋಷಿಗಳ ತಪೋರಕ್ಷಣಾರ್ಥವಾಗಿ ಗೃಹದಿಂದಹೊರಟು, ಅನೇಕ ಆಶ್ರಮಗಳಿಗೆ ಹೋಗಿ ಅಲ್ಲಿನ ಮುನಿವರ್ಯರ ಯೋಗಕ್ಷೇಮಂಗಳನ್ನು ವಿಚಾರಿಸಿಕೊಳ್ಳುತ್ತ ಹಾಗೆಯೇ ಒಂದುದಿವಸ ಯಮುನಾತೀರದಲ್ಲಿದ್ದ ಒಂದು ಆಶ್ರಮವನ್ನು ಪ್ರವೇಶಿಸಿದನು. ಅಲ್ಲಿ ಪಾತಾಳಕೇತುವಿನ ತಮ್ಮನಾದ ತಾಳಕೇತುವು ತನ್ನ ಮಾಯಾಬಲದಿಂದ ಮುನಿರೂಪವನ್ನು ಧರಿಸಿ ವಾಸಮಾಡುತ್ತಿದ್ದನು. ಆವನು ರಾಜಕುಮಾರನನ್ನು ನೋಡಿದಕೂಡಲೆ, ಆತನು ತನ್ನ ಸೋದರನ ವೈರಿಯಾದ ಋತುಧ್ವಜನು ಎಂದು ತಿಳಿದುಕೊಂಡನು. ಅನಂತರ ಆ ದೈತ್ಯನು ಪೂರ್ವವೈರವನ್ನು ತೀರಿಸಿಕೊಳ್ಳುವುದಕ್ಕೆ ಇದೇ ತಕ್ಕಸಮಯವು ಎಂದು ಎಣಿಸಿ "ಯುವರಾಜನೇ! ನೀನು ಮುನಿಗಳ ತಪೋರಕ್ಷಣೆಯನ್ನು ಮಾಡುವುದಕ್ಕಾಗಿ ಇಲ್ಲಿಗೆ ಬಂದಿರುವೆಯಷ್ಟೆ. ನಾನು ಒಂದು ಯಜ್ಞವನ್ನು ಮಾಡಲು ಸಂಕಲ್ಪಿಸಿದೇನೆ. ಆದರೆ ಈಕ್ಷಿಣೆಯನ್ನು ಕೊಡುವುದಕ್ಕೆ ನನ್ನಲ್ಲಿ ದ್ರವ್ಯವಿಲ್ಲದಕಾರಣ ನನ್ನ ಅಭೀಷ್ಟವು ನೆರವೇರಲಿಲ್ಲ. ನಿನ್ನ ಕಂಠದಲ್ಲಿರುವ ರತ್ನಹಾರವನ್ನು ನನಗೆ ಕೊಟ್ಟರೆ ನನ್ನ ಸಂಕಲ್ಪವು ನೆರವೇರುವುದು." ಎಂದು ಹೇಳಿದನು. ಈ ವಾಕ್ಯಗಳನ್ನು ಕೇಳಿದಕೂಡಲೆ ರಾಜಕುಮಾರನು ತನ್ನ ಕಂಠದಲ್ಲಿದ್ದ ಹಾರವನ್ನು ತೆಗೆದುಕೊಟ್ಟನು. ತಾಳಕೇತುವು ಹಾರವನ್ನು ತೆಗೆದುಕೊಂಡು "ಯುವರಾಜನೇ! ನಾನು ಈಗ ಯಮುನಾನದೀಜಲದಲ್ಲಿ ಮುಣುಗಿ, ವರುಣದೇವನನ್ನು ಆರಾಧಿಸುವೆನು. ನಾನು ಪುನಃ ಬರುವವರೆಗೂ ನನ್ನ ಆಶ್ರಮವನ್ನು ನೀನು ರಕ್ಷಿಸುತ್ತಿರು." ಎಂದು ನುಡಿದು ಅಲ್ಲಿಂದ ಹೊರಟನು. ಋತುಧ್ವಜನು ಆ ರಾಕ್ಷಸನ ವಾಕ್ಯಗಳನ್ನುನಂಬಿ ಅಲ್ಲಿಯೇ ಇದ್ದು ಆಶ್ರಮವನ್ನು ಕಾಪಾಡುತ್ತಿದ್ದನು. ತಾಳಕೇತುವು ಋತುಧ್ವಜನ ತಂದೆಯಾದ ಶತ್ರುಜಿತ್ತು ಮಹಾರಾಜನ ಬಳಿಗೆ ಹೋಗಿ, ಆ ಹಾರವನ್ನು ತೋರಿಸಿ "ದಾನವರು ಯುದ್ಧದಲ್ಲಿ ನಿಮ್ಮ ಪುತ್ರನನ್ನು ಸಂಹರಿಸಿದರು" ಎಂದು ಹೇಳಿದನು. ಈ ಘೋರ ವರ್ತಮಾನವನ್ನು ಕೇಳಿದ

ಕೂಡಲೆ ಮದಾಲಸೆಯು ಮೂರ್ಛಿತೆಯಾಗಿ ಹಾಗೆಯೇ ಪ್ರಾಣವನ್ನು ಬಿಟ್ಟಳು. ಇದೆಲ್ಲವೇ ನಿಜವಾದ ಸಹಗಮನವು?

ಮದಾಲಸೆಯ ಮರಣವೃತ್ತಾಂತವನ್ನು ಕೇಳಿ, ತಾಳಕೇತುವು ಅಲ್ಲಿಂದ ಹೊರಟು ಯಮುನಾನದೀತೀರದಲ್ಲಿರುವ ತನ್ನ ಆಶ್ರಮಕ್ಕೆಬಂದು ಋತುಧ್ವಜನೊಡನೆ "ಯುವರಾಜನೇ! ನಿನ್ನ ಅನುಗ್ರಹದಿಂದ ಯಜ್ಞವು ಪೂರ್ತಿಯಾಯಿತು. ಇನ್ನು ನೀನು ಹೊರಡಬಹುದು. ನೀನು ನನ್ನ ಮನೋರಥವನ್ನು ಸಫಲಗೊಳಿಸಿದೆಯಾದಕಾರಣ ನಿನಗೆ ಮಂಗಳವುಂಟಾಗಲಿ" ಎಂದು ಹೇಳಿದನು.

ಅಲ್ಲಿಂದ ಋತುಧ್ವಜನು ರಾಜಧಾನಿಗೆಬಂದು ನಡೆದ ವಿಷಯವನ್ನು ಕೇಳಿ ಅತ್ಯಂತ ಚಿಂತಾಕ್ರಾಂತನಾಗಿ "ಮದಾಲಸೆಯು ಇಹಲೋಕವನ್ನು ಬಿಟ್ಟಳು. ನನ್ನಮರಣ ವೃತ್ತಾಂತವನ್ನು ಕೇಳಿದಕೂಡಲೆ ಆಕೆಯು ದೇಹವನ್ನು ಪರಿತ್ಯಜಿಸಿದಳು. ಆಕೆಯು ಮೃತಳಾದರೂ ನಾನು ಜೀವಿಸಿ ಇದೇನೆಯಲ್ಲವೇ?" ಎಂದು ಅಹರ್ನಿಶವೂ ರೋದಿಸುತ್ತಿದ್ದನು.

ಹೀಗಿರಲು, ಋತುಧ್ವಜನ ಸ್ನೇಹಿತರಾದ ನಾಗರಾಜಪುತ್ರರು, ತಮ್ಮ ಮಿತ್ರನ ದುಃಖವನ್ನು ನೋಡಿ ತಾವೂ ವಿಶೇಷ ಪರಿತಪ್ತಹೃದಯರಾಗಿ, ತಮ್ಮ ತಂದೆಯಾದ ನಾಗರಾಜನಬಳಿಗೆ ಹೋಗಿ "ಎಲೈ ತಂದೆಯೇ! ನಮ್ಮ ಮಿತ್ರನ ಪತ್ನಿಯಾದ ಮದಾಲಸೆಯನ್ನು ಬದುಕಿಸಿ, ಆತನ ಶೋಕವನ್ನು ಪರಿಹಾರ ಮಾಡು" ಎಂದು ಆತನನ್ನು ಪ್ರಾರ್ಥಿಸಿದರು.

ಪುತ್ರರ ಅಭೀಷ್ಟವನ್ನು ಪೂರ್ತಿಮಾಡುವುದಕ್ಕಾಗಿ, ನಾಗರಾಜನು ಹಿಮಾಲಯಪರ್ವತಕ್ಕೆಹೋಗಿ, ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ಪ್ರತ್ಯಕ್ಷನಾಗಿ "ನಾಗರಾಜಾ! ಮರಣ ಸಮಯದಲ್ಲಿ ಮದಾಲಸೆಯು ಯಾವ ವಯಸ್ಸಿನಲ್ಲಿ ಇದ್ದಳೋ, ಅದೇ ವಯಸ್ಸುಳ್ಳವಳಾಗಿ ನಿನ್ನ ಮನೆಯಲ್ಲಿ ಹುಟ್ಟುವಳು." ಎಂದು ವರವನ್ನು ಕೊಟ್ಟು ಅಂತರ್ಧಾನನಾದನು.

ಬ್ರಹ್ಮವರಪ್ರಸಾದದಿಂದ ಮದಾಲಸೆಯು ನಾಗರಾಜ ಗೃಹದಲ್ಲಿ ಯುವತಿಯಾಗಿ ಜನ್ಮಿಸಿದಳು. ಮೂರನೆಯ ದಿವಸವೇ ನಾಗರಾಜನು ಋತುಧ್ವಜನನ್ನು ಆಹ್ವಾನಮಾಡಿ, ಮದಾಲಸೆಯನ್ನು ಆತನಿಗೆ ಸಮರ್ಪಿಸಿದನು.

ಆತ್ರೇಯಿ.

ಪ್ರಾಚೀನಕಾಲದಲ್ಲಿ ಆತ್ರೇಯಿ ಎಂಬ ಒಬ್ಬ ವಿದುಷಿಯು ಇದ್ದಳು. ಈಕೆಯು ರಚಿಸಿದ ಗ್ರಂಥಗಳು ಈಗ ಕಂಡುಬರುವುದಿಲ್ಲ. ಆದರೆ ಜ್ಞಾನೋಪಾರ್ಜನೆಯಲ್ಲಿ ಈಕೆಗೆ ಇದ್ದ ಗಾಢಾನುರಾಗವು ವರ್ಣನೀಯವಾದುದು.

ಈಕೆಯು ಪ್ರಥಮದಲ್ಲಿ ವೇದವೇದಾಂಗಗಳನ್ನು ಅಭ್ಯಸಿಸಬೇಕೆಂದು ಎಣಿಸಿ ವೇದಾಧ್ಯಾಪಕನೂ, ಮಹಾಕವಿಯೂ ಆದ ವಾಲ್ಮೀಕಿಮಹರ್ಷಿಯ ಬಳಿಗೆ ಹೋಗಿ, ಅಲ್ಲಿ ಕೆಲವುಕಾಲ ವೇದಾಧ್ಯಯನವನ್ನು ಮಾಡಿದಳು. ಆದರೆ ಮಹರ್ಷಿಯ ಬಳಿಯಲ್ಲಿ ಸೀತಾದೇವಿಯ ಪುತ್ರರಾದ ಕುಶಲವರು ಓದುವುದಕ್ಕೆ ಪ್ರಾರಂಭಮಾಡಿದಂದಿನಿಂದಲೂ, ಆತ್ರೇಯಿಯ ವಿದ್ಯಾಭ್ಯಾಸಕ್ಕೆ ಸ್ವಲ್ಪ ವಿಘ್ನವು ಉಂಟಾಯಿತು.

ಹನ್ನೆರಡು ವರ್ಷಗಳು ಪೂರ್ತಿಯಾಗುವುದಕ್ಕೆ ಪೂರ್ವನೇ ಕುಶಲವರು ಸರ್ವಶಾಸ್ತ್ರಗಳನ್ನು ಅಭ್ಯಸಿಸಿ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಓದಿದರು. ಮತ್ತು ಆ ಸುಕುಮಾರರು ಆ ಬಾಲ್ಯದಲ್ಲಿಯೇ, ವಾಲ್ಮೀಕಿ ಪ್ರಣೀತವಾದ ರಾಮಾಯಣವೆಂಬ ಮಹಾಕಾವ್ಯವನ್ನು ಪೂರ್ತಿಯಾಗಿ ಕಂಠಸ್ಥ ಮಾಡಿದರು. ಇಂತಹ ಅತ್ಯದ್ಭುತ ಮೇಧಾಶಕ್ತಿಯುತರಾದ ಬಾಲಶಿಷ್ಯರು ಲಭಿಸಿದುದರಿಂದ ವಾಲ್ಮೀಕಿಮಹರ್ಷಿಯು ಇತರ ಶಿಷ್ಯರಲ್ಲಿ ಸ್ವಲ್ಪ ಅಶ್ರದ್ಧೆಯುಳ್ಳವನಾಗಿರಬಹುದು.

ಆದಕಾರಣ ಅಲ್ಲಿ ಆತ್ರೇಯಿಯ ಜ್ಞಾನತೃಷೆಯು ನಿವಾರಣೆಯಾಗಲಿಲ್ಲ. ತೇಜೋಮಯ ಧೀಬಲಸಂಪನ್ನರಾದ ಕುಶಲವರ ಇದಿರಿಗೆ ತನ್ನ ಮೇಧಾಶಕ್ತಿಯು ಅತ್ಯಲ್ಪವಾದುದು ಎಂದು ಆತ್ರೇಯಿಯು ತಿಳಿದುಕೊಂಡಳು. ಈಕೆಯು ಕುಶಲವರೊಡನೆ ಸಮನಾಗಿ ಪಾಠಗಳನ್ನು ಓದಲಾರದೆ ಇದ್ದಳು. ಆದುದರಿಂದ ಈಕೆಯು ಭಗ್ನಮನೋರಥೆಯಾಗಿ ವಾಲ್ಮೀಕಿಯ ಆಶ್ರಮವನ್ನು ಬಿಟ್ಟು ತನಗೆ ಉಪಯುಕ್ತನಾದ ಗುರುವನ್ನು ಹುಡುಕಿಕೊಂಡು ಹೊರಟಳು.

ಆ ಕಾಲದಲ್ಲಿ ಅನೇಕ ಜನ ಪಂಡಿತರು ದಕ್ಷಿಣದೇಶದಲ್ಲಿ ಇದ್ದರು. ಅವರಲ್ಲಿ ಶ್ರೇಷ್ಠನಾದವನು ಅಗಸ್ತ್ಯಮಹಾಮುನಿಯು. ಆತ್ರೇಯಿಯು ಅಗಸ್ತ್ಯಮಹಾ

ಮುನಿಯ ಬಳಿಗೆ ಹೋಗಿ ಉಪನಿಷತ್ತುಗಳೇ ಮೊದಲಾದುವುಗಳನ್ನು ಕಲಿಯ ಬೇಕೆಂದು ನಿಶ್ಚಯಿಸಿಕೊಂಡಳು. ಆದರೆ ಆ ಕಾಲದಲ್ಲಿ ಸ್ತ್ರೀಯರು ಉತ್ತರದೇಶ ದಿಂದ ಬಹುಯೋಜನದೂರದಲ್ಲಿರುವ ಅಗಸ್ತ್ಯಾಶ್ರಮಕ್ಕೆ ಹೋಗುವುದು ಎಂದರೆ ಸಾಮಾನ್ಯವಿಷಯವಲ್ಲ. ಆದರೂ ಈ ಬ್ರಹ್ಮಚಾರಿಣಿಗೆ ವಿಶೇಷ ಜ್ಞಾನಾರ್ಜನಾ ಕಾಂಕ್ಷೆಯು ಇದ್ದುದರಿಂದ ಪ್ರಯಾಣ ಕಷ್ಟವನ್ನು ಗಣನೆಗೆತಾರದೆ ಒಬ್ಬಳೇ ಹೊರಟು ಪಟ್ಟಣಗಳನ್ನೂ, ಹಳ್ಳಿಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ಅರಣ್ಯಗಳನ್ನೂ ಅತಿಕ್ರಮಿಸಿ ಬಹುದಿನಗಳಿಗೆ ಭಾರತವರ್ಷದ ದಕ್ಷಿಣಾಗ್ರ ದಲ್ಲಿರುವ ಅಗಸ್ತ್ಯಾಶ್ರಮವನ್ನು ಸೇರಿದಳು.

ಅಗಸ್ತ್ಯನು ಈಕೆಯ ದೃಢಸಂಕಲ್ಪವನ್ನು ನೋಡಿ ಆಶ್ಚರ್ಯಾನ್ವಿತಚಿತ್ತನಾಗಿ, ಈಕೆಯನ್ನು ಪುತ್ರಿಕಾವಾತ್ಸಲ್ಯದೊಡನೆ ಪ್ರೇಮಿಸುತ್ತಿದ್ದನು. ಆತ್ರೇಯಿಯು ಅಲ್ಲಿಯೇ ಇದ್ದು ಶ್ರದ್ಧೆಯಿಂದ ವಿದ್ಯಾಭ್ಯಾಸವನ್ನುಮಾಡಿ ಅಭೀಷ್ಟಸಿದ್ಧಿಯನ್ನು ಹೊಂದಿದಳು.

ಸಂಪೂರ್ಣ.

ಶೋಧನಪತ್ರ.

ಪುಟ.		ಪಂಙ್ತಿ.	ಅಶುದ್ಧ.	ಶುದ್ಧ.
೧	ಕೆಳಗಿನಿಂದ	೪	ಆಂಧ	ಆಂಧ್ರ
೧	,,	೧	ಈಕೆಯ	ಈಕೆಯು
೨	ಮೇಲಿನಿಂದ	೯	ಉಪಹಾರ	ಉಪಾಹಾರ
೨	ಕೆಳಗಿನಿಂದ	೩	ಅದು	ಆಗ
೩	,,	೧೫	ಅಕ್ಕರೆಯವಳಾಗಿ	ಅಕ್ಕರೆಯುಳ್ಳವಳಾಗಿ
೫	ಕೆಳಗಿನಿಂದ	೧೫	ಬಂಧಿಯಾಗಿದ್ದ	ಬಂದಿಯಾಗಿದ್ದ
೬	ಮೇಲಿನಿಂದ	೧೩	ಸಾಮಾರ್ಥ್ಯವುಳ್ಳ	ಸಾಮರ್ಥ್ಯವುಳ್ಳ
೬	ಕೆಳಗಿನಿಂದ	೯	ಲಕ್ಷ್ಮಮ್ಮಣ್ಣಿ	ಲಕ್ಷ್ಮಮ್ಮಣ್ಣಿಗೆ
೬	,,	೪	ಪದಚ್ಯುತನ್ನಾಗಿ	ಪದಚ್ಯುತನನ್ನಾಗಿ
೮	ಮೇಲಿನಿಂದ	೪	ತಂಜಾವುರು	ತಂಜಾವೂರು
೯	,,	೧೨	ತಿಳಿಯಲಪೇಕ್ಷಿಸುವರು	ತಿಳಿಯಲಪೇಕ್ಷಿಸುವವರು
೧೩	,,	೧೧	ನಾಟೂರೂ	ನಾಟೂರು
೧೩	,,	೭	ಗ್ರಾಮದನಿವಾಸಿ	ಗ್ರಾಮನಿವಾಸಿಯಾದ
೧೪	ಕೆಳಗಿನಿಂದ	೪	ರಾಜಾಧಿಕಾರವನ್ನೂ	ರಾಜ್ಯಾಧಿಕಾರವನ್ನೂ
೧೫	ಮೇಲಿನಿಂದ	೧೬	ಧನವೆನ್ನೆಲ್ಲವನ್ನೂ	ಧನವನ್ನೆಲ್ಲ
೧೬	,,	೧	ಪತಿದುಃಖವನ್ನು	ಪತಿಯದುಃಖವನ್ನು
೧೯	,,	೭	ವಲಂಭಿಸಿದರೆ	ವಲಂಬಿಸಿದರೆ
೧೯	ಕೆಳಗಿನಿಂದ	೪	ಯವನನ್ನು	ಯವನನನ್ನು
೨೦	ಮೇಲಿನಿಂದ	೯	ತಮತಮ್ಮ	ತಮ್ಮತಮ್ಮ
೨೦	,,	೧೩	ರಾಜಕ್ಷಯ	ರಾಜ್ಯಕ್ಷಯ
೨೧	ಕೆಳಗಿನಿಂದ	೧೩	ಅಪರಮಿತ	ಅಪರಿಮಿತ
೨೧	,,	೧೨	ಆಯಿತು	ಉಂಟಾಯಿತು
೨೧	,,	೫	ನಿರಾಸೆ	ನಿರಾಶೆ
೨೩	,,	೧೪	ಡಾಕ್ಟರು	ಡಾಕ್ಟರರು

ಮೇಲಿನಿಂದ ೨೫ ೮—೯—೧೦	ರಾಮಕೃಷ್ಣನು ಸಾಧುವೃತ್ತಿಯುಳ್ಳವನಾದಕಾರಣ ಕೊನೆಗೆ ಅವನಿಗೆ ರಾಜ್ಯಾಧಿಪತ್ಯವನ್ನು ವಹಿಸಿ ಭವಾನಿಯು ಸ್ವರ್ಗಸ್ಥೆಯಾದಳು. ಪ್ರಸ್ತುತದಲ್ಲಿ ಈ ರಾಜ್ಯವು ಚಿಕ್ಕ ಜಮಿನಾನುದಾರಿಯಾಗಿದೆ.	ಕೊನೆಗೆ ಅವನಿಗೆ ರಾಜ್ಯಾಧಿಪತ್ಯವನ್ನು ವಹಿಸಿ ಭವಾನಿಯು ಸ್ವರ್ಗಸ್ಥೆಯಾದಳು. ರಾಮಕೃಷ್ಣನು ಸಾಧುವೃತ್ತಿಯುಳ್ಳವನಾಗಿದ್ದುದರಿಂದ, ಪ್ರಸ್ತುತದಲ್ಲಿ ಈ ರಾಜ್ಯವು ಚಿಕ್ಕ ಜಮಿನಾನುದಾರಿಯಾಗಿದೆ.

ಪುಟ.		ಪಂಙ್ತಿ.	ಅಶುದ್ಧ.	ಶುದ್ಧ.
೩೧	ಕೆಳಗಿನಿಂದ	೧೪	ಸಿದ್ವಳಾವ	ಸಿದ್ಧಳಾದ
೩೫	ಮೇಲಿನಿಂದ	೫	ಸಂಬಂದ	ಸಂಬಂಧ
೩೫	ಕೆಳಗಿನಿಂದ	೧೨	ಮುಟಿದವಳಲ್ಲ	ಮುಟ್ಟಿದವಳಲ್ಲ
೩೭	ಮೇಲಿನಿಂದ	೪	ಪ್ರದೇಶದಲಿರುವ	ಪ್ರದೇಶದಲ್ಲಿರುವ
೪೨	ಕೆಳಗಿನಿಂದ	೬	ಮೆಕಾಲೆದೆರೆಯು	ಮೆಕಾಲೆದೊರೆಯು.
೪೩	,,	೧೪	ಲಕ್ಷ್ಮೀಬಾಯಿಯನ್ನು	ಲಕ್ಷ್ಮೀಬಾಯಿಯನ್ನು
೪೪	,,	೬	ಸಂಭಾಷಣೆಯನ್ನೂ	ಸಂಭಾಷಣೆಯನ್ನು
೪೫	,,	೧೧	ಮಾಡಲಾರದು	ಮಾಡಬಾರದು.
೪೭	,,	೬	ನಿವಾಸಿಯು	ನಿವಾಸಿಯು. ಈತನ
೫೦	,,	೧೫	ವಹಿಸದನು	ವಹಿಸಿದನು
೫೦	ಕೆಳಗಿನಿಂದ	೧೨	ಇನೊಬ್ಬ	ಇನ್ನೊಬ್ಬ
೫೦	,,	೯	ಔಷಧೋಪಚಾರಗಳನ್ನು	ಔಷಧೋಪಚಾರಗಳನ್ನು
೫೧	,,	೩	ಪಾಲಿಸದರೂ	ಪಾಲಿಸಿದರೂ
೫೧	,,	೧೦	ಹೋಗುವೇಯಾ	ಹೋಗುವೆಯಾ
೫೭	ಮೇಲಿನಿಂದ	೮	ರಾಜ್ಯವನ್ನೂ	ರಾಜ್ಯವನ್ನು
೫೮	ಮೇಲಿನಿಂದ	೬	ಲೋಕೋಪಕರ	ಲೋಕೋಪಕಾರ
೬೧	,,	೧೦	ಸೈನದೊಡನೆ	ಸೈನ್ಯದೊಡನೆ
೬೨	..	೧೦	ಎಷು	ಎಷ್ಟು
೬೩	,,	೭	ಇನೂ	ಇನ್ನೂ
೬೩	ಕೆಳಗಿನಿಂದ	೯	ವಿವಾಹವನು	ವಿವಾಹವನ್ನು
೬೪	,,	೮	ಬುದ್ಧಿಳಗನ್ನು	ಬುದ್ಧಿಗಳನ್ನು
೬೫	ಮೇಲಿನಿಂದ	೭	ಸಮ್ಮತಿಸದಳು	ಸಮ್ಮತಿಸಿದಳು

ಪುಟ.		ಪಂಕ್ತಿ.	ಅಶುದ್ಧ.	ಶುದ್ಧ.
೬೫	ಕೆಳಗಿನಿಂದ	೧೫	ಹುಚಿನಂತೆ	ಹುಚ್ಚನಂತೆ
೬೫	,,	೪	ರಾಜಭ್ರಷ್ಟ	ರಾಜ್ಯಭ್ರಷ್ಟ
೬೭	,,	೧೨	ಪಟ್ಟಣಕೆ	ಪಟ್ಟಣಕ್ಕೆ
೬೭	,,	೮	ಕೊಂಡು	ಕೊಂದು
೭೨	,,	೨	ಪ್ರತಿಧಿವಸವೂ	ಪ್ರತಿದಿವಸವೂ
೭೩	ಮೇಲಿನಿಂದ	೧೫	ಪತಿವ್ರತಿಯರಿಗೆ	ಪತಿವ್ರತೆಯರಿಗೆ
೭೭	,,	೮	ಪ್ರಯತ್ನಗಳನ್ನು	ಪ್ರಯತ್ನಗಳನ್ನು ಮಾಡಿ
೭೭	ಕೆಳಗಿನಿಂದ	೯	ದೇವಿಯು	ಆ ದುಷ್ಟನು
೮೦	ಮೇಲಿನಿಂದ	೧೩	ಕಪ್ಪವನ್ನು	ಕಪ್ಪವನ್ನು
೮೨	ಕೆಳಗಿನಿಂದ	೧೪	ಎಂತಹುದು ಆದರೂ	ಎಂತಹುದಾದರೂ
೮೮	ಮೇಲಿನಿಂದ	೧೪	ಧೃಡವಾಗಿ	ದೃಢವಾಗಿ
೮೯	,,	೧೪	ಮ್ಲೇಚ್ಛಿರ	ಮ್ಲೇಚ್ಛರ
೯೧	,,	೬	ಪ್ರಾರ್ತಿಸುತ್ತಿದ್ದಳು	ಪ್ರಾರ್ಥಿಸುತ್ತಿದ್ದಳು
೯೩	,,	೩	ಸ್ತ್ರಿಯರು	ಸ್ತ್ರೀಯರು
೯೪	ಕೆಳಗಿನಿಂದ	೧೪	ಧನವಂತನನಾದ	ಧನವಂತನಾದ
೯೫	ಮೇಲಿನಿಂದ	೧೩	ಹದಿನಾರನೇಯ	ಹದಿನಾರನೆಯ
೧೦೧	ಕೆಳಗಿನಿಂದ	೯	ಅ	ಆ
೧೦೨	ಮೇಲಿನಿಂದ	೭	ಕಷ್ಣಾಜಿಯು	ಕೃಷ್ಣಾಜಿಯು
೧೦೩	ಕೆಳಗಿನಿಂದ	೭	ಕಷ್ಣಾಜಿಯು	ಕೃಷ್ಣಾಜಿಯು
೧೦೪	,,	೬	ಒಟ್ಟಿನಮೆಲೆ	ಒಟ್ಟಿನಮೇಲೆ
೧೦೬	ಮೇಲಿನಿಂದ	೯	ವೃತಾಂತವನ್ನು	ವೃತ್ತಾಂತವನ್ನು
೧೦೬	ಕೆಳಗಿನಿಂದ	೯	ಮಾಡುದಕ್ಕೂ	ಮಾಡುವುದಕ್ಕೂ
೧೦೯	,,	೮	ಅತ್ಯತ್ತಮ	ಅತ್ಯುತ್ತಮ
೧೧೦	ಕೆಳಗಿನಿಂದ	೬	ಆವೇಲೆ	ಆಮೇಲೆ
೧೧೩	ಮೇಲಿನಿಂದ	೧	ಮಿಚಲ್	ಲಿಟಿಲ್
೧೧೬	ಕೆಳಗಿನಿಂದ	೧೫	(೭) ಅವರು	ಅವನು
೧೧೭	ಮೇಲಿನಿಂದ	೩	ಹೋರಗೆ	ಹೊರಗೆ
೧೨೮	ಕೆಳಗಿನಿಂದ	೬	ಶಬ್ದಸಾಷ್ಟವ	ಶಬ್ದಸೌಷ್ಟವ
೧೪೩	,,	೭	ಅಸಂಖ್ಯಾತ	ಅಸಂಖ್ಯಾಕ
೧೪೪	ಕೆಳಗಿನಿಂದ	೮	ಭಮಿಸಿದನು	ಭ್ರಮಿಸಿದನು
೧೪೫	ಮೇಲಿನಿಂದ	೩	ಪಡಿಸಿದವನ್ನು	ಪಡಿಸಿದವನನ್ನು

ಪುಟ.		ಪಂಜ್ತಿ.	ಅಶುದ್ಧ.	ಶುದ್ಧ.
೧೪೮	ಮೇಲಿನಿಂದ	೧೧	ಸಾಧಿ	ಸಾಧ್ವಿ
೧೪೯	,,	೬	ಸಿದ್ದವಾಗಿ	ಸಿದ್ಧವಾಗಿ
೧೪೯	ಕೆಳಗಿನಿಂದ.	೭	ಮರಣಾಂತರ	ಮರಣಾನಂತ
೧೫೧	ಮೇಲಿನಿಂದ	೬	ಅಮೂಲ್ಯವುಳ್ಳ	ಮೂಲ್ಯವುಳ್ಳ
೧೫೧	ಕೆಳಗಿನಿಂದ	೧೫	ಸೃಲ್ಪ	ಸ್ವಲ್ಪ
೧೫೫	ಮೇಲಿನಿಂದ	೧	ಭೊಜನ	ಭೋಜನ
೧೬೦	ಕೆಳಗಿನಿಂದ	೧೧	ಮಿರಾಬಾಯಿ	ಮಿಾರಾಬಾಯಿ
೧೬೦	,,	೯	ಮಿರಾಬಾಯಿ	ಮಿಾರಾಬಾಯಿ
೧೬೪	ಮೇಲಿನಿಂದ	೪	ದೊರೆಯವನೋ	ದೊರೆಯುವನೋ
೧೭೬	,,	೪	ಕೇಶವಚಂದ್ರಶೇನ	ಕೇಶವಚಂದ್ರಸೇನ
೧೭೦	ಕೆಳಗಿನಿಂದ	೭	ಚಿತ್ತೂರೂ	ಚಿತ್ತೂರು
೧೭೧	,,	೧	ಚಿತ್ತಜಾಂಚಲ್ಯ	ಚಿತ್ತಚಾಂಚಲ್ಯ
೧೯೪	ಮೇಲಿನಿಂದ	೪	ಅರ್ಭಕನ	ಅರ್ಭಕನ
೧೯೪	ಕೆಳಗಿನಿಂದ	೧	ನಸಿಂಹಸ್ವಾಮಿಗೆ	ನೃಸಿಂಹಸ್ವಾಮಿಗೆ
೨೦೦	ಕೆಳಗಿನಿಂದ	೧೦	ವೀರಾಬಾಯಿ	ವಿರಾಬಾಯಿ
೨೦೪	,,	೭	ತಥ್ಭಾಷಾ	ತದ್ಭಾಷಾ
೨೦೭	ಮೇಲಿನಿಂದ	೧೪	ಆಂಗ್ಲೆಯ	ಆಂಗ್ಲೇಯ
೨೧೭	ಕೆಳಗಿನಿಂದ	೨	ವಕ್ಕೃತ್ವ	ವಕ್ತೃತ್ವ
೨೧೪	,,	೬	ಕಲಾಶಾಲೆಯು	ಕಲಾಶಾಲೆಯನ್ನು
೨೨೩	,,	೧೨	ಪರದೇಶದಲಿ	ಪರದೇಶದಲ್ಲಿ
೨೨೬	ಮೇಲಿನಿಂದ	೩	ಆಕೆಯ	ಆಕೆಯು
೨೨೭	ಕೆಳಗಿನಿಂದ	೧	ವಿಶುದ	ವಿಶುದ್ಧ
೨೪೨	ಮೇಲಿನಿಂದ	೩	ಬಿದ್ದು	ಬಿದ್ದು
೨೪೨	,,	೧೩	ಕ್ರಯಾಸಿದ್ಧಿಃ	ಕ್ರಿಯಾಸಿದ್ಧಿಃ
೨೪೫	,,	೧೧	ದೊಡ್ಡ	ದೊಡ್ಡ
೨೪೫	ಕೆಳಗಿನಿಂದ	೯	ಯಶೋವಂತಸಿಂಹನು	ಯಶೋವಂತಸಿಂಹನ
೨೫೧	,,	೬	ತ್ಯದೇಕ	ತದೇಕ
೨೫೩	,,	೧	ಭರ್ತನನು	ಭರ್ತನನ್ನು
೨೫೬	ಮೇಲಿನಿಂದ	೭	ವಹಾರಾಣಿಯು	ಮಹಾರಾಣಿಯು